# ಗೃಹಭಂಗ

ಎಸ್ ಎಲ್ ಭೈರಪ್ಪ

ಮಿಂಬಲೆಯಲ್ಲಿ ಕನ್ನಡ ಪುಸ್ತಕಗಳನ್ನು ಮುಕ್ತವಾಗಿ ಇಳಿಸಿಕೊಳ್ಳಲು ಭೇಟಿ ನೀಡಿ

http://kannadanudi.wikidot.com

download kannada books for free

# ಗೃಹಭಂಗ

ಎಸ್ ಎಲ್ ಭೈರಪ್ಪ

## ಮುನ್ನುಡಿ

ಒಂಬೈನೂರ ಇಪ್ಪತ್ತರ ನಂತರ ಪ್ರಾರಂಭವಾಗುವ ಇದರ ವಸ್ತು, ನಲವತ್ತನಾಲ್ಕು ನಲವತ್ತೈದರ ಸುಮಾರಿಗೆ ಮುಗಿಯುತ್ತದೆ. ತಿಪಟೂರು ಚೆನ್ನರಾಯಪಟ್ಟಣ ತಾಲ್ಲೂಕುಗಳನ್ನೊಳಗೊಳ್ಳುವ ಭಾಗದ ಪ್ರಾದೇಶಿಕ ಹಿನ್ನೆಲೆ. ಭಾಷೆಯೂ ಅದರದೇ. ಆದರೆ, 'ಇದೊಂದು ಪ್ರಾದೇಶಿಕ ಕಾದಂಬರಿ' ಎಂಬ ಆತುರದ ಕ್ಲಾಸ್‌ರೂಮು ಬುದ್ಧಿಯ ವರ್ಗೀಕರಣ ಮಾಡಬಾರದು. ಕಥೆ ನಡೆಯುವುದಕ್ಕೆ ಒಂದು ಭೌಗೋಳಿಕ ಜಾಗ ಬೇಕು. ನಾನು ಈ ಜಾಗವನ್ನು ಆಯ್ದುಕೊಂಡಿರುವ ಕಾರಣ, ನನಗೆ ಅದು ಹೆಚ್ಚು ಪರಿಚಿತವಾಗಿರುವುದು ಮಾತ್ರ. ನನ್ನ 'ಧರ್ಮಶ್ರೀ' ಯಲ್ಲಿ ನಾಯಕನ ಬಾಲ್ಯ ಮತ್ತು ತಂದೆತಾಯಿಗಳ ವಿಷಯ ತುಂಬ ಸಂಕ್ಷಿಪ್ತವಾಗಿ ಬರುತ್ತದೆ. ಆ ಕಾದಂಬರಿಗೆ ಅಷ್ಟು ವಿವರ ಸಾಕಾಗಿತ್ತು. ಕಲ್ಪನೆಯಲ್ಲಿ ಕಾಡುತ್ತಿದ್ದ ಆ ವಿವರವು ಕಳೆದ ಎಂಟು ವರ್ಷಗಳಲ್ಲಿ ಹಿಮ್ಮುಖವಾಗಿ ಬೆಳೆದು ಈ ರೂಪವನ್ನು ತಳೆದುನಿಂತಿತು. ಆದರೆ ಇದಕ್ಕೂ 'ಧರ್ಮಶ್ರೀ' ಗೂ ಯಾವ ಸಂಬಂಧವೂ ಇಲ್ಲ. ಇವೆರಡೂ ಸಂಪೂರ್ಣ ಪ್ರತ್ಯೇಕ ಕಾದಂಬರಿಗಳು. ಈ ಕಾದಂಬರಿ ನಿಮ್ಮನ್ನು ನಾಗಾಲೋಟ ಓಡಿಸಿಕೊಂಡು ಹೋಗದಿರಬಹುದು. ಆದರೆ ಜೀವನವನ್ನು ನಿರ್ವಿಕಾರ ದೃಷ್ಟಿಯಿಂದ ನೋಡಬಲ್ಲವರ, ಸಾಕಷ್ಟು ಕಷ್ಟಸುಖಗಳನ್ನು ಕಂಡವರ, ತಕ್ಕಮಟ್ಟಿಗಾದರೂ ಹಳ್ಳಿಗಳನ್ನು ತಿಳಿದಿರುವವರ ಅಂತರಂಗವನ್ನು ತಟ್ಟುತ್ತದೆಂಬುದು ನನಗೆ ಗೊತ್ತಿದೆ. ನಡೆಯುವವನು ತನ್ನ ಸುತ್ತನ್ನು ನೋಡುವಷ್ಟು ಸ್ಪಷ್ಟವಾಗಿ ಓಟಹೊಡೆಯುವವನು ನೋಡಲಾರ. ಇದಕ್ಕೆ ಇಟ್ಟಿರುವ ಹೆಸರು ಸಮರ್ಪಕವಾಗಿಲ್ಲ. ಕೆಲವು ಬಾರಿ ಕೃತಿ ರಚನೆಯಾಗುವಾಗ, ಅಥವಾ ಅದಕ್ಕಿಂತ ಮೊದಲೇ, ಹೆಸರು ಹೊಳೆದುಬಿಡುತ್ತದೆ. ಮತ್ತೆ ಕೆಲವುಬಾರಿ ಬರೆದು ಎರಡುವರ್ಷ ಸಂದು, ತಲೆಗೂದಲ ಮಧ್ಯೆ ಬೆರಳು ತೂರಿಸಿ ಯೋಚಿಸಿದರೂ ಹೊಳೆಯುವುದಿಲ್ಲ. ಯೋಚಿಸಿ ಯೋಚಿಸಿ ಕೊನೆಗೆ "ಯಾವುದಾದರೇನು? ಹೆಸರೇ ಬೇಡ. 'ಎಸ್.ಎಲ್. ಭೈರಪ್ಪ: ಕಾದಂಬರಿ ಸಂಖ್ಯೆ: 8' ಎಂದು ಯಾಕೆ ಇಡಬಾರದು?"–ಎಂಬ ವಿಚಾರ ಹುಟ್ಟಿತ್ತು. ವಸ್ತು, ಕೃತಿ, ಸ್ಥಳ, ವ್ಯಕ್ತಿ, ವಿಚಾರ, ಭಾವ, ಮೊದಲಾದುವನ್ನು ಸಂಕೇತಿಸುವುದೇ ಹೆಸರಿನ ಕೆಲಸ. ಆದುದರಿಂದ ಯಾವ ಹೆಸರಾದರೇನು ಎಂಬ ಉಪೇಕ್ಷೆಯೂ ಬಂದಿತ್ತು. ಅದರ ನಿಜವಾದ ಗುಣ ಚೈತನ್ಯಗಳು ಗೊತ್ತಿಲ್ಲದೆ, ಭವಿಷ್ಯದಲ್ಲಿ ತಿಳಿಯಬೇಕಾದ ಅನ್ವರ್ಥತೆಯನ್ನು ಸ್ವಲ್ಪವೂ ಲೆಕ್ಕಿಸದೆ ಮಗುವಿಗೆ ನಾಮಕರಣಮಾಡಿ ಪಾರಾಗುತ್ತೇವೆ. ಆದರೆ ಸಾಹಿತ್ಯಕೃತಿಗೆ ಹೆಸರಿಡುವಾಗ ಒಂದು ತಪ್ಪು–ಕೈಮರದ ನಿರ್ಮಾಣವಾಗುವ ಸಂಭವವುಂಟು: ಇಲ್ಲಿ ಹೆಸರು ಒಂದು ಪ್ರತೀಕವಾಗುತ್ತದೆ. ಇಡೀ ಕೃತಿಯ ಕ್ರಿಯೆ ಮತ್ತು ಮೌಲ್ಯಾರ್ಥಗಳನ್ನು ವಾಚಕರು ಈ ಪ್ರತೀಕದ ಕೇಂದ್ರ ದೃಷ್ಟಿಯಿಂದ ಗ್ರಹಿಸುತ್ತಾರೆ. ಕೃತಿಯನ್ನು ಅನುಭವಿಸುವ ದೃಷ್ಟಿಯನ್ನು ಹೆಸರು ನಿರ್ಧರಿಸಿಬಿಡುವ ಸಂಭವವಿರುತ್ತದೆ. ಕಥೆಯ ವಸ್ತುವು ಒಂದು ಪ್ರತೀಕದಲ್ಲಿ ಸಂಕೇತಿಸುವಷ್ಟು ಹಿಡಿತದಲ್ಲಿದ್ದಾಗ ವಸ್ತುವಿನ ಅರ್ಥದ ತೀವ್ರತೆಯನ್ನು ಸೂಚಿಸಲು ಹೆಸರು ಪ್ರತೀಕರೂಪದಲ್ಲಿ ನೆರವಾಗುತ್ತದೆ. ವಸ್ತುವು ಹಲವು ಪಾರ್ಶ್ವಗಳುಳ್ಳದ್ದಾಗಿರುವಾಗ ಹೆಸರು ವಾಚಕರ ಗಮನವನ್ನೆಲ್ಲ ಒಂದೇ ಪಾರ್ಶ್ವದಲ್ಲಿ ಎಳೆದು ನಿಲ್ಲಿಸಿ, ಉಳಿದ ಭಾಗಗಳನ್ನು ಮಬ್ಬುಮಾಡುವ ಅಪಾಯವಿರುತ್ತದೆ. ಆದುದರಿಂದ ಯಾವ ಸಾಹಿತ್ಯ ಕೃತಿಯನ್ನು ಓದಿ ಗ್ರಹಿಸಬೇಕಾದರೂ ಲೇಖಕನು ಇಟ್ಟಿರುವ ಹೆಸರನ್ನು ಆರಂಭದಲ್ಲಿಯೇ ಪ್ರತ್ಯೇಕಿಸುವುದು ಕ್ಷೇಮ. ಗೃಹಭಂಗ ಎಂಬುದು ಈ ಕೃತಿಯ ಕೇಂದ್ರಕಲ್ಪನೆಯಲ್ಲ. ಮೇಲೆ ಹೇಳಿದ ಅವಧಿಯಲ್ಲಿ ನಡೆಯಬಹುದಾದ ಜೀವನಚಿತ್ರಣದ ಪ್ರಯತ್ನವೇ ಇದರ ದೃಷ್ಟಿ. ಇಲ್ಲಿ ಮನೆ ಒಡೆಯುವುದು, ಮುರಿಯುವುದು ಮಾತ್ರವಲ್ಲ; ಪ್ಲೇಗು, ಕಜ್ಜಿ, ಬರ, ಮೊದಲಾಗಿ ಇನ್ನೂ ಎಷ್ಟೋ ಸಂಗತಿಗಳು, ವಿವಿಧ ರೀತಿಯ ಪಾತ್ರಗಳು ಬರುತ್ತವೆ. ಇವು ಮೂಡಿ ನಡೆದಂತೆ ಒಂದು ಜೀವನ ದೃಷ್ಟಿಯು ಹಿನ್ನೆಲೆಯಲ್ಲಿ ಮಸುಕು ಮಸುಕಾಗಿ ಕಾಣಬಹುದು. ಇವೆಲ್ಲವನ್ನೂ ಸಮಗ್ರವಾಗಿ ಧ್ವನಿಸುವ ಹೆಸರು ನನಗೆ ತಿಳಿಯಲಿಲ್ಲ. ಹಸ್ತಪ್ರತಿಯನ್ನು ಓದಿ ವಿವರವಾಗಿ ಟೀಕೆ ಟಿಪ್ಪಣಿ ಮಾಡಿ, ತಿದ್ದಲು ಸಹಾಯಕರಾದ ದಿಲ್ಲಿ ಆಕಾಶವಾಣಿಯ ಎಂ.ಶಂಕರ್, ಬೆಂಗಳೂರಿನ ಎಂ.ಎಸ್.ಕೆ. ಪ್ರಭು ಇವರಿಗೂ ಹೊಳೆಯಲಿಲ್ಲ. ಹೆಸರಿಡದೆ ಪ್ರಕಟವಾಗುವುದು ಸಾಧವಿಲ್ಲ. ಪ್ರಕಟಣೆಯ ಘಟ್ಟದಲ್ಲಿ ಯಾವುದೋ ಒಂದನ್ನು ಇಡಲೇಬೇಕೆಂದು ಹಟಹಿಡಿದಾಗ, 'ಗೃಹಭಂಗ' ಎಂದು ಮನಸ್ಸಿಗೆ ಬಂತು, ಇಟ್ಟಿದ್ದೇನೆ.

ಎಸ್.ಎಲ್. ಭೈರಪ್ಪ

ದಿಲ್ಲಿ

1970, ಮೇ 15

ಅಧ್ಯಾಯ 1

– 1–

ಮೈಸೂರು ಸಂಸ್ಥಾನದ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಕಂಬನಕೆರೆ ಹೋಬಳಿ ರಾಮಸಂದ್ರ ಗ್ರಾಮದ ಶ್ಯಾನುಭೋಗ್ ರಾಮಣ್ಣನವರು ಫೌತಿಯಾದಮೇಲೆ ಮನೆಯಲ್ಲಿ ಉಳಿದವರು ಅವರ ಹೆಂಡತಿ ಗಂಗಮ್ಮ, ಇಬ್ಬರು ಗಂಡು ಮಕ್ಕಳು ಚೆನ್ನಿಗರಾಯ, ಅಪ್ಪಣ್ಣಯ್ಯ. ರಾಮಣ್ಣನವರು ಫೌತಿಯಾಗಿ ಆಗಲೇ ಆರು ವರ್ಷವಾಯಿತು. ಎಂದರೆ ವಿಶ್ವೇಶ್ವರಯ್ಯನವರು ದಿವಾನ್ ಬಹುದ್ದೂರರಾದ ವರ್ಷ ಅವರು ಈ ಲೋಕ ಬಿಟ್ಟರು. ಆಗ ಅವರ ಹೆಂಡತಿ ಗಂಗಮ್ಮನಿಗೆ ಇಪ್ಪತ್ತೈದರ ವಯಸ್ಸು. ಜ್ಯೇಷ್ಠಪುತ್ರ ಚೆನ್ನಿಗರಾಯ ಒಂಬತ್ತು ವರ್ಷದವನು. ಎರಡನೆಯ ಅಪ್ಪಣ್ಣಯ್ಯನಿಗೆ ಏಳು. ರಾಮಣ್ಣನವರು ಸತ್ತಾಗಿನಿಂದ ಅವರ ವಂಶಪಾರಂಪರ್ಯವಾದ ಶ್ಯಾನುಭೋಗಿಕೆಯನ್ನು ಗ್ರಾಮದ ಪಟೇಲ್ ಶಿವಗೌಡನ ಭಾವಮೈದ ಶಿವಲಿ ಂಗೇಗೌಡ ನೋಡುತ್ತಿದ್ದಾನೆ. ಇನ್ನು ಮೂರು ವರ್ಷಕ್ಕೆ ಹದಿನೆಂಟನ್ನು ಮುಟ್ಟಿ 'ಮೆಜಾಲ್ಟಿಗೆ' ಗೆ ಬರುವ ಚೆನ್ನಿಗರಾಯ ತಂದೆಯ ಅಧಿಕಾರ ವಹಿಸಿಕೊಳ್ಳಬೇಕು. ಶ್ಯಾನುಭೋಗಿಕೆ ಮಾಡುವುದೆಂದರೆ ಕಡಿಮೆ ಕೆಲಸವೆ? ಅದಕ್ಕೆ ತಕ್ಕ ವಿದ್ಯೆ ಬೇಕು. ಜೈಮಿನಿಯನ್ನಾದರೂ ಅರ್ಥಮಾಡಿಕೊಳ್ಳುವ ಮಟ್ಟಕ್ಕೆ ಬಂದರೆ ಖಾತೆ ಖಿರ್ದಿ ಪಹಣಿ ಖಾನೀಶುಮಾರಿ ಲೆಕ್ಕಗಳು ತಿಳಿದಾವು. ಗ್ರಾಮದ ಕೂಲಿಮಠದ ಮೇಷ್ಟರು ಚಾತಾಳಿಗರ ಚೆನ್ನಕೇಶವಯ್ಯನವರ ಹತ್ತಿರ ಚೆನ್ನಿಗರಾಯನ ವಿದ್ಯಾಭ್ಯಾಸವಾಗುತ್ತಿದೆ.

ಹದುಮೂರು ವರ್ಷವಾದರೂ ಎರಡನೆಯ ಅಪ್ಪಣ್ಣಯ್ಯ ಮಠಕ್ಕೆ ಹೋಗಿಲ್ಲ. ಮರಳ ಮೇಲೆ ಶ್ರೀ ಓಂ ನಾಮ ತಿದ್ದಿಲ್ಲ. ಇನ್ನೂ ಮುಂಜಿಯೂ ಆಗಿಲ್ಲ. 'ಅಪ್ಪಣ್ಣ, ಮಠಕ್ಕೆ ಹೋಗ್ತಿಯೋ ಇಲ್ವೋ?'–ತಾಯಿ ಸಿಟ್ಟು ಮಾಡಿಕೊಂಡು ಕೇಳಿದಳು.

'ಹೋಗ್ದೇ ಇದ್ರೆ ನಿಂಗೇನಾಗುತ್ತೇ ಕತ್ತೆಮುಂಡೆ?'–ಮಗ ನೆವರುದ.

'ನನ್ನ ಮುಂಡೆ ಅಂತೀಯೇನೋ? ನಿನ್ನ ವಂಶ ನಿರ್ವಂಶವಾಗುತ್ತೆ ನೋಡ್ತಿರು ಸೂಳೇ ಮಗನೆ'–ತಾಯಿ ಎಂದಳು.

'ನಿನ್ನ ವಂಶವೇ ನಿರ್ವಂಶವಾಗುತ್ತೆ ಕಣೇ'–ಎಂದು ಮಗ ಹೇಳುತ್ತಿರುವಾಗ ಹೊರಗಿನಿಂದ ನೀರುಗಂಟೆಯ ಮುದ್ದ ಬಂದ. 'ನನ್ನ ಕತ್ತೆಮುಂಡೆ ಅಂತಾನೆ. ಈ ಮುಂಡೇಮಗನ್ನ ಹಿಡ್‌ಕಂಡ್ ಹೋಗಿ ಚೆನ್ನಕೇಶವಯ್ಯನೋರ ತವ ಕೂರಿಸ್ ಬಾರೋ ಮುದ್ದ'–ಎಂದು ಗಂಗಮ್ಮ ಹುಕುಂ ಮಾಡಿದಳು. ಅಪ್ಪಣ್ಣಯ್ಯ ಅದನ್ನು ಕೇಳಿದ ತಕ್ಷಣ ಹೊರಕ್ಕೆ ಓಟ ಹೊಡೆದ. ಆದರೆ ಮುದ್ದ ದೊಡ್ಡ ಆಳು. ಹತ್ತೇ ದಾಪಿಗೆ ಹೋಗಿ ಅವನ ಜುಟ್ಟು ಹಿಡಿದು, ಕುಯ್ಯೊಯ್ಯೋ ಎಂದರೂ ಬಿಡದೆ ಗಂಗಮ್‌ನೋರ ಮುಂದೆ ತಂದು ನಿಲಿ ್ಲಸಿದ. 'ಈ ಸೂಳೇಮಗನಿಗೆ ಎರಡು ವದ್ದು ತಗಂಡ್‌ಹೋಗು'–ಅವಳು ಅಪ್ಪಣೆ ಮಾಡಿದಳು. ಆದರೆ ಬ್ರಾಹ್ಮಣ ಹುಡುಗನಿಗೆ ಮುದ್ದ ಒದೆಯುವುದು ಹೇಗೆ? ಹಾಗೆ ಮಾಡಿದರೆ ಕಾಲಿನಲ್ಲಿ ಹುಳು ಸುರಿಯುತ್ತದೆಂದು ಅವನಿಗೆ ಗೊತ್ತಿಲ್ಲವೆ? ತೋಳು ಹಿಡಿದು ಎಳೆದುಕೊಂಡು ಹೋದ.

ಕಿರಿಯವನು ಹೋದಮೇಲೆ ಗಂಗಮ್ಮನ ದೃಷ್ಟಿ ಮನೆಯಲ್ಲಿಯೇ ಇದ್ದ ಹಿರಿಯನ ಮೇಲೆ ತಿರುಗಿತು: 'ಎಲಾ ಚನ್ನಿಗಾ, ನಿನ್‌ಕುಟ್ ಎಷ್ಟು ಅಂತ ಬಡ್‌ಕಾಬೇಕೋ, ಹೊನ್ನವಳ್ಳಿಗ್ ಹೋಗಿ ಶೀತಾರಾಮಯ್‌ನೋರ ತವ ಲ್ಯಕ್ಕ ಕಲುತ್‌ಕಂಡ್ ಬಾ ಅಂತ? ನಾಳೆ ಬ್ಯಳಿಗ್‌ನಾಗ ಹೋಗ್ತಿಯೋ ನಿಂಗ್ ದಡಿ ತಗಂಡ್ ಎರಡು ಮುಟ್ಟುಸ್‌ಬೇಕೋ?'

'ಹಾಗಂತ ನನ್ ತಂಟಿಗ್ ಬಾ, ಹಾಜಾಮ್ ರುದ್ರನ್ನ ಕರ್‌ದು ನಿನ್ನ ತಲೆ ಬೋಳುಸುಸ್ತೀನಿ'–ಕಂಬದ ಹತ್ತಿರದಿಂದಲೇ ಹಿರಿಯ ಮಗ ಗುರ್ ಎಂದ.

'ನಿಮ್ಮಪ್ಪ ಸತ್ಹೋದಾಗ್ಲೇ ನನ್ ತಲೆ ಬೋಳುಸ್ತು. ಹೆತ್ ಅವ್ವುನ್ನ ಹಾಗಂದ್ರೆ ನಿನ್ನ ನಾಲಗೇಲಿ ಹುಳು ಸುರಿಯುತ್ತೆ ಮುಂಡೇಮಗನೆ.'

ಹೊನ್ನವಳ್ಳಿ ರಾಮಸಂದ್ರಕ್ಕೆ ಹದಿನೆಂಟು ಮೈಲಿಯ ಗ್ರಾಮ. ಎರಡು ಒಂದೇ ತಾಲ್ಲೂಕಿಗೆ ಸೇರಿದ್ದರೂ ಹೋಬಳಿಗಳು ಬೇರೆ ಬೇರೆ. ರಾಮಸಂದ್ರ ಕಂಬನಕೆರೆ ಹೋಬಳಿಗೆ ಸೇರಿದ್ದರೆ, ಹೊನ್ನವಳ್ಳಿ ಹೋಬಳಿಯ ಮುಖ್ಯ ಸ್ಥಳ, ಹಿಂದೆ ತಾಲ್ಲೂಕು ಸ್ಥಳವೂ ಆಗಿದ್ದ ಊರು. ತಿಪಟೂರು ಬಲಕಾಯಿಸಿದಮೇಲೆ ಹಿಂದೆ ಬಿತ್ತು; ತಾಲ್ಲೂಕು ಕಛೇರಿಯೂ ತಿಪಟೂರಿಗೆ ಹೋಯಿತು–ಚಿಕ್ಕಮಗಳೂರು ಕಡೂರನ್ನು ಬಡಕಲು ಮಾಡಿದ ಹಾಗೆ. ಹೊನ್ನವಳ್ಳಿ ತಾಲ್ಲೂಕು ಸ್ಥಳವಾದಾಗಿನಿಂದ ಸೀತಾರಾಮಯ್ಯನವರು ಕಸ್‌ಬಾ ಶ್ಯಾನುಭೋಗರು. ಲೆಕ್ಕದಲ್ಲಿ ಗಟ್ಟಿಗರು ಮಾತ್ರವಲ್ಲ, ಅಮಲ್ದಾರರುಗಳನ್ನೇ ಅಳ್ಳಾಡಿಸುತ್ತಿದ್ದ ಕುಳ. ಅವರ ಹತ್ತಿರ ಲೆಕ್ಕ ಕಲಿತ ಯಾರಾದರೂ ಕಷ್ಟವಿಲ್ಲದೆ ಶ್ಯಾನುಭೋಗಿಕೆ ನಿಭಾಯಿಸಬಹುದು. ಹಾಗೆಂದು ಅರಸೀಕೆರೆ, ಗಂಡಸಿ, ಜಾವಗಲ್ಲುಗಳ ಕಡೆಯ ಪಟೇಲ ಶ್ಯಾನುಭೋಗರುಗಳು ಸಹ ಹೇಳುತ್ತಿದ್ದರು. ಆದರೆ ಸೀತಾರಾಮಯ್ಯನವರ ಕೈಕೆಳಗೆ ನುರುಯುವುದೆಂದರೆ ಸಾಮಾನ್ಯವಲ್ಲ. ಖಾತೆಗೆ ಹೆಡಿಂಗ್ ಕಟ್ಟಿ ಕೆಂಪು ಶಾಯಿಯ ರೂಲು

ಹಾಕುವುದು ಕಲಿಯಬೇಕಾದರೇ ಅವರ ರೂಲುದೊಣ್ಣೆಯಲ್ಲಿ ನೂರಿನ್ನೂರು ಏಟು ತಿನ್ನಬೇಕಾಗಿತ್ತು. ಸಾವಿರ ಉಳಿ ಪೆಟ್ಟು ಬೀಳದೆ ವಿಗ್ರಹ ಹ್ಯಾಗಾಗುತ್ತೆ?–ಎಂದು ಕೂಲಿಮಠಗಳ ಓಚಯ್ಯಗಳಂತೆ ಅವರೂ ಹೇಳುತ್ತಾರೆ. ಮಕ್ಕಳಿಬ್ಬರ ವರ್ತನೆ ಕಂಡು ಗಂಗಮ್ಮನಿಗೆ ರೇಗಿತು; ಅಳು ಬಂದ ಹಾಗೆ ಆಗಿ ಕಣ್ಣಿನಲ್ಲಿ ನೀರು ಬರಿಸಿಕೊಂಡಳು. ಉಳಿದೋರ ಮನೆ ಮಕ್ಕಳು ತಾಯಿ ಅಂದ್ರೆ ಹ್ಯಾಗೆ ಹೆದರ್ಕಂಡು ನಡಿತಾರೆ. ಈ ಮುಂಡೆವಕ್ಕೆ ಏನು ಬಂದಿದೆ ಬರಬಾರ್ದ ರ್ವಾಗ! ನನ್ನ ಹಣೇಬರಾ ಇದು–ಎಂದು ಒಂದು ಸಲ ಅತ್ತಳು. ಎದ್ದು ನೇರವಾಗಿ ಅಡುಗೆಯ ಕೋಣೆಗೆ ಹೋಗಿ ಮಗುಚುವಕಾಯಿಯನ್ನು ಒಲೆಯ ಒಳಗೆ ಇಟ್ಟಳು. ಮದ್ಯಾನ್ನ ಕಳೆದು ಮೂರು ಗಂಟೆಯಾಗಿದ್ದುದರಿಂದ ಒಲೆಯಲ್ಲಿ ಕೆಂಡವಿರಲಿಲ್ಲ. ಉರಿದು ಹೋದ ಕೊಬ್ಬರಿಯ ವೊಟ್ಟೆ ಮತ್ತು ಹೆಡೆದಿಬ್ಬಿಗಳ ನವಿರುಗೆಂಡ ಬೂದಿಯಾಗುವ ಸ್ಥಿತಿಗೆ ಬಂದಿತ್ತು. ಅಮ್ಮ ತನಗೆ ಬರೆ ಹಾಕುವುದಕ್ಕೆ ಮಗುಚುವಕಾಯಿ ಕಾಯಿಸುತ್ತಿದ್ದಾಳೆಂಬುದು ಹದಿನೈದು ವರ್ಷದ, ಜೈಮಿನಿ ಓದಿದ ಮಗನಿಗೆ ತಿಳಿಯಿತು. ಅವನು ಒಂದು ಸಲ, ‘ಕತ್ತೆಮುಂಡೆ, ಬೋಳಿಮುಂಡೆ, ಸೂಳೆಮುಡೆ, ಹೊಲೆಮುಂಡೆ, ಹೊಲೇರಮುಂಡೆ’ ಎಂದು ಒಂದೇ ಉಸುರಿಗೆ ಕೂಗಿಕೊಂಡು ಮನೆಯಿಂದ ಓಟಹೊಡೆದ. ಇನ್ನು ಅವನನ್ನು ಹಿಡಿಯುವುದು ಸಾಧ್ಯವಿಲ್ಲೆಂದು ಗಂಗಮ್ಮನಿಗೆ ಗೊತ್ತು. ಆದರೆ ಅವಳು ತನ್ನ ಸೋಲನ್ನು ಒಪ್ಪಿಕೊಳ್ಳಲಾರಳು. ಈ ಮುಂಡೇ ಮಕ್ಳನ್ನ ಹತೋಟಿಗೆ ತರೂದು ಹ್ಯಾಗೆ ಎಂದು ಯೋಚಿಸುತ್ತಾ ಹಾಗೆಯೇ ಕೂತಿದ್ದಳು. ಮಗುಚುವಕಾಯಿಗೆ ಹುಸಿಗೆಂಡದಲ್ಲಿಯೇ ಸ್ವಲ್ಪಸ್ವಲ್ಪವಾಗಿ ಕಾವೇರುತ್ತಿತ್ತು.

ಮದುವೆಯಾಗಿ ಈ ಮನೆಗೆ ಬಂದಾಗ ಗಂಗಮ್ಮ ಹದಿಮೂರು ವರ್ಷದ ಹುಡುಗಿ. ಯಜಮಾನರಿಗೆ ನಲವತ್ತೈದರ ಪ್ರಾಯ. ಮೊದಲ ಹೆಂಡತಿಗೆ ಎರಡು ಮಕ್ಕಳಾಗಿ ಸತ್ತಿದ್ದವು. ಕೊನೆಗೆ ಅವಳೂ ಸತ್ತಿದ್ದಳು. ಮೊದಲ ಹೆಂಡತಿ ಗಂಗಮ್ಮನ ಕಡೆಯ ಹೆಣ್ಣೇ–ಎಂದರೆ ಜಾವಗಲ್ಲಿನವಳು. ಆ ಸಂಬಂಧದಿಂದಲೇ ರಾಮಣ್ಣನವರಿಗೆ ಗಂಗಮ್ಮನನ್ನು ಕೊಟ್ಟದ್ದು. ರಾಮಸಂದ್ರವೂ ಸೇರಿ ಮೂರು ಊರಿನ ಶ್ಯಾನುಭೋಗಿಕೆ. ಆರು ಎಕರೆ ಗದ್ದೆ, ಎಂಟು ಎಕರೆ ಹೊಲ, ಮುನ್ನೂರು ತೆಂಗಿನ ಮರ, ಮನೆಯಲ್ಲಿ ಪಾತ್ರೆ ಪರಟಿ, ಬೆಳ್ಳಿ ಬಂಗಾರಗಳಿರುವ ಅವರಿಗೆ ಯಾರು ತಾನೇ ಹೆಣ್ಣು ಕೊಡುತ್ತಿರಲಿಲ್ಲ? ರಾಮಣ್ಣನವರು ಮೊದಲಿನಿಂದ ಸಾಧು ಮನುಷ್ಯರೆಂದು ಊರಿನವರೆಲ್ಲ ಹೇಳುತ್ತಾರೆ. ಸಾಧು ಅಂದರೆ ಹಸುವಿನ ಹಾಗೆ, ಎಳೆಗರುವಿನ ಹಾಗೆ; ಗಂಗಮ್ಮ ಮಾತ್ರ ಹೆಣ್ಣು ಹುಲಿ–ಎಂದು ಜನ ಹೇಳುವುದುಂಟು. ಅದು ಕಿವಿಗೆ ಬಿದ್ದಾಗ, ‘ಈ ಜನದ ಬಾಯಿಗೆ ನನ್ ಯಡಗಾಲ ಎಕ್ಕಡ ತುರುಕ, ಸೂಳೇಮಕ್ಳನ್ ತಂದು’ ಎಂದು ಅವಳು ಅಂದುಕೊಳ್ಳುತ್ತಿದ್ದುದೂ ಉಂಟು. ಗಂದು ಮಕ್ಕಳು ಬುದ್ಧಿವಂತರಾಗಿ ಮಾತು ಕೇಳುತ್ತಿದ್ದರೆ ಅವಳನ್ನು ಹಿಡಿಯುವವರಿರುತ್ತಿರಲಿಲ್ಲ; ಜನದ ಬಾಯಿಗೆ ಎಕ್ಕಡವನ್ನೇ ತುರುಕಿಸುತ್ತಿದ್ದಳು. ಆದರೆ ಈ ಮುಂಡ್ಹೆತ್ತೋವು ಹೀಗಾಗ್ಬಿಟ್ವು. ಇವುಕ್ ಬುದ್ಧಿಕಲುಸ್‌ಬೇಕ್. ಕಲುಸ್‌ದೇ ಇದ್ರೆ ನಾನ್ ಜಾವಗಲ್ಲಿನ ಹೆಣ್ಣೇ ಅಲ್ಲ. ಈ ಮಗುಚೂಕಾಯಿ ಇಲ್ಲೇ ಇದ್ದು ಕಾಯ್ತಾ ಇರ್ಲಿ. ಸಾಯಂಕಾಲ ಪಿಂಡ ತಿನ್ನಕ್ ಹ್ಯಾಗೂ ಬತ್ತೂವಲ್ಲ, ಆಗ ಕಾಲಿನ ಮೇಲೆ ಎರಡೆರಡು ಬರೆ ಎಳೀತೀನಿ ಹೋರೀಕರೂಗೆ ಯಳ್ದ ಹಾಗೆ. ಹೋರೀಕರೂಗೆ ಬರೆ ಹಾಕ್‌ದೇ ಇದ್ರೆ ಎಲ್ಲಿ ಹೇಳಿದ್ ಮಾತು ಕೇಳುತ್ವೆ? ಕುರುಬರ ಹಟ್ಟಿ ಬೇಲೂರ ಹೇಳ್ತಿರ್ತಾನೆ: ದನುಕ್ ಬರೆ ಎಳೀದೇ ಇದ್ರೆ ಚಪ್ಪೆರ್ವಾಗ ಬರುತ್ತಂತೆ. ಅದೆಲ್ಲ ಸುಳ್ಳು. ಹೇಳಿದ್ ಮಾತು ಕೇಳ್ಲಿ ಅಂತ ಅಲ್ವೇನೋ ಬರೆ ಹಾಕೋದು–ಎಂದುಕೊಂಡು, ಕಾಯ್ದ ಮಗುಚುವಕಾಯಿಯ ಹಿಡಿಯ ಭಾಗವನ್ನು ತನ್ನ ಕೆಂಪು ಸೆರಗಿನಿಂದ ಹಿಡಿದು ಒಂದು ಸಲ ತಿರುಗಿಸಿ, ಮತ್ತೆ ಹುಸಿಗೆಂಡದೊಳಕ್ಕೆ ನೂಕಿದಳು.

ಅಷ್ಟರಲ್ಲಿ ಮನೆಯ ಹೆಂಚಿನ ಮೇಲೆ ಯಾರೋ ಕಳ್ಳ ಹೆಜ್ಜೆ ಇಡುತ್ತಾ ನಡೆದಂತೆ ಆಯಿತು. ಈ ಹಾಡಾಹಗಲಿನಲ್ಲಿ ಕಳ್ಳ ಸೂಳೆಮಕ್ಳು ಯಾಕ್ ಬತ್ತಾರೆ! ಕೋತಿತಿಮ್ಮಣ್ಣ ಬಂದಿರ್‌ಭೌದು. ತ್ವಾಟದ ಎಳ್‌ನೀರ್ ಬಿಟ್ಟು ಊರೊಳಕ್ಕೆ ಬರೋ ಧೈರ್ಯ ಬಂತಲ್ಲ ಈ ಮುಂಡೇವುಕ್ಕೆ–ಎಂದು ಯೋಚಿಸುತ್ತಿರುವಾಗ ಅವು ಅವಳ ನೆತ್ತಿಯಮೇಲೆ ಸರಿಯಾಗಿ ಬಂದಂತೆ ಆಯಿತು. ‘ನಿಮ್ ಮನೆತನ ಹಾಳಾಗ’–ಎಂದು ಧ್ವನಿ ಎತ್ತಿದವಳು, ‘ಅಯ್ಯೋ, ಆಂಜನೇಯ ದೇವರ ಸ್ವರೂಪವಂತೆ. ಕೆಟ್ಟ ಮಾತಾಡಿದ್ರೆ ಶಾಪ ಕೊಡ್ತೂವಂತೆ’ ಎಂದು ತಕ್ಷಣ ನಾಲಿಗೆ ಬಿಗಿಹಿಡಿದು ತಲೆಯೆತ್ತಿ ಮೇಲೆ ನೋಡಿದಳು. ಮೇಲಿನಿಂದ ಯಾರೋ ಒಟ್ಟಿಗೆ ಹೆಂಚಿನ ಮೇಲೆ ಎರಡು ದಡಿಗಳಿಂದ ಬಡಿದಂತೆ ಆಯಿತು. ಹದಿನೈದು ಇಪ್ಪತ್ತು ಹೆಂಚುಗಳು ಒಡೆದು ಚೂರು ಚೂರುಗಳಾಗಿ, ಅವಳ ಮಡಿಯಾದ ತಲೆ ಮತ್ತು ಎತ್ತಿದ ಮುಖದ ಮೇಲೆ ಉದುರಿದವು. ‘ಇವ್ ಮನೆತನ ಹಾಳಾಗ’ –ಎಂದು ಅವಳು ಕೂಗಿಕೊಳ್ಳುವುದೇ ತಡ, ‘ಅಲ್ಲೇ ಇದಾಳೆ, ಇನ್ನೊಂದ್ ನಾಕ್ ಸಲಿ ಹಾಕಿ ಚಚ್ಚೋ ಅಪ್ಪಣ್ಣಯ್ಯ ಎಂದು ಚೆನ್ನಿಗರಾಯ ಮೇಲಿನಿಂದ ಹೇಳಿದುದು ಕೇಳಿಸಿತು. ಅಣ್ಣ ತಮ್ಮಂದಿರಿಬ್ಬರೂ ಕೈಲಿದ್ದ ಒನಕೆಗಳಿಂದ ಅವಳ ನೆತ್ತಿಯ ಭಾಗದ ಹೆಂಚುಗಳ ಮೇಲೆ ಭುಜಬಲ ಪರಾಕ್ರಮ ಮೆರೆಸಿದರು. ‘ಸೂಳೇಮಕ್ಳಾ, ಪಟೇಲ ಶಿವೇಗೌಡನ ಕೈಲಿ ಹೇಳಿ ನಿಮ್ಮುನ್ ನೇಣಿಗಟ್ಟುಸ್ತೀನಿ ತಾಳಿ’ ಎಂದು ಕೂಗುತ್ತಾ ತಾಯಿ ಮನೆಯಿಂದ ಹೊರಗೆ ಓಡಿದಳು.

‘ಶಿವೇಗೌಡ್ರುನ್ನ ಕರ್ಕಂಬತ್ತಾಳೆ ಕಣೋ ಚನ್ನಯ್ಯ’–ಎಂದು ಅಪ್ಪಣ್ಣಯ್ಯ ಅಣ್ಣನಿಗೆ ಎಚ್ಚರವಿತ್ತ. ಇಬ್ಬರೂ

ಒನಕೆಗಳನ್ನು ಅಲ್ಲಿಯೇ ಬಿಟ್ಟು ಹೆಂಚಿನ ಮೇಲೆ ಹಿಂಭಾಗದ ಸೂರಿನತನಕ ಓಡಿಹೋಗಿ ಅಲ್ಲಿಂದ
ಚರಂಡಿಯ ಆಚೆಗೆ ನೆಗೆದು ಓಟಕಿತ್ತರು.

– 2 –

ರಾಮಸಂದ್ರ ಹಿಂದೆ ಐನೂರು ಮನೆಯ ಗ್ರಾಮವಂತೆ. ಈಗ ಶ್ಯಾನುಭೋಗರ ಖಾನೀಷುಮಾರಿ ಲೆಕ್ಕದಲಿ
್ಲರುವುದೇ ನೂರ ನಲವತ್ತೇಳು ಒಕ್ಕಲು. ಊರನ್ನು ಎರಡು ಭಾಗ ಸುತ್ತಿರುವ ಕೆರೆಯ ನೀರು, ಹಾಳುಬಿದ್ದು
ವರ್ಷವರ್ಷಕ್ಕೆ ಮಣ್ಣು ಸೇರುತ್ತಿರುವ ಕೋಟೆಯ ಗೋಡೆಗಳನ್ನು ಒದೆಯುತ್ತದೆ. ದಕ್ಷಿಣ ಭಾಗದಲ್ಲಿರುವ
ಚೋಳೇಶ್ವರ ಗುಡಿಯ ಮೂಲಲಿಂಗ ಕೆರೆ ಏರಿಯ ಮೇಲಿನ ಗುಡಿಯಲ್ಲಿದೆ. ಊರೊಳಗಿನ ಗುಡಿಯ ಮುಂದಿ
ನ ಬೀದಿಯ ಕೊನೆಯಲ್ಲಿ ಬ್ರಹ್ಮದೇವರ ಮಂಟಪ. ಅದರ ಹತ್ತಿರವೇ ಹನುಮಂತರಾಯನ ಗುಡಿ. ಗ್ರಾಮದ
ಹೊರಗೆ ತೋಪಿನ ಹತ್ತಿರ ಗ್ರಾಮದೇವತೆ ಕಾಳಮ್ಮನ ಗುಡಿ. ಬಣಜಿಗ, ನೊಣಬ, ಮಗ್ಗ, ಗಾಣಿಗ, ಕುರುಬ,
ಮೊದಲಾಗಿ ಒಂದೊಂದು ಜಾತಿಯದೇ ಒಂದೊಂದು ಸಂದಿ, ಗೊಂದಿ. ಒಂದು ಜಾತಿಯ ಸಂದಿಯಲ್ಲಿ
ಮತ್ತೊಂದು ಜಾತಿಯವರು ಯಾರೂ ಇಲ್ಲವೆಂದೇನೂ ಇಲ್ಲ. ಆದರೆ ಮಾಂಸ ಮಡ್ಡಿ ತಿನ್ನುವ ಜಾತಿಯವರ
ನಡುವೆ ಬ್ರಾಹ್ಮಣ, ಲಿಂಗಾಯಿತ, ಚಾತಾಳಿ ಮೊದಲಾದವರು ಇರುತ್ತಿದ್ದುದು ತುಂಬ ಅಪರೂಪ.

ಪಟೇಲ ಶಿವೇಗೌಡನ ಮನೆಗೂ ಫೌತಿ ಶ್ಯಾನುಭೋಗ ರಾಮಣ್ಣನವರ ಮನೆಗೂ ಎರಡು ಓಣಿಯ ದೂರ.
ಅಂದರೆ ಸುಮಾರು ಇಪ್ಪತ್ತು ಮನೆಗಳ ಆಚೆ.

ಗೌಡ ಮನೆಯಲ್ಲೇ ಇದ್ದ. ಗಂಗಮ್ಮ ನೇರವಾಗಿ ಒಳಗೆ ಹೋಗಿ ಹೇಳಿದಳು: 'ಬ್ಯಾಗ ಎದ್ದು ನೋಡು ಬಾ
ಶಿವೇಗೌಡ. ನಮ್ಮ ಚೆನ್ನಿಗನೂವೆ ಅಪ್ಪಣ್ಣನೂವೆ ಮನೆ ಮ್ಯಾಲುಕ್ ಹತ್ತಿ ಒನಕೆ ತಗಂಡು ಹಂಚು
ಬಡೀತಿದೂವೆ. ನೋಡು, ನನ್ನ ತಲೇಮ್ಯಾಲೆಲ್ಲ ಬಿದ್ದು ರಕ್ತ ಬಂದಿದೆ.'

'ಅಧ್ಯಾಕೆ?'

'ಮಠಕ್ ಹೋಗು ಅಂದೆ. ಅದುಕ್ಕೇ ನಾ ವಲ್ಲೆ ಅಂತ ಹೀಗ್ ಮಾಡ್ತಿವೆ.'

ಗೌಡನ ಹೆಂಡತಿ ಗೌರಮ್ಮ–'ಅವ್ ಎಚ್‌ಕಂಬುಟ್ಟವೆ. ಹೋಗಿ ಎಲ್ಡು ಇಡಿಮಿ ಬಲ್ಲಿ' ಎಂದು ಗಂಡನಿಗೆ
ಹೇಳಿದಳು. ಗೌಡ ತನ್ನ ದೊಡ್ಡ ಹೊಟ್ಟೆಯನ್ನು ಹೊತ್ತು ಕಾಲಿಗೆ ಜೋಡು ಮೆಟ್ಟಿ ಗಜಗಂಭೀರ ನಡಿಗೆಯಲ್ಲಿ
ಇವರ ಮನೆಗೆ ಹೊರಟ. ಬಂದು ನೋಡಿದರೆ ಅಣ್ಣತಮ್ಮಂದಿರಿಬ್ಬರೂ ಪರಾರಿಯಾಗಿದ್ದರು. ಅಷ್ಟರಲ್ಲಿ
ಮನೆಯ ಮುಂದೆ ಗುಡಿಯ ಮಾದೇವಯ್ಯನವರು, ಇನ್ನೂ ಹತ್ತು ಹದಿನೈದು ಜನ ಬಂದು ನಿಂತಿದ್ದರು.
ಅಡಿಗೆಯ ಸಾಲೆಯಿಂದ ಹಿಂದಿನ ಸೂರಿನ ತನಕ ಮನೆಯ ಹೆಂಚುಗಳು ಪುಡಿಗುಟ್ಟಿಹೋಗಿದ್ದವು. ಅಲ್ಲಿ
ಸೇರಿದ್ದವರ ಪೈಕಿ ನಾಲ್ಕು ಜನಕ್ಕೆ ಶಿವೇಗೌಡ–'ಲೇ ಹೋಗ್ರುಲಾ, ಅವ ಉಡುಕ್ಕಂಡ್ ಬಲ್ಲಿ' ಎಂದ.
ಅಡಿಗೆಯ ಮನೆ ನೋಡಿ ಗಂಗಮ್ಮನ ಕಣ್ಣಿನಲ್ಲಿ ನೀರು ಬಂತು. 'ಶಿವೇಗೌಡ, ಆ ಸೂಳೇಮಕ್ಳನ್ನ ಹಿಡಕಂದ್
ಬಂದು ಕಾಲು ಮುರ್ದು ಕೂರುಸ್ಬೇಕು' –ಎಂದಳು.

ಹುಡುಗರು ಎಲ್ಲಿಯೂ ಸಿಕ್ಕಲಿಲ್ಲ. ರಾತ್ರಿಯಾಗಿ ಕತ್ತಲಾದರೂ ಅವುಗಳ ಸುಳಿವಿಲ್ಲ. ಇವ್ ಮನತಾನ
ಹಾಳಾಗ, ಎಲ್ಲಿ ಹೋದ್ವೋ–ಎಂದು ಗಂಗಮ್ಮ ಹತ್ತು ಬಾರಿ ಅಂದುಕೊಂಡಳು. ಮನೆಯಲ್ಲಿ ಅವಳು
ಒಬ್ಬಳೇ. ಹಿಂಭಾಗದ ಹೆಂಚುಗಳೆಲ್ಲ ಪುಡಿಯಾಗಿ ಹೋಗಿವೆ. ಒಬ್ಬಳೇ ಇರಲು ಭಯವೇನಿಲ್ಲ. 'ನಾನಿದ್ದ ಕಡೆ
ದೆವ್ವವೂ ಸುಳಿಯಲ್ಲ'–ಎಂದು ಅವಳೇ ಹೇಳುತ್ತಾಳೆ. ಆದರೆ ಈ ಮುಂಡೇವು ಎಲ್ಲಿ ಹೋದವೋ?
ಅವುಗಳ ಜೀವದ ಬಗೆಗೆ ಅವಳಿಗೆ ಯಾವ ಯೋಚನೆಯೂ ಇಲ್ಲ. ಎಲ್ಲೋ ಅವಿತುಕೂತಿವೆ. ರಾತ್ರಿ
ಹೊಟ್ಟೆಗೆ ಏನು ಮಾಡ್ತುವೋ? ತ್ವಾಟದಾಗೆ ಎಳಗಿಳನೀರು ಹಾಕ್ಕಂಡ್ ಕುಡ್ದು ಬಂಬ್ಲು ಗಿಂಬ್ಲು ತಿಂದಿ
ರಬೌದು. ಗದ್ದೇ ಕಡೀಗ್ ಹೋಗಿದ್ರೆ ಕಬ್ಬಿನ್ ಜಲ್ಲೆ ಅಗಿದಿರಬೌದು. ಆದ್ರೆ ತೀರುಹತ್‌ದೋವು ಮನಿಗ್
ಬರಬ್ಯಾಡವಾ? ನಾಳೆ ಬ್ಯಳಿಗ್ಗೆ ರೊಟ್ಟಿಗೆ ಅಂತ ಬರ್ಲಿ, ಮಾಡ್ತೀನಿ.

ಅವರ ಮನೆಯ ಎದುರಿಗೇ ಚೋಳೇಶ್ವರನ ಗುಡಿ. ಗುಡಿಯ ಬಾಗಿಲು ಉತ್ತರಕ್ಕೆ, ಇವರ ಮನೆಯದು
ಪೂರ್ವಕ್ಕೆ. ಎಂದರೆ ಗುಡಿಯ ಎಡಭಾಗ ಇವರ ಮನೆಯ ಮುಂದಿದೆ. ಗುಡಿಗೂ ಮನೆಗೂ ಮಧ್ಯ ಒಂದು
ಸಣ್ಣ ಪಾಳು. ಹಿಂದೆ ಅದು ಗುಡಿಯ ಪೌಳಿಯಾಗಿದ್ದುದಕ್ಕೆ ಈಗಲೂ ಗುರುತಿದೆ. ಗುಡಿಯಲ್ಲಿ
ಮಾದೇವಯ್ಯನವರು ಒಬ್ಬರೇ ಕೂತು ಬಲಗೈಲಿ ಏಕತಾರಿ ಮೀಟಿಕೊಂಡು, ಎಡಗೈಲಿ ಚಿಟಿಕಿ ಹಾಕುತ್ತಾ–
'ಹರಹರ ಎನುತಲಿ ರುದ್ರಾಕ್ಷಿ, ಧರಿಸಲು ಹರಿವುದು ಭವಗಳ ಪರಮ ಧರಿಸಿದ ರುದ್ರಾಕ್ಷಿ.....'–ಎಂದು
ಭಜನೆ ಮಾಡಿಕೊಳ್ಳುತ್ತಿದ್ದರು. ಅವರು ದಿನವೂ ಅಷ್ಟೇ. ನಡುರಾತ್ರಿಯವರೆಗೂ ಭಜನೆ ಮಾಡುತ್ತಾರೆ.
ಬೆಳಿಗ್ಗೆ ಕೋಳಿ ಕೂಗುವ ಮೊದಲೇ ಎದ್ದು ಕೂತು ಮತ್ತೆ ಪ್ರಾರಂಭಿಸುತ್ತಾರೆ. ಅವರದು ಯಾವ ಊರೋ
ಯಾವ ದೇಶವೋ ಯಾರಿಗೂ ಗೊತ್ತಿಲ್ಲ. ಈ ಊರಿಗೆ ಬಂದು ಆಗಲೇ ಇಪ್ಪತ್ತು ವರ್ಷದ
ಮೇಲಾಯಿತಂತೆ. ಗಂಗಮ್ಮ ಮದುವೆಯಾಗಿ ಬರುವ ಸ್ವಲ್ಪ ಮುಂಚೆಯೇ ಇಲ್ಲಿಗೆ ಬಂದಿದ್ದರಂತೆ.
ಚೋಳೇಶ್ವರನ ಗುಡಿಯಲ್ಲಿ ವಾಸ, ಭಜನೆ, ಕಂತೆಭಿಕ್ಷೆ ಮಾಡಿ ಊಟ. ಎತ್ತರವಾದ, ದುಂಡುಮುಖದ ಆಳು.
ಹಣೆಯ ಮೇಲೆ ದೊಡ್ಡದಾದ ಮೂರು ಪಟ್ಟೆ ವಿಭೂತಿ. ಹುಬ್ಬಿನ ನಡುವೆಯಲ್ಲದೆ ಕಿವಿಯ ಹತ್ತಿರವೂ

ವಿಭೂತಿಯ ಕೊಟ್ಟು. ಪೂರ್ತಿ ಕ್ಷೌರ ಮಾಡಿಸಿದ ತಲೆ. ಕಾವಿಯ ಪಂಚೆ ಉಟ್ಟು ಅದೇ ಬಣ್ಣದ ಅಂಗಿ ಹಾಕುತ್ತಾರೆ.

ಮಲಗಿದರೆ ಗಂಗಮ್ಮನಿಗೆ ನಿದ್ದೆ ಬರಲಿಲ್ಲ. ಹುಡುಗರು ಇನ್ನೂ ಮನೆಗೆ ಬಂದಿಲ್ಲ. ಆಗಲೇ ಮಾದೇವಯ್ಯನವರು ಭಜನೆ ಮುಗಿಸುವ ಹೊತ್ತು. 'ಮಂಗಳಾರತಿ ಎತ್ತಿ ಅಂಗನೇಯರೆಲಾ ಸಂಗಯ್ಯ ಬಸವಣ್ಣನಿಗೇ.....' ಹೇಳಲು ಶುರು ಮಾಡಿದ್ದರು. ಗಂಗಮ್ಮ ಎದ್ದು ಬರೀ ಬಾಗಿಲು ಹಾಕಿಕೊಂಡು ಅಲ್ಲಿಗೆ ಹೋದಳು. ಗುಡಿಯ ಮುಂಭಾಗವು, ಬಾಗಿಲಿಲ್ಲದ ದೊಡ್ಡ ಮಂಟಪದಂತಿತ್ತು. ಅಯ್ಯನವರು ಕೂತು ಭಜನೆ ಮಾಡುತ್ತಿದ್ದುದು ಅಲ್ಲಿಯೇ. ಸಂಜೆಯ ಹೊತ್ತು ಭಜನೆ ಕೇಳಲು, ಊರಿನ ಕೆಲವರು ಬಂದು ಕೂರುತ್ತಿದ್ದರು. ಈಗ ಆಗಲೇ ಮಧ್ಯರಾತ್ರಿಯಾಗಿದೆ. ಗುಡಿಯಲ್ಲಿ ಮತ್ತೆ ಯಾರೂ ಇಲ್ಲ. ಗಂಗಮ್ಮ ಬಂದು ಅಯ್ಯನವರ ಎದುರಿನ ಕಂಬದ ಹತ್ತಿರ ಕೂತಳು. ಅವರು ಕೊನೆಯ ನುಡಿ ಹೇಳಿ ಮುಗಿಸಿ ಏಕತಾರಿ ಚಿಟಿಕೆಗಳನ್ನು ನಿಲಿ ಲ್ಲಿಸಿದ ಮೇಲೆ ಅವಳೇ ಕೇಳಿದಳು: ' ಈ ಸೂಳೆಮಕ್ಳಿಗ್ ಬುಧಿ ಬರಾದು ಯಾವತ್ತು ಮಾದೇವಯ್ನೋರೆ?'

'ಗಂಗವ್ವಾ, ಬುದ್ಧಿ ನಿಧಾನವಾಗಿ ಬತ್ತೈತೆ. ನೀವು ಒಳ್ಳೇ ಮಾತಾಡಾದು ಮೊದ್ಲು ಕಲೀರಿ.'

'ನಾನೇನ್ ಕ್ಯಟ್ ಮಾತಂದದ್ದು?'

'ಈ ಸೂಳೇಮಕ್ಳಿಗೆ ಅಂತ ಯಾಕಂತೀರಾ? ನಮ್ ಹುಡುಗ್ರೀಗೆ ಅನ್ನಿ.'

ತನ್ನ ಮಾತನ್ನು ತಿದ್ದಿಕೊಳ್ಳಲು ಮಾದೇವಯ್ಯನವರು ಗಂಗಮ್ಮನಿಗೆ ಹೇಳುತ್ತಿರುವುದು ಇದು ಮೊದಲ ಸಲವಲ್ಲ. ಅವಳನ್ನು ತಿದ್ದಲು ಯಾರಿಗೂ ಸಾಧ್ಯವಿಲ್ಲವೆಂದು ಗೊತ್ತಿದ್ದರೂ ಅವರು ಇಂತಹ ಸಂದರ್ಭ ಬಂದರೆ ಹೇಳುತ್ತಲೇ ಇರುತ್ತಾರೆ. ಮಕ್ಕಳು ಇನ್ನೂ ಮನೆಗೆ ಬಂದಿಲ್ಲದೆ ಇರುವುದನ್ನು ಅವಳು ಹೇಳಿದಳು.

'ಗಂಗವಾ, ನೀವು ಅವುನ್ನ ಶಿಕ್ಷೆ ಮಾಡಬೇಕಾದ್ರೆ ಪಟೇಲ್‌ರನ್ನ ಯಾಕ್ ಕರ್ಕಂಡ್ ಬರಾಕೆ ಹೋಗಿದ್ರಿ?'

'ಅವು ನನ್ ಕೈಗೆ ಸಿಕ್ಕಿದ್ರೆ ಹ್ಯೇಳ್ರಿ.'

'ತಪ್ಪು ನಿಮ್ದೇ'–ಎಂದು ಅಯ್ಯನವರು ಮತ್ತೆ ಹೇಳಿದರು. 'ಮನೆಯ ಯಜಮಾಂತಿ, ತಾಯಿ ತಿದ್ದಿಕೊಳ್ಳದೆ ಮಕ್‌ಳನ್ನ ತಿದ್ದೂದು ಹ್ಯಂಗೆ?'–ಎಂಬ ಅವರ ಹಳೆಯ ಮಾತಿನಿಂದ ಅವಳಿಗೆ ಕಸಿವಿಸಿಯಾಯಿತು.

'ಮಠಕ್ಕೆ ಕಳಿಸಿದ್ರಲ್ಲ ಅಪ್ಪಣ್ಣಯ್ಯನ್ನ, ಅಲ್ಲಿ ಅವ್ನು ಓಚಯ್ಯನೋರನ್ನೇ ಸೂಳೇಮಗನೆ ಅಂತ ಬೈದು ಓಡಿಬಂದನಂತೆ. ಈ ಮಾತು ಅವ್ನು ಎಲ್ಲಿ ಕಲ್ತ್‌ಕಂಡ?'

'ನನ್ ಹಣೇಬರ ಕಣ್ರೀ, ಅದೇ ಅವನ ಬಾಯಲ್ಲಿ ಹೀಗ್ ಆಡ್ಸುತ್ತೆ. ಆಮ್ಯಾಲೆ ಆ ಸೂಳೇಮಗುನ್ನ ಓಚಯ್ಯನೋರು ಸುಮ್ನೆ ಬಿಟ್ರಾ?'

'ಅಲ್ಲಿಂದ ಓಡಿಬಂದ ಮೇಲೇ ಅಲ್ವಾ ಅಣ್ಣ ತಮ್ಮಂದಿರು ಹಂಚು ಬಡ್‌ದುದ್ದು?'

'ಈ ಮುಂಡೇಮಕ್ಳ ಮನೆತನ ಹಾಳಾಗ. ಯಲ್ಲಾತಕ್ಕೂ ಹೊಸ ಹೆಂಚು ಹಾಕ್ಸಕ್ಕೆ ನಾನೆಲ್ಲಿಂದ ಅಂತ ತರಲಿ?'

'ಮತ್ತೆ ಕ್ಯಟ್ ಮಾತು ಆಡ್ತೀರಲಾ ಗಂಗವ್ವಾ.....?'– ಅಯ್ಯನೋರು ಇನ್ನೂ ಏನೋ ಹೇಳುತ್ತಿದ್ದರು. ಅಷ್ಟರಲ್ಲಿ ಹೊರಗೆ ಬೀದಿಯಲ್ಲಿ ಹತ್ತಾರು ಜನಗಳು ಓಡಿಯಾಡುವ ಶಬ್ದ ಕೇಳಿಸಿತು. ಕೆಲವರು– 'ಕಬ್ಬಿನ ಗದ್ದೀಗ್ ಬೆಂಕಿ ಹತ್ಯತೆ, ಓಡ್‌ಬಲ್ಲಿ ಓಡ್‌ಬಲ್ಲಿ' ಎಂದು ಕೂಗಿಕೊಂಡರು. ಇವರಿಬ್ಬರೂ ಗುಡಿಯ ಹೊರಗೆಬಂದು ನೋಡುತ್ತಾರೆ: ಕೆರೆಯ ಹಿಂದಿನ ಬಯಲಿನಲ್ಲಿ ಬೆಂಕಿಯ ಉರಿ ರಾಚುತ್ತಿದೆ. ಅದರ ಬೆಳಕಿನಲ್ಲಿ ಹೊಗೆಯೂ ಕಾಣುತ್ತಿದೆ.

'ಅಯ್ಯೋ ನಮ್‌ದೂ ಕಬ್ಬಿತ್ತಲ್ಲಪ್ಪಾ, ಇದ್ಯಾವ ಮನೆಹಾಳ ಮುಂಡೇಮಕ್ಳು ಹೀಗ್ ಮಾಡಿದ್ರೋ?' – ಎಂದುಕೊಂಡು ಗಂಗಮ್ಮ ಮನೆಗೆ ಹೋಗಿ ಬಾಗಿಲಿಗೆ ಒಂದು ಬೀಗ ಸಿಕ್ಕಿಸಿಕೊಂಡುಜನಗಳ ಜೊತೆಯಲ್ಲಿ ಕೆರೆ ಏರಿಯ ಕಡೆಗೆ ಓಡಿದಳು.

ಊರ ಮುಂದೆಯೇ ಕೆರೆ. ಊರನ್ನು ಎರಡು ಕಡೆಯೂ ಸುತ್ತಿ ನಿಂತಿರುವ ಕೆರೆಯ ಏರಿಗೆ ಗ್ರಾಮದ ಮುಂಭಾಗದಿಂದ ಸುತ್ತಿ ಹೋಗಬೇಕು. ಈಗ ಊರಿಗೆ ಊರೇ ಓಡಿ ಬಂದು ಏರಿಯಮೇಲೆ ಅಲ್ಲಲ್ಲೇ ನಿಂತಿತು. ಇಡೀ ಬಯಲಿನ ಅರ್ಧ ಭಾಗಕ್ಕೂ ಮೀರಿ ಕಬ್ಬು ಹಾಕಿತ್ತು. ಪಡುವಲ ದಿಶೆಯ ತೂಬಿನ ಕಡೆಯಲಿ ಲ್ಲ ಎರಡು ಆಲೆ ಅರೆಯುತ್ತಿತ್ತು. ಮೂಡಣದಲ್ಲಿ ಹೊತ್ತಿ ಉರಿಯುತ್ತಿದ್ದ ಕಬ್ಬಿನ ಗದ್ದೆಯ ಬೆಂಕಿ ನಿಧಾನವಾಗಿ ಪಡುವಣ ಬಡಗಣಕ್ಕೂ ಹರಡುತ್ತಿತ್ತು. ಎಲ್ಲ ಕಬ್ಬು ಕಟಾವಿಗೆ ಬಂದು ಬುಡದ ಗರಿಗಳು ಒಣಗಿ ತರಗಾಗಿದ್ದುದರಿಂದ ಬೆಂಕಿ ಹಬ್ಬಲು ಅನುಕೂಲವಾಗಿತ್ತು. ಗಾಳಿ ಇಲ್ಲದಿದ್ದರೆ ಉರಿಯ ಬಿರುಸು ನಿಧಾನವಾಗುತ್ತಿತ್ತು. ಆದರೆ ಗಾಳಿ ದಿಕ್ಕು ತಪ್ಪಿದಂತೆ ಒಮ್ಮೆ ಪಡುವಲಿಗೆ ಇನ್ನೊಮ್ಮೆ ತೆಂಕಲಿಗೆ ಬೀಸುತ್ತಿದ್ದುದರಿಂದ ಉರಿ ಬಲು ಬೇಗ ಹರಡುತ್ತಿತ್ತು. ಪಡುವಣ ಕಡೆಯ ಎರಡೂ ಆಲೆಯವರೂ ಕಣೆಯ ಕೋಣಗಳನ್ನು ಬಿಚ್ಚಿ ಏರಿಯ ಕಡೆಗೆ ಓಡಿಸಿದರು. ಆಳುಗಳು ಬೆಲ್ಲದ ಮೂಟೆಗಳನ್ನು ಹೊತ್ತು ಸಾಗಿಸಲು ಮೊದಲುಮಾಡಿದರು. ಅಚ್ಚಿನ ಮಣೆಗಳನ್ನು ಇಬ್ಬಿಬ್ಬರು ಜೊತೆಯಾಗಿ ಹೊತ್ತು ಏರಿಯಮೇಲೆ ತಂದು ಹಾಕುತ್ತಿದ್ದರು. ಬಿದಿರಿನ ಗಳು, ತೆಂಗಿನ ಸೋಗೆ, ಮತ್ತು ಕಬ್ಬಿನ ತರಗುಗಳಿಂದ ಕಟ್ಟಿದ ಆಲೆಮನೆಗೆ ಇನ್ನು ಐದೇ ನಿಮಿಷದಲ್ಲಿ ಜ್ವಾಲೆ ಮುಟ್ಟಿ ಅದು ಆಕಾಶದ ಎತ್ತರಕ್ಕೂ ಉರಿದು ಬೀಳುವುದು ನಿಶ್ಚಯವಾಗಿತ್ತು.

ತಮ್ಮ ತಮ್ಮ ಗದ್ದೆಗೆ ಉರಿ ವ್ಯಾಪಿಸಿದಾಗಲೂ ಗದ್ದೆಯ ಮಾಲೀಕರು, ಅವರ ಮನೆಯ ಇತರರು, ತಮ್ಮ ಶರೀರಕ್ಕೆ ಬೆಂಕಿ ಮುಟ್ಟಿದಂತೆ ಹಾ ಹಾ ಎನ್ನುತ್ತಿದ್ದರು. ಬೆಂಕಿ ಹೇಗೆ ಹೊತ್ತಿತು, ಯಾರು ಹೊತ್ತಿಸಿದರು ಎಂಬ ಬಗೆಗೆ ಜನರಲ್ಲಿಯೇ ತರ್ಕ ವಿತರ್ಕಗಳು ನಡೆಯುತ್ತಿದ್ದವು.

ಆಲೆಯ ಹತ್ತಿರವೇ ಗಂಗಮ್ಮನ ಪುಟ್ಟ ತೋಟವಿದೆ. ನಲವತ್ತೇ ತೆಂಗಿನ ಮರಗಳಿದ್ದ ಅದು ಒಂದು ಎಕರೆ ವಿಸ್ತೀರ್ಣದ್ದು. ಅವಳ ಉಳಿದ ತೋಟ ಬೇರೆ ಕಡೆ ಹೊಲಕ್ಕೆ ಲಗತ್ತಾಗಿತ್ತು. ಈಗ ಬೆಂಕಿ ತೋಟದ ನಾಲ್ಕೂ ಸುತ್ತನ್ನು ಆಕ್ರಮಿಸುತ್ತಾ ಬಂದು ತೋಟದ ಪಕ್ಕದಲ್ಲಿಯೇ ಇದ್ದ ಆಲೆಯ ಮನೆಗಳು ಹೊತ್ತಿ, ಅದರ ಉರಿ ಮತ್ತು ಹೊಗೆ ಸೊಸಿಮರದಿಂದ ಎಷ್ಟೋ ಮೇಲಕ್ಕೆ ಏರಿದುವು. ತೋಟದ ಮಧ್ಯದಿಂದ ಯಾರೋ–'ಅಯ್ಯಯ್ಯಪ್ಪಾ, ಬಿಡಿಸ್ರೋ. ನಾ ಸತ್ಹೋಕ್ತೀನಿ ಬಿಡಿಸ್ರೋ' ಎಂದು ಗಟ್ಟಿಯಾಗಿ ಕಿರಿಚಿಕೊಂಡು ಲಬಲಬನೆ ಬಾಯಿ ಬಡಿದುಕೊಂಡುದು ಬೆಂಕಿಯ ಚಿಟಿಚಿಟಿಯ ಮಧ್ಯೆ ಸ್ಪಷ್ಟವಾಗಿ ಕೇಳಿಸಿತು. ಜನರೆಲ್ಲ ಗಾಬರಿಯಿಂದಲೂ ಕೌತುಕದಿಂದಲೂ ಆ ಕಡೆ ನೋಡುತ್ತಿರುವಂತೆಯೇ ಗಂಗಮ್ಮ–'ನಮ್ ಚೆನ್ನಿಗರಾಯನ ದನಿ. ಮುಂಡೇದು ಇಷ್ಟು ಹೊತ್ತಿನಾಗೆ ತ್ವಾಟದಲ್ಯಾಕ್ ಕೂತ್‌ಕಂಡಿತ್ತೋ! ನಿಮ್ಮ ದಮ್ಮಯ್ಯ ಅಂತೀನಿ. ಗಂಡುಸ್ರು ಯಾರಾರೂ ಹೋಗಿ ಕರ್‌ಕಂಡ್ ಬನ್ರೋ' ಎಂದು ಕೂಗಿಕೊಂಡಳು.

ಆದರೆ ಸುತ್ತ ಬೆಂಕಿ ಹಬ್ಬಿ ಪಕ್ಕದ ಆಲೆಗಳು ಎದ್ದು ಉರಿಯುತ್ತಿರುವಾಗ ತೋಟದೊಳಕ್ಕೆ ಯಾರು ಹೋಗಬೇಕು? ತೋಟದ ಬೇಲಿಗೆ ಬೆಂಕಿ ಹೊತ್ತಿದೆ. ತೋಟದೊಳಗೆ ಸೋಗೆ ಹೆಡೆದಿಬ್ಬಿಗಳ ಒಟ್ಟಲು ಬೇರೆ ಇದೆ. ಅದಕ್ಕೆ ಉರಿ ತಗಲಬಹುದು. ಯಾವ ಗಂಡಸೂ ಧೈರ್ಯ ಮಾಡಲಿಲ್ಲ. ಗುಡಿಯ ಮಾದೇವಯ್ಯನವರು ಮಾತ್ರ–'ತ್ವಾಟದೊಳಿಕ್ ಬೆಂಕಿ ಬರಾಕಿಲ್ಲ, ಬನ್ರಿ ಬನ್ರಿ' ಎಂದು ಹೇಳುತ್ತಾ ಏರಿಯನ್ನು ಜಾರಿದಷ್ಟು ಭರದಿಂದ ಇಳಿದು, ಉರಿಯುವ ಗದ್ದೆಯ ನಡುವೆ ಹೋಗುವ ನೀರು ಕಾಲುವೆಯಲ್ಲಿ ಹಾಯ್ದು ತೋಟ ಮುಟ್ಟಿದರು.

'ಇನ್ಯಾರೂ ಗಂಡಸರಿಗೆ ಹುಟ್ಟಿದ ಸೂಳೇಮಕ್ಳು ಇಲ್ವೇನ್ರೋ! ಹೆಣ್ಣು ಹೆಂಗಸು ನಾನು ಹೋಗ್ತೀನಿ'–ಎಂದು ಕೂಗುತ್ತಾ ಗಂಗಮ್ಮನೂ ಏರಿಯನ್ನು ಇಳಿದಳು. ಬೆಸ್ತರ ಮುದ್ದ, ಹೊಲೇರ ಬೇಲೂರ, ಭಜನೆಗೆ ಬರುತ್ತಿದ್ದ ತೋಟಮರಿ ಮೊದಲಾಗಿ ಏಳು ಎಂಟು ಜನ ಅವಳ ಹಿಂದೆ ಇಳಿದು ಆಮೇಲೆ ಅವಳಿಗಿಂತ ಮುಂದೆ ಓಡಿದರು.

ತೋಟದಲ್ಲಿ ಚೆನ್ನಿಗರಾಯ ಒಂದು ಸೊಸಿ ತಂಗಿನಮರದ ದಸಿಮೊಟ್ಟೆಯ ಮೇಲೆ ಕೂತು ಇನ್ನೂ 'ಅಯ್ಯಯ್ಯಪ್ಪೋ' ಎನ್ನುತ್ತಿದ್ದ. ಮಾದೇವಯ್ಯನವರು–'ತ್ವಾಟದೊಳಗೆ ಬೆಂಕಿ ಬಂದಿಲ್ಲ. ಬ್ಯಾಗ ಇಳಿದು ಬಾ ಚೆನ್ನಯ್ಯಾ' ಎಂದು ಕೂಗಿಕೊಂಡರು. ಆದರೆ ಇಳಿಯಲು ಅವನಿಗೆ ಭಯ. 'ನಂಗ್ ಹೆದ್ರಿಕೆಯಾಗುತ್ತೆ ಕಣ್ರೀ ಅಯ್ನೋರೇ'–ಎಂದು ಪ್ರಲಾಪಿಸುತ್ತಿದ್ದ. ಅಷ್ಟರಲ್ಲಿ ಮುದ್ದ, ಬೇಲೂರ, ತೋಟಮರಿ ಎಲ್ಲರೂ ಓಡಿಬಂದರು. ಹಿಂದಿನಿಂದ ಗಂಗಮ್ಮನೂ ಏದುಸಿರಿಡುತ್ತಾ ತಲುಪಿದಳು. 'ಇಳಿಯೋ ನನ್ ಕಂದಾ, ಅಪ್ಪಣ್ಣೆಲ್ಲೋ?'–ಎಂದು ಅವಳು ಕೂಗಿಕೊಂಡಳು. ಸ್ವಲ್ಪ ಧೈರ್ಯ ಬಂದು ಅವನು ಕೋತಿತಿಮ್ಮಣ್ಣ ಇಳಿಯುವಷ್ಟೇ ಸರಾಗವಾಗಿ ದಸಿಯಿಂದ ಗೋಣಿಗೆ ಬಂದು ಮರವನ್ನು ಇಳಿದ. ಇನ್ನಿ ಅಲ್ಲಿ ನಿಂತರೆ ಬೆಂಕಿಯು ರಾಚಿ ಸೋಗೆ ಹೆಡೆದಿಬ್ಬಿಗಳ ಒಟ್ಟಲಿಗೆ ತಗಲುವ ಸಾಧ್ಯತೆ ಇದ್ದುದರಿಂದ ಅವನನ್ನು ಕರೆದುಕೊಂಡು ಎಲ್ಲರೂ ಹಿಂದಿರುಗಿದರು. ಅವರು ಬರುವ ಕಾಲುವೆಯ ಎರಡೂ ಕಡೆಯ ಕಬ್ಬಿನ ಉರಿ ಆರುತ್ತಿತ್ತು. ಆಲೆಮನೆಯ ಜ್ವಾಲೆ ಮಾತ್ರ ಇನ್ನೂ ಏರುತ್ತಿತ್ತು. ಈಗ ಆಲೆಯ ಹತ್ತಿರದಲ್ಲಿಯೇ ಹಾಕಿದ್ದ ಒಣಗಿದ ಸಿಪ್ಪೆಯ ದೊಡ್ಡರಾಶಿಗೆ ಉರಿ ತಗುಲಿತ್ತು.

ಎಲ್ಲರೂ ಏರಿಯನ್ನು ಹತ್ತಿದ ಮೇಲೆ ಮಾದೇವಯ್ಯನವರು ಚೆನ್ನಿಗರಾಯನನ್ನು ಕೇಳಿದರು: 'ಇಷ್ಟು ಹೊತ್ನಾಗೆ ತೆಂಗಿನ ಮರ ಏರಿ ಯಾಕೆ ಕುಂತಿದ್ದೆ?'

'ಅಮ್ಮ ಶಿವೇಗೌಡುನ್ನ ಕರ್ಕಂಬತ್ತೀನಿ ಅಂತ ಹೋದ್ಲಲ್ಲ , ಅದುಕ್ಕೆ.'

ಅಷ್ಟರಲ್ಲಿ ಎಲ್ಲರೂ ಅಲ್ಲಿ ಸುತ್ತುವರಿದರು. ಪಟೇಲ ಶಿವೇಗೌಡನೂ ಬಂದ.

'ನೀವು ಅಣ್ಣತಂಮ್ಮಂದಿರು ಹಂಚು ಯಾಕೆ ಬಡಿದಿರಿ?'–ಮಾದೇವಯ್ಯನವರು ಕೇಳಿದರು.

'ಅಯ್ಯೋ, ಹಂಚಿನ ಮನೆ ಹಾಳಾಯ್ತು. ಅಪ್ಪಣ್ಣ ಎಲ್ಹೋದ್ನೋ?'–ಗಂಗಮ್ಮ ಕಾತರಳಾಗಿ ಕೇಳಿದಳು.

'ಲಿಂಗಾಪುರದ ಕಡಿಕ್ ಓಡಿಹೋದ. ಅವ್ನೇ ಕಬ್ಬಿನ ಗದ್ದೆಗೆ ಬೆಂಕಿ ಹಾಕ್‌ದೋನು.'

'ಅವ್ನು ಯಾಕೋ ಹಾಕ್ತಾನೆ?'

'ನಾವಿಬ್ರೂ ತೆಂಗಿನ ಮರದ ಮ್ಯಾಲೆ ಅವುತ್‌ಕಳಾಣ ಬಾರೋ ಅಂದೆ. ಅವ್ನಿಗೆ ನ್ಯಟ್ಟಗೆ ಮರ ಹತ್ತುಕ್ ಬತ್ತಿರ್ಲಿಲ್ಲ. ಕಬ್ಬಿನ್ ಗದ್ದೇಲಿರ್ತೀನಿ ಅಂದ. ಈ ಕಡೆ ಆದ್ರೆ ಆಲೆಮನೆಯೋರು ಕಾಣ್ತಾರೆ ಅಂತ ಆಚೆ ಕೋಡಿಕಡೆಗೆ ಹೋದ. ಬೀಡಿ ಸೇದುಕ್ಕೆ ಅಂತ ಬೆಂಕಿಕಡ್ಡಿ ಗೀರಿದ್‌ನಂತೆ. ಕಬ್ಬಿನ ತರಗು ಹತ್‌ಕಂಡ್‌ಬಿಡ್‌ತಂತೆ.'

ಇದನ್ನು ಕೇಳಿದ ತಕ್ಷಣ ಪಟೇಲ ಶಿವೇಗೌಡ–ಅವ್ನುನ್ ಇಡ್ಕಂಡ್‌ಬಾ ಹೋಗ್ರುಲಾ' ಎಂದು ಗರ್ಜಿಸಿದ.

ಆದರೆ ಮಾದೇವಯ್ಯನವರು–'ಇವನು ಹೇಳ್ತಾನೆ ಅಂತ ನಂಬಾಕ್ ಆಯ್ತದಾ? ಅವ್ನು ಬೀಡಿ ಸೇದುವಾಗ ಬೆಂಕಿ ಹೊತ್ತು ಅಂತ ನಿನಗೆ ಹ್ಯಾಂಗ್ ಗೊತ್ತು?' ಎಂದು ಕೇಳಿದರು.

"ನಾನೇನ್ ಸುಳ್ಳು ಹ್ಯೇಳ್ತಿಲ್ಲ ಕಣ್ರೀ ಅಯ್ನೋರೇ. ದೇವರಾಣೆ ಬೇಕಾದ್ರೆ ಇಡ್ತೀನಿ. ಅವ್ನೇ ಇಲ್ಲೀತಂಕ ಓಡಿಬಂದು, 'ಹೀಗಾಯ್ತು, ಪುರದಪ್ಪನ ಗದ್ದೀಗ್ ಬೆಂಕಿ ಹತ್ಕಂಡಿದೆ. ನೀನು ಯಾರ ಕೈಲೂ ಹೇಳ್‌ಬ್ಯಾಡ. ನಾನ್ ಲಿಂಗಾಪುರದ ಕಡೀಕ್ ಓಡಿಹೋಕ್ತೀನಿ. ನೀನೂ ಬಾ' ಅಂತ ಕರ್ದ. ಬೆಂಕಿ ಹಾಕ್‌ದೋನು ನೀನು. ನಾನ್ಯಾಕ್ ಬರ್ಲಿ ಹೋಗು ಅಂದೆ. ಅವ್ನು ವಾಟಪ್ವಡ್‌ದ"–ಎಂದು ತನ್ನ ಮಾತನ್ನು ಸಾಧಿಸಿದ ಅವನ ಮಾತಿನ ಪೂರ್ತಿ ಪರಿಣಾಮ ಏನಾಗಬೇಕೆಂದು ಪಟೇಲ ಶಿವೇಗೌಡ ಮತ್ತು ಇತರ ಕೆಲವು ಮುಖ್ಯರಿಗೆ ಆಗಲೇ ಹೊಳೆದುಹೋಗಿತ್ತು. ಗಂಗಮ್ಮನಿಗೆ ಅದೇನೂ ತಿಳಿಯಲಿಲ್ಲ. ಮಾದೇವಯ್ಯನವರಿಗೆ ಎಲ್ಲವೂ ಅರ್ಥವಾಗಿ, ಏನಾದರೂ ಮಾಡಿ ತಪ್ಪಿಸಲು– 'ಈ ಹುಡುಗನ ಮಾತು ಹಂಗ್ ನಂಬಾಕಾಗ್ತದೆ?' ಎಂದರು.

'ಅದ್ಯಾಕ್ ನ್ಯಂಬಾಕಾದು?–ಪಟೇಲ ದರ್ಪದಿಂದ ಕೇಳಿದ.

'ಸತ್ಯವಾಗ್ಲೂ ಕಣ್ರೀ ಪಟೇಲ್ರೇ'–ಚೆನ್ನಿಗರಾಯ ಮತ್ತೆ ಒತ್ತಿಹೇಳಿ, ತನ್ನದೇನೂ ತಪ್ಪಿಲ್ಲವೆಂದು ಸೂಚಿಸಿದ. ಮನೆಯ ಹಿರೀಮಗನೇ ಮೂರ್ಖನಾಗಿ ಮಾತನಾಡುತ್ತಿರುವಾಗ ತಾವು ಬುದ್ಧಿವಂತಿಕೆ ಉಪಯೋಗಿಸಲು ಹೋದರೆ ಪಟೇಲರೂ ಊರಿನ ಇತರರೂ ತಮ್ಮ ಮೇಲೇ ತಿರುಗುತ್ತಾರೆಂದು ಯೋಚಿಸಿದ ಅಯ್ಯನವರು ಸುಮ್ಮನಾದರು.

– 3 –

ಪಟೇಲರ ಅಪ್ಪಣೆಯಂತೆ ಕುಳುವಾಡಿ ತಳವಾರರು ಅಪ್ಪಣ್ಣಯ್ಯನನ್ನು ಹುಡುಕಲು ಹೋದರು. ರಾತ್ರಿಯ ಕತ್ತಲಿನಲ್ಲಿ ಅವನು ದೂರ ಹೋಗಿರಲಿಲ್ಲ. ಆಚೆ ಕೋಡಿ ಹತ್ತಿರದ ಬೂತಪ್ಪರಾಯನ ಮಂಟಪದಲ್ಲಿ ಕುಕ್ಕರಗಾಲಿನಲ್ಲಿ ಕೂತಿದ್ದ. ಅನುಮಾನ ಬಂದು ಬಸ್ತರ ಮುದ್ದ ಅದರೊಳಗೆ ಹೋದಾಗ ಸಿಕ್ಕಿ, ಹೆದರಿಕೆಯಿಂದ ಬರುವುದಿಲ್ಲವೆಂದು ಹಟಮಾಡಿದ. ಅಂಗಲಾಚಿದ ಕೊನೆಗೆ ಮೊಂಡುಬಿದ್ದ. ಆದರೆ ಮುದ್ದ ಮೊಂಡುಬಿದ್ದ ಅವನನ್ನು, ಕುರಿಯ ನಾಲ್ಕು ಕಾಲುಗಳನ್ನೂ ಹಿಡಿದು ಹೊರುವಂತೆ ಎತ್ತಿ ಹೆಗಲ ಮೇಲೆ ಹಾಕಿಕೊಂಡು ಹೊರಟುಬಿಟ್ಟ.

ಊರಿನವರೆಲ್ಲರೂ ಏರಿಯ ಮೇಲೆಯೇ ಇದ್ದರು. ಅಷ್ಟರಲ್ಲಿ ಆಲೆ ಉರಿದು ಬರಿ ಕೆಂಡ ಕಾಣುತ್ತಿತ್ತು. ಗದ್ದೆಗಳ ಕಬ್ಬು ಸುಟ್ಟು ಕರ್‍ರಗೆ ನಿಂತಿತ್ತು. ಆಕಾಶದಲ್ಲಿ ಬೆಳದಿಂಗಳಿಲ್ಲದಿದ್ದರೂ ಎಲ್ಲವೂ ಮಬ್ಬುಮಬ್ಬಾಗಿ ಕಾಣುತ್ತಿತ್ತು. ಅಪ್ಪಣ್ಣಯ್ಯನನ್ನು ಹೊತ್ತು ತಂದು ಎಲ್ಲರ ಸಮಕ್ಷಮ ಇಳಿಸಿದಾಗ ಅವನು ಹೆದರಿಕೆಯಿಂದ ನಡುಗುತ್ತಿದ್ದ. ಹಿಂಬಾಗದಲ್ಲಿ ಗಂಟು ಹಾಕಿಕೊಳ್ಳುವಂತೆ ಜುಟ್ಟು ಬಿಟ್ಟು, ಮುಂದುಗಡೆ ನುಣ್ಣಗೆ ಕ್ಷೌರ ಮಾಡಿಸಿಕೊಂಡಿದ್ದ ಅವನ ಬುರುಡೆಯ ಮೇಲೆ ಸಹ ಬೆವರುತ್ತಿತ್ತು. ಸದ್ಯ, ಮಗನ ಮುಖ ಕಂಡು ಗಂಗಮ್ಮ ನಿಟ್ಟುಸಿರೆಳೆದಳು. ಶಿವೇಗೌಡನಿಗೆ ಹೇಳಿ ಅವನಿಗೆ ನಾಲ್ಕು ಕೊಡಿಸಬೇಕೆಂದು ಮೊದಲೇ ನಿಶ್ಚಯಿಸಿಕೊಂಡಿದ್ದಳು. ಆದರೆ ಗೌಡನ ನಿಶ್ಚಯ ಬೇರೆಯದೇ ಆಗಿತ್ತು.

'ಕಬ್ಬಿನ ಗದ್ದೆಗೆ ಯಾಕಲೇ ಬೆಂಕಿ ಹಾಕ್ದೆ?'–ಅವನು ಕೇಳಿದ.

ಹೆದರಿಕೆಯಿಂದ ಅಪ್ಪಣ್ಣಯ್ಯ ಮಾತನಾಡಲಿಲ್ಲ. ಇನ್ನೊಂದು ಸಲ ಗದ್ದರಿಸಿಕೊಂಡು ಕೇಳಿದಮೇಲೆ– 'ನಂಗೊತ್ತಿಲ್ಲ ಕಣ್ರೀ' ಎಂದ.

'ಓಹೋ, ಗೊತ್ತಿಲ್ಲ ಅಂತಾನೆ. ಬೀಡಿ ಸೇದುವಾಗ ಬೆಂಕಿ ಹತ್ಕಳ್ಳಿಲ್ವೇನೋ? ಹಾಗಂತ ನೀನೇ ಬಂದು ತೆಂಗಿನ ಮರದ ಮ್ಯಾಲಿದ್ದ ನನಗೆ ಹೇಳ್ಲಿಲ್ವೇನೋ?'–ಚೆನ್ನಿಗರಾಯ ಸ್ವಯಂ ಪ್ರೇರಿತನಾಗಿ ಸಾಕ್ಷಿ ನುಡಿದ. ಅಪ್ಪಣ್ಣಯ್ಯ ಸುಮ್ಮನೆ ತಲೆ ತಗ್ಗಿಸಿ ನಿಂತುಬಿಟ್ಟ. ಅವನ ಕಾಲು ನಡುಗುತ್ತಿದ್ದುದು, ಅಳ್ಳಾಡುತ್ತಿದ್ದ ತುಂಡು ಪಂಚೆಯೊಳಗಿನಿಂದ ಕಾಣುತ್ತಿತ್ತು. ಗುಂಪಿನಲ್ಲಿಯೇ ಇದ್ದ ಅಯಾ ಶಾಸ್ತ್ರಿಗಳು–'ಮೌನಂ ಸಮ್ಮತಿ ಸೂಚಕಂ. ಅಂದರೆ ಅವನೇ ಬೆಂಕಿ ಹೊತ್ತಿಸಿರೋದು ನಿಜ ಅಂದಹಾಗಾಯ್ತು. ಇನ್ನು ಮುಂದಿನ ಮಾತಾಡಿ' ಎಂದರು. ಗದ್ದೆಗಳವರೆಲ್ಲ ತಲಾತಟ್ಟಿ ಆಡಲು ಪ್ರಾರಂಭಿಸಿದರು. 'ನನ್ನ ಚೇಣಿ ಕಬ್ಬು ಕಲ್ಲುಸಕ್ಕರೆಯಂತ ಬ್ಯಲ್ಲ ಮಾಡ್ತಿತ್ತು. ಆಣೆಗೆ ಎಲ್ಡು ಅಚ್ಚು ಅಂದ್ರೂ ಬ್ರೇಸ್ತಾರ ಸಂತೇಲಿ ಎಗರಿಸ್ಕಂಡ್ ಹೋಯ್ತಿದ್ರು. ಏನಿಲ್ಲ ಅಂದ್ರೂ ಮುನ್ನೂರು ರೂಪಾಯಿ ಲುಕ್ಸಾನಾಗೈತೆ'–ಎಂದು ಕುರುಬರ ಸಣ್ಣಯ್ಯ ಗೊಣಗಿದ. ಬಣಜಿಗರ ರೇವಣ್ಣಶೆಟ್ಟಿ, 'ನಂದು ಆಲೆಯಾಗಿತ್ತು ನಿಜ. ಆದ್ರೂ ಕೂಳೆಕಬ್ಬು ಬೆಳೆದಿದ್ರೆ ನಾನೂರು ರೂಪಾಯಿ ಬತ್ತಿತ್ತು.' ಎಂದ. ಪ್ರತಿಯೊಬ್ಬರೂ ಅವರವರ ನಷ್ಟವನ್ನು ಅಂದಾಜುಕಟ್ಟಿ ಹೇಳಿದರು.

ಅಯ್ಯಾಶಾಸ್ತ್ರಿಗಳಿಗೆ ಗದ್ದೆ ಇರಲಿಲ್ಲ. ಅವರೂ ತಮ್ಮ ನಷ್ಟ ಹೇಳಿದರು: 'ನನಗೆ ಗದ್ದೆ ಇಲ್ಲ ನಿಜ. ಆದರೆ ಎಲ್ಲರದೂ ಆಲೆ ಅರೆಯುವಾಗ ಗಣಪತಿ ಪೂಜೆಗೆ ಅಂತ ಒಂದು ಅಡಿಗೆಗೆ ಒಂದು ಉಂಡೆ ಬೆಲ್ಲ ನಂಗೆ ಸಂದಾಯವಾಗಬೇಕಾಗಿತ್ತು. ಒಟ್ಟಿನ ಲೆಕ್ಕ ತಗುದ್ರೆ ಏನಿಲ್ಲ ಅಂದ್ರೂ ಐನೂರು ಉಂಡೆ ಬೆಲ್ಲ ನಂಗೆ ಬರಬೇಕಾಗಿತ್ತು. ಲೆಕ್ಕ ಹಾಕಿದ್ರೆ ಐವತ್ತು ರೂಪಾಯಿಯಾಯ್ತು. ಇದರ ಮೇಲೆ ಸಿಕ್ತಿದ್ದ ಕಬ್ಬಿನ ಹಾಲು, ಅಡಿಗೆ ತೆಗೆದಾಗ ಹೋಗಿದ್ದರೆ ಸಿಕ್ತಿದ್ದ ಬಿಸಿಬೆಲ್ಲ ಇವೆಲ್ಲ.....'

‘ಶಾಸ್ತ್ರಿಗಳೇ, ನಿಮ್ಮ ಬಡ್ಡಿ ಲೆಕ್ಕ ಭಾಳಾ ವಜನ್ ಆಯ್ತು. ಏನೋ ಕಬ್ಬಿದ್ದೋರು ಲೆಕ್ಕಾ ಹಾಕಾದು ನ್ಯಾಯ. ಗಣಪ್ಪನ ಪೂಜೆ ಉಂಡೀಮ್ಯಾಲೆ ಲುಕ್ಸಾನು ಲೆಕ್ಕ ಮಾಡಬ್ಯಾಡ್‌ದು’–ಮಾದೇವಯ್ಯನವರು ನಡುವೆಯೇ ಹೇಳಿದರು: “ಕಬ್ಬೆಲ್ಲ ಅರ್‌ದಮ್ಯಾಲೆ ರೇವಣ್ಣಶೆಟ್ರು ಕೂಳೆಕಬ್ಬಿಗೆ ನಾನೂರು ರೂಪಾಯಿ ಲೆಕ್ಕ ತೆಗೀತಿದಾರೆ. ಅವರಿಗಿರಾದೆ ಒಂದೂವರೆ ಯಕ್ರೆ ಗದ್ದೆ. ಮದಲ ಬೆಳೆಗೇ ನೂರು ರೂಪಾಯಿ ಸಿಕ್ಕಿಲ್ಲ. ಇನ್ನು ನಾನ್ನೂರು ಹ್ಯಂಗ್ ಗಿಟ್‌ತದೆ? ‘ನಾನ್ ಕೂಳೆ ಬಿಡೂದಿಲ್ಲ, ಭೂಮಿ ಸಾಫ್ ಮಾಡ್ಸಿ ಮುಂದಿನ ಸಲೀಗೆ ಭತ್ತ ಹಾಕುಸ್ತೀನಿ, ಕಬ್ಬಿನಿಂದ ಭೂಮಿ ಕೆಟ್ಹೋಯ್ತುದೆ’ ಅಂತ ಅವ್ರು ನನ್ ಕುಟ್ಟೆ ಹೇಳಿದ್ರು.”

ಇನ್ನೂ ಎಷ್ಟು ಜನ ತಮ್ಮ ತಮ್ಮ ನಷ್ಟವನ್ನು ಹೆಚ್ಚುಮಾಡಿ ಹೇಳುತ್ತಿದ್ದರೋ! ಆದರೆ ಅಯ್ಯನವರ ಮಾತಿನಿಂದ ಅವರು, ನಾಲ್ಕು ಜನ ಒಪ್ಪುವಂತೆ ಯೋಚನೆ ಮಾಡಿ ಮಾತಾಡಬೇಕಾಯಿತು. ಅಯ್ಯನವರು ಮುಂದುವರಿಸಿದರು: ‘ಗಣಪ್ಪನ ಪೂಜೆಗೆ ಕಟ್ಟೋದು ಒಂದು ಪಿಡಚೇ ತ್ವಾರದ ಉಂಡಿ. ಅಂಥಾದು ಐನೂರು ಕೊತ್ರೆ ಐವತ್ತು ರೂಪಾಯಿ ಯಾರಪ್ಪ ಕೊಡ್ತಾನು? ಅಂದ್ರೆ ರೂಪಾಯಿಗೆ ಹತ್ತು ಉಂಡಿ ಆಯ್ತು. ರೂಪಾಯಿಗೆ ನಲವತ್ತರ ತನಕ ಅಚ್ಚೇ ಸಿಗ್ತಾವು. ಪಿಡಚೆ ತ್ವಾರದ ಉಂಡಿಗೆ ಒಂದೂವರಾಣೆ ಹ್ಯಂಗ್ ಕೊಡ್ತಾರು?’

ಅಲ್ಲಿಗೆ ಅಯ್ಯಾಶಾಸ್ತ್ರಿಗಳ ಬಾಯಿ ಪೂರ್ತಿಯಾಗಿ ಕಟ್ಟಿಹೋಯಿತು. ಮಾದೇವಯ್ಯನವರು ಕೊನೆಯ ತೀರ್ಮಾನ ಹೇಳುವವರಂತೆ ಎದ್ದು ನಿಂತು ಅಂದರು: ಲುಕ್ಸಾನು ಲೆಕ್ಕಮಾಡಿದ್ರೆ ಯಾರಿಗೂ ಸಿಕ್ಕಾದಿಲ್ಲ. ಹುಡುಗ ಬೇಕು ಅಂತಲೇನು ಮಾಡ್ಲಿಲ್ಲ. ಈಟುದ್ದದ ಹುಡುಗ ಬೀಡಿ ಎಳೀತಾನೆ ಅಂದ್ರೆ ಬುದ್ಧಿಕಲಿಸ್‌ಬೇಕು. ಎಂಥಾದಾರಾ ಕೋಲು ತಗಂಡ್ ನಾಲ್ಕು ಬಾರಿಸಿ ಕಳಿಸಿ. ಇಲ್ದೆ ಇದ್ರೆ ಅವನ ಓಚಯ್‌ನೋರಿಗೆ ಏಳಿ ಕ್ವಾದಂಡ ಕಟ್ಸಿ.’

‘ಇಲ್ಲ ಕಂಣ್ರೆ, ನನ್ನ ಕೋದಂಡ ಕಟ್ಟಿಸ್‌ಬ್ಯಾಡಿ. ನಿಮ್ಮ ದಮ್ಮಯ್ಯ’– ಎಂದು ಅಪ್ಪಣ್ಣಯ್ಯ ಅಂಗಲಾಚಿದ.

‘ನಂದೇನೂ ತಪ್ಪಿಲ್ಲ. ಅವನಿಗೇ ಕಟ್ಸಿ’–ಎಂದು ಚೆನ್ನಿಗರಾಯ ವಿನಾಕಾರಣ ಮಾತನಾಡಿದ.

ಆದರೆ ಪಟೇಲ ಶಿವೇಗೌಡ ಬೇರೆಯ ರೀತಿಯಲ್ಲಿ ಮಾತನಾಡಿದ: ‘ಅಯ್ನೋರೇ, ನೀವು ಸನ್ಯಾಸಿ. ಮನೆಯಿಲ್ಲ ಮಟವಿಲ್ಲ; ಹ್ಯಂಡ್ರಿಲ್ಲ ಮಕ್ಳಿಲ್ಲ. ಹುಡ್ಗುನ್‌ಗೆ ಬುದ್ಧಿ ಕಲಿಸಾದು ಬ್ಯಾರೆ ಮಾತು. ಈಗ ಆಗಿರಾ ಲುಕ್ಸಾನು ಯಾರು ಕೊಡ್ತಾರೆ? ನಾನು ಊರ ಪಟೇಲ, ನ್ಯಾಯ ಹೇಳ್ಬಿಡ್ತೀನಿ. ಒಟ್ನಲ್ಲಿ ಇವ್ರು ಊರೊಟ್ಟಿಗೆ ಇಷ್ಟು ದಂಡ ಅಂತ ಕೊಡ್ಬೇಕು. ಅದ್ನ ಯಾರ್ಯಾರಿಗೆ ಲುಕ್ಸಾನಾಗಿದ್ಯೋ ಅವರಿಗೆ ಹಂಚಬೇಕು.’

‘ನ್ಯಾಯ, ನ್ಯಾಯ’ –ಎಂದು ಅನೇಕರು ತಲೆ ಹಾಕಿದರು. ರೇವಣ್ಣಶೆಟ್ಟಿ ಮತ್ತು ಅಯ್ಯಾಸಾಸ್ತ್ರಿಗಳು ಗಟ್ಟಿಯಾಗಿಯೇ– ‘ಅದು ಅಪ್ಪಂಗೆ ಹುಟ್ಟಿದ ಮಾತು ಅಂದ್ರೆ’ ಎಂದರು. ಮಾದೇವಯ್ಯನವರನ್ನು ಛೇಡಿಸಲೆಂದೇ ಅವರು ಹಾಗೆಂದದ್ದು. ಅಯ್ಯನವರು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ವ್ಯವಹಾರ ಎತ್ತ ತಿರುಗುತ್ತಿದೆ ಎಂಬುದರ ಅರಿವು ಗಂಗಮ್ಮನಿಗೆ ಈಗ ಆಯಿತು. ಅವಳು ಕೈಮುಗಿಯುತ್ತಾ–‘ನಾನು ಗಂಡ ಸತ್ತ ಮುಂಡೆ. ಇವು ಬುದ್ದಿ ಇಲ್ದೆ ಏನೋ ಮಾಡಿಬಿಟ್ಟಿವೆ.....’ ಎಂದು ಮುಂದೆ ಹೇಳುವುದರಲ್ಲಿಯೇ ಚೆನ್ನಿಗರಾಯ ಬಾಯಿ ಹಾಕಿ, ‘ನಂದೇನೂ ತಪ್ಪಿಲ್ಲ ಕಣ್ಣಮ್ಮ. ಬರೀ ಅಪ್ಪಣ್ಣಯ್ಯ ಅನ್ನು’ ಎಂದ. ಗಂಗಮ್ಮ ಅದನ್ನು ಗಮನಿಸದೆ ಕೇಳಿಕೊಂಡಳು: ‘ತಪ್ಪು ಮಾಡಿದ್ದುಕ್ಕೆ ಅವನಿಗೆ ಕೋದಂಡ ಕಟ್ಸಿ. ದಂಡ ಪಂಡ ನನ್‌ಹತ್ರ ಇಲ್ಲ.’

‘ನನ್ನ ಕೋದಂಡ ಕಟ್ಟಿಸ್‌ಬ್ಯಾಡಿ ಕಣ್ರೆ, ದಂಡಾನೇ ತಗಳ್ರಿ’–ಎಂದು ಅಪ್ಪಣ್ಣಯ್ಯ ಅಳುತ್ತಾ ಹೇಳಿದ.

ಮುಖ್ಯರಲ್ಲಿಯೇ ಮಾತುಕತೆಯಾಯಿತು. ಎಲ್ಲರಿಗೂ ಆಗಿರುವ ನಷ್ಟವನ್ನು ಲೆಕ್ಕಮಾಡಿದರು. ಪೂರ್ತಿಯಿಲ್ಲದಿದ್ದರೆ ಸ್ವಲ್ಪಸ್ವಲ್ಪ ಕಡಿಮೆಯಾಗಿಯಾದರೂ ಹಂಚುವಂತೆ, ಗಂಗಮ್ಮ ಎರಡು ಸಾವಿರ ರೂಪಾಯಿ ಕೊಡಬೇಕು. ಗಣಪತಿ ಉಂಡೆಗಳು ತಪ್ಪಿದುದಕ್ಕೆ ಅಯ್ಯಾಶಾಸ್ತ್ರಿಗಳಿಗೆ ಒಟ್ಟಿನಲ್ಲಿ ಹತ್ತು, ಕೂಳೆಕಬ್ಬಿನ ನಷ್ಟಕ್ಕೆ ರೇವಣ್ಣಶೆಟ್ಟಿಗೆ ಇಪ್ಪತ್ತೈದು ರೂಪಾಯಿ ಕೊಡುವುದೆಂದು ತೀರ್ಮಾನವಾಯಿತು.

ಗಂಗಮ್ಮ ಅಂಗಲಾಚಿದಳು, ಕೈ ಕೈ ಮುಗಿದಳು. ಆದರೆ ಯಾರೂ ಕೇಳಲಿಲ್ಲ. ಅವಳ ಪರವಾಗಿ ತಾವು ಮಾತನಾಡಿದರೂ ಪ್ರಯೋಜನವಿಲ್ಲವೆಂದು ಅರಿತ ಮಾದೇವಯ್ಯನವರೂ ಸುಮ್ಮನಾದರು. ತನ್ನ ಹತ್ತಿರ ಒಂದು ದಮಡಿಯೂ ಇಲ್ಲವೆಂದು ಗಂಗಮ್ಮ ಕೇಳಿದುದಕ್ಕೆ ಶಿವೇಗೌಡ ಪರಿಹಾರ ಹೇಳಿದ: ‘ನಿನ್ನ ಹ್ವಲ ಹದ್ದೆ, ತ್ವಾಟ ಮನೆ, ಯಲ್ಲಾನೂ ನಂಗೆ ಆದಾರ ಬರಿ. ನಾನು ಗಂಟು ಕೊಡ್ತೀನಿ. ನನ್ನ ಹಣ ತೀರ್ಸಿ ಆದಾರ ವಾಪಸ್ ಬರುಸ್ಕ.’

ಗಂಗಮ್ಮನಿಗೆ ಏನೂ ತೋಚಲಿಲ್ಲ. ಅಯಾಶಾಸ್ತ್ರಿಗಳ ಮುಖ ನೋಡಿದಳು. ತಮಗೆ ಬರುವ ಹತ್ತು ರೂಪಾಯಿಗಳನ್ನು ಅವರ್ಯಾಕೆ ಕಳಕೊಂಡಾರು? ಅವರಿಂದ ಏನೂ ಪ್ರಯೋಜನವಾಗಲಿಲ್ಲ. ಗ್ರಾಮದಲ್ಲಿದ್ದ ಇನ್ನೊಬ್ಬ ಪುರೋಹಿತ ಅಣ್ಣಾಜೋಯಿಸರು ಅಯ್ಯಾಶಾಸ್ತ್ರಿಗಳ ಜ್ಞಾತಿ, ಎಂದರೆ ಅವರ ದೂರದ ಅಣ್ಣನ ಮಗ. ಚಿಕ್ಕಪ್ಪ ಹೇಳಿದುದರ ವಿರುದ್ಧ ವಿನಾಕಾರಣ ಅವರೂ ಮಾತನಾಡುವುದಿಲ್ಲ. ಗ್ರಾಮದ ದೊಡ್ಡವರೆಲ್ಲ ಕೂಡಿ ಮಾಡಿರುವ ತೀರ್ಮಾನ. ಅವಳು ಒಪ್ಪಿಕೊಳ್ಳಲೇಬೇಕಾಯಿತು.

ದಂಡ ತಪ್ಪಿಸಲು ಮಾದೇವಯ್ಯನವರೇನೋ ಮೊದಲೇ ಪ್ರಯತ್ನ ಪಟ್ಟರು. ನಡೆಯಲಿಲ್ಲ. ಆದರೂ ಗಂಗಮ್ಮನಿಗೆ ಒಂದು ಬುದ್ಧಿಯ ಮಾತು ಹೇಳಿದರು: 'ಜಮೀನು ಆಧಾರ ಮಾಡಿ ಸಾಲ ತಗಬ್ಯಾಡ್ರಿ. ನಿಮ್ಮ ಹತ್ರ ಬೆಳ್ಳಿ ಬಂಗಾರ ಏನಿದ್ರೂ ಮಾರಿಬಿಡ್ರಿ. ಸಾಲದ್ದಕ್ಕೆ ಮನೆಯಾಗಿರಾ ದಿನಸಿ ಧಾನ್ಯ ಕಾಯಿ ಕಸಿ ಕೊಟ್ಟು ಹಣ ತುಂಬಿಸಿ. ಸ್ಥಿರಾಸ್ತಿ ಮ್ಯಾಲೆ ಕಾಗದ ಪತ್ರ ಮಾಡ್‌ಬ್ಯಾಡಿ. ಸಾಲ ಅಂತ ಮಾಡಿದ್ರೆ ಅದರ ಬಡ್ಡಿ ಬಳೆಯಿತ್ತೆ. ಅದೆಲ್ಲ ನಿಭಾಯ್‌ಸಾಕೆ ನಿಮಗೆ ತಿಳಿವಳಿಕೆ ಇಲ್ಲ.'

ಪಟೇಲ ಶಿವೇಗೌಡ ಬಾಯಿ ಹಾಕಿದ: 'ಅದಕ್ಯಂತ ತಿಳಿವಳಿಕೆ ಬೇಕು? ನಾನೇನು ಅವರ್‌ತಾವ ಬಡ್ಡಿ ತಗಾತೀನಾ? ಮಾತಿಗೆ ಇರ್ಲಿ ಅಂತ ಆದಾರಾ ಬರೀತಾರೆ. ಮದುವೇದು, ಹೀರೇರು ಕೊಟ್ಟಿದ್ದೂ ವಡವೆ ವಸ್ತ್ರ ಕಳುದ್ರೆ ಮತ್ತೆ ಬತ್ತೈತಾ? ಸನ್ಯಾಸಿಗೆ ಚಿನ್ನ ಬೆಳ್ಳಿ ಬ್ಯಾಡ ಅಂದ್ರೆ ಸಂಸಾರಸ್ತರಿಗೆ ಬ್ಯಾಡ್‌ವಾ? ಏನ್ ಗಂಗಮ್‌ನೋರೇ, ಈ ಸನ್ಯಾಸಿ ಅಯ್ಯನ್ ಮಾತು ಕೇಳ್‌ತೀರೋ, ಗ್ರಾಮದ ಹತ್ತು ಜನ ತಿಳಿವಳಿಕೆ ಇರೋರ ಮಾತು ಕೇಳ್‌ತೀರೋ?'

ಹತ್ತು ಜನರೂ ಪಟೇಲನ ಮಾತೇ ಸರಿ ಎಂದರು. ಪಟೇಲನ ಭಾವಮೈದ, ಸದ್ಯದಲ್ಲಿ ಶ್ಯಾನುಭೋಗಿಕೆ ನೋಡುತ್ತಿರುವ ಸಿವಲಿಂಗೇಗೌಡ–'ಮದುವೇಲಿ ಕೊಟ್ಟ ಚಿನ್ನಾನ ಮಾರಾಕೆ ಗಂಡ ಸತ್ತಮ್ಯಾಲೆ ಹೆಂಗಸಿಗೆ ಕಾನೂನೇ ಇಲ್ಲ. ಜಮೀನು ಆದಾರ ಮಾಡ್‌ಬೈದು' ಎಂದ. ಅಯ್ಯಾಶಾಸ್ತ್ರಿಗಳೂ ಅನುಮೋದಿಸಿದರು. ಇಷ್ಟೊಂದು ಜನರ ಅಭಿಪ್ರಾಯವನ್ನು ವಿರೋಧಿಸುವ ಕಾನೂನಿನ ಜ್ಞಾನ ಮಾದೇವಯ್ಯನವರಿಗಿರಲಿಲ್ಲ. ಇದ್ದರೂ ಈ ಪಂಚಾಯ್ತರ ಮಧ್ಯದಲ್ಲಿ ತಮ್ಮ ಅಭಿಪ್ರಾಯಕ್ಕೆ ಯಾವ ಬೆಲೆ? ತಮ್ಮ ಮಾತನ್ನು ಗಂಗಮ್ಮ ಕೇಳುತ್ತಾಳೆಂಬ ನಿಗದಿಯೂ ಇಲ್ಲ. ಅವರು ಸುಮ್ಮನಾದರು.

ಇನ್ನು ನ್ಯಾಯದ ವಿಷಯದಲ್ಲಿ ತಡಮಾಡುವಂತಿಲ್ಲ. ಆಗಲೇ ಎರಡು ಗಾಡಿ ಕಟ್ಟಿಸಿ, ಇಬ್ಬರು ಮಕ್ಕಳೊಡನೆ ಗಂಗಮ್ಮನನ್ನು ಕರೆದುಕೊಂಡು ಪಟೇಲ ಮತ್ತು ಉಳಿದ ಮುಖ್ಯರು ತಿಪಟೂರಿಗೆ ಹೊರಟರು.

ಸಬ್‌ರಿಜಿಸ್ಟ್ರಾರರ ರೂಬು ರೂಬು ಶಿವೇಗೌಡ ಎರಡು ಸಾವಿರ ಕೊಟ್ಟ. ತನ್ನ ಸಂಸಾರ ತಾಪತ್ರಯಕ್ಕೆ ಎಂದು ಕಾರಣ ಬರೆದು ಅವಳ ಎಲ್ಲ ಆಸ್ತಿಯನ್ನೂ ಆಧಾರ ಬರೆದದ್ದಾಯಿತು. ಕಾಗದ ಬರೆದವನು ಶ್ಯಾನುಭೋಗ ಸಿವಲಿಂಗೇಗೌಡ. ಬಿಕಲಮ್‌ಗೆ ಕೊನೆಯ ಪಕ್ಷ ಇಪ್ಪತ್ತೈದು ರೂಪಾಯಿ ಕೊಡಬೇಕಾಗಿ ಅವನು ಹಟ ಹಿಡಿದ. ಈ ಸಲ ಬೆಳೆ ಬಂದಮೇಲೆ ಅವರೇಕಾಳು ಮಾರಿ ಕೊಡುವುದಾಗಿ ಗಂಗಮ್ಮ ಒಪ್ಪಿಕೊಂಡಳು. ತನ್ನ ಕಬ್ಬಿನ ಗದ್ದೆಯ ಲುಕ್ಸಾನು ಎಂದು ನಾಲ್ಕು ನೂರನ್ನು ಇಟ್ಟುಕೊಂಡು ಪಟೇಲ ಶಿವೇಗೌಡ ಉಳಿದುದನ್ನು ಇತರರಿಗೆ ಹಂಚಿದ.

ವಿಧವೆಯಾದ ಗಂಗಮ್ಮ ತಿಪಟೂರಿನ ಹೋಟೆಲಿನಲ್ಲಿ ಏನೂ ತಿನ್ನುವಂತಿಲ್ಲ. ಹುರಿಯಿವ ಮೊದಲು ನೀರು ಹಾಕಿರುವುದರಿಂದ ಪುರಿಯನ್ನೂ ಮುಟ್ಟುವ ಹಾಗಿಲ್ಲ. ಕೆರೆಯಲ್ಲಿ ಮೈ ತೊಳೆದುಕೊಂಡು, ಒದ್ದೆಸೀರೆಯಲ್ಲಿ ಎರಡು ಹಿಡಿ ಹುರಿಗಡಲೆ ಒಂದು ಮುರುಕು ಬೆಲ್ಲ ಅಗಿದು, ಮತ್ತೆ ಗಾಡಿಯಲ್ಲಿ ಕೂತಳು. ಹುಡುಗರಿಗೆ ಅವಳೇ ಆರಾಣೆ ಕೊಟ್ಟು ಬ್ರಾಹ್ಮಣರ ಓಟ್ಲಿನಲ್ಲಿ ಇಪ್ಪತ್ತನಾಲ್ಕು ದೋಸೆ, ಮೇಲೆ ಒಂದು ಮುದ್ದೆ ಚಟ್ನಿ ಕೊಡಿಸಿದಳು.

ಊರಿಗೆ ಬಂದು ನಾಲ್ಕು ದಿನ ಅವಳು ಅವಮಾನದಿಂದ ಎಲ್ಲೂ ಹೊರಗೆ ಹೋಗಲಿಲ್ಲ. ಮೂರು ಮೈಲಿ ದೂರದ ಸಣ್ಣೇನಹಳ್ಳಿಯ ಕುಂಬಾರರಿಗೆ ಹದಿನಾರು ರೂಪಾಯಿ ಕೊಟ್ಟು ಐನೂರು ಉಂಡೆ ಹೆಂಚು ತರಿಸಿ ಹಿಂದಿನ ಹಾರನ್ನು ಪೂರ್ತಿಯಾಗಿ ಕೈಯಾಡಿಸಿದಳು.

ಎಂಟು ದಿನವಾದ ಮೇಲೆ ಒಂದು ದಿನ ಅವಳೇ ಗುಡಿಯ ಮಾದೇವಯ್ಯನವರಿಗೆ ಹೇಳಿಕಳಿಸಿದಳು. ಕಷ್ಟ ಸುಖ ಹೇಳಿಕೊಂಡು, ಮುಂದೆ ಏನು ಮಾಡಬೇಕೆಂದು ಕೇಳಿದುದಕ್ಕೆ ಅವರು ಹೇಳಿದರು: "ಅಪ್ಪಣ್ಣಯ್ಯನ್ನ ಓಚಯ್‌ನೋರ ತಾವ ಸೇರಿಸಿ. ವಸಿ ವಿದ್ಯಾ ಬಂದ್ರೆ ಅವನು ನೆಟ್ಟಗಾಗ್ತಾನು. ಚೆನ್ನಿಗರಾಯನ್ನ ಹೊನ್ನವಳ್ಳಿಗೆ ಸೇರಿಸಿ. ನೀವೇ ಹೋಗಿ ಅವನನ್ನು ಅಲ್ಲಿ ಬಿಟ್ಟು, 'ಮನೆತನದ ಶ್ಯಾನುಬಾಕಿ ಕಂಡೋರ ಕೈಲಿದೆ. ಇವನನ್ನ ಬುದ್ಧಿವಂತನ್ನ ಮಾಡಿ ವಿದ್ಯೆ ಕಲ್ಸಿ' ಅಂತ ಕೇಳ್‌ಕಂಡ್ ಬನ್ರಿ. ಇನ್ ತಡ ಮಾಡಿದ್ರೆ ಸುಖಾ ಇಲ್ಲ. ಅವನಿಗಾಗಲೇ ಹದಿನೈದು ಆಯ್ತುಲ."

ಗಂಗಮ್ಮ ಒಪ್ಪಿದಳು. ಚೆನ್ನಿಗರಾಯನನ್ನು ಹೊನ್ನವಳ್ಳಿಯ ಸೀತಾರಾಮಯ್ಯ ಶ್ಯಾನುಭೋಗರ ಕೈ ಕೆಳಗೆ ಲೆಕ್ಕ ಕಲಿಯಲು ಬಿಡುವ ಸುದ್ದಿ ಪಟೇಲ ಶಿವೇಗೌಡನಿಗೆ ತಿಳಿಯಿತು. ಅವನೇ ಬಂದು ಹೇಳಿದ: 'ಅಟು ದೂರ ಯಾಕ್ ಕಳುಸ್ತೀಯಮ್ಮ, ನಮ್ ಸಿವಲಿಂಗನ್ ತಾವ ಸೇರ್ಸಿ. ಇಲ್ಲೇ ಮನೇಮುಂದೆ ಇದ್‌ಕಂಡ್ ಕಲ್ತ್ರೆ ಆಗಾಕಿಲ್ವಾ?'

ಆದರೆ ಹೊನ್ನವಳ್ಳಿಯ ಸೀತಾರಾಮಯ್ಯನವರ ಕೈಕೆಳಗೆ ಕಲಿಯದೆ ವಿದ್ಯ ಬರುವುದಿಲ್ಲವೆಂಬುದು ಗಂಗಮ್ಮನ ದೃಢ ನಂಬಿಕೆಯೂ ಆಗಿತ್ತು. ಬಾಕಿಯವರು ಶ್ಯಾನುಭೋಗಿಕೆ ಮಾಡಬಹುದು. ಆದರೆ ಅದಕ್ಕೆ ಗುರುವಾಗುವ ಯೋಗ್ಯತೆ ಇರುವುದು ಈ ಸುತ್ತಿನಲ್ಲಿ ಹೊನ್ನವಳ್ಳಿಯವರಿಗೆ ಮಾತ್ರ. ಜಾವಗಲ್ಲು ಸುತ್ತಿನಲ್ಲಿ ಹಳೇಬೀಡಿನ ವೆಂಕಟೇಶಯ್ಯನವರಿಗೂ ಅಂಥದೇ ಯೋಗ್ಯತೆ ಇದೆ. ಆದರೆ ಅವರು ಈ ಸುತ್ತಿನವರಲ್ಲ. ಒಂದೊಂದು

ಕಡೆಯ ಮರ್ಜಿ, ಜಾಯಮಾನ ಅಲ್ಲಲ್ಲಿಯವರಿಗೇ ಗೊತ್ತು.
ಅಂತೂ ಗಂಗಮ್ಮ ಕಮಾನುಗಾಡಿ ಹೂಡಿಸಿಕೊಂಡು ಇಬ್ಬರು ಮಕ್ಕಳೊಡನೆ ಹೊನ್ನವಳ್ಳಿಗೆ ಪಯಣ ಮಾಡಿದಳು. ಹೊರಡುವ ಎರಡು ದಿನ ಮೊದಲು ಚೆನ್ನಿಗರಾಯ ಭಂಡಾರಿ ರುದ್ರಣ್ಣನಿಗೆ ತಲೆಮಾಡಿಸಿಕೊಂಡು ನೆತ್ತಿಗೆ ಗಂಧದ ಪಟ್ಟು ಹಾಕಿಕೊಂಡ. ಅದರ ಮರುದಿನ ಎಣ್ಣೆ ನೀರು ಆಯಿತು. ಕೋಡುಬಳೆ ತಂಬಿಟ್ಟುಗಳ ಗಂಟು ತಯಾರಾಯಿತು. ಕೋಟು ಟೋಪಿ ಇಟ್ಟುಕೊಂಡು ಅವನು ಗಾಡಿ ಹತ್ತುವಾಗ ಮಾದೇವಯ್ಯನವರು ಹೇಳಿದರು: 'ದೊಡ್ಡ ಕಡೆ ಹೋಗ್ತಾ ಇದೀಯಾ. ಇನ್ ಮ್ಯಾಲೆ ನಿನ್ನ ಬಾಯಲ್ಲಿ ಯಾವತ್ತೂ ಬೈಗಳದ ಮಾತು ಬರ್‌ಬ್ಯಾಡ್ದು. ಬುದ್ಧಿವಂತನಾಗಿ ವಾಪಸ್ ಬಾ.'
ಹೊನ್ನವಳ್ಳಿಯವರು ಫೌತಿ ರಾಮಣ್ಣನವರನ್ನು ಬಲ್ಲವರು. ಗಂಗಮ್ಮನ ಕೋರಿಕೆ ಮನ್ನಿಸಿ ಚೆನ್ನಿಗರಾಯನನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಲೆಕ್ಕ ಕಲಿಸಲು ಒಪ್ಪಿದರು. ತಾಯಿ ಮತ್ತು ತಮ್ಮ ಮತ್ತೆ ಗಾಡಿ ಹತ್ತುವಾಗ ಚೆನ್ನಿಗರಾಯ ಅಳುತ್ತಾ ನಿಂತುಕೊಂಡ. ಕೊನೆಗೆ–'ಯಾರ ಕೈಲಾದ್ರೂ ಇನ್ ಒಂದ್ ಸಲಿ ಕ್ವಾಡಬಳೆ, ತಂಬಿಟ್ಟು ಕೊಟ್‌ಕಳ್ಸು' ಎಂದು ಹೇಳಿದ.
ಊರಿಗೆ ಹಿಂತಿರುಗಿದ ಮೇಲೆ ಅಪ್ಪಣ್ಣಯ್ಯನನ್ನು ಚಾತಾಳೀ ಚನ್ನಕೇಶವಯ್ಯನವರ ಕೂಲಿಮಠಕ್ಕೆ ಸೇರಿಸಿಯಾಯಿತು. ದಿನವೂ ಅವನನ್ನು ಮಠಕ್ಕೆ ಕಳಿಸಲು ಪಂಚೆಯ ಸೆರಗಿನ ತುಂಬ ಹುರಿಗಡಲೆ, ಬೆಲ್ಲ, ಅರ್ಧಹೋಳು ಕೊಬ್ಬರಿ ಕೊಡಬೇಕಾಗಿತ್ತು.

## ಅಧ್ಯಾಯ 2

### – 1 –

ಚೆನ್ನಿಗರಾಯ ಹೊನ್ನವಳ್ಳಿಯಲ್ಲಿ ಒಟ್ಟು ಮೂರು ವರ್ಷ ಶಿಷ್ಯವೃತ್ತಿ ಮಾಡಿದ. ಈಗ ಅವನು ಸಲೀಸಾಗಿ ಎಡಗೈ ಬೆರಳಿನಿಂದ ರೂಲು ದೊಣ್ಣೆ ಉರುಳಿಸುತ್ತಾನೆ. ಬಲಗೈಲಿ ಸ್ಟೀಲುಮುಳ್ಳಿನಿಂದಾಗಲಿ, ಸೀಸದ ಕಡ್ಡಿಯಿಂದಾಗಲಿ ಗೆರೆ ಎಳೆಯುತ್ತಾನೆ. ಲೆಕ್ಕ ಪತ್ರಗಳಲ್ಲಿ ಎಡಗಡೆ ತಪ್ಪಿಲ್ಲದಂತೆ ಇಳಿಸುವುದು ಮಾತ್ರವಲ್ಲದೆ ಬಲಗಡೆಯದನ್ನು ಹೇಗೆ ಬರೆಯಬೇಕೆಂದು ತಿಳಿದುಕೊಂಡಿದ್ದಾನೆ. ಅವನ ವಿದ್ಯೆ ಪೂರ್ತಿಯಾಯಿತೋ ಇಲ್ಲವೋ ಹೇಳುವುದು ಕಷ್ಟ. 'ನೀನು ರೂಪಾಯಿಯಲ್ಲಿ ನಾಲ್ಕಾಣೆಯೂ ಕಲಿತಿಲ್ಲ'–ಎಂದು ಗುರುಗಳಾದ ಶೀತಾರಾಮಯ್ಯನವರು ಹೇಳುತ್ತಾರೆ. ಅವರ ಎದುರಿಗೆ ಪ್ರತಿಹೇಳುವುದಿಲ್ಲವಾದರೂ ಚೆನ್ನಿಗರಾಯನಿಗೆ ಆ ಮಾತಿನಲ್ಲಿ ವಿಶ್ವಾಸವಿಲ್ಲ. 'ಅವರ ಲೆಕ್ಕಾನೇ ಕೆರಕಂಡ್ ಇಲ್ಲೇ ಬಿದ್ದಿರ್ಲಿ ಅಂತ ಹಾಗಂತಾರೆ'–ಎಂದು ಅದಕ್ಕೆ ಅರ್ಥ ಮಾಡುತ್ತಾನೆ.
ಅವನು ಕಾಲ್‌ನಡಿಗೆಯಲ್ಲೇ ವರ್ಷಕ್ಕೆ ಎರಡು ಮೂರು ಸಲ ಊರಿಗೆ ಬಂದು ಹೋಗುತ್ತಿದ್ದ. ಈ ಸಲ ಬಂದವನು ತಾಯಿಗೆ ಹೇಳಿದ: 'ಇನ್ನೆಷ್ಟ್ ದಿನ ಅಂತ ಅಲ್ಲಿರಾದು? ನಾನು ಊರಿಗ್ ಬಂದು ಶ್ಯಾನುಭೋಗಿಕೆ ಚಾರ್ಜ ತಗಾತೀನಿ.'
'ಲ್ಯಕ್ಕ ಚೆನ್ನಾಗಿ ಬಂತೇನೋ?'
'ಬರ್ದೇ ಏನು? ಕೇಳು ಬೇಕಾದ್ರೆ: ಒಂದನೇ ನಂಬ್ರು ಖಾತೆವಾರ್, ಎರಡನೇ ನಂಬ್ರು ಬಂಜರ್ ತಖ್ತೆ, ಮೂರನೇ ನಂಬ್ರು ಪಹಣಿ, ನಾಲ್ಕು ಖಾತೆ, ಐದು ರೆಂಟ್ ರೋಲ್, ಆರು ಕಮ್ಮಿ ಜಾಸ್ತಿ, ಏಳು ತಕರಾರ್ ತಖ್ತೆ, ಎಂಟು ಇನಾಂ ರಿಜಿಸ್ಟ್ರು, ಒಂಬತ್ತು ಜಮಾಬಂದಿ ಗೋಶ್ವಾರೆ, ಹತ್ತು ರೋಜ್‌ಖಿರ್ದಿ, ಹನ್ನೊಂದು ರಶೀತಿ ಪಟ್ಟಿ, ಹನ್ನೆರಡನೇ ನಂಬ್ರು ಖಾನೀಷುಮಾರಿ. ಇವು ಹನ್ನೆರಡು ಶಾನುಭೋಗಿಕೆ ಬಾರಾ ನಮೂನೆ ಲೆಕ್ಕಗಳು'–ಎಂದು ಪ್ರಭವ ವಿಭವ ಮೊದಲಾಗಿ ಅರವತ್ತು ಸಂವತ್ಸರಗಳ ಹೆಸರನ್ನು ಗಟ್ಟಿ ಮಾಡಿ ಒಪ್ಪಿಸಿದವನಂತೆ ಹೇಳಿದ.
ಮಗ ವಿದ್ಯಾಸಂಪನ್ನನಾದನೆಂದು ತಾಯಿಗೆ ನಂಬಿಕೆಯಾಯಿತು. ಅವನು ಹೇಳಿದ: 'ನೀನೇನು ಸುಮ್ಮನೆ ಕೂತಿರ್ತೀಯೋ, ನಂಗೆ ಮದ್ವೆ ಗಿದ್ವೆ ಮಾಡ್ತೀಯೋ?'
'ಮಾಡ್ದೆ ಏನು ತಡಿಯೋ. ಶ್ಯಾನುಭೋಗ್‌ಕೆ ಕೈಯಿಗ್ ತಗ.'
'ಅದ್ ಬಂದೇ ಬರುತ್ತೆ. ನಂಗಾಗಲೇ ಹದಿನೆಂಟಾಗಲಿಲ್ವೆ? ಮೆಜಾರಿಟಿಗ್ ಬಂದಿದೀನಿ. ಬಾಕಿಯೋರೆಲ್ಲ ಹದಿನಾರು ವರ್ಷಕ್ಕೆ ಗಂಡು ಹುಡುಗ್‌ರಿಗ್ ಮದ್ವೆ ಮಾಡ್ತಾರೆ. ನಾವು ಹಾಗೆ ಇದ್ರೆ ಜನ ಏನಂತಾರೆ.'
ಚೆನ್ನಿಗರಾಯನಿಗೆ ಆಗಲೇ ಹೆಣ್ಣು ಕೊಡಲು ಎಷ್ಟೋ ಜನ ಕೇಳಿದ್ದರು. ಗಂಗಮ್ಮನೇ ಇನ್ನೂ ಮನಸ್ಸು ಕೊಟ್ಟಿರಲಿಲ್ಲ. ಈಗ ಮಗನೇ ಕೇಳುತ್ತಿದ್ದಾನೆಂದಮೇಲೆ ಮಾಡಿಬಿಡಬೇಕು. ಆ ಬಗೆಗೆ ಮಾದೇವಯ್ಯನವರ ಸಲಹೆ ಕೇಳಿದರೆ ಅವರು– 'ಅವ್ನು ಇನ್ನೂ ಒಂದೆಲ್ಡು ವರ್ಸ ಲೆಕ್ಕ ಕಲೀಲಿ. ಶ್ಯಾನುಬೋಗ್‌ಕೆ ತಗಂಡು ಆಮ್ಯಾಲೆ ಮದ್ವೆಗಿದ್ವೆ ಆಗ್ಲಿ' ಎಂದರು.
ಚೆನ್ನಿಗರಾಯನಿಗೆ ಸಿಟ್ಟು ಬಂತು. 'ಓಹೋ, ಹೋ ಹೋ, ಇನ್ನೂ ಎರಡು ವರ್ಷ ಕಾಯ್ಬೇಕಂತೆ. ನಿಮಗೇನು ತಿಳಿಯುತ್ತೆ. ಸುಮ್ಮನಿರ್ರೀ ಅಯ್ನೋರೇ'–ಎಂದ. ಹಿಂದೆ ಎಂದೂ ಅವರನ್ನು ಯಾವುದಕ್ಕೂ –'ನಿಮಗೇನು ತಿಳಿಯಿತ್ತೆ ಸುಮ್ಮನಿರ್ರಿ' ಅಂದಿರಲಿಲ್ಲ. ಅವರು ಸುಮ್ಮನಾದರು.

ಚೆನ್ನಿಗರಾಯ ಮತ್ತೆ ಹೊನ್ನವಳ್ಳಿಗೆ ಹೋಗಲಿಲ್ಲ. ಅವನೇ ಒಂದು ದಿನ ಹೋಗಿ ಸಿವಲಿಂಗೇಗೌಡನನ್ನು–'ನನ್ನ ಕೆಲಸ ನಂಗೆ ಕೊಡು' ಎಂದು ಕೇಳಿದರೆ ಅವನು, 'ಕೊಡಾಣ ಮ್ಯಾಲ್ನಿಂದ ಬರ್ಲಿ' ಎಂದ. ಮುಂದೆ ಏನು ಮಾಡಬೇಕೆಂಬುದು ಭಾವೀ ಶ್ಯಾನುಭೋಗನಿಗೆ ಖುದ್ದು ತಿಳಿಯಲಿಲ್ಲ. ಅಷ್ಟರಲ್ಲಿ ಮದುವೆ ನಿಶ್ಚಯವಾಗುವ ಮಾತುಕಥೆ ನಡೆಯುತ್ತಿದ್ದುದರಿಂದ ಅವನಿಗೆ ಶ್ಯಾನುಭೋಗಿಕೆಯ ಕಡೆ ಅಷ್ಟೊಂದು ಗಮನ ಹೋಗಲಿಲ್ಲ. ಒಂದು ದಿನ ಇವರ ಮನೆಯ ಮುಂದೆ ಒಂದು ದೊಡ್ಡ ಬಿಳಿಯ ಕುದುರೆ ಬಂದು ನಿಂತಿತು. ಮಿನುಗುವ ಜೀನು ಕಡಿವಾಣಗಳನ್ನು ಹಾಕಿದ್ದ ಅದರ ಮೇಲಿಂದ ಬಿಳಿಯ ನಿಕ್ಕರು ಬಿಳಿಯ ಕೋಟು ಕಾಲಿಗೆ ಕಾಲುಚೀಲ ಬೂಟುಗಳನ್ನು ಹಾಕಿದ್ದ ಇಳಿಪ್ರಾಯದ ಒಬ್ಬ ಭಾರೀ ವ್ಯಕ್ತಿ ಇಳಿದರು. ಆ ದೊಡ್ಡ ಬಿಳಿ ಕುದುರೆ, ಅವರ ಆಳುತನ ನೋಡಿದರೆ ಡಿಸ್ಟ್ರಿಕಟ್ಟಿನ ದಣಿ ಡೆಪ್ಯೂಟಿ ಕಮಿಶನರೆಂದು ಯಾರಾದರೂ ಹೇಳಿಬಿಡಬೇಕಾಗಿತ್ತು. ಗಂಗಮ್ಮ ಹಾಗೆಂದೇ ತಿಳಿದು ಒಳಗೆ ಹೋಗಿ ಚೆನ್ನಿಗರಾಯನಿಗೆ ಹೇಳಿದಳು. ಅವನು ಹೊರಗೆ ಬಂದು ಭಯಭಕ್ತಿಗಳಿಂದ ಬಗ್ಗಿ ಕೈಮುಗಿದು–'ಮಹಾಸ್ವಾಮಿಗಳು ದಯಮಾಡಿಸಬೇಕು' ಎಂದು ತಲೆಬಾಗಿ ತೊದಲುತ್ತಾ ಹೇಳಿದ. ತನಗೆ ಶ್ಯಾನುಭೋಗಿಕೆ ಕೊಡಿಸಲು ಡಿಪ್ಟಿಕಮಿಶನರೇ ಖುದ್ದು ಬಂದಿದ್ದಾರೆಂದು ಅರ್ಥಮಾಡಿಕೊಂಡ.

'ಶಿವಲಿಂಗೇಗೌಡನಿಗೆ ಹೇಳಿಕಳಿಸಲೇ?'–ಅವನು ಕೇಳಿದ.

'ಯಾಕೆ?'

'ಹಾಲಿ ಶ್ಯಾನುಭೋಗಿಕೆ ಛಾರ್ಜು ಅವನ ತಾವಲೇ ಇದೆ. ಅವನಿಂದ ಮಹಾಸ್ವಾಮಿಗಳು ನನಗೆ ಕೊಡಿಸಬೇಕು. ಬರಾವರ್ದಾರ್ ರಾಮಣ್ಣನೋರ ಹಿರೀ ಮಗ ನಾನೇ–ಚೆನ್ನಿಗರಾಯ.'

'ಕೊಡಿಸೋಣ ಈಗ ಒಳಕ್ಕೆ ನಡೀರಿ.'

ಅವರು ಒಳಕ್ಕೆ ಬಂದರು. ಮನೆಯಲ್ಲಿ ಕುರ್ಚಿ ಇರಲಿಲ್ಲ. ಅಣ್ಣಾಜೋಯಿಸರ ಮನೆಯಲ್ಲಿ ಇರುವ ಒಂದು ಕುರ್ಚಿಯನ್ನು ಬಿಟ್ಟರೆ ಈ ಊರಿನಲ್ಲಿ ಯಾರ ಮನೆಯಲ್ಲಿಯೂ ಇಲ್ಲ. ಬಂದವರು ಮಂದಲಿಗೆಯ ಮೇಲೆಯೇ ಕೂತರು. ಚೆನ್ನಿಗರಾಯ ಒಳಗಿನಿಂದ ಗಂಗೋದಕ ತಂದು ಮುಂದಿಟ್ಟರೆ ಅವರು–'ನಾವು ಮೊದಲೇ ನೀರು ಕುಡಿಬಾರ್ದು' ಎಂದರು. ಇವರಿಬ್ಬರಿಗೂ ವಿಷಯ ಅರ್ಥವಾಗಲಿಲ್ಲ. ಕೊನೆಗೆ ಅವರೇ ಹೇಳಿದರು: 'ನಾಗಲಾಪುರ ಅಂತ ಕೇಳಿದೀರಲ್ಲ–ನಾವು ಅದರ ಸ್ಥಳಪುರೋಹಿತರು. ನನ್ನ ಹೆಸರು ಕಂಠೀಜೋಯಿಸ ಅಂತ. ನನ್ನ ಮಗಳು ನಂಜಮ್ಮ ಅಂತ ಹುಡುಗಿ ಹೆಸರು. ರೇವತೀ ನಕ್ಷತ್ರ ಎರಡನೇ ಪಾದ. ಹನ್ನೆರಡು ನಡಿತಾ ಇದೆ. ಜಾತಕ ತಂದಿದೀನಿ. ನಿಮ್ಮ ಹುಡುಗನ ಜಾತಕ ಇಲ್ಲಿ ಕೊಡಿ.'

ಇವರು ಡಿಪ್ಟಿಕಮಿಶನರೆಂಬ ಭಾವನೆಯಿಂದ ನಾಗಲಾಪುರದ ಕಂಠೀಜೋಯಿಸರೆಂಬ ಕಲ್ಪನೆಗೆ ಬರಬೇಕಾದರೆ ಗಂಗಮ್ಮನಿಗೆ ಸ್ವಲ್ಪ ಹೊತ್ತೇ ಹಿಡಿಯಿತು. ಇವರು ತನ್ನ ಮಗನಿಗೆ ಹೆಣ್ಣು ಕೊಡಲು ಬಂದಿದ್ದಾರೆಂಬ ಅರಿವು ಅವಳಲ್ಲಿ ಆತ್ಮವಿಶ್ವಾಸವೂ ಮೂಡಿಸಿತು. ಆದರೂ ದೊಡ್ಡ ಕುದುರೆಯ ಮೇಲೆ ಬಂದಿರುವವರು. ಡಿಪ್ಟಿಕಮಿಶನರ ಹಾಗೆ ದಿರಿಸು ಮಾಡಿರುವವರು. ಅವಳು ಹೇಳಿದಳು: 'ಶ್ಯಾನುಭೋಗ್‌ಕೆ ಛಾರ್ಜು ಕೈಗೆ ಬರೂತಂಕ ನಾನು ಇವನ ಮದುವೆ ಮಾಡುಲ್ಲ ಅಂತಿದೀನಿ.'

'ನಿಂಗೇನು ಗೊತ್ತಾಗುತ್ತೆ ಸುಮ್ನಿರಮ್ಮ. ಛಾರ್ಜು ಕೊಡುತ್ತೀನಿ ಅಂತ ಅವರು ಮೊದ್ಲೇ ಅನ್ನಿಲ್ವೆ?'–ಚೆನ್ನಿಗರಾಯ ತಾಯಿಯ ಬಾಯಿ ಮುಚ್ಚಿಸಿದ.

'ನನಗೆ ಅದೆಲ್ಲ ಗೊತ್ತಿದೆ. ನಿಮ್ಮ ಹಕ್ಕು ನಿಮಗೆ ಕೊಡ್ಸೋದು ಎಷ್ಟು ಹೊತ್ತು? ನಾನು ಅಮಲ್ದಾರ್‌ರಿಗೆ ಹೇಳ್ತೀನಿ. ಮೊದಲು ಮದುವೆಯಾಗಲಿ.'

ಅಂತೂ ಗಂಗಮ್ಮ ಮಗನ ಜಾತಕ ಕೊಟ್ಟಳು. ಕಂಠೀಜೋಯಿಸರು ಎಷ್ಟಾದರೂ ಸ್ವತಃ ಜೋಯಿಸರೇ. ಅಲಿ ್ಲಯೇ ಕೂತು ಗುಣಿಸಿ ನೋಡಿ–'ದಿವ್ಯವಾಗಿ ಹೊಂದುತ್ತೆ. ಇನ್ನು ಮುಂದಿನ ಮಾತಾಡಿ' ಎಂದರು.

– 2 –

ನಾಗಲಾಪುರ ರಾಮಸಂದ್ರದ ಪಶ್ಚಿಮಕ್ಕೆ ಹನ್ನೆರಡು ಮೈಲಿ ದೂರದ ಗ್ರಾಮ. ಆ ಊರಿನ ಕಂಠೀಜೋಯಿಸರ ಕೀರ್ತಿಯನ್ನು ಕೇಳದವರೇ ಇಲ್ಲ. ರಾಮಸಂದ್ರ ತಿಪಟೂರು ತಾಲ್ಲೂಕು ತುಮಕೂರು ಡಿಸ್ಟ್ರಿಕಟ್ಟಿನಲ್ಲಿದ್ದು, ನಾಗಲಾಪುರ ಚೆನ್ನರಾಯ ಪಟ್ಟಣ ತಾಲ್ಲೂಕು ಹಾಸನ ಡಿಸ್ಟ್ರಿಕಟ್ಟಿಗೆ ಸೇರಿದುದರಿಂದ ಈ ಕಡೆಯವರಿಗೆ ಜೋಯಿಸರ ಹೆಸರು ಅಷ್ಟು ಪರಿಚಿತವಿಲ್ಲ. ಚೆನ್ನರಾಯ ಪಟ್ಟಣ ತಾಲ್ಲೂಕು, ಶಾಂತಿ ಗ್ರಾಮ, ಹಾಸನ, ಕೌಶಿಕ ಮೊದಲಾದ ಕಡೆ ಎಲ್ಲರಿಗೂ ಅವರ ಹೆಸರು ಗೊತ್ತು.

ಒಳ್ಳೆಯ ಎತ್ತರ, ಅಗಲವಾದ ಹಣೆ, ಮತ್ತು ಚುರುಕಾದ ಕಣ್ಣುಗಳ ಆಳು ಕಂಠೀಜೋಯಿಸರು. ಅವರ ಹದಿನಾರಕ್ಕೆ ಮದುವೆಯಾಯಿತು. ಇಪ್ಪತ್ತಕ್ಕೆ ಮನೆಗೆ ಹೆಂಡತಿ ಬಂದಳು. ಎರಡು ವರ್ಷಕ್ಕೆ ಒಬ್ಬ ಮಗ ಹುಟ್ಟಿದ. ಇನ್ನೆರಡು ವರ್ಷಕ್ಕೆ ಇನ್ನೊಂದು ಮಗು ಹುಟ್ಟಿ ತೀರಿಕೊಂಡಿತು. ಮತ್ತೆ ಎರಡು ಮಕ್ಕಳಾಗಿ ಅವೂ ಸತ್ತಮೇಲೆ ಕೊನೆಯ ಹೆರಿಗೆಯಲ್ಲಿ ಹೆಂಡತಿಯೇ ತೀರಿಹೋದಳು. ಉಳಿದ ಹೆಣ್ಣುಮಗುವನ್ನು ಕಂಠೀಜೋಯಿಸರ ತಾಯಿ ಸಾಕಿದಳು. ಜೋಯಿಸರು ಮತ್ತೆ ಮದುವೆಯಾಗಲಿಲ್ಲ. ಈಗ ಅವರಿಗೆ ಇರುವವರು ಇಬ್ಬರೇ ಮಕ್ಕಳು.

ಹಿರಿಯ ಮಗ ಕಲ್ಲೇಶ ಪೋಲೀಸ್ ಕಾನ್‌ಸ್ಟೇಬಲ್ ಆಗಿ ಶ್ರವಣಬೆಳಗೊಳದಲ್ಲಿ ಕೆಲಸ ಮಾಡುತ್ತಿದ್ದಾನೆ. ತಾಯಿ ಸತ್ತಾಗ ಉಳಿದ ಮಗು ನಂಜಮ್ಮನನ್ನೇ ಈಗ ಚೆನ್ನಿಗರಾಯನಿಗೆ ಕೊಟ್ಟು ಮದುವೆ ಮಾಡುವುದು. ಹುಟ್ಟಿದ ಮೇಲೆ ಯಾರಿಗಾದರೂ ಆಗಬಹುದಾದ ಇಷ್ಟರಿಂದಲೇ ಕಂಠೀಜೋಯಿಸರು ಪ್ರಸಿದ್ಧರಾಗಲಿಲ್ಲ. ಪ್ರಸಿದ್ಧಿಗೂ ಕೆಲವು ಸಿದ್ಧಿ ಬೇಕಲ್ಲ. ಒಳ್ಳೇ ಭೀಮನಂತಹ ಅವರ ಶರೀರವೂ ಒಂದು ಸಲ ನೋಡಿದರೆ ಯಾರಿಗಾದರೂ ನೆನಪನ್ನು ಉಳಿಸುತ್ತಿತ್ತು. ಮೊದಲಿನಿಂದ ನಾಟಕ, ಯಕ್ಷಗಾನಗಳಲ್ಲಿ ಮಾಡುತ್ತಿದ್ದ ಅವರ ಪಾರ್ಟನ್ನು ಒಂದು ಸಲ ನೋಡಿದರೆ ಯಾರೂ ಮರೆಯುತ್ತಿರಲಿಲ್ಲ. ಕಾಳಿದಾಸ ನಾಟಕದಲ್ಲಿ ಭೋಜರಾಜನ ಪಾರ್ಟು ಅವರಿಗಿಂತ ಹೆಚ್ಚು ಯಾರಿಗೂ ಹೊಂದುತ್ತಿರಲಿಲ್ಲ. ಮಹಾಭಾರತ ಕುಣಿತದಲ್ಲಿ ದುರ್ಯೋಧನನ ವೇಷ ಅವರಿಗೇ ಹೇಳಿಸಿದ್ದು. ಯಕ್ಷಗಾನದಲ್ಲಿ ವೀರವೇಷ ಹಾಕಿದಾಗ ಎರಡು ಹಲಗೆಗಳನ್ನು ಮುರಿದುಹಾಕದೆ ಕುಣಿಯುವುದನ್ನು ನಿಲ್ಲಿಸುತ್ತಿರಲಿಲ್ಲ. ತಾರದಲ್ಲಿ ಒಂದೇ ಉಸುರಿಗೆ ರಾಗವಾಗಿ ಎಳೆದು ಕಂದ ಪದ್ಯ ಹಾಡುತ್ತಿದ್ದರು. ಹಾರ್ಮೋನಿಯಂ ಬಾರಿಸುತ್ತಿದ್ದುದಲ್ಲದೆ ತಬಲಾ ಬಡಿಯುವುದನ್ನೂ ಬಲ್ಲರು. ಮಂಗಳ, ಅಮಂಗಳ, ಎರಡೂ ಬಗೆಯ ಪೌರೋಹಿತ್ಯದ ಜೊತೆಗೆ ಜ್ಯೋತಿಷ್ಯ, ಮಾಟ ಮದ್ದುಗಳೂ ಗೊತ್ತಿದ್ದವು. ಇದರ ಮೇಲೆ ಅಮಲ್ದಾರರ ಜೊತೆಗೂ ಇಂಗ್ಲೀಷ್ ಮಾತನಾಡುವ ಛಾತಿ; ಸಾಬರ ಕೂಡ ಉರ್ದೂ ಬಳಸುವ ಜ್ಞಾನ.

ಛಾತಿಯೇ ಅವರಿಗೆ ಪ್ರಸಿದ್ಧಿ ದೊರಕಿಸಿಕೊಟ್ಟಿತ್ತು. ಹಿಂದೆ ಯಾವುಯಾವುದೋ ಕೋರ್ಟು ಕೇಸುಗಳನ್ನು ಗೆದಿದ್ದ ಅವರು ಒಂದೆರಡು ಕೊಲೆ ಮಾಡಿ ಜಯಿಸಿಕೊಂಡಿದ್ದರೆಂದು ಜನ ಹೇಳುತ್ತಿದ್ದರು. ಅದು ಸುಳ್ಳೋ ದಿಟವೋ ಕಂಡವರಿಲ್ಲ. ಜೋಯಿಸರಂತೂ ಸುಳ್ಳು ಎನ್ನುತ್ತಾರೆ. ಯಾರ ಕೈಲಾದರೂ ಜಗಳವಾಡುವಾಗ 'ನಿನ್ನ ಖೂನಿಮಾಡಿಬಿಡ್ತೀನಿ' ಇತ್ಯಾದಿ ಮಾತುಗಳು ಬಾಯಲ್ಲಿ ಬರುತ್ತಿದ್ದ ಗತ್ತಿಗೆ, ಅವರು ಎಷ್ಟು ಖೂನಿ ಮಾಡಿದ್ದಾರೆ ಎಂಬ ಭಯ ಜನರ ಮನಸ್ಸಿನಲ್ಲಿ ಬಂದರೆ ಆಶ್ಚರ್ಯವಿಲ್ಲ. ಕತ್ತಲೆಗೆ ಸ್ವಲ್ಪವೂ ಹೆದರದ ಅವರು ನಿಶಾಚರರು. ಸೊಂಟಕ್ಕೆ ಒಂದು ಕೊನೆಗತ್ತಿ ಸಿಕ್ಕಿಸಿಕೊಂಡು ಹೊರಟರೆ ಬೆಳಕು ಹರಿಯುವುದರೊಳಗೆ ಒಬ್ಬರೇ ಬಳ್ಡಾಳುತಿಟ್ಟು ಹಾಯ್ದು ಇಪ್ಪತ್ತನಾಲ್ಕು ಮೈಲಿ ದೂರದ ಹಾಸನ ಮುಟ್ಟುತ್ತಿದ್ದರು. ಜೋಯಿಸರು ಹಗಲು ಹೊತ್ತು ನಡೆಯುತ್ತಿದ್ದುದೇ ಅಪರೂಪ. ಕೊಳ್ಳಿದೆವ್ವ ಮಾತ್ರವಲ್ಲದೆ ಜಡೆಮುನಿಗಳನ್ನು ಸಹ ಧೈರ್ಯವಾಗಿ ಎದುರಿಸಿ ಕಾಲಿಗೆ ಬುದ್ಧಿ ಹೇಳಿಸುವ ಇವರ ಕೀರ್ತಿ ಹಬ್ಬುವುದರಲ್ಲಿ ಆಶ್ಚರ್ಯವೇನು?

ಚೆನ್ನಿಗರಾಯನ ಮದುವೆಗೆ ರಾಮಸಂದ್ರದ ಬ್ರಾಹ್ಮಣರೆಲ್ಲ ಬಂದಿದ್ದುದಲ್ಲದೆ ಅವರ ಶ್ಯಾನುಭೋಗಿಕೆಯ ಗ್ರಾಮವಾದ ಕುರುಬರ ಹಳ್ಳಿಯ ಪಟೇಲ ಗುಂಡೇಗೌಡ ಮತ್ತು ಇತರ ಕೆಲವು ಮುಖ್ಯರೂ ಸೇರಿದ್ದರು. ಪಟೇಲ ಶಿವೇಗೌಡನಾಗಲಿ ಶ್ಯಾನುಭೋಗ ಶಿವಲಿಂಗನಾಗಲಿ ಹೋಗಲಿಲ್ಲ. ಗಂಡಿನ ಕಡೆಯವರೆಲ್ಲ ಒಟ್ಟು ನಾಲ್ಕು ಗಾಡಿ ಹೊಡೆಸಿಕೊಂಡು ಹೋಗಿದ್ದರು. ನಾಗಲಾಪುರದ ಕೆರೆಯ ಏರಿಯ ಹತ್ತಿರ ಕೊಂಬು ಕಹಳೆ ಊದಿಸಿ ಇವರನ್ನು ಇದಿರುಗೊಂಡ ಹೆಣ್ಣಿನ ಕಡೆಯವರು, ಗಂಡನ್ನು ಕೂರಿಸಿಕೊಂಡು ಹೋಗಲು ಕಂಠೀಜೋಯಿಸರ ಬಿಳಿ ಕುದುರೆಯನ್ನೇ ತಂದಿದ್ದರು. ಅದರ ಮೇಲೆ ಹತ್ತಿ ಕೂತುಕೊಳ್ಳಲು ಚೆನ್ನಿಗರಾಯ ಹೆದರಿ ಕಂಗಾಲಾದ. ಆದರೆ ಹತ್ತದೆ ಬಿಟ್ಟರೆ ಇಡೀ ರಾಮಸಂದ್ರಕ್ಕೆ ಅಪಮಾನ. 'ಥೂ ಹೆಣ್ಣಿಗ್ ಸೂಳೆಮಗನೆ'–ಎಂದು ಗಂಗಮ್ಮ ಬೈದಮೇಲೆ ಅವನು ಜೀನಿನ ಮೇಲೆ ಹತ್ತಿ ಕುಳಿತ. ಕುದುರೆ ಶಿಂಡಾಡದೆ ಒಂದೇಸಮನೆ ಹೆಜ್ಜೆ ಹಾಕುವಂತೆ ಹುಡುಗಿಯ ಅಣ್ಣ ಪೋಲೀಸ್ ಕಾನಿಸ್ಟೇಬಲ್ ಕಲ್ಲೇಶ ಅದರ ಲಗಾಮನ್ನು ಕೈಲಿ ಹಿಡಿದು ಪಕ್ಕದಲ್ಲಿ ನಡೆದು ಬಂದ.

ಮದುವೆಗೆ ಬಂದಿದ್ದ ಗಂಡಿನ ಕಡೆಯವರಿಗೆಲ್ಲ ಕಂಠೀಜೋಯಿಸರ ವ್ಯಕ್ತಿತ್ವದ ಅನುಭವವಾಯಿತು. ತುಂಬ ಶ್ರೀಮಂತರಲ್ಲದಿದ್ದರೂ ತಕ್ಕಮಟ್ಟಿನ ಕುಳವಾದ ಅವರು ಊಟೋಪಚಾರಕ್ಕೆ ಅದ್ದೂರಿಯಾಗಿ ಮಾಡಿಸಿದ್ದರು. ಮದುವೆಗೆ ಹಾಸನದಿಂದ ಒಬ್ಬ ಲಾಯರು–ಅವರನ್ನು ಲಾಯರೆಂದು ಕಂಠೀಜೋಯಿಸರು ಹೇಳಿದರು–ಬಂದಿದ್ದರು. ಗಂಡಿನ ಪುರೋಹಿತರಾಗಿ ಅಯ್ಯಾ ಶಾಸ್ತ್ರಿಗಳು, ಅಣ್ಣಾಜೋಯಿಸರು, ಇಬ್ಬರೂ ಹೋಗಿದ್ದರು. ಅಯ್ಯಾಶಾಸ್ತ್ರಿಗಳಿಗೆ ಪ್ರಾತಿಮಾಸಿಕ ಶ್ರಾದ್ಧ, ಪುಣ್ಯಾಃ, ಗೌರಿ ಗಣೇಶ ವ್ರತಗಳನ್ನು ಬಿಟ್ಟರೆ ಉಳಿದ ಕರ್ಮಗಳ ಪೌರೋಹಿತ್ಯದ ಪಾಠವಾಗಿರಲಿಲ್ಲ. ಅಣ್ಣಾಜೋಯಿಸರು ವಯಸ್ಸಿನಲ್ಲಿ ಚಿಕ್ಕವರಾದರೂ ಶಿಂಧಘಟ್ಟದ ಸೂರಣ್ಣಜೋಯಿಸರ ಕೈಕೆಳಗೆ ಕ್ರಮವಾಗಿ ಅಧ್ಯಯನ ಮಾಡಿಕೊಂಡು ಬಂದು ಆ ಸುತ್ತಿಗೇ ಹೆಸರಾದವರು. ಇಷ್ಟು ಹೊತ್ತಿಗೆ ಲೆಕ್ಕವಿಲ್ಲದಷ್ಟು ಮದುವೆ ಮುಂಜಿ ಮಾಡಿಸಿ, ನೀರು ಕುಡಿದ ಹಾಗೆ ಮಂತ್ರ ಹೇಳುವ ಅಭ್ಯಾಸವಾಗಿದೆ. ಗಂಡಿನ ಬಿಡಾರದಲ್ಲಿ ಹೋಮ ಮಾಡಿಸುವಾಗ ಅಣ್ಣಾಜೋಯಿಸರು ಗಟ್ಟಿಯಾಗಿ ಹೇಳುತ್ತಿದ್ದರು: 'ಓಂ ಭೂರಗ್ನಿಯೇ ಪ್ರಾಣಾಯ ಸ್ವಾಹ! ಇದಮಗ್ನಿಯೇ ಪ್ರಾಣಾಯ ಸ್ವಾಹಾ!.....

ವರನ ಬೀಡಾರ ಹೆಣ್ಣಿನ ಮನೆಯ ಪಕ್ಕದಲ್ಲಿಯೇ ಇತ್ತು. ಇವರ ಮಂತ್ರ ಹೆಣ್ಣಿನ ಮನೆಯವರಿಗೂ ಕೇಳುತ್ತಿತ್ತು. ಅದು ಕಿವಿಗೆ ಬಿದ್ದ ತಕ್ಷಣ ಕಂಠೀಜೋಯಿಸರು ಅಲ್ಲಿಗೆ ಬಂದು ಕೇಳಿದರು: 'ಜೋಯಿಸರೇ , ಅಗ್ನಿಗೆ ಆಹುತಿ ಕೊಡೋ ಮಂತ್ರಾನ ಇನ್ನೊಂದು ಸಲ ಹೇಳಿ.'

'ಯಾಕೆ?'

‘ಸ್ವಲ್ಪ ಕೇಳಬೇಕು ಹೇಳಿ.’
‘ಹಾಗೆ ವೇದ ಮಂತ್ರಾನ ಮತ್ತೆ ಹೇಳಬಾರದು’–ಎಂದು ಅಯ್ಯಾಶಾಸ್ತ್ರಿಗಳು ಮುಖ ನೋಡಿದರು.
‘ಯಾಕೆ ಹೇಳಬಾರ್ದು? ನೀವು ತಪ್ಪು ಹೇಳ್‌ಬೌದೋ?’
‘ನಾನು ಹೇಳೋದು ತಪ್ಪೇ? ಶಿಂಧಘಟ್ಟದ ಸೂರಣ್ಣ ಜೋಯಿಸರ ಪಾಠ ತಪ್ಪೆ? ಕೇಳಿ ಚಿಕ್ಕಪ್ಪ, ನಾನು ಈ ಮದುವೆ ಮಾಡಿಸಬೇಕೋ, ಬಿಟ್ಟು ಎದ್ದು ಹೋಗಬೇಕೋ?’–ಎಂದು ಜೋಯಿಸರು ಎದ್ದು ನಿಂತುಬಿಟ್ಟರು.
‘ನಿಮ್ಮ ಗುರುಗಳ ವಿಚಾರ ನನಗೆ ಗೊತ್ತಿದೆ. ಅವರಿಗೆ ನೆಟ್ಟಗೆ ಸಂಸ್ಕೃತ ಗೊತ್ತಿಲ್ಲ. ಭೂರಗ್ನಿಯೇ ಅನ್ನೊದು ತಪ್ಪು. ಭೂರಗ್ನಯೇ ಅಂತ ಇರಬೇಕು. ನೀವು ಹೇಳೋದು ವ್ಯಾಕರಣಶುದ್ಧವಲ್ಲ. ಗ್ರಂಥದಲ್ಲಿ ತೆಗೆದು ತೋರಿಸಲೇನು? ವೇದಮಂತ್ರ ತಪ್ಪು ನುಡಿದರೆ ತಲೆ ಸಹಸ್ರ ಸೀಳಾಗುತ್ತೆ.’
ಅಲ್ಲಿಗೆ ಅಣ್ಣಾಜೋಯಿಸರು ಸುಮ್ಮನಾದರು. ಕಂಠೀಜೋಯಿಸರ ಮಂತ್ರಜ್ಞಾನದ ಬಗೆಗೆ ರಾಮಸಂದ್ರದವರೆಲ್ಲ ಬೆರಗಾದರು. ಮುಂದೆ ಧಾರೆಯಾಗುವಾಗ ಕನ್ಯಾದಾನ ಮಂತ್ರವನ್ನು ಅವರೇ ಏರಿದ ಕಂಠದಲ್ಲಿ ಹೇಳುತ್ತಿದ್ದುದನ್ನು ಇಡೀ ಮದುವೆಯ ಮನೆಯೇ ಗಂಭೀರವಾಗಿ ಕೇಳಿತು. ಮದುವೆ ಮುಗಿದು ಗಂಡಿನವರು ಹೊರಡುವಾಗ ಅಣ್ಣಾಜೋಯಿಸರು ಕಂಠೀಜೋಯಿಸರ ಹತ್ತಿರ ಬಂದು–‘ನನಗೆ ಬರೀ ಪಾಠವಾಗಿದೆ. ವ್ಯಾಕರಣ ಭಾಗ ಸ್ವಲ್ಪ ಹಿಂದೆಯೇ. ಪೂರ್ತಿ ಅಧ್ಯಯನವಾಗೋ ಮೊದಲೇ ತಂದೆ ತೀರಿ ಹೋಗಿದ್ದರಿಂದ ಅರ್ಧಕ್ಕೆ ಬಿಟ್ಟು ಬಂದು ಬಾಕೀದನ್ನು ಪುಸ್ತಕದಿಂದ ಅಭ್ಯಾಸ ಮಾಡಿದೆ. ತಪ್ಪದ್ದರೆ ಕ್ಷಮಿಸಬೇಕು’ ಎಂದು ಹೇಳಿದರು.
ಮದುವೆ ಚೆನ್ನಾಗಿ ನಡೆಯಿತು. ಹುಡುಗಿಗೆ ನಾಗರು, ಶೇವಂತಿಗೆ ಹೂವು, ಬಳೆ, ಬೆಳ್ಳಿಯ ಡಾಬು, ಮತ್ತು ಕಾಲಿಗೆ ರುಳಿಗಳನ್ನು ಹಾಕಿದ್ದರು. ಗಂಡಿನವರು ಕ್ರಮದಂತೆ ಮಾಂಗಲ್ಯ, ಓಲೆ ಮೂಗುಬಟ್ಟುಗಳನ್ನು ತಂದಿದ್ದರು. ತಂದೆಯಂತೆಯೇ ಎತ್ತರವಾದ ಮೈ ಕಟ್ಟು, ಅಗಲವಾದ ಹಣೆ, ಮತ್ತು ವಿಶಾಲವಾದ ಕಣ್ಣುಗಳುಳ್ಳ ವಧುವು ಲಕ್ಷಣವಾಗಿದ್ದಳು. ‘ನಮ್ ಚೆನ್ನಿಗರಾಯಂಗೆ ಇಂಥಾ ಹೆಣ್ಣು ಸಿಕ್ಕೋದು ಅಂದ್ರೆ ಪುಣ್ಯ ಮಾಡಿದ್ದ’–ಎಂದು ರಾಮಸಂದ್ರದವರೇ ಎಂದರು. ಈ ಮಾತು ಗಂಗಮ್ಮನಿಗೆ ಮಾತ್ರ ಸಹಿಸಲಿಲ್ಲ. ಚೆನ್ನಿಗರಾಯ ಭೂಮಕ್ಕೆ ಬಡಿಸಿದ್ದ ಭಕ್ಷ್ಯಭೋಜ್ಯಗಳನ್ನೆಲ್ಲ ಸ್ವಲ್ಪವೂ ಬಿಡದೆ ತಿಂದುಹಾಕಿದುದನ್ನು ನಾಗಲಾಪುರದವರು ಆಡಿಕೊಂಡರು. ಹಾಗೆ ತಿನ್ನಬಾರದಾಗಿತ್ತೆಂದು ರಾಮಸಂದ್ರದವರೂ ಆಮೇಲೆ ಅವನಿಗೆ ಹೇಳಿದರು. ‘ವಳ್ಳೇ ಗಮ್ ಅನ್ನೂ ಹಾಗೆ ಮಾಡಿದ್ದುನ್ನ ಅದ್‌ಹ್ಯಾಗೆ ಎಂಜಲು ಮಾಡಿ ಚೆಲ್ಲೂಕಾಗುತ್ತ್ಯೋ ಕಾಣೆ’–ಎಂದು ಅವನು, ತಾನು ಮಾಡಿದುದನ್ನೇ ಸಮರ್ಥಿಸಿಕೊಂಡ.

– 3 –

ಚೆನ್ನಿಗರಾಯ ಎಷ್ಟು ಸಲ ಕೇಳಿದರೂ ಸಿವಲಿಂಗೇಗೌಡ ಶ್ಯಾನುಭೋಗಿಕೆ ಬಿಟ್ಟುಕೊಡಲಿಲ್ಲ. ಮೊದಲು ಕೆಲವು ದಿನ–‘ಕೊಡಾನ, ಕೊಡಾನಾ’ ಎನ್ನುತ್ತಿದ್ದ. ಅದರ ಅರ್ಥ ಸರಿಯಾಗಿ ತಿಳಿಯದ ಚೆನ್ನಿಗರಾಯ ಕೆಲವು ದಿನ ಕಾದು ನೋಡುತ್ತಿದ್ದ. ಮತ್ತೆ ಕೇಳಿದರೆ ಅದೇ ಮಾತು. ಒಂದು ದಿನ–‘ಸಾಲಾಖೈರಿನ ಲೆಕ್ಕ ಚುಕ್ತಾ ಆಗ್‌ಬೇಕು. ಆಮ್ಯಾಲೆ ನೋಡಾನ’ ಎಂದ. ಸಾಲಾಖೈರು ಎಂದರೆ ಏಪ್ರಿಲ್ ತಿಂಗಳ ಕೊನೆ. ಅಲ್ಲಿಗೆ ಇನ್ನೂ ಐದು ತಿಂಗಳು. ‘ಸಾಲಾ ಲ್ಯಕ್ಕ ಮುಗಿಸ್ದೆ ಕೊಟ್ರೆ ನಿಂಗೇನ್ ತಿಳೀತೈತೆ?’–ಎಂದು ಅವನು ಹೇಳಿದುದು ನಿಜವೆಂದು ಇವನೂ ಒಪ್ಪಿಕೊಂಡ.
ಮನೆಯಲ್ಲಿ ಬೇರೇನೂ ಕೆಲಸವಿಲ್ಲ. ಹೆಂಡತಿ ಇನ್ನೂ ಚಿಕ್ಕವಳಾಗಿದ್ದುದರಿಂದ ಪ್ರಸ್ತವಾಗಿರಲಿಲ್ಲ; ತೌರುಮನೆಯಲ್ಲೇ ಇದ್ದಳು. ಎರಡು ವರ್ಷ ಓಚಯ್ಯನವರ ಮಠಕ್ಕೆ ಹೋಗಿದ್ದರೂ ಅಪ್ಪಣ್ಣಯ್ಯನಿಗೆ ಪೂರ್ವಜನ್ಮದ ಶೇಷವಿಲ್ಲದುದರಿಂದ ವಿದ್ಯೆ ಬರುವುದಿಲ್ಲವೆಂದು ನಿರ್ಣಯಿಸಿ ಓಚಯ್ಯನವರೇ ಅವನನ್ನು ಕೈಬಿಟ್ಟಿದ್ದರು. ಈಗ ಅವನು ತೋಟದ ಬೇಲಿಗಳಲ್ಲಿಕಟ್ಟುತ್ತಿದ್ದ ಜೇನು ಬಿಚ್ಚುವುದು, ಎಳನೀರು ಕೆಡವಿ ಕುಡಿಯುವುದರಲ್ಲಿ ಹೊತ್ತು ಕಳೆಯುತ್ತಿದ್ದ. ಮುಂದೆ ಶ್ಯಾನುಭೊಗನಾಗಬೇಕಾದ ಚೆನ್ನಿಗರಾಯ ಬೆಳಿಗ್ಗೆ ಎದ್ದುಸ್ನಾನ ಮಾಡಿದ ಮೇಲೆ, ತಲೆ ಸೂಲೆ ಬಂದವರು ಪಟ್ಟುಹಾಕಿಕೊಳ್ಳುವಷ್ಟು ದಪ್ಪನಾಗಿ ಹಣೆಗೆ ಕಲಸಿದ ವಿಭೂತಿ ಮೆತ್ತಿಕೊಂಡು ಒದ್ದೆ ಲಂಗೋಟಿಯಲ್ಲಿ ಕುಳಿತು ಸಂಧ್ಯಾವಂದನೆ ಮಾಡಿ ಜನಿವಾರದ ಬ್ರಹ್ಮಗಂಟನ್ನು ಕೈಲಿ ಹಿಡಿದು, ಓಂ ತತ್ಸತ್ ತ್ ತ್.....ಓಂ ತತ್ಸತ್ ತ್ ತ್ ಎಂದು ಏಕತಾನದಲ್ಲಿ ಕೇಳುವಂತೆ ಗಟ್ಟಿಯಾಗಿ ಸಾವಿರದೆಂಟು ಗಾಯಿತ್ರಿ ಹೇಳುತ್ತಿದ್ದ.
ಸಾಲಾಖೈರಿಗೆ ಹೋಗಿ ಕೇಳಿದಾಗ ಸಿವಲಿಂಗೇಗೌಡ ಹೇಳಿದ: ‘ಮ್ಯಾಲಿನ ಹುಕುಂ ಇಲ್ಲದೆ ನಿಂಗೆ ಶ್ಯಾನುಭೋಗಿಕೆ ಹ್ಯಂಗ್ ಕೊಡ್ಲಿ?’
‘ನಂದು ನಂಗ್ ಕೊಡೊಕೆ ಮ್ಯಾಲಿಂದೇನು?’
‘ಊಂ. ನಿಮ್ಮಪ್ಪಂದು ಅಂತ ಬರೆದಿಟ್ಟಿಲ್ಲ. ನಂಗೂ ಹತ್ತು ವರ್ಷ ಅನುಭೋಗ ಬಂತು. ಹ್ವಾಗು ನನ್ ತಾವ ಕಿತ್ಕಳೂವಂತೆ’
ಚೆನ್ನಿಗರಾಯನಿಗೆ ಈ ಮಾತನ್ನು ಕೇಳಿ ಅಳು ಬಂದಹಾಗಾಯಿತು. ‘ಅಯ್ಯೋ ನಿನ್ನವ್ವುನಾ.....’ ಎಂದು

ಅವನನ್ನು ಬೈಯಬೇಕೆಂದು ಬಾಯಿಗೆ ಬಂದರೂ ಧೈರ್ಯ ಸಾಲದೆ ಸುಮ್ಮನಾದ. ಸಿವಲಿಂಗೇಗೌಡನ ಭಾವ ಪಟೇಲ ಶಿವೇಗೌಡನ ಹತ್ತಿರಕ್ಕೆ ಹೋಗಿ ಕೇಳಿದರೆ ಅವನು, 'ಲೇ ತಮ್ಮಯ್ಯ, ಶ್ಯಾನುಬಾಕಿ ಮಾಡಾಕ್ ನಿನ್ ಕೈಲಿ ಪರೀತದೇನ್ಲಾ? ಅದೇನ್ ಮಶ್‌ಗಿರಿ ಅಂತ ತಿಳಕಂಡ್ಯಾ?' ಎಂದ.

ಚೆನ್ನಿಗರಾಯನಿಗೆ ಮುಂದೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಪಟೇಲರ ಎದುರು ಮಾತನಾಡುವ ಧೈರ್ಯ ಅವನಿಗೆ ಬರುವುದಾದರೂ ಹೇಗೆ? ಹುಡುಗನಾದಾಗಿನಿಂದ ಅವನನ್ನು ಹೆದರಿಸಲು ಗಂಗಮ್ಮ ಕೂಗುತ್ತಿದ್ದುದು ಆ ಪಟೇಲನನ್ನೇ ತಾನೇ! ಅವನು ಸೀದಾ ಅಮ್ಮನ ಹತ್ತಿರ ಬಂದು, ಸಿವಲಿಂಗ ಮತ್ತು ಪಟೇಲರ ಮಾತುಗಳನ್ನು ಹೇಳಿದ. ಗಂಗಮ್ಮ ಸುಮ್ಮನಿದ್ದಾಳೆಯೇ? ಪಟೇಲನ ಮನೆಯ ಬಾಗಿಲಿನ ಹತ್ತಿರ ಬೀದಿಯಲ್ಲಿ ನಿಂತು ಗಟ್ಟಿಯಾಗಿ ಕೇಳಿದಳು: 'ಶಿವೇಗೌಡ, ಕಂಡೋರ ಹೆಂಡ್ತಿ ಹೇಲು ಎಷ್ಟು ದಿನ ತಿನ್‌ಬೇಕು ಅಂತ ಮಾಡಿದೀಯಾ? ನಿನ್ ಹೆಂಡ್ರ ಬಳೆ ಕುಕ್‌ಹೋಗಿ ನಿನ್ಮನೆ ತೊಳ್ದ್ ಹೋಗುತ್ತೆ ತಿಳ್ಕ.'

ಈ ಮಾತನ್ನು ಕೇಳಿದ ಪಟೇಲನ ಹೆಂಡತಿ ಗೌರಮ್ಮನಿಗೆ ಭಯವಾಯಿತು. ಬ್ರಾಹ್ಮಣ ವಿಧವೆಯ ಶಾಪ ತಮಗೆ ತಟ್ಟಿದರೆ ಗತಿ ಏನು? ಅವಳು ಗಂಡನಿಗೆ ಹೇಳಿದಳು: 'ಅವ್ರ ಚಟ್ಟದ ಕೋಲು ಮಡಿಕ್ಕಂಡ್ ನ್ಯಮ್‌ಗೇನಾಗ್ಬೇಕು? ಬಿಸಾಕು ಅಂತ ಸಿವಲಿಂಗಣ್ಣಂಗ್ ಏಳು ಅತ್ಲಾಗೆ.'

ಪಟೇಲ ತಾನೇ ಹೊರಗೆ ಬಂದು ಹೇಳಿದ: 'ಗಂಗವ್ವಾ, ಹಿಂಗ್ ಕ್ಯಟ್ ಮಾತು ಯಾಕ್ ಆಡ್ತೀಯಾ? ಬಾ ಕುಂತ್ಕ. ಮಾತಾಡಾಣ.'

ಗೌರಮ್ಮ ಜಗುಲಿಯ ಮೇಲೆ ಮಣೆ ಹಾಕಿಕೊಟ್ಟಳು. ಗಂಗಮ್ಮ ಅದರ ಮೇಲೆ ಕುಳಿತಮೇಲೆ ಪಟೇಲ ಒಂದು ದಿಂಬು ತರಿಸಿ ಹಾಕಿಕೊಂಡು ಒರಗಿ ಕುಳಿತ. ಭಾವೀ ಶ್ಯಾನುಭೋಗ ಚೆನ್ನಿಗರಾಯ ಸೂರುಕಟ್ಟಿನ ಕೆಳಗೆ ನಿಂತೇ ಇದ್ದ. ಪಟೇಲ ಹೇಳಿ ಕಳಿಸಿದಮೇಲೆ ಅಲ್ಲಿಗೆ ಬಂದ ಹಾಲಿ ಶ್ಯಾನುಭೊಗ ಸಿವಲಿಂಗ ಇನ್ನೊಂದು ಜಗುಲಿಯ ಮೇಲೆ ಕಾಲು ಹಾಕಿ ಕುಳಿತುಕೊಂಡ. ಪಟೇಲ ಹೇಳಿದ 'ಸಿವಾ, ಚಾರ್ಜು ಕೊಡಾಕ್ ಯಾಕ್ ಆಗಾಕಿಲ್ಲ ಅಂತ ಇವಮ್‌ನೋರ್ಗೆ ವಸೀ ಸಮಜಾಯಿಶಿ ಮಾಡಿ ಹ್ಯೇಳು.'

ಶಿವಲಿಂಗ ಗಂಗಮ್ಮನನ್ನು ಕೇಳಿದ: 'ನಿಮ್ಮ ಮಗನ ವಯಸ್ಸು ಏಟು?'

'ಹತ್ತೊಂಬತ್ತು ನಡೀತಿದ್ಯಲಾ?'

'ಹಂಗಂತ ನೀವು ಅಂತೀರಾ. ಸರ್ಕಾರಿ ದಾಖ್‌ಲೇಲಿ ಇನ್ನೂ ಅದಿನಾರು ಅಂತಲೇ ಐತೆ. ಅವ್ನಿನ್ನೂ ಮೆಜಾಲಿಟೀಗೇ ಬಂದಿಲ್ಲ. ಗೌರ್‌ಮೇಟು ಕೆಲ್ಸ ಹ್ಯಂಗ್ ಕೊಡಾಕಾಯ್ತದೆ?'

'ಇವ್ನು ಹುಟ್‌ದಾಗ ನಮ್ಮನೆಯೋರೇ ಶ್ಯಾನುಭೋಗ್‌ಕೆ ಮಾಡ್ತಿದ್ರು. ಅವ್ರೇನ್ ಸುಳ್ ಬರ್ದಿರ್ತಾರಾ? ನ್ಯಟ್ಟಗೆ ನೋಡು.'

'ಜನನ ಮರಣ ರಿಜೀಸ್ಟರು ನಮ್‌ತಾವ ಇರಾಕಿಲ್ಲ. ಅದ ನೋಡಾಕೆ ಸರ್ಕಾರುಕ್ ಫೀಜು ಕೊಡ್‌ಬೇಕು. ಮದ್ಲು ಐವತ್ತು ರೂಪಾಯಿ ಕೊಡಿ. ಆಮ್ಯಾಲೇ ತಿಪ್ಟೂರ್ಗೆ ಹ್ವಾಗಿ ನೋಡ್ಸುಸ್‌ತೀನಿ.

ಜನನ ಮರಣ ರಿಜಿಸ್ಟರು ಶ್ಯಾನುಭೋಗರ ಹತ್ತಿರ ಇರುತ್ತದೆಯೇ ಇಲ್ಲವೇ, ಅದನ್ನು ನೋಡಲು ಫೀಜು ಕೊಡಬೇಕೇ ಬೇಡವೇ, ಕೊಡಬೇಕಾಗಿದ್ದರೆ ಐವತ್ತು ರೂಪಾಯಿ ಆಗುತ್ತದೆಯೇ ಎಂಬ ಬಗೆಗೆ ಗಂಗಮ್ಮನಿಗೆ ಗೊತ್ತಿಲ್ಲ. 'ಏನೋ ಚೆನ್ನಯ್ಯ, ಕೊಡಬೇಕೇನೋ ಲ್ಯಕ್ಕ ಕಲ್ತ್ ಕಂಡಿರಾನು ನೀನು ಹ್ಯೇಳೋ'–ಎಂದು ಮಗನನ್ನು ಕೇಳಿದರೆ ಸೂರುಕಟ್ಟಿನ ಕೆಳಗೆ ನಿಂತೇ ಇದ್ದ ಅವನು ಕಕರನಂತೆ ಮುಖ ನೋಡಿಕೊಂಡು ಯೋಚಿಸಲು ಮೊದಲು ಮಾಡಿದ, 'ಅದೇನು ಹ್ಯೇಳೋ'–ಎಂದು ಇನ್ನೊಂದು ಸಲ ಕೇಳಿದಮೇಲೆ, 'ನಂಗ್ ಗೊತ್ತಿಲ್ಲ ಕಣಮ್ಮ' ಎಂದ.

'ನಂಗ್ ಲ್ಯಕ್ಕವೆಲ್ಲ ಬರುತ್ತೆ ಅಂದ್ಯಲ್ಲೋ?'

ಈಗ ಸಿವಲಿಂಗ ಎಂದ: 'ಹೊನ್ನವಳ್ಳಿಯೋನ್‌ತಾವ ಹ್ವಾಗಿ ಕಲ್ತ್ಕಂಬಂದೆ ಅಂತಿದ್ದೆ. ಆ ಹ್ವನ್ನವಳ್ಳಿ ಪಾಪ್ರ್ ನನ್ ಮಗುಂಗೆ ಲ್ಯಕ್ಕ ಬತ್ತಿದ್ರೆ ನಿಂಗೆ ಹೇಳ್ಕೊಡ್ತಿದ್ದ. ಹೋಕ್ಕಳ್ಳಿ, ಈಗ್ಲೂ ಒಂದು ನಾಕ್ ವರ್ಸ ನಮ್ಮನೆ ಕಸದ ಮಂಕ್ರಿ ಹೊರು. ನಾನ್ ಕಲ್ಸ್‌ಕೊಡ್ತೀನಿ.

ಪಟೇಲ ಶಿವೇಗೌಡ ಹೇಳಿದ: 'ಹೋಕ್ಕಳ್ಳಿ. ಗಂಗವ್ವಾ, ಐವತ್ತು ರೂಪಾಯಿ ತಂದು ಮಡಗಿ. ಇವ್ನ ವಯಸ್ಸು ಏಟು ಅಂತ ಮ್ಯಾಲುಕ್ ಬರ್ದ್ ಹ್ಯೇಳುಸ್ತೀವಿ.'

'ದುಡ್ಡ್ಯಾಕ್ ಕೊಡಬೇಕು ಶಿವೇಗೌಡ?'

'ಅದೇನ್ ಸರ್ಕಾರವಲ್ವಾ? ಮಶ್ಗಿರಿ ಮಾತ್ ಕ್ಯಟ್ಕೊಂಡ್ಯಾ?'

ಇನ್ನು ಗಂಗಮ್ಮನಿಗೆ ಬೇರೆ ಮಾರ್ಗ ಉಳಿಯಲಿಲ್ಲ. ಐವತ್ತು ರೂಪಾಯಿ ಕೊಡದೆ ಮಗನ ವಯಸ್ಸಿನ ಲೆಕ್ಕ ಸಿಕ್ಕುವುದಿಲ್ಲ. ಅದಿಲ್ಲದೆ ಶ್ಯಾನುಭೋಗಿಕೆ ಕೈಗೆ ಬರುವುದಿಲ್ಲ. ಆದರೆ ಮನೆಯಲ್ಲಿ ಅಷ್ಟೊಂದು ಕೈಲಿ ದುಡ್ಡಿಲ್ಲ. ಮನೆಗೆ ಹೋಗಿ ತನ್ನ ಪೆಟಾರಿಯಲ್ಲಿ ಹುಡುಕಿ ನೋಡಿದಳು. ಮೂವತ್ತು ರಾಣಿತಲೆ ರೂಪಾಯಿ ಇತ್ತು. ಜೊತೆಗೆ ಆರು ಪಲ್ಲ ರಾಗಿ ಸೇರಿಸಿ ಶಿವಲಿಂಗನಿಗೆ ಒಪ್ಪಿಸಿ–'ಬ್ಯಾಗ ಇವನ ಲೆಕ್ಕ ತರಿಸಪ್ಪ. ನಮ್ಮ ಯಜಮಾನರ ಕಾಲದ ಶ್ಯಾನುಭೋಗ್‌ಕೆ. ಇವನು ಕೈಗೆ ತಗಂಡುದ್ದ ನಾನು ನೋಡಬೇಕು' ಎಂದಳು.

ಮತ್ತೆ ಮೂರು ತಿಂಗಳಾದರೂ ಅದರ ಬಗೆಗೆ ಏನೂ ಆಗಲಿಲ್ಲ. ಗಂಗಮ್ಮನೇ ಹೋಗಿ ಕೇಳಿದುದಕ್ಕೆ ಶಿವಲಿಂಗ ಹೇಳಿದ: 'ಸರ್ಕಾರೀ ಲ್ಯಕ್ಕ ಅಂದ್ರೆ ಈಟ್‌ಬ್ಯಾಗ ಬತ್ತೈತಾ? ಡಿಪ್ಟಿಕಮೀಶರಿಗೆ ಹ್ವಾಗಿ ಅಲ್ಲಿಂದ ದಿವಾನ್ ಮಿರ್ಜಾ ಸಾಹೇಬ್ರುನ್ನ ಮುಟ್ಟಿ ಬರಬೇಕು ನಿದಾನವಾಗಿ ಬತ್ತೈತೆ. ಅದ್ಯಾಕ್ ಜೊಣಚಿ ಹೊಕ್ಕಂಗ್ ಆಡ್ತೀರಾ, ವಸಿ ತಡ್ಕಳಿ.'

ಗಂಗಮ್ಮ ನಿರುಪಾಯಳಾಗಿ ಮನೆಗೆ ಬಂದು ಮಗನಿಗೆ ಹೇಳಿದಳು: 'ಚೆನ್ನಯ್ಯಾ ಇವ್ರು ಕೊಡೋದಿಲ್ಲ ಅಂತ ಕಾಣ್ಸುತ್ತೆ. ನೀನೇ ತಿಪಟೂರಿಗೆ ಹೋಗಿ ಅಮಲ್ದಾರ್ ದಣಿಗಳಿಗೆ ಅಡ್ಡಬಿದ್ದು ಹಾವಾಲ್ ಮಾಡ್ಕಂಡ್ ಬಾ ಹೋಗು.'

ತಾನೊಬ್ಬನೇ ಹೋಗಿ ಅಮಲ್ದಾರರನ್ನು ಕಾಣಲು ಚೆನ್ನಿಗರಾಯನಿಗೆ ಭಯವಾಯಿತು. ಅವರು ತನ್ನ ಮೇಲೆ ರೇಗಿದರೆ ಏನು ಮಾಡುವುದು? ತನಗೆ ನಿಜವಾಗಿಯೂ ಹದಿನಾರೇ ವರ್ಷವಾಗಿರಬಹುದು. ತನ್ನ ಜಾತಕವೇ ತಪ್ಪಿರಬಹುದು. 'ಅಮ್ಮಾ, ನಂಗೆ ಇನ್ನೂ ಹದಿನಾರು ವರ್ಷವೇ ಇರಭೌದು. ಇನ್ನೊಂದೆರ್ಡು ವರ್ಷ ತಡಿಯಾಣ ಕಣಮ್ಮ.'

'ಥೂ ಸುಳೀಮಗನೆ. ನಿನ್ ಹೆತ್ತೋಳು ಗಟ್ಟೀಮುಂಡೆಯಾಗಿ ಇಲ್ಲೇ ಇದೀನಿ. ನಂಗ್ ಗೊತ್ತಿಲ್ವೇನೋ ನಿನ್ ವಯಸ್ಸು? ಹತ್ತೊಂಬತ್ ತುಂಬ್ತಾ ಬಂತಲೋ. ಹೋಗಿ ಅಮಲ್ದಾರ್ ದಣಿಗಳಿಗೆ ಅಡ್ಡ ಬೀಳೋ ಮುಂಡೆಮಗನೆ'–ಗಂಗಮ್ಮ ಸಿಟ್ಟು ಬಂದು ಹೇಳಿದಳು.

'ನಂಗ್ ಹ್ಯದ್ರಿಕೆಯಾಗುತ್ತೆ ಕಣಮ್ಮ.'

'ನಾಚಿಕೆಯಾಗುಲ್ವೇನೋ ಹೆಣಿಗ್ ಸೂಳೇಮಗನೇ. ನಾನೂ ಬರ್ತೀನೋ ಜೊತೆಗೆ'– ಎಂದು ಗಂಗಮ್ಮ ಹೇಳಿದಳಾದರೂ ಸರ್ಕಾರಿ ಕೆಲಸಕ್ಕೆ ಹೆಂಗಸರು ಹೋಗಬಾರದೆಂಬ ನೆನಪಾಗಿ ಸುಮ್ಮನಾದಳು. ಹೆಂಗಸರು ಸರ್ಕಾರೀ ಲೆಕ್ಕವನ್ನು ಕೈಲಿ ಮುಟ್ಟಿದ್ದು ಗೊತ್ತಾದರೂ ಪೋಲೀಸಿಗೆ ಹಾಕ್ತಾರಂತೆ. ಇನ್ನು ತಾನೇ ಹೋಗಿ ಅಮಲ್ದಾರರ ಎದುರು ನಿಂತರೆ ಸುಮ್ಮನೆ ಬಿಡುತಾರೆಯೇ?

ಇನ್ನು ಬೇರೆ ಉಪಾಯವಿರಲಿಲ್ಲ. ಹೀಗೆಯೇ ಒಂದು ತಿಂಗಳು ಕಳೆದಮೇಲೆ ಗಂಗಮ್ಮನೇ ಹೇಳಿದಳು: 'ಹ್ಯಾಗಾದ್ರಾಗ್ಲಿ, ಒಂದು ಹ್ಯಜ್ಜೆ ನಾಗಲಾಪುರುಕ್ ಹೋಗಿ ನಿಮ್ಮಾವ್‌ನೋರನ್ನ ಕೇಳು, ಅವ್ರೇನಾದ್ರೂ ಮಾಡುಸ್ತಾರೆ.'

– 4 –

ಚೆನ್ನಿಗರಾಯನ ಮದುವೆಯಾಗಿ ಒಂದೂವರೆ ವರ್ಷವಾಗಿದ್ದರೂ, ಅವನು ಒಂದು ಸಲವೂ ಮಾವನ ಮನೆಗೆ ಹೋಗಿರಲಿಲ್ಲ. ಹೋಗುವ ಆಶೆ ಇಲ್ಲದೆಯಲ್ಲ. ಆದರೆ ಯಾರೂ ಅವನನ್ನು ಬಂದು ಕರೆದಿರಲಿಲ್ಲ. ತಾನಾಗೇ ಹೋಗಲು ನಾಚಿಕೆಯೋ ಅಂಜಿಕೆಯೋ ಅವನಿಗೆ ತಿಳಿಯದು. ಈಗ ಶ್ಯಾನುಭೋಗಿಕೆಯ ಕೆಲಸಕ್ಕೆ ಅಲ್ಲಿಗೆ ಹೋಗಿ ಬರುವಂತೆ ಅಮ್ಮನೇ ಹೇಳಿದಾಗ ಅವನಿಗೆ ಸಂತೋಷವಾಯಿತು. ಒಂದು ದಿನ ಬೆಳಿಗ್ಗೆ ಎದ್ದು ಸ್ನಾನ ಮಾಡಿ ಮೂರು ಆಚಮನಕ್ಕೇ ಸಂಧ್ಯಾವಂದನೆ ಮುಗಿಸಿ ಅವರೇಕಾಳಿನ ರೊಟ್ಟಿ ಕಾಯಿಚಟ್ನಿ ಮೊಸರು ತಿಂದು, ದಾರಿಗೆ ಇರಲಿ ಎಂದು ಮೂರು ರೊಟ್ಟಿ ಚಟ್ನಿ ಕಟ್ಟಿಕೊಂಡು ಮದುವೆಯ ಕೋಟು ಹಾಕಿ ಸಂಕಲಿಕೆಯ ಪಂಚೆಯುಟ್ಟು, ಎಕ್ಕಡ ಮೆಟ್ಟಿ ನಡೆಯುವ ಅಭ್ಯಾಸವಿಲ್ಲದುದರಿಂದ ಬರೀಕಾಲಿನಲ್ಲಿಯೇ ಹನ್ನೆರಡು ಮೈಲಿ ದೂರದ ನಾಗಲಾಪುರಕ್ಕೆ ಪಶ್ಚಿಮಾಭಿ ಮುಖವಾಗಿ ಹೊರಟ.

ರಾಮಸಂದ್ರದಿಂದ ಮೂರು ಮೈಲಿ ದೂರದಲ್ಲಿ ಒಂದು ಬೋರೆ ಹತ್ತಿ ಇಳಿದ ಮೇಲೆ ಚೋಳನಗುಡ್ಡ. ಕರೀಕಲ್ಲಿನ ಆ ಗುಡ್ಡದ ತಪ್ಪಲಿನಲ್ಲಿಯೇ ದೊಡ್ಡ ಮರಳಹಳ್ಳ. ಹಳ್ಳದ ಎರಡು ಕಡೆಗೂ ಅಲ್ಲದೆ ನಡುವೆಯೂ ಮುತ್ತಗದ ಗಿಡಗಳು ತುಂಬಿ ಬೆಳೆದಿವೆ. ದಾರಿಯ ಹಳ್ಳದಲ್ಲಿ ಸಿಕ್ಕುವ ಮರಳಿನ ಬಾವಿಯನ್ನು ಕಂಡ ಚೆನ್ನಿಗರಾಯ ಹತ್ತಿರ ಕೂತು ರೊಟ್ಟಿ ಚಟ್ನಿ ಮುಗಿಸಿ ಆರು ಸಲ ತುಂಬುಬೊಗಸೆ ನೀರು ಹೀರಿ ಮತ್ತೆ ಪ್ರಯಾಣ ಮುಂದುವರಿಸಿದ. ಚೋಳನ ಗುಡ್ಡವನ್ನು ಬಲಕ್ಕೆ ಬಿಟ್ಟು ಏರು ಇಳಿದು ನಡೆದರೆ ಕೆಮ್ಮಣ್ಣು ಹಳ್ಳ. ಅದರ ಆಚೆಯದೇ ಕಟಿಗೇಹಳ್ಳಿ. ಅದಕ್ಕೆ ಸ್ವಲ್ಪ ಮುಂದೆ ಸಿಕ್ಕುವ ಹೂವಿನಹಳ್ಳಿ ನಾಗಲಾಪುರದ ಫಿರ್ಕಕ್ಕೆ ಸೇರಿದ್ದು. ಆ ಊರಿನಿಂದ ಮುಂದೆ ಒಂದು ಮೈಲಿಗೇ ನಾಗಲಾಪುರದ ದೊಡ್ಡ ಕೆರೆ ಕಾಣಿಸುತ್ತದೆಯಾದರೂ, ಅದರ ಹೊರಕೋಡಿ ಮುಟ್ಟುವುದಕ್ಕೆ ಕತ್ತಾಳೆ ಓಣಿ, ಕಣಿಗಲೆ ಹಳ್ಳಗಳಲ್ಲಿ ಸಾಗಿ ಮತ್ತೆ ಎರಡು ಮೈಲಿ ನಡೆಯಬೇಕು. ಕೆರೆ ಏರಿಯ ಮೇಲೆ ಒಂದು ಮೈಲಿ ನಡೆದು ಊರ ಕಡೆ ಕೋಡಿ ದಾಟಿದನಂತರ ಸಂತೆಯ ತೋಪಿನಲ್ಲಿ ಸಾಗಿದರೆ ಅದೇ ನಾಗಲಾಪುರ.

ಊರ ಕೆರೆಯ ಈಚೆ ಕಡೆಯ ಕೋಡಿ ಹತ್ತಿರ ಬಂದಾಗ ಅವನಿಗೆ ಒಂದು ತರದ ಅಂಜಿಕೆಯಾಯಿತು. ತನ್ನನ್ನು ಯಾರಾದರೂ ಗುರುತು ಹಿಡಿದರೆ? ಈಗ ಯಾಕೆ ಬಂದೆ ಅಂದರೆ? ಮಾವನವರೇ ಹಾಗೆ ಕೇಳಿದರೆ ಏನಂತ ಹೇಳುವುದು? ಈ ಇವಳು ಹ್ಯಾಗಿರ್ತಾಳೋ, ಅವಳೇನು ನನ್ನ ಮಾತಾಡುಸ್ತಾಳೋ ಇಲ್ಲವೋ? ಮಾತಾಡುಸ್ದೇ ಇರ್ಲಿ, ಕತ್ತೆ ಮುಂಡೆಗೆ ಮಾಡ್ತೀನಿ. ಅಪ್ಪಿನ್ನೂ ಯಾವಾಗ್ಲೋ ನಮ್ಮೂರಿಗ್ ಬರೂದು! ಈಗ ಹದಿಮೂರು ತುಂಬಿದೆಯಂತೆ. ಇನ್ನು ಎಷ್ಟು ದಿನವೋ ದೊಡ್ಡೋಳಾಗೋದು–ಹೀಗೆಯೇ ಯೋಚಿಸಿಕೊಂಡು

ಕೆರೆಯ ಏರಿಯ ಮೇಲೆ ನಡೆಯುತ್ತಾ ಊರಿನ ಕಡೆಯ ಕೋಡಿಯನ್ನು ಮುಟ್ಟಿದ. ಗ್ರಾಮ ಪ್ರವೇಶಮಾಡುವಾಗ ಮತ್ತೆ ಅಂಜಿಕೆ. ಮದುವೆಯಲ್ಲಿ ಮೆರವಣಿಗೆ ಹೋಗಿದ್ದ ಬೀದಿಯಲ್ಲೇ ಈಗ ಹೋಗುತ್ತಿದ್ದಾನೆ. ಯಾರಾದರೂ ಗುರುತು ಹಿಡಿದರೆ!

ಗುಂಪಾಗಿ ಕಟ್ಟಿದ್ದ ಮನೆಗಳ ಆ ಊರನ್ನು ಪ್ರವೇಶ ಮಾಡಿದ ತಕ್ಷಣ ಒಂದೇ ಒಂದು ಬೀದಿಯ ಹೆಸರೇ ಶ್ಯಾನುಭೋಗರ ಬೀದಿ ಎಂದು. ಊರ ಶ್ಯಾನುಭೋಗ ಶ್ಯಾಮಣ್ಣನವರು ದರ್ಪದ ಅಧಿಕಾರ ಮಾಡುತ್ತಾರಂತೆ. ಅದಕ್ಕೇ ಬೀದಿಗೆ ಆ ಹೆಸರು. ಅಲ್ಲಿಂದ ನಡೆದು ಹೋದರೆ ಚೆನ್ನಿಗರಾಯನ ಮಾವನವರ ಮನೆ ಇರುವುದು ಓರೆ ಕೋರೆ ಸಂದಿಯಲ್ಲಿ. ಇಡೀ ಊರಿನ ಮನೆಗಳೆಲ್ಲ ಇದ್ದುದೇ ಹಾಗೆ. ಆದರೆ ಕಂಠೀಜೋಯಿಸರದು ಇದ್ದುದರಲ್ಲಿ ದೊಡ್ಡಮನೆ.

ಡವಡವ ಎನ್ನುತ್ತಿದ್ದ ಎದೆಯನ್ನು ಹದಕ್ಕೆ ತಂದುಕೊಂಡು ಅವನು ಅರೆತೆರೆದಿದ್ದ ಬಾಗಿಲನ್ನು ನೂಕಿ ಒಳಗೆ ಹೋದರೆ ಯಾವ ಶಬ್ದವೂ ಇರಲಿಲ್ಲ. ಒಂದು ನಿಮಿಷ ನಿಂತು ನೋಡಿ ಕೊನೆಗೆ ಧೈರ್ಯ ಮಾಡಿಕೊಂಡು ಗಟ್ಟಿಯಾಗಿ ಕೂಗಿದ: 'ಯಾರೊಳಗೆ?'

ಅಡಿಗೆಯ ಮನೆಯಿಂದ ಮುದುಕಿ ಕೇಳಿತು:'ಅದ್ಯಾರಪ್ಪ? ಕಾಳೇಗೌಡನೆ?'

'ಅಲ್ಲ , ನಮ್ದು ರಾಮಸಂದ್ರ. ಫೌತಿ ರಾಮಣ್ಣನೋರ ಮಗ ಚೆನ್ನಿಗರಾಯ ಅಂತ.'

'ಬಾರಪ್ಪ, ಬಾ, ಬಾ,' –ಎಂದು ಅಜ್ಜಿ ಒಳಗಿನಿಂದ ಓಡಿಬಂತು. ಒಂದು ಮಂದಲಿಗೆ ಹಾಕಿ–

'ಕೂತುಕೊ'ಎಂದು ಹೇಳಿ ಒಳಗಿನಿಂದ ಒಂದು ದೊಡ್ಡ ತಾಮ್ರದ ಪಂಚಪಾತ್ರೆಯ ತುಂಬ ಗಂಗೋದಕ ತಂದು ಮುಂದಿಟ್ಟು, 'ಊರ್ನಲ್ಲಿ ಯಲ್ಲಾ ಚನ್ನಾಗಿದಾರಾ?' ಎಂದು ಕೇಳುತ್ತಿರುವಾಗ ಹಿತ್ತಲ ಬಾಗಿಲಿನಿಂದ ಚೆನ್ನಿಗರಾಯನ ಹೆಂಡತಿ, ಒಗೆದು ಹಿಂಡಿದ ಒಂದು ಹಸಿರು ಸೀರೆ ಮತ್ತು ರೌಕೆಗಳನ್ನು ಕೈಲಿ ಹಿಡಿದುಕೊಂಡು, ಏನೂ ತಿಳಿಯದೆ ಒಳಗೆ ಬಂದು, ಒಳಗಿನ ಮಬ್ಬುಗತ್ತಲೆಯಲ್ಲಿ ಈ ಆಗಂತುಕನಿರುವುದು ತಿಳಿಯದೆ, ಹಿಂಡಿದ ಸೀರೆಯನ್ನು ಕೊಡವಲು ಅಲ್ಲಿಯೇ ನಿಂತುಕೊಂಡಳು.

'ನಂಜ, ನಿನ್ನ ಗಂಡ ಬಂದಿದಾನೆ. ಅಲ್ಲಿ ಕೂತಿದಾನೆ, ಕತ್ಲೇಲಿ ಕಾಣ್ಲಿಲ್ವೆ?'–ಎಂದು ಅಜ್ಜಿ ಹೇಳಿದುದೇ ತಡ, ಕೊಡವುತ್ತಿದ್ದ ಸೀರೆ ಹೆಜ್ಜೆಗೆ ಸಿಕ್ಕಿ ತಾನು ತೊಡರಿ ಬೀಳುವುದನ್ನೂ ಲೆಕ್ಕಿಸದೆ ಅವಳು ಹಿತ್ತಲು ಬಾಗಿಲಿನಿಂದ ಓಡಿ ಹೋಗಿಬಿಟ್ಟಳು.

ಅಜ್ಜಿಯೇ ಮನೆಯ ಅಳಿಯನಿಗೆ ಕೈ ಕಾಲು ತೊಳೆದುಕೊಳ್ಳಲು ನೀರು ಕೊಟ್ಟು ಬಿಸಿಯಾಗಿ ಮಜ್ಜಿಗೆಪಳದ್ಯ, ಹಪ್ಪಳ, ಉಪ್ಪಿನಕಾಯಿ, ತುಪ್ಪ, ಮೊಸರಿನ ಊಟ ಬಡಿಸಿತು. ಅಜ್ಜಿ ಬೇಡವೆಂದರೂ ಚೆನ್ನಿಗರಾಯನೇ–

'ಪರವಾಗಿಲ್ಲ ಹಾಕಿ' ಎಂದು ಹೇಳಿ ಒಂದೂವರೆ ಮುದ್ದೆ ಹಿಟ್ಟು ಬಡಿಸಿಕೊಂಡು ಊಟ ಮಾಡಿದ.

ಊಟವಾದ ಮೇಲೆ ತಿಳಿಯಿತು: ಮಾವನವರು ಸಾಮಾನ್ಯವಾಗಿ ಊರಿನಲ್ಲಿರುವುದೇ ಇಲ್ಲ. ಚೆನ್ನರಾಯಪಟ್ಟಣ, ನರಸೀಪುರ, ಹಾಸನ, ಹೀಗೆ ಕುದುರೆಯ ಮೇಲೆ ತಿರುಗುತ್ತಿರುತ್ತಾರೆ. ಈ ಸಲ ಹೋಗಿ ಇಪ್ಪತ್ತು ದಿನವಾಯಿತು. ಎರಡು ಮೂರು ದಿನಗದಲ್ಲಿ ಬರಬಹುದು. ಇನ್ನು ಇಲ್ಲಿಗೆ ಬಂದಮೇಲೆ ಅವರನ್ನು ಕಂಡು ತಾಜಾ ಕಲಂ ಮಾತನಾಡದೆ ಹೋಗುವಂತಿಲ್ಲ. ಅಜ್ಜಿಯೂ, ಇರುವಂತೆ ಬಲವಂತ ಮಾಡಿತು.

ಚೆನ್ನಿಗರಾಯ ಇಳಿದ. ಅಕ್ಕಪಕ್ಕದ ಗಂಡಸರು ಬಂದು ಅವನನ್ನು ತಿರುಗಾಡಲು ಕರೆದೊಯ್ದು ಕಂಠೀಜೋಯಿಸರ ಹೊಲ ಗದ್ದೆಗಳನ್ನು ತೋರಿಸಿಕೊಂಡು ಬಂದರು. ಮರುದಿನ ಬೆಳಿಗ್ಗೆ ಅಜ್ಜಿಯೇ ಅವನಿಗೆ ಎಣ್ಣೆ ಒತ್ತಿ ನೀರು ಹಾಕಿತು. ಆದರೆ ನಂಜಮ್ಮ ಮಾತ್ರ ಕಾಣಿಸಿಕೊಳ್ಳುತ್ತಿರಲಿಲ್ಲ. ಮಬ್ಬುಗತ್ತಲಿನಲ್ಲಿ ಒಗೆದ ಸೀರೆ ಕೊಡವುತ್ತಿದ್ದಾಗ ಅವಳನ್ನು ನೋಡಿದುದೆಷ್ಟೋ ಅಷ್ಟೇ. ತಾನಾಗಿಯೇ ಅಕ್ಕಪಕ್ಕದ ಮನೆಗೆ ಹೋಗಲು ಅವನಿಗೆ ಅಂಜಿಕೆಯೋ ಅಥವಾ ಮುಖೇಡಿತನವೋ! ಹೊತ್ತು ಹೋಗುತ್ತಿರಲಿಲ್ಲ. ಊರಿನಲ್ಲಿಯಂತೆಯೇ ಅವನು ಇಲ್ಲಿಯೂ ಬೆಳಿಗ್ಗೆ ಸ್ನಾನ ಮಾಡಿ, ಹಣೆಗೆ ವಿಭೂತಿ ಪಟ್ಟು ಬಿಗಿದು, ಒದ್ದೆ ಲಂಗೋಟಿಯ ಬದಲು ಒದ್ದೆ ಚೌಕಲುಟ್ಟು ಕೂತು, ಸಂಧ್ಯಾವಂದನೆಯ ಜೊತೆಗೆ ಸಾವಿರದೆಂಟು ಗಾಯಿತ್ರಿ ಮಾಡಿದ. ಇದನ್ನು ಕಂಡು ಅಜ್ಜಿಗೆ ಹಿಡಿಸಲಾರದಷ್ಟು ಹಿಗ್ಗು.

ನಾಲ್ಕನೆಯ ದಿನ ನಡುರಾತ್ರಿಯ ಸಮಯವಾಗಿತ್ತು. ಇದ್ದಕ್ಕಿದ್ದಹಾಗೆಯೇ ಬೀದಿಯ ನಾಯಿಗಳು ಬಗುಳತೊಡಗಿದವು. ಎಲ್ಲಿಂದಲೋ ಖಟಖಟ ಸದ್ದು ಕೇಳಿಸಿತು. ನಾಯಿಗಳ ಕೂಗು ಹೆಚ್ಚಾಯಿತು. ನಡುವೆಯೇ, 'ತೇರಿ ಭಾನ್‌ಚೋತ್' ಎಂಬ ಶಬ್ದ. ಖಟಖಟ ಸದ್ದು ಇವರ ಮನೆಯ ಹತ್ತಿರಕ್ಕೇ ಬಂದು, ಯಾರೋ ಮನೆಯ ಬಾಗಿಲನ್ನು ಬಡಿದಂತಾಯಿತು. ಜೊತೆಗೇ, 'ನಂಜಾ ಬಾಗಿಲು ತೆಗಿ' ಎಂದು ಕೂಗಿದ್ದು ಕೇಳಿಸಿತು. ಅವರೇ ಮಾವನವರು ಎಂದು ಧ್ವನಿಯಿಂದ ಚೆನ್ನಿಗರಾಯನಿಗೆ ತಿಳಿಯಿತು. ತಾನೇ ಎದ್ದು ಬಾಗಿಲು ತೆಗೆಯಲು ಒಂದು ರೀತಿಯ ಅಂಜಿಕೆ. ಸುಮ್ಮನೆ ಕಂಬಳಿ ಮುಸುಕು ಹಾಕಿಕೊಂಡು ಅದರೊಳಗೆ ಸಹ ಕಣ್ಣು ಮುಚ್ಚಿ ಮಲಗಿಬಿಟ್ಟ.

ಬಂದಿರುವವರು ತಂದೆ ಎಂಬುದು ಅಡಿಗೆಯ ಮನೆಯಲ್ಲಿ ಅಜ್ಜಿಯ ಜೊತೆಯಲ್ಲಿ ಮಲಗಿದ್ದ ನಂಜಮ್ಮನಿಗೆ ತಿಳಿಯಿತು. ಆದರೆ ಗಂಡ ಹೊರಗಿನ ಪಡಸಾಲೆಯಲ್ಲಿ ಮಲಗಿದ್ದುದರಿಂದ, ತಾನೇ ಹೋಗಿ ಬಾಗಿಲು

ತೆಗೆಯಲು ನಾಚಿಕೆಯಾಗಿ ಅವಳು ಅಜ್ಜಿಯನ್ನು ತಿವಿದು ಎಬ್ಬಿಸಿದಳು. ಸೀಮೆ ಎಣ್ಣೆಯ ಬುಡ್ಡಿ ಹೊತ್ತಿಸಿ ಬಂದು ಅಜ್ಜಿ ಬಾಗಿಲು ತೆಗೆಯಿತು. ಕುದುರೆಯನ್ನು ಈ ಬಾಗಿಲಿನ ಒಳಗಿನಿಂದಲೇ ಹಿತ್ತಿಲು ಕಡೆಗೆ ಕರೆದುಕೊಂಡು ಹೋಗಿ ಕಟ್ಟಿ ಬಂದು ಕಂಠೀಜೋಯಿಸರು ಕೇಳಿದರು: 'ಇದ್ಯಾರು ಮಲಗಿರೋದು?'

'ಚೆನ್ನಿಗರಾಯ ಬಂದಿದಾನೆ. ನಾಕು ದಿನವಾಯ್ತು. ನಿನ್ನೇ ಕಾಯ್ತಿದ್ದ.'

' ಚೆನ್ನಿಗರಾಯಾ'–ಎಂದು ತಲೆಯ ಮೇಲೆ ಹೊಡೆದಂತಹ ಧ್ವನಿಯಲ್ಲಿ ಒಂದು ಸಲ ಜೋಯಿಸರು ಕೂಗಿದರು. 'ನಿದ್ದೆ ಬಂದಿದೆ ಏನೋ, ಎಬ್ಬಿಸ್‌ಬ್ಯಾಡ' ಎಂದು ಅಜ್ಜಿ ಹೇಳಿದ ಮೇಲೆ ಅವರು ಸುಮ್ಮನಾದರು. ಊಟವಾಗಿದ್ದುದರಿಂದ ತಿನ್ನಲು ಏನೂ ಬೇಡವೆಂದರು. ಒಂದು ಸಲ ಹೊಗೆಸೊಪ್ಪು ಹಾಕಿಕೊಂಡ ಮೇಲೆ, ಹಾಸಿಗೆ ಹಾಕಿಕೊಡಲು ಮಗಳನ್ನು ಎಬ್ಬಿಸದೆ ತಾವೇ ಪಡಸಾಲೆಯಲ್ಲಿ ಚೆನ್ನಿಗರಾಯ ಮಲಗಿದ್ದ ಪಕ್ಕದ ಅಂಕಣದಲ್ಲಿ ಜಾನ ಎಳೆದುಕೊಂಡು ತಮ್ಮ ಬೂಟ್ಸು, ಕೋಟು, ನಿಕ್ಕರುಗಳನ್ನು ತೆಗೆದು ಪಂಚೆಯುಟ್ಟು ಮಲಗಿದರು.

– 5 –

ಬೆಳಿಗ್ಗೆ ಹತ್ತು ಗಂಟೆಗೆ ಎದ್ದ ಅವರು ಅಳಿಯನ ಸಮಾಚಾರ ವಿಚಾರಿಸಿದರು. ಎಲ್ಲವನ್ನೂ ತಿಳಿಸಿ, ಸಿವಲಿಂಗ ತಮ್ಮಿಂದ ಐವತ್ತು ರೂಪಾಯಿ ವಸೂಲು ಮಾಡಿಕೊಂಡದ್ದನ್ನೂ ಅವನು ಹೇಳಿದಾಗ ಕೇಳಿದರು: 'ನಿನ್ನ ತಲೇಲಿ ಬುದ್ಧಿ ಇತ್ತೋ ಜೇಡಿಮಣ್ಣು ತುಂಬಿತ್ತೋ? ಶ್ಯಾನುಭೋಗಿಕೆ ರೂಲು ಗೊತ್ತಿಲ್‌ದೋನು ನೀನು ಏನು ಮಾಡ್ತೀಯಾ ಮಣ್ಣಾಗಟ್ಟಿ?'

ಚೆನ್ನಿಗರಾಯ ಸೂಕ್ಷ್ಮವಾಗಿ ನಡುಗುತ್ತಾ ತಲೆ ತಗ್ಗಿಸಿ ಕುಳಿತುಬಿಟ್ಟ. ತಾನು ಅಲ್ಲಿಗೆ ಬಂದ ದಿನವೇ ವಿಷಯವನ್ನು ಹೇಳಿದ್ದ. ಅವನು ಈಗ ಅದನ್ನು ಮಾವನವರಿಗೆ ಹೇಳುವಾಗ ಅಜ್ಜಿ ಹತ್ತಿರವೇ ಇತ್ತು. ಅಳಿಯನನ್ನು ಹೀಗೆ ಅಂದದಕ್ಕೆ ಅಜ್ಜಿಯೇ ಬಾಯಿ ಹಾಕಿ, 'ಇದೇನೋ ಕಂಟೀ, ಹೀಗಂತೀಯಾ? ಅವನು ಹುಡುಗ, ತಿಳೀಲಿಲ್ಲ. ನಿನ್ ಬಾಯ್ಲಿ ಯಾವಾಗ್ಲೂ ವರಟು ಮಾತೇಯಾ ಬರೂದು? ಹೋಗಿ ಅವನ ಹಕ್ಕು ಅವನಿಗೆ ಕೊಡಿಸಿ ಬಾ' ಎಂದಿತು.

ಕಂಠೀಜೋಯಿಸರು ಮತ್ತೆ ಮಾತನಾಡಲಿಲ್ಲ. ಎದ್ದು ಸ್ನಾನ ಮಾಡಿ ಸಂಧ್ಯಾವಂದನೆಯ ಮಂತ್ರ ಮುಗಿಸಿ, ಒಳಗೆ ನಂಜಮ್ಮ ಮಾಡಿ ಅಜ್ಜಿ ಹೊರಕ್ಕೆ ತಂದುಕೊಟ್ಟ ಅಕ್ಕಿ ತಾಲಿಪ್ಪಿಟ್ಟು ಬದನೆಕಾಯಿ ಎಣ್ಣೆಗಾಯಿಯನ್ನು ಅಳಿಯನೊಡನೆ ಕೂತು ತಿಂದು ಮುಗಿಸಿದರು. ಒಂದು ಸಲ ಹೊಗೆಸೊಪ್ಪು ಅಗೆದು ನಾಲ್ಕೈದು ಸಲ ಉಗುಳಿ ಬಂದಮೇಲೆ ರಾಮಸಂದ್ರದ ಸ್ಥಳವಿದ್ಯಮಾನದ ಬಗೆಗೆ ನಾಲ್ಕೈದು ಪ್ರಶ್ನೆ ಕೇಳಿದರು. ಚೆನ್ನಿಗರಾಯ ತನಗೆ ತಿಳಿದಂತೆ ಉತ್ತರ ಹೇಳಿದ. ಜೋಯಿಸರು, ಅವರ ಗದ್ದೆ ಹೊಡೆಯುತ್ತಿದ್ದ ಮೂಲೆಮನೆ ಹೊನ್ನನನ್ನು ಕರೆದು ಅವನ ಕೈಗೆ ಒಂದು ಚೀಟಿ ಬರೆದುಕೊಟ್ಟು, ತಕ್ಷಣ ಶ್ರವಣಬೆಳಗೊಳಕ್ಕೆ ಹೋಗಿ ಅವರ ಮಗ ಪೋಲೀಸು ಕಾನಿಸ್ಟೇಬಲ್ ಕಲ್ಲೇಶನಿಗೆ ಮುಟ್ಟಿಸಿ ಜವಾಬು ತರುವಂತೆ ಅಟ್ಟಿದರು. ಜೋಯಿಸರು ಅಳಿಯನ ಜೊತೆ ಮತ್ತೆ ಯಾವ ಮಾತನ್ನೂ ಆಡಲಿಲ್ಲ. ಅವರು ಊರಿಗೆ ಬರುವ ಸುದ್ಧಿ ತಿಳಿದು, ಮಾಟ ಮದ್ದುಗಳಿಗೆ ಕೇಳುವ, ದೆವ್ವ ಪಿಶಾಚಿಗಳಿಗೆ ಕಟ್ಟು ಮಾಡಿಸುವ ಕೆಲವರು ಬಂದು ಮನೆಗೆ ತುಂಬಿಕೊಂಡರು. ಅಳಿಯನಿಗೆ ಬೇಜಾರಾಗುತ್ತದೆಂದು ಅಜ್ಜಿ ಅವನನ್ನು ಅಡಿಗೆಯ ಮನೆಯ ಒಳಕ್ಕೇ ಕರೆದು ಕೂರಿಸಿಕೊಂಡಿತು. ನಂಜಮ್ಮ ಪೆಟ್ಟಿಯ ಮನೆಗೆ ಹೋದಳು.

ಹೊನ್ನ ಮಾರನೆಯ ಬೆಳಿಗ್ಗೆ ಹನ್ನೊಂದು ಗಂಟೆಗೆ ಶ್ರವಣಬೆಳಗೊಳದಿಂದ ಬಂದು ಜೋಯಿಸರಿಗೆ ಒಂದು ಕಾಗದ ಕೊಟ್ಟ. ಅವನು ಮನೆಗೆ ಹೋದಮೇಲೆ ಅವರು ತಮ್ಮ ತಾಯಿಗೆ ಹೇಳಿದರು: 'ಅಕ್ಕಮ್ಮ, ನಾನು ಇವನು ರಾತ್ರಿ ರಾಮಸಂದ್ರಕ್ಕೆ ಹೋಗ್ತೀವಿ.'

'ಇದೇನೋ ಇವತ್ತೇ ಹೊರಟಿರಿ, ನಾನು ಏನೂ ತಿಂಡಿಗಿಂಡಿ ಮಾಡಿಲ್ಲ.'

'ಸಂಜೆ ಹೊತ್ತಿಗ್ ಮಾಡಿಬಿಡು. ರಾತ್ರಿ ಊಟಕ್ಕೆ ಪಾಯ್‌ಸ ಗೀಯ್‌ಸ ಮಾಡು.'

'ನೀನಂತೂ ಕೊಳ್ಳಿದೆವ್ವದ ಹಾಗೆ ರಾತ್ರಿ ಹೊತ್ತು ತಿರುಗ್ತೀಯಾ. ಅವನನ್ನ ಕತ್‌ಲೇಲಿ ಯಾಕೆ ಕರ್ಕಂಡ್ ಹೋಗ್ತೀಯಾ?''

'ಅವನೇನು ಹೆಣ್ಣೆ? ಗಂಡು ಅಂತ ತಾನೆ ನನ್ನ ಮಗಳನ್ನ ಕೊಟ್ಟಿರೋದು!'

ಕತ್ತಲೆಂದರೆ ಹೆಚ್ಚು ಭಯವಿಲ್ಲದಿದ್ದರೂ ಕತ್ತಲಿನಲ್ಲಿ ದೆವ್ವ ಪಿಶಾಚಿಗಳು ಸಂಚರಿಸುವ ನೆನಪಾಗಿ ಚೆನ್ನಿಗರಾಯನ ಎದೆ ಸಂಕುಚಿಸಿತು. ಅಲ್ಲದೆ ಚೋಳೇಶ್ವರನ ಗುಡ್ಡದ ಹತ್ತಿರ ರಾತ್ರಿಯ ಹೊತ್ತು ಕಿರುಬಗಳು ಇರುತ್ತವಂತೆ. ಅದನ್ನು ಮಾವನವರಿಗೆ ಹೇಳಿದರೆ ತನ್ನನ್ನೇ ಬೈದಾರೆಂಬ ಹೆದರಿಕೆ. ಉಭಯ ಸಂಕಟದಲ್ಲಿ ಸಿಕ್ಕಿ ಅವನು ಸುಮ್ಮನಾದ.

ಅಜ್ಜಿ ಗಡಿಬಿಡಿಯಲ್ಲಿಯೇ ಕೋಡುಬಳೆ ಬೇಯಿಸಿತು. ನಂಜಮ್ಮ ನೆನ್ನೆಯೇ ಚಕ್ಕುಲಿ ಹಿಟ್ಟು ಬೀಸಿದ್ದಳು. ಅದನ್ನೂ ಕರಿದಾಯಿತು. ರಾತ್ರಿ ಪಾಯಸದ ಊಟವಾದಮೇಲೆ ಜೋಯಿಸರು ಕಾಲುಚೀಲ ಬೂಟು, ಬಿಳೀ ನಿಕ್ಕರು, ಕಾಖಿ ಕೋಟು ಹಾಕಿ ತಲೆಗೆ ಕಾಖಿ ಹ್ಯಾಟು ಇಟ್ಟುಕೊಂಡರು. ಅದೇ ದಿನ ಬೆಳಿಗ್ಗೆ ಹಜಾಮರವನು

ತಿದ್ದಿ ಕತ್ತರಿಸಿದ್ದ ತುಂಬು ಮೀಸೆ ಮುಖದಲ್ಲಿ ಅಡರಿ ಕಾಣುತ್ತಿತ್ತು. ಕುದುರೆಗೆ ಜೀನು ಲಗಾಮುಗಳನ್ನು ಏರಿಸಿ, ಅವರ ಬಟ್ಟೆ ಬರೆಗಳನ್ನು ಹಸಿಬೆ ಚೀಲಕ್ಕೆ ಹಾಕಿ ಅದನ್ನು ಜೀನಿನ ಮುಂದೆ ಎರಡು ಕಡೆಗೂ ಇಳಿಬಿಟ್ಟರು. ಹೊರಡುವ ಮುನ್ನ ಚೆನ್ನಿಗರಾಯ ಅಜ್ಜಿಗೂ ಮಾವನವರಿಗೂ ನಮಸ್ಕರಿಸಿದ. 'ನಂಜಾ, ನಿನ್ನ ಗಂಡನಿಗೆ ನಮಸ್ಕಾರ ಮಾಡು ಬಾ'– ಎಂದು ಅಜ್ಜಿ ಕೂಗಿತು. ಅವಳು ಬರಲಿಲ್ಲ. ಎರಡನೆಯ ಸಲ ಕಂಠಿಯೇ ಕೂಗಿದಮೇಲೆ ಬಂದು ದೂರದಿಂದ ನೆಲಮುಟ್ಟಿ ನಮಸ್ಕಾರ ಮಾಡಿ ಹೊರಟುಹೋದಳು. ಹೆಂಡತಿಯನ್ನು ನೋಡಬೇಕೆಂದು ಚೆನ್ನಿಗರಾಯ ಆಶೆಪಟ್ಟನಾದರೂ ಮಾವನವರು ಎದುರಿಗೇ ಇದ್ದುದರಿಂದ ಭಯಪಟ್ಟು ಕಣ್ಣುಗಳನ್ನು ಆ ಕಡೆ ಹೊರಳಿಸಲಿಲ್ಲ.

ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಅವರು ಮನೆ ಬಿಟ್ಟರು. ಆ ದಿನವೇ ಅಮಾವಾಸ್ಯೆಯಾಗಿದ್ದುದರಿಂದ ಎಲ್ಲೆಲ್ಲಿಯೂ ಗಾಢ ಕತ್ತಲೆ ಕವಿದಿತ್ತು. ಊರಿನಿಂದ ಹೊರಗೆ ಬಂದ ಮೇಲೆ ಜೋಯಿಸರು ಅಳಿಯನಿಗೆ– 'ನೀನೂ ಕುದುರೆ ಹತ್ತು. ಇಬ್ಬರೂ ಕೂತ್ಕಳಾಣ' ಎಂದರೆ ಅವನು, 'ನಂಗೆ ಅಭ್ಯಾಸವಿಲ್ಲ. ಹೆದರಿಕೆಯಾಗುತ್ತೆ' ಅಂದ. 'ನಾನು ಹಿಡ್‌ಕಂಡಿರ್ತೀನಿ' ಎಂದರೆ, 'ಊಹೂಂ. ನೀವೇನಾರ ಅನ್ನಿ. ನನ್ ಕೈಲಿ ಆಗೂದೇ ಇಲ್ಲ' ಎಂದು ಹಟ ಹಿಡಿದ.

'ಆಯ್ತು, ನಡೆದೇ ಹೋಗಾಣ್ ಬಾ'–ಎಂದು ಅವರು, ಕಾಳಕತ್ತಲೆಯಲ್ಲೂ ಸ್ಪಷ್ಟವಾಗಿ ದಾರಿ ಕಾಣುತ್ತಿರುವಂತೆ ದಾಪುಗಾಲು ಹಾಕಿದರು. ಹಿಂದೆ ಕುದುರೆ ಬರುತ್ತಿತ್ತು. ಅದರ ಹಿಂದೆ ನಾಲ್ಕು ಮಾರು ದೂರದಲ್ಲಿ ಚೆನ್ನಿಗರಾಯ ಓಡಿ ಓಡಿ ಬರುತ್ತಿದ್ದ. ಮಾವನವರು ಮೌನವಾಗಿ ನಡೆಯುತ್ತಿದ್ದರು. ಅಳಿಯನಿಗೆ ಕಸಿವಿಸಿ ಮಾತ್ರವಲ್ಲ, ಹೆದರಿಕೆಯೂ ಆಗುತ್ತಿತ್ತು. ಕತ್ತಲೆಯಲ್ಲಿ ಸುತ್ತಲೂ ಬೀಸುತ್ತಿದ್ದ ಗಾಳಿ ಸುಂಯ್ ಎನ್ನುತ್ತಿತ್ತು.

– 6 –

ಅವರು ಕೆರೆ ಏರಿ ದಾಟಿ ಹೂವಿನ ಹಳ್ಳಿ, ಕಟಿಗೆಹಳ್ಳಿಯನ್ನು ಹಿಂದೆ ಹಾಕಿ ಚೋಳೇಶ್ವರನ ಗುಡ್ಡದ ಪಶ್ಚಿಮದ ಕಿಬ್ಬಿಗೆ ಮೊದಲು ಸಿಕ್ಕುವ ಕೆಮ್ಮಣ್ಣುಹಳ್ಳವನ್ನೂ ದಾಟುತ್ತಿದ್ದರು. ಆಗಲೇ ಎಂಟು ಮೈಲಿಯ ದಾರಿ ಕಳೆದಿತ್ತು. ಕಂಠೀಜೋಯಿಸರು ಮುಂದೆ ಮುಂದೆ ನಡೆಯುತ್ತಿದ್ದರು. ಅವರ ಹಿಂದೆ ಎತ್ತರವಾದ ಬಿಳೀ ಕುದುರೆ. ಹಿಂದೆ ಹಿಂದೆ ಸೋತ ಕಾಲಿನಲ್ಲಿ ಅರ್ಧ ಭಾಗ ಓಡುತ್ತಾ ಅರ್ಧ ಭಾಗ ನಡೆಯುತ್ತಾ ಬರುತ್ತಿದ್ದ ಚೆನ್ನಿಗರಾಯನಿಗೆ ಕುದುರೆಯ ಬಿಳೀ ಬಣ್ಣವು ಕತ್ತಲೆಯಲ್ಲೂ ಮಬ್ಬಾಗಿ ಕಾಣುತ್ತಿತ್ತು. ಮಾವನವರು ಇದ್ದಕ್ಕಿದ್ದಹಾಗೆಯೇ ನಿಂತರು. ಕುದುರೆಯೂ ನಿಂತಿತು. ಇನ್ನೇನು ಕುದುರೆಯ ಹಿಂಭಾಗಕ್ಕೆ ಡಿಕ್ಕಿ ಹೊಡೆಯಬೇಕು ಎನ್ನುವಷ್ಟರಲ್ಲಿ ಅಳಿಯನೂ ನಿಂತ. ಸ್ವಲ್ಪ ದೂರ ಮುಂದೆ ಅವರ ದಾರಿಯ ಬಲಭಾಗದಲ್ಲಿ ಬೆಳಕು ಕಾಣಿಸುತ್ತಿತ್ತು. 'ಸ್ವಲ್ಪ ಮುಂದೆ ಬಾ'– ಎಂದು ಮಾವ ಕರೆದರು. ಅವನು ಕುದುರೆಯನ್ನು ಬಳಸಿಕೊಂಡು ಅವರ ಹತ್ತಿರ ಹೋದ. ಬೆಳಕಿನ ಕಡೆಗೆ ಕೈ ತೋರಿಸಿ, 'ಅಲ್ಲಿ ನೋಡು' ಎಂದರು. ನೋಡಿದುದೇ ತಡ, ಅವನಿಗೆ ಮೈ ಬೆವೆತುಹೋಗಿ ಕೈ ಕಾಲು ನಡುಗಲು ಮೊದಲಾಯಿತು.

ಸುಮಾರು ಸೊಂಟದೆತ್ತರದ ಒಂದು ಕಾಳಿಯ ವಿಗ್ರಹ. ವೀರಮಂಡಿ ಹಾಕಿಕೊಂಡು ನಿಂತಿದೆ. ತೆರೆದ ಬಾಯಿಯಿಂದ ರಕ್ತರಂಜಿತವಾದ ಅದರ ನಾಲಿಗೆಯು ಹೊರಕ್ಕೆ ಇಳಿಬಿದ್ದು ರಕ್ತವನ್ನು ನೆಕ್ಕುತ್ತಿರುವಂತೆ ಇದೆ. ಕೊರಳಿಗೆ ಕೆಂಪು ಕಣಿಗಲೆ ಹೂವಿನ ದೊಡ್ಡ ಮಾಲೆ. ಎರಡು ಕಡೆಗೂ ಮಣ್ಣಿನ ಹಣತೆಯ ದೀಪಗಳು ಕಕ್ಕಡದಂತೆ ಉರಿಯುತ್ತಿವೆ. ಎದುರಿಗೆ ಮೂರು ಕೋಳಿಗಳು ತಲೆ ಕಡಿಯಲ್ಪಟ್ಟು ಬಿದ್ದಿವೆ. ಪಕ್ಕದಲ್ಲಿಯೇ, ಕತ್ತರಿಸಿದ ಬೂದುಗುಂಬಳಕಾಯಿಯ ಎರಡು ಹೋಳುಗಳು; ಮೂರು ಚಿಪ್ಪು ಬಾಳೆಯ ಹಣ್ಣುಗಳು. ಎಲ್ಲೆಲಿ ಲ್ಲಯೂ ಯಥೇಚ್ಛವಾಗಿ ಕುಂಕುಮವನ್ನು ಚೆಲ್ಲಾಡಿದೆ. ಅರಿಶಿನ ಕುಂಕುಮವು ಕಾಳಿಯ ಮೈ ಮೇಲೆಲ್ಲ ಸವರಲ್ಪಟ್ಟಿದೆ. ಹಸೀ ನೂಲು, ತಾಮ್ರದ ತಗಡು, ತಾಯಿತ, ಮನುಷ್ಯರದೋ ಅಥವಾ ಪ್ರಾಣಿಗಳದೋ ಎಲುಬು ಸುತ್ತಲೂ ಬಿದ್ದಿವೆ.

ಜಡವಾಗುತ್ತಿದ್ದ ಕತ್ತಲೆಯನ್ನು ಸೀಳಿ ನಿಂತ ಕೆಂಡದಂತೆ ಕಾಣುತ್ತಿತ್ತು ಅದು.

'ನೋಡ್ದ್ಯಾ?'–ಮಾವನವರು ಕೇಳಿದರು.

'ಹೂಂ'–ಎಂದು ಹೇಳುವುದಕ್ಕೂ ಅಳಿಯನ ನಾಲಗೆ ತೊದಲುತ್ತಿತ್ತು.

'ನೋಡು, ಅಲ್ಲಿಗೆ ಹೋಗಿ ಆ ಬಾಳೆಹಣ್ಣಿನ ಚಿಪ್ಪುಗಳನ್ನು ತಗಂಡು ಬಾ. ಆ ವಿಗ್ರಹದ ಎದೆಗೆ ಒಂದು ಸಲ ಒದ್ದು ಕೆಡವು. ನಿನಗೆ ದುಡ್ಡು ಸಿಕ್ಕುತ್ತೆ.'

ಈ ಮಾತನ್ನು ಕೇಳಿ ಅವನು ಥರಗುಟ್ಟಿದ. 'ಬ್ಯಾಡಿ ಬ್ಯಾಡಿ'–ಎಂದು ತೊದಲುತ್ತಾ ಹೇಳಿದ. 'ಹಾಗಾದ್ರೆ ನೀನು ಕುದುರೆ ಲಗಾಮು ಹಿಡ್‌ಕೊ'–ಎಂದು ಅವರು ಅದನ್ನು ಅವನ ಕೈಲಿ ಇಟ್ಟು ಮುಂದೆ ಹೋದರು. ನೇರವಾಗಿ ಹತ್ತಿರ ಹೋಗಿ ಬಾಳೆಹಣ್ಣಿನ ಚಿಪ್ಪುಗಳನ್ನು ಕೈಗೆ ತೆಗೆದುಕೊಂಡರು. ಎರಡು ನಿಮಿಷ ಪರೀಕ್ಷಿಸುವವರಂತೆ ವಿಗ್ರಹವನ್ನು ನೋಡಿ, ನಂತರ ಅದರ ಭುಜಗಳು, ನಾಲಗೆ, ತಲೆ, ವೀರಮಂಡಿಯ ಚಿಪ್ಪುಗಳ ಮೇಲೆಕೈಹಾಕಿ ಅದೇನೋ ತೆಗೆದುಕೊಂಡರು. ಬೆಳ್ಳಿಯ ರೂಪಾಯಿ ನಾಣ್ಯಗಳಿರಬೇಕು. ನಂತರ

ತಮ್ಮ ಎಡಗಾಲಿನ ಬೂಟ್ಸಿನಿಂದ ಅದರ ಎದೆಗೆ ಒದೆದರು. ಅದು ಮುರಿದು ಬಿತ್ತು. ಬಿದ್ದ ಜಾಗದಲ್ಲಿಯೇ ಕೆಲವು ನಾಣ್ಯಗಳು ಉದುರಿದವು. ಅದರೊಡನೆಯೇ ಒಂದು ಚಿನ್ನದ ಕಾಸೋ ಎಂಥದೋ ಇದ್ದಂತೆ ತೋರಿತು. ಅವೆಲ್ಲವನ್ನೂ ಆರಿಸಿ ಜೇಬಿಗೆ ಹಾಕಿಕೊಂಡು ಹಿಂತಿರುಗಿ ಬಂದು ಕುದುರೆಯ ಲಗಾಮು ಹಿಡಿದುಕೊಂಡು, 'ನಡಿ' ಎಂದು ಹೇಳಿ ಮುಂದೆ ಹೊರಟರು.

ಈಗಲೂ ಕಠೀಜೋಯಿಸರು ಮುಂದೆ, ನಡುವೆ ಕುದುರೆ, ಚೆನ್ನಿಗರಾಯ ಹಿಂದೆ ಆದರು. ಮಾರಿಯ ವಿಗ್ರಹದ ಕಡೆಗೇ ಅವನು ಉಳಿದ. ಆ ಕಡೆಗೆ ಹಿಂತಿರುಗಿ ನೋಡಲು ಭಯ. ನೋಡದಿದ್ದರೆ ಅದು ತನ್ನನ್ನೇ ಹಿಂಬಾಲಿಸಿ ಬರುತ್ತಿದ್ದು ಬೆನ್ನಮೇಲೆ ಅಪ್ಪಳಿಸಿ ಕುತ್ತಿಗೆ ಹಿಡಿದೀತೆಂಬ ಹೆದರಿಕೆ. ಜೊತೆಗೆ ಮೌನವು ಮೊದಲಿನಂತೆಯೇ ಗುಂವ್‌ಗುಡುತ್ತಿತ್ತು. ಮಾವನವರು ಮಾತನಾಡದೆ ದೆವ್ವದಂತೆ ದುಡು ದುಡು ವೇಗದಲ್ಲಿ ನಡೆಯುತ್ತಿದ್ದಾರೆ. ಏನಾದರೂ ಮಾತನಾಡಿದರೆ ಭಯ ಕಡಿಮೆಯಾದೀತೆಂದು ಅವನು ಕೇಳಿದ: 'ಅದ್ಯೆದ್ಯದ್ಯಂತದು?'

'ಇವತ್ತು ಅಮಾವಾಸ್ಯೆಯಲ್ವೆ?'

'ಅದದದುಕ್ಕೇನ್ ಮಾಮ್ಮಾಡಿದಾರೆ?'

'ಯಾರಿಗೋ ಮಾಟ ಮಾಡ್ಸಿದಾರೆ. ಕರೀಗೆರೆ ವೀರಾಚಾರಿ ಅಂತ ಇದಾನೆ. ಅವನೇ ಇಂಥಾದೆಲ್ಲಾ ಮಾಡೋನು. ಈಗ ಮಾಡ್ಸೋರ ಎದುರಿಗೆ ಹೀಗೆಲ್ಲ ಮಾಡ್ಸಿ ಅವರ ಜೊತೇಲೇ ಅವ್ನೂ ಹೋಗಿದಾನೆ. ಆಮ್ಯಾಲೆ ಬಂದು ವಿಗ್ರಹದೊಳಗೆ ನಾಲಿಗೆ ಮ್ಯಾಲೆ, ಭುಜದ ಮ್ಯಾಲೆ, ಇಟ್ಟ ದುಡ್ಡು ಬಾಳೆಹಣ್ಣು ಯಲ್ಲಾನೂ ತಗಂಡ್ ಹೋಗ್ತಾನೆ. ಇವತ್ತು ವಾಪಸ್ ಬಂದ್ ನೋಡ್ಲಿ, ಅವನಿಗೆ ಸಿಕ್ಕುತ್ತೆ ಮಣ್ಣಾಗಟ್ಟಿ.'

'ಆ ಆ ಅದುನ್ನ ಮುಟ್ಟಿ ತಗಂಡ್ರಲಾ, ನಿನಿನಿಮ್ಗೇನೂ ಆಗುಲ್ವೆ?'

'ಎದೆ ಮುಟ್ಟಿ ನೋಡ್ಕಾಬೇಕು. ಗಟ್ಟಿಯಾಗಿದ್ರೆ ಒಂದ್ ಕೂದ್ಲೂ ಕಿತ್ಕಳಾಕ್ ಆಗುಲ್ಲ. ಇಲ್ದೆ ರಕ್ತ ಕಾರ್ಕಂಡ್ ಬಿದ್‌ಸಾಯೂವಂಥ ಹೆಣ್ಣಿಗ್ ನನ್‌ಮಕ್ಳೂ ಇರ್ತಾರೆ.'

ಕೊನೆಯ ಮಾತನ್ನು ಕೇಳಿ ಚೆನ್ನಿಗರಾಯನಿಗೆ ಹೆದರಿಕೆಯಾಯಿತು. ಅಷ್ಟರಲ್ಲಿ ಗುಡ್ಡದ ತಿಟ್ಟು ಕಳೆದು, ಮಾಟ ಮಾಡಿಸಿದ್ದ ಆ ಸ್ಥಳವು ಕಣ್ಣಿಗೆ ಕಾಣದಷ್ಟು ಹಿಂದೆ ಹೋಗಿತ್ತು. ಅವನು ಒಂದು ಸಲ ಧೈರ್ಯ ಮಾಡಿ ಹಿಂದಕ್ಕೆ ತಿರುಗಿ ನೋಡಿದ. ಕತ್ತಲಿನ ಕಪ್ಪು ವಿನಾ ಮತ್ತೆ ಏನೂ ಕಾಣುತ್ತಿರಲಿಲ್ಲ. ಆಗಲೇ ಗುಡ್ಡದ ಇಳಿವು ಪ್ರಾರಂಭವಾಗಿತ್ತು. ಮುತ್ತುಗದ ಮರಗಳ ಹಳ್ಳವೂ ಕಳೆಯುತ್ತಾ ಬಂದಿತ್ತು. ಇಡೀ ದಾರಿಯು ಚಿರಪರಿಚಿತವಾಗಿದ್ದಂತೆ ಮಾವನವರು ಧಡ ಧಡ ಧಡನೆ ನಡೆದು ಸಾಗುತ್ತಿದ್ದರು.

## – 7 –

ಇಬ್ಬರೂ ಮನೆ ಮುಟ್ಟುವ ವೇಳೆಗೆ ನಡುರಾತ್ರಿ ಕಳೆದು ಎರಡು ಗಂಟೆಯಾಗಿತ್ತು. ಕಂಠೀಜೋಯಿಸರ ಮಗ ಪೋಲೀಸ್ ಕಾನಿಸ್ಟೇಬಲ್ ಕಲ್ಲೇಶ ತನ್ನ ಜೊತೆಯ ಒಬ್ಬ ದಫೇದಾರನನ್ನು ಕರೆದುಕೊಂಡು ಗಂಗಮ್ಮನ ಮನೆಗೆ ಬಂದಿದ್ದ. ತಮ್ಮ ಬೀಗ ಕಲ್ಲೇಶನ ಗುರುತು ಗಂಗಮ್ಮನಿಗೂ ಅಪ್ಪಣ್ಣಯ್ಯನಿಗೂ ಹತ್ತಿತ್ತು. ಅವರಿಬ್ಬರೂ ಬಂದು ಅರ್ಧ ಗಂಟೆ ಮಾತ್ರ ಆಗಿತ್ತು. ಇಬ್ಬರೂ ಕಾಖಿ ದಿರಿಸು ಹಾಕಿ, ಕಾಲಿಗೆ ಬ್ಯಾಂಡೇಜು ಬಿಗಿದು, ಪೋಲೀಸು ಬೂಟು ಕಟ್ಟಿದ್ದರು. ಬೆನ್ನಿನ ಮೇಲಿಂದ ಇಳಿಯುವ ಉಣ್ಣೆಯ ಪೋಲೀಸ್ ಓವರ್‌ಕೋಟು ಹಾಕಿ ಕೈಲಿ ಹಂಟರ್‌ಕೇನ್ ಹಿಡಿದಿದ್ದರು. ಈ ಹೊತ್ತಿನಲ್ಲಿ ಇವರಿಬ್ಬರೂ ಬಂದ ಕಾರಣ ಗಂಗಮ್ಮನಿಗೆ ತಿಳಿಯಲಿಲ್ಲ, ಅವರೂ ಹೇಳಲಿಲ್ಲ. ಬಂದವರಿಗೆ ಬಿಸಿಯಾಗಿ ತಾಲೀಪಿಟ್ಟು ಮಾಡಿಕೊಟ್ಟಳು. ಅವಳಿಗೆ ಕಾಫಿ ಕಾಯಿಸಲೂ ಬರದು. ಅಷ್ಟು ಹೊತ್ತಿನಲ್ಲಿ ಹಾಲೂ ಇರಲಿಲ್ಲ. ತಾವೇ ತಂದಿದ್ದ ಕಾಫೀಪುಡಿ ಹಾಕಿ ಅವರು ಬೆಲ್ಲದ ಡಿಕಾಕ್ಷನ್ ಕುಡಿದರು. ಚೆನ್ನಿಗರಾಯ ಮಾವನವರೊಡನೆ ಇನ್ನೇನು ಮನೆಗೆ ಬರುತ್ತಾನೆಂದು ಅವರಿಂದಲೇ ತಿಳಿಯಿತು.

ತಮ್ಮ ಕುದುರೆ ಮತ್ತು ಅಳಿಯನ ಸಮೇತ ಬಂದ ಕಂಠೀಜೋಯಿಸರು ಮಗನಿಗೆ ಶ್ಯಾನುಭೋಗಿಕೆಯ ವಿಷಯ ವಿವರಿಸಿದರು. 'ಈಗಲೇ ನಡಿ, ಛಾರ್ಜು ಕೊಡಿಸಿಬಿಡಾಮ'– ಎಂದು ಅವರು ಹೇಳಿದಾಗ ಕಲ್ಲೇಶನ ಜೊತೆ ಬಂದಿದ್ದ ದಫೇದಾರರು ಕೇಳಿದರು: ಹ್ಯಾಗೆ ಕೊಡಿಸೋದು?'

'ನೀವು ಸುಮ್ಮನೆ ನನ್ನ ಜೊತೆ ಬನ್ನಿ'–ಎಂದು ಕಠೀಜೋಯಿಸರು ಹೊರಗೆ ಬಂದು ಕುದುರೆ ಏರಿ ಅಳಿಯನಿಗೆ ಹೇಳಿದರು: 'ನಡಿ, ಅವರ ಮನೆ ತೋರ್ಸು.'

ಚೆನ್ನಿಗರಾಯನಿಗೆ ಏನೂ ತಿಳಿಯಲಿಲ್ಲ–ಒಂದು ರೀತಿಯ ಭಯವಾಯಿತು. ಏಕೆ ಎಂದು ಕೇಳಿದರೆ ಅವರು ಏನನ್ನುವರೋ ಎಂಬ ಮತ್ತೊಂದು ರೀತಿತಿಯ ಹೆದರಿಕೆ ಬೇರೆ. ಅವನು ಮುಂದೆ ಮುಂದೆ ನಡೆದ. ಹಿಂದೆ ಕುದುರೆಯ ಮೇಲೆ ಕಂಠೀಜೋಯಿಸರು. ಎರಡು ಪಕ್ಕಕ್ಕೂ ಇಬ್ಬರು ಪೋಲೀಸು ಆಸಾಮಿಗಳು. ಸಿವಲಿಂಗೇಗೌಡನ ಮನೆಯ ಮುಂದೆ ಬಂದು ನಿಂತಮೇಲೆ ಜೋಯಿಸರು, 'ಬಾಗಿಲು ಬಡಿದು ಅವನನ್ನು ಎಬ್‌ಸು' ಎಂದರು.

ಚೆನ್ನಿಗರಾಯ ಬಾಗಿಲು ಬಡಿದಾಗ ಒಳಗಿನಿಂದ ಸಿವಲಿಂಗನ ಹೆಂಡತಿ–'ಯಾರೂ?' ಎಂದು ಕೂಗಿದಳು.

'ನಾನು ಕಣ್ ಶಿವಮ್ಮ, ಸಿವಲಿಂಗೇಗೌಡ್ರುನ್ನ ಎಬ್‌ಸು–ಎಂದು ಚೆನ್ನಿಗರಾಯ ಹೇಳುತ್ತಿರುವಷ್ಟರಲ್ಲಿ

ಒಳಗಿನಿಂದ ಎಚ್ಚರವಾಗಿ ಅವನೇ ಬಂದು ಬಾಗಿಲು ತೆಗೆದು ನಿದ್ದೆಗಣ್ಣಿನಲ್ಲಿ, 'ಇದೇನಯ್ಯಾ ಈಟ್ ಹೊತ್ನಲ್ಲಿ ನಿದ್ದೆ ಕೆಡುಸ್ತೀಯಾ, ನಿಂಗ್ಯಾರೂ ಏಳೋರ್ ಕೇಳೋರ್ ಇಲ್ವಾ?' ಎನ್ನುತ್ತಿದ್ದವನೇ, ಭಾರೀ ಕುದುರೆಯ ಭೀಮಸವಾರರನ್ನೂ ಪೋಲೀಸರನ್ನೂ ಕಂಡ ತಕ್ಷಣ ಎದೆಯ ಹೊಡೆತ ಗಕ್ಕನೆ ನಿಂತಂತೆ ಆಗಿ ಮಾತನ್ನು ಅಲ್ಲಿಗೇ ನಿಲ್ಲಿಸಿದ. ಕುದುರೆಯ ಸವಾರರು–'ದಫೇದಾರ್, ಇವನ್ನ ಹಿಡಿದು ಅರೆಸ್ಟ್ ಮಾಡಿ' ಎಂದು ಗತ್ತಿನಿಂದ ಹೇಳಿದರು. ಪೋಲೀಸಿನವರಿಬ್ಬರೂ ಹೋಗಿ ಅವನ ತೋಳುಗಳನ್ನು ಹಿಡಿದುಕೊಂಡರು. ಒಳಬಾಗಿಲಿನಲ್ಲಿಯೇ ಇದ್ದ ಶಿವಮ್ಮ, 'ಅಯ್ಯೋ, ಕೆಟ್ನಲ್ಲೋ ಶಿವನೇ, ನನ್ ಗಂಡ ಏನ್ ಮಾಡಿದ್ದ ತ್ಯಪ್ಪ' ಎಂದು ಕೂಗಿಕೊಳ್ಳುವಷ್ಟರಲ್ಲೇ ಕಲ್ಲೇಶ, 'ಬಾಯಿ ಬಿಟ್ರೆ ನಿನ್ನೂ ಹಿಡ್‌ಕಂಡು ಹೋಗಿ ಬೇಡಿ ಹಾಕ್ತೀವಿ. ಮುಚ್ಚು' ಎಂದ. ಅವಳು ತನ್ನ ಎರಡು ಕೈಗಳನ್ನೂ ಎತ್ತಿ ಬಾಯಮೇಲೆ ಇಟ್ಟು ಅಮುಕಿಕೊಂಡಳು.

ಇವರು ಕುದುರೆಯಿಂದ ಇಳಿದು–'ಒಳಗೆ ನಡೀರಿ'ಎಂದರು. ಸಿವಲಿಂಗನನ್ನು ದಬ್ಬಿಕೊಂಡು ಪೋಲೀಸಿನವರು ಒಳಗೆ ನಡೆದರು. ಚೆನ್ನಿಗರಾಯನೊಡನೆ ಬಂದ ಕುದುರೆ ಸವಾರರು ಒಳಗಿನಿಂದ ಬಾಗಿಲು ಮುಚ್ಚಿ ಸಿವಲಿಂಗನನ್ನು ಕೇಳಿದರು: 'ಹುಟ್ಟಿದ ವರ್ಷದ ಲೆಕ್ಕ ತರುಸ್ತೀನಿ ಅಂತ ಐವತ್ತು ರೂಪಾಯಿ ತಿಂದಿದೀಯಾ. ನಮಗೆ ಕಂಪ್ಲೇಂಟು ಬಂದಿದೆ. ನಿನ್ನ ಫಾಶಿ ಹಾಕಿಸ್‌ಬಿಡ್ತೀವಿ ಬದ್ಮಾಷ ಬೋಳೀಮಗನೆ.'

ಚೆನ್ನಿಗರಾಯ, 'ಅ ಅ ಅದ್ ಹೋಕ್ಕಳ್ಳಿ ಬಿಡಿ' ಎನ್ನುತ್ತಿದ್ದಂತೆಯೇ ಸವಾರರು ಅವನ ಕಡೆಗೆ ತಿರುಗಿ–'ನೀನು ಬಾಯಿ ಮುಚ್ಚು'ಎಂದರು. ಅವನೂ ಶಿವಮ್ಮನಂತೆ ಕೈಗಳನ್ನು ಬಾಯಿಯ ಮೇಲೆ ಇಟ್ಟುಕೊಂಡ. ಅವರು ಸಿವಲಿಂಗನ ಕಡೆ ತಿರುಗಿ, 'ಇದು ರಾಜಾ ಸರ್ಕಾರ. ದಿವಾನ್ ಮಿರ್ಜಾಸಾಹೇಬರ ಹುಕುಂ. ಗಾಂಚಾಲೀ ಚಲ್ತಾನೈ. ವಾರೇ ಬಾಂಚೋತ್ ಭಾಡ್‌ಕಾ ಭೋಸೂಡೀಮಗನೆ.' ಸರ್ಕಾರದ ಹೆಸರು ಹೇಳಿ ತಿಂದಿದೀಯಾ. ನಿನ್ನ ಗಲ್ಲಿಗೇರಿಸ್ಬೇಕು ಅಂತ ಯುರೋಪಿಯನ್ ಇಂಗ್ಲೀಷ್ ದೊರೆಗಳಿಂದ ಆರ್ಡರ್ ಬಂದಿದೆ. ಇಸ್ಕೋ ಹಾಥ್ ಬೇಡಿ ಲಗಾವೋ' ಎನ್ನುತ್ತಿದ್ದಂತೆ ಸಿವಲಿಂಗ ಥರಥರ ನಡುಗಿ ಹೋದ. ಅವನ ಹೆಂಡತಿ ಹಾಗೆಯೇ ನೆಲಕ್ಕೆ ಕುಸಿದು ಇವರಿಗೆ ಅಡ್ಡಬಿದ್ದಳು. 'ಆ ಐವತ್ತು ಬೆಳ್ಳಿಯ ರೂಪಾಯ್ ತಗಂಡ್ ಬಾ'–ಎಂದು ಸವಾರರು ಹೇಳಿದರು. ಸಿವಲಿಂಗ–'ಕ ಕ ಕಬ್ಬುಣದ್ ಪೆಟ್ಟಿಗೇಲೈತೆ, ಬಾ ಬಾ ಬಾ ಬಾಕುಲ್ ತಿಗ್‌ದು ಕೊಡೇ' ಎಂದ.ಅವಳು ಹಾಸಿಗೆಯ ಕೆಳಗಿದ್ದ ಬೀಗದ ಕೈಯಿಂದ ಪೆಟ್ಟಿಗೆಯ ಬೀಗ ತೆಗೆದು ಐವತ್ತು ಬೆಳ್ಳಿಯ ರೂಪಾಯಿಗಳನ್ನು ಎಣಿಸಿ ತಂದು ಒಪ್ಪಿಸಿದಳು. 'ಇನ್ಸ್‌ಪೆಕ್ಟರ್, ಈ ದುಡ್ಡು ತಗಂಡು ಜೇಬಿನಲ್ಲಿ ಇಟ್ಕಳಿ. ನಾಳೆ ತ್ರೆಜರಿಗೆ ಕಟಬೇಕು' ಎಂದು ಸವಾರರು ಹೇಳಿದ ತಕ್ಷಣ ದಫೇದಾರರು ಅದನ್ನು ಜೇಬಿಗೆ ಸೇರಿಸಿದರು.

ಸವಾರರು ಮುಂದಿನ ಪಾಯಿಂಟಿಗೆ ಬಂದರು: 'ಬರಾವರ್ದಾರನಿಗೆ ಶ್ಯಾನುಭೋಗ್‌ಕೆ ಕೊಡಲ್ಲ ಅಂತ ತರ್ಲೆ ಮಾಡ್ತೀಯಾ ಯಾಕೋ ಬೇಕೂಫ್ ಬೋಸುಡಿ ಬಾನ್‌ಚೋತ್ ಭಾಡ್‌ಕೋವ್ ಬೋಳೀಮಗನೆ?'

'ಇ ಇ ಇಲ್ಲ......' ಎಂದು ಸಿವಲಿಂಗ ತೊದಲಿದ.

'ಅವನ ಕೈ ಬಿಡಿ'–ಸವಾರರು ಹುಕುಂ ಮಾಡಿದರು. ಪೋಲೀಸರು ಅವನ ತೋಳುಗಳನ್ನು ಬಿಟ್ಟಮೇಲೆ, 'ಒಂದು ಗಜ ಕಾಗದ, ದೌತಿ ಸ್ಟೀಲು ತಗಂಡು ಕೂತುಕೊ' ಎಂದರು.

ಸಿವಲಿಂಗ ಹಾಗೆಯೇ ಮಾಡಿದ ಮೇಲೆ ಒಂದು ಸಲ ಹುಲಿಯಂತೆ ಹೂಂಕರಿಸಿ ಹೇಳಿದರು: 'ನಾನು ಹೇಳ್ದ ಹಾಗೆ ಬರೀಬೇಕು, ಬಾನ್‌ಚೋತ್. ಹೂಂ. ಸನ್ ಸಾವಿರದ ಒಂಬೈನೂರ......ರಲ್ಲು ಮೈಸೂರು ಸಂಸ್ಥಾನದ ಮಹಾರಾಜ ಸರ್ಕಾರದ ತುಮಕೂರು ಜಿಲ್ಲಾ ತಿಪಟೂರು ತಾಲ್ಲು ಕಂನ ಕೆರೆ ಹೋಬಳಿ ರಾಮಸಂದ್ರ ಗ್ರಾಮದ ಬರಾವರ್ದಾರ್ ಫೌತಿ ರಾಮಣ್ಣನವರ ಹಿರೀಮಗ ಹಕ್ಕುದಾರ ಶ್ಯಾನುಭೋಗ್ ಚೆನ್ನಿಗರಾಯರಿಗೆ ಸದರಿ ಜಿಲ್ಲಾ ಸದರಿ ಹೋಬಳಿ ಸದರಿ ಗ್ರಾಮದ, ಬದಲಿ ಶ್ಯಾನುಭೋಗನಾಗಿದ್ದ ಸಿವಲಿಂಗೇಗೌಡನಾದ ನಾನು ಬರೆದುಕೊಟ್ಟ ಛಾರ್ಜುಪಟ್ಟಿ ಏನೆಂದರೆ– ಈ ತಹಲ್‌ವರೆವಿಗೆ ನೋದಿದ ಫಿರ್ಕಾ ಶ್ಯಾನುಭೋಗಿಕೆ ನಿಮ್ಮದೇ ಆಗಿದ್ದು ನೀವು ಮೈನರ್ ಆಗಿದ್ದುದರಿಂದ ನಾನು ನೋಡುತ್ತಿದ್ದು ಈಗ ನೀವು ಮೆಜಾರ್ಟಿಗೆ ಬಂದು ಒಂದೂವರೆ ವರ್ಷವಾಗಿರುವುದರಿಂದ ಸದರಿ ಛಾರ್ಜನ್ನು ಈ ದಿನ ನಿಮಗೆ ಕೊಟ್ಟು, ದಾಖಲು ಲೆಕ್ಕಪತ್ರವೆಲ್ಲ ತಮಾಮ್ ನೀವು ಜಡ್ತಿಮಾಡಿಕೊಂಡ ಮೇರೆಗೆ ವಹಿಸಿಕೊಟ್ಟಿದ್ದೇನೆ ಎಂಬುದರಲ್ಲಿ ನನ್ನ ತಕರಾರು ಏನೂ ಇಲ್ಲ. ಅಷ್ಟೇ ಅಲ್ಲದೆ ನನಗೆ ಸಖತ್ ಖಾಯಿಲಾ ಆಗಿ ಸರ್ಕಾರಿಕೆಲಸ ನೋಡೋಕೆ ಸಾಧ್ಯವಿಲ್ಲವಾಗಿರುವುದರಿಂದ ಸರ್ಕಾರದಿಂದ ಮೇಲಿನ ಹುಕುಂ ಬರುವ ಮೊದಲೇ ನಿಮಗೆ ಎಲ್ಲಾ ವಹಿಸಿದೀನಿ. ನೀವು ಎಲ್ಲಾನೂ ನೋಡಿಕೊಳ್ಳೂದು–ಎಂದು ಬರೆದುಕೊಟ್ಟ ಛಾರ್ಜು ಪಟ್ಟಿ ವಿವರಗಳು: ಒಂದನೇ ನಂಬರ್ ಖಾತೇವಾರ್ ಪತ್ರಿಕೆ, ಎರಡನೇ ನಂಬರ್ ಬಂಜರ್‌ತಖ್ತೆ ಇತ್ಯಾದಿ ಬಾರಾ ನಮೂನೆ ಲೆಕ್ಕಪತ್ರಗಳು. ಬದಲಿ ಶ್ಯಾನುಭೋಗ್ ಸಿವಲಿಂಗೇಗೌಡನ ರುಜು.'

ಛಾರ್ಜುಪಟ್ಟಿಯನ್ನು ತಮ್ಮ ಕೈಗೆ ತೆಗೆದುಕೊಂಡಮೇಲೆ ಅವರು ಹೇಳಿದರು: 'ಲೆಕ್ಕದ ಪುಸ್ತಕ ಎಲ್ಲ ತಂದಿಡು.' ಸಿವಲಿಂಗ ಪುಸ್ತಕಗಳ ಗಂಟನ್ನೆಲ್ಲ ತಂದು ಮುಂದೆ ಇಟ್ಟಮೇಲೆ ಹೇಳಿದರು: 'ಇವುನ್ನ ನೀನು ನಿನ್ನ ಹೆಂಡತಿ ಹೊತ್ಕಂಡ್‌ಬಂದು ಇವರ ಮನೆಗೆ ಇಡಿ.'

ಸಿವಲಿಂಗ, ಅವನ ಹೆಂಡತಿ, ಅಷ್ಟರಲ್ಲಿ ಎದ್ದು ಹೆದರಿ ನಡುಗುತ್ತಾ ನಿಂತಿದ್ದ ಅವನ ಮಕ್ಕಳು, ಎಲ್ಲರೂ

ಲೆಕ್ಕದ ಕಟ್ಟುಗಳನ್ನು ಹೊತ್ತುತಂದು ಚೆನ್ನಿಗರಾಯನ ಮನೆಗೆ ಹಾಕಿದಮೇಲೆ–'ಬಾಲ ಅಳ್ಳಾಡಿಸಿದ್ರೆ ನಿಕಾಲ್ ಮಾಡಿಬಿಡುತ್ತೇನೆ. ಎರಡೂ ಮುಚ್ಕಂಡು ಮನೆಗೆ ಹೋಗಿ ಮಲಕ್ಕೊ. ಪೋಲೀಸಿನೋರು ಇಲ್ಲೇ ಗಸ್ತು ಹೊಡೀತಾರೆ' ಎಂದರು.

ಸಿವಲಿಂಗ ಹೆಂಡ್ತಿ ಮಕ್ಕಳೊಡನೆ ಮನೆಗೆ ಹೋಗಿ ಬಾಗಿಲು ಹಾಕಿಕೊಂಡು ಮಲಗಿದ. ಅನಿರೀಕ್ಷಿತವಾಗಿ ಹೀಗೆ ಸ್ವಪ್ನದಲ್ಲಿ ನಡೆದುಹೋದಂತೆ ಇಷ್ಟೆಲ್ಲ ಆದುದು ಅವನನ್ನು ನಡುಗಿಸಿಬಿಟ್ಟಿತ್ತು. ಆದರೆ ತಮಗೆ ಹೆಚ್ಚಿಗೆ ಯಾವ ತೊಂದರೆಯೂ ಆಗಲಿಲ್ಲವೆಂದು ಅವನ ಹೆಂಡತಿ ಸಮಾಧಾನಪಡಿಸಿದಳು.

ಪೋಲೀಸಿನವರಿಬ್ಬರೂ ಮಲಗಿ ನಿದ್ದೆ ಮಾಡಿದರು. ಗಂಗಮ್ಮ, ಅಪ್ಪಣ್ಣಯ್ಯ, ಚೆನ್ನಿಗರಾಯರು ಅಡಿಗೆಯ ಮನೆಯಲ್ಲಿ ಮಲಗಿದರು. ಚೆನ್ನಿಗರಾಯನಿಗೆ ನಿದ್ದೆ ಬರಲಿಲ್ಲ. ಏನೋ ಒಂದು ರೀತಿಯ ಗಾಬರಿಯಿಂದ ಜ್ವರ ಬಂದಂತೆ ಆಗಿತ್ತು. ಕಂಠೀಜೋಯಿಸರು ರಾತ್ರಿ ಮಲಗಿದರೋ ಇಲ್ಲವೋ ಯಾರೂ ನೋಡಲಿಲ್ಲ. ಅವರಿಗೆ ಹಸಿವಾಗಿದ್ದಿರಬಹುದು. ಬೆಳಿಗ್ಗೆ ಏಳುವ ವೇಳೆಗೆ ಅವರು, ರಾತ್ರಿ ಮಾಟದ ಚೌಡಿಯ ಹತ್ತಿರದಿಂದ ತಂದ ಬಾಳೆ ಹಣ್ಣಿನಲ್ಲಿ ಎರಡು ಚಿಪ್ಪನ್ನು ಸುಲಿದು ತಿಂದು ಸಿಪ್ಪೆಯನ್ನು ಕಂಬದ ಹತ್ತಿರ ಗುಡ್ಡೆಹಾಕಿದ್ದರು. ಬೆಳಿಗ್ಗೆ ಏಳು ಗಂಟೆಗೆ ಅಪ್ಪಣ್ಣಯ್ಯನನ್ನು ಕೂಗಿ, ಕುಳವಾಡಿಯನ್ನು ಕರೆದುಕೊಂಡು ಬರುವಂತೆ ಹೇಳಿದರು. ಅವನು ಬಂದ ತಕ್ಷಣ ಹುಕುಂ ಮಾಡಿದರು: 'ತಮ್ಮಟೆ ತಗಂಡು ಊರಿನಲ್ಲೆಲ್ಲ, ಶ್ಯಾನುಭೋಗಿಕೇನ ಹಕ್ಕುದಾರ್ ಚೆನ್ನಿಗರಾಯನಿಗೆ ಕೊಟ್ಟೈತೆ. ಯಲ್ಲಾ ಅವರು ಹೇಳ್ದಂಗೆ ಕೇಳ್ಬೇಕು. ಇಲ್ದೆ ಇದ್ರೆ ತಕ್ಸೀರ್ ಆಗುತ್ತೆ ಅಂತ ಡಂಗುರ ಹಾಕು. ಪೋಲೀಸ್ನೋರು ಒಳಕ್ಕೆ ಮಲಕ್ಕಂಡಿದಾರೆ. ಅವರ ಟೋಪಿ ಕಂಬದ ತಾವ ಐತೆ, ಕಾಣ್ತದಾ?'

ಕುಳವಾಡಿ ಬಾಗಿ ಕೈಮುಗಿದು ಹೊರಟು ಹೋದ. ಚೆನ್ನಿಗರಾಯರು ಶ್ಯಾನುಭೋಗರಾದುದು ಅರ್ಧ ಗಂಟೆಯಲ್ಲಿಯೇ ಊರಿನಲ್ಲೆಲ್ಲಾ ಡಂಗುರವಾಯಿತು. ಅದೇ ಫಿರ್ಕದ ಇತರ ಊರುಗಳಾದ ಕುರುಬರಹಳ್ಳಿ, ಲಿಂಗಾಪುರಗಳಿಗೂ ಸಾರಲು ಕುಳುವಾಡಿ ಹೋದ.

ಹನ್ನೊಂದು ಗಂಟೆಗೆ ಎದ್ದಮೇಲೆ ಪೋಲೀಸಿನವರಿಗೆ ಬಿಸಿನೀರಿನ ಸ್ನಾನ, ಹಾಲು ಬೆಲ್ಲದ ಕಾಫಿಗಳಾಗಿ ಊಟವೂ ಆಯಿತು. ಕಲ್ಲೇಶನ ಸಂಗಡ ಬಂದಿದ್ದ ದಫೇದಾರರಿಗೆ ಇಪ್ಪತ್ತೈದು ರೂಪಾಯಿ ಬಿಟ್ಟು ಉಳಿದ ಇಪ್ಪತ್ತೈದನ್ನು ಕೈಲಿ ತೆಗೆದುಕೊಂಡು ಕಂಠೀಜೋಯಿಸರು ಕುದುರೆ ಏರಿ, ಶೇಕ್‌ದಾರರನ್ನು ಕಂಡು ಶ್ಯಾನುಭೋಗಿಕೆ ಬದಲಿಯನ್ನು ಕ್ರಮಪಡಿಸಲು ಕಂಬನಕೆರೆಗೆ ಹೋದರು. ಊಟವಾದಮೇಲೆ ಕಲ್ಲೇಶ ಮತ್ತು ದಫೇದಾರರು ಶ್ರವಣಬೆಳಗೊಳಕ್ಕೆ ಪ್ರಯಾಣ ಮಾಡಿದರು.

ರಾತ್ರಿ ಹತ್ತುಗಂಟೆಯ ಹೊತ್ತಿಗೆ ಕಂಠೀಜೋಯಿಸರು ಕುದುರೆಯಮೇಲೆ ಹಿಂತಿರುಗಿ ಬಂದು ನೋಡುತ್ತಾರೆ: ಹೊಸ ಶ್ಯಾನುಭೋಗ ಚೆನ್ನಿಗರಾಯರಿಗೆ ಕೆಂಡಕ್ಕಿಂತ ಬಿಸಿಯಾಗಿ ಜ್ವರ ಬಂದಿದೆ. ಗಂಗಮ್ಮ ಮಗನ ತಲೆಗೆ ಪಟ್ಟು ಹಾಕಿ ಬಿಗಿಯಾಗಿ ಒಂದು ಅರಿವೆ ಬಳಲು ಕಟ್ಟಿದ್ದಾಳೆ. ಚೆನ್ನಿಗರಾಯರು ಒಂದೇ ಸಮನೆ ತೊದಲು ಮಾತಿನಲ್ಲಿ ಬಡಬಡಿಸುತ್ತಿದ್ದಾರೆ. ಆಯ್ಯಯ್ಯಯ್ಯೋ, ನಾನೇನು ಒದೀಲಿಲ್ಲ. ನನ್ನ ತಪ್ಪಾಯ್ತು ಕಣವ್ವಾ.....ಎಂಬ ಬಡಬಡಿಕೆ ಅವರಲ್ಲಿ ಯಾರಿಗೂ ಅರ್ಥವಾಗುತ್ತಿಲ್ಲ. ಒಆಲ್ಗೆ ಬಂದು ನೋಡಿದ ತಕ್ಷಣ ಕಂಠೀಜೋಯಿಸರಿಗೆ ಅದರ ಕಾರಣ ತಿಳಿಯಿತು. ಒಂದು ಓಲೆಗರಿ ತರಿಸಿ ಅದರ ಮೇಲೆ ಮಂಡಲ ಬರೆದು ಸುರುಳಿ ಮಾಡಿ, ಅರಿಶಿನದ ನೂಲು ಸುತ್ತಿ ಹೊಸೆದ ದಾರ ಬಿಗಿದು, ಒಂದು ತೆಂಗಿನಕಾಯಿ ಒಡೆದು ಅದರ ನೀರನ್ನು ಮೂರು ಸಲ ನೀವಾಳಿಸಿ ಫಳ್ ಎನ್ನುವಂತೆ ರೋಗಿಯ ಮುಖಕ್ಕೆ ಎರಚಿ, ಓಲೆಗರಿಯ ತಾಯತವನ್ನು ಅವರ ಕೊರಳಿಗೆ ಕಟ್ಟಿ ಈಚಲು ಪೊರಕೆಯಿಂದ ಮೂರು ಸುತ್ತು ನೀವಾಳಿಸಿ ತಲೆಯ ಮೇಲೆ ನಾಲ್ಕು ಬಡಿದರು. ಗಂಗಮ್ಮನಿಗೆ ಹೇಳಿ ಲವಂಗ ಮೆಣಸು ಶುಂಠಿಗಳ ಕಷಾಯ ಕುದಿಸಿಸಿ, ಕುಡಿಸಿದರು. ಶ್ಯಾನುಭೋಗರು ತೆಪ್ಪಗೆ ಮಲಗಿ ನಿದ್ರೆ ಮಾಡಿದರು.

ನಾಳೆ ಬೆಳಿಗ್ಗೆ ಏಳುವ ವೇಳೆಗೆ ಜ್ವರ ಬಿಟ್ಟು ಹೋಗಿತ್ತು.

## ಅಧ್ಯಾಯ 3

### – 1 –

ನಂಜಮ್ಮ ದೊಡ್ಡವಳಾಗಿ, ಪ್ರಸ್ತವಾಗಿ ಮನೆಗೆ ಬಂದಳು. ಶ್ಯಾನುಭೋಗ ಚೆನ್ನಿಗರಾಯರಿಗೆ ಹೆಂಡತಿಯ ಮೇಲೆ ಆಶೆ. ಅವಳನ್ನು ಆಳಬೇಕೆಂಬ ಹುಮ್ಮಸ್ಸು ಸಹ. ಹೆಂಡತಿಯನ್ನು ಆಳುವುದೆಂದರೇನು? ಆಗಾಗ್ಗೆ ಹೊಡೆಯುವುದು. ಆದರೆ ಅದು ಅವರಿಗೆ ಆಗುವ ಕೆಲಸವಲ್ಲ. ಗಾಂಚಾಲಿ ಮಾಡುವ ಒಂದು ಹಸು ಅಥವಾ ಹೋರಿಕರುವನ್ನು ಸಹ ಹೊಡೆದು ಅವರಿಗೆ ಅಭ್ಯಾಸವಿಲ್ಲ. ಆದುದರಿಂದ ನಾಲಿಗೆಯಿಂದಲೇ ಹೆಂಡತಿಯ ಮೇಲೆ ಅಧಿಕಾರ ತೋರಿಸುತ್ತಿದ್ದರು. ತಮಗೆ ಸರಾಗವಾಗಿ ಬರುತ್ತಿದ್ದ ಮುಂಡೇ ಎಂಬ ಮಾತಿಗೇ, ಬೋಳೀ, ಸೂಳೆ, ಹೊಲೆ, ಮಾದಿಗ, ಮೊದಲಾಗಿ ಹಲವು ವಿಶೇಷಣಗಳನ್ನು ಸೇರಿಸಿ ಅಂದು ಸುಮ್ಮನಾಗುತ್ತಿದ್ದರು. ಅದಕ್ಕಿಂತ ಹೆಚ್ಚು ಭಾಷಾಸಾಮರ್ಥ್ಯ ಅವರಿಗೆ ಇರಲಿಲ್ಲವೆಂದಲ್ಲ. ಎಷ್ಟಾದರೂ ಗಂಗಮ್ಮನ ಮಗ. ಆದರೆ ಹೆಚ್ಚು ಬೈದರೆ ಮಾವನವರಿಗೆ ತಿಳಿದೀತೆಂಬ ಭಯವು ಪ್ರಜ್ಞೆಯಲ್ಲಿ ಸದಾ ಇತ್ತು.

ಸೊಸೆಯನ್ನು ಆಳುವ ಆಶೆಯಾಗಲಿ, ಬೈಗುಳದ ಭಾಷೆಯಾಗಲಿ ಗಂಗಮ್ಮನಿಗೆ ಕಡಿಮೆ ಇಲ್ಲ. ಅವಳಿಗೂ ಬೀಗರನ್ನು ಕಂಡರೆ ಅಷ್ಟೇ ಭಯ. ಆದುದರಿಂದ ಬರೀ ಗುರ್ ಎನ್ನುವುದರಲ್ಲಿಯೇ ತೃಪ್ತಳಾಗುತ್ತಿದ್ದಳು. ಶ್ಯಾನುಭೋಗಿಕೆ ಕೈಗೆ ಬಂದ ಮೊದಲ ವರ್ಷ ಚೆನ್ನಿಗರಾಯರು ತಾವೇ ಲೆಕ್ಕಗಳನ್ನು ಬರೆದು ಜಮಾಬಂದಿಗೆ ತೆಗೆದುಕೊಂಡು ಹೋದರು. ಅದು ಬರೀ ತಾಲ್ಲೂಕು ಜಮಾಬಂದಿ ಹುಜೂರು ಜಮಾಬಂದಿಯೂ ಅಲ್ಲ. ಮಾಮೂಲು ಸಲ್ಲಿಕೆಯಾಗಿದ್ದರೂ ಸಹ ಹೆಡ್‌ಗುಮಾಸ್ತೆಯು ಅವರ ಲೆಕ್ಕದಲ್ಲಿ ನೂರ ಒಂದು ತಪ್ಪುಗಳನ್ನು ತೆಗೆದು ತೋರಿಸಿದ. ಸರಿ, ಅವರ ಜಮಾಬಂದಿಯಾಗಲಿಲ್ಲ. 'ಥೂ ಇವರವ್ವನ.....'ಎಂದು ಅವರು ಮನಸ್ಸಿನಲ್ಲಿ ಅಂದುಕೊಂಡರೇ ವಿನಾ ಬಾಯಿಬಿಟ್ಟು ಯಾರನ್ನೂ ಬೈಯ್ಯುವಂತಿರಲಿಲ್ಲ. ಅವರ ಜಮಾಬಂದಿ ಮಾಡುವುದಿಲ್ಲವೆಂದೂ ಇನ್ನು ಎರಡು ತಿಂಗಳಿನೊಳಗೇ ಅವರೇ ತಿಪಟೂರಿಗೆ ಬಂದು ಸಾಹೇಬರ ರುಜು ಮಾಡಿಸಿಕೊಳ್ಳಬೇಕೆಂದೂ ಹೆಡ್‌ಗುಮಾಸ್ತೆಯೇ ಹೇಳಿದ. ಅವರಿಗೆ ಸಾಹೇಬರ ಮುಂದೆ ನಿಂತು ಬೈಸಿಕೊಳ್ಳುವ ಅನುಭವವಾಗಲಿಲ್ಲ.

ಅದೇ ಜಮಾಬಂದಿಗೆ ಬಂದಿದ್ದ ತಿಮ್ಲಾಪುರದ ಶ್ಯಾನುಭೋಗ ದ್ಯಾವರಸಯ್ಯನವರು ತಪ್ಪಿಲ್ಲದಂತೆ ಲೆಕ್ಕ ಬರೆಯುವವರೆಂದು ಹೆಸರಾಗಿದ್ದರು. ಶ್ಯಾನುಭೋಗಿಕೆಯ ವಿನಾ ಅವರಿಗೆ ಬೇರೆ ಜೀವನೋಪಾಯ ಇರಲಿಲ್ಲ. ಶ್ಯಾನುಭೋಗಿಕೆ ಎಂಬುದು ಊಟಕ್ಕೆ ರುಚಿ ಕೊಡುವ ಉಪ್ಪಿನಕಾಯಿಯೇ ಹೊರತು ಅದೊಂದರಿಂದಲೇ ಹೊಟ್ಟೆ ತುಂಬುವುದಿಲ್ಲವೆಂದು ಅವರೇ ಹೇಳುತ್ತಿದ್ದರು. ಚೆನ್ನಿಗರಾಯರು ದ್ಯಾವರಸಯ್ಯನವರ ಮರೆಹೊಕ್ಕರು. ಇದೊಂದೇ ಅಲ್ಲದೆ ಎಲ್ಲ ಲೆಕ್ಕವನ್ನೂ ಬರದುಕೊಡುವುದಾಗಿಯೂ, ಒಟ್ಟು ವರ್ಷಕ್ಕೆ ಐವತ್ತು ರೂಪಾಯಿ ಸಂಭಾವನೆ ಕೊಡಬೇಕೆಂದೂ ಅವರು ಕೇಳಿದರು. ಚೆನ್ನಿಗರಾಯರ ಮೂರು ಹಳ್ಳಿಯ ಫಿರ್ಕಾದ ಪೋಟಿಕೆ ನೂರಾ ಇಪ್ಪತ್ತೆರಡು ರೂಪಾಯಿ ಏಳಾಣ ಹನ್ನೊಂದು ಕಾಸು. ಅದರಲ್ಲಿ ಹಸುರು ನೋಟಿನ ಮೇಲಿನದು ಕಾಗದ ಶಾಯಿಗಳಿಗೆ ಹೋಗುತ್ತೆ. ಸಾಲಾಖೈರಿನಲ್ಲಿ ಖರ್ಚಿಗೆ ಪೋಟಿಕೆ ಹಾಕಿಸುವಾಗ ಶಿರಸ್ತೇದಾರರಿಗೆ ಹತ್ತು (ಅದರಲ್ಲಿ ಅಮಲ್ದಾರರಿಗೆ ಆರು, ಶಿರಸ್ತೇದಾರರಿಗೆ ನಾಲ್ಕು ಪಾಲಂತೆ), ಹೆಡ್‌ಗುಮಾಸ್ತರಿಗೆ ಎರಡು, ಹೋಬಳಿ ಗುಮಾಸ್ತರಿಗೆ ಎರಡು, ನಗದಿಗೆ ಒಂದು, ಜವಾನರಿಗೆ ತಲಾ ಎಂಟಾಣೆ: ಜುಮ್ಲಾ, ಹದಿನೇಳು ಹದಿನೆಂಟು ರೂಪಾಯಿ ಖರ್ಚೇ ಆಗುತ್ತೆ. ಅಲ್ಲದೆ ತಾಲ್ಲೂಕಿಗೆ ಬಂದಾಗ ಊಟ ತಿಂಡಿ, ಜಮಾಬಂದಿಯ ಖರ್ಚು. ಇಷ್ಟೆಲ್ಲ ಆದಮೇಲೆ ಚೆನ್ನಿಗರಾಯ ಲೆಕ್ಕ ಬರೆಸಲು ಐವತ್ತು ರೂಪಾಯಿ ಕೊಟ್ಟರೆ ಉಳಿಯುವುದೇನು? ವಸೂಲಿ ಮಾಡುವಾಗ ಮಾತ್ರ ಹತ್ತು ರೂಪಾಯಿಗಿಂತ ಮೇಲೆ ಕಂದಾಯ ಕೊಡುವ ರೈತರು ಒಂದು ರೂಪಾಯಿ, ಅದಕ್ಕೆ ಕಡಿಮೆಯವರು ಎಂಟಾಣೆ, ಎರಡು ರೂಪಾಯಿ ಕಂದಾಯದವರು ನಾಲ್ಕಾಣೆ ಮಸಿಕಾಣಿಕೆಯನ್ನು ಕೊಡುವುದೇನೋ ಇತ್ತು. ಆದರೆ ರಾಮಸಂದ್ರದ ಮಸಿಕಾಣಿಕೆಯನ್ನು ಪಟೇಲನೇ ತಿಂದು ಬಿಡುತ್ತಿದ್ದ. ಲಿಂಗಾಪುರದಿಂದಲೂ ಏನೂ ಬರುತ್ತಿರಲಿಲ್ಲ. ಕುರುಬರಹಳ್ಳಿಯದು ಮಾತ್ರ ಒಟ್ಟು ನಲವತ್ತು ರೂಪಾಯಿಯಷ್ಟು ಸಿಕ್ಕುತ್ತಿತ್ತು. ಇನ್ನು ಮೇಲು ಸಂಪಾದನೆ ಏನಿದರೂ ಆಯಾ ಸ್ಯಾನುಭೋಗರ ಶಕ್ತ್ಯಾನುಸಾರ. ಪಾಲುಪಟ್ಟಿ, ಖರೀದಿ, ಆಧಾರ, ತಕರಾರು ತಖ್ತೆ ದರಖಾಸ್ತು ಮೊದಲಾದವುಗಳಲ್ಲಿಯೇ ಸಂಪಾದನೆಯಾಗಬೇಕು. ಖಾತೆ ಖಿರ್ದಿ ಲೆಕ್ಕಗಳನ್ನೇ ನಿಭಾಯಿಸದ ಚೆನ್ನಿಗರಾಯರು ರಿಜಿಷ್ಟ್ರಿ ಕಾಗದಗಳನ್ನು ಎಷ್ಟು ಚೊಕ್ಕವಾಗಿ ಬರೆಯಬೇಡ! ಅವರಿಗೆ ಆ ಸಂಪಾದನೆಯೂ ಇಲ್ಲ.

ತಿಮ್ಲಾಪುರದ ದ್ಯಾವರಸಯ್ಯನವರು ರಾಮಸಂದ್ರಕ್ಕೆ ಬಂದು ಹದಿನೈದು ದಿನ ಬಿಡಾರ ಹಾಕಿದರು. ಅವರ ಊಟ ತಿಂಡಿ ಗಂಗಮ್ಮ ನಂಜಮ್ಮನವರು ನೋಡಿಕೊಂಡರು. ಉಪಚಾರ ಚೆನ್ನಿಗರಾಯರೇ ಮಾಡಿದರು. ಲೆಕ್ಕ 'ಕಂಪ್ಲೀಟ್' ಆಗಿ ಇವರನ್ನೂ ಸಂಗಡ ಕರೆದುಕೊಂಡು ಹೋಗಿ ಹೆಡ್‌ಗುಮಾಸ್ತೆಗೆ ಎರಡು ಶಿರಸ್ತೇದಾರರಿಗೆ ಐದು ರೂಪಾಯಿ ಮರ್ಯಾದೆ ಮಾಡಿಸಿ ದ್ಯಾವರಸಯ್ಯನವರೇ ಜಮಾಬಂದಿ ರುಜು ಮಾಡಿಸಿಕೊಟ್ಟರು. ಕೋಟು ಪೇಟ ಕಟ್ಟಿ, ಮೇಲೆ ಉತ್ತರೀಯ ಹೊದೆದು ಚೆನ್ನಿಗರಾಯರು ತಾಲ್ಲೂಕು ಕಛೇರಿಗೆ ಹೋಗಿ ಬಂದರು. ಸಾಹೇಬರು ರುಜುಮಾಡುವಾಗ ಇವರು ಕೈಮುಗಿದುಕೊಂಡು ನಿಂತಿದ್ದರೂ ಅದೃಷ್ಟಕ್ಕೆ ಅವರು ಇವರನ್ನು ಏನೂ ಕೇಳಲಿಲ್ಲ. ಹೆಡ್‌ಗುಮಾಸ್ತೆ ಹೇಳಿದ ಕಡೆಯಲ್ಲಿ ರುಜು ಎಳೆದರು.

ತಿಪಟೂರಿನಿಂದ ಗಾಡಿಯಲ್ಲಿ ಮೊದಲು ತಿಮ್ಲಾಪುರಕ್ಕೆ ಬಂದು ದ್ಯಾವರಸಯ್ಯನವರನ್ನು ಇಳಿಸಿ ಅಲ್ಲಿಂದ ಊರಿಗೆ ಬಂದ ಮದ್ಯಾಹ್ನವೇ ಚೆನ್ನಿಗರಾಯರು ಹೆಂಡತಿಯನ್ನು ಕರೆದರು: 'ಲೇ ಮುಂಡೇ, ಜಮಾಬಂದಿ ಮಾಡ್‌ಕಂಡ್ ಬಂದು ನಂಗೆ ಮೈಯೆಲ್ಲಾ ನೋಯುತ್ತೆ. ಹರಳೆಣ್ಣೆ ತಗಂಡ್ ಬಂದು ನನ್‌ನೆತ್ತಿಗೆ ಹಾಕಿ ಮೈ ಕೈ ನೀವು ಬಾ.'

ನಂಜಮ್ಮ ಒಳ್ಳೆಯ ಎತ್ತರದ, ತುಂಬಿದ ಕೈಕಟ್ಟಿನ ಶಕ್ತಿವಂತ ಹುಡುಗಿ. ಮನೆಯ ಹಿತ್ತಿಲಿನ ರಾಟೆ ಬಾವಿಯಲ್ಲಿ ಸೇದಿ ಹಂಡೆಗೆ ಹೆಡೆದಿಬ್ಬಿಯ ಉರಿ ಹಾಕಿ ನೀರು ಕಾಯಿಸಿದ್ದೂ ಕಾಯಿಸಿದ್ದೇ; ಪತಿದೇವರ ತಲೆಗೆ ತಿಕ್ಕಿ, ತಟ್ಟಿ ತಟ್ಟಿ ಮಾಡಿ, ಬೆನ್ನು ತೋಳು ಕಾಲು ಪಾದಗಳಿಗೆ ಎಣ್ಣೆ ತಿಕ್ಕಿ, ನೆನೆಸಿ, ಬಿಸಿಬಿಸಿ ನೀರು ಹಾಕಿ ನುಣ್ಣಗೆ ತಿರುವಿದ ಸೀಗೆಯಿಂದ ತಲೆ ಮೈ ಕೈಗಳನ್ನು ಉಜ್ಜಿ, ಅವರು ಮೈ ಒರೆಸಿಕೊಂಡ ಮೇಲೆ

ಚೌಕ ಕಟ್ಟಿ, ಹಾಸಿಗೆ ಹಾಕಿ ಅವರನ್ನು ಮಲಗಿಸಿ, ದುಪ್ಪಟಿ ಕಂಬಳಿಗಳನ್ನು ಜೋಡಿಸಿ ಹೊದೆಸಿ ಪಕ್ಕದಲ್ಲಿ ಕೂತು, ಅವರು ಸಾಕು ಎನ್ನುವತನಕ ಮೈ ಕೈಕಾಲುಗಳನ್ನು ಹದವಾಗಿ ಹಿಸುಕಿದಳು.

– 2 –

ಮಾಡಿದ್ದರೆ ಅಪ್ಪಣ್ಣಯ್ಯನಿಗೂ ಈಗ ಎರಡು ವರ್ಷಕ್ಕೆ ಮೊದಲೇ ಮದುವೆ ಮಾಡಬೇಕಾಗಿತ್ತು. ಆದರೆ ಅದೇ ತಾನೆ ಚೆನ್ನಿಗರಾಯರ ಮದುವೆಯಾಗಿತ್ತು. ಆಮೇಲೆ ಅವರು ಶ್ಯಾನುಭೋಗರಾಗುವ, ಆದಮೇಲೆ ಅದನ್ನು ನಿಭಾಯಿಸುವ ಕೆಲಸ ಕಾರ್ಯಗಳೇ ಹಿಡಿದವು. ಆದುದರಿಂದ ತಡವಾಗಿ, ವಿವಾಹಯೋಗವು ಈಗ ಒದಗಿಬಂತು.

ಅಪ್ಪಣ್ಣಯ್ಯ ಚೆನ್ನಕೇಶವಯ್ಯನವರ ಮಠಕ್ಕೆ ಎರಡು ವರ್ಷ ಹೋಗಿದ್ದನೇನೋ ನಿಜ. ಆದರೆ ವಿದ್ಯೆ ಅವನ ಹಣೆಯಲ್ಲಿ ಬರೆದಿಲ್ಲವೆಂದು ಓಜಯ್ಯನವರೇ ಹೇಳಿದರಲ್ಲ., ಅದು ಅವನ ತಪ್ಪು ಹೇಗಾಗಬೇಕು? ಮರಳಿನಲ್ಲಿ ತಿದ್ದಿದ ಅವನ ಬೆರಳ ಉಂಗುರ ಸವೆಯಿತು. ಆದರೆ ಅಕ್ಷರಗಳು ಮರಳಿನಲ್ಲಿಯೇ ಕಲಸಿಹೋದವು. ಅದಕ್ಕೆ ಯಾರಿಗೂ ವ್ಯಸನವಿಲ್ಲ. ಅವನನ್ನು ಮಠಕ್ಕೆ ಕಳಿಸುತ್ತಿದ್ದುದಾದರೂ ಯಾಕೆ, ಕಬ್ಬಿನ ಗದ್ದೆಗೆ ಹೋಗಿ ಬೀಡಿ ಸೇದಿ ಮತ್ತೆ ಬೆಂಕಿ ಹೊತ್ತಿಸದೇ ಇರಲಿ ಎಂದು ತಾನೆ?

ಅವನಿಗೆ ಹೆಣ್ಣು ಕೊಟ್ಟವರು ಕಡೂರು ಸೀಮೆಯ ನುಗ್ಗೀಕೆರೆ ಗ್ರಾಮದ ಶ್ಯಾಮಭಟ್ಟರೆಂಬ ಪುರೋಹಿತರು. ಗಂಗಮ್ಮನ ತೌರಾದ ಜಾವಗಲ್ಲಿನ ಮೂಲಕ ಅವರಿಗೆ ಈ ಗಂಡಿನ ವಿಷಯ ತಿಳಿದು ಅವರೇ ಬಂದು ನೋಡಿ ಮದುವೆ ನಿಷ್ಕರ್ಷಿಸಿದರು. ಇರುವವಳು ಒಬ್ಬಳೇ ಮಗಳು. ಗಂಡು ಮಕ್ಕಳಿಲ್ಲ. ಮಡಿಹಿಡಿಯ ಜೊತೆಗೆ ಹುಡುಗಿಗೆ ಕಸೂತಿಯಲ್ಲಿ ಆಲದೆಲೆಯ ಕೃಷ್ಣನನ್ನು ಹಾಕುವುದು ಸಹ ಬರುತ್ತಿತ್ತು. ಎಂದರೆ ತುಂಬ 'ನಾಗರಿಕತೆ'ಯ ಹುಡುಗಿಯೇ. ಆದರೆ ಅದನ್ನು ಶ್ಯಾಮಭಟ್ಟರು ಗಂಗಮ್ಮನಿಗೆ ಹೇಳಲಿಲ್ಲ. ಹೇಳಿದ್ದರೆ ಅವಳು ಅಂಥಹ ಥಳುಕಿನ ಹುಡುಗಿ ತಂದುಕೊಳ್ಳಲು ಒಪ್ಪುತ್ತಿರಲಿಲ್ಲ.

ಒಂದು ಸೇರು ತೂಕದ ಬೆಳ್ಳಿಯ ಪಂಚಪಾತ್ರೆಯಿಂದ ಹಿಡಿದು ಮಕುಟ, ಸಂಕಲಿಕೆ ಪಂಚೆ, ಜರಿಪೇಟ ಮೊದಲಾಗಿ ಎಲ್ಲವನ್ನೂ ಕೊಟ್ಟು ಮದುವೆಯನ್ನು ಚೆನ್ನಾಗಿಯೇ ಮಾಡಿದರು. ಗಂಡಿನ ಮಾತಾಪಿತರ ಸ್ಥಾನದಲ್ಲಿ ಅತ್ತಿಗೆ ಅಣ್ಣರಾದ ನಂಜಮ್ಮ ಚೆನ್ನಿಗರಾಯರು ನಿಂತು ಧಾರೆ ಎರೆಸಿಕೊಂಡರು. ಮದುವೆಯಾದ ಆರು ತಿಂಗಳಿಗೇ ಸಾತಮ್ಮ ಮೈನೆರೆದು ಹದಿನಾರು ದಿನಕ್ಕೆ ಪ್ರಸ್ತವಾಗಿ ಮನೆಗೆ ಬಂದಳು.

ಹೆಂಡತಿಯನ್ನು ಹೇಗೆ ಆಳಬೇಕೆಂಬುದು ಅಪ್ಪಣ್ಣಯ್ಯನಿಗೂ ಹೊಸತರಲ್ಲಿ ಸಮಸ್ಯೆಯೇ. ಅಣ್ಣನು ಅತ್ತಿಗೆಯನ್ನು ಆಳುವ ರೀತಿಯಲ್ಲಿಯೇ ತಾನು ತನ್ನ ಹೆಂಡತಿಯನ್ನು ಆಳಬೇಕೆಂದು ಮೊದಲೇ ಅವನು ಸಂಕಲ್ಪಿಸಿಕೊಂಡಿದ್ದ. ಅವಳು ಬಂದ ಬೆಳಿಗ್ಗೆಯೇ ಕೂಗಿ ಹೇಳಿದ: 'ಲೇ ಮುಂಡೇ, ನಂಗ್ ಎಣ್ಣೆ ತಿಕ್ಕು ಬಾ ಇಲ್ಲಿ.'

ಈ ಮಾತನ್ನು ಯಾರನ್ನು ಉದ್ದೇಶಿಸಿದುದೆಂಬುದು ಸಾತಮ್ಮನಿಗೆ ತಿಳಿಯಲಿಲ್ಲ. ಅವಳು ತನ್ನ ಪಾಡಿಗೆ ತಾನು ಕಸ ಗುಡಿಸುತ್ತಿದ್ದಳು. 'ಲೇ, ನಿಂಗ್ ಕಣೆ ಹೇಳಿದ್ದು, ಸಾತಿ ಮುಂಡೆ. ಕೇಳ್ಲಿಲ್ವೇನೇ? –ಎಂದು ಗಂಡ ನುಡಿದಾಗ ದಿಕ್ಕು ತೋಚದವಳಂತೆ ಅವನ ಕಡೆಗೆ ನೋಡಿದಳು. 'ಅದೇನ್ ಹಾಗ್ ನೋಡ್ತೀಯೇ ಕತ್ತೆ ಮುಂಡೆ, ಹೇಳಿದ್ ಕೇಳ್ಲಿಲ್ವೇನೆ' –ಅವನು ಮತ್ತೆ ಅಂದ. ಸಾತುವಿಗೆ ಅಳು ಬಂದುಬಿಟ್ಟಿತು. ಗುಡಿಸುತ್ತಿದ್ದ ಪೊರಕೆಯನ್ನು ಅಲ್ಲಿಯೇ ಹಾಕಿ ಅತ್ತೆಯ ಹತ್ತಿರಕ್ಕೆ ಹೋಗಿ ನಿಂತು ಹೇಳಿದಳು: ನಿಮ್ ಮಗನ ಮಾತು ಕೇಳಿದಿರಾ ಅಮ್ಮ? ಹೆಂಡ್ತೀನ ಇಂಥಾ ಮಾತು ಆದೂದು ಯಾರು ಕಲಿಸಿಕೊಟ್ರು ಅವ್ರಿಗೆ?'

ಸೊಸೆಯಾದವಳು ಇಷ್ಟು ಧೈರ್ಯ ವಹಿಸುತ್ತಾಳೆಂದು ಗಂಗಮ್ಮ ಕಲ್ಪಿಸಿಕೊಂಡೂ ಇರಲಿಲ್ಲ. ಹಿರಿಯ ಸೊಸೆ ನಂಜಮ್ಮನನ್ನು ಚೆನ್ನಿಗರಾಯ ಹೀಗೆಯೇ ಕರೆಯುವುದಿಲ್ಲವೇ? ಅವಳು ಒಂದು ಮಾತೂ ಆಡದೆ ಸುಮ್ಮನಿರುತ್ತಾಳೆ. ಆದರೆ ಈ ಠಾಟಗಿತ್ತಿ ತನ್ನ ಎದುರಿಗೇ ಬಂದು ಹೀಗೆ ಕೇಳುವುದೆ?

'ಗಂಡ, ಹೆಂಡ್ತೀನ ಇನ್ನೇನನ್‌ಬೇಕೆ ಚಿನ್ನಾಲಿ ಲೌಡಿ?'

'ನಾನ್ಯಾಕೆ ಲೌಡಿಯಾದೇನು? ಹಾಗನ್ನೋರೇ ಆಗಿರ್‌ಭೌದು.'

ಗಂಗಮ್ಮ ಈ ಮಾತು ಕೇಳಿ ಉರಿದುಬಿದ್ದಳು: 'ಲೋ ಹೆಣ್ಣಿಗ ಸೂಳೇಮಗನೆ, ನಿನ್ನ ಹೆಂಡ್ತಿ ನಿನ್ನ ಹೆತ್ತವ್ವನ್ನೇ ಏನಂದ್ಳು ಕೇಳಿದ್ಯೇನೋ? ನಾನು ಲೌಡಿ ಏನೋ? ನ್ಯಟ್ಟಗೆ ಹೆಂಡ್ತಿ ಆಳ್ತೀ ಏನೋ ಶಿಖಂಡಿ ಮುಂಡೇಮಗನೇ?'

ಅಪ್ಪಣ್ಣಯ್ಯನ ಗಂಡಸುತನ ಎದ್ದುನಿಂತಿತು. ಹೋಗಿ ಅವಳ ಕುತ್ತಿಗೆಗೆ ಕೈಹಾಕಿ ಢಂ ಎಂದು ಎರಡು ಇಡಿದ. ಸಾತು ತಲೆ ಸುತ್ತು ಬಂದು ಬಿದ್ದುಬಿಟ್ಟಳು. 'ಸಾಯಿಸಿ ಹಾಕ್‌ಬಿಡ್ತೀನಿ ಈ ಬೋಸೂಡಿ ಮುಂಡೇನ' –ಎಂದು ಅವನು ಗರ್ಜಿಸುತ್ತಿರುವಷ್ಟರಲ್ಲಿ ಎಲ್ಲವನ್ನೂ ಕೇಳಿದ ನಂಜಮ್ಮ ಅಡಿಗೆ ಮನೆಯಿಂದ ಓಡಿ ಬಂದಳು. ಅವಳು ಇದುವರೆಗೂ ಅಪ್ಪಣ್ಣಯ್ಯನ ಎದುರಿಗೆ ನಿಂತು ಗಟ್ಟಿಯಾಗಿ ಮಾತನಾಡಿರಲಿಲ್ಲ. ಈಗ, 'ಅಪ್ಪಣ್ಣಯ್ಯ, ಮನೆಗೆ ಬಂದ ಸೊಸೇರುನ್ನ ಹೀಗೆ ಗೋಳಾಡಿಸಿದ್ರೆ ನಿಮ್ಮ ಕೈ ಸೇದಿ ಹೋಗುತ್ತೆ. ನಿಮಗೇನು ಕೆಟ್ಟ ಬುದ್ಧಿ ಬಂದಿದೆ ಹೇಳಿ' ಎಂದು ಒಳಗಿನಿಂದ ನೀರು ತಂದು ಸಾತುವಿನ ತಲೆಗೆ ತಟ್ಟಿದಳು. ಅಪ್ಪಣ್ಣಯ್ಯನ ನಾಲಿ

ಗೆಯಲ್ಲಿ ಮುಂಡೆ ಎಂಬ ಮಾತು ಅತ್ತಿಗೆಯ ಮೇಲೂ ಬರುತ್ತಿತ್ತು. ಆದರೆ ಅದೇನೋ ಭಯದಿಂದ, ಪ್ರಾಯಶಃ ಅವಳ ತಂದೆ ಕಂಠೀಜೋಯಿಸರ ನೆನಪಿರಬಹುದು, ಸುಮ್ಮನಾದ. ಸಾತುವಿಗೆ ಪೂರ್ತಿಯಾಗಿ ಪ್ರಜ್ಞೆ ತಪ್ಪಿರಲಿಲ್ಲ. ಅವಳೇ ಎದ್ದು ಕೂತು ಹೇಳಿದಳು: 'ಉತ್ತಮ ವಂಶದಲ್ಲಿ ಹುಟ್ಟಿದ್ರೆ ತಾನೇ ಇವರ ಬಾಯಲ್ಲಿ ಒಳ್ಳೇ ಮಾತು ಬರೋದು!'

'ಸಾತೂ, ನೀನು ಮಾತಾಡಬ್ಯಾಡ. ಸುಮ್ಮನೆ ಬಾ' –ಎಂದು ನಂಜಮ್ಮ ಅವಳನ್ನು ಮೆಟ್ಟಿಲು ಹತ್ತಿಸಿ ಅಟ್ಟದ ಮೇಲಕ್ಕೆ ಕರೆದುಕೊಂಡು ಹೋದಳು. 'ಇನ್ನು ಇವಳ ಕಿವಿ ಊದುಕ್ಕೆ ಕರ್ಕಂಡ್ ಹೋಗ್ತಿದಾಳೆ ಆ ದೊಡ್ಡ ತಾಟಗಿತ್ತಿ' –ಎಂದು ಗಂಗಮ್ಮ ಅಂದುದು ಕೇಳಿದರೂ, ನಂಜಮ್ಮ ಅದು ಕೇಳಿಸದವಳಂತೆ ಹೋದಳು.

'ಇಂಥಾ ಮಾತು ಬ್ರಾಹ್ಮಣರಾಗಿ ಇವರ ಬಾಯಲ್ಲಿ ಬರ್ಭೌದಾ? –ಅಟ್ಟದ ಮೇಲೆ ಒಂದು ಹಲಗೆಯ ಮೇಲೆ ಕುಳಿತ ಮೇಲೆ ಸಾತು ಕೇಳಿದಳು.

'ನಿಮಗೆ ಇದು ಹೊಸದು. ಈ ಮನೆ ನಡವಳಿಕೆಯೇ ಹೀಗಿದೆ.'

'ಹಾಗಾದ್ರೆ ಭಾವ್‌ನೋರು ನಿಮ್ಮುನ್ನ ಹೀಗೇ ಅಂತಾರಾ?'

'ಇಲ್ಲಿಗೆ ಬಂದ ಎರಡು ವರ್ಷದಿಂದ ನನಗೆ ಅಭ್ಯಾಸವಾಗಿದೆ.'

'ನೀವ್ಯಾಕೆ ಕೇಳಿಕಂಡ್ ಸುಮ್ಮನಿದ್ರಿ? ಅದುಕ್ಕೆ ಇವ್ರಿಗೆ ಧೈರ್ಯ ಬಂದಿದೆ.'

ಈ ಮಾತಿಗೆ ನಂಜಮ್ಮ ಉತ್ತರ ಹೇಳಲಿಲ್ಲ. ಅವಳು ತನ್ನಲ್ಲಿಯೇ ಏನೋ ಯೋಚಿಸತೊಡಗಿದಳು. ಸಾತು ಮತ್ತೆ ಕೇಳಿದಳು: 'ನಿಮ್ಮ ತಂದೆ ನೋಡಿದ್ರೆ ಅಂಥಾ ದೊಡ್ಡ ಮನುಷ್ಯರು. ನನ್ನ ಮದುವೆಗೆ ಬಂದಿದ್ರಲಾ, ಆಗ ಮದುವೆ ಮನೇಲಿ ಎಲ್ರೂ ಅವ್ರುನ್ನ ಕಂಡ್ರೆ ಹೆದರ್ತಿದ್ರು. ಅವ್ರು ತುಂಬ ದೊಡ್ಡೋರು ಅಂತ ನಮ್ಮ ತಂದೆಯೂ ಹೇಳ್ತಿದ್ರು. ಭಾವ್‌ನೋರಿಗೆ ಶ್ಯಾನುಭೋಗ್‌ಕೆ ಕೊಡುಸ್ದೋರು ಅವ್ರೇಯಂತೆ. ಒಂದು ಸಲ ನಮ್ ತಂದೆ ಕೈಲಿ ಹೇಳ್ತೀನಿ ಅಂತ ಹೆದರಿಸಿ. ಇವ್ರು ಬಾಯಿ ಮುಚ್‌ಕಂಡ್ ಸುಮ್‌ನಾಗ್ತಾರೆ. ಇಲ್ದೆ ಇದ್ರೆ ಒಂದ್ ಸಲ ಅವ್ರಕೈಲಿ ನೀವೇ ಹೇಳಿ. ಇವ್ರಿಗೆ ಬುದ್ಧಿ ಕಲುಸ್ತಾರೆ.'

'ಸಾತೂ, ನಿನಗೆ ಚಿಕ್ಕ ವಯಸ್ಸು, ಇನ್ನೂ ಗೊತ್ತಿಲ್ಲ. ಗಂಡನಿಗೆ ಬುದ್ಧಿ ಕಲಿಸಿ ಅಂತ ಹೆಂಗಸು ಯಾವತ್ತೂ ತನ್ನ ಅಪ್ಪನಿಗೆ ಹೇಳಬಾರದು' –ಎಂದು ಹೇಳಿದಳಾದರೂ, ತನ್ನ ತಂದೆಯ ಪೂರ್ತಿ ಸ್ವಭಾವವನ್ನು ನಂಜಮ್ಮ ಬಾಯಿ ಬಿಟ್ಟು ವಿವರಿಸಲಿಲ್ಲ. ಅವರಿಗೆ ಯಾರ ಮೇಲೆ ಸಿಟ್ಟು ಬಂದರೂ ಸರಿ, ಮೇಲೇರಿಹೋಗಿ ಜುಟ್ಟು ಹಿಡಿದು ದವಡೆಯ ಹಲ್ಲುಗಳನ್ನು ಅಳ್ಳಾಡುವಂತೆ ಬಾರಿಸಿ, ನಂತರ ಮುಂದಿನ ಮಾತಾಡುತ್ತಿದ್ದರೇ ಹೊರತು ಬೇರೆ ರೀತಿಯನ್ನು ಕಾಣರು. ಅಳಿಯನೆಂಬ ಘನತೆಯನ್ನು ತನ್ನ ಗಂಡನು ಮಾವನವರ ಎದುರಿಗೆ ಉಳಿಸಿಕೊಂಡಿಲ್ಲವೆಂಬುದು ಅವಳಿಗೆ ಗೊತ್ತಿತ್ತು. ಧೈರ್ಯಶಾಲಿಯಲ್ಲದವರನ್ನು ಅವಳ ತಂದೆ ಎಂದೂ ಗೌರವಿಸುತ್ತಿರಲಿಲ್ಲ. ಅದು ಅವರ ಸ್ವಭಾವ. ಅಂದರೆ ಹೆಂಗಸಾದ ತಾನು ತನ್ನ ಗಂಡನ ಮಾನ ಕಾಯದಿದ್ದರೆ ಹೇಗೆ?

ಸಾತು ಹೇಳಿದಳು: 'ಹಾಗಾದ್ರೆ ಇವರಿಗೆ ನೀವೇ ಬುದ್ಧಿ ಹೇಳಿ, ಇನ್‌ಮೇಲೆ ನನ್ನ ಹೀಗ್ ಮಾತಾಡದ ಹಾಗೆ ಮಾಡಿ.'

ಅಷ್ಟರಲ್ಲಿ ಕೆಳಗಿನಿಂದ ಚೆನ್ನಿಗರಾಯರ ಧ್ವನಿ ಕೇಳಿಸಿತು: 'ಎಲ್ಲಿ ಹೋದ್ಲೇ ಇವಳ ಮನೆತನ ಹಾಳಾಗ. ಇನ್ನೂ ರೊಟ್ಟಿ ಹಾಕಿ ಚಟ್ನಿ ತಿರುವಿಲ್ವೇನು??'

'ಕೇಳಿದೆಯಾ ನಿಮ್ಮ ಭಾವ್‌ನೋರ ಮಾತಾ? ನಾನು ಹೋಗಿ ರೊಟ್ಟಿ ಹಾಕ್ತೀನಿ. ನೀನು ಚಟ್ನಿ ಮಾಡು ಬಾ. ಇಲ್ದೆ ಇದ್ರೆ ನಿನ್ನ ಗಂಡನಿಗೆ ಎಣ್ಣೆ ಹಾಕು ಹೋಗು'–ಎಂದು ನಂಜಮ್ಮ ಮೇಲೆ ಎದ್ದಳು.

'ನಾನು ಚಟ್ನಿ ತಿರುವ್‌ತೀನಿ. ಬೇಕಾದರೆ ಅವರಮ್ಮನ ಕೈಲಿ ಎಣ್ಣೆ ಹಾಕುಸ್‌ಕಳ್ಲಿ'–ಸಾತು ಮನಸ್ಸಿನಲ್ಲಿಯೇ ಎಂದುಕೊಂಡಳು.



## ಅಧ್ಯಾಯ 4

– 1 –

ನಂಜಮ್ಮನಿಗೆ ಏಳು ತಿಂಗಳಾದಾಗ ಒಂದು ದಿನ ಕಂಠೀಜೋಯಿಸರು ತಮ್ಮ ಬಿಳೀ ಕುದುರೆ ಏರಿ ರಾಮಸಂದ್ರಕ್ಕೆ ಬಂದರು. ಈ ಸಲ ಹಗಲು ಹೊತ್ತಿನಲ್ಲಿ ಬಂದರು. ಅವರು ಇಳಿದ ಎರಡು ಗಂಟೆಯ ನಂತರ, ದಿಂಬುಗಳಿಂದ ಕೂಡಿದ ಒಂದು ಕಮಾನುಗಾಡಿ ಬಂತು. ಬಾಣಂತನಕ್ಕೆ ಮಗಳನ್ನು ಕರೆದೊಯ್ಯಲು ಬಂದ ಅವರು ಕಲ್ಲೇಶನ ಮದುವೆಯ ವರ್ತಮಾನವನ್ನೂ ಹೇಳಿದರು. ಇನ್ನು ಮದುವೆ ಹದಿನೈದು ದಿನಕ್ಕೆ ಸರಿಯಾಗಿ ಹೆಣ್ಣಿನ ಮನೆಯಲ್ಲಿ ನಡೆಯುತ್ತೆ. ಹಾಸನದ ಹೆಣ್ಣು. ಎಲ್ಲರೂ ಮದುವೆಯ ಹೊತ್ತಿಗೆ ನಾಗಲಾಪುರಕ್ಕೆ ಬರಬೇಕೆಂದೂ, ಅಲ್ಲಿಂದ ಗಾಡಿಯಲ್ಲಿ ಮುಂದೆ ಒಟ್ಟಿಗೆ ಹೋಗುವುದೆಂತಲೂ ಹೇಳಿ ಮಗಳ

ಜೊತೆ ಪ್ರಯಾಣ ಮಾಡಿದರು. ನಂಜಮ್ಮ ಗಾಡಿಯ ಮೇಲೆ ಕುಳಿತಳು. ಮುಂಭಾಗದಲ್ಲಿ ದಂಡಿನ ದಳಪತಿಯ ಠೀವಿಯಲ್ಲಿ ಕಂಠೀಜೋಯಿಸರು ಬಿಳೀಕುದುರೆಯ ಮೇಲೆ ಸವಾರಿ ನಡೆಸಿದರು.

ನಾಗಲಾಪುರದ ಮನೆಯಲ್ಲಿ ಈಗಲೂ ಅಜ್ಜಿ ಒಬ್ಬಳೇ ಇದ್ದಳು. ನಂಜಮ್ಮ ಹುಟ್ಟಿದಾಗಿನಿಂದ ಸಾಕಿ ಸಲಹಿದವಳು ಅವಳೇ. ಅಕ್ಕಮ್ಮನನ್ನು ಕಂಡು ನಂಜಮ್ಮ ಕಣ್ಣೀರು ಹಾಕಿದಳು. ತುಂಬ ದಿನ ಅಜ್ಜಿಯನ್ನು ಬಿಟ್ಟಿದ್ದುದಕ್ಕೋ, ಅಥವಾ ಮತ್ತೆ ಯಾವ ಕಾರಣಕ್ಕೋ ಎಂಬುದು ಅವಳಿಗೇ ತಿಳಿಯಲಿಲ್ಲ. ಬಸುರಿಯಾದ ಮೊಮ್ಮಗಳನ್ನು ಇದಕ್ಕೂ ಮೊದಲು ತೌರುಮನೆಗೆ ಕರೆಸಿಕೊಳ್ಳಬೇಕೆಂದು ಅಕ್ಕಮ್ಮನ ಆಶೆಯಾಗಿತ್ತು. ಆದರೆ ಎಲ್ಲೆಲ್ಲಿಯೋ ಸಂಚಾರ ಹೋಗಿದ್ದ ಕಂಠೀಜೋಯಿಸರು ಊರಿಗೆ ಬಂದದ್ದೇ ನೆನ್ನೆ ರಾತ್ರಿ. ಅದೂ ಮಗನ ವಿವಾಹ ಮತ್ತು ದಿನವನ್ನು ನಿಷ್ಕರ್ಷಿಸಿಕೊಂಡೇ ಬಂದಿದ್ದರು. ಮಗನಿಗೆ ಇದಕ್ಕೂ ಮೊದಲೇ ಮಾಡಬೇಕಾಗಿತ್ತು. ಅವರು ಅದಕ್ಕೆ ಗಮನವನ್ನೇ ಕೊಟ್ಟಿರಲಿಲ್ಲ. ಕೆಲವು ದಿನದಿಂದ ಅವನ ಸಂಚಾರ ಕ್ರಮ ಸರಿಯಾಗಿಲ್ಲವೆಂದು ಬೇರೆ ಒಬ್ಬ ಕಾನಿಸ್ಟೇಬಲ್ಲಿನಿಂದ ತಿಳಿಯಿತು. ಸರಿ, ಎರಡೇ ದಿನದಲ್ಲಿ ಹೆಣ್ಣು ಗೊತ್ತುಮಾಡಿ ಲಗ್ನ ನಿಶ್ಚಯಿಸಿದರು.

ಅಣ್ಣನ ಮದುವೆಗೆ ನಂಜಮ್ಮನೂ ತಯಾರಿ ಮಾಡತೊಡಗಿದಳು. ಮನೆಗೆ ಸುಣ್ಣ ಕಾರಿಣೆ ಮೊದಲಾಗಿ ಆಳುಗಳ ಕೆಲಸವನ್ನೆಲ್ಲ ನಿರ್ದೇಶಿಸುವ ಹೊಣೆ ಅವಳದ್ದೇ. ಊರಿನಲ್ಲಿ ಒಂದೇ ಸಮನೆ ಇರುವುದು ಕಂಠೀಜೋಯಿಸರ ಜಾಯಮಾನಕ್ಕೆ ಬಂದದ್ದಲ್ಲ. ಕುದುರೆ ಏರಿ ಹೋದ ಅವರು ಮತ್ತೆ ಎಂಟು ದಿನಕ್ಕೆ ಬಂದರು. ಮದುವೆ ಇನ್ನು ಆರು ದಿನವಿದೆ ಎನ್ನುವಾಗ ಕಲ್ಲೇಶಿ ಪೋಲೀಸರ ವೇಷದಲ್ಲಿಯೇ ಊರಿಗೆ ಬಂದ. ಎಲ್ಲ ಕೆಲಸ ಕಾರ್ಯಗಳಲ್ಲಿಯೂ ಅವನು ಬುದ್ಧಿವಂತ. ಮದುವೆಯ ಸಿದ್ಧತೆಯಲ್ಲಿ ತಂಗಿ ಮತ್ತು ಅಕ್ಕಮ್ಮರಿಗೆ ಬೇಕಾದ ಸಹಾಯ ಮಾಡಿದ. ಅವರ ಪೈಕಿಯ ಮುಖ್ಯ ನೆಂಟರೆಂದರೆ ರಾಮಸಂದ್ರದವರೇ. ದೇವರ ಸಮಾರಾಧನೆಗೆ ಒಂದು ದಿನ ಮುಂಚಿತವಾಗಿ ಚೆನ್ನಿಗರಾಯ, ಅಪ್ಪಣ್ಣಯ್ಯ , ಮತ್ತು ಸಾತು ಗಾಡಿಯಲ್ಲಿ ಬಂದರು. ವಿಧವೆಯಾದ ತಾನು ಬರುವುದಿಲ್ಲವೆಂದು ಗಂಗಮ್ಮ ಹೇಳಿಕಳಿಸಿದ್ದಳು. ದೇವರ ಸಂತರ್ಪಣೆಯಾದ ರಾತ್ರಿಗೆ ಎಲ್ಲರೂ ಹೊರಡಬೇಕು. ಆದರೆ ಬಸುರಿ ನಂಜಮ್ಮನಿಗೆ ಮಧ್ಯಾಹ್ನದಿಂದಲೇ ಆಯಾಸವಾಗಿ ಜ್ವರ ಬಂದಂತೆ ಆಗುತ್ತಿತ್ತು. ಸಂಜೆಯ ವೇಳೆಗೆ ಮಲಗಿಬಿಟ್ಟಳು. ಇನ್ನು ರಾತ್ರಿಯ ಹೊತ್ತು ಎತ್ತಿನ ಗಾಡಿಯಲ್ಲಿ ಅವಳು ಇಪ್ಪತ್ತನಾಲ್ಕು ಮೈಲಿಯ ಪ್ರಯಾಣ ಮಾಡುವುದು ಕ್ಷೇಮವಲ್ಲವೆಂದು ಎಲ್ಲರೂ ನಿರ್ಧರಿಸಿದರು. ಅವಳು ಮತ್ತು ಅಕ್ಕಮ್ಮ ಊರಿನಲ್ಲಿ ಉಳಿಯುವುದೆಂದು ನಿರ್ಧಾರವಾಯಿತು.

ಉರಿನಲ್ಲಿ ತಾನು ಮತ್ತು ಅಜ್ಜಿ ಇಬ್ಬರೇ. ಅದೂ ಮೊದಲ ಬಸುರು. ನಂಜಮ್ಮನಿಗೆ ಈ ಹೊಸ ಅನುಭವದಲ್ಲಿ ಸಹಜವಾಗಿಯೇ ಇರುವ ಭಯ ಬೇರೆ. ಆದುದರಿಂದ ಗಂಡ ತನ್ನ ಸಂಗಡ ಇಲ್ಲಿಯೇ ಉಳಿದರೆ ಚೆನ್ನವೆಂದು ಯೋಚಿಸಿದಳು. ತಾನಿದ್ದ ಕಡೆಗೆ ಅವರಿಗೆ ಹೇಳಿಕಳಿಸಿದಳು. ಗಾಡಿಯ ಮೇಲೆ ರಾತ್ರಿ ನಿದ್ದೆಮಾಡಲು ಸರಿಯಾದ ಸ್ಥಳದಲ್ಲಿ ಮೊದಲೇ ಕುಳಿತುಕೊಳ್ಳುವ ಸಿದ್ಧತೆಯಲ್ಲಿದ್ದ ಚೆನ್ನಿಗರಾಯರು ಬಂದು ಗುರ್‍ರೆನ್ನುವ ಧ್ವನಿಯಲ್ಲಿ, ಆದರೆ ಉಳಿದ ಯಾರಿಗೂ ಕೇಳಿಸದಂತೆ, 'ಏನು?' ಎಂದು ಕೇಳಿದರು.

'ನಂಗೆ ಯಾಕೋ ಒಂದ್ ಥರಾ ಆಗ್ತಿದೆ. ಮನೇಲಿ ಇನ್ಯಾರೂ ಗಂಡಸರು ಇರುಲ್ಲ. ಮದುವೆಗೆ ಅಪ್ಪಣ್ಣಯ್ಯ ಸಾತೂ ಹೋಗ್ಲಿ. ನೀವು ಇಲ್ಲೇ ಇರಿ.'

'ಅದ್ ಹ್ಯಾಗಾಗುತ್ತೆ?' ಎಂದು ಕೇಳುವಾಗ, ಮದುವೆಯ ಮನೆಯಲ್ಲಿ ಗೋಪುರದಂತೆ ಬಡಿಸಿದ ಹುಳಿಯನ್ನ, ತೆಕ್ಕೆ ಹಾಕಿದ್ದ ಒಬ್ಬಟ್ಟುಗಳೆಲ್ಲವನ್ನೂ ಅವರ ಎಡೆಯಿಂದ ಯಾರೋ ಕಿತ್ತುಕೊಂಡು ಹೋದ ನಿರಾಶೆ ಒಡೆಯುತ್ತಿತ್ತು.

'ಯಾಕ್ ಆಗುಲ್ಲ? ನೀವಿಲ್ಲೇ ಇರ್ಲಿ ಅಂತ ನಾನು ಕಲ್ಲೇಶಣ್ಣಯ್ಯಂಗೂ ಅಪ್ಪಂಗೂ ಹೇಳ್ತೀನಿ.'

'ಏನ್ ಬ್ಯಾಡ ನೀನ್ ಬೇಕಾದ್ರೆ ಸಾತಮ್ಮನ್ನ ಇಲ್ಲೇ ಇಟ್ಕ.'

ನಂಜಮ್ಮ ಮತ್ತೆ ಮಾತನಾಡಲಿಲ್ಲ. ಎರಡು ವರ್ಷ ಸಂಸಾರ ಮಾಡಿದುದರಲ್ಲಿ ಅವರ ಸ್ವಭಾವವೆಂಥದೆಂಬುದು ಅವಳಿಗೆ ತಿಳಿದಿತ್ತು. 'ಪರವಾಗಿಲ್ಲ, ನೀವು ಹೋಗಿ'–ಎಂದಳು. ಅವರು ಹೋಗಿ ತಾವು ದೃಷ್ಟಿಯಿಟ್ಟಿದ್ದ ಅಗಲವಾದ ಕಮಾನು ಗಾಡಿಯ ಮಧ್ಯೆ ಚಳಿಯಾಗದ ಸ್ಥಳ ಹಿಡಿದು ಒರಗಿ ಕುಳಿತುಕೊಂಡರು. ಸಾತು ತಾನಾಗಿಯೇ ಬಂದು–'ನಾನು ನಿಮ್ಮ ಜೊತೆ ಇರಲೇ ಅಕ್ಕ?' ಎಂದು ಕೇಳಿದಳು.

'ಬ್ಯಾಡ, ನೀನು ಹೋಗಿ ಬಾ'–ಎಂದು ನಂಜಮ್ಮ ಹೇಳಿದರೂ ಕೇಳಲಿಲ್ಲ. ಅವಳೇ ಅಕ್ಕಮ್ಮನ ಹತ್ತಿರ ಹೋಗಿ ಕೇಳಿದಳು: 'ನೀವೊಬ್ಬರೇ ಮುದುಕರು. ಮನೇಲಿ ಮತ್ತೆ ಯಾರೂ ಇಲ್ಲ. ನಾನು ಇಲ್ಲೇ ಇರ್ತೀನಿ.;

'ಅಲ್ಲಿ ನಮ್ಮ ಮನೆಯೋರು ಅಂತ ಓಡಾಡುಕ್ಕೆ ಹೆಂಗಸರೇ ಇಲ್ಲದ ಹಾಗೆ ಆಗುತ್ತೆ. ನೀನಾದ್ರೂ ಹೋಗಿ ಹಸೆಮಣೆ ಮುಂದಿನ ಕೆಲಸ ನೋಡ್ಕ. ನಾನು ಇಲ್ಲಿ ನಂಜನ್ನ ನೋಡ್ಕತ್ತೀನಿ, ಪರವಾಗಿಲ್ಲ'–ಎಂದು ಅಕ್ಕಮ್ಮ ಬಲವಂತ ಮಾಡಿದ ಮೇಲೆ ಅವಳು ಹೊರಟಳು.

ರಾತ್ರಿ ಎಂಟು ಗಂಟೆಗೆ ನಾಲ್ಕು ಗಾಡಿಗಳ ಕೊರಳೆತ್ತಿದರು. ಕಂಠೀಜೋಯಿಸರು ಬೂಟು ನಿಕ್ಕರು ಕೋಟುಗಳನ್ನು ಧರಿಸಿ ಕುದುರೆ ಏರಿ ಮುಂಭಾಗದಲ್ಲಿ ಹೊರಟರು. ತನ್ನ ಸ್ನೇಹಿತರಾದ ಕೆಲವರು

ಕಾನಿಷ್ಟೇಬಲು ದಫೇದಾರರೊಡನೆ ಕಲ್ಲೇಶಿ ಹಿಂದಿನ ಗಾಡಿಯಲ್ಲಿ ಕುಳಿತ. ನಂಜಮ್ಮ ಎದ್ದು ಬಾಗಿಲಿನ ಹತ್ತಿರ ನಿಂತು ನಾಲ್ಕು ಗಾಡಿಗಳೂ ಕಣ್ಮರೆಯಾಗುವ ತನಕ ನೋಡಿದಳು.

ಆ ರಾತ್ರಿ ಮಲಗಿದಾಗ ಅಕ್ಕಮ್ಮ ಅಂದಳು: 'ನೋಡು ನಂಜ, ಆಡಿನ ಮೊಲೆ ಹಾಗೆ ನೀವಿಬ್ಬರೇ ಮಕ್ಕಳು. ನೀನು ಏಳು ತಿಂಗಳ ಬಸುರಿ ಅಂತ ನಿಮ್ಮಪ್ಪನಿಗೆ ಗೊತ್ತಿದೆ. ಆದರೂ ಈಗಲೇ ಕಲ್ಲೇಶನ ಮದುವೆ ಗೊತ್ತು ಮಾಡ್ಕಂಡ್ ಬಂದಿದಾನೆ. ಅಪ್ನಿಗೆ ಬುದ್ಧಿ ಇದೆ ಅಂತೀಯೋ ಇಲ್ಲ ಅಂತೀಯೋ?'

'ಅವನ ಸ್ವಭಾವ ಯಾವತ್ತೂ ಯಲ್ಲಾ ಯಡ್ಡಂ ದಡ್ಡಂ.'

'ನಿನ್ನ ಹೆತ್ತು ನಿಮ್ಮಮ್ಮ ಸತ್ತಾಗಿನಿಂದ ನಾನು ಒಂಟಿಯೇ. ಕಲ್ಲೇಶ ಗಂಡುಹುಡುಗ. ನೀನು ಹುಟ್ಟಿದಾಗ ಅವನಿಗೆ ಏಳು ವರ್ಷ ಅಲ್ಲವೇ? ಗಂಡು ಹುಡುಗರು ಹ್ಯಾಗೋ ಬೆಳೀತೂವೆ. ನಿಮ್ಮಪ್ಪ ಮೂರು ದಿನ ಮನೇಲಿದ್ರೆ ಇನ್ನು ಮೂರು ತಿಂಗಳು ಇರುಲ್ಲ. ನೀನು ಮದುವೆಯಾಗಿ ಹೋದಮ್ಯಾಲೆ ನನಗಂತೂ ಒಬ್ಳೆ ಇದ್ದೂ ಇದ್ದೂ ಬೇಜಾರಾಗಿಹೋಗಿದೆ. ಏನೋ ನಿನ್ನ ಹೊಟ್ಟೇಲಿ ನಾಕು ಮಕ್ಳು ಕಂಡು ಬಾಣಂತನ ಮಾಡಬೇಕು ಅಂತ ಒಂದು ಆಶೆ ಇತ್ತು. ದೇವ್ರು ಅದ್ನೂ ನಡುಸ್ತಿದಾನೆ. ಆದ್ರೂ ಹೆಣ್ಣು ಮಕ್ಕಳು, ಕೊಟ್ಟ ಮೇಲೆ ನಾವು ಬೇಕು ಅಂದಾಗ ಎಲ್ಲಿ ಬರುತ್ವೆ?'

'ಇನ್ನು ಪರವಾಗಿಲ್ಲ. ಕಲ್ಲೇಶಣ್ಣಯ್ಯನ ಹೆಂಡ್ತಿ ಬತ್ತಾಳೆ. ನಿಂಗೆ ಜೊತೆಯಾಗುತ್ತೆ.'

ನಿಂಗೆಲ್ಲೋ ಬ್ರಾಂತು. ಅಪ್ನಿರೋದು ಪೋಲೀಸ್ನಲ್ಲಿ. ಯಾವ್ಯಾವ ಊರಿಗೆ ವರ್ಗವಾಗುತ್ತೋ ಹೋಗ್ತಾನೆ. ಅವನ ಜೊತೆ ಅವನ ಹೆಂಡ್ತಿ ಹೋಗಬೇಕು. ಇಷ್ಟಕ್ಕೂ ಅವಳು ಹಾಸನ ಪ್ಯಾಟೆಯೋಳು. ಮಗನಿಗೆ ಹೆಣ್ಣು ಗೊತ್ತು ಮಾಡುವಾಗ ನಿಮ್ಮಪ್ಪ ನನ್ನೇನು ಒಂದು ಮಾತು ಹೇಳಿದನೇ, ಕೇಳಿದನೇ? ಅವನ ಮನಸ್ಸಿಗೆ ಬಂದದ್ದೇ ಬಂದದ್ದು. ಈ ಯಂಬ್ರಮ್ಮುನ್ನ ಹೆತ್ತ ನನ್ನ ಹೊಟ್ಟೆಪುಣ್ಯಕ್ಕೆ ಏನನ್‌ಬೇಕೋ!'

ನಂಜಮ್ಮನ ಮನಸ್ಸು ತಂದೆಯ ಸ್ವಭಾವವನ್ನು ಕುರಿತು ಚಿಂತಿಸಲು ತೊಡಗಿತು. ಅಷ್ಟರಲ್ಲಿ ಅಕ್ಕಮ್ಮ ಕೇಳಿದಳು: 'ನಿಮ್ಮತ್ತೆ ನಿನ್ನ ನಿಜವಾಗೂ ಚನ್ನಾಗಿ ನೋಡ್ಕತ್ತಾ ಇದಾಳ್ಯೆ?'

'ಹೂಂ. ಚನ್ನಾಗಿಯೇ ನೋಡ್ಕತ್ತಿದಾರೆ.'

'ಸದ್ಯಕ್ ಬಿಡು. ಹೆಣ್ಮಕ್ಳಿಗೆ ಅದುಕ್ಕಿಂತ ಹೆಚ್ಚು ಇನ್ನೇನ್ ಬೇಕು?'–ಎಂದು ಅಕ್ಕಮ್ಮ ಸುಮ್ಮನಾದಳು. ಸ್ವಲ್ಪ ಹೊತ್ತಾದ ಮೇಲೆ ಅವಳೇ ಮಾತನಾಡಿದಳು: 'ನೋಡೇ ಪುಟ್ಟ, ನೀನು ಆವಾಗ ಹೇಳ್ತಿದ್ದೆಯಲ್ಲಾ, ಸೀತಾ ವನವಾಸದ ಹಾಡು, ಲವ ಕುಶರು ಕಾಳಗ ಮಾಡಿದ್ದು. ಅದಿನ್ನೂ ಜ್ಞಾಪಕದಲ್ಲಿದೆಯೇ?'

''ಅಲ್ಲಿಗೆ ಹೋದಮೇಲೆ ನಾನು ಒಂದ್ಸಲೀನೂ ಹೇಳ್ಕಂಡಿಲ್ಲ. ಬೆಳಗಿನಜಾವ ರಾಗಿ ಬೀಸುವಾಗ ಒಂದ್ ದಿನ ಹೇಳ್ಕಳುಕ್ ಶುರು ಮಾಡ್ದೆ. ನನ್ನ ನಿದ್ದೆ ಹಾಳ್ಮಾಡ್‌ಬ್ಯಾಡ ಅಂತ ಅವರೆಲ್ಲ ಅಂದ್‌ಬಿಟ್ರು. ಸುಮ್ಮನೆ ಬೀಸುಕ್ ಶುರು ಮಾಡ್ದೆ.'

'ನಾಳೆಯಿಂದ ದಿನಾ ಹೇಳೇ. ನಂಗೆ ಕೇಳ್‌ಬೇಕು ಅಂತ ಆಸೆಯಾಗಿದೆ'–ಎಂದವಳು ಏನೋ ಜ್ಞಾಪಿಸಿಕೊಂಡು, 'ಏನೂ ಬ್ಯಾಡ ಬಿಡು. ಬಸುರಿ ಹುಡುಗಿ, ಸೀತಾ ವನವಾಸದಂಥ ಹಾಡು ಹೇಳ್ಲೂ ಬಾರ್ದು, ಕೇಳ್ಲೂ ಬಾರ್ದು' ಎಂದಳು.

ಎರಡು ನಿಮಿಷವಾದ ಮೇಲೆ ಮತ್ತೆ ಹೇಳಿದಳು: 'ನೋಡು, ನೀನು ಹೋದಮ್ಯಾಲೆ ನಮ್ಮ ಊರಿನಲ್ಲೇ ಹಾಡು ಹೇಳೋ ಹೆಣ್ಮಕ್ಳು ಯಾರೂ ಇಲ್ಲ. ಯಾರ ಮನೇಲಾದ್ರೂ ಆರತಿ ಅಕ್ಷತೆ ಆದ್ರೆ ಪಿಚ್ ಅನ್ಸುತ್ತೆ ಅಂತ ಯಲ್ಲಾರೂ ಹೇಳ್ತಾರೆ. ನಿನ್ನ ಹಾಡಿನ ಪುಸ್ತಕಾನೂ ಮರ್ತೇ ಹೋಗಿದ್ದೀಯಂತೆ. ಅವತ್ತೊಂದು ದಿನ ಕಂಟಿಗೆ ಸಿಕ್ತಂತೆ. ಪಾಪುಂದು ಅಂತ ಅದೆಲ್ಲೋ ತೆಗೆದಿಟ್ಟಿದ್ದಾನೆ. ಬೆಳಿಗ್ಗೆ ಹುಡುಕಿ ತಗಂಡು ಹೇಳ್ಕ. ಇಲ್ದೆ ಇದ್ರೆ ಮರೆತ್ಹೋಗುತ್ತೆ.'

– 2 –

ಹಾಸನದಲ್ಲಿ ಕಲ್ಲೇಶನ ಧಾರೆಯಾದ ದಿನ ನಾಗಲಾಪುರದ ಬೆಸ್ತರ ಕೇರಿಯಲ್ಲಿ ಇಲಿ ಬಿದ್ದಿತ್ತು. ಅಂದರೆ ಪಿಳೇಗುಮಾರಮ್ಮ ಊರಿಗೆ ಬರುತ್ತಾಳೆ. ತನಗೆ ಯಾರು ಹರಕೆ ನಡೆಸಿಲ್ಲವೋ,ಯಾರು ಭಕ್ತಿಯಿಂದ ನಡೆದುಕೊಳ್ಳುವುದಿಲ್ಲವೋ, ಅಂಥವರನ್ನೆಲ್ಲ ನುಂಗಿ ನೀರು ಕುಡಿಯುತ್ತಾಳೆ. ಗ್ರಾಮಕ್ಕೆ ಅವಳು ಬರುವುದರೊಳಗೆ ಜನವೆಲ್ಲ ಮನೆ ಕೇರಿಗಳನ್ನು ಬಿಟ್ಟು ಊರ ಹೊರಗೆ ಹೊಲದಲ್ಲೋ ತೋಟದಲ್ಲೋ ಸೋಗೆಗುಡಿಸಲು ಹಾಕಿಕೊಂಡು ಇರಬೇಕು. ಮೂರು ತಿಂಗಳೋ ಅಥವಾ ಸ್ವಲ್ಪ ಹೆಚ್ಚಾಗಿಯೋ ಗ್ರಾಮದಲ್ಲಿ ಇದ್ದು ಅಮ್ಮ ಹೊರಟುಹೋದಮೇಲೆ ಜನರೆಲ್ಲ ಹಿಂತಿರುಗಬಹುದು.

ಆದರ ಮಾರನೆಯ ದಿನ ಗೂಡೆಮಾರಮ್ಮನವರು ಬಂದರು. ರಟ್ಟೆ ದಪ್ಪದ, ಮಾರುದ್ದದ ಸೆಣಬಿನ ಚಾವಟಿಯನ್ನು ಬೀಸಿ ತನ್ನ ಮೈಯಿಗೆ ಫಟಾರನೆ ಹೊಡೆದುಕೊಳ್ಳುತ್ತಾ, ಮೈಗೆ ಅರಿಶಿನ ಕುಂಕುಮಗಳನ್ನು ಮೆತ್ತಿಕೊಂಡಿದ್ದ ಅಮ್ಮನವನು ಗೂಡೆ ಹೊತ್ತು ಬಂದ. ಅವನ ಹಿಂದೆ ಅವನ ಹೆಂಡತಿ ಕಣಿ ಹೇಳುತ್ತಿದ್ದಳು: 'ಸುತ್ತ ಅರವತ್ತನಾಲ್ಕು ಹಳ್ಳಿಯಾಗೆ ಅಮ್ಮ ಕಾಣಿಸಿಕೊಂಡವ್ಳೆ! ದೂಳಿ ದುಪ್ಪಟ ಮಾಡುತವ್ಳೆ! ತಾಯೀರ ಬಿಟ್ಟು ಮಗೂನ ತಿಂತವ್ಳೆ! ಮಕ್ಕಳ ತಾಯೀರ ಎಳಕೊಂಡು ಹೋಗ್ತವ್ಳೆ! ಸೋಬನವಾಗದ ಹುಡುಗೀ

ತಿಂತವ್ಪೆ! ಸೋಬನಕ್ಕೋದ ಗಂಡಿನ ಮುಂಡಿಗೆ ಮುರಿದವ್ಪೆ! ಬಸಿರ ಹೆಂಗಸಿನ ಜೀವ ತಿಗದವ್ಪೆ!' ಹಾ, ಲ, ಲಲಲಲಲಲ ಛಟೀರ್, ಛಟ್ ಎಂದು ನಡುನಡುವೆ ಗಂಡಸು ಚಾವಟಿಯಿಂದ ತನ್ನ ಬರಿಯ ಮೈಮೇಲೆ ಹೊಡೆದುಕೊಳ್ಳುತ್ತಿದ್ದ.

ಹೀಗೆ ಗೂಡೆಮಾರಮ್ಮ ಬರುವುದು, ಬಂದು ಕಣಿ ಹೇಳುವುದೂ ಅಪರೂಪವೇನಲ್ಲ. ಆದರೆ ಬಸಿರ ಹೆಂಗಸಿನ ಜೀವ ತಿಗದವ್ಪೆ-ಎಂಬ ಮಾತನ್ನು ಕೇಳಿ ಅಕ್ಕಮ್ಮನಿಗೆ ಗಾಬರಿಯಾಯಿತು. ಅರಿಶಿನ, ಕುಂಕುಮ, ಅಕ್ಕಿ, ಬೇಳೆ, ತೆಂಗಿನಕಾಯಿ, ಮೇಲೆ ಮೂರು ಕಾಸಿನ ದಕ್ಷಿಣೆಗಳನ್ನು ಮೊರದಲ್ಲಿಟ್ಟುಕೊಂಡು, ತಾನೇ ಎಲ್ಲರಿಗಿಂತ ಮೊದಲು ಹೋಗಿ ಅಮ್ಮನಿಗೆ ಒಪ್ಪಿಸಿ ಅವಳ ಪ್ರಸಾದದ ಕುಂಕುಮ ತಂದು ಇಟ್ಟುಕೊಳ್ಳುವಂತೆ ನಂಜುವಿಗೆ ಕೊಟ್ಟಳು.

ಮರುದಿನ ಇನ್ನೂ ಹೆಚ್ಚು ಇಲಿಗಳು ಬಿದ್ದವು; ಊರಿನ ಇತರ ಕೇರಿಗಳಲ್ಲಿ ಕಾಣಿಸಿಕೊಂಡವು. ಸುತ್ತ ಹಳ್ಳಿಗಳವರೆಲ್ಲ ಆಗಲೇ ಊರು ಬಿಡುತ್ತಿರುವ ಸುದ್ದಿ ಬಂತು. ಇನ್ನು ಇವರು ಸಹ ಸಾಧ್ಯವಾದಷ್ಟು ಬೇಗ ಶೆಡ್ಡು ಹಾಕಬೇಕು. ಗ್ರಾಮದ ಶ್ಯಾನುಭೋಗ ಶ್ಯಾಮಣ್ಣನವರು ಸಂಜೆಗೇ ಮನೆಗೆ ಒಂದು ಆಳಿನಂತೆ ಬರಹೇಳಿ ಪಂಚಾಯ್ತಿ ಮಾಡಿ, ಬರುವ ಸೋಮವಾರದೊಳಗೆ ಎಲ್ಲರೂ ಊರು ಬಿಡಬೇಕೆಂದು ತೀರ್ಮಾನಿಸಿದರು. ಸರಿ, ಮರುದಿನ ಬೆಳಿಗ್ಗೆಯಿಂದಲೇ ಜನಗಳು ತಮ್ಮ ತಮ್ಮ ಹೊಲ ತೋಟಗಳಲ್ಲಿ, ಜಮೀನಿಲ್ಲದವರು ಮತ್ತೊಬ್ಬರ ಭೂಮಿಯಲ್ಲಿ ಶೆಡ್ಡು ಹಾಕಲು ಪ್ರಾರಂಭಿಸಿದರು. ಸಣ್ಣ ವ್ಯವಾಟಿನವರು ಸಾಮಾನುಗಳನ್ನೂ ಸಾಗಿಸಿದರು.

ಕಂಠೀಜೋಯಿಸರು ಮಗನ ಮದುವೆ ಮಾಡಿಕೊಂಡು ಊರಿಗೆ ಬರುವ ದಿನಕ್ಕೆ ಆಗಲೇ ಎಷ್ಟೋ ಮನೆಗಳವರು ಸಾಮಾನು ಸಾಗಿಸಿದ್ದರು. ಮದುವೆಯ ಗಲಾಟೆ ಕಳೆದು ವಿರಾಮ ತೆಗೆದುಕೊಳ್ಳಬೇಕೆಂಬ ಹೊತ್ತಿಗೆ ಸರಿಯಾಗಿ ಇದೊಂದು ಕೆಲಸ ಬಿತ್ತು. ಹೊಸದಾಗಿ ಸುಣ್ಣಕಾರಿಣೆ ಮಾಡಿಸಿದ್ದ ಮನೆಯನ್ನು ಖಾಲಿ ಮಾಡಬೇಕು. ಊರು ಬಿಡಬೇಕಾದರೆ ಗ್ರಾಮದ ಪುರೋಹಿತರನ್ನು ಕೇಳಿ ನಿರ್ಧರಿಸುವುದು ವಾಡಿಕೆ. ಸಣ್ಣಪುಟ್ಟ ಪೌರೋಹಿತ್ಯ ಕೆಲಸಗಳಿಗೆ ಕಂಠೀಜೋಯಿಸರೇ, ಪುಟ್ಟಭಟ್ಟರು ಎಂಬ ಒಬ್ಬ ಎಡತೊರೆ ಕಡೆಯ ಬಡ ಬ್ರಾಹ್ಮಣನನ್ನು ನೇಮಿಸಿ ಅದರ ಆದಾಯವನ್ನೆಲ್ಲ ಅವರಿಗೇ ಬಿಟ್ಟಿದ್ದರು. ಆದರೆ ಈ ಸಲ ಶ್ಯಾನುಭೋಗ ಶ್ಯಾಮಣ್ಣ ಇವರನ್ನೂ ಕೇಳಲಿಲ್ಲ. ಇವರ ಅನುಪಸ್ಥಿತಿಯಲ್ಲಿ ಪುಟ್ಟಭಟ್ಟರನ್ನೂ ಕರೆಸಿರಲಿಲ್ಲ. ತಾನೇ ಎಲ್ಲ ತೀರ್ಮಾನವನ್ನೂ ಮಾಡಿದ್ದ. ಅವನಿಗೂ ಇವರಿಗೂ ಮೊದಲಿನಿಂದ ವೈರ. ಜೊತೆಗೆ, ಹೋದ ವರ್ಷ ಇಬ್ಬರಿಗೂ ಗದ್ದೆಯ ನೀರಿನ ವಿಷಯವಾಗಿ ಜಗಳವಾಗಿತ್ತು. ಆಗಿನಿಂದ ಅವನು ಹೀಗೆಯೇ ಏನಾದರೂ ಮಾಡುತ್ತಿದ್ದಾನೆ. ಅವನ ತೀರ್ಮಾನವನ್ನು ತಾವು ವಿರೋಧಿಸಬೇಕೆಂದು ಅವರು ನಿಶ್ಚಯಿಸಿದರು.

ಮದುವೆಯವರು ಹಿಂತಿರುಗಿದ ಮರುದಿನವೇ ತಿಂಗಳ ಕಂಬೋಲಿ ಶಾಸ್ತ್ರ ಮಾಡಿ ಚಪ್ಪರ ಅಳ್ಳಾಡಿಸಿದರು. ಚೆನ್ನಿಗರಾಯ, ಅಪ್ಪಣ್ಣಯ್ಯ, ಸಾತು, ಮೂವರೂ ಗಾಡಿಯ ಮೇಲೆ ಊರಿಗೆ ಹೋದರು.

ಈ ಶ್ಯಾಮಣ್ಣನಿಗೆ ಏನು ಮಾಡಬೇಕು? ಅವನು ಮಾಡಿರುವ ತೀರ್ಮಾನವನ್ನು ವಿರೋಧಿಸಬೇಕು. ಆದರೆ ಜನಗಳು ಆಗಲೇ ಸಾಮಾನು ಸಾಗಿಸಿ ಮನೆಗೆ ಬೀಗ ಹಾಕಿ, ಅಕ್ಷರ ಬಲ್ಲವರು ಬಾಗಿಲ ಮೇಲೆ 'ನಾಳೆ ಬಾ' ಎಂದು ಬರೆದು ಶೆಡ್ಡಿಗೆ ಹೋಗುತ್ತಿದ್ದಾರೆ. ಒಬ್ಬರು ಊರು ಬಿಡುವುದೇ ತಡ, ಉಳಿದವರೆಲ್ಲ ಹೆದರಿಕೆಯಿಂದ ಬೇಗ ಬೇಗ ಸಾಮಾನು ಕಟ್ಟುತ್ತಾರೆ. 'ನಾನು ಶಾಸ್ತ್ರ ನೋಡಿದೀನಿ. ಊರಿಗೆ ಏನೂ ಆಗುಲ್ಲ. ಯಾರೂ ಬಿಡಬೇಡಿ' ಎಂದು ಕಂಠೀಜೋಯಿಸರು ಹೇಳಿದರೂ ಯಾರೂ ಕೇಳಲಿಲ್ಲ. 'ಹಂಗಾದ್ರೆ ನೀವು ಊರೊಳಗೇ ಇರ್ತೀರಾ?'-ಎಂದು ಯಾರೋ ಒಬ್ಬರು ಕೇಳಿದರು 'ಹೂಂ. ಇರ್ತೀನಿ'-ಎಂದು ಇವರು ಹಟದ ಭರದಲ್ಲಿ ಅಂದುಬಿಟ್ಟರು. ತಾವೇ ಆಡಿದ ಆ ಮಾತನ್ನು
ಉಳಿಸಿಕೊಳ್ಳಬೇಕೆಂದು, ಬಿಟ್ಟ ಊರಿನಲ್ಲಿ ಒಬ್ಬರೇ ಇರಲು ನಿಶ್ಚಯಿಸಿದರು.

ಈ ತೀರ್ಮಾನವನ್ನು ಅಕ್ಕಮ್ಮ ಉಗ್ರವಾಗಿ ವಿರೋಧಿಸಿದಳು: 'ಮೊಮ್ಮಗಳು ಚೊಚ್ಚಲು ಬಾಣಂತನಕ್ಕೆ ಬಂದಿದ್ದಾಳೆ. ಹಾಳುಬಿಡಿದ ಊರಿನಲ್ಲಿ ಒಂದೇ ಒಂದು ಸಂಸಾರ ಇರೋದು ಹ್ಯಾಗೆ? ನಾವೂ ಬಿಡಲೇಬೇಕು. ಇಲ್ಲದಿದ್ದರೆ ಅವಳನ್ನು ಅವಳ ಅತ್ತೆಯ ಮನೆಗೇ ಕಳಿಸಿಬಿಡ್ತೀನಿ. ಬಾಣಂತನ ಮಾಡೂಕೆ ಶಕ್ತಿ ಇಲ್ಲದೆ ಕಳಿಸಿದ್ರು ಅಂತ ಅವರು ಅಂದ್‌ಕಂಡ್ರೆ ಅಂದ್‌ಕಳ್ಲಿ. ಬೇಕಾದ್ರೆ ನಾನೂ ಅಲ್ಲಿಗೇ ಹೋಗಿ ಬಾಣಂತನ ಮಾಡಿ ಬರ್ತೀನಿ.'

'ನಾನು ಊರು ಬಿಡೂದಿಲ್ಲ ಅಂತ ಜೂರತ್ತಿನಿಂದ ಹೇಳಿದೀನಲ್ಲ. ಬಿಟ್ರೆ ನನ್ ಮರ್ಯಾದೆ ಏನಾಗ್‌ಬೇಕು?'

'ಅದರಲ್ಲೆಂಥ ಮರ್ಯಾದೆ? ಸುಮ್‌ನೆ ಬಾ.'

ಕಂಠೀಜೋಯಿಸರು ತಮ್ಮ ಮರ್ಯಾದೆಯನ್ನು ಕೈಬಿಡಲು ಒಪ್ಪಲಿಲ್ಲ. ಮತ್ತೆ ವಾಗ್ವಾದ ನಡೆದು ಊರ ಆಚೆಯ ಅವರ ಹೊಲದಲ್ಲಿ ಶೆಡ್ಡು ಹಾಕಿಸುವುದು, ಅಲ್ಲಿ ಅಕ್ಕಮ್ಮ ನಂಜಮ್ಮರು ಇರುವುದು, ನಂಜಮ್ಮನ ಬಾಣಂತಿತನ ಶೆಡ್ಡಿನಲ್ಲೇ ಆಗುವುದು ಎಂದು ನಿಶ್ಚಯವಾಯಿತು. ಆದರೆ ಕಂಠೀಜೋಯಿಸರು ಮಾತ್ರ ಊರಿನಲ್ಲಿ ಮನೆಯಲ್ಲಿಯೇ ಉಳಿಯಲು ತೀರ್ಮಾನಿಸಿದರು. 'ನಿಂದು ಮೊದಲಿಂದ ಯಂಬ್ರಮ್ಮ ಬುದ್ಧಿ.

ನೀನೊಬ್ಬನೇ ಇಲ್ಲಿ ಯಾಕಿರಬೇಕು? ಅಲ್ಲಿಗೆ ಬರೂಕಾದೇ?

'ಫ್ಲೇಗಿನ ಅಮ್ಮ ನನ್‌ತಾವ ಏನೂ ಕಿತ್‌ಕಳಾದಿಲ್ಲ. ನಾನು ಗಂಡು, ಇಲ್ಲೇ ಇರ್ತೀನಿ.'

ಬೇರೆ ಉಪಾಯವಿರಲಿಲ್ಲ. ಅವರು ಹಾಕಿಕೊಟ್ಟ ಶೆಡ್ಡಿಗೆ ಸಾಮಾನು ಸಮೇತ ಅಜ್ಜಿ ಮತ್ತು ಬಸುರಿ ಮೊಮ್ಮಗಳು ಹೋದರು. ಆದರೆ ಬಿಟ್ಟ ಊರಿನಲ್ಲಿ ಒಬ್ಬನೇ ಇರುವ ಅವರ ಮೈಮೇಲೆ ಅಮ್ಮ ಇರುವುದರಿಂದ ಅವರು ಊರ ಹೊರಗಿನ ಶೆಡ್ಡಿಗೆ ಹೋಗಿ ತಮ್ಮ ತಾಯಿ ಮತ್ತು ಮಗಳನ್ನು ಆಗಾಗ್ಗೆ ನೋಡಕೂಡದೆಂದು ಶ್ಯಾಮಣ್ಣ ಪಂಚಾಯ್ತಿ ಮಾಡಿಸಿ ಕಟ್ಟು ಮಾಡಿಸಿದ. ಎಂದರೆ ನಂಜುವಿನ ಹೆರಿಗೆ ಬಾಣಂತಿತನಗಳ ಕಷ್ಟ ಸುಖವೇನಿದ್ದರೂ ಮುದುಕಿ ಅಕ್ಕಮ್ಮನ ಮೇಲೆ ಮಾತ್ರ ಬಿತ್ತು.

– 3 –

ಇಡೀ ಊರಿಗೇ ಕಂಠೀಜೋಯಿಸರು ಒಬ್ಬರೇ ಉಳಿದರು. ಒಂದು ಹಸುವನ್ನು ಅವರು ಶೆಡ್ಡಿಗೆ ಕಳುಹಿಸಿದ್ದರು. ಇನ್ನೊಂದು ಹಸು ಕರುವನ್ನು ತಮಗೆ ಇಟ್ಟುಕೊಂಡರು. ತಮ್ಮ ಅಡಿಗೆ ತಾವೇ ಮಾಡಿಕೊಳ್ಳುತ್ತಿದ್ದರು. ಮನೆಯನ್ನು ಗುಡಿಸಿ ಚೊಕ್ಕಟವಾಗಿಟ್ಟುಕೊಂಡು ಹುಲಿ ಚರ್ಮದ ಮೇಲೆ ಕೂತು ಜೋತಿಷ್ಯದ ಓಲೆಗರಿಗಳನ್ನು ಎಷ್ಟೋ ತರಹದ ಮಂಡಲಗಳು, ತ್ರಿಕೋಣ, ಚತುಷ್ಕೋಣ, ಪಂಚಕೋಣಾದಿ ಆಕೃತಿಗಳು, ಹ್ರೀಂ, ಧೀಂ, ಓಂ ಮೊದಲಾದುವುಗಳ ಮಂತ್ರ ಶಕ್ತಿಗಳನ್ನು ಕುರಿತು ಮನಸ್ಸಿನಲ್ಲಿಯೇ ಚಿಂತಿಸುತ್ತಿದ್ದರು. ಇಲ್ಲವೇ ಗಟ್ಟಿಯಾಗಿ ಯಾವುದಾದರೂ ಮಂತ್ರ ಹೇಳಿಕೊಂಡು ಹಿತ್ತಲ ಕಡೆ ಸುತ್ತಾಡುವರು. ತುಂಬ ಬೇಸರವಾದರೆ ಒಂದೊಂದು ದಿನ ಕುದುರೆ ಏರಿ ದೂರದ ಚೆನ್ನರಾಯಪಟ್ಟಣದ ಕಡೆಗೆ ಹೋಗಿಬರುವರು.

ಅವರು ಒಟ್ಟಿಗೆ ಇಷ್ಟು ದಿನ ಊರಿನಲ್ಲಿ ಇದ್ದುದೇ ಇಲ್ಲ. ಈಗಲೂ ಇರುವ ಅಗತ್ಯವಿರಲಿಲ್ಲ. ಆದರೆ ಒಂದು ವಿಧವಾದ, ಶ್ಯಾನುಭೋಗ ಶ್ಯಾಮಣ್ಣನ ಮೇಲಿನದಿರಬಹುದು, ಅಥವಾ ತಾವು ಬೇಡವೆಂದರೂ ಕೇಳದೆ ಹೆದರಿ ಊರು ಬಿಟ್ಟು ಹೋದ ಇಡೀ ಗ್ರಾಮಸ್ಥರ ಮೇಲಿನದಿರಬಹುದು, ಹಟದ ಮೇಲೆ ಎಲ್ಲಿಯೂ ಹೋಗದೆ, ಬಿಟ್ಟ ಊರಿನಲ್ಲಿ ಒಬ್ಬರೇ ಇದ್ದರು. ಕತ್ತಲೆ, ಒಂಟಿತನ, ಕಳ್ಳಕಾಕರು, ತಲೆಯೊಡೆಯುವವರು. ಹಾವು, ಹಲ್ಲಿ ಮೊದಲಾಗಿ ಯಾವುದಕ್ಕೂ ಹೆದರುವುದು ಅವರ ರಕ್ತದಲ್ಲೇ ಇರಲಿಲ್ಲ.

ಒಂದು ದಿನ, ಬಿಟ್ಟ ಊರಿನೊಳಕ್ಕೆ ಒಬ್ಬರು ಬಂದರು. ಸುಮಾರು ಐವತ್ತು ವರ್ಷ ವಯಸ್ಸು. ಕಮಾನಿನಂತೆ ನೆತ್ತಿಯ ಮುಂಭಾಗ ಬೋಳಿಸಿದೆ. ಹಿಂಬಾಗದ ಬಿಳೀ ಜುಟ್ಟನ್ನು ಗಂಟುಹಾಕಿ ಕಟ್ಟಿರುವ ಆತ ಒಂದು ಕೆಂಪು ಅಂಗಿ, ಕೊಳೆಯಾದ ಕರಿ ಕೋಟು ಹಾಕಿ ಕಚ್ಚೆ ಪಂಚೆ ಉಟ್ಟಿದ್ದಾರೆ. ಮುಂಭಾಗದ ಎರಡು ಹಲ್ಲು ಬಿದ್ದಿದ್ದ ಬಾಯಿ ಹೊಗೆಸೊಪ್ಪು ಹಾಕುವ ಅಭ್ಯಾಸವನ್ನು ತೋರಿಸುತ್ತದೆ. ಬಲಗೈಯ ಮಧ್ಯದ ಬೆರಳಿಗೆ ಚಿನ್ನದ ದಾರದಲ್ಲಿ ಹೆಣೆದು ಮಾಡಿದಂತಹ ಮಾಂತ್ರಿಕ ಉಂಗುರ. ಬಂದವರ ಗುರುತು ತಕ್ಷಣ ಹತ್ತಲಿಲ್ಲವಾದರೂ ಒಂದು ನಿಮಿಷದ ಮೇಲೆ ನೆನಪಾಗಿ ಕಂಠೀಜೋಯಿಸರೇ ಮಾತನಾಡಿಸಿದರು: 'ಏನು ವೀರಾಚಾರೀ, ಬಿಟ್ಟ ಊರೊಳಕ್ಕೆ ಬಂದುಬಿಟ್ಟೆ?'

'ನಿಮ್ಮನ್ನೇ ಕಂಡು ಹೋಗಾನ ಅಂತ ಎಲ್ಡು ವರ್ಸದಿಂದ ಒಟ್ಟು ನಾಕು ದಿನ ಬಂದಿದ್ದೆ. ನೀವು ಊರಲ್ಲಿ ಇರ್ತೀರಾ ಇಲ್ಲಾ ಅನ್ನೂದು ಯಾರಿಗೂ ತಿಳಿಯಾಕಿಲ್ಲ. ಇವತ್ತು ಹಂಗೇ ನೋಡ್ಕಂಡ್ ಹೋಗಾನಾ ಅಂತ ಮತ್ತೆ ಬಂದೆ.'

'ಬಾ,ಬಾ. ಒಳಗೆ ಕೂತುಕೊ.'

ವೀರಾಚಾರಿ ಒಳಗೆ ಬಂದು ಕುಳಿತ. ತಮ್ಮ ಆಸನದ ಹತ್ತಿರ ಕಂಠೀಜೋಯಿಸರು ನಾಲ್ಕು ಹಳೇ ಎಕ್ಕಡಗಳನ್ನಿಟ್ಟಿದ್ದರು. ಅವನು ಕೇಳಿದ: 'ಅಳೇ ಯಕ್ಡ್ದ ಸಂಗ್ತಿ ನೀವ್ ಒಪ್‌ತೀರಾ ಬುದ್ಧಿ?'

'ಹೂ. ಕೈಗೆ ತಗಂಡ್ ನಿಂತ್ಕಂಡ್ರೆ ಯಾವನಾದ್ರೂ ಮಾತು ಕೇಳ್ತಾನೆ.'

'ಅದುಕ್ಕಲ್ಲ ಏಳಿದ್ದು. ಗಾಳಿ ಪೀಡೆ ಓಡುಸ್ತದಂತೆ ಅದು.'

'ಅದೂ ಆಗುತ್ತೆ ಅನ್ನು. ನಾನು ಇಟ್‌ಕಂಡಿರೋದು ಮನುಷ್ಯರಿಗೆ.'

ಸ್ವಲ್ಪ ಹೊತ್ತು ಅದೂ ಇದೂ ಮಾತನಾಡಿದ ಮೇಲೆ ಜೋಯಿಸರೇ ಕೇಳಿದರು: 'ಏನು ನೀನು ಬಂದ ಜಂಬ್ರ?'

'ಹಂಗೇ ಬಂದೆ. ಈಗ ಎಲ್ಡು ವರ್ಸದಾಗೆ ಒಂದ್ ಕೆಲ್ಸವಾಯ್ತು. ಚೋಳನ ಗುಡ್ಡದ್ ತಾವ್‌ಳ ಕಟಿಗೇಅಳ್ಳಿಯೋರುದ್ದ ಒಂದು ಮಾಟ ಮಾಡ್ಸಿದ್ದೆ. ಅಮಾಸೆ ದಿನ. ಚೌಡಮ್ಮನ್ ಮ್ಯಾಲೆ ಮಡ್‌ಗಿದ್ ದಕ್ಷಿಣೆ ದುಡ್ಡು, ಮೂರು ಚಿಪ್ಪು ಬಾಳೇಹಣ್ಣು, ಎಲ್ಲಾನೂ ಯಾರೋ ಯಗರಿಸ್‌ಕಂಡ್ ಓಗಿದ್ರು. ನಿಮ್‌ಗೇನಾರಾ ಗೊತ್ತಾ ಕೇಳಾಣಾ ಅಂತ ಬಂದೆ.'

'ಮಾಟ ಮಾಡಾದು ಕಲ್ತಿರೋನ್ಗೆ ಕವಡೆ ಬಿಟ್ಟು ಶಾಸ್ತ್ರ ನೋಡಾಕ್ ಬರುಲ್ವೇನೊ? ನನ್ನೇನ್ ಕೇಳ್ತೀಯಾ? ಶಾಸ್ತ್ರ ನೋಡಾಕೆ ನಿಂಗಿಂತ ನಂಗೆ ಗೊತ್ತಾ?'

ಇದುಕ್ ಸಾಸ್ತ್ರವೂ ಬ್ಯಾಡ ಸುಕನಾತಿಯೂ ಬ್ಯಾಡ. ಅವತ್ ರಾತ್ರಿನಾಗ ಮತ್ತೆ ಬಂದ್ ನೋಡಿದ ಪಟೀಗೆ

ನನ್ಗೆ ಗೊತ್ತಾಗ್‌ಹೋಯ್ತು. ನಾನ್ ಮಾಡಿ ಮಡಗಿದ ಚೌಡಮ್ಮನ್ನ ಮುರ್ದ್‌ಹಾಕಿ ಅವಳ ಮೈಮ್ಯಾಲಿನ ದುಡ್ಡು ತಗಂಡು ಬಾಳೆಹಣ್ಣು ತಿಂದು ಅರಗಿಸ್‌ಕಳಾ ಸಗ್‌ತಿ ಇನ್ಯಾರಿಗೂ ಇಲ್ಲ. ಅಮಾಸೆ ರಾತ್ರಿ ಹೊತ್ನಾಗ ಅಲ್ಲಿಗೆ ಹೋಗಾ ಗುಂಡಿಗೆ ಯಾರಿಗೈತೆ? ಈ ಸೀಮೇಲೇ ಕಂಠ್ಯಪ್‌ನೋರಲ್ದೆ ಇನ್ಯಾರ್ಗೂ ಇದು ಎಟ್‌ಕಾ ಮಾತಲ್ಲ ಅಂತ ನನಗೆ ತಿಳಿದ್‌ಹೋಯ್ತು. ನಿಜ ಹೇಳಿ ದೋಸ್‌ರೆ.'

'ನಿಂಗೂ ಬುದ್ಧಿ ಇದೆ ಕಣೋ ಆಚಾರಿ. ಈಗ್ ಏನ್ ಆ ದುಡ್ಡು ಕೇಳಾಕ್ ಬಂದ್ಯೇನು?'

'ಆ ದುಡ್ಡಿನ ಮನೆ ಆಳಾಯ್ತು. ಅದು ಬ್ಯಾಡ. ಇನ್ ಯಾವತ್ತೂ ನಾನ್ ಕೈ ಆಕಿದ್ ತಾವುಕ್ ನೀವು ಕಾಲ್ ಆಕ್‌ಬ್ಯಾಡಿ ಕಣಪ್ಪ. ನಿಮಿಗ್ ಕೈ ಮುಗೀತೀನಿ.'

'ಆಯ್ತು ಬಿಡು. ನಾನಿನ್ನೂ ಅಡಿಗೆ ಮಾಡಿಲ್ಲ. ಈಗ ಇಬ್ರಿಗೂ ಮಾಡ್ತೀನಿ. ಇದ್ದು ಊಟ ಮಾಡ್‌ಕಂಡು ಹೋಗು.'

ವೀರಾಚಾರಿ ಊಟಕ್ಕೆ ಉಳಿದ. ಸಂಜೆ ನಾಲ್ಕು ಗಂಟೆಯ ತನಕ ಇದ್ದು ಹೊರಟು ಹೋದ. ಆ ದಿನ ರಾತ್ರಿ ಕಂಠೀಜೋಯಿಸರಿಗೆ ಇದ್ದಕ್ಕಿದ್ದಹಾಗೆಯೇ ಮಗಳ ನೆನಪು ಬಂತು. 'ಈಗ ಹೆರಿಗೆಯ ದಿನ ಹತ್ತಿರವಾಗಿರಬಹುದು. ನಾನು ಹೋಗಿ ನೋಡಿಯೇ ಇಲ್ಲ. ಆ ಬದ್ಮಾಷ್ ಶಾಮಣ್ಣ ಪಂಚಾಯ್ತೀಲಿ ಕಟ್ಟು ಮಾಡಿಸಿದ ಅಂತ ನಾನ್ಯಾಕೆ ಹೆದರ್‌ಕಂಡು ಅಲ್ಲಿಗೆ ಹೋಗದೆ ಇರಬೇಕು.? ನಾಳೆ ಹೋಗಿ ನೋಡ್‌ಕಂಡೇ ಬತ್ತೀನಿ. ಅವ್ನು ನನ್‌ತಾವ ಅದೇನು ಕಿತ್ಕತಾನೋ ನೋಡಾಣ. ಅವನ ಶೆಡ್ಡು ನಮ್ಮುದ್ರ ಹತ್ರಾನೇ ಇದೆ. ರಾಜಾರೋಷಾಗಿ ಅವನ ಎದುರಿಗೇ ಹೋಗ್ತೀನಿ. ಅವ್ನೇನಾದ್ರು ಗುರ್ ಅಂದ್ರೆ ಚಮ್‌ಡ ನಿಕಾಲ್ ಮಾಡ್ತೀನಿ, ಮಾದರ್‌ಚೋದಂದು. ನಾನು ಇಷ್ಟು ದಿನ ಅಲ್ಲಿಗೆ ಹೋಗದೆ ಇದ್ದುದೇ ಸರಿಯಾಗಲಿಲ್ಲ. ನನ್ನ ಪಂಚಾಯ್ತಿ ಕಟ್ಟಿಗೆ ಹೆದರ್ಕಂಡೇ ಕಂಠಿ ಬರಲಿಲ್ಲ ಅಂತ ತಿಳ್ಕಂಡು ಅವ್ನು ಮೀಸೆ ತಿರುವ್‌ಕತ್ತಿರಭೌದು. ನನ್ ಉಚ್ಚೇಲಿ ಬೋಳಿಸ್‌ಬೇಕು ಆ ಮಿಂಡ್ರಿಗೆ ಹುಟ್ಟಿದ ಮಗನ ಮೀಸೇನ'–ಎಂಬ ಆಲೋಚನೆಯಲ್ಲಿ ಅವರು ಆ ಮಗ್ಗುಲು ಆಡುತ್ತಿರುವಾಗ ಮನೆಯ ಹೆಂಚಿನ ಮೇಲೆ ಏನೋ ಬಿದ್ದಂತೆ ಆಯಿತು. ಮತ್ತೆ ಒಂದು ನಿಮಿಷದಲ್ಲಿ ಎರಡು ಕಲ್ಲು ಬಿದ್ದ ಶಬ್ದವಾಯಿತು. ಈ ವೀರಾಚಾರಿದೇನಾರಾ ಇದೆಯೇ ಕೆಲಸ ಎಂಬ ಯೋಚನೆ ಮನಸ್ಸಿನಲ್ಲಿ ಬರುತ್ತಿರುವಂತೆಯೇ ಮನೆಯ ಮೇಲೆ ಪಟಪಟನೆ ಇಪ್ಪತ್ತು ಮೂವತ್ತು ಕಲ್ಲು ರೊಂಯ್ ರೊಂಯ್ ಎನ್ನುತ್ತಾ ಬಂದು ಬಿದ್ದವು. 'ವೀರಾಚಾರಿಗೂ ಇದಕ್ಕೂ ಏನೂ ಸಂಬಂಧವಿಲ್ಲ. ಈ ಊರ್ನೋರೇ ಯಾರೋ ಇರಬೇಕು, ನನ್ನ ಹೆದರುಸ್‌ಬೇಕು ಅಂತ ಏನೋ ಮಡಿದಾರೆ. ಇರ್ಲಿ ಈ ಶಿಖಂಡಿ ಸೂಳೆಮಕ್ಕಿಗೆ ತೋರುಸ್ತೀನಿ ಕೈಯ'–ಎಂದು ಅವರು ಹಾಗೆಯೇ ಮೇಲೆ ಎದ್ದು, ಶಬ್ದವಾಗದಂತೆ ಹಿಂಭಾಗದ ಬಾಗಿಲು ತೆಗೆದು ಹಿತ್ತಿಲಿಗೆ ಬಂದರು. ಮೆಲ್ಲಗೆ ಹಿತ್ತಿಲಿನ ಗೋಡೆ ಹಾರಿ ಪಕ್ಕದ ಮನೆಯನ್ನು ಬಳಸಿ ಬೀದಿಗೆ ಬಂದು ಒಂದು ಸಲ ಗಟ್ಟಿಯಾಗಿ 'ಯಾವನೋ ಅವನು ಬೋಳೀಮಗನೇ, ನಿನ್ನ ಆವ್‌ತಿ ತಗಂಡ್‌ಬಿಡ್ತೀನಿ' ಎಂದು ಅಬ್ಬರಿಸಿದರು. ನಾಲ್ಕೈದು ಜನಗಳು ದಿಕ್ಕು ತೋಚದೆ ಎತ್ತೆತ್ತಲೋ ಓಡತೊಡಗಿದರು. ಅವರು ಭಯದಿಂದ ತತ್ತರಿಸುತ್ತಿರುವಂತೆ ಇವರು ಇನ್ನೊಂದು ಸಲ ಅಬ್ಬರಿಸುತ್ತಾ ಮುನ್ನುಗ್ಗಿ ಹೋಗಿ ಅವರ ಪೈಕಿ ಒಬ್ಬನನ್ನು ಹಿಡಿದರು. ಉಳಿದವರು ತಪ್ಪಿಸಿಕೊಂಡು ಪರಾರಿಯಾದರು.

ಸಿಕ್ಕಿದವನ ಹೆಸರು ಜುಟ್ಟಗ. ಶ್ಯಾನುಭೋಗ ಶ್ಯಾಮಣ್ಣನವರ ಗದ್ದೆಯನ್ನು ವಾರಕ್ಕೆ ಗೇಯುತ್ತಿದ್ದ ಅವನು ಧೈರ್ಯಶಾಲಿ, ನಿಜ. ಆದರೆ ಈಗ ಭಯದಿಂದ ಗಡಗಡ ನಡುಗಲು ಪ್ರಾರಂಭಿಸಿದ.

ಕಂಠೀಜೋಯಿಸರೆಂದರೇ ಒಂದು ಮಾರಮ್ಮನಿಗೆ ಸಮಾನ. ಬಿಟ್ಟ ಊರಿನಲ್ಲಿ ಮಾರಮ್ಮ ಇದ್ದೇ ಇರುತ್ತಾಳೆ ಎಂದು ಅವನು ಕೇಳಿದ್ದ. ಕತ್ತಲೆಯ ಈ ನಡು ರಾತ್ರಿಯಲ್ಲಿ ತನ್ನ ಜೊತೆಯವರೆಲ್ಲ ಹೊರಟು ಹೋಗಿರುವಾಗ ಅಬ್ಬರಿಸಿಕೊಂಡು ಬಂದು ತನ್ನನ್ನು ಹಿಡಿದು ಕೆಡವಿಕೊಂಡಿರುವುದು ಮಾರಮ್ಮನೋ ಅಥವಾ ಕಂಠೀಜೋಯಿಸರೋ ಎಂಬುದು ಅವನಿಗೆ ನಿಶ್ಚಯವಾಗಿ ತಿಳಿಯಲಿಲ್ಲ. ಕಂಠೀಜೋಯಿಸರೆಂದು ಸ್ಪಷ್ಟವಾಗಿ ತಿಳಿದಿದ್ದರೂ, ಅವರೂ ಮಾರಮ್ಮನೇ ಅಲ್ಲವೆಂದು ನಂಬಿಕೆಯಾಗುವಂತಿರಲಿಲ್ಲ.

'ಯ ಯ ಯಪ್ಪಾ, ನನನನ್ ಬು ಬು ಬುಟ್‌ಬುಡಿ'–ಎಂದು ಕೈ ಮುಗಿದ.

'ನೀನ್ ಯಾರು, ಶ್ಯಾಮಣ್ಣ ಕಳಿಸಿದ್ನೇನೋ?'

'ಊಂ.'

'ಇಲ್ಲೀಗ್ ಬರೋ ಧೈರ್ಯ ಹೆಂಗಾಯ್ತೋ ನಿಂಗೆ?'

'ನೀ ನೀ ನೀವ್ ಊರಾಗಿರಾಕಿಲ್ಲ ಅಂತ ಏ ಏಳಿದ್ರು.'

'ನಾನು ಊರಾಗಿಲ್ದೇಹೋದ್ರೂ ನನ್ನ ಮನೇ ಮೇಲೆ ಕಲ್ಲು ಹೊಡಿಯೋ ಧೈರ್ಯ ಹ್ಯಂಗೆ ಬಂತೋ ನಿಂಗೆ?'

'ನೀನು ಹೋಗ್ದೇ ಇದ್ರೆ ನಿನ್ನ ಗದ್ದೆ ಬುಡುಸ್‌ಬುಡ್ತೀನಿ ಅಂದ್ರು.'

'ಬಾಕಿಯೋರ್ಯಾರ್ಯಾರು?'

'ತಿಮ್ಮಕ್ಕನ ಮನೆ ಗಿಡ್ಡ, ಮ್ಯಾಗಳ ಕೇರಿ ಗುಳ್ಳಿಗ, ತಳವಾರರ ಸಿದ್ದೂರ.'

'ಅವರಿಗೆಲ್ಲ ಹ್ಯಂಗೆ ಧೈರ್ಯ ಬಂತು?'

‘ಇಲ್ದೆ ಇದ್ರೆ ದರಕಾಸ್ತಿನಾಗೆ ಸರ್ಕಾರೀ ಜಮೀನು ಕೊಡಿಸಾಕಿಲ್ಲ ಅಂದ್ರು.’
‘ಆಯ್ತು. ನಿನ್ ಹೆಂಡ್ತಿ ಮುಂಡೆಯಾಗ್ಬೇಕು ಅಂತ ನಿಂಗೆ ಆಶೆಯಾಗೈತೋ?’
‘ನಿಮ್ ದಮ್ಮಯ್ಯ ಬುದ್ಧಿ, ಹಂಗ್ ಮಾಡಿಸ್‌ಬ್ಯಾಡಿ.’
‘ನನ್ ಮನೆ ಮ್ಯಾಲೆ ಕಲ್ಲು ಹೊಡ್ದು ನೀನಿನ್ನೆಂಗ್ ಉಳ್ಕತೀಯಾ ಹ್ಯೇಳು?’
ಜುಟ್ಟಗ ಮತ್ತೆ ಏನೂ ಹೇಳದೆ ನಡುಗುತ್ತಾ ನಿಂತುಕೊಂಡ. ಈಗಲೇ ಹೋಗಿ ಶ್ಯಾನುಭೋಗ ಶ್ಯಾಮಣ್ಣನ ಶೆಡ್ಡಿಗೆ ಸೀಮೆ ಎಣ್ಣೆ ಹಾಕಿ ಬೆಂಕಿಹೊತ್ತಿಸಬೇಕೆಂದು ಕಂಠೀಜೋಯಿಸರ ಮನಸ್ಸಿನಲ್ಲಿ ಬಂತು. ಆದರೆ ಅವರ ಶೆಡ್ಡಿಗೆ ಹತ್ತಿರವಾಗಿ ಇವರ ತಾಯಿ ಮತ್ತು ಮಗಳು ಇದ್ದ ಶೆಡ್ಡೂ ಇತ್ತು. ಉರಿ ಅಲ್ಲಿಂದ ಇದಕ್ಕೆ ಬಡಿದಿ ೀತೆಂಬ ಯೋಚನೆ ಬಂದು ಅವರು ಅದನ್ನು ಕೈಬಿಟ್ಟರು. ಆ ನಾಯಿಮರಿಗೆ ಬುದ್ಧಿ ಕಲಿಸ್ಬೇಕಾದ್ರೆ ಹಾಡಾಹಗಲು ಮಾಡಬೇಕು. ರಾತ್ರಿ ಹೊತ್ನಲ್ಲಿ ಮಾಡಿದ್ರೆ ಅವನ್ಗೂ ನನ್ಗೂ ಏನು ವ್ಯತ್ಯಾಸ–ಎಂಬ ಪ್ರಶ್ನೆಯೂ ಮನಸ್ಸಿನಲ್ಲಿ ಹುಟ್ಟಿತು. ಜುಟ್ಟಗ ಅಲ್ಲಿಯೇ ಕೈಮುಗಿದುಕೊಂಡು ನಿಂತಿದ್ದ.
‘ನಮ್ಮ ಶೆಡ್ಡಿನ ಕಡೆ ಹೋಗಿದ್ಯೇನೋ?’
‘ಒಲೀಕ್ ಓಗಿರ್ನಿಲ್ಲ. ಅದ್ರ ತಾವುಕ್ ಓಗಿದ್ದೆ.’
‘ಹ್ಯಂಗವ್ರೆ ಅಮ್ನೋರು?’
‘ನಂಜವ್ವ ಎಣ್ ಮಗ ಎತ್‌ತಂತೆ ಇವತ್ ಮದ್ಯಾನ್‌ದಾಗ. ಮಗ ಬಾಣಂತಿ ವೈನವಾಗ್ಯವ್ರಂತೆ.’
ಈ ಮಾತನ್ನು ಕೇಳಿ ಅವರಿಗೆ ಸಮಾಧಾನವಾಯಿತು. ನಾಳೆ ಬೆಳಿಗ್ಗೆ ಅಲ್ಲಿಗೆ ಹೋಗಿ ಅವರನ್ನು ನೋಡಿಕೊಂಡೇ ಬರಬೇಕು.–ಎಂದು ನಿಶ್ಚಯಿಸಿ ಅವರು ಜುಟ್ಟಗನಿಗೆ ಹೇಳಿದರು: ‘ಆಯ್ತು. ನೀನು ಹೋಗು.’
ಆದರೆ ಅವನು ಹೋಗದೆ ಅಲ್ಲಿಯೆ ಉಳಿದ ‘ಯಾಕೋ?’–ಎಂದು ಕೇಳಿದರೆ, ‘ಒಬ್ಬನೇ ಓಗಾಕ್ ಎದ್‌ರಿಕೆಯಾಯ್ತದೆ. ನೀವು ಸಟಾಗ್ ಬಂದು ಕಳ್ಸಿ’ ಎಂದ.
‘ವಾರೆವಾ ಸೂಳೇಮಗನೇ. ಇಲ್ಲಿಗ್ ಬರಾಕ್ ಹೆದ್‌ರಿಕೆಯಾಗಲಿಲ್ಲ. ಈಗ ಹೋಗು ಅಂದ್ರೆ ಜೊತೆಗೆ ಬರ್‌ಬೇಕಂತೆ. ಸುಮ್ಮನೆ ಹೋಗ್ತೀಯೋ ಇಲ್ಲಾ ನಾಲ್ಕು ಬಿಡ್ಲೋ ಬೆನ್‌ಮ್ಯಾಲೆ?’
‘ಇಲ್ಲ ಕಣಪಾ ಓಯ್ತೀನಿ’–ಎಂದು ಅವನು ಬೇಗ ಬೇಗ ಊರ ಹೊರಗೆ ನಡೆದ. ಆದರೆ ಸಂದಿ ಗೊಂದಿಯ ಹಾದಿಯಲ್ಲಿ ಸುತ್ತಿ, ಮಾರಿಬಡಿದ ಆ ಊರಿನ ಹೊರಗೆ ಹೋಗಬೇಕಾದರೆ ಇನ್ನೂರು ಮುನ್ನೂರು ಹೆಜ್ಜೆಯಾದರೂ ನಡೆಯಬೇಕಾಗಿತ್ತು. ಯಾವುದೋ ಧೈರ್ಯದಿಂದ ಕಂಠೀಜೋಯಿಸರ ಮನೆಯ ಸಂದಿ ಯನ್ನು ದಾಟಿ ನಡೆದ. ಅವನು ದೂರದಲ್ಲಿ ಇದ್ದಕ್ಕಿದ್ದಹಾಗೆಯೇ–‘ಅಯ್ಯಯ್ಯಪ್ಪೋ’ ಎಂದು ವಿಕಾರವಾಗಿ ಕಿರುಚಿಕೊಂಡು ಓಡಿಹೋದಂತೆ ಕೇಳಿತು.
ಮನೆಯ ಮುಂಬಾಗಿಲಿಗೆ ಒಳಗಿನಿಂದ ಅಗಳಿ ಹಾಕಿದ್ದುದರಿಂದ ಜೋಯಿಸರು ಪುನಃ ಹಿತ್ತಿಲು ಗೋಡೆ ಹಾರಿ, ತಾವು ಬಂದ ಹಿಂಬಾಗಿಲಿನಿಂದಲೇ ಒಳಗೆ ಹೋಗಿ ಮಲಗಿಕೊಂಡರು. ಆದರೆ ತಕ್ಷಣ ನಿದ್ದೆಬರಲಿಲ್ಲ. ನಾಳೆದಿ ನ ಶ್ಯಾಮನ್ಣನಿಗೆ ಏನು ಮಾಡಬೇಕೆಂಬ ಬಗೆಗೆ ಹಲವು ಯೋಚನೆಗಳು ತಲೆಯಲ್ಲಿ ಸುಳಿಯುತ್ತಿದ್ದವು. ಅವರ ಅಪ್ಪನ ಕಾಲದಿಂದಲೂ ಇವರ ಮತ್ತು ಅವರ ಮನೆಗಳಿಗೆ ಆಗುತ್ತಿರಲಿಲ್ಲ. ಶ್ಯಾನುಭೋಗಿಕೆ ಎಂದರೆ ಅರಮನೆ ಕೆಲಸವಂತೆ. ಅವರು ರಾಜಪ್ರತಿನಿಧಿಗಳಂತೆ. ಶ್ಯಾಮಣ್ಣನ ಅಪ್ಪ ನರಸಿಂಹಯ್ಯ ಹಾಗೆ ಹೇಳಿಕೊಳ್ಳುತ್ತಿದ್ದ. ಈ ಬೋಳೀಮಗನೂ ಹಾಗೆಯೇ ಅಂತಿರ್ತಾನೆ. ನಮ್ಮದೇನು ಕಡಿಮೆ? ಅವನದ್ದು ಅರಮನೆ ಕೆಲಸವಾದರೆ ನಮ್ಮದು ಗುರುಮನೆ ಕೆಲಸ. ಅರಮನೆಯೋರು ಗುರುಮನೆಯೋರನ್ನ ಬೆದರಿಸಿಕೊಂಡು ತಿಂತಿದ್ರು. ಈಗ ನನ್ನ ಕಾಲದಲ್ಲಿ ಅದು ನಿಂತಿದೆ. ದಾನ ತಂದು ಜೀವನ ಮಾಡ್ತಾ, ಇವರು ಹೇಳಿದ್ದು ಕೇಳ್ಕಂಡಿದ್ರೆ ಇವರಿಗೆ ಬೇಕು. ನನ್ನಂಥಾ ಗಂಡು ಜೋಯಿಸನಾದ್ರೆ ಇವ್ರ ಆಟ ನಡೆಯುಲ್ಲ. ಕಂಠೀಜೋಯಿಸ ಅಂದ್ರೆ ಏನಂತ ತಿಳ್ಕಂಡಿದಾರೆ? ಕಂಠಿ ಅಂದ್ರೆ ರಣಧೀರ ಕಂಠೀರವ ಅಂತ. ಈ ಅರಮನೆಗಳಿಗೆಲ್ಲ ಮೇಲಿನ ಮಿಂಡ ಭೂಪತಿ. ನಾಳೆ ದಿನ ತೋರುಸ್ತೀನಿ ಈ ಷಂಡ ಸೂಳೇಮಕ್ಳಿಗೆ!–ಎಂಬ ಯೋಚನೆಯಲ್ಲಿ ಬೆಳಗಿನ ಜಾವದ ವೇಳೆಗೆ ನಿದ್ರೆ ಬಂತು.
ಬೆಳಿಗ್ಗೆ ಎಚ್ಚರವಾಗುವ ಹೊತ್ತಿಗೆ ಹತ್ತು ಗಂಟೆಯೇ ಆಗಿತ್ತು. ಶ್ಯಾಮಣ್ಣನ ಗುಡಿಸಲು ತಾವಕ್ಕೆ ಹೋಗಬೇಕೆಂದು ಎದ್ದು ಹಿತ್ತಿಲ ಕಡೆಗೆ ಹೋಗಿ ಬರುವ ಹೊತ್ತಿಗೆ ಮನೆಯ ಮುಂದೆ ಒಬ್ಬ ಪೋಲೀಸ್ ಕಾನಿಸ್ಟೇಬಲ್ ನಿಂತಿದ್ದುದು ಕಾಣಿಸಿತು. ಸಮಾಚಾರವೇನೆಂದು ಕೇಳಿದ ತಕ್ಷಣ ಅವನು ಹೇಳಿದ: ‘ನಿಮ್ಮ ಮಗ ಕಲ್ಲೇಶನಿಗೆ ಪ್ಲೇಗ್ ಆಗಿದೆ. ಎಡಗಡೆ ಕಂಕುಳಲ್ಲಿ ಗೆಡ್ಡೆ ಕಾಣಿಸ್ಕಂಡಿದೆ. ನೀವು ಈಗ್ಲೆ ಬರ್‌ಬೇಕು.’
ಆಂ, ಎಲ್ಲಿ?’
‘ಬೆಳಗೊಳದಲ್ಲೇ ಇದಾನೆ. ಇನ್ನೂ ಜ್ಞಾನ ನೈಟ್ಟಗಿದೆ. ನಿಮ್ಮುನ್ನ ಕರ್ಕಂಡ್ ಬಾ ಅಂತ ದಫೇದಾರ್ರು ಕಳ್ಸಿದ್ರು. ಹಳ್ಳೀ ಬೀಟಿಗೆ ಹೋಗಿದ್ದಾಗ ಅಮ್ಮನ ಕೈಲಿ ಬಡಿಸ್ಕಂಡ್ ಬಂದುಬಿಟ್ಟ. ಬ್ಯಾಗ ನಡೀರಿ.’
ಇನ್ನು ಮಾತನಾಡುವಂತೆ ಇರಲಿಲ್ಲ. ಹಿತ್ತಿಲ ಕಡೆ ಕೊಟ್ಟಿಗೆಯಲ್ಲಿ ಕಟ್ಟಿದ್ದ ಹಸುಕರುವನ್ನು ಬಿಚ್ಚಿ ಊರ

ಹೊರಗೆ ಹೊಡೆದುಕೊಂಡು ಹೋಗಿ, ಎದುರಿಗೆ ಸಿಕ್ಕಿದ ಒಬ್ಬನಿಗೆ–'ಇದನ್ನು ನಮ್ಮ ಶೆಡ್ಡಿಗೆ ಅಟ್ಟು' ಎಂದು ಹೇಳಿಕಳಿಸಿದರು. ಮನೆಗೆ ಬೀಗ ಹಾಕಿ ಕಾನಿಸ್ಟೇಬಲನ್ನು ತಮ್ಮ ಹಿಂದೆಯೇ ಕೂರಿಸಿಕೊಂಡು ಕುದುರೆ ಏರಿ ಶ್ರವಣಬೆಳಗೊಳದ ಕಡೆಗೆ ನಾಗಾಲೋಟ ಓಡಿಸಿದರು.

– 4 –

ಈ ಸಲದ ಪ್ಲೇಗು ನಾಗಲಾಪುರದ ಯಾರಿಗೂ ಬಡಿಯಲಿಲ್ಲ. ಸುತ್ತಮುತ್ತ ಎಲ್ಲೆಲ್ಲಿಯೂ ಊರು ಬಿಟ್ಟಿದ್ದರು. ರಾಮಸಂದ್ರದವರು ಶೆಡ್ಡು ಹಾಕಿಕೊಂಡು ಹೊರಗೆ ಹೋಗಿದ್ದರೂ ಅಲ್ಲಿ ಮೂರು ಜನ ಸತ್ತರು. ಇತರ ಊರುಗಳಲ್ಲಿಯೂ ಸಾಕಷ್ಟು ಜನ ಬಲಿಯಾಗಿದ್ದರು. ಹಾಗೆ ನೋಡಿದರೆ ನಾಗಲಾಪುರದಲ್ಲಿ ಅಮ್ಮನಿಗೆ ಒಂದೂ ಬಲಿ ಸಿಕ್ಕಲಿಲ್ಲವೆಂದು ಹೇಳುವಂತಿರಲಿಲ್ಲ. ರಾತ್ರಿಯ ಹೊತ್ತಿನಲ್ಲಿ ಕಂಠೀಜೋಯಿಸರ ಮನೆಗೆ ಕಲ್ಲು ಹೊಡೆಯಲು ಹೋಗಿ ಸಿಕ್ಕಿಕೊಂಡ ಜುಟ್ಟಗನಿಗೆ, ಮನೆಗೆ ಬಂದ ಸ್ವಲ್ಪ ಹೊತ್ತಿಗೇ ಜ್ವರ ಏರಿತು. ತಾನು ಊರಿನ ಒಳಕ್ಕೆ ಹೋಗಿದ್ದುದಾಗಿಯೂ ಅಲ್ಲಿಂದ ಒಬ್ಬನೇ ಬರುವಾಗ ಒಂದು ಓಣಿಯಲ್ಲಿ ಹಿಂದಿನಿಂದ ಕಪ್ಪು ಬಣ್ಣದ ಒಬ್ಬ ದೊಡ್ಡ ಹೆಂಗಸು ತನ್ನ ಮೇಲೆ ಕರೀ ಸೆರಗು ಬೀಸಿದಂತೆಯೂ ಆಯಿತೆಂದು ಅವನು ಹೆಂಡತಿಗೆ ಹೇಳಿದ. ಜ್ವರ ಬಹು ಬೇಗ ಏರಿತು; ಮತ್ತೆ ಇಳಿಯಲಿಲ್ಲ. ಮರುದಿನ ಮಧ್ಯಾಹ್ನದ ವೇಳೆಗೆ ಪ್ರಜ್ಞೆ ತಪ್ಪಿತು. ಸಂಜೆಗೆ ಸ್ವಲ್ಪ ಎಚ್ಚರವಾಯಿತು. ಎಚ್ಚರಾದವನೇ, 'ಕಂಟ್ಯಪ್ಪ ದೋಸರ ತಾವ ಮಂತ್ರ ಮಾಡ್ಸು' ಎಂದು ಹೆಂಡತಿಗೆ ಹೇಳಿದ. ಅವಳು ತನ್ನ ಚಿಕ್ಕ ಮಾವನನ್ನು ಊರೊಳಕ್ಕೆ ಅಟ್ಟಿದಳು. ಮನೆ ಬಾಗಿಲು ಹಾಕಿ ಬೀಗ ಮೆಟ್ಟಿದ್ದುದರಿಂದ ಕಂಠ್ಯಪ್ಪಜೋಯಿಸರ ಪತ್ತೆ ಹತ್ತಲಿಲ್ಲ. ಮರುದಿನ ಬೆಳಿಗ್ಗೆ ಮತ್ತೆ ನೋಡಿದರೂ ಬಾಗಿಲಿನ ಬೀಗ ಹಾಗೆಯೇ ಇತ್ತು. ಜುಟ್ಟಗನಿಗೆ ಮತ್ತೆ ಒಂದು ಸಲ ಪ್ರಜ್ಞೆ ಬಂದು, 'ದೋಸರು ಬಂದ್ರಾ?' ಎಂದು ಕೇಳಿದ. ಇಲ್ಲವೆಂದು ತಿಳಿಯುತ್ತಲೂ ಕಣ್ಣು ಮುಚ್ಚಿದ. ಮತ್ತೆ ಜ್ಞಾನ ಬರಲಿಲ್ಲ. ಎರಡು ದಿನಕ್ಕೆ ಸತ್ತುಹೋದ. ಅವನಿಗೆ ಗೆಡ್ಡೆ ಬಂದಿತ್ತೋ ಇಲ್ಲವೋ ಯಾರಿಗೂ ತಿಳಿಯಲಿಲ್ಲ. ಅಮ್ಮ ಬಡಿದು ಸಾಯಬೇಕಾದರೆ ಗೆಡ್ಡೆ ಹೊಮ್ಮಿ ಕಾಣಿಸಿಕೊಳ್ಳಬೇಕೆಂಬ ನಿಯಮವುಂಟೆ? ಅಂತೂ ಜುಟ್ಟಗನ ಹೆಂಡತಿ ಮುಂಡೆ ಆದಳು. ಅವಳು ಹಾಗಾಗುವುದು ಬೇಡವೆಂದು ಅವನು ಕಂಠೀಜೋಯಿಸರ ಮುಂದೆ ತತ್ತರಿಸುತ್ತಾ ಅಂಗಲಾಚಿದ್ದ.

ನಂಜು ಹೆಣ್ಣು ಮಗು ಹೆತ್ತು ಮಗು ಬಾಣಂತಿ ಸುಖವಾಗಿರುವುದನ್ನು ಕಂಠಿಗೆ ತಿಳಿಸುವಂತೆ ಅಕ್ಕಮ್ಮ ಅವರ ಹೊಲದ ವಾರದಾರ ಹೊನ್ನನನ್ನು, ಹೆರಿಗೆಯಾದ ಮರುದಿನ ಮಧ್ಯಾಹ್ನದ ಹೊತ್ತಿಗೆ ಕಳಿಸಿದಳು. ಮನೆಗೆ ಬೀಗ ಹಾಕಿರುವುದಾಗಿ ಅವನು ಬಂದು ಹೇಳಿದ. ತಾವು ಊರ ಒಳಗೆ ಹೋಗಿದ್ದ ಸಂಗತಿಯನ್ನು ಕಲ್ಲು ಬೀರಲು ಹೋಗಿದ್ದ ತಿಮ್ಮಕ್ಕನ ಮನೆ ಗಿಡ್ಡನಾಗಲಿ, ಮ್ಯಾಗಳಕೇರಿ ಗುಳ್ಳಿಗನಾಗಲಿ, ತಳವಾರರ ಸಿದ್ದೂರನಾಗಲಿ ಮತ್ತೆ ಯಾರ ಕೈಲೂ ಬಾಯಿಬಿಟ್ಟಿರಲಿಲ್ಲ. ಆದುದರಿಂದ ಆ ವಿಷಯ ಅಕ್ಕಮ್ಮ ನಂಜಮ್ಮರಿಗೆ ಸ್ವಲ್ಪವೂ ತಿಳಿಯಲಿಲ್ಲ. ಹಸು ಕರುವನ್ನು ಕೊಟ್ಟು ಕಳುಹಿಸಿದ್ದುದರಿಂದ ಮಗ ಎಲ್ಲೋ ಸಂಚಾರ ಹೋಗಿದ್ದಾನೆ, ಇನ್ನೂ ಬಂದಿಲ್ಲ, ಎಂದು ಅಕ್ಕಮ್ಮ ಅರ್ಥ ಮಾಡಿಕೊಂಡಳು. ಪುರೋಹಿತ ಪುಟ್ಟಭಟ್ಟರ ಹೆಂಡತಿ ಅಕ್ಕಮ್ಮನಿಗೆ ನೆರವಾದರು. ಪುಟ್ಟಭಟ್ಟರೇ ರಾಮಸಂದ್ರಕ್ಕೆ ಹೋಗಿ ವಿಷಯ ತಿಳಿಸಿ ನಾಮಕರಣದ ದಿನಕ್ಕೆ ಬರುವಂತೆ ಚೆನ್ನಿಗರಾಯನನ್ನು ಕರೆದು ಬರುವಂತೆ ಅಕ್ಕಮ್ಮ ಹೇಳಿದಳು. ಬಿಟ್ಟ ಊರಿನಿಂದ ಅಲ್ಲಿಗೆ ಹೋಗಬಹುದೋ ಬೇಡವೋ ಎಂದು ಅವರು ಅನುಮಾನಿಸಿದಾಗ ಹೊಲೆಮನೆಯಲ್ಲಿ ಮಲಗಿದ್ದ ನಂಜುವೇ– ಆ ಊರು ಬಿಟ್ಟಿದೆ. ನಮ್ಮ ಶೆಡ್ಡು ಊರ ಮುಂದಿನ ಅಮ್ಮನ ಗುಡೀ ಹಿಂದೆ ಅತ್ತೀಮರದ ಹತ್ತಿರ ಇದೆ ಅಂತ ಕಾಣುತ್ತೆ. ನಮ್ಮ ತೋಟ ಇರೂದು ಅಲ್ಲೇ. ನೀವು ಹೋಗಿ ಬನ್ನಿ' ಎಂದಳು. ಪುಟ್ಟಭಟ್ಟರು ಪೂರ್ವದಿಕ್ಕಿಗೆ ಪಯಣ ಹೊರಟರು.

ಶೆಡ್ಡಿನಲ್ಲಿ ಪುರುಡನ್ನು ಅನುಸರಿಸಿ ಹತ್ತನೆಯ ದಿನ ಚೆನ್ನಿಗರಾಯ ನಾಮಕರಣಕ್ಕೆ ನಡೆದು ಹೊರಟ. ಗಾಡಿ ಹೊಡೆಸಿಕೊಂಡು ಅಪ್ಪಣ್ಣಯ್ಯ, ಸಾತು, ಇಬ್ಬರನ್ನೂ ಜೊತೆಗೆ ಕರೆದುಕೊಂಡು ಹೋಗಬಹುದಾಗಿತ್ತು. ಸಾತು ಈಗ ಬಸುರಿಯಾಗಿದ್ದಳು. ವಾಂತಿ ಇನ್ನೂ ನಿಂತಿರಲಿಲ್ಲ. ಅಲ್ಲದೆ ಈಗ ಅವಳು ಗಂಗಮ್ಮನ ಕೈಲಾಗಲಿ ತನ್ನ ಗಂಡನ ಕೈಲಾಗಲಿ ಮಾತನಾಡುತ್ತಿರಲಿಲ್ಲ. ಒಂದು ದಿನ ಹಿಂದಿರುಗಿ ಅವರಿಬ್ಬರನ್ನೂ ಚನ್ನಾಗಿ ಬೈದುಬಿಟ್ಟಿದ್ದಳು. ಭಾವನವರ ಕೈಲಿ ಮೊದಲಿನಿಂದಲೂ ಹೆಚ್ಚಾಗಿ ಮಾತನಾಡಿರಲಿಲ್ಲ. ಅವರೂ ಅವಳನ್ನು ತಾವಾಗಿಯೇ ಮಾತನಾಡಿಸಿರಲಿಲ್ಲ. ಹೀಗಾಗಿ ಅವರೊಬ್ಬರೇ ನಾಗಲಾಪುರಕ್ಕೆ ಹೊರಟರು.

ಹನ್ನೊಂದು ಗಂಟೆಯ ಹೊತ್ತಿಗೆ ಅವರು ಮರಳುಹಳ್ಳ ಕಳೆದು ಚೋಳನಗುಡ್ಡ, ಕಟಿಗೆಹಳ್ಳಿ ದಾಟಿ ನಡುದಾರಿಯಲ್ಲಿ ಸಿಕ್ಕುವ ಹೂವಿನಹಳ್ಳಿಗೆ ಬಂದರು. ಹಳ್ಳಿಯ ಮುಂದುಗಡೆ ಒಂದು ಅಂಗಡಿಯಲ್ಲಿ ಮಾಗಿದ ರಸಬಾಳೆಹಣ್ಣಿನ ಚಿಪ್ಪುಗಳನ್ನು ತೂಗುಹಾಕಿದ್ದರು. ಮೂರಾಣೆಗೆ ಒಂದು ಚಿಪ್ಪಿನಂತೆ ಚೆನ್ನಿಗರಾಯರು ಒಟ್ಟು ಮೂರು ಚಿಪ್ಪನ್ನು ಕೊಂಡರು. ನಾಳೆ ನಾಮಕರಣದ ತಾಂಬೂಲದ ತಟ್ಟೆಗೆ ಇಡಲು ಆಗುತ್ತದೆಂದು ಅವರ ಮನಸ್ಸು ನಿರ್ಧರಿಸಿತು. ಅಂಗಡಿಯಲ್ಲಿ ಒಂದು ತೆರೆದ ಡಬ್ಬದಲ್ಲಿ ಬೂರಾ ಸಕ್ಕರೆ ಇಟ್ಟಿದ್ದುದೂ ಕಣ್ಣಿಗೆ ಬಿತ್ತು. ಸವಾಸೇರು ಅದನ್ನೂ ಕಾಗದದ ಪೊಟ್ಟಣದಲ್ಲಿ ಕಟ್ಟಿಸಿ ತಮ್ಮ ಗಂಟಿಗೆ ಹಾಕಿಕೊಂಡು ಮತ್ತೆ ದಾರಿ

ನಡೆಯಲು ಪ್ರಾರಂಭಿಸಿದರು.
ಎರಡು ಮೈಲಿ ಮುಂದೆ ನಡೆಯುವ ಹೊತ್ತಿಗೆ ಅವರ ಮನಸ್ಸಿನಲ್ಲಿ ಒಂದು ಯೋಚನೆ ಹುಟ್ಟಿತು: ಬಾಣಂತನ ಅಂದ್ರೆ ಮೂರು ದಿನಕ್ಕೆ ಒಂದು ಸಲ ಎಣ್ಣೆ ನೀರು, ಊಟಕ್ಕೆ ಒಂದೊಂದು ಸೌಟು ತುಪ್ಪ, ಒಳ್ಳೇ ಘಮ ಘಮ ಅನ್ನೂವಂಥ ಲೇಹ, ಇದೆಲ್ಲ ತಿಂದು ಯಾವಾಗ್ಲೂ ಸುಖವಾಗಿ ಮಲಿಕ್ಕಂಡು ನಿದ್ದೆ ಮಾಡೂದು. ನಂಗೆ ಮಾತ್ರ ಏನೂ ಇಲ್ಲ. ಇವ್ಳು ನಾಗಲಾಪುರಕ್ಕೆ ಹೋದ ಮೇಲೆ ನಂಗೆ ಚನ್ನಾಗಿ ಎಣ್ಣೆ ಒತ್ತಿ ಬಿಸಿಬಿಸಿಯಾಗಿ ಯಾರೂ ನೀರು ಹಾಕೇ ಇಲ್ಲ. ನಂಗೆ ಮೈ ಕೈ ನೋಯುಲ್ವೆ? ಅವಳ ಅಜ್ಜಿ ಇದಾಳಲಾ, ಆ ಅಕ್ಕಮ್ಮ, ಮುದುಕಿ, ಅವ್ಳು ಮೊಮ್ಮಗಳಿಗೆ ಬಯಕೆ ಅಂತ, ಬಸುರೀಲಿ ಕೇಳಿ ಕೇಳಿದ್ದು ಮಾಡಿಕೊಡ್ತಿದ್ಲಂತೆ. ತಾಯಿ ಇಲ್ಲದ ತಬ್ಬಲಿ ಮೊಮ್ಮಗ್ಳು ಅಂತ ಉಪಚಾರ ಮಾಡ್ತಿದ್ಲಂತೆ. ಹಾಗಂತ ಪುಟ್ಟಭಟ್ಟರೇ ಹ್ಯೇಳಿದ್ರಲಾ, ನನ್ನ ಕರಿಯುಕ್ಕೆ ನಮ್ಮೂರಿಗೆ ಬಂದಿದ್ದಾಗ. ನಂಗೆ ಏನಾದ್ರೂ ಕೊಟ್‌ಕಳ್ಸಿದ್ರೇ? ಅಥ್ವಾ, ಹೀಗೆ ತಿಂಡಿ ಮಾಡ್ತೀವಿ, ನೀನು ಬಾ ಅಂತ ನಂಗೆ ಹೇಳಿಕಳ್ಸಿದ್ರೇ? ಇವರ ಯೋಗ್ತೀಗೆ ನನ್ನ ಯಕ್‌ಡ ಹೊಡೆಯ.
ಅವರು ಯೋಚಿಸುತ್ತಿರುವಾಗಲೇ ದಾರಿಯಲ್ಲಿ ಒಂದು ಆಲದ ಮರ ಸಿಕ್ಕಿತು.ಅದರಿಂದ ಹತ್ತು ಮಾರು ದೂರದಲ್ಲಿ ಒಂದು ಕೊಳ ಕಾಣಿಸಿತು. ತಮಗೇ ತಿಳಿಯದಂತೆ ಶ್ಯಾನುಭೋಗರು ನೆರಳಿನಲ್ಲಿ ಗಂಟು ಇಟ್ಟುಕೊಂಡು ಕೂತರು. ಈ ಬಾಳೇಹಣ್ಣೂ ಬೂರಾ ಸಕ್ರೇನ ಅಲ್ಲಿಗ್ ಯಾಕ್ ತಗಂಡ್ ಹೋಗ್ಬೇಕು ಆ ಸೂಳೇಮಕ್ಳ ಮನೆಗೆ?– ಎಂಬ ಪ್ರಶ್ನೆ ಮನಸ್ಸಿನಲ್ಲಿ ಹುಟ್ಟೀದ್ದೇ ತಡ, ಚಿಪ್ಪುಗಳನ್ನು ಹೊರಕ್ಕೆ ತೆಗೆದರು. ಬೂರಾಸಕ್ಕರೆ ಪೊಟ್ಟಣ ಬಿಚ್ಚಿ ಇಟ್ಟುಕೊಂಡು, ಒಂದೊಂದಾಗಿ ಸಿಪ್ಪೆ ಬಿಡಿಸಿ ಸಕ್ಕರೆಯಲ್ಲಿ ಒತ್ತಿ ಅದ್ದಿಕೊಂಡು ಅರ್ಧ ಭಾಗ ಮೆಲುಕು ಹಾಕುವ ಮೊದಲೇ ಗುಳುಕ್ ಎಂದು ನುಂಗಿ, ಮುಂದಿನ ಹಣ್ಣಿನ ಸಿಪ್ಪೆ ಬಿಡಿಸಿ ಅದರ ಮೂತಿಯನ್ನು ಹಿಟ್ಟು ಸಕ್ಕರೆಯಲ್ಲಿ ಒತ್ತುತ್ತಿದ್ದರು.
ಒಟ್ಟು ಮೂವತ್ತೆಂಟು ಹಣ್ಣು, ಸವಾಸೇರು ಸಕ್ಕರೆಯೂ ಮುಗಿದ ಮೇಲೆ ಬಾಯಾರಿಕೆ ಎನಿಸಿತು. ಕೊಳದಲ್ಲಿ ನೀರು ಕುಡಿದು ಬಂದು ಗಂಟನ್ನು ತಲೆದಿಂಬಿಗೆ ಇಟ್ಟುಕೊಂಡು ಗೊರಕೆ ಹೊಡೆಯುತ್ತಾ ಸಂಜೆಯಾಗುವತನಕ ನಿದ್ದೆ ಮಾಡಿದರು. ಎಚ್ಚರವಾದಮೇಲೆ ಗಡಿಬಿಡಿಯಿಂದ ಎದ್ದು ನಾಗಲಾಪುರದ ಕಡೆಗೆ ಹೆಜ್ಜೆ ಓಡಿಸಿದರು. ಅವರ ಶೆಡ್ಡು ಇಂಥ ಕಡೆಯೇ ಎಂದು ಪುಟ್ಟಭಟ್ಟರು ಹೇಳಿದ್ದುದರಿಂದ ಹುಡುಕುವುದು ಕಷ್ಟವೇನೂ ಆಗಲಿಲ್ಲ. ಅದುವರೆಗೂ ಅವರ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಅಕ್ಕಮ್ಮ, ಮದ್ಯಾಹ್ನದ ಅಡಿಗೆ ಆರಿಹೋಗಿದ್ದುದರಿಂದ ಬಿಸಿಯಾಗಿ ಅಡಿಗೆ ಮಾಡಲು ಒಳಗೆ ಹೋದಳು. ಶೆಡ್ಡಿನ ಒಂದು ಭಾಗದಲ್ಲಿ ಬಾಣಂತಿಗೆಂದು ಕಟ್ಟಿದ್ದ ಕೋಣೆಯಲ್ಲಿ ಒಂದು ಮಂಚದ ಮೇಲೆ, ಮಗುವುನೊಡನೆ ಬಾಣಂತಿ ಮಲಗಿದ್ದಳು. ಚೆನ್ನಿಗರಾಯರು ಅದರ ಬಾಗಿಲಿನ ಹತ್ತಿರ ಹೋದಾಗ ಅವಳು ಕೇಳಿದಳು: 'ಮಧ್ಯಾಹ್ನ ನಿಮಗೆ ಅಂತ ಮಾಡಿದ ಅಡಿಗೆ ಆರಿಹೋಯ್ತು. ನೇರವಾಗಿ ಊರಿಗ್ ಬರದೆ ಆ ಮರದ ಕೆಳಗೆ ಯಾಕೆ ಮಲಗಿದ್ದಿರಿ?'
ಈ ಮಾತನ್ನು ಕೇಳಿ ಚೆನ್ನಿಗರಾಯರಿಗೆ ಆಶ್ಚರ್ಯವಾಯಿತು: 'ಅದ್ಯಾವ್ನು ಹೇಳ್ದ ಹಾಗಂತ?'
'ಹೂವಿನಹಳ್ಳಿ ಅಂಗಡಿ ಚಿನ್ನಯ್ಯ ನಮ್ಮನೆ ಪೌರೋಹಿತ್ಯಕ್ಕೆ ಸೇರಿದೋನು. ನೀವು ಅವನ ಅಂಗ್‌ಡೀಲಿ ಮೂರು ಚಿಪ್ಪು ರಸಬಾಳೆಹಣ್ಣು ಒಂದು ಸವಾಸೇರು ಬೂರಾಸಕ್ರೆ ತಗಂಡ ಮೇಲೆ ಅವನು ಅಂಗಡಿ ಸಾಮಾನಿಗೆ ಅಂತ ಈ ಊರಿಗೆ ಹೊರಟನಂತೆ. ಬರ್ತಾ ದಾರೀಲಿ ನೀವು ಆಲದ ಮರದ ಕೆಳಗೆ ಮಲಗಿದ್ದಿರಂತೆ. ಬಾಳೆಹಣ್ಣಿನ ಸಿಪ್ಪೆ ಮಗ್ಗುಲಲ್ಲಿ ಬಿದ್ದಿತ್ತಂತೆ.'
'ಹಾಗಂತ ಹೇಳಿದ್ನೋ ಅವ್ನು? ಅವನವ್ವನ.....'–ಎಂಬ ಅವರ ಮಾತನ್ನು ಮಧ್ಯಕ್ಕೆ ತಡೆದು ಅವಳು ಕೇಳಿದಳು: 'ಕೆಟ್ಟ ಮಾತು ಯಾಕೆ ಆಡ್ತೀರಾ? ದಾರೀಲಿ ಹೊಟ್ಟೆ ಹಸ್ತಿದೆ ಹಣ್ಣು ತಗಂಡು ತಿಂದ್ರಿ. ಯಾರೂ ಮಾಡದೆ ಇರೂ ಕೆಲಸವೇ ಅದು? ಬೇಗ ಬೇಗ ಬಂದು ಮನೇಲಿ ಊಟಾನೇ ಮಾಡಬಾರದಾಗಿತ್ತೆ?'
ಅವರಿಗೆ ಮತ್ತೆ ಯಾವ ಉತ್ತರವೂ ಹೊಳೆಯಲಿಲ್ಲ; ಅಥವಾ ತಕ್ಷಣಕ್ಕೆ ಯಾವ ಬೈಗುಳವೂ ಬರಲಿಲ್ಲ.
ಪುಟ್ಟಭಟ್ಟರು ಮತ್ತು ಅವರ ಹೆಂಡತಿಯ ಸಹಾಯದಿಂದ ಅಕ್ಕಮ್ಮ ಊಟಕ್ಕೆ ಹತ್ತು ಜನ ಕರೆದೇ ನಾಮಕರಣ ಮಾಡಿಸಿದಳು. ಶ್ಯಾನುಭೋಗ ಶ್ಯಾಮಣ್ಣನವರೂ ಬಂದಿದ್ದರು. ಮನೆಯ ಮೊದಲ ಹೆಣ್ಣುಮಗುವಾದುದರಿಂದ ಅದಕ್ಕೆ ಅಜ್ಜಿಯ ಹೆಸರು ಗಂಗಮ್ಮನೆಂದು ಇಡಬೇಕಾಗಿತ್ತು. ಆದರೆ ಅವರು ಜೀವಂತ ಇರುವುದರಿಂದ, ಕೂಗಲು ಅನುಕೂಲವಾಗುವಂತೆ ಮತ್ತು ಜನ್ಮ ನಕ್ಷತ್ರಕ್ಕೆ ಹೊಂದುವಂತೆ ಪಾರ್ವತಿ ಎಂದು ಇಟ್ಟರು. ಚೆನ್ನಿಗರಾಯರು ಎಂಟು ದಿನ ಅಲ್ಲಿಯೇ ಇದ್ದು ಅಕ್ಕಮ್ಮನಿಂದ ಬಿಸಿಬಿಸಿ ಅಡಿಗೆ ಮತ್ತು ಆದರೋಪಚಾರ ಮಾಡಿಸಿಕೊಂಡರು. ಬಾಣಂತಿಗೆಂದು ತರಿಸಿ ಇಟ್ಟಿದ್ದ ಕೊಬ್ಬರಿ ಬೆಲ್ಲ ಅವರ ಬಾಯಿಗೂ ರುಚಿಯಾಗಿತ್ತು. ಬಾಣಂತಿಯೇ ವೀಳ್ಯದೆಲೆ ಮಡಿಸಿ ಸುಣ್ಣ ಹಾಕಿಕೊಡುತ್ತಿದ್ದಳು. ಮೊಮ್ಮಗಳ ಗಂಡನಿಗೆ ಬಗೆಬಗೆಯಾಗಿ ಮಾಡಿಹಾಕಲು ಅಜ್ಜಿಗೇನೋ ಆಶೆ. ಆದರೆ ಮುದುಕಿಯಾದ ಅವರ ಕೈಲಿ ಆಗುತ್ತಿರಲಿಲ್ಲ. ಅಲ್ಲದೆ ಬೇಕಾದ ಸಾಮಾನುಗಳನ್ನು ಧಾರಾಳವಾಗಿ ತರಿಸಲು ಹತ್ತಿರ ದುಡ್ಡಿಲ್ಲ. ಮಗ ಕಂಠಿ ಎಲ್ಲಿ ಹೋದನೆಂಬುದು ಯಾರಿಗೂ ಗೊತ್ತಿಲ್ಲ.
ನಂಜುವೇ ಒಂದು ದಿನ ಗಂಡನ ಕೈಲಿ– 'ಊರಿನಲ್ಲಿ ಶ್ಯಾನುಭೋಗ್‌ಕೆ ಇದೆ. ನೀವು ಶೇಕ್‌ದಾರರಿಗೂ

ಹೇಳದೆ ಇಲ್ಲೇ ಇದ್ರೆ ಏನು ಗತಿ?' ಎಂದಳು.
'ಬೇಕಾದ್ರೆ ಶೇಕ್‌ದಾರರಿಗೆ ಹಾಗಂತ ಕಾಗದ ಬರೆದು ಕಳಿಸಲೇನು?'–ಗಂಡ ಕೇಳಿದರು.
'ವಸೂಲಿ ಕಾಲ ಹತ್ರ ಬಂತಲ್ಲ. ನೀವೇ ಊರಲ್ಲಿಲ್ದೆ ಇದ್ರೆ ದ್ಯಾವರಸಯ್‌ನೋರು ಏನು ಮಾಡ್ತಾರೆ? ಇಷ್ಟಕ್ಕೂ ವಸೂಲಿ ನಿಮ್ಮ ಕೆಲಸ ತಾನೆ? ಇವತ್ತಾಗಲೇ ತಾರೀಖು ಹದಿನೈದೋ ಹದಿನಾರೋ ಆಯ್ತಲ, ಒಂದು ಹದ ಮಳೆ ಬೇರೆ ಆಯ್ತು. ಊರಿನಲ್ಲಿ ಜಮೀನಿನ ಗತಿ ಏನು ನೋಡಬಾರದೆ?'
ಊರಿಗೆ ಹೊರಡದೆ ನಿರ್ವಾಹವಿರಲಿಲ್ಲ. ಆದುದರಿಂದ ಶ್ಯಾನುಭೋಗ ಚೆನ್ನಿಗರಾಯರು ಮರುದಿನ ತಿಂಡಿ ತಿಂದು, ಅಜ್ಜಿ ಮಾಡಿಕೊಟ್ಟ ಮಾವಿನಕಾಯಿ ಅನ್ನದ ಅಡಿಕೆ ಪಟ್ಟೆಯ ಗಂಟನ್ನು ಹೊತ್ತುಕೊಂಡು ಹೊರಟರು. ಅವರು ಹೋದ ಮೇಲೆ ಅಕ್ಕಮ್ಮ ಅಂದಳು: 'ನಂಜೂ ನಿನ್ನ ಗಂಡ ಒಂದು ಸಲವಾದರೂ ಮಗೂನ ಕೈಲಿ ಎತ್ತಿಕಳ್‌ಲಿಲ್ವಲಾ? ಹೆಣ್ಣಾಯ್ತು ಅಂತ ಬೇಜಾರೇನು ಅವನಿಗೆ?'
ನಂಜು ಯಾವ ಮಾತೂ ಆಡಲಿಲ್ಲ. ಅವಳ ಕಣ್ಣಿನಲ್ಲಿ ನೀರು ತುಂಬಿಬಂತು. ಅದು ಗಂಡಾಗಿದ್ದರೂ ಎತ್ತಿಕೊಳ್ತಿರಲಿಲ್ಲ–ಎನ್ನಬೇಕೆಂದು ನಾಲಗೆಯಲ್ಲಿ ಬಂದಿತಾದರೂ ಅದನ್ನು ಬಾಯಿ ಬಿಟ್ಟು ಹೇಳಲಿಲ್ಲ. ಅಜ್ಜಿಯ ಮಾತು ತನಗೆ ಕೇಳಲೇ ಇಲ್ಲವೆನ್ನುವಂತೆ ಸುಮ್ಮನಾಗಿ ಕಣ್ಣೀರು ಒರೆಸಿಕೊಂಡಳು.

– 5 –

ಕಂಠೀಜೋಯಿಸರು ಬರುವ ವೇಳೆಗೆ ಕಲ್ಲೇಶನ ಕಂಕುಳಿನಲ್ಲಿದ್ದ ಗೆಡ್ಡೆ ಊದಿಕೊಂಡು ನೋವು ಜಾಸ್ತಿಯಾಗಿತ್ತು. ಸರ್ಕಾರಿ ಆಸ್ಪತ್ರೆಯ ಡಾಕ್ಟರು ಔಷಧಿ ಕೊಟ್ಟಿದ್ದರೂ, 'ಇದಕ್ಕೆ ದೊಡ್ಡ ಡಾಕ್ಟರಾದರೇ ಒಳ್ಳೇದು ಆದರೆ ರೋಗೀನ ಇಂಥಾ ಸ್ಥಿತೀಲಿ ಕರಕೊಂಡು ಹೋಗೋದು ಕಷ್ಟ. ನನ್ನ ಕೈಲಾದ್ದು ಮಾಡ್ತೀನಿ' ಎಂದಿದ್ದರು. ಜೋಯಿಸರು ಹೋದ ತಕ್ಷಣ ಜವಾಬ್ದಾರಿಯನ್ನು ತಮ್ಮ ಮೇಲೆ ತೆಗೆದುಕೊಂಡು ದಫೇದಾರರನ್ನು ಕೇಳಿದರು:
'ನೀವು ಒಂದು ವ್ಯಾನ್ ಕೊಡಿಸಿಬಿಡಿ. ನಾನು ಹಾಸನಕ್ಕೆ ಕರೆದುಕೊಂಡು ಹೋಗ್ತೀನಿ.'
ದಫೇದಾರರು ಚೆನ್ನರಾಯಪಟ್ಟಣಕ್ಕೆ ಹೋಗಿ ಒಂದು ವ್ಯಾನ್ ತಂದು ಅದರಲ್ಲಿ ಮಲಗಿಸಿಕೊಂಡು ಕಲ್ಲೇಶನನ್ನು ಹಾಸನಕ್ಕೆ ಕರೆದುಕೊಂಡು ಹೋದದ್ದಾಯಿತು. ಅವನು ದಾರಿಯಲ್ಲಿ ಸತ್ತಿದ್ದರೂ ಸಾಯಬಹುದಾಗಿತ್ತು. ಸಾಯಲಿಲ್ಲ. ದೊಡ್ಡ ಆಸ್ಪತ್ರೆಯವರು ಸೇರಿಸಿಕೊಂಡರು. ಕಲ್ಲೇಶನ ಮಾವ ರಂಗಣ್ಣನವರು ಹಾಸನದಲ್ಲೇ ಕಳೆದ ಇಪ್ಪತ್ತೈದು ವರ್ಷದಿಂದ ಪೋಸ್ಟ್‌ಮ್ಯಾನ್ ಆಗಿದ್ದವರು. ಅವರಿಗೂ ದೊಡ್ಡ ಆಸ್ಪತ್ರೆಯ ಡಾಕ್ಟರಿಗೂ ಪರಿಚಯ. ಡಾಕ್ಟರು ತಮ್ಮ ಕೈಲಾದ ಪ್ರಯತ್ನ ಮಾಡಿದರು. ಕಂಕುಳಿನ ಗೆಡ್ಡೆಯನ್ನು ಕೊಯ್ದು ಕೀವು ಮತ್ತು ಕೊಳೆತ ಭಾಗವನ್ನು ತೆಗೆದು ಹಾಕಿ ಔಷಧಿ ಕಟ್ಟಿದರು. ಜೀವಕ್ಕೆ ಭಯವಿಲ್ಲವೆನ್ನುವಂತಾಯಿತು. ಅಷ್ಟರಲ್ಲಿ ಅವನು ಕೃಶವಾಗಿ ಹೋಗಿದ್ದ. 'ಇನ್ನು ಹದಿನೈದು ದಿನವಾದರೂ ಆಸ್ಪತ್ರೆಯಲ್ಲಿರಲಿ' –ಎಂದು ಡಾಕ್ಟರು ಹೇಳಿದರು. ಅಲ್ಲಿಯವರೆಗೂ ಕಂಠೀಜೋಯಿಸರು ಬೀಗರ ಮನೆಯಲಿ ್ಲಯೇ ಇದ್ದು ಮಗನನ್ನು ನೋಡಿಕೊಳ್ಳುತ್ತಿದ್ದರು.
ಆಸ್ಪತ್ರೆಯಿಂದ ಬಿಡುಗಡೆ ಮಾಡುವ ದಿನ ಬಂದರೂ ಅವನ ಎಡಗೈ ಸರಿಯಾಗಿ ಸ್ವಾಧೀನಕ್ಕೆ ಬಂದಿರಲಿಲ್ಲ. ಗೆಡ್ಡೆಯಾಗಿದ್ದುದು ಅದೇ ಭಾಗದ ಕಂಕುಳಿನಲ್ಲಿ. 'ಇವರು ಈ ಊರಿನಲ್ಲೇ ಇರಲಿ, ನಾವು ಔಷಧಿ ಮುಂದುವರಿಸ್ತೀವಿ'– ಎಂದು ಡಾಕ್ಟರ್ ಹೇಳಿದರು. ರಂಗಣ್ಣನವರು ತಮ್ಮ ಅಳಿಯನನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಎಂಟು ದಿನದ ನಂತರ ಕಂಠೀಜೋಯಿಸರು ಕುದುರೆ ಏರಿ ಊರಿಗೆ ಹೊರಟರು. ಕಳೆದ ಇಪ್ಪತ್ತೈದು ದಿನಗಳ ವಾಸ್ತವ್ಯದಲ್ಲಿ ತುಂಬ ನಲುಗಿದ್ದುದೆಂದರೆ ಅವರ ಕುದುರೆ. ಬೀಗರ ಮನೆಯಲ್ಲಿ ಜೋಯಿಸರ ಊಟ ತಿಂಡಿ ಆಗುತ್ತಿತ್ತು. ಹಾಸನದ ಪೇ ಟೆಯಲ್ಲಿ ಪೋಸ್ಟ್‌ಮ್ಯಾನ್ ಆಗಿದ್ದ ರಂಗಣ್ಣನವರ ಮನೆಯಲ್ಲಿ ಕಂಠೀಜೋಯಿಸರು ತಿನ್ನುವ ಪ್ರಮಾಣದ ಹಾಲು ತುಪ್ಪಗಳು ಸಿಕ್ಕದಿದ್ದರೂ ಹೊಟ್ಟೆತುಂಬ ಗ್ರಾಸಕ್ಕೆ ತೊಂದರೆ ಇರಲಿಲ್ಲ. ಆದರೆ ಅವರ ಬಿಳೀ ಕುದುರೆಗೆ ಬೇಕಾದ ಮೇವನ್ನು ಅವರು ಎಲ್ಲಿಂದ ಹೊಂದಿಸಿಯಾರು?
ಇವರು ಊರಿಗೆ ಬರುವ ಹೊತ್ತಿಗೆ ಪ್ಲೇಗಿನ ಸೂಚನೆ ಕಳೆದು ಆ ಸುತ್ತಿನಲ್ಲೆಲ್ಲ ಎರಡು ಹದ ಮಳೆ ಬಿದ್ದಿತ್ತು. ನಾಗಲಾಪುರದವರು ಶೆಡ್ಡುಗಳನ್ನು ಬಿಟ್ಟು ಊರಿಗೆ ಬಂದಿದ್ದರು. ಕಲ್ಲೇಶನಿಗೆ ಪ್ಲೇಗು ಆಗಿ ಅವನನ್ನು ಹಾಸನಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಗುಣವಾಗಿರುವುದು ಮತ್ತು ಕಂಠಿಯೂ ಅಲ್ಲೇ ಇರುವುದು ಅಕ್ಕಮ್ಮ ನಂಜಮ್ಮರಿಗೆ ಗಾಳಿ ವರ್ತಮಾನದಿಂದ ತಿಳಿಯಿತು. ಇನ್ನು ಊರಿನೊಳಗೆ ಹೋಗಲು ಮಗನನ್ನು ಕಾಯುವುದು ಸಾಧ್ಯವಿಲ್ಲ. ಅವರ ಜಮೀನಿನ ರೈತರಿದ್ದಾರೆ. ಪುಟ್ಟಭಟ್ಟರಿದ್ದಾರೆ. ಅವರ ಸಹಾಯದಿಂದ ತಾನೇ ಶೆಡ್ಡಿನ ಸಾಮಾನು ಸಾಗಿಸಿ ಮಗು ಬಾಣಂತಿಯನ್ನು ಮನೆಗೆ ಕರೆದುಕೊಂಡು ಹೋಗುವುದೆಂದು ತೀರ್ಮಾನಿಸಿದ ಅಕ್ಕಮ್ಮ, ಮೊದಲು ಮನೆಗೆ ಹೋಗಿ ಆಚಾರಿಯನ್ನು ಕರೆಸಿ ಬಾಗಿಲಿಗೆ ಹಾಕಿದ್ದ ಬೀಗ ಒಡೆಸಿ ಒಳಗೆ ಹೋಗಿ ನೋಡುತ್ತಾಳೆ: ಮಳೆಯ ನೀರು ಒಳಗೆಲ್ಲ ಸೋರಿ ನೆಲ ನೆನೆದು ಕಿಚಿಕಿಚಿಯಾಗಿದೆ. ಅಟ್ಟದ ಹಲಗೆ ದಬ್ಬೆಗಳ ಮೇಲೆಲ್ಲ ನೀರು ಹರಿದು ಅವೆಲ್ಲವೂ ಇನ್ನೂ ಆರದೆ ಒದ್ದೆಯಾಗಿಯೇ ಇದೆ. ಯಾರೋ

ತುಂಟರು ಮನೆಗೆ ಕಲ್ಲು ಹೊಡೆದಿದ್ದಾರೆಂಬುದು ಯಾರೂ ಹೇಳದೆಯೇ ಗೊತ್ತಾಯಿತು. ಅದು ಯಾರು ಎಂದು ಈಗ ವಿಚಾರಿಸುತ್ತಾ ಕೂರಲು ಸಮಯವಿರಲಿಲ್ಲ. ವಾರದ ಹೊನ್ನ ಏಣಿ ಹಾಕಿಕೊಂಡು ಅಟ್ಟಕ್ಕೆ ಹತ್ತಿ ಅಲ್ಲಿಂದಲೇ ಹೆಂಚುಗಳನ್ನು ಹಿಂದೆ ಮುಂದೆ ಸರಿಸಿ ಸರಿಮಾಡಿದ. ಎರಡೂ ಕಡೆಯ ಬಾಗಿಲುಗಳನ್ನು ತೆಗೆದು, ನೆಲವು ಗಾಳಿಗೆ ಆರಿಕೊಳ್ಳಲು ಬಿಟ್ಟ. ಆದರೂ ಹೊಸ ಮಣ್ಣು ಹಾಕಿ ಗಟ್ಟಣೆ ಮಾಡಲೇಬೇಕಾಯಿತು. ಅಂತೂ ಅಕ್ಕಮ್ಮ ಸುತ್ತಮುತ್ತಲಿನವರಿಗಿಂತ ನಾಲ್ಕು ದಿನ ತಡವಾಗಿ ಬಾಣಂತಿ ಮತ್ತು ಮಗುವಿನೊಡನೆ ಮನೆಯನ್ನು ಹೊಕ್ಕಳು. ನಂಜು ಹೆತ್ತು ಇನ್ನೂ ಒಂದು ತಿಂಗಳಾಗಿತ್ತು. ಎದ್ದು ಏನಾದರೂ ಕೆಲಸ ಮಾಡುವುದಾಗಿ ಅವಳು ಹೇಳಿದರೂ ಅಕ್ಕಮ್ಮ ಬಿಡಲಿಲ್ಲ. ಮನೆ ಗುಡಿಸಿ ಧೂಳು ಹೊಡೆಯುವುದರಿಂದ ಹಿಡಿದು ಹಸುಗಳಿಂದ ಹಾಲು ಕರೆಯುವತನಕ ಎಲ್ಲವನ್ನೂ ಅವಳೇ ಮಾಡುತ್ತಿದ್ದಳು.

ಇವರು ಇಲ್ಲಿಗೆ ಬಂದು ನಾಲ್ಕನೆಯ ದಿನ ಮದ್ಯಾಹ್ನ ಮೂರು ಗಂಟೆಗೆ ಕಂಠೀಜೋಯಿಸರು ಕುದುರೆಯ ಮೇಲೆ ಮನೆಗೆ ಬಂದರು. ಕಲ್ಲೇಶನ ಕ್ಷೇಮಸಮಾಚಾರವನ್ನು ಅಕ್ಕಮ್ಮ ಮತ್ತು ನಂಜುವಿಗೆ ಹೇಳಿದ ಮೇಲೆ, ಅವರ ಗಮನವು ನೆಲದ ಕಡೆಗೆ ಹೋಯಿತು. 'ಇದೇನು, ನೆಲಕ್ಕೆ ಹೊಸದಾಗಿ ಗಟ್ಟಣೆ ಮಾಡ್ಸಿದ್ರಾ? ಈಗೇನು ಅವಸರವಾಗಿತ್ತು ಅದುಕ್ಕೆ?'

'ನೋಡು, ಮನೆ ಮ್ಯಾಲೆ ಯಾರಾದ್ರೂ ಕಲ್ಲು ಹೊಡೆದಿದ್ರೋ, ಹದ್ದುಗಿದ್ದು ಕೂತು ಹೆಂಚು ಎಳದಿತ್ತೋ. ಮಳೆ ನೀರೆಲ್ಲ ಒಳಗೆ ಸೋರಿ ನೆಂದು ನ್ಯಲ ಅಟ್ಟು ಗದ್ದೆಯಾಗಿತ್ತು. ಒಳಕ್ಕೆ ಕಾಲಿಡುಕ್ ಆಗ್ತಿರ್‌ಲಿಲ್ಲ. ಹೊನ್ನನ ಕೈಲಿ ಮದ್ಲು ಗಟ್ಟಣೆ ಮಾಡ್ಸಿ ಆಮ್ಯಾಲೆ ನಾವು ಸಾಮಾನು ಸಾಗಿಸಿದ್ವು.'

'ಇವನವ್ವೇ ಹೊಲೇರ..... ಮಾಡ್ತೀನಿ ಭಾಡ್‌ಕೋವ್ ನನ್ಮಗುಂಗೆ' –ಎಂದವರೇ ಕಂಠೀಜೋಯಿಸರು ಹೊರಗೆ ಹೋಗಿಬಿಟ್ಟರು. ಯಾಕೆ ಏನು ಎಂಬುದು ಅಕ್ಕಮ್ಮನಿಗಾಗಲಿ ನಂಜುವಿಗಾಗಲಿ ತಿಳಿಯಲಿಲ್ಲ.

ಮದ್ಯಾಹ್ನ ಊಟವಾದ ಮೇಲೆ ಶ್ಯಾನುಭೋಗ ಶ್ಯಾಮಣ್ಣನ ಮನೆಯ ದೊಡ್ಡ ಜಗುಲಿಯ ಮೇಲೆ ಗ್ರಾಮದ ಹಲವು ಮುಖ್ಯರು ಸೇರಿ ಸಂಜೆ ಕತ್ತಲಾಗುವ ತನಕ ಪಗಡೆ ಆಡುವುದು ರೂಢಿ. ಈ ಹೊತ್ತಿನಲ್ಲಿ ಶ್ಯಾಮಣ್ಣ ಅಲ್ಲೇ ಇರುತ್ತಾನೆಂಬುದು ಕಂಠೀಜೋಯಿಸರಿಗೆ ಗೊತ್ತು. ಅವರು ನೇರವಾಗಿ ಹೋಗಿ ಜಗುಲಿಯನ್ನು ಹತ್ತಿ ನಿಂತು ಕೇಳಿದರು: 'ರಾತ್ರಿ ಹೊತ್ನಲ್ಲಿ ನನ್ ಮನೆ ಮೇಲೆ ಕಲ್ಲು ಹೊಡ್ಸಿದೆ ಏನ್ಲಾ ಹಲಾಲ್‌ಕೋರ ನನ್ಮಗನೇ? ಗಂಡುಸ್ತನ ಇದ್ರೆ ಹಗಲು ಹೊತ್ತು ಬರಬೇಕಾಗಿತ್ತು. ಅದೂ ತುಂಬಿದ ಊರಿನಲ್ಲಿ ಬರಬೇಕಾಗಿತ್ತು. ಲೇ, ನಾನು ಅಂದ್ರೆ ಏನಂತ ತಿಳ್ಕಂಡಿದೀಯಾ? ಗಂಡು, ನಿಮ್ಮವ್ವನ ಮಿಂಡ ಅಂತ ತಿಳ್ಕೊ ಬಾಂಚೋತ್.'

ಇವರ ಅನಿರೀಕ್ಷಿತ ಆಗಮನದಿಂದ ಮಾತ್ರವಲ್ಲದೆ ಈ ರೀತಿಯ ಅನಿರೀಕ್ಷಿತ ಯುದ್ಧ ಘೋಷಣೆಯಿಂದ ಪಗಡೆಯ ದಳಪತಿಗಳೆಲ್ಲ ಅವಾಕ್ಕಾದರು. ಶ್ಯಾಮಣ್ಣನೂ ಕಕ್ಕಾಬಿಕ್ಕಿಯಾದ. ಕಂಠೀಜೋಯಿಸರು ಸೀದಾ ಶ್ಯಾಮಣ್ಣನ ಮನೆಯ ಒಳಗೆ ನುಗ್ಗಿ, ಬಾಗಿಲು ಹಿಂಭಾಗದ ಒರಳಿನ ಹತ್ತಿರ ಗೋಡೆಗೆ ಒರಗಿಸಿ ನಿಲ್ಲಿಸಿದ್ದ ಒಂದು ಒನಕೆಯನ್ನು ಬಲಗೈಲಿ ತೆಗೆದುಕೊಂಡರು. ಅಡಿಕೆ ದಬ್ಬೆಗಳ ಅಟ್ಟಕ್ಕೆ ಹಾಕಿದ್ದ ಬಿದಿರಿನ ಏಣಿಯನ್ನು ಎಡಗೈಲಿ ಹಿಡಿದು ಹೊರಕ್ಕೆ ಬಂದು, ಏಣಿಯನ್ನು ಸೂರಿಗೆ ಒರಗಿಸಿ ಹೆಂಚಿನ ಮೇಲೆ ಹತ್ತಿದವರೇ ಎತ್ತಿ ಎತ್ತಿ ಒನಕೆಯಿಂದ ಹೆಂಚನ್ನು ಬಡಿಯಲು ಶುರುಮಾಡಿದರು. ನಾಲ್ಕಾರು ಏಟಿಗೆ, ಇವರು ಪಗಡೆಯಾಡುತ್ತಿದ್ದ ಜಗುಲಿಯ ಅಂಕಣದ ಮೇಲಿನ ಹೆಂಚೆಲ್ಲ ಪುಡಿಪುಡಿಯಾಗಿ ಅವರು ಮೇಲ್ಭಾಗಕ್ಕೆ ಏರಿದರು.

ಜಗುಲಿಯ ಮೇಲ್ಭಾಗದ ಹೆಂಚಿನ ಮೇಲೆ ಒನಕೆ ಒಂದು ಪೆಟ್ಟು ಬೀಳುವುದೇ ತಂಡ, ಪಗಡೆಯವರು ಎದ್ದು ಬೀದಿಗೆ ಬಂದರು. ಮೇಲೆ ನಿಂತ ಕಂಠೀಜೋಯಿಸರು ಅವರ ಕಡೆ ಒಂದು ಸಲ ನೋಡಿ ಗರ್ಜಿಸಿ–'ಲೇ ಶಿಖಂಡಿಗಳಾ, ಅಲ್ಲಿ ನಿಂತ್ಕಳಿ, ನಿಮ್ಮ ಹೆಂಡ್ತಿ ತಲೆ ಬೋಳ್ಸಿ ತಾಳಿ ಕೀಳುಸ್ತೀನಿ' ಎಂದು ಬಾಗಿ ಎರಡು ಹೆಂಚುಗಳನ್ನು ತೆಗೆದು ರೊಂಯ್ ಎಂದು ಇವರ ಕಡೆ ಬೀಸಿದುದು ಇಬ್ಬರಿಗೆ ತಗುಲಿ, ಒಬ್ಬರ ಹಣೆಯಿಂದ ಮತ್ತೊಬ್ಬರ ಭುಜದಿಂದ ರಕ್ತ ಹನಿಯಿತು. ಜನಗಳು ಚಲ್ಲಾಪಿಲ್ಲಿಯಾದರು. ತಾನು ಮೇಲೆ ಹತ್ತಿ ಕಂಠೀಜೋಯಿಸನಿಗೆ ಬುದ್ಧಿ ಕಲಿಸಬೇಕೆಂದು ಶ್ಯಾಮಣ್ಣನ ಮನಸ್ಸಿಗೇನೋ ಬಂತು. ಅವನೂ ತಕ್ಕಮಟ್ಟಿನ ಗಟ್ಟೀಗನೇ. ಆದರೆ ಹಾಗೆ ಮೇಲೆ ಹತ್ತುವುದು ಅಪಾಯವೆಂದು ಅವನ ಮನಸ್ಸು ಹೇಳಿದುದೇ ಅಲ್ಲ. ಅದು ಬೇರೆ ಏನೋ ಯೋಚಿಸಿ ತೀರ್ಮಾನಿಸುತ್ತಿತ್ತು.

ಸುಮಾರು ಹತ್ತು ಸಾವಿರ ಉಂಡೆಹೆಂಚುಗಳನ್ನು ಕಂಠೀಜೋಯಿಸರು ಅರ್ಧ ಗಂಟೆಗೂ ಕಡಿಮೆಯಲ್ಲಿ ಬಡಿದು ಪುಡಿ ಮಾಡಿದರು. ನಂತರ ನಿಧಾನವಾಗಿ ಕೆಳಗೆ ಇಳಿದು ಏಣಿ ಒನಕೆಗಳನ್ನು ಅದರದರ ಜಾಗದಲ್ಲಿ ಇಟ್ಟು ಹೊರಕ್ಕೆ ಬಂದರು. ಭಯದಿಂದ ಬೀದಿಗೆ ಬಂದು ಎದುರು ಮನೆಯ ಜಗುಲಿಯ ಮೇಲೆ ಮಕ್ಕಳೊಡನೆ ನಿಂತಿದ್ದ ಶ್ಯಾಮಣ್ಣನ ಹೆಂಡತಿಯ ಮುಂದೆ ನಿಂತು, 'ನೋಡಮ್ಮ, ನೀನು ತೂಬಿನಕೆರೆ ತಮ್ಮಯ್ಯ ಜೋಯಿಸರ ಮಗಳು ಅಂತ ನಿನ್ನ ಕೈಲಿ ಹೇಳ್ತಿದೀನಿ. ತಮ್ಮಯ್ಯ ಜೋಯಿಸರು ಅಂದ್ರೆ ನನಗೆ ಗುರುಗಳ ಸಮಾನ. ಬಿಟ್ಟ ಊರೊಳಗೆ ನಾನು ಒಬ್ಬನೇ ಇದ್ದೆ ಅಂತ ನಿನ್ನ ಗಂಡ ನಡುರಾತ್ರೀಲಿ ಆಳುಗಳನ್ನು ಕಳಿಸಿ ಮನೆ ಮೇಲೆ ಕದ್ದು ಕಲ್ಲು ಹೊಡುಸ್ದ. ಆದ್ರೆ ನನ್ನ ನೋಡು, ಹಗಲು ಹೊತ್ತಿನಲ್ಲಿ ಬಂದು ಕೆಲ್ಸ

ಮಾಡಿದೀನಿ. ಕಂಠಿ ಅಂದ್ರೆ ಗಂಡು. ಇನ್ನು ಮ್ಯಾಲೆ ಏನಿದ್ರೂ ಶಿಖಂಡಿಗಳ ಕೆಲ್ಸ ಮಾಡ್‌ಬ್ಯಾಡ, ಗಂಡಸು ಮಾಡೋ ಕೆಲ್ಸ ಮಾಡು ಅಂತ ನಿನ್ನ ಗಂಡಂಗೆ ಹೇಳು. ಆ ಮಿಂಡರಿಗೆ ಹುಟ್ಟಿದ ಸೂಳೇಮಗನ ಕೈಲಿ ನಾನು ಮಾತಾಡುಲ್ಲ' ಎಂದು ಹೇಳಿ ನೇರವಾಗಿ ತಮ್ಮ ಮನೆಗೆ ಹೊರಟು ಹೋದರು. ಶ್ಯಾಮಣ್ಣನ ಹೆಂಡತಿ ತಬ್ಬಿಬ್ಬಾಗಿ ನಿಂತುಕೊಂಡಿದ್ದಳು.

ನೇರವಾಗಿ ಮನೆಗೆ ಹೋದ ಕಂಠೀಜೋಯಿಸರು ಅಡಿಗೆ ಮನೆ ಹೊಕ್ಕರು. ಅಷ್ಟು ಹೊತ್ತಿಗೆ ಅಕ್ಕಮ್ಮ ಒಲೆಯಮೇಲೆ ಏರಿಸಿದ್ದ ಕೆಂಪು ಮುಂಗೇಸರಿ ಅಕ್ಕಿಯ ಅನ್ನದ ತಪ್ಪಲೆ ಕುದಿಯುತ್ತಿತ್ತು. ಪಕ್ಕದ ಮನೆಯಿಂದ ಅವಳು ತಂದು ಇಟ್ಟಿದ್ದ ಹುಳಿ, ಕಲಾಯಿ ಮಾಡಿದ ಚುರುಕಿನಲ್ಲಿತ್ತು. ಜೋಯಿಸರು ಹಿತ್ತಿಲ ಕಡೆಗೆ ಹೋಗಿ ಬಾವಿಯಿಂದ ಸೇದಿ ಎರಡು ಬಿಂದಿಗೆ ನೀರು ಹೊಯ್ದುಕೊಂಡು ಸ್ನಾನ ಮಾಡಿದರು. ಜೊತೆಯಲ್ಲಿಯೇ ತಮ್ಮ ಕಂಚಿನ ಕಂಠದಲ್ಲಿ ಗಟ್ಟಿಯಾಗಿ ಸಂಧ್ಯಾವಂದನೆಯ ಮಂತ್ರ ಹೇಳುತ್ತಾ ಮೈ ಒರಸಿಕೊಂಡು ಪಂಚೆ ಉಟ್ಟರು. ದೇವರ ಗೂಡಿನ ಹತ್ತಿರ ಇದ್ದ ಕರಟದಿಂದ ಸಾದನ್ನು ತೇಯ್ದು ನಡುಹಣೆಗೆ ಇಟ್ಟು ಬೆರಳುಗಳನ್ನು ತೊಳೆದು ಊಟಕ್ಕೆ ಕೂತರು. ಒಂದು ಸೇರಕ್ಕಿಯ ಅನ್ನ ಬಿಸಿಬಿಸಿಯಾಗಿ ಸಿದ್ಧವಾಗಿತ್ತು. ಕರೆಯುತ್ತಿದ್ದ ಹಸುವಿನ ತುಪ್ಪ ಬಾಣಂತಿಗೆ ಆಗಿ ಮಿಕ್ಕಿತ್ತು. ಮೊದಲು ಅಡಿಕೆ ಪಟ್ಟೆಯ ತುಂಬ ಹುಳಿಯಲ್ಲಿ ಕಲಸಿದ ಅನ್ನವು ಮೂರೇ ನಿಮಿಷದಲ್ಲಿ ಮುಗಿದ ಮೇಲೆ ಉಪ್ಪಿನಕಾಯಿ ಎಣ್ಣೆಯಲ್ಲಿ ಎರಡನೆಯ ಸಲ ಕಲಸಿಕೊಳ್ಳುತ್ತಾ ಅಕ್ಕಮ್ಮನನ್ನು ಕೇಳಿದರು: 'ಹಸು ಕೊಡೂದು ಬಾಣಂತಿಗೆ ಸಾಕಾಗುತ್ತೊ?'

'ಬೇಕಾದಷ್ಟಾಗುತ್ತೆ. ಇನ್ನೂ ಒಂದು ಬುದ್ದಲಿ ತುಂಬ ತುಪ್ಪ ತುಂಬಿಟ್ಟಿದೀನಿ.'

'ಒಳ್ಳೇದು, ಅವಳು ಬಾಣಂತನ ಮುಗಿಸ್ಕಂಡು ಹೋಗೂ ಹೊತ್ತಿಗೆ ಗುಡ್ಡೆ ಹಾಕಿ ನಾಲ್ಕು ಬುದ್ದಲಿ ತುಪ್ಪ ಕೊಟ್ಟುಕಳ್ಸು. ಸುಖವಾಗಿ ಊಟ ಮಾಡ್ಲಿ. ಚಿಟ್ಟಹರಳು ಅರೆಸಿದ್ಯೋ, ದೊಡ್ಡಹರಳು ಅರೆಸಿದ್ಯೋ'

'ಇನ್ನೂ ಹಸಿ ಬಾಣಂತಿಗೆ ಚಿಟ್ಟ ಹರಳೆಣ್ಣೆ ಒತ್ತಿ ಯಾರು ನೀರು ಹಾಕ್ತಾರೆ? ಶೀತವಾಗುತ್ತೆ.'

'ಸರಿ, ನಾಮಕರಣ ಮಾಡ್ಸಿದ್ರೊ?'

'ಹೂಂ, ಚೆನ್ನಿಗರಾಯ ಬಂದಿದ್ದ. ಪಾರ್ವತಿ ಅಂತ ಹೆಸರಿಟ್ಟು.'

ಮೊಸರನ್ನವನ್ನು ಪೂರ್ತಿ ಮಾಡಿ ಗಟ್ಟಿಯಾಗಿ ತೇಗುತ್ತಾ ಅವರುಬಾಣಂತಿ ಮಲಗಿದ್ದ ಕೋಣೆಗೆ ಬಂದು ಕೇಳಿದರು: 'ನಂಜಾ ಎಲ್ಲಿ, ನಿನ್ನ ಮಗಳನ್ನ ಕೊಡಿಲ್ಲಿ ನೋಡಾಣಾ.'

ಮಗುವನ್ನು ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡು ಅವರು ಕೋಣೆಯ ಹೊಸಿಲ ಮೇಲೆ ಕೂತರು. ಮಗು ಬೆಳ್ಳಗೆ ದಪ್ಪದಪ್ಪವಾಗಿ ಸುಟಿಯಾಗಿತ್ತು. 'ಇವ್ಳೂ ನಿನ್ನ ಹಾಗೇ ಇದಾಳೆ ಕಣೆ. ನೋಡು ಹಣೆ ಎಷ್ಟು ದೊಡ್ಡ ದೊಡ್ಡದಾಗಿದೆ. ಯಾವ ನಕ್ಷತ್ರವಂತೆ?'

'ಪುಟ್ಟಭಟ್ಟರು ಅದ್ಯಾವುದೋ ಅಂದ್ರು. ಜಾತಕ ನೀನೇ ಬಂದ ಮೇಲೆ ಬರೀಲಿ, ಅವ್ರು ನನಗಿಂತ ಚನ್ನಾಗಿ ಬರೀತಾರೆ ಅಂದ್ರು.'

'ಆಯ್ತು, ನಾಳೆ ದಿನ ಜ್ಞಾಪಿಸು. ಹುಟ್ಟಿದ ಟೈಂ ಸರಿಯಾಗಿ ಗುರುತು ಹಾಕಿದೀರಿ ತಾನೇ? ಎಲ್ಲಿ, ನನಗೆ ಒಂದಿಷ್ಟು ವೀಳ್ಳೆದೆಲೆ ಕೊಡು. ಬೆಳಿಗ್ಗೆಯಿಂದ ಹೊಗೆಸೊಪ್ಪು ಹಾಕ್ಕಂಡಿಲ್ಲ'–ಎಂದು ಹೇಳಿ ಮಗುವನ್ನು ಎತ್ತಿಕೊಂಡೇ ಅಡಿಗೆಯ ಮನೆಗೆ ಹೋಗಿ ಕೇಳಿದರು: 'ಅಕ್ಕಮ್ಮ, ಖಾರ, ಮೆಣಸು, ಲೇಹ, ಇದಕ್ಕೆಲ್ಲ ದುಡ್ಡಿಗೆ ಏನು ಮಾಡ್ದೆ? ನಂಗೆ ಈ ಕಡೆ ಜ್ಞಾಪಕವೇ ಬರಲಿಲ್ಲ. ತಡಿ ಇಲ್ಲಿ.' ಆಮೇಲೆ ಹೊರಗೆ ಬಂದು ತಮ್ಮ ಕೋಟಿನ ಜೇಬಿನಿಂದ ಮೂವತ್ತು ರೂಪಾಯಿ ತಂದುಕೊಟ್ಟು–'ಎಲ್ಲಾದ್ರೂ ಸಾಲಗೀಲ ಮಾಡಿದ್ರೆ ಕೊಟ್ಟುಬಿಡು. ಇನ್ನು ನಾನು ಊರಲ್ಲೇ ಇರ್ತೀನಿ. ಇನ್ನೊಂದು ಇಪ್ಪತ್ತು ದಿನವಾದ ಮೇಲೆ ಹಾಸನಕ್ ಹೋಗಿ ಕಲ್ಲೇಶನಿಗೆ ಗುಣವಾಗಿದ್ರೆ ಕರ್ಕಂಡ್ ಬರಬೇಕು' ಎಂದರು.

ಮಗಳು ಮಡಿಸಿಕೊಟ್ಟ ವೀಳ್ಯದೆಲೆ ಅಗಿದು, ಮಗುವನ್ನು ಅವಳ ತೊಡೆಯ ಮೇಲೆ ಮಲಗಿಸಿ, ತಮ್ಮ ಎಡ ಅಂಗೈ ಮೇಲೆ ಎರಡು ಚೂರು ಹೊಗೆಸೊಪ್ಪು ಹಾಕಿ ಬಲ ಹೆಬ್ಬೆಟ್ಟಿನಿಂದ ತಿಕ್ಕಿ ಬಾಯಿಗೆ ತುಂಬಿ ಐದಾರು ಸಲ ಹೊರಕ್ಕೆ ಹೋಗಿ ಚರಂಡಿಯ ಹತ್ತಿರ ಚಿಲ್ ಎಂದು ಉಗುಳಿ ಬಂದ ಮೇಲೆ ಮಂದಲಿಗೆ ಹಾಸಿ ತಲೆಯ ಕೆಳಗೆ ಒಂದು ಮಣೆ ಇಟ್ಟುಕೊಂಡು ಒಂದು ಗಳಿಗೆ ನಿದ್ದೆ ತೆಗೆದರು. ಸಾಯಂಕಾಲ ಎದ್ದು ಗದ್ದೆಯ ಹತ್ತಿರ ಹೋಗಿಬಂದು, ರಾತ್ರಿ ಬಿಸಿಬಿಸಿಯಾಗಿ ಅನ್ನ ಹುಳಿ ಹಿಟ್ಟುಗಳನ್ನು ಊಟ ಮಾಡಿ ಬೆಚ್ಚಗೆ ಮಲಗಿದರು.

– 6 –

ಮಧ್ಯರಾತ್ರಿಯ ಹೊತ್ತಿಗೆ ಯಾರೋ ಮನೆಯ ಬಾಗಿಲನ್ನು ತಟ್ಟಿದಂತೆ ಆಯಿತು. 'ಯಾರೋ ಅದು?'–ಎಂದು ಕಠೀಜೋಯಿಸರೇ ಎಚ್ಚರವಾಗಿ ಕೇಳಿದುದಕ್ಕೆ ಬಂದ ಉತ್ತರ ಅವರನ್ನು ಚಕಿತಗೊಳಿಸಿತು: 'ನಿಮ್ಮ ಮಾವನ ಮನೆಯೋರು. ಬಾಗಿಲು ತೆಗೀರ್ರಿ ಸುಮ್ಗೆ.'

'ಅದ್ಯಾವ್ನೋ ಜ್ಞಾನ ನ್ಯಟ್ಟಗಿಲ್ವೇನೋ ಹೈವಾನ್'–ಎಂದು ಕೋಪದಿಂದ ಅಗಳಿ ಸಡಲಿಸಿ ಬಾಗಿಲು ತೆಗೆಯುತ್ತಾರೆ: ನಾಲ್ಕು ಜನ ಪೋಲೀಸು ಕಾನಿಸ್ಟೆಬಲುಗಳು ಮುಂದೆ ನುಗ್ಗಿ ಇವರ ತೋಳುಗಳನ್ನು ಗಟ್ಟಿಯಾಗಿ ಹಿಡಿದರು. ಕೊಸರಿದರೂ ಬಿಡಲಿಲ್ಲ. ದಫೇದಾರರು ಒಂದು ಸಲ ಸಿಳ್ಳೆ ಹಾಕಿದರು.

ಹಿತ್ತಿಲಕಡೆಯ ಬಾಗಿಲಿನಲ್ಲಿ ಹೊರಗಡೆ ನಿಂತಿದ್ದ ಇಬ್ಬರು ಕಾನಿಸ್ಟೇಬಲುಗಳು ಗೋಡೆಯನ್ನು ಬಳಸಿ ಬಂದು ಇವರನ್ನು ಕೂಡಿಕೊಂಡರು.

ಯಾಕ್ರೀ, ಏನ್ ಮಾಡಿದ್ದುಕ್ರೀ ನನ್ನ ಹಿಡ್‌ಕಂಡಿರೋದು? ನಿಮಗೆ ಯಾವ ಅಥಾರ್ಟಿ ಇದೇರಿ?' –ಎಂದು ಇವರು ಕೇಳಿದುದಕ್ಕೆ ದಫೇದಾರರು, 'ಅದೇನಿದ್ರೂ ಸ್ಟೇಶನ್‌ನಾಗೆ ಬಂದು ಕೇಳೋರಂತೆ ನಡೀರಿ' ಎಂದು ಮುಂದೆ ಹೊರಟರು. ಅಷ್ಟರಲ್ಲಿ ಎಚ್ಚರವಾದ ಅಕ್ಕಮ್ಮ ನಂಜಮ್ಮರು ಎದ್ದು ಬಂದು, 'ಅಯ್ಯೋ' ಎಂದು ಅಳಲು ಪ್ರಾರಂಭಿಸಿದರು. ಕಂಠೀಜೋಯಿಸರೇ, ಅಕ್ಕಮ್ಮ ನೀನ್ ಅಳಬ್ಯಾಡ. ಈ ನನ್ಮಗ ಶ್ಯಾಮಣ್ಣಂದೇ ಕಿತಾಪತಿ ಅಂತ ಕಾಣುತ್ತೆ. ನಾನು ಚೆನ್ನರಾಯಪಟ್ಟಣದ ತಂಕ ಹೋಗಿ ಬತ್ತೀನಿ. ನೀವು ಬಾಗ್ಲು ಹಾಕ್ಕಳಿ. ನಾನಿಲ್ದೆ ಇರೂವಾಗ ಮನೆತಾವುಕ್ ಯಾವ ನಾಯಿನಾದ್ರೂ ಬಂದ್ರೆ ಕೆರ ತಗಂಡ್ ಹೊಡೆದು ಕಳ್ಸಿ' ಎಂದು ಹೇಳಿ ಅವರೊಡನೆ ನಡೆದರು. ಊರ ಹೊರಗೆ ವ್ಯಾನು ನಿಂತಿತ್ತು. ಅದರಲ್ಲಿ ಕೂರಿಸಿಕೊಂಡು ಪೋಲಿ ೀಸಿನವರು ಚನ್ನರಾಯಪಟ್ಟಣಕ್ಕೆ ನಡೆದರು. ಶ್ಯಾಮಣ್ಣ ಊರಿನಲ್ಲೇ ಉಳಿದ.

ಮಗ ಹೋಗಿ ಶ್ಯಾಮಣ್ಣನ ಮನೆಯ ಹೆಂಚು ಬಡಿದು ಬಂದದ್ದು ಸಾಯಂಕಾಲ ಅವನು ಗದ್ದೆಯ ಕಡೆಗೆ ಹೋಗಿದ್ದಾಗ ಅಕ್ಕಮ್ಮನಿಗೆ ತಿಳಿದಿತ್ತು. ಅದರ ಕಾರಣವೂ ಗೊತ್ತಾಗಿತ್ತು. ಈಗ ಪೋಲೀಸಿನವರನ್ನು ಕರೆಸಿ ಶ್ಯಾಮಣ್ಣ ತನ್ನ ಮಗನನ್ನು ಹಿಡಿಸಿಕೊಂಡು ಹೋದುದಕ್ಕೆ ಅಕ್ಕಮ್ಮನಿಗೆ ಮಹಾ ಸಿಟ್ಟು ಬಂದಿತು. ರಾತ್ರಿಯಲ್ಲಿ ತಾನೊಬ್ಬಳೇ ಶ್ಯಾಮಣ್ಣನ ಮನೆಯ ಮುಂದೆ ಹೋಗಿ ನಿಂತು ಬೀದಿಯ ಮಣ್ಣನ್ನು ಗುಡ್ಡೆ ಮಾಡಿ ಬೊಗಸೆಯಿಂದ ತೂರುತ್ತಾ ಬೈಯಲು ಪ್ರಾರಂಭಿಸಿದಳು: 'ಅಯ್ಯೋ ನಿನ್ನ ಹೆತ್ತೋರು ಬಾಯಿಗೆ ನನ್ನ ಹೇಲು ಹಾಕ. ಹೆಣ್ಣಿಗ ಸೂಳೇಮಗನೇ, ರಾತ್ರಿ ಹೊತ್ತು ನಮ್ಮ ಮನೆಗೆ ಕಲ್ಲು ಹೊಡ್‌ಸುಕ್ಕೆ ಕಳ್ಸಿದ್ದೆ ಏನೋ ಶಿಖಂಡಿ ಮುಂಡೇಮಗನೆ? ನನ್ನ ಮಗನ್ನ ಗಂಡಸು ಅಂತ ನಾನು ಹೆತ್ತು ಮೊರಕ್ಕೆ ಹಾಕಿದ್ದೆ ಕಣೊ. ಅದುಕ್ಕೇ ಹಗಲು ಹೊತ್ತು ಬಂದು ನಿನ್ನ ಮನೆ ಹೆಂಚು ಬಡಿದ. ಹೆದ್‌ರಿಕಂಡು ಪೋಲೀಸ್ನೋರ್ಗೆ ಹೇಳೂಕ್ ಹೋಗಿದ್ಯಲಾ, ನೀನೇನು ಸೀರೆ ಉಟ್ಕಂಡಿದಿಯೇನೋ? ನಿನ್ನ ವಂಶ ನಿರ್ವಂಶವಾಗ. ನಿನ್ನ ಮಕ್ಕಳ ಸುಳಿ ಅಡಗ. ನಿನ್ನ ಹೆಂಡತಿ ಮುಂಡೆಯಾಗ. ಸೂಳೇಮಗನೇ, ಈಗ ನಾನು ಆಗಿದೀನಲಾ, ತಲೆ ಬೋಳಿಸ್ಕಂಡು ಕೆಂಪಿನ ಸೀರೆ ಉಟ್ಕಂಡು, ನಿನ್ನ ಹೆಂಡ್ತಿಯೂ ಹಾಗೇ ಆಗ್ತಾಳೆ ನೋಡು ಬೇಕಾದ್ರೆ. ಗಂಡ ಸತ್ತ ಮುಂಡೆ ಶಾಪ ಅಂದ್ರೆ ಏನಂತ ತಿಳ್ಕಂಡಿದೀಯಾ?.....

ಅಷ್ಟರಲ್ಲಿ ಸುತ್ತಮುತ್ತ ಎಷ್ಟೋ ಜನರು ಎದ್ದು ಬಂದು ಸೇರಿದರು. ಎಲ್ಲರಿಗೂ ನಡೆದ ವಿಷಯ ಗೊತ್ತಾಯಿತು. ಯಾರೂ ಏನೂ ಬಾಯಿ ಬಿಟ್ಟು ಆಡಲಿಲ್ಲ. ಶ್ಯಾಮಣ್ಣನ ಮನೆಯ ಬಾಗಿಲು ತೆಗೆಯಲಿಲ್ಲ. ಮನೆಯಲ್ಲಿ ನಂಜು ಒಬ್ಬಳೇ ಮಗುವಿನ ಸಂಗಡ ಇರುವ ನೆನಪಾಗಿ, ಅಕ್ಕಮ್ಮ ಮತ್ತೆ ಹತ್ತು ಮಾತಿನಲ್ಲಿ ಬೈಗುಳವನ್ನು ಮುಗಿಸಿ ಮನೆಗೆ ಬಂದಳು.

ಚೆನ್ನರಾಯಪಟ್ಟಣದ ಪೋಲೀಸ್ ಸ್ಟೇಶನ್ನಿಗೆ ಹೋದಾಗ–'ರಾತ್ರಿ ಇಲ್ಲೇ ಇರಿ. ಬೆಳಿಗ್ಗೆ ಸಬ್‌ಇನ್‌ಸ್ಪೆಕ್ಟರು ಬಂದಮೇಲೆ ನಿಮ್ಮ ಹೇಳಿಕೆ ತಗಾತಾರೆ' ಎಂದು ದಫೇದಾರರು ಹೇಳಿದರೆ ಕಂಠೀಜೋಯಿಸರು ಕೇಳಲಿಲ್ಲ; 'ಅವ್‌ರನ್ನ ಈಗ್ಲೇ ಕರಸಿ. ಅದೇನು ಕೇಳಲಿ. ನಿಮ್ಮ ಸ್ಟೇಶನ್ನಿನ್ನಲ್ಲಿ ಸುಮ್‌ಸುಮ್‌ನೆ ಇರೂಕೆ ನಾನೇನೂ ಕಳ್ಳತನ ಮಾಡಿಲ್ಲ'–ಎಂದು ಬಾಯಿ ಜೋರು ಮಾಡಿದರು. ಹೊಡೆದು ಸುಮ್ಮನಾಗಿಸಲು ಪೋಲೀಸಿನವರಿಗೂ ಭಯ ಇವರ ವಿಷಯದಲ್ಲಿ ಅವರೂ ಸಾಕಷ್ಟು ಕೇಳಿ ತಿಳಿದುಕೊಂಡಿದ್ದರು. ಸಬ್‌ಇನ್‌ಸ್ಪೆಕ್ಟರು ಆಗಲೇ ಬಂದರು. ಶ್ಯಾಮಣ್ಣ ಶ್ಯಾನುಭೋಗ; ಎಂದರೆ ಸರ್ಕಾರಿ ಅಧಿಕಾರಿ. ಅವರ ಮನೆ ಹೆಂಚುಗಳನ್ನು ಹೊಡೆದದ್ದೇ ಅಲ್ಲದೆ, ಒಳಗೆ ನುಗ್ಗಿ ಶ್ಯಾನುಭೋಗಿಕೆಯ ಲೆಕ್ಕದ ಪುಸ್ತಕಗಳನ್ನು ಹೊತ್ತುಕೊಂಡು ಹೋದನೆಂದು ಅವನು ಕಂಪ್ಲೇಂಟು ಕೊಟ್ಟಿದ್ದ. ಹೆಂಚು ಒಡೆದುದಕ್ಕೆ ಪೋಲೀಸಿನವರು ತಕ್ಷಣ ಕ್ರಮ ತೆಗೆದುಕೊಳ್ಳುತ್ತಿದ್ದರೋ ಇಲ್ಲವೋ, ಆದರೆ ಸರ್ಕಾರೀ ಲೆಕ್ಕವನ್ನು ಅಪಹರಿಸಿರುವ ದೂರಿಗೆ ಶ್ರದ್ಧೆ ವಹಿಸಲೇಬೇಕು. ಈ ದೂರಿನ ಪ್ರತಿಯನ್ನು ಶ್ಯಾಮಣ್ಣ ತಾಲ್ಲೂಕು ಅಮಲ್ದಾರರಿಗೂ ಕೊಟ್ಟಿದ್ದ.

'ನನಗೇನೂ ಗೊತ್ತಿಲ್ಲ. ನಾನು ಅವನ ಮನೆಗೂ ಹೋಗಿಲ್ಲ. ಇದೆಲ್ಲ ಸುಳ್ಳು'–ಎಂದು ಕಂಠೀಜೋಯಿಸರು ಹೇಳಿಕೆ ಕೊಟ್ಟರು. ಮರುದಿನ, ಸ್ಥಳೀಯ ಮ್ಯಾಜಿಸ್ಟ್ರೇಟರಾದ ಅಮಲ್ದಾರರ ಎದುರಿಗೂ ಇದೇ ಹೇಳಿಕೆ ಕೊಟ್ಟರು. ಪೋಲೀಸಿನವರು ಇವರ ಮೇಲೆ ಕೇಸು ದಾಖಲು ಮಾಡಿಕೊಂಡರು. ಸ್ಥಳದ ಮುನಿಸಿಪಾಲಿಟಿ ಮೆಂಬರು ಹನುಮಂತಶೆಟ್ಟರು ಜಾಮೀನು ನಿಂತದ್ದರಿಂದ ಕಂಠೀಜೋಯಿಸರನ್ನು ಪೋಲೀಸು ವಶದಿಂದ ಹೊರಗೆ ಬಿಟ್ಟರು. ಊರಿಗೆ ಬಂದ ಅವರು ಮೀಸೆಯ ಮೇಲೆ ಕೈಹಾಕಿಕೊಂಡೇ ಎಲ್ಲ ಬೀದಿಗಳಲ್ಲಿಯೂ ಒಂದು ಸುತ್ತು ತಿರುಗಿ ಮನೆಗೆ ಹೋದರು.

ಶ್ಯಾಮಣ್ಣನನ್ನು ಹಿಡಿದು ಬಗ್ಗಿಸಿ ಚಚ್ಚಿಬಿಡಬೇಕೆಂದು ಮನಸ್ಸಿನಲ್ಲೇನೋ ಬರುತ್ತಿತ್ತು. ಆದರೆ ತಮ್ಮ ಮೇಲೆ ಕೇಸು ಇರುವಾಗ ಹಾಗೆ ಮಾಡಬಾರದೆಂದು ಸುಮ್ಮನಾದರು. ಕೆಲವು ದಿನದಲ್ಲಿ ಹೊಳೇನರಸೀಪುರದ ಕೋರ್ಟಿನಿಂದ ಸಮನ್ ಬಂತು. ಪ್ರಸಿದ್ಧರಾಗಿದ್ದ ಲಾಯರ್ ವೆಂಕಟರಾಯರನ್ನು ಇವರು ಗೊತ್ತು ಮಾಡಿದರು. ಮೂರು ತಿಂಗಳು ಕಂಠೀಜೋಯಿಸರು ಹೊಳೆನರಸೀಪುರ ಹಾಸನಗಳಿಗೆ ಕುದುರೆಯ ಮೇಲೆ

ತಿರುಗಿದರು.
ಸಾಕ್ಷಿ ವಿಚಾರಣೆಯ ದಿನ ಬೆಳಿಗ್ಗೆಯೇ ಇವರು ಹೋಗಿ ಲಾಯರನ್ನು ಕಾಣಬೇಕಾಗಿತ್ತು. ರಾತ್ರಿಗೆ ಊರು ಬಿಟ್ಟ ಕಂಠೀಜೋಯಿಸರು ಕುದುರೆ ಏರಿ ಚೆನ್ನರಾಯಪಟ್ಟಣವನ್ನು ಹಾಯ್ದು ಗನ್ನಿಯ ಉಕ್ಕಡಕ್ಕೆ ಬಂದಾಗ ಹೊಳೆ ತುಂಬಿಬರುತ್ತಿತ್ತು. ಈಗ ಹೊಳೆ ಬರುವುದು ಅನಿರೀಕ್ಷಿತ. ಆದರೆ ಅವರು ಹೊಳೆ ದಾಟಿ ಬೆಳಗಿನ ಒಳಗೆ ನರಸೀಪುರ ಮುಟ್ಟಲೇಬೇಕು. ಆಗಲೇ ಅರ್ಧರಾತ್ರಿಯಾಗಿದೆ. ಬೆಳದಿಂಗಳಿನಲ್ಲಿ ಭರ್ ಎಂದು ಮೊರೆಯುತ್ತಿದ್ದ ಹೊಳೆ ಉಕ್ಕಡದ ಎರಡು ದಂಡೆಗಳನ್ನೂ ಕಟ್ಟಿ ಹರಿಯುತ್ತಿದೆ. ಇನ್ನು ಕುದುರೆಯ ಮೇಲೆ ಏರಿ ಹೋಗುವುದು ಸಾಧ್ಯವಿಲ್ಲ. ನದಿಯ ದಡದಲ್ಲಿಯೇ ಇದ್ದ ಮುಸಾಫಿರ್ ಬಂಗ್ಲೆಗೆ ಹೋಗಿ ಜವಾನನನ್ನು ಎಬ್ಬಿಸಿ ಕೇಳಿದರೆ–'ಎರಡು ದಿನದಿಂದ ಹರಿಗೋಲೂ ಬಿಡ್ತಿಲ್ಲ, ಅನಾಡಿ ಪ್ವಳೆ ಬಂದೈತೆ' ಎಂದ. ಆದರೆ ಇವರು ಹಿಂದೆ ನಿಲ್ಲುವಂತಿಲ್ಲ. ತಮ್ಮ ಕುದುರೆ ನೋಡಿಕೊಳ್ಳುವಂತೆ ಅವನಿಗೆ ಹೇಳಿ ಒಪ್ಪಿಸಿ ಖರ್ಚಿಗೆಂದು ಒಂದು ರೂಪಾಯಿ ಕೊಟ್ಟರು. ತಮ್ಮ ಹತ್ತಿರ ಇದ್ದ ಬೆಳ್ಳಿ ರೂಪಾಯಿಯ ಇಮ್ಮಣ್ಣಿಚೀಲವನ್ನು ಬಿಗಿಯಾಗಿ ಸೊಂಟಕ್ಕೆ ಕಟ್ಟಿದರು. ಕೋಟು ಶರಟು ನಿಕ್ಕರುಗಳನ್ನು ಬಿಚ್ಚಿ ತಲೆಗೆ ಕಟ್ಟಿಕೊಂಡು ಒಂದು ಚೌಕ ಬಿಗಿದರು. ಜವಾನ ಬೇಡಬೇಡವೆಂದರೂ ಉಕ್ಕಡದಿಂದ ಸ್ವಲ್ಪ ಮೇಲೆ ಹೋಗಿ ನದಿಯಲ್ಲಿ ಈಜು ಬಿದ್ದರು. ಸುಮಾರು ಅರ್ಧಮೈಲಿ ಕೆಳಭಾಗದಲ್ಲಿ ಹೊಳೆಯ ಆಚೆ ದಡವನ್ನು ಮುಟ್ಟಿಯೇ ಮುಟ್ಟಿದರು. ಮೈ ಮತ್ತು ಕಟ್ಟಿದ ಲಂಗೋಟಿಗಳು ಮಾತ್ರ ಒದ್ದೆಯಾಗಿದ್ದವು. ತಲೆಗೆ ಕಟ್ಟಿದ್ದ ಬಟ್ಟೆಗಳಲ್ಲಿ ಸ್ವಲ್ಪ ಭಾಗ ನೆನೆದಿತ್ತು. ಹಾಗೆಯೇ ಅರ್ಧ ಮೈಲಿ ನಡೆಯುವುದರಲ್ಲಿ ಮೈ ಒಣಗಿತು. ನಿಕ್ಕರು ಶರಟು ಕೋಟುಗಳನ್ನು ಹಾಕಿಕೊಂಡು ಬರಿ ಕಾಲಿನಲ್ಲಿ ಸರಸರನೆ ಮುಂದೆ ನಡೆದರು. ಇನ್ನು ಎಂಟೇಮೈಲಿಯ ದೂರ. ನರಸೀಪುರದಲ್ಲಿ ಕೋಳಿ ಕೂಗುವ ಹೊತ್ತಿಗೆ ತಲುಪಿದರು. ಹೊಳೆದಂಡೆಗೆ ಹೋಗಿ ಪ್ರಾತರ್ವಿಧಿಗಳನ್ನು ಮುಗಿಸಿ, ಸ್ನಾನ ಮಾಡಿ ಸಂಧ್ಯಾವಂದನೆ ಮುಗಿಸಿ ಬೆಳಕಾಗುವ ಹೊತ್ತಿಗೆ ಲಾಯರ ಮನೆಗೆ ಬಂದರು.
ಆ ದಿನ ಮುಖ್ಯವಾದ ಎರಡು ಸಾಕ್ಷಿಗಳಿದ್ದವು ಒಂದು ಶ್ಯಾಮಣ್ಣನ ಹೆಂಡತಿಯದೇ. ಕೋರ್ಟಿನ ಎದುರಿಗಿರುವ ಬಸವಣ್ಣನನ್ನು ಆಕೆಯ ಕೈಯಿಂದ ಮುಟ್ಟಿಸಿ ಆಣೆ ಪ್ರಮಾಣ ಮಾಡಿಸಿ, ಸುಳ್ಳು ಹೇಳಿದರೆ ಗಂಡ ಮತ್ತು ಮಕ್ಕಳು ಸಾಯುತ್ತಾರೆಂದು ಲಾಯರು ಹೇಳಿದಾಗ ಅವಳಿಗೆ ಅಕ್ಕಮ್ಮ ಹಾಕಿದ ಶಾಪಗಳೆಲ್ಲವೂ ನೆನಪಾಗಿ ಅರ್ಧ ಅಳುವೇ ಬರುತ್ತಿತ್ತು. ನಿಜ ಹೇಳಬೇಕು ಎಂದು ಲಾಯರು ಹೇಳಿದಾಗ ಅವಳು ಹೆದರಿಕೊಂಡು ಹೇಳಿಬಿಟ್ಟಳು: 'ಕಂಟ್ಯಪ್ಪಜೋಯಿಸರು ನಮ್ಮನೆ ಒಳಕ್ ನುಗ್ಗಿ ಒನಕೆ ತಗಂಡ್ ಹೆಂಚು ಬಡಿದುದ್ ಉಂಟು. ಊರು ಬಿಟ್ಟಿದ್ದಾಗ ನಮ್ಮನೆ ಇವರು ಗುಳ್ಳಗ, ಜುಟ್ಟಗ, ಅವರುನ್ನೆಲ್ಲ ಕಳ್ಸಿ ಕಂಟಪ್‌ನೋರ ಮನೆಗೆ ಕಲ್ಲು ಹೊಡೆಸಿದ್ರು. ಅದ್ಕೇ ಹಾಗೆ ಮಾಡಿದ್ರಂತೆ.'
ಅಲ್ಲಿಯೇ ಇದ್ದ ಶ್ಯಾಮಣ್ಣ ಹೆಂಡತಿಯನ್ನು ನುಂಗುವಂತೆ ನೋಡುತ್ತಿದ್ದ. ಜೋಯಿಸರ ಕಡೆಯ ಲಾಯರು ಅವಳನ್ನು ಕೇಳಿದರು: 'ಅಮ್ಮ, ನಿಜ ಹೇಳಿ. ದೇವರ ಮ್ಯಾಲೆ ಪ್ರಮಾಣ ಮಾಡಿದೀರಾ. ಜೋಯಿಸರು ನಿಮ್ಮನೆಗೆ ನುಗ್ಗಿ ಶ್ಯಾನುಭೋಗ್‌ಕೆ ಲೆಕ್ಕದ ಪುಸ್ತಕಾನ ಹೊತ್‌ಕೊಂಡ್ ಹೊದದ್ದು ಸುಳ್ಳಲ್ಲವೆ?'
'ಲ್ಯಕ್ಕದ ಪುಸ್ತಕ ಏನೂ ಹೊತ್ಕಂಡ್ ಹೋಗ್ಲಿಲ್ಲ. ನಾನು ಅಲ್ಲೇ ಇದ್ದೆ.'
ಊರಿಗೆ ಹೋದಮೇಲೆ ಶ್ಯಾಮಣ್ಣ ಹೆಂಡತಿಯನ್ನು ಮೈಮುರಿಯ ಹೊಡೆದನಂತೆ.
ಶ್ರವಣಬೆಳಗೊಳದ ಪೋಲೀಸು ದಫೇದಾರರು ಇವರ ಪರವಾಗಿ, ಆ ದಿನ ಮಧ್ಯಾಹ್ನ ಮೂರು ಗಂಟೆಯಲ್ಲಿ ತಾವು ಹಾಸನಕ್ಕೆ ಹೋಗಿದ್ದುದಾಗಿಯೂ ಆಗ ಕಂಠೀಜೋಯಿಸರನ್ನು ಅಲ್ಲಿ ಕಂಡಿದ್ದುದಾಗಿಯೂ ಸಾಕ್ಷಿ ಕೊಟ್ಟರು. ಇವರು ತಮ್ಮ ಮನೆಗೆ ನುಗ್ಗಿ ಶ್ಯಾನುಭೋಗಿಕೆ ಲೆಕ್ಕದ ಪುಸ್ತಕ ಹೊತ್ತುಕೊಂಡು ಹೋಗಿ ಹೆಂಚು ಬಡಿದುದು ಅದೇ ದಿನ ಮಧ್ಯಾಹ್ನ ಮೂರು ಗಂಟೆಗೆ ಎಂಬುದು ಶ್ಯಾಮಣ್ಣನ ಕಂಪ್ಲೇಂಟ್ ಆಗಿತ್ತು.
ಇನ್ನು ಎಂಟು ದಿನಕ್ಕೆ ಜಜ್‌ಮೆಂಟ್ ಎಂದು ಜಡ್ಜಿಗಳು ಹೇಳಿದರು. ಜಜ್‌ಮೆಂಟಿನ ದಿನ ಶ್ಯಾಮಣ್ಣನೂ ಬಂದಿದ್ದ. ಕಂಠೀಜೋಯಿಸರೂ ಬಂದಿದ್ದರು. ಒಂದು ಗಂಟೆಗೆ ಸರಿಯಾಗಿ ಜಡ್ಜಿಗಳು ಓದಿ ಹೇಳಿದರು:
'ಶ್ಯಾನುಭೋಗಿಕೆ ಲೆಕ್ಕಗಳನ್ನು ಕೈಲೂ ಮುಟ್ಟಿಲ್ಲವೆಂದು ಫಿರ್ಯಾದಿಯ ಹೆಂಡತಿಯೇ ಹೇಳುತ್ತಾಳೆ. ಆಪಾದಿತನ ಮನೆಯ ಮೇಲೆ ಫಿರ್ಯಾದಿಯು ರಾತ್ರಿ ಹೊತ್ತು ಕಲ್ಲು ಹೊಡೆಸಿದ್ದನಂತೆ. ಅದಕ್ಕೆ ಪ್ರತೀಕಾರವಾಗಿ ಆಪಾದಿತನು ಇವರ ಮನೆಯ ಹೆಂಚನ್ನು ಒಡೆದಿರಬಹುದು. ಆದರೆ ಮುಖ್ಯವಾದ ಆಪಾದನೆ ಇರುವುದು ಸರ್ಕಾರೀ ಲೆಕ್ಕದ ಪುಸ್ತಕವನ್ನು ಹೊತ್ತುಕೊಂಡು ಹೋದ ಎಂದು. ಘಟನೆ ನಡೆಯಿತೆಂದು ಆಪಾದಿಸಿದ ಸಮಯದಲ್ಲಿ ಆಪಾದಿತನನ್ನು ಹಾಸನದಲ್ಲಿ ನೋಡಿದುದಾಗಿ ಶ್ರವಣಬೆಳಗೊಳದ ದಫೇದಾರರು ಸಾಕ್ಷಿ ಕೊಟ್ಟಿದ್ದಾರೆ. ಈ ಎಲ್ಲ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡು ನೋಡಿದರೆ ಆಪಾದನೆಯಲ್ಲಿ ಹುರುಳಿಲ್ಲವೆಂದು ತಿಳಿಯುತ್ತದೆ. ಇವರಿಬ್ಬರಿಗೂ ಪರಸ್ಪರ ದ್ವೇಷವಿದ್ದು ಸಣ್ಣಪುಟ್ಟ ಜಗಳವೇನೋ ನಡೆದಿರಬಹುದು. ಈ ಕೇಸನ್ನು ಖುಲಾಸೆ ಮಾಡಲಾಗಿದೆ.'
– 7 –
ತಮ್ಮ ಲಾಯರಿಗೆ ಕೊಡಲು ಕಂಠೀಜೋಯಿಸರು ಐವತ್ತು ರೂಪಾಯಿ ತಂದಿದ್ದರು. ಅದನ್ನು ಮನೆಯಲ್ಲಿ

ಕೊಡಬೇಕು. ಲಾಯರಿಗೆ ಕೋರ್ಟಿನ ಆಫೀಸಿನಲ್ಲಿ ಸ್ವಲ್ಪ ಕೆಲಸವಿತ್ತು. ಅಷ್ಟರಲ್ಲಿ ಹೋಟೆಲಿಗೆ ಹೋಗಿ ಊಟ ಮಾಡಿಕೊಂಡು ಬರುವುದಾಗಿ ಹೇಳಿ ಜೋಯಿಸರು ಕೋರ್ಟು ಕಟ್ಟಡದ ಹೊರಗೆ ಬಂದು, ಮರಕ್ಕೆ ಕಟ್ಟಿದ್ದ ತಮ್ಮ ಕುದುರೆಯನ್ನು ಏರಿ ಒಂದು ಫರ್ಲಾಂಗ್ ಮುಂದೆ ಹೋದರು. ಅಷ್ಟರಲ್ಲಿ ಶ್ಯಾಮಣ್ಣ ಒಬ್ಬನೇ ಹೋಗುತ್ತಿದ್ದುದು ಕಾಣಿಸಿತು. ಅವರಿಗೆ ಇದ್ದಕ್ಕಿದ್ದಂತೆಯೇ ಕೋಪ ಭುಗ್ ಎಂದಿತು.

'ಎಲಾ, ನಿನ್ನ ಹೆತ್ತೋಳ್ನಾ.....ಏನ್ಲಾ ಕಿತ್ಕಂಡೆ ನನ್ ತಾವ, ಕೋರ್ಟಿಗ್ ಹೋಗಿ?'–ಎಂದು ಕುದುರೆಯಿಂದ ಇಳಿದು ಅವನ ಮುಂದೆ ನಿಂತರು. ಶ್ಯಾಮಣ್ಣ ಗಾಬರಿಯಿಂದ ಸುಮ್ಮನೆ ನಿಂತುಕೊಂಡ. ಜೋಯಿಸರು ತಮ್ಮ ಬಲಗಾಲಿನ ಬೂಟನ್ನು ಕೈಗೆ ತೆಗೆದುಕೊಂಡು ಅವನ ತಲೆಯ ಮೇಲೆ ಮೆಟ್ಟಿದರು. ಶ್ಯಾಮಣ್ಣನೂ ಕೈ ಮಾಡಿದ. ಇವರು ತಮ್ಮ ಬಲವನ್ನೆಲ್ಲ ಬಿಟ್ಟು ಕುತ್ತಿಗೆ ಬಗ್ಗಿಸಿಕೊಂಡು ಬೆನ್ನಿನ ಮೇಲೆ ಇಡಿದ ರಭಸಕ್ಕೆ ಅವನು ನೆಲಕ್ಕೆ ಉರುಳಿದುದೇ ಅಲ್ಲ, ಬಾಯಿಯಿಂದ ರಕ್ತ ಬಂದು ಪ್ರಜ್ಞೆ ತಪ್ಪಿ ಬಿದ್ದುಬಿಟ್ಟ. ಅದುವರೆಗೂ ಕಂಠೀಜೋಯಿಸರಿಗೆ ಸಾಧಾರಣ ಬುದ್ಧಿಯೇ ಕೈಲಿರಲಿಲ್ಲ. ಈಗ ಗಾಬರಿಯಾಯಿತು. ಅಷ್ಟರಲ್ಲಿ ಯಾರೋ ಹಿಂಬಾಗದಲ್ಲಿ–'ಮರ್ಡರ್ ಇರಬಹುದು. ತಕ್ಷಣ ಹಿಡ್‌ಕೊ'–ಎಂಬತೆ ಕೂಗಿದ ಶಬ್ದವಾಯಿತು. ಹಿಂತಿರುಗಿ ನೋಡುತ್ತಾರೆ: ಕೂಗಿದವರು ಇವರ ಕೇಸಿನ ವಿಚಾರಣೆ ಮಾಡಿದ ಜಡ್ಜಿಗಳು. ಹೇಳುತ್ತಿದ್ದುದು: ಅವರ ಜೊತೆಯಲ್ಲಿ ರಕ್ಷಕನಾಗಿ ಬರುತ್ತಿದ್ದ ಪೋಲೀಸ್ ಪ್ಯಾದೆಗೆ. ಜೋಯಿಸರ ಮೈ ಇದ್ದಕ್ಕಿದ್ದಂತೆಯೇ ಬೆವರಿತು. ಪೋಲೀಸಿನವನು ನುಗ್ಗಿ ಬಂದ. ಇವರು ಮಿಂಚಿನಂತೆ ತಮ್ಮ ಕುದುರೆಯ ಮೇಲೆ ನೆಗೆದು ಅದರ ಬೆನ್ನು ಚಬುಕಿಸಿದರು. ಇನ್ನು ಒಂದು ಮಾರು ಹತ್ತಿರ ಇದ್ದರೆ ಪೋಲೀಸಿನವನು ಇವರನ್ನು ಹಿಡಿಯುತ್ತಿದ್ದ. ಅಷ್ಟರಲ್ಲಿ ಕುದುರೆ ಛಂಗನೆ ನೆಗೆದು ಬಾಣದಂತೆ ದೌಡಾಯಿಸಿತು. ಜೋಯಿಸರು ತಿರುಗಿ ನೋಡಲಿಲ್ಲ.

ಮೋಟಾರು ಸೇತುವೆಯ ಮೇಲೆ ಜೋರಿನಿಂದ ಕುದುರೆಯನ್ನು ಓಡಿಸಿ ಅಲ್ಲಿಂದ ಬಲಭಾಗದ ಹಳ್ಳಗಳ ಕಡೆಗೆ ತಿರುಗಿಸಿದರು. ಸಿಕ್ಕಿದ ದಾರಿಯಲ್ಲಿ ನುಗ್ಗಿಸಿ ಸಂಜೆಯ ಹೊತ್ತಿಗೆ ಬರಗೂರಿನ ಹತ್ತಿರಕ್ಕೆ ಬಂದರು. ಪೋಲೀಸಿನವರು ತನ್ನ ಹಿಂದೆ ಖಂಡಿತ ಹೊರಟಿದ್ದಾರೆ. ಕೊಲೆ ಮಾಡಿದವನನ್ನು ಎಲ್ಲಿದ್ದರೂ ಹಿಡಿಯಬೇಕೆಂದು ಸಂಸ್ಥಾನದ ಅಪ್ಪೈ ಹುಕುಂ ಕೊಟ್ಟಿರುತ್ತಾರೆ. ಫಾಸಿ ಶಿಕ್ಷೆಯಾಗುತ್ತೆ. ಜಡ್ಜಿಗಳೇ ಕಣ್ಣಾರೆ ಕಂಡಿರುವುದರಿಂದ ಯಾವ ಲಾಯರೂ ಏನೂ ಮಾಡೂಹಾಗಿಲ್ಲ. ಈ ಸಂಸ್ಥಾನಾನೇ ಬಿಟ್ಟು ಬಿಡಬೇಕು....ಎಂಬ ನಿಶ್ಚಯ ಮನಸ್ಸಿನಲ್ಲಿ ಬಂತು. ಈ ಕುದುರೆಯ ಮೇಲೆ ಹೋಗುವುದು ಅಪಾಯ ಎಂಬ ಅರಿವು ಬಂದರೂ ಅದನ್ನು ಎಲ್ಲಿ ಬಿಡುವುದು ಎಂಬ ಯೋಚನೆಯೂ ಹುಟ್ಟಿತು. ಬಲಭಾಗಕ್ಕೆ ನಾಲ್ಕುಮೈಲಿ ತಿರುಗಿ, ದಣಿದು ಹೋಗಿದ್ದ ಕುದುರೆಯನ್ನು ನಿಲ್ಲಿಸಿ ಊರ ಕಡೆಗೆ ಹೊಡೆದರು. ಅಲ್ಲಿಂದ ನಾಗಲಾಪುರ ಐದು ಮೈಲಿಯ ದೂರ. ಕುದುರೆಗೆ ಪರಿಚಿತವಾದ ದಾರಿ. ಹೇಗೆ ಹೋದರೂ ಮನೆಗೆ ಹೋಗುತ್ತೆ–ಅಥವಾ ಮತ್ತೆ ಯಾರ ಕೈಗೆ ಸಿಕ್ಕಿದರೂ ಬೇಕಾದರೆ ಕಟ್ಟಿ ಹಾಕಿ ಸವಾರಿ ಮಾಡಿಕೊಳ್ಳಲಿ. ಅಲ್ಲಿಂದ ಎಡಗಡೆಗೆ ಬಂದು ಅಲ್ಲಿ ಸಿಕ್ಕಿದ ಒಂದು ಹಳ್ಳಿಗೆ ಹೋದರು. ಅದು ಬೇವಿನ ಹಳ್ಳಿ ಎಂಬುದು ಅವರಿಗೆ ಗೊತ್ತಿತ್ತು. ಅಲ್ಲಿ ಒಂದು ಬಟ್ಟೆ ಅಂಗಡಿಯೂ ಇದೆ. ಅಂಗಡಿಗೆ ಹೋಗಿ ಒಂದು ದಪ್ಪನಾದ ಪಂಚೆಯನ್ನು ಕೊಂಡರು. ಅದೇ ಅಂಗಡಿಗೆ ಲಗತ್ತಿಸಿ ಇದ್ದ ಚಿಲ್ಲರೆ ಅಂಗಡಿಯಲ್ಲಿ ಒಂದು ಆಣೆಗೆ ಅರಿಶಿನದ ಪುಡಿ ಒಂದು ಬೆಂಕೀಪೊಟ್ಟಣ ತೆಗೆದುಕೊಂಡು ಗ್ರಾಮದಿಂದ ಹೊರಗೆ ಹೋದರು.

ಒಂದು ತೋಟದ ಬಾವಿಯಲ್ಲಿ ಹೊಸ ಪಂಚೆಯನ್ನು ನೆನಸಿ ಗಂಜಿ ಹೋಗುವಂತೆ ಚೆನ್ನಾಗಿ ಕಸಕಿ, ಅದಕ್ಕೆ ಅರಿಶಿನ ಹಾಕಿ, ತಮ್ಮ ಹತ್ತಿರ ಇದ್ದ ಎಲೆ ಅಡಿಕೆ ಚೀಲದ ಸುಣ್ಣದ ಡಬ್ಬಿಯಿಂದ ಸುಣ್ಣ ತೆಗೆದು ಬೆರೆಸಿ, ಪಂಚೆಯನ್ನು ಕಾದಿಯ ಶಾಟಿಯಾಗಿ ಪರಿವರ್ತಿಸಿದರು. ಅದನ್ನು ತಲೆಯ ಮೇಲೆ ಹಾಕಿಕೊಂಡು ಉತ್ತರದ ಕಡೆಗೆ ನಡೆಯುವಾಗ ನಡುರಾತ್ರಿಯ ವೇಳೆಗೆ ಒಣಗಿತು.

ಹತ್ತಿರ ಸಿಕ್ಕಿದ ಒಂದು ಮರಳ ಹಳ್ಳದಲ್ಲಿ ಒಂದಿಷ್ಟು ಮರಳನ್ನು ಬಗೆದರು. ಕಾವಿಯನ್ನು ಧರಿಸಿ, ತಾವು ತೊಟ್ಟಿದ್ದ ನಿಕ್ಕರು, ಕೋಟು ಶರಟುಗಳನ್ನು ಬಿಚ್ಚಿ, ತರಗು ಕಡ್ಡಿಗಳನ್ನು ಸೇರಿಸಿ ಅದಕ್ಕೆ ಬೆಂಕಿ ಹಾಕಿದರು. ಚನ್ನಾಗಿ ಉರಿದು ಬೂದಿಯಾದ ಮೇಲೆ ಅದರ ಭರ್ತಿ ಮರಳು ತುಂಬಿ ಮೊದಲಿದ್ದಂತೆಯೇ ಮಾಡಿದರು. ಹತ್ತಿರ ಇದ್ದ ದುಡ್ಡನ್ನು ಗಂಟು ಕಟ್ಟಿ ಒಳಗಿನ ಲಂಗೋಟಿಯಲ್ಲಿ ಸೇರಿಸಿದರು. ಇನ್ನು ಎಂಟು ಮೈಲಿ ನಡೆದರೆ ಅರಸೀಕೆರೆ ಬರುತ್ತೆ. ತಡ ಮಾಡಿದರೆ ಅಪಾಯ. ಮತ್ತೆ ಬೇಗ ಬೇಗ ಹೆಜ್ಜೆ ಹಾಕಿ ಅರಸೀಕೆರೆ ಮುಟ್ಟಿ ಸ್ಟೇಷನ್ನಿನಲ್ಲಿ ವಿಚಾರಿಸಿದರು. ಹುಬ್ಬಳ್ಳಿಯ ಕಡೆಗೆ ಹೋಗುವ ಒಂದು ರೈಲು ಬೆಳಕು ಹರಿದ ಮೇಲೆ ಹೊರಡುತ್ತದೆಂದು ತಿಳಿಯಿತು. ಧೈರ್ಯವಾಗಿ ಸ್ಟೇಷನ್ನಿನಲ್ಲಿಯೇ ಕಾದಿದ್ದು ಬೆಳಗ್ಗೆ ಆ ಗಾಡಿಯಲ್ಲಿ ಹೊರಟೂಹೋದರು. ಸಂಸ್ಥಾನದ ಕೊನೆಯ ಗಡಿ ಹರಿಹರ ದಾಟಿ ಬಿಟ್ಟರೆ ಕುಂಪಣೀ ಸರ್ಕಾರ. ಈ ನನ್ ಮಕ್ಳು ಆಮ್ಯಾಲೆ ನನ್ ತಾವ ಏನೂ ಕಿತ್ಕಳೂ ಹಾಗಿಲ್ಲ – ಎಂಬ ಧೈರ್ಯ ಇದ್ದೇ ಇತ್ತು.

– 8 –

ಎಂಟು ತಿಂಗಳು ಒಂದೇಸಮನೆ ಔಷಧಿ ಉಪಚಾರಗಳು ನಡೆದರೂ ಕಲ್ಲೇಶನ ಎಡಗೈ ಸ್ವಾಧೀನಕ್ಕೆ ಬರಲಿ ಲ್ಲ. ಕೈನಡುಕ ಸ್ಪಷ್ಟವಾಗಿ ಕಾಣುತ್ತಿರಲಿಲ್ಲವಾದರೂ ಎಡಗೈಯಲ್ಲಿ ಏನಾದರೂ ಬಿಗಿಯಾಗಿ ಹಿಡಿದು

ನಿಭಾಯಿಸಲು ಆಗುತ್ತಿರಲಿಲ್ಲ. ಬಲಗೈ ಒಂದನ್ನೇ ಉಪಯೋಗಿಸಿ ಸೈಕಲ್ ಹಿಡಿಯಲೂ ಸಾಧ್ಯವಾಗುತ್ತಿರಲಿಲ್ಲ. ಅಂತೂ ಮತ್ತೆ ಪೋಲೀಸ್ ಕಾನಿಸ್ಟೇಬಲಾಗಿ ಮುಂದುವರೆಯುವಂತಿರಲಿಲ್ಲ. ಸಮರ್ಪಕ ದೇಹಾದಾರ್ಢ್ಯ ಇಲ್ಲವೆಂದು ಅವನನ್ನು ಕೆಲಸದಿಂದ ತೆಗೆಯಲಾಯಿತು. ಪೋಲೀಸ್ ಖಾತೆಯಲ್ಲಿ ಕನಿಷ್ಠ ಮಟ್ಟದ ಕೆಲಸವಾದ ಕಾನಿಸ್ಟೇಬಲ್ ಆಗಿದ್ದರೂ ಅವನು ಅದುವರೆಗೆ ಸರ್ಕಾರೀ ನೌಕರನ ದರ್ಪ ದೌಲತ್ತುಗಳನ್ನು ಮಾಡುತ್ತಿದ್ದ. ಈಗ ಅದು ಹೋಯಿತು. ಸರಿಯಾಗಿ ನೋಡಿಕೊಂಡರೆ ಜೀವನಕ್ಕೆ ಯೋಚನೆ ಇಲ್ಲದಷ್ಟು ಗದ್ದೆ ತೋಟ ಹೊಲ ಮನೆಗಳು ಊರಿನಲ್ಲಿವೆ. ಅವನು ಅದಕ್ಕೆ ಯೋಚಿಸಲಿಲ್ಲ.

ಈ ನಡುವೆ ನರಸೀಪುರದ ಕೇಸು ತನ್ನ ತಂದೆಯ ಪರ ಆಗಿ, ಆಮೇಲೆ ಶ್ಯಾಮಣ್ಣನನ್ನು ಹಿಡಿದು ಜ್ಞಾನ ತಪ್ಪಿ ಬಾಯಲ್ಲಿ ರಕ್ತ ಬರುವಂತೆ ಹೊಡೆದು ತಾವು ತಲೆ ತಪ್ಪಿಸಿಕೊಂಡು ಹೋಗಿರುವುದು ಅವನಿಗೆ ತಿಳಿಯಿತು. ವಾಸ್ತವಾಗಿ ಶ್ಯಾಮಣ್ಣ ಸತ್ತಿರಲಿಲ್ಲ. ಬೂಟೀನ ಏಟು ಬಾಯಮೇಲೆ ಬಿದ್ದ ರಭಸಕ್ಕೆ ಮುಂದಿನ ಎರಡು ಹಲ್ಲು ಮುರಿದು ರಕ್ತ ಸುರಿದಿತ್ತು; ಹಾಗೆಯೇ ಪ್ರಜ್ಞೆ ತಪ್ಪಿಹೋಗಿತ್ತು. ಜಡ್ಜಿಗಳು ಅಲ್ಲಿಯೇ ನಿಂತು ಡಾಕ್ಟರನ್ನು ಕರೆಸಿದರು. ಡಾಕ್ಟರು ಬರುವ ಮುನ್ನವೇ ಅವನಿಗೆ ಜ್ಞಾನ ಬಂದಿತ್ತು. ಎರಡನೇ ಬಾರಿ ಕಂಠೀಜೋಯಿಸರ ಮೇಲೆ ಕೇಸು ಹಾಕಲು ಅವನೇ ಒಪ್ಪಲಿಲ್ಲ. ಕೇಸು ಹಾಕಿ ಅವರಿಗೆ ಜುಲ್ಮಾನೆ ಹಾಕಿಸಬಹುದು; ಅಥವಾ ಜೈಲು ಮಾಡಿಸಬಹುದು. ಆದರೆ ಜೈಲಿನಿಂದ ಬಂದ ಮೇಲೆ ಅವರು ಊರಿನಲ್ಲಿ ರಾತ್ರಿಯ ಹೊತ್ತು ತನ್ನ ಮನೆಗೆ ಹೊರಗಿನಿಂದ ಬೀಗ ಹಾಕಿ ಮೇಲಿನಿಂದ ಸೀಮೆ ಎಣ್ಣೆ ಸುರಿದು ಹೊತ್ತಿಸಿದರೆ ಕಾಯುವವರಾರು? – ಎಂಬ ಯೋಚನೆ ಬಂದು ಸುಮ್ಮನಾಗಿಬಿಟ್ಟ.

ಕಂಠೀಜೋಯಿಸರ ಕುದುರೆ ಮನೆಯನ್ನು ಮುಟ್ಟಿತು. ಅಕ್ಕಮ್ಮ ಹೊನನನ್ನು ಕರೆಸಿ ಕಟ್ಟಿ ಹಾಕಿಸಿದಳು. ಮಗ ಎಲ್ಲಿಗೆ ಹೋದ, ಯಾಕೆ ಹೋದ ಎಂಬುದು ಅವಳಿಗಾಗಲಿ ಕಲ್ಲೇಶನಿಗಾಗಲಿ ತಿಳಿಯಲಿಲ್ಲ. ಈ ನಡುವೆ ಕಲ್ಲೇಶ ಊರಿಗೆ ಬಂದು ತನ್ನ ಎಡತೋಳಿಗೆ ಉಡದ ತುಪ್ಪದ ಔಷಧಿ ಪ್ರಾರಂಭಿಸಿದ. ಕಂಠೀಜೋಯಿಸರ ವಿಷಯವಾಗಿ ಅವನು ಸಹ ಏನೂ ಹೇಳಲು ಅಸಮರ್ಥನಾದ.

ಅಷ್ಟರಲ್ಲಿ ಕಲ್ಲೇಶನ ಹೆಂಡತಿ ಕಮಲು ಮೈನೆರೆದಳು. ಇವರು ಆರು ತಿಂಗಳು ಕಾದರೂ ಕಂಠೀಜೋಯಿಸರ ಸುಳಿವು ಹತ್ತಲಿಲ್ಲ. 'ಅವನನ್ನು ಕಾಯೂದು ಬ್ಯಾಡ. ಪ್ರಸ್ತ ಮಾಡ್ಕಂಡು ಹುಡುಗೀನ ಕರ್ಕಂಡ್ಬರ್ಬೇಕು. ಇನ್ ಸುಮ್ನಿರೋದು ಚನ್ನಲ್ಲ' – ಎಂದು ಅಕ್ಕಮ್ಮ ಹೇಳಿದಳು. ದಿನ ನಿಶ್ಚಯವಾಯಿತು. ಕಲ್ಲೇಶ ರಾಮಸಂದ್ರಕ್ಕೆ ಹೋಗಿ ತಂಗಿ, ತಂಗಿಯ ಮಗು, ಮತ್ತು ಭಾವನನ್ನು ಕರೆದುಕೊಂಡು ಬಂದ. ಅಕ್ಕಮ್ಮನೂ ಜೊತೆಗೆ ಸೇರಿ ಗಾಡಿ ಹೊಡೆಸಿಕೊಂಡು ಹಾಸನಕ್ಕೆ ಹೋದರು.

ಬೇರೆ ಮನೆಗೆ ಬಿಟ್ಟಾಗ ಕಮಲು ಗಂಡನಿಗೆ ಅವಕಾಶವನ್ನೇ ಕೊಡಲಿಲ್ಲ. ಮೊಂಡು ಹಿಡಿದು ಮೈ ಮುದುಡಿಕೊಂಡು ರಾತ್ರಿಯನ್ನು ಕಳೆದಳು. ಕಲ್ಲೇಶ ಹೆಣ್ಣನ್ನೇ ಕಾಣದ ಗಂಡಲ್ಲ; ಯಾವ ತಿಳಿವಳಿಕೆಯೂ ಇಲ್ಲದವನಲ್ಲ. ಏಳು ತಿಂಗಳ ಕಾಲ ಅವರ ಮನೆಯಲ್ಲೇ ಇದ್ದುದರಿಂದ ಅವಳೊಡನೆ ಪರಿಚಯವೂ ಇತ್ತು. ಆದರೆ ಈಗ ಪರಿಪರಿಯಾಗಿ ಮಾತನಾಡಿಸಿ ಒಲಿಸಿದರೂ ಅವಳು ಮಣಿಯಲಿಲ್ಲ; ಮಾತೂ ಆಡಲಿಲ್ಲ. ಮುಂದಿನ ರಾತ್ರಿ ಮರಿಪ್ರಸ್ತಕ್ಕೆ ಬಿಟ್ಟಾಗ ಬಾಯಿಬಿಟ್ಟಳು: 'ಆ ಹಾಳು ಹಳ್ಳಿಗೆ ಬಂದಿರೂಕ್ಕೆ ನನ್ನ ಕೈಲಿ ಆಗುಲ್ಲ.'

ಕಲ್ಲೇಶನಿಗೆ ಅವಳ ಒಳಗು ತಕ್ಷಣ ಹೊಳೆಯಿತು. ಆದರೆ ಅವನು ಏನೂ ಮಾಡುವಂತಿರಲಿಲ್ಲ. ರಮಿಸಿ ಪಿಸುಗುಟ್ಟಿದ: 'ಹಳ್ಳಿಯಾದ್ರೆ ಏನಂತೆ? ಎರಡು ಹಸು ಕರೆಯುತ್ತೆ. ಈ ಊರಿನ ಹಾಗೆ ಹಾಲು ತುಪ್ಪಕ್ಕೆ ಕಾರ್ಪಣ್ಯವಿಲ್ಲ. ಕಾಳು ಕಡ್ಡಿ ಬತ್ತ ಭರಣ ಯಲ್ಲಾ ಬೇಕಾದಷ್ಟು ಬೆಳೆಯುತ್ತೆ. ಹಳ್ಳೀ ದಾನದಲ್ಲಿ ಪ್ರತಿಯೊಂದೂ ಬರುತ್ತೆ.'

'ನಂಗ್ ಹಳ್ಳೇಲಿರುಕ್ ಆಗುಲ್ಲ.'

'ನನೂ ಸರ್ಕಾರೀ ಕೆಲಸದಲ್ಲೇ ಇದ್ನಲ್ಲ. ಅದೃಷ್ಟ ಹೀಗಾಯ್ತು ಏನ್ಮಾಡುಕ್ಯಾಗುತ್ತೆ? ಊರಲ್ಲಿ ಹೊಲ ಮನೆ ಇದ್ಯಲ. ಸುಖವಾಗಿರಾಣ.'

'ಇನ್ಯಾವ್ದಾದ್ರೂ ಸರ್ಕಾರಿ ಕೆಲ್ಸ ಮಾಡ್ಕಳಿ' – ಗೋಡೆಯ ಕಡೆಗೆ ತಿರುಗಿಕೊಂಡೇ ಅವಳು ಪಿಟಪಿಟನೆ ಮಾತನಾಡುತ್ತಿದ್ದಳು.

'ನೋಡಾಣ. ಮೆಡಿಕಲಿ ಆನ್‌ಫಿಟ್ ಅಂತ ಒಂದು ಇಲಾಖೆಯೋರು ಮಾಡಿರುವಾಗ ಇನ್ ಬೇರೆ ಇಲಾಖೆಯೋರು ಸೇರಿಸ್ಕತ್ತಾರೋ ಇಲ್ಲೋ?'

'ನಂಗದೆಲ್ಲ ಗೊತ್ತಿಲ್ಲ' – ಎಂದಳೇ ವಿನಾ ಅವಳು ಅವಕಾಶ ಕೊಡಲಿಲ್ಲ. ಕೆನ್ನೆ ಊದುವ ಹಾಗೆ ಬಾರಿಸಿಬಿಡಬೇಕೆಂದು ಅವನ ಬಲಗೈ ಚಲಿಸಿತು. ಆದರೆ ಹೊರಗೆ ಮಾವನ ಕಡೆಯ ನೆಂಟರಿಷ್ಟರೆಲ್ಲ ಇದಾರೆ. ತನ್ನ ಅಜ್ಜಿ, ತಂಗಿ, ಭಾವ ಇದಾರೆ. ಈ ಸಮಯದಲ್ಲಿ ಗದ್ದಲವಾಗುವುದು ತರವಲ್ಲವೆಂದು ಸುಮ್ಮನಾದ.

ಮನಸ್ಸಿನಲ್ಲಿ ಇನ್ನೂ ಒಂದು ಅಂಶ ತೂಗುತ್ತಿತ್ತು. ತಾನು ಕಾಹಿಲೆ ಮಲಗಿದ್ದಾಗ ಇಷ್ಟು ದಿವಸ ಇವರು

ಮನೆಯಲ್ಲಿಟ್ಟುಕೊಂಡು ಸೇವೆ ಮಾಡಿದ್ದರು. ಅದರಲ್ಲಿಯೂ ಮಾವನವರು ಅಳಿಯನಿಗಾಗಿ, ಅವನ ಎಡಗೈ ಸ್ವಾಧೀನಕ್ಕೆ ಬರುವಂತೆ ಮಾಡಲು, ಬಹಳ ಮುತುವರ್ಜಿ ವಹಿಸಿದ್ದರು. ಅವರ ಮನಸ್ಸನ್ನು ನೋಯಿಸುವುದು ಅವನಿಗೆ ಸ್ವಲ್ಪ ಕಷ್ಟವಾಯಿತು. ಸುಮ್ಮನಾದ.

ಮರುದಿನ ಎಲ್ಲರೂ ಪಯಣದ ಸಿದ್ಧತೆಯಲ್ಲಿರುವಾಗ ಕಮಲು ತಾಯಿಯ ಕೈಲಿ ಹೇಳಿದಳು: 'ನಾನು ಅಲಿ ಲ್ಗ್ ಹೋಗುಲ್ಲ.'

'ಯಾರಾರು ನಕ್ಕಾರು ಸುಮ್ನಿರು. ಹಾಗೆಲ್ಲ ಅನ್‌ಬಾರ್ದು.'

ಅದಕ್ಕಿಂತ ಹೆಚ್ಚಾಗಿ ಅವರು ಏನೂ ಹೇಳಲಿಲ್ಲ. ತೌರನ್ನು ಬಿಟ್ಟು ಹೋಗುವಾಗ ಹೆಣ್ಣು ಮಕ್ಕಳು ಹೀಗೆಲ್ಲ ಅನ್ನುವುದು ಅಸಹಜವಲ್ಲ ಎಂದು ಸುಮ್ಮನಾದರು. ಅವಳ ತಂದೆ ತಾಯಿ, ತಮ್ಮಂದಿರು, ತಂಗಿಯರು, ಎಲ್ಲರೂ ಗಾಡಿಯಲ್ಲಿ ನಾಗಲಾಪುರಕ್ಕೆ ಬಂದರು. ನಾಲ್ಕು ದಿನದ ನಂತರ ಔತಣ ಉಡುಗೊರೆ ಮಾಡಿಸಿಕೊಂಡು ಹಿಂದಿರುಗಿದರು. ಅದೇ ದಿನ ನಂಜುವೂ ಗಂಡ ಮಗುವಿನೊಡನೆ ತನ್ನ ಊರಿಗೆ ಹೋದಳು.

ಆ ದಿನ ರಾತ್ರಿ ಕಮಲು ಮತ್ತೆ ಅದೇ ಮಾತನಾಡಿದಳು. ಕಲ್ಲೇಶ ಹೇಳಿದ: 'ನೀನೇ ನೋಡಿದಿಯಲ. ಈ ಮನೇಲಿ ಯಾವುದಕ್ಕೆ ಕಮ್ಮಿ ಇದೆ? ಇಷ್ಟು ಹಾಲು ಮೊಸರು, ತುಪ್ಪ, ಕಾಯಿ ಕಡ್ಡಿ, ಹಾಸನದಲ್ಲೆಲ್ಲಿದೆ?'

'ನಂಗದೆಲ್ಲ ಗೊತ್ತಿಲ್ಲ' – ಎಂದು ಅವಳು ಗೋಡೆಯ ಕಡೆಗೆ ತಿರುಗಿ ಮಂಡಿ ಮುದುರಿಕೊಂಡಳು. ಅತ್ತೆ ಮಾವ ಇಲ್ಲಿರುವ ತನಕ ಕಲ್ಲೇಶ ತಾಳ್ಮೆ ಉಳಿಸಿಕೊಂಡಿದ್ದ. ಈಗ ತಡೆಯಲಿಲ್ಲ. ಎತ್ತಿ ಕಪಾಳಕ್ಕೆ ಹೊಡೆದ. ಅವಳು ಬಿಕ್ಕಿ ಅತ್ತಳು. ಪೋಲೀಸ್ ಇಲಾಖೆಯಲ್ಲಿದ್ದ ಅವನು ಎತ್ತಿ ಎತ್ತಿ ಬೆನ್ನಿಗೆ ಬಾರಿಸಿದ. ಹೊರಗೆ ಮಲಗಿದ್ದ ಅಕ್ಕಮ್ಮ – 'ಇದೇನೋ ಇದು?' ಎಂದು ಕೇಳಿದಳು.

'ಪುಲ್ಲಲ್ಲಿ ಮುಂಡೆ ತಂದು, ನಾನೇನು ಯಾವತ್ತೂ ಕಂಡೇ ಇಲ್ಲ ಅನ್ನೂ ಹಂಗ್ ಆಡ್ತಾಳೆ' – ಎಂದು ಅವನು ತನ್ನ ಹಾಸಿಗೆಯನ್ನು ತಂದು ಕೋಣೆಯಿಂದ ಹೊರಗೆ ಹಾಕಿಕೊಂಡು ಮಲಗಿದ. ಅಕ್ಕಮ್ಮನಿಗೆ ವಿಷಯ ಹೇಳಿದಾಗ ಅವಳೂ ಕೋಣೆಯ ಒಳಗೆ ಹೋಗಿ ಸಮಾಧಾನ ಹೇಳಲು ಪ್ರಾರಂಭಿಸಿದಳು: 'ಅದ್ಯಾಕ್ ಹಾಗಂತಿಯೇ? ಇಲ್ಲಿ ನಿಂಗೇನ್ ಕಮ್ಮಿಯಾಗಿರೂದು? ತಿನ್ನೂಕಿಲ್ವೆ, ಉಣ್ಣೂಕಿಲ್ವೆ? ಹಾಗೆಲ್ಲ ಆಡ್‌ಬಾರ್ದು. ನಾವೇನ್ ನಿಂಗೆ ಕಷ್ಟ ಕೊಡುಲ್ಲ. ಸುಖವಾಗಿರು.'

'ನಂಗ್ ಈ ಸುಡುಗಾಡು ಹಳ್ಳಿ ಆಗುಲ್ಲ' – ಬಿಕ್ಕಳಿಸಿ ಅವಳು ಅಳುತ್ತ ಅವಳು ಹೇಳಿದಳು.

ಇದಕ್ಕೆ ಸಮಾಧಾನ ಹೇಳಲು ಅಕ್ಕಮ್ಮನಿಗೆ ತಿಳಿಯಲಿಲ್ಲ. ಈ ಪಟ್ಟಣದ ಹೆಣ್ಣನ್ನು ತರುವಾಗಲೇ ಅವಳಿಗೆ ಅನುಮಾವಿತ್ತು. ಆದರೆ ಯಾರನ್ನೂ ಹೇಳದೆ ಕೇಳದೆ ಮಗ ಕಂಟಿ ಗೊತ್ತು ಮಾಡಿದ್ದ. ಈಗ ಆಗುವುದು ಆಯಿತು. ಹೇಗಾದರೂ ಹೊಂದಿಕೊಳ್ಳಬೇಕು ಎಂಬುದು ಮುದುಕಿಯ ಮನಸ್ಸು.

ಹೊರಗೆ ಇದ್ದ ಕಲ್ಲೇಶ ಹೇಳಿದ: 'ಇದು ಶಿಂಡಾಡುತ್ತೆ ಅಂತ ನೀನು ತುರಿಸುಕ್ ಹೋಗ್‌ಬ್ಯಾಡ. ಸುಮ್ಮಗೆ ಬಾ ಇಲ್ಲಿ.'

ತನಗೆ ತಿಳಿದ ಮಾತನ್ನು ಹೇಳಿ ಅಕ್ಕಮ್ಮ ಬಂದು ಮಲಗಿದಳು. ಕಲ್ಲೇಶ ಸ್ವಲ್ಪ ಹೊತ್ತಿನ ಮೇಲೆ ನಿದ್ರೆ ಮಾಡಿದ. ಬೆಳಗ್ಗೆ ಎದ್ದು ಸ್ನಾನ ಮಾಡಿ ತಿಂಡಿ ತಿಂದು, ಅಪ್ಪನ ಬಿಳಿ ಕುದುರೆಯನ್ನೇರಿ ಶ್ರವಣಬೆಳಗೊಳಕ್ಕೆ ಹೋದ. ಅವನ ಹಳೆಯ ಪರಿಚಿತಳು ಅಲ್ಲೇ ಹತ್ತಿರದ ಹಳ್ಳಿಯಲ್ಲಿದಳು.

## ಅಧ್ಯಾಯ 5

– 1 –

ಸಾತು ಬಸುರಿಯಾಗಿ ಐದನೆಯ ತಿಂಗಳಿನಲ್ಲಿ ಅವಳ ತಂದೆ ಬಂದು ಬಾಣಂತಿತನಕ್ಕೆ ಕರೆದುಕೊಂಡು ಹೋದರು. ನಂಜಮ್ಮ ಮತ್ತೆ ಬಸುರಿಯಾದಳು.

ಶ್ಯಾನುಭೋಗಿಕೆಯ ಲೆಕ್ಕ ಬರೆಯುತ್ತಿದ್ದ ತಿಮ್ಲಾಪುರದ ದ್ಯಾವರಸಯ್ಯನವರಿಗೆ ಅರವತ್ತಕ್ಕೂ ಮೀರಿದ ವಯಸ್ಸಾಗಿತ್ತು. ತಮ್ಮ ಫಿರ್ಕಾದ ಲೆಕ್ಕ ಪತ್ರ ಬರೆಯಬೇಕಾಗಿದ್ದ ಅವರಿಗೆ ಚೆನ್ನಿಗರಾಯದನ್ನೂ ಗೇಯುವುದು ಕಷ್ಟವಾಗುತ್ತಿತ್ತು. ಇವರು ಕೊಡುತ್ತಿದ್ದ ಐವತ್ತು ರೂಪಾಯಿಯೇ ಅಲ್ಲದೆ ಅವರಿಗೆ ಈ ಮನೆಯ ಮೇಲೆ ಒಂದು ವಿಧವಾದ ವಿಶ್ವಾಸ ಹುಟ್ಟಿತ್ತು. ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಮೂರ್ಖರಾದ ಈ ಸಂಸಾರದಲ್ಲಿ ಸೊಸೆ ನಂಜಮ್ಮನ ಗುಣ ಸ್ವಭಾವಗಳನ್ನು ಕಂಡರೆ ಅವರಿಗೆ ಗೌರವವಿತ್ತು.

ಒಂದು ದಿನ ಮನೆಯಲ್ಲಿ ನಂಜಮ್ಮನ ವಿನಾ ಬೇರೆಯವರು ಇರಲಿಲ್ಲ. ಚೆನ್ನಿಗರಾಯರು ಎದುರಿನ ದೇವಸ್ಥಾನಕ್ಕೆ ಹೋಗಿ ಹೊಗೆಸೊಪ್ಪು ನವಣಿಸುತ್ತಾ ಮಾದೇವಯ್ಯನವರ ಭಜನೆ ಕೇಳುತ್ತಿದ್ದರು. ಅಪ್ಪಣ್ಣಯ್ಯ ಬೆಸ್ತರಕೇರಿಯ ಮಾಟನ ಮನೆಯಲ್ಲಿ ಕೂತು ಬೀಡಿ ಸೇದುತ್ತಿದ್ದ. ಗಂಗಮ್ಮ ಗಾಣಿಗರ ಈರಕ್ಕನ ಮನೆಯ ಮುಂದೆ ಹುಚ್ಚೆಳ್ಳನ್ನು ಗಾಣ ಆಡಿಸುತ್ತಿದ್ದಳು.

ದ್ಯಾವರಸಯ್ಯನವರು ನಂಜಮ್ಮನಿಗೆ ಹೇಳಿದರು: 'ನೋಡಮ್ಮ, ನಂಗೂ ವಯಸ್ಸಾಯ್ತು. ಇನ್ನೆಲ್ಲ ನಾನು ಒಂದೆರಡು ವರ್ಷ ಲೆಕ್ಕ ಬರೆದುಕೊಟ್ಟೇನು. ನಮ್ಮ ಚೆನ್ನಿಗರಾಯರು ಸ್ವತಃ ಲೆಕ್ಕ ಕಲಿಯಲಿಲ್ಲ. ಮುಂದೇನು

ಗತಿ?'
'ನೀವೇ ಅವರಿಗೆ ಚನ್ನಾಗಿ ಬಿಡಿಸಿ ಬಿಡಿಸಿ ಹೇಳಿಕೊಡಿ ಮಾವಯ್ಯ.'
'ಈ ಲೆಕ್ಕದಲ್ಲಿ ಏನಿದೆ ಅಂತಲಮ್ಮ ಮಣ್ಣು? ಹೊನ್ನವಳ್ಳಿ ಸೀತಾರಾಮಯ್ಯನೋರ್ ಹತ್ರ ಮೂರು ವರ್ಷ ಇದ್ದೂ ಇವರು ಕಲೀಲಿಲ್ಲ ಅಂದ್ರೆ ಇವ್ರಿಗೆ ಬರುಲ್ಲ ಅಂತಲೇ ಇಷ್ಟು ದಿನ ನಾನು ಇಲ್ಲಿದ್ದು ಬರೀತಿದೀನಲಾ, ಎಲ್ಲಾನೂ ನನ್ನ ಮೇಲೆ ಹಾಕಿ ಅವರು ಮಲಿಕ್ಕಂಡು ನಿದ್ದೆ ಮಾಡ್ತಾರೆಯೇ ಹೊರತು ನನ್ನ ಜೊತೆಗೆ ಕೂತ್ಕಂಡು ಬರೀತಾರೆಯೇ ಬರೀತಾ ಬರೀತಾ ತಾನೇ ತಿಳಿಯೂದು? ಮಧ್ಯ ಮಧ್ಯ ನನ್ನ ಕೇಳಿದ್ರೆ ಹೇಳಿಕೊಡ್ತೀನಿ. ತಮ್ಮ ಕಸುಬು ತಾವು ಮಾಡುಕ್ಕಾಗುಲ್ವೆ? ಎಷ್ಟು ದಿನ ಅಂತ ದುಡ್ಡು ಕೊಟ್ಟು ಬರಸೋದು?'
ನಂಜಮ್ಮನಿಗೆ ಈ ವಿಚಾರಗಳು ಎರಡು ವರ್ಷ ಮೊದಲಿನಿಂದಲೇ ಮನಸ್ಸಿನಲ್ಲಿ ಬಂದಿದ್ದುವು. ಆದರೆ ಅವಳು ಏನು ಮಾಡಿಯಾಳು?: 'ಮಾವಯ್ಯ, ನನ್ನ ಅದೃಷ್ಟ ನಿಮಗೇ ಗೊತ್ತಿದೆ. ಏನ್ ಮಾಡ್ಬೇಕು ಅಂತ ನೀವೇ ಹೇಳಿ.'
'ಅಮ್ಮಾ ನಿನಗೆ ಇಷ್ಟು ಚನ್ನಾಗಿ ಓದುಕ್ಕೆ ಬರಿಯುಕ್ಕೆ ಬರುತ್ತೆ. ನಿನ್ನ ಹಾಡಿನ ಪುಸ್ತಕ ನಾನು ನೋಡಿದೀನಿ. ಒಳ್ಳೇ ಕಡ್ಲೆಕಾಳಿನ ಹಾಗೆ ದುಂಡಗೆ ಅಕ್ಷರ ಬರೀತೀಯಾ. ನಾನು ಹೇಳಿಕೊಡ್ತೀನಿ. ನೀನು ಎಲ್ಲಾನೂ ಕಲ್ತುಕೊ. ಮನೇಲಿ ಕೂತು ಎಲ್ಲಾನೂ ಬರಕೊಡು. ಚೆನ್ನಿಗರಾಯರು ಕೋಟು ಪೇಟ ಕಟ್ಟಿಕೊಂಡು ಹೋಗಿ ಜಮಾಬಂದಿ ಮಾಡ್ಕಂಡು ಬರ್ಲಿ ಇಲ್ದೆ ಹೋದ್ರೆ ಇದು ಊರ್ಜಿತವಾಗುಲ್ಲ.'
'ಹೆಂಗಸ್ರು ಸರ್ಕಾರಿ ಲೆಕ್ಕ ಬರೀಭೌದೆ?'
ಈ ಅನುಮಾನಕ್ಕೆ ಸಮಾಧಾನವು ದ್ಯಾವರಸಯ್ಯನವರಿಗೂ ತಕ್ಷಣ ತಿಳಿಯಲಿಲ್ಲ. ಸರ್ಕಾರದ ಕಾನೂನು ಈ ವಿಷಯದಲ್ಲಿ ಏನಿದೆಯೋ ಅವರಿಗೂ ಗೊತ್ತಿಲ್ಲ. ಆದರೂ ಹೇಳಿದರು: 'ನೋಡು, ನೀನೇನು ಶ್ಯಾನುಭೋಗಿಕೆ ಚಾರ್ಜು ತಗಂಡು ನೋಡುಲ್ಲ. ಮನೇಲಿ ಕೂತ್ಕಂಡು ಒಳಗೇ ಲೆಕ್ಕ ಬರೆಯೋದು. ಗಂಡಸು ಬರೆಯೋದೋ ಹೆಂಗಸು ಬರಿಯೋದೋ ಅಂತ ಮೇಲಿನೋರಿಗೆ ಏನು ಗೊತ್ತಾಗುತ್ತೆ? ನೀನು ಸುಮ್ಮನೆ ಕಲುತ್ಕೊ.'
ತಾವು ರೂಲು ಹಾಕುತ್ತಿದ್ದ ಪುಸ್ತಕವನ್ನು ಮುಂದೆ ಸರಿಸಿ ದ್ಯಾವರಸಯ್ಯನವರು ಹೇಳಿದರು: 'ಎಲ್ಲಿ, ಇದಕ್ಕೆ ಮೊದಲು ರೂಲು ಹಾಕು. ಇಲ್ಲಿ ನೋಡು, ರೂಲುದೊಣ್ಣೆ ಹೆಡಿಂಗಿನ ಕೆಂಪು ಗೀಟಿಗೆ ಸಮನಾಗಿ ಬರಬೇಕು. ಎಡಗೈ ಬೆರಳಿನಲ್ಲಿ ರೂಲುದೊಣ್ಣೇನ ಹಗುರವಾಗಿ ಆಡಿಸಬೇಕು. ಸ್ಟೀಲಿನಿಂದ ಶಾಯಿ ಧುಮುಕದ ಹಾಗೆ ನೋಡಿಕೋಬೇಕು. ಹಾಕು ನೋಡೋಣ.'
ನಂಜಮ್ಮ ಅವರು ಹೇಳಿದಂತೆಯೇ ಹಾಕಿದಳು. ಅವರಷ್ಟು ಬೇಗ ಬೇಗ ಆಗದಿದ್ದರೂ ಗೆರೆಗಳು ನೇರವಾಗಿ ಸರಿಯಾದ ಜಾಗದಲ್ಲಿ ಬಿದ್ದುವು. 'ಸೊಗಸಾಗಿದೆ. ಅಭ್ಯಾಸವಾಗಲಿ. ಪುಸ್ತಕಕ್ಕೆಲ್ಲ ನೀನೇ ಹಾಕು' – ಎಂದು ಹೇಳಿ ಅವರು ಕೆರೆಯ ಕಡೆಗೆ ಹೋದರು. ನಂಜಮ್ಮನಿಗೆ ಇದು ಹೊಸ ಅನುಭವ. ಈ ಹಿಂದೆ ಅವಳು ಹುಡುಗಿಯಾಗಿದ್ದಾಗ ತನ್ನ ಹಾಡಿನ ಪುಸ್ತಕಕ್ಕೆ ಸ್ಲೇಟಿನ ಕಟ್ಟಿನಿಂದ ರೂಲು ಹಾಕಿಕೊಂಡಿದ್ದುಂಟು. ಆದರೆ ರೂಲುದೊಣ್ಣೆಯಿಂದ, ಅದೂ ಸರ್ಕಾರಿ ಪುಸ್ತಕಕ್ಕೆ ಹಾಕುವುದೆಂದರೆ ಏನೋ ಒಂದು ತೆರನಾದ ಸಂಭ್ರಮವಾಗುತ್ತಿತ್ತು. ಅಲ್ಲದೆ ಮೊದಲನೆಯ ಸಲಕ್ಕೇ ತಪ್ಪಿಲ್ಲದೆ ಬಂದುಬಿಟ್ಟಿತು. 'ಶ್ಯಾನುಭೋಗಿಕೆ ಅಂದ್ರೆ ಏನು, ಸರಿಯಾಗಿ ರೂಲು ಹಾಕಬೇಕಾದರೇ ಆರು ವರ್ಷವಾದರೂ ರೂಲುದೊಣ್ಣೇಲಿ ಕೈಗೆಣ್ಣು ಊದೂತಂಕ ಏಟು ತಿನ್ನಬೇಕು. ಲೆಕ್ಕವೇನು ಪುಕ್ಸಟ್ಟೆ ಬರುಲ್ಲ' – ಎಂದು ಶ್ಯಾನುಭೋಗರುಗಳು ಹೇಳುವುದನ್ನು ಕೇಳಿದ್ದಳು.
ಅವಳು ರೂಲು ಹಾಕುತ್ತಿರುವಾಗ ಅಪ್ಪಣ್ಣಯ್ಯ ಮನೆಗೆ ಬಂದ. ಅತ್ತಿಗೆ ಮಾಡೂತ್ತಿರುವ ಕೆಲಸವನ್ನು ನೋಡಿ ಅವನಿಗೆ ಕಕ್ಕಾಬಿಕ್ಕಿಯಾಯಿತು. ಕೋಪ ಬಂದುಬಿಟ್ಟಿತು. ನೇರವಾಗಿ ಗಾಣಿಗರ ಕೇರಿಗೆ ಹೋಗಿ ಅಮ್ಮನ ಕೈಲಿ ಹೇಳಿದ: 'ನೋಡಮ್ಮ ಆ ಅವಳು ಲೆಕ್ಕದ ಬುಕ್ಕು ಹಾಳು ಮಾಡ್ತಾ ಇದಾಳೆ.'
'ಯಾವಳೋ?'
'ನಿನ್ನ ದ್ವಡ್ಡ ಸೊಸೆ. ಬುಕ್ಕಿಗೆ ರೂಲು ಹಾಕ್ತಿದಾಳೆ.'
'ಇದೇನೋ ಇವಳ ಮನ್‌ತನ ಹಾಳಾಗ, ಕತ್ತೆಮುಂಡೆ ತಂದು' – ಎನ್ನುತ್ತಾ ಗಂಗಮ್ಮ ಒಂದೇ ಉಸುರಿಗೆ ಓಡಿಬಂದಳು. ಅವಳು ಬರುವ ಹೊತ್ತಿಗೆ ದ್ಯಾವರಸಯ್ಯನವರು ಕೆರೆಯ ಕಡೆಯಿಂದ ಹಿಂತಿರುಗಿ ಬಂದು ಜಗುಲಿಯ ಮೇಲೆ ಕೂತು ನೆಶ್ಯ ತೀಡುತ್ತಿದ್ದರು. ಸೊಸೆ ಒಳಗೆ ರೂಲು ಹಾಕುತ್ತಿದ್ದಳು. 'ನಿಂಗೇನ್ ಗ್ಯಾನ ನ್ಯಟ್ಟಗಿಲ್ವೇನೆ ಭೋಸುಡಿ., ಏನ್ಮಾಡ್‌ತಿದೀಯಾ?' – ಎಂಬ ಅವಳ ಮಾತನ್ನು ಕೇಳಿ ದ್ಯಾವರಸಯ್ಯನವರೇ ಒಳಗೆ ಬಂದು ಕೇಳಿದರು: 'ಯಾಕೆ, ಏನಾಯ್ತು?'
'ಇವ್ಳು ಲೆಕ್ಕದ ಪುಸ್ತಕ ಮುಟ್ಟಿ ಹೀಗ್ ಮಾಡ್‌ಭೌದೆ?'
'ಇಲ್ಲಮ್ಮ, ರೂಲು ಹಾಕು ಅಂತ ನಾನೇ ಹೇಳ್ದೆ. ನಂಗೆ ಮೈಲಿ ಹುಶಾರಿಲ್ಲ. ಲೆಕ್ಕ ಟೈಮಿಗೆ ಸರಿಯಾಗಿ ಮುಗೀಬೇಕು. ಚೆನ್ನಿಗರಾಯರಂತೂ ಏನೂ ಮಾಡೂದಿಲ್ಲ.'

'ಹೆಂಗಸು ಮುಂಡೆ ಕೈಲಿ ಲೆಕ್ಕ ಮುಟ್ಟುಸ್ತಾರೇನ್ರೀ?'

'ಕೆಟ್ಟ ಮಾತು ಯಾಕಮ್ಮಾ ಆಡ್ತೀರಾ ಮುಟ್ಟಿಸಿದ್ರೆ ಏನೂ ಆಗುಲ್ಲ.'

'ನಮ್ಮ ಯಜಮಾನ್ರು ಮಾಡ್ತಿದ್ದ ಶ್ಯಾನುಭೋಕಿ. ಅದರ ಲೆಕ್ಕ ಇವ್ಳು ಮುಟ್ಬೌದೇನ್ರೀ?'

'ನಿಮ್ಮ ಯಜಮಾನ್ರ ಸೊಸೆಯೇ ಅಲ್ವೇನ್ರಮ್ಮ ಇವ್ಳು? ಬ್ಯಾರೆಯೋಳೇನಲ್ಲ. ' – ಅಷ್ಟರಲ್ಲಿ ನಂಜಮ್ಮ ರೂಲುದೊಣ್ಣೆ ಸ್ಟೀಲುಮುಳ್ಳುಗಳನ್ನು ಅಲ್ಲಿಯೇ ಬಿಟ್ಟು ಎದ್ದು ಒಳಗೆ ಹೋಗಿಬಿಟ್ಟಿದ್ದಳು.

ದ್ಯಾವರಸಯ್ಯನವರೇ ಕೂಗಿ 'ನಂಜಮ್ಮ, ಅದ್ಯಾಕ್ ಎದ್ದುಹೋದೆ? ಬಾ ನಿನ್ನ ಕೆಲ್ಸ ನೀನು ಮಾಡು. ನಿಮ್ಮತ್ತೆಮ್‌ನೋರಿಗೆ ನಾನು ಹೇಳಿದೀನಿ' ಎಂದರು.

ಗಂಗಮ್ಮ ದೇವಸ್ಥಾನಕ್ಕೆ ಹೋಗಿ ಮಗನನ್ನು ಕರೆದುಕೊಂಡು ಬಂದರು. ಅಷ್ಟರಲ್ಲಿ ನಂಜಮ್ಮ ಮತ್ತೆ ರೂಲು ಹಾಕುತ್ತಿದ್ದಳು. ಅವಳನ್ನು ತೋರಿಸಿ ಗಂಗಮ್ಮ ಹೇಳಿದಳು: 'ನೋಡೋ ನಿನ್ನ ಹೆಂಡ್ತಿ ನಿನ್ನ ಸಮಕ್ಕೂ ಶ್ಯಾನುಬಾಕಿ ಮಾಡೂಕ್ ಹೊರಟಿದಾಳೆ.'

ದ್ಯಾವರಸಯ್ಯನವರು ತಾವಾಗಿಯೇ ಚೆನ್ನಿಗರಾಯರಿಗೆ ಹೇಳಿದರು: 'ನೋಡಿ ಶ್ಯಾನುಭೋಗ್ರೇ, ನಂಗೆ ಹುಶಾರಿಲ್ಲ. ಕೂತು ರೂಲು ಹಾಕಿ ಹಾಕಿ ಬೆನ್ನುನೋವು ಬಂದಿದೆ. ಪುಸ್ತಕ ಕಟ್ಟೋದು, ರೂಲು ಹಾಕೂದು, ಎಡಗಡೆ ಲೆಕ್ಕ ಬರೆಯೋದು, ಇದೆಲ್ಲಾನೂ ಮಾಡ್ತೀನಿ ಅಂತ ನಾನು ಒಪ್ಕಂಡಿರ್‌ಲಿಲ್ಲ. ಇದನ್ನ ನೀವು ಮಾಡಿಕೊಟ್ರೇ ನಾನು ಮುಂದಿಂದು ಬರೀತೀನಿ. ನಿಮ್ಮ ಹೆಂಡ್ತಿ ಸೊಗಸಾಗಿ ರೂಲು ಹಾಕ್ತಾಳೆ. ದುಂಡಗೆ ಅಕ್ಷರ ಬರೀತಾಳೆ. ಅವಳ ಕೈಲಿ ಮಾಡ್ಸಿಸ್‌ಕೊಡುಸ್ತೀರೋ ಅಥ್ವಾ ನೀವೇ ಕೂತ್ಕಂಡ್ ಮಾಡಿ ಕೊಡ್ತೀರೋ ಹೇಳಿ. ಇಲ್ದೆ ಇದ್ರೆ ನನ್ನ ಪಾಡಿಗೆ ನಾನು ತೆಪ್ಪಗೆ ಊರಿಗೆ ಹೋಗ್ತೀನಿ.'

ಚೆನ್ನಿಗರಾಯರಿಗೆ ಈಗ ಸಂಕಟಕ್ಕೆ ಇಟ್ಟುಕೊಂಡಿತು. ಒಂ,ದು ನಿಮಿಷ ಯೋಚಿಸಿ – 'ಈ ಮುಂಡೇದ್ರ ಕೈಲೇ ಮಾಡ್ಸಿಸ್ಕಳಿ. ನಾನು ಭಜನೆ ಕೇಳುಕ್ ಹೋಗ್ಬೇಕು' ಎಂದು ಹೇಳಿ ಹೊರಟುಹೋದರು. ಮಗನನ್ನು ಬೈದುಕೊಳ್ಳುತ್ತಾ ಗಂಗಮ್ಮ ಗಾಣಿಗರ ಕೇರಿಗೆ ಹೋದಳು. ಇಲ್ಲಿ ಒಬ್ಬನೇ ಇರಲು ಅವಮಾನವಾಗಿ ಅಪ್ಪಣ್ಣಯ್ಯ ಮತ್ತೆ ಬೆಸ್ತರಕೇರಿಗೆ ಪಾದ ಬೆಳೆಸಿದ.

ದ್ಯಾವರಸಯ್ಯನವರು ನಂಜಮ್ಮನಿಗೆ ಹೇಳಿದರು: 'ಅಮ್ಮಾ, ಈ ಮನೆ ಸಮಾಚಾರ ನಂಗೆ ಮೊದಲಿನಿಂದ ಗೊತ್ತು. ನಿಮ್ಮ ಮಾವ್‌ನೋರಿಗೆ ಮೊದಲ ಹೆಂಡತಿ ಸತ್ತು ಈ ಮದುವೆಯಾದಾಗ ನಲವತ್ತು ಮೀರಿತ್ತು ಅಂತ ಕಾಣುತ್ತೆ. ನಿಮ್ಮತ್ತೆ ಬುದ್ಧಿಯೇ ಹೀಗೆ. ಅವರೇನಾದ್ರೂ ಅನ್ಲಿ. ನೀನು ಶ್ರದ್ಧೆ ಇಟ್ಟು ಲೆಕ್ಕಪತ್ರ ಎಲ್ಲಾನೂ ಕಲುತ್ಕ. ಇಲ್ದೇ ಇದ್ರೆ ಸಂಸಾರ ಉದ್ಧಾರವಾಗುಲ್ಲ. ನಿಮ್ಮ ಮಾವ್‌ನೋರು ಶ್ಯಾನುಭೋಗ್ರಾಗಿದ್ದಾಗ ಹಿಂದೆ ನಮಗೆ ಒಂದು ಸಮಯದಲ್ಲಿ ಆಗಿದ್ರು. ಅದುಕ್ಕೆ ನಾನು ನನಗೆ ತಿಳಿದಿರೋ ಲೆಕ್ಕಾನೆಲ್ಲ ನಿಂಗೆ ಹೇಳಿಕೊಡ್ತೀನಿ. ನಾನು ಹೇಳ್ದಾಗೆ ಪ್ರತಿಯೊಂದನ್ನೂ ಮಾಡು.'

– 2 –

ಇದಾದ ಮೂರು ತಿಂಗಳಿಗೆ ಸಾಲಾಖೈರಿನ ಲೆಕ್ಕ ಮುಗಿಸಬೇಕಾಗಿತ್ತು. ಶ್ಯಾನುಭೋಗಿಕೆಯ ಲೆಕ್ಕದಲ್ಲಿ ಇದು ತುಂಬ ಮುಖ್ಯವಾದುದು. ಇದನ್ನು ತಪ್ಪಿಲ್ಲದೆ ಬರೆದರೆ ಮುಂದಿನ ವರ್ಷದ ಲೆಕ್ಕಪತ್ರಗಳಲ್ಲಿ ತಪ್ಪಾಗುವ ಸಂಭವ ಇರುವುದಿಲ್ಲ. 'ಅಮ್ಮಾ, ನಿನಗೆ ದೇವರು ಇಷ್ಟೊಂದು ಬುದ್ಧಿ ಕೊಟ್ಟಿದಾನೆ. ಉಳಿದೋರೆಲ್ಲ ನಾಲ್ಕು ವರ್ಷವಾದರೂ ಎಡ ಬಲ ಎರಡೂ ಅರ್ಥ ಮಾಡಿಕೊಂಡು ಬರೆಯುಲ್ಲ. ಕಷ್ಟವಾದರೂ ನಾನು ಹೇಳಿದ ಹಾಗೆ ಇದೆಲ್ಲ ಬರಿ. ನಾನು ನಿನಗೆ ಆಮೇಲೆ ಸಾಲಾಖೈರಿನ ಲೆಕ್ಕ ಹೇಳಿಕೊಡ್ತೀನಿ'–ಎಂದು, ಅವಳು ಬರೆಯಬೇಕಾದ ಲೆಕ್ಕವನ್ನು ವಹಿಸಿಕೊಟ್ಟು ದ್ಯಾವಾವರಸಯ್ಯನವರು ಊರಿಗೆ ಹೋದರು. ಅವರು ಬರುವ ದಿ ನದಲ್ಲಿ ಅವಳು ಎಲ್ಲವನ್ನೂ ಮುಗಿಸಬೇಕಾಗಿತ್ತು.

ನಂಜಮ್ಮನಿಗೆ ಈಗ ಆರು ತಿಂಗಳು ನಡೆಯುತ್ತಿದೆ. ಸಾತು ಹೆರಿಗೆಗೆ ತನ್ನ ತೌರಿಗೆ ಹೋಗಿದ್ದಾಳೆ. ಹೆರಿಗೆಯಾಗಿದೆಯೋ ಇಲ್ಲವೇ ಇವರಿಗೆ ತಿಳಿದಿಲ್ಲ. ಮನೆಯ ಕೆಲಸವನ್ನೂ ಮಾಡಿಕೊಂಡು ಬಸುರಿ ಒಂದೇಸಮನೆ ಕೂತು ಲೆಕ್ಕ ಬರೆಯಲಾರಳು. ಹೆಂಗಸಾದ ಮುಂಡೆ ಗಂಡಸಿನ ಹಾಗೆ ಲೆಕ್ಕ ಬರೆಯೋಕೆ ಕೂತ್ರೆ ನಾನ್ಯಾಕೆ ಕೆಲಸ ಮಾಡಬೇಕು?–ಎಂದು ಗಂಗಮ್ಮ ಅಡಿಗೆಯನ್ನೂ ಮಾಡದೆ ಹಟ ಹಿಡಿದಿದ್ದಳು.

ಒಂದು ಮದ್ಯಾಹ್ನ ಊಟವಾದ ಮೇಲೆ ನಂಜಮ್ಮ ಬರೆಯುತ್ತಿದ್ದಳು. ಚೆನ್ನಿಗರಾಯ ಅಪ್ಪಣ್ಣಯ್ಯ, ಇಬ್ಬರೂ ಅದೇ ತೊಟ್ಟಿಯಲ್ಲಿ ಮಲಗಿ ಗೊರಕೆ ಹೊಡೆಯುವುದರಲ್ಲಿ ಸ್ಪರ್ಧಿಸುತ್ತಿದ್ದರು. ಗಂಗಮ್ಮ ಬಾಗಿಲಿನ ಹತ್ತಿರ ಕೂತು ರಾತ್ರಿಯ ತನ್ನ ಫಲಾರಕ್ಕೆ ಉಸಲಿ ಮಾಡಲು ಹೆಸರುಕಾಳು ಆರಿಸುತ್ತಿದ್ದಳು. ಹೆಣ್ಣು ಮಗು ಪಾರ್ವತಿ ಒಳಗೆ ಮಲಗಿತ್ತು.

ಹೊರಗೆ ಕಟ್ಟಿ ಹಾಕಿದ್ದ ಹಸುವನ್ನು ಯಾರೂ ಬಿಚ್ಚಿ ಮೇಯಿಸಲು ಹೊಡೆದುಕೊಂಡು ಹೋಗಿರಲಿಲ್ಲ. ಅದಕ್ಕೆ ಒಣ ಹುಲ್ಲನ್ನಾದರೂ ಹಾಕಿ ನೀರು ಸಹ ಇಟ್ಟಿರಲಿಲ್ಲ. ಎರಡು ಸಲ ಗಟ್ಟಿಯಾಗಿ ಕಿರಿಚಿಕೊಂಡು ಹಸು ಕಟ್ಟಿದ್ದಲ್ಲಿಯೇ ದಡಬಡನೆ ಸುತ್ತುವರಿಯಲು ಪ್ರಾರಂಭಿಸಿತು. ನಂಜಮ್ಮ ಗಂಡನನ್ನು ಕೂಗಿದಳು: 'ಕೇಳ್ತೀ?' ಅವರಿಗೆ ಎಚ್ಚರವಾಗಲಿಲ್ಲ ಅಪ್ಪಣ್ಣಯ್ಯ ಮಗ್ಗುಲು ಬದಲಿಸಿದ. ಅವಳು ಅವನಿಗೇ ಹೇಳಿದಳು:

'ಅಪ್ಪಣ್ಣಯ್ಯಾ, ಎಚ್ಚರವಾಯ್ತೇ?
'ಊಂ'–ಎಂದು ಮತ್ತೆ ಅವನು ಮುಸುಕು ಎಳೆದುಕೊಂಡ.
'ನಮ್ಮದೆಲ್ಲ ಊಟವಾಯ್ತು. ಗೋತಾಯಿ ಉಪಾಸ ಇದೆ. ಅದನ್ನ ಹೊಡ್ಕಂಡು ತ್ವಾಟಕ್ ಹೋಗಿ ಮೇಯಸ್ಕಂಡ್ ಬಂದಿದ್ರೆ ಆಗ್ತಿರ್‍ಲಿಲ್ವೆ?'
'ಊಂ'–ಎಂದು ಅವನು ಮತ್ತೆ ಗಟ್ಟಿಯಾಗಿ ಉಸಿರೆಳೆದ.
ಹತ್ತು ನಿಮಿಷದ ಮೇಲೆ ನಂಜಮ್ಮ ಎಂದಳು: 'ಅದು ದಿನಕ್ಕೆರಡು ಸರ್ತಿ ಹಾಲು ಕೊಡಬೇಕು. ಅದರ ನಿಗ ಮಾತ್ರ ಯಾರೂ ಮಾಡೂಹಾಗಿಲ್ಲ. ಇಷ್ಟು ಸೋಮಾರಿಗಳಾದ್ರೆ ದೇವರು, ತಿನ್ನುವ ಅನ್ನ ಹ್ಯಾಗ್ ಕೊಡ್‌ಬೇಕೋ!'
ಈ ಮಾತಿನಿಂದ ಗಂಗಮ್ಮನಿಗೆ ಕೋಪ ಬಂತು: 'ಏನೇ ನೀನು ಬಗುಳ್ತಿರೋದು?' – ಎಂದು ಕೇಳಿದಳು.
'ನಾನೇನು ತಪ್ಪಿನ ಮಾತು ಅನ್ಲಿಲ್ಲ. ಹಸೂನ ಪುಆಸ ಕಟ್ಟಿದೆಯಲ್ಲಾ ಅಂತ ಅಂದೆ.'
'ಅಂಥೋಳು ನೀನೇ ಹೋಗಿ ಮೇಯಿಸ್ಕಂಡ್ ಬಾ.'
'ಇಲ್ಲಿ ಈ ಲೆಕ್ಕ ಯಾರು ಬರೆಯೋರು?'
'ಆ ಹಾ ಹಾ ಹಾ ತಾಟಗಿತ್ತಿ. ಲೆಕ್ಕ ಬರೀತೀಯಾ ಅಂತ ಸುಬೇದಾರ್‍ರ ದೌಲತ್ತು ಬಂತೇನೆ ನಿಂಗೆ? ಬೆದೆ ಹತ್ತಿ ಕುಣೀತಿದೀ ಏನೇ ಕಳ್ಳಮುಂಡೆ?'
ಕಂಠೀಜೋಯಿಸರು ಇದ್ದಕ್ಕಿದ್ದಹಾಗೆಯೇ ತಲೆ ತಪ್ಪಿಸಿಕೊಂಡು ಹೋಗಿ ಇನ್ನು ಅವರು ಬರುವ ಸಂಭವವೂ ಕಡಿಮೆಯಾದಮೇಲೆ ಈ ಸೊಸೆಯ ಬಗೆಗೆ ಗಂಗಮ್ಮನಿಗೆ ಸ್ವಲ್ಪವೂ ಭಯ ಉಳಿದಿರಲಿಲ್ಲ. ಈ ಮುಂಡೆ ರಂಡೆ ಮಾತುಗಳನ್ನು ಕೇಳುವುದು ನಂಜಮ್ಮನಿಗೂ ಅಭ್ಯಾಸವಾಗಿಹೋಗಿತ್ತು.
ಅಮ್ಮನ ಮಾತಿನಿಂದ ಎಚ್ಚರವಾದ ಅಪ್ಪಣ್ಣಯ್ಯ ಮಧ್ಯಾಹ್ನದ ನಿದ್ರೆಗೆ ಮಧ್ಯದಲ್ಲೇ ಭಂಗವಾದುದರಿಂದ ಕುಪಿತನಾಗಿ – 'ಏನಮ್ಮಾ ಅದು?' ಎಂದು ಹೊರಳಿ ಕೇಳಿದ.
'ನಾನು ಲೆಕ್ಕ ಬರೆದು ಸುಬೇದಾರಿಕೆ ಮಾಡ್ತೀನಿ. ನೀವು ತಿಂದ್ಕಂಡು ಬಿದ್ದಿದೀರಾ ಎದ್ದು ಹೋಗಿ ದನ ಕಾಯ್ಕಂಡ್ ಬರ್‍ಲಾ ಸೂಳೇಮಗನೆ ಅಂತ ನಿನ್ಮ್ಯಾಲೆ ಹುಕುಂ ಮಾಡ್ತಾಳೆ ನೋಡು ಇವ್ಳು.'
ಅಪ್ಪಣ್ಣಯ್ಯ ಕೆರಳಿ ಎದ್ದು ಕೂತು ಕೇಳಿದ: 'ಏನಲೇ. ಹೀಗೆಲ್ಲ ಅಂತೀಯಾ ಗ್ಯಾನಗೀನ ಎತ್ಲಾಗಿದೆ?'
'ಅಮ್ಮಾ, ಸುಳ್ಳು ಸುಳ್ಳು ಮಾತು ಯಾಕಂತೀರಾ? ದೇವರಾಣೆ ಹೇಳಿ. ನಾನು ಹಾಗಂದ್ನೆ?'
'ನೋಡೋ ಅಪ್ಪಣ್ಣಯ್ಯ. ನಾನು ದೇವರಾಣೆ ಇಡಬೇಕೆ? ಸುಳ್ಹೇಳುಕ್ಕೆ ನಾನೇನು ಹಿಟ್ಟು ತಿಂದಿದೀನೋ ಹೇಲ್ ತಿಂದಿದೀನೋ? ನಿಮ್ಮಮ್ಮುನ್ನ ಸುಳ್ಳುಮುಂಡೆ ಅಂದ್ಲಲ್ಲಾ ಇವ್ಳು. ಅದೇನು ಮಕಾ ನೋಡ್ತೀಯಾ, ಎತ್ತಿ ಒಂದು ಸಲ ಒದಿಯೋ ಈ ಲೌಡಿಗೆ?'–ಎಂದು ಗಂಗಮ್ಮ ಹೇಳಿ ಮುಗಿಸುವುದೇ ತಡ, ಅಪ್ಪಣ್ಣಯ್ಯ ಎದ್ದು ಬಂದು ಬಲಗಾಲನ್ನು ಎತ್ತಿ ಅತ್ತಿಗೆಯ ಬೆನ್ನಿಗೆ ಒದೆದ. ಅವಳು ಹಾಗೆಯೇ ನೆಲಕ್ಕೆ ಉರುಟಿದಳು. ಇನ್ನೊಂದು ಸಲ ಕಾಲನ್ನು ಎತ್ತಿ–'ನಿನ್ನ ಗುಂಡಿ ತೆಗೆದು ಹೂತುಬಿಡ್ತೀನಿ ನೋಡು, ನಮ್ಮಮ್ಮುನ್ನ ಹಾಗಂದ್ರೆ ಎಂದು ಗರ್ಜಿಸುತ್ತಿದ್ದ. ಅಷ್ಟರಲ್ಲಿ ಹೊರಗಿನಿಂದ ಯಾರೋ ಪೋಲೀಸಿನವರು ಬಂದರು. ಕಾಖಿ ಷರಾಯಿ, ಕಾಖಿ ಹ್ಯಾಟು, ಕಾಲಿಗೆ ಬೂಟು, ಕೈಲಿ ಚರ್ಮದ ಚೀಲ, ಕರಿಯ ಕೋಟು. ಅಂದ್ರೆ ಪೋಲೀಸಿನವರೇ. ಅವರ ಹಾಗೆಯೇ ಇಬ್ಬರು ಕಾಖಿ ಲಪ್ಪಟೆ ಸುತ್ತಿದವರು ಚರ್ಮದ ಚೀಲ, ಸರಪಳಿ, ಸಲಾಕಿ, ಏನೇನೋ ಹಿಡಿದು ಬಂದಿದ್ದಾರೆ. ಅಪ್ಪಣ್ಣಯ್ಯನ ಎದೆ ಹಾರಿಹೋಯಿತು. 'ಅಯ್ಯಯ್ಯಪ್ಪಾ ನಾ ಕೆಟ್ನಲ್ಲೊ'–ಎಂದು ಬಾಗಿಲಿನಿಂದ ನುಗ್ಗಿ ಬೀದಿಗೆ ಓಡಿಹೋದ. ಅಲ್ಲಿಂದ ಅವನು ಪಕ್ಕದ ಓಣಿಯಲ್ಲಿ ನುಗ್ಗಿದ ವೇಗಕ್ಕೆ ಓಣಿಯ ನಾಯಿಗಳೆಲ್ಲ ಬೌ ಎಂದವು.
ಇವರನ್ನು ಕಂಡು ಗಂಗಮ್ಮನಿಗೂ ದಿಗ್ಭ್ರಮೆಯಾಯಿತು. ನಡುಗುತ್ತಾ ಎದ್ದು ನಿಂತುಕೊಂಡಳು. ಅಪ್ಪಣ್ಣಯ್ಯ ಹೀಗೆ ಕಿರುಚಿಕೊಂಡು ಓಡಿದ ಶಬ್ದಕ್ಕೆ ಚೆನ್ನಿಗರಾಯರೂ ಎಚ್ಚರವಾಗಿ ಕುಳಿತರು. ಒಳಗೆ ಮಗು ಅಳಲು ಪ್ರಾರಂಭಿಸಿತು. ಹಾಗೆಯೇ ತಿರುಗಿ, ಬಂದವರನ್ನು ನೋಡಿದ ನಂಜಮ್ಮ ಎದ್ದು ಮಗು ಎತ್ತಿಕೊಳ್ಳಲು ಒಳಗೆ ಹೋಗಲು ಏಳುತ್ತಾಳೆ: ಸೊಂಟ ವಿಪರೀತ ನೋಯುತ್ತಿದೆ. ನರ ಹೊರಳಿಯೋ ಉಳುಕಿಯೋ ಇದೆ. ಹಾಗೆಯೇ ಗೂನುಬೆನ್ನು ಮಾಡಿಕೊಂಡು ಅವಳು ಒಳಗೆ ಹೋಗುವ ಹೊತ್ತಿಗೆ ಚೆನ್ನಿಗರಾಯರು ಮೇಲೆ ಎದ್ದು ಭಯಭಕ್ತಿಗಳಿಂದ ಬಂದವರನ್ನು ಮಾತನಾಡಿಸಿದರು: 'ಮ ಮ ಮಹಾಸ್ವಾಮಿಗಳು ದ ದ ದಯಮಾಡಿಸ್ಬೇಕು.'
'ನೀವೇ ಏನ್ರೀ, ಶ್ಯಾನುಭೋಗ ಚೆನ್ನಿಗರಾಯರು?'
'ಹೂಂ ಸ್ವಾಮಿ.'
'ಅವರ್ಯಾರು ನಿಮ್ಮ ತಮ್ಮನೋ ಹೆಂಡ್ತಿ ಒದೀತಿದ್ದೋರು?'
'ಅವ್ಳು ನನ್ನ ಹೆಂಡ್ತಿ ಸ್ವಾಮಿ.'
'ಓ, ಅತ್ತಿಗೇನ ಒದೀತಿದ್ರೊ?'

'ಇಲ್ಲ ಸ್ವಾಮಿ.'
'ಏನ್ರೀ, ಸರ್ಕಾರಿ ಅಧಿಕಾರಿಯಾಗಿ ನೀವು ಸುಳ್ ಹೇಳ್ತೀರಿ? ಸರಿಯಾಗಿ ಹೆಂಡ್ತಿ ನೋಡ್ಕೊಳ್ಳೋಕ್ ಆಗುಲ್ವೆ?'
ಗಂಗಮ್ಮನ ಮೈ ಬೆವರುತ್ತಿತ್ತು. ಬಂದವರು ಇದಕ್ಕಿಂತ ಹೆಚ್ಚು ಏನೂ ಹೇಳಲಿಲ್ಲ. ಚೆನ್ನಿಗರಾಯರು ಜಗುಲಿಯ ಮೇಲೆ ಒಂದು ಮದಲಿಗೆ ಹಾಕಿ ಅವರನ್ನು ಕೂರಿಸಿ ಕೈ ಜೋಡಿಸಿ ನಿಂತುಕೊಂಡಿದ್ದರು. ಅದೇ ಸಮಯದಲ್ಲಿ ಗಂಗಮ್ಮ ಮನೆಯಿಂದ ನೇರವಾಗಿ ಬೆಸ್ತರ ಕೇರಿಗೆ ಹೋದಳು. ಮಾಟನ ಮನೆಗೆ ಹೋಗಿ ಕೇಳಿದಾಗ ಅವನು ಇವಳ ಹತ್ತಿರ ಬಂದು ಪಿಸುಗುಟ್ಟಿದ: 'ಅಟ್ಟದ ಮ್ಯಾಲೆ ಕುರುಂಬಾಳೆವಳ್ಗೆ ಅವಿಸಿಟ್ಟೀವ್ನಿ.'
ಗಂಗಮ್ಮನೇ ಏಣಿ ಹಾಕಿಕೊಂಡು ಅಟ್ಟಕ್ಕೆ ಹತ್ತಿ ಮಗನ ಹತ್ತಿರ ಬಂದು ಪಿಸುಗುಟ್ಟಿದಳು: 'ಅವರ ಜೊತೆ ಬಂದಿರೋರ ಪತ್ರ ನೋಡಿದೆಯಾ? ಹಗ್ಗದ ಸಿಂಬಿ ತಂದ ಹಾಗೆ ಸರಪಣಿ ತಂದಿದಾರೆ. ಉದ್ದನೇ ಹಾರೆ ಹಾಗಿರೋ ಸಲಾಕಿ ಇದೆ. ಸಿಕ್ಕಿಬಿಟ್ರೆ ಸರಪಣೀನ ಕೈಗೆ ಬಿಗಿದು ಹಾರೇಲಿ ಗುಂಡಿ ತೋಡಿ ನೇಣುಗಟ್ತಾರೋ ಏನೋ. ಅವಳ ಅಣ್ಣ ಕಲ್ಲೇಶ ಪೋಲೀಸ್ನೋನಾಗಿದ್ದ. ಅವರ ಕಡೆಯೋರು. ನೀನು ತ್ವಾಟದ ಕಡೆಯಿಂದ ವಾಟ ಹ್ವಡ್ದುಬಿಡು. ಇನ್ನೊಂದ್ ಐದಾರು ತಿಂಗ್ಳು ಇಲ್ಲೆಲ್ಲೂ ತಲೆಹಾಕ್ಬೇಡ. ಜಾವಗಲ್ಲು ಕಡಿಗೆ ಹೊರಟ್ಹೋಗು.'
ಅಪ್ಪಣ್ಣಯ್ಯ–'ಇನ್ನೇನು ಗತಿಯಮ್ಮಾ?' ಎಂದು ಕಣ್ಣನ್ನು ಅರಳಿಸಿದ. 'ನನ್ನ ಕಂದಾ, ಬ್ಯಾಗ ಹ್ವರ್ಡೋ. ಈ ಕೆಟ್ಟಗಾಲಿನ ಮುಂಡೆ ನಮ್ಮನೆ ಸೇರಿದ್ಲು. ನಮಗೆ ಬಂತು ನೋಡು ಗ್ರಾಚಾರ'–ಎಂದಳು. ಅವನು ಕುರುಂಬಾಳೆಗಳ ಒಟ್ಟಿನಿಂದ ಹೊರಕ್ಕೆ ಬಂದು ಏಣಿಯಿಂದ ಸರಸರನೆ ಇಳಿದು ಹೊರಬಾಗಿಲಿನಲ್ಲಿ ಒಂದು ಸಲ ಎರಡು ಕಡೆಗೂ ಇಣಿಕಿ ನೋಡಿ ಹುಲ್ಲುಮೆದೆಯ ಹಿತ್ತಿಲುಗಳ ಬೇಲಿಯ ಸಂದಿಯಿಂದ ಬಗ್ಗಿ ಓಟ ಹೊಡೆದುಬಿಟ್ಟ. ಅವನು ಕೆರೆಯ ಏರಿ ಇಳಿದು ಮರೆಯಾಗುವತನಕ ಹಿತ್ತಿಲಿನ ಬೇಲಿಯ ಸಂದಿಯಿಂದ ನೋಡುತ್ತಿದ್ದ ಗಂಗಮ್ಮ ಸ್ವಲ್ಪ ಧೈರ್ಯ ತಂದುಕೊಂಡಳು.
ಇಲ್ಲಿ ಮನೆಗೆ ಬಂದಿದ್ದವರು ಸರ್ಕಾರಿ ಮೋಜುಂದಾರರು. ಸಂಸ್ಥಾನದಲ್ಲಿರುವ ವ್ಯವಸಾಯದ ಭೂಮಿಯನ್ನೆಲ್ಲ ಆದರದರ ಹಿಡುವಳಿದಾರರ ಲೆಕ್ಕದ ಪ್ರಕಾರ ಹೊಸದಾಗಿ ಅಳೆದು ಅದರ ವಿಸ್ತೀರ್ಣ ಮತ್ತು ಆಕಾರಗಳನ್ನು ನಿರ್ಧರಿಸಿ ಇಂಡೆಕ್ಸ್ ತಯಾರಿಸಲು ರೆವಿನ್ಯೂ ಕಮಿಶನರು ಆರ್ಡರ್ ಮಾಡಿದ್ದರು. ಹೊಸ ಅಳತೆಗಾಗಿ ನಿಯೋಜಿತರಾದ ಮೋಜುಂದಾರರು ತಮ್ಮ ಶಿಬ್ಬಂದಿಯೊಡನೆ ಇಲ್ಲಿಗೆ ಬಂದಿದ್ದರು. ಸುಮಾರು ಮೂರು ತಿಂಗಳು ರಾಮಸಂದ್ರದಲ್ಲಿ ಕ್ಯಾಂಪ್ ಮಾಡಿ ಸುತ್ತಮುತ್ತಣ ಹಳ್ಳಿಗಳ ಭೂಮಿಯನ್ನೆಲ್ಲ ಅಳೆಯುವುದು ಅವರ ಕೆಲಸವಾಗಿತ್ತು. ಅವರ ವಾಸದ ಏರ್ಪಾಟು ಮಾಡುವುದರಿಂದ ಹಿಡಿದು ತಳವಾರ, ಕುಳವಾಡಿ, ಮೊದಲಾದವರ ಸಹಾಯ ಕೊಡಿಸುವ ಜವಾಬ್ದಾರಿ ಶ್ಯಾನುಭೋಗರದ್ದು.

– 3 –

ಎರಡನೇ ಬಾಣಂತನಕ್ಕೆ ಅಕ್ಕಮ್ಮನೇ ಗಾಡಿ ಹೂಡಿಸಿಕೊಂಡು ಬಂದು ನಂಜುವನ್ನು ಕರೆದುಕೊಂಡು ಹೋದಳು. ಈಗ ಕಲ್ಲೇಶನ ಎಡಗೈ ಇನ್ನೂ ಸ್ವಲ್ಪ ಉತ್ತಮವಾಗಿದೆ. ಎರಡು ಕೈಯಲ್ಲಿಯೂ ತಬ್ಬಿ ತೆಂಗಿನ ಮರ ಹತ್ತುತ್ತಾನೆ. ಹೊಲಗದ್ದೆಯ ಕೆಲಸವನ್ನೂ ಅಲ್ಪ ಸ್ವಲ್ಪ ಮಾಡುತ್ತಾನೆ. ಅವನ ಹೆಂಡತಿ ಹಳ್ಳಿ ಬೇಡವೆಂದರೂ ಅವನಿಗೆ ಸರ್ಕಾರೀ ನೌಕರಿ ಸಿಕ್ಕುವುದು ಸಾಧ್ಯವಿಲ್ಲ. ಅವನಿಗೆ ಅದು ಬೇಡವೂ ಬೇಡ. ಆದರೆ ಅವಳು ಹಳ್ಳಿಗೆ ಹೊಂದಿಕೊಳ್ಳಲಾರಳೋ, ಅಥವಾ ಸ್ವಾಭಾವವೇ ಹಾಗೋ, ಅಂತೂ ಅಜ್ಜಿ ಮೊಮ್ಮಗ, ಇಬ್ಬರಿಗೂ ಅವಳಿಂದ ಸುಖವಿಲ್ಲ.
ನಂಜು ಬಾಣಂತನಕ್ಕೆ ಬಂದಾಗ ಜೊತೆಯಲ್ಲಿ ಎರಡೂವರೆ ವರ್ಷದ ಮಗು ಪಾರ್ವತಿಯೂ ಬಂದಿತ್ತು. ಕಲ್ಲೇಶ ಅದನ್ನು ಎತ್ತಿ ಮುದ್ದಿಸುತ್ತಿದ್ದ. ಒಂದು ದಿನ ಅವನು ಗದ್ದೆಯ ಹತ್ತಿರಕ್ಕೆ ಹೋಗಿದ್ದಾಗ ಕಮಲು ತನಗೆ ತಾನೇ ಹೇಳಿಕೊಳ್ಳುವವಳಂತೆ ಗಟ್ಟಿಯಾಗಿ ಎಂದಳು: 'ಹಂದಿ ಈದ ಹಾಗೆ ಬ್ಯಾಗ ಬ್ಯಾಗ ಬಸುರಿಯಾಗಿಬಿಟ್ರೆ ಆಯ್ತೆ? ಗಂಡನ ಮನೆಯೊರಿಗೆ ಬಾಣಂತನ ಮಾಡೋ ಯೋಗ್ತಿ ಇಲ್ಲದ ಮ್ಯಾಲೆ ಬಸ್ರಿ ಯಾಕಾಗಬೇಕೋ,! ತೌರು ಮನೇರು ಮಾಡ್ತಾರೆ ಮಾಡ್ತಾರೆ ಅಂತ ಅವರ ರಕ್ತ ಎಷ್ಟು ಹೀರಿದ್ರೂ ಸಾಲ್ದು.'
ಈ ಮಾತು ನಂಜುವಿಗೆ ಕೇಳಿಸಿತು. ತನಗೆ ಒಳ್ಳೆಯ ಅತ್ತೆ ಸಿಕ್ಕಲಿಲ್ಲ; ಹಾಗೆಯೇ ಒಳ್ಳೆಯ ಅತ್ತಿಗೆಯೂ ಸಿಕ್ಕಲಿಲ್ಲ. ತನ್ನ ಅದೃಷ್ಟವೇ ಹೀಗೆ. ಈಗ ಇನ್ನೂ ಏಳು ತಿಂಗಳು ಇನ್ನು ಹೆರಿಗೆಯಾಗಿ ಮಗುವಿಗೆ ಮೂರು ತಿಂಗಳಾದರೂ ಆಗಬೇಕಾದರೆ ಐದಾರು ತಿಂಗಳಾದರೂ ಇಲ್ಲಿರಬೇಕು. ಸುಮ್ಮನೆ ಊರಿಗೆ ಹೋಗಿಬಿಡುವುದೇ ಚನ್ನ. ಆದರೆ ಅಲ್ಲಿ ಅತ್ತೆಯ ಕಾಟ. ತೌರುಮನೆಗೆ ಬಾಣಂತಿತನಕ್ಕೆ ಹೋಗಿದ್ದವಳು ಹಾಗೆಯೇ ವಾಪಸು ಹೋದರೆ ಅತ್ತೆ ಕುಕ್ಕದೆ ಬಿಡುವುದಿಲ್ಲ. ಇನ್ನು ಹೆಂಡತಿಯ ಪರವಾಗಿ ಒಂದು ಮಾತಾದರೂ ಆಡುವ ಗಂಡನೇ! ಪುಣ್ಯಕ್ಕೆ ಹೊಟ್ಟೆ ತೊಳಕೋಬೇಕು. ಅವಳ ಕಣ್ಣಿನಲ್ಲಿ ಒಂದು ಹನಿ ನೀರು ತುಳುಕಿತು.
ಕಮಲುವಿನ ಮಾತು ಅಕ್ಕಮ್ಮನಿಗೂ ಕೇಳಿಸಿತ್ತು. ತಾಳ್ಮೆ ಇಟ್ಟುಕೊಂಡಿದ್ದ ಅವಳು ಮೊಮ್ಮಗಳ ಕಣ್ಣಿನಿಂದ ಉರುಳಿದ ನೀರನ್ನು ಕಂಡು ಕ್ರುದ್ಧಳಾದಳು. ಕಮಲುವಿನ ಮುಂದೆ ಹೋಗಿ ನಿಂತು ಕೇಳಿದಳು: 'ಪ್ರಸ್ತ

ಮಾಡ್ಕಂಡ್ ಬಂದು ಒಂದು ವರ್ಷವಾದ್ರೂ ಬಸ್‌ರಿಯಾಗೂ ಯೋಗ್ತಿ ಇಲ್ಲದೋಳೇ. ಅವ್ಳುನ್ನ ಯಾಕೆ ಹಂದಿ ಅಂತೀಯೇ? ಕಟ್ಟೇಲಿ ನೀರಿಲ್ಲ, ಹೊಟ್ಟೇಲಿ ಮಕ್ಳಿಲ್ಲ ಅಂತ ನಿನ್ನಂತ ಪಾಪಿ ಹೊಟ್ಟೇಲಿ ಬಸುರು ಹ್ಯಾಗೆ ನಿಲ್ಲುತ್ತೆ ಹೇಳು.'

'ನಿನ್ನ ಮೊಮ್ಮಗ ಹೋಗಿ ಪೋಲೀಮುಂಡೇರ ಜೊತೆ ಎಲ್ಲ ಮಲೀಕಂಡು ಬರ್ತಿದ್ರೆ ಮನೆ ಹೆಂಡ್ತಿ ಬಸ್‌ರಿ ಹ್ಯಾಗಾಗ್ತಾಳೆಯೇ ಮುದುಕಿ? ಇಂಥಾ ಪೋಲೀಸೂಳೇಮಕ್ಳು ನಿಮ್ಮನೇಲಿ ಹುಟ್ಟಿರೂದು.'

'ನಾಚಿಕೆ ಇಲ್ದೆ ಮಾತಾಡಬ್ಯಾಡ, ಕತ್ತೆ ಲೌಡಿ. ನ್ಯಟ್ಟಗೆ ಗಂಡನ ಜೊತೆ ಮಲೀಕಳೂದು ಕಲ್ತಿದ್ರೆ ಗಂಡ್‌ಸ್ಯಾಕ್ ಹ್ವರಗಡೆ ಹೋಕ್ತಾನೆಯೆ? ನೀನು ಹೆಣ್ಣುಜಾತೀಲಿ ಹುಟ್ಟಿದೀಯೇನೇ?'

ಈ ಮಾತಿನಿಂದ ನಂಜುವಿಗೆ ಹೊಸ ವಿಷಯಗಳು ತಿಳಿದವು. ಆದರೂ ಅವಳು ಹತ್ತಿರ ಬಂದು ಹೇಳಿದಳು:

'ಅಕ್ಕಮ್ಮ, ಮೆಲ್ಲಗಾದರೂ ಮಾತಾಡಿ. ಮಗ್ಗಲು ಮನೆಯೋರಿಗೆ ಕೇಳಿದರೆ?'

'ಮಗ್ಗಲು ಮನೆಯೋರೇನು, ಈ ಊರ್ನಲ್ಲಿ ಎಲ್ರಿಗೂ ಗೊತ್ತಿದೆ, ಈ ಚಿನ್ನಾಲಿ ಕತೆ. ಇವ್ಳು ಬಂದು ಒಂದು ತಿಂಗ್ಳಿಗೇ ನಮ್ಮನೆ ಮರ್ಯಾದಿ ತೆಗುದ್ಲು. ಕೆರಿಗ್ ನೀರಿಗ್ಹೋದಾಗ್ಲೆಲ್ಲ ನಮ್ಮನೆ ವಿಷಯಾನ ಊರೋರ್ಗೆಲ್ಲ ಹೇಳ್ಕಂಡ್ ಬತ್ತಾಳೆ. ವಂಶೀಕರ ಮನ್ಲಿ ಹುಟ್ಟಿ ಬೆಳೆದಿದ್ದ ಹೆಣ್ಣಾದ್ರೆ ತಾನೇ ಇದು!'

'ಲೇ ಮುದುಕಿಮುಂಡೆ, ನಮ್ಮಪ್ಪನ ಮನೆಯೋರ್ನ ಅಂತೀಯಾ? ನಮ್ಮನೆ ಬಚ್ಚಲು ಗುಂಡೀಲಿ ಮಡಿ ಉಟ್ಕಂಡ್ರೆ ನಿಂಗೆ ಪುಣ್ಯ ಬರುತ್ತೆ.'

'ಅಕ್ಕಮ್ಮ, ನೀನು ಇನ್ನು ಮಾತಾಡಬ್ಯಾಡ, ಒಳಿಕ್ನಡಿ'–ಎಂದು ನಂಜು ಅಜ್ಜಿಯನ್ನು ಒಳಗೆ ಕರೆದುಕೊಂಡು ಹೋದಳು. ಮತ್ತೆ ಅಂಗಳಕ್ಕೆ ಬಂದು ಅತ್ತಿಗೆಗೆ ಹೇಳಿದಳು: 'ಅತ್ತಿಗ್ಯಮ್ಮ, ಸ್ವಲ್ಪ ನಿಧಾನವಾಗಿರಬಾರದೆ? ನಮ್ಮ ನಮ್ಮ ಮನೆ ವಿಷಯ ಬಾಕಿಯೋರಿಗೆ ತಿಳುದ್ರೆ ಹಿಂದ್ಗಡೆ ಆಡ್ಕಂಡ್ ನಗ್ತಾರೆ.'

'ಗಂಡನ ಮನ್ಲಿ ತಿನ್ನುಕ್ ಹಿಟ್ಟಿಲ್ದೆ ಬಾಣಂತನಕ್ಕೆ ಅಂತ ಬಂದಿದೀಯಾ. ನಂಗ್ ಬುದ್ಧಿ ಹೇಳುಕ್ ಬರ್‌ಬ್ಯಾಡ ಹೋಗು.'

ನಂಜು ಸುಮ್ಮನೆ ಒಳಗೆ ಹೋದಳು. ಕಮಲು ಮಲಗುವ ಕೋಣೆಗೆ ಹೋಗಿ ಚಾಪೆಯ ಮೇಲೆ ಮಕಾಡೆ ಮಲಗಿಕೊಂಡಳು. ಕೋಪಗೃಹದಲ್ಲಿ ಕೈಕಾದೇವಿಯು ಬಿದ್ದುಕೊಂಡಂತೆ ತಲೆ ಕೆದರಿಕೊಂಡು ಹಣೆಯ ಕುಂಕುಮ ಅಳಿಸಿಹಾಕಿ, ಮೊದಲೆ ದಪ್ಪವಾಗಿದ್ದ ಮುಖವನ್ನು ಇನ್ನೂ ಊದಿಸಿಕೊಂಡಳು. ಇನ್ನು ಯಾರೂ ಅವಳನ್ನು ಮಾತನಾಡಿಸಲಿಲ್ಲ.

ಒಂದು ಗಂಟೆಯ ಹೊತ್ತಿಗೆ ಕಲ್ಲೇಶ ಮನೆಗೆ ಬಂದು ಸ್ನಾನ ಮಾಡಿದ. ಹೆಂಡತಿಯ ಸುಳಿವು ಇಲ್ಲದುದನ್ನ ಅವನು ಗಮನಿಸಲಿಲ್ಲ. ಆದರೆ ಕಮಲು ಸುಮ್ಮನಿರುವುದು ಹೇಗೆ? ಒಳಗಿನಿಂದ ಪಿಟಿಪಿಟಿ ಬಯ್ದುಕೊಳ್ಳಲು ಪ್ರಾರಂಭಿಸಿದಳು. ಅವನ ಗಮನ ಅತ್ತ ಹರಿಯಿತು. ಓರೆ ಮಾಡಿದ್ದ ಕೋಣೆಯ ಬಾಗಿಲಿನ ಹತ್ತಿರ ನಿಂತುಕೊಂಡ. ನಿಮಿಷಕ್ಕೆ ನೂರು ಶಬ್ದದಷ್ಟಾದರೂ ವೇಗವಾಗಿ ಆಡುತ್ತಿದ್ದ ಅವಳ ಪಿಟಿಪಿಟಿ ಸ್ಪಷ್ಟವಾಗಿ ಕೇಳಿಸಿತು: 'ಸೂಳೇ ಮಕ್ಳ ಮನೆ ಹಾಳಾಗ. ಇವರ ವಂಶ ಅಡಗ. ಇವರ ಮನೆ ಗುಡಿಸಿ ಗುಂಡಾಂತರವಾಗ ಈ ಮುಂಡೇವೆಲ್ಲ ಮಾರಿ ಬಡಿದು ಸಾಯ. ಮುಂಡೇಮಕ್ಳು ಮುಂಡೇಮಕ್ಳು ಮುಂಡೇಮಕ್ಳು ಮುಂಡೆ ಮುಂಡೆ ಮುಂಡೆ, ಮುಂಡೇಮಕ್ಳ.....'

ಗದ್ದೆಯಲ್ಲಿ ದುಡಿದು ಬಿಸಿಲಿನಲ್ಲಿ ಮನೆಗೆ ಬಂದಿದ್ದ ಕಲ್ಲೇಶ ಕೇಳಿದ: 'ಯಾರುನ್ನೇ ಬೋಸುಡಿ ನೀನ್ ಬೈಕತ್ತಿರಾದು?'

'ಮುಂಡೇಮಕ್ಳು ಮುಂಡೇಮಕ್ಳು ಮುಂಡೇಮಕ್ಳು ಮುಂಡೇಮಕ್ಳು......' ಎಂದು ಮಂತ್ರ ಹೇಳುತ್ತಾ ಅವಳು ತನ್ನ ಎರಡು ಕೈಗಳನ್ನೂ ಜೋಡಿಸಿ ಚಟಾಕಿಯ ಸರ ಹಾರಿಸಿದಂತೆ ಪಟಪಟನೆ ನೆಟಿಕೆ ಮುರಿದಳು.

'ಗಾಂಚಾಲಿ ಬಾಂಚೋತ್'–ಎಂದು ಅವನು ಬಲಗೈ ಎತ್ತಿ ಅವಳ ಬೆನ್ನಿನ ಮೇಲೆ ಒಂದು ಸಲ ಗುದ್ದಿದ. ಮುಖ ತಿರುಗಿಸಿ ಅವಳು ಹೇಳಿದಳು: ಮುಂಡೇಮಗನೆ, ನನ್ನ ಗುದ್‌ತೀಯೇನೋ? ನಿನ್ನ ಎಡಗೈ ಸೇದಿ ಹೋದ ಹಾಗೆ ಬಲಗೈಯೂ ಸೇದಿಹೋಗುತ್ತೆ. ನನ್ನ ಶಾಪ ಅಂದ್ರೆ ಏನಂತ ತಿಳ್ಕಂಡಿದೀಯಾ?' ಇನ್ನೂ ಒಂದು ಗುದಿಗೆ ಬಿತ್ತು. ಅವಳು ಅದೇ ಉಸಿರಿನಲ್ಲಿ ಮುಂದುವರಿಸಿದಳು: 'ಖಾಯ್‌ಲೆ ಅಂತ ಬಂದ್ ಮಲಕ್ಕಂಡು ನಮ್ಮಪ್ಪನ ಮನ್ಲಿ ಎಂಟು ತಿಂಗ್ಳು ಒಂದೇ ಸಮಕ್ ತಿಂದ್ಯಲ್ಲೊ ಕೂಳ. ನನ್ನ ಗುದ್ದುಕ್ ಹ್ಯಾಗ್ ಕೈ ಬಂತೋ? ನಿನ್ನ ಕೈಗೆ ಹುಳ ಬೀಳ.'

ಅಷ್ಟರಲ್ಲಿ ನಂಜು ಅಲ್ಲಿಗೆ ಓಡಿಬಂದಳು. ಈ ಏಟಿನ ಶಬ್ದಕ್ಕೆ ಮಗು ಪಾರ್ವತಿ ಅಡಿಗೆಯ ಮನೆಯಲ್ಲಿಯೇ ಅಳಲು ಪ್ರಾರಂಭಿಸಿತು. ನಂಜು ಅಣ್ಣನ ಕೈ ಎಳೆಯುತ್ತಾ ಹೇಳಿದಳು: 'ಅಣ್ಣಯ್ಯಾ, ನಿಂಗೇನು ಬುದ್ಧಿ ಸ್ವಾದೀನದಲ್ಲಿದೆಯೋ ಇಲ್ಲವೋ? ಹೆಂಡ್ತೀನ ಹೀಗೆ ಹೊಡೀತಾರೆಯೆ? ಏನಾದ್ರೂ ಹೆಚ್ಚು ಕಮ್ಮಿ ಆದ್ರೆ ಏನು ಗತಿ? ಸುಮ್ಮನೆ ಒಳಗೆ ಬಂದು ಊಟ ಮಾಡು.'

'ನನ್ ಕೈ ಬಿಡು. ಈ ದನಗರ್ ಬಾಂಚೋತೀನ ಗತಿ ಕಾಣುಸ್ತೀನಿ ಇವತ್ತು'–ಎಂದು ಅವನು ಕೊಸರಿಕೊಂಡ.

ಮಲಗಿದ್ದ ಕಮಲು ಹುರಿ ಕಿತ್ತ ಬಿಲ್ಲಿನಂತೆ ಮೇಲೆ ಎದ್ದು ಅವನ ಕಡೆಗೆ ಬೆನ್ನು ತಿರುಗಿಸಿ ನಿಂತು ಸವಾಲು ಹಾಕಿದಳು: 'ಹೊಡೀಬೇಕೇನೋ? ರಟ್ಟೆ ಮುರೀಯೂವಷ್ಟು ಹೊಡೆಯೋ. ನಿನ್ನ ಇವತ್ತು ನೇಣುಗಟುಸ್ತೀನಿ. ಇವತ್ತೇ ಕಡೇ ದಿನ, ಹೊಡಿ.'

ನಂಜು ಅಣ್ಣನ ಕೈಯನ್ನು ಇನ್ನೂ ಬಲವಾಗಿ ಹಿಡಿದುಕೊಂಡು ಹೊರಗೆ ಎಳೆಯಲು ಶುರು ಮಾಡಿದಳು. ಅವಳೂ ಶಕ್ತಿವಂತೆಯಾದ ಹೆಂಗಸು. ಕಲ್ಲೇಶಿ ಕಡಿಮೆ ಶಕ್ತಿಯ ಆಳಲ್ಲ. ಇಬ್ಬರೂ ಕಂಠೀಜೋಯಿಸರ ಮಕ್ಕಳೇ. ಅವನು ಕೈ ಬಿಡಿಸಿಕೊಳ್ಳಲಿಲ್ಲ. ಎಡಗಾಲನ್ನು ಎತ್ತಿ ಕಮಲುವಿನ ಸೊಂಟಕ್ಕೆ ಒದೆದ. ಆ ರಭಸಕ್ಕೆ ಅವಳು ಮುರಿದುಬಿದ್ದಳು. 'ಬಾಂಚೋತ್, ಮತ್ತೆ ಗಾಂಚಾಲಿ ಮಾಡು ನಿಂಗ್ ಮಾಡ್ತೀನಿ'–ಎಂದು ಹೇಳಿ ಹೊರಗೆ ಬಂದ. 'ನಿನ್ ನೇಣುಗಟ್ಟುಸ್ತೀನಿ'–ಎಂದು ಅವಳು ಒಳಗಿನಿಂದ ಹೇಳಿದಳು.

ಕಲ್ಲೇಶ ಒಳಗೆ ಕೂತು ಊಟ ಮಾಡುತ್ತಿದ್ದ. ಈ ದಿನ ನಡೆದಂತಹ ಘಟನೆ ಆ ಮನೆಗೆ ಹೊಸದಲ್ಲ. ಆದರೆ ಈ ದಿನ ಅದು ಹದ್ದುಮೀರಿತ್ತು. ಇವಳನ್ನು ಏನು ಮಾಡಿ ಹತೋಟಿಗೆ ತರಬೇಕೆಂಬುದು ತಿಳಿಯದೆ ಅವನು ಮೌನವಾಗಿ ಹಿಟ್ಟನ್ನು ಮುರಿದು ಕೈಲಿ ಹಿಸುಕಿ ಹುಳಿಯಲ್ಲಿ ಹೊರಳಿಸಿ ಗುಳುಕ್ಕನೆ ನುಂಗುತ್ತಿದ್ದ. ಅವನ ಜೊತೆ ಕುಳಿತುಕೊಳ್ಳದೆ ನಂಜು, 'ನಾನು ಆಮ್ಯಾಲೆ ಮಾಡ್ತೀನಿ' ಎಂದು ಹೇಳಿ ಹಿತ್ತಿಲಕಡೆಯಲ್ಲಿ ಬಟ್ಟೆ ಒಗೆಯುತ್ತಿದ್ದಳು. ಅಕ್ಕಮ್ಮ ಹಿಟ್ಟಿನ ಚರುಕಿಗೆ ನೀರು ತುಂಬಿ ನೆನೆಯಹಾಕುತ್ತಿದ್ದಳು. ಅಷ್ಟರಲ್ಲಿ ನಂಜು ಹಿತ್ತಿಲಿನಿಂದ ಕೂಗಿಕೊಂಡಳು: 'ಅಣ್ಣಯ್ಯ, ಓಡ್ಬಾ, ಅತ್ತಿಗ್ಯಮ್ಮ ಭಾವಿಗ್ ಬಿದ್ರು.'

'ಎಲಾ ಇವ್ಳಾ'– ಎಂದು ಕಲ್ಲೇಶ ಒಂದೇ ದಾಪಿಗೆ ಹಿತ್ತಿಲ ಬಾವಿಯ ಹತ್ತಿರಕ್ಕೆ ಧಾವಿಸಿದ. ಅಕ್ಕಮ್ಮನೂ ತನ್ನ ಬಗ್ಗಿದ ಸೊಂಟವನ್ನು ಬಗ್ಗಿಸಿಕೊಂಡೇ ಓಡಿ ಬಂದಳು. ಬಾವಿಯ ಹತ್ತಿರ ಇದ್ದ ಹಗ್ಗವನ್ನು ಒಳಕ್ಕೆ ಬಿಟ್ಟು, 'ಇದ ಗಟ್ಟಿಯಾಗಿ ಹಿಡ್ಕೊ' ಎಂದು ನಂಜುವಿಗೆ ಹೇಳಿ ಕಲ್ಲೇಶ ಸರ್ರ್ ಎಂದು ಒಳಗೆ ಇಳಿದ. ನಂಜು ಬಾವಿಯ ಕಟ್ಟೆಗೆ ಕಾಲು ಒದೆಕೊಟ್ಟು ಹಗ್ಗ ಹಿಡಿದುಕೊಂಡಳು. ಅವನು ಅದನ್ನು ಹಿಡಿದುಕೊಂಡು ಜಾರಿ ಕೆಳಗೆ ಹೋದ.

ನಂಜು ಕೂಗಿಕೊಂಡದ್ದು ಪಕ್ಕದ ಮನೆಯ ಕಪಿನೀಪತಯ್ಯನವರ ಹೆಂಡತಿಗೆ ಕೇಳಿತು. 'ಕಮಲಮ್ಮ ಬಾವಿಗೆ ಬಿದ್ಲಂತೆ ಹೋಗೀ'–ಎಂದು ಗಂಡನಿಗೆ ಹೇಳುತ್ತಾ ಅವರೂ ಓಡಿ ಬಂದರು. ಕಪಿನೀಪತಯ್ಯನವರೂ ಕೂಗಿಕೊಂಡು ಬಂದರು. ಅದನ್ನು ಕೇಳಿದ ಅಕ್ಕಪಕ್ಕದವರೆಲ್ಲ ಸೇರಿದರು. ಸುದ್ದಿ ಮಿಂಚಿನಂತೆ ಹಬ್ಬಿ ಅಕ್ಕಪಕ್ಕದ ಕೇರಿಯವರೂ ಜಮಾಯಿಸಿದರು.

ಕಮಲು ಒಂದು ಸಲ ಮುಳುಗಿ ಎದ್ದು ಎರಡನೆಯ ಸಲ ಮುಳುಗಿದ್ದಳು. ಮೇಲೆ ಬಂದಾಗ, ಪ್ರಾಣ ಉಳಿಸಿಕೊಳ್ಳಬೇಕೆಂದು ಅವಳೂ ಎರಡು ಕೈಗಳನ್ನೂ ಬಡಿಯಲು ಆಡಿಸಿದಳು. ಸಾಯಬೇಕೆಂದು ಅವಳು ಬಾವಿಗೆ ಬೀಳಲಿಲ್ಲ. ಗಂಡನಿಗೆ ನೇಣುಗಟ್ಟಿಸುತ್ತೇನೆಂಬ ತನ್ನ ಮಾತನ್ನು ಸಾಧಿಸಲು ಮಾತ್ರ ಬಿದ್ದಿದ್ದಳು. ಆದರೆ ನೀರಿನಲ್ಲಿ ಒಂದು ಸಲ ಮುಳುಗಿ ಎದ್ದಮೇಲೆ ಜೀವದ ಆಶೆ, ಸಾವಿನ ಭಯಗಳು ತುಂಬಿಕೊಂಡು ಒಂದು ಸಲ ಕೂಗಿಕೊಂಡಿದ್ದಳು. ಅದು ಮೇಲಿದ್ದ ನಂಜುವಿಗೆ ಕೇಳಿಸುವ ಮೊದಲೇ ನೀರು ಎರಡನೆಯ ಬಾರಿಗೆ ಒಳಗೆ ಎಳೆದುಕೊಂಡಿತ್ತು. ಮತ್ತೆ ನೀರು ಕುಡಿಸಿ ಕೊನೆಯ ಸಲದ ಅವಕಾಶಕ್ಕಾಗಿ ಗಂಗಮ್ಮ ತಾಯಿ ಅವಳನ್ನು ಮೇಲೆ ಎತ್ತಿದಳು. ಕಲ್ಲೇಶಿ ಗಟ್ಟಿಯಾಗಿ ಜಡೆ ಹಿಡಿದುಕೊಂಡ. ಅಷ್ಟರಲ್ಲಿ ಕಪಿನೀಪತಯ್ಯ ಮೊದಲಾಗಿ ಮೇಲುಗಡೆ ಜನಗಳು ಸೇರಿದ್ದರು. 'ಹಗ್ಗ ಸ್ವಲ್ಪ ಮೇಲೆ ಎಳ್ಕ'–ಎಂದು ಅವನು ಕೆಳಗಿನಿಂದ ಕೂಗಿ ಹೇಳಿದ. ಎಡಗೈಲಿ ಅವನು ಹಗ್ಗ ಹಿಡಿದಿದ್ದ. ಬಲಗೈಲಿ ಅವಳ ಜಡೆಯಿತ್ತು. ಈಗ ಅವನೇ ಎದೆಗಿಂತ ಕೆಳಗಿನ ಮಟ್ಟಕ್ಕೆ ನೀರಿನಿಂದ ಮೇಲೆ ಬಂದಿದ್ದ. ಅವಳ ಭುಜ ನೀರಿನ ಮೇಲೆ ಇತ್ತು. ಅವನ ಎಡಗೈಗೆ ಸಾಕಷ್ಟು ಬಿಗಿ ಸಿಕ್ಕಿರಲಿಲ್ಲ. ಈ ಭಾರವನ್ನು ಹೆಚ್ಚು ತಡೆಯುವ ಶಕ್ತಿ ಆ ಕೈಗೆ ಇರಲಿಲ್ಲ. ಬಾವಿ ಇಳಿಯಲು ಮಾಡಿದ್ದ ಪೊಟರೆಯನ್ನು ಹುಡುಕಿ ಅದಕ್ಕೆ ಕಾಲುಗಳನ್ನು ಅಡ್ಡ ಕೊಟ್ಟು ಭದ್ರ ಮಾಡಿಕೊಂಡ.

'ಅಯ್ಯಯ್ಯಪ್ಪಾ, ನಂಗ್ ಹೆದರಿಕೆಯಾಗುತ್ತೆ. ಬ್ಯಾಗ ಮ್ಯಾಲುಕ್ಕೆಳ್ಕಳೀ'–ಎಂದು ಅವಳು ಬಡಬಡಿಸಲು ಮೊದಲು ಮಾಡಿದಳು.

ಅಷ್ಟರಲ್ಲಿ ಮೇಲಿದ್ದವರು ಒಂದು ಪುಟ್ಟ ಬಣ್ಣದ ತೊಟ್ಟಿಲನ್ನು ತಂದು ಬಂದೂಬಸ್ತಾದ ಹಗ್ಗ ಕಟ್ಟಿ ನಿಧಾನವಾಗಿ ಬಾವಿಯ ಒಳಗೆ ಬಿಟ್ಟರು. ಅದನ್ನು ನೀರಿನ ತನಕ ಇಳಿಸಿಸಿ ಕಲ್ಲೇಶ ಅವಳನ್ನು ಅದರಲ್ಲಿ ಎತ್ತಿ ಕೂರಿಸಿದ. ' ಹಗ್ಗ ಎಳೀರಿ ' –ಎಂದು ಅವನು ಕೂಗಿ ಹೇಳಿದರೆ ಇವಳು, ' ನಂಗ್ ಹ್ಯದ್‌ರಿಕೆಯಾಗುತ್ತೆ. ನಾವಲ್ಲೆ ' ಎಂದು ಬಡಬಡಿಸಲು ತೊಡಗಿದಳು. ತೊಟ್ಟಿಲು ಮೇಲೆ ಹೋಗುತ್ತಿರುವಾಗ ಇವಳು ಕಪಿಯಂತೆ ನೆಗೆದು ಕುಣಿದು ಮಾಡಿ ಕೆಳಗಿರುವ ತನ್ನ ಮೇಲೆ ಬಿದ್ದರೆ ಆ ರಭಸಕ್ಕೆ ತಾನು ಉಳಿಯುವುದಿಲ್ಲವೆಂದು ಯೋಚಿಸಿದ ಕಲ್ಲೇಶ, ತಾನು ಉಟ್ಟಿದ್ದ ಪಂಚೆ ಬಿಚ್ಚಿ ಅವಳನ್ನು ಸೇರಿಸಿ ತೊಟ್ಟಿಲಿನ ಕಟ್ಟಿಗೆ ಕಟ್ಟಿದ. ಮೈಮೇಲೆ ಹಾಕಿಕೊಂಡಿದ್ದ ಬನೀನು ಬಿಚ್ಚಿ ಅದನ್ನೆ ಲಂಗೋಟಿ ಮಾಡಿಕೊಂಡ. ತೊಟ್ಟಿಲು ನಿಧಾನವಾಗಿ ಮೇಲಕ್ಕೆ ಹೋಯಿತು. ನಾಲ್ಕು ಜನ ಗಂಡಾಳುಗಳು ಸೇರಿ ಎಳೆದ ತೊಟ್ಟಿಲಿನಲ್ಲಿ ಕೂತು ಒಂಬತ್ತು ಮೊಳದ ಪಂಚೆಯಿಂದ ಕಟ್ಟಿಸಿಕೊಂಡ ಅವಳು ಗೌರಿ ಹಬ್ಬದ ದಿನ ಕೆರೆಯಿಲ್ಲದ ಊರಿನಲ್ಲಿ ಬಾವಿಯ ಒಳಗಿನಿಂದ

ಬರುವ ಗೌರಮ್ಮನಂತೆ ಮೇಲೆ ಬಂದಳು.
ಅವಳ ಹಿಂದೆಯೇ ಕಲ್ಲೇಶನೂ ಮೇಲೆ ಹತ್ತಿ ಬಂದ. ಒಳಗೆ ಸಾಕಷ್ಟು ನೀರು ಹೋಗಿ ಅವಳ ಹೊಟ್ಟೆ ದಪ್ಪವಾಗಿತ್ತು. ಭಯ, ಗಾಬರಿ, ನಾಚಿಕೆ ಮೊದಲಾದುವೆಲ್ಲ ಸೇರಿ ಕಣ್ಣು ಕೆಂಪಗಾಗಿದ್ದವು. ಮೇಲಿನಿಂದ ಬೀಳುವಾಗ ಬಾವಿಯ ಒಳದಡಕ್ಕೆ ಸವರಿಕೊಂಡು ಹೋಗಿ ಭುಜ, ಬೆನ್ನು ಮತ್ತು ತಲೆಯ ಒಂದು ಪಾರ್ಶ್ವದಿಂದ ರಕ್ತ ತೊಟ್ಟಿಕ್ಕುತ್ತಿತ್ತು. ಮೊದಲು ಅವಳನ್ನು ನೆಲದ ಮೇಲೆ ಮಕಾಡೆ ಮಲಗಿಸಿ ಕಲ್ಲೇಶ ಸೊಂಟವನ್ನು ನಿಧಾನವಾಗಿ ಅಮುಕಿದ. ಹೊಟ್ಟೆಯೊಳಗೆ ಸೇರಿದ್ದ ನೀರು ಬಾಯಿಯಿಂದ ಹೊರಗೆ ಬಂದು ಕಕ್ಕಿಕೊಂಡಳು. ರೋಜಾಸೊಪ್ಪು ಅರೆದು, ರಕ್ತ ಬರುತ್ತಿದ್ದ ಜಾಗವನ್ನು ಒರೆಸಿ ಮೆತ್ತಿದಾಗ ಅಯ್ಯಯ್ಯಮ್ಮ ಎಂದು ಹೊಡೆದುಕೊಳ್ಳಲು ಪ್ರಾರಂಭಿಸಿದಳು.
ಕಲ್ಲೇಶ ಅಲ್ಲಿ ನೆರೆದಿದ್ದವರ ಕಡೆ ತಿರುಗಿ ಹೇಳಿದ: ‘ಇಲ್ಲೇನು ಕೆಲಸ, ನೀವೆಲ್ಲ ಮನೆಗೆ ಹೋಗಿ.’ ಜನಗಳು ಹೋಗಲೊಲ್ಲರು. ಆದರೆ ಕಲ್ಲೇಶ, ಅಕ್ಕಮ್ಮ, ಪಕ್ಕದ ಮನೆಗಳ ಇಬ್ಬರು ಗಂಡಸರು ಸೇರಿ ಎಲ್ಲರನ್ನು ಅಲ್ಲಿಂದ ಅಟ್ಟಿದರು.
‘ಬಿಸಿಬಿಸಿಯಾಗಿ ಅವಳಿಗೆ ಒಂದು ಬಟ್ಲು ಕಾಫಿ ಮಾಡಿಕೊಡಿ.’ –ಎಂದು ಕಪಿನೀಪತಯ್ಯನವರ ಹೆಂಡತಿ ಪುಟ್ಟಮ್ಮ ಹೇಳಿದರು.
‘ಈ ಮುಂಡ್ಹೇತ್ತದಕ್ಕೆ ಕಾಫಿ ಬೇರೆ ಕೇಡು. ಇವರವ್ವನ ಮಾದಿಗರು …….’–ಎಂದು ಕಲ್ಲೇಶ ಬೇರೆ ಪಂಚೆ ಉಟ್ಟುಕೊಳ್ಳಲು ಹೋದ. ಅವನು ಪೋಲೀಸು ನೌಕರಿಯಲ್ಲಿದ್ದು ಕಾಫಿ ಕುಡಿಯುವುದು ಕಲಿತಿದ್ದವನು. ಆದರೆ ದಿನವೂ ಬೇಕೆಂಬ ಚಟವಿರಲಿಲ್ಲ. ಆದರೆ ಹಾಸನದಂತಹ ಟೌನಿನಲ್ಲಿದ್ದು, ಅದು ಪೋಸ್ಟ್‌ಮ್ಯಾನರ ಮಗಳಾದ ಕಮಲು ಹಳ್ಳಿಗೆ ಬಂದರೂ ಕಾಫಿ ಇಲ್ಲದಿದ್ದರೆ ಹ್ಯಾಗೆ? ಆದುದರಿಂದ ಅವರ ಮನೆಯಲ್ಲಿ ಕಾಫಿ ಪುಡಿ ಇತ್ತು. ನಂಜುವೆ ಹೋಗಿ ಒಂದು ಲೋಟ ಮಾಡಿ ತಂದು ಅತ್ತಿಗೆಗೆ ಕೊಟ್ಟಳು. ಒಂದು ಸಲ ಬಾಯಿಯಿಂದ ಹೀರಿದ ಕಮಲ ಲೋಟವನ್ನು ನೆಲದ ಮೇಲೆ ಇಟ್ಟು, ‘ಥೂ, ಈ ಹಳ್ಳಿ ಮುಂಡೇವುಕ್ಕೆ ನ್ಯಟ್ಟಗೆ ಕಾಫಿ ಮಾಡಕ್ಕ್ ಬರಲ್ಲ. ಯಾವತ್ತಾದ್ರೂ ಕುಡ್ದಿದ್ರೆ ತಾನೇ’–ಎಂದುದು ಕಲ್ಲೇಶನಿಗೆ ಕೇಳಿಸಿತು. ಅವನು ಹತ್ತಿರ ಬಂದು ಆ ಲೋಟವನ್ನು ಕೈಗೆ ತೆಗೆದುಕೊಂಡು ಅವಳ ತಲೆಯ ಮೇಲೆ ಸುರಿದ. ಅವಳು ಮತ್ತೆ ಬಾಯಿ ತೆಗೆಯಲಿಲ್ಲ.
ಅವನು ಒಳಗೆ ಹೋದ, ‘ಏಳೇ, ಬ್ಯಾರೆ ಸೀರೆ ಉಟ್ಕ’ –ಎಂದು ಅಕ್ಕಮ್ಮ ಅವಳಿಗೆ ಹೇಳಿದಳು. ಅಲ್ಲಿ ಉಳಿದಿದ್ದ ಇಬ್ಬರು ಗಂಡಸರು ಒಳಗೆ ಹೋಗಿ ಅಲ್ಲಿ ಬರೀ ಹೆಂಗಸರನ್ನೇ ಬಿಟ್ಟರು. ಅವಳು ಮೇಲೆ ಏಳಲಿಲ್ಲ, ಒದ್ದೆಯಾದ ಸೀರೆಯನ್ನು ಬದಲಾಯಿಸಲೂ ಇಲ್ಲ. ಕೆದರಿದ ಒದ್ದೆ ಕೂದಲನ್ನು ಬಿಟ್ಟುಕೊಂಡು ಬಾವಿಯ ದಡದಲ್ಲಿಯೇ ಕುಕ್ಕುರು ಬಡಿದಿದ್ದಳು.
ಆ ದಿನ ರಾತ್ರಿಯೂ ಕಮಲೂ ಊಟ ಮಾಡಲಿಲ್ಲ. ಕಲ್ಲೇಶ ತನ್ನ ಪಾಡಿಗೆ ತಾನು ಊಟ ಮುಗಿಸಿದ. ನಂಜು ಬೇಡವೆಂದರೂ, ಬಸುರಿಯೆಂದು ಬಲವಂತಮಾಡಿ ಅಕ್ಕಮ್ಮ ಬಡಿಸಿದಳು. ಅಕ್ಕಮ್ಮನದಂತೂ ರಾತ್ರಿ ಊಟವಿಲ್ಲ. ವಯಸ್ಸಾಗಿ ಅರಗುವುದಿಲ್ಲವೆಂದು ಫಲಹಾರ ಸಹ ಬಿಟ್ಟು ಆಗಲೇ ಹತ್ತು ವರ್ಷದ ಮೇಲೆ ಆಗಿತ್ತು.
ರಾತ್ರಿ ಕಮಲು ತನ್ನ ಮಲಗುವ ಕೋಣೆಯಲ್ಲಿ ಬಿದ್ದುಕೊಂಡಳು. ಅಕ್ಕಮ್ಮ, ನಂಜು, ಇಬ್ಬರನ್ನು ಮುಂದಿನ ಮತ್ತು ಹಿಂದಿನ ಬಾಗಿಲುಗಳಿಗೆ ಹೊಂದಿಕೊಂಡು ಮಲಗುವಂತೆ ಕಲ್ಲೇಶ ಸೂಚನೆ ಕೊಟ್ಟ. ಮತ್ತೆ ರಾತ್ರಿಯ ಹೊತ್ತು ಎದ್ದು ಅವಳು ಹೊರಗೆ ಹೋಗಿ ಬಾವಿಗೆ ಬಿದ್ದಾಳೆಂದು ಪೋಲೀಸ್ ಇಲಾಖೆಯಲ್ಲಿದ್ದ ಅವನು ಶಂಕಿಸಿದ. ಅವರಿಬ್ಬರೂ ಹಾಗೆ ಮಲಗಿದುದರಿಂದ ಯಾರೂ ರಾತ್ರಿ ಹೊತ್ತು ಬಾಗಿಲು ತೆಗೆದು ಹೊರಗೆ ಹೋಗಲು ಸಾಧ್ಯವಿರಲಿಲ್ಲ. ಕಲ್ಲೇಶ ಕೋಣೆಯ ಬಾಗಿಲಿನಲ್ಲಿ ಹಾಸಿಗೆ ಹಾಕಿಕೊಂಡು ಮಲಗಿದ. ಅವನಿಗೆ ಬೇಗ ನಿದ್ರೆ ಹತ್ತಲಿಲ್ಲ. ಏನೇನೋ ಯೋಚನೆ. ತನಗೆ ಎಂತಹ ಹೆಣ್ಣು ಗೊತ್ತು ಮಾಡಿದ ಎಂದು ತಂದೆಯ ಮೇಲೆ ಕೋಪ. ಹೊರಗೆ ಯಾರಯಾರದೋ ನೆನಪು. ಎಷ್ಟೋ ಹೊತ್ತಿನ ಮೇಲೆ ಕಣ್ಣು ಹೊತ್ತಿಕೊಂಡು ಬಂತು.
ಆದರೆ ಇದ್ದಕ್ಕಿದ್ದ ಹಾಗೆಯೇ ಎಚ್ಚರವಾಯಿತು. ಅಡಿಗೆ ಮನೆಯಲ್ಲಿ ಏನೋ ಬೆಳಕು ಕಂಡಹಾಗೆ ಆಯಿತು. ಮಲಗಿದ್ದವನು ತಲೆ ಎತ್ತಿ ಕೋಣೆಯೊಳಗೆ ನೋಡಿದರೆ ಅವಳು ಇರಲಿಲ್ಲ. ಶಬ್ದ ಮಾಡದೆ ಎದ್ದು, ಅಡುಗೆ ಮನೆಯ ಬಾಗಿಲಿಗೆ ಬೆಕ್ಕಿನ ಹೆಜ್ಜೆ ಇಟ್ಟುಕೊಂಡು ಹೋಗಿ ನೋಡುತ್ತಾನೆ: ಒಲೆಯ ಮುಂದೆ ಕುಳಿತಿದ್ದಾಳೆ. ತಲೆಕೂದಲು ಕೆದರಿಯೇ ಇದೆ. ದೇವರ ಗೂಡಿನ ಸಣ್ಣ ಸೊಡರು ಉರಿಯುತ್ತಿದೆ. ಅವಳು ಅದೇನೋ ತಿನ್ನುತ್ತಿರುವಂತೆ ಕಾಣಿಸಿತು. ಮೆಲ್ಲನೆ ಇನ್ನೊಂದು ಹೆಜ್ಜೆ ಮುಂದೆ ಹೋಗಿ ನೋಡುತ್ತಾನೆ: ರಾತ್ರಿ ಊಟ ಬೇಡವೆಂದು ಹಟ ಮಾಡಿದ್ದ ಅವಳು ಅನ್ನದ ಚರುಕಿಗೆ ಉಳಿ ಸುರಿದು ಕಲಸಿಕೊಂಡು ಗದುಗುತ್ತಿದ್ದಾಳೆ. ಪಕ್ಕದಲ್ಲಿಯೇ ಮಜ್ಜಿಗೆಯ ಮಡಿಕೆ.
ಅವನು ಶಬ್ದ ಮಾಡದೆ ಹಾಗೆಯೇ ಹಿಂತಿರುಗಿ ಬಂದು ಮಲಗಿಕೊಂಡ. ಅವಳು ಹಿಂದೆ ಎಷ್ಟೋ ದಿನ ಹಟ ಮಾಡಿ ಊಟ ಬಿಟ್ಟಿದ್ದಳು. ನಂತರ ಎಲ್ಲರೂ ಮಲಗಿದ ಮೇಲೆ ಹೀಗೆ ಏಕಾಂತದಲ್ಲಿ ನಿಶಾಭೋಜನ

ಮುಗಿಸಿ ಏನೂ ತಿಳಿಯದವಳಂತೆ ಬಂದು ಮಲಗಿ ನಿದ್ರೆ ಮಾಡಿ ನಾಳೆ ಬೆಳಿಗ್ಗೆ ಎದ್ದು, 'ನಿನ್ನೆ ರಾತ್ರಿ ನನ್ನ ಉಪವಾಸ ಕೆಡವಿದ್ರು, ಇವರ ಮನೆ ಹಾಳಾಗ' ಎಂದು ಪಿಟಿ ಪಿಟಿ ಬೈದುಕೊಂಡು ನೆಟಿಕೆ ಮುರಿದಳು. ಅವಳು ಹಾಗೆ ಮಾಡುತ್ತಾಳೆ ಎಂಬುದಕ್ಕೆ ರಾತ್ರಿ ಮುಚ್ಚಿಟ್ಟಿದ್ದ ಅನ್ನ ಮಾಯವಾಗುತ್ತಿದ್ದುದೇ ಸಾಕ್ಷಿಯಾಗುತ್ತಿತ್ತು. ಆದರೆ ಆದಿನ ಅದನ್ನು ಪ್ರತ್ಯಕ್ಷ ಕಂಡಂತೆ ಆಯಿತು. ಇನ್ನೊಂದು ಮದುವೆ ಮಾಡಿಕೊಂಡು ಬಿಡಬೇಕು, ಈ ಹೀನಸುಳಿ ಮುಂಡೇದ ಒದ್ದು ಓಡಿಸಬೇಕು, ಎಂದು ಅವನು ಮನಸ್ಸಿನಲಿ ್ಲಯೇ ಯೋಚಿಸುತ್ತಿದ್ದ. ಅಷ್ಟರಲ್ಲಿ ಹೊರಗಡೆ ಮೋಟಾರಿನದೋ ಕಾರಿನದೋ ಆಗುವಂತಹ ಶಬ್ದವಾಯಿತು. ಯಾವುದಿರಬಹುದು, ಯಾರಮನೆಗಿರಬಹುದು ಎಂದು ಅವನು ಯೋಚಿಸುತ್ತಿರುವಂತೆಯೇ ಜನಗಳು ಕಾರಿನಿಂದ ಇಳಿದು ಬಂದು ಇವರ ಮನೆಯ ಕದವನ್ನೇ ತಟ್ಟಿದರು. ' ಯಾರು? ' –ಎನ್ನುತ್ತ ಇವನು ಎದ್ದು ದೀಪ ಹೊತ್ತಿಸಿ ಬಾಗಿಲಿಗೆ ಒತ್ತಿ ಮಲಗಿದ್ದ ಅಕ್ಕಮ್ಮನನ್ನು ಎಬ್ಬಿಸಿ ಕದ ತೆಗೆದ. ಬಂದಿದ್ದವರು ಅವರ ಮಾವನವರು, ಅತ್ತೆ. ಜೊತೆಗೆ ಅವರ ಸಂಬಧಿಕರೇ ನಾಲ್ಕು ಜನ. ಕಾರಿನ ಡ್ರೈವರ್ ಯಾರೋ ಅವನಿಗೆ ಗೊತ್ತಿಲ್ಲ. ಅವರನ್ನು ಕಂಡು ಇವನಿಗೆ ಆಶ್ಚರ್ಯ.

'ಕಮಲು ಹ್ಯಾಗಿದಾಳೆ? ' –ಗೋಳೋ ಎನ್ನುತ್ತಲೇ ಅವಳ ತಾಯಿ ಒಳಗೆ ಬಂದರು. 'ಅಡಿಗೆ ಮನೇಲಿ ನೋಡಿ'– ಅವನು ಹೇಳಿದ.

ಅವರು ಅಲ್ಲಿಗೆ ಹೋಗಿ ನೋಡಿದರೆ ಅವಳಿಲ್ಲ. ದೇವರ ಸೊಡರನ್ನು ಅದೇ ತಾನೇ ಆರಿಸಿದ ವಾಸನೆ ಬರುತ್ತಿದೆ. ಎಲ್ಲಿ ಹೋದಳು ಎಂದು ಅವನ ಕೋಣೆಗೆ ಬಂದು ನೋಡಿದರೆ ಚಾಪೆಯ ಮೇಲೆ ಮುಕಾಡೆ ಮಲಗಿ, ತಾನು ಮೇಲೆ ಎದ್ದೇ ಇರಲಿಲ್ಲವೆಂಬಂತೆ ಕಣ್ಣು ಮುಚ್ಚಿಕೊಂಡಿದ್ದಾಳೆ.

'ನೋಡಿ, ನೀವು ಬಂದಾಗ ಇವಳು ಕದ್ದು ಅಡಿಗೆ ಮನೇಲಿ ಕೂತ್ಕೊಂಡು ಅನ್ನದ ಚರುಕಿನಲ್ಲೇ ಅನ್ನ ಹುಳಿ ತಿಂತಿದ್ಲು. ಈಗ ದೀಪ ಉರುಬಿಬಿಟ್ಟು ಇಲ್ಲಿ ಬಂದು ಏನೂ ತಿಳಿದೋಳ ಹಾಗೆ ಮಲಗಿದಾಳೆ. ನೀವೇ ನೋಡಿ ಬನ್ನಿ'–ಎಂದು ಕೈಲಿ ದೀಪದ ಬುಡ್ಡಿ ಹಿಡಿದು ಅವರನ್ನೆ ಕರೆದುಕೊಂಡು ಹೋಗಿ ತೋರಿಸಿದ.

'ಈಗ ಹೋಕ್ಕಳ್ಲಿ. ಏನಾಯ್ತು, ಯಲ್ಲಾ ಆರೋಗ್ಯ ತಾನೆ?' –ಮಾವನವರು ಕೇಳಿದರು.

'ನೀವು ಯಾಕೆ ಬಂದ್ರಿ? ಏನು ಸಮಾಚಾರ? '–ಮಾಜಿ ಪೋಲೀಸ್ ಕಾನಿಸ್ಟೇಬಲ್ ಕಲ್ಲೇಶ ಕೇಳಿದ. 'ನಮಗೆ ನೀನೇ ಟೆಲಿಫೋನ್ ಮಾಡಿಸಿದ್ದೆಯಲ್ಲ: ಕಮಲು ಬಾವಿಗೆ ಬಿದ್ದಿದ್ದಾಳೆ, ಬನ್ನಿ ಅಂತ.'

'ಹೂಂ. ಹೂಂ. ನಿಮಗೆ ಬಂದು ಫೋನ್ ಮಾಡ್ಸದೋರು ಯಾರು ಹೇಳಿ. ಗಡಿಬಿಡೀಲಿ ನಂಗೆ ಮರೆತೇ ಹೋಯ್ತು.'

'ಯಾವನಾದ್ರೆ ಇವರಿಗೇನಾಗ್ಬೇಕು'–ಎಂದು ಕಮಲು ಒಳಗಿನಿಂದ ಚಟಾರನೆ ಮಾತನಾಡಿದಳು.

ಅಂತು ಮಾಡಿಸಿದವಳು ಅವಳೇ ಎಂಬುದು ಎಲ್ಲರಿಗೂ ಗೊತ್ತಾಯಿತು. ಅವಳ ಪರವಾಗಿ ಮಾಡಿದವರು ಯಾರು ಎಂಬುದು ಮಾತ್ರ ತಿಳಿಯಲಿಲ್ಲ. ಅಷ್ಟು ಪತ್ತೆ ಮಾಡುವುದೇನೂ ಕಷ್ಟವಲ್ಲವೆಂದು ಕಲ್ಲೇಶ ಆ ಮಾತನ್ನು ಮುಂದಕ್ಕೆ ಕೆದಕಲಿಲ್ಲ. ಅವನು ನೇರವಾಗಿ ಪಕ್ಕದ ಮನೆಗೆ ಹೋಗಿ ಬಾಗಿಲು ತಟ್ಟಿದ. ಕಾರು ಬಂದ ಶಬ್ದಕ್ಕೆ ಅವರಿಗೂ ಎಚ್ಚರವಾಗಿತ್ತು. ಕಪಿನೀಪತಯ್ಯ, ಪುಟ್ಟಮ್ಮ, ಇಬ್ಬರನ್ನೂ ಮನೆಗೆ ಕರೆದುಕೊಂಡು ಬಂದ. ಹಾಗೆಯೇ ಇನ್ನೊಂದು ಪಕ್ಕದ ಮನೆಯವರನ್ನೂ ಎಬ್ಬಿಸಿ ತಂದು ಅವನೇ ಮಾತನ್ನು ಪ್ರಾರಂಭಿಸಿದ:

'ನಾವು ಮಾತಾಡಿದ್ರೆ ಸುಳ್ಳು ಅನ್ನಿಸ್‌ಭೌದು. ಇವರನ್ನೇ ಕೇಳಿ. ಕಪಿನೀಮಾವಯ್ಯ, ಇರೋ ಸಮಾಚಾರ ನೀವೇ ಇವರಿಗೆ ಹೇಳಿ.'

ಅಕ್ಕಪಕ್ಕದವರು ತಾವಾಗಿಯೇ ಮಾತನಾಡಲಿಲ್ಲ. ಕಲ್ಲೇಶನೇ ನಡೆದುದನ್ನು ಹೇಳಿದ. ತಾನು ಒಡೆದುದಾಗಿ ಹೇಳಿದನೇ ಹೊರತು ಒದೆದುದನ್ನು ಆಡಲಿಲ್ಲ. ಅವನು ಹೇಳಿದ್ದೆಲ್ಲ ಸತ್ಯವೆಂದು ಅಕ್ಕಪಕ್ಕದವರು ಬಾಯಿಬಿಟ್ಟು ಒಪ್ಪಿಕೊಂಡರು. ಕಲ್ಲೇಶನ ಅತ್ತೆ ಮಾತನಾಡಿದರು: 'ಆದ್ರೂನೂ ನಾನು ಸಾಕಿದ ಹೆಣ್ಣುಮಗೂನ ನಿಮ್ಮ ಮನೆ ಹಳ್ಳಿಗಾಡಿಗೆ ಕಳ್ಸಿದೀವಿ. ನೀವು ಅನುಸರಿಸಿಕೊಂಡು ಹೋಗ್ಬೇಕು.'

ಆದರೆ ಮಾವ ಪೋಸ್ಟ್‌ಮ್ಯಾನ್ ರಂಗಣ್ಣನವರು, ತಗ್ಗಿಸಿದ ತಲೆಯನ್ನು ಮೇಲೆ ಎತ್ತಲಿಲ್ಲ. ಕಲ್ಲೇಶ ಅವರನ್ನೇ ಕೇಳಿದ: 'ನೀವು ಈಗ ಹೇಳಿ. ಅದ್ಯಾವ ಸೂಳೇಮಗ ನಿಮಗೆ ಫೋನು ಮಾಡಿಸ್ದೋನು?'

'ನನ್ನ ಬಾಯಲ್ಲಿ ಸುಳ್ಳು ಬರುಲ್ಲ. ಫೋನ್ ಬಂದದ್ದು ಚೆನ್ನರಾಯಪಟ್ಟಣದಿಂದ. ಅಲ್ಲಿಯ ಎಲೆಕ್ಟ್ರಿಕ್ ಕ್ಯಾಂಪಿನಿಂದ ಹಾಸನದ ಕ್ಯಾಂಪಿಗೆ ಮಾತಾಡಿದರಂತೆ. ಪೋಸ್ಟ್‌ಮ್ಯಾನ್ ರಂಗಣ್ಣನೋರಿಗೆ ತಕ್ಷಣ ತಿಳಿಸಬೇಕು ಅಂದರಂತೆ. ದಿನಾ ಕಾಗದ ಕೊಡುಕೆ ಆ ಕಡೆ ಹೋಗ್ತಿನಲಾ ನಾನು. ನನ್ನ ಗುರುತಿತ್ತು. ಎಲೆಕ್ಟ್ರಿಕ್ ಫೋರ್‌ಮ್ಯಾನ್ ಬಂದು ವಿಷಯ ಹೇಳ್ದ. ಕಲ್ಲೇಶ ಅನ್ನೋರೇ ಫೋನ್ ಮಾಡಿದ್ರು ಅಂದ. ಇದೇನಪ್ಪ ಗ್ರಾಚಾರ ಅಂತ ಇಪ್ಪತ್ತೈದು ರೂಪಾಯಿ ಬಾಡಿಗೆ ಗೊತ್ತುಮಾಡಿ ಓಡಿಬಂದ್ವು.'

'ಈಗ ಹ್ಯಾಗೂ ಬಂದಿದೀರಾ. ಜೊತೇಲಿ ಕಾರಿದೆ. ನಿಮ್ಮ ಮಗಳಿಗೂ ಬೇಜಾರು, ಕರ್ಕಂಡು ಹೋಗಿ.'

'ಒಂದ್ ನಾಕು ದಿನ ಬಂದು ಸುದಾರಿಸ್ಕಳ್ಲಿ'–ಎಂದು ಅತ್ತೆ ತಕ್ಷಣ ಹೇಳಿದರು.

ಆದರೆ ಅಷ್ಟೇ ತಕ್ಷಣ ಮಾವನವರು ಎಂದರು: 'ಬ್ಯಾಡ, ಬ್ಯಾಡ. ಗಂಡ ಹೆಂಡ್ತಿ ಜಗಳ ಕಾದಿರುವಾಗ ನಾವು

ಮಗಳನ್ನ ಕರ್‌ಕಂಡು ಹೋಗ್‌ಬಾರ್‌ದು. ಅವರು ನಗ್ತಾನಗ್ತಾ ಇರುವಾಗ ಬರಬೇಕು ಹೋಗಬೇಕು.'
'ನಮ್ಮ ಮಗೂನ ನಾವು ತೌರುಮನೆಗೆ ಕರ್ಕಂಡ್ ಹೋಗೂಕ್ಕೆ ಏನೂ ಅಂದ್ರೆ?'–ಅವರ ಹೆಂಡತಿ ಕೇಳಿದರು.
'ನಿಂಗೇನು ಗೊತ್ತಾಗುತ್ತೆ, ಸುಮ್ನಿರು. ಈ ಸಮಯದಲ್ಲಲ್ಲ'–ಯಜಮಾನರು ನುಡಿದರು.
'ನಾನು ಬಂದೇ ಬತ್ತೀನಿ'–ಎಂದು ಮೊದಲ ಬಾರಿಗೆ ಮಾತನಾಡಿ ಕಮಲು ಮಲಗಿದಲ್ಲಿಂದ ಮೇಲೆ ಎದ್ದು ಬಂದು ತಾಯಿಯ ಪಕ್ಕದಲ್ಲಿ ನಿಂತಳು.
'ಅಮ್ಮಾ, ನಾನು ಹೇಳ್ದಾಗೆ ಕೇಳು. ನೀನು ಈಗ ಬರ್ಬಾರ್ದು'–ಎಂದು ತಂದೆ ಹೇಳಿದ್ದನ್ನು ಅವಳು ಕೇಳಲಿಲ್ಲ. ಇನ್ನು ನಿಧಾನ ಮಾಡಬಾರದೆಂದು ಯೋಚಿಸಿದ ಅವರು ಮೇಲೆ ಎದ್ದು, ತಮ್ಮ ಜೊತೆಗೆ ಬಂದಿದ್ದವರನ್ನು, 'ಯಲ್ಲಾ ನಡೀರಿ, ಕಾರಿನಲ್ಲಿ ಕೂತ್ಕಳಿ. ಊರಿಗೆ ಹೋಗ್‌ಬೇಕು'–ಎಂದು ಎಬ್ಬಿಸಿಯೇ ಬಿಟ್ಟರು.
'ನಮ್ಮ ಹೆಣ್ಮಗು.....' ಎನ್ನುತ್ತಿದ್ದ ಹೆಂಡತಿಗೆ, 'ಉದ್ದಕೂ ನಿನ್ನ ಮಾತಿನಂತೆ ನಡೆದು ಹೀಗಾಯ್ತು. ಇನ್ನು ಬಾಯಿ ಮುಚ್ಚು' ಎಂದರು. ಎಲ್ಲರೂ ಹೋಗಿ ಕಾರಿನಲ್ಲಿ ಕುಳಿತರು. ಕಮಲು ಹಟ ಹಿಡಿದು ತಾನೂ ಒಳಗೆ ನುಗ್ಗಲು ಬಂದಳು. ರಂಗಣ್ಣನವರೇ ಅವಳ ಕೈ ಹಿಡಿದು ಹೊರಗೆ ನಿಲ್ಲಿಸಿದರು. ಓಡಿ ಬಂದು ನಂಜು ಅಣ್ಣನ ಅತ್ತೆಯ ಮುಂದೆ ಕುಂಕುಮ ಹಿಡಿಯುವಷ್ಟರಲ್ಲಿಯೇ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದ ಡ್ರೈವರು ಕಾರನ್ನು ಸ್ಟಾರ್ಟ್‌ಮಾಡಿ ಮುಂದೆ ಚಲಿಸಿಸಿದ. 'ಇಪ್ಪತ್ತೈದು ರೂಪಾಯಿ ಸುಮ್ನೆ ದಂಡ. ಒಂದು ತಿಂಗಳ ಸಂಬಳ. ಎಲ್ಲಿಂದ ತರೂದು?'–ಎಂದು ರಂಗಣ್ಣನವರು ಅನ್ನುತ್ತಿದ್ದುದು ನಂಜುವಿಗೆ ಕೇಳಿಸಿತು.
ಇಪ್ಪತ್ತು ಮಾರು ಹೋದ ಮೇಲೆ ಕಾರು ನಿಂತಿತು. 'ಕಲ್ಲೇಶಣ್ಣ, ಸ್ವಲ್ಪ ಇಲ್ಲಿ ಬಾ'–ಎಂದು ಮಾವ ರಂಗಣ್ಣನವರು ಕೂಗಿದರು. ಕಲ್ಲೇಶ ಹೋಗಿ ಕಾರಿನ ಪಕ್ಕದಲ್ಲಿ ನಿಂತುಕೊಂಡ. ಕೆಳಗೆ ಇಳಿದು ಅವನ ಕೈ ಹಿಡಿದುಕೊಂಡು–'ಸಿಟ್ ಮಾಡ್‌ಬ್ಯಾಡ. ಹೀನ ಚಾಳಿ ಹಸು ತಂದ್ರೂ ಮೇಯ್ಸಿ ಕಟ್ಟಿ ನಿಭಾಯಿಸ್‌ಬೇಕು. ಅವ್ಳನ್ನ ನೋಡ್‌ಬ್ಯಾಡ. ನನ್ನ ಮುಖ ನೋಡು' ಎಂದು ಹೇಳುವಾಗ ಅವರ ಕಣ್ಣೀನಲ್ಲಿ ಪಟಪಟನೆ ನೀರು ತೊಟ್ಟಿಕ್ಕಿತು.
'ನೀವೊಳ್ಳೇ ಹುಡುಗರ ಹಾಗೆ ಆಡ್ತೀರಿ ಅಂದ್ರೆ. ಅದೇನು ಹೀನ ಚಾಳಿ ಅವ್ಳು ಮಾಡಿದ್ದು?'–ಹೆಂಡತಿ ಗಂಡನನ್ನು ಕೇಳಿದಳು.
'ಮಾತಾಡಿ ಪ್ರಯೋಜನವಿಲ್ಲ'–ಎನ್ನುತ್ತಾ ಯಜಮಾನರು ಮತ್ತೆ ಕಾರಿನಲ್ಲಿ ಕೂತರು. ಡ್ರೈವರ್ ಬೇಗ ಮುಂದೆ ನಡೆಸಿಬಿಟ್ಟ.
ಅಕ್ಕಪಕ್ಕದವರು ಹೋಗಿ ಮಲಗಿಕೊಂಡರು. ಕಲ್ಲೇಶನ ಮನೆಯವರೂ ಮಲಗಿದರು. ಮಾತನಾಡುವುದು ಬೆಟ್ಟದಷ್ಟಿದ್ದರೂ ಆಡುವಂತಿರಲಿಲ್ಲ. 'ನಸುಗುನಿ ಕಾಯಿನಂಥಾ ತಾಟಗಿತ್ತಿ'–ಎಂದು ಅಕ್ಕಮ್ಮ ನಾಲ್ಕು ಸಲ ಅಂದಳು. ನಂಜು ಮಾತ್ರ ಎಂದಿನಂತೆ ಮೌನವಾಗಿದ್ದಳು. ಕಲ್ಲೇಶನೂ ಸುಮ್ಮನಿದ್ದುದರಿಂದ ಅಕ್ಕಮ್ಮನಿಗೆ ಮಾತಾಡಲು ಅವಕಾಶ ಆಗಲಿಲ್ಲ. ಅವನ ಕೈಮೇಲೆ ಹನಿಕಿದ ಮಾವನವರ ಕಣ್ಣೀರು ಮನಸ್ಸನ್ನು ಕೊರೆಯಿತ್ತಿತ್ತು. ತನಗೆ ಪ್ಲೇಗು ಆದಾಗ ಅವರು ಮಗುವಿನಂತೆ ಪಾಲಿಸಿದ್ದರು. ಅವರ ಸ್ವಭಾವ ಅಂತಃಕರಣಗಳ ಬಗೆಗೆ ಅವನಲ್ಲಿ ಗೌರವ ಹುಟ್ಟಿತ್ತು. ಮೇಲೆ ಎದ್ದು ಹೆಂಡತಿಯ ಸೊಂಟ ಮುರಿಯುವಂತೆ ಒದೆಯಬೇಕೆಂಬ ಯೋಚನೆ ಹೊತ್ತಿಬರುತ್ತಿತ್ತು. ಆದರೆ ಮಾವನವರ ಕಣ್ಣೀರು ಅವನನ್ನು ಕಟ್ಟಿ ಹಾಕಿ ಹಾಸಿಗೆಯಲ್ಲಿಯೇ ಮಲಗುವಂತೆ ಮಾಡಿತ್ತು.

## ಅಧ್ಯಾಯ 6

– 1 –

ಸುಮಾರು ಆರು ತಿಂಗಳು ಕಳೆದ ಮೇಲೆ ಒಂದು ಕತ್ತಲೆ0ು ನಡುರಾತ್ರಿ0ುಲ್ಲಿ ಅಪ್ಪಣ್ಣ0ು್ಯ ಬಂದು ಬೆಸ್ತರ ಕೇರಿ0ು ಮಾಟನ ಮನೆ0ು ಬಾಗಿಲನ್ನು ಬಡಿದ. ಒಳಗಿನಿಂದ ಎದ್ದು ಬಂದ ಮಾಟ ಇವನನ್ನು ಕಂಡು, 'ಅದೆಲ್ಲಿಗ್ ಓಗಿಬಿಟ್ಟಿದ್ರಿ ಸ್ವಾಮಿ?' ಎಂದು ಕೇಳಿದ.
'ಪೋಲೀಸ್‌ಗೀಲೀಸ್ನೋರು ಹುಡುಕ್ತಿದಾರೇನೋ ನನ್ನ?'
'0ುಂತಾ ಪೋಲೀಸ್ನೋರು ಸಾಮಿ?'
'ಅದೇ ಅವತ್ತು......'
ಮಾಟನಿಗೆ ಈಗ ಹಿಂದಿನದೆಲ್ಲ ನೆನಪಾಯಿತು; ಹೇಳಿದ: 'ಅವ್ರು ಪೋಲೀಸ್ನೋರಲ್ವಂತೆ. ಹ್ವಲ ಅಳಿ0ೋ ಮೋಜಣೀದಾರ್ರಂತೆ. ನಮ್ಮೂರಾಗೆ ಮೂರು ತಿಂಗ್ಳಿದ್ರು. ನೀವ್ಯಾಕ್ ಈಟ್ ದಿನ ಅವುತ್‌ಕಂಡಿದ್ರಿ ಸಾಮಿ? ಅಮ್ಮಾರು, ನನ್ನ ಮಗು ಎಲ್ಲಿ ಓ0ುೋ ಅಂತ ಪೇಚಾಡ್ಕಂತಿದ್ರು.'
'ಹಾಗಾದ್ರೆ ನಾನು ಮನೆಗೆ ಹೋಗ್ಲೆ?'
'ನಡೀರಿ ಸಾಮಿ.'
'ನಂಗ್ ಹ್ಯದ್‌ರಿಕೆ0ಾಗುತ್ತೆ. ಜೊತೆಗೆ ನೀನೂ ಬಾ'–ಎಂದು ಮಾಟನನ್ನು ಕಾವಲಿರಿಸಿಕೊಂಡು ಅಪ್ಪಣ್ಣ0ು್ಯ

ಆರೆ ಧೈರ್ಯದಿಂದ ತನ್ನ ಮನೆಯ ಕದ ತಟ್ಟಿದ. 'ಅದ್ಯಾರೋ ಇಷ್ಹೊತ್ನಲ್ಲಿ ಬಾಗ್ಲು ಬಡಿಯೋರು?'–ಎಂದು ಒಳಗಿನಿಂದ ಕೂಗಿದ ಗಂಗಮ್ಮನಿಗೆ ಮಾಟನೇ ಉತ್ತರ ಹೇಳಿದ. ಸೀಮೆ ಎಣ್ಣೆಯ ಬುಡ್ಡಿ ಹೊತ್ತಿಸಿಕೊಂಡು ಹೊರಗೆ ಬಂದ ಗಂಗಮ್ಮ ಮಗನನ್ನು ಕಂಡು–'ನನ್ ಕಂದಾ, ಇಷ್ಟು ದಿನ ಎಲ್ಲಿಗ್ಹೋಗಿದ್ದೆಪ್ಪ. ಆ ಅನಿಷ್ಟಮುಂಡೆಗೆ ಹ್ಯದರ್ಕಂಡು ಎಲ್ಲೆಲ್ಲಿ ತಿರುಗ್ದೆಯಪ್ಪಾ?' ಎಂದು ಕಣ್ಣಿನಲ್ಲಿ ನೀರು ತಂದುಕೊಂಡಳು. ಮಾಟ ಒಳಗೆ ಬಂದು ಕುಳಿತ. ನಂಜಮ್ಮ ಬಾಣಂತಿತನಕ್ಕೆ ನಾಗಲಾಪುರಕ್ಕೆ ಹೋಗಿದ್ದಳು. ಚೆನ್ನಿಗರಾಯನದು ಬೇಗ ಎಚ್ಚರವಾಗುವ ನಿದ್ದೆಯಲ್ಲ. ಮಗ ಎಲ್ಲೆಲ್ಲಿ ತಿರುಗಿದ, ಊಟ ತಿಂಡಿಗೆ ಏನೇನು ಮಾಡಿದ, ಎಲ್ಲವನ್ನೂ ಗಂಗಮ್ಮ ವಿಚಾರಿಸಿದಳು.

'ನಾನೇನ್ ಹ್ಯದರ್ಕಳ್ಳಿಲ್ಲ. ಎಲ್ಲ ಕಡೇಲೂ ನಿಭಾಯಿಸ್ಕಂಡ್ ಬಂದೆ'–ವೀರಪುತ್ರ ತನ್ನ ಸಾಹಸದ ಕಥೆ ಹೇಳಿದ: ''ಇಲ್ಲಿಂದ ಜಾವಗಲ್ಲು ಕಡೀಕ್ ಹೋದೆ. ದಾರೀಲಿ ಬಿದರೆ ಸಣ್ಣೇಗೌಡನ ಮನೆಗೆ ಹೋಗಿ, 'ನಾವು ಬಾಮ್ರು. ಅಡಿಗೆ ಮಾಡ್ಕಳುಕ್ ಸಾಮಾನು ಕೊಡ್ಸಿ' ಅಂದೆ. ಎರಡು ಸೇರಕ್ಕಿ, ಅವರೇಬ್ಯಾಳೆ, ಖಾರಾಪುಡಿ, ಬ್ಯಣ್ಣೆ, ಎಲ್ಲಾ ಕೊಟ್ರು. ಊಟ ಮಾಡಿ ಮಿಕ್ಕಿದ್ದನ್ನು ಕಟ್ಕಂಡು ಜಾವಗಲ್ಲಿನ ಕಡೆಗೆ ಹೋದೆ. ಅಲ್ಲಿ ಒಂದ್ ತಿಂಗ್ಳಿದ್ದೆ. ಈಗ್ಯಾಕ್ ಬಂದಿದೀಯಾ, ಊರಲ್ಲಿ ಎಲ್ಲ ಹ್ಯಾಗಿದಾರೆ, ಅವರ್ಯಾಕ್ ಬರ್ಲಿಲ್ಲ ಅಂತ ಆ ಅಪ್ಪಿದಾಳಲ, ಆ ಸುಕನಾತಿಮುಂಡೆ, ಯಂಕಟರಾಮು ಹೆಂಡ್ತಿ, ಕೇಳಿದ್ಲು. ಒಂದಿನ ರಾತ್ರಿನಾಗ ಅಲ್ಲಿಂದ ಹ್ವರಟು ಅರಸೀಕೆರೆ ಕಡೀಕ್ ಹೋದೆ. ಹಾಗೇ ಸುತ್ಕಂಡು ಬಾಣಾವರ ಕಡೂರು ಮ್ಯಾಲ್ಹಾಸಿ ಶಿವಮೊಗ್ಗುಕ್ ಹೋದೆ. ಅಲ್ಲಿ ಹ್ವಳೇ ದಡ್ದಾಗೆ ಬೆಕ್ಕಿನ ಕಲ್ಲಿನ ಮಟ ಅಂತ ಇದೆ. ಅಲ್ಲೇ ಕೂತ್ಕಳುಕ್ಕೆ ಮಲೀಕಳುಕ್ಕೆ ಆಗ್ತಿತ್ತು''

'ಊಟುಕ್ಕೇನ್ಮಾಡ್ದೆಯೋ?'

'ಆ ಮಟದೋರೇ ಹೇಳ್ಕೊಟ್ರು. ಅವ್ರು ಲಿಂಗಾಯತರು, ನಾನು ಊಟ ಮಾಡೂ ಹಾಗಿಲ್ವಲ್ಲ. ಆ ಊರಲ್ಲಿ ದೊಡ್ಡ ಬ್ರಾಮ್ರುಕೇರಿ ಅಂತ ಇದೆ. ಯಲ್ಲ ಅನುಕೂಲವಂತ್ರು. ದಿನಾ ಬಿಕ್ಷಾನ್ನ ಮಾಡ್ತಿದ್ದೆ. ಅಮ್ಮಾ, ನೀನೇನೇ ಹೇಳು, ಬಿಕ್ಷಾನ್ನದ ಮುಂದೆ ಇನ್‌ಹ್ಯಾಗ್ ಅಡಿಗೆ ಮಾಡಿದ್ರೂ ಚನ್ನಲ್ಲ. ಜೋಳಿಗೆ ಅನ್ನ ಕೊಳದಪ್ಪಲೆ ಹುಳಿ ಸಾರು ತಂದು ನದೀ ದಡದ ಬಂಡೆ ತೊಳೆದು ಬಿಟ್ಟು ಅದರ ಮ್ಯಾಲೆ ಹಾಕ್ಕಂಡು ಹ್ವಡೀತಿದ್ದೆ.'

'ಬಿಕ್ಷಾನ್ನ ಅಂದ್ರೇನು ಸಾಮಿ?'–ಮಾಟ ಕೇಳಿದ.

'ಊಟದ ಹೊತ್ನಲ್ಲಿ ಹೋಗಿ ಯಲ್ಲ ಮನೇ ಮುಂದೂ ನಿಂತ್ಕಂಡು ಬವತಿ ಬಿಕ್ಷಾಂದೇಹಿ ಅಂದ್ರೆ ಜೋಳಿಗೆಗೆ ಅನ್ನ ಕೊಳದಪ್ಪಲೆಗೆ ಸಾರೋ ಹುಳಿಯೋ, ಮ್ಯಾಲೋಗರವೋ ಹೊಜ್ಜೋ, ಯಲ್ಲಾನೂ ಒಂದಕ್ಕೇ ಹಾಕ್ತಾರೆ. ಆಮ್ಯಾಲೆ ಕೂಡ್ಸಿ ಊಟ ಮಾಡೂದು. ಏನು ವೈನಾಗಿರುತ್ತೆ ಅಂತೀಯಾ!'

'ವೈನಾಗಿರ್ದೆ ಏನ್ ಮಾಡ್ತೈತೆ. ಅಲವು ಮನೆ ಎಸರು ಚಂದ, ಆದರ್‌ಗಿತ್ತಿ ಮಗಳು ಚಂದ ಅಂತ ಗಾದೆಯೇ ಇಲ್ವರಾ?'–ಬಾಯಲ್ಲಿ ನೀರೂಡಿಸಿಕೊಳ್ಳುತ್ತಾ ಮಾಟ ಚಪ್ಪರಿಸಿದ.

'ಅಮ್ಮಾ, ಆ ಹಾಳು ಶಿವಮೊಗ್ಗದಲ್ಲಿ ಬರೀ ಅನ್ನಾನೇ ತಿಂದು ಬೇಜಾರಾಗಿದೆ. ಒಂದಿಷ್ಟು ಹಿಟ್ಟು ಮಾಡಿ ಹಾಕಮ್ಮ . ಹ್ವಟ್ಟೆ ಹಸಿಯುತ್ತೆ.'

'ಇಷ್ಹೊತ್ನಲ್ಲೇನೋ?'

'ರಾತ್ರಿ ಏನೂ ತಿಂದಿಲ್ಲ.'

'ಆ ಮುಂಡೇರು ಯಾರಾರು ಇದ್ದಿದ್ರೆ ಎದ್ದು ಕೆರೆಯೇ ಅಂತಿದ್ದೆ. ಯಾರೂ ಇಲ್ಲ ಅಪ್ಪಣ್ಣಯ್ಯ, ನಿನ್ನ ಹೆಂಡ್ತಿ ಹೆಣ್ಣು ಮಗು ಹೆತ್ಳಂತೆ. ನಾಮ್‌ಕರಣಕ್ಕೆ ಕರೆಯುಕ್ ಬಂದಿದ್ರು. ಈಗ ನಾಕು ತಿಂಗ್ಳಾಗಿರ್‌ಬೇಕು. ಹೋಗಿ ಕರ್ಕಂಡ್ ಬಾ. ಅಡಿಗೆ ಮಾಡಿ ಮಾಡಿ ನಂಗ್ ಅಸ್ಸಪ್ಪ ಅನ್ನೂ ಹಾಗಾಗಿದೆ'–ಎನ್ನುತ್ತಾ ಗಂಗಮ್ಮ ಮೇಲೆ ಎದ್ದಳು.

– 2 –

ಊರಿನಲ್ಲೆಲ್ಲ ನಾಲ್ಕು ದಿನ ಧೈರ್ಯವಾಗಿ ತಲೆ ಎತ್ತಿ ತಿರುಗಾಡಿದ ಮೇಲೆ ಅಪ್ಪಣ್ಣಯ್ಯ ಹೆಂಡತಿ ಮಗುವನ್ನು ಕರೆದುಕೊಂಡು ಬರಲು ನುಗ್ಗೀಕೆರೆಗೆ ಹೊರಟ. ರೊಟ್ಟಿ ಚಟ್ನಿಯ ಗಂಟನ್ನು ಹೆಗಲಿಗೆ ಹಾಕಿ ತಿಪಟೂರಿನ ತನಕ ನಡೆದು, ರೈಲಿನಲ್ಲಿ ಒಬ್ಬನೇ ಕಡೂರಿಗೆ ಹೋಗಿ, ಅಲ್ಲಿಂದ ಒಂಬತ್ತು ಮೈಲಿ ನಡೆದು ಮಾವನ ಮನೆ ಮುಟ್ಟಿದ. ಮಗುವಿಗೆ ನಾಲ್ಕು ತಿಂಗಳಾಗಿತ್ತು. ಅವರೇ ಜಯಲಕ್ಷ್ಮಿ ಎಂದು ಹೆಸಟ್ಟಿದ್ದರು.

ಅಪ್ಪಣ್ಣಯ್ಯ ಹೋದಾಗ ಸಂಜೆಯಾಗಿತ್ತು. ಸಾತು ಇನ್ನೂ ಬಾಣಂತಿಯ ಕೋಣೆಯಲ್ಲಿ ಇದ್ದಳು. ಇವನು ಹೋಗಿ ಮಗು ಎತ್ತಿಕೊಂಡು ಆಡಿಸಿದ. ಹೆಂಡತಿಯನ್ನು ಮಾತಾಡಿಸಿದ. ರಾತ್ರಿ ಊಟವಾದ ಮೇಲೆ ನಡುಮನೆಯಲ್ಲಿ ಮಾವನವರ ಹಾಸಿಗೆಯ ಹತ್ತಿರ ಇವನದನ್ನೂ ಹಾಸಿದ್ದರು. ಮುಖ ಸಪ್ಪಗೆ ಮಾಡಿಕೊಂಡು ಹೋಗಿ ಅವನು ಹಾಸಿಗೆಯ ಮೇಲೆ ಕುಳಿತಾಗ ಮಾವನವರು ಕೇಳಿದರು: 'ನಾಮಕರಣಕ್ಕೆ ಹೇಳಿಕಳಿಸಿದ್ವು. ಆಗ ಎಲ್ಲಿಗೆ ಹೋಗಿದ್ದೆ?'

'ಶಿವಮೊಗ್ಗಕ್ಕೆ, ಅಲ್ಲ ಜಾವಗಲ್ಲಿಗೆ.'

‘ಹೆಂಡತಿ ಹೆರಿಗೆ ಅನ್ನೂದು ಗೊತ್ತಿರ್ಲಿಲ್ವೆ? ಅದೇನು ಹಾಗೆ ಹೇಳ್ದೆ ಕೇಳ್ದೆ ಊರು ಬಿಟ್ಟು ಹೋಗಿದ್ದುದು?’
‘ಒಂದಿಷ್ಟು ಕೆಲ್ಸವಿತ್ತು.’
ಬಾಣಂತಿಯ ಕೋಣೆಯಲ್ಲಿ ಮಲಗಿದ್ದ ಸಾತು ಎದ್ದು ಕೂತು ಹೇಳಿದಳು: ‘ಅದೇನು ಸೂರೆ ಹೋಗೋ ಕೆಲ್ಸವಿದ್ದದ್ದು? ಸುಳ್‌ಸುಳ್ಳೇ ಯಾಕ್ ಹೇಳ್ತೀರಾ? ನಿಜ ಹೇಳಿಬಿಡಿ. ಅತ್ತಿಗೇನಾ ಕಾಲಾಗೆ ಒದ್ದು, ಆಮ್ಯಾಲೆ ಪೋಲೀಸ್ನೋರು ಹಿಡ್ಕತ್ತಾರೆ ಅಂತ ಕದ್ದು ಹೋಗಿರ್ಲಿಲ್ವೆ?’
ಅಪ್ಪಣ್ಣಯ್ಯ ಉತ್ತರ ಹೇಳಲಿಲ್ಲ; ತಲೆ ತಗ್ಗಿಸಿ ಕುಳಿತ. ಸಾತು ಕೇಳಿದಳು: ‘ನಿಮ್ಮಮ್ಮ ಒದೆಯೋ ಅಂದ್ಲು. ನೀವು ಒದ್ದುಬಿಟ್ರೇನೋ? ಆ ಸುಡುಗಾಡು ಹೆಂಗ್ಸು ಸಾಯದೆ ನಿಮಗೆ ಬುದ್ಧಿ ಬರುಲ್ಲ.’
ತನ್ನ ತಾಯಿಯನ್ನು ಬೈದದ್ದಕ್ಕೆ ಅಪ್ಪಣ್ಣಯ್ಯನಿಗೆ ಅಗಾಧ ಸಿಟ್ಟು ಬಂತು. ಆದರೆ ಅದನ್ನು ತೋರಿಸಲು ಇದು ಸಮಯವಲ್ಲ. ಅಲ್ಲದೆ ಸಾತು ಅತ್ತಿಗೆಯಂತಹ ಸಾಧು ಹೆಂಗಸಲ್ಲ. ಆದುದರಿಂದ ಅವನು ಸುಮ್ಮನಿದ್ದ.
ಸಾತು ಒಳಗಿನಿಂದ ಮಾತನಾಡಿದಳು: ‘ನಿಮ್ಮಮ್ಮನ ಸಾವಾಸ ನಂಗೆ ಬ್ಯಾಡ. ನಿಮ್ಮನೆ ಹಿಂದುಗಡೆ ಖಾಲಿ ಜಾಗ ಇದ್ಯಲ್ಲಾ, ಅಲ್ಲಿ ಸಣ್ಣದಾಗಿ ಒಂದು ಮನೆ ಕಟ್ಸಿ, ಬ್ಯಾರೆ ಇರುಕ್ಕೆ ಅನುಕೂಲ ಮಾಡಿ. ಆಮ್ಯಾಲೆ ಬಂದು ನನ್ನೂ ಮಗೂನೂ ಕರ್ಕಂಡ್ ಹೋಗಿ.’
‘ಅದ್‌ಹ್ಯಾಗ್ ಆಗುತ್ತೆ?’–ಹಿಡಿದಿದ್ದ ಗಂಟಲನ್ನು ಬಿಡಿಸಿಕೊಳ್ಳಲು ಕೊಸರುತ್ತಾ ಅವನು ಕೇಳಿದ.
‘ಅದ್ಯಾಕ್ ಆಗುಲ್ಲ? ನೀವು ಇರೂಕ್ಕೆ ಸಣ್ಣ ಮನೆ ಕಟ್ಸಿ. ಅಣ್ಣ ತಮ್ಮಂದಿರು ಪಾಲಾಗಿ. ಮನೆಗೆ ಬೇಕಾದ ಪಾತ್ರೆ ಪರಟಿ ನನ್ನ ಮದುವೇಲಿ ಕೊಟ್ಟಿದ್ದೇ ಇದೆ. ಸಾಕಾಗದೆ ಇದ್ರೆ ನಾನು ಇನ್ನಷ್ಟು ತತ್ತೀನಿ.’
ಅವನು ಈಗಲೂ ಮಾತನಾಡಲಿಲ್ಲ. ಸಾತು ಮುಂದುವರಿಸಿದಳು: ‘ನೀವು ಬ್ಯಾರೆ ಆಗ್‌ಬೇಕು ಅಂತಲೇನೂ ಅಲ್ಲ. ಅಣ್ಣತಮ್ಮಂದಿರು ಒಟ್ಟಿಗೆ ಇರಿ. ನಾನು ಅಕ್ಕನ ಜೊತೆ ಇರ್ತೀನಿ. ಆದ್ರೆ ನಿಮ್ಮಮ್ಮ ಬ್ಯಾರೆ ಇರ್‌ಬೇಕು. ಅವ್ಳಿಗೇ ಬೇಕಾದ್ರೆ ಬ್ಯಾರೆ ಒಂದು ಒಪ್ಪಾ ರು ಕಟ್ಸಿಕೊಟ್ಟು ಹೊರಗೆ ಹಾಕಿ, ಆಮ್ಯಾಲೆ ಬಂದು ನನ್ನೂ ಮಗೂನೂ ಕರ್ಕಂಡ್ ಹೋಗಿ.’
ತಾಯಿಯನ್ನು ಬೈದದ್ದಕ್ಕೆ ಅವನಿಗೆ ಸಿಟ್ಟು ಬಂದು ಮುಖ ಸಿಂಡರಿಸಿತು. ಅದನ್ನು ಗಮನಿಸಿದ ಅತ್ತೆಮ್ಮ ಹೇಳಿದರು: ‘ನಮ್ಮ ಅಪ್ಪಣ್ಣನ ಸ್ವಭಾವ ಒಳ್ಳೇದು. ಅವನು ಚಿನ್ನದಂಥಾ ಹುಡುಗ ಅಂತ ಸಾತು ಹೇಳ್‌ತಾನೇ ಇರ್ತಾಳೆ. ಅತ್ತೆ ಸ್ವಸೆಗೆ ಆಗುಲ್ಲ–ನೀವು ಬ್ಯಾರೆ ಇರಿ. ಸಾತು ಬೇಕಾದ್ರೆ ನಿಮ್ಮಮ್ಮನ ಮನೇಲೂ ಕೈಲಾದ ಕೆಲ್ಸ ಬದುಕು ಮಾಡಿ ಕೊಡ್ತಾಳೆ.’ ಈಗ ಅವನ ಮುಖದ ಮೇಲೆ ಪ್ರಸನ್ನತೆ ಮೂಡಿತು.
ಮಾವನವರು ಕೊನೆಯದಾಗಿ ಹೇಳಿದರು: ‘ಅಂತೂ ಗಂಡ ಹೆಂಡತಿ ಅನ್ಯೋನ್ಯವಾಗಿ ಸಂತೋಷವಾಗಿರೂದು ಮುಖ್ಯ. ಬೆಳಿಗ್ಗೆ ಎದ್ದರೆ ಮುಂಡೆ ರಂಡೆ ಅಂತ ಕೆಟ್ಟ ಮಾತು ಆಡ್ಕಂಡು ಇರ್‌ಬಾರ್ದು. ಒಟ್ನಲ್ಲಿ ನೀನು ಅದಕ್ಕೆ ಬೇಕಾದ ಏರ್ಪಾಡು ಮಾಡ್ಕಂಡು ಹೆಂಡ್ತಿ ಕರ್ಕಂಡು ಹೋಗು. ನಮಗಿರೋಳು ಒಬ್ಬಳೇ ಒಬ್ಬಳು ಮಗಳು. ಇನ್ನು ಮತ್ತೆ ಹೆಣ್ಣೂ ಇಲ್ಲ ಗಂಡೂ ಇಲ್ಲ.’
ಅಪ್ಪಣ್ಣಯ್ಯ ಎಂಟು ದಿನ ಮಾವನವರ ಮನೆಯಲ್ಲಿದ್ದ. ಹೆಂಡತಿಯನ್ನು ಬೈಯದೆ ಸಂತೋಷದಿಂದ ಮಗು ಎತ್ತಿ ಆಡಿಸುತ್ತಿದ್ದ. ಆದರೆ ಅವನ ಮಾತು ನಡೆಗಳಲ್ಲಿ ವಿನಾ ಕಾರಣ ಕಾಣುತ್ತಿದ್ದ ಸೆಡವು ಒರಟುಗಳನ್ನು ಕಂಡರೆ ಎಲ್ಲರಿಗೂ ಕಿರಿಕಿರಿ ಎನ್ನಿಸುತ್ತಿತ್ತು. ಒಂದು ದಿನ ತೆಂಗಿನಕಾಯಿ ಸುಲಿಯುವಾಗ ಸಿಪ್ಪೆ ಗಟ್ಟಿಯಾಗಿ ಅಂಟಿಕೊಂಡು, ಎಳೆದರೆ ಬರದಿದ್ದುದಕ್ಕೆ ‘ಇದರವ್ವನ್ನಾ.....’ ಎಂದುಬಿಟ್ಟ. ಇನ್ನೊಂದು ದಿನ ಕೊಟ್ಟಿಗೆಯಲ್ಲಿ ಹಸು ಕೋಡು ಆಡಿಸಿದುದಕ್ಕೆ, ‘ಅಯ್ಯೋ ನಿನ್ನ ಹೆತ್ತೋಳ್ನಾ’ ಎಂದಾಗ ಅತ್ತೆ ಹತ್ತಿರದಲ್ಲಿಯೇ ಇದ್ದು ಕೇಳಿಸಿಕೊಂಡರು. ಇವನನ್ನು ತಿದ್ದುವುದೆಂದರೆ ಸಾಮಾನ್ಯವಲ್ಲವೆಂಬುದು ಅವರಿಗೂ ಗೊತ್ತು. ತಮ್ಮ ಮಗಳ ಹಣೆಬರಹವನ್ನು ಯೋಚಿಸಿಕೊಂಡು ಅವರು ನಿಟ್ಟುಸಿರು ಬಿಟ್ಟರು.
ಊರಿಗೆ ಹೊರಡುವ ದಿನ, ಬೇರೆ ಇರಲು ವ್ಯವಸ್ಥೆ ಮಾಡಲು ಮತ್ತೆ ಹೇಳಿ ಸಾತು ಅವನಿಂದ ಹೂಂ ಎನಿಸಿದಳು. ಕಡೂರಿಗೆ ನಡೆದು ಬಂದ ಅವನು ಅಲ್ಲಿಂದ ರೈಲು ಹತ್ತಿ ತಿಪಟೂರಿನಲ್ಲಿ ಇಳಿದ. ಇನ್ನೂ ತಿಪಟೂರಿನಿಂದ ಊರಿಗೆ ಹದಿನಾರು ಮೈಲಿ ನಡೆಯಬೇಕು. ಮೊದಲಿಯಾರ್ ಕಂಪನಿಯವರು ಮೋಟಾರು ಶುರು ಮಾಡಿದ್ದರೂ ಅದು ದಿನ ಬಿಟ್ಟು ದಿನ ಹೋಗುತ್ತಿತ್ತು. ಸೋಮವಾರ ಬುಧವಾರ ಶುಕ್ರವಾರ ಮಾತ್ರ ಮೋಟಾರು ಇದ್ದದು. ಅಪ್ಪಣ್ಣಯ್ಯ ಆಗಲೇ ಒಂದು ದಿನ ಕೂತು ಅದರ ಮಜ ಕಂಡಿದ್ದ. ಅವನಿಗೆ ಹೆದರಿಕೆಯೇ ಆಗಿರಲಿಲ್ಲ. ರೈಲಿನಲ್ಲಿ ಒಬ್ಬನೇ ಕೂತು ಬಂದಿರುವ ಅವನಿಗೆ ಮೋಟಾರದೇನು ಭಯ? ಆದರೆ ಈ ದಿನ ಶುಕ್ರವಾರ ಸಾಯಂಕಾಲವಾಗಿತ್ತು. ನಾಳೆ ನಾಡಿದ್ದು ಎರಡು ದಿನವೂ ಮೋಟಾರು ಇರಲಿಲ್ಲ. ನಡೆದುಕೊಂಡು ಹೋಗುವುದೇನೂ ಕಷ್ಟವಲ್ಲ ಆದರೆ ಮೋಟಾರಿನಲ್ಲಿ ಕುಳಿತುಕೊಳ್ಳುವ ಮಜ ತಪ್ಪಿಹೋಯಿತು.
ಆಗಲೇ ಸಂಜೆಯಾಗಿದ್ದುದರಿಂದ ತಿಪಟೂರಿನಲ್ಲಿ ಉಳಿದ. ಹೋಟೆಲಿನಲ್ಲಿ ಆಲೂಗಡ್ಡೆ ನೀರುಳ್ಳಿ ಹುಳಿ, ಬದನೇಕಾಯಿ ಪಲ್ಯ, ಹಪ್ಪಳ ಸಂಡಿಗೆ, ಸಾರು, ಮೊಸರು ಸಮೃದ್ಧಿಯಾಗಿ ಮೂರು ಸಲ ಕಲಸಿಕೊಂಡು ಊಟ ಮಾಡಿದ. ಆರಾಣೆ ದುಡ್ಡು. ಛತ್ರದ ಜಗುಲಿಯ ಮೇಲೆ ಮಲಗಿದ್ದು ಬೆಳಿಗ್ಗೆ ಎದ್ದು ಕೆರೆಯ ಕಡೆಗೆ

ಹೋಗಿ ಬಂದು ಅದೇ ಹೋಟೆಲಿಗೆ ಹೋಗಿ ಒಂದು ಮಸಾಲೆ ದೋಸೆ ತಿಂದ. ಅವನು ಶಿವಮೊಗ್ಗದಲಿ ್ಲ0ಯೂ ಎರಡು ದಿನ ಮಸಾಲೆ ದೋಸೆ ತಿಂದಿದ್ದ. ಆದರೆ ತಿಪಟೂರಿನಲ್ಲಿ ಇವರು ಮಾಡಿದ್ದ ಹಾಗೆ ಇರಲಿಲ್ಲ. ಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ಆಲೂಗಡ್ಡೆ, ದಪ್ಪ ನೀರುಳ್ಳಿ0ಯ ಪಲ್ಯ. ಒಳಗೆ ದೋಸೆಗೆ ಸವರಿದ್ದ ಕಾಯಿ ಚಟ್ನಿ. ಸ್ವಲ್ಪ ಖಾರಖಾರವಾಗಿದ್ದ ಅದನ್ನು ಲೊಟ್ಟೆ ಹೊಡೆ0ಯುತ್ತಾ ಮುಗಿಸಿದ ಅವನು ಮತ್ತೆ ಆರು ದೋಸೆಗೆ ಹೇಳಿದ. ಬಿಸಿಬಿಸಿ0ಯಾಗಿ ಬಂದ ಎಲ್ಲವನ್ನೂ ತಿಂದು, ಒಟ್ಟಿನಲ್ಲಿ ಏಳಾಣೆ ಕೊಟ್ಟು ಕಾಲುದಾರಿ0ಯಲ್ಲಿ ರಾಮಸಂದ್ರದ ಕಡೆಗೆ ಹೊರಟ. ಎರಡು ಮೈಲಿ ಬರುವುದರಲ್ಲಿ0ಯೇ ಬಾ0ಯಾರಿಕೆ0ಯಾಯಿತು. 'ಇದರವ್ವನಾ, ಈ ದ್ವಾಸೆ ತಿಂದುದ್ದೇ ಬಾ0ಯಾರುತ್ತೆ'–ಎಂದು ದಾರಿ0ಯ ಬಲಪಕ್ಕದ ತೆಂಗಿನ ತೋಟದ ಕಡೆ ನೋಡಿದ. 0ಯಾರೂ ಕಾಣಲಿಲ್ಲ. ಮೆಲ್ಲಗೆ ಬೇಲಿ ನುಸಿದು ಒಳದೋಟದ ಕಡೆಗೆ ಹೋಗಿ ಬುಡ್ಡವಾದ ಮರದಿಂದ ಮೂರು ಎಳನೀರು ಕಿತ್ತು ಒಂದು ಕಡ್ಡಿಯಿಂದ ಅವುಗಳ ಕಣ್ಣು ಕುಕ್ಕಿ ಗಟಗಟನೆ ಗಂಟಲಿಗೆ ಬಗ್ಗಿಸಿದ. ಬಂಬಲಿನ ಆಸೆ0ಯಾದರೂ, ಸಿಕ್ಕಿಹಾಕಿಕೊಳ್ಳುವ ಭ0ಯವಾಗಿ ಬುರುಡೆಗಳನ್ನು ಅಲ್ಲಿ0ಯೇ ಬಿಟ್ಟು ಬೇಲಿ ಬಳಸಿಕೊಂಡು ಹೋಗಿ ದಾರಿ ಸೇರಿ, ಊರ ಕಡೆ ದಾಪುಗಾಲು ಹಾಕಿದ. ದಾರಿ0ಯಲ್ಲಿ ಸಿಕ್ಕಿದ ಒಬ್ಬ ದನ ಕಾ0ಯುವ ಗೌಡ ಇವನಿಗೆ ಒಂದು ಬೀಡಿ ಕೊಟ್ಟ. ಅಪ್ಪಣ್ಣ0ಯ್ಯ ತಾನಾಗಿ0ಯೇ ದುಡ್ಡು ಕೊಟ್ಟು ಬೀಡಿ ಸೇದುತ್ತಿರಲಿಲ್ಲ. ಕಬ್ಬಿನ ಗದ್ದೆಗೆ ಬೆಂಕಿ ಹೊತ್ತಿದಮೇಲೆ ಅದನ್ನು ಬಿಟ್ಟೇ ಇದ್ದ. ಆದರೆ 0ಯಾರನ್ನಾದರೂ ಕೇಳಿ ಬಿಟ್ಟಿ0ಯಾಗಿ ಕೊಟ್ಟರೆ ಅಲ್ಲಿ0ಯೇ ಸೇದಿ ಬಿಸಾಕಿಬಿಡುತ್ತಿದ್ದ.

– 3 –

ಊರು ಮುಟ್ಟುವ ಹೊತ್ತಿಗೆ ಸಂಜೆ ನಾಲ್ಕು ಗಂಟೆ0ಯಾಗಿತ್ತು. ಅವನು ಮನೆಗೆ ಬಂದಾಗ ಅದೇ ತಾನೇ ಪಟೇಲ ಶಿವೇಗೌಡ, ಅವನ ಭಾಮೈದ ಮಾಜೀ ಬದಲಿ ಶ್ಯಾನುಭೋಗ ಸಿವಲಿಂಗೇಗೌಡ ಬಂದು ಕೂತಿದ್ದರು. ಇವನು ಬಂದ ತಕ್ಷಣ ಶಿವೇಗೌಡ ಮಾತು ಪ್ರಾರಂಭಿಸಿದ.

'ಗಂಗವ್ವ, ಏಳ್‌ಕಳಸ್ತಂಗೆ ಅಪ್ಪಣ್ಣ0ಯ್ಯನೂ ಬಂದ. ನನ್ನ ದುಡ್ಡಿಂದು ಏನು ಮಾಡ್ದೆ? ಮರ್‌ತೇಬಿಟ್ಟಿದೀರಾ?' 0ಯಾವ ದುಡ್ಡು ಎಂಬುದು ಗಂಗಮ್ಮನಿಗೆ ಎರಡು ನಿಮಿಷ ನೆನಪಿಗೆ ಬರಲಿಲ್ಲ. ಶಿವೇಗೌಡ ಹೇಳಿದ: 'ಅಸಲು ಎಲ್ಡು ಸಾವಿರ. ಏಳು ವರ್ಸದ ಬಡ್ಡಿ ಅಂದ್ರೆ ಸಾವಿರದೆಂಟನೂರ ಎಂಬತ್ತು. ಈಟು ವರ್ಸ ಬಡ್ಡೀನೂ ಕಟ್ನಿಲ್ಲ. ಅದರ ಬಡ್ಡಿ ಲ್ಯಕ್ಕ ಇಡುದ್ರೆ ಮ್ಯಾಲೆ ಆರು ನೂರು. ಅಂದ್ರೆ ನಾಕು ಸಾವಿರದ ಆರು ನೂರು ಎಂಬತ್ತಾ0ಯ್ತದೆ. ಇನ್ನೊಂದು ತಿಂಗ್ಳಾಗೆ ನನ್ ಅನ ಮಡಗ್‌ಬಿಡಿ. ವಾ0ಯ್ದೆ ಕಳೀತಿದೆ. ಇಲ್ದಿರಾ ನಾನು ಕೋಲಿ ್ಟಗ್ ಓ0ಯ್ತೀನಿ.'

'ಏನೋ ಹುಡ್ಗ ತಿಳೀದೇ 0ಯಾವತ್ತೋ ಮಾಡಿದ್ದುಕ್ಕೆ ಇಷ್ಟೊಂದು ದುಡ್ಡು ಎಲ್ಲಿ ತರಾಣ ಶಿವೇಗೌಡ?'

'ಹುಡ್ಗ ಮಾಡಿದ್ದು ಅಂತ ನಾನು ಅಣ ಕೊಟ್ಟಿದ್ ಸುಳ್ಳಾ? ಎಂತಾ ಮಾತಾಡ್ತೀರಾ ನೀವು? ಚನ್ನ0ಯ್ಯ, ಶ್ಯಾನುಭೋಕೆ ಮಾಡ್ತಿ0ಯಲಾ ನೀನೇ ಏಳು. ನಾನ್ ಗಂಟು ಮಡಗಿದ್ದು ಸುಳ್ಳಾ.'

ಚೆನ್ನಿಗರಾ0ಯ ಸುಮ್ಮನೆ ಕುಳಿತಿದ್ದರು. 'ಇನ್ ಎಂಟು ದಿನದಲ್ಲಿ ಗಂಟು ಮಡ್‌ಗದೆ ಇದ್ರೆ ನಾನು ಕೇಸಾಕ್ತೀನಿ. ನನ್ ಮೇಲೇನೂ ಮಾತಿಲ್ಲ. ಹೂಂ'–ಎಂದು ಹೇಳಿ ಶಿವೇಗೌಡ ಸಿವಲಿಂಗೇಗೌಡನೊಡನೆ ಎದ್ದು ಹೊರಟುಹೋದ.

'ಈಗೇನ್ಮಾಡೂದೋ ಚಿನ್ನ0ಯ್ಯ?'–ಗಂಗಮ್ಮ ಕೇಳಿದಳು.

'ನಂಗೇನು ಗೊತ್ತಮ್ಮಾ?'

'ಶ್ಯಾನುಭೋಗ, ನಿಂಗೆ ಗೊತ್ತಿರ್‌ಬ್ಯಾಡ್ವೇನೋ?'

ಅಪ್ಪಣ್ಣ0ಯ್ಯ ಮಾತನಾಡಿದ: 'ನಮ್‌ತಾವ ಅವ್ನೇನು ಕಿತ್ಕತಾನೆ ನೋಡಾಣ. ಕೊಡುಲ್ಲ ಅನ್ನು.

'ಅನ್ನಣೇನೋ?'

'ಹೂಂ, ಕಣಮ್ಮ.'

'ಅಮ್ಮ, ನಂಗ್ ಹ್ವಟ್ಟೆ ಹಶೀತಿದೆ. ಮದ್ಲು ಊಟಕ್ಕಿಕ್ಕು. ಅವ್ನೇನ್ ಕಿತ್ಕತಾನೆ ಆಮ್ಯಾಲೆ ನೋಡ್ಕಂಡ್ರಾಗುತ್ತೆ'– ಎಂದ ಅಪ್ಪಣ್ಣ0ಯ್ಯನಿಗೆ ಬಡಿಸಲು ಅವಳು ಒಳಗೆ ಹೋದಳು

ಈ ವಿಷ0ಯದಲ್ಲಿ 0ಯಾರನ್ನು ಕೇಳಿದರೆ ಸರಿ ಎಂದು ಅವಳು 0ಯೋಚಿಸಿದಳು. ತಕ್ಷಣ ರೇವಣ್ಣಶೆಟ್ಟಿ0ಯ ಹೆಸರು ಹೊಳೆಯಿತು. ರೇವಣ್ಣಶೆಟ್ಟಿ0ಯನ್ನು ಊರಿನ ಎಷ್ಟೋ ಜನ ಲಾ0ಯರು ಎಂದೇ ಕರೆ0ಯುತ್ತಿದ್ದರು. 0ಯಾವು0ಯಾವುದೋ ಕೇಸುಗಳ ಪರವಹಿಸಿ ಅವನು ಆಗಾಗ್ಗೆ ತಿಪಟೂರಿಗೆ ಹೋಗುತ್ತಿದ್ದ. ದೊಡ್ಡ ಲಾ0ಯರಿಗೆ ಗೊತ್ತಿಲ್ಲದ ಪಾಯಿಂಟುಗಳೂ ಅವನಿಗೆ ಗೊತ್ತಿವೆ0ಯಂತೆ. ಗಂಗಮ್ಮ ನೇರವಾಗಿ ಅವನ ಮನೆಗೆ ಹೋದಳು. ಅವನ ಹೆಂಡತಿ ಸರ್ವಕ್ಕ ಹೇಳಿದಳು: 'ಅವ್ರು ಇಲ್ರ, ಕೋಡೀ–ಅಳ್ಳಿಗೆ ಓಗ್ಯವ್ರೆ.'

'ಅದೇನ್ ಜಂಬ್ರ?'

'ಗಂಗಮ್ಮನೋರೇ, ನಿಮಗೆ ಗೊತ್ತಿಲ್ವರಾ?'–ಎಂದು ಅನುಮಾನಿಸಿ ಅವಳು ಹೇಳಿದಳು: 'ಇಸ್ಪೀಟಾಡಾಕೆ. ಅದೇನ್ ಬಂದಿದ್ರಿ? ಕುಂತ್ಕಳ್ರಿ ಮಣೆ ಆಕ್ಕೊಡ್ತೀನಿ.'

ಗಂಗಮ್ಮ ಮಣೆ0ು ಮೇಲೆ ಕುಳಿತು, ಶಿವೇಗೌಡ ಬಂದಿದ್ದ ಸಂಗತಿ0ುನ್ನೂ ಹಿಂದೆ ಜಮೀನು ಆಧಾರವಾಗಿದ್ದ ಸಂದರ್ಭವನ್ನೂ ಹೇಳಿದಳು. ಜಮೀನು ಆಧಾರವಾಗಿದ್ದುದು ಊರೆಲ್ಲರಿಗೂ ಗೊತ್ತಿದ್ದ ಸಂಗತಿ0ೆುೕ. ಸರ್ವಕ್ಕ ಎಂದಳು" 'ಅವ್ನ ದುಡ್ಡು ನೀವು ಅವ್ನಿಗೆ ಮದ್ಲೇ ತೀರಿಸ್‌ಬ್ಯಾಡ್ದಾ? ಇಷ್ಟೊಂದು ದಿನ 0ಾಕ್ ಬಿಟ್ಕಂಡ್ ಕುಂತಿದ್ರಿ?'

'ಅದೇನ್ ಉಂಡುದ್ದೇ, ತಿಂದುದ್ದೇ ಗಂಟು? ಅದ್ ಹ್ಯಾಗ್ ಕೊಡಾಣ?'

ಈ ಮಾತಿಗೆ ಸಮಾಧಾನ ಹೇಳುವಷ್ಟು ತಿಳಿವಳಿಕೆ ಸರ್ವಕ್ಕನಿಗೆ ಇರಲಿಲ್ಲ. ಅವಳ ವ0ುಸ್ಸು ಮೂವತ್ತರ ಸುಮಾರು. ಐದು ಮಕ್ಕಳಿವೆ. ಇನ್ನು ಮೂರು ಮಕ್ಕಳು ಸತ್ತಿವೆ ಎರಡು ವರ್ಷದಿಂದ ಬಸುರಿ0ಾಗಿಲ್ಲ. ಅಪ್ಪಣ್ಣ0ು್ಯ ಕಬ್ಬಿನ ಗದ್ದೆಗೆ ಬೆಂಕಿ ತಗುಲಿಸಿದ್ದಾಗ ಅವಳ ಗಂಡ ಕೂಳೆಕಬ್ಬಿನ ಲೆಕ್ಕ ಹೇಳಿ ಇಪ್ಪತ್ತೈದು ರೂಪಾಯಿ ತೆಗೆದುಕೊಂಡದ್ದು ಅವಳಿಗೆ ಗೊತ್ತು. ಕೂಳೆಕಬ್ಬನ್ನು ಮತ್ತೆ ಬಿಡುವುದಿಲ್ಲವೆಂದು ಮೊದಲೇ ಹೇಳುತ್ತಿದ್ದ ಅವನು, ಈಗ ಅದರ ಹೆಸರಿನಲ್ಲಿ ದುಡ್ಡು ತೆಗೆದುಕೊಂಡದ್ದು ಅನ್ಯಾ0ುವೆಂದು ಹೇಳಿ ಅವಳು ದವಡೆ0ು ಮೇಲೆ ಏಟು ತಿಂದಿದ್ದಳು.

ಅವರು ಅದೂ ಇದೂ ಮಾತನಾಡುವುದರಲ್ಲಿ ರೇವಣ್ಣಶೆಟ್ಟಿ0ೆುೕ ಬಂದ. ಕೊಕ್ಕರೆ0ು ಗರಿ0ುಂತಹ ಬಿಳಿ0ು ಪಂಚೆ, ಕಾಲಿಗೆ ರಬ್ಬರು ಚಡಾವು, ಇಸ್ತ್ರಿ ತಿಕ್ಕಿದ ಶರಟು, ಕೊರಳಲ್ಲಿ ಕಾಣುವಂತಹ ಚಿನ್ನದ ಚೈನು, ಕೈಬೆರಳುಗಳಿಗೆ ಕೆಂಪಗೆ ಹೊಳೆ0ುುವ ಮೂರು ಉಂಗುರಗಳಿಂದ ಭೂಷಿತನಾಗಿ, ಮುಖದಮೇಲೆ ಇನ್ನೂ ಚಿಗುರಾಗಿ ಕಾಣುವಂತೆ ಕತ್ತರಿಸಿದ ಮೀಸೆಯಿಂದ ಕೂಡಿದ ರೇವಣ್ಣಶೆಟ್ಟಿ0ುನ್ನು ಕಂಡ ಗಂಗಮ್ಮನಿಗೆ, ಶಿವೇಗೌಡನ ಹಣ ಗೆದ್ದೇಬಿಟ್ಟೆತೆಂಬ ನಂಬಿಕೆ ಹುಟ್ಟಿತು.

ಇವರ ಮಾತನ್ನು ಕೇಳಿದ ಮೆಲೆ ಅವನು ಹೇಳಿದ: '0ಾರ ಮನೆ ಬಿಟ್ಟೀ ಗಂಟು ಅಂತ ತಿಳ್ಕಂಡವ್ನೆ ಆ ಅನ್ಯಾ0ುಕೋರ ನನ್‌ಮಗ? ಕೋಲ್ಟಿಗೆ ಓಗ್ತಾನಂತಾ? ಓಗು ಅನ್ನಿ. ಓಗಿ ನಮ್‌ತಾವ ಏನು ಕಿತ್ಕತೀ0ೋ ಕಿತ್ಕ ಅನ್ನಿ. ತಿಪ್ಟೂರ್ನಲ್ಲಿ ನಂಗೆ ದೊಡ್ಡ ಲಾ0ುರೇ ಗೊತ್ತವ್ರೆ.'

ಗಂಗಮ್ಮನಿಗೆ ಧೈರ್ಯ ಬಂತು. 'ನಾನು ಹೋಗಿ ಹಾಗಂತ ಹೇಳಿ ಬರಲೇ ರೇವಣ್ಣ?'

'ಹೋಗಿ ಬನ್ನಿ ಅಮ್ನೋರೆ. ನೀವು ಹ್ಯದರ್ಕಬ್ಯಾಡಿ. ಮುಂದ್ಲುದ್ದೆಲ್ಲಾ ನಾನ್ ನೋಡ್ಕಂತೀನಿ.'

'ನೀನೂ ಬಾ ನನ್ ಜೊತ್ಗೆ.'

'ನಾನ್ ಬರಾದು ಚಂದಾಗಿರಾಕಿಲ್ಲ. ನಾನು ಒಳಗ್ ನಿಂತ್ ಕೆಲ್ಸ ಮಾಡ್‌ಬೇಕು. ಹ್ಯದ್‌ರಿಕೆ ಏನು ನಿಮ್ಗೆ? ಗಂಗಮ್ನೋರ ಎದೆಗುಂಡಿಗೆ ಸುತ್ತ ಅರವತ್ತನಾಕು ಹಳ್ಳೀಲಿ 0ಾವ ಗಂಡಸು ಬೋಳೀಮಗಂಗೂ ಇಲ್ಲ ಅಂತಾರೆ ಜನ. ನಿಮ್‌ಗ್ಯಾಕೆ ಹ್ಯದರ್ಕೆ?'

ಈ ಮಾತು ತಕ್ಕ ಪರಿಣಾಮವನ್ನುಂಟುಮಾಡಿತು. 'ನಾನೇನಂತ ಹ್ಯದರ್‌ಪುಕ್ಲಿ ಮುಂಡೆ ಅಲ್ಲ'–ಎಂದು ಮೇಲೆ ಎದ್ದವಳೇ ಅವಳು ನೇರವಾಗಿ ಶಿವೇಗೌಡನ ಮನೆ0ು ಮುಂದೆ ಹೋಗಿ ನಿಂತು ಹೇಳಿದಳು: 'ನನ್ನ ಗಂಡ ಶ್ಯಾನುಭೋಗ್‌ಕೆ ಮಾಡ್ತಿದ್ದ ಕಾಲ್‌ದಾಗೆ ನಾಯಿಮರಿ ಹಾಗೆ ಇದ್ದೆ0ುಲ್ಲೋ ಗೌಡ. ಈಗ ಅನ್ಯಾ0ುದಲ್ಲಿ ದಂಡ ಹಾಕಿಸಿ ಕೋರ್ಟಿಗೆ ಹೋಗ್ತೀನಿ ಅಂತ ಹೆದ್‌ರುಸ್ತೀ0ಾ? ಕೋರ್ಟಿಗಲ್ಲದೆ ಇದ್ರೆ ದಿವಾನ್‌ರ ತಂಕ ಹೋಗು. ನಾನೂ ಲಾ0ುರ್ರುನ್ನಿಡ್ತೀನಿ. ನಮ್ಮ ಹತ್ರ ನೀನು ಒಂದು ದಮ್ಡೀನೂ ಕಿತ್ಕಳುಕ್ ಆಗುಲ್ಲ. ಹೆಣ್ಣು ಹೆಂಗಸು ಅಂತ ನಾನೇನು ಹೆದುರ್ಕಳುಲ್ಲ.'

ಒಳಗಿನಿಂದ ಬಂದ ಶಿವೇಗೌಡ ಕೇಳಿದ: 'ಇದೇನ್ರಮ್ಮಾ, ಈ ಎಲ್ಡು ಗಂಟೇನಾಗ ತಾನೇ ನ್ಯಾ0ುವಾಗಿ ಮಾತಾಡ್ತಿದ್ರಿ. ಈಗ ಹಿಂಗ್ ಅಂತೀರ?

'ಅನ್‌ದೇ ಏನ್ ಅಂತೀ0ಾ? ನಂಗೂ ಕಷ್ಟಕಾಲಕ್ಕೆ ಆಗೂ ಜನ ಇದಾರೆ. ನಾನೇನು ಪರದೇಶಿ0ುಲ್ಲ'– ಎಂದವಳೇ ಗಂಗಮ್ಮ ನೇರವಾಗಿ ಮನೆಗೆ ಬಂದಳು.

ಅವಳು ಬರುವ ಹೊತ್ತಿಗೆ ರೇವಣ್ಣಶೆಟ್ಟಿ ಬಂದು ಕುಳಿತಿದ್ದ. ಮುಖ ಕಂಡೇ ಅವಳು ಶಿವೇಗೌಡನ ಕೈಲಿ ಏನು ಹೇಳಿರಬಹುದೆಂದು ಅವನು ಅರಿತುಕೊಂಡ. ಅವನು ತಾನಾಗಿ0ೆುೕ ಹೇಳಿದ: 'ಅಮ್ನೋರೇ, ನೀವು, ಇಬ್ಬರು ಗಂಡು ಮಕ್ಳೂ ಆಗಾಗ್ಗೆ ಗಾಡಿ ಕಟ್ಟಿಕೊಂಡು ಒಂದ್ ನಾಕು ಸಲ ತಿಪ್ಟೂರಿಗೆ ಬರ್‌ಬೇಕಾ0ು್ತದೆ. ಹೋಗಿ ಇದು ಅನ್ಯಾ0ು ಅಂತ ಜಡ್ಜಿಗಳ ಮುಂದೆ ಬಾಯ್ಬಿಟ್ಟು ಕೇಳ್ಕಂಡ್ರೆ ಕೇಸು ನಿಮ್ಮ ಕಡೆ0ೆುೕ ಆ0ು್ತದೆ. ಒಟ್ನಲ್ಲಿ ಒಂದೈನೂರು ಖರ್ಚು ಮಾಡಿದ್ರೆ ಸಾಕು.'

'ತಿಪ್‌ಟೂರ್ಗೆ ಹೋದ್ರೆ ಅಲ್ಲಿ ಊಟ ತಿಂಡಿಗೆ ಏನು?'–ಅಪ್ಪಣ್ಣ0ು್ಯ ಕೇಳಿದ.

'ಹೋಟ್ಲಿಲ್ವಾ!'

ಹೋಟೇಲು ಅಂದ ತಕ್ಷಣ ಅವನ ಬಾಯಿ ನೀರೂರಿತು. ಆಲೂಗಡ್ಡೆ ನೀರುಳ್ಳಿ0ು ಹುಳಿ, ಪಲ್ಯ, ಹುರಿಗಡಲೆ ಸೇರಿಸಿದ ಗಮಗಮ ಕಾಯಿಚಟ್ನಿ, ಮೊಸರು. ತಿಂಡಿಗೆ ಮಸಾಲೆ ದೋಸೆ. 'ಹೂಂ ಕಣಮ್ಮ, ತಿಪ್ಟೂರಿಗೆ ಹೋಗಿ ಕೇಸು ಹಾಕಾಣ'– ಎಂದು ನಿಶ್ಚ0ುದ ಧ್ವನಿ0ುಲ್ಲಿ ಅವನು ಹೇಳಿದ.

'ಏನಂತಿ0ೋ ಶ್ಯಾನುಭೋಗ?'–ತಾಯಿ ಕೇಳಿದುದಕ್ಕೆ ಚೆನ್ನಿಗರಾ0ುರು, '0ಾರಾದ್ರೂ ಬುದ್ಧಿವಂತ್‌ರುನ್ನ

ಕೇಳ್ಬೇಕು' ಎಂದರು.
ಅಂತೂ ಶಿವೇಗೌಡ ಕೇಸು ಹಾಕಿದ. ಇವರು ಮೂವರೂ ರೇವಣ್ಣಶೆಟ್ಟಿಯ ಜೊತೆಯಲ್ಲಿ ತಿಪಟೂರಿಗೆ ಹೋಗಿ, ಅವನು ಕರೆದುಕೊಂಡು ಹೋದ ಮಹಾಂತಯ್ಯನವರನ್ನು ಲಾಯರಾಗಿ ಇಟ್ಟರು. ಅವರ ಕಡೆಯ ಕೇಸನ್ನು ರೇವಣ್ಣಶೆಟ್ಟಿಯೇ ಹೇಳಿದ: 'ಊರಿನ ಕೆಲವರು ಸೇರಿಕೊಂಡು ಕಬ್ಬಿನ ಗದ್ದೆಗೆ ಬೆಂಕಿ ಇಟ್ಟು, ತಿಳಿವಳಿಕೆ ಇಲ್ಲದ ಇವರ ಮೇಲೆ ತಪ್ಪು ಹಾಕಿ ದುಡ್ಡು ಕಿತ್ತರು. ಇದಕ್ಕೆ ರುಜು ಮಾಡಿದ್ದು ಮೈನರ್ ಗಂಡು ಮಕ್ಕಳು. ಆಧಾರವಾಗಿರುವುದು ಪಿತ್ರಾರ್ಜಿತ ಆಸ್ತಿ. ಕಾಗದ ಬರೆಯಲು ಬಿಕಲಂ ಹಾಕಿರುವವನು, ಹಣ ಕೊಟ್ಟು ಆಧಾರ ಬರೆಸಿಕೊಂಡಿರುವವನ ಸ್ವಂತ ಬಾಮೈದ. ಈಟೆಲ್ಲ ಇರುವಾಗ ಕೇಸು ಗೆಲ್ಲಾಕಿಲ್ವಾ ಬುದ್ಧಿ?'
'ಗೆಲ್ದೆ ಉಂಟೆ?'–ಲಾಯರು ಎಂದರು.
ಮೊದಲ ದಿನದ ಖರ್ಚಿಗೆ ಇವರು ಮನೆಯ ಚಿನ್ನ ಮಾರಿ ಇನ್ನೂರು ರೂಪಾಯಿ ಹೊಂದಿಸಿದರು. ಎಲ್ಲರೆದುರಿಗೂ ದುಡ್ಡು ಕೊಟ್ಟರೆ ಲಾಯರು ಮುಟ್ಟುವವರಲ್ಲವೆಂದು ಹೇಳಿ ರೇವಣ್ಣಶೆಟ್ಟಿ ನೂರ ಎಪ್ಪತ್ತೈದು ರೂಪಾಯಿ ಇಸಿದುಕೊಂಡು, ತಾನೊಬ್ಬನೇ ಅನಂತರ ಬೇರೆಯಾಗಿ ಲಾಯರ ಮನೆಗೆ ಹೋಗಿ ಲೆಕ್ಕಾಚಾರ ಮಾಡಿಬಂದ. ಅಪ್ಪಣ್ಣಯ್ಯ ಹೋಟೆಲಿನಲ್ಲಿ ಊಟ ಮಾಡಿದುದೇ ಅಲ್ಲದೆ ಅದರ ಜೊತೆಗೇ ಮೂರು ಮಸಾಲೆ ದೋಸೆ ತಿಂದ. ಶ್ಯಾನುಭೋಗ ಚೆನ್ನಿಗರಾಯರು ಹೋಟೆಲನ್ನು ಚೆನ್ನಾಗಿ ಕಂಡವರು. ವರ್ಷಕ್ಕೆ ನಾಲ್ಕು ಸಲವಾದರೂ ದ್ಯಾವರಸಯ್ಯನವರ ಜೊತೆ ತಿಪಟೂರಿಗೆ ಬಂದು ಹೋಗಿ ಮಾಡುವವರು. ಅವರು ಖಾರ ಶೇವು, ರವೆ ಉಂಡೆ, ಮೈಸೂರು ಪಾಕುಗಳನ್ನೇ ಹೊಟ್ಟೆ ತುಂಬುವಷ್ಟು ತಿಂದರು. ವಿಧವೆ ಗಂಗಮ್ಮ ಊರಿನಿಂದ ತಂದ ಹುರಿಟ್ಟಿನ ಜೊತೆಗೆ ನಾಲ್ಕು ಬಾಳೆ ಹಣ್ಣಿನಲ್ಲಿ ಫಲಾರ ಮುಗಿಸಿದಳು.
– 4 –
ನಂಜು ಗಂಡು ಮಗು ಹೆತ್ತಳು. ನಾಮಕರಣಕ್ಕೆ ಬಂದ ಚೆನ್ನಿಗರಾಯರು, ಅವರ ಅಮ್ಮ ಹೇಳಿಕಳಿಸಿದ್ದಂತ ತಮ್ಮ ತಂದೆಯ ಹೆಸರಾದ ರಾಮಣ್ಣ ಎಂದು ಇಟ್ಟರು. ಈ ಸಲ ಅವರು ಮಾವನ ಮನೆಯಲ್ಲಿ ಹೆಚ್ಚು ದಿನ ಇರಲಿಲ್ಲ. ಭಾವಮೈದುನನನ್ನು ಕಂಡರೆ ಅವರಿಗೆ ಒಳಗಿಂದೊಳಗೇ ಒಂದು ವಿಧವಾದ ಭಯವಾಗುತ್ತಿತ್ತು. ಅಲ್ಲದೆ ಅವನ ಹೆಂಡತಿ ಕಮಲು ಸಿಡಸಿಡ ಎನ್ನುತಿದ್ದಳು.
ಮೂರು ತಿಂಗಳ ಬಾಣಂತಿತನ ಮುಗಿಸಿಕೊಂಡು ಊರಿಗೆ ಬಂದ ಎರಡನೆಯ ದಿನವೇ ನಂಜುವಿಗೆ ಶಿವೇಗೌಡನ ಜೊತೆ ಕೋರ್ಟಿನಲ್ಲಿ ನಡೆಯುತ್ತಿದ್ದ ಕೇಸಿನ ವಿಷಯ ತಿಳಿದಿದ್ದು. ಶಿವೇಗೌಡನ ಹತ್ತಿರ ಇವರ ಸಾಲವಿರುವುದು ಅವಳಿಗೆ ಮೊದಲೂ ಗೊತ್ತಿತ್ತು. ಜಮೀನು ಆಧಾರ ಮಾಡಿ ಅವನಿಂದ ಎರಡು ಸಾವಿರ ರೂಪಾಯಿ ಪಡೆದು, ಕಬ್ಬಿನ ಗದ್ದೆಗೆ ಬೆಂಕಿ ಬೀಳಿಸಿದುದಕ್ಕೆ ಇವರು ಊರೊಟ್ಟಿನ ದಂಡ ಕೊಟ್ಟರು ಎಂಬ ಮಾತನ್ನು ಈ ಮನೆಯ ಸೊಸೆಯಾಗಿ ಬಂದು ಒಂದು ತಿಂಗಳಿಗೆ ಕೆರೆಯಲ್ಲಿ ಪಾತ್ರೆ ಬೆಳಗುವಾಗ ಕೇಳಿದ್ದಳು. ಆ ಬಗೆಗೆ ತಾನಾಗಿ ಮನೆಯಲ್ಲಿ ಯಾರನ್ನಾದರೂ ಕೇಳಲಾರಳು. ಒಂದು ದಿನ ಗಂಡನನ್ನು ಕೇಳಿದುದಕ್ಕೆ–
'ನಿಂಗ್ಯಾಕೆ ಯಜಮಾನಿಕೆ, ಸುಮ್ಮನ್ ಕುಕ್ಕರಿಸ್ಕೊ'ಎಂದು ಉತ್ತರ ಬಂದಿತ್ತು.
ತಾನು ಶ್ಯಾನುಭೋಗಿಕೆ ಲೆಕ್ಕ ಬರೆಯಲು ಪ್ರಾರಂಭಿಸಿದ ಮೇಲೆ, ಅವಳಿಗೆ ಆಧಾರ ಸಾಲದ ಪರಿಣಾಮವೇನಾಗಬಹುದೆಂಬ ಕಲ್ಪನೆ ಹುಟ್ಟಿತು. ತಾನಾಗಿಯೇ ಒಂದು ದಿನ ಈ ಮಾತನ್ನು ಮತ್ತೆ ತೆಗೆದು ವಿಚಾರಿಸಬೇಕೆಂಬ ಯೋಚನೆ ಬರುತ್ತಿದ್ದ ಸಮಯದಲ್ಲಿಯೇ ಅಪ್ಪಣ್ಣಯ್ಯ ಅವಳನ್ನು ಕಾಲಿನಿಂದ ಒದೆದು ಊರು ಬಿಟ್ಟು ಓಡಿಹೋಗಿದ್ದ. 'ಈ ಅನಿಷ್ಟ ಮುಂಡೆಯಿಂದಲೇ ನನ್ನ ಕಂದ ಪರದೇಶಿಯಾಗಿಹೋಯ್ತು'– ಎಂದು ಅತ್ತೆ ಮೊದಲೇ ಅನ್ನುತ್ತಿದ್ದಳು. ಈಗ ಈ ಮಾತು ತೆಗೆದರೆ ತನಗ್ಯಾಕೆ ಯಜಮಾನಿಕೆ ಎಂದು ಬೈಸಿಕೊಳ್ಳಬೇಕಾಗುತ್ತದೆಂದು ಭಯಪಟ್ಟು ಸುಮ್ಮನಾಗಿದ್ದಳು. ಅಷ್ಟರಲ್ಲಿ ಹೆರಿಗೆಗೆ ಊರಿಗೆ ಹೋಗಿ ಈಗ ಹಿಂತಿರುಗುವುದರಲ್ಲಿ ಇದು ಕೋರ್ಟಿಗೇ ಹೋಗಿದೆ. ಒಂದು ದಿನ ಉಪಾಯವಾಗಿ ಗಂಡನನ್ನು ಕೇಳಿದರೆ–'ಆ ನನ್ ಮಗುನ್ಗೆ ಒಂದು ದಮ್ಡೀನೂ ಕೊಡುಲ್ಲ. ಕೋರ್ಟಿನಲ್ಲಿ ಅವನ ಕೈಲೇ ಕಾಸು ಕುಕ್ಕುಸ್ತೀನಿ' ಎಂದು ಪ್ರತಾಪ ಹೇಳಿಬಿಟ್ಟರು.
'ಕೇಸು ಗೆಲ್ಲುತ್ತೆ ಅಂತ ನಿಮಗೆ ಯಾರು ಹೇಳಿದರು?'
'ರೇವಣ್ಣಶೆಟ್ರು.'
'ರೇವಣ್ಣಶೆಟ್ರ ಮಾತು ಹ್ಯಾಗೆ ನಂಬ್‌ಬೇಕು? ಅವರು ಎಂಥೋರು ಅಂತ ನಿಮ್ಗೆ ಗೊತ್ತಿಲ್ವೆ?'
'ಕತ್ತೆಮುಂಡೆ, ಅವುನ್ನ ಬೈಯ್ತಿಯೇನೇ? ಇವ್ಳು ನಿಮ್ಮುನ್ನ ಹೀಗಂದ್ಲು ಅಂತ ನಾಳೆ ದಿನ ಅವರ ಕೈಲೇ ಹೇಳ್ತೀನಿ ನೋಡು.'
ಗಂಡ ಅವಿವೇಕಿ ಎಂದು ಅವಳಿಗೆ ಹೊಸದಾಗಿ ತಿಳಿಯಬೇಕಾಗಿರಲಿಲ್ಲ. ಆದರೆ ಅದು ಇಷ್ಟು ಮಟ್ಟಿನದು ಎಂಬುದರ ಅರಿವಾಗಿ ಕಣ್ಣಿನಲ್ಲಿ ನೀರು ಬಂತು. ಅಲ್ಲಿಗೆ ಆ ಮಾತನ್ನು ನಿಲ್ಲಿಸಿದಳು. ಆದರೆ ಅದೇ ಯೋಚನೆ ಮನಸ್ಸನ್ನು ಕೊರೆಯುತ್ತಿತ್ತು. ರೇವಣ್ಣಶೆಟ್ಟಿ ಇಸ್ಪೀಟು ಆಡುತ್ತಾನೆ, ಕುಡಿಯುತ್ತಾನಂತೆ, ಅವನು ಬೀದಿಯಲ್ಲಿ ಹೋಗುವಾಗ ಹೆಂಗಸರ ಕಡೆ ನೋಡುವ ರೀತಿ ಚೆನ್ನಾಗಿಲ್ಲ, ಮನೆಯಲ್ಲಿ ಸರ್ವಕ್ಕ ಸಂತೋಷವಾಗಿಲ್ಲ,

ಎಂಬುದೆಲ್ಲ ಅವಳಿಗೆ ಚೆನ್ನಾಗಿ ಗೊತ್ತು. ಅವು ಊರಿನಲ್ಲಿ ಎಲ್ಲರಿಗೂ ಗೊತ್ತಿರುವ ಸಂಗತಿಗಳೇ. ಮರುದಿನ ಪಾತ್ರೆ ಬೆಳಗಲು ಕೆರೆಗೆ ಹೋದಾಗ ರೇವಣ್ಣಶೆಟ್ಟಿಯ ಹಿರೀ ಮಗಳು ರುದ್ರಾಣಿ ಇವಳ ಪಕ್ಕದ ಕಲ್ಲಿನಲ್ಲಿ ಇಳಿದುಕೊಂಡಿದ್ದಳು. 'ರುದ್ರಾಣೀ, ನಿಮ್ಮವ್ವಯ್ಯ ಮನ್ಲೇ ಐತಾ?'

'ಊಂ, ಐತೆ!'

'ಅಪ್ಪಾಜಿ?'

'ಕೋಡೀಹಳ್ಳೀಗ್ ಹೋಗೈತೆ.' ಅದು ಇಸ್ಪೀಟಿಗೆ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ.

'ಹಂಗಾದ್ರೆ ನೀನು ಈಗ್ಲೇ ಮನ್ಗೆ ಹೋಗಿ, ನಾನು ಬರಹೇಳ್ದೆ ಅಂತ ನಿಮ್ಮವ್ವಯ್ಯನ್ನ ಒಂದ್ ಸಟಿಗ್ ಕರ್ಕಂಡ್‌ಬತ್ತೀಯಾ? ನಿನ್ನ ಪಾತ್ರೆ ಇಲ್ಲೇ ಇರ್ಲಿ. ನಾನ್ ನೋಡ್ಕತ್ತೀನಿ. ನೀನು ಮನ್ಲೇ ಇದ್ದು ಅವ್ರುನ್ನ ಕಳ್ಸು.'

ಹತ್ತು ನಿಮಿಷದಲ್ಲಿ ಸರ್ವಕ್ಕ ಬಂದಳು. ಒಂದೆರಡು ನಿಮಿಷ ಪರಸ್ಪರ ಕ್ಷೇಮಸಮಾಚಾರ ವಿಚಾರಿಸಿದ ಮೆಲೆ ನಂಜಮ್ಮ ಒಂದು ಸಲ ಸುತ್ತಮುತ್ತ ನೋಡಿ, ಯಾರೂ ಇಲ್ಲವೆಂದು ಖಚಿತವಾದ ಮೇಲೆ ಕೇಳಿದಳು:

'ನೋಡ್ರಿ, ನಾನೊಂದು ವಿಷಯ ಗುಟ್ನಲ್ಲಿ ಕೇಳ್ತೀನಿ ನೀವು ಹೇಳ್ಬೇಕು.'

'ಏನು ಹೇಳ್ರಿ.'

'ನಿಮ್ಮನೆಯೋರು ನಮ್ಮನೇ ಕೇಸು ನಡುಸ್ತೀನಿ ಅಂತ ನಿಂತಿದಾರಲಾ, ಅದು ನಿಜವಾಗ್ಲೂ ಗೆಲ್ಲುತ್ತಾ?'

'ನಂಜಮ್‌ನೋರೇ, ಗಂಡು ಗಂಡುಸ್ರ ಇಚಾರ ನಮ್ಗೇನು ತಿಳೀತೈತೆ? ನಮಗ್ಯಾಕ್ ಬುಡಿ ಆ ಮಾತು.'

'ಇಲ್ಲ, ಖಂಡಿತ ನೀವು ನಿಮಗೆ ತಿಳಿದದ್ದ ಹೇಳ್ಲೇ ಬೇಕು.'

'ತಾನೂ ಒಂದು ಸಲ ಸುತ್ತ ಮುತ್ತ ನೋಡಿ ಸರ್ವಕ್ಕ ಹೇಳಿದಳು: 'ನಮ್ಮ ಶೆಟ್ರಿಗ್ ತಿಳುದ್ರೆ ನನ್ನ ಸಾಯ್ಸಾಕ್‌ಬುಡ್ತಾರೆ. ಯಾರ್ ಕುಟ್ಲೂ ಹೇಳಾದಿಲ್ಲ ಅಂತ ಗಂಗಮ್ ತಾಯಿ ಮುಟ್ಟಿ ಆಣೆ ಮಡಗ್‌ಬೇಕು.'

'ಗಂಗಮ್ ತಾಯಿ ಆಣೆಗೂ ಯಾರ ಕೈಲೂ ಹೇಳುಲ್ಲ'–ಎಂದು ನಂಜಮ್ಮ ಕೆರೆಯ ನೀರನ್ನು ಕೈಲಿ ಹಿಡಿದು ಎಂದಳು.

'ವಳಗೇರಳ್ಳಿ ನಿಂಗಪ್ಪನ ಮನೆ ಅಣ್‌ತಮ್ದೀರ ಜಗಳ್ದಾಗೆ ನಮ್ಮನೆಯೋರು ಲಾಯ್ರಿ ಮಾಡದ್ರಲ. ನಾನು ಗೆಲಿಸ್‌ಕೊಡ್ತೀನಿ ಅಂತ ದುಡ್ ತಿಂದಿದ್ರಂತೆ. ಅವ್ರು ಸೋತ್ರಂತೆ. ಒಂದ್ ದಿನ ನಮ್ಮನೆ ಮುಂದುಕ್ ಬಂದಿ, ನಿಮ್ಮವ್ವ ಅಪ್ಪ ಅಂತ ಬೈದಿ, ನಿನ್ ಮಕ್ಳ ಸುಳಿ ನಾಸ್ನಾಗ ಅಂತ ಮಣ್ ತೂರಿ ಹ್ವಾದ. ಇವ್ರು ಇಸ್ಪೀಟಾಡಾಕ್ ದುಡ್ಗೆ ಹಿಂಗೆಲ್ಲ ಲಾಯ್ರಿ ಮಾಡ್ತಾರೆ.'

ತಾನು ಭಾವಿಸಿದ್ದಂತೆಯೇ ಸರ್ವಕ್ಕನೂ ನುಡಿದಳು. ಇನ್ನು ಈ ಕೋರ್ಟಿನ ವ್ಯವಹಾರದಿಂದ ತಪ್ಪಿಸಿಕೊಂಡು, ಇರುವ ಜಮೀನು ಉಳಿಸಿಕೊಳ್ಳುವ ದಾರಿ ಯಾವುದು ಎಂದು ಯೋಚಿಸುತ್ತಾ ನಂಜಮ್ಮ ಮೂಕಳಾದಳು. ಸರ್ವಕ್ಕನೇ ನಿಟ್ಟಿಸಿರಿಟ್ಟು–'ನಂಜಮ್ನೋರೆ, ನಂದು ನಿಮ್ದೂ ಒಂದೇ ಹಣೇಬರಾವು. ನಮ್ಮನೆಯೋರ್ಗೆ ಮನೆ ಮರಿಯೂ ಬುದ್ಧಿ ನಿಮ್ನೋರಿಗ್ ಬುದ್ಧಿಯೇ ಇಲ್ಲ. ಯಾರ್ಗೂ ಸುಕವಿಲ್ಲ. ನಾ ಹೋಯ್ತೀನಿ, ನಾನ್ಹೇಳಿದ್ದು ಮಾತ್ರ ಯಾರ್ಗೂ ಏಳ್‌ಬ್ಯಾಡಿ. ಗಂಗಮ್ಮತಾಯಿ ಆಣೆ ಮಡಗಿದೀರ' ಎಂದು ಹೇಳಿ ತನ್ನ ಪಾತ್ರೆಗಳನ್ನು ಗೆರಸಿಗೆ ತುಂಬಿಕೊಂಡು ಮನೆಗೆ ಹೋದಳು.

ನಂಜಮ್ಮ ಆ ರಾತ್ರಿ ಎಲ್ಲ ನಿದ್ದೆ ಮಾಡಲಿಲ್ಲ. ಬೆಳಿಗ್ಗೆ ಎದ್ದು ಒಂದು ಹಾಳೆ ಕಾಗದದ ಮೇಲೆ ಕ್ಷೇಮ ಸಮಾಚಾರ ತಿಳಿಸಿ–'ಇಲ್ಲಿಯ ಜಮೀನೆಲ್ಲ ಆಧಾರ ಮಾಡಿದ್ದರು. ಈಗ ಕೋರ್ಟಿನಲ್ಲಿ ಕೇಸು ಹಾಕಿದಾರೆ. ಖಂಡಿತ ನೀವು ತಕ್ಷಣ ಇಲ್ಲಿಗೆ ಬಂದು ಹೋಗುವುದು' ಎಂದು ಅಣ್ಣನಿಗೆ ಬರೆದು, ಪಾತ್ರೆ ತೆಗೆದುಕೊಂಡು ಕೆರೆಯ ಕಡೆಗೆ ಹೊರಟಳು. ಕೆರೆಯಲ್ಲಿ ಯಾರಾದರೂ ಸಿಕ್ಕಿ ಅವರಿಂದ ಅದನ್ನು ತೌರಿಗೆ ತಲುಪಿಸುವ ಆಸೆ ಮನಸ್ಸಿನಲ್ಲಿತ್ತು. ಅಲ್ಲಿ ಯಾರೂ ಇರಲಿಲ್ಲ. ಆದರೆ ಗುಡಿಯ ಮಾದೇವಯ್ಯನವರು, ಜೋಳಿಗೆಯಲ್ಲಿ ಎತ್ತಿದ ಗಂಟಿ ಬಿಲ್ವಪತ್ರೆಗಳನ್ನು ನೀರಿಗೆ ಅದ್ದಲು ಇವಳು ಇಳಕೊಂಡಿದ್ದ ಕಡೆಗೆ ಬರುತ್ತಿದ್ದರು. ಅಯ್ಯನವರ ಮೇಲೆ ನಂಜಮ್ಮನಿಗೆ ತುಂಬ ಭಕ್ತಿ ಗೌರವಗಳಿದ್ದವು. ಅವರು ಇತ್ತೀಚೆಗೆ ಈ ಮನೆಗೆ ಹೆಚ್ಚಾಗಿ ಬರದಿದ್ದರೂ ಈ ಹಿರಿ ಸೊಸೆಯ ಬಗೆಗೆ ಅವರಲ್ಲಿ ಗೌರವವಿತ್ತು. ನಂಜಮ್ಮನೇ–'ಅಯ್ನೋರೇ ಸ್ವಲ್ಪ ಇಲ್ಲಿ ಬನ್ನಿ' ಎಂದು ಕೂಗಿದಳು. ಸುತ್ತಮುತ್ತ ಒಂದು ಸಲ ಸೂಕ್ಷ್ಮವಾಗಿ ನೋಡಿ, ತನ್ನ ಬಾಳೇಕಾಯಿಯಲ್ಲಿ ಮಡಿಸಿ ಇಟ್ಟುಕೊಂಡಿದ್ದ ಕಾಗದವನ್ನು ತೆಗೆದು ಅವರ ಹತ್ತಿರ ಬೀಳುವಂತೆ ಎಸೆದು, 'ಇದನ್ನ ನೀವು ಓದಿಕಳ್ಳಿ, ನಿಮಗೇ ತಿಳಿಯುತ್ತೆ. ಏನಾರಾ ಮಾಡಿ ನಮ್ಮ ಅಣ್ಣನಿಗೆ ತಲುಪುಸ್ಬೇಕು. ಯಾರಿಗೂ ತಿಳಿಯಕೂಡದು' ಎಂದು ಹೇಳಿ, ಏನೂ ತಿಳಿಯದವಳಂತೆ ಕತ್ತು ಬಗ್ಗಿಸಿಕೊಂಡು ಪಾತ್ರೆ ತೊಳೆಯಲು ಶುರು ಮಾಡಿದಳು.

ಕಾಗದದ ಮಡಿಕೆಯನ್ನು ಎತ್ತಿ ಅಯ್ಯನವರು ತಮ್ಮ ಕಾವಿಯ ಅಂಗಿಯ ಜೇಬಿಗೆ ಇಟ್ಟು–'ಆಗ್ಲವ್ವ' ಎಂದು ಹೇಳಿ ಜೋಳಿಗೆಯ ಹೂವು ಪತ್ರೆಗಳನ್ನು ನೀರಿನಲ್ಲಿ ಅದ್ದಿಕೊಂಡು ಹೊರಟು ಹೋದರು. ಆದಿನ ಅವರು ಊರಿನಲ್ಲಿ ಗುರುಕೋರಣ್ಯದ ಭಿಕ್ಷೆ ಮಾಡಲಿಲ್ಲ. ಶಿವಗೆರೆಯ ಒಂದೆರಡು ಹಳ್ಳಿಗಳಿಗೆ ಹೋಗಿದ್ದರಂತೆ. ಮಾರನೆಯ ದಿನ ಮಧ್ಯಾಹ್ನ ಕಲ್ಲೇಶ ಕಾಲುನಡಿಗೆಯಲ್ಲಿ ತಂಗಿಯ ಮನೆಗೆ ಬಂದ. ಅಣ್ಣನ ಕೈಲಿ

ಎಲ್ಲವನ್ನೂ ಮಾತನಾಡಲು ಒಂದು ಜಾಗವಿಲ್ಲ. ಹಾಗೆ ಎಲ್ಲಿಯಾದರೂ ಹೋಗಿ ಆಡುವುದಕ್ಕಿಂತ ಎದುರಿಗೆ ಕೂತು ಹೇಳುವುದೇ ಸರಿ ಎಂದು ತೀರ್ಮಾನಿಸಿದ ಅವಳು ಎಲ್ಲರ ಎದುರಿಗೇ ಮಾತನ್ನು ತೆಗೆದಳು. ಆಗಿರುವ ವಿಷಯವನ್ನು ಹೇಳಿ, ಮುಂದೆ ತಾವು ಏನು ಮಾಡಬೇಕೆಂಬ ಬಗೆಗೆ ಅವನ ಸಲಹೆ ಕೇಳಿದಳು.

ಯಾರ ಮೂಲಕವೋ ಹೇಳಿ ಕಳಿಸಿ ಇವಳು ಅಣ್ಣನನ್ನು ಕರೆಸಿಕೊಂಡಿದ್ದಾಳೆ ಎಂಬ ಅನುಮಾನ ಗಂಗಮ್ಮನಿಗೆ ಉಂಟಾಗದೆ ಇರಲಿಲ್ಲ. ಆದರೆ ಪೋಲೀಸು ಕೆಲಸದಲ್ಲಿದ್ದ ಈ ಬೀಗನ ಮಗನ ಎದುರಿಗೆ ಮಾತನಾಡಬಾರದೆಂದು ಅವಳು ಸುಮ್ಮನಿದ್ದಳು. ಇವರು ಆಧಾರ ಪತ್ರದಲ್ಲಿ ಬರೆದಿರುವುದೇನೆಂದು ನಿಖರವಾಗಿ ಕಲ್ಲೇಶನಿಗೆ ಗೊತ್ತಿಲ್ಲ. ಶ್ಯಾನುಭೋಗರಾದ ಭಾವನವರನ್ನು ಕೇಳಿದರೆ, 'ಅದೇನೋ ನಂಗ್ ಗೊತ್ತಿಲ್ಲ. ಸಿವಲಿಂಗ ಬರದ' ಎಂದುಬಿಟ್ಟರು.

'ಏನೂ ಗೊತ್ತಿಲ್ಲದೆ ನೀವು ಕೋರ್ಟಿಗೆ ಹ್ಯಾಗೆ ಹೋದ್ರಿ?'–ಎಂದುದಕ್ಕೆ. 'ರೇವಣ್ಣಶೆಟ್ರಿಗೂ ಲಾಯರಿಗೂ ಗೊತ್ತು. ಅವ್ರೇನ್ ಸುಳ್ ಹೇಳ್ತಾರೆಯೇ? ಕೇಸು ಗೆದ್ದೇ ಗೆಲ್ಲುತ್ತೆ' ಎಂದರು.

ನಂಜಮ್ಮ ಧೈರ್ಯವಾಗಿ ರೇವಣ್ಣಶೆಟ್ಟಿಯ ಹಿಂದು ಮುಂದುಗಳನ್ನು ವಿವರಿಸಿದಳು. 'ಅವ್ರನ್ನ ನಂಬಿಕಂಡ್ರೆ ಸಂಸಾರ ಮುಳುಗುತ್ತೆ. ಈಗ ನಮಗೆ ತಿಳಿದ ಹಾಗೆ ವಿವೇಕದಿಂದ ನಡೀಬೇಕು. ಪರಬುದ್ಧಿ ಮಾತು ಬ್ಯಾಡ.'

'ಭಾವಾ ನನ್ನ ಜೊತೆ ಬಾ. ಶಿವೇಗೌಡನ ಮನೆಗೇ ಹೋಗಿ ಕಾಗದದ ವಕ್ಕಣೆ ಏನಿದೆ ಅಂತ ಕೇಳಾಣ'– ಕಲ್ಲೇಶ ಕರೆದ.

ಆದರೆ ಅವನ ಮನೆಗೆ ಹೋಗಲು ಶ್ಯಾನುಭೋಗರಿಗೆ ಹೆದರಿಕೆ. 'ಈಗ ಯಾಕ್ಲಪ್ಪಯ್ಯ ಬಂದೆ ನನ್ ತಾವುಕ್ಕೆ? ಅದೇನಿದ್ರು ಕೋಲ್ಬಿನಾಗೇ ಮಾಡ್ಕ ಓಗು'–ಎಂದು ಅವನು ಅಂದುಕಳಿಸುತ್ತಾನೆಂಬ ಭಯ ಒಳಗೇ ಕೊರೆಯುತ್ತಿತ್ತು. ಅವರು ಹೇಳಿದರು: 'ಆ ಬೋಳೀಮಗನ ಮನೆಗೆ ಏನು ಹೋಗೂದು? ನಮ್ಮ ಕೇಸು ಗೆಲ್ಲುತ್ತೆ. ನಂಗಷ್ಟೂ ಗೊತ್ತಿಲ್ವೇನೋ!'

ಕಲ್ಲೇಶ ಒಬ್ಬನೇ ಶಿವೇಗೌಡನ ಮನೆಗೆ ಹೋದ. ಶಿವೇಗೌಡ, ನಿರೀಕ್ಷಿಸಿದ್ದಂತೆಯೇ ಉತ್ತರ ಕೊಟ್ಟು ಕಳಿಸಿದ. ತಿಮ್ಲಾಪುರದ ದ್ಯಾವರಸಯ್ಯನವರನ್ನು ಹೋಗಿ ಕೇಳುವಂತೆ ನಂಜಮ್ಮ ಹೇಳಿದಳು.

ಅವನು ಆ ಊರಿನ ದಾರಿ ಕೇಳಿಕೊಂಡು ಕಾಲಿಗೆ ಎಕ್ಕಡ ಮೆಟ್ಟಿ ಹೊರಟ. ಅವನು ಮನೆಯಿಂದ ಹೋಗಿ ಹತ್ತು ನಿಮಿಷ ಕಳೆಯುವುದೇ ತಡ, ಗಂಗಮ್ಮ ಸೊಸೆಯನ್ನು ಕೇಳಿದಳು: 'ಅದ್ಯಾವನ್ ಕೈಲಿ ಹೇಳಿಕಳ್ಸಿ ಕರಸ್ಕಂಡ್ಯೆ ನಿನ್ನ ಮಿಂಡನ್ನ? ಇವತ್ತು ರಾತ್ರಿಗೆ ಅವನ ಮಗ್ಗುಲಿಗೇ ಮಲಕ್ಕತೀ ಏನೇ?'

ಈ ಮಾತನ್ನು ಕೇಳಿದ ನಂಜಮ್ಮನಿಗೆ ಇನ್ನಿಲ್ಲದ ಸಿಟ್ಟು ಬಂದುದು ಮಾತ್ರವಲ್ಲ; ಈ ಮೊದಲು ಇಲ್ಲದ ಧೈರ್ಯವೂ ಹುಟ್ಟಿತು. ಅವಳು ಹೇಳಿದಳು: 'ಅಂಥ ಕೆಲ್ಸ ನೀವು ಮಾಡ್ತಿದ್ರಿ ಅಂತ ಕಾಣುತ್ತೆ. ಅದ್ಕೇ ಆ ಮಾತು ನಿಮ್ಮ ಬಾಯಲ್ಲಿ ಬರುತ್ತೆ. ನಿಮ್ಮ ನಾಲಿಗೆ ಬಿಗಿಯಾಗಿ ಹಿಡ್ಕಳಿ. ಚಿಕ್ಕವಯಸ್ನಿಂದ ನ್ಯಟ್ಟಗೆ ಬುದ್ಧಿ ಕಲಿದ್ರೆ ನೀವ್ಯಾಕ್ ಹೀಗ್ ಆಗ್ತಿದ್ರಿ? ನಿಮ್ಮ ಮಕ್ಳು ಯಾಕ್ ಹೀಗ್ ಆಗ್ತಿದ್ರು?'

'ಕೇಳ್ದೆ ಏನೋ ಚಿನ್ನಯ್ಯ? ಎದ್ದು ಒಂದ್ ಸಲಿ ಒದೆಯೋ ಆ ಮುಂಡೆ ಸ್ವಂಟದ ಮ್ಯಾಲೆ?'

'ಹಾಗಂತ ನನ್ನ ತಂಟೆಗೆ ಬನ್ನಿ. ನಮ್ಮಣ್ಣಯ್ಯ ಸಾಯಂಕಾಲಕ್ಕೆ ಮತ್ತೆ ಬತ್ತಾನೆ'

ಎದ್ದು ಹೆಂಡತಿಯನ್ನು ಒದೆಯುವ ಧೈರ್ಯವಿರಲಿಲ್ಲವೋ, ಅಥವಾ ಅಷ್ಟು ಮಾಡಲು ಸೋಮಾರಿತನವೋ, ಅಂತೂ ಚೆನ್ನಿಗರಾಯರು ಮೇಲೆ ಏಳಲಿಲ್ಲ. ಗಂಗಮ್ಮ ಎರಡನೆಯ ಮಗನಿಗೆ ಆ ಮಾತು ಹೇಳಲಿಲ್ಲ. ಹೇಳಿದ್ದರೂ ಅವನು ಇನ್ನೊಂದು ಸಲ ಧೈರ್ಯ ಮಾಡುತ್ತಿರಲಿಲ್ಲವೋ ಏನೋ!

ಕಲ್ಲೇಶ ಮರುದಿನವೂ ಬರಲಿಲ್ಲ. ಎರಡನೆಯ ದಿನ ಬಂದ. ಅವನ ಜೊತೆಗೆ ದ್ಯಾವರಸಯ್ಯನವರೂ ಇದ್ದರು. ಮೊನ್ನೆಯ ದಿನ ದ್ಯಾವರಸಯ್ಯನವರ ಊರಿನಲ್ಲಿ ಇದ್ದು ಅವನು ನೆನ್ನೆ ಅವರನ್ನೂ ಜೊತೆಗೆ ಕರೆದುಕೊಂಡು ತಿಪಟೂರಿಗೆ ಹೋಗಿ ಸಿವೇಗೌಡನ ಲಾಯರನ್ನೇ ಕಂಡುಬಂದಿದ್ದ. ಇವರ ಎಲ್ಲ ಜಮೀನೂ ಆಧಾರಕ್ಕೆ ಸೇರಿದುದಾಗಿಯೂ ಕಕ್ಷಿಗಾರರನ್ನು ಒಪ್ಪಿಸಿ ಅಸಲು, ಬಡ್ಡಿ, ಕೋರ್ಟು ಖರ್ಚುಗಳನ್ನು ಕೊಟ್ಟರೆ ಕೇಸು ಹಿಂದಿರುಗಿಸುವಂತೆ ಅವನಿಗೆ ತಾವು ಹೇಳುವುದಾಗಿಯೂ ಅವರು ಹೇಳಿದ್ದರು.

ಗಂಗಮ್ಮ, ತನ್ನ ಭಾವ, ಮತ್ತು ಅಪ್ಪಣ್ಣಯ್ಯರನ್ನು ಕೂರಿಸಿಕೊಂಡು ಕಲ್ಲೇಶ ಹೇಳಿದ: 'ಅಸ್ಲು ಹಣ ಯಾರೂ ಬಿಡೂದಿಲ್ಲ. ಕೋರ್ಟಿಗೆ ಖರ್ಚು ಮಾಡಿರೂದನ್ನೂ ಯಾರೂ ಬಿಡುಲ್ಲ. ಬಡ್ಡೀಲಿ ಒಂದಿಷ್ಟು ಬಿಟ್ಟುಬಿಡಪ್ಪ ಅಂತ ಅವ್ನನ್ನ ಕೇಳ್ಕಭೌದು. ಒಟ್ನಲ್ಲಿ ಒಂದು ಐದು ಸಾವಿರದಲ್ಲಿ ಬಗೆಹರಿಯೂ ಹಾಗಿದ್ರೆ ಯಾವುದಾದ್ರೂ ಒಂದು ದೊಡ್ಡ ಜಮೀನು ಮಾರಿಯೋ, ಅಥವಾ ಅವನಿಗೆ ಖರೀದಿಗೆ ಬರೆದೋ, ಉಳಿದ ಜಮೀನಾದ್ರೂ ಉಳಿಸಿಕೋಭೌದು. ಅವನ ಮನೆಗೆ ಹೋಗಾಣ ನಡೀರಿ.'

ಈ ಸಲಹೆಗೆ ಗಂಗಮ್ಮ ಒಪ್ಪಲಿಲ್ಲ. ಆದರೆ ಕಲ್ಲೇಶ ಬಿಡಲಿಲ್ಲ. ಜೊತೆಗೆ ದ್ಯಾವರಸಯ್ಯನವರು ಚೆನ್ನಿಗರಾಯನಿಗೆ ವಿವೇಕ ಹೇಳಿದರು. ಒಟ್ಟಿನಲ್ಲಿ ತಾಯಿ, ಇಬ್ಬರು ಗಂಡು ಮಕ್ಕಳು, ಕಲ್ಲೇಶ, ದ್ಯಾವರಸಯ್ಯನವರು, ಐದು ಜನವೂ ಶಿವೇಗೌಡನ ಮನೆಗೆ ಹೋದರು. ಇವರಾಗಿಯೇ ಅವರು ಬಂದದಕ್ಕೆ ಅವನು ಮೇಲೆ ಏರಿದ. ಆದರೆ ಕಲ್ಲೇಶ ಮತ್ತು ದ್ಯಾವರಸಯ್ಯನವರು ತಾಳ್ಮೆಯಿಂದ ಅವನ ಮಾತಿಗೆ

ಒಂದೊಂದಾಗಿ ಸಮಾಧಾನ ಹೇಳಿ ಒಪ್ಪಿಸುತ್ತಿದ್ದರು. ಶಿವೇಗೌಡ ಒಂದು ಸಲ ಗಂಗಮ್ಮನ ಕಡೆಗೆ ತಿರುಗಿ ಮುಯ್ಯಿ ತೀರಿಸಿಕೊಳ್ಳುವ ಧ್ವನಿಯಲ್ಲಿ ಹೇಳಿದ: 'ಏನಮ್ಮ, ನನ್ನ ನಾಯಿಮರಿ ಅಂತ ಬೈದು, ನನ್ ತಾವ ಒಂದ್ ದಮ್ಡಿನೂ ಕಿತ್ಕಳಾಕ್ ಆಗಾಕುಲ್ಲ ಅಂದಿದ್ದೆ. ಈಗ ಮತ್ತೆ ಬಾಕ್ಲಿಗೇ ಬಂದ್ಯಲ, ನಾಚಿಕೆಯಾಗ್ಲಿಲ್ವ?'

'ಅಮ್ಮ, ನೀವು ಈಗ ತಾಳ್ಮೆ ತಗೋಬೇಕು?'–ಎಂದು ದ್ಯಾವರಸಯ್ಯನವರು ಗಂಗಮ್ಮನಿಗೆ ಹೇಳುತ್ತಿದ್ದರು. ಅಷ್ಟರಲ್ಲಿ ಅವಳು ಬೆಂಕಿಯಂತೆ ಉರಿದು ಮಾತನಾಡಿಬಿಟ್ಟಳು: 'ಏನೋ ಗೌಡ, ನನ್ ಹಂಗ್‌ಸುಕ್ ನಿಂತ್‌ಕಂಡ್ಯೇನೋ? ನೀನೆಷ್ಟು, ನಿನ್ ಯೋಗ್ತಿ ಎಷ್ಟು? ನಾಯಿ ಮುಂಡೆಗಂಡ.'

'ಹಂಗಾದ್ರೆ, ನೀನ್ ನನ್ ತಾವ ಕಿತ್ಕ ನೋಡಾನಾ.'

'ನೀನ್ ಕೊಡ್ದೆ ಇದ್ರೆ ಕೋರ್ಟ್‌ನಾಗೆ ಕಿತ್ಕತ್ತೀನಿ ಕಣೋ. ನೀನು ನನ್ ನೀನು ತಾನು ಅಂತ ಮಾತಾಡ್ತೀಯಾ, ಪಾಪಿ ಮುಂಡೇಮಗನೆ. ಲೋ ಅಪ್ಪಣ್ಣಯ್ಯ, ಚಿನ್ನಯ್ಯ, ಏಳ್ರೋ ಮನೆಗೆ ಹೋಗಾಣ. ಯಾಕ್ರೋ ಏಳ್ಲಿಲ್ಲ, ಅಪ್ಪುಂಗ್ ಹುಟ್ಟಿದ ಮಕ್ಳಲ್ವೇನ್ರೋ ನೀವು?'

ಅಪ್ಪಣ್ಣಯ್ಯ ತಕ್ಷಣ ಎದ್ದು ಅಮ್ಮನ ಪಕ್ಕದಲ್ಲಿ ನಿಂತ. ಗಂಗಮ್ಮ ಚಿನ್ನಯ್ಯನಿಗೆ ಹೇಳಿದಳು: 'ಲೋ ಚಿನ್ನಯ್ಯ, ನೀನು ಅಲ್ಲೇ ಕೂತಿರ್ತಿ ಏನೋ? ನೀನು ಅಪ್ಪುಂಗ್ ಹುಟ್ಲಿಲ್ವೇನೋ? ಮಿಂಡ್‌ರಿಗ್ಹುಟ್ಟಿದ್ ಸೂಳೇಮಗ್ನೆ ಏಳೋಮ್ಯಾಲೆ.'

ಶ್ಯಾನುಭೋಗ್ ಚೆನ್ನಿಗರಾಯರ ಗೌರವ ಕೆರಳಿತು. ತಾವು ಅಪ್ಪನಿಗೆ ಹುಟ್ಟಿದವರೆಂಬುದನ್ನು ತನ್ನ ಭಾವಮೈದ, ದ್ಯಾವರಸಯ್ಯನವರು, ಮತ್ತು ಪ್ರತೀಕಕ್ಷಿ ಶಿವೇಗೌಡ, ಒಳ ಬಾಗಿಲಿನಲ್ಲಿ ನಿಂತಿದ್ದ ಅವನ ಹೆಂಡತಿ, ಮತ್ತು ಬಾಗಿಲಿನ ಹತ್ತಿರವಿದ್ದ ಆಳು, ಇಷ್ಟು ಜನರೆದುರೂ ಸಿದ್ಧ ಮಾಡಿ ತೋರಿಸುವುದು ಹೇಗೆ? ತಾವೂ ಮೇಲೆ ಎದ್ದು, ತಮ್ಮ ಮತ್ತು ತಾಯಿಯೊಡನೆ ಮನೆಗೆ ಹೊರಟುಹೋದರು. ಕಲ್ಲೇಶ, ದ್ಯಾವರಸಯ್ಯನವರು ಅಲ್ಲಿಯೇ ಉಳಿದು, ಇನ್ನು ಮುಂದೆ ಮಾತನಾಡಲು ಪ್ರಯತ್ನಿಸಿದರಾದರೂ ಶಿವೇಗೌಡ ಅವಕಾಶ ಕೊಡಲಿಲ್ಲ: 'ಆವಮ್ಮುಂಗೇ ಈಟ್ ಶಡಕು ಇರಬೇಕಾದ್ರೆ ನಂಗೇನ್ರೀ? ಆ ನನ್ ಮಕ್ಳು ಬೀದೀಲಿ ತಿರುಪೆ ಮಾಡ್ಕಂಡ್ ತಿನ್ನೂ ಹಂಗ್ ಮಾಡ್ದೆ ಇದ್ರೆ ನಾನೂ ಅಪ್ಪಂಗ್ ಹುಟ್ಟಿದ ಸೂಳೇಮಗ ಅಲ್ಲ ಅಂತ ತಿಳ್ಕಳಿ. ಕೋರ್ಟಾಗೆ ಕೇಸ್ ಗೆಲ್ದೇ ಇದ್ರೆ ಥೂ ಬಾಂಚೋತ್ ಅಂತ ನನ್ನ ಎದಿಗ್ ಒದ್ದು ಜೋಡ್ನಾಗೆ ಹೊಡೀರಿ. ಚೀಪ್ ಕೋರ್ಟ್ ತಂಕ ಆಗ್ಲಿ. ಮಹಾರಾಜರ ಮ್ಯಾಲಿಂತಂಕಾಲಾದ್ರೂ ಆಗ್ಲಿ'–ಎಂದು ತನ್ನ ಕೊರಳಿನ ಕರಡಿಗೆಯನ್ನು ಬಲಗೈಲಿ ಹಿಡಿದು ಆಣೆ ಮಾಡಿ ಹೇಳಿದ: 'ಆ ಬಣಜಿಗ್ ನನ್ನ್ ಮಗ ರೇವಣ್ಣುನ್ನ ಕಟ್ಕಂಡ್ ನಿಂತವ್ರಲಾ, ತೋರುಸ್ತೀನಿ ನಾನ್ಯಂತ ನೊಣಬಣ್ಣ ಅಂತ.'

ಇನ್ನು ಸಂಧಾನದ ಮಾತಾಡಿ ಪ್ರಯೋಜನವಿಲ್ಲವೆಂದರಿತು, ಕಲ್ಲೇಶ, ದ್ಯಾವರಸಯ್ಯ, ಇಬ್ಬರೂ ಮನೆಗೆ ಬಂದರು. ಗಂಗಮ್ಮ ಜಗುಲಿಯ ಮೇಲೆ ಕೂತು ತನ್ನ ಪ್ರತಾಪಗೀತೆ ಹಾಡುತ್ತಿದ್ದಳು. ಶ್ಯಾನುಭೋಗರು ನಿಧಾನವಾಗಿ ವೀಳ್ಯೆದೆಲೆ ಹೊಗೆಸೊಪ್ಪುಗಳನ್ನು ಮೆಲ್ಲುತ್ತಿದ್ದರೆ, ಮಾತೃಭಕ್ತಸಂಪನ್ನನಾದ ಅಪ್ಪಣ್ಣಯ್ಯ, ಶಿವೇಗೌಡನ ಹೆಂಡಿರ ಮುಡಿಯನ್ನು ಬೋಳಿಸುವ ಮಾತಾಡುತ್ತಿದ್ದ. ಕಲ್ಲೇಶನಿಗೆ ರೇಗಿಹೋಗಿತ್ತು. ಜಗುಲಿಯ ಕೆಳಗೆ ನಿಂತು ಅವನು ಹೇಳಿದ: 'ಕುರುಬ ನನ್ ಮಕ್ಳಾ. ನಿಮಗೆ ಖುದ್ದು ಬುದ್ಧಿ ಇಲ್ಲ. ನಮ್ಮಂತೋರು ಬಂದು ಏನಾದ್ರೂ ದಾರಿ ಮಾಡಾಣ ಅಂತ ನಿಂತ್ಕಂಡ್ರೆ ಹೆಡಸಾಡ್ತೀರಾ? ಲೇ ಮುದ್ಕೀ, ನೀನು ಸಾಯ್ದೆ ಈ ಮನೆ ಉಳುಯುಲ್ಲ. ಯಲ್ಲಾ ಬಿಟ್ಟು ನಿನ್ನಂತೋಳ ಮನೆಗೆ ಹೆಣ್ಣು ಕೊಟ್ಟ ನಮ್ಮಪ್ಪುಂಗೆ ಮೆಟ್ಟು ತಗಂಡ್ ಹೊಡಿಬೇಕು.' ಗಂಗಮ್ಮ ಮೊದಲೇ ವಿಜೃಂಭಿಸಿದ್ದಳು. ಮನೆಗೆ ಬಂದಾಗ ತನಗೆ ನಮಸ್ಕಾರ ಮಾಡಬೇಕಾದ ಈ ಬೀಗಮಗ ಹೀಗಂದುದರಿಂದ ಇನ್ನೂ ಕೆರಳಿಬಿಟ್ಟಳು. 'ಪಾಪರ್ ಸೂಳೇಮಗನೆ, ನನ್ನ ಹೀಗಂತಿ ಏನೋ? ನಿನ್ನ ಯಾರೋ ಇಲ್ಲಿ ಕರೆಸಿದ್ದೋರು? ಅವ್ರು ಹೇಳ್ಕಳ್ಸಿದ್ಲು ಅಂತ ಕದ್ದು ಅವ್ಳ ಜೊತೆ ಮಲೀಕಳುಕ್ ಬಂದಿದ್ದೆ ಏನೋ? ಲೋ ಅಪ್ಪಣ್ಣಯ್ಯ ಹಿಡಕಂಡು ಅವ್ನ ಕಪಾಳುಕ್ ಎರಡು ಹಾಕೋ.'

ಅಪ್ಪಣ್ಣಯ್ಯನಿಗೆ ಧೈರ್ಯವಿರುವುದು ಸಾಧ್ಯವೇ ಇರಲಿಲ್ಲ. ಕಲ್ಲೇಶ ತಿರುಗಿ ಹೇಳಿದ: 'ಪಾಪಿ ಮುಂಡೆ, ನಿನ್ನ ಬಾಯ್ಲಿ ಬರೂ ಮಾತಿಗೆ ನಿನ್ನ ನಾಲಿಗೆ ಕೊಳೆತು ಬೀಳುತ್ತೆ. ಸಿವಲಿಂಗನ್ತಾವ ಶ್ಯಾನುಭೋಗ್‌ಕೆ ತಗಳುಕ್ಕಾಗ್ದೆ ಪರದಾಡ್ತಿದ್ರಲ, ಆಗ ಎಲ್ಲಿ ಹೋಗಿತ್ತು ನಿಮ್ಮ ಗಂಡುಸ್ತನ?

ಅವನು ಹೊಸಲ ಒಳಗೆ ಹೋಗಿ ತಂಗಿಗೆ ಹೇಳಿದ: ಲೇ, ನಂಜು, ಇಂಥಾ ಸೂಳೆ ಮಕ್ಳು ಮನ್ಲಿ ಅದೇನು ಸಂಸಾರ ಮಾಡ್ಕಂಡಿದೀಯಾ? ಮಕ್ಳುನ್ನೂ ಕರ್ಕಂಡ್ ಹೊರಡು. ನನ್ ಮನ್ಲಿ ದೇವರು ಕೊಟ್ಟುದ್ದು ಊಟ ಮಾಡ್ಕಂಡಿರೂವಂತೆ.'

ನಂಜು ಶಾಂತಳಾಗಿ ನಿಂತಿದ್ದಳು. ಕಲ್ಲೇಶನೇ ಕೇಳಿದ: 'ಯಾಕೆ ನಿಂತಿದೀಯಾ? ನಡಿ.'

'ಅಣ್ಣಯ್ಯ, ಕೋಪದಲ್ಲಿ ಏನೂ ಮಾಡಬಾರ್‌ದು. ಒಳಗೆ ಬಂದು ಕೂತ್ಕಬಾ.'

'ಈ ಬೋಸುಡಿ ಮನ್ಲಿ ಒಂದು ಲೋಟ ನೀರೂ ಮುಟ್ಟುಲ್ಲ ನಾನು'–ಎಂದು ಹೇಳಿದವನೇ, ಎದುರಿನ ಗೂಟಕ್ಕೆ ತಗುಲಹಾಕಿದ್ದ ತನ್ನ ಕೈಚೀಲ ತೆಗೆದುಕೊಂಡು, ಕಾಲಿಗೆ ಎಕ್ಕಡ ಮೆಟ್ಟಿ ಅವನು ಹೊರಟುಹೋದ.

'ಅಣ್ಣಯ್ಯಾ, ಇದೇನು ಹೀಗ್ ಮಾಡ್ತೀಯಾ?'– ಎಂದು ಅವಳು ಕೂಗಿಕೊಂಡರೂ ನಿಲ್ಲಲಿಲ್ಲ. ಸಿವೇಗೌಡನ

ಮನೆಯಲ್ಲಿ ನಡೆದದ್ದನ್ನು ಈ ಸಮಯದಲ್ಲಿ ತಾವು ನಂಜಮ್ಮನಿಗೆ ಹೇಳಿದರೆ ಜಗುಲಿಯ ಮೇಲಿರುವವರು ಇನ್ನೂ ಕೆರಳುತ್ತಾರೆಂಬುದನ್ನು ಅರಿತ ದ್ಯಾವರಸಯ್ಯನವರೂ ಊರಿಗೆ ಹೊರಟುಹೋದರು.

– 5 –

ನಂಜಮ್ಮನಿಗೆ ಈಗ ಮೊದಲಿಲ್ಲದ ಧೈರ್ಯ ಬಂದಿತ್ತು. ಸಾತುವಿನ ತಂದೆಗೆ ವಿಷಯ ತಿಳಿಸಿದರೆ ಅವರಾದರೂ ಬಂದು ಇವರಿಗೆ ಏನಾದರೂ ಬುದ್ಧಿ ಹೇಳಬಹುದು–ಎಂಬ ಆಸೆಯೊಂದು ಹುಟ್ಟಿತು. ಕಲ್ಲೇಶನೇನೋ ಸ್ವಂತ ಅಣ್ಣ, ಕಾಗದ ಬರೆದಳು. ಆದರೆ ಅವರಿಗೆ ಹೇಗೆ ಬರೆಯುವುದು? ಹೇಗಾದರೂ ಸರಿ, ಅವರೂ ತನಗೆ ತಂದೆಯ ಸಮಾನರೇ ಎಂದು ಯೋಚಿಸಿ ಒಂದು ಮಧ್ಯಾಹ್ನ ಇವರೆಲ್ಲ ನಿದ್ದೆ ಮಾಡುತ್ತಿದ್ದ, ಪಾರ್ವತಿ ಹೊರಗೆ ಆಟ ಆಡುತ್ತಿದ್ದಾಗ ಕೂತು ಒಂದು ಹಾಳೆಯ ಮೇಲೆ ಬರೆದಳು. ಕಡೂರು ಡಿಸ್ಟ್ರಿಕಟ್ಟು, ಕಸಬಾ ತಾಲ್ಲೂಕು ನುಗ್ಗೀಕೆರೆ ಗ್ರಾಮದ ವೇ॥ ಶ್ಯಾಮಭಟ್ಟರು ಎಂಬ ವಿಳಾಸ ಅವಳಿಗೆ ಗೊತ್ತೇ ಇತ್ತು. ಊರಿಗೆ ವಾರಕ್ಕೊಂದು ದಿನ ಕಂಬನಕೆರೆಯಿಂದ ಪೋಸ್ಟ್‌ಮ್ಯಾನ್ ವಾಸಪ್ಪನವರು ಬರುತ್ತಾರೆ. ಈ ಗ್ರಾಮಕ್ಕೆ ಬಂದ ಸಾಕ್ಷಿಯಾಗಿ ಅವರು ಶ್ಯಾನುಭೋಗರಾದ ಚೆನ್ನಿಗರಾಯರ ರುಜುಹಾಕಿಸಿಕೊಂಡು ಹೋಗುತ್ತಾರೆ. ಹೀಗಾಗಿ ಅವರು ನಂಜಮ್ಮನಿಗೆ ಗೊತ್ತಿದೆ.

ಈ ವಾರ ಅವರು ಬಂದಾಗ ಮಕ್ಕಳು ವಿನಾ ಮತ್ತೆ ಮನೆಯಲ್ಲಿ ಯಾರೂ ಇರಲಿಲ್ಲ. ನಂಜಮ್ಮ ಕೇಳಿದಳು: 'ವಾಸಪ್ಪನೋರೇ. ನನಗೊಂದು ಲಕೋಟೆ ಬೇಕು. ನನ್ನ ಹತ್ತಿರ ದುಡ್ಡಿಲ್ಲ. ಎರಡು ಗಿಟುಕು ಕೊಬ್ಬರಿ ಕೊಡ್ತೀನಿ. ಆಗುತ್ತೆಯೆ?'

'ಅಮ್ಮಾ, ನಾನು ಬಂದಾಗ್ಲೆಲ್ಲ ತಿಂಡಿ ಕೊಡ್ತೀರಿ. ನಿಮ್ಮ ಹತ್ರ ಕೊಬ್ಬರಿ ತಗಂಡು ಕವರು ಕೊಡಲೆ? ಆ ಮುಕ್ಕನ ಯೋಗ್ತಿ ಎಷ್ಟು? ತಗಳಿ.'

'ಈ ವಿಷಯ ಯಾರ ಕೈಲೂ ಹೇಳ್‌ಬಾರ್ದು. ನಮ್ಮನೇ ಕೇಸು ನಿಮಗೂ ಗೊತ್ತಿದೆಯಲ್ಲ. ನನ್ನ ಮೈದುನನ ಮಾವ್‌ನೋರಿಗೆ ಬನ್ನಿ ಅಂತ ಬರ್ದಿದೀನಿ'–ಎಂದು ತನ್ನ ಕಾಗದ ಅವರ ಕೈಲೇ ಕೊಟ್ಟು ವಿಳಾಸ ಹೇಳಿದಳು. ಹಾಕುವುದಾಗಿ ಹೇಳಿ ಅವರು ಕಾಗದವನ್ನು ತಮ್ಮ ಖಾಕಿಯ ಜೇಬಿನಲ್ಲಿ ಇಟ್ಟುಕೊಂಡರು. ಶ್ಯಾನುಭೋಗರು ಊರಮುಂದಿನ ವೀರಾಚಾರಿಯ ಕುಲುಮೆಯ ಹತ್ತಿರವೋ, ಗುಡಿಯ ಮಾದೇವಯ್ಯನವರ ಮುಂದೋ ಕೂತು ಹೊಗೆಸೊಪ್ಪು ಜಗಿಯುತ್ತಿರುತ್ತಾರೆಂಬುದು ಅವರಿಗೂ ಗೊತ್ತು. ಅಲ್ಲಿಯೇ ರುಜು ಮಾಡಿಸಿಕೊಳ್ಳುವುದಾಗಿ ಹೇಳಿ ಹೋದರು.

ತಾನು ತಪ್ಪು ಕೆಲಸ ಮಾಡಿದೆನೆಂದು ಅವರು ಹೊರಟು ಹೋದಮೇಲೆ ಅವಳಿಗೆ ಎನಿಸಿತು. ತಾನು ತಾಯಿಯನ್ನು ಬಿಟ್ಟು ಬೇರೆ ಇರುವಂತಾದರೆ ಬಂದು ಹೆಂಡತಿ ಮಗುವನ್ನು ಕರೆದುಕೊಂಡು ಹೋಗುವಂತೆ ಅವರು ಹೇಳಿದ್ದ ವಿಷಯವನ್ನು ಅಪ್ಪಣ್ಣಯ್ಯ ಊರಿಗೆ ಬಂದ ಕೆಲವು ದಿನಗಳ ಮೇಲೆ ಅಮ್ಮನ ಕೈಲಿ ಹೇಳಿದ್ದ. 'ನನ್ ಮನೆ ಒಡೆಯುಕ್ ನಿಂತ್ಕಂಡ್ನೋ ಈ ಕಡೂರು ಸೀಮೆಯ ಸುಕನಾತಿ ಜೋಯ್ಸ!'–ಎಂದು ಗಂಗಮ್ಮ ಕೆಲವು ದಿನ ಹಾರಾಡಿದ್ದಳು. ಅದಾದ ನಂತರ ತಿಪಟೂರು ಪ್ರವಾಸಗಳು ಒದಗಿ ಆಕೆಗೆ ಮಾತನಾಡಲು ಬೇರೆ ವಿಷಯಗಳಿದ್ದುದರಿಂದ ಬೀಗರ ಮಾತು ಬರುತ್ತಿರಲಿಲ್ಲ. ಮೊದಲೇ ದ್ವೇಷವಿರುವಾಗ ಇನ್ನು ಅವರು ಬಂದರೆ ಇವರು ಸುಮ್ಮನಿರುವುದಿಲ್ಲ. ತಾನಾಗಿಯೇ ಅವರನ್ನು ಕರೆಸಿ ಜಗಳಕ್ಕೆ ದಾರಿ ಮಾಡಿದಂತೆ ಆಯಿತು–ಎಂಬ ಯೋಚನೆ ಅವಳ ಮನಸ್ಸಿನಲ್ಲಿ ಹೊಕ್ಕಿತು. ಆದರೂ ತಾನು ಮಾಡಿದುದು ಪೂರ್ತಿ ತಪ್ಪಲ್ಲ ಎಂಬ ಒಂದು ಪ್ರಜ್ಞೆಯು ಈ ಯೋಚನೆಗೆ ಸಮಾಧಾನ ಹೇಳುತ್ತಿತ್ತು.

ಅವಳು ವಾಸಪ್ಪನವರೊಡನೆ ಕಾಗದ ಕಳಿಸಿದ ಹನ್ನೆರಡನೆಯ ದಿನ ಮದ್ಯಾಹ್ನಾ ನಂತರ ನಾಲ್ಕು ಗಂಟೆಯ ಹೊತ್ತಿಗೆ ಶ್ಯಾಮಭಟ್ಟರು ಒಬ್ಬರೇ ಬಂದರು. ತೋಟದ ಹಳ್ಳದಲ್ಲಿ ಹೊನ್ನಗೊನೆ ಸೊಪ್ಪು ಕಿತ್ತುತರಲು ಗಂಗಮ್ಮ ಹೋಗಿದ್ದಳು; ಅಪ್ಪಣ್ಣಯ್ಯ ಹಸುವಿನ ಹಿಂದಣ ಹೋರಿಗರುವಿನಂತೆ ಅಮ್ಮನನ್ನು ಹಿಂಬಾಲಿಸಿದ್ದ. ಚೆನ್ನಿಗರಾಯರು ಮನೆಯಲ್ಲಿಯೇ ಇದ್ದರು. ಬಂದವರನ್ನು ಕೈಕಾಲು ತೊಳೆದುಕೊಳ್ಳುವಂತೆ ಹೇಳಿ, ಊಟಕ್ಕೆ ಬಡಿಸುವಾಗಲೇ ನಂಜಮ್ಮ ಕೋರ್ಟಿನ ಎಲ್ಲ ವಿಷಯವನ್ನೂ ತನ್ನ ಅಣ್ಣ ಬಂದಿದ್ದುದನ್ನೂ ಹೇಳಿದಳು. ಹೆಂಡತಿ ಈ ಮಾತನಾಡುತ್ತಿರುವುದಕ್ಕೆ ಶ್ಯಾನುಭೋಗರಿಗೆ ಕೋಪವೇನೋ ಬಂದಿತ್ತು. ಆದರೆ ಬೀಗರ ಎದುರಿಗೆ ಅವಳನ್ನು ಬೈಯುವುದಕ್ಕೆ ಧೈರ್ಯವಿಲ್ಲದೆಯೋ ಅಥವಾ ನಾಚಿಕೆಯಿಂದಲೋ ಅವರು ಅಂಗಳದಲ್ಲಿ ಕೂತು, ಹೊರಗೆ ಸುರಿಯದಂತೆ ಹೊಗೆಸೊಪ್ಪಿನ ರಸವನ್ನು ಬಾಯಲ್ಲೇ ಇಟ್ಟುಕೊಳ್ಳುವ ಸಾಹಸ ಮಾಡುತ್ತಿದ್ದರು.

ಶ್ಯಾಮಭಟ್ಟರು ಊಟಮಾಡಿ ಹೊರಗೆ ಬಂದು ನಶ್ಯ ತಿಕ್ಕುವ ವೇಳೆಗೆ ಗಂಗಮ್ಮ ಒಂದು ಹಿಂಡುವ ಕುಕ್ಕೆಯ ಭರ್ತಿ ಹೊನ್ನಗೊನೆ ಸೊಪ್ಪನ್ನು ಹೊತ್ತುಕೊಂಡು ಬಂದಳು. ಅವಳ ಹಿಂದೆಯೇ ಅಪ್ಪಣ್ಣಯ್ಯ ಕರಾವಿನ ಹಸುವಿನ ಹಗ್ಗ ಹಿಡಿದು ತಂದು ಕೊಟ್ಟಿಗೆಯ ಕಡೆಗೆ ಹೋದ. ಈ ಬೀಗನನ್ನು ಕಂಡ ಗಂಗಮ್ಮನಿಗೆ ಕೋಪ ಉರಿದೆದ್ದಿತು. ನನ್ನ ಮಗುನ್ನ ಬೇರೆ ಮಾಡಿಸೋ ಮಾತು ಹೇಳಿಕೊಟ್ಟಿದ್ದ ಈ ಮನೆಮುರುಕ ಸೂಳೇಮಗ ನಾಚಿಕೆ ಇಲ್ದೆ ಬಂದು ಕೂತಿದಾನೆ, ಇರ್ಲಿ ಮಾಡ್ತೀನಿ, ಎಂದು ಒಳಗೆ ಹೋಗಿ ಸೊಪ್ಪಿನ ಕುಕ್ಕೆಯನ್ನು

ಅಡಿಗೆಯ ಮನೆಯಲ್ಲಿ ನೆಲಕ್ಕೆ ಕುಕ್ಕಿದಳು. ಹೊರಗೆ ಬಂದು ಬೀಗನ ಮುಂದೆ ನಿಂತು, 'ಏನೋ, ನನ್ನ ಮಗುನ್ನ ಬ್ಯಾರೆ ಮಾಡ್ಸುಕ್ಕೆ ಬಂದೆ ಏನೋ ಬ್ರಾಹ್ಮಣಾರ್ಥ ಮಾಡಿ ಹ್ವಟ್ಟೆ ಹೊರೆಯೋ ಜೋಯ್ಸ?' ಎಂದು ಸಿಡಿದಳು.

ತನ್ನ ಬೀಗಿತ್ತಿ ಲಗಾಮಿಲ್ಲದವಳೆಂಬುದು ಶ್ಯಾಮಭಟ್ಟರಿಗೆ ಗೊತ್ತಿತ್ತು. ಆದರೆ ತನ್ನ ಎದುರಿಗೇ ನಿಂತು ಹೀಗೆ ಮಾತನಾಡುತ್ತಾಳೆಂಬ ಕಲ್ಪನೆ ಸಹ ಅವರಿಗೆ ಎಂದೂ ಹುಟ್ಟಿರಲಿಲ್ಲ. ಅವರು ಅವಾಕ್ಕಾಗಿ ಅವಳನ್ನೇ ನೋಡುತ್ತಾ ಎರಡು ನಿಮಿಷ ಕುಳಿತಿದ್ದು ಹೇಳಿದರು: 'ನೋಡಿ ನೀವು ತಾಳ್ಮೆ ಇಟ್ಟುಕೊಂಡು ಮಾತಾಡಬೇಕು. ನಿಮ್ಮ ಮಗ ನಿಮ್ಮ ಜೊತೆ ಇದ್ರೆ ನಮಗೇನೂ ಹೊಟ್ಟೆಕಿಚ್ಚಿಲ್ಲ. ನಾನು ಈಗ ಬಂದ ಮುಖ್ಯ ವಿಷಯ ಅಂದ್ರೆ, ನೀವು ಕೋರ್ಟಿಗೆ ಹೋಗಿ ಹಿರೀಕರು ಮಾಡಿರೋ ಆಸ್ತೀನ ಕಳ್ಕೋಬಾರ್ದು. ವಿವೇಕವಾಗಿ ನಡೆದು.....'

ಅವರಿನ್ನೂ ಮಾತನ್ನು ಪೂರ್ತಿ ಮಾಡುವ ಮೊದಲೇ ಗಂಗಮ್ಮನ ಮನಸ್ಸಿನಲ್ಲಿ ಇವರು ಬಂದಿರುವ ಹಿನ್ನೆಲೆಯ ಚಕಮಕಿಯ ಬೆಂಕಿಯಂತೆ ಕಿಡಿಯಿತು. ಅಡಿಗೆಯ ಮನೆಯ ಬಾಗಿಲಿಗೆ ಹೋಗಿ ಸೊಸೆಯ ಕಡೆ ಗೋಣು ತಿರುಗಿಸಿ ಎಂದಳು: 'ಏನೇ ಹಾದರಗಿತ್ತಿ ಮುಂಡೆ. ಆಗ ನಿಮ್ಮಣ್ಣನಿಗೆ ಹೇಳಿಕಳ್ಸಿ ಅವನುನ್ನ ಜೊತೇಲಿ ಮಲಗಿಸ್ಕಂಡಿದ್ದೆ. ಈಗ ಈ ಮುದುಕ ಜೋಯ್ಸನಿಗೆ ಹೇಳಿ ಕರಸ್ಕಂಡಿದೀಯಾ. ಇವತ್ತು ರಾತ್ರಿ ಇವನ ಜೊತೆ ವಾಲಾಡಬೇಕೇನೆ? ಬಾರು ಬಂದು ಕುಣೀತಾ ಇದಿ ಏನು ನೀನು?' ಒಂದು ಸಲ ಜಗುಲಿಯ ಹತ್ತಿರ ಹೋಗಿ ತಂಬುಲವನ್ನು ಉಗಿದು ಬಂದು ಮತ್ತೆ ಆಸೀನನಾಗಿದ್ದ ಮಗನ ಹತ್ತಿರ ಬಂದು ಎಂದಳು: 'ಏನೋ ಶಂಢಸೂಳೇಮಗನೆ, ಅಪ್ಪುಂಗೆ ಹುಟ್ಟಿಲ್ವೇನೋ ನೀನು? ನಿನ್ನ ಹೆಂಡ್ತಿ ಇವನಿಗೆ ಕಾಗದ ಬರ್ದು ಕರ್ಸಿಕಂಡಿದಾಳೆ. ಇವತ್ತು ನೀನು ಹೊರಗೆ ಜಗಲಿಮ್ಯಾಲೆ ಮಲಿಕ್ಕ. ಅವಳು ಇವನ ಜೊತೆ ಅಟ್ಟದ ಮ್ಯಾಲೆ ವಾಲಾಡ್ಲಿ.'

ಅಷ್ಟರಲ್ಲಿ ತಮ್ಮ ಕೈಗಳನ್ನು ಕಿವಿಗಳ ಮೇಲೆ ಇಟ್ಟು ಅದುಮಿಕೊಂಡು ಬಾಯಲ್ಲಿ 'ರಾಮ ರಾಮ' ಎನ್ನುತ್ತಿದ್ದ ಶ್ಯಾಮಭಟ್ಟರ ಕಣ್ಣು ಮಾತ್ರ ಬೀಗಿತ್ತಿಯ ಕಡೆ ನೋಡುತ್ತಿದ್ದವು. ಇಷ್ಟು ಹೇಳಿದ ಗಂಗಮ್ಮ ಅಲ್ಲಿ ನಿಲ್ಲದೆ ಹೊರಗೆ ಬಂದು ಅಪ್ಪಣ್ಣಯ್ಯನನ್ನು ಕರೆದುಕೊಂಡು ನೇರವಾಗಿ ರೇವಣ್ಣಶೆಟ್ಟಿಯ ಮನೆಗೆ ಹೋದಳು.

ಕೈಗಳನ್ನು ಕಿವಿಯಿಂದ ತೆಗೆದು ಶ್ಯಾಮಭಟ್ಟರು ಚೆನ್ನಿಗರಾಯನಿಗೆ ಹೇಳಿದರು: 'ನೋಡಿ, ಮನೇ ಯಜಮಾನ್ರು ಅಂತ ನಾನು ನಿಮಗೆ ಹೇಳ್ತೀನಿ. ಮನೆಗೆ ದೊಡ್ಡವರಾದೋರು ಹೀಗೆ ಮನಸೋ ಇಚ್ಛೆ ಮಾತಾಡಿ ನಡುದ್ರೆ ಸಂಸಾರ ಹ್ಯಾಗೆ ನಿಲ್ಲುತ್ತೆ? ನಮ್ಮ ಸಾತೂನೂ ಹೇಳ್ತೀರ್ತಾಳೆ, ನಿಮ್ಮ ಕುಟುಂಬ ನಂಜಮ್ಮನ ಗುಣ, ಬುದ್ಧಿಶಕ್ತಿ ಗುಣ ತುಂಬ ಚನ್ನಾದ್ದು ಅಂತ. ಆ ಮಗೂನ್ನ, ಅದರಲ್ಲೂ ಹಿರೀ ಸೊಸೇನ ಇವರು ನನ್ನ ಕಣ್ಣೆದುರ್ಗೇ ಹೀಗಂತಿದ್ರೆ, ಇನ್ನು ಕಿರಿಯೋಳು ನನ್ನ ಮಗಳನ್ನ ಏನೇನಂತಾರೆ ಅಂತ ಗೊತ್ತಾಗುತ್ತೆ. ಏನೋ, ಜಾವಗಲ್ಲು ಕಡೆಯೋರು ನಂತರ ಪೈಕೀನೇ ಹೇಳಿದ್ರು ಅಂತ ನಾವು ಇಲ್ಲಿಗೆ ಹೆಣ್ಣು ಕೊಟ್ಟುಬಿಟ್ವು. ಈಗ ಹ್ಯಾಗಿದ್ರೂ ಉಭಯತಾಪಿ ಹೊಂದಿಕಂಡ್ ಹೋಗ್‌ಬೇಕು. ನಾನು ಹೇಳೂದು ತಿಳೀತೆ?'

'ಇನ್ನೊಂದೆರ್ಡು ವಿಳ್ಳೇದೆಲೆ ತಗಂಡ್ಬಾರೇ'–ಶ್ಯಾನುಭೋಗರು ಹೆಂಡತಿಗೆ ಹೇಳಿದರು. ನಂಜಮ್ಮ ತಂದುಕೊಟ್ಟ ಮೇಲೆ ಅದಕ್ಕೆ ಸುಣ್ಣ ಹಾಕಿ ಬಾಯಿಗೆ ಹಾಕಿಕೊಂಡು, ಹೊಗೆ ಸೊಪ್ಪು ತೀಡುತ್ತಾ ಅವರು, 'ಹೂಂ' ಎಂದರು.

'ನಿಮ್ಮುನ್ನ ಬ್ಯಾರೆ ಮಾಡ್‌ಬೇಕು ಅಂತ ನಮ್ಮ ಆಶೆಯಲ್ಲ. ಆದ್ರೆ ಮನೇಲಿ ಗಂಡಸ್ರಾದ ನೀವು ವಿವೇಕ ಉಪಯೋಗಿಸಬೇಕು. ಈಗ ಸಾಲಗಾರರನ್ನೇ ಹಿಡಿದು ವ್ಯವಹಾರ ತೀರ್ಮಾನಿಸ್ಕಳ್ಳಿ. ನಂಜಮ್ಮ ಹೇಳೂ ಹಾಗೆ ಯಾವ್ದಾದ್‌ರೂ ಒಂದೆರಡು ಜಮೀನು ಅವನಿಗೇ ಕೊಟ್ಟು, ಋಣ ಹರೀತು ಅಂತ ಆಧಾರಪತ್ರಕ್ಕೆ ಷರಾ ಬರಿಸಿ ತಗೋಳಿ. ಇದ್ದುದ್ರಲ್ಲೇ ಹ್ಯಾಗೋ ಜೀವನ ಮಾಡಿ.'

ಶ್ಯಾನುಭೋಗರು ದವಡೆಯಲ್ಲಿ ಗುಳುಗುಳುಗುಟ್ಟುವ ತಂಬುಲದ ರಸದಲ್ಲಿ ವಿಹರಿಸುತ್ತಿದ್ದರು. ಅವರ ಉತ್ತರಕ್ಕಾಗಿ ಕಾಯ್ದು ಬೀಗರು 'ಅಲ್ವೆ?' ಎಂದರೆ, ಮಾತನಾಡುವಂತೆ ಮುಖವನ್ನು ಅಟ್ಟದ ಕಡೆಗೆ ಎತ್ತಿ ಬಾಯಿ ತೆಗೆದರೇ ಹೊರತು ತಂಬುಲದ ರಸದಿಂದ ಮೇಲೆ ಎದ್ದು ನಾಲಿಗೆಯ ಏನೂ ನುಡಿಯಲಿಲ್ಲ. ಅವರು ಎದ್ದು ಹೋಗಿ ಉಗುಳಿ ಬರುವ ತನಗೆ ಕಾದಿದ್ದ ಇವರು ಮತ್ತೊಂದು ಸಲ ಕೇಳಿದರು: 'ಈಗ ನೀವು ಮಾತಾಡಲೇಬೇಕು.'

ಚೆನ್ನಿಗರಾಯರಿಗೆ ಏನು ಹೇಳುವುದಕ್ಕೂ ಭಯ. ಕೊನೆಗೆ ಕಷ್ಟಪಟ್ಟು ಒಂದು ತೀರ್ಮಾನಕ್ಕೆ ಬಂದು, 'ನಂಗೊತ್ತಿಲ್ಲ, ನೀವುಂಟು ನಮ್ಮಮ್ಮ ಉಂಟು' ಎಂದು ಹೇಳಿ ಹೊರಗೆ ಹೊರಟುಹೋದರು.

'ಅಮ್ಮಾ, ಕೇಳಿದೆಯಾ?'–ಭಟ್ಟರು ಕೇಳಿದರು.

ನಂಜಮ್ಮ ಹೊರಗೆ ಬಂದು ಎಂದಳು: 'ಇವರ ಸ್ವಭಾವ ನಿಮಗೆ ಚೆನ್ನಾಗಿ ಗೊತ್ತಿಲ್ಲ. ನಿಮ್ಮ ಅಳಿಯನ್ನೇ ಹಿಡಿದು ಕೇಳಿ. ಏನಿಲ್ದೆ ಇದ್ರೂ ನಮ್ಮ ನಮ್ಮ ಪಾಲು ನಮಗೆ ಬಂದುಬಿಡ್ಲಿ, ಸಾಲಾನೂ ಅರ್ಧರ್ಧ ತೀರುಸ್ತೀವಿ ಅಂತ ಅಪ್ಪಣ್ಣಯ್ಯ ಹಟ ಮಾಡಿದ್ರೆ ಒಂದು ತೀರಾಗುತ್ತೋ ಏನೋ.'

ಅವನ ಯೋಗ್ತಿ ಏನು ಅಂತ ನಿಂಗೆ ಗೊತ್ತಿಲ್ವೆ? ಈ ಕೋರ್ಟಿನ ವಿಷಯ 'ನಂಗೆ ಗೊತ್ತಿರಲಿಲ್ಲ. ಆದರೆ

ಅದಕ್ಕೆ ಮೊದಲೇ ನಾವು ತೀರ್ಮಾನ ಮಾಡಿದ್ವು. ಇರೋಳೊಬ್ಬ ಮಗಳು. ಹ್ಯಾಗೂ ಸಾಕ್ತೀವಿ. ದೇವರು ಎರಡು ಹೊತ್ತಿನ ಅನ್ನಕ್ಕೆ ಇಲ್ಲ ಅನ್ಸಿಲ್ಲ. ಈ ಅತ್ತೆ ಕೆಳಗೆ ನಮ್ಮ ಮಗೂನ ಹ್ಯಾಗೆ ಕಳುಸ್ಲಿ? ಅದ್ಕೇ ಬಾಣಂತನ ಮುಗುದ್ಮ್ಯಾಲೆ ಅಲ್ಲೇ ಇಟ್ಕಂಡಿದೀವಿ'

ಏನು ಹೇಳುವುದಕ್ಕೂ ತಿಳಿಯದೆ ನಂಜಮ್ಮ ಸುಮ್ಮನೆ ನಿಂತಿದ್ದಳು. ಅಷ್ಟರಲ್ಲಿ ಮನೆಗೆ ನುಗ್ಗಿದ ಗಂಗಮ್ಮ ಸೊಸೆಯನ್ನು ಕಂಡ ತಕ್ಷಣ ಉರಿದುಬಿದ್ದಳು: 'ಆಯ್ತೇನೇ ಮಿಂಡನ ಕೈಲಿ ಚಕ್ಕಂದ? ನಿನ್ನ ಗಂಡ ಮನೆ ಬಿಟ್ಟು ಹೋಗಿ ಗುಡೀಲಿ ಕುಕ್ಕರು ಬಡ್ಕಂಡಿದಾನೆ ತಾನೇ?'

ನಂಜಮ್ಮನಿಗೆ ರೇಗಿದುದು ಮಾತ್ರವಲ್ಲ, ಧೈರ್ಯವೂ ಬಂತು. ತಿರುಗಿಬಿದ್ದಳು: 'ಅಂಥ ಕೆಲ್ಸ ಮಾಡ್ತೀರಾ ಅಂತ ಕಾಣುತ್ತೆ. ಅದಕ್ಕೇ ಗರತಿ ಹೆಣ್ಣುಮಕ್ಕಳ್ನೆಲ್ಲ ಹಾಗಂತೀರಾ. ನಿಮ್ಮ ನಾಲಿಗೇಲಿ ಹುಳ ಬೀಳ. ಸ್ವಲ್ಪ ಬಾಯಿ ಮುಚ್ಕತ್ತೀರೋ ಇಲ್ವೋ ಹೇಳಿ.'

'ಹೊಲೆಮುಂಡೆ. ನನ್ನ ನನ್ನೇ ಅನ್ನೂಹಾಗಾದ್ಯಾ? ನನ್ ಮಗುಂಗೆ ಹೇಳಿ ನಿನ್ನ ತಾಳಿ ಕಿತ್ಹಾಕುಸ್ದೆ ಇದ್ರೆ ನಾನು ಜಾವಗಲ್ ಹೆಣ್ಣೇ ಅಲ್ಲ ಕಣೇ'–ಎಂದು ಅಬ್ಬರಿಸುತ್ತಲೇ ಗಂಗಮ್ಮ ಗುಡಿಗೆ ಹೋಗಿ ಮಗನ ಮುಂದೆ ನಿಂತು ಗುಡುಗಿದಳು: 'ನೀನು ಅಪ್ಪಂಗೆ ಹುಟ್ಟಿದ್ ಸೂಳೇಮಗನಾದ್ರೆ ಬಂದು ನಿನ್ನ ಹೆಂಡ್ತಿ ದವಡೆ ಹಲ್ಲು ಉದುರ್ಸಿ, ಅವಳ ತಾಳಿ ಕಿತ್ ಹಾಕೊ. ನನ್ನ ಬಾಯಿಗೆ ಹುಳ ಬೀಳ ಅಂದ್ಲಲಾ ಆ ಹಾದರಗಿತ್ತಿ.'

ಏಕತಾರಿ ಮಿಡಿದುಕೊಂಡು, 'ಎಚ್ಚರವಾಗೋ ತಮ್ಮಾ! ಹಾವು ಕಚ್ಚುವ ಮೊದಲು......' ಎಂದು ಹಾಡುತ್ತಿದ್ದ ಮಾದೇವಯ್ಯನವರು ಗಕ್ಕನೆ ನಿಲ್ಲಿಸಿ ನೋಡುತ್ತಾ ಕೂತರು. 'ನೀನು ಅಪ್ಪಂಗೆ ಹುಟ್ಟಿದೋನೋ ಅಲ್ವೋ ಹೇಳಿಬಿಡೋ. ಅಪ್ಪಂಗ್ ಹುಟ್ಟಿದೋನೇ ಆದ್ರೆ ನೀನು ಬಂದು ಅವಳ ತಾಳಿ ಕೀಳ್ತೀಯಾ ನೋಡು'–ಎಂದು ಇನ್ನೊಂದು ಸಲ ಸವಾಲು ಹಾಕಿದಾಗ ತಮ್ಮ ಹುಟ್ಟಿನ ಪಾವಿತ್ರ್ಯವನ್ನು ತಾಯಿಗೆ ಸಾಧಿಸಿ ಹೇಳುವ ಬಗೆ ತಿಳಿಯದೆ ಎರಡು ನಿಮಿಷ ಒದ್ದಾಡುತ್ತಿದ್ದು ಚೆನ್ನಿಗರಾಯರು ಕೊನೆಗೆ ಧೈರ್ಯ ಮಾಡಿ ಮೇಲೆ ಎದ್ದರು. ಹತ್ತಿರದಲ್ಲಿಯೇ ಕುಳಿತಿದ್ದ ಮಾದೇವಯ್ಯನವರು ಅವರ ಕೈ ಹಿಡಿದು ಎಳೆದು ಕೂರಿಸಿ ಹೇಳಿದರು: 'ಶ್ಯಾನುಭೋಗ್ರೇ, ಇಷ್ಟೊಂತಂಕ ಭಜನೆ ಕೇಳಿದ್ರಿ, ಎಲ್ಲಿಗ್ ಹೋಯ್ತು ಬುದ್ದಿ?'

ಮತ್ತೆ ಏನೂ ತಿಳಿಯದೆ ಶ್ಯಾನುಭೋಗರು–'ಹೋಕ್ಕಳ್ಳಿ, ಹಾಡೇಳ್ರಿ ಕೇಳಾಣ' ಎಂದರು. ಅಯ್ಯನವರು ಏಕತಾರಿ ಮಿಡಿಯುತ್ತಾ ಅದೇ ಭಜನೆಯನ್ನು ಶುರು ಮಾಡುತ್ತಲೇ ಗಂಗಮ್ಮ, 'ಸನ್ಯಾಸಿ ಸೂಳೇಮಗನ ಮಾತು ಕೇಳ್ತಾನೆ, ಈ ಪಾಪರ್ ಮುಂಡೇಗಂಡ. ಹೆತ್ತೋಳ್ ಮರ್ಯಾದೆ ಮ್ಯಾಲೆ ನಿಗಾ ಇಲ್ಲ' ಎಂದುಕೊಂಡು ಮತ್ತೆ ರೇವಣ್ಣಶೆಟ್ಟಿಯ ಮನೆಗೆ ಹೋದಳು.

ಇತ್ತ ಶ್ಯಾಮಭಟ್ಟರು ನಂಜಮ್ಮನಿಗೆ–'ಅಮ್ಮಾ, ಇಲ್ಲಿಗೆ ನಾನು ಬಂದು ಏನೂ ಪ್ರಯೋಜನವಾಗಲಿಲ್ಲ. ನಾನ್ ಹೊರಡ್ತೀನಿ. ನಂಗೂ ಹದಿನೆಂಟು ಊರ ಪೌರೋಹಿತ್ಯವಿದೆ. ಮಗಳನ್ನೂ ಮೊಮ್ಮಗಳನ್ನೂ ಸಾಕ್ತೀನಿ' ಎಂದು ಹೇಳಿ ತಮ್ಮ ಗಂಟು ಮತ್ತು ಕೊಡೆಗಳನ್ನು ಕೈಗೆ ಎತ್ತಿಕೊಂಡರು. ಮತ್ತೆ ಏನು ಹೇಳುವುದಕ್ಕೂ ತಿಳಿಯದೆ ಅವಳು. 'ಹ್ಯಾಗಾದ್ರೆ ಹಾಗಾಗ್ಲಿ, ಸಾತೂನ ಕಳಿಸಿ' ಎಂದುದಕ್ಕೆ–'ಯಾಕ್ ಕಳುಸ್ಬೇಕು? ನಿಂಗೇ ಎಲ್ಲಾ ಗೊತ್ತಿಲ್ವೆ?' ಎಂದರು.

ಅವಳು ಮತ್ತೆ ಮಾತನಾಡಲಿಲ್ಲ. ಹೊರಟು ನಿಂತವರಿಗೆ ನಮಸ್ಕಾರ ಮಾಡಿದಳು. 'ದೀರ್ಗ ಸುಮಂಗಲೀ ಭವ. ಸಕಲ ಸನ್ಮಂಗಳಾನಿ ಭವಂತು'–ಎಂದು ಹೇಳಿ ಅವರು ಹೊರಟರು. ಬಾಗಿಲಿನ ಹತ್ತಿರಕ್ಕೆ ಬಂದು ನಂಜಮ್ಮ ಹೇಳಿದಳು: 'ತಿಪಟೂರಿನ ಕಡೆಗೇ ತಿಮ್ಲಾಪುರ ಅಂತ ಇದೆ. ಆ ಊರ್ನಲ್ಲಿ ಶ್ಯಾನುಭೋಗ್ ದ್ಯಾವರಸಯ್ಯನೋರು ಅಂತ ಇದಾರೆ. ಅವರ ಮನೆಗೆ ಹೋಗಿ ರಾತ್ರಿ ಇದ್ದು ಬೆಳಿಗ್ಗೆ ಹೋಗಿ. ಕತ್ತಲಾದ ಮ್ಯಾಲೆ ತಿಪಟೂರು ತಂಕ ನಡೀಬ್ಯಾಡಿ. ಬುಕ್ಕನ ತಿಟ್ಟಿನಲ್ಲಿ ಕಳ್ಳರಿರ್ತಾರೆ. ಒಂದೊಂದು ಎರಡೆರಡು ಗಾಡಿ ಜನ ಹೋಗ್ತಿದ್ರೂ ಚಚ್ಚಿಹಾಕಿ ಇದ್ದುದ್ದೆಲ್ಲ ಕಿತ್ಕಂಡ್ಹೋಗ್ತಾರೆ.'

## ಅಧ್ಯಾಯ 7

– 1 –

ಗಂಡುಮಗು ರಾಮಣ್ಣನಿಗೆ ಒಂದು ವರ್ಷ ತುಂಬಿ ಆರು ತಿಂಗಳಾಗಿತ್ತು. ನಂಜಮ್ಮ ಮತ್ತೆ ಬಸುರಿಯಾಗಿದ್ದಳು. ಕೋರ್ಟಿನ ವ್ಯವಹಾರದಲ್ಲಿ ಜಮೀನೆಲ್ಲವೂ ಹೋಗುತ್ತದೆಂದು ಅವಳ ಅಂತರಂಗವು ಸಂಪೂರ್ಣವಾಗಿ ಅರ್ಥಮಾಡಿಕೊಂಡಿತ್ತು. 'ನಮ್ಮದೇ ಈ ಗೋಳು, ಇನ್ನು ಯಾಕಪ್ಪಾ ಮತ್ತೆ ಮಕ್ಕಳು?' ಎಂದು ಹಲವು ಸಲ ಬೇಸರಪಟ್ಟುಕೊಳ್ಳುವಳು. ಆದರೆ ಮದುವೆಯಾಗಿ ಇಷ್ಟು ದಿನವಾದರೂ ತೌರಿನಲ್ಲಿ ಅಣ್ಣನಿಗೆ ಮಕ್ಕಳೆ ಆಗಿಲ್ಲ; ದೇವರು ಹಣೆಯಲ್ಲಿ ಬರೆದಿಲ್ಲ ಎಂಬ ನೆನಪಾಗಿ–'ನಮಗೆ ದೇವರು ಕೊಡುವಾಗ ಬ್ಯಾಡ ಅನ್ಬಾರ್ದು' ಎಂದು ಸಮಾಧಾನ ತಂದುಕೊಳ್ಳುವಳು.

ಇದೇ ಸಮಯದಲ್ಲಿ ಊರಿನಲ್ಲಿ ಎರಡು ಘಟನೆಗಳು ನಡೆದುವು. ಮೊದಲನೆಯದು ಊರಿಗೆ ಪ್ಲೇಗು ಬಂದದ್ದು. ಅದು ಆ ಸುತ್ತಿಗೆ ಹೊಸದೇನಲ್ಲ. ಎರಡು ಮೂರು ವರ್ಷಕ್ಕೆ ಒಂದು ಸಲ ಊರು ಬಿಟ್ಟು ಹೊರಗೆ ಶೆಡ್ಡಿನಲ್ಲಿ ವಾಸ ಮಾಡುವುದು ಜನರಿಗೆ ಅಭ್ಯಾಸವಾಗಿಹೋಗಿತ್ತು. ಎರಡನೆಯ ಅಪೂರ್ವ ಸಂಗತಿ

ಎಂದರೆ ಆ ಊರಿಗೆ ಕಾಶಿಂಬಡ್ಡಿ ಸಾಹುಕಾರರು ಎಂಬ ಒಬ್ಬ ಲೇವಾದೇವಿಯವರು ಬಂದು ವ್ಯವಹಾರ ಪ್ರಾರಂಭಿಸಿದ್ದರು. ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಮೊದಲಾದ ಸಾಮಾನಿನ ಅಡವಿನ ಮೇಲೆ ಸಾಲ ಕೊಟ್ಟು ಒಂದು ರೂಪಾಯಿಗೆ ಒಂದು ದಿನಕ್ಕೆ ಒಂದು ಕಾಸಿನಂತೆ ಬಡ್ಡಿ ತೆಗೆದುಕೊಳ್ಳುತ್ತಿದ್ದ ಅವರು ಮಲಬಾರ್ ಸೀಮೆಯ ಮಾಪಿಳ್ಳೆ ಮುಸಲ್ಮಾನರು. ಲಂಬಾಣಿಯವರ ಲಂಗದಂತೆ ಪಟ್ಟೆಪಟ್ಟೆಯ ಲುಂಗಿ ಕಟ್ಟಿ ತಲೆಗೆ ಕುಚ್ಚಿನ ಟೋಪಿ ಇಡುತ್ತಿದ್ದರು. ವಯಸ್ಸು ಐವತ್ತರ ಸುಮಾರು. 'ಒಂದ್ ಕಾಸು ಅಂದ್ರೆ ಯಾವ ಗೋಪಾಳುದ್ದು? ಹರ್‌ಕತ್ತಿಗೆ ದುಡ್ಡು ಕೊಡಾಕುಲ್ವಾ?'–ಎಂದು ಶಿವೇಗೌಡನೇ ಹೇಳಿ ಅವರ ಲೇವಾದೇವಿಯ ಔದಾರ್ಯವನ್ನು ಜನಗಳಿಗೆ ವಿವರಿಸಿದ್ದ. ಪರಸ್ಥಳದವರಾದ ಅವರಿಗೆ ಅವನೇ ಇರಲು ಸ್ಥಳ ಕೊಟ್ಟಿದ್ದ. ಶಿವೇಗೌಡನದು ಊರಿನಲ್ಲಿ ಒಟ್ಟು ಮೂರು ಮನೆಗಳಿದ್ದುವು. ಬೀದಿಯ ಪಕ್ಕದಲ್ಲಿದ್ದ ಒಂದು ಪುಟ್ಟ ಮನೆಯಲ್ಲಿ ಒಂದು ದೊಡ್ಡ ಕಬ್ಬಿಣದ ಪೆಟ್ಟಿಗೆ ತಂದಿಟ್ಟುಕೊಂಡು ಅವರು ವ್ಯವಹಾರ ಪ್ರಾರಂಭಿಸಿದರು. ಆ ಮನೆಗೆ ವರ್ಷಕ್ಕೆ ಹದಿನೆಂಟು ರೂಪಾಯಿ ಬಾಡಿಗೆ ಕೊಡುತ್ತಿದ್ದರಂತೆ. ಶಿವೇಗೌಡನಿಗೂ ಅವರ ವ್ಯವಹಾರಕ್ಕೂ ಯಾವ ಸಂಬಂಧವೂ ಇಲ್ಲ; ಹಾಗೆಂದು ಅವನೇ ಸ್ಪಷ್ಟವಾಗಿ ಎಲ್ಲರೊಡನೆಯೂ ಹೇಳಿದ. ಕಾಶಿಂಬಡ್ಡಿ ಸಾಹುಕಾರರು ಊರಿಗೆ ಬಂದ ಒಂದೆರಡು ತಿಂಗಳಲ್ಲಿಯೇ ಹೆಚ್ಚುಕಡಿಮೆ ಊರಿನವರೆಲ್ಲ ಅವರ ಹತ್ತಿರ ಸಾಲ ತರಲು ಶುರು ಮಾಡಿದರು. ಶಿವೇಗೌಡನೂ ಸಮಯವೆಂದರೆ ಅವರ ಹತ್ತಿರವೇ ಬಡ್ಡಿ ಕೊತ್ತು ಸಾಲ ತೆಗೆದುಕೊಳ್ಳುತ್ತಿದ್ದನಂತೆ. ಲೆಕ್ಕಾಚಾರ ಕರಾರುವಾಕ್ಕು; ಸುಳ್ಳಿಲ್ಲ, ಮೋಸವಿಲ್ಲ. ಬಡ್ಡಿಯ ಲೆಕ್ಕಹಾಕುವುದೂ ಕಷ್ಟವಲ್ಲ. ಒಂದು ದಿನಕ್ಕೆ ಒಂದು ರೂಪಾಯಿಗೆ ಒಂದು ಕಾಸು ತಾನೇ. ಹೀಗಾಗಿ ಅವರು ಊರಿಗೆಲ್ಲ ಬೇಕಾದವರಾಗಿದ್ದರು. ಪ್ಲೇಗು ಬಂದು ಊರು ಬಿಡುವಾಗ ಕಾಶಿಂಬಡ್ಡಿಯವರೂ ಶಿವೇಗೌಡನ ತೋಟದಲ್ಲಿ ಅವನ ಶೆಡ್ಡಿನ ಹತ್ತಿರವೇ ಶೆಡ್ಡು ಹಾಕಿಸಿಕೊಂಡರು. ಲೇವಾದೇವಿಯ ಕಬ್ಬಿಣದ ಪೆಟ್ಟಿಗೆಯೂ ಅಲ್ಲಿಯೇ ವಿರಾಜಮಾನವಾಯಿತು.

ಗಂಗಮ್ಮನ ಕುಟುಂಬವು ಎಂದಿನಂತೆ ಊರ ಮುಂದಿನ ತಮ್ಮ ತೋಟದಲ್ಲಿ ಶೆಡ್ಡು ಹಾಕಿತು. ನಂಜಮ್ಮನಿಗೆ ಆಗ ಇನ್ನೂ ಮೂರು ತಿಂಗಳು. ನಡುನಡುವೆ ವಾಂತಿಯಾಗುತ್ತಿದ್ದರೂ ಮನೆಯ ಸಾಮಾನುಗಳೆಲ್ಲ ಕಟ್ಟಿ ಅಲ್ಲಿಗೆ ಸಾಗಿಸಿ ವ್ಯವಸ್ಥೆ ಮಾಡುವತನಕ ಎಲ್ಲ ಕೆಲಸವೂ ಅವಳ ಮೇಲೆಯೇ ಬಿತ್ತು. ಮಾದೇವಯ್ಯನವರೂ ಊರಿನ ಗುಡಿಯನ್ನು ಬಿಡಬೇಕು. ಚೋಳೇಶ್ವರನ ಗುಡಿಯ ಮೂಲ ಲಿಂಗವಿರುವುದು ಕೆರೆಯ ಏರಿಯ ಮೇಲೆ. ಏರಿಯ ಮೇಲಿನ ಗುಡಿ ಕಲ್ಲಿನಕಟ್ಟಡ. ಜಕಣಾಚಾರಿ ಕಟ್ಟಿದ್ದೆಂದು ಎಲ್ಲರೂ ಹೇಳುತ್ತಾರೆ. ಅಲ್ಲಿ ಹಾವುಗಳು ಹೆಚ್ಚೆಂದು ಎಲ್ಲರೂ ಬಲ್ಲರು. ಹಾವೆಂದರೆ ಏನು, ಶಿವನ ಕಂಠಾಭರಣವಲ್ಲವೆ? ಅದು ನನಗೇನು ಮಾಡೀತು?–ಎಂದು ಅಯ್ಯನವರು ತಮ್ಮ ಏಕತಾರಿ, ದಮಡಿ, ಭಿಕ್ಷದ ಜೋಳಿಗೆ, ಕಾಲಿನ ಆವುಗೆ, ಇದ್ದ ದಿನಸಿ ಧಾನ್ಯ ಮೊದಲಾದುವನ್ನು ತೆಗೆದುಕೊಂಡು ಅಲ್ಲಿಗೇ ಹೋದರು. ಗಂಗಮ್ಮನ ಶೆಡ್ಡಿಗೂ ಏರಿಯ ಮೇಲಿನ ಗುಡಿಗೂ ಸ್ವಲ್ಪ ದೂರವೇ. ಹೀಗಾಗಿ ಶ್ಯಾನುಭೋಗ ಚೆನ್ನಿಗರಾಯರು ಈಗ ಅಲ್ಲಿಗೆ ಹೋಗುವುದು ವಿರಳ. ಕಾಶಿಂಬಡ್ಡಿಯವರೂ ಹೊಗೆಸೊಪ್ಪು ಹಾಕುತ್ತಾರೆ. ಆದುದರಿಂದ ಚೆನ್ನಿಗರಾಯರು ಅವರ ಶೆಡ್ಡಿಗೆ ಹೋಗು ಕೂರುತ್ತಾರೆ. ಅಲ್ಲಿಗೆ ಒಮ್ಮೊಮ್ಮೆ ಶಿವೇಗೌಡನೂ ಬರುತ್ತಾನೆ. ಅವರಿಬ್ಬರೂ ಮಾತು ಬಿಟ್ಟಿಲ್ಲ. ಎಷ್ಟಾದರೂ ಶ್ಯಾನುಭೋಗ ಪಟೇಲರು ತಾನೆ? ಅಲ್ಲದೆ ಜಗಳ ನಡೆಯುತ್ತಿರುವುದು ಗಂಗಮ್ಮ, ಶಿವೇಗೌಡನಿಗೆ. ಆದರೆ ಮಗ ಅಲ್ಲಿಗೆ ಹೋಗುವುದನ್ನು ಕೇಳಿದಾಗ ಗಂಗಮ್ಮ ಅವನನ್ನು ಬಾಯಿಗೆ ಬಂದಂತೆ ಬಯ್ಯುತ್ತಾಳೆ.

ಊರು ಬಿಡುವ ಮೊದಲು ಪ್ಲೇಗು ಬಡಿದು ಸತ್ತ ಆರು ಜನ ದೊಡ್ಡವರು, ಇಬ್ಬರು ಮಕ್ಕಳನ್ನು ಬಿಟ್ಟರೆ ಗ್ರಾಮದಲ್ಲಿ ಈ ಸಲ ಹೆಚ್ಚು ಸಾವುಗಳಾಗಿಲ್ಲ. ಊರಿನವರೆಲ್ಲ ಮಾರೀ ಪೂಜೆ ಮಾಡಿಸಿದರು. ತಕ್ಷಣ ಊರ ಹೊರಗೆ ಬಂದರು. ಊರು ಬಿಟ್ಟರೂ, ರೋಗ ಮರಣಗಳಿಲ್ಲದ್ದರಿಂದ ಎಲ್ಲರಿಗೂ ಮನಸ್ಸಿನಲ್ಲಿ ಸಮಧಾನವಿದ್ದರೂ ವಿನಾಕಾರಣ ಊರ ಹೊರಗಿರಲು ಬೇಸರವಾಗುತ್ತಿತ್ತು. ಆದರೆ ಅದನ್ನು ಕಳೆಯುವ ಒಂದು ಮಾತು ಈಗ ಎಲ್ಲರ ನಾಲಿಗೆಗೂ ಸಿಕ್ಕಿತ್ತು.

ಗಂಗಮ್ಮ ಶಿವೇಗೌಡನ ವ್ಯಾಜ್ಯ ಕೋರ್ಟಿನಲ್ಲಿ ಮುಗಿಯುತ್ತ ಬಂದಿತ್ತಂತೆ. ಎರಡು ಕಡೆಯ ಲಾಯರೂ ಕೋರ್ಟಿನಲ್ಲಿ ಪಾಯಿಂಟ್ ಜಡಿದು ವಾದ ಮಾಡಿದರಂತೆ. 'ನಮ್ ಕಡೆ ಲಾಯ್ರು ಆಕಿದ್ ಪಾಯಿಂಟಿಗೆ ಜಡ್ಜಿಗಳೇ ಅಳ್ಳಾಡಿಹೋಗ್ಬಿಟ್ರು' –ರೇವಣ್ಣಶೆಟ್ಟಿ ಹೇಳಿದ ಮಾತು ಊರಿನಲ್ಲೆಲ್ಲ ಹರಡಿತು. 'ನಂ ಲಾಯ್ರಿ ಪಾಯಿಂಟ್ ಮಾಡಿದ್ದುಕ್ಕೆ ಗಂಗಮ್ಮನ ಕಡೆಯೋನು ಅಲ್ಲೇ ಎಲ್ಡಾ ಮಾಡ್ಕ್ಯಂಬುಟ್ಟ'–ಎಂದು ಶಿವೇಗೌಡ ಪ್ರತಿಯಾಗಿ ಹೇಳಿದ. ಎರಡು ಕಡೆಯವರೂ ಹುರುಪಿನಿಂದ ತಿಪಟೂರಿಗೆ ಹೋಗಿಬರುತ್ತಿದ್ದರು. ಅಪ್ಪಣ್ಣಯ್ಯ ಎಲ್ಲರಿಗಿಂತ ಮುಂಚೆ ಗಾಡಿಯಿಂದ ಇಳಿದು ತಿಪಟೂರಿನ ಹೋಟೆಲಿಗೆ ಹೋಗುತ್ತಿದ್ದ. ಚೆನ್ನಿಗರಾಯರು ತಮ್ಮನಿಗಿಂತ ಎಂದೂ ಹಿಂದೆ ಬೀಳಲಿಲ್ಲ. ಶಿವೇಗೌಡ ರಾಗಿರೊಟ್ಟಿ ಹುಚ್ಚೆಳ್ಳುಪುರಿಗಳಲ್ಲೇ ಕೋರ್ಟು ಕೆಲಸ ಮಾಡಿಕೊಂಡು ಹಿಂತಿರುಗುತ್ತಿದ್ದ.

ಜಜ್‌ಮೆಂಟಿನ ದಿನ ಎರಡು ಕಡೆಯವರೂ ಗಾಡಿ ಹೂಡಿಕೊಂಡು ಹೋದರು. ಗಂಗಮ್ಮ ಎದೆಯ ಮೇಲೆ

ಕೈ ಇಟ್ಟುಕೊಂಡು ಜಡ್ಜಿಗಳ ತೀರ್ಮಾನವನ್ನು ಕೇಳಿದಳು; ಶಿವೇಗೌಡನಿಂದ ಇವರು ಹಣ ಪಡೆದದ್ದು ಉಂಟು. ಅದಕ್ಕೆ ಬಡ್ಡಿ, ಬಡ್ಡಿ0ು ಬಡ್ಡಿ, ಅವನ ಕೋರ್ಟು ಖರ್ಚುಗಳು ಸೇರಿ ಐದೂವರೆ ಸಾವಿರ ರೂಪಾಯಿಗಳನ್ನು ಇವರು ಕೋರ್ಟಿಗೆ ಕಟ್ಟಬೇಕು. ಇಲ್ಲದಿದ್ದರೆ ಕೋರ್ಟಿನವರು ಜಮೀನೆಲ್ಲವನ್ನು ಹರಾಜು ಮಾಡಿ ಸಾಲಗಾರನ ಗಂಟು ತೀರಿಸುತ್ತಾರೆ. 'ನಿನ್ ಹೆಂಡ್ರ ಬಳೆ ಕುಕ್ಕ, ಸೂಳೆಮಗನೆ'–ಎಂದು ಜಡ್ಜಿಗಳನ್ನು ಬೈ0ುಬೇಕೆಂದು ಗಂಗಮ್ಮನ ನಾಲಿಗೆಗೆ ಬಂದರೂ ಕೋರ್ಟಿನ ಬಾಗಿಲಿನಲ್ಲಿ0ುೇ ಇದ್ದ ಪೋಲೀಸಿನವರ ನೆನಪಾಗಿ ಅವಳು ಸುಮ್ಮನಾದಳು.

ಕೋರ್ಟಿನಿಂದ ಹೊರಗೆ ಬಂದಮೇಲೆ ಲಾ0ುರ್ ಮಹಾಂತ0ು್ಯನವರು ಹೇಳಿದರು: 'ತುಮಕೂರು ಕೋರ್ಟಿಗೆ ಅಪೀಲ್ ಹೋಗಬಹುದು. ದುಡ್ಡು ಖರ್ಚಾಗುತ್ತೆ. ತಂದಿದೀರಾ?'

'ಲಾ0ು್ರು ಸ್ವಾಮಿ0ೋರೆ, ನನ್ನ ಮನೇಲಿದ್ದ ಚಿನ್ನ ಬೆಳ್ಳಿ, ಪಾತ್ರೆ ಪಡಗವೆಲ್ಲ ಅಡೂ ಇಟ್ಟಿದೀನಿ. ಗಂಡ ಸತ್ತ ಮುಂಡೆ ನಾನೆಲ್ಲಿ ದುಡ್ಡು ತರ್ಲಿ?'

ಅಷ್ಟರಲ್ಲಿ ಶಿವೇಗೌಡನ ಕಡೆ0ು ಲಾ0ುರು ಅಲ್ಲಿಗೆ ಬಂದರು. ಈ ಇಬ್ಬರು ಲಾ0ುರೂ ಇಂಗ್ಲೀಷಿನಲ್ಲಿ ಏನೇನೋ ಮಾತನಾಡಿದ ಮೇಲೆ ಗಂಗಮ್ಮನ ಕಡೆ0ುವರು ಹೇಳಿದರು: 'ನೋಡಿ ಅಮ್ಮಾ, ಶಿವೇಗೌಡನಿಂದ ನಿಮಗೆ ಇನ್ನೂ ಒಂದಿಷ್ಟು ಸಾಲ ಕೊಡಿಸ್ತಾರಂತೆ. ನಿನ್ನ ಸಾಲ ನೀನು ತೀರಿಸ್ಕ. ನಮ್ಮದೇನೂ ಇಲ್ಲ ಅಂತ ಜಮೀನೆಲ್ಲ ಅವನಿಗೇ ಬರೆದುಕೊಟ್ಟುಬಿಡ್ತೀರಾ? ನಿಮಗೂ ಕೊನೆಗೆ ಅನ್ಯಾ0ುವಾಗೂದು ಬೇಡ.'

'ಜಮೀನ್ ಕಳ್‌ಕಂಡು ಹೊಟ್ಟೇಗೇನು ಮಾಡ್ಲಿ ಲಾ0ು್ರು ಸ್ವಾಮಿ0ೋರೇ?'–ಗಂಗಮ್ಮ ಕೇಳಿದಳು. ಬಾ0ುಲ್ಲಿ ಹೊಗೆಸೊಪ್ಪಿನ ರಸ ತುಂಬಿದ್ದುದರಿಂದ ಚೆನ್ನಿಗರಾ0ುರು ಸುಮ್ಮನಿದ್ದರು.

'ಇಲ್ದೆ ಇದ್ರೆ ಮೇಲಿನ ಕೋರ್ಟಿಗೆ ಹೋಗಬೇಕು. ಅದುಕ್ಕೆ ಸಾವಿರಾರು ರೂಪಾಯಿ ಬೇಕು. ದುಡ್ಡು ಹೊಂದುಸ್ತೀನಿ ಅನ್ನೋ ಧೈ0ುರ್ವಿದ್ರೆ ಬೇರೆ ಮಾತು.'

ಇನ್ನು ಬೇರೆ ದಾರಿ ಕಾಣಲಿಲ್ಲ. ಶಿವೇಗೌಡನನ್ನು ಅಲ್ಲಿಗೇ ಕರೆಸಿದರು. ತಾನೇ ಇನ್ನೂ ಎರಡು ಸಾವಿರ ಕೊಡುವುದಾಗಿ ಅವನು ಒಪ್ಪಿಕೊಂಡ. ಕೋರ್ಟಿನ ಮೂಲಕ ಹರಾಜು ಮಾಡಿದರೆ ತನ್ನನ್ನು ಬಿಟ್ಟು ಆ ಜಮೀನನ್ನು ಕೂಗುವವರು ಊರಿನಲ್ಲಿ ಮತ್ತೆ 0ುಾರಾದರೂ ಹುಟ್ಟಿಕೊಂಡಾರೆಂಬ ಭ0ು ಅವನಿಗೆ. ಗಂಗಮ್ಮ ದಿಕ್ಕು ತೋಚದವಳಾಗಿದ್ದಳು. ಎರಡು ಸಾವಿರ ರೂಪಾಯಿಗಳನ್ನು ಅವನು ಅಲ್ಲಿ0ುೇ ಕೊಪ್ಪರಿ ಅಂಗಡಿಗೆ ಹೋಗಿ ತಂದು ಕೊಟ್ಟ. ಇಬ್ಬರು ಲಾ0ುರೂ ಸೇರಿ ಕಾಗದ ಬರೆದು ತೀರ್ಮಾನ ಮಾಡಿದರು. ಮಹಾಂತ0ು್ಯನವರ ಕೊನೆ0ು ಫೀಜು ನೂರು ರೂಪಾಯಿಗಳನ್ನು ಕೊಡಬೇಕಾಗಿತ್ತು. ಅದನ್ನು ರೇವಣ್ಣಶೆಟ್ಟಿ ಕೊಟ್ಟಿಲ್ಲವೆಂದು ಅವರು ಹೇಳಿದರು.

'ನಿಮಗೆ ಅಂತ ಒಟ್ಟು ಎಂಟು ನೂರು ರೂಪಾಯಿ ಕೊಟ್ಟಿದೀನಿ ಸ್ವಾಮಿ0ೋರೇ'–ಎಂದು ಗಂಗಮ್ಮ ಆಣೆ ಇಟ್ಟು ಹೇಳಿದಳು.

'ಒಟ್ನಲ್ಲಿ ನನಗೆ ನೂರೈವತ್ತು ಮಾತ್ರ ಬಂದಿದೆ'–ಅವರೆಂದರು.

ಜಜ್‌ಮೆಂಟಿನ ದಿನ–'ನೀವು ಗಾಡೀಲಿ ನಡೀರಿ, ನಾನು ಬ್ಯಳಿಗ್ಗೆ ಮೋಟರಿನಲ್ಲಿ ಬತ್ತೀನಿ' ಎಂದು ಹೇಳಿದ್ದ ರೇವಣ್ಣಶೆಟ್ಟಿ ಬರಲಿಲ್ಲ. ಅಂತೂ ಇವರು ಲಾ0ುರಿಗೆ ನೂರು ರೂಪಾಯಿ ಕೊಟ್ಟರು. ಮರುದಿನ, ಮುಂದಿನ ಕಾಗದ ಪತ್ರಗಳನ್ನು ರಿಜಿಸ್ಟರ್ ಮಾಡಿಸಿದ ಮೇಲೆ ಗಾದಿ ಕಟ್ಟಿಸಿಕೊಂಡು ಊರಿಗೆ ಹೊರಟರು. ಸಾವಿರದ ಒಂಬೈನೂರಿ ರೂಪಾಯಿ0ು ಗಂಟನ್ನು ಗಂಗಮ್ಮ ತಾನೇ ತೊಡೆ0ು ಸಂದಿ0ುಲ್ಲಿ ಇಟ್ಟುಕೊಂಡು ಕಣ್ಣು ಮಿಟುಕಿಸದೆ ಗಾಡಿ0ುಲ್ಲಿ ಕೂತು ಊರಿಗೆ ಬಂದಳು.

ಊರಿಗೆ ಬಂದ ಮೇಲೆ ಅವಳು ಕೋರ್ಟಿನ ತೀರ್ಮಾನವನ್ನು 0ುಾರ ಕೈಲೂ ಹೇಳಲಿಲ್ಲ. ಆದರೆ ಶಿವೇಗೌಡ ಹೇಳದೆ 0ುಾಕೆ ಬಿಟ್ಟಾನು? ಸುದ್ದಿ ತಿಳಿ0ುುವುದೇ ತಡ, ಇವರು ಕೋರ್ಟಿನ ಖರ್ಚಿಗೆಂದು ಐವತ್ತು ನೂರರಂತೆ ಕಾಗದ ಬರೆದುಕೊಟ್ಟು ತಂದಿದ್ದ ಸಾಲಗಾರರೆಲ್ಲ ಶೆಡ್ಡಿಗೆ ನುಗ್ಗಿದರು. ಒಟ್ಟು ಎಂಟು ನೂರು ರೂಪಾಯಿ ಸಾಲಕ್ಕೆ ಹೋಯಿತು. ಉಳಿದದ್ದನ್ನು ಗಂಗಮ್ಮ ತನ್ನ ಹಾಸಿಗೆ0ು ದಟ್ಟದ ಕೆಳಗೆ ಹಾಕಿಕೊಂಡು, ಅದರ ಮೇಲೆ ಎಚ್ಚರದಿಂದ ಮಲಗುತ್ತಿದ್ದಳು. ಒಂದು ದಿನ ರೇವಣ್ಣಶೆಟ್ಟಿ0ು ಶೆಡ್ಡಿಗೆ ಹೋಗಿ ಕೇಳಿದಳು:

'ರೇವಣ್ಣ, ನೀನು ಲಾ0ುರಿಗೆ ಪೂರ್ತಿ ದುಡ್ಡು ಕೊಟ್ಟೇ ಇಲ್ವಂತೆ. ನನ್ನತಾವ ನೂರು ರೂಪಾಯಿ ತಗಂಡ್ರು.'

'0ುಾವನು ಏಳ್ದೋನು?'

'ಲಾ0ು್ರೇ ಹಾಗಂದ್ರು."

'ಮಿಂಡ್‌ರಿಗೆ ಉಟ್ಟಿದ ನನ್ಮಗನ್ನ ತಂದು. ನಡೀರಿ, ನನ್ನೆದ್ರಿಗ್ ಹಂಗಂದ್ರೆ 0ುಕ್‌ಡ ತಗಂಡ್ ಹ್ವಡ್‌ದುಬಿಡ್ತೀನಿ ಕಳ್ಳ ನನ್ ಹೆಂಡ್ತಿಮಗುಂಗೆ'–ಎಂದು ರೇವಣ್ಣಶೆಟ್ಟಿ ಕೆಂಪು ಕಣ್ಣುಗಳನ್ನು ಹೊರಳಿಸಿದ. ಅದೇನೋ ಗಂಗಮ್ಮನಿಗೆ ಮುಂದೆ ಮಾತು ಬೆಳೆಸುವ ಇಚ್ಛೆ0ುಾಗಲಿಲ್ಲ. ಭ0ುವೋ ಬೇಸರವೋ, ಅಥವಾ ರೇವಣ್ಣಶೆಟ್ಟಿ0ು ಸತ್ಯಸಂಧತೆ0ು ಬಗೆಗೆ ನಂಬಿಕೆ0ೋ, ಸುಮ್ಮನಾದಳು.

'ರೇವಣ್ಣಾ, ಗೆಲ್ಲಿಸ್ಕೊಡ್ತೀನಿ ಅಂದಿದ್ರಲಾ ಲಾ0ು್ರು, ಅದ್ಯಾಕ್ ಸೋತ್ ಹೋ0ು್ತು?'

'ಜಡ್ಜಿಗಳಿಗೆ ಲಂಚ ತಿನ್ಸಿದ್ರಂತೆ ಕಣ್ರಿ, ಕಂಡೋನ ಹೆಂಡ್ತಿ ಹೇಲ. ಶಿವೇಗೌಡ ಅವ್ರಿಗೇ ಎಲ್ಡು ಸಾವಿರ ರೂಪಾಯಿ ಕೊಟ್ನಂತೆ ಹಿಂದಿನ ದಿನ. ಅದುಕ್ಕೆ ಅವ್ನು ಗಾಡಿ ಕಟ್ಕಂಡು ಒಂದಿನ ಮದ್ಲೇ ಹೋಗಿರ್ಲಿಲ್ವಾ? ನಂಗ್ ಗೊತ್ತಾ0ಯ್ತು. ನಮ್ತಾವ ಎಲ್ಡು ಸಾವಿರ ಇದ್ದಿದ್ರೆ ನಾವು ಕೊಡಬ್ಯೆದಾಗಿತ್ತು. ನಿಮ್ತಾವ ಇಲ್ಲ ಅಂತ ನಂಗ್ ಗೊತ್ತಿತ್ತು. ಅದ್ಕೇ ನಾನು ಜಡ್ಜ್‌ಮಿಂಟಿನ ದಿನ ಬರ್ಲಿಲ್ಲ.'

ಗಂಗಮ್ಮ ಸುಮ್ಮನೆ ತನ್ನ ಶೆಡ್ಡಿಗೆ ಹೋದಳು.

– 2 –

ಎಷ್ಟೋ ಜನರು ಗಂಗಮ್ಮನ ಶೆಡ್ಡಿಗೆ ಹೋಗಿ ಶಿವೇಗೌಡನನ್ನೂ ಕೋರ್ಟಿನ ಜಡ್ಜಿಗಳನ್ನು ಬೈದು ಅವಳಿಗೆ ಅನುತಾಪ ವ್ಯಕ್ತಪಡಿಸಿದರು. ಒಂದು ದಿನ ಬೆಳಿಗ್ಗೆ ಅ0ಯ್ಯಾಶಾಸ್ತ್ರಿಗಳು ಶಿವೇಗೌಡನನ್ನು ಬೈದು, 'ಗಂಗಮ್ಮಾ, ನಮ್ಮನೆ0ಯೊಳು ನಿನ್ನ ಕೈಲೆ ಮಾತಾಡಬೇಕು ಅಂತಿದ್ಲು ಬಾ, ಬರೂವಂತೆ'–ಎಂದು ತಮ್ಮ ಶೆಡ್ಡಿಗೆ ಕರೆದುಕೊಂಡು ಹೋದರು. ಶಾಸ್ತ್ರಿಗಳ ಹೆಂಡತಿ0ಯೂ ಸೇರಿ ಮತ್ತೆ ಶಿವೇಗೌಡನನ್ನು ಶಪಿಸಿದರು. ಆ ಜಡ್ಜಿ0ಯ ಹೆಂಡತಿ ಮಕ್ಕಳೆಲ್ಲ ಸಾ0ಯುವುದು ಖಂಡಿತವೆಂದು ಶಾಸ್ತ್ರಿಗಳು ಪಂಚಾಂಗ ನೋಡಿ ಭವಿಷ್ಯ ನುಡಿದರು.

'ಗಂಗಕ್ಕಾ, ನೀನಿಲ್ಲೇ ಮಡಿ ಉಟ್ಕಂಡು ಮಕುಟ ಸುತ್ತಿಕಂಡ್ ಊಟ ಮಾಡು. ನಿಂಗ್ಯಾರು ಅ0ಯ್ಯೋ ಅನ್ನೋರು ಪಾಪ!'–ಎಂದು ಶಾಸ್ತ್ರಿಗಳ ಹೆಂಡತಿ ಸುಬ್ಬಮ್ಮ ಬಲವಂತ ಮಾಡಿದಾಗ ಗಂಗಮ್ಮ ತನ್ನ ಸೊಸೆ0ಯನ್ನು ಮನಃಪೂರ್ವ ಬ0ಯ್ಯಲು ಪ್ರಾರಂಭಿಸಿದಳು: 'ತಾಟಗಿತ್ತಿ ಮುಂಡೆ ನಮ್ಮನೆಗೆ ಕಾಲಿಟ್ಟು ನೋಡು. ಕಷ್ಟ ಬರೂಕ್ ಶುರುವಾ0ಯ್ತು. ಈಗ ಜಮೀನೆಲ್ಲ ಹೋ0ಯ್ತು. ಹುಟ್ತಾ ಹುಟ್ತಾ ಮಕ್ಕಳ ಪುಣ್ಯ, ಬತ್ತಾ ಬತ್ತಾ ಸ್ವಸೆ ಪುಣ್ಯ ಅನ್ನೂ ಮಾತು ಸುಳ್ಳೆ?'

ಅವಳು ಸ್ನಾನ ಮಾಡಿ ಮಕುಟ ಸುತ್ತಿ ವಿಭೂತಿ ಇಟ್ಟು ಮೂರು ಆಚಮನ ಹೊತ್ತಿಗೆ ಶಾಸ್ತ್ರಿಗಳು ಅವಳ ಶೆಡ್ಡಿಗೆ ಹೋಗಿ ಅಪ್ಪಣ್ಣ0ಯ್ಯನನ್ನು ಕರೆದುಕೊಂಡು ಬಂದರು. ಶಾಸ್ತ್ರಿಗಳ ದೊಡ್ಡಪ್ಪನ ಮೊಮ್ಮಗ ಅಣ್ಣಾಜೋಯಿಸ ಅಷ್ಟು ಹೊತ್ತಿಗೆ ಬಂದ. ಇವರಿಬ್ಬರಿಗೂ ಸೇರಿಸಿ0ಯೇ ಸುಬ್ಬಮ್ಮ ಅಡಿಗೆ ಮಾಡಿದ್ದಳು. ಬೂದುಗುಂಬಳಕಾಯಿ0ಯ ಮಜ್ಜಿಗೆ ಹುಳಿ, ಹಿಟ್ಟು, ಅನ್ನ ಮಜ್ಜಿಗೆಗಳನ್ನು ಅಡಿಕೆ ಪಟ್ಟೆ0ಯಲ್ಲಿ ಬಡಿಸಿ, ಅವಳು ಉಪಚರಿಸುತ್ತಿರುವಾಗ ಅ0ಯ್ಯಾಶಾಸ್ತ್ರಿಗಳು ಮಾತು ತೆಗೆದರು: 'ರಾಮಣ್ಣೋರು ಇರಬೇಕಾಗಿತ್ತು. ಅದರ ಕತೆ ಬ್ಯಾರೆ0ಯೇ ಇತ್ತು. ನಾನು ಇವಳ ಕೈಲಿ ಎಷ್ಟು ಹೇಳ್ಕಂಡು ಪೇಚಾಡ್ತಿರ್ತೀನಿ ಕೇಳು. ಅವರು ಹೋದದ್ದು ನಮ್ಮೂರ ಕಲಶ ಬಿದ್‌ಹೋದಾಗೆ ಆ0ಯ್ತು.'

'ಇಂಥ ಸ್ವಸೆಮುಂಡೇರು ಬತ್ತಾರೆ ಅಂತ ನನ್ನ ಹಣೇಲಿ ಬರ್‌ದಿರೂವಾಗ ಅವರು ಹ್ಯಾಗೆ ಇರ್ತಾರೆ ಹೇಳಿ.'

ಸುಬ್ಬಮ್ಮ ಕೇಳಿದಳು: 'ಗಂಗಕ್ಕಾ, ನಿಂಗೆ ಮುಟ್ಟು ನಿಂತು ಎರಡು ವರ್ಷ ಆ0ಯ್ತಲ್ವೆ?'

'ಮೂರು ವರ್ಷವಾ0ಯ್ತು.'

ಶಾಸ್ತ್ರಿಗಳು ಎಂದರು: 'ನೋಡ್ದ್ಯಾ, ನೀನೂ ಬಾಳಿದೆ ಬದುಕಿದೆ. ನೀನು ಮಾಡ್ದೆ ಇದ್ದ ವ್ರತ ಕತೆ ದಾನ ಧರ್ಮ 0ಯಾವುದೂ ಇಲ್ಲ. ಮುಟ್ಟು ನಿಂತಮ್ಯಾಲೆ ಹೆಂಗಸರು ಋಷಿ ಪಂಚಮಿ ವ್ರತ ಒಂದು ಮಾಡಿ ಮುಗಿಸಬೇಕು. ನಿನ್ನ ಕಷ್ಟ ಎಲ್ಲ ಬಿಡುಗಡೆ0ಯಾಗುತ್ತೆ.'

ಅಣ್ಣಾಜೋಯಿಸ, ಚಿಕ್ಕಪ್ಪನಿಗಿಂತ ಶಾಸ್ತ್ರ ಮಂತ್ರಗಳನ್ನು ಹೆಚ್ಚು ಕಲಿತವನು. ಶಿಂಧ ಘಟ್ಟದ ಸೂರಣ್ಣಜೋಯಿಸರ ಹತ್ತಿರ ಪಾಠ ಹೇಳಿಸಿಕೊಂಡವನು. ಋಷಿಪಂಚಮಿ ವ್ರತದ ಮಹಿಮೆ0ಯನ್ನು ಮಂತ್ರ ಸಮೇತ ಹೇಳಿದ.

'ಹ್ಯಾಗಾದ್ರೆ ಹಾಗಾಗ್ಲಿ, ನೀನು ಅದೊಂದು ಮಾಡಿಬಿಡು. ಇಲ್ಲೇ ಶೆಡ್ಡಿನಲ್ಲಿದ್ದರೂ ಪರವಾಗಿಲ್ಲ. ನಿಂಗೆ ಬೇಕಾದ ಸಹಾ0ಯ ನಾನು ಮಾಡ್ತೀನಿ. ಅಣ್ಣಪ್ಪನ ಹೆಂಡ್ತಿ 0ಯಂಕಟಲಕ್ಷ್ಮಿ ಇದಾಳೆ. ಅದುಕ್ಕೇ ಬ್ಯಾರೆ ಒಂದು ಚಪ್ಪರ ಹಾಕಿಸ್‌ಬಿಟ್ರೆ ಆಗುತ್ತೆ. ನಮ್ಮ ಶೆಡ್ಡಿನ ಮುಂದೆ ದೊಡ್ಡಾದಾಗಿ ಹಾಕ್ಸಾಣ. ನಿಮ್ಮ ಶೆಡ್ಡಿನ ಹತ್ರ ಇತರೇ ಜನಗಳ ಕಾಟ. ಮಡಿ ಮೈಲಿಗೆ ಸರಿ0ಯಾಗುಲ್ಲ'–ಸುಬ್ಬಮ್ಮ ಎಂದಳು.

'ಮಾಡಣೇನೋ ಅಪ್ಪಣ್ಣ0ಯ್ಯ?'–ಹಿಟ್ಟು ನುಂಗುವುದನ್ನು ಮುಗಿಸಿ ಮಜ್ಜಿಗೆ ಹುಳಿ0ಯಲ್ಲಿ ಅನ್ನ ಕಲಸುತ್ತಿದ್ದ ಮಗನನ್ನು ಕೇಳಿದಳು. ಚನ್ನೇನಹಳ್ಳಿ0ಯ ವೆಂಕಟಾಚಲ0ಯ್ಯನವರ ತಾಯಿ ಋಷಿಪಂಚಮಿ ಮಾಡಿದ್ದಾಗ ಊಟಕ್ಕೆ ಅಪ್ಪಣ್ಣ0ಯ್ಯನೂ ಹೋಗಿದ್ದ. ಒಬ್ಬಟ್ಟು, ಮಾವಿನಕಾಯಿ ಅನ್ನ, ಮೊದಲಾಗಿ ಮೂಗು ನಾಲಿಗೆಗಳೆರಡರಲ್ಲೂ ನೀರು ಬರುವ ಹಾಗೆ ಅಡಿಗೆ ಮಾಡಿಸಿದ್ದರು. ಅವನಿಗೆ ತಕ್ಷಣ ಅದರ ನೆನಪಾಗಿ, ಮುಂದಿದ್ದ ಮಜ್ಜಿಗೆ0ಯ ಹುಳಿ ರಾಗಿ ಮುದ್ದೆಗಳ ಜಾಗದಲ್ಲಿ ಮಾವಿನಕಾಯಿ0ಯ ಅನ್ನ ಮತ್ತು ಒಬ್ಬಟ್ಟಿನ ತೆಕ್ಕೆಗಳು ಕಾಣಿಸಿದುವು.

'ಮಾಡಾಣ ಕಣಮ್ಮ. ಆ 0ಯಂಕ್ಟಾಚಲ0ಯ್ಯೋರಿಗಿಂತ ನಾವೇನು ಕಮ್ಮಿ?'

ಸರಿ, ವ್ರತ ನಿಶ್ಚ0ಯವಾಯಿತು. ಸುಬ್ಬಮ್ಮ ಎಂದರು: 'ಗಂಗಕ್ಕ ಅಂದ್ರೆ ಏನು ಅಂತೀರಾ? ಆಡಿದ್ಮೊಂದೇ ಮಾತು. ಬ್ರಹ್ಮದೇವರ ಅಪ್ಪಾ ಬಂದ್ರೂ ಅವಳು ಆಡಿದ ಮಾತು ಬ್ಯಾರೆ ಮಾಡುಲ್ಲ.'

ಗಂಗಮ್ಮ ಮಾತು ಬದಲಿಸಲಿಲ್ಲ. ಬದಲಿಸಿದರೆ ಅವಳ ಹೆಸರೇನಾಗಬೇಕು? ಅಣ್ಣಾಜೋಯಿಸ ಊಟವಾದ

ಮೇಲೆ ಕೂತು ಪಂಚಾಂಗ ನೋಡಿ, ಎರಡೂ ಕೈ ಬೆರಳುಗಳ ಗೆರೆಗಳ ಸಹಾ೦ಯದಿಂದ ಎಣಿಸಿ ದಿನ ನಿಶ್ಚಯಿಸಿದ. ಚೆನ್ನೇನಹಳ್ಳಿ೦ಯ ವೆಂಕಟಾಚಲ೦ಯ್ಯ ತನ್ನ ತಾಯಿಗೆ ಮಾಡಿಸಿದಂತೆ ಗೋಪಾಳದ ಋಷಿಪಂಚಮಿ ಮಾಡುವುದು ಗಂಗಮ್ಮನ ಘನತೆಗೆ ಸಲ್ಲುವುದಿಲ್ಲ. ದೊಡ್ಡದಾಗಿ೦ಯೇ ಸಾಮಾನುಗಳನ್ನು ತರಬೇಕು. ಅ೦ಯ್ಯಾಶಾಸ್ತ್ರಿಗಳ ಮನೆ೦ಯ ರಾಗಿಕರುಕಿನ ಶಾಯಿ ಮತ್ತು ಸ್ಲೀಲುಗಳಿಂದ ಸಾಮಾನುಗಳ ಪಟ್ಟಿ ಮಾಡಿಸಿದರು. ಊರಿನಲ್ಲಿರುವ ಇಬ್ಬರು ಪುರೋಹಿತರಿಗೂ ರೇಷ್ಮೆ೦ಯ ಮಗುಟ, ಮೇಲುಕೋಟೆ ಅಂಚಿನ ಪಂಚೆ. ಅವರ ಹೆಂಡತಿ೦ಯರಿಗೆ ಐವತ್ತು ಐವತ್ತು ರೂಪಾಯಿಗಳ ಸೀರೆ. ದಾನಕ್ಕೆ ಮನೆ೦ಯಲ್ಲಿರುವ ಹಸುವೇ ಆಗುತ್ತೆ. ಇನ್ನು ಸಣ್ಣ ಅಕ್ಕಿ, ಬೇಳೆ, ಸಕ್ಕರೆ, ರವೆ ಮೊದಲಾದುವೆಲ್ಲ ಬೇಕು. ಒಟ್ಟಿನಲ್ಲಿ ಸಾಮಾನು ತರಲು ತಿಪಟೂರಿಗೆ ಗಾಡಿ ಕಟ್ಟಿಸಿಕೊಂಡು ಹೋಗಬೇಕು. ಜೊತೆಗೆ ಅಣ್ಣಾಜೋಯಿಸ, ಅ೦ಯ್ಯಾಶಾಸ್ತ್ರಿಗಳು, ಇಬ್ಬರೂ ಹೋಗುವುದೆಂದು ನಿಶ್ಚ೦ಯವಾಯಿತು. ಅಪ್ಪಣ್ಣ೦ಯ್ಯನಿಗೆ ಮತ್ತೊಮ್ಮೆ ತಿಪಟೂರಿಗೆ ಹೋಗುವ ೦ಯೋಗ ಒದಗಿತು.

– 3 –

ಭರ್ಜರಿ೦ಯಾಗಿ ಋಷಿಪಂಚಮಿ ನಡೆಯಿತು. ಎಂಟು ದಿನ ಕಳೆದ ಮೇಲೆ ಎಲ್ಲರೂ ಊರನ್ನು ಪ್ರವೇಶಿಸುವುದೆಂದು ನಿರ್ಧಾರವಾಯಿತು. ವ್ರತಕ್ಕೆ ತಂದಿದ್ದ ರವೆ ಸಕ್ಕರೆ ತುಪ್ಪಗಳು ಇನ್ನೂ ಉಳಿದಿದ್ದುವು. ಗಂಗಮ್ಮ ಒಂದು ದಿನ ಸೊಸೆಗೆ ಹೇಳಿಬಿಟ್ಟಳು: 'ನೀನು ೦ಯಾವತ್ತು ಈ ಮನೆಗೆ ಕಾಲಿಟ್ಟೆ೦ಯೋ ತಾಟಗಿತ್ತಿ, ಮನೆ ಹಾಳಾ೦ಯ್ತು. ಜಮೀನೆಲ್ಲ ಹಾಳಾ೦ಯ್ತು. ಊರೊಳಕ್ಕೆ ಬರುವಾಗ ನೀನು, ನಿನ್ನ ಮಕ್ಳು, ಬ್ಯಾರೆ ಇರಿ. ನಾವು ಮನ್ಲಿರ್ತೀವಿ.'

ಅತ್ತೆ೦ಯ ಮಾತಿನ, 'ನೀನು, ನಿನ್ನ ಮಕ್ಳು' ಎಂಬುದು ನಂಜಮ್ಮನಿಗೆ ತಕ್ಷಣ ಅರ್ಥವಾಗಲಿಲ್ಲ. ಅವಳು ಕೇಳಿದಳು: '೦ಯಾವ ಮನ್ಲಿರ್ತೀರಿ?'

'೦ಯಾವ ಮನ್ಲೇ? ನನ್ನ ಗಂಡ ಕಟ್ಸಿದ್ದ ಮನ್ಲಿರ್ತೀವಿ.'

'ಶಿವೇಗೌಡ ನಿಮ್ಮನ್ನ ಮನೆ ಒಳಕ್ಕೆ ಹೋಗುಕ್ಕೆ ಬಿಟ್ರೆ ತಾನೆ?'–ಎನ್ನುವ ಮಾತು ನಾಲಿಗೆ೦ಯಲ್ಲಿ ಬಂದಿತಾದರೂ, ಅವಳು ಬಾಯಿಬಿಟ್ಟು ಹಾಗೆ ಹೇಳಲಿಲ್ಲ. ಈ ಸಂಸಾರಕ್ಕೆ ಸೇರಿದ ಜಮೀನೆಲ್ಲವೂ ಕೋರ್ಟಿನಲ್ಲಿ ಹೋಗುತ್ತದೆಂದು ಅವಳ ಅಂತರಾತ್ಮವು ಮೊದಲೇ ಸ್ಪಷ್ಟವಾಗಿ ನುಡಿದಿತ್ತು. ಆನಂತರ ಶಿವೇಗೌಡನಿಂದಲೇ ಎರಡು ಸಾವಿರ ರೂಪಾಯಿ ಬರುತ್ತದೆಂದು ಅವಳು ನಿರೀಕ್ಷಿಸಿರಲಿಲ್ಲ. ಬಂದರೂ ಅದರ ಬಗೆಗೆ ವಿವೇಕ ಹೇಳುವ ಗೊಡವೆಗೆ ಹೋಗಲಿಲ್ಲ. ಹೇಳಿದರೆ ಸುಮ್ಮನೆ ಜಗಳ; ಕೆಟ್ಟ ಮಾತುಗಳನ್ನು ಕೇಳಬೇಕಾಗುತ್ತದೆ. ಈಗ ಅವಳು ಆರು ತಿಂಗಳ ಬಸುರಿ. ಗರ್ಭಿಣಿ೦ಯರು ಕೆಟ್ಟ ಮಾತು ಕೇಳಬಾರದು, ಕೆಟ್ಟ ೦ಯೋಚನೆ ಮಾಡಬಾರದು, ಸದಾ ಒಳ್ಳೆ೦ಯದನ್ನು ಕೇಳುತ್ತಾ ಉಲ್ಲಾಸಚಿತ್ತರಾಗಿರಬೇಕು ಎನ್ನುವುದನ್ನು ಅವಳು ಚಿಕ್ಕವ೦ಯಸ್ಸಿನಿಂದಲೇ ಕೇಳಿದ್ದಳು. ಮೊದಲು ಎರಡು ಬಸುರಿ೦ಯಲ್ಲಿ ಈ ಮಾತು ಅಷ್ಟಾಗಿ ನೆನಪಿಗೆ ಬಂದಿರಲಿಲ್ಲ. ಈಗ ಇದ್ದಕ್ಕಿದ್ದಹಾಗೆ೦ಯೇ ಅದು ಮನಸ್ಸನ್ನು ತುಂಬಿಬಿಟ್ಟಿತು. ದಿನವೂ ೦ಯಾವಾಗಲಾದರೂ ಧ್ರುವಚರಿತ್ರೆ, ಭಕ್ತ ಪ್ರಹ್ಲಾದ, ರಾಮ ಪಟ್ಟಾಭಿಷೇಕದ ಕಥೆ೦ಯ ಹಾಡುಗಳನ್ನು ಹೇಳಿಕೊಳ್ಳುವಳು. ಸದಾ ಇಂಥ ಕಥೆಗಳಲ್ಲಿ೦ಯೇ ಮನಸ್ಸನ್ನು ತೊಡಗಿಸಿಕೊಳ್ಳುವಳು.

ಆ ದಿನ ಮಧ್ಯಾಹ್ನ ಗಂಡ ಮಲಗಿದ್ದಾಗ ಅತ್ತೆ೦ಯ ಆಜ್ಞೆ೦ಯನ್ನು ತಿಳಿಸಿ, ಕೇಳಿದಳು: 'ಬ್ಯಾರೆ ಹೋಗಿ ಅಂದ್ರು. ಎಲ್ಲಿಗೆ ಹೋಗೂದು, ಜೀವನಕ್ಕೆ ಏನು ಮಾಡೂದು, ೦ಯೋಚನೆ ಮಾಡಿದೀರಾ?'

'ನಿನ್ನ ೦ಯೋಗ್ತಿ ಕಂಡೇ ನಮ್ಮಮ್ಮ ಹಾಗಂದಿದಾಳೆ. ನೀನು ನನ್ಮಕ್ಳು ಏನು ಬೇಕಾದ್ರೂ ಮಾಡ್ಕಳಿ.'

'ನನ್ನ ೦ಯೋಗ್ತಿ ಎಂಥದು ಅಂತ ಊರಿನೋರಿಗೆಲ್ಲ ಗೊತ್ತು. ಈಗ ಅದರ ಮಾತು ಬ್ಯಾಡ. ಮುಂದೆ ಏನು ಮಾಡೂದು ಹೇಳಿ.'

'ನಾನ್ಹೇಳ್ಲಿಲ್ವೇನೆ? ನಾನು ನಮ್ಮಮ್ಮನ ಜೊತೆ ಇರ್ತೀನಿ'–ಎಂದು ಶ್ಯಾನುಭೋಗರು ಮುಸುಕು ಹಾಕಿಕೊಂಡು ಮಲಗಿದರು.

ಅವಳಿಗೆ ರೇಗಿತು: 'ಏನು ಮಾತಾಡ್ತಾ ಇದೀರಾ? ಬುದ್ಧಿ ನ್ಯಟ್ಟಗಿದೆ೦ಯೋ ಇಲ್ವೋ?'

'ಹೋಗೇ ಕತ್ತೆಮುಂಡೆ, ನನ್ನ ನಿದ್ದೆ ಹಾಳುಮಾಡ್ಯಾಡ.'

ನಂಜಮ್ಮ ಮತ್ತೆ ಮಾತನಾಡಲಿಲ್ಲ. ತಾವು ಬೇರೆ ಇರುವುದೇ ನಿಶ್ಚ೦ಯವೆಂದು ಅವಳು ತಿಳಿದಿದ್ದಳು. ಆದರೆ ಅತ್ತೆ ತನ್ನ ಗಂಡನನ್ನೂ ತನ್ನಿಂದ ಹೀಗೆ ಬಿಡಿಸುತ್ತಾಳೆಂದು ಕಲ್ಪಿಸಿಕೊಂಡಿರಲಿಲ್ಲ. ಇನ್ನು ಜಮೀನೆಲ್ಲ ಹೋದಮೇಲೆ ಅಮ್ಮ ಈ ಮಗನನ್ನು ಎಷ್ಟು ದಿನ ಇಟ್ಟುಕೊಂಡಾಳು ಎನಿಸುತ್ತಲೂ ಇತ್ತು. ಹೇಗಾದರೂ ಇನ್ನು ಮೇಲೆ ಸಂಸಾರದ ಹೊಣೆ ತನ್ನದು, ಮಕ್ಕಳೂ ಸೇರಿ ಎಲ್ಲರನ್ನೂ ಸಾಕುವ ಭಾರ ತನ್ನ ಮೇಲೆ ಬೀಳುತ್ತದೆ ಎಂಬುದು ಅವಳಿಗೆ ಗೊತ್ತು. ಹೇಗೆ ಎಂದು ಮಾತ್ರ ಹೊಳೆ೦ಯಲಿಲ್ಲ. ಎಷ್ಟೇ ಕಷ್ಟವಾದರೂ, ಗರ್ಭಿಣಿ೦ಯಾದ ತಾನು ಅಳಬಾರದು, ಮನಸ್ಸನ್ನು ಕಲಕಿಕೊಳ್ಳಬಾರದೆಂದು ನಿಶ್ಚಯಿಸಿಕೊಂಡಿದ್ದಳು. ಗಂಡನಿಗೆ ನಿದ್ದೆ ಬಂದಮೇಲೆ ಮಗು ರಾಮಣ್ಣನನ್ನು ಎತ್ತಿಕೊಂಡಳು. ಹೊಟ್ಟೆ ತುಂಬಿ ಬೆಳೆದದ್ದರಿಂದ

ಅದನ್ನು ಸೊಂಟಕ್ಕೆ ಎತ್ತಿಕೊಳ್ಳದೆ ಹೆಗಲಿಗೆ ಒರಗಿಸಿಕೊಂಡು, ಬಲಗೈಲಿ ಪಾರ್ವತಿ೦ಯ ಕೈ ಹಿಡಿದು ಏರಿ೦ಯ ಮೇಲೆ ನಡೆದಳು. ಕೆರೆ೦ಯಲ್ಲಿ ನೀರಿರಲಿಲ್ಲ. ಅಂಗಳದಲ್ಲಿ ಗೋಡುಮಣ್ಣು ಕಾದಿತ್ತು. ಏರಿ೦ಯ ಧೂಳು ದಾರಿ೦ಯಮೇಲೆ ಬಿಸಿಲಿನ ಝಳ ರಾಚುತ್ತಿತ್ತು. ಏದುಸಿರು ಬರುತ್ತಿದ್ದುದರಿಂದ ನಿಧಾನವಾಗಿ ನಡೆದು ಗುಡಿ೦ಯ ಪೌಳಿ೦ಯ ಬಾಗಿಲನ್ನು ಹೊಕ್ಕಾಗ ಮಾದೇವ೦ಯ್ಯನವರು ಆಗ ತಾನೇ ಸ್ನಾನ ಮಾಡಿ ಕಾವಿಪಂಚೆ೦ಯನ್ನು ಒಣಗಹಾಕುತ್ತಿದ್ದುದು ಕಾಣಿಸಿತು. ಇಟ್ಟಿಗೆ೦ಯ ಒಲೆ೦ಯ ಮೇಲೆ ಒಂದು ಮಡಿಕೆ೦ಯಲ್ಲಿ ಅನ್ನ ಕುದಿ೦ಯುತ್ತಿತ್ತು. ಅವರೇ–'ಬಾರವ್ವಾ, ಬಾರವ್ವ. ನಾನೇ ನಿಮ್ಮ ಶೆಡ್ಡಿಗೆ ಬರ್‌ಬೇಕು ಅಂತಿದ್ದೆ. ಅತ್ತ್ಯಮ್ಮ ಏನಂತದೋ ಅಂತ ಬರ್ನಿಲ್ಲ' ಎಂದರು.

'ಇನ್ನು ಅತ್ತ್ಯಮ್ಮ ಏನೂ ಅನ್ನೂ ಹಾಗಿಲ್ಲ. ನಾನೇ ಬಂದೆ.'

ಈ ಸಂಸಾರದ ವಿಷ೦ಯದಲ್ಲಿ ಮಾದೇವ೦ಯ್ಯನವರಿಗೆ ಮಾತ್ರವಲ್ಲ, ಊರಿನ ಸಮಸ್ತರಿಗೂ ತಿಳಿ೦ಯದಿದ್ದ ಒಂದು ವಿವರವೂ ಇರಲಿಲ್ಲ. ಆದುದರಿಂದ ೦ಯಾವುದನ್ನೂ ಅವರಿಗೆ ಸ್ವತಃ ಹೇಳುವ ಅಗತ್ಯವಿರಲಿಲ್ಲ. ತನ್ನನ್ನು ಬೇರೆ ಹೋಗುವಂತೆ ಅತ್ತೆ ಹೇಳಿದುದು, ಮತ್ತು ತಾನು ಕೇಳಿದುದುಕ್ಕೆ ಗಂಡ ಹೇಳಿದ ಉತ್ತರ, ಎರಡನ್ನು ಮಾತ್ರ ಅವಳು ಹೇಳಿದಳು.

'ಎಲ್ಡು ಸಾವಿರ ಬಂತಲ್ಲ, ಅದರಲ್ಲಿ ಸಾಲ ತೀರಿಸಿ ಒಂದು ಸಾವಿರ ಉಳ್ಕಂಡಿತ್ತಂತೆ. ಜೋಯಿಸನ ಕೈಗೆ ಸಿಕ್ಕಿ ಆ ೦ಯಮ್ಮ ಪಂಚಮಿಹಬ್ಬ ಅಂತ ಮುಳುಕು ಹಾಕಿ ದಂಡ ತೆರುವಾಗ ನೀನ್ಯಾಕೆ ಸುಮ್ನಿದ್ದಿ?'

'ಅ೦ಯ್ನೋರೆ, ಎಲ್ಲಾ ಹೋದ್‌ಮೇಲೆ ಇದೂ ಹೋ೦ಯ್ತು. ನಾನು ಬ್ಯಾಡ ಅಂದಿದ್ರೆ ಅವ್ರು ಕೇಳ್ತಿರ್ಲಿಲ್ಲ. ಸುಮ್ನೆ ೦ಯಾಕ್ ಜಗಳ?'

'ನಿಮ್ಮ ಮಾತೂ ವೈನ.'

ಅ೦ಯ್ಯನವರು ಅನ್ನ ಮತ್ತು ಅವರೇಬೇಳೆ೦ಯ ಎಸರುಗಳನ್ನು ಅಲ್ಯುಮಿನಿ೦ಯಂ ತಟ್ಟೆಗೆ ಹಾಕಿಕೊಂಡು ಉಂಡರು. ಪ್ರತಿದಿನ ಮಧ್ಯಾಹ್ನವೂ ಅವರು ಲಿಂಗಾ೦ಯತರ ಮನೆಗಳಲ್ಲಿ ಕಂತೆಭಿಕ್ಷೆ ಮಾಡಿ ಊಟ ಮುಗಿಸುತ್ತಿದ್ದರು. ಆದರೆ ಮಧ್ಯಾಹ್ನ ಸ್ವಾಮಿ ನೆತ್ತಿಯಿಂದ ವಾಲುವ ಹೊತ್ತಾದ ಮೇಲೆ೦ಯಾದರೆ ಭಿಕ್ಷಕ್ಕೆ ಹೋಗುತ್ತಿರಲಿಲ್ಲ. ಈ ದಿನ ಸೋಮವಾರವಾಗಿದ್ದುದರಿಂದ ದೂರದ ಹಳ್ಳಿಗಳಿಗೆ ಭಿಕ್ಷಕ್ಕೆ ಹೋಗಿದ್ದು, ಬರುವುದು ತಡವಾಗಿ, ತಾವೇ ಅಡಿಗೆ ಮಾಡಿಕೊಂಡಿದ್ದರು. ನಂಜಮ್ಮ ಮತ್ತು ಪಾರ್ವತಿ೦ಯರಿಗೆ ತಿನ್ನಲು ಒಂದು ಚೂರು ಕಾಯಿ ಬೆಲ್ಲಗಳನ್ನು ಕೊಟ್ಟು, ಅವರೂ ೦ಯೋಚನೆ ಮಾಡುತ್ತಾ ಒಂದು ಗಳಿಗೆ ಸುಮ್ಮನೆ ಕುಳಿತರು.

'ಅ೦ಯ್ನೋರೆ, ನನ್ನ ತೌರುಮನೆ ವಿಷ೦ಯ ನಿಮಗೆ ಗೊತ್ತಿದೆ೦ಯೋ ಇಲ್ಲವೋ. ನಮ್ಮ ಮನೆ ಒಳಗಿಂದು ನಾವಾಗಿ೦ಯೇ ೦ಯಾಕೆ ೦ಯಾರಿಗೋ ಹೇಳ್ಕೋಬೇಕು? ನಾನು ೦ಯಾರಿಗೂ ಹೇಳಿಲ್ಲ. ಅತ್ತಿಗೆ ಸ್ವಭಾವ ಚನ್ನಲ್ಲ. ಇನ್ನು ಬಾಣಂತನಕ್ಕಾಗಲಿ ಮತ್ತೆ ೦ಯಾವ ಕಷ್ಟ ಸುಖಕ್ಕಾಗಲೀ ನಾನು ಅಲ್ಲಿಗೆ ಹೋಗುಲ್ಲ. ಇಲ್ಲೇ ಬಾ ಅಂತ ಕರ್ಕಂಡ್ ಬಂದ್ರೆ ನನ್ನ ಅಜ್ಜಿ ಬಂದು ಮಾಡುತ್ತೆ. ಅದಕ್ಕೂ ಎಪ್ಪತ್ತೈದರ ಮೇಲೆ ಆಗಿದೆ. ಕೈಲಾಗುಲ್ಲ. ಆದ್ರೂ ಹೆಣಗುತ್ತೆ. ಆದರೆ ಇರುಕ್ಕೆ ಒಂದು ನೆರಳು, ತಿನ್ನುಕ್ಕೆ ಒಂದು ಹಿಡಿ ದಿನಸಿ ಬೇಕಲ್ಲ. ಅಲ್ಲದೆ ಈ ಪುಣ್ಯಾತ್ಮರೂ ನನ್ನ ಕೈಬಿಟ್ರೆ ಏನು ಮಾಡ್ಲಿ?'

ಅ೦ಯ್ಯನವರು ೦ಯೋಚಿಸಿ ಹೇಳಿದರು: 'ಚೆನ್ನ೦ಯ್ಯ ಎಲ್ಡು ದಿನ್ದಾಗೆ ಹುಡುಕ್ಕಂಡ್ ಬತ್ತೈತೆ. ಅದ ೦ಯೋಚ್ನೆ ಮಾಡ್‌ಬ್ಯಾಡ. ಕುರುಬರಹಳ್ಳಿ ಪಟೇಲ ಗುಂಡೇಗೌಡರು ಗೊತ್ತೈತಲ್ಲ, ಅವರ ಬೆನ್ನುಬಿದ್ರೆ ಬಿಡಾಕಿಲ್ಲ. ಈ ಊರ್ನಲ್ಲಿ ನಿಮ್ಗೆ ಆಗೂ ಜನ ೦ಯಾರೂ ಇಲ್ಲ.'

ಕುರುಬರಹಳ್ಳಿ ಇವರ ಶ್ಯಾನುಭೋಗಿಕೆಗೆ ಸೇರಿದ ಗ್ರಾಮ. ಊರಿನ ನಲವತ್ತು ಮನೆ೦ಯೂ ಒಂದೇ ಜಾತಿ: ಹಾಲು ಮತದವರು. ಗುಂಡೇಗೌಡರು ಕಳೆದ ನಲವತ್ತು ವರ್ಷದಿಂದ ಊರಿನ ಪಟೇಲಿಕೆ ಮಾಡುತ್ತಿದ್ದಾರೆ. ಧರ್ಮರಾ೦ಯ ಪಟೇಲ ಎಂದು ಸುತ್ತ ಮುತ್ತಿನ ಜನರೆಲ್ಲ ಹೇಳುವುದನ್ನು ನಂಜಮ್ಮನೂ ಕೇಳಿದ್ದಳು. ಅವರ ಪಟೇಲಿಕೆ ಶುರುವಾದ ಇಷ್ಟು ವರ್ಷದಲ್ಲಿ ಆ ಊರಿನಲ್ಲಿ ಒಂದು ಕಳ್ಳತನವಾಗಿಲ್ಲ, ಒಂದು ಹಾದರ ನಡೆದಿಲ್ಲವಂತೆ. ಹೊಟ್ಟೆಗಿಲ್ಲ ಎಂಬ ಕಾರಣದಿಂದ ೦ಯಾರೂ ಊರು ಬಿಟ್ಟು ಬೇರೆ ಊರಿಗೆ ಒಕ್ಕಲೆತ್ತಿಕೊಂಡು ಹೋಗಿಲ್ಲವಂತೆ.

ಅ೦ಯ್ಯನವರು ಎಂದರು: 'ಕೆಳಗಿನ ಕೇರೀಲಿ ಅವ್‌ರುದ್ದೇ ಮನೆ ಐತಲ್ಲ, ಖಾಲಿ ಬುಟ್ಟವ್ರೆ. ಅದ್ರಾಗೆ ವಾಸ ಮಾಡ್ತೀನಿ ಅಂತ ಕೇಳಿ. ಇಲ್ಲ ಅನ್ನಾದಿಲ್ಲ.'

ನಂಜಮ್ಮನಿಗೆ ಈಗ ನೆನಪಾಯಿತು. ಈಗ ರಾಮಸಂದ್ರದಲ್ಲಿ೦ಯೇ ಗುಂಡೇಗೌಡರ ಒಂದು ಮನೆಯಿದೆ. ಅದರಲ್ಲಿ ೦ಯಾರೂ ವಾಸಿಸುತ್ತಿಲ್ಲ. ಅವರು ಅದನ್ನು ಬಿಟ್ಟುಕೊಟ್ಟರೆ ವಾಸದ ೦ಯೋಚನೆ ಬಗೆಹರಿ೦ಯುತ್ತೆ. ಅವರನ್ನು ಅವಳು ನೋಡಿ ಬಲ್ಲಳು. ಆದರೆ ಚನ್ನಾದ ಪರಿಚ೦ಯವಿಲ್ಲ. ಇವರ ಶ್ಯಾನುಭೋಗಿಕೆಗೆ ಸೇರಿದ ಪಟೇಲರೇ ಆದುದರಿಂದ ಎಷ್ಟೋ ಸಲ ಇವರ ಮನೆಗೆ ಬಂದಿದ್ದರು. ಕೆಲವು ಸಲ ನಂಜಮ್ಮ ಅವರಿಗೆ ಊಟಕ್ಕೆ ನೀಡಿದ್ದಳು. ದಪ್ಪ ಬಿಳೀ ಮೀಸೆ, ಅಗಲವಾದ ಮುಖ, ಬಲಗೈ ಮಣಿಕಟ್ಟಿಗೆ ಒಂದು ಬೆರಳಿನ

ಗಾತ್ರದ ಚಿನ್ನದ ಕಪ್ಪ. ಮೈಮೇಲೆ ಕೋಟು ಧರಿಸಿದರೂ ಮೊಣಕಾಲು ಕಾಣಿಸುವಂತಹ ದಟ್ಟಿ ಸುತ್ತಿ ಕಾಲಿಗೆ ಕೊಪ್ಪಲಿನ ಮೋಚಿ ಹೊಲಿದ ಗಂಡುಮೆಟ್ಟು ಹಾಕುತ್ತಿದ್ದರು.
'ನಾಳೀಕೆ ಒಂಬತ್ ಹತ್ ಗಂಟೀ ಹೊತ್ಗೆ ನೀವು ಕುರುಬರ ಹಳ್ಳೀಗ್ ನಡೀರಿ. ನಾನೂ ಭಿಕ್ಷಕ್ಕೆ ಅಂತ ಬಂದಿರ್ತೀನಿ. ಗೌಡ್ರುನ್ನ ಕೇಳಿ. ನಾನೂ ಮಾತಾಡ್ತೀನಿ. ಅವ್ರು ಇಲ್ಲ ಅನ್ನಾಕಿಲ್ಲ. ಚಿನ್ನಯ್ಯ ಅವ್ವನ ಕುಟ್ಟಿ ಇರಾ ಮಾತು ಅಲ್ಲಿ ಆಡ್‌ಬ್ಯಾಡಿ' – ಎಂದು ಅಯ್ಯನವರು ಹೇಳಿದ ಮೇಲೆ ನಂಜಮ್ಮ ತಮ್ಮ ಶೆಡ್ಡಿಗೆ ಹೋದಳು.
'ಬಸವಿ ಎಲ್ಲೋ ಬೀದಿ ತಿರುಗುಕ್ ಹೋಗಿದ್ಲು' – ಎಂದು ಗಂಗಮ್ಮ ಬೈದರೂ ಮಾತನಾಡಲಿಲ್ಲ.
ಮರುದಿನ ಎದ್ದು ಸ್ನಾನ ಮಾಡಿ ಮಕ್ಕಳಿಗೂ ಮಡಿ ಉಡಿಸಿ ರೊಟ್ಟಿ ಮಾಡಿಕೊಟ್ಟು ತಾನೂ ತಿಂದಳು. ತಲೆ ಬಾಚಿ ಹಣೆಗೆ ಕುಂಕುಮ ಚಂದ್ರಗಳನ್ನಿಟ್ಟುಕೊಂಡಳು. ರಾಮಣ್ಣನನ್ನು ಹೆಗಲಿಗೆ ಹಾಕಿಕೊಂಡು ಪಾರ್ವತಿಯ ಕೈಹಿಡಿದು ಶೆಡ್ಡಿನಿಂದ ಹೊರಟಾಗ ಎದುರಿನ ಮರದ ಕೆಳಗೆ ಕುಳಿತಿದ್ದ ಗಂಗಮ್ಮ – 'ಅದ್ಯಾವ ಮಿಂಡನ ಮನೆಗೆ ಹೊರಟೆಯೋ ಬಸವಿ?' ಎಂದು ಗಟ್ಟಿಯಾಗಿ ಕೇಳಿದರೂ ಉತ್ತರ ಹೇಳದೆ ತನ್ನ ಪಾಡಿಗೆ ತಾನು ಹೊರಟು ಹೋದಳು. ಸ್ವಲ್ಪ ದೂರ ಹೋಗಿ ಹಿಂತಿರುಗಿ ನೋಡಿದಳು. ಅತ್ತೆಯಾಗಲಿ ಗಂಡ ಅಥವಾ ಮೈದುನನಾಗಲಿ ಇವಳು ಎಲ್ಲಿ ಹೋಗುತ್ತಾಳೆಂದು ನೋಡಲು ಬರುತ್ತಿರಲಿಲ್ಲ.
ಕುರುಬರಹಳ್ಳಿಗೂ ರಾಮಸಂದ್ರಕ್ಕೂ ಎರಡು ಮೈಲಿಯ ದೂರ. ನಡುವೆ ಒಂದು ಬೋರೆ ಹತ್ತಿ ಇಳಿಯಬೇಕು. ನಂಜಮ್ಮನಿಗೆ ತಾನೊಬ್ಬಳೇ ಹೋಗುತ್ತಿರುವೆನೆಂಬ ಭಯವಾಗುತ್ತಿಲ್ಲ. ಆದರೆ ಹೆಗಲಿನಲ್ಲಿದ್ದ ಮಗುವನ್ನು ಎತ್ತಿಕೊಂಡು ಬೋರೆಯ ಏರನ್ನು ಹತ್ತುವಾಗ, ಬಸುರಿಯಾದ ಅವಳಿಗೆ ಎದೆ ಹೊತ್ತಿಕೊಂಡುಬಂದಂತೆ ಆಗುತ್ತಿತ್ತು. ನಾಲ್ಕು ವರ್ಷ ತುಂಬಿರದಿದ್ದ ಪಾರ್ವತಿ ಕಾಲು ನೋಯುತ್ತದೆಂದು ಅಳುತ್ತಾ ಅಮ್ಮನ ಬಲಗೈ ಹಿಡಿದು ಬರುತ್ತಿತ್ತು. ನಂಜಮ್ಮನಿಗೂ ಇದ್ದಕ್ಕಿದ್ದ ಹಾಗೆಯೇ ದುಃಖ ಹೊತ್ತಿಕೊಂಡು ಅಳು ಬಂದಿತು. ಮಗುವನ್ನು ಕೆಳಗೆ ಇಳಿಸಿ ನೆಲದಮೇಲೆ ಕುಳಿತು ಒಂದು ಸಲ ಪೂರ್ತಿಯಾಗಿ ಅತ್ತು ಸೆರಗಿನಲ್ಲಿ ಕಣ್ಣು ಒರೆಸಿಕೊಂಡಳು. ಯಾವುದಾದರೂ ಕೆರೆಗೋ ಬಾವಿಗೋ ಮಕ್ಕಳನ್ನೂ ಹಾಕು ತಾನೂ ಮಗುಚಿಕೊಳ್ಳಬೇಕೆಂಬ ಯೋಚನೆ ಒಂದು ಕ್ಷಣ ಚಿಮ್ಮಿತು. ಬಸುರಿಯಾದ ತಾನು ಇಂತಹ ಯೋಚನೆ ಮಾಡಬಾರದು, ಅಳಲೂಬಾರದು ಎಂಬ ನೆನಪಾಗಿ ಮತ್ತೆ ಮೇಲೆ ಎದ್ದಳು. ಈ ಸಲ ಮಗುವನ್ನು ಬಲ ಹೆಗಲಿಗೆ ಹಾಕಿಕೊಂಡು ಪಾರ್ವತಿಯನ್ನು ಎಡಗೈಲಿ ಹಿಡಿದು ಮುಂದೆ ಸಾಗಿದಳು. ಬೋರೆ ಏರಿದಮೇಲೆ ಕುರುಬರಹಳ್ಳಿ ಕಾಣಿಸುತ್ತದೆ. ಊರ ನಡುವೆ ಕಾಣಿಸುವುದೇ ಬಸವಣ್ಣನ ಗುಡಿ. ಗುಡಿಯ ಪಕ್ಕದ್ದೇ ಗುಂಡೇಗೌಡರ ಮನೆಯಂತೆ. ದೇವರೇ, ಗುಂಡೇಗೌಡರಿಗೆ ದಯ ಬರುವ ಮಾಡಪ್ಪ ಎಂದು ಪ್ರಾರ್ಥಿಸುತ್ತಾ ನಂಜಮ್ಮ ಇಳಿವಿನಲ್ಲಿ ನಡೆದಳು.
ಗೌಡರು ಜಗುಲಿಯ ಮೇಲೆ ಕೂತು ಹೊಗೆಸೊಪ್ಪು ಜಗಿಯುತ್ತಿದ್ದರು. ಅವರನ್ನು ನೋಡಿ ನಂಜಮ್ಮನಿಗೆ ಮನೆಯ ಪತ್ತೆ ಸಿಕ್ಕಿತು. ಇವಳನ್ನು ಕಂಡ ಗೌಡರು ಮೇಲೆ ಎದ್ದು – 'ಬಾರವ್ವಾ, ಬಾರವ್ವಾ, ಬಾ. ಲಕುಸ್ಮಿ ಬಂದ ಹಾಂಗ್ ಬಂದುಬುಟ್ಟೆ. ಮಗಾ ಎತ್ತಿಕಂಡೇ ಬಂದ್ಯಾ ಬಿಸಿಲ್ನಾಗೆ' ಎಂದು ಒಳಬಾಗಿಲಿಗೆ ನೋಡಿ – 'ಲೇ, ಏ ಲಡ್ಗ್ಯಾ, ನಮ್ ಶ್ಯಾನುಭೋಗ್ರಮ್ಮ ಬಂದ್ಯೆತೆ ಒಂದ್ ಚಾಪೆ ಆಕ್ರಲೇ' ಎಂದು ಒಳಗೆ ಕರೆದುಕೊಂಡು ಹೋದರು. ಗೋಡೆಗೆ ಆತು ನಂಜಮ್ಮ ಮಕ್ಕಳೊಡನೆ ಕುಳಿತಳು. ಕಂಬಕ್ಕೆ ಒರಗಿ ಗೌಡರು ಕೂತರು. ಇನ್ನೂ ಅಳುತ್ತಿದ್ದ ಪಾರ್ವತಿಯ ಕೈಗೆ ಕೊಬ್ಬರಿ ಬೆಲ್ಲ ಕೊಟ್ಟು ಗೌಡತಿ ಲಕ್ಕಮ್ಮ ಸುಮ್ಮನಾಗಿಸಿದಳು.
'ನಮ್ಮನೇ ಸಮಾಚಾರವೆಲ್ಲಾ ಗೊತ್ತಾಯ್ತೆ ಗೌಡ್ರೆ?'
'ಗೊತ್ತಾಯ್ತು ಕಣವ್ವ. ನಿಮ್ಮತ್ತೆ ಅಂದ್ರೆ ಕಟ್ ಹರಿದ್ ಪಂಜು. ಕಟ್ಟಿರಾಗಂಟ ಪಂಜೂ ಉರೀತೈತೆ, ತಾನೂ ಉಳ್ಕಂತೈತೆ. ಅದೇ ಕಿತ್ತಾಕಿದ್‌ಮ್ಯಾಲೆ ಉಳಿಯಾದೇನು? ನಿನ್ನ ಮಾವ ನನ್ನಂತಾ ಹ್ಯಡ್‌ಮುಂಡೇದು. ಇವ್ಳು ಬಂದೇ ಬಂದ್ಳು ನೋಡು, ಮಾರಾಯ್ತಿ ಮನೇ ಹದೀಗೆ ಗುದ್ಲಿ ಆಕಿದ್ಲು. ಇನ್ನೇನಿದ್ರೂ ನೀನು ಉಳುಸ್ಬೇಕು' – ಎಂದು ಹೆಂಡತಿಯ ಕಡೆಗೆ ತಿರುಗಿ ಹೇಳಿದರು: 'ಶ್ಯಾನುಬಾಕಿ ಲ್ಯಕ್ಕಾ ಯಲ್ಲಾ ಈ ಯಮ್ಮನೇ ಬರೀತೈತೆ ಕಣ್ಳೇ. ಆ ಚಿನ್ನಯ್ಯನ ಕಲಿ ಕಿಸೀತೈತಾ? ಬಸವಣ್ಣ ಅದು. ಉಲ್ಲು ತಿಂತೀಯ ಬಶಣ್ಣಾ ಅನ್ನು. ಊಂ ಅಂತೈತೆ. ನೀರ್ ಕುಡೀತೀಯಾ ಬಶಣ್ಣಾ? ಊಂ ಅಂತ ಕತ್ತಾಕ್ತೈತೆ. ಆರು ಉಳ್‌ಬೇಕು ಹೆಗಲು ಕೊಡ್ತಿಯಾ ಬಶಣ್ಣ ಅನ್ನು. ವಲ್ಲೆ ವಲ್ಲೆ ಅಂತ ಕೋಡು ಆಡಿಸ್ಕಂಡ್ ವಾಟ ಹ್ವಡೀತೈತೆ. ನಿನ್ನ ಗಂಡುನ್ನ ಬೈದೆ ಅಂತ ಶಿಟ್ಟಾಕ್ಬ್ಯಾಡ ಕಣವ್ವ.'
'ಅದ್ಯಾಕ್ ಶಿಟ್ಕತ್ತಾರೆ? ಆ ವಯ್ಯ ಮಾಡಾದೇ ಹಂಗೆ' – ಗೌಡಮ್ಮ ಎಂದಳು.
ಹೀಗೆಯೇ ಯೋಗಕ್ಷೇಮ ಮಾತಾಡುವುದರಲ್ಲಿ ಗೌರಮ್ಮ ಒಳಗೆ ಹೋಗಿ ಮೂರು ಲೋಟಗಳ ಭರ್ತಿ ಬಿಸಿ ಹಾಲಿಗೆ ಬೆಲ್ಲ ಹೆರೆದು ಹಾಕಿ ಮೂರು ಮೂರು ಮಿಳ್ಳೆ ತುಪ್ಪ ಕರಗಿಸಿ ತಂದು ಮುಂದೆ ಇಟ್ಟಳು.
'ನಂಗೆ ಈಗ ಹಾಲು ಬ್ಯಾಡ' – ನಂಜಮ್ಮ ಹೇಳಿದುದಕ್ಕೆ ಗೌಡಮ್ಮ ಎಂದಳು: 'ಬಸ್ರಿ ಎಂಗ್ಸು ಆಲು ಬ್ಯಾಡ ಅನ್ಬಾರ್ದು. ಕುಡೀರಿ.'

‘ಗೌಡ್ರೆ, ನಿಮ್ಮನೆ ಹಾಲು ಬ್ಯಾಡ ಅನ್ನುಲ್ಲ. ಆದರೆ ನನ್ನ ಕೈ ಬಿಡುಲ್ಲ ಅಂತ ನೀವು ಮಾತು ಕೊಡಬೇಕು.’
‘ಅದೇನು ಏಳವ್ವ.’
‘ನೀವು ಬ್ಯಾರೆ ಹೋಗಿ ಅಂತ ನಮ್ಮತ್ತೆ ನೆನ್ನೆ ದಿನ ಹೇಳಿದ್ರು. ನಮಗೆ ಇರುಕ್ಕೆ ಒಂದು ನೆರಳಿಲ್ಲ.’
‘ನ್ಯಳ್ಗೇನಂತೆ, ನಂದೇ ಮನೆ ಇಲ್ವರಾ? ಅದ್ರಲ್ಲಿರೋರಂತೆ. ಆಲು ಕುಡಿ.’
ಗುಂಡೇಗೌಡರನ್ನು ಏನು ಕೇಳಲು ತಾನು ಬಂದಿದ್ದಳೋ ಅದನ್ನು ಕೇಳುವ ಮೊದಲೇ ಅವರೇ ಕೊಟ್ಟಿದ್ದಾರೆ. ಬೇಡು ಕೇಳಿಸಿಕೊಳ್ಳಲಿಲ್ಲ, ಏನೂ ಇಲ್ಲ. ದಾನ ಕೊಡುವುದು ತಮಗೆ ಸ್ವಲ್ಪವೂ ಕಷ್ಟವೇ ಇಲ್ಲವೇನೋ ಎಂಬಂತೆ ಕೊಟ್ಟುಬಿಟ್ಟಿದ್ದಾರೆ. ನಂಜಮ್ಮ ಮಕ್ಕಳಿಗೂ ಕುಡಿಸಿ ತಾನೂ ಹಾಲು ಕುಡಿದಳು. ಗೌಡರು ಹೆಂಡತಿಗೆ ಹೇಳಿದರು: ‘ನಾನ್ ನಿನ್‌ಕುಟ್ಟೆ ಅಂತಿರ್ನಿಲ್ವೇನ್ಲೇ? ಈ ಯಮ್ಮನ ಮಕದ ಕಳೆ ನೋಡು ಹ್ಯಂಗೈತೆ. ಸೀತಮ್ನೋರ ಮಕ ಇದ್ದ ಹಂಗೇ ಇಲ್ವಾ?’
ಅಷ್ಟರಲ್ಲಿ ಮಾದೇವಯ್ಯನವರು ಭಿಕ್ಷೆಗೆ ಬಂದರು. ಅಲ್ಲಿಯೇ ನಂಜಮ್ಮ ಕುಳಿತಿರುವುದನ್ನು ನೋಡಿ ತಾವೂ ಕುಳಿತರು. ಗೌಡಮ್ಮ ಅವರಿಗೆ ಮಣೆ ಹಾಕಿ ಕೊಟ್ಟಳು. ತಮಗೆ ಏನೂ ತಿಳಿಯದವರಂತೆ ನಂಜಮ್ಮ ಬಂದ ವಿಷಯವನ್ನು ವಿಚಾರಿಸಿ, ಗೌಡರು ಇವರಿಗೆ ವಾಸಕ್ಕೆ ಮನೆ ಕೊಡುವುದಾಗಿ ಹೇಳಿದುದನ್ನು ತಿಳಿದಮೇಲೆ ಅಯ್ಯನವರು ಕೇಳಿದರು: ‘ಗೌಡಯ್ಯ, ಇರುಕ್ಕೆ ನೆರಳು ಕೊಟ್ರಿ. ಮನೇ ಒಳಗೆ ಕಾಲು ಚಾಚಿಕೊಂಡ್ ಮನೀಕಾ ಬೇಕಾ? ಉಣ್ಣಾಕ್ ಮುದ್ದೇಗೇನು ದಾರಿ?’
‘ಸ್ಯಾನುಬಾಕಿ ಇಲ್ವಾ? ದುಡ್ಕಂಡ್ ತಿನ್ನಾ ಗಂಡಿಗೆ ಸ್ಯಾನುಬಾಕಿಗಿಂತ ಬೇಕಾ ಆಸ್ತಿ?’
‘ಆ ಗಂಡು ಎಂತದು ಅಂತ ನಿಂಗೆ ಗೊತ್ತಿಲ್ವಾ?’
‘ಅದೊಂದು ಸಿಕಂಡಿ ಸೂಳೆಮಗನ ಗಂಡು, ಬುಡಿ. ಜೋಡೀಲಿ ಒಂದು ಬಡಕಲಾದ್ರೆ ಇನ್ನೊಂದು ಮೋಪಾಗಿದ್ರೆ ಸೈ’–ಎಂದು ನಂಜಮ್ಮನ ಕಡೆಗೆ ತಿರುಗಿ ಗೌಡರು ಹೇಳಿದರು: ‘ನೀನೇಳ್ದಂಗೆ ಕೇಳ್ಕಂಡಿರು ಅಂತ ಬಸಣ್ಣಂಗೆ ಏಳು. ಹ್ವಟ್ಟೆಪಾಡ್ಗೆ ಎಗ್ಗಿಲ್ಲ.’
‘ಹಂಗೆ ಕೇಳ್ಕಂಡಿರಾ ಬೀಜವಾ ಅದು?’–ಗೌಡಮ್ಮ ಕೇಳಿದರು.
‘ಹಣೇಬರಾವು ಕಣ್ರೇ, ಅನುಬೈಸ್ಬೇಕು’–ಗೌಡಮ್ಮ ಎಂದಳು.
ಆಗಲೇ ಮಧ್ಯಾಹ್ನವಾಗಿತ್ತು. ಊಟ ಮಾಡಿಸದೆ ಇವರನ್ನು ಗೌಡರು ಗೌಡಮ್ಮ ಕಳಿಸಲಾರರು. ಗೌಡಮ್ಮ ಒಳಗೆ ಹೋಗಿ ನಾಲ್ಕು ಹಿತ್ತಾಳೆಯ ಪಾತ್ರೆ ಎರಡು ಬಿಂದಿಗೆಗಳನ್ನು ತಂದು ಇಟ್ಟಳು. ತಾವು ಊರಿಗೆ ಹೋಗುವುದಾಗಿ ಹೇಳಿದರೂ ಅಯ್ಯನವರನ್ನೂ ಬಿಡಲಿಲ್ಲ. ಪಾತ್ರೆಗೆ ಹುಳಿ ಹಚ್ಚಿ ಗುಡಿಯ ಮುಂದಿನ ಬಾವಿಯಲ್ಲಿ ನಂಜಮ್ಮ ಮಾದೇವಯ್ಯನವರು ಬೇರೆಬೇರೆಯಾಗಿ ನೀರು ಸೇದಿಕೊಂಡರು. ಗುಡಿಯ ಜಗುಲಿಯ ಮೇಲೆ ಗೌಡರು ಬೇಯಿಸಿಕೊಂಡರು. ಕಾಯಿತುರಿ ಉಪ್ಪು ಮೊಸರಿನಲ್ಲಿ ಎಲ್ಲರದೂ ಊಟವಾಯಿತು. ಮಕ್ಕಳಿಗೆ ಮತ್ತೆ ಹಾಲು ಕುಡಿಸಿಸಿ ತಮ್ಮ ಗಾಡಿ ಹೂಡಿಸಿ ಗೌಡರು ಅದರಲ್ಲಿ ಬಸುರಿ ಮತ್ತು ಮಕ್ಕಳನ್ನು ಕೂರಿಸಿದರು. ತಮ್ಮ ಭಿಕ್ಷದ ಜೋಳಿಗೆಯನ್ನು ಇಟ್ಟುಕೊಂಡು ಮಾದೇವಯ್ಯನವರೂ ಅದೇ ಗಾಡಿಯಲ್ಲಿ ಕುಳಿತರು.

– 4 –

ಶೆಡ್ಡು ಬಿಟ್ಟು ಊರಿಗೆ ಪ್ರವೇಶ ಮಾಡುತ್ತಲೂ ಗಂಗಮ್ಮ ಹೋಗಿ ತನ್ನ ಹಳೇ ಮನೆಯ ಬಾಗಿಲು ತೆಗೆದಳು. ಅವಳಿನ್ನೂ ಮನೆಯ ಒಳಗೆ ಪ್ರವೇಶಿಸಿ ಅಪ್ಪಣ್ಣಯ್ಯನೊಡನೆ ಅದರ ನಡುಮನೆಯ ಧೂಳು ಗುಡಿಸಿರಲಿಲ್ಲ. ಕೈಲಿ ಒಂದು ದಪ್ಪ ಬೀಗ ಹಿಡಿದು ಶಿವೇಗೌಡನ ಮನೆಯ ಆಳು ಮುರುವ ಬಂದು ಹೇಳಿದ: ‘ನಿಮ್ಮ ಸಾಮಾನು ಎತ್ಕಂಡಿ ವಾಗ್ಬೇಕಂತೆ. ಮನೆಗೆ ಬೀಗ ಮೆಟ್ಟಿಕ್ಯಂಡ್ ಬಾ ಅಂತ ಗೌಡ್ರು ಏಳ್ಯವ್ರೆ.’
‘ಯಾವ ಗೌಡ್ನೋ ಸೂಳೇಮಗ ಹಾಗಂದೋನು?’
‘ಸಿವೇಗೌಡ್ರು ಕಣ್ರವ್ವ.’
‘ಅಯ್ಯೋ ಅವ್ನ ಮನೆತನ ಹಾಳಾಗ. ಜಮೀನೆಲ್ಲ ಹೋಯ್ತು. ಮನೇನೂ ಬಿಟ್ಕೊಡುಕೆ ಅವನಪ್ಪನ ಗಂಟು ಅಂತ ತಿಳ್ಕೊಂಡಿದಾನೇನೋ?’–ಎಂದವಳೇ ಗಂಗಮ್ಮ ಅವನ ಮನೆಯ ಮುಂದೆ ಹೋಗಿ ನಿಂತು ಕೂಗಿಕೊಂಡಳು: ‘ಮನೆ ಏನು ನಿಮ್ಮಪ್ಪಂದು ಅಂತ ತಿಳ್ಕಂಡೆ ಏನೋ ಗೌಡ? ಕೋರ್ಟಿನಾಗೆ ಇತ್ಯರ್ಥವಾದ್ದು ಜಮೀನು.’
‘ಬೇಕಾದ್ರೆ ತಿಪಟೂರಿಗೆ ಹ್ವಾಗಿ ಇಚಾರಿಸ್ಕಂಡ್ ಬಾರಮ್ಮ. ನೀನೂ ನಿನ್ನ ಮಕ್ಳೂ ಬರಕೊಟ್ಟಿರಾ ಖರೂದಿ ಪತ್ರದ ಕಾಗಜ ಕಬ್ಬುಣದ ಪೆಟ್ಟಿಗೇಲಿ ಐತೆ. ತಂದು ತೋರುಸ್ಲೇನು?’–ಎನ್ನುತ್ತಾ ಗೌಡ ಹೊರಗೆ ಬಂದ.
‘ಅಯ್ಯೋ ಇವನ ಮನೆತನ ಹಾಳಾಗ’–ಎನ್ನುವುದನ್ನು ಬಿಟ್ಟು ಗಂಗಮ್ಮನಿಗೆ ಮತ್ತೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಸ್ವಲ್ಪ ಹೊತ್ತು ಏನೂ ತಿಳಿಯದೆ ನಿಂತಿದ್ದ ಅವಳು ಕೇಳಿದಳು: ‘ಹಾಗಾದ್ರೆ ನಾವು ಎಲ್ಲಿ ಬಿದ್ದು ಸಾಯಾಣ, ಗ್ರಾಮದ ಪಟೇಲ ನೀನೇ ಹ್ಯೇಳು.’
‘ಮನೆ ಇಲ್ದೋರಿಗೆಲ್ಲ ಮನೆ ಕಟ್ಟುಸ್ಕೊಡ್ತೀನಿ ಅಂತ ನಾನೇನು ಪಟೇಲಿಕೆ ಮಾಡ್ತಿಲ್ಲ. ಸುಮ್ಕೆ ವಾಗಮ್ಮ’–

ಎಂದ ಗೌಡ ಒಳಗೆ ಹೋಗಿ ಧಬ್ ಎಂದು ಬಾಗಿಲು ಹಾಕಿಕೊಂಡ.

'ಇವನ ಮನೆ ಬಿದ್ದುಹೋಗಿ ಉತ್ತು ಹರಳು ಹಾಕ . ಮೋಸದಲ್ಲಿ ಆಸ್ತಿ ಬಂತು ಅಂತ ಮೈರೀತಿದಾನೆ ಮನೆಹಾಳ ಸೂಳೆಮಗ. ನಂಗೆ ಯಾರೂ ಇಲ್ದೇ ಇಲ್ಲ'–ಎಂದವಳೇ ಗಂಗಮ್ಮ ನೇರವಾಗಿ ರೇವಣ್ಣಶೆಟ್ಟಿಯ ಮನೆಗೆ ಹೋಗಿ ನಡೆದ ವಿಷಯ ತಿಳಿಸಿ ಕೇಳಿದಳು: 'ನಿನ್ನ ದನ ಕಟ್ಟೊ ಮನೆ ಇದೆಯಲಾ, ಅಲ್ಲೇ ಒಂದು ತಡಿಕೆ ಕಟ್ಕಂಡು ನಾನೂ ನನ್ನ ಇಬ್ರು ಗಂಡು ಮಕ್ಳೂ ಇರ್ತೀವಿ. ಬಿಟ್ಕೊಡು.'

'ಅಮ್ನೋರೇ, ನಮ್ಮ ಎಮ್ಮೆ ಕರು ಹಾಕಿದ್ರೆ ಅದ ಕಟ್ಟಕೆ ಜಾಗವಿಲ್ಲ. ಇನ್ನು ನೀವೆಲ್ಲಿ ಇರ್ತೀರಾ? ನಿಮ್ಮೋರೇ ಅಯ್ಯಾಶಾಸ್ತ್ರಿಗಳು ಅವ್ರಲ ಕೇಳಿ ನೋಡಿ.'

'ನನ್ನ ಹತ್ರ ತಿನ್ನೂತಂಕಲೇ ನಾನು ಬೇಕಾಗಿತ್ತು ಈ ಸೂಳೇಮಗುಂಗೆ'–ಎಂದು ಬೈದುಕೊಳ್ಳುತ್ತಾ ಅವಳು ಅಯ್ಯಾಶಾಸ್ತ್ರಿಗಳನ್ನು ಹೋಗಿ ಕೇಳಿದಳು. ಅವರ ಕೊಟ್ಟಿಗೆಯಲ್ಲೂ ಅವಳಿಗೆ ಸ್ಥಳವಿರಲಿಲ್ಲ.

'ನನ್ನ ಮನ್ಲಿ ತಿನ್ನೂವಾಗ ಬೇಕಾಗಿತ್ತು. ಈಗ ನಾಕು ಮಳ ಜಾಗವಿಲ್ಲ ಅಂತಿ ಏನೋ ತಿರುಪೆ ಜೋಯ್ಸ?'–ಎಂದು ಅವಳು ಬೀದಿಯಲ್ಲಿ ನಿಂತು ಕೇಳಿದಳು.

ಜೋಯಿಸರಿಗೆ ಸ್ವಲ್ಪ ಕಿರಿಕಿರಿ ಎನ್ನಿಸಿತು. ಅವಳನ್ನು ತಮ್ಮ ದನದ ಸೇರಿಸಲೂ ಇಷ್ಟವಿಲ್ಲ. ಹಾಗೆಂದು ಅವಳ ನಾಲಿಗೆಗೆ ಸಿಕ್ಕಲೂ ಬೇಕಿಲ್ಲ. ಕೊನೆಗೆ ತಮ್ಮ ದೊಡ್ಡಪ್ಪನ ಮೊಮ್ಮಗ ಅಣ್ಣಾಜೋಯಿಸನನ್ನು ಕರೆಸಿ ಮಾತನಾಡಿ ಒಂದು ಉಪಾಯ ಸೂಚಿಸಿದರು. ಊರಿನ ಪೂರ್ವ ದಿಕ್ಕಿನ ಮೂಲೆಯಲ್ಲಿ ಹನುಮಂತರಾಯನ ಗುಡಿ ಇದೆ. ನಾಲ್ಕು ಅಂಕಣದ ಆ ಕಲ್ಲು–ಇಟ್ಟಿಗೆಯ ಕಟ್ಟಡಕ್ಕೆ ಬಾಗಿಲು ಬೀಗಗಳೂ ಇವೆ. ಅಣ್ಣಾಜೋಯಿಸನೇ ಅದರ ಪೂಜಾರಿ. ಈ ತಾಯಿ, ಇಬ್ಬರು ಮಕ್ಕಳು, ಮೂವರು ಅಲ್ಲಿ ಇರಲು ಅಡ್ಡಿಯಿಲ್ಲ. ಆದರೆ ಅದಕ್ಕೆ ಗ್ರಾಮಸ್ಥರ ಒಪ್ಪಿಗೆಬೇಕು. ಗ್ರಾಮಸ್ಥರೆಂದರೆ ಯಾರು? ಮುಖ್ಯ ಮುಖ್ಯವಾದ ಕುಳಗಳು. ಶ್ಯಾನುಭೋಗ, ಪಟೇಲ, ಪಂಚಾಯ್ತಿ ಛೇರ್‌ಮನ್ ಮತ್ತು ಮೆಂಬರುಗಳು. ಉಳಿದವರನ್ನು ಒಪ್ಪಿಸುವುದು ಕಷ್ಟವಿಲ್ಲ. ಆದರೆ ಗ್ರಾಮದ ಪಟೇಲ, ಛೇರ್‌ಮನ್, ಇಬ್ಬರೂ ಆಗಿರುವ ಶಿವೇಗೌಡ ಒಪ್ಪುತ್ತಾನೋ ಇಲ್ಲವೋ! 'ಗಂಗಮ್ಮ, ನೀನೊಂದು ರವಷ್ಟು ಮಾತು ಬಿಗಿಯಾಗಿ ಆಡ್ಬೇಕು. ಅವನುನ್ನ ಬೀದೀಲಿ ನಿಂತ್ಕಂಡು ಬೋಳೀಮಗ ಸೂಳೇಮಗ ಅಂತ ಮಾತಾಡ್ಬ್ಯಾಡ'–ಎಂದು ಅಯ್ಯಾಶಾಸ್ತ್ರಿಗಳು ಹೇಳಿದುದಕ್ಕೆ ಅವಳು, 'ನಾನ್ಯಾವ ಸೂಳೇಮಗುಂಗೆ ಹ್ಯದರ್ಬೇಕು ಬಿಡಿ'ಎಂದಳು.

ಜೋಯಿಸರುಗಳಿಬ್ಬರೂ ಶಿವೇಗೌಡನ ಮನೆಗೆ ರಾಯಭಾರಕ್ಕೆ ಹೋದರು. ಅವನು ಒಪ್ಪುತ್ತಿದ್ದನೋ ಇಲ್ಲವೋ. ಆದರೆ ಅವನ ಹೆಂಡತಿ ಗೌರಮ್ಮನಿಗೆ ಒಂದು ಭಯವಿತ್ತು: ಗಂಗಮ್ಮನ ಬಾಯಿ ಒಳ್ಳೇದಲ್ಲ. ಆ ವಮ್ಮನ ನಾಲಿಗೇಲಿ ಕರೀಮತ್ತಿ ಐತಂತೆ. ವಳ್ಳೇ ಹೊತ್ತಲ್ಲ ಕ್ಯಟ್ ಹೊತ್ತಲ್ಲ, ಬೀದೀಲಿ ನಿಂತ್ಕಂಡಿ ಮಣ್ ತೂರಿ ಬೋಯ್ತದೆ. ಈಟುಕ್ಕೂ ಅನುಮಂತರಾಯನ ಗುಡಿ ಹಾರುವರದ್ದೇ. ಅವರವ್ರೆ ಜಾತಿಯೋರು ಅದ್ಕಳ್ಳಿ–ಎಂಬುದು ಅವಳ ವಿಚಾರ. ಗಂಡನನ್ನು ಒಳಗೆ ಕರೆದುಕೊಂಡುಹೋಗಿ ಕಿವಿಯಲ್ಲಿ ಹೇಳಿದಳು. ಅದೆಲ್ಲವನ್ನೂ ಶಿವೇಗೌಡ ನಂಬಿದನೋ ಬಿಟ್ಟನೋ, ತಾನು ಅದರಿಂದ ಕಳೆದುಕೊಳ್ಳುವುದು ಏನೂ ಇರಲಿಲ್ಲವಾದುದರಿಂದ ಹೊರಗೆ ಬಂದು, 'ಆಯ್ತು. ಬದುಕ್ಕಳ್ಳಿ ಹೋಗಿ' ಎಂದ.

ಇವರು ಹನುಮಂತರಾಯನ ಗುಡಿಗೆ ಬಂದುದರಿಂದ ಅಣ್ಣಾಜೋಯಿಸನಿಗೆ ಒಂದು ಅನುಕೂಲವಾಯಿತು. ಅದು ಪೂಜಾರಿಗೆಂದು ಐದು ಎಕರೆ ಹೊಲ, ಒಂದು ಎಕರೆ ಗದ್ದೆಯನ್ನು ಬಿಟ್ಟಿದ್ದ ಗುಡಿ. ಪೂಜಾರಿಯಾದ ಅಣ್ಣಾಜೋಯಿಸ ಜಮೀನು ಅನುಭವಿಸುತ್ತಿದ್ದ. ಆದರೆ ಪ್ರತಿದಿನ ಗುಡಿಗೆ ಬಂದು ಅಂಕಣ ಪೌಳಿಗಳನ್ನೆಲ್ಲ ಗುಡಿಸಿ ತೊಳೆದು ದೇವರಿಗೆ ನೀರು ಹಾಕಿ ಪೂಜೆ ಮಾಡುವುದು ಅವನಿಗೆ ಆಗುತ್ತಿರಲಿಲ್ಲ. ದಾನ ದಕ್ಷಿಣೆಗಳಿಗಾಗಿ ಹಳ್ಳಿಗೆ ಹೋದ ದಿನವಂತೂ ಹನುಮಂತರಾಯ ನೀರು ಕಾಣುತ್ತಿರಲಿಲ್ಲ. ಎಷ್ಟೋ ದಿನ ಅಂಕಣದಲ್ಲಿ ತುಂಬುತ್ತಿದ್ದ ಹಕ್ಕಿ ಪಕ್ಷಿಗಳ ಹಿಕ್ಕೆ ಬಿದ್ದು ವಾಸನೆ ಬರುತ್ತಿತ್ತು. ಗ್ರಾಮದ ಪಟೇಲ ಕೆಲವು ದಿನ ಜೋಯಿಸನ ಮೇಲೆ ಕಂಪ್ಲೇಂಟು ಬರೆದದ್ದೂ ಉಂಟು. ಗುಡಿಯ ಮುಂಬಾಗಿಲಿನ ಕಿಂಡಿಯಿಂದ ನೋಡಿದರೆ ಒಳಗೆ ದೇವರಿಗೆ ಪೂಜೆ ಆಗಿದೆಯೋ ಇಲ್ಲವೇ ಎಂಬುದು ಸ್ಪಷ್ಟವಾಗಿ ಕಾಣುತ್ತಿತ್ತು. ಜೋಯಿಸರು ದೇವರಿಗೆ ಹೂವು ನೀರು ಕಾಣಿಸದಿದ್ದ ದಿನ ಊರಿನವರು ನೋಡಿ ಪರೀಕ್ಷಿಸಿ ಬೈದುಕೊಳ್ಳುತ್ತಿದರು.

ಈಗ ಅಣ್ಣಾಜೋಯಿಸ ಅಪ್ಪಣ್ಣಯ್ಯನಿಗೆ ಹೇಳಿದ: 'ನಿಂಗೆ ಗುಡೀಲಿರೂಕ್ಕೆ ಜಾಗ ಕೊಟ್ಟಿದೀನಿ ನೋಡು. ನೀವು ದಿನಾ ಅದರ ಪೌಳಿ, ಅಂಕಣ, ಯಲ್ಲಾನೂ ಚನ್ನಾಗಿ ಗುಡಿಸಿ ನೀರು ಹಾಕಿ ತೊಳೀಬೇಕು. ಸ್ವಲ್ಪಾನೂ ಕೊಳೆ ಬಿಡುಕೂಡ್ದು. ಮಡೀಲಿ ದೇವರನ್ನೂ ತೊಳ್ದು ಗಂಟೇ ಹೂವು ತಂದು ಪೂಜೆ ಮಾಡ್‌ಬೇಕು. ನೀನು ಪೂಜೆ ಮಾಡ್ತೀಯಾ ಅಂತ ಯಾರ್ಗೂ ಹೇಳುಕೂಡ್ದು. ಹೇಳಿದ್ರೆ ನಿಮ್ಮುನ್ನ ಗುಡಿಯಿಂದ ಬಿಡುಸ್ಬಿಡ್ತೀವಿ. ನಾನೂ ಒಂದೊಂದು ದಿನ ಬಂದು ಪೂಜೆ ಮಾಡ್ತೀನಿ.'

ಅಪ್ಪಣ್ಣಯ್ಯ ಒಪ್ಪಿಕೊಂಡ. ದೇವರ ಪೂಜೆಗೆ ಗಂಗಮ್ಮನೂ ಬೇಡವೆನ್ನುವವಳಲ್ಲ. ಅವಳ ದೈವಭಕ್ತಿ ಅಗಾಧವೇ. ಚೆನ್ನಿಗರಾಯರಿಗೆ ಹೇಗೂ ಪೂಜೆಯ ಮಂತ್ರ ಬರುತ್ತಿತ್ತು.

ನಂಜಮ್ಮನ ಮದುವೆಯಲ್ಲಿ ತೌರಿನವರು ಕೊಟ್ಟಿದ್ದ ನಾಗರು, ಶೇವಂತಿಗೆ ಹೂವು, ಜೋಡಿ ಬಳೆ, ಮತ್ತು ಬೆಳ್ಳಿಯ ರುಳಿಗಳನ್ನು ಚೆನ್ನಿಗರಾಯರ ಶ್ಯಾನುಭೋಗಿಕೆಯ ಮುಖ್ಯ ವಾದ ಲೆಕ್ಕಗಳನ್ನಿಡುವ ಪೆಟಾರಿಯ ಕೆಳಭಾಗದ ಒಂದು ಮೂಲೆಯಲ್ಲಿ ಇಟ್ಟಿದ್ದರು. ಅವಾದರೂ ತನಗೆ ಬೇಕು. ತಾನೇ ಹೋಗಿ ಕೇಳಿದುದಕ್ಕೆ ಗಂಡ ಸರಿಯಾಗಿ ಉತ್ತರ ಹೇಳಲಿಲ್ಲ. ಮತ್ತೆ ಕೇಳಿದಾಗ ಎಂದರು: 'ನಿಮ್ಮಪ್ಪನ ಮನ್ಲಿ ಕೊಟ್ಟುದ್ದು ಅಂತ ಇರುತ್ತೇನು? ಖರ್ಚಾತು.'

'ಅದ್ಯಾಕ್ ಖರ್ಚಾಗುತ್ತೆ? ಏನ್ ಮಾಡಿದ್ರಿ?'

'ಕೋರ್ಟಿಗ್ ಖರ್ಚಾತು.'

'ಏನು ಮಾಡುದ್ರಿ?'

'ಕಾಶಿಂಬಡ್ಡಿ ತಾವ ಐವತ್ತು ರೂಪಾಯಿಗೆ ಅಡವಿಟ್ಟಿದೆ. ಬೇಕಾದ್ರೆ ದುಡ್ ಕೊಟ್ ಬಿಡುಸ್ಕ.'

'ಎಷ್ಟು ದಿನವಾಯ್ತು ಇಟ್ಟು?'

'ಹೋದ ದೀವಳಿಗೆ ಹಬ್ಬದಾಗೆ.'

ಎಂದರೆ ಏಳು ತಿಂಗಳಾಗಿದೆ. ಬಡ್ಡಿಯೇ ಐವತ್ತು ರೂಪಾಯಿಯ ಮೇಲೆ ಬೆಳೆದಿದೆ. ಈಗ ನೂರು ರೂಪಾಯಿ ಹೊಂದಿಸಿ ಅವನ್ನು ಬಿಡಿಸಿಕೊಳ್ಳುವುದು ಕನಸಿನಲ್ಲೂ ಆಗದ ಮಾತು.

'ನನ್ನ ತೌರುಮನೇಲಿ ಕೊಟ್ಟುದ್ದು ನನ್ನ ಹೇಳ್ದೆ ಕೇಳ್ದೆ ಹ್ಯಾಗೆ ಮುಟ್ಟಿದಿರಿ?'

'ಅಮ್ಮ ತಗಂಡ್ಹೋಗ್ ಇಡು ಅಂದ್ಲು, ಇಟ್ಟೆ.'

ತಾನು ಯಾವ ಕಾರಣಕ್ಕೂ ತಾಳ್ಮೆಗೆಡಬಾರದೆಂಬ ಅವಳ ಸಂಕಲ್ಪ ಇಳಿಯಲಿಲ್ಲ ಮನೆಯ ಪಾತ್ರೆ ಪರಟಿಗಳಲಿ ್ಲ ಅತ್ತೆ ಅವಳಿಗೆ ಸ್ವಲ್ಪವೂ ಕೊಡಲಿಲ್ಲ. ಅವಳ ಮದುವೆಯಲ್ಲಿ ಕೊಟ್ಟಿದ್ದ ತಪ್ಪಲೆ, ಕೊಳದಪ್ಪಲೆ, ಅರಕಿನ ಚಿಟ್ಟಿಗಳನ್ನೂ ಇಲ್ಲವೆಂದಿದ್ದಳು. ಈ ಚಿನ್ನವಾದರೂ ಇದ್ದಿದ್ದರೆ ಕಷ್ಟಕಾಲಕ್ಕೆ ಆಗುತ್ತಿತ್ತು. ಈಗ ಹೊಸದಾಗಿ ಸಂಸಾರ ಹೂಡಲು ಒಂದು ಚೊಂಬು ಸಹಾ ಇಲ್ಲ. ಮನೆಯಲ್ಲಿ ಮಕ್ಕಳಿಗೆ ಕೆಂಡರೊಟ್ಟಿ ಬಡಚಿಕೊಡಲು ಒಂದು ಪಾವು ರಾಗಿ ಹಿಟ್ಟಿಲ್ಲ. ಇನ್ನು ಈ ಸ್ಥಿತಿಯಲ್ಲಿ ತನ್ನ ಹೆರಿಗೆ ಬಾಣಂತನಗಳು ಬೇರೆ ಆಗಬೇಕು. ಬಾಣಂತನಕ್ಕೆ ತೌರಿಗೆ ಹೋಗುವ ಕಲ್ಪನೆಯನ್ನೂ ಅವಳು ಬಿಟ್ಟಿದ್ದಳು. ಅಂತಹ ಹೆಂಗಸು ಅವಳ ಅಣ್ಣನಿಗೆ ಹೆಂಡತಿಯಾಗಿ ಬರಲಿಲ್ಲ.

ಈಗ ಕೋಪ ತುಂಬಿಬಂದು ಅವಳು ಗಂಡನನ್ನು ಕೇಳಿದಳು: 'ಯಾವ ಗಂಡಸರಾದ್ರೂ ಹೆಂಡ್ತಿಗೆ ಸ್ವಂತ ಸಂಪಾದನೆ ಮಾಡಿ ಒಡವೆ ವಸ್ತ್ರ ಮಾಡಿಸಿ ಕೊಡಬೇಕು. ಅಂಥಾದ್ರಲ್ಲಿ ತೌರುಮನೇಲಿ ಇಟ್ಟಿದ್ದನ್ನ ನಂಗೆ ಕಾಣದ ಹಾಗೆ ಅವ್ವ ಮಗ ಸೇರ್ಕಂಡು ಕಳುದ್ರಲಾ, ನಾಚಿಕೆಯಾಗುಲ್ವೆ ಜನ್ಮಕ್ಕೆ?'

ಪತಿದೇವರು ಮಾತನಾಡಲಿಲ್ಲ. ಆಡಿನಂತೆ ಕಣ್ಣುಗುಡ್ಡೆಗಳನ್ನು ಹೊರಳಿಸುತ್ತಾ ನಿಂತಿದ್ದರು. 'ಈಗ ಮಕ್ಳಿಗೆ ಹೊಟ್ಟೆಗೆ ಏನು ಮಾಡ್ತೀರಿ? ಬ್ಯಾಡ ಅಂತ ಗಿಣಿಗೆ ಹೇಳ್ದಹಾಗೆ ಹೇಳಿದ್ರೂ ಕೋರ್ಟಿಗೆ ಹೋಗಿ ಜಮೀನೆಲ್ಲ ನೀಗಿ ನೀರು ಕುಡ್ದು ಕೂತ್ಕಂಡ್ರಲಾ.'

ಅವಳ ಮಾತಿಗೆ ಉತ್ತರ ಹೇಳುವುದಕ್ಕೆ ಚೆನ್ನಿಗರಾಯರಿಗೆ ತಿಳಿಯಲಿಲ್ಲ. ಆದುದರಿಂದ ತುಂಬ ಕೋಪ ಬಂತು. ಏನಾದರೂ ಬೈಯಬೇಕು. ತಕ್ಷಣಕ್ಕೆ ಹೊಸ ಬೈಗುಳಗಳಾವುವೂ ಪ್ರತಿಭೆಯಲ್ಲಿ ಮೂಡಲಿಲ್ಲ. 'ಮುಂಡೆ, ಮುಂಡೆ, ಮುಂಡೆ, ಕತ್ತೆಮುಂಡೆ, ಬೋಳಿಮುಂಡೆ, ಸೂಳೆಮುಂಡೆ'–ಎಂದು ಮೂರು ಸಲ ಸಾದಾ ರೀತಿಯಲ್ಲೂ ಎರಡು ಸಲ ವಿಶೇಷ ರೀತಿಯಲ್ಲೂ ಪ್ರಯೋಗಿಸಿ ಅಲ್ಲಿಂದ ಜಾಗ ಬಿಟ್ಟು ಎದ್ದು ಹೊರಟು ಹೋದರು. ನಂಜಮ್ಮನಿಗೂ ಸಿಟ್ಟು ಬಂದಿತ್ತು. ಹಾಗೆಯೇ ಹತ್ತು ನಿಮಿಷ ಕೂತು ಅತ್ತು ಕಣ್ಣು ಒರೆಸಿಕೊಂಡಳು.

ಅದೇ ದಿನ ಅವಳು ಮಾದೇವಯ್ಯನವರ ಗುಡಿಗೆ ಹೋಗಿ ಐದು ರೂಪಾಯಿ ಸಾಲ ಇಸಿದುಕೊಂಡಳು. ಮರುದಿನ ಬೆಳಿಗ್ಗೆ ಮಕ್ಕಳನ್ನು ಗಂಡನ ಹತ್ತಿರ ಬಿಟ್ಟು, ನೋಡಿಕೊಳ್ಳುವಂತೆ ಹೇಳಿ, ಮಗ್ಗದ ಪುಟ್ಟವ್ವನನ್ನು ಜೊತೆಗೆ ಕರೆದುಕೊಂಡು ಸಣ್ಣೇನಹಳ್ಳಿಗೆ ಹೋದಳು. ರಾಮಸಂದ್ರಕ್ಕೆ ಮೂರು ಮೈಲಿ ದೂರದ ಸಣ್ಣೇನಹಳ್ಳಿ ಬರೀ ಕುಂಬಾರರ ಊರು. ಪುಟ್ಟವ್ವ ಕರೆದುಕೊಂಡು ಹೋದ ಒಂದು ಮನೆಯಲ್ಲಿ ಅಡಿಗೆಗೆ ಬೇಕಾದ ಆರು ಸಣ್ಣ ಪುಟ್ಟ ಮಡಿಕೆಗಳು, ನೀರು ಸೇದಲು ಎರಡು ಗಡಿಗೆ, ನೀರು ಕಾಯಿಸಲು ಒಂದು ಗುಡಾಣ, ರೊಟ್ಟಿ ತಟ್ಟುವ ಸಾವೆ ಮೊದಲಾಗಿ ಸಂಸಾರಕ್ಕೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡಳು. ಪುಟ್ಟವ್ವ ಚೌಕಾಶಿ ಮಾಡಿದುದರಿಂದ ಎಲ್ಲ ಸಾಮಾನೂ ಹನ್ನೆರಡಾಣೆಗೆ ಬಂದವು. ಮುಕ್ಕಾಲು ಭಾಗವನ್ನೂ ಪುಟ್ಟವ್ವ ಹೊತ್ತಳು. ಉಳಿದುವನ್ನು ನಂಜಮ್ಮ ಹಿಡಿದುಕೊಂಡಳು. ಬಿಸಿಲಿನಲ್ಲಿ ಇವರು ಊರು ಮುಟ್ಟುವ ಹೊತ್ತಿಗೆ ಸ್ವಾಮಿ ನೆತ್ತಿಯ ಮೇಲೆ ಬಂದಿದ್ದ. ಸಾಮಾನುಗಳನ್ನು ಊರೊಳಗಿನ ಗುಂಡೇಗೌಡರ ಮನೆಯಲ್ಲಿಟ್ಟು ಈಗ ಮೆಟ್ಟಿಕೊಂಡು ಶೆಡ್ಡಿಗೆ ಹೋದರೆ ಅಷ್ಟರಲ್ಲಿ ಅತ್ತೆ ಮೈದುನರು ತಮ್ಮ ಸಾಮಾನುಗಳನ್ನು ಹನುಮಂತರಾಯನ ಗುಡಿಗೆ ಸಾಗಿಸಿ ಖಾಲಿ ಮಾಡಿದ್ದಾರೆ. ಶೆಡ್ಡಿನ ಮುಂದೆ ರಾಮಣ್ಣ ಅಳುತ್ತಾ ಬಿದ್ದುಕೊಂಡಿದೆ. ಪಾರ್ವತಿಯೂ ಇಲ್ಲ. ಚೆನ್ನಿಗರಾಯರಂತೂ ಇಲ್ಲವೇ ಇಲ್ಲ. ಮಗುವನ್ನು ಕೈಗೆ

ಎತ್ತಿಕೊಂಡು ಹತ್ತಿರವೇ ಇದ್ದ ಕೊಳದಲ್ಲಿ ಅದರ ಕೈ ಮೈಗಳ ಮಣ್ಣನ್ನು ತೊಳೆದಳು. ಅದೃಷ್ಟಕ್ಕೆ ಮಗು ಕೊಳದ ಹತ್ತಿರಕ್ಕೆ ಹೋಗಿರಲಿಲ್ಲ. ಈ ಯೋಚನೆ ಬಂದ ತಕ್ಷಣ ಅವಳಿಗೆ ಪಾರ್ವತಿಯ ನೆನಪಾಯಿತು. ಎಲ್ಲರೂ ಶೆಡ್ಡು ಬಿಟ್ಟು ಊರೊಳಕ್ಕೆ ಸಾಮಾನು ಸಾಗಿಸುತ್ತಿದ್ದಾರೆ. ಇದು ಎಲ್ಲಿ ಹೋಯಿತೋ ಏನು ಕತೆಯೋ! ರಾಮಣ್ಣನನ್ನು ಎತ್ತಿಕೊಂಡು ಅವಳು ಮತ್ತೆ ಊರೊಳಕ್ಕೆ ಬಂದಳು. ಇವರ ಮೊದಲಿನ ಮನೆಯ ಮುಂದಿನ ತಮ್ಮ ಮೂಲದ ಗುಡಿಗೆ ಮಾದೇವಯ್ಯನವರು ಸಾಮಾನು ಸಾಗಿಸುತ್ತಿದ್ದರು. ಚೆನ್ನಿಗರಾಯರು ಗುಡಿಯ ಜಗುಲಿಯ ಮೇಲೆ ಕೂತು ಹೊಗೆಸೊಪ್ಪಿನ ಬಾಯನ್ನು ಮುಲುಕಿಸುತ್ತಿದ್ದರು. ಹತ್ತಿರಬಂದ ನಂಜಮ್ಮ , 'ಪಾರ್ವತಿ ಎಲ್ಲಿ?' ಎಂದು ಕೇಳಿದರೆ ಅವರು ಎದ್ದು ಬೀದಿಗೆ ಬಂದು ಬಾಯ ತಂಬುಲವನ್ನು ಉಗುಳಿ, 'ನಂಗೇನು ಗೊತ್ತು, ಎಲ್ಲ್ಯಾರ ನೋಡು' ಎಂದರು

'ಅಯ್ನೋರೇ, ಮಕ್ಳುನ್ನ ನೋಡ್ಕಾಳುಕ್ಕೆ ಹೇಳಿ ನಾನು ಒಂದಿಷ್ಟು ಮಡಿಕೆ ತರಾಣ ಅಂತ ಸಣ್ಣೇನಹಳ್ಳಿಗೆ ಹೋಗಿದ್ದೆ. ಈಗ ಬಂದ್ರೆ ಪಾರ್ವತಿ ಇಲ್ಲ. ಇವರು ಹೀಗಂತಾರೆ ನೋಡಿ.'

'ಏನ್ರೀ, ಬೆಳಿಗ್ಗೆಯಿಂದ ಇಲ್ಲೇ ಕೂತಿದೀರಲ, ಮಗ ಎಲ್ರಿ?' – ಎಂದು ಅಯ್ಯನವರು ಕೇಳಿದರೆ 'ಎಲ್ಲಿ ಹೋಯ್ತೋ ಅನಿಷ್ಟ ಮುಂಡೇದು. ಒಂದ್ ಕಡೆ ಕುಕ್ಕರು ಬಡಿದಿದ್ರೆ ತಾನೇ ಅದು!' ಎಂದರು.

ಹುಡುಕಲು ನಂಜಮ್ಮ ಒಂದು ಕಡೆಗೆ ಹೋದಳು. ಅಯ್ಯನವರು ಇನ್ನೊಂದು ಕಡೆ ಹೊರಟರು. ಅದು ಬೆಸ್ತರ ಕೇರಿಯಲ್ಲಿ ಇದ್ದುದನ್ನು ತಾವು ಕಂಡಿದ್ದಾಗಿ ಯಾರೋ ಹೇಳಿದರು. ನಂಜಮ್ಮ ಅಲ್ಲಿಗೇ ನುಗ್ಗಿದಳು. ಅದೃಷ್ಟಕ್ಕೆ ಮಗು ಅಲ್ಲಿಯೇ ಒಂದು ಗುಡಿಸಲಿನ ಜಗುಲಿಯ ಕೆಳಗೆ ಅಳುತ್ತಾ ಕೂತಿತ್ತು. ಎಲ್ಲರಿಗೂ ಶೆಡ್ಡುಗಳಿಂದ ಸಾಮಾನು ಸಾಗಿಸುವ ಗಡಿಬಿಡಿ. ಇದು ಯಾವ ಮಗು ಎಂದು ಯಾರೂ ಗಮನಿಸಿರಲಿಲ್ಲ. ಮಗುವನ್ನು ಕೈಹಿಡಿದು ನಡೆಸಿಕೊಂಡು ನಂಜಮ್ಮ ಮನೆಗೆ ಬಂದಳು. ಮನೆಯ ಪರಿಸ್ಥಿತಿಯರಿತ ಮಾದೇವಯ್ಯನವರು, ತಾವೇ ಒಂದು ಮೊರದಲ್ಲಿ ಎರಡು ಸೇರು ರಾಗಿಹಿಟ್ಟು, ಒಂದಿಷ್ಟು ಅವರೇಬೇಳೆ, ಖಾರದಪುಡಿ ಉಪ್ಪು ಹುಣಿಸೇಹಣ್ಣು, ತಾವು ಎಸರಿಗೆ ಹಾಕಿಬಿಟ್ಟಿದ್ದ ಕಾಯಿತುರಿಗಳನ್ನು ಇಟ್ಟು ತಂದುಕೊಟ್ಟರು. ಹೊಟ್ಟೆ ಹಸಿಯುತ್ತದೆಂದು ಮಕ್ಕಳೆರಡೂ ರಚ್ಚೆ ಮಾಡುತ್ತಿದ್ದವು. ಅವಳಿಗೂ ಹಸಿವಾಗಿತ್ತು. ಬಿಸಿಲಿನಲ್ಲಿ ಆರು ಮೈಲಿ ನಡೆದು ಕಳಲಿಕೆ ಬರುತ್ತಿತ್ತು. ಶಕ್ತಿವಂತ ಹೆಂಗಸಾದರೂ ಒಟ್ಟಿಗೆ ಆರು ಮೈಲಿಯನ್ನು ಅವಳು ಈ ಹಿಂದೆ ಎಂದೂ ನಡೆದಿರಲಿಲ್ಲ. ಅಲ್ಲದೆ ಬಸುರಿನಲ್ಲಿದ್ದ ಮಗುವಿನ ತೂಕವನ್ನು ಹೊತ್ತು ಇಷ್ಟು ದೂರ ನಡೆದಿದ್ದಳು.

ಸಂಕಟವಾಗುತ್ತದೆಂದು ಸುಮ್ಮನೆ ಕೂತಿರುವಂತಿಲ್ಲ. ಎದ್ದು ಹೊಸ ಗಡಿಗೆಯಲ್ಲಿ ನೀರು ಸೇದಿ ತಂದಳು. ಮನೆಯ ಒಳಗೆ ಒಲೆ ಇತ್ತು. ಅದಕ್ಕೇ ನೀರು ಚಿಮುಕಿಸಿದಳು. ಅಯ್ಯನವರೇ ಒಂದು ತಬ್ಬು ಕುರುಂಬಾಳೆ, ಹೆಡೆಮೊಟ್ಟೆಗಳನ್ನು ತಂದುಹಾಕಿದರು. ಹೊಸ ಮಡಿಕೆಗಳನ್ನು ತೊಳೆದು ಮಣ್ಣಿನ ವಾಸನೆಯಾಗುತ್ತದೆಂದು ಗೊತ್ತಿದ್ದರೂ ಅದರಲ್ಲಿಯೇ ಒಂದರಲ್ಲಿ ಅವರೇಬೇಳೆಯ ಹುಳಿ, ಮತ್ತೊಂದರಲ್ಲಿ ರಾಗಿಯ ಮುದ್ದೆಗೆ ಇಟ್ಟಳು. ನಾಲ್ಕು ಗಂಟೆಯ ಹೊತ್ತಿಗೆ ಅಡಿಗೆಯಾಯಿತು. ಊಟಕ್ಕೆ ಬಡಿಸಿದರೆ ಪಾರ್ವತಿ ಹಸಿವನ್ನು ತಡೆಯಲಾರದೆ ಅರ್ಧ ಮುದ್ದೆಯನ್ನು ಚೂರುಚೂರು ಮಾಡಿಕೊಂಡು ಹುಳಿಯಲ್ಲಿ ಹೊರಳಿಸಿ ನುಂಗಿತು. ಆದರೆ ಇನ್ನೂ ಎರಡು ವರ್ಷವೂ ಆಗದಿದ್ದ ರಾಮಣ್ಣನಿಗೆ ಅದು ಸೇರದು. ಒಂದು ಸಲ ಹಲ್ಲಿನಲ್ಲಿ ಅಗಿದು ದವಡೆಗೆ ಮೆತ್ತಿಕೊಂಡಾಗ, 'ನಂಗ್ ಬ್ಯಾಡಾ' ಎಂದು ರಚ್ಚೆ ಹಿಡಿಯಿತು. ನಂಜಮ್ಮ ಅಚ್ಚೇರಿನಷ್ಟು ರಾಗಿಯ ಹಿಟ್ಟನ್ನು ಇಟ್ಟಿದ್ದಳು. ಬೇಗ ಎರಡು ಹಿಡಿಯನ್ನು ಒಂದು ಚಿಟಿಕೆ ಉಪ್ಪು ಹಾಕಿ ಕಲಸಿ ಸಾವೆಯ ಮೇಲೆ ಒಂದು ರೊಟ್ಟಿ ಹಾಕಿ ಕೊಟ್ಟಳು. ಅದನ್ನೇ ಹುಳಿಯಲ್ಲಿ ಅದ್ದಿಕೊಂಡು ಅಗಿಯುತ್ತಾ ಮಗು ಸುಮ್ಮನಾಯಿತು. ಇನ್ನು ಅರ್ಧ ರೊಟ್ಟಿ ಉಳಿಯಿತು.

ಅಷ್ಟರಲ್ಲಿ ಪತಿದೇವರು ಮನೆಗೆ ಬಂದರು. ಅಡಿಗೆ ಮನೆಯ ಬಾಗಿಲಿನಲ್ಲಿ ಒಂದು ನಿಮಿಷ ನಿಂತು ಒಳಗೆ ನೋಡಿದರು. ನೇರವಾಗಿ ಹೊರಗೆ ನಡೆದವರು ಯಾರ ಹಿತ್ತಲಿಗೋ ಹೋಗಿ ಒಂದು ದೊಡ್ಡ ಸೀಳು ಬಾಳೆಯ ಎಲೆ ಹರಿದು ತಂದು ಒಲೆಯ ಹತ್ತಿರ ಅವಳ ಮುಂದೆ ಹಾಕಿಕೊಂಡು ಚಕ್ಕಲಮಕ್ಕಲದಲ್ಲಿ ಮಂಡಿಸಿದರು. ಅಡಿಗೆ ಮಾಡುವಾಗ ಗಂಡ ಊಟಕ್ಕೆ ಬರುತ್ತಾರೆ ಅಥವಾ ಬರುವುದಿಲ್ಲ ಎಂಬ ಯಾವ ಪ್ರಜ್ಞೆಯೂ ಅವಳಿಗೆ ಇರಲಿಲ್ಲ. ಧ್ಯಾನವೆಲ್ಲ. ಒಂದೇ ಸಮನೆ ಹೊಡೆದುಕೊಳ್ಳುತ್ತಿದ್ದ ಮಕ್ಕಳ ಹೊಟ್ಟೆಯ ಮೇಲಿತ್ತು. ಈಗ ಮಕ್ಕಳು ಸುಮ್ಮನಾಗುತ್ತಿವೆ. ಗಂಡ ಬಂದು ಕೂತಿದಾನೆ. ತಾನು ಅವ್ವನ ಜೊತೆ ಇರುವುದಾಗಿ ಹೇಳಿದ್ದವನು ಈಗ ಯಾಕೆ ಬಂದರು? ಅವ್ವನ ಮನೆಯಲ್ಲಿ ಇನ್ನೂ ಮುದ್ದೆ ತಿರುವಿಲ್ಲವೋ, ನಿನ್ನ ಹೆಂಡತಿಯ ಕೈಲೇ ಉಣ್ಣು ಹೋಗು ಎಂದು ಅವರು ಮಗನಿಗೆ ಹೇಳಿದರೋ, ಅಥವಾ ಇವರಾಗಿಯೇ ಇಲ್ಲಿಗೆ ಬಂದಿದ್ದಾರೆಯೋ! ಬೆಳಗಿನಿಂದ, ನೀನು ಸತ್ತೆಯಾ ಬದುಕಿದೆಯಾ ಎಂದು ಕೇಳಿರಲಿಲ್ಲ. ಮಕ್ಕಳ ಮೇಲೆ ನಿಗವಿಲ್ಲ. ಅಯ್ಯನವರು ಧರ್ಮಕ್ಕೆಂದು ತಂದುಕೊಟ್ಟ ಹಿಟ್ಟು ಬೇಳೆ ಬೇಯಿಸಲು, ಒಂದು ಗಡಿಗೆ ನೀರು ಸೇದಿಕೊಡುತ್ತೇನೆಂದು ಬರಲಿಲ್ಲ. ಈಗ ಬಾಳೆ ಎಲೆ ಅದೂ ತಮಗೆ ಬೇಕಾದ ಒಂದೇ ಒಂದು ಸೀಳು – ತಂದುಹಾಕಿಕೊಂಡು ಕುಳಿತಿದ್ದಾರೆ. ಇವರಿಗೆ ಊಟಕ್ಕೆ ಬಡಿಸಬೇಕೊ ಬೇಡವೊ ಎಂಬ ಯೋಚನೆ ಅವಳಿಗೆ

ಬರಲಿಲ್ಲ. ಆದರೆ ಅಲ್ಲಿ ಕೂರುವುದಕ್ಕೇ ಬೇಸರವಾಗಿ ಮಕ್ಕಳನ್ನು ಎತ್ತಿಕೊಂಡು ಹೊರಗೆ ಬಂದುಬಿಟ್ಟಳು. ಅಷ್ಟು ಹೊತ್ತಿಗಾಗಲೇ ಮಕ್ಕಳೆರಡೂ ತೂಕಡಿಸುತ್ತಿದ್ದುವು. ಅವನ್ನು ಮಲಗಿಸಲು ಒಂದು ಚಾಪೆ ಇಲ್ಲ. ತನ್ನ ಒಂದು ಹಳೆಯ ಸೀರೆಯನ್ನೇ ಹಾಸಿ ಮಲಗಿಸಿದಳು. ತನಗೂ ಆಯಾಸವಾಗಿತ್ತು. ಬಲಗೈಯನ್ನು ತೋಳಿಗೆ ಕೊಟ್ಟು ರಾಮಣ್ಣನ ಪಕ್ಕದಲ್ಲಿ ಉರುಟಿದಳು. ತಾನೇ ಎದ್ದು ಹೋಗಿ ಗಂಡನಿಗೆ ಬಡಿಸಲೆ ಎಂಬ ಯೋಚನೆ ಒಂದು ಸಲ ಬಂತು. ಅವರೇ ಒಂದು ಸಲ ಕೂಗಲಿ ಎಂಬ ಮತ್ತೊಂದು ಯೋಚನೆ. ಹೀಗಾಗಿ ಮೇಲೆ ಏಳದೆ ಹಾಗೆಯೇ ಮಲಗಿದಳು. ಬೆಳಗಿನಿಂದ ಆಗಿದ್ದ ಆಯಾಸಕ್ಕೂ ಹೊಟ್ಟೆಗಿಲ್ಲದ ಕಳಲಿಕೆಗೂ ಕಣ್ಣು ಹೊತ್ತಿಕೊಂಡು ಬಂತು.

ಎಚ್ಚರವಾಗುವ ಹೊತ್ತಿಗೆ ಆಗಲೇ ಒಂದು ಗಂಟೆಗೂ ಮೀರಿ ನಿದ್ದೆ ಮಾಡಿದ್ದುದಾಗಿ ಎನಿಸಿತು. ಹೊರಗಡೆ ಬಿಸಿಲು ಕಂದುತ್ತಿತ್ತು. ಗಂಡ ಊಟ ಮಾಡಿದರೋ ಅಥವಾ ಸಿಟ್ಟು ಮಾಡಿಕೊಂಡು ಹೋದರೋ ಎಂಬ ಯೋಚನೆಯೂ ಆಯಿತು. ಎದ್ದು ಒಳಗೆ ಹೋಗಿ ನೋಡುತ್ತಾಳೆ: ಅಡಿಗೆಯ ಮಡಕೆಗಳ ಮೇಲೆ ಬಿಸಿಲುಕೋಲು ಬಿದ್ದಿದೆ. ಅದರ ಪಕ್ಕದಲ್ಲಿ ಅವರು ಊಟ ಮಾಡಿ ಬಿಟ್ಟುಹೋಗಿದ್ದ ಬಾಳೆಯ ಎಲೆ ಹಾಗೆಯೇ ಇದೆ. ಅವಳು ಒಟ್ಟು ಐದು ಮುದ್ದೆ ಕಟ್ಟಿದ್ದಳು. ಅರ್ಧವನ್ನು ಪಾರ್ವತಿ ತಿಂದಿತ್ತು. ಇನ್ನು ನಾಲ್ಕುವರೆ ಮಡಿಕೆಯಲ್ಲಿತ್ತು. ಈಗ ಅರ್ಧ ಮುದ್ದೆ ಮಾತ್ರ ಇದೆ. ಮಡಿಕೆಯ ತಳದಲ್ಲಿ ಬರೀ ಒಂದು ಸೊಟಕದಷ್ಟು ಹುಳಿ ಇದೆ. ಇಷ್ಟನ್ನು ಅವರು ಹೆಂಡತಿಗೆಂದು ಉಳಿಸಿದರೋ ಅಥವ ಹೊಟ್ಟೆಯಲ್ಲಿ ಇನ್ನು ಜಾಗವಿರಲಿಲ್ಲವೋ ಎಂಬುದು ಅವಳಿಗೆ ತಿಳಿಯಲಿಲ್ಲ. ಅವಳ ಹೊಟ್ಟೆಯೂ ಬೆಂಕಿ ಹಾಕಿ ಉರಿಸಿದಂತೆ ಹಸಿಯುತ್ತಿತ್ತು. ಇರುವ ಅರ್ಧ ಮುದ್ದೆಯನ್ನು ತಿನ್ನಬೇಕೆಂದು ಕೈ ಹೋಯಿತು. ಆದರೆ ರಾತ್ರಿಯ ಊಟಕ್ಕೆ ಮಕ್ಕಳಿಗೆ ಏನು ಇಕ್ಕುವುದು? ಇನ್ನೂ ಒಂದೂವರೆ ಪಾವಿನಷ್ಟು ರಾಗಿಯ ಹಿಟ್ಟಿದೆ. ಅದರಲ್ಲಿ ರೊಟ್ಟಿ ಮಾಡಿಕೊಡಬಹುದು. ಆದರೆ ಗಂಡ ನುಂಗಿ ಬಿಟ್ಟು ಹೋಗಿರುವ ಅರ್ಧ ಮುದ್ದೆಯನ್ನು ತಿನ್ನಲು ಅಸಹ್ಯವಾಯಿತು. ಸುಮ್ಮನೆ ಎದ್ದು ಹೊರಗೆ ಬಂದು ಕಂಬದ ಹತ್ತಿರ ಕುಳಿತಳು.

ಮಕ್ಕಳು ಇನ್ನೂ ನಿದ್ರಿಸುತ್ತಿದ್ದವು. ಆಗಲೇ ಹೊತ್ತು ಮುಳುಗುವ ಹೊತ್ತಾಯಿತು. ಇಷ್ಟು ಹೊತ್ತಿನಲ್ಲಿ ಮಲಗಿರಬಾರದು. ಅವಳೇ ಅವನ್ನು ಎಬ್ಬಿಸಿದಳು. ಆಗ ನೆನಪಾಯಿತು: ಈ ದಿನ ತಾನಾಗಲೀ ಮಕ್ಕಳಾಗಲೀ ಸ್ನಾನ ಮಾಡಿಲ್ಲ. ಅವಳು ಸಣ್ಣೇನಹಳ್ಳಿಯಿಂದ ಬಂದ ಮೇಲೆ ಮುಖ ತೊಳೆದು ಹಣೆಗೆ ಮತ್ತೆ ಕುಂಕುಮವನ್ನೂ ಇಟ್ಟಿಲ್ಲ. ಕುಂಕುಮದ ಬಟ್ಟಲು ಸಹ ಅತ್ತೆಯ ಮನೆಯಲ್ಲಿಯೇ ಇದೆ. ಅದನ್ನಾದರೂ ಕೊಡುತ್ತಾರೆಯೋ ಇಲ್ಲವೋ. ರಾತ್ರಿ ಹಚ್ಚುವುದಕ್ಕೆ ಒಂದು ಸೀಮೆ ಎಣ್ಣೆಯ ಬುಡ್ಡಿ ಇಲ್ಲ. ಹತ್ತಿರ ಇನ್ನೂ ನಾಲ್ಕೂಕಾಲು ರೂಪಾಯಿ ಇತ್ತು. ಮಕ್ಕಳನ್ನು ಕರೆದುಕೊಂಡು ಬಾಗಿಲಿಗೆ ಬೀಗ ಮೆಟ್ಟಿ, ಅವಳೇ ಮಗ್ಗದ ಕೇರಿಯ ಚೆನ್ನಶೆಟ್ಟಿಯ ಅಂಗಡಿಗೆ ಹೋಗಿ ಎರಡು ದೀಪದ ಬುಡ್ಡಿ, ಒಂದು ಸೀಸೆ, ಅದರ ಭರ್ತಿ ಎಣ್ಣೆ, ಒಂದು ಕಡ್ಡಿಪೆಟ್ಟಿಗೆಯನ್ನೂ ತಂದಳು. ಒಟ್ಟೂ ಮೂರೂವರೆ ಆಣೆಯಾಯಿತು. ಆರು ಕಾಸಿಗೆ ಮಕ್ಕಳಿಗೆ ಬತ್ತಾಸು ಕೊಡಿಸಿದಳು. ಮನೆಗ ಬಂದು ತನ್ನ ಹಳೇ ಸೀರೆಯ ಒಂದು ಕೊನೆಯನ್ನು ಹರಿದು ಹೊರಗೆ ಬಂದು, ಇನ್ನೂ ಮಬ್ಬಾಗಿದ್ದ ಬೆಳಕಿನಲ್ಲಿ ಒಂದು ಬುಡ್ಡಿಗೆ ಬತ್ತಿ ಹಾಕಿ ಎಣ್ಣೆ ತುಂಬಿದಳು. ಅದರ ಬೆಳಕಿನಲ್ಲಿ ಒಳಗೆ ಕೂತು ಇನ್ನೊಂದಕ್ಕೆ ಎಣ್ಣೆ ಬತ್ತಿ ಹಾಕಿ ಇಟ್ಟಳು. ಮತ್ತೆ ಏನು ಮಾಡುವುದಕ್ಕೂ ತೋಚಲಿಲ್ಲ; ಮೈಯಲ್ಲಿ ಶಕ್ತಿಯೂ ಇರಲಿಲ್ಲ. ಆದುದರಿಂದ ಕಂಬವನ್ನೊರಗಿ ಸುಮ್ಮನೆ ಕುಳಿತಳು. ಮಕ್ಕಳೆರಡೂ ಎರಡು ತೊಡೆಗಳ ಮೇಲೂ ಒಂದೊಂದರಂತೆ ತಲೆ ಇಟ್ಟು ಕಾಲು ಚಾಚಿದವು. ಹೊಸ ಜಾಗ, ಅವಕ್ಕೆ ಏನೋ ಒಂದು ತರದ ಅಂಜಿಕೆ.

ಸ್ವಲ್ಪ ಹೊತ್ತಿನ ಮೇಲೆ ಅವನ್ನು ಒಳಗೆ ಕರೆದುಕೊಂಡು ಹೋಗಿ, ಉಳಿದಿದ್ದ ಅರ್ಧ ರೊಟ್ಟಿಯನ್ನು ರಾಮಣ್ಣನಿಗೂ ಅರ್ಧ ಮುದ್ದೆ ಹಿಟ್ಟನ್ನು ಪಾರ್ವತಿಗೂ ಹಾಕಿದಳು. ರಾಮಣ್ಣ ತನಗೆ ಕೊಟ್ಟ ಅರ್ಧ ಭಾಗವನ್ನು ತಿಂದು ಸಾಕು ಎಂದಿತು. ಪಾರ್ವತಿ ಎರಡು ಗುಳಿಗೆ ಹಿಟ್ಟನ್ನು ಉಳಿಸಿ ಸಾಕು ಎಂದಿತು. ಅವಳ ಹೊಟ್ಟೆಯ ಒಳಗಡೆ ಶೂಲೆ ಬಂದಂತೆ ಆಗುತ್ತಿತ್ತು. ಕಾಲುಭಾಗ ರೊಟ್ಟಿ ಮತ್ತು ಪಾರ್ವತಿ ಬಿಟ್ಟ ಮುದ್ದೆಯನ್ನು, ಅದು ಉಳಿಸಿದ್ದ ಹುಳಿಯಲ್ಲಿ ಹೊರಳಿಸಿ ತಿಂದಳು. ಉಳಿದಿದ್ದ ಒಂದೂವರೆ ಪಾವಿನಷ್ಟು ರಾಗಿಯ ಹಿಟ್ಟಿನಲ್ಲಿ ರೊಟ್ಟಿಯನ್ನಾದರೂ ಬಡಚಿ ತಿನ್ನುವ ಮನಸ್ಸಾಯಿತು. ಆದರೆ ಏನೋ ಒಂದು ತರಹ ಬೇಸರ ತಿರಸ್ಕಾರಗಳಿಂದ ಸುಮ್ಮನೆ ಮೇಲೆ ಎದ್ದು ಹುಡುಗರನ್ನು ಕರೆದುಕೊಂಡು ಎಡಗೈಯಲ್ಲಿ ದೀಪದ ಬುಡ್ಡಿ ಹಿಡಿದು ನಡುಮನೆಗೆ ಬಂದಳು. ಅದೇ ಹೊತ್ತಿಗೆ ಗಂಡ ಹಾಸಿಗೆಯ ಸುರುಳಿಯನ್ನು ಹೆಗಲ ಮೇಲೆ ಹೊತ್ತು ಮನೆಗೆ ಬಂದರು. ಹುಡುಗರನ್ನು ಯಾವುದರ ಮೇಲೆ ಮಲಗಿಸಬೇಕೆಂಬ ಯೋಚನೆಯಲ್ಲಿರುವಾಗ ಅವರು ಇಷ್ಟಾದರೂ ಮಾಡಿದರಲ್ಲ ಎಂಬ ಸಮಾಧಾನವಾಯಿತು. ಅವರು ತಂದಿದ್ದ ಸುರುಳಿಯನ್ನು ಬಿಚ್ಚಿ ನೋಡಿದಳು. ಅವಳ ಪ್ರಸ್ತದಲ್ಲಿ ತೌರಿನವರು ಕೊಟ್ಟಿದ್ದ ಎರಡು ಜಾನ, ಎರಡು ಜಮುಖಾನ, ದಿಂಬು ಮತ್ತು ಕರಿಯ ಕಂಬಳಿಗಳಿದ್ದವು. ಒಂದು ಜಾನವಂತೂ ಪಾರ್ವತಿ ರಾಮಣ್ಣರು ಉಚ್ಚೆ ಹುಯ್ದು ಹುಯ್ದು ಕರಗುವ ಸ್ಥಿತಿಗೆ ಬಂದಿತ್ತು. ಕಂಬಳಿ ಅರ್ಧ ಜೀರ್ಣವಾಗಿತ್ತು. ಮಕ್ಕಳಿಬ್ಬರಿಗೂ ಜೊತೆಯಲ್ಲಿ ಒಂದು ಜಾನ ಹಾಕಿ

ಅದರ ಪಕ್ಕದಲ್ಲಿ ತಾನೂ ಒಂದು ಜಮಖಾನ ಹಾಸಿ ದಿಂಬು ಇಟ್ಟುಕೊಂಡಳು. ಗಂಡನಿಗೆ ಬೇರೆ ಅಂಕಣದಲ್ಲಿ ಹಾಸಿ ಕೊಟ್ಟಳು.

ಅದನ್ನು ನೋಡುತ್ತಾ ನಿಂತಿದ್ದ ಅವರು ಸಿಡಾರನೆ ಕೇಳಿದರು; 'ನನ್ನ ಹಾಸಿಗೇನ ನಿಂದ್ರಜೊತೆಗೇ ಯಾಕೇ ಹಾಕ್ಲಿಲ್ಲ?'

ಅವಳು ಮಾತನಾಡಲಿಲ್ಲ. ರಾಮಣ್ಣನನ್ನು ಮಲಗಿಸಿ ಬೆನ್ನು ತಟ್ಟುತ್ತಿದ್ದಳು.

'ನೀನು ಬ್ಯಾರೆ ಹಾಸ್ಲಿ ಅಂತ್ಲೇನೇ ನಾನು ಅಲ್ಲಿಂದ ಕಷ್ಟಪಟ್ಟು ಹಾಸಿಗೆ ಹೊತ್ಕಂಡ್ ಬಂದದ್ದು?'

ಅವಳೂ ಈಗಲೂ ಮಾತನಾಡಲಿಲ್ಲ.

'ಅದ್ಯಾಕೆ ಮುಂಡೆ, ಸುಮ್ನಿದೀಯ?'

ತಾಳ್ಮೆ ಕೆಡಬಾರದೆಂದು ಅವಳು ಮತ್ತೆ ನಿಶ್ಚಯಿಸಿಕೊಂಡು ಹೇಳಿದಳು 'ನಂಗಾಗಲೇ ಆರು ತಿಂಗಳು ತುಂಬ್ತು'

'ಏನಂತೆ ತುಂಬಿದ್ರೆ?' – ಎಂದು ಅವರೇ, ಬೇರೆ ಅಂಕಣದಲ್ಲಿದ್ದ ತಮ್ಮ ಹಾಸಿಗೆಯನ್ನು ಅವಳ ಜಮಖಾನದ ಹತ್ತಿರಕ್ಕೆ ಎಳೆದುಕೊಂಡರು. ಉರಿಯುತ್ತಿದ್ದ ಬುಡ್ಡಿಯನ್ನು ಕೈಲಿ ಹಿಡಿದು ಅಡಿಗೆ ಮನೆಗೆ ಹೋಗಿ ನೋಡಿ ಒಳಗಿನಿಂದಲೇ ಕೂಗಿ ಕೇಳಿದರು; 'ನಂಗೇನೂ ಇಟ್ಟೇ ಇಲ್ವಲ್ಲ ಯಾಕೆ?'

'ಮಧ್ಯಾಹ್ನ ನೀವು ಊಟ ಮಾಡಿ ಏನು ಉಳಿಸಿಹೋಗಿದ್ರಿ ಇಡೂಕೆ?'– ಅವಳು ಹೊರಗಿನಿಂದ ಉತ್ತರ ಕೊಟ್ಟಳು.

ಅವರು ಆ ಮಾತಿಗೆ ಉತ್ತರ ಹೇಳಲಿಲ್ಲ. ಮೊರದಲ್ಲಿ ಇದ್ದ ಒಂದೂವರೆ ಪಾವು ಹಿಟ್ಟಿಗೆ ಉಪ್ಪು ಹಾಕಿ ಕಲಸಿದರು. ತಾವೇ ಒಲೆ ಹೊತ್ತಿಸಿ, ಸಾವೆಯ ಮೇಲೆ ದಪ್ಪನಾಗಿ ಎರಡು ರೊಟ್ಟಿ ಹಾಕಿ ತಮಗೆ ತಿಳಿದಂತೆ ಬೇಯಿಸಿದರು. ಅದನ್ನೇ ಬಿಸಿಬಿಸಿಯಾಗಿ ತಿಂದು, ಮಡಕೆಯಲ್ಲಿಯೇ ಎತ್ತಿ ನೀರು ಕುಡಿದು ದೀಪದ ಬುಡ್ಡಿ ಹಿಡಿದು ನಡುಮನೆಗೆ ಬಂದರು. ಅಷ್ಟು ಹೊತ್ತಿಗೆ ಮಕ್ಕಳಿಬ್ಬರಿಗೂ ನಿದ್ದೆ ಬಂದಿತ್ತು. ಹೆಂಡತಿ ಕಣ್ಣು ಮುಚ್ಚಿಕೊಂಡು ಮಲಗಿದ್ದಳು. ಅವರು ಹೋಗಿ ಪಕ್ಕದಲ್ಲಿದ್ದ ತಮ್ಮ ಮೆತ್ತನೆಯ ಹಾಸಿಗೆಯಲ್ಲಿ ಪವಡಿಸಿದರು. ನಂಜಮ್ಮನಿಗೆ ನಿದ್ದೆ ಬಂದಿರಲಿಲ್ಲ. ಬರುವುದು ಸಾಧ್ಯವಿರಲಿಲ್ಲ. ಬೆಳಗಿನಿಂದ ಏನೂ ಬೀಳದಿದ್ದ ಅವಳ ಹೊಟ್ಟೆಯ ಒಳಗೆ ಉರಿ ಹೊತ್ತಿದಂತೆ ಆಗಿತ್ತು. ಸಂಕಟ ಕಳಲಿಕೆ. ಪಾಪಿ ಹೊಟ್ಟೆಗೆ ಒಂದು ದಿನ ಇಲ್ದೇ ಇದ್ರೆ ಅದೇನು ಗೋಳಾಡ್ತುತ್ತೆ! ಎಂಬ ಪ್ರಶ್ನೆಯನ್ನು ಅವಳೇ ಕೇಳಿಕೊಂಡಳು. ಇಷ್ಟು ಹಸಿವಾಗಿದ್ದರೂ ತನ್ನ ಹೊಟ್ಟೆ ಭಾರವಾಗಿರುವ ನೆನಪಾಯಿತು ಬಸುರಿ ಉಪವಾಸ ಇರಬಾರ್ದು. ನಾವು ಹ್ಯಾಗಾದರೂ ಇರ್ತೀವಿ ಹೊಟ್ಟೇಲಿ ರೂ ಮಗೂಗೆ ಆಹಾರ ಹ್ಯಾಗೆ ಸಿಕ್ಕಬೇಕು? ನಾನಿವತ್ತು ಮಧ್ಯಾಹ್ನ ಅವ್ರು ಉಳಿಸಿದ್ದ ಅರ್ಧ ಮುದ್ದೇನಾದ್ರು ತಿನ್ನ ಬೇಕಾಗಿತ್ತು– ಎಂಬ ಯೋಚನೆ ಬಂತು. ಆದರೆ ರಾತ್ರಿಗೆ ಮಕ್ಕಳಿಗೆ ಏನೂ ಉಳಿಯುತ್ತಿರಲಿಲ್ಲ ಎಂಬ ನೆನಪಾಗಿ, ತಾನೂ ತಿನ್ನದೆ ಇದ್ದುದೇ ಸರಿಯಾಯಿತೆಂದುಕೊಂಡಳು. ಉಳಿದಿದ್ದ ಒಂದೂವರೆ ಪಾವು ಹಿಟ್ಟಿನಲಿ ್ಲ ರೊಟ್ಟಿಯನ್ನಾದರೂ ತಟ್ಟಿ ತಿನ್ನಬೇಕಾಗಿತ್ತು. ಆದರೆ ನಾಳೆ ಬೆಳಗ್ಗೆ ಎದ್ದ ತಕ್ಷಣ ಮಕ್ಕಳು ಅತ್ತಾಗ ಏನು ಮಾಡಿಕೊಡುವುದು ಎಂಬ ಯೋಚನೆಯೂ ಮನಸ್ಸಿನಲ್ಲಿತ್ತು. ಈಗ ಅದೇ ಹಿಟ್ಟನ್ನು ಕಲಸಿ ರೊಟ್ಟಿ ಮಾಡಿಕೊಂಡು, ಇವೇ ಮಕ್ಕಳನ್ನು ಹುಟ್ಟಿಸಿದ ಅಪ್ಪ ತಿಂದು ಬಂದಿದ್ದಾರೆ. ಸಾಯಂಕಾಲ ತಾನೇ ನಾಲ್ಕು ಮುದ್ದೆ ನುಂಗಿದ ಇವರಿಗೆ ಇಷ್ಟು ಬೇಗ ಹ್ಯಾಗೆ ಹಸಿವಾಯಿತು? ಕೆಲವರಿಗೆ ಅಗ್ನಿ ಪುಟ ತುಂಬ ಇರುತ್ತಂತೆ– ಎಂಬ ನೆನಪಾಯಿತು. ಮಧ್ಯಾಹ್ನ ತಾವೇ ಕೂತು ಬಾಳೆ ಎಲೆಯ ಮೇಲೆ ಹಾಕಿಕೊಂಡು ಉಣ್ಣುವಾಗ ಅವರಿಗೆ ಹೆಂಡತಿಯ ಹೊಟ್ಟೆಯ ಯೋಚನೆ ಬರಲಿಲ್ಲ. ಈಗ ರೊಟ್ಟಿ ತಿನ್ನುವಾಗ ಬರಲಿಲ್ಲ. ಈಗ ಬಂದು ಪಕ್ಕದಲ್ಲಿ ಮಲಗಿ ಹತ್ತಿರ ಬಂದಿದ್ದಾರೆ. ಅವಳ ಆರೋಗ್ಯವೇನು, ಎಷ್ಟು ತಿಂಗಳಾಗಿದೆ, ಬೆಳಗಿನಿಂದ ಹೊಟ್ಟೆಗೆ ತಿಂದಳೇ ಇಲ್ಲವೇ, ಮೈಯಲ್ಲಿ ಶಕ್ತಿ ಇದೆಯೇ ಅಥವಾ ಸಂಕಟ ಪಡುತ್ತಿದ್ದಾಳೆಯೇ ಎಂಬ ಯಾವ ಯೋಚನೆಯೂ ಇಲ್ಲ? 'ಎದ್ದು ದೂರ ಬಿದ್ಕಳಿ'– ಎನ್ನಬೇಕೆಂದು ಮನಸ್ಸಿನಲ್ಲಿ ಬಂತು.

ಆದರೆ ತನ್ನ ಅವ್ವನ ಜೊತೆ ಇರುವುದಾಗಿ ಹೇಳಿದ್ದ ಗಂಡ ಮಧ್ಯಾಹ್ನ ತಾನಾಗಿಯೇ ಬಂದು ಮುದ್ದೆ ನುಂಗಿ, ಈಗ ರೊಟ್ಟಿ ತಿಂದು, ತನ್ನ ಹತ್ತಿರ ಮಲಗಿಕೊಳ್ಳಕ್ಕೆ ಅಂತಲೇ ಹಾಸಿಗೆ ಹೊತ್ತುಕೊಂಡು ಬಂದರಂತೆ. ಈಗ ಅವರನ್ನು ಹತ್ತಿರ ಸೇರಿಸದೆ ಇದ್ದರೆ ತನ್ನನ್ನೂ ಮಕ್ಕಳನ್ನೂ ಬಿಟ್ಟು ಹೋಗಿ ಮತ್ತೆ ಅವ್ವನ ಜೊತೆ ಸೇರಿಕೊಳ್ಳಬಹುದು. ಅವರು ಅವ್ವನ ಕುಟ್ಟೆ ಇರಾಕಿಲ್ಲ, ಅದೆಲ್ಲ ಎಲ್ಡು ದಿನ ಅಂತ ಅಯ್ಯನವರು ಹೇಳಿದ ಮಾತಿನ ಅರ್ಥ ಇದೇ ಏನೋ! ನನ್ನ ಸಂಸಾರ ಅಂತ ಉಳೀಬೇಕಾದ್ರೆ ಈ ಕರ್ಮವನ್ನೂ ಅನುಭವಿಸಬೇಕು ಎಂದು ನಿರ್ಧರಿಸಿ ಸುಮ್ಮನಾದಳು. ಸಣ್ಣೇನಹಳ್ಳಿಗೆ ಹೋಗಿ ಬಂದ ಆಯಾಸ, ಮಧ್ಯಾಹ್ನದಿಂದ ಮಾಡಿದ್ದ ಕೆಲಸ, ಬಸುರು ತುಂಬಿದ್ದರೂ ಒಂದು ಮುರುಕು ಹಿಟ್ಟು ಕಾಣದಿದ್ದ ಹೊಟ್ಟೆಯಿಂದ ಅವಳ ಮೈ ಸೋತು ಮಲಗಿತ್ತು. ಚೆನ್ನಿಗರಾಯರಿಗೆ ಆಯಾಸವಾಗುವ ಕಾರಣವೇನೂ ಇರಲಿಲ್ಲ.

ಇವಳಿಗೆ ಇದ್ದಕ್ಕಿದ್ದಹಾಗೆಯೇ ತನ್ನ ತಂದೆಯ ನೆನಪಾಯಿತು. ಅಪ್ಪ ದೈತ್ಯ ಸ್ವಭಾವದವನು. ಯಾವುದೂ ಲೆಕ್ಕವಿಲ್ಲ. ಕೋಪ ಬಂದರೆ ಹೆಂಡತಿಯಾಗಲಿ ಮಕ್ಕಳಾಗಲಿ ತಾಯಿಯಾಗಲಿ, ಸಾಯುವರೇ ಉಳಿಯುವರೇ ಎಂಬುದನ್ನೂ ನೋಡದೆ ಹೊಡೆಯುವ ಯಮರಾಯ ಬುದ್ಧಿ. ಆದರೆ ಅಂತಃಕರಣ ತುಂಬಿಬಂದಾಗ ಅಷ್ಟೇ

ಮರುಗುತ್ತಾರೆ. ಕಲ್ಲೇಶನಿಗೆ ಪ್ಲೇಗು ಆಗಿದ್ದಾಗ ಒಂದು ರಾತ್ರಿ0ಯೆಲ್ಲ ಅವನ ತಲೆ0ಯನ್ನು ತೊಡೆ0ಯ ಮೇಲೆ0ಯೇ ಇಟ್ಟುಕೊಂಡು ಕೂತಿದ್ದರಂತೆ. ದೇವರೇ, ಗಂಡ ಹೆಂಡ್ತಿನ ಹೊಡೆದರೂ ಸರಿ– ಅವಳು ಉಂಡಳೇ ಉಪವಾಸ ಮಾಡಿದಳೇ, ಮಕ್ಕಳ ಹೊಟ್ಟೆಗೆ ಏನಾ0ಯ್ತು ಅಂತ ಕೇಳುವಷ್ಟಾದರೂ ಅಂತಃಕರಣ ಇಲ್ಲದಿದ್ದರೆ ಅದೆಂಥ ಸಂಸಾರ? ಇಂಥಾ ಸಂಸಾರದಲ್ಲಿ 0ಯಾಕ್ ಬದುಕಿರ್ಬೇಕು?–ಎಂದು ಅವಳ ಮನಸ್ಸು ಕೇಳಿಕೊಂಡಿತು. ಅಕ್ಕಮ್ಮನ ನೆನಪು ಬಂತು. ತಾನು ಹುಟ್ಟಿದ ಮೇಲೆ ತಾಯಿ0ಯ ಹಾಲು ಕುಡಿ0ಯಲೇ ಇಲ್ಲವಂತೆ. ಮಗು ಹುಟ್ಟಿತು. ತಾಯಿ ಹಾಗೆ0ಯೇ ಕಣ್ಣು ಮುಚ್ಚಿದಳು. ಆಗಿನಿಂದ ಅಕ್ಕಮ್ಮನೇ ನನ್ನ ಸಾಕಿದ್ದು. ನಾನು ಅಂದರೆ ಕರುಳು ಇಟ್ಟುಕೊಂಡಿರೋದು ಅಕ್ಕಮ್ಮ ಒಬ್ಬಳೇ. ಅವಳಿಗೂ ಎಪ್ಪತ್ತೈದರ ಮೇಲೆ ಆಯಿತು. ಅವ್ಳನ್ನಾದ್ರೂ ಕರೆಸಿಕೋಬೇಕು. ನಮಗೇ ತಿನ್ನೋಕೆ ಇಲ್ಲ. ಅವ್ಳನ್ನ ಕರಸ್ಕಂಡ್ ಏನ್ ಮಾಡೂದು? ಬಾಣಂತನ ಮಾಡೋರು 0ಯಾರು? ಇನ್ನು ನಾಗಲಾಪುರಕ್ಕೆ ಹೋಗೂದಂತೂ ಮುಗಿದೇ ಹೋ0ಯ್ತು. ಇಲ್ಲಿಗೇ ಅಕ್ಕಮ್ಮುನ್ನ ಕರಸ್ಕಂಡ್ರೆ ಬಂದು ಒಂದು ತಿಂಗಳಾದ್ರೂ ನಂಗೂ ಮಗೂಗು ಒಂದಿಷ್ಟು ಎಣ್ಣೆ ನೀರು ಹಾಕ್ತಾಳೆ. ಅವ್ಳು ಬಂದ್ರೂ ಮನೇಲಿ ತಿನ್ನುಕ್ಕೇ ಇಲ್ಲ. ಒಂದು ಹನಿ ಹರಳೆಣ್ಣೆ, ಒಂದಿಷ್ಟು ಸಿಗೇಪುಡಿ0ಯೂ ಇಲ್ಲ. ಈ 0ಯೋಚನೆ0ಯ ಜೊತೆಗೆ, ನಾಳೆ ಬೆಳಿಗ್ಗೆ ಎದ್ದರೆ ಮಡಕೆಗಳು ಖಾಲಿ ಎಂಬ ನೆನಪಾಯಿತು. ಮಕ್ಕಳಿಗೆ ಏನು ಕೊಡೂದು ಎಂಬುದರ ಜೊತೆಗೆ ತನಗೇ ಆಗಿರುವ ಹಸಿವು ಅರಿವಿಗೆ ಬಂತು. ಒಂದೆ ಮಗ್ಗುಲಿಗೆ ಮಲಗಿ ಮಲಗಿ ಬಲಭಾಗ ನೋವು ಬಂದಿತು. ಬೇರೆ ಮಗ್ಗುಲಾಗಲೆಂದು ಎಡಗಡೆಗೆ ತಿರುಗಿದಳು. 0ಯಜಮಾನರು ಪಕ್ಕದಲ್ಲಿ ಅಂಗಾತ ಮಲಗಿ ಗೊರಕೆ ಎಳೆದು ಬಿಡುತ್ತಿದ್ದರು. ಅವಳಿಗೆ ಅಸಹ್ಯವಾಯಿತು. ಎದ್ದು ತನ್ನ ಜಮಖಾನ ಮತ್ತು ದಿಂಬನ್ನು ಎತ್ತಿ ಕತ್ತಲೆ0ಯಲ್ಲಿ0ಯೇ ಮಕ್ಕಳ ಆ ಕಡೆಗೆ ಹಾಕಿಕೊಂಡು, ನಿದ್ದೆ ಮಾಡುತ್ತಿದ್ದ ಪಾರ್ವತಿ0ಯ ಮೇಲೆ ಎಡತೋಳು ಇಟ್ಟು ಮಲಗಿದಳು.

– 6 –

ಬೆಳಿಗ್ಗೆ ಎದ್ದು ಗಡಿಗೆ0ಯಲ್ಲಿ ನೀರು ಸೇದಿ ಮುಖ ತೊಳೆದುಕೊಂಡಳು. ಮಕ್ಕಳ ಮುಖವನ್ನು ತೊಳೆದು ತನ್ನ ಸೀರೆಯಿಂದ ಒರೆಸಿದಳು. ನಿಧಾನವಾಗಿ ಅಡಿಗೆಮನೆಗೆ ಹೋಗಿ ಒಲೆ ಬೂದಿ ತೆಗೆದು ಸಾರಿಸಿ, ನೆನ್ನೆ ಅಡಿಗೆ ಮಾಡಿದ್ದ ಮಡಿಕೆಗಳನ್ನು ತೊಳೆದಳು. ನೆನ್ನೆ ಹಿಟ್ಟು ಮಾಡಿದ್ದ ಮಡಿಕೆಗೆ ನೀರು ಹಾಕಿ ಇಡುವುದು ಮರೆತಿದ್ದರಿಂದ ಒಳಭಾಗವೆಲ್ಲ ಒಣಗಿ ಹಿಡಿದುಕೊಂಡಿತ್ತು. ಅದರ ಭರ್ತಿ ನೀರು ತುಂಬಿ ನಡುಮನೆಗೆ ಬಂದರೂ 0ಯಜಮಾನರು ಬೀದಿ0ಯ ಬಾಗಿಲಿನ ಕಡೆಗೆ ಕಾಲು ಚಾಚಿ ಸುಖವಾಗಿ ಗೊರಕೆ ಎಳೆ0ಯುತ್ತಿದ್ದರು. ಬೀದಿ0ಯ ಬಾಗಿಲು ಅರ್ಧ ತೆಗೆದು ಬರೀ ನೀರು ಹಾಕಿ ಮುಂಭಾಗವನ್ನು ಸಾರಿಸಿದಳು. ಆದರೆ ಇಡಲು ರಂಗೋಲಿ ಇರಲಿಲ್ಲ. ಪಕ್ಕದ ಮನೆ0ಯ ಚನ್ನಶೆಟ್ಟಿ0ಯ ಸೊಸೆ0ಯನ್ನು ಕೇಳಿ ಒಂದು ಕರಟ ರಂಗೋಲಿ ತಂದು ಬಾಗಿಲಿಗೆ ಹಾಕಿ, ಉಳಿದಿದ್ದನ್ನು ಒಳಗಿಟ್ಟು ಸುಮ್ಮನೆ ಕುಳಿತುಕೊಂಡಳು. ಮುಂದೆ ಮಾಡಲು ಕೆಲಸವೂ ಇರಲಿ ಲ್ಲ. ಆ ದಿನ ಹೊಟ್ಟೆ0ಯ ಪಾಡು ಏನೆಂಬುದೂ ತಿಳಿ0ಯಲಿಲ್ಲ.

ಬೀದಿ0ಯಲ್ಲಿ ಒಂದು ಎಮ್ಮೆ ಗಟ್ಟಿ0ಯಾಗಿ ಒರಲಿದ ಸದ್ದಿಗೆ ಎಚ್ಚರವಾದ ಚೆನ್ನಿಗರಾ0ಯರು – ‘ಥುತ್ ಇದರವ್ವನ..... ಎಂದು ಮೇಲೆ ಎದ್ದರು. ಹಾಸಿಗೆ0ಯ ಮೇಲೆ ಕುಳಿತೇ ಕೌಸಲ್ಯಾ ಸುಪ್ರಜಾರಾಮ ನುಡಿದು ಕೈಗಳನ್ನು ಮಸೆದು ಪಂಚ ಕನ್ಯಾಃ ಸ್ಮರೇನ್ನಿತ್ಯಂ ಹೇಳಿಕೊಂಡು ಮೇಲೆ ಎದ್ದು ಕೆರೆ ಏರಿ0ಯ ಕಡೆಗೆ ಹೋದರು. ನಂಜಮ್ಮ ಅವರ ಹಾಸಿಗೆ ಸುತ್ತಿ ಇಡುವ ಹೊತ್ತಿಗೆ ಮಾದೇವ0ಯ್ಯನವರ ಹೆಗಲ ಮೇಲೆ ಒಂದು ಚೀಲ ಹೊತ್ತುಕೊಂಡು ಬಂದು ಚೀಲವನ್ನು ಕಂಬದ ಹತ್ತಿರ ಇಳಿಸಿ ಹೇಳಿದರು: ‘ನಾನು ಹಳ್ಳೀಕಡೆ ಭಿಕ್ಷಕ್ಕೆ ಓಯ್ತೀನಿ, ಇದ್ರಾಗೆ ಇಪ್ಪತ್ತು ಸೇರು ರಾಗಿ ನಾಕು ಸೇರು ಅವರೇಕಾಳು ಇವೆ. ನೀವು ಮಾಡ್ಕಳಿ.’

ಈ ದಿನದ ಕಥೆ ಏನು ಎಂದು 0ಯೋಚಿಸುತ್ತಿದ್ದಾಗ ಮನೆಗೆ ದಿನಸಿ ಬಂದದ್ದರಿಂದ ಒಂದು ವಿಧದಲ್ಲಿ ಸಂತೋಷವಾದರೂ ಅವಳು ಹೇಳಿದಳು: ‘ಅ0ಯ್ನೋರೇ, ನೆನ್ನೆ ದಿನವೂ ಕೊಟ್ರಿ. ಇವತ್ತು ಇದ ತಂದಿದೀರಿ. ನೀವೇ ಊರೂರು ತಿರುಗಿ ಭಿಕ್ಷೆಮಾಡೋರು. ಇದುನ್ನ ಮತ್ತೆ ಹ್ಯಾಗೆ ಕೊಡ್ಲಿ ನಾನು?’‘ಅವ್ವಾ’ ನಾನು ಕರ್ಚು ಮಾಡಾದು ಹ್ಯಂಗೆ ಅಂತ ನಿಮಗೇ ಗೊತ್ತಲ್ಲಾ? ನನ್ನ ಹಂಗೇ ಊರಿಗೆ ಸಾಧು ಸನ್ಯಾಸಿಗಳು ಬಂದ್ರೆ 0ಯೆಡೆಮಾಡಿ ಇಕ್ತೀನಿ. ಇದರಿಂದ ನೀವು ಒಂದ್ 0ಯೆಂಟು ದಿನ ಉಂಡ್ರೆ ಏನಾ0ಯ್ತುದೆ? ಮಾಡ್ಕಂಡ್ ಉಣ್ಣಿ. ಶಿವ ಅಟ್ರೊತ್ತಿಗೆ ಏನಾರಾ ದಿಕ್ ತೋರುಸ್ತಾನೆ’ – ಎಂದು ಎಂದು ಹೇಳಿ ಅವರು ಹೊರಟುಹೋದರು.

ಅ0ಯ್ಯನವರು ನೆನ್ನೆ ತಂದು ಕೊಟ್ಟಿದ್ದ ಮೊರ ಮನೆ0ಯಲ್ಲೇ ಇತ್ತು. ಅವಳು ಅದರಲ್ಲಿ ಎರಡು ಸೇರು ರಾಗಿ ಮಾಡಿ ಬೀಸಲು ಕೂತಳು. ಆ ಮನೆ0ಯಲ್ಲಿ0ಯೇ ಹದಿದ ಬೀಸುವ ಕಲ್ಲು, ಒರಳು ಕಲ್ಲು, ಗುಂಡುಗಳೆಲ್ಲ ಇದ್ದುವು. ಆದರೆ ಒಂದು ಪಾವು ಬೀಸುವುದರಲ್ಲಿ0ಯೇ ಸುಸ್ತಾಗಿ ಹೋಯಿತು. ನೆನ್ನೆ ತಾನು ಏನೂ ತಿಂದಿ ಲ್ಲವೆಂಬ ನೆನಪಾಗಿ ಐದು ನಿಮಿಷ ಸುಧಾರಿಸಿಕೊಳ್ಳುತ್ತ ಕುಳಿತಳು. ಅಷ್ಟರಲ್ಲಿ ಗಂಡ ಮನೆಗೆ ಬಂದರು. ರಾಗಿ ಎಲ್ಲಿಂದ ಬಂತು, ಏನು ಮಾಡಿದೆ ಎಂದು ಅವರು ಏನೂ ಕೇಳಲಿಲ್ಲ. ಸುಮ್ಮನೆ ಕಂಬವನ್ನೊರಗಿ ಕೂತು ಜೇಬಿನಲ್ಲಿದ್ದ ತಾಂಬೂಲ ಮಡಿಸಿ ಹೊಗೆಸೊಪ್ಪು ತಿಕ್ಕಲು ಪ್ರಾರಂಭಿಸಿದರು.

‘ನನ್ನ ಕೈಲಾಗುಲ್ಲ. ಇದುನ್ನೊಂದಿಷ್ಟು ಬೀಸಿ0ಯಾದ್ರೂ ಕೊಡ್ತೀರಾ?’– ನಂಜಮ್ಮ ಕೇಳಿದಳು.

ಅವರು ಮಾತನಾಡಲಿಲ್ಲ. ಅವಳು ಮತ್ತೆ ಕೇಳಿದಾಗ – 'ಗಂಡುಸ್ರು ಬೀಸೂ ಕಲ್ಲು ತಿರುಗುಸ್ತಾರೇನೆ? ನನ್ನೇನು ಹೆಂಗ್ಸು ಅಂತ ತಿಳ್ಕಂಡಿದಿಯೋ ಗಂಡ್ಸು ಅಂತ ತಿಳ್ಕಂಡಿದಿಯೋ?' ಎಂದು ಗರ್ಜಿಸಿದರು. ತಾಳ್ಮೆಗೆಡಕೂಡದೆಂದು ತನ್ನ ಸಂಕಲ್ಪ ನೆನೆಪಾಗಿ ನಂಜಮ್ಮ ಪುನಃ ಮಾತನಾಡಲಿಲ್ಲ. ಮಗ್ಗದ ಕೇರಿಗೆ ಹೋಗಿ ಪುಟ್ಟವ್ವನನ್ನು ಕರೆದುಕೊಂಡು ಬಂದಳು. ಎರಡು ಬಿಲ್ಲೆಗೆ ಒಂದು ಮರ ರಾಗಿ ಬೀಸಿಕೊಡುವುದಾಗಿ ಪುಟ್ಟವ್ವ ಬೀಸುವ ಕಲ್ಲಿನ ಮುಂದೆ ಕುಳಿತಳು. ನಂಜಮ್ಮ ಚೆನ್ನಶೆಟ್ಟಿಯ ಅಂಗಡಿಗೆ ಹೋಗಿ ಮೆಣಸಿನ ಕಾಯಿ, ಕೊತ್ತಂಬರಿ ಬೀಜ, ಉಪ್ಪು, ಎಣ್ಣೆ ಮೊದಲಾಗಿ ಒಟ್ಟು ಒಂದು ರೂಪಾಯಿಯ ಸಾಮಾನುಗಳನ್ನು ತಂದು ಅಡಿಗೆ ಪ್ರಾರಂಭಿಸಿದಳು. ಹನ್ನೊಂದು ಗಂಟೆಯ ಹೊತ್ತಿಗೆ ಅವರೇಕಾಳಿನ ಹುಳಿ, ಹಿಟ್ಟು, ರಾಮಣ್ಣನಿಗೆ ರೊಟ್ಟಿ ಸಿದ್ಧವಾದುವು. ನೆನ್ನೆ ಸಹ ಅವಳು ಸ್ನಾನ ಮಾಡಿರಲಿಲ್ಲ. ಬಾವಿಯಲ್ಲಿ ನೀರು ಸೇದಿ ಹುಡುಗರಿಗೂ ಮೈ ತೊಳೆದು ತಾನೂ ಮಡಿ ಉಟ್ಟು ಬೇರೆ ಸೀರೆಯುಟ್ಟು ಒಳಗೆ ಬಂದಳು. ನೆನ್ನೆಯಂತೆ ಯಜಮಾನರು ಬಾಳೆ ಎಲೆ ಹಾಕಿಕೊಂಡು ಹಿಟ್ಟಿನ ಮುದ್ದೆ ನುಂಗುತ್ತಿದ್ದಾರೆ. ತನಗೂ ಮಕ್ಕಳಿಗೂ ಉಳಿಸಿ ಎಂದು ಅವಳು ಹೇಳಲಿಲ್ಲ. ಆದರೆ ಅವರೇ ಮೂರು ಮುದ್ದೆಗಳನ್ನು ಉಳಿಸಿ ಮೇಲೆ ಎದ್ದರು. ಅವಳು ಒಟ್ಟು ತಿರುವಿದ್ದುದು ಏಳು ಮುದ್ದೆ ಅವಳು ಹುಳಿ ಹಾಕಿಕೊಂಡು ಪಾರ್ವತಿಯೊಡನೆ ಊಟಕ್ಕೆ ಕುಳಿತಳು. ತಾನು ಒಟ್ಟು ಒಂದೂವರೆ ಮುದ್ದೆ ನುಂಗಿದಳು. ಪಾರ್ವತಿಗೆ ಅರ್ಧಕ್ಕೆ ಸಾಕಾಯಿತು. ರೊಟ್ಟಿ ಕಡಿದ ರಾಮಣ್ಣ ನಡುವೆ ನಾಲ್ಕು ಸಲ ನೀರು ಕುಡಿದು 'ಅನ್ನ' ಎಂದು ಅಳಲು ಪ್ರಾರಂಭಿಸಿತು. 'ಅಂಗ್ಡೀಲಿ ಒಂದೂವರಾಣೆ ಕೊಟ್ಟು ಒಂದು ಸೇರು ಅಕ್ಕಿನಾದ್ರೂ ತರ್‌ಬೇಕಾಗಿತ್ತು' – ಎಂದು ಯೋಚಿಸುತ್ತಾ ಅವಳು ಊಟ ಮುಗಿಸಿದಳು. ಹೊಟ್ಟೆಗೆ ಮುದ್ದೆ ಬಿದ್ದ ತಕ್ಷಣ ಕಳಲಿಕೆ ಬಂದಂತಾಗಿ ಹೊರಗೆ ಬಂದು ಜಮಖಾನ ಹಾಕಿಕೊಂಡು ಮಲಗಿದಳು.

ರಾತ್ರಿಗೆ ಅಡಿಗೆ ಮಾಡಲು ಸೌದೆ ಇಲ್ಲ. ನೆನ್ನೆ ಅಯ್ಯನವರು ತಂದು ಕೊಟ್ಟಿದ್ದುದು ಮುಗಿದು ಹೋಗಿದೆ. ಗಂಡ ಮಲಗಿದ್ದರು. 'ಎಲ್ಲಾದ್ರೂ ಹೋಗಿ ಒಂದಿಷ್ಟು ಸೌದೆ ತಂದಿದ್ರೆ ಆಗ್ತಿತ್ತು ' –ಎಂದಳು.

'ನಾನ್ಯಾವನ್ ಕೇಳುಕ್ ಹೋಗ್ಲಿ ಹೋಗು.'

'ಹಾಗಂದ್ರೆ ಏನು ಮಾಡಾದು? ತ್ವಾಟದ ಕಡೆ ಹೋಗಿ ಯಾರನ್ನಾದ್ರೂಕೇಳಿ ಒಂದಿಷ್ಟು ಕುರುಂಬಾಳೆ ಹೆಡೆಮೊಟ್ಟೆ ಕಟ್ಕಂಡ್ ಬನ್ನಿ.'

'ತೆವಲಿದ್ರೆ ನೀನೇ ಹೋಗಿ ಹೊತ್ಕೊಂಡ್ ಬಾ. ನನ್ನ ಕೈಲಾಗುಲ್ಲ'–ಎಂದು ಹೇಳಿ, ತಾವು ನುಂಗಿದುದನ್ನು ಅರಗಿಸಲು ನಿದ್ರೆಯನ್ನು ಆಹ್ವಾನಿಸುತ್ತಾ ಅವರು ಇನ್ನೊಂದು ಮಗ್ಗುಲಾಗಿ ಮಲಗಿದರು.

ಸೌದೆ ಕೇಳಲು ಅವಳು ಯಾರ ತೋಟಕ್ಕೂ ಹೋಗಲಿಲ್ಲ. ಪಕ್ಕದ ಮನೆಯ ಚಿಣ್ಣಯ್ಯನ ಹೆಂಡತಿಯನ್ನು ಕೇಳಿದುದಕ್ಕೆ ಒಂದು ದೊಡ್ಡ ಮಂಕರಿ ಕೊಬ್ಬರಿ ಮೊಟ್ಟ ಹದಿನೈದು ಹೆಡೆದಿಬ್ಬ, ನಾಲ್ಕು ತುಂಡು ಸೋಗೆಗಳನ್ನು ಕೊಟ್ಟಳು. ನಂಜಮ್ಮ ಚನ್ನಶೆಟ್ಟಿಯ ಅಂಗಡಿಗೆ ಹೋಗಿ ಕೇಳಿದಳು: 'ಅಕ್ಕಿ ಹ್ಯಾಗೆ ಚನ್ನಶೆಟ್ಟಿ?'

'ಸಣ್ಣಕ್ಕಿ ಒಂಬತ್ತು ಸೇರು, ದಪ್ಪದ್ದು ಹನ್ನೆಲ್ಡು ಸೇರು.'

ಒಂದು ಪಾವಲಿ ಕೊಟ್ಟು ಮೂರು ಸೇರು ದಪ್ಪಕ್ಕಿ ತೆಗೆದುಕೊಂಡು ಬಂದು ರಾತ್ರಿಗೆ ಅಚ್ಚೇರು ಹಾಕಿ ಅನ್ನ ಮಾಡಿದಳು. ಪಾರ್ವತಿ, ರಾಮಣ್ಣ, ಇಬ್ಬರೂ ಸಂತೋಷವಾಗಿ ಊಟ ಮಾಡಿದರು. ಚಿಣ್ಣಯ್ಯನ ಹೆಂಡತಿ ರಂಗಮ್ಮ ಅರ್ಧ ಚರುಕುಲು ಮಜ್ಜಿಗೆಯನ್ನೂ ಕೊಟ್ಟಿದ್ದಳು. ಹುಡುಗರ ಊಟವಾದಮೇಲೆ ಉಳಿದ ಅನ್ನ ಮಜ್ಜಿಗೆಗೆ ಚೆನ್ನಿಗರಾಯರು ಬಂದರು. ಅದೃಷ್ಟಕ್ಕೆ ಅವರು ಮಕ್ಕಳ ಊಟಕ್ಕೆ ಮೊದಲೇ ಮನೆಗೆ ಬರಲಿಲ್ಲ. ಮಾದೇವಯ್ಯನವರು ಕೊಟ್ಟಿರುವ ದಿನಸಿ ಎಂಟು ಒಂಬತ್ತು ದಿನಕ್ಕಾಗಬಹುದು. ಆಮೇಲೆ ಏನು ಮಾಡುವುದು ಎಂಬ ಯೋಚನೆ ಅವಳನ್ನು ಬಾಧಿಸುತ್ತಲೇ ಇತ್ತು. ಅದಕ್ಕೆ ಇನ್ನೂ ಉಪಾಯ ಹೊಳೆದಿರಲಿಲ್ಲ. ನಾಳೆ ರಾಮಸಂದ್ರದ ಸಂತೆ ನಡೆಯುತ್ತದೆ. ಹೋಗಿ ಒಂದೆರಡು ಊಟದ ಪಾತ್ರೆ ಕುಡಿಯುವ ಬಟ್ಟಲುಗಳನ್ನಾದರೂ ತರಬೇಕು ಎಂದು ನಿಶ್ಚಯಿಸಿದಳು. ಮರುದಿನ ಬೆಳಗಿನ ಊಟವಾದಮೇಲೆ ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ಮಕ್ಕಳನ್ನೂ ಕರೆದುಕೊಂಡು ಸಂತೆಗೆ ಹೋದಳು. ಊರಿಗೆ ಮುಕ್ಕಾಲು ಮೈಲಿ ದೂರದ ತೋಪಿನಲ್ಲಿ ಸೇರುವ ಅದಕ್ಕೆ ತಿಪಟೂರಿನ ಸಾಬರು ಅಲ್ಯುಮಿನಿಯಂ ಪಾತ್ರೆಗಳನ್ನು ತಂದಿರುತ್ತಾರೆಂಬುದು ಅವಳಿಗೆ ಗೊತ್ತಿತ್ತು. ತನಗೆ ತಿಳಿದಂತೆ ಚೌಕಾಶಿ ಮಾಡಿ ನಾಲ್ಕು ಊಟದ ತಟ್ಟೆ, ನಾಲ್ಕು ಕುಡಿಯುವ ಲೋಟ, ಒಂದು ಸೌಟು ಮತ್ತು ಒಂದು ಸ್ನಾನ ಮಾಡುವ ಚೊಂಬುಗಳನ್ನು ಕೊಂಡಳು, ಒಟ್ಟು ಒಂದೂ ಮುಕ್ಕಾಲು ರೂಪಾಯಿಯಾಯಿತು. ಅಳುತ್ತಿದ್ದ ಮಕ್ಕಳಿಗೆ ಮೂರು ಮೂರು ಕಾಸಿನ ಸಕ್ಕರೆ ಕಡ್ಡಿ, ಒಂದೊಂದು ಗಿಲಿಕೆಗಳನ್ನು ಕೊಡಿಸಿಕೊಂಡು ಮನೆಗೆ ತಿರುಗುವಾಗ ಪಟೇಲ ಗುಂಡೇಗೌಡರು ಸಿಕ್ಕಿದರು. ಅವರೇ ಕೇಳಿದರು: 'ಮನ್ಲಿ ಯಲ್ಲಾ ಚಂದಾಗೈತೇನವ್ವ?'

'ಚನ್ನಾಗಿದೆ ಗೌಡರೇ, ಬನ್ನಿ ಮನೆಗೆ ಹೋಗಿಬರಾಣ.'

ಅಲ್ಯುಮಿನಿಯಂ ಪಾತ್ರೆಗಳನ್ನು ಗೌಡರೇ ಹಿಡಿದುಕೊಂಡರು. ರಾಮಣ್ಣನನ್ನು ಹೆಗಲಿಗೆ ಹಾಕಿಕೊಂಡ ಅವಳು ಹಿಂದೆ ಹಿಂದೆ ನಡೆದಳು. ಮನೆಗೆ ಬಂದು ಬೀಗ ತೆಗೆದ ಮೇಲೆ ಒಳಗೆಲ್ಲ ಒಂದು ಸಲ ನೋಡಿದ ಗೌಡರು

ಕೇಳಿದರು: 'ಮೇವಿಗೆ ಏನು ಗ್ರಾಸ?'
'ಅದ ನಿಮ್ಮನ್ನೇ ಕೇಳಾಣ ಅಂತಿದ್ದೆ.'
'ಅವತ್ತೇ ಕೇಳಿದ್ರೆ ಒಂದಿಪ್ಪತ್ತೈದು ಸೇರು ರಾಗಿ ಕೊಡುಸ್ತಿದ್ನಲಾ?'
'ಅದರಿಂದ ಎಷ್ಟು ದಿನ ಕಳೆಯುತ್ತೆ?'–ತಕ್ಷಣ ಅವಳಿಗೆ ಒಂದು ಉಪಾಯ ಹೊಳೆದು ಹೇಳಿದಳು: 'ನೀವು ಹಾಗೇ ಕೊಡೂದೇನು ಬ್ಯಾಡಿ. ನಾನೊಂದು ಮಾತು ಹೇಳ್ತೀನಿ. ಹಾಗೆ ಮಾಡಿದ್ರೆ ನಿಮಗೂ ತೊಂದರೆಯಾಗುಲ್ಲ, ನಮಗೂ ಉಪಕಾರವಾಗುತ್ತೆ.'
'ಏನ್ಹೇಳವ್ವ.'
'ನಿಮ್ಮ ಒಟ್ಟು ಕಂದಾಯ ಎಷ್ಟು, ಎಂಬತ್ತು ರೂಪಾಯಿ ಅಲ್ಲವೆ?'
'ಯಾಕೆ?'
'ಒಂದು ಕೆಲ್ಸ ಮಾಡಿ. ನಿಮ್ಮ ಕಂದಾಯದ ಬಾಬ್ತು ಈ ವರ್ಷದ್ದು ಐವತ್ತು ರೂಪಾಯಿ ಸಂದಾಯವಾಗಿದೆ ಅಂತ ಇವರ ಕೈಲಿ ರಶೀತಿ ಬರುಸ್ಕಳಿ. ಆ ಐವತ್ತು ರೂಪಾಯಿಗೆ ನಮಗೆ ರಾಗಿ, ಅವರೇಕಾಳು, ಮೆಣಸಿನಕಾಯಿ, ಮನೇಲಿದ್ರೆ ಒಂದಿಷ್ಟು ಬತ್ತ ಕೊಡಿ. ನಮ್ಮ ಜೀವನ ಆಗುತ್ತೆ.'
'ಈಗ ರಶೀತಿ ಬರಿಸ್ಕ್ಯಂಡ್ರೆ ಆಮ್ಯಾಲೆ ಹ್ಯಂಗೆ ಕಟ್ತೀರಾ ಸರ್ಕಾರಿ ಹಣಾನಾ?'
'ನಮ್ಮ ಪೋಟಿಗೆ ನೂರಾ ಇಪ್ಪತ್ತು ರೂಪಾಯಿ ಇರುತ್ತಲ್ಲ. ಅದರಲ್ಲಿ ಸರ್ಕಾರ್‍ದೋರು ಕಟಾ ಇಸ್ಕತ್ತಾರೆ.'
ಗೌಡರಿಗೆ ಈ ಉಪಾಯ ವೈನವೆನಿಸಿತು. 'ನಿಂಗೆ ದಿವಾನಿಕೆ ಮಾಡೂವೋಟು ಬುದ್ಧಿಯೈತೆ'–ಎಂದು ಹೇಳಿ ತಮ್ಮ ಒಪ್ಪಿಗೆ ಸೂಚಿಸಿದರು. ಗಂಡ ಮಾದೇವಯ್ಯನವರು ಗುಡಿಯಲ್ಲಿ ಕೂತು ಹೊಗೆಸೊಪ್ಪು ಅಗಿಯುತ್ತಿರುತ್ತಾರೆಂಬುದು ಅವಳಿಗೆ ಗೊತ್ತು. ಗುಂಡೇಗೌಡರು ಬಂದಿರುವುದಾಗಿ ಹೇಳಿ ಕರಕೊಂಡು ಬರುವಂತೆ ಪಾರ್ವತಿಯನ್ನು ಕಳಿಸಿದಳು. ಮನೆಗೆ ಬಂದ ಶ್ಯಾನುಭೋಗರು ಪಟೇಲ ಗುಂಡೇಗೌಡರಿಂದ ಇಸಕೊಂಡು ಇನ್ನೊಂದು ಸಲ ಎಲೆ ಅಡಿಕೆ ಹೊಗೆಸೊಪ್ಪುಗಳನ್ನು ಅಗಿದಮೇಲೆ ಗೌಡರು ಕೇಳಿದರು: 'ಎಲ್ಲಿ ನಿನ್ನ ಕಾತೆ ಕಿರ್ದಿ ವಸೀ ತೆಗಿ.'
'ಅದಿಲ್ಲೆಲ್ಲಿದೆ?'
'ಎಲ್ಲೈತೆ?'
'ನಮ್ಮಮ್ಮನ ಮನ್ಲಿ.'
'ಅಲ್ಲ ಕಣಯ್ಯ, ಶ್ಯಾನುಬಾಕಿ ಅಂದ್ರೆ ಅದೇನು ತರಿಯಾ ಕೆಲ್ಸ ಅಂತ ತಿಳ್ಕಂಡ್ಯಾ? ನಿನ್ನ ಮನೆ ಎಲ್ಲೈತೋ ಅಲ್ಲಿ ಕಡ್ತ ಮಡೀಕ್ಕಂಡಿರ್ಬೇಕು. ಲ್ಯಕ್ಕ ಮಡೀಕ್ಕಳ್ಲಿ ಅಂತ ಅಲ್ವಾ ನಾನು ಮನೆ ಕೊಟ್ಟಿರಾದು? ಸರ್ಕಾರೀ ಕಾನೂನು ಗೊತ್ತೈತಾ ನಿಂಗೆ? ಎಲ್ಲಿ, ಒಡ್ಯಲೇ ಹ್ವಾಗಿ ಕಡ್ತಾ ಹೊತ್ಕಂಬಾ.'
ಶ್ಯಾನುಭೋಗರು ಹನುಮಂತರಾಯನ ಗುಡಿಗೆ ಹೋದರೆ ಗಂಗಮ್ಮ ಲೆಕ್ಕದ ಗಂಟನ್ನು ಕೊಡಲಿಲ್ಲ. ಪಟೇಲ ಗುಂಡೇಗೌಡರೇ ಹೇಳಿದ್ದಾರೆಂದ ಮೇಲೆ ಅವಳೇ ಇಲ್ಲಿಗೆ ಬಂದಳು. 'ಸರ್ಕಾರೀ ಕಾನೂನೇ ಹಂಗೈತೆ ಕಣ್ರಮ್ಮ'–ಎಂದು ಅವರು ಹೇಳಿದ ಮೇಲೆ, 'ಹಾಗಾದ್ರೆ ನಾನೂ ಇಲ್ಲಿಗೆ ಬಂದು ಇರ್ತೀನಿ' ಎಂದಳು.
'ಇರಿ. ನನ್ನ ಗಂಟೇನು ಹೋಗ್ಬೇಕು?'
ಆದರೆ ನಂಜಮ್ಮ ತಕ್ಷಣ ಮಾತನಾಡಿದಳು: 'ಅದೆಲ್ಲ ಆಗುಲ್ಲ. ಒಂದ್ ಸಲ ಬ್ಯಾರೆ ಅಂತ ನೂಕಿದಮ್ಯಾಲೆ ನಿಮ್ಮ ಪಾಡಿಗೆ ನೀವಿರಿ. ನಮ್ಮ ಪಾಡಿಗೆ ನಾವಿರ್ತೀವಿ.'
'ನೋಡ್ದ್ಯಾ ಗುಂಡೇಗೌಡ, ಈ ತಾಟಗಿತ್ತಿಮುಂಡೇ ಮಾತ?'
'ಗಂಗವ್ವಾ, ನಾನು ಈ ಮನೆ ಕೊಟ್ಟಿರಾದು ಶ್ಯಾನುಬಾಕಿ ಪುಸ್ತಕಕ್ಕೆ, ಪುಸ್ತಕ ಬರಿಯೂ ಈ ಯಮ್ಮಂಗೆ; ಬಾಕಿಯೋರ್ಗಲ್ಲ. ನೀನ್ ಸುಮ್‍ಸುಮ್ಕೆ ಬೊಯ್‍ಬ್ಯಾಡ'– ಎಂದು ಗೌಡರು ಹೇಳಿದುದಕ್ಕೆ ಗಂಗಮ್ಮ ಗಟ್ಟಿಯಾಗಿ ಬೈಯುತ್ತಾ ಹನುಮಂತರಾಯನ ಗುಡಿಗೆ ಹಿಂತಿರುಗಿದಳು. ಶ್ಯಾನುಭೋಗರು ತಾವೇ ಹೋಗಿ ಲೆಕ್ಕದ ಪುಸ್ತಕಗಳನ್ನು ನಾಲ್ಕು ಸಲ ತಲೆಯ ಮೇಲೆ ಹೊತ್ತು ತಂದರು. ಅದನ್ನು ಹಾಕಿದ್ದ ಪೆಟಾರಿಯನ್ನು ಮಾತ್ರ ಗಂಗಮ್ಮ ಕೊಡಲಿಲ್ಲ.
ಎಲ್ಲ ತಂದಮೇಲೆ ಗುಂಡೇಗೌಡರು ಕೇಳಿದರು: 'ಬಶಣ್ಣಪ್ಪಾ, ಈಟು ವರ್ಸ ಶ್ಯಾನುಭಾಕಿ ಮಾಡ್ದೆ. ಸರ್ಕಾರ್‍ದೋರು ತೋಟಿ ತಳವಾರ್‍ರುನ್ನ ಯಾಕ್ ಮಡಗ್ಯವ್ರೆ ಗೊತ್ತಿಲ್ವಾ?'
ಶ್ಯಾನುಭೋಗರು ಉತ್ತರ ಹೇಳಲಿಲ್ಲ. ಪಟೇಲರೇ ಕೇಳಿದರು: 'ಈ ಲ್ಯಕ್ಕದ ಬುಕ್ಕೆಲ್ಲ ನೀನೇ ತಲೆಮ್ಯಾಲೆ ಹೊತ್ಕಂಡ್ ಬಂದ್ಯಲಾ. ತೋಟಿಗ್ ಕರ್ದು, ತಂದು ಮಡುಗ್ಲಾ ಅನ್ನಾಕ್ ಆಗ್ತಿರ್ಲಿಲ್ವಾ? ನೀನ್ಯಂತಾ ಅಧಿಕಾರ ಮಾಡ್ತಿಯಾ, ಬರೀ ಚೆಂಡು ಹ್ವಡಿಯಾದಾ! ಆಯ್ತು, ಕಾಗಜ ದೌತಿ ತಗಂಡ್ ಬರಿ. ಅದೇನ್ ನೀನು ಏಳಿ ಬರ್ಸವ್ವ.'
ಕರಣಿಕ ಚೆನ್ನಿಗರಾಯರು ಕರಣಿ ಹಿಡಿದರು. ಹೆಂಡತಿ ಹೇಳಿದಳು: 'ರಾಮಸಂದ್ರದ ಫಿರ್ಕಾ ಕುರುಬರಹಳ್ಳಿಯ ಪಟೇಲ್ ಗುಂಡೇಗೌಡರಿಂದ, ಅವರ ಈ ಸಾಲಿನ ರೆವಿನ್ಯೂ ಕಂದಾಯದ ಬಾಬ್ತು ಐವತ್ತು ರೂಪಾಯಿ

ಸಂದಾ೦ಯುವಾಗಿದೆ. ವಸೂಲಿ ಕಾಲದಲ್ಲಿ ಈ ಮೊಬಲಗನ್ನು ಕಟಾಯಿಸಿ ಉಳಿದದ್ದನ್ನು ವಸೂಲಿ ಮಾಡಿ ನಿಮ್ಮ ಪಟ್ಟಿ೦ಯಲ್ಲಿ ಬರೆದು ಕೊಡುತ್ತೇನೆ ಶ್ಯಾನುಭೋಗ್ ಚೆನ್ನಿಗರಾ೦ಯು. ತಾ.....'

ಅವಳು ಹೇಳಿದಂತೆ ಬರೆದು ಅದನ್ನು ಗೌಡರ ಕೈಗೆ ಕೊಟ್ಟರು. ಕೊಟ್ಟ ಹತ್ತು ನಿಮಿಷದ ತನಕ ಅವರಿಗೆ ತಾವು ಬರೆದುದರ ಅರ್ಥ ಆಗಲಿಲ್ಲ. ಆಮೇಲೆ ಜ್ಞಾಪಿಸಿಕೊಂಡವರಂತೆ, 'ಎಲ್ರಿ ದುಡ್ಡು?' ಎಂದರು.

'ದುಡ್ಡೆಲ್ಲಿ ಹೋ೦ಯ್ತದೆ? ನನ್ನ ಕೇಳಬ್ಯಾಡ ಸುಮ್ಕಿರ೦ಯ್ಯಾ'–ಎಂದುದಕ್ಕೆ ಅವರು ಗೊಣಗುವುದನ್ನು ಬಿಡಲಿಲ್ಲ.

ಅದರ ಮರುದಿನ ಗುಂಡೇಗೌಡರು ಗಾಡಿ ಹೊಡೆಸಿಕೊಂಡು ಬಂದು ಮನೆಗೆ ಚೀಲಗಳನ್ನು ಇಳಿಸಿ ನಂಜಮ್ಮನಿಗೆ ಹೇಳಿದರು: 'ನೋಡವ್ವ, ನಾಲ್ಕು ಖಂಡುಗ ರಾಗಿ, ಅಂದ್ರೆ ಇಪ್ಪತ್ತನಾಕು ರೂಪಾಯಿ. ಒಂದು ಪಲ್ಲ ಅವರೇಕಾಳು ಎಂಟು ರೂಪಾಯಿ. ಒಂದು ಮಣ ಮೆಣಸಿನಕಾಯಿ ಮೂರು ರೂಪಾಯಿ. ಒಟ್ಟು ಏಟಾ೦ಯ್ತು?'

'ಮೂವತ್ತ ಐದು.'

'ತಗ ಈ ಐದು ರೂಪಾ೦ಯು. ನಲವತ್ತಾ೦ಯ್ತಲ. ಇನ್ನು ಹತ್ತು ರೂಪಾಯಿ ತಿಪಟೂರ್ನಾಗೆ ಕೊಪ್ಪರಿ ಬುಟ್‌ಮ್ಯಾಲೆ ಕೊಡ್ತೀನಿ. ನಮ್ಮಲ್ಲಿ ಬತ್ತ ಇರಾಕೆ ಇಲ್ಲ. ನೀನೇ ಅಂಗ್ಡೀಲಿ ಅಕ್ಕಿ ತಗಾ.'

ನಂಜಮ್ಮನಿಗೆ ಧೈ೦ರ್ಯ ಬಂತು. ಆ ಐದು ರೂಪಾಯಿ, ಜೊತೆಗೆ ತನ್ನಲ್ಲಿದ್ದ ಹೆಚ್ಚು ಕಡಿಮೆ ಎರಡು ರೂಪಾಯಿಗಳನ್ನು ಒಂದು ಅರಿವೆ೦ಯಲ್ಲಿ ಕಟ್ಟಿ ತೊಲೆ೦ಯ ಒಂದು ಸಂದಿ೦ಯಲ್ಲಿ ಮುಚ್ಚಿಟ್ಟಳು.

– 7 –

ಎಂಟನೇ ತಿಂಗಳು ನಡೆ೦ಯುತ್ತಿದ್ದಾಗ ಒಂದು ಮಧ್ಯಾಹ್ನ ಕೂತು ನಂಜಮ್ಮ ಪಹಣಿ ಪುಸ್ತಕಕ್ಕೆ ರೂಲು ಎಳೆ೦ಯುತ್ತಿದ್ದಳು. ಬಸುರು ಆಗಲೇ ತುಂಬಿ ಬೆಳೆದಿದ್ದುದರಿಂದ ಕುಕ್ಕುರುಗಾಲಿನಲ್ಲಿ ಕುಳಿತು ರೂಲು ಹಾಕುವುದು ಸಾಧ್ಯವಾಗುತ್ತಿರಲಿಲ್ಲ. ಆದರೂ ಹೆಣಗಿ ಭಂಗಿ೦ಯನ್ನು ಬದಲಾಯಿಸಿಕೊಂಡು ಕೆಲಸ ಮಾಡುತ್ತಿದ್ದಳು. ಚೆನ್ನಿಗರಾಯರು ಅಲ್ಲಿ೦ಯೇ ಇನ್ನೊಂದು ಅಂಕಣದಲ್ಲಿ ಮಲಗಿ ಹದವಾಗಿ ಗೊರಕೆ ಹೊಡೆ೦ಯುತ್ತಿದ್ದರು.

ಇದ್ದಕ್ಕಿದ್ದಹಾಗೆ೦ಯೇ ಗಂಗಮ್ಮ ಮನೆ೦ಯೊಳಗೆ ಬಂದಳು. ಹಿಂದೆ ಗುಂಡೇಗೌಡರು ಶ್ಯಾನುಭೋಗಿಕೆ ಪುಸ್ತಕಗಳನ್ನು ತರಿಸಿದ ದಿನವನ್ನು ಬಿಟ್ಟರೆ ಅವಳು ಎಂದೂ ಈ ಮನೆಗೆ ಬಂದಿರಲಿಲ್ಲ. ಬಂದವಳು ೦ಯಾರನ್ನೂ ಹೇಳಲೂ ಇಲ್ಲ, ಕೇಳಲೂ ಇಲ್ಲ. ಒಂದು ವಾಡೆ೦ಯ ಮುಚ್ಚಳ ತೆಗೆದು, ತಾನು ತಂದಿದ್ದ ಚೀಲಕ್ಕೆ ರಾಗಿ೦ಯನ್ನು ತುಂಬಿಕೊಳ್ಳತೊಡಗಿದಳು. ಈಗ ಏನು ಮಾಡಬೇಕು ಎಂಬುದು ತಿಳಿ೦ಯದೆ ಎರಡು ನಿಮಿಷ ಸುಮ್ಮನಿದ್ದ ನಂಜಮ್ಮ ಕೇಳಿದಳು: 'ಅಮ್ಮ, ಏನ್‌ಮಾಡ್ತಿದೀರಾ?'

'ಏನ್ ಮಾಡ್ತಿದೀನೇ? ರಾಗಿ ತಗಿತಿದೀನಿ. ಅದುನ್ನ ಕೇಳುಕ್ ನೀನ್ಯಾವಳೇ?'

'ಮದ್ಲು ಆ ಚೀಲ ಅಲ್ಲಿಟ್ಟು ದೂರ ನಿಂತ್ಕಂಡ್ ಮಾತಾಡಿ. ಹೇಳ್ದೆ ಕೇಳ್ದೆ ಬಂದು ನಮ್ಮನೆ ದಿನಸಿ ಧಾನ್ಯ ಹ್ಯಾಗ್ ಮುಟ್ತೀರಾ?'

'ಇವ್ಳ ಮನೆ೦ಯಂತೆ. ನಿಮ್ಮಪ್ಪ ಕಟ್ಸಿದ್ದೇನೆ ಮನೆ? ಕೇಳ್ದೆ ಏನೋ ಶಿಖಂಡಿ ಸೂಳೇಮಗನೆ? ಇವತ್ತು ಬ್ಯಳಿಗ್ಗೆಯಿಂದ ಮನ್ಲಿ ಏನೂ ಇಲ್ದೆ ನಾನು ಒಲೆ ಹಚ್ಚಿಲ್ಲ. ರಾಗಿ ತಗುಳಕ್ ಬಂದ್ರೆ ಇವಳಪ್ಪ ತಂದ್ಕೊಟ್ಟಾಗ್ ಆಡ್ತಾಳೆ. ಕುರುಬರಹಳ್ಳಿ ಗುಂಡೇಗೌಡ ನಮ್ಮ ಪಟೇಲ; ನಿನ್ನ ಮಿಂಡಲ್ಲ ಬಿಟ್ಟಿ ಕೊಡುಕ್ಕೆ.'

ಅಷ್ಟರಲ್ಲಿ ಎಚ್ಚೆತ್ತ ಚೆನ್ನಿಗರಾ೦ಯರು–'ತಗಂಡ್ರೆ ತಗಳ್ಳಿ ಬಿಡೆ, ನಿನ್ನವ್ವನಾ......'ಎಂದರು.

'ಗುಂಡೇಗೌಡರು ನಿಮಿಗ್ ಕೊಡಿ ಅಂತ ಧರ್ಮಕ್ ಕೊಟ್ಟಿಲ್ಲ. ಕಂದಾ೦ಯಕ್ಕೆ ವಜಾ ಕಟ್ಕಳುಕ್ಕೆ ಅಂತ ನಾನು ಹೇಳಿ ತರ್ಸಿದೀನಿ.'

'ಶ್ಯಾನುಬಾಕಿ ನನ್ನ ಗಂಡಂದು. ನಿಮ್ಮಪ್ಪಂದೇನಲ್ಲ ಕಣೆ ಬೋಸುಡಿಮುಂಡೆ' ಅತ್ತೆ ಎಂದಳು.

'ನಮ್ಮಪ್ಪನೇ ಕುದುರೆಮೇಲೆ ಬಂದು ಕೊಡ್ಸಿದ್ದು. ಇಲ್ದೆ ಇದ್ರೆ ಅದು ಕೈಗೆ ಸಿಕ್ತಿರ್ಲಿಲ್ಲ ತಿಳ್ಕಳಿ. ಈಗ ಕಣ್ಣಿಗೆ ಎಣ್ಣೆ ಬಿಟ್ಕಂಡು ಲೆಕ್ಕ ಬರೀತಿರೋಳು ನಾನು. ನನ್ನ ಮನೆಗೆ ಬಂದು ಏನಾದ್ರೂ ದಿನಸಿ ಧಾನ್ಯ ಮುಟ್ಟಿದ್ರೆ ಗುಂಡೇಗೌಡ್ರಿಗೇ ಹೇಳಿಕಳುಸ್ತೀನಿ.'

'ಇವತ್ತು ಬೆಳಗ್ಗೆಯಿಂದ ಊಟ ಮಾಡಿಲ್ವಲ್ಲ, ಏನು ಮಾಡ್ಲೋ ಮುಂಡೇಮಗನೆ?'

'ಹೋಗಿ ಶಿವೇಗೌಡುನ್ನೋ ಕಾಶಿಂಬಡ್ಡಿನೋ ಕೇಳಿ. ಇಲ್ದೆ ಇದ್ರೆ ರೇವಣ್ಣಶೆಟ್ಟಿಗ್ ಕೇಳಿ'–ನಂಜಮ್ಮನೇ ಉತ್ತರ ಹೇಳಿದಳು.

ಅವಳ ಮಾತಿನ ವ್ಯಂಗ್ಯ ಗಂಗಮ್ಮನಿಗೆ ತಿಳಿ೦ಯಲಿಲ್ಲ. ಚೀಲವನ್ನು ಅಲ್ಲಿ೦ಯೇ ಬಿಟ್ಟು ನೇರವಾಗಿ ಶಿವೇಗೌಡನ ಮನೆಗೆ ಹೋದಳು. ಅವಳು ಹೋದಮೇಲೆ ನಂಜಮ್ಮನಿಗೇ ಕಸಿವಿಸಿ ಎನಿಸಿತು. ಬೆಳಗಿನಿಂದ ಉಪವಾಸವೆಂಬುದನ್ನು ಕಿವಿ೦ಯಲ್ಲಿ ಕೇಳಿ೦ಯೂ ತಾನು ಹಾಗೆ೦ಯೇ ಕಳಿಸಬಾರದಾಗಿತ್ತು ಎಂದುಕೊಂಡು ಒಳಗೆ ಹೋಗಿ ಒಂದು ಮೊರಕ್ಕೆ ಮೂರು ಸೇರಿನಷ್ಟು ರಾಗಿ೦ಯ ಹಿಟ್ಟನ್ನು ಹಾಕಿ, ಅದನ್ನು ಕೊಟ್ಟುಬರುವಂತೆ

ಗಂಡನಿಗೆ ಹೇಳಿದಳು. ಮೊರವನ್ನು ಕೈಲಿ ಹಿಡಿದು ಮಗ ಅವ್ವನ ಮನೆಗೆ ಹೋದ.
ಗಂಗಮ್ಮ ನೇ ರವಾಗಿ ಶಿವೇಗೌಡನ ಮನೆಗೆ ಹೋಗಿ ಕೇಳಿದಳು: 'ಏನಪ್ಪಾ ಪಟೇಲ, ಇವತ್ತು ಬೆಳಗ್ಗೆಯಿಂದ ಒಲೆ ಹಚ್ಚಿಲ್ಲ. ಒಂದಿಪ್ಪತ್ತೈದು ಸೇರು ರಾಗಿ ಕೊಡು.'
'ನಿಂಗೇನ್ ಗುರುಗುಟ್ಟೈತೇನಮ್ಮ? ಎಲ್ಲಿ ಬತ್ತೈತೆ ಇಪ್ಪತ್ತೈದು ಸೇರು ರಾಗಿ?'
'ಮನೆಹಾಳ ಸೂಳೇಮಗ್ನೇ, ನನ್ನ ಆಸ್ತೀನೆಲ್ಲ ಹ್ವಡ್ಕಂಡು ಈಗ ಹೀಗಂತೀಯೇನೋ? ನಿನ್ನ ವಂಶ ಉಳಿಯೋಲ್ಲ ನೋಡು.'
'ಆಸ್ತಿ ಹ್ವಡಕಣಾಕೆ ದುಡ್ಡು ಸುರೀಲಿಲ್ವೇನೇ ಮುಂಡೆ? ನ್ಯಾಲ್ಗೆ ಇಡ್ಕಂಡ್ ಮಾತಾಡ್ತಿಯೋ ಕುತ್ಗೆ ಇಡ್ದು ಆಚೆಕಡೀಕ್ ನೂಕುಸ್ಲೋ?'
ಶಿವೇಗೌಡನ ಹೆಂಡತಿ ಗೌರಮ್ಮ ತಕ್ಷಣ ಮುಂದೆ ಬಂದು ಗಂಡನಿಗೆ ಹೇಳಿದಳು: 'ಆ ಯಮ್ಮ ಹಂಗಂತೈತಿ ಅಂತ ನೀನದೇನಂತಿ ಸುಮ್ಕಿರು. ನೀನ್ ತ್ವಾಟದ್ ತಾವುಕ್ ನಡಿ.'
ಈ ಮುದುಕಿ ಬೀದಿಯಲ್ಲಿ ನಿಂತು ಮಣ್ಣು ತೂರಿ ಶಾಪ ಹಾಕಿದರೆ ತಮ್ಮ ಮನೆಗೆ ಏನಾದರೂ ಕೇಡಾಗುತ್ತದೆಂಬ ಭಯ ಗೌರಮ್ಮನಿಗೆ. ಗಂಗಮ್ಮನ ಸಂಗಡ ನಾಲಗೆಯ ವ್ಯಾಜ್ಯಕ್ಕೆ ನಿಲ್ಲುವುದು ಪಟೇಲನಿಗೂ ಬೇಕಿರಲಿಲ್ಲ. ಹೆಂಡತಿ ಹೇಳಿದ ನೆಪವೇ ಅವನಿಗೆ ಸಾಕಾಯಿತು. ಅವನು ಕಾಲಿಗೆ ಜೋಡು ಮೆಟ್ಟಿಕೊಂಡು ತೋಟದ ಕಡೆಗೆ ಹೊರಟು ಹೋದ. ಗೌರಮ್ಮ ಎರಡು ಮೊರದ ತುಂಬ ರಾಗಿ ತುಂಬಿ ಒಂದು ಸಾರಿಸಿದ ಕುಕ್ಕೆಗೆ ಹಾಕಿ ತಂದು ಮುಂದಿಟ್ಟು ಹೇಳಿದಳು: 'ಅವ್ರು ಅಂತಾರೆ ಅಂತ ಕ್ವಾಪಸ್ಕಾಬ್ಯಾಡಿ. ಇದ ಕೊಂಡೊಯ್ರಿ.'
ಸಿಟ್ಟಿನಿಂದ ಉರಿಯುತ್ತಿದ್ದ ಗಂಗಮ್ಮ ಅದನ್ನು ಬೇಡವೆನ್ನುತ್ತಿದ್ದಳೋ ಹೇಗೋ. ಆದರೆ ಗೌರಮ್ಮ ಮತ್ತೆ ಹೇಳಿದಮೇಲೆ ಕುಕ್ಕೆಯನ್ನು ಎತ್ತಿ ತಲೆಯ ಮೇಲೆ ಇಟ್ಟುಕೊಂಡು ತಾನು ವಾಸವಾಗಿದ್ದ ಗುಡಿಗೆ ಬಂದಳು.
ಚೆನ್ನಿಗರಾಯರು ರಾಗಿ ಹಿಟ್ಟಿನ ಮೊರವನ್ನು ಅಪ್ಪಣ್ಣಯ್ಯನಿಗೆ ಕೊಟ್ಟು ಮಾದೇವಯ್ಯನವರ ಗುಡಿಗೆ ಹೋಗಿ ಕುಳಿತಿದ್ದರು. ನಂಜಮ್ಮ ಮತ್ತೆ ಕೂತು ಕತ್ತು ಬಗ್ಗಿಸಿಕೊಂಡು ಪುಸ್ತಕಕ್ಕೆ ಕೆಂಪು ಶಾಯಿಯ ರೂಲು ಎಳೆಯುತ್ತಿದ್ದಳು. ಯಾರೋ ಮನೆಯ ಒಳಗೆ ಬಂದಂತೆ ನೆರಳಾಯಿತು. ಅದು ಯಾರೆಂದು ತಲೆ ಎತ್ತಿ ನೋಡುವುದರೊಳಗೇ ಗಂಗಮ್ಮ ರಾಗೀಹಿಟ್ಟಿನ ಮೊರವನ್ನು ಕೈಲಿ ಹಿಡಿದು ಬಂದು ಇವಳ ಮುಂದೆ ನಿಂತಳು. ಯಾಕೆ, ಏನು, ಎಂದು ಕೇಳುವ ಮೊದಲೇ ಅವಳು ಮೊರದ ತುಂಬ ಇದ್ದ ಹಿಟ್ಟನ್ನು ಸೊಸೆಯ ತಲೆಯಮೇಲೆ ಸುರಿದು ಮೊರವನ್ನು ಒಂದು ಸಲ ನೆತ್ತಿಯಮೇಲೆ ಕುಕ್ಕಿ–'ನಿನ್ನ ಮನೆ ಭಿಕ್ಷದ ಮುದ್ದೆ ತಿಂತೀನಿ ನಾನು ಅಂತ ತಿಳ್ಕಂಡೆ ಏನೇ ತಿರುಪದ ಮುಂಡೆ? ಗಂಗಮ್ಮ ಅಂದ್ರೆ ಏನು ಅಂತ ಮಾಡ್ಕಂಡೆ?' ಎಂದು ಬಿರಬಿರನೆ ನಡೆದು ಹೋಗಿಬಿಟ್ಟಳು.
ತಲೆ, ಮೈ ಕೈ, ಪುಸ್ತಕ, ಕೆಂಪು ಶಾಯಿಯ ದೌತಿ, ಎಲ್ಲವೂ ರಾಗಿಯ ಹಿಟ್ಟಾಯಿತು. ಎದ್ದು ಹಿಂದಿನಿಂದ ಹೋಗಿ ಅತ್ತೆಯನ್ನು ಹಿಡಿದು ನಿಲ್ಲಿಸಬೇಕೆಂದು ನಂಜಮ್ಮನಿಗೆ ಮನಸ್ಸಾಯಿತು. ಅಥವಾ ಯಾರಾದರೂ ಇಬ್ಬರು ಪುಣ್ಯಾತ್ಮರಿಗೆ ತೋರಿಸಲೇ ಎಂಬ ಯೋಚನೆಯೂ ಬಂತು. ಆದರೆ ತನ್ನ ಮನೆಯ ಜಗಳ ಹೊರಗಿನವರ ಹತ್ತಿರ ಹೋದರೆ ಊರಿಗೆಲ್ಲ ನಗುವುದಕ್ಕೆ ದಾರಿಯಾಗುತ್ತೆ. ಈಗಲೇ ಎಷ್ಟು ಜನ ನಗುತ್ತಿದ್ದಾರೋ ಎಂದು ಯೋಚಿಸಿ ಸುಮ್ಮನಾದಳು. ಮೇಲೆ ಎದ್ದು ಸೀರೆಯ ಸೆರಗನ್ನು ಕೊಡವಿದಳು. ಅದೃಷ್ಟಕ್ಕೆ ಹಿಟ್ಟೆಲ್ಲವೂ ಅವಳು ಕೂತಿದ್ದ ಈಚಲು ಚಾಪೆಯ ಮೇಲೆ ಬಿದ್ದಿತ್ತು. ಪುಸ್ತಕವನ್ನೂ ಕೊಡವಿ ಹಿಟ್ಟನ್ನು ಗುಡ್ಡೆ ಮಾಡಿ ಎತ್ತಿ ಒಂದರಿಯಾಡಿಸಿ ಇಟ್ಟಳು. ತಲೆಗೆ ಸ್ನಾನ ಮಾಡಿ ಹಿಟ್ಟನ್ನು ತೊಳೆದುಕೊಂಡು, ದೌತಿ ಕುಡಿಕೆ ತೊಳೆದು ಚನ್ನಶೆಟ್ಟಿ ಅಂಗಡಿಯಿಂದ ಮೂರುಕಾಸು ಕೊಟ್ಟು ಎರಡು ಪೊಟ್ಟಣ ಕೆಂಪು ಶಾಯಿ ಪುಡಿ ತಂದು ಶಾಯಿ ಮಾಡಿ ಮತ್ತೆ ರೂಲು ಹಾಕಲು ಕುಳಿತಳು.

– 8 –

ಇದಾದ ಮೂರನೆಯ ದಿನ ಬೆಳಗಿನ ಹತ್ತು ಗಂಟೆಯ ಹೊತ್ತಿನಲ್ಲಿ ನಂಜಮ್ಮ ಒಳಗೆ ಅಡಿಗೆ ಮಾಡುತ್ತಿದ್ದಾಗ ಹೊರಗಿನಿಂದ 'ನಂಜೂ' ಎಂದು ಕೂಗಿದಂತೆ ಆಯಿತು. ಧ್ವನಿಯನ್ನು ಕೇಳಿಯೇ ಅಕ್ಕಮ್ಮ ಎಂದು ಗೊತ್ತಾಗಿ ಅವಳು ಸಡಗರದಿಂದ ಹೊರಗೆ ಬಂದು ನೋಡಿದರೆ ನಿಜವಾಗಿತ್ತು–ತಲೆಯ ಮೇಲೆ ಒಂದು ಸೀರೆಯ ಗಂಟು ಇಟ್ಟುಕೊಂಡು ಬಾಗಿದ ಬೆನ್ನಿನಿಂದ ಅಕ್ಕಮ್ಮ ನಿಂತಿದ್ದಾಳೆ. ಅವಳ ಹಿಂದೆ ಎರಡು ಗಂಡಾಳುಗಳು ಒಂದೊಂದು ಗೋಣಿಯ ಚೀಲಗಳನ್ನು ಹೊತ್ತು ನಿಂತಿದ್ದಾರೆ. 'ನಂಜು, ನೀನು ಬಸುರಿ ಅಂತ ನಂಗೆ ಹೇಳಿ ಕಳುಸ್ಲೇಬ್ಯಾಡ್ವೇ? ಹೀಗಾಗಿದೆ ಅಂತ ಕಷ್ಟ ಸುಖ ತಿಳುಸ್ಲೇಬ್ಯಾಡ್ವೇ?'
'ನಾನು ಹೇಳಿಕಳ್ಸಾಣ ಅಂತಿದ್ದೆ. ವಳಿಕ್ ನಡಿ. ಮಡಿ ಉಟ್ಕಂಡಿದೀಯಾ?'
'ನನ್ನ ಮಡಿ ಆಮ್ಯಾಲಾಗುತ್ತೆ. ಅಡಿಗೆಯಾಗಿದ್ರೆ ಮದ್ಲು ಇವರಿಬ್ಬರಿಗೂ ಇಕ್ಕು. ಅವ್ರು ಊರಿಗೆ ಹೋಗ್‌ಬೇಕು.'
ಒಳಗೆ ಹುಳಿ ಕುದಿಯುತ್ತಿತ್ತು. ಹಿಟ್ಟು ಮುದ್ದೆ ಕಟ್ಟುವುದೊಂದು ಬಾಕಿ ಇತ್ತು. ನಂಜು ಒಳಗೆ ಹೋಗಿ ಉರಿ

ಜೋರು ಮಾಡಿ ಕಾಲುಗಂಟೆಯಲ್ಲಿ ಹುಳಿ ಹಿಟ್ಟು ಮುಗಿಸಿದಳು. ಕೆರೆಯ ಕಡೆಗೆ ಹೋಗಿ ಕೈಕಾಲು ತೊಳೆದುಕೊಂಡು ಬಂದ ಆಳುಗಳಿಗೆ ಬಡಿಸುವಾಗ ಅಕ್ಕಮ್ಮ ಕೇಳಿದಳು: 'ಮಜ್ಜಿಗೆ ಇಲ್ವೆ?'

'ಎಲ್ಲಿ ಬರ್‌ಬೇಕು?'

ಆಳುಗಳ ಊಟವಾದ ಮೇಲೆ ಅವರ ಪೈಕಿ ಒಬ್ಬನ ಕೈಲಿ ಅಕ್ಕಮ್ಮ ಹೇಳಿದಳು: 'ಹೊನ್ನ, ನೋಡು, ಲಕ್ಕ ಏನಾದರೂ ಬಾಯಿಬಿಟ್ಟಾನು. ಅವನಿಗೆ ಇನ್ನೊಂದು ಸಲಿ ಹೇಳು. ಮನೆಗೆ ಹೋದ ತಕ್ಷಣ ಕಲ್ಲೇಶುಂಗೆ ಹೇಳು. ಮನ್ಲಿ ಕರಾವಿಲ್ಲ. ಮುಂದೆ ಬಾಣಂತಿಗೆ ಹಾಲಿಲ್ಲ. ನಮ್ಮ ಬಿಳೀ ಹಸೀನ ತಳಿ ಐತಲಾ–ಈಗ ಒಂದು ತಿಂಗ್ಳಲ್ಲಿ ಈದದ್ದು, ಅದ ಹೊಡೆದು ಕಳ್ಸು ಅಂತ ಹೇಳು. ಅದರ ಅವ್ವುನ್ನ ಧಾರೇಲಿ ನಂಜಮ್ಮುಂಗೆ ಕೊಟ್ಟಿದ್ವು. ಆಮ್ಯಾಲೆ ಇಲ್ಲಿಗೆ ಕಳುಸ್ಲಿಲ್ಲ. ಈಗ ಅದರ ಮಗಳುನ್ನಾದ್ರೂ ಕಳ್ಸು ಅಂತ ನಾನಂದೆ ಅನ್ನು.'

ಆಳುಗಳು ಹೊರಟುಹೋದರು. ತಣ್ಣೀರಿನಲ್ಲಿಯೇ ಸ್ನಾನ ಮಾಡಿ ಒದ್ದೆಯ ಸೀರೆ ಸುತ್ತಿಕೊಂಡು ಹಣೆಗೆ ವಿಭೂತಿ ಇಟ್ಟು ಮೂರು ಆಚಮನ ಮಾಡಿದಮೇಲೆ ಅಕ್ಕಮ್ಮ ಅಡಿಗೆ ಮನೆಗೆ ಬಂದು ಒದ್ದೆ ಸೀರೆ ಕಾಯಿಸಿಕೊಳ್ಳುತ್ತಾ ಒಲೆಯ ಮುಂದೆ ಕುಳಿತಳು. ನಂಜು ಕೇಳಿದಳು: 'ನಿಂಗ್ ಹ್ಯಾಗೆ ಗೊತ್ತಾಯ್ತು?'

'ನಮ್ಮೂರ ಮಗ್ಗದ ತಮ್ಮಯ್ಯಶೆಟ್ಟಿಗೆ ಈ ಊರುದ್ದೇ ಅಲ್ವೇ ಹೆಣ್ಣು ಕೊಟ್ಟಿರೂದು? ಈಗೊಂದೇಳೆಂಟು ದಿನದಾಗೆ ಕೆರೆಗೆ ಹೋಗಿದ್ದೆ. ತಿರುಮಲಮ್ಮ ಬಂದಿದ್ಲು. ಯಲ್ಲಾ ಹೇಳಿದ್ಲು. ನೀವೀಗ ಕುರುಬರಹಳ್ಳಿ ಪಟೇಲರ ಮನ್ಲಿದೀರಂತೆ. ಏಳೆಂಟು ತಿಂಗಳು ಬಸುರಿಯಂತೆ. ನಿಮ್ಮತ್ತೆ, ಒಂದು ಕುಡಿಯೂ ಪಂಚಪಾತ್ರೇನೂ ಕೊಡ್ಲಿಲ್ಲವಂತೆ. ಜಮೀನೇನೋ ಹೋಗುತ್ತೆ ಅಂತ ಆವಾಗ್ಲೇ ಕಲ್ಲೇಶ್ನೇ ಅಂದಿದ್ದ.'

'ನೀನ್ಯಾವಾಗ ಹೊರಟೆ ಊರಿಂದ?'

'ನೆನ್ನೆ ದಿನವೇ ಹೊರಟೆ. ಸಂಜೆ ಹೊತ್ತಿಗೆ, ಇನ್ನಿಲ್ಲ ಅನ್ನೂವಷ್ಟು ಮಳೆ ಬಂದುಬಿಡ್ತು. ಮೂರು ಜನವೂ ದಾರೀಲಿ ಸಿಕ್ಕುತ್ತಲ್ಲಾ, ಗುಡ್ಡದ ಆಚೆಗೆ ಹೂವಿನಹಳ್ಳಿ ಅಂತ, ಅವರ ಪಟೇಲನ ಮನೆ ಜಗುಲಿಮ್ಯಾಲೆ ಮಲಗಿದ್ವು. ಪಟೇಲನ ಮನೆಯೋರು ಅವರಿಬ್ರಿಗೂ ಊಟಕ್ಕಿಕ್ಕಿ, ನಂಗೆ ಒಂದಿಷ್ಟು ಕಾಯಿತುರಿ ಬೆಲ್ಲ ಮಾಡಿ ಕೊಟ್ರು.'

ಹೊರಗೆ ಆಟಕ್ಕೆ ಹೋಗಿದ್ದ ಹುಡುಗರು ಮನೆಗೆ ಬಂದರು. ಪಾರ್ವತಿಗೆ ಅಕ್ಕಮ್ಮನ ನೆನಪು ಮರೆತಿರಲಿಲ್ಲ. ರಾಮಣ್ಣನಿಗೆ ಏನೂ ಜ್ಞಾಪಕವಿರುವುದು ಸಾಧ್ಯವಿರಲಿಲ್ಲ. ಆದರೆ ಅರ್ಧ ಗಂಟೆಗೆ ಅವು ಅವಳ ಹತ್ತಿರ ಹೋದುವು. ಊಟದ ಹೊತ್ತಿಗೆ ಚೆನ್ನಿಗರಾಯರು ಮನೆಗೆ ಬಂದರು. 'ಚನ್ನಾಗಿದೀರಾ?' –ಎಂಬುದನ್ನು ಬಿಟ್ಟರೆ ಅವರು ಅಜ್ಜಿಯನ್ನು ಹೆಚ್ಚು ಏನೂ ವಿಚಾರಿಸಲಿಲ್ಲ. ಅಜ್ಜಿಯೂ ಅವರ ಕಡೆಗೆ ಗಮನ ಕೊಡಲಿಲ್ಲ. ಊಟ ಮುಗಿಸಿದ ಮೇಲೆ ಅವರು ಮನೆಯಲ್ಲಿ ಮಲಗದೆ ಮಾದೇವಯ್ಯನವರ ಗುಡಿಯ ಜಗುಲಿಗೆ ಹೋದರು. ಅಕ್ಕಮ್ಮ ತಾನು ತಂದಿದ್ದ ಎರಡು ಮೂಟೆಗಳನ್ನು ಬಿಚ್ಚಿದಳು. ಒಂದರಲ್ಲಿ ತಾಮ್ರ ಹಿತ್ತಾಳೆಯ ಪಾತ್ರೆಗಳು. ನಾಲ್ಕು ಸಣ್ಣ ದೊಡ್ಡ ಅರಕಿನ ಚೆಟ್ಟಿ, ಎರಡು ಹಿತ್ತಾಳೆಯ ಚೊಂಬು, ಒಂದು ಬಿಂದಿಗೆ, ಐದು ಹಿತ್ತಾಳೆಯ ಗಳಾಸು, ಎರಡು ತಾಮ್ರದ ಪಂಚಪಾತ್ರೆ, ಎರಡು ಅನ್ನದ ತಪ್ಪಲೆ, ಎರಡು ಚರಕಲು ಮೊದಲಾಗಿ ಒಂದು ಆಳು ಹೊರುವಷ್ಟು ಪಾತ್ರೆಗಳು. ಇನ್ನೊಂದರಲ್ಲಿ ಅವಲಕ್ಕಿ ಹುರಿಟ್ಟುಗಳಲ್ಲದೆ ಬೆಲ್ಲದ ಉಂಡೆಗಳು. ಮೇಲೆ ಹದಿನೈದು ಸೇರಿನಷ್ಟು ಮುಂಗೇಸರಿ ಅಕ್ಕಿ.

'ಅಕ್ಕಮ್ಮ, ಇದೆಲ್ಲ ಯಾಕೆ ತಂದೆ?'

'ಮಕ್ಕಳ ಮನೆ. ಅವಲಕ್ಕಿ ಹುರಿಟ್ಟು ಮಾಡ್ಕಂಡು ಹೋಗು ಅಂತ ಕಲ್ಲೇಶನೇ ಅಂದ. ಬೈಲಲ್ಲಿ ಆಲೆ ಕಟ್ಟಿದೆ. ಗಣೇಶನ ಉಂಡೆ ಮನೇಲಿ ಮೂರು ಗುಡಾಣ ತುಂಬಿದೆ. ಅವನೇ ಬೆಲ್ಲಾನೂ ಕೊಟ್ಟ, ಅಕ್ಕೀನೂ ಗಂಟುಕಟ್ಟಿ ಕೊಟ್ಟ.'

'ಈ ಪಾತ್ರೆ?'

'ನೋಡು ಕಲ್ಲೇಶ ಪೋಲೀಸ್ ಕೆಲಸದಾಗಿದ್ನಲ್ಲ, ಆಗ ದಾನದಲ್ಲಿ ಬಂದ ಪಾತ್ರೆ ಪರಟಿಗಳೆಲ್ಲ ನಾನೇ ಅಟ್ಟದ ಮ್ಯಾಲೆ ಒಂದೊಂದು ಕೊಮ್ಮೇಲಿ ತುಂಬಿ ಇಟ್ಟಿದ್ದೆ. ಅದರ ಲೆಕ್ಕ ಯಾರಿಗೂ ಗೊತ್ತಿರ್ಲಿಲ್ಲ. ಇಲ್ಲಿ ನಿಂಗೆ ಹೀಗಾಗಿದೆ ಅಂತ ಕೇಳಿದಮ್ಯಾಲೆ ಅವ್ನು ಕೆರೆಗೆ ಹೋಗಿದ್ದಾಗ ನೋಡಿ ಒಂದೊಂದಿಷ್ಟು ತೆಗೆದು ಹೊನ್ನನ ಹೆಂಡ್ತೀ ಕೈಲಿ ಕೊಟ್ಟಿದ್ದೆ. ನಾವು ಬರೂವಾಗ ಯಾರಿಗೂ ಕಾಣದ ಹಾಗೆ ಅದುನ್ನ ಲಕ್ಕನ ಕೈಲಿ ಹೊರಿಸಿ ಹೊನ್ನ ಮದ್ಲೇ ಚೌಡೇನಹಳ್ಳಿ ಕೋಡೀ ಹತ್ರ ಕಾಯ್ಕಂಡಿರೂ ಹಾಗೆ ಹೇಳಿಕಳ್ಸಿದ್ದೆ.'

'ಆದ್ರೂ ನೀನು ಇದ ತರಬಾರದಾಗಿತ್ತು ಅಕ್ಕಮ್ಮ. ಗೊತ್ತಾದ್ರೆ ಕಲ್ಲೇಶಣ್ಣಯ್ಯನಾದ್ರೂ ಸುಮ್ನಿರ್ತಾನೆಯೇ?'

'ಅವನ್ಗೂ ಗೊತ್ತಾಗುಲ್ಲ ಸುಮ್ನಿರೇ. ಕಂಠಿ ಇದ್ದಾಗ ದಾನದಲ್ಲಿ ಬಂದುದ್ದು' ಎನ್ನುವಾಗ ಮಗನ ನೆನಪಾಗಿ ಮುದುಕಿ ಕಣ್ಣಿನಲ್ಲಿ ನೀರು ತುಂಬಿಕೊಂಡು ಹೇಳಿತು: 'ಮುಂಡೇದು ಎಲ್ಲಿ ಹೋಯ್ತೋ, ಏನು ಮಾಡ್ಕಂಡಿದೆಯೋ! ಮೊದಲಿನಿಂದಲೂ ಅಷ್ಟೇ, ಏನೇನೋ ಮಾಡುಕ್ಹೋಗುತ್ತೆ. ತೆಪ್ಪಗೆ ಮನ್ಲಿದ್ದು ದೇವರು ಕೊಟ್ಟುದ್ದ ಉಂಡ್ಕಂಡಿರುಲ್ಲ.'

ತಂದೆಯ ನೆನಪಾಗಿ ನಂಜುವಿನ ಕಣ್ಣಿನಲ್ಲೂ ನೀರು ಬಂತು: 'ಅಪ್ಪನ ಸಮಾಚಾರ ಏನೂ ತಿಳೀಲಿಲ್ವೇ?'

‘ಏನೂ ಗೊತ್ತಿಲ್ಲ. ಅವನೆಲ್ಲಿದಾನೆ, ಎಲ್ಲೋ ಸತ್ಗಿತ್ ಹೋಗಿದಾನೆ ಅಂತಾರೆ. ಅವ್ನು ಹ್ಯಾಗೆ ಸಾಯ್ತಾನೆ? ವಳ್ಳೇ ಭೋಜರಾಜನ ಹಾಗಿರೋನು.’
‘ಸತ್ತಿಲ್ಲ, ಅದೆಲ್ಲ ಸುಳ್ಳು’–ಎಂದು ಮೊಮ್ಮಗಳು ಹೇಳಿದ ಮೇಲೆ ಅಜ್ಜಿಗೆ ಸಮಾಧಾನವಾಯಿತು.
ಅಕ್ಕಮ್ಮನಿಗೆ ಆಯಾಸವಾಗಿತ್ತು. ಮನೆಯಲ್ಲಿ ಮಂದಲಿಗೆ ಇರಲಿಲ್ಲ. ಮಡಿಯ ಹೆಂಗಸಾದ ಅವಳು ಈಚಲು ಚಾಪೆಯ ಮೇಲೆ ಮಲಗುವವಳಲ್ಲ. ಆದುದರಿಂದ ಬರೀ ನೆಲದ ಮೇಲೆ ಉರುಟಿದಳು. ನಂಜು ಕೇಳಿದಳು:
‘ಈಗ ಅತ್ತಿಗೆಮ್ಮ ಹ್ಯಾಗಿದಾಳೆ?’
‘ಹೀನ ಸುಳಿ ಬೋಳಿಸಿದ್ರೆ ಹೋಗುತ್ತೆಯೇ? ನಿಮ್ಮಪ್ಪನ ಏಲುಪ್ಪೈಲಿಗೆ ಏನು ಹೇಳ್ಬೇಕು? ಹಿಂದೆ ಮುಂದೆ ನೋಡ್ಲಿಲ್ಲ, ನಾಕು ಕಡೆ ವಿಚಾರುಸ್ಲಿಲ್ಲ. ಇಲ್ಲಿ ಬಂದ ನಿನ್ನ ಕೊಟ್ಟುಬಿಟ್ಟ. ಅಲ್ಲಿಗ್ಹೋದ, ಅವ್ಳುನ್ನ ತಂದುಬಿಟ್ಟ. ಅವ್ಳು ಸುಖವಾಗಿ ತಿಂತಾಳೆ. ಕರದಿಟ್ಟಿದ್ದ ಕಡೇಲಿ ಕದ್ದು ಹಾಲು ಬಗ್ಗಿಸ್ಕಂಡ್ ಕುಡಿತಾಳೆ. ದೊಕ್ಕಂಡ್ ದೊಕ್ಕಂಡ್ ಕದ್ದು ತುಪ್ಪಾನೇ ನುಂಗ್ತಾಳೆ. ವಾರಕ್ಕೊಂದಿನ ಎಣ್ಣೆ ಒತ್ಕಂಡು ನೀರು ಹುಯ್ಕಾತಾಳೆ. ನನ್ನ ಕೈಲೂ ಹಾಕುಸ್ಕಳುಲ್ಲ. ಇಷ್ಟೆಲ್ಲ ಆರೈಕೆ ಮಾಡ್ಕಂಡ್ರೂ ಅನಿಷ್ಟ ಮುಂಡೇದು ಬಸರಿ ಮಾತ್ರ ಆಗ್ಲಿಲ್ಲ.’
‘ಗಂಡ ಹೆಂಡ್ತಿ ಚನ್ನಾಗಿದಾರೆಯೇ?’
‘‘ಚನ್ನವೇನು? ಒಂದು ನಾಕು ದಿನ ರಾತ್ರಿ ಚಿಕ್ಕ ಮನೇಲಿ ಮಲಿಕಂಡಾಗ ಪಿಶ್‌ಪಿಶಿ ನಶ್‌ನಶಿ ಅಂತ ಮಾತಾಡ್ಕತಿರ್ತಾರೆ. ಇನ್ನು ನಾಕು ದಿನ ಅವ್ನು ಅವಳಿಗೆ ಹಿಡಕಂಡು ಹೇರಿ ಕೆಡುವ್ತಾನೆ. ನಾನೇ ಮೊಮ್ಮಗುಂಗೆ ಹೇಳಿ ಹೊಡುಸ್ತೀನಿ ಅಂತ ಅದು ನಂಗೆ ಶಾಪ ಹಾಕುತ್ತೆ. ‘ಬ್ಯಾಡ ಕಣೋ, ಹೆಂಡ್ತೀನ ಹೀಗೆ ಹ್ವಡೀಬಾರ್ದು’
ಅಂದ್ರೆ, ‘ಆ ಮುಂಡೆ ಹ್ವಡಿದೇ ಇದ್ರೆ ಎಲ್ಲಿ ನ್ಯಟ್ಗಿರ್ತಾಳೆ? ನೀನು ಸುಮ್ನಿರು’
ಅಂತ ಅವ್ನು ನನ್ನೇ ಗದರುಸ್ಕತಾನೆ. ಕೆಂಪಿ ಅಂತ ಇದ್ಲು ಗೊತ್ತಾ ಹ್ವಲೇರ ಕಾಳನ ಮಗಳು?’’
‘ಗೊತ್ತಿಲ್ದೇ ಏನು?’
‘‘ಕಲ್ಲೇಶ ಅವಳ ಜೊತೆ ಕಬ್ಬಿನ ಗದ್ದೇಲಿ ಇರ್ತಾನೆ ಅಂತ ಯಾರ್ಯಾರೋ ಮಾತಾಡ್ಕತ್ತಿದ್ರು. ಬೆಸ್ತರಕೇರಿ ಮಾಯಗ ಇದ್ನಲ್ಲ, ಈಗ ಮೂರು ವರ್ಷದಾಗೆ ಸತ್ಹೋದ. ಅವ್ನ ಹೆಂಡ್ತಿ, ಎರಡು ಚಿಕ್ಕ ಮಕ್ಳು ಇದುವೆ. ಅವಳ ಮನೆಗೆ ಹೋಗಿ ಕೂತಿರ್ತಾನಂತೆ. ಇನ್ನೂ ಏನೇನೋ ಹೇಳ್ತಾರೆ. ಇದೇನೋ ಇದು ಅಂತ ನಾನು ಒಂದ್ ದಿನ ಕೇಳ್ದೆ. ‘ಅದ್ಯಾವ ಸೂಳೇಮಗ ನಿಂಗ್ ಹೇಳ್ದೋನು? ಅವ್ನಿಗೆ ಜೋಡು ತಗೊಂಡು ನೆತ್ತಿ ಕೂದ್ಲು ಉದುರೂ ಹಾಗ್ ಮುಟ್ಟುಸ್ಬಿಡ್ತೀನಿ’ ಅಂದ. ನಾನ್ಯಾಕೆ ಕೈದುಕ್ಲಿ ಅಂತ ಸುಮ್ನಾದೆ.’’
‘ಮನ್ಲಿ ಹೆಂಡ್ತಿ ಇದ್ರೂ ಅವ್ನ್ಯಾಕ್ ಹೀಗೆಲ್ಲ ಮಾಡ್‌ಬೇಕು ಹೇಳು.’
‘ಪರದೇಶಿ ಮುಂಡೇದು ಕಣೆ ಅದು. ಮದುವೆಯಾದ್‌ಮ್ಯಾಲೆ ನ್ಯಟ್‌ಗೆ ಗಂಡನ ಹತ್ರ ನಡಕಂಡಿದ್ರೆ ಅವ್ನ್ಯಾಕೆ ಹೀಗಾಗ್ತಿದ್ದ ಹೇಳು.’
ಅಜ್ಜಿ ಮೊಮ್ಮಗಳ ಕಷ್ಟಸುಖಗಳನ್ನೆಲ್ಲ ಕೇಳಿದಳು. ಅಡಿಗೆಯ ಕೆಲಸವನ್ನು ತಾನೇ ವಹಿಸಿಕೊಂಡಳು. ನಂಜುವಿಗೆ ಆಗಲೇ ಎಂಟು ತಿಂಗಳು ತುಂಬಿತ್ತು. ರಾತ್ರಿಯ ಹೊತ್ತು ಅವಳು ಅಕ್ಕಮ್ಮನ ಹತ್ತಿರ ಹಾಸಿಕೊಂಡು ಚಾಪೆಯ ಮೇಲೆ ಮಲಗಲು ಪ್ರಾರಂಭಿಸಿದಳು. ಮಕ್ಕಳು ಅಕ್ಕಮ್ಮನ ಎರಡು ಪಕ್ಕಕ್ಕೂ ಒಂದೊಂದರಂತೆ ತಬ್ಬಿಕೊಂಡು ಮಲಗುತ್ತಿದ್ದುವು. ಅಜ್ಜಿ ಮೊಮ್ಮಗಳು ನಿದ್ರೆ ಬರುವ ತನಕ ಏನಾದರೂ ಮಾತನಾಡುತ್ತಿದ್ದರು. ಚೆನ್ನಿಗರಾಯರಿಗೆ ಮನೆಯಲ್ಲಿ ಮಲಗುವುದು ಬೇಸರವಾಯಿತು. ಒಂದು ರಾತ್ರಿ ಊಟವಾದಮೇಲೆ ಅವರೇ ತಮ್ಮ ಹಾಸಿಗೆ ಹೊತ್ತುಕೊಂಡು ಮಾದೇವಯ್ಯನವರ ಗುಡಿಯ ಜಗುಲಿಯ ಮೇಲಕ್ಕೆ ಹೋದರು.
ಅಕ್ಕಮ್ಮ ಬಂದ ಎಂಟು ದಿನಕ್ಕೆ ಒಂದು ದಿನ ಕಲ್ಲೇಶನೇ ಬಿಳಿಯ ಹಸು ಮತ್ತು ಕರುಗಳನ್ನು ಹೊಡೆದುಕೊಂಡು ಬಂದ. ಎರಡು ದಿನ ತಂಗಿಯ ಮನೆಯಲ್ಲಿದ್ದು ಊರಿಗೆ ಹಿಂತಿರುಗಿದ. ಒಂಬತ್ತನೆಯ ತಿಂಗಳು ತುಂಬಿದ ಮೇಲೆ ನಂಜು ಗಂಡು ಮಗು ಹೆತ್ತಳು. ಮೈ ಕೈ ತುಂಬಿಕೊಂಡಿದ್ದ ಮಗು ದಪ್ಪಗೆ ಆರೋಗ್ಯವಾಗಿ ಲಕ್ಷಣವಾಗಿತ್ತು. ನಾಮಕರಣ ಮಾಡಲು ಹತ್ತಿರ ದುಡ್ಡಿಲ್ಲ. ಆದರೆ ಶಾಸ್ತ್ರ ಬಿಡುವಂತಿಲ್ಲ. ಅಕ್ಕಮ್ಮ ಹೇಗೂ ಬೆಲ್ಲ ಅಕ್ಕಿಗಳನ್ನು ತಂದಿದ್ದಳು. ಅವಳ ಹತ್ತಿರ ಐದು ರೂಪಾಯಿ ಇತ್ತು. ಅದನ್ನೇ ಖರ್ಚು ಮಾಡಿ ಊರಿನ ನಾಲ್ಕು ಬ್ರಾಹ್ಮಣರ ಮನೆಗೂ, ಇಬ್ಬರು ಜೋಯಿಸರ ಮನೆಗೂ ಊಟಕ್ಕೆ ಹೇಳಿ ಶಾಸ್ತ್ರ ಮಾಡಿಸಿ ವಿಶ್ವನಾಥ ಎಂದು ಹೆಸರಿಡಿಸಿದಳು. ಅದೇ ದಿನ ಗಂಗಮ್ಮ ಮತ್ತು ಅಪ್ಪಣ್ಣಯ್ಯ ಊರಿನಲ್ಲಿರಲಿಲ್ಲ; ಹಿಂದಿನ ದಿನವೇ ಎಲ್ಲೋ ಬೇರೆ ಊರಿಗೆ ಹೋಗಿ ಬಿಟ್ಟಿದ್ದರು.

## ಅಧ್ಯಾಯ – 8

### – 1 –

ಅಕ್ಕಮ್ಮ ನಾಲ್ಕು ತಿಂಗಳ ಕಾಲ ಬಾಣಂತಿತನ ಮಾಡಿದಳು. ಮೊಮ್ಮಗಳನ್ನು ಯಾವ ಕೆಲಸ ಮಾಡಲೂ ಬಿಡದೆ ಮುಚ್ಚಟೆಯಿಂದ ನೋಡಿಕೊಂಡರೂ ಎರಡನೇ ತಿಂಗಳಿನಲ್ಲಿಯೇ ಅವಳು ಎದ್ದು ಕೂತು

ಖಾನೀಷುಮಾರಿ ಲೆಕ್ಕಕ್ಕೆ ರೂಲು ಹಾಕಿ, ಗಂಡ ಖುಷ್ಕಿ ತರಿ ಬಾಗಾಯ್ತುಗಳ ಮೇಲೆ ಹೋಗಿ ಬರೆದು ತಂದ ಪಹಣಿಯ ಗೋಶ್ವರೆ ತಯಾರಿಸುವುದನ್ನು ಮಾತ್ರ ನಿಲ್ಲಿಸಲಾಗಲಿಲ್ಲ.

ಅಕ್ಕಮ್ಮನನ್ನು ಊರಿಗೆ ಕರಕೊಂಡು ಹೋಗಲು ಕಲ್ಲೇಶ ಬಂದಿದ್ದ. ಅವರು ಇಬ್ಬರೂ ನಾಳೆ ಬೆಳಗ್ಗೆ ಊರಿಗೆ ಪ್ರಯಾಣ ಮಾಡಬೇಕು ಎನ್ನುವಾಗ ಈ ದಿನ ಸಂಜೆ ಕುಳವಾಡಿ ಬಂದು ಶ್ಯಾನುಭೋಗರನ್ನು ಕರೆದ: 'ಅಂಗ್ಡಿ ಚನ್ನಸೆಟ್ಟಿ ಮನ್ಲಿ ಪಂಚಾತಿಗೆ ಮಡಗ್ಯವ್ರೆ. ಬರ್ಬೇಕಂತೆ.'

'ಅದೇನೋ ಪಂಚಾಯ್ತಿ?' – ನಂಜಮ್ಮ ಕೇಳಿದಳು.

'ಚನ್ನಸೆಟ್ಟಿ ಅವ್ನ ಸ್ವಸೆ ನರಸೀನ ಮಡಿಕ್ಕಂಡವ್ನಂತೆ. ಅವ್ಳ ಗಂಡ ಪಂಚಾತಿ ಕುಂಡ್ರುಸವ್ನೆ.'

'ಅದೇನಿದ್ರೂ ಮುಖ್ಯ ಮುಖ್ಯವಾದೋರೇ ಮಾಡ್ಕುಳುಕ್ ಹೇಳಪ್ಪ. ನಮ್ಮನಿಗೆ ನ್ಯಂಟ್ರು ಬಂದವ್ರೆ, ಅವ್ರು ಬರಾಕುಲ್ಲ ಅಂತ ಹೇಳು.'

'ಶ್ಯಾನುಬಾಗ್ರು ಬರ್ಲೇಬೇಕಂತೆ. ಯಲ್ಲಾ ಕರ್ಕಂಬರಾಕೆ ಏಳವ್ರೆ.'

ಗ್ರಾಮದ ನ್ಯಾಯ ಪಂಚಾಯಿತಿಗಳಲ್ಲಿ ಶ್ಯಾನುಭೋಗರು ಇರಬೇಕೆಂಬುದೇನೋ ಪದ್ಧತಿ. ಚೆನ್ನಿಗರಾಯರನ್ನು ನ್ಯಾಯಸ್ಥಾನದಲ್ಲಿ ಕೂರಿಸಿದರೆ ಹಿಟ್ಟು, ತರಿ, ಯಾವುದೂ ತಿಳಿಯುವುದಿಲ್ಲವೆಂಬುದು ಎಲ್ಲರಿಗೂ ಗೊತ್ತು. ಎಂಥವರೇ ಆದರೂ ಕರಣಿಕರೆಂಬುವವರು ಇರಲೇಬೇಕಲ್ಲ. ಚೆನ್ನಿಗರಾಯರು ಹೊರಟರು. ಭಾವನ ಹಿಂದೆ ಕಲ್ಲೇಶನೂ ಹೋದ.

ಚನ್ನಸೆಟ್ಟಿಯ ಮನೆಯ ಒಳ ಅಂಗಳದಲ್ಲಿ ಗ್ರಾಮದ ಮುಖ್ಯರೆಲ್ಲ ಸೇರಿದ್ದರು. ಪಟೇಲ ಶಿವೇಗೌಡ, ಅವನ ಭಾಮೈದ ಮಾಜೀ ಶ್ಯಾನುಭೋಗ ಸಿವಲಿಂಗ, ರೇವಣ್ಣಸೆಟ್ಟಿ, ನಾಲ್ಕು ಜನ ಪಂಚಾಯ್ತಿ ಮೆಂಬರುಗಳು, ಇಬ್ಬರು ಜೋಯಿಸರೇ ಅಲ್ಲದೆ ಇತರ ಹತ್ತು ಹದಿನೈದು ಜನ ಸೇರಿದ್ದರು. ಎಲ್ಲರಿಗೂ ಎಲೆ, ಅಡಿಕೆ, ಹೊಗೆಸೊಪ್ಪು ಬೀಡಿಗಳನ್ನು ತಂದು ಮುಂದೆ ಇಟ್ಟಿದ್ದರು. ಪಂಚಾಯ್ತಿಯನ್ನು ಶುರುಮಾಡುವ ಮೊದಲು ನ್ಯಾಯಪೀಠದಲ್ಲಿ ಯಾರು ಕೂರಬೇಕೆಂಬ ಪ್ರಶ್ನೆ ಎದ್ದಿತು. ಶ್ಯಾನುಭೋಗರು ಎಂದು ಯಾರೋ ಎಂದುದಕ್ಕೆ ಪಟೇಲ ಶಿವೇಗೌಡ, 'ಆ ಮಂಕಪ್ಪುಂಗೇನ್ ತಿಳೀತೈತೆ?' ಎಂದ. ಪಟೇಲರು ಎಂದು ಮತ್ತೊಬ್ಬರು ಸೂಚಿಸಿದುದಕ್ಕೆ ರೇವಣ್ಣಶೆಟ್ಟಿ ವಿರೋಧಿಸಿದ. 'ಸ್ಥಳದೋರು ಯಾರೂ ಬ್ಯಾಡ. ಪೋಲೀಸ್ನಲ್ಲಿದ್ದೋರು, ಶ್ಯಾನುಭೋಗರ ಭಾಮೈದ ಕಲ್ಲೇಶದೋಸರು ಆಗ್ಲಿ' – ಎಂದು ಫಿರ್ಯಾದಿ ಗಿರಿಯನೇ ಸೂಚಿಸಿದುದಕ್ಕೆ ಎಲ್ಲರೂ ಒಪ್ಪಿದರು. ಎಲ್ಲರ ಅಭಿಮತದ ಮೇರೆಗೆ ಕಲ್ಲೇಶ ಮಧ್ಯದ ಜಾಗದಲ್ಲಿ ಕುಳಿತು ಹೊಗೆಸೊಪ್ಪು ಹಾಕಿಕೊಂಡು ಕೇಳಿದ: 'ಈಗ ನ್ಯಾಯ ಏನು? ಯಾರಿಗೆ ಅನ್ಯಾಯ ಆಗಿದೆ, ಸಭೆ ಮುಂದೆ ಹೇಳಿ.'

ಗಿರಿಯಶೆಟ್ಟಿ ಹೇಳಿದ: 'ನಮ್ಮಪ್ಪ ನನ್ನ ಹೆಂಡ್ತೀನ ಮಡೀಕಂಡವ್ನೆ. ಇಬ್ರಿಗೂ ದಂಡ ಆಕುಸ್ಬೇಕು.'

'ನಿಮ್ಮಪ್ಪ ಯಾರು?'

'ಅವ್ನೇಯ, ಅಲ್ಲಿ ಕುಂತಿರೋ ಅಲಾಲ್‌ಕೋರ ನನ್ಮಗ' – ಎಂದು ಗಿರಿಯ, ಕಂಬದ ಹತ್ತಿರ ತಲೆ ತಗ್ಗಿಸಿ ಕುಳಿತಿದ್ದ ಚನ್ನಶೆಟ್ಟಿಯ ಕಡೆಗೆ ಕೈತೋರಿಸಿದ.

ಕಲ್ಲೇಶ ವಿವರವಾಗಿ ವಿಚಾರಿಸಿದಾಗ ತಿಳಿಯಿತು; ಗಿರಿಯಶೆಟ್ಟಿ ಹೊಲಕ್ಕೆ ಗೇಯಲು ಹೋಗುತ್ತಾನೆ. ಚನ್ನಶೆಟ್ಟಿ ಯಾವಾಗಲೂ ಅಂಗಡಿಯಲ್ಲಿ ಕೂತು ವ್ಯಾಪಾರ ಮಾಡುತ್ತಾನೆ. ಮನೆಯ ಜಗುಲಿಯ ಮೇಲೆ ಅಂಗಡಿ ಇದೆ ಗಿರಿಯನ ಹೆಂಡತಿ ನರಸಿ ಮನೆಯಲ್ಲೇ ಇರುತ್ತಾಳೆ.ಅವಳ ಮದುವೆಯಾಗಿ ಎಂಟು ವರ್ಷವಾಯಿತಂತೆ. ಇಂತಹ ನ್ಯಾಯಗಳಲ್ಲಿ ಪ್ರತಿಯೊಬ್ಬರ ವಿವರವನ್ನೂ, ಹೇಳಿಕೆಯನ್ನು ಕೇಳಿ ತಿಳಿದು ಕೊಳ್ಳಬೇಕೆಂದು ಕಲ್ಲೇಶ ಹೇಳಿದ.

ಚನ್ನಸೆಟ್ಟಿಯ ಹೆಂಡತಿ ಸತ್ತು ಇಪ್ಪತ್ತು ವರ್ಷವಾಯಿತು. ಅವನು ಮತ್ತೆ ಮದುವೆ ಮಾಡಿಕೊಳ್ಳಲಿಲ್ಲ. ತಾಯಿ ಇಲ್ಲದೆ ಬೆಳೆದ ಗಿರಿಯಶೆಟ್ಟಿ ಸ್ವಲ್ಪ ಪೀಚು ಅಂತಲೇ ಅನ್ನಬೇಕು.

ಕಲ್ಲೇಶ ಚನ್ನಶೆಟ್ಟಿಯ ಹೇಳಿಕೆ ಕೇಳಿದ. ತಲೆ ತಗ್ಗಿಸಿಕೊಂಡೇ ಅವನು ಹೇಳಿದ: 'ಸ್ವಾಮಿ, ನಾನು ಸನಿ ಸೂಳೆ ಮಗುನ್ನ ಎತ್ತ ಹಂಗಾತು. ನನ್ನ ಮರ್ವಾದಿ ಕಳೀಬೇಕು ಅಂತ, ಏಳ್ಕೊಟ್ಟೋರ ಮಾತು ಕೇಳ್ಕಂಡು ಈ ನನ್ಮಗ ಹಿಂಗ್ ನ್ಯಾಯ ಕುಂಡ್ರಸವ್ನೆ. ನನ್ನ ಅಂಗ್ಡಿ ಸಂಪಾದ್ನೇಲಿ ಈ ಪಾಪರ್ ನನ್ ಮಗುಂಗೆ ಒಂದು ದಮ್ಡಿ ಕೊಡಾಕುಲ್ಲ. ನನ್ ಜಮೀನು ಕೊಡಾಕುಲ್ಲ. '

'ನಮ್ಮವ್ವಾಣೆ ನಾ ಸುಳ್ ಏಳಾಕುಲ್ಲ. ನಾನೇ ಕಂಡಿದ್ದೀನಿ' – ಎಂದು ಗಿರಿಯ ಶೆಟ್ಟಿ ಪ್ರಮಾಣ ಮಾಡಿದ.

'ಆಯ್ತು, ನಿನ್ನ ಹೆಂಡ್ತೀ ಹೇಳಿಕೇನೂ ಕೇಳ್ಬೇಕು, ಕರಿ ಇಲ್ಲಿ' – ನ್ಯಾಯಪೀಠದ ಕಲ್ಲೇಶ ಕೇಳಿದ.

'ಬಾರಮ್ಮಾ ಇಲ್ಲಿಗೆ' – ಎಂದು ಅಯ್ಯಾಶಾಸ್ತ್ರಿಗಳು ಕೂಗಿದರು. ನರಸಿ ಬರಲಿಲ್ಲ. 'ನ್ಯಾಯ ಕರೀತೈತೆ. ಬರ್ಬೇಕು' – ಎಂದು ಅವರು ಒತ್ತಾಯ ಮಾಡಿದರು. ಶಾನುಭೋಗ ಚೆನ್ನಿಗರಾಯರ ಬಾಯಿಯಲ್ಲಿ ಹೊಗೆಸೊಪ್ಪಿನ ರಸವಿಲ್ಲವಾದುದರಿಂದ ಅವರು, 'ಹೂಂ' ಎಂದರು. ನರಸಿ ಅಡಿಗೆಮನೆಯ ಬಾಗಿಲಿನ ಹತ್ತಿರ ಬಂದು ನಿಂತುಕೊಂಡಳು. ಈ ಊರಿನಲ್ಲಿ ಅವಳನ್ನು ನೋಡದವರು ಯಾರೂ ಇಲ್ಲ. ಕಲ್ಲೇಶ ಅವಳನ್ನು ನೋಡಿದ ತಕ್ಷಣ ಬೆರಗಾಗಿಬಿಟ್ಟ. ಕೆಂಪಗೆ, ಗುಂಡು ಮುಖದ, ಗತ್ತುಗಾರಿಕೆ ಎದೆಯ, ಎತ್ತರವಾದ ಅವಳು

ನಿಂತ ರೀತಿಯಲ್ಲಿಯೇ ಏನೆಂದು ನ್ಯಾಯ ಹೇಳಬೇಕೆಂಬುದು ಅವನಿಗೆ ತಿಳಿಯದಂತೆ ಆಯಿತು. ಅವಳು ಬಂದು ನಿಂತಮೇಲೆ ಅಯ್ಯಶಾಸ್ತ್ರಿಗಳು ಹೇಳಿದರು: 'ಅಮ್ಮಾ, ಗಂಡನ ತಂದೆ ಮಾವ ಅಂದ್ರೆ ತಂದೆ ಸಮಾನ, ಸೊಸೆ ಅಂದ್ರೆ ಮಗಳ ಸಮಾನ. ಇದೆಲ್ಲಾದ್ರೂ ಉಂಟೆ? ಹೀಗಾದ್ರೆ ಮಳೆ ಬೆಳೆ ಆಗುತ್ತೆಯೆ? ನಾನ್ಹೇಳೋದು ಗೊತ್ತಾಗ್ಹೋಯ್ತು? ಆಂ, ಏನಯ್ಯಾ ಚೆನ್ನಶೆಟ್ಟಿ?'
ಅಣ್ಣಾಜೋಯಿಸರು ಮಂತ್ರಗಳನ್ನೇ ಹೇಳಿ ಧರ್ಮಾಧರ್ಮ ವಿವೇಚನೆಯ ಬಗೆಗೆ ವ್ಯಾಖ್ಯಾನ ಶುರುಮಾಡಿದರು. ಈ ಇಬ್ಬರು ಪುರೋಹಿತರ ಧರ್ಮಸೂಕ್ಷ್ಮ ಜ್ಞಾನಕ್ಕೆ ಉಳಿದವರೆಲ್ಲ ತಲೆಹಾಕುತ್ತಿದ್ದರು. ಶಾನುಭೋಗ ಚೆನ್ನಿಗರಾಯರು ಅದೇ ತಾನೇ ಬಾಯಿಗೆ ತುಂಬಿಕೊಂಡ ಹೊಗೆಸೊಪ್ಪಿನ ಸ್ವಾದವನ್ನು ತಮ್ಮಲಿ ಲ್ಲಿಯೇ ಸವಿಯುತ್ತಿದ್ದರು. ಆದರೆ ರೇವಣ್ಣಶೆಟ್ಟಿ ಹೇಳಿದ: 'ಉಳಿದೋರ ಮಾತು ಬ್ಯಾಡಿ, ಆ ವಮ್ಮ ಏನಂತಾಳೆ ಕೇಳಿ,'
'ಹೂಂ, ಹೂಂ. ನೀನೇನಂತೀಯಾ ಹೇಳಮ್ಮ' – ಕಲ್ಲೇಶ ಹೇಳಿದ.
'ಸ್ವಾಮಿಯೋರೇ, ನೀವು ಈಟೊಂದೆಲ್ಲ ಏಳ್ತೀರಲಾ, ನಾನೊಂದ್ ಕೇಳ್ತೀನಿ ಜವಾಬ್ ಕೊಡ್ತೀರಾ?' – ನರಸಿ ಪುರೋಹಿತದ್ವಯರನ್ನು ಕೇಳಿದಳು.
'ಕೇಳು, ಕೇಳು. ಅಗತ್ಯವಾಗಿ ಕೇಳು' – ಇಬ್ಬರೂ ಕೂಡಿ ಎಂದರು.
'ಅನ್ನೆಲ್ಡಾಳುದ್ದ ಬಾವಿಗೆ ಆರಾಳುದ್ದ ಅಗ್ಗ ಬುಟ್ರೆ ಎಟುಕ್ತೈತಾ?'
'ಆಂ' – ಉತ್ತರ ಹೊಳೆಯದೆ ಅಯ್ಯಾಶಾಸ್ತ್ರಿಗಳು ಕಕ್ಕಾವಿಕ್ಕಿಯಾದರು. ಉಳಿದ ಪಂಚಾಯಿತರೆಲ್ಲ ಸ್ತಬ್ಧರಾಗಿಬಿಟ್ಟರು. ರೇವಣ್ಣಶೆಟ್ಟಿ ಕಲ್ಲೇಶನಿಗೆ ಹೇಳಿದ: 'ಸ್ವಾಮಿ, ಇನ್ನು ತೀರ್ಮಾನ ಏಳ್ಬುಡಿ.'
'ಈ ಮುಂಡೆಕುಟ್ಟೆ ನಾನು ಇನ್ ಇರಾಕುಲ್ಲ' – ಎಂದು ಗಿರಿಯಶೆಟ್ಟಿ ತನ್ನ ಷರತ್ತು ಹಾಕಿದ.
ಕಲ್ಲೇಶ ಐದು ನಿಮಿಷ ಯೋಚಿಸಿ ತೀರ್ಮಾನ ಹೇಳಿದ: 'ಹೆಂಡ್ತಿ ಜೊತೆ ಇನ್ನು ಇರುಲ್ಲ ಅಂತ ಗಂಡ ಹೇಳ್ತಾನೆ. ಅವ್ನ ಇಚ್ಛೆಗೆ ವಿರೋಧವಾಗಿ ಇರು ಅಂತ ಹೇಳುವುದೂ ನ್ಯಾಯವಲ್ಲ. ಆದ್ರೆ ಮಾವ ಸ್ವಸೆ ಇಬ್ರಿಗೂ ಸಂಬಂಧ ಇದೆ ಅಂತ ಅವನಂತಾನೆ. ಅದು ಸುಳ್ಳು ಅಂತ ಚನ್ನಶೆಟ್ಟಿ ಪ್ರಮಾಣ ಮಾಡಿದಾನೆ. ಇಲ್ಲದ್ದನ್ನ ಒಬ್ಬ ಮನುಷ್ಯನ ಮ್ಯಾಲೆ ಹೇಳ್ಬಾರ್ದು. ಆದ್ರೂ ಆ ಮಗುಂಗೆ ಸಮಾಧಾನವಾಗ್ಲಿ ಅಂತ ಸ್ವಸೆ ಮಾವ ಬ್ಯಾರೆ ಬ್ಯಾರೆ ಇರೂಹಾಗೆ ಮಾಡಬೇಕು. ಆದ್ರೆ ಗಂಡ ಅವ್ಳಕುಟ್ಟೆ ಇರುಲ್ಲ ಅಂತ ಆಗ್ಲೇ ಹೇಳಿಬಿಟ್ಟಿದ್ದಾನೆ. ಆದ್ರಿಂದ ಅವ್ಳು ಒಬ್ಳೇ ಬ್ಯಾರೆ ಒಂದು ಮನ್ಲಿ ಇರ್ಲಿ. ತನ್ನ ಸ್ವಸೆಯೇ ಆದದ್ದರಿಂದ ಚನ್ನಶೆಟ್ಟಿ ಅವಳಿಗೆ ಒಂದು ಸಣ್ಣ ಮನೆ ಕಟ್ಟಿಸಿ ಕೊಡಲಿ. ಇನ್ನು ಅಪ್ಪ ಮಗ ತಮಗೆ ತಿಳಿದ ಹಾಗೆ ಇರಭೌದು.'
ಈ ತೀರ್ಮಾನದ ಧರ್ಮಸೂಕ್ಷ್ಮ ಉಳಿದವರಿಗೆ ತಿಳಿಯಲಿಲ್ಲ. ಅವರು ಕಕ್ಕಾವಿಕ್ಕಿಯಾದರು.
'ಇದೇನು ನ್ಯಾಯ?' – ಎಂದು ಶಿವೇಗೌಡ ಪ್ರಶ್ನಿಸಿದ.
'ಕಲ್ಲೇಶಪ್ನೋರುನ್ನ ನ್ಯಾಯಪೀಠದಾಗೆ ಕುಂಡ್ರುಸಿದೀವಿ. ಅವ್ರು ಏಳಿದ್ದ ಕೇಳ್ಬಿಡ್ಬೇಕು. ಯಾರೂ ದೂಸ್ರಾ ಮಾತಾಡ್ಬ್ಯಾಡ್ದು. ನೀನು ಸುಮ್ಕೆ ಒಪ್ಕಳಮ್ಮಾ, ನಾನ್ಹೇಳ್ತೀನಿ' – ಎಂದು ರೇವಣ್ಣಶೆಟ್ಟಿ ನರಸಿಯ ಕಡೆಗೆ ತಿರುಗಿ ಹೇಳಿದ.
'ನಾಕು ಜನ ಯಜಮಾನ್ರು ಏಳಿದ್ಕುಕ್ಕೆ ನಾನ್ ಹ್ಯಂಗೆ ವಲ್ಲೆ ಅನ್ಲಿ?' – ಎಂದು ನರಸಿ ನ್ಯಾಯನಿರ್ಣಯವನ್ನು ಧರಿಸಿದಳು.
ಇನ್ನು ಮತ್ತೆ ಏನಾದರೂ ಮಾತುಕತೆ ಆಗುವ ಮೊದಲೇ ರೇವಣ್ಣಶೆಟ್ಟಿ ಮೇಲೆ ಎದ್ದ. ಕಲ್ಲೇಶನೂ ನ್ಯಾಯಪೀಠದಿಂದ ಎದ್ದುನಿಂತ. ಇನ್ನು ಎಲ್ಲರೂ ಜಾಗ ಬಿಟ್ಟರು.
ಮನೆಗೆ ಬಂದಮೇಲೆ ಚೆನ್ನಿಗರಾಯರು ಕಲ್ಲೇಶನನ್ನು ಕೇಳಿದರು: 'ಅವ್ಳು ಅದೇನೋ ಅಂದ್ಲಲಾ, ಏನು?'
'ತಿಳೀಲಿಲ್ವೆ?'
'ಇಲ್ಲ'
'ಅದ್ಕೇ ನಿನ್ನ ನ್ಯಾಯತೀರ್ಮಾನಕ್ಕೆ ಕೂರುಸ್ಲಿಲ್ಲ, ತಿಳೀದೇ ಇದ್ರೆ ಏನೂ ಪರವಾಗಿಲ್ಲ. ನಿಂಗ್ಯಾಕೆ ಬಿಡು.'
ಚೆನ್ನಿಗರಾಯರು ಇನ್ನೊಮ್ಮೆ ಹೊಗೆಸೊಪ್ಪು ತಿಕ್ಕಿ ಬಾಯಿಗೆ ಹಾಕಿಕೊಂಡರು.
– 2 –
ರೇವಣ್ಣಶೆಟ್ಟಿ ಇಸ್ಪೀಟಿಗೆ ಹೋಗುತ್ತಿದ್ದುದು ಕೋಡೀಹಳ್ಳಿಗೆ. ಗ್ರಾಮದ ಪಟೇಲ ಚಿಕ್ಕೇಗೌಡನ ಮನೆಯ ಮುಂಭಾಗದ ದನ ಕಟ್ಟುವ ಸಾಲೆಯ ಅಟ್ಟದ ಮೇಲೆ ಇಸ್ಪೀಟಿಗೆ ಅನುಕೂಲವಾದ ಜಾಗವಿದೆ. ಚಿಕ್ಕೇಗೌಡ ರೇವಣ್ಣಶೆಟ್ಟಿಯರೇ ಅಲ್ಲದೆ ಕಂಬನಕೆರೆಯ ಚೇರ್‌ಮನ್ ಲಿಂಗದೇವರು, ಶೆಂದಿ ಕಂಟ್ರಾಕ್ಟರ್ ಚಿನ್ನಸ್ವಾಮಿ, ಚರ್ಮದ ವ್ಯಾಪಾರಿ ಹಯಾತ್‌ಸಾಬಿ ಮೊದಲಾದವರು ಅಲ್ಲಿ ಸೇರುವುದುಂಟು.
ಒಂದು ದಿನ ಮಧ್ಯಾಹ್ನ ರೇವಣ್ಣಶೆಟ್ಟಿ ಚಿಕ್ಕೇಗೌಡನನ್ನು ಕೇಳಿದ; 'ಒಂದ್ ಐವತ್ ರೂಪಾಯಿ ಇದ್ರೆ ಕೊಟ್ಟಿರಣ್ಣಾ, ಕೊಪ್ರಿ ಹಾಕ್ ಕೊಡ್ತೀನಿ.'

‘ನೀನ್ ಇಲ್ಲೀಗಂಟ ಇಸ್ಕಂಡುದ್ ಏಟಾಗೋಗ್ಯೆತೆ. ಇನ್ ನನ್ ತವ್ವ ದುಡ್ಡಿಲ್ಲ.’
‘ಏ, ಹಂಗನ್ಬ್ಯಾಡಿ ಕೊಡ್ರಣ್ಣ.’
ಇವನಿಗೆ ಸಾಲ ಕೊಡುವುದರಿಂದ ಚಿಕ್ಕೇಗೌಡನಿಗೆ ನಷ್ಟವಾಗುತ್ತಿರಲ್ಲಿಲ್ಲ. ಆ ಹಣದ ಒಂದು ಪಾಲು ಆಟದಲ್ಲಿ ಅವನಿಗೇ ಬರುತ್ತಿತ್ತು. ಪ್ರೋನೋಟಿನ ಫಾರಂ ಮತ್ತು ರೆವಿನ್ಯೂಸ್ಟಾಂಪುಗಳು ಲೇವಾದೇವಿಯ ಚಿಕ್ಕೇಗೌಡನ ಹತ್ತಿರವೇ ಇರುತ್ತಿದ್ದುವು. ಅದರ ಮೇಲೆ ಐವತ್ತು ರೂಪಾಯಿ ಮೊಬಲಗು, ತಾರೀಖು ಮತ್ತು ರೇವಣ್ಣಶೆಟ್ಟಿಯ ರುಜು ಹಾಕಿಸಿಕೊಂಡು ಒಂದು ವರ್ಷದ ಬಡ್ಡಿ ಆರು ರೂಪಾಯಿ ಕಟಾಯಿಸಿ ನಲವತ್ತನಾಲ್ಕು ರೂಪಾಯಿಯನ್ನು ಕೊಟ್ಟಾಗ ಅದು ಒಂದು ಸಲ ರೇವಣ್ಣಶೆಟ್ಟಿಯ ಜೇಬಿನ ಒಳಗೂ ಹೋಗಿ ಬರಲಿಲ್ಲ. ನೇರವಾಗಿ ಆಟದ ಚಾಪೆಯ ಮೇಲೆ ಕುಳಿತಿತು. ನಲವತ್ತನಾಲ್ಕು ರೂಪಾಯಿ ತೀರ ಸಣ್ಣ ಗಂಟಾದುದರಿಂದ ಅವನು ಮೂರೆಲೆ ಹಾಕಲು ಒಪ್ಪಲಿಲ್ಲ. ಒಂದು ರೂಪಾಯಿ ಮೇಜು ಹಾಕಿ ಇಪ್ಪತ್ತೆಂಟು ಶುರು ಮಾಡಿದರು. ಆ ದಿನ ಇನ್ನು ಯಾರೂ ಆಟಕ್ಕೆ ಬರಲಿಲ್ಲವಾದುದರಿಂದ ರೇವಣ್ಣಶೆಟ್ಟಿ, ಚಿಕ್ಕೇಗೌಡ, ಇಬ್ಬರೇ ಆಡಿದರು. ಸಂಜೆ ಆರು ಗಂಟೆಯ ಹೊತ್ತಿಗೆ ನಲವತ್ತನಾಲ್ಕು ರೂಪಾಯಿಯೂ ಚಿಕ್ಕೇಗೌಡನ ಕಡೆಗೆ ಹೋಯಿತು. ಆದರೆ ಮತ್ತೆ ಆಡಿ ಅದನ್ನು ಗೆಲ್ಲುವ ಹಟ ರೇವಣ್ಣಶೆಟ್ಟಿಯದು. ಹಾಗೆಯೇ ಸಾಲ ಕೊಡುವುದಿಲ್ಲವೆಂದು ಗೌಡ ಹೇಳಿಬಿಟ್ಟ. ‘ಭಾಂಚೋತ್ ನನ್ಮಗುಂದು. ಆದುದ್ ಆಯ್ತುಳೆ. ಇನ್ನೊಂದೈವತ್ತು ಕೊಡಿ. ಕಾಗದ ಬರಕೊಡ್ತೀನಿ’ – ಎಂದು ಪ್ರೋನೋಟಿಗೆ ರುಜು ಹಾಕಿ ಮತ್ತೆ ನಲವತ್ತನಾಲ್ಕು ರೂಪಾಯಿ ಇಸಕೊಂಡು ರಾತ್ರಿ ಹನ್ನೊಂದು ಗಂಟೆಯ ಹೊತ್ತಿಗೆ ಅದನ್ನೂ ಗೌಡನಿಗೆ ಒಪ್ಪಿಸಿ, ಪಕ್ಕದಲ್ಲಿದ್ದ ತನ್ನ ಚೌಕವನ್ನು ಕೊಡವಿ ಹೆಗಲಮೇಲೆ ಹಾಕಿಕೊಂಡು ಊರಿಗೆ ನಡೆದ.
ಮನೆಯಲ್ಲಿ ಸರ್ವಕ್ಕ ತನ್ನ ಐದು ಮಕ್ಕಳೊಡನೆ ಮಲಗಿ ನಿದ್ರಿಸುತ್ತಿದ್ದಳು. ಕದ ಬಡಿದು ಹೆಂಡತಿಯನ್ನು ಎಬ್ಬಿಸಿ, ಉಣ್ಣುವುದಕ್ಕೆ ನೀಡುವಂತೆ ಹೇಳಿದ. ಕಂಚಿನ ಗಂಗಾಳದಲ್ಲಿ ಆರಿದ ಮುದ್ದೆ ಕೊಮ್ಮೆಸೊಪ್ಪಿನ ಮಶಪ್ಪು ಸಾರುಗಳನ್ನು ಇಕ್ಕಿದ ಹೆಂಡತಿಯನ್ನು ಗದ್ದರಿಸಿದ; ‘ಬಿಶಿಯಾಗಿ ಮಾಡಾಕ್ ಏನಾಗಿತ್ತೇ?’
‘ಬಿಶಿಯಾಗಿ ಮಾಡಿ ಮಡಗಿದ್ದೆ. ನೀವೇಟೊತ್ತಿಗ್ ಬತ್ತಿರೋ ಆರಿ ಹೋಗ್ಯೆತೆ.’
‘ಅಯ್ಯೋ ನಿನ್ ಹೆತ್ತೋಳ್ನಾ, ನಾನೆಟೊತ್ತಿಗ್ ಬತ್ತೀನಿ ಅಂತ ಕೇಳಾಕ್ ನೀನ್ಯಾವಳೆ ಬೋಸುಡಿ ಭಾಂಚೋತ್? ಎದಿಗ್ ಒದ್ದು ಕೊಂದ್ಹಾಕ್‌ಬುಡ್ತೀನಿ ನೋಡು’ – ಎಂದು ಮುದ್ದೆಯನ್ನು ಸಾರಿನಲ್ಲಿ ಹೊರಳಿಸಿ ಬಾಯಿಗಿಟ್ಟುಕೊಂಡು ನುಂಗಿ, ಅದು ಗಟ್ಟಿಯಾಗಿ ಗಂಟಲಿನಿಂದ ಸುಲಭವಾಗಿ ಇಳಿಯದೆ ಕಷ್ಟವಾಗಲು, ಮೇಲೆ ಎದ್ದು ಅವಳನ್ನು ಒಂದು ಸಲ ಒದೆದು, ‘ಬಿಶಿಯಾಗ್ ಅನ್ನ ಮಾಡು’ ಎಂದ.
‘ಅಕ್ಕಿ ಇಲ್ವಲ್ಲ’ – ನೋವಿನಿಂದ ಬರುತ್ತಿದ್ದ ಅಳುವಿನ ಮಧ್ಯೆ ಅವಳು ಬಿಕ್ಕಿದಳು.’
‘ಯಾವಾಗ ಕೇಳಿದ್ರೂ ಇಲ್ಲ ಇಲ್ಲ ಅಂತೀಯ ದರಿದ್ರದ ಮುಂಡೆ’ – ಎಂದು ಇನ್ನೊಂದು ಸಲ ಅವಳನ್ನು ಒದೆದು, ಗಂಗಾಳದಲ್ಲಿದ್ದ ಒಣಗಿದ ಮುದ್ದೆಯನ್ನೇ ಮುರಿದು ನುಂಗಿ ಹೋಗಿ ಮಂಚದ ಮೇಲೆ ಪವಡಿಸಿದ. ಸರ್ವಕ್ಕ ಗಂಗಾಳ ತೊಳೆದಿಟ್ಟು ಕೆಳಗೆ ನೆಲದ ಮೇಲೆ ಕೊನೆಯ ಮಗು ರುದ್ರೇಶನ ಜೊತೆ ಮಲಗಿಕೊಂಡಳು.

– 3 –

ತನಗೆ ತಿಳಿಯದಿದ್ದಾಗ ನಂಜಮ್ಮನೇ ಪುಸ್ತಕಗಳನ್ನು ಕುಳವಾಡಿ ನಿಂಗನ ಕೈಲಿ ಹೊರಿಸಿ ಕೊಂಡು ತಿಮ್ಲಾಪುರಕ್ಕೆ ಹೋಗುತ್ತಿದ್ದಳು. ದ್ಯಾವರಸಯ್ಯನವರು ಹೇಳಿಕೊಟ್ಟು, ಲೆಕ್ಕದಲ್ಲಿ ಒಂದಕ್ಕೂ ಮತ್ತೊಂದಕ್ಕೂ ಇರುವ ತಾಳೆಯನ್ನೂ ತೋರಿಸಿ ಮನದಟ್ಟು ಮಾಡಿಸುತ್ತಿದ್ದರು. ವಸೂಲಿ ಮಾಡುವಾಗ ಸಾಮಾನ್ಯವಾಗಿ ಗ್ರಾಮದ ಪಟೇಲರು ಎದುರಿಗಿರುತ್ತಿದ್ದರು. ರಾಮಸಂದ್ರದ ವಸೂಲಿಯನ್ನಂತೂ ಶಿವೇಗೌಡ ತನ್ನದೆಂದೇ ಹೇಳಿದ. ‘ಕಂದಾಯದ ವಸೂಲಿ ಏನಿದ್ರೂ ಪಟೇಲ್ರುದ್ದು. ಶಾನುಬಾಗ ಪಟೇಲ ಏಳ್ದಂಗೆ ಲ್ಯಕ್ಕ ಬರ್ಕಂಡ್ ಬಿದ್ದಿರ್ಬೇಕು’ – ಎಂಬುದು ಅವನ ಧೋರಣೆಯಾಗಿತ್ತು. ಅವನನ್ನು ವಿರೋಧಿಸುವ ಶಕ್ತಿ ಇಲ್ಲದುದರಿಂದ ಆ ಊರಿನಲ್ಲಿ ಹಾಗೆಯೇ ನಡೆಯುತ್ತಿತ್ತು. ಮಿರಾಶೆ ಹಣ ಪಟೇಲನಿಗೆ ಹೋಗಿ ಇವರಿಗೆ ಒಂದು ಆಣೆಯೂ ಸಿಕ್ಕುತ್ತಿರಲಿಲ್ಲ. ಈ ಗ್ರಾಮದಲ್ಲಿ ಯಾವುದಾದರೂ ಖರೀದಿ, ಆಧಾರ, ಮೊದಲಾದ ರಿಜಿಸ್ಟ್ರಿಗಳಾಗಬೇಕಾದರೆ ಜನಗಳು ಮಾಜಿ ಹಂಗಾಮಿ ಶಾನುಭೋಗ ಸಿವಲಿಂಗನ ತಾವ ಹೋಗುತ್ತಿದ್ದರೇ ವಿನಾ ಚನ್ನಿಗರಾಯರನ್ನು ಮೂಸುತ್ತಿರಲಿಲ್ಲ. ಚನ್ನಿಗರಾಯರಿಗೆ ಸರಿಯಾಗಿ ದಸ್ತಾವೇಜು ಬರವಣಿಗೆ ಬರುವುದಿಲ್ಲವೆಂಬುದು ಒಂದು ಕಾರಣವಾದರೆ, ‘ಆ ವಯ್ಯನ ತಾವ ಬರುಸ್ಕಂಡು ಅದ್ಯಾವ್ನು ರಿಕಾಲ್ಡು ದಕ್ಕುಸ್ಕತ್ತಾನ್ಲಾ?’ – ಎಂದು ಪಟೇಲ ಹೆದರಿಸುದ್ದುದು ಇನ್ನೊಂದು ಕಾರಣವಾಗಿತ್ತು. ಸಿವಲಿಂಗನಿಗಿಂತ ನಂಜಮ್ಮ ರಿಜಿಸ್ಟ್ರಿ ಕಾಗದ ಪತ್ರಗಳನ್ನು ಚೆನ್ನಾಗಿ ಬರೆಯಬಲ್ಲಳಾದರೂ, ಸರ್ಕಾರೀ ಪತ್ರವನ್ನು ಹೆಂಗಸಿನ ಕೈಲಿ ಬರೆಸಿದರೆ ಊರ್ಜಿತವಾಗುವುದಿಲ್ಲವೆಂಬ ನಂಬಿಕೆ ಬೇರೆ, ಹೀಗಾಗಿ ರಾಮಸಂದ್ರದಿಂದ ಮೂರು ಕಾಸಿನ ಸಂಪಾದನೆಯೂ ಆಗುತ್ತಿರಲಿಲ್ಲ. ಕುರುಬರಹಳ್ಳಿಯದೇ ಒಂದು ನೆಚ್ಚಿಗೆ. ಪಟೇಲ ಗುಂಡೇಗೌಡರು ವಸೂಲಿಯ ದಿನ ಕೂಡುತ್ತಿದ್ದರೂ ಅದನ್ನು ಮಾಡುತ್ತಿದ್ದವರು ಚನ್ನಿಗರಾಯರೇ. ಕುಳುವಾರು ಅವರವರ ಕಂದಾಯಕ್ಕೆ ತಕ್ಕಂತೆ ಗುಂಡೇಗೌಡರೇ ಶ್ಯಾನುಭೋಗರ ಮಸಿಕಾಣಿಕೆ ಕೊಡಿಸುಬಿಡುತ್ತಿದ್ದುದೇ ಅಲ್ಲದೆ ತಾವೇ ಎರಡು ರೂಪಾಯಿ ಕೊಡುತ್ತಿದ್ದರು.

ಆ ಊರಿನಲ್ಲಿ ಒಟ್ಟು ನಲವತ್ತು ರೂಪಾಯಿ ವರಮಾನವಿತ್ತು. ಅಲ್ಲದೆ ಇವರು ಬೇರೆಯಾದ ಮೇಲೆ ತಮ್ಮ ಗ್ರಾಮದಲ್ಲಿ ಸುಗ್ಗಿಯಲ್ಲಿ ಒಟ್ಟು ಖಂಡುಗ ರಾಗಿ ಐವತ್ತು ಸೇರು ಅವರೇಕಾಳು ಎತ್ತಿಕೊಡುವುದಾಗಿ ಗುಂಡೇಗೌಡರು ಹೇಳಿದ್ದರು. ಅದರಂತೆ ನಡೆಸುತ್ತಲೂ ಇದ್ದರು. ಕುರುಬರಹಳ್ಳಿಯಲ್ಲಿ ಖರೀದಿ, ಅಧಾರಪತ್ರಗಳು ಆಗುತ್ತಿದ್ದುದೇ ಅಪರೂಪ. ಆದುದರಿಂದ ಆ ಬಾಬ್ತು ಏನೂ ವರಮಾನವಿರಲಿಲ್ಲ. ಇವರ ಫಿರ್ಕಾದ ಇನ್ನೊಂದು ಊರಾದ ಲಿಂಗಾಪುರ ಮೂವತ್ತು ಹಳ್ಳಿಯ ಗ್ರಾಮ ಎಲ್ಲರೂ ತಕ್ಕಮಟ್ಟಿಗೆ ಅನುಕೂಲವಿದ್ದ ಜನರೇ. ಆದರೆ ಆ ಊರಿನವರಿಗೆ ರಾಮಸಂದ್ರದ ಶಿವೇಗೌಡನೊಡನೆ ದೂರದ ನಂಟು. ಶ್ಯಾನುಭೋಗನಿಗೆ ಯಾಕೆ ಮಸಿಕಾಣಿಕೆ ಕೊಡಬೇಕು ಎಂಬುದು ಶಿವೇಗೌಡನ ವಾದ ಅಲ್ಲಿಯವರಿಗೂ ಹಬ್ಬಿತು. ಪಟೇಲ ಪುರದಪ್ಪ ಅದು ತನಗೇ ಸೇರಬೇಕೆಂದು ಹಟಮಾಡಿದ. ಚನ್ನಿಗರಾಯರ ತಂದೆ ರಾಮಣ್ಣನವರು ಶ್ಯಾನುಭೋಗರಾಗಿದ್ದಾಗ ಈ ಊರಿನವರೆಲ್ಲ ಮನೆಗೆ ಒಂದು ರೂಪಾಯಿಯಂತೆ ಕೊಡುತ್ತಿದ್ದ ರಿವಾಜು ಇತ್ತು. ಅದಕ್ಕೆ ಗ್ರಾಮದ ಕೆಲವು ಹಿರಿಯರು ಇವತ್ತಿಗೂ ಸಾಕ್ಷಿ ಹೇಳುತ್ತಾರೆ. ಆದರೆ ಈಗ ಕಾಲ ಬದಲಾಯಿಸಿದೆ. ಹೀಗಾಗಿ ಆ ಊರಿನಲ್ಲಿಯೂ ಏನೂ ಮೇಲು ಸಂಪಾದನೆ ಆಗುತ್ತಿರಲಿಲ್ಲ. ನಂಜಮ್ಮ ಕುರುಬರಹಳ್ಳಿಯ ವಸೂಲಿಗೆ ಹೋಗುತ್ತಿದ್ದಳು. ಉಳಿದ ಎರಡು ಗ್ರಾಮಗಳದನ್ನು ಪಟೇಲರೇ ನೋಡಿಕೊಳ್ಳುತ್ತಿದ್ದರು. ಲೆಕ್ಕವನ್ನು ಮಾತ್ರ ಅವಳು ಮನೆಯಲ್ಲಿ ಕೂತು ಬರೆಯುತ್ತಿದ್ದಳು. ಜಮೀನಿನ ಮೇಲೆ ಹೋಗಿ ಪಹಣಿಯನ್ನೂ, ಕುಳಗಳನ್ನೇ ಕರೆಸಿ ಖಾನೀಷುಮಾರಿಯನ್ನೂ ಚೆನ್ನಿಗರಾಯರು ಗುರುತು ಹಾಕುತ್ತಿದ್ದರು. ಅದರ ಗೋಶ್ವಾರೆಯಿಂದ ಹಿಡಿದು ಜಮಾಬಂದಿಯ ಲೆಕ್ಕದವರೆಗೆ ಎಲ್ಲವನ್ನೂ ನಂಜಮ್ಮ ನಿಭಾಯಿಸುತ್ತಿದ್ದಳು. ತಿಳಿಯದುದಕ್ಕೆ ತಿಮ್ಲಾಪುರಕ್ಕೆ ಹೋಗಿಬರುತ್ತಿದ್ದಳು. ಚೆನ್ನಿಗರಾಯರು ಕೋಟು ಹಾಕಿ, ತಲೆಗೆ ರುಮಾಲು ಸುತ್ತಿ ಕೊರಳ ಸುತ್ತ ಮಡಿಸಿದ ಉತ್ತರೀಯ ಹೊದೆದು ಜಮಾಬಂದಿಗೆ ಹೋಗಿ ಕೈ ಕಾಲು ನಡುಗಿಸಿಕೊಂಡು ಹೆಡ್‌ಕ್ಲಾರ್ಕಿನ ಸಂಭಾವನೆ ಸಲ್ಲಿಸಿ ಸಾಹೇಬರ ರುಜು ಪಡೆದು ಗಂಡಸಿನಂತೆ ಊರಿಗೆ ಹಿಂತಿರುಗುತ್ತಿದ್ದರು. ಗ್ರಾಮಕ್ಕೆ ಶೇಕ್‌ದಾರರೋ ಅಮಲ್ದಾರರೋ ದಯಮಾಡಿಸಿದಾಗ, ನಂಜಮ್ಮ ಮಕ್ಕಳ ಬಾಯಿಕಟ್ಟಿ ಇಟ್ಟಿದ್ದ ತುಪ್ಪ ಹಾಕಿ, ಅನ್ನ ಸಾರು ಪಲ್ಯ ಹಪ್ಪಳಗಳನ್ನು ರುಚಿ ರುಚಿಯಾಗಿ ಮಾಡಿ ಬಡಿಸಿ – 'ನಾವು ಬಡವರು. ಲೆಕ್ಕದಲ್ಲಿ ತಪ್ಪಿದ್ದರೆ ಸ್ವಾಮಿಯೋರು ಸರಿ ಮಾಡಿಕೊಂಡು ಹೋಗಬೇಕು' ಎನ್ನುತ್ತಿದ್ದಳು. ಆದರೆ ಅದನ್ನು ಬರೆಯುತ್ತಿದ್ದವಳು ತಾನು ಎಂಬ ಗುಟ್ಟನ್ನು ಬಿಡುತ್ತಿರಲಿಲ್ಲ.

ಇದರ ಜೊತೆಗೆ ಈ ಗಂಡನನ್ನು ನಿಭಾಯಿಸುವುದೂ ಒಂದು ಕೆಲಸವಾಗಿತ್ತು. ವರ್ಷವೆಲ್ಲ ಕಷ್ಟಪಟ್ಟು ಇವಳು ಲೆಕ್ಕ ಬರೆದುಕೊಟ್ಟರೆ ಸಾಲಾಖೈರಿನಲ್ಲಿ ಪೋಟಿಗೆಗೆ ಹೋದ ಚೆನ್ನಿಗರಾಯರು ಹದಿನೈದು ದಿನ ಊರಿಗೆ ಬರಲೇ ಇಲ್ಲ. ಅನಂತರ ಬಂದವರು ಒಟ್ಟು ಐದು ರೂಪಾಯಿ ಇರುವುದಾಗಿ ಹೇಳಿದರು. ಅದನ್ನೂ ಹೆಂಗಸಾದ ಅವಳ ಕೈಗೆ ಕೊಡದೆ, ಗಂಡಸಾದ ತಾವು ತಿಪಟೂರಿನಿಂದ ತಂದಿದ್ದ ತಗಡಿನ ಪೆಟ್ಟಿಗೆಯಲ್ಲಿ ಇಟ್ಟು ಬೀಗ ಹಾಕಿ. ಬೀಗದ ಕೈಯನ್ನು ಉಡಿದಾರಕ್ಕೆ ನೇತುಹಾಕಿಕೊಂಡರು. ಅಮಲ್ದಾರರು, ಶಿರಸ್ತಾರರು, ಹೆಡ್ ಗುಮಾಸ್ತೆ, ಹೋಬಳಿ ಗುಮಾಸ್ತೆ, ಮತ್ತು ಜವಾನರಿಗೆಲ್ಲ ಕೊಡುವುದು ಕೊಟ್ಟ ಮೇಲಾದರೂ ಒಂದು ನೂರು ರೂಪಾಯಿಯಾದರೂ ಉಳಿಯಬೇಕು. ಅದರಲ್ಲಿ ಪಟೇಲ ಗುಂಡೇಗೌಡರ ಮುಂಗಡ ಕಂದಾಯ ಕಳೆದರೆ ಇನ್ನು ಐವತ್ತು ರೂಪಾಯಿ ಮನೆಗೆ ಬರಬೇಕು. ದುಡ್ಡೆಲ್ಲ ಏನಾಯಿತು? ಚೆನ್ನಿಗರಾಯರೇ ಹೇಳಿದರು; 'ನೀನು ಹಾಕೂ ಹಿಟ್ಟು ಅವರೇಬ್ಯಾಳೆ ಸಾರು ತಿಂದು ನಂಗೆ ಬಾಯಿ ಕೆಟ್ಟಿತ್ತು ಕಣೆ ಮುಂಡೆ. ಒಂದ್ ಹದಿನೈದು ದಿನ ಒಟ್ಟಾಗೆ ಆಲೂಗೆಡ್ಡೆ ನೀರುಳ್ಳಿ ಹುಳಿ, ವಡೆ, ದ್ವಾಸೆ, ಮೈಸೂರುಪಾಕ್ ತಿಂದ್ಕಂಡ್ ಹಾಯಾಗಿದ್ದೆ.'

'ನೀವೇನೋ ತಿಂದ್ಕಂಡಿದ್ರಿ. ಮನೇಲಿ ಮಕ್ಳು ಒಂದಿನವೂ ಮೈಸೂರುಪಾಕು ಕಣ್ಣಲ್ಲೂ ನೋಡಿಲ್ಲ. ನಿಮ್ಗೆ ಅದ್ ಹ್ಯಾಗೆ ನಾಲಿಗೆ ಬಂತು ತಿನ್ನೋಕೆ?'

ಚೆನ್ನಿಗರಾಯರಿಗೆ ಉತ್ತರ ತಿಳಿಯಲಿಲ್ಲ. 'ಮುಂಡೆ, ಥೂ ಮುಂಡೆ, ಮುಂಡೆ, ಮಾದರ್ಚೋದ್ ಮುಂಡೆ, ಮಾತಾಡ್ಬ್ಯಾಡ ಸುಮ್ನಿರೇ ಪೋಲಿ ಮುಂಡೆ' – ಎಂದು ಕೊಂಡು ಮಾದೇವಯ್ಯನವರ ಗುಡಿಗೆ ಹೊರಟುಹೋದರು. ಇನ್ನು ಇಡೀ ವರ್ಷ ಜೀವನ ಸಾಗಿಸುವುದು ಹೇಗೆ? ಮೂರನೇ ಮಗು ವಿಶ್ವನಿಗೆ ಈಗ ಎಂಟು ತಿಂಗಳು. ಅವಳ ಹೊಟ್ಟೆಯಲ್ಲಿ ಆಗಲೇ ಎರಡು ಮೂರು ತಿಂಗಳಿನ ಇನ್ನೊಂದು ಮಗುವಿದೆ. ಪೋಟಿಗೆ ಎಂದು ಕಾಣುವುದು ವರ್ಷಕ್ಕೊಂದು ಸಲ. ಅದೂ ಹೀಗೆ ಆಗಿಹೋದರೆ ಇನ್ನು ಮಕ್ಕಳು ಉಪವಾಸ ಸಾಯಬೇಕು. ದೊಡ್ಡವರಿಗಾದರೂ ದಿನಕ್ಕೆ ಎರಡು ಮುದ್ದೆ ಇಲ್ಲದಿದ್ದರೆ ಜೀವ ಶರೀರಕ್ಕೆ ಅಂಟಿಕೊಳ್ಳುವುದು ಹೇಗೆ? ಪೋಟಿಗೆ ನನಗೆ ಕೊಡಿ ಅಂತ ಸರ್ಕಾರ್ದೋರನ್ನ ಕೇಳಿದ್ರೆ ಏನಂತಾರೋ! ಇನ್ನೇನು ದಿಕ್ಕು? – ಎಂದು ಅವಳು ಎರಡು ದಿನ ಯೋಚನೆ ಮಾಡಿದಳು. ಕೊನೆಗೆ ಒಂದು ಉಪಾಯ ಹೊಳೆಯಿತು.

ಮರುದಿನ ಬೆಳಗ್ಗೆ ಎದ್ದು ಸ್ನಾನ ಮಾಡಿ ಮಕ್ಕಳಿಗೂ ಮಡಿ ಉಡಿಸಿ ರೊಟ್ಟಿ ಚಟ್ನಿ ಕೊಟ್ಟು, ಎರಡನೆಯ ರಾಮಣ್ಣ ಮತ್ತು ಹಿರಿಯ ಪಾರ್ವತಿಯನ್ನು ಮಗ್ಗದ ಬೀದಿಯ ಪುಟ್ಟವ್ವನ ಮನೆಯಲ್ಲಿ ಬಿಟ್ಟು ಕೈಯಿಯಲ್ಲಿ

ವಿಶ್ವನನ್ನು ಎತ್ತಿಕೊಂಡು ಕುರುಬರಹಳ್ಳಿಗೆ ಹೋದಳು. ಗುಂಡೇಗೌಡರ ಮನೆಗೆ ಹೋದರೆ ಒಳಗಿನ ಅಂಗಳದಲ್ಲಿ ಗಂಗಮ್ಮ ಒಂದು ಮಣೆಯ ಮೇಲೆ ಕುಳಿತಿದ್ದಾಳೆ. ಅವಳ ಮುಂದೆ ಹಾಸಿದ ಕೆಂಪಿನ ಸೀರೆಯ ಮೇಲೆ ಗೌಡರ ಹೆಂಡತಿ ಲಕ್ಕಮ್ಮ ಮೊರದಲ್ಲಿ ರಾಗಿ ಸುರಿಯುತ್ತಿದ್ದಾಳೆ. ಗೌಡರು ಗೋಡೆಯೊರಗಿ ಕೂತು ತಮ್ಮ ಎಲೆ ಅಡಿಕೆ ಚೀಲದೊಳಗೆ ಕೈ ಹಾಕಿ ಏನೋ ತಡಕುತ್ತಿದ್ದಾರೆ. ಸೊಸೆ ಅಲ್ಲಿಗೆ ಬಂದುದನ್ನು ನೋಡಿದ ಗಂಗಮ್ಮನಿಗೆ ಕೋಪ ಬಂತು. 'ನಾನು ತಿರುಪೆ ಮಾಡ್ಕಂಡ್ ಹೊಟ್ಟೆ ಹೊರೀತಿದೀನಿ. ಅದಕ್ಕೂ ಕಲ್ ಹಾಕುಕ್ಕೆ ಬಂದೆ ಏನೇ ತಾಟಗಿತ್ತಿ?' – ಎಂದು ಸಿಡಾರನೆ ಕೇಳಿದಳು. ನಂಜಮ್ಮ ಮಾತನಾಡದೆ ಸುಮ್ಮನೆ ನಿಂತುಬಿಟ್ಟಳು.

ಗೌಡರೇ – 'ಬಾರವ್ವಾ, ಈಚಿಕಡೀಕ್ ಬಾ. ಕುಂತ್ಕ' ಎಂದಮೇಲೆ ಹೋಗಿ ಚಾಪೆಯ ಮೇಲೆ ಕುಳಿತಳು. ಗಂಗಮ್ಮ ಸೀರೆಯಲ್ಲಿ ರಾಗಿ ಕಟ್ಟಿಕೊಂಡು ಎದ್ದು ಹೊರಟುಹೋದಳು. ಲಕ್ಕವ್ವ ಕೇಳಿದಳು: 'ನಿಮ್ಮತ್ತೆ ನಿಮ್ಮುನ್ನ ಎಲ್ಡು ಮಂಕ್ರಿ ದೂರಿದ್ಲಲ್ಲವ್ವಾ. ನೀನು ಅವ್ರ ಕಂಡ್ರೆ ಉರೀತೀಯಂತೆ, ಗಂಡುನ್ನ ಕೈಯಾಗೆ ಹಾಕ್ಯಂಡ್ ಕುಣಿಸ್ತೀಯಂತೆ. ನೀನೇ ಗಂಡ್ಸು ಅಂತ ಬೀದೀಲೆಲ್ಲ ತಿರುಗ್ತೀಯಂತೆ. ಇನ್ನು ಏನೇನೋ ಏಳಿದ್ಲು. ಸ್ಯಾನುಬಾಕೀಲಿ ಏನೂ ಪಾಲು ಕೊಡಾಕಿಲ್ವಂತೆ.'

'ಆ ಯಮ್ಮ ಅಂದ್ರೆ ಅಂದ್ಕತ್ಯೆತೆ. ನೀನ್ ಸುಮ್ಕುರು' – ಎಂದು ಹೆಂಡತಿಗೆ ಹೇಳಿದ ಗೌಡರು ಕೇಳಿದರು: 'ಏನವ್ವ ಬಂದ್ಬುಟ್ಟೆ, ಪೋಟಿಕೆ ಆಯ್ತಾ?'

'ಗೌಡ್ರೇ, ಅದುನ್ನೇ ನಿಮ್ ಕೈಲಿ ಹೇಳಾಣ ಅಂತ ಬಂದೆ' – ಎಂದು ನಂಜಮ್ಮ ಗಂಡ ಮಾಡಿದುದನ್ನೆಲ್ಲ ಹೇಳಿದಳು. 'ಆ ವಯ್ಯಂಗೆ ಇಡಕಂಡಿ, ಕುತ್ಕೆ ಚಂಡ್ ಬಗ್ಗಿಸ್ಕಂಡಿ, ಎಲ್ಡು ಇಡಬೇಕು' – ಲಕ್ಕವ್ವ ಎಂದಳು.

'ಇಡುದ್ರೆ ಅದುಕ್ ಬುದ್ದಿ ಬರಾಕಿಲ್ಲ. ಈಗ ಏನ್ ಮಾಡ್‌ಬೇಕು ನೀನೇ ಏಳವ್ವ, ನಿಂಗಿಂತಾ ನಂಗ್ ತಿಳೀತೈತಾ?'

'ಪೋಟಿಗೆ ಹಣ ಅವರ ಕೈಗೆ ಸಿಕ್ಕದ ಹಾಗೆ ಮಾಡಿದ್ರೆ ಸರಿಯಾಗುತ್ತೆ.'

'ಇನ್ನೇನು, ನಿನ್ ಕೈಲಿ ಕೊಡ್ತಾರಾ ಗೌರ್‌ಮೇಟ್‌ನೋರು?'

'ಅದು ಬ್ಯಾಡ. ಒಟ್ಟು ಪೋಟಿಗೆ ನೂರ ಇಪ್ಪತ್ತು ರೂಪಾಯಿ. ಅದರಲ್ಲಿ ಪೋಟಿಗೆ ಖರ್ಚು ಹಾಕುವಾಗ ಅಮಲ್ದಾರರು, ಸಿರಸ್ತಾರರು, ಇವರುದ್ದೆಲ್ಲ ಒಟ್ಟು ಹದಿನೈದು ರೂಪಾಯಿ ಹೋಗುತ್ತೆ. ಅದ ಬಿಟ್ಬಿಡಿ. ಉಳಿದ ನೂರು ರೂಪಾಯಿಗೆ ನೀವು ಈಗಲೇ ಇವರಿಂದ ಕಂದಾಯ ಮುಂಗಡ ತಗಂಡಿದೀನಿ ಅಂತ ಹೋದ ವರ್ಷ ಮಾಡಿದ ಹಾಗೆ ರಶೀತಿ ಬರುಸ್ಕಂಡ್ಬಿಡಿ. ನಿಮ್ಮದೇ ಹ್ಯಾಗೂ ಎಂಬತ್ತು ರೂಪಾಯಿ ಕಂದಾಯ ಇದೆ. ಇನ್ನು ಯಾರುದ್ದಾರೂ ಇಪ್ಪತ್ತಕ್ಕೆ ಬರುಸ್ಕಳಿ. ಅದುನ್ನ ಪೋಟ್ಕಿ ಕೊಡೋವಾಗ್ಲೇ ಕಟಾಯಿಸ್ಕತ್ತಾರೆ. ಇನ್ನು ಇವರ ಕೈಗೆ ದುಡ್ಡು ಸಿಕ್ಕಲ್ಲ. ಆ ದುಡ್ನಲ್ಲಿ ನೀವು ನಾನು ಕೇಳ್ದಾಗ ರಾಗಿ, ಕಾಳು, ಮೆಣಸಿನಕಾಯಿ, ಮೇಲೆ ಐದು ಹತ್ತು ರುಪಾಯಿನ ಹಾಗೆ ಕೊಡ್ತಾ ಬನ್ನಿ.'

'ವೈನ, ವೈನ. ನಿಂಗೆ ದಿವಾನಿಕೆ ಮಾಡಾ ತಲೆಯ್ಕೆತೆ. ಈ ಬಶಣ್ಣಯ್ಯನ ಆಳಾದ್ ಕಲುತ್ರೆ ಮೈಸೂರು ಶೀಮೇನೇ ಆಳ್ಬೈದು. ನಾಳೆ ನಾಡಿದ್ರಲ್ಲಿ ನಾನು ಬತ್ತೀನಿ. ಆಗ ಬರುಸ್ಕಳಾನ ಬುಡು.'

ಬಸವಣ್ಣನ ಗುಡಿಯಲ್ಲಿ ಅಡಿಗೆ ಮಾಡಿಕೊಂಡು ಉಂಡು ಹೋಗುವಂತೆ ಗೌಡಮ್ಮ ಬಲವಂತ ಮಾಡಿದಳು. ಆದರೆ ಊರಿನಲ್ಲಿ ಮಕ್ಕಳನ್ನು ಬಿಟ್ಟು ಬಂದಿರುವುದರಿಂದ ತಾನು ನಿಲ್ಲುವುದಿಲ್ಲವೆಂದು ಹೇಳಿ ನಂಜಮ್ಮ ಹೊರಟುಬಿಟ್ಟಳು. ಮಕ್ಕಳಿಗೆಂದು ಗೌಡಮ್ಮ ಕೊಟ್ಟ ಎರಡು ಗಿಟುಕು ಕೊಬ್ಬರಿ ಎರಡು ಉಂಡೆ ಬೆಲ್ಲವನ್ನು ಸೆರಗಿಗೆ ಕಟ್ಟಿಕೊಂಡಳು. ನಂತರ ತುಪ್ಪ ಬೆಲ್ಲ ಹಾಕಿ ಮುಂದಿಟ್ಟ ಹಾಲನ್ನು ಮಗುವಿಗೂ ಕುಡಿಸಿ ತಾನೂ ಕುಡಿದು ಊರಿಗೆ ಬಂದಳು.

ಮನೆಯಲ್ಲಿ ಚನ್ನಿಗರಾಯರು ಹೆಂಡತಿಯನ್ನು ಎಲ್ಲಿಗೆ ಹೋಗಿದ್ದೆ ಎಂದು ಕೇಳಲಿಲ್ಲ. ಇನ್ನೂ ಅಡಿಗೆಯಾಗಿಲ್ಲವೆಂದು ರೇಗಿದರು. ಅವಳ ಸೆರಗಿನಲ್ಲಿದ್ದ ಕೊಬ್ಬರಿ ಬೆಲ್ಲ ಕಣ್ಣಿಗೆ ಬಿದ್ದಾಗ ತೆಗೆದುಕೊಂಡು ಮುರಿದು ತಿನ್ನಲು ಶುರುಮಾಡಿದರು. ಪುಟ್ಟವ್ವನ ಮನೆಯಲ್ಲಿದ್ದ ಮಕ್ಕಳು ಮನೆಗೆ ಬರುವ ವೇಳೆಗೆ ಎರಡು ಗಿಟುಕು ಎರಡು ಉಂಡೆಗಳೂ ಮುಗಿದುಹೋಗಿ ಅವರು ಅಂಟು ಕೈಯನ್ನು ತೊಳೆದುಕೊಂಡಿದ್ದರು.

ಗುಂಡೇಗೌಡರು ಮರು ದಿನವೇ ಇಲ್ಲಿಗೆ ಬಂದರು. ಅವರು ಹೇಳಿದಂತೆ ನಂಜಮ್ಮ ಗಂಡನ ಮುಂದೆ ರಶೀತಿ ಕಾಗದ ಮತ್ತು ದೌತಿ ಸ್ಟೀಲುಗಳನ್ನು ಇಟ್ಟಳು. 'ಆ ಯಮ್ಮ ಏಳ್ದಂಗೆ ಬರೆಯಯ್ಯಾ' –ಗೌಡರು ಆದೇಶವಿಟ್ಟರು. 'ಕುರುಬರ ಹಳ್ಳಿಯ ಪಟೇಲ ಗುಂಡೇಗೌಡರ ರೆವೆನ್ಯೂ ಕಂದಾಯದ ಬಾಬ್ತು ಎಂಬತ್ತು ರೂಪಾಯಿಗಳು ಮಾತ್ರ ಸಂದಾಯವಾಗಿದೆ' –ಎಂದು ನಂಜಮ್ಮ ಹೇಳುತ್ತಿರುವಂತೆಯೇ ಶ್ಯಾನುಭೋಗರು ಸ್ಟೀಲನ್ನು ಕೆಳಗಿಟ್ಟು. 'ಅದ್ಯಾಕ್ ಬರೀಬೇಕೋ ಕಾಣೆ. ಪೋಟಿಗೇಲಿ ನನ್ನ ಕೈಗೆ ಏನೂ ಸಿಕ್ಕಲ್ಲ' ಎಂದು ಕುಳಿತುಬಿಟ್ಟರು.

ಗೌಡರಿಗೆ ರೇಗಿತು: 'ಸಿಕ್ಕಾಕುಲ್ವಂತೆ. ತಿಗಾ ಮುಚ್ಕಂಡ್ ಬರೀತೀಯೋ ಇಲ್ವಯ್ಯೋ' –ಎಂದು ಅವರು ಕೇಳಿದರೂ ಶ್ಯಾನುಭೋಗರು ಸ್ಟೀಲನ್ನು ಮುಟ್ಟಲಿಲ್ಲ. 'ಬರೆಯಾದಿಲ್ವೇನಯ್ಯಾ? ನಮ್ಮೂರಿಗ್ ಬಂದ್ರೆ ನಿನ್ನ

ಕಾಲು ಮುರಿದ್ಬುಡ್ತೀನಿ. ಏನಂತ ತಿಳ್ಕಂಡಿದೀಯಾ?'
'ನನ್ ಖರ್ಚಿಗೆ ಏನ್ ಮಾಡ್ಲಿ?'
'ಅದುಕ್ಕೆ ನಾನ್ ಕೊಡ್ತೀನಿ ಬರಿ.?
ಅಂತೂ ಒಟ್ಟಿನಲ್ಲಿ ನೂರು ರೂಪಾಯಿ ಕಂದಾಯದ ರಶೀತಿ ಬರೆದು ಅವರು ರುಜು ಮಾಡಿಕೊಟ್ಟರು. 'ನಂಗೇನಾರಾ ಕೊಡ್ರಿ ಮತ್ತೆ?' –ಎಂದು ಕೇಳಿದುದಕ್ಕೆ ಗೌಡರೇ ತಮ್ಮ ಸೊಂಟದ ದಟ್ಟಿಯ ಮಡಿಕೆಗೆ ಕೈ ಹಾಕಿ ಎರಡು ರೂಪಾಯಿಗಳನ್ನು ತೆಗೆದು ಅವರ ಮುಂದೆ ಉರುಳಿಸಿ –'ತಗ ನಿನ್ ಮಿರಾಶೆ ಹಣ ಈಗ್ಲೇ ಕೊಟ್ಟಿದೀನಿ' ಎಂದರು.
ಶ್ಯಾನುಭೋಗರು ಆತುರದಿಂದ ಕೈಲಿ ಹಿಡಿದು ಜೇಬಿಗೆ ಹಾಕಿಕೊಂಡರು. ಗೌಡರು ಊರಿಗೆ ಹೋದರು. ಮರುದಿನ ಶುಕ್ರವಾರವಾಗಿತ್ತು. ಚೆನ್ನಿಗರಾಯರು ಬೆಳಗ್ಗೆ ಮನೆಯಲ್ಲಿ ರೊಟ್ಟಿ ತಿಂದವರೇ ಕಂಬನಕೆರೆಯ ಸಂತೆಗೆ ಹೊರಟುಹೋದರು. ಸಂತೆಗೆ ತಿಪಟೂರಿನವರು ಬಂದು ಡೇರೆ ಹೊಡೆದು ಹೋಟಲು ಹಾಕುತ್ತಾರೆ. ತಿಪಟೂರು ಪೇಟೆಯಲ್ಲಿ ಮಾಡುವ ಮಸಾಲೆ ದೋಸೆ, ಆಲೂಗೆಡ್ಡೆಪಲ್ಯ, ಮೈಸೂರುಪಾಕು, ಬಾಳೇಕಾಯಿ ಬೋಂಡಗಳನ್ನೆಲ್ಲ ಮಾಡಿರುತ್ತಾರೆ.
– 4 –
ಬರೀ ಶ್ಯಾನುಭೋಗಿಕೆಯಲ್ಲಿ ಜೀವನವಾಗುವುದಿಲ್ಲವೆಂಬುದನ್ನು ನಂಜಮ್ಮ ಬಹು ಬೇಗ ಅರ್ಥ ಮಾಡಿಕೊಂಡಳು. ಭೂಮಿ ಕಾಣಿಗಳೇನೂ ಇಲ್ಲದವರಿಗೆ ಈ ಕಸುಬಿನಿಂದ ಸಂಸಾರ ನೀಯುವುದಿಲ್ಲ. ತಾನು ಬೇರೆ ಏನು ಮಾಡಬಹುದು? ತಿಮ್ಲಾಪುರಕ್ಕೆ ಹೋಗಿದ್ದಾಗ ದ್ಯಾವರಸಯ್ಯನವರ ಪಕ್ಕದ ಒಂದು ಮನೆಯವರು ಮುತ್ತುಗದ ಎಲೆ ಹಚ್ಚಿಸಿ ಪಿಂಡಿ ಕಟ್ಟಿಟ್ಟದ್ದನ್ನು ನೋಡಿದ್ದಳು. ಅವೆಲ್ಲವನ್ನೂ ತಿಪಟೂರಿಗೆ ಕಳಿಸುತ್ತಾರಂತೆ. ನೂರಕ್ಕೆ ಆರಾಣೆಯಂತೆ ಅಂಗಡಿಯವರು ಉಂಡೆಯಾಗಿ ತೆಗೆದುಕೊಂಡು ದುಡ್ಡು ಕೊಡುತ್ತಾರಂತೆ. ಮನೆಗೆಲಸ, ಶ್ಯಾನುಭೋಗಿಕೆಯ ಲೆಕ್ಕದ ಜೊತೆಗೆ ತಾನೂ ದಿನವೂ ಒಂದು ಐವತ್ತೋ ನೂರೋ ಎಲೆ ಹಚ್ಚಿದರೆ ಆದೀತು–ಎಂದು ಯೋಚಿಸಿದಳು.
ರಾಮಸಂದ್ರದ ಬ್ರಾಹ್ಮಣರು ಮುತ್ತುಗದ ಎಲೆಯನ್ನು ಚೋಳೇಶ್ವರನಗುಡ್ಡದ ಹತ್ತಿರದ ಮರಳಹಳ್ಳದಿಂದ ತರುತ್ತಾರೆ. ಎಂದರೆ ಮೂರು ಮೈಲಿಯಾಗುತ್ತೆ. ಚೋಳೇಶ್ವರನ ಗುಡ್ಡವಿರುವುದು ಅವಳ ತೌರೂರು ನಾಗಲಾಪುರದ ದಾರಿಯಲ್ಲಿಯೇ. ಈ ಸಲ ಮುತ್ತುಗದ ಎಲೆಯ ಕಾಲವಾದ ಫಾಲ್ಗುಣ ಮಾಸ ಬಂದಾಗ ಅವಳು ಎಲೆ ತರಲು ಹೊರಟಳು. ಅಷ್ಟು ದೂರ ಒಂಟಿಯಾಗಿ ಹೆಂಗಸಾದ ತಾನೊಬ್ಬಳೇ ಹೋಗುವುದು ಸಮನಲ್ಲ. ಆದರೆ ಜೊತೆಗೆ ಯಾರನ್ನು ಕರೆಯುವುದು? ಗಂಡನನ್ನು ಕರೆದು ನೋಡಿದಳು. ಅವರ್‍ಯಾಕೆ ಬಂದಾರು? 'ತೀಟೆ ಇದ್ದವಳು ಇದನ್ನೆಲ್ಲ ಮಾಡ್ಲಿ ನನಗೇನು ತೆವ್ಲು ? –ಎಂದುಹೇಳಿದರು. ಮಗ್ಗದಕೇರಿಯ ಪುಟ್ಟವ್ವನನ್ನು ಜೊತೆಗೆ ಕರೆದುಕೊಂಡು ಚಿಕ್ಕ ಮಕ್ಕಳನ್ನು ಪಕ್ಕದ ಚನ್ನಶೆಟ್ಟಿಯ ಮನೆಯಲ್ಲಿ ಬಿಟ್ಟು ಬೆಳಿಗ್ಗೆ ಕಾಗೆ ಕರ್‌ಯೆನ್ನುವ ಮುಂಚೆಯೇ ಗೋಣಿಚೀಲ ರೊಟ್ಟಿ ಚಟ್ನಿಗಳನ್ನು ತೆಗೆದು ಕೊಂಡು ಹೊರಟಳು. ಪುಟ್ಟವ್ವನಿಗೆ ದಿನಕ್ಕೆ ಮೂರಾಣೆ ಕೂಲಿ. ಇಬ್ಬರೂ ಸರಸರನೆ ನಡೆದು ಹೊತ್ತು ಹುಟ್ಟುವ ಮೊದಲೇ ಪಟಪಟನೆ ಮುತ್ತುಗದ ಎಲೆಗಳನ್ನು ಮುರಿದು ಎದೆಗೆ ಕೊಟ್ಟುಕೊಂಡು ಜೋಡಿಸಿ ಹಿಡಿಯುವುದು. ಎಂಟು ಗಂಟೆಯ ತನಕ ಮುರಿದ ಮೇಲೆ ಇಬ್ಬರೂ ರೊಟ್ಟಿ ತಿಂದು ಮರದ ಹಳ್ಳದ ನೀರು ಕುಡಿದು ಮತ್ತೆ ಎಲೆ ಮುರಿಯುವುದು. ಗೋಣಿಚೀಲಕ್ಕೆ ಬಿಗಿಯಾಗಿ ಅದುಮಿ ತುಂಬಿ ಬಾಯಿ ಕಟ್ಟಿ ಹೊರಕ್ಕೆ ಕೊಡವಿದ ಮೇಲೆ ದಬ್ಬಳಕ್ಕೆ ಹುರಿ ಹಾಕಿ ಕೊಟ್ಟರೆ ಪಾರ್ವತಿ ಎಲೆಯನ್ನು ತೊಟ್ಟಿನ ಹತ್ತಿರ ಚುಚ್ಚಿ ಪೋಣಿಸುತ್ತಿತ್ತು. ರಾಮಣ್ಣ ಸಹ ನಿಧಾನವಾಗಿ ಇನ್ನೊಂದು ಸರ ಪೋಣಿಸುತ್ತದೆ. ಅಷ್ಟರಲ್ಲಿ ಅವಳು ಅಡಿಗೆ ಮಾಡುತ್ತಾಳೆ. ಊಟದ ಹೊತ್ತಿಗೆ ಯಜಮಾನರು ಮನೆಗೆ ಬರುತ್ತಾರೆ. ಅವರಿಗೆ ಹಸಿ ಮುತ್ತುಗದ ಎಲೆಯ ಮೇಲೆ ಭೋಜನ ಮಾಡುವುದೆಂದರೆ ಇಷ್ಟ. ಒಂದು ದೊಡ್ಡ ಎಲೆಯನ್ನು ಜೊಪ್ಪೆಯಂತೆ ಮಾಡಿಕೊಂಡು ಚಕ್ಕಲಮಕ್ಕಲ ಹಾಕಿ ಕುಳಿತು ಕವಳ ಕತ್ತರಿಸುತ್ತಾರೆ. ನಂತರ ಅವರು ವಿಶ್ರಾಂತಿಗೆಂದು ಪವಡಿಸಿದಾಗ ಅವಳು ಪಾತ್ರೆ ತೊಳೆದಿಟ್ಟು, ಉಳಿದ ಎಲೆಗಳನ್ನು ಪೋಣಿಸಿ ಸರ ಮಾಡಿ, ಇನ್ನೂ ಉಳಿದಿರುತ್ತಿದ್ದುದನ್ನು ಸಂಜೆಯ ಬಿಸಿಲಿಗೆ ಒಣಗಹಾಕುತ್ತಾಳೆ. ಅಷ್ಟರಲ್ಲಿ ಆ ದಿನವೇ ಕಳೆಯುತ್ತದೆ. ನಾಳೆ ಬೆಳಗ್ಗೆ ತನಕವೂ ಪುಟ್ಟವ್ವನಿಗೂ ತೆಗೆದುಕೊಂಡು ಹೋಗಲು, ಮತ್ತು ಗಂಡನಿಗೆ ಮಕ್ಕಳಿಗೆ ಮನೆಯಲ್ಲಿ ತಿನ್ನಲು ರೊಟ್ಟಿ ಮಾಡಿ ಚಟ್ನಿ ತಿರುವಿ ಇಡಬೇಕು. ಹೊತ್ತಿಗೆ ಮುಂಚೆ ಏಳಬೇಕಾದುದರಿಂದ ರಾತ್ರಿ ಬೇಗ ಮಲಗಬೇಕು.
ಒಟ್ಟಿನಲ್ಲಿ ಮುಂಗಾರು ಮಳೆ ಬಂದು ಎಲೆಗಳು ಒಡೆದು ತೂತು ಬೀಳುವುದರೊಳಗೆ ನೂರ ಐವತ್ತು ಸರವಾಯಿತು. ಎಲ್ಲವನ್ನೂ ಹಚ್ಚಿದರೆ ಕೊನೆಯ ಪಕ್ಷ ಒಂದು ನೂರರ ಇನ್ನೂರು ಪಿಂಡಿಯಾದರೂ ಆಗುತ್ತೆ. ಒಂದು ಪಿಂಡಿಗೆ ಆರಾಣೆಯಾದರೆ ಎಪ್ಪತ್ತೈದು ರೂಪಾಯಿ ಸಿಕ್ಕುತ್ತೆ. ಇನ್ನು ಇದಕ್ಕೆ ವರ್ಷವಿಡೀ ಹಂಚೀಕಡ್ಡಿ ಸೀಳಿ ಅಂಗೈಯ ಚರ್ಮ ಒಡೆದುಕೊಂಡು ಚುಚ್ಚಬೇಕು. ಕಷ್ಟಪಡದೆ ಜೀವನವಾಗುವುದಾದರೆ ಹ್ಯಾಗೆ? ಇವಳು ಎಲೆ ತಂದು ಮುಗಿಸುವ ಹೊತ್ತಿಗೆ ಕಂದಾಯ ವಸೂಲಿಯ ಕಾಲ ಬಂತು. ನಾಲ್ಕನೆಯ ಕಿಸ್ತಿನಲ್ಲಿ

ಕುರುಬರಹಳ್ಳಿ0ುವರು ಮಸಿಕಾಣಿಕೆ ಕೊಡುತ್ತಾರೆ. ಅಷ್ಟು ಹೊತ್ತಿಗೆ ಅವಳಿಗೆ ಆರು ತಿಂಗಳು ನಡೆ0ುುತ್ತಿತ್ತು. 'ನೀನ್ಯಾಕ್ ಬರ್ಬೇಕೋ ಕಾಣೆ' ಎಂದು ಗಂಡ ಜಬರಿಕೊಂಡರೂ ಬಿಡದೆ ಅವಳು ವಸೂಲಿ0ು ದಿನ ಹೋದಳು. ಗುಂಡೇಗೌಡರು ಮಸಿಕಾಣಿಕೆ ಹಣವನ್ನು ವಸೂಲು ಮಾಡಿ ತಾವೇ ಇಟ್ಟುಕೊಂಡರು. ಶ್ಯಾನುಭೋಗರ ಕೈಗೆ ಐದು ರೂಪಾಯಿ ಕೊಟ್ಟು, 'ನಿಂಗ್ ಬೇಕಾದಾಗ ಕೊಡ್ತೀನಿ. ಈಗ 0ಾಕ್ ದುಡ್ಡು?' ಎಂದರು. ಅವರನ್ನು ನುಂಗಿಹಾಕುವಂತೆ ಚೆನ್ನಿಗರಾ0ುರು ಒಂದು ಸಲ ನೋಡಿದರೇ ವಿನಾ, ಬಾಯಿ ಬಿಟ್ಟು ಬೈ0ುಲು ಧೈ0ರ್ುವಿರಲಿಲ್ಲ. ಆದರೆ ಮನೆಗೆ ಬಂದ ಮೇಲೆ ಗುಂಡೇಗೌಡ ಮತ್ತು ಅವರ ಹೆಂಡತಿ ಇಬ್ಬರನ್ನೂ ಜೋಡಿಸಿ ಊರಿನ ಇತರ ಹೆಂಗಸರು ಗಂಡಸರೊಡನೆ ಹಾದರ ಮಾಡಿಸಿ ಬೈದು ತಮ್ಮ ಕೋಪ ಶಮನ ಮಾಡಿಕೊಂಡರು. ಹೇಗೂ ಐದು ರೂಪಾಯಿ ಸಿಕ್ಕಿತು. ಇರ್ಸಾಲಿಗೆ ತಿಪಟೂರಿಗೆ ಹೋದಾಗ ಸುಖಪಡುವ ಕಲ್ಪನೆಯಿಂದ ಮನಸ್ಸಿನಲ್ಲೇ ಹಿಗ್ಗುತ್ತಿದ್ದರು. ಈಗ ತಿಪಟೂರಿಗೆ ಗುಬ್ಬಿ ಈರಣ್ಣನ ನಾಟಕ ಬಂದಿದೆ0ುಂತೆ. ಅರಮನೆ0ೆುೕ ಕಾಣುವ ಹಾಗೆ ಸೀನರಿ ಹಾಕುತ್ತಾರಂತೆ. ನಾಕಾಣೆ ಬಿಸಾಕಿ ನೋಡಿ ಬರಬೇಕು. ಅವತ್ತು ರಾತ್ರಿ ಊಟದ ಬದಲು ಬರೀ ಬೊಂಬಾಯಿ ಬೋಂಡಾನೇ ತಿನ್ನಬೇಕು. ಸೂಳೇಮಗ ಗುಂಡೇಗೌಡ ನೂರು ರೂಪಾಯಿಗೆ ರಸೀತಿ ಬರುಸ್ಕಂಡ. ಪೋಟಿಗೆ ಹಣದಲ್ಲಿ ತಾಲ್ಲೂಕು ಆಫೀಸಿನೋರಿಗೆ ಕೊಡೂದು ಕೊಟ್ಟ ಮೇಲೆ ಕೈಗೆ ನಾಕು ರೂಪಾಯಿ ಉಳಿ0ುುತ್ತೋ ಐದು ಉಳಿ0ುುತ್ತೋ. ಅದರ ಜೊತೆಗೆ ಈ ಐದು. ಒಟ್ಟು ಹತ್ತು ರುಪಾಯಿನಲ್ಲಿ ಎಷ್ಟು ದಿನ ತಿನ್ನೋದು! ಒಂದು ಮೈಸೂರುಪಾಕಿಗೆ ಒಂಬತ್ತು ಕಾಸು. ನಾಕಾಣೆ ಒಟ್ಟಿಗೆ ಕೊಟ್ರೆ ಆರು ಕೊಡ್ತಾರೆ ಸೂಳೇಮಕ್ಳು. ಇನ್ನೊಂದೆರಡು ಕೊಟ್ರೆ ಇವರಪ್ಪನ ಗಂಟು ಏನು ಓಗುತ್ತೆ? ಇವರವ್ವನ.....

ಅಷ್ಟರಲ್ಲಿ ರಾಮಸಂದ್ರಕ್ಕೆ ಸರ್ಕಾರೀ ಪ್ರೈಮರಿ ಸ್ಕೂಲು ಬಂತು. ಸ್ಕೂಲಿಗೆ ತಕ್ಷಣ ಕಟ್ಟಡವಿಲ್ಲುದುದರಿಂದ ಇದನ್ನು ಎಲ್ಲಿ ನಡೆಸಬೇಕೆಂದು ಸರ್ಕಾರದವರು ಗ್ರಾಮಸ್ಥರನ್ನು ಕೇಳಿದರು. ಹನುಮಂತರಾ0ುನ ಗುಡಿ0ಾಗಬಹುದೆಂದು ಶಿವೇಗೌಡ ಹೇಳಿದ. ಎಂದರೆ ಗಂಗಮ್ಮ ಅಪ್ಪಣ್ಣ0್ಯುರು ಅದನ್ನು ಖಾಲಿ ಮಾಡಬೇಕು. ಗಂಗಮ್ಮ ಹೋಗಿ ಶಿವೇಗೌಡನ ಮನೆ0ು ಮುಂದೆ ಬೊಗಸೆ0ುಲ್ಲಿ ಮಣ್ಣು ಹಿಡಿದು ನಿಂತಳು. ಗುಡಿ0ು ಪೂಜಾರಿ ಅಣ್ಣಾಜೋಯಿಸ ಸಹ ದೇವಸ್ಥಾನದಲ್ಲಿ ಇಸ್ಕೂಲು ಆಗಕೂಡದೆಂದ ಮೇಲೆ ಗಂಗಮ್ಮನ ವಸತಿಗೆ ಭ0ುವಿಲ್ಲದಂತೆ ಆಯಿತು. ಶಿವೇಗೌಡನದೇ ಒಂದು ಮನೆ ಖಾಲಿ ಇತ್ತು. ಅದನ್ನು ಸರ್ಕಾರದವರು ವರ್ಷಕ್ಕೆ ಮೂವತ್ತಾರು ರೂಪಾಯಿಗೆ ಬಾಡಿಗೆಗೆ ತೆಗೆದುಕೊಳ್ಳುವಂತೆ ಅವನೇ ಮಾಡಿಸಿದ. ಕಿಕ್ಕೇರಿ ಕಡೆ0ು ಸೂರಪ್ಪನವರು ಎಂಬ ಮೇಷ್ಟರೂ ಬಂದರು. ಕೆಲವು ಹುಡುಗರನ್ನು ಸ್ಕೂಲಿಗೆ ಸೇರಿಸಿದರು. ಹೆಣ್ಣು ಹುಡುಗಿ0ುರನ್ನು ಅಕ್ಷರ ಕಲಿ0ುಲು ಕಳಿಸಬೇಕೋ ಬೇಡವೋ ಎಂಬ ಚರ್ಚೆ ಇನ್ನೂ ನಡೆ0ುುತ್ತಲೇ ಇತ್ತು. ಹೆಣ್ಣು ಹುಡುಗರನ್ನು ಸೇರಿಸಿ; ಪರವಾಗಿಲ್ಲ. 'ಈಗ ದೊಡ್ಡ ಊರಿನಲ್ಲೆಲ್ಲ ಹೆಣ್ಣು ಮಕ್ಳು ಹೈಸ್ಕೂಲಿಗೂ ಹೋಗ್ತಾರೆ' – ಎಂದು ಮೇಷ್ಟರೇ ಹೇಳಿದರೂ ಉಳಿದವರು 0ಾರೂ ಒಪ್ಪಲಿಲ್ಲ. 'ಅಮ್ಮ, ಎರಡಕ್ಷರ ಕಲಿ ್ತದ್ರೆ ಕಷ್ಟಕಾಲದಲ್ಲಿ ಹೆಣ್ಣು ಹುಡುಗಿ0ಾದ್ರೂ ಒಂದು ಇಪ್ಪತ್ತು ರೂಪಾಯಿ ಸಂಬಳ ತರುತ್ತೆ. ವಿದ್ಯಾವಂತೆ0ಾದ ನಿಮಗೆ ಇದ ನಾನು ಹೇಳ್ಬೇಕೇ?' – ಎಂದಾಗ ನಂಜಮ್ಮ 0ಾರ ಚರ್ಚೆಗೂ ಕೇಳದೆ ತಾನೇ ಹೋಗಿ ಪಾರ್ವತಿ0ುನ್ನು ದಾಖಲು ಮಾಡಿ ಬಂದಳು. 'ನೋಡ್ಡ್ಯಾ ಆ ವಮ್ಮನ ಗಟ್ಟಿಗಿತ್ತಿತನಾವ?' – ಎಂದು ಊರಿನವರೆಲ್ಲ ತಮ್ಮ ತಮ್ಮಲ್ಲಿ0ೆುೕ ಮಾತನಾಡಿಕೊಂಡರು. ಪಾರ್ವತಿ0ು ಜೊತೆಗೆ ರಾಮಣ್ಣನನ್ನೂ ಸ್ಕೂಲಿಗೆ ಕಳಿಸಿದಳು. ಈ ಸ್ಕೂಲಿನಲ್ಲಿ ಮೇಷ್ಟರು ಹೊಡೆ0ುುವುದಿಲ್ಲ. ಮರಳ ಮೇಲೆ ತಿದ್ದಿಸುವುದಿಲ್ಲ. ಸ್ಲೇಟಿನ ಮೇಲೆ ಬರೆಸುತ್ತಾರೆ.

ಈ ಸಲವೂ ಬಾಣಂತಿತನಕ್ಕೆ ಅಕ್ಕಮ್ಮ ಬಂದಳು. ಆದರೆ ನಂಜಮ್ಮ ಹೆತ್ತ ಮಗು, ಹೊರಗೆ ಬಂದ ಅರ್ಧ ಗಂಟೆಗೆ ತೀರಿಹೋಯಿತು. 'ನಂಜಾ, ಬಸುರಿ ಹೆಂಗಸು ಇಷ್ಟೊಂದು ಮುತ್ತುಗದೆಲೆ ಹೊತ್ತು ಹಚ್ಚಿದರೆ ಆಗುತ್ತೆ0ೆುೕ? ಉಷ್ಣಕ್ಕೇ ಮಗೂಗೆ ಏನಾಗಿತ್ತೋ ಏನೋ! ಹುಟ್ಟಿದ ಕೂಡ್ಲೇ ಸತ್ತುಹೋಯಿತು' – ಅಕ್ಕಮ್ಮ ಎಂದಳು.

ನಂಜು ಮಾತನಾಡಲಿಲ್ಲ. ಸುಮ್ಮನೆ ತನ್ನಲ್ಲಿ0ೆುೕ ಅಳುತ್ತಿದ್ದಳು. 'ಅಳ್ಬ್ಯಾಡ ಮಗು, ನಂಜಾಗುತ್ತೆ. ನಿಂಗೆ ಏನಾದ್ರು ಹೆಚ್ಚುಕಮ್ಮಿ0ಾದ್ರೆ ಈ ಮಕ್ಕಳ ಗತಿ ಏನೂ?' – ಎಂದು ಅಕ್ಕಮ್ಮ ಎರಡು ದಿನ ಹೇಳಿದಮೇಲೆ ಅವಳು ಸಮಾಧಾನ ತಂದುಕೊಂಡಳು. ಗಂಗಮ್ಮ ದೇವಸ್ಥಾನದಲ್ಲಿ0ೆುೕ ಹತ್ತು ದಿನ ಪುರುಡು ಮತ್ತು ಅದರೊಳಗೇ ಮೂರು ದಿನ ಸೂತಕ ಇದ್ದಳೇ ಹೊರತು ಸೊಸೆ0ು ಮನೆಗೆ ಬಂದು ಒಂದು ಮಾತೂ ಆಡಲಿ ಲ್ಲ. ಮಗು ಸತ್ತರೂ ಅಕ್ಕಮ್ಮ ಮೂರು ತಿಂಗಳು ಬಾಣಂತಿತನ ಮಾಡಿದಳು. ಅವಳು ಊರಿಗೆ ಹೊರಡುವ ಹಿಂದಿನ ದಿನ ಮೊಮ್ಮಗಳಿಗೆ ಹೇಳಿದಳು: 'ನಂಜಾ, ನಿನ್ನ ಗಂಡನ 0ೋಗ್ತಿ ಇಂತದು. ತಾನು ಹುಟ್ಟಿಸಿದ ಮಕ್ಳಮೇಲೆ ಪ್ರೀತಿ ಇಲ್ಲ. ತಾನಾ0ುು ತನ್ನ ಹೊಟ್ಟೆ0ಾ0ುು. ಮಕ್ಳ ಸಾಕೂದು ನಿಂಗೂ ಕಷ್ಟ. ಇನ್ನು ಅವನನ್ನ ಹಾಸಿಗೆ ಹತ್ರುಕ್ ಸೇರುಸ್ಬ್ಯಾಡ.'

ನಂಜು ಏನೂ ಮಾತನಾಡಲಿಲ್ಲ. ಅಕಮ್ಮನೇ, 'ಅವ್ನು ಸಿಟ್ಕಂಡ್ರೂ ಸಿಟ್ಕಳ್ಳಿ. ದೂರ ಇಡು' ಎಂದಾಗ

ಹೇಳಿದಳು: 'ಅಕ್ಕಮ್ಮಾ, ಇವೆಲ್ಲ ಪ್ರಾರಬ್ಧ ಕರ್ಮ. ಹಾಗೆ ಮಾಡಿದ್ರೆ ಇವರಿಗೆ ಮಾನ ಮರ್ಯಾದೆ ಇರುಲ್ಲ. ಬೀದೀಲಿ ನಿಂತು ಕೆಟ್ಕೆಟ್ಟಾಗಿ ಕಿರುಚಿಕಳುಕ್ಕೆ ಶುರುಮಾಡ್ತಾರೆ. ನಾನಾಗ್ಲೇ ಹಾಗೆ ಮಾಡಿ ನೋಡಿದೀನಿ.'

'ಹಣೆಬರ' – ಎಂದು ಅಕ್ಕಮ್ಮ ಸುಮ್ಮನಾದಳು.

ಆಗಲೇ ಎಪ್ಪತ್ತೆಂಟು ನಡೆಯುತ್ತಿದ್ದ ಅಕ್ಕಮ್ಮ, ತಾನು ನಡೆದೇ ಹೋಗುವುದಾಗಿ ಜೊತೆಗೆ ಒಬ್ಬ ಆಳನ್ನು ಕಳಿಸುವಂತೆ ಕೇಳಿದಳು. ಆದರೆ ಮೊಮ್ಮಗಳು ಹೇಗೆ ಕಳಿಸಿಯಾಳು? ಮೂರು ರೂಪಾಯಿ ಕೊಟ್ಟು ಒಂದು ಕೆಂಪಿನ ಸೀರೆ ಉಡಿಸಿ, ಒಂದೂವರೆ ರೂಪಾಯಿಗೆ ಬಾಡಿಗೆ ಗಾಡಿ ಗೊತ್ತುಮಾಡಿ ಕಳಿಸಿಕೊಟ್ಟಳು.

– 5 –

ಒಂದು ದಿನ ಮಧ್ಯಾಹ್ನ ಒಂದು ಗಂಟೆಯ ಹೊತ್ತಿನಲ್ಲಿ ರೇವಣ್ಣಶೆಟ್ಟಿಯ ಹೆಂಡತಿ ಸರ್ವಕ್ಕ ಬಂದು ಕೇಳಿದಳು: 'ನಂಜಮ್ಮಾರೇ, ಸದ್ಯ ಸುತರಾಮಾಗಿಬಿಟ್ಟಿದೆ. ಎಲ್ಡು ಸೇರು ಹಸಿಟ್ಟು ಕೊಡ್ತೀರಾ?'

'ಬೀಸಿದ ಹಿಟ್ಟು ಇಲ್ವಲ್ಲ ಸರ್ವಕ್ಕ, ಬನ್ನಿ ಕೂತ್ಕಳಿ.'

'ಹಂಗಾರೆ ಎಲ್ಡು ಸೇರು ರಾಗೀನೇ ಕೊಡಿ.'

ಸರ್ವಕ್ಕ ತಂದಿದ್ದ ಡಬ್ಬದ ಕುಕ್ಕೆಗೆ ನಂಜಮ್ಮ ಎರಡು ಸೇರು ರಾಗಿಯನ್ನು ಅಳೆದು ಕೊಟ್ಟಳು. ಹೆಚ್ಚು ಮಾತನಾಡದೆ ಸರ್ವಕ್ಕ ಹೊರಟುಹೋದಳು. ಆದಿನ ಸಂಜೆಗೆ ಅವಳೇ ಮತ್ತೆ ಬಂದಾಗ ನಂಜಮ್ಮ ಮುತ್ತುಗದೆಲೆ ಹಚ್ಚಿಸುತ್ತಿದ್ದಳು. ಹತ್ತಿರವೇ ಕೂತುಕೊಂಡು ಸರ್ವಕ್ಕ ಎಂದಳು: 'ಯಾರುನ್ನ ಕೇಳಾದು ಅಂತಿದ್ದೆ. ಇವತ್ತು ಉಡುಗ್ರೆಲ್ಲ ಅಸ್ಕಂಡಿದ್ದು. ನಂಗೂ ಉಪಾಸ ಮಾಡಿ ಸುಸ್ತಾಗಿತ್ತು. ನೀವು ರಾಗಿ ಕೊಟ್ಟಿ ಉಣ್ಣಾಕ್ ಇಕ್ಕಿದ್ರಿ.'

'ಇದೇನ್ ಸರ್ವಕ್ಕ ಹಿಂಗಂತೀರೀ? ಜಮೀನು ಗಿಮೀನು ಇರೋ ನೀವು ಹೀಗಂದ್ರೆ ಹ್ಯಾಗೆ ನಂಬೋದು?'

'ನಿಜ ಹೇಳಿ. ನಿಮ್ಗೆ ಏನೂ ಗೊತ್ತಿಲ್ವರಾ?'

'ಸ್ವಲ್ಪ ಸ್ವಲ್ಪ ಕೇಳಿದೀನಿ. ಆದ್ರೆ ಮನೇಲಿ ಊಟಕ್ಕೆ ರಾಗಿ ಇಲ್ಲದ ಹಾಗಾಗಿದೆ ಅಂತ ಗೊತ್ತಿರ್ಲಿಲ್ಲ.'

'ನಾನ್ ಪಡುದ್ಬಂದುದ್ದು. ಹಿಂದಿನ ಜನ್ಮದಾಗೆ ನ್ಯಟ್ಟಗೆ ಸಿವಪೂಜೆ ಮಾಡಿರ್ನಿಲ್ಲ' – ಎಂದು ಸರ್ವಕ್ಕ ಕಣ್ಣೀರು ಹಾಕಿಕೊಂಡು, ತಾನೇ ಎಲ್ಲವನ್ನೂ ಹೇಳಿದಳು.

ರೇವಣ್ಣಶೆಟ್ಟಿ ಕೋಡಿಹಳ್ಳಿಗೆ ಹೋಗಿ ಇಸ್ಪೀಟಿಗೆ ಬರೆದುಕೊಟ್ಟ ಪ್ರೋನೋಟುಗಳ ಒಟ್ಟು ಮೂರು ಸಾವಿರ ರೂಪಾಯಿ ತನಕ ಆಗಿತ್ತು. ಅದೆಲ್ಲಕ್ಕೂ ಬದಲಾಗಿ ಶೆಟ್ಟಿಯ ಊರ ಮುಂದಿನ ಹೊಲ ಬರೆದುಕೊಡಬೇಕು, ಇಲ್ಲದಿದ್ದರೆ ದಡಿ ತಗಂಡು ಹೇರುವುದಾಗಿ ಚಿಕ್ಕೇಗೌಡ ಒಂದು ದಿನ ಹಿಡಿದು ನಿಲ್ಲಿಸಿದನಂತೆ. ಹಾಗಿಂದಹಾಗೇ ತಿಪಟೂರಿಗೆ ಹೋಗಿ ರಿಜಿಸ್ಟ್ರೀ ಮಾಡಿ, ಕಾಗದದಲ್ಲಿ ಪ್ರೋನೋಟುಗಳನ್ನು ಹೊಗಳಿ ಮುಗಿಸಿ ಬಂದನಂತೆ. ಇನ್ನು ಅವರಿಗಿದ್ದುದು ಮೂರು ಆರಿನ ಉಕ್ಕೆಗದ್ದೆ. ಮಳೆ ನಡೆದು ಕೆರೆ ತುಂಬಿ ನೆಲಗೇಯ್ದು ಬೆಳೆ ಬಂದರೆ ಹನ್ನೆರಡು ಕಂಡುಗವಾದರೂ ಬತ್ತ ಬರುತ್ತಿತ್ತು. ಆದರೆ ಬಿಳೀ ಪಂಚೆಯುಟ್ಟು ಹೊಳೆಯುವ ಬಾರಿನ ಚಪ್ಪಲಿ ಮೆಟ್ಟುವ ಪೋಟು – ಲಾಯರು ರೇವಣ್ಣಶೆಟ್ಟ ಅಟ್ಟಲುಗದ್ದೆ ಹೇಗೆ ಗೇಯ್ದಾನು? ಹೀಗಾಗಿ ವಾರಪಾಲಿಗೆ ಕೊಟ್ಟಿದ್ದರಲ್ಲಿ ನಾಲ್ಕು ಖಂಡುಗ ಬರುತ್ತಿತ್ತು. ಆ ಗದ್ದೆಯನ್ನೂ ಕಾಶಿಂಬಡ್ಡಿ ಸಾಹುಕಾರರಿಗೆ ಆಧಾರ ಮಾಡಿ ಎಂಟು ನೂರು ರೂಪಾಯಿ ತೆಗೆದುಕೊಂಡಿದ್ದನಂತೆ.

'ಆಧಾರ ಮಾಡಿ ಸಾಲ ಮಾಡುಕ್ಕೆ ಏನು ಬಂದಿದ್ದುದು ಖರ್ಚು? ರುದ್ರಾಣೀ ಮದ್ವೆ ಗಿದ್ವೆ ಏನಾರ ಗೊತ್ತು ಮಾಡಿದಾರಾ?'

'ನಂಜಮ್ಮಾರೇ, ಮನ್ನಿ ಋತುವಾದ ಮಗಳವ್ಳೆ. ಅನ್ನಾ ಗ್ಯಾನವಿದ್ರೆ ಅದ್ಯಾಕ್ ಮಾತು? ಗಂಡನ್ನ ಬುಟ್ಟ ಆ ಹಾದರಗಿತ್ತಿ ಅವ್ಳಿಲ್ಲ, ಮಾವನ್ನ ಮಡೀಕಂಡಿದ್ದ ಸ್ವಸೆ? – ಅವ್ಳು ಈಗ ಊರ ಮುಂದೆ ತೋಪಿನ್ತಾವ ಸಣ್ಣ ಹೆಂಚಿನ ಮನೆ ಕಟ್ಕಂಡಿ ಅಂಗ್ಡಿ ಮಡೀಕಂಡವ್ಳಲಾ, ಅದ್ಕೆ ದುಡ್ಡೆಲ್ಲಿ ಬಂತು ಅಂತೀರಾ? ಈ ಎಂಟು ನೂರು ರೂಪಾಯಿ ಆ ಮುಂಡೆ ಬಾಯಿಗೆ ಆಕಿದ್ರಂತೆ.'

ಇನ್ನು ಅವರಿಗೆ ಇದ್ದುದು ಐವತ್ತು ಮರದ ತೋಟ. ತೆಂಗಿನಕಾಯಿ ಬಲಿಯುವ ಮೊದಲೇ ಸಿಕ್ಕಿದಷ್ಟನ್ನು ಕೆಡವಿಸಿ ಮಾರಿಬಿಡುತ್ತಾರೆ. ಇಲ್ಲದಿದ್ದರೆ ರೇವಣ್ಣಶೆಟ್ಟಿಯ ಬಿಳಿ ಪಂಚೆ, ಕಾಲರಿನ ಶರಟುಗಳನ್ನು ಒಗೆಯಲು ಸಾಬೂನು, ಮುಖಕ್ಷೌರದ ಬ್ಲೇಡು, ಸೇದಲು ಎಲಿಫೆಂಟ್ ಸಿಗರೇಟುಗಳಿಗೆ ದುಡ್ಡೇ ಇಲ್ಲ.

ನರಸಿ ಈಗ ಊರ ಮುಂದೆ ಅಮ್ಮನ ತೋಪಿನ ಹತ್ತಿರ ತನ್ನದೇ ಮೂರು ಅಂಕಣದ ಮನೆ ಕಟ್ಟಿಸಿ ಅಂಗಡಿ ಇಟ್ಟುಕೊಂಡಿದ್ದಾಳೆ. ಅವಳ ಸುದ್ದಿ ಗೊತ್ತಿಲ್ಲದವರೇ ಇಲ್ಲ. ಅವಳ ಮಾವ ಚನ್ನಶೆಟ್ಟಿ ಅವಮಾನಿತನಾಗಿ ರಾಮಸಂದ್ರವನ್ನೇ ಬಿಟ್ಟು ತಿಪಟೂರಿನ ಆಚೆಯ ಚನ್ನಾಪುರದಲ್ಲಿ ಅಂಗಡಿ ಹಾಕಿಕೊಂಡಿದ್ದಾನೆ. ಅವಳ ಗಂಡ ಗಿರಿಯಶೆಟ್ಟಿಯೂ ಊರು ಬಿಟ್ಟು ಎಲ್ಲಿಗೋ ಹೋದ. ಅರಸೀಕೆರೆಯ ಹತ್ತಿರದ ಯಾವುದೋ ಊರಿನಲ್ಲಿ ಅವನು ಈಗ ಮನೆವಾಳತನಕ್ಕೆ ಇದ್ದಾನೆಂದು ಕೆಲವರು ಹೇಳುತ್ತಾರೆ.

ರೇವಣ್ಣಶೆಟ್ಟಿಗೆ ಬುದ್ಧಿಹೇಳಲು ಯಾರೂ ಇರಲಿಲ್ಲ. ಅವನ ನಾಲಿಗೆಯ ಮುಂದೆ ನಿಲ್ಲಲು ಯಾರೂ ಇಷ್ಟಪಡುವುದಿಲ್ಲ. ಸರ್ವಕ್ಕನ ತೌರಿನಲ್ಲಿ ಅಣ್ಣ ತಮ್ಮಂದಿರಿದ್ದಾರೆ. ಇವಳಿಗೆ ಇವಳ ಮಕ್ಕಳಿಗೆ, ಮಾಡುವಷ್ಟು

ಮಾಡಿದ್ದಾರೆ. ಆದರೆ ಅವರಿಗೂ ತಮ್ಮದೇ ಸಂಸಾರವಿದೆ. ಇವಳು ಎಷ್ಟೆಂದು ತನ್ನ ಗೋಳನ್ನು ಅವರಿಗೆ ಹೇಳಿಯಾಳು? ಒಂದು ಸಲ ಭಾವನಿಗೆ ಬುದ್ಧಿ ಹೇಳಲು ಅವಳ ಹಿರಿಯಣ್ಣ ಬಂದಿದ್ದಾಗ, ಅವ್ವ ಅಜ್ಜಿ ಎಂದೆಲ್ಲ ಬೈಸಿಕೊಂಡು, ಇನ್ನು ಮುಂದೆ ಇವನ ಕೈಲಿ ಮಾತನಾಡುವುದಿಲ್ಲವೆಂದು ಹೇಳಿ ಹೋಗಿದ್ದ.
ಸರ್ವಕ್ಕ ಹೇಳಿದಳು: 'ನಂಜಮ್ಮಾರೇ, ಎತ್ತ ತೃಪ್ತಿಗೆ ಮಕ್ಳುನ್ನ ಹ್ಯಂಗಾದ್ರೂ ಸಾಕ್ಬೇಕು. ನಿಮ್ಮ ಜನ್ರ ಹಂಗೆ ಎಲೆ ಹಚ್ಚಾಕೆ ನಮ್ಗೆ ಬರಾಕಿಲ್ಲ. ನೀವು ನನ್ನ ಕುಂಡ್ರುಸ್ಕಂಡ್ ಏಳ್ಕೊಡಿ. ಕಲ್ತ್ಕತೀನಿ. ಈ ವರ್ಸದಿಂದ ನೀವು ಎಲೆ ತರಾಕೆ ಚ್ವಾಳನಗುಡ್ಡದ ಅಳ್ಳಿಕ್ ಓಗೂವಾಗ ನನ್ನೂ ಕರ್ಕಂಡ್ ಓಗಿ.'
'ನೀವು ಎಲೆ ಹೊರುಕ್ಕೆ ಬಂದ್ರೆ ಶೆಟ್ರು ಸುಮ್ನಿರ್ತಾರಾ?'
'ಸುಮ್ನಿದ್ರೆ ಏನ್ ಮಾಡ್ತಾರೆ? ಇವತ್ ಮದ್ಯಾನ ನಿಮ್ಮನ್ನಿ ಕೊಂಡೋದ ರಾಗಿ ಬೀಸಿ ಮುದ್ದೆ ಮಾಡ್ದಾಗ ನಾಯಿ ತಿಂದ್ಹಂಗೆ ನುಂಗ್ಲಿಲ್ವಾ?'
ಮರುದಿನದಿಂದ ಸರ್ವಕ್ಕ ದಿನವೂ ಸ್ವಲ್ಪ ಸ್ವಲ್ಪ ಹೊತ್ತು ಬಂದು ಎಲೆ ಹಚ್ಚುವುದು ಹೇಳಿಸಿಕೊಳ್ಳುತ್ತಿದ್ದಳು. ಹಂಚೀಕಡ್ಡಿ ಹೇಗೆ ಸೀಳಬೇಕು, ಎಲೆಯ ತೊಟ್ಟು ಮುರಿದು ಹೇಗೆ ನೀರು ಚಿಮುಕಿಸಿ ಜೋಡಿಸಿ ಮಣೆ ಹೇರಿ, ಮೇಲೆ ಭಾರವಾದ ಒಂದು ಗುಂಡುಕಲ್ಲು ಏರಿಸಬೇಕು, ಮಧ್ಯಕ್ಕೆ ಎಂತಹ ದುಂಡಗಿರುವ ಎಲೆಯನ್ನೇ ಹಾಕಿ ಅದಕ್ಕೆ ಒಂದು ತಳ ಎಲೆಯ ತೇಪೆ ಕೊಟ್ಟು ಕಡ್ಡಿ ಮುರಿಯಬೇಕು ಎಂಬುದನ್ನು ವಿವರವಾಗಿ ಹೇಳಿಸಿಕೊಂಡು ತಕ್ಕಮಟ್ಟಿಗೆ ಹಚ್ಚುವುದನ್ನೂ ಕಲಿತಳು. 'ಹೀಗೆ ಹಚ್ಚಿ ಕೈ ಕುದುರಿದ ಮ್ಯಾಲೆ ಬ್ಯಾಗ ಬ್ಯಾಗ ಆಗುತ್ತೆ' – ಎಂದು ನಂಜಮ್ಮ ಭರವಸೆ ಕೊಟ್ಟಮೇಲೆ ಅವಳಿಗೆ ಸ್ವಲ್ಪ ಧೈರ್ಯ ಬಂತು.

– 6 –

ಒಂದು ಮಧ್ಯಾಹ್ನ ನಂಜಮ್ಮ ಊರಿನ ಸರ್ಕಾರೀ ಬಾವಿಯಲ್ಲಿ ಕುಡಿಯುವ ನೀರು ಸೇದಲು ಹೋಗಿದ್ದಾಗ ಕುಣಿಕೆ ಹರಿದು ಬಿಂದಿಗೆ ಬಾವಿಯೊಳಕ್ಕೆ ಬಿದ್ದುಬಿಟ್ಟಿತು. ಮನೆಯಲ್ಲಿ ಇದ್ದುದು ಒಂದೇ ಬಿಂದಿಗೆ. ಇನ್ನು ಬಾವಿ ಮುಳುಗಲು ಕಂಬನಕೆರೆಯ ಕಾಸಿಂಸಾಬಿ ಬಂದಾಗಲೇ ಬಿಂದಿಗೆ ಸಿಕ್ಕುವುದು. ಮನೆಗೆ ಹೋಗಿ ಗಡಿಗೆಯನ್ನಾದರೂ ತರಬೇಕು. ಸರ್ಕಾರೀ ಬಾವಿಯಿಂದ ಗಡಿಗೆಯಲ್ಲಿ ನೀರು ಹೊತ್ತುಕೊಂಡು ಹೋಗಲು ಅವಳಿಗೆ ಸಂಕೋಚವೆನಿಸಿತು. ಆದರೆ ಮಾಡುವುದೇನು – ಎಂದುಕೊಂಡು ಮನೆಗೆ ಬಂದಾಗ ಕಲ್ಲೇಶ ಬಂದು ಕುಳಿತಿದ್ದ. ಹುಡುಗರೆಲ್ಲ ಅವನು ತಂದಿದ್ದ ಪೆಪ್ಪರುಮೆಂಟನ್ನು ದವಡೆಗೆ ಕೊಟ್ಟುಕೊಂಡು ಚಪ್ಪರಿಸುತ್ತಿದ್ದರು.
'ನೀರಿಗೆ ಹೋಗಿದ್ಯಂತೆ. ಇದೇನು ಬರೀ ಕೈಲಿ ಬಂದೆ?' – ಅವನು ಕೇಳಿದ.
'ಬಿಂದಿಗೆ ಕಣ್ಣಿ ಹರ್ಕಂಡು ಬಿದ್ಬಿಡ್ತು.'
'ನಡಿ, ನಾನು ತೆಗೀತೀನಿ'– ಎಂದು ಅವನು ಎದ್ದು ಹೊರಟ. ಅವನ ಹಿಂದೆಯೇ ನಂಜು ಹೋದಳು. ಮಾವ ಬಾವಿ ಮುಳುಗುವುದನ್ನು ನೋಡಲು ಹುಡುಗರೂ ಉತ್ಸುಕರಾಗಿ ಬಂದರು. ನಂಜು ಮನೆಯ ಬಾಗಿಲಿಗೆ ಬೀಗ ಮೆಟ್ಟಿಕೊಂಡಳು.
ಊರಿನ ಇತರ ಎಲ್ಲ ಬಾವಿಗಳಲ್ಲಿಯೂ ಇದ್ದ ನೀರು ಸ್ವಲ್ಪ ಸಪ್ಪೆ. ಆದರೆ ಸರ್ಕಾರದವರು ಈಗ ಎರಡು ವರ್ಷದಲ್ಲಿ ತೆಗೆಸಿ ಕಲ್ಲಿನ ಕಟ್ಟಡ ಕಟ್ಟಿಸಿರುವ ಈ ಬಾವಿಯ ನೀರು ರುಚಿಯಾಗಿತ್ತು: ಶುಚಿಯಾಗಿಯೂ ಇತ್ತು. ಎಡಗೈ ಬಲಗೈಯವರು ವಿನಾ ಉಳಿದ ಎಲ್ಲ ಮತಸ್ತರೂ ಅಲ್ಲಿಯೇ ಕುಡಿಯುವ ಮತ್ತು ಅಡಿಗೆಯ ನೀರು ತರುತ್ತಿದ್ದರು. ಬ್ರಾಹ್ಮಣ, ಲಿಂಗಾಯತ, ಅಕ್ಕಸಾಲಿ, ಚಾತಾಳಿ, ಮೊದಲಾದ ಮೇಲುಜಾತಿಯ ಹೆಂಗಸರು ಮಾತ್ರ, ಸೇದಲು ತಮ್ಮ ಹಗ್ಗ ಬಿಡುವ ಮೊದಲು, ಮನೆಯಿಂದ ತಂದ ನೀರಿನಲ್ಲಿ ಒಂದು ಶಾರೆಯನ್ನು ರಾಟಿಗೆ ಎರಚಿ ಮಡಿ ಮಾಡಿಕೊಳ್ಳುತ್ತಿದ್ದರು.
ಕಲ್ಲೇಶ ಸೇದುವ ಹಗ್ಗವನ್ನು ಬಾವಿಯೊಳಕ್ಕೆ ಇಳಿಬಿಟ್ಟು ಮೇಲ್ಭಾಗವನ್ನು ರಾಟೆಯ ಕಬ್ಬಿಣದ ಗಡಾರಿಗೆ ಬಂದೋಬಸ್ತಾಗಿ ಕಟ್ಟಿದ. ಉಟ್ಟಿದ್ದ ಪಂಚೆ ಮತ್ತು ತೊಟ್ಟಿದ್ದ ಶರಟು ಕೋಟುಗಳನ್ನು ಬಿಚ್ಚಿ ಕೆಳಗೆ ಇಟ್ಟು, ನೋಡಿಕೊಳ್ಳುವಂತೆ ತಂಗಿಗೆ ಹೇಳಿ ಹಗ್ಗ ಹಿಡಿದು ಬಾವಿಗೆ ಇಳಿದ. ಪಾತಾಳದಷ್ಟು ಆಳದಲ್ಲಿ ನೀರಿದ್ದ ಆ ಬಾವಿ, ಎರಡು ಮೂರು ಉದ್ದ ಎರಡು ಮಾರು ಅಗಲವಾಗಿತ್ತು. ಆದರೆ ಹತ್ತಿ ಇಳಿಯಲು ಮೂಲೆಯಲ್ಲಿ ಸಣ್ಣ ಸಣ್ಣ ನಾಲಗೆ ಕಲ್ಲುಗಳಿದ್ದವು. ನೀರನ್ನು ಮುಟ್ಟಿ ಒಂದು ಸಲ ಮುಳುಗಿ ಅವನು ಮೇಲೆ ಬಂದಾಗ ಒಂದು ಬಿಂದಿಗೆ ಎತ್ತಿ ತಂದಿದ್ದ. ಹಗ್ಗದ ಕುಣಿಕೆಗೆ ಕಟ್ಟಿ – 'ಮೇಲೆ ಎಳಕೋ' ಎಂದು ಕೂಗಿ ಸನ್ನೆ ಮಾಡಿದಮೇಲೆ ನಂಜು ಎಳೆದುಕೊಂಡಳು. ಆದರೆ ಅದು ಅವಳ ಬಿಂದಿಗೆಯಲ್ಲ. 'ಅದ ಅಲ್ಲೇ ಮೇಲೆ ಇಟ್ಟುಕೊ, ಯಾರ್ ಬಂದ್ರೂ ಕೊಡ್ಬ್ಯಾಡ. ಮತ್ತೆ ಹಗ್ಗ ಬಿಡು' – ಎಂದು ಕೂಗಿ ಹೇಳಿ ಮತ್ತೊಮ್ಮೆ ಮುಳುಗಿದ. ಇನ್ನೊಂದು ಬಿಂದಿಗೆ ಸಿಕ್ಕಿತು. ಕೆಳಗೆ ಇನ್ನೂ ಹತ್ತು ಹನ್ನೆರಡು ಬಿಂದಿಗೆಗಳಿದ್ದುದು ನೀರಿನೊಳಗೆ ತಡಕುವಾಗ ತಿಳಿಯಿತು. ಎಲ್ಲವನ್ನೂ ತೆಗೆದು ಮೇಲೆ ಕಳುಹಿಸಿದ.
ಹಗ್ಗ ಹಿಡಿದು ನಾಲಗೆ – ಕಲ್ಲುಗಳ ಮೇಲೆ ಕಾಲುಗಳನ್ನಿಟ್ಟು ಅವನು ಮೇಲೆ ಏರಿ ಬರುವ ಹೊತ್ತಿಗೆ ಬಾವಿಯ ದಡದಲ್ಲಿ ಇಪ್ಪತ್ತಕ್ಕೂ ಮೇಲ್ಪಟ್ಟು ಗಂಡಸರು ಹೆಂಗಸರು ಸೇರಿದ್ದರು.

'ನಂಜಾ, ನಿನ್ನ ಬಿಂದಿಗೆ ತಗಂಡು ಬ್ಯಾರೆ ಇಟ್ಕ' – ಎಂದು ತಂಗಿಗೆ ಹೇಳಿದ ಕಲ್ಲೇಶ ಜನಗಳಿಗೆ ಹೇಳಿದ: 'ಬಿಂದಿಗೆ ವಾರಸ್ದಾರು ಒಂದೊಂದುಕ್ಕೆ ಎಂಟೆಂಟಾಣೆ ತಂದು ಕೊಟ್ಟು ಬಿಡಿ. ಇಲ್ದೆ ಇದ್ರೆ ನಾನು ಇವನ್ನೆಲ್ಲ ನಮ್ಮೂರಿಗೆ ತಗಂಡು ಹೋಕ್ತೀನಿ.'

ಕೆಲವರು ದುಡ್ಡು ತರಲು ಮನೆಗೆ ಹೋದರು. ಅಲ್ಲಿಗೆ ಬಂದಿದ್ದ ಮಾಜೀ ಹಂಗಾಮಿ ಶ್ಯಾನುಭೋಗ ಸಿವಲಿಂಗ ಪ್ರಶ್ನಿಸಿದ: 'ನಮ್ಮೂರ ಬಾವಿ ಮುಳುಗಿ ಕೊಡಪಾನ ತೆಗ್ದು ಕುಂಡೊ0ುಕ್ಕೆ ನಿಮ್ಗೆ 0ುಾರ್ರೀ ಅತಾಲ್ಟಿ ಕೊಟ್ಟೋರು?'

'ಹಾಗಾದ್ರೆ ನಾನು ಇವುನ್ನೆಲ್ಲ ನೀರು ತುಂಬಿ ಮತ್ತೆ ಬಾವಿ ಒಳಿಕ್ಕೆ ಮುಳುಗುಸ್ತೀನಿ. ಉಸುರು ಹಿಡಿದು ಮುಳುಗಿದ್ದು ಬಿಟ್ಟ0ುಾ?'

ಸಿವಲಿಂಗನಿಗೆ ಇನ್ನು ಉತ್ತರ ಹೊಳೆ0ುಲಿಲ್ಲ. ಎಲ್ಲರೂ ಎಂಟೆಂಟಾಣೆ ಕೊಟ್ಟರು. ಕಲ್ಲೇಶನಿಗೆ ಒಟ್ಟೂ ಆರೂವರೆ ರೂಪಾಯಿ ಗಿಟ್ಟಿತು. ಹಣವನ್ನು ಕೋಟಿನ ಜೇಬಿಗೆ ಹಾಕಿಕೊಂಡು ಪಂಚೆ, ಶರಟು, ಕೋಟುಗಳನ್ನು ಕೈಲಿ ಹಿಡಿದು ಒದ್ದೆ ನಿಕ್ಕರಿನಲ್ಲಿ ಅವನು ಮನೆಗೆ ಬಂದ.

ಅಪರೂಪಕ್ಕೆ ಬಂದಿರುವ ಅಣ್ಣ ಎರಡು ದಿನವಾದರೂ ಇರುತ್ತಾನೆಂದು ಭಾವಿಸಿದ ನಂಜು ನಾಳೆ ಏನಾದರೂ ವಿಶೇಷ ಮಾಡಬೇಕೆಂದು 0ೋಚಿಸಿ, ಹೋಗಿ ಶ್ಯಾವಿಗೆ ಮಾಡುವುದಕ್ಕೆ ಸಾಮಾನು ತಂದಳು. ಮಧ್ಯಾಹ್ನ ಊಟವಾದ ಮೇಲೆ ಒಂದು ಗಳಿಗೆ ಮಲಗಿ ಎದ್ದ ಕಲ್ಲೇಶ ಕೇಳಿದ: 'ಇದೇನು ತಂದೆ?'

'ಶ್ಯಾವಿಗೆ ಮಾಡಾಣಾ ಅಂತ. ನಿಂಗೆ ಇಷ್ಟವಲ್ವೇ?'

'ನಾನಿರುಲ್ಲ. ಈಗ ಹೊತ್ತು ಮುಳುಗೂ ಹೊತ್ತಿಗೆ ಹೋಗ್ತೀನಿ.'

'ಇದೇನು ಹಾಗೆ ಬಂದೆ, ಹೀಗೆ ಹೊರಟೆ. ಇರು ಇರು.'

'ಇಲ್ಲ, ಅರ್ಜೆಂಟ್ ಕೆಲ್ಸವಿದೆ. ನಿನ್ನ ನೋಡ್ಕಂಡ್ ಹೋಗಾಣಾ ಅಂತ ಬಂದೆ. ನಂಗೆ ಒಂದು ಲೋಟ ಕಾಫಿ ಮಾಡ್ಕೊಡು ಸಾಕು.'

ರಾಮಣ್ಣನನ್ನು ಅಂಗಡಿಗೆ ಕಳಿಸಿ ಆರು ಕಾಸಿನ ಪುಡಿ ತರಿಸಿ ಬೆಲ್ಲ ಹಾಕಿ ಅವಳು ಒಂದು ಕಂಚಿನ ಗಳಾಸು ಮಾಡಿಕೊಟ್ಟಳು. ಅದನ್ನು ಕುಡಿದ ಕಲ್ಲೇಶ ಹೊರಟೇಬಿಟ್ಟ. ಆಗಲೇ ಹೊತ್ತು ಮುಳುಗಿ ಕತ್ತಲೆ0ುಾಗುತ್ತಿತ್ತು. ಅವನಿಗೂ ಅಷ್ಟೆ – ಅವನ ಅಪ್ಪನಂತೆ0ೆುೕ ಕತ್ತಲೆಂದರೆ ಸ್ವಲ್ಪವೂ ಭ0ುವಿಲ್ಲ.

ಅವನು ಹೋದ ಸ್ವಲ್ಪ ಹೊತ್ತಿಗೆ ಸರ್ವಕ್ಕ ಬಂದು ಹೇಳಿದಳು: 'ನಂಜಮ್ಮಾರೇ, ಚ್ವಾಳನಗುಡ್ಡದ್‌ತಾವ ಮುತ್ತುಗದೆಲೆ ಬಂಗಾರದ ಎಲೆ ಹಂಗವಂತೆ. ಗುಡಿ ಮಾದೇವ0ೊ್ಯೕರು ಹೂವಿನಹಳ್ಳಿಗೆ ಬಿಕ್ಸುಕ್ ಓದೋರು ಕಣ್ಣಲ್ಲಿ ನೋಡಿ ಮನ್ಸು ತಡೀದೆ ಕಿತ್ಕಂಡ್ ಬಂದಿದ್ರು. ನಾನೇ ನೋಡ್ದೆ.'

'ಇನ್ನೂ ಮಾಘಮಾಸ ಕಳೆದಿಲ್ವಲಾ ಸರ್ವಕ್ಕ?'

'ಮಾರ್ಗಶೀರದಾಗೆ ಈ ವರ್ಸ ಮಳೆ0ುಾ0ುುಲ್ರ, ಅದ್ಕೆ ಬ್ಯಾಗ ಬಂದ್ಯೆತೆ. ನಾಳೀಕ್ ಹ್ವಾಗಾನ ನಡೀರಿ.'

ಎಲೆ0ು ಕಾಲದಲ್ಲಿ ಬೇಗ ಬೇಗ ಮಾಡಿಕೊಳ್ಳದೆ ಇದ್ದು ಬೇಗ ಮುಂಗಾರು ಹನಿತರೆ ಅದಕ್ಕೂ ಎಷ್ಟೆ0ುಾಗುತ್ತದೆಂದು 0ೋಚಿಸಿದ ನಂಜಮ್ಮ, ಆಗಲಿ ಎಂದಳು. ಕಾಗೆ ಕರ್ ಎನ್ನುವ ಮೊದಲೇ ಸಿದ್ಧವಾಗಿ ಬರುವುದಾಗಿ ಹೇಳಿ ಸರ್ವಕ್ಕ ಮನೆಗೆ ಹೋದಳು. ಅವಳಿಗೆ ಅದು ಮೊದಲನೆ0ು ದಿನದ ಅನುಭವ. ಆದುದರಿಂದ ರಾತ್ರಿ ಸರಿ0ುಾಗಿ ನಿದ್ದೆ ಬರಲಿಲ್ಲ. ಅಂತೂ ಇಂತೂ ರಾತ್ರಿ0ುನ್ನು ಕಳೆದು ಕಾಗೆ0ು ಶಬ್ದ ಕೇಳಿದವಳೇ ಎದ್ದು, ಗೋಣಿಚೀಲ ಮತ್ತು ರೊಟ್ಟಿ0ು ಗಂಟನ್ನು ಕೈಲಿ ಹಿಡಿದು, ತಲೆಗೆ ಮುಸುಗು ಹಾಕಿಕೊಂಡು ಬಂದು ನಂಜಮ್ಮನ ಮನೆ0ು ಕದ ತಟ್ಟಿದಳು. ನಂಜಮ್ಮನೂ ಸಿದ್ಧವಾಗಿ ಬಂದಳು. ಇನ್ನೂ ಬೆಳದಿಂಗಳಿತ್ತು. ಬೆಳದಿಂಗಳ ಬೆಳಕಿಗೆ ಕಾಗೆ ಕೂಗಿರಬಹುದೆಂಬ ಅನುಮಾನ ನಂಜಮ್ಮನಿಗೆ ಆದರೂ, 'ಇಲ್ಲ ಕಣ್ರಿ, ಬಿಸಿಲೇರಿದ್ರೆ ಕಷ್ಟ. ನಡೀರಿ' ಎಂದು ಸರ್ವಕ್ಕ ಮುಂದೆ ನಡೆದಳು. ಇಬ್ಬರೂ ಊರನ್ನು ದಾಟುವಾಗ ಊರ ಮುಂದಿನ ತೋಪಿನ ಹತ್ತಿರ ನರಸಿ ಹೊಸದಾಗಿ ಕಟ್ಟಿಕೊಂಡಿದ್ದ ಚಿಲ್ಲರೆ ಅಂಗಡಿ0ು ಮನೆ0ು ಬಾಗಿಲನ್ನು ತೆರೆದಂತಾಯಿತು. 0ುಾರೋ ಗಂಡಸರು 'ಖಂಡಿತ' ಎಂದು ಮೆಲ್ಲಗೆ ಹೇಳುತ್ತಾ ಹೊರಗೆ ಬಂದು, ಇವರು ಹೋಗುವ ದಾರಿ0ುಲ್ಲಿ0ೆುೕ ಸರಸರನೇ ನಡೆದು ಹೋದರು. ನರಸಿ ಬಾಗಿಲು ಹಾಕಿಕೊಂಡಳು.

ಆ ಗಂಡಸು ಕಲ್ಲೇಶನೇ ಎಂಬುದು ನಂಜಮ್ಮನಿಗೆ ತಕ್ಷಣ ತಿಳಿಯಿತು. ತಲೆಗೆ ಸೆರಗಿನ ಮುಸುಕು ಹಾಕಿ, ಗೋಣಿ0ು ಚೀಲವನ್ನು ಹೆಗಲಿಗೆ ಹಾಕಿಕೊಂಡು ನಡೆ0ುುತ್ತಿದ್ದುದರಿಂದ ಇವರಿಬ್ಬರ ಪೈಕಿ ಒಬ್ಬಳು ತನ್ನ ತಂಗಿ ಎಂಬುದು ಅವನಿಗೆ ತಿಳಿ0ುಲಿಲ್ಲ. ಇವರಾರೆಂಬ ಗೊಡವೆ0ುೂ ಇಲ್ಲದೆ ಅವನು ಬೇಗ ಬೇಗ ನಡೆದ. ನಂಜುವೇ ನಡಿಗೆ0ುನ್ನು ನಿಧಾನ ಮಾಡಿ ಸ್ವಲ್ಪ ಹಿಂದೆ ಉಳಿದಳು. ಕಾರಣವನ್ನು ಸರ್ವಕ್ಕನಿಗೆ ಹೇಳಬಾರದೆಂದು ಅವಳು ಸುಮ್ಮನೆ ಇದ್ದಳು. ಮುಂದೆ ನಡೆದು ಹೋಗುತ್ತಿದ್ದ ಗಂಡಸು ಇವರ ಕಣ್ಣಿಗೆ ಕಾಣಿಸದಷ್ಟು ಮುಂದೆ ಹೋಗಿ ಮರೆ0ುಾದ ಮೇಲೆ ಸರ್ವಕ್ಕನೇ ಕೇಳಿದಳು: 'ಅವ್ರು ನಿಮ್ಮಣ್ಣ0ು್ಯ ಅಲ್ವರಾ?'

'ಅದ್ಯಾರೋ ಕಾಣವ್ವ.'
'ಊ ಕಣ್ರೀ ಅವ್ರೆಯಾ. ಅತ್ ಅದ್ನೈದು ದಿನಕ್ಕೆ ಒಂದ್ಸಲಿ ಬತ್ತಾರಂತೆ. ರಾತ್ರಿನಾಗ ಕತ್ಲಾದ ಮ್ಯಾಲೆ ಬಂದು ಬ್ಯಳಿಗ್ಗೆ ಕೋಳಿ ಕೂಗೂಕ್ ಮದ್ಲೇ ಹ್ವಂಟೋಯ್ತುರಂತೆ. ಆ ನರಸಿಯೇ ಯಾರ್ಯಾರ ಕೈಲೋ ಹಂಗಂದ್ಲಂತೆ.'
ನಂಜಮ್ಮ ಮಾತನಾಡಲಿಲ್ಲ. ತನಗೆ ಈ ಮಾತು ಕೇಳಲೇ ಇಲ್ಲವೇನೋ ಎಂಬಂತೆ ಮೌನವಾಗಿ ಹೆಜ್ಜೆ ಹಾಕಿದಳು.

## ಅಧ್ಯಾಯ 9

– 1 –

ಅದು ಅನುಭವಕ್ಕೆ ಬಂದು ಇದ್ದವರದೇ ಆಗುವಂತೆ, ಹನುಮಂತರಾಯನ ಗುಡಿಯು ಗಂಗಮ್ಮ ಅಪ್ಪಣ್ಣಯ್ಯರದಾಯಿತು. ಗುಡಿಯ ಪೂಜೆಯ ಹಕ್ಕಿನ ಮೇಲೆ ಅಣ್ಣಾಜೋಯಿಸನ ಅಧಿಕಾರವೇನೂ ಕಡಿಮೆಯಾಗಲಿಲ್ಲ. ಆದರೆ ಈಗ ಅದನ್ನು ಹನುಮಂತರಾಯನ ಗುಡಿ ಎನ್ನುವ ಬದಲಿ ಎಷ್ಟೋ ಜನರು ಗಂಗಮ್ನೋರ ಮನೆ ಎಂದು ಕರೆಯುತ್ತಾರೆ.
ಗಂಗಮ್ಮ ಅಪ್ಪಣ್ಣಯ್ಯರು ಆಗಾಗ್ಗೆ ಹಳ್ಳಿಯ ಮೇಲೆ ಹೋಗುವುದೂ ಉಂಟು. ರಾಮಸಂದ್ರದ ಶಿವೇಗೌಡನ ಹೆಸರು ಸುತ್ತ ಮೂರು ಮೈಲಿಯ ಆಚೆ ಮೊದಲು ತಿಳಿದಿರಲಿಲ್ಲ. ಈಗ ಅದು ಇಪ್ಪತ್ತು ಮೈಲಿ ಸುತ್ತಿಗೂ ತಿಳಿದಿದೆ. ತಾಯಿ ಮಗ, ಇಬ್ಬರೂ ಹಳ್ಳಿಹಳ್ಳಿಗೆ ಹೋಗುತ್ತಾರೆ. 'ನಮ್ಮ ಆಸ್ತೀನೆಲ್ಲ ಒಬ್ಬ ಪಾಪಿ ಸೂಳೇಮಗ ಮೋಸ ಮಾಡಿ ತಿಂದ್‌ಹಾಕಿಬಿಟ್ಟ. ನಮಗೆ ಜೀವನಕ್ಕಿಲ್ಲ. ಏನಾದ್ರೂ ಕೊಡಿ' – ಎಂದು ಮನೆ ಮನೆಗಳಲಿ ್ಲಯೂ ಕೇಳುತ್ತಾರೆ. ಹಾಗೆಂದು ಕೇಳಿ ತನ್ನ ಹಳೆಯ ಕೆಂಪಿನ ಸೀರೆಯನ್ನು ನೆಲದ ಮೇಲೆ ಹಾಸುವವಳು ಗಂಗಮ್ಮ. ಅದರ ಮೇಲೆ ಮೊರದಲ್ಲಿ ತಂದು ಸುರಿದ ರಾಗಿ, ಅವರೇಕಾಳು, ಮೆಣಸಿನ ಕಾಯಿಗಳನ್ನು ಕಟ್ಟಿ ತಂದುಕೊಟ್ಟರೆ ಎಲ್ಲವನ್ನೂ ಒಟ್ಟು ಗೋಣಿಯ ಚೀಲದಲ್ಲಿ ತುಂಬಿ ತಲೆಯಮೇಲೆ ಹೊತ್ತು ಊರಿಗೆ ತರುವವನು ಅಪ್ಪಣ್ಣಯ್ಯ. ಮಾದೇವಯ್ಯನವರೂ ಹೀಗೆಯೇ ಮಾಡುತ್ತಾರೆ. ಆದರೆ ಅವರಿಗೆ ಭಿಕ್ಷೆ ಬೇಡಲು ಯಾವ ಕಾರಣವೂ ಇಲ್ಲ. ಹೇಳಿ ಕೇಳಿ ಜಂಗಮರು. ಕೆಂಪು ಅಂಗಿ ಕೆಂಪು ಅರಿವೆ ತೊಟ್ಟು ಕೆಂಪು ಮುಂಡಾಸು ಧರಿಸಿ ವಿಭೂತಿ ಬಳಿದ ಸಂನ್ಯಾಸಿ ಅವರು. ಹೊಸಿಲ ಒಳಗೆ ನಿಂತು – 'ಭಿಕ್ಷಾ, ಗುರು ರೇವಣ್ಣರ ಭಿಕ್ಷಾ' ಎನ್ನುವುದಷ್ಟೇ ಅವರ ಕೆಲಸ. ಒಂದು ಬೊಗಸೆ ರಾಗಿ ಬಂದು ಬೀಳುತ್ತದೆ. ಆದರೆ ಗಂಗಮ್ಮ ಪ್ರತಿ ಮನೆಯಲ್ಲೂ ತನ್ನ ಪ್ರವರ ಹೇಳಿ ಶಿವೇಗೌಡನ ಸುಳಿಯನ್ನು ಶಪಿಸುತ್ತಾಳೆ. ಕೊಡುವವರು ಅರ್ಧ ಮೊರದಷ್ಟಾದರೂ ಕೊಡುತ್ತಾರೆ. ಕೊಡದವರು ಶಾಪ ಪಡೆಯುತ್ತಾರೆ.
ಗಂಗಮ್ಮನ ಮನೆಯಲ್ಲಿಯೂ ಪೆಟ್ಟಿಯಿದೆ. ಪೆಟ್ಟಿಯ ಭರ್ತಿ ರಾಗಿ. ಎರಡು ಮೊಡೆ ಅವರೇಕಾಳು. ಒಂದು ಗುಡಾಣದ ಭರ್ತಿ ಮೆಣಸಿನಕಾಯಿ ಇದೆ. ಶಿವೇಗೌಡ ಬದುಕಿದ್ದೇನು, ನಾನು ಕೆಟ್ಟಿದ್ದೇನು ಎಂದು ಗಂಗಮ್ಮ ಧರ್ಮ ಕರ್ಮದ ಸಮಗುಣವನ್ನು ಹೇಳುತ್ತಾಳೆ.
ಒಂದು ಮಧ್ಯಾಹ್ನ ಎರಡು ಎರಡೂವರೆ ಗಂಟೆಯ ಹೊತ್ತಿಗೆ ಹನುಮಂತರಾಯನ ಗುಡಿಯ ಮುಂದೆ ಎರಡು ಗಾಡಿಗಳು ಬಂದು ನಿಂತುವು. ಗಾಣಿಗರ ಶಿಂಗಶೆಟ್ಟಿಯದೊಂದು, ಉಪ್ಪಾರರ ಮುಕ್ಕಣ್ಣನದು ಇನ್ನೊಂದು. ಎರಡು ಗಾಡಿಗಳ ಭರ್ತಿ ಪಾತ್ರೆ ಪರಟಿ ಸಾಮಾನುಗಳೂ ಇದ್ದುವು. ಅವುಗಳ ಹಿಂದೆಯೇ ಐವತ್ತು ವರ್ಷದ ಒಬ್ಬ ವಿಧವೆ, ಇಪ್ಪತ್ತೈದರ ಸುಮಾರಿನ ಒಬ್ಬ ಹೆಂಗಸು, ಏಳು ವರ್ಷದ ಒಂದು ಹುಡುಗಿ, ಮತ್ತು ನಾಲ್ಕು ವರ್ಷದ ಒಬ್ಬ ಹುಡುಗ, ಇಷ್ಟು ಜನ ಬಂದರು. ಬಂದ ಇವರನ್ನು ಮೊದಲು ಕಂಡ ಅಪ್ಪಣ್ಣಯ್ಯ ಕಳ್ಳ ತಪ್ಪಿಸಿಕೊಳ್ಳುವವನಂತೆ ಗುಡಿಯ ಹಿಂಭಾಗಕ್ಕೆ ಹೋಗಿ ಅಲ್ಲಿಂದ ಹುಲ್ಲುಕೊಪ್ಪಲುಗಳ ಸಂಧಿಯಲ್ಲಿ ನುಸಿದು ಎಲ್ಲಿಗೋ ಹೋಗಿಬಿಟ್ಟ. ಗಾಡಿಯ ಕೊರಳು ಇಳಿಸಿದ ಮುಕ್ಕಣ್ಣ – 'ಇದೇ ಕಣ್ರವ್ವಾ, ಗಂಗವ್ವಾರ ಮನೆ' ಎಂದು ಹೇಳಿ ಗಾಡಿಯ ಸಾಮಾನುಗಳನ್ನು ಇಳಿಸಲು ಪ್ರಾರಂಭಿಸಿದ. ಬಂದವರ ಪೈಕಿ ಹಿರಿಯಳು ಅನುಮಾನಿಸಿಕೊಂಡು ಬಾಗಿಲನ್ನು ಪ್ರವೇಶಿಸಿದಳು. ಗಂಗಮ್ಮನಿಗೆ ಗುರುತು ಸಿಕ್ಕಲಿಲ್ಲ. ಅವಳೇ – 'ನುಗ್ಗೀಕೆರೆ ನಮ್ಮದು. ಯಜಮಾನ್ರು ತೀರಿಹೋದರು. ಎರಡು ವರ್ಷವಾಯಿತು. ಸಾತೂನು, ಮಕ್ಳೂನು, ಬಂದು ನಿಮ್ಮ ಸೇವೆ ಮಾಡ್ಕಂಡಿರ್‌ಬೇಕು ಅಂತಿದ್ರು. ಕರ್ಕಂಡ್ ಬಂದೆ' ಎಂದಳು.
ಅವರ ಮಾತಿನ ಭಾವವು ಪೂರ್ತಿಯಾಗಿ ತಿಳಿಯಬೇಕಾದರೆ ಗಂಗಮ್ಮನಿಗೆ ಎರಡು ನಿಮಿಷ ಆಯಿತು. ಅಷ್ಟರಲ್ಲಿ ಸಾತು ಎರಡು ಮಕ್ಕಳ ಕೈಯ್ಯನ್ನೂ ಹಿಡಿದುಕೊಂಡು ಬಂದಳು. ಗಂಗಮ್ಮನ ಕಲ್ಪನೆ ಮಿಂಚಿನಂತೆ ಹಾಯಿತು. 'ಏನೇ ಮುಂಡೆ, ಈ ಹಿರಿ ಹುಡುಗಿಯಂತೂ ನಮ್ಮಪ್ಪಣ್ಣಯ್ಯಂಗೇ ಹುಟ್ಟಿದ್ದು. ನೀನಿಲ್ಲಿದ್ದಾಗ್ಲೇ ಅದುಕ್ ಬಸುರಿಯಾಗಿದ್ದೆ. ಈ ಎರಡನೇ ಹುಡುಗನನ್ನು ಅದ್ಯಾವನಿಗೆ ಹೆತ್ತೆ ಬೊಗುಳೇ ಹಾದರಗಿತ್ತಿ? ಶ್ಯಾನುಭೋಗ ರಾಮಣ್ಣೋರ ವಂಶ ಕೆಡುಸ್ಬೇಕು ಅಂತ ಇಲ್ಲಿಗ್ ಬಂದ್ಯೇನೇ? ನಿಂಗೇನ್ ಮಾಡ್ತೀನಿ ನೋಡೂವಂತೆ ತಾಳು' – ಎಂದು ಮೇಲೆ ಎದ್ದು, ಮೂಲೆಯಲ್ಲಿದ್ದ ಕಸ ಪೊರಕೆ ತೆಗೆದುಕೊಂಡು ನಿಂತಳು.
'ಅದ್ಯಾಕ್ ಹೀಗೆ ಕೆಟ್ಟ ಮಾತಾಡ್ತೀರಾ? ನಿಮ್ಮ ಮಗನೇ ನಮ್ಮೂರಿಗೆ ಬಂದಿದ್ದ. ನನ್ನ ಮಗಳು ಅಂಥಾ

ನಡತೆ0ಯೋಳಲ್ಲ. ಬೇಕಾದ್ರೆ ನಿಮ್ಮಗನ್ನೇ ಕರ್ದು ಕೇಳಿ. ನಾಮಕರಣಕ್ಕೆ ಬನ್ನಿ ಅಂತ ಕಾಗದ ಬರೆದರೂ 0ಯಾಕೆ ಬರಲಿಲ್ಲ?' – ಎಂದು ಬೀಗಿತ್ತಿ ಕೇಳಿದರೆ ಅದು ಗಂಗಮ್ಮನ ಕಿವಿಗೆ ಹೋಗಲಿಲ್ಲ.
ಸಾತು ತಾನು ಗುಡಿಯಿಂದ ಹೊರಗೆ ಬಂದುಬಿಟ್ಟಳು. ಹುಡುಗರಿಬ್ಬರೂ ಹೆದರಿ ತಾಯಿ0ು ಹಿಂದೆ ಸೆರಗು ಹಿಡಿದು ನಿಂತುಕೊಂಡುವು. ಸಾತುವಿನ ತಾಯಿ – 'ಇಂಥಾ ಹೆಂಗ್ಸನ್ನ ನಾನೆಲ್ಲೂ ನೋಡಿಲ್ಲ. ಒಳ್ಳೇದಾ0ುತ್ತು' ಎಂದುಕೊಂಡು ಹೊರಗೆ ಬಂದಿದ್ದರು. ಅವರು ಗಾಡಿ0ುನ್ನು ಹಿಂತಿರುಗಿ ಹೊಡೆಸುತ್ತಿದ್ದರೋ ಏನೋ, ಸಾತುವೇ, 'ಅಮ್ಮಾ, ಅವರ ಕೈಲಿ ಮಾತಾಡದೇ ಹೋಗೋದು ಬ್ಯಾಡ. ನನ್ನ ಓರಗಿತ್ತಿ ಬ್ಯಾರೆ ಇದಾರಂತಲ್ಲ, ಸಧ್ಯಕ್ಕೆ ಅವರ ಮನೆಗೆ ಹೋಗಾಣ' ಎಂದಾಗ ತಾಯಿ ಒಪ್ಪಿದಳು. ಮುಕ್ಕಣ್ಣ, ಶಿಗಶೆಟ್ಟಿ, ಎರಡು ಗಾಡಿಗಳನ್ನು ಕೊರಳೆತ್ತಿ ತಂದು ನಂಜಮ್ಮನ ಮನೆ0ು ಮುಂದೆ ಬಿಟ್ಟು ಸಾಮಾನುಗಳನ್ನು ಒಂದೊಂದಾಗಿ ಇಳುಕಿದರು. ನಂಜಮ್ಮ ಇವರು ಬಂದ ಕಾರಣ ಕೇಳಲಿಲ್ಲ. ಸಾತುವಿನ ತಾಯಿ0ು ಮಡಿವೇಷ ನೋಡಿದರೆ 0ುಜಮಾನರು ಸತ್ತಿರುವುದು ತಿಳಿ0ುತ್ತಿತ್ತು. 0ಯಾವ ಕಷ್ಟದಲ್ಲಿದ್ದಾರೋ ಏನೋ! ಮೊದಲು ಒಳಗೆ ಕರೆದು ಊಟ ಗೀಟ ಆದಮೇಲೆ ತಾನೆ ಮುಂದಿನ ಏನಿದ್ದರೂ ವಿಚಾರಿಸಬೇಕಾದುದು? ಎಲ್ಲರನ್ನೂ ಒಳಗೆ ಕರೆದು ಕೂರಿಸಿದಳು. ಈ ಗಂಡು ಹುಡುಗನನ್ನು ನೋಡಿ ಅವಳಿಗೂ ಆಶ್ಚ0ರ್ು. ಆದರೆ ಗಂಡನಿಗೆ ಹುಟ್ಟಿರದ ಮಗುವನ್ನು 0ಯಾವ ಹೆಂಗಸು ತಾನೆ ಇಷ್ಟು ಧೈ0ರ್ುವಾಗಿ ಕರೆದುಕೊಂಡು ಬರುತ್ತಾಳೆ? – ಎಂಬ ಒಂದು ವಿಶ್ವಾಸ ಮಾತ್ರ ಅವಳಿಗೆ ಹೋಗಲಿಲ್ಲ. ಸಾತು ಕಣ್ಣೀರು ಹಾಕುತ್ತಲೇ ಇದ್ದಳು. ಅವಳ ತಾಯಿ ತಂಗಮ್ಮನೇ ಹೇಳಿದಳು: 'ಆಗ ಅಪ್ಪಣ್ಣ0ಯ್ಯ ಎರಡು ಸಲ ಬಂದು ಹದಿನೈದು ಹದಿನೈದು ದಿನ ಇದ್ದ. ಆಗಲೇ ರಾಮಕ್ರಿಷ್ಣ ಹುಟ್ಟಿದ್ದು. ಸಾತು ಕೆಟ್ಟ ಕೆಲಸ ಮಾಡಿದಾಳೆ ಅಂತ ಬೀದಿಗೆಲ್ಲ ಕೇಳೂಹಾಗೆ ಅವಳ ಅತ್ತೆ ಕಿರುಚಿಕಂಡ್ಲು ಚಾಂಡಾಳಿ.'
'ಆ0ುತ್ತು, ಮದ್ಲು ಎದ್ದು ಮಡಿ ಉಟ್ಕಳಿ. 0ುಜಮಾನ್ರು ಹೋಗಿ ಎಷ್ಟು ದಿನ ಆ0ುತ್ತು?'
'ಎರಡು ವರ್ಷವಾ0ುತ್ತು. ಅವರಿರೂತಂಕ ಪೌರೋಹಿತ್ಯದಲ್ಲಿ ಸುಖವಾಗಿ ಜೀವನ ಆಗ್ತಾ ಇತ್ತು. ಆಮ್ಯಾಲೆ ಗಂಡು ದಿಕ್ಕಿಲ್ಲದ ನಮ್ಮನ್ನ 0ಯಾರು ಕರೀತಾರೆ? ಏನೋ ಗಂಡನ ಜೊತೆ ಹೆಂಡ್ತಿ0ಯಾದೋಳು ಬಾಳ್ವೆ ಮಾಡ್‌ಬೇಕು. ಆಗ ಬಂದಿದ್ದಾಗ ಅಪ್ಪಣ್ಣ0ಯ್ಯ, ಅವ್ನೇ ಬಂದು ಕರ್ಕಂಡ್ ಹೋಗ್ತೀನಿ ಅಂತ ಹೇಳಿದ್ದ. ಈಚೆಗೆ ಅವ್ನೂ ಬರ್ಲಿಲ್ಲ. ಅದುಕ್ಕೆ ನಾವೇ ಬಂದುಬಿಟ್ವು. ತಿಪಟೂರಿಂದ ಮೋಟರಿನಲ್ಲಿ ಬಂದು ಇಳಿದುವು. ಈ ಎರಡು ಗಾಡಿ0ಯೋರು ಗೊಬ್ಬರ ತುಂಬಿಕೊಂಡು ಅಲ್ಲೇ ಹ್ವಲದ ಕಡೆಗೆ ಬಂದಿದ್ರು. ನಾಕು ನಾಕಾಣೆ ತಗಂಡು ಸಾಮಾನು ಹೇರ್ಕಂಡ್ ಬಂದ್ರು.'
'ಸಾತು, ಹುಡುಗ್ರಿಗೆ ಮದ್ಲು ಮಡಿ ಉಡ್ಸು. ಅವುಕ್ಕೆ ಹ್ವಟ್ಟೆ ಹಸಿದಿದೆ' – ಎಂದು ನಂಜಮ್ಮ ಹೇಳುತ್ತಿದ್ದಳು. ಅಷ್ಟರಲ್ಲಿ – 'ಈ ಹಾದರಗಿತ್ತಿ ಮುಂಡೇರ ತಲೆ ಕೂದ್ಲು ಉದುರೂ ಹಾಗೆ ಮೆಟ್ನಲ್ಲಿ ಹ್ವಡಿಸಿ ಊರು ಬಿಟ್ಟು ಓಡುಸ್ದೆ ಇದ್ರೆ ನನ್ನ ಹೆಸರು ಗಂಗಮ್ಮ ಅಲ್ಲ' ಎಂದು ಗುಡುಗುತ್ತ ಗಂಗಮ್ಮ ಅಲ್ಲಿಗೆ ಬಂದದ್ದು ಕೇಳಿಸಿತು. ಹಿಂದೆ0ಯೇ ಬಂದ ಅವಳು – 'ಏನೇ ಹಾದರಗಿತ್ತಿ, ಇವ್ರ ಜೊತೆಗೆ ನೀನೂ ಶುರು ಮಾಡಬೇಕು ಅಂತ ಇವ್ರುನ್ನ ಮನಿಗ್ ಸೇರ್ಸಿದೀ ಏನೇ? ನಿಂಗೂ ತಕ್ಕುದ್ ಮಾಡುಸ್ದೆ ಇದ್ರೆ ನನ್ ಮೂಗ್ ಕು0ುಸ್ಕತ್ತೀನಿ ನೋಡೇ ಮುಂಡೆ' ಎನ್ನುತ್ತಿದ್ದಂತೆ0ಯೇ ಹಿಂದಿನಿಂದ ಅ0ಯ್ಯಾಶಾಸ್ತ್ರಿಗಳು ಅಣ್ಣಾಜೋಯಿಸರು ಕಾಣಿಸಿಕೊಂಡರು. ಒಂದೇ ನಿಮಿಷದಲ್ಲಿ ಶಿವೇಗೌಡ, ಸಿವಲಿಂಗ ಒಳಗೆ ಬಂದರು. ಇನ್ನು ಹತ್ತು ಎಣಿಸುವುದರಲ್ಲಿ ರೇವಣ್ಣಶೆಟ್ಟಿ ಬಂದ. ಮತ್ತೆ ಐದು ಆರು ಜನರು ಒಳಗೆ 0ಯಾವುದೋ ಕರಡಿ ಕುಣಿ0ುತ್ತಿದೆ ಎಂಬುದನ್ನು ನೋಡುವಷ್ಟು ಉತ್ಸಾಹದಿಂದ ಗುಡ್ಡೆ ಹಾಕಿಕೊಂಡರು. ಇವರನ್ನೆಲ್ಲ ಹೋಗಿ ಗಂಗಮ್ಮನೇ ಕರೆದುಕೊಂಡು ಬಂದಿದ್ದಾಳೆ ಎಂಬ ವಿಷ0ುದಲ್ಲಿ ಅಲ್ಲಿ 0ಯಾರಿಗೂ ಸಂದೇಹ ಉಳಿ0ುಲಿಲ್ಲ.
'ನನ್ನ ಮನೆಗೆ ನೀವ್ಯಾಕೆ ಬಂದ್ರಿ, ನಿಮ್ಮುನ್ನ 0ಯಾರು ಕರೆದೋರು?' – ಎಂದು ಕೇಳಿಬಿಡುವಷ್ಟು ಕೋಪ ನಂಜಮ್ಮನಿಗೆ. ಆದರೆ ಗ್ರಾಮದ ಈ ಮುಖ್ಯರನ್ನು ಎದುರುಹಾಕಿಕೊಳ್ಳಬಾರದೆಂಬ ತಾಳ್ಮೆ ಬೇರೆ. 0ಯಾರನ್ನೂ ಒಳಗೆ ಬನ್ನಿ ಎನ್ನಲೂ ಇಲ್ಲ: ಕೂರಲು ಒಂದು ಚಾಪೆ0ುನ್ನೂ ಹಾಕಿಕೊಡಲಿಲ್ಲ. ಅದುವರೆಗೂ ಮಲಗಿ ನಿದಿ ್ರಸುತ್ತಿದ್ದು ಈಗ ಪೂರ್ತಿ ನಿದ್ರೆ ಹರಿದ ಚೆನ್ನಿಗರಾ0ುರು ಎದ್ದು ಎರಡು ಚಾಪೆ ಹಾಸಿದರು. ಜೋಯಿಸರಿಬ್ಬರಿಗೂ ಬೇರೆ ಮಂದಲಿಗೆ ಹಾಕಿಕೊಟ್ಟರು. ಸಾತು, ಇಬ್ಬರು ಮಕ್ಕಳು, ಮತ್ತು ತಂಗಮ್ಮ, ಎಲ್ಲರೂ ಅಡಿಗೆ0ು ಮನೆಗೆ ಹೋಗಿಬಿಟ್ಟರು.
'ಅದ್ಯಾಕ್ ಒಳಿಕ್ ಹೋಗ್ತೀ0ಯಾ ಬಾರೇ, ಸೂಳೆಗಾರಮುಂಡೆ, ಊರ ಒಟ್ನಲ್ಲಿ ನ್ಯಾ0ು ಕೊಡು' – ಗಂಗಮ್ಮ ಕೂಗಿದಳು.
'ನ್ಯಾ0ು, ನ್ಯಾ0ು. ಇಲ್ಲಿಗೇ ಬನ್ರಮ್ಮ' – ರೇವಣ್ಣಶೆಟ್ಟಿ ಧರ್ಮಪ್ರತಿನಿಧಿ0ು ಪಾತ್ರ ವಹಿಸಿಕೊಂಡು ಆದೇಶವಿತ್ತ.
'ರೇವಣ್ಣಶೆಟ್ರೇ ಕರೀತಾರೆ, ಬಾರೇ' – ಗಂಗಮ್ಮ ಮತ್ತೆ ಕೂಗಿದಳು.
ರೇವಣ್ಣಶೆಟ್ಟಿ ಇಲ್ಲಿಗೆ ಬಂದದ್ದಾಗಲಿ, ಅವನು ದೊಡ್ಡ ಧರ್ಮಿಷ್ಠನಂತೆ ನ್ಯಾ0ುದ ಮಾತನ್ನಾಡಿದುದಾಗಲಿ

ನಂಜಮ್ಮನಿಗೆ ಸಹಿಸಲಿಲ್ಲ. ಇವರ ಬಾಯಿಮುಚ್ಚಿಸಿ ಮೇಲೆ ಏಳಿಸುವ ಉಪಾ೦ಯುವೂ ಹೊಳೆ೦ಯುಲಿಲ್ಲ. ಒಂದು ದಾರಿ ಮಾತ್ರ ಕಂಡಿತು. ಅದೇ ಹೊತ್ತಿಗೆ ಸ್ಲೇಟು ಪುಸ್ತಕ ಹಿಡಿದುಕೊಂಡು ಪಾರ್ವತಿ, ರಾಮಣ್ಣ, ಇಬ್ಬರೂ ಸ್ಕೂಲಿನಿಂದ ಮನೆಗೆ ಬಂದರು. 'ಲೇ ಪಾರ್ವತಿ, ಗುಡಿ ಮಾದೇವ೦ಯ್ನೋರುನೂವೆ, ನಿಮ್ಮ ಮೇಷ್ಟ್ರನ್ನೂವೇ ನಾನ್ ಹೇಳ್ದೆ ಅಂತ ಕರ್ಕಂಡ್ ಬಾ. ಈಗ್ಲೇ ಬರಬೇಕಂತೆ ಅನ್ನು. ಓಡಿ ಹೋಗು' – ಎಂದಳು. ಇಬ್ಬರು ಮಕ್ಕಳೂ ಹಾಗೆ೦ಯೇ ಓಡಿದುವು.

'೦ಯಾಕ್ರಮ್ಮ, ನಾವು ನ್ಯಾ೦ಯ ಹೇಳಿದ್ರೆ ಆಗಾಕುಲ್ವ?' – ನಂಜಮ್ಮನ ಮುಖ ನೋಡುತ್ತಾ ರೇವಣ್ಣಶೆಟ್ಟಿ ಕೇಳಿದ. ಅವಳು ಒಳಗೆ ಹೊರಟುಹೋದಳು.

'೦ಯಾಕೆ ಒಳೀಕ್ ಹೋದ್ಯೇ ಲಾಯ್ರೀ?' – ಎಂದು ಗಂಗಮ್ಮ ಕೂಗಿದರೂ ಹೊರಗೆ ಬರಲಿಲ್ಲ.

ಈಗ ಅಣ್ಣಾಜೋಯಿಸ, ಅ೦ಯ್ಯಾಶಾಸ್ತ್ರಿಗಳು ತಮ್ಮ ಧರ್ಮಶಾಸ್ತ್ರದ ಜ್ಞಾನವನ್ನು ಪ್ರಕಟಿಸಲು ನಿಂತರು. ಅಣ್ಣಾಜೋಯಿಸ ೦ಯಾವುದೋ ಮಂತ್ರ ಹೇಳಿದ.

'ವ್ಯಭಿಚಾರ ಮಾಡಿದ ಹೆಂಗಸಿನ ಶಿರಚ್ಛೇದ ಮಾಡಬೇಕು ಅಂತ ಮನು ಧರ್ಮಶಾಸ್ತ್ರದಲ್ಲಿದೆ. ಇಲ್ಲದಿದ್ದರೆ ಸಹಸ್ರ ನಾಣ್ಯ ಖರ್ಚುಮಾಡಿ ಪ್ರಾ೦ಯಶ್ಚಿತ್ತ ಮಾಡಬೇಕು ಅಂತ ವೇದದಲ್ಲಿದೆ. ಅವರು ಪ್ರಾ೦ಯಶ್ಚಿತ್ತ ಮಾಡಿಸಿಕೊಳ್ಳೂತನಕ ಒಳೀಕ್ಕೆ ಸೇರಿಸಿದ್ದು ನಂಜಮ್ಮನ ತಪ್ಪು' – ಎಂದು ಅ೦ಯ್ಯಾಶಾಸ್ತ್ರಿಗಳು ವ್ಯಾಖ್ಯಾನ ಹೇಳಿದರು.

ಅಷ್ಟರಲ್ಲಿ ಮಾದೇವ೦ಯ್ಯನವರು ಬಂದರು. ಗಂಗಮ್ಮ ಬೀದಿ೦ಯಲ್ಲೆಲ್ಲ ಕಿರುಚಿಕೊಂಡು ತಿರುಗಿದ್ದುದರಿಂದ ವಿಷ೦ಯ ಊರಿನವರಿಗೆಲ್ಲ ಗೊತ್ತಾಗಿ ಮನೆ೦ಯ ಮುಂಭಾಗದಲ್ಲಿ ಒಂದು ಜಾತ್ರೆ೦ಯ ಜನವೇ ಸೇರಿತ್ತು. ಸಂದಿ ನಿಂದ ಜಾಗ ಬಿಡಿಸಿಕೊಂಡು ಬಂದ ಮಾದೇವ೦ಯ್ಯನವರಿಗೆ ವಿಷ೦ಯವನ್ನು ಹೊಸದಾಗಿ ಹೇಳುವ ಅಗತ್ಯವಿರಲಿ ಲ್ಲ. ಅವರು ಬಂದದ್ದನ್ನು ಬಾಗಿಲು ಸಂದಿನಿಂದ ಕಂಡ ನಂಜಮ್ಮ ಹೊರಗೆ ಬಂದು ಹೇಳಿದಳು: 'ಅ೦ಯ್ನೋರೇ, ಧರ್ಮ ಕರ್ಮ ಎಲ್ಲಾ ತಿಳ್ಕಂಡಿರೋರು ನೀವು. ನ್ಯಾ೦ಯವಿಚಾರಣೆ ನೀವು ಮಾಡಬೇಕು. ಉಳಿದೋರೆಲ್ಲ ತಲಾತಟ್ಟಿ ಮಾತಾಡಕೂಡದು. ಅಪ್ಪಣ್ಣ೦ಯ್ಯನೇ ಬಂದಿದ್ದ, ಅವನಿಗೆ ಈ ಗಂಡುಮಗೂನ ಬಸುರಿ೦ಯಾದುದ್ದು ಅಂತ ಅವರು ಒಳಗೆ ಕೂತ್ಕಂಡು ಈಗಲೂ ದೇವರ ಆಣೆ ಇಟ್ಟು ಹೇಳ್ತಿದಾರೆ.'

ಇಲ್ಲಿ ಇಷ್ಟರಲ್ಲಿ ಏನು ನಡೆದಿರಬಹುದೆಂಬುದು ಅ೦ಯ್ಯನವರಿಗೆ ಅರ್ಥವಾಯಿತು. ಅವರು ಎಂದರು: 'ಮದ್ಲು ಅಪ್ಪಣ್ಣ೦ಯ್ಯನ ಕರ್ಸಿ. ಆಮ್ಯಾಲೆ ನ್ಯಾ೦ಯ ಕೇಳ್‌ಬೌದು.'

'ನನ್ನ ಕಂದುಂದೇನೂ ತಪ್ಪಿಲ್ಲ. ಅದು ಅಂಥಾ ಕೆಟ್ಟ ಮುಂಡೇದಲ್ಲ' – ಗಂಗಮ್ಮ ಬಾಯಿ ಹಾಕಿದಳು.

' ತಪ್ಪೈತೋ ಇಲ್ವೋ ಇಚಾರ ಮಾಡಾನಾ. ಗಂಡ ಅನ್ನಿಸ್ಕಂಡೋನು ಎಂಡ್ತಿ ಮನ್ಗೆ ಓಗಿದ್ರೆ ಅದೇನೂ ತಪ್ಪಿಲ್ವಲಾ' –ಎಂದು ಅವಳಿಗೆ ಸಮಾಧಾನ ಹೇಳಿದ ಅ೦ಯ್ಯನವರು ಬಾಗಿಲ ಹತ್ತಿರ ನಿಂತಿದ್ದವರಿಗೆ, ಅಪ್ಪಣ್ಣೈನೋರು ಎಲ್ಲಿದ್ರೂ ಬಿಡ್ದೆ ಕರ್ಕಂಡ್ ಬಾ ಹೋಗ್ರಿ' ಎಂದರು. ಹತ್ತು ಹನ್ನೆರಡು ಜನರು ಅನ್ವೇಷಣೋತ್ಸುಕತೆಯಿಂದ ಓಡಿದರು. ಈ ನಡುವೆ ಮತ್ತೆ ಮಾತು ಶುರು ಮಾಡಿದ ಪುರೋಹಿತದ್ವ೦ಯರಿಗೆ, 'ಅಪ್ಪಣ್ಣ೦ಯ್ಯ ಬರಾಗಂಟ ೦ಯಾರೂ ಮಾತಾಡ್ ಬ್ಯಾಡ್ದು' ಎಂದು ಹೇಳಿ ಬಾಯಿ ಮುಚ್ಚಿಸಿದರು.

ಹದಿನೈದು ನಿಮಿಷದಲ್ಲಿ ಅಪ್ಪಣ್ಣ೦ಯ್ಯ ಬಂದ. ಅವನು ಬಸಪ್ಪಶೆಟ್ಟರ ಕೊಪ್ಪಲಿನ ಹುಲ್ಲು ಮೆದೆ ಸಂದಿ೦ಯಲ್ಲಿ ಕೂತಿದ್ದನಂತೆ. ತಪ್ಪಿಸಿಕೊಂಡು ಹೋಗಲು ಪ್ರ೦ಯತ್ನ ಪಟ್ಟನಾದರೂ ಹುಡುಕಲು ಹೋದ ಇಬ್ಬರು ನೆಗೆದು ಕೈ ಹಿಡಿದು ಕರೆದುಕೊಂಡು ಬಂದರು. ಸಭೆ೦ಯ ಮಧ್ಯದ ಕಂಬದ ಹತ್ತಿರ, ಗಂಟು ಬಿಚ್ಚಿಹೋಗಿ ಕೂದಲು ಮುಖ ಮುಚ್ಚುವಂತೆ ತಲೆ ಬಗ್ಗಿಸಿಕೊಂಡು ನಿಂತ. ಮಾದೇವ೦ಯ್ಯನವರು ಅವನನ್ನು ೦ಯಾವ ಪ್ರಶ್ನೆ೦ಯನ್ನೂ ಕೇಳಲಿಲ್ಲ. ಒಳಗಿನಿಂದ ದೀಪ ಹೊತ್ತಿಸಿಕೊಂಡು ಬಂದು ಒಂದು ದೇವರ ಪಟ ತರುವಂತೆ ನಂಜಮ್ಮನಿಗೆ ಹೇಳಿದರು. ನಂಜಮ್ಮ ಒಂದು ಮಣೆ ತಂದುಹಾಕಿ, ಜೋಡಿ ಸೊಡಲು ಹೊತ್ತಿಸಿ, ರಾಮದೇವರ ಪಟದೊಡನೆ ಮಣೆ೦ಯ ಮೇಲೆ ಇಟ್ಟಳು. ಅ೦ಯ್ಯನವರು ಕುಂಕುಮದ ಭರಣಿ ಕೇಳಿದರು. ಅದೂ ಬಂದ ಮೇಲೆ, ಅವರೇ ಭರಣಿಯಿಂದ ಕುಂಕುಮ ತೆಗೆದು ಅಪ್ಪಣ್ಣ೦ಯ್ಯನ ಹಣೆಗೆ ಇಟ್ಟು ದೇವರ ಪಟವನ್ನು ಅವನ ಕೈಲಿ ಹಿಡಿಸಿ ಕೇಳಿದರು; 'ನೋಡಣ್ಣಾ, ಸುಳ್ಳು ಏಳಿದ್ರೆ ದೇವ್ರು ನಿನ್ನ ಕೈಕಾಲು ಕತ್ರಿಸ್ಬಿಡ್ತಾನೆ. ಸುಂಕ್ಲಮ್ಮಮಾರಿ ಬಂದು ನಿನ್ನ ಬಡಕಂಡ್ ಓ೦ಯ್ತದೆ. ನಿಜ ಏಳ್ಬುಡು. ನೀನು ನಿಮ್ಮಮ್ಮಾರಿಗೆ ಕಾಣದ ಹಂಗೆ ಎಂಡ್ತಿ ಊರಿಗೆ ಓಗಿದ್ಯೋ ಇಲ್ವೋ?.

ಅಪ್ಪಣ್ಣ೦ಯ್ಯ ಮಾತನಾಡಲಿಲ್ಲ. 'ನನ್ನ ಕಂದನ ಕೈಲಿ ಸುಳ್ಳು ಸುಳ್ಳೇ ೦ಯಾಕೆ ಪ್ರಮಾಣ ಮಾಡುಸ್ತೀ೦ಯೋ ಜಂಗಮ೦ಯ್ಯ?' –ಎಂದು ಗಂಗಮ್ಮ ಕೂಗಿದಳು. ಆದರೆ ಅದು ಕೇಳಿಸದವರಂತೆ ಅ೦ಯ್ಯನವರು,

'ಮಾತಾಡ್ಬೇಕು. ನಿಜ ಏಳ್ದೆ ಇದ್ರೆ ನಿನ್ನ ಕೈ ಕಾಲಿಗೆ ಲಕ್ವಾ ಹ್ವಡೀತೈತೆ. ಅಲ್ಲಿ ಉರೀತಿರಾ ದೀಪ ಬುಗ್ ಅಂತ ಹತ್ಕಂಡು ಸುಟ್ಟುಬುಡ್ತೈತೆ. ಶನಿಮಹಾತ್ಮೆ ನೋಡಿಲ್ವ? ವಿಕ್ರಮಾರ್ಕರಾ೦ಯನ ಕೈ ಕಾಲು ಹ್ಯಂಗೆ ಕತ್ರಿಸ್ ಓ೦ಯ್ತದೆ. ಊಂ, ಮಾತಾಡ್ ಬುಡು'

ಅಪ್ಪಣ್ಣ೦ಯ್ಯನ ಮನಸ್ಸಿನಲ್ಲಿ ಭ೦ಯ ಹುಟ್ಟಿಬಿಟ್ಟಿತು. ನಾಯಿಸಿಂಗೇನಹಳ್ಳಿ೦ಯ ದೊಂಬೀ ದಾಸರು ಆಡಿದ

ಶನಿಮಹಾತ್ಮೆ ೦ಯಕ್ಷಗಾನದಲ್ಲಿ ವಿಕ್ರಮಾರ್ಕ ತೊಡೆ ಕತ್ತರಿಸಿಕೊಂಡು ಅಳುತ್ತಿದ್ದ ಚಿತ್ರ ಕಣ್ಣುಮುಂದೆ ಬಂತು. ಮಾದೇವ೦ಯ್ಯನವರು ಇನ್ನೊಂದು ಸಲ –'ಸುಳ್ಳು ಏಳಿದ್ರೆ ಸನಿದೇವರು.....' ಎನ್ನುವ ಮೊದಲೇ ಅವನು 'ನಾ ಸುಳ್ಳೇಳಲ್ಲ ಕಣ್ರಿ. ನಾನೆಲ್ಡು ಸಲ ನುಗ್ಗೀಕೆರೆಗೆ ಹೋಗಿದ್ದೆ' ಎಂದುಬಿಟ್ಟ.

'ಎಷ್ಟೆಷ್ಟು ದಿನ ಇದ್ದೆ?'

ಹದಿನೈದು ದಿನ ಒಂದ್ ಸಲ, ಇನ್ನೊಂದ್ ಸಲ ನಂಗೆ ಗ್ಯಾಪಕವಿಲ್ಲ.' 'ಈಗ ಎಷ್ಟು ದಿನದಲ್ಲಿ ಹೋಗಿದ್ದೆ?' ಈಗ ಎರಡನೇ ಸಲಿ ಪ್ಲೇಗು ಬಂದಿತ್ತಲ್ಲಾ ಆಗ.'

ಎಂದರೆ ಹೆಚ್ಚು ಕಡಿಮೆ ಆರು ವರ್ಷವಾಗಿತ್ತು. ನಂಜಮ್ಮ ಒಳಗೆ ಹೋಗಿ ಸಾತುವಿನ ಹುಡುಗನ ಕೈ ಹಿಡಿದು ತಂದು ನಿಲ್ಲಿಸಿದಳು. ಸುಮಾರು ಐದು ವರ್ಷದ ಅವನ ಮುಖ ಅಪ್ಪಣ್ಣ೦ಯ್ಯನನ್ನೇ ಹೋಲುತ್ತಿತ್ತು.

'ಮುಂಡೇಗಂಡ ಜಾವಗಲ್ಲಿಗೆ ಹೋಗ್ತೀನಿ ಅಂತ ಹೇಳಿ ಹೀಗ್ ಮಾಡ್ದೇನೋ? ನಾಳೆ ದಿನದಿಂದ ನೀನು ಅಲಿ ್ಲಗೇ ಹೋಗು. ನಿಂಗೆ ನಾನು ಹಿಟ್ ಹಾಕುಲ್ಲ. ಹಾದರಕ್ ಹುಟ್ಟಿದ ಸೂಳೇಮಗನೆ' –ಎಂದು, ಮೇಲಿದ್ದ ಗಂಗಮ್ಮ ಅಲ್ಲಿಂದ ಹೋಗಿಬಿಟ್ಟಳು. ಇನ್ನು ೦ಯಾವ ಸ್ವಾರಸ್ಯವೂ ಉಳಿ೦ಯುವುದಿಲ್ಲವೆಂದು ತಿಳಿದ ಗ್ರಾಮಪ್ರಮುಖರೂ ಪುರೋಹಿತರುಗಳೂ ಒಬ್ಬೊಬ್ಬರಾಗಿ ಎದ್ದು ಹೊರಟುಹೋದರು.

– 2 –

ಅದೇದಿನ ಗಂಗಮ್ಮ ಮಗನನ್ನು ಕರೆದುಕೊಂಡು ಹಳ್ಳಿ೦ಯ ಕಡೆ ಹೊರಟುಹೋದಳು. ಅವಳು ಹೀಗೆ ಹೋಗುವುದು ಇದು ಮೊದಲ ಸಲವೇನಲ್ಲ. ಅಣ್ಣಾಜೊಯಿಸನ ಹತ್ತಿರ ಗುಡಿ೦ಯ ಬಾಗಿಲಿನ ಬೇರೊಂದು ಬೀಗದಕೈ ಇದ್ದುದರಿಂದ ತಾನು ಆಗ ಬಾಗಿಲು ತೆಗೆದು ದೇವರ ಪೂಜೆ ಮಾಡುತ್ತೇನೆಂದು ಹೇಳಲು ಅನುಕೂಲವಾಗಿತ್ತು.

ಸಾತು, ಇಬ್ಬರು ಮಕ್ಕಳು, ಮತ್ತು ತಂಗಮ್ಮ, ನಂಜಮ್ಮನ ಮನೆ೦ಯಲ್ಲಿ೦ಯೇ ಉಳಿದರು. ಈ ಜನರಿಗೂ ಆಗುವಷ್ಟು ರಾಗಿ ಅವರೇಕಾಳೇನೋ ನಂಜಮ್ಮನ ಮನೆ೦ಯಲ್ಲಿತ್ತು. ಆದರೆ ಅವರಿಗೆ ರಾಗಿಹಿಟ್ಟು ತಿಂದರೆ ಹೊಟ್ಟೆ ಅಳ್ವಕವಾಗುತ್ತಿತ್ತು. ಅವರೇಬೇಳೆ೦ಯ ಸಾರಿನಿಂದ ವಾ೦ಯುವಾಗುತ್ತಿತ್ತು. ಅಕ್ಕಿ ತೊಗರಿಬೇಳೆಗಳನ್ನು ಹೊಂದಿಸಿ ದಿನವೂ ಮಾಡುವುದು ನಂಜಮ್ಮನ ಶಕ್ತಿಗೆ ಸಾಧ್ಯವಿರಲಿಲ್ಲ. ೦ಯಾವುದಾದರೂ ಹಬ್ಬ ಬಂದರೆ ದಪ್ಪ ಕೆಂಪು ಅಕ್ಕಿ೦ಯ ಅನ್ನ, ತೊಗರಿಬೇಳೆ ಸಾರು ಮಾಡುವುದು ಅವಳ ಶಕ್ತಿ೦ಯಾಗಿತ್ತು. ಆದರೆ ವಿಧಿಯಿಲ್ಲ, ಅಸಮಾಧಾನ ತೋರಿಸದೆ ನಂಜು ಅವರಿಗೆ ದಿನವೂ ಅನ್ನ ತೊಗರಿಬೇಳೆಗಳನ್ನೇ ಮಾಡಿ ಬಡಿಸುತ್ತಿದ್ದಳು. ಅನ್ನ ಕಂಡರೆ ಅವಳ ಮಕ್ಕಳು ಬಿಡುವುದಿಲ್ಲ. ಇನ್ನು ಚನ್ನಿಗರಾ೦ಯರು ೦ಯಾಕೆ ಬಿಟ್ಟಾರು? ಎಲ್ಲರಿಗೂ ಅನ್ನವೇ ಆದರೆ ತಾನೊಬ್ಬಳು ಹಿಟ್ಟು ತಿಂದು ಆಗುವ ಉಳಿತಾ೦ಯವೇನು? ಒಟ್ಟಿನಲ್ಲಿ ಖರ್ಚನ್ನು ನಿಭಾಯಿಸುವುದು ಕಷ್ಟವಾಯಿತು.

ಹದಿನೈದು ದಿನದ ನಂತರ ತಾಯಿ ಮಗ ಊರಿಗೆ ಬಂದರು. ವಿಷ೦ಯ ತಿಳಿದ ನಂಜಮ್ಮ ಆ ದಿನ ರಾತ್ರಿ ದಿ ೀಪ ಹಚ್ಚಿದ ಮೇಲೆ, 'ನಿಮ್ಮ ಚಿಕ್ಕಪ್ಪನ್ನ ಕರ್ಕಂಡ್ ಬಾ. ಅಜ್ಜಿ ಎದುರಿಗೆ ಕರೀಬ್ಯಾಡ' ಎಂದು ಹೇಳಿ ಪಾರ್ವತಿ೦ಯನ್ನು ಕಳಿಸಿದಳು. ಸೂಕ್ಷ್ಮ ತಿಳಿದಿದ್ದ ಹುಡುಗಿ ಹೋಗಿ ಅಪ್ಪಣ್ಣ೦ಯ್ಯನನ್ನು ಕರೆದುಕೊಂಡೇ ಬಂದಳು. ಇಲ್ಲಿ ಹೆಂಡತಿ೦ಯನ್ನು ನೋಡಿದ ಅಪ್ಪಣ್ಣ೦ಯ್ಯನಿಗೆ ಒಂದು ಕಡೆ ಆಸೆ, ಇನ್ನೊಂದುಕಡೆ ಭ೦ಯ, ಮತ್ತೊಂದು ರೀತಿ೦ಯಲ್ಲಿ ನಾಚಿಕೆ ಮೊದಲಾಗಿ, ಬಂದವನು ಸುಮ್ಮನೆ ಕಂಬದ ಹತ್ತಿರ ನಿಂತು ಕೊಂಡ. ನಂಜಮ್ಮನೇ ಅವನನ್ನು ಮಾತನಾಡಿಸಿ ಕೂರಿಸಿದಳು. ಒಳಗೆ ಸಾತು ಅಡಿಗೆ ಮಾಡುತ್ತಿದ್ದಳು.

ಅಪ್ಪಣ್ಣ೦ಯ್ಯ ಇಲ್ಲೇ ಊಟ ಮಾಡಿ. –ನಂಜಮ್ಮ ಎಂದಳು.

'ಅಮ್ಮ....'

'ಅವರೇನೂ ಅನ್ನುಲ್ಲ. ರಾತ್ರಿ ಹೊತ್ತು ಅವರು ಹ್ಯಾಗೂ ಫಲಾರಕ್ಕೆ ರೊಟ್ಟಿ ಹಾಕ್ಕಂಡು ತಿಂತಾರೆ. ಏಳಿ ಕೈ ಕಾಲು ತೊಳ್ಕಳಿ.'

ಅಪ್ಪಣ್ಣ೦ಯ್ಯ ಕೈ ಕಾಲು ತೊಳೆದುಕೊಂಡ. ಚೆನ್ನಿಗರಾ೦ಯರೂ ಎದ್ದರು. ಹುಡುಗರನ್ನೂ ಕೂರಿಸಿ ಬಡಿಸುವಂತೆ ನಂಜಮ್ಮ ಸಾತುವಿಗೆ ಹೇಳಿದಳು. ಸಾಕು ಬೇಕು ಎನ್ನಲೂ ಅಪ್ಪಣ್ಣ೦ಯ್ಯನಿಗೆ ಸಂಕೋಚ. ಬೇಕೆ ಬೇಡವೆ ಎಂದು ಕೇಳಲು ಅವಳಿಗೂ ನಾಚಿಕೆ, ಅವಮಾನ, ತಿರಸ್ಕಾರ. ಊಟ ಮಾಡುವಾಗ ನಂಜಮ್ಮ ತಂಗಮ್ಮರು ಅಂಗಳದಲ್ಲಿ ಇದ್ದರು. ಆಮೇಲೆ ಅಣ್ಣ ತಮ್ಮ ಎಲೆ ಅಡಿಕೆ ಹೊಗೆಸೊಪ್ಪು ಹಾಕಿಕೊಂಡರು. ನಂಜಮ್ಮ ಒಳಗೆ ಹೋಗಿ ಸಾತುವಿನ ಕೈಲಿ ಸ್ವಲ್ಪ ಹೊತ್ತು ಏನೋ ಪಿಸುಮಾತು ಆಡಿದಳು. ಆ ಮಾತಿಗೆ ವಿಧವೆ ತಂಗಮ್ಮನೂ ಸೇರಿಕೊಂಡರು.

ಆ ಮನೆ೦ಯಲ್ಲಿ ದಿನಸಿ ತುಂಬುವ ವಾಡೆಗಳ ಒಂದು ಕತ್ತಲೆ ಕೋಣೆ ಇತ್ತು. ಬಾಗಿಲಿದ್ದ ಅದರ ಕಸ ಗುಡಿಸಿ ನಂಜಮ್ಮ ಚಾಪೆ ಹಾಕಿ, ಸಾತು ತನ್ನ ಸಂಗಡ ತಂದಿದ್ದುವುಗಳಲ್ಲಿ ಎರಡು ಹಾಸಿಗೆಗಳನ್ನು ಜೊತೆ೦ಯಲ್ಲಿ ಹಾಕಿದಳು. ಅಪ್ಪಣ್ಣ೦ಯ್ಯ ಮೇಲೆ ಎದ್ದಾಗ, 'ಇವತ್ತು ಇಲ್ಲೇ ಮಲಕ್ಕಳಿ' ಎಂದಳು.

ಅವನಿಗೆ ಈ ಅನಿರೀಕ್ಷಿತದಿಂದ ಆದ ಸಂತೋಷದ ಜೊತೆಗೆ ಗಾಬರಿ೦ಯೂ ಹುಟ್ಟಿತು. ಅವನ ಅರಿವಿಗೇ

ತಿಳಿಯದಂತೆ 'ಅಮ್ಮ....' ಎಂದ. ನಂಜುವೇ 'ಅಮ್ಮನ ಜೊತೆಗೆ ಬೇಕಾದ್ರೆ ಪಾರ್ವತೀನೂ ರಾಮಣ್ಣನನ್ನೂ ಕಳಿಸ್ತೀನಿ. ಅವರಿಗೇನು ಒಬ್ಬರೇ ಇರುಕ್ಕೆ ಭಯವಿಲ್ಲ. ನೀವು ವಾಡೆಮನೇಲಿ ಮಲೀಕ ನಡೀರಿ' ಎಂದಳು. ಚನ್ನಿಗರಾಯರು ಮಾತ್ರ, 'ನಿನಗ್ಯಾಕೆ ಇಲ್ಲದ ಪುಲಾರ?' ಎಂದು ಕಣ್ಣು ಕೆಕ್ಕರಿಸಿ ಹೆಂಡತಿಯನ್ನು ನೋಡಿದರು. ಶಿವಪೂಜೆ ಮಧ್ಯೆ ಕರಡಿ ಬಿಟ್ಟಂತೆ ಮಾತನಾಡಿದ ಗಂಡನನ್ನು ದುರುಗುಟ್ಟಿಕೊಂಡು ನೋಡುತ್ತ ನಂಜು ಎಂದಳು; 'ನೀವೊಂದಿಷ್ಟು ಬಾಯಿ ಮುಚ್ಕಂಡು ಕೂತ್ಕಳಿ. ತಿರುಮಲೇಗೌಡರ ಮನ್ಲಿ ಗಿಣ್ಣು ಹಾಲು ತಂದ್ ಕೊಟ್ಟಿದ್ದಾರೆ. ಒಳಗೆ ಕಾಯ್ಸಿ ಪಾಯ್ಸ ಮಾಡ್ತಿದೆ. ನಿಮಗೆ ಬೇಕೋ ಬ್ಯಾಡ್ವೋ ಹೇಳಿ.'
ಗಿಣ್ಣು ಹಾಲಿನ ಪಾಯಸದ ಹೆಸರು ಕೇಳಿದ ತಕ್ಷಣ ಚೆನ್ನಿಗರಾಯರು ಎದ್ದು ಅಡಿಗೆ ಮನೆಗೆ ಹೋದರು. ಅಪ್ಪಣ್ಣಯ್ಯ ವಾಡೆ ಮನೆ ಹೊಕ್ಕ. ಅಡಿಗೆ ಮನೆಗೆ ಬಂದ ನಂಜು– 'ನಾವು ಮಾಡಿ ಕೂಗ್ತೀವಿ. ನೀವು ಅಲ್ಲಿತಂಕ ಇನ್ನೊಂದ್ಸಲ ಹೊಗೆಸೊಪ್ಪು ಹಾಕ್ಕತ್ತಿರಿ' ಎಂದು ಹೊರಗೆ ಕಳಿಸಿದಳು, ಸಾತುವಿಗೆ ಹೇಳಿ ಅವಳನ್ನು ಅಪ್ಪಣ್ಣಯ್ಯನ ಜೊತೆಗೆ ಕಳಿಸಿ ತಾನೇ ಹೊರಗಿನಿಂದ ಬಾಗಿಲು ಎಳೆದುಕೊಂಡಳು.
ಸಮಯಸ್ಫೂರ್ತಿಯಿಂದ ಗಿಣ್ಣಿನ ಮಾತನಾಡಿ ಅವಳು ಸಂದರ್ಭವನ್ನು ನಿಭಾಯಿಸಿದ್ದಳು. ಆದರೆ ಈಗ ಯಾವ ಹಸು ಅಥವಾ ಎಮ್ಮೆಯನ್ನು ಈಯಿಸಿ ಗಿಣ್ಣು ಕರೆದು ಪಾಯಸ ಕಾಯಿಸುವುದು? ಆದರೂ ಅವಳು ಬುದ್ಧಿ ಕಳೆದುಕೊಳ್ಳಲಿಲ್ಲ. ಹುಡುಗರಿಗೆಲ್ಲ ಹಾಸಿಗೆ ಹಾಕಿಕೊಟ್ಟು ಅಂಗಳದಲ್ಲಿ ಮಲಗಿಸಿದಳು. ಒಂದು ತೆಂಗಿನಕಾಯಿ ತುರಿದು ಬರ –ಅಕ್ಕಿಯ ಜೊತೆಗೆ ತಿರುವಿ ಎರಡು ಉಂಡೆ ಬೆಲ್ಲ ಮುಳುಗಿಸಿ ಪಾಯಸ ಕಾಯಿಸಿದ ಮೇಲೆ ಒಂದಿಷ್ಟು ಸಾದಾ ಹಾಲು ಹಾಕಿದಳು. ತಂಗಮ್ಮನನ್ನು ಹೊರಗೆ ಕಳಿಸಿ ಗಂಡನನ್ನು ಒಳಗೆ ಕೂಗಿದಳು. ಎಚ್ಚರವಾಗಿ ಕಾಯುತ್ತಾ ಕುಳಿತಿದ್ದ ಶ್ಯಾನುಭೋಗರು, ಕರೆದತಕ್ಷಣ ಎದ್ದು ಬಂದು ಕುಕ್ಕುರುಗಾಲಿನಲ್ಲಿ ಕೂತಮೇಲೆ ಪಾಯಸದ ಡಬರಿಯನ್ನೇ ಮುಂದೆ ಇಟ್ಟು ಒಂದು ಅಲ್ಯೂಮಿನಿಯಂ ತಟ್ಟೆ ಹಾಕಿ ಹೇಳಿದಳು; 'ನೀವೇ ಬಡುಸ್ಕಂಡು ತಿನ್ನಿ. ಅವರ ಮನೆ ಎಮ್ಮೆ ಕರು ಹಾಕಿ ಆಗಲೇ ಹದಿನೈದು ದಿನ ಆಗಿತ್ತಂತೆ. ಆ ಗಿಣ್ಣು ಹಾಲು ಒಡೀಲೇ ಇಲ್ಲ. ಆದ್ರೂ ಪಾಯ್ಸ ಚನ್ನಾಗಿದೆ,'
ಚೆನ್ನಿಗರಾಯರು ಒಂದು ಸೌಟನ್ನು ತಟ್ಟೆಗೆ ಹಾಕಿಕೊಂಡು ನೆಕ್ಕಿದರು. ಸಿಹಿ ಸಿಹಿಯಾದ ಗಿಣ್ಣಿನ ಪಾಯಸ ಚಪ್ಪರಿಸುವ ಹಾಗಿತ್ತು. 'ನಾನು ಹೋಗ್ಲೇ, ನೀವು ತಿಂತೀರಾ?' –ಎಂದು ಅವಳು ಕೇಳಿದುದಕ್ಕೆ, 'ಊ' ಎನ್ನಲೂ ಅವರಿಗೆ ವ್ಯವಧಾನವಿರಲಿಲ್ಲ.
ಬೆಳಗ್ಗೆ ಎದ್ದವನೇ ಅಪ್ಪಣ್ಣಯ್ಯ ಕೆರೆ ಏರಿಯ ಕಡೆಗೆ ಹೋದಮೇಲೆ ಗುಡಿಗೆ ಬಂದು ಅಮ್ಮನಿಗೆ ಹೇಳಿದ;
'ಅವ್ಳುನ್ನ ಇಲ್ಲಿಗೇ ಕರ್ಕಂಡ್ ಬರಾಣೇನಮ್ಮ?'
'ಯಾರನ್ನೋ?'
'ಆ, ನುಗ್ಗಿಕೆರೆಯೋರುನ್ನ'
ಗಂಗಮ್ಮ ಅವಾಕ್ಕಾದರು. ಒಂದು ನಿಮಿಷದಲ್ಲಿ ಅವಳಿಗೆ ಎಲ್ಲವೂ ಹೊಳೆದುಹೋಯಿತು. 'ಅಯ್ಯೋ ಸೂಳೇಮಗನೇ, ನೀನೆಲ್ಲೋ ರಾತ್ರಿ ದ್ಯಾವಲಾಪುರದಾಗೆ ಮ್ಯಾಳ ನೋಡುಕ್ಕೆ ಹೋಗಿದ್ದೆ ಅಂತ ನಾನು ತಿಳ್ಕಂಡಿದ್ದೆ. ಹೋಗಿ ಆ ಹಾದರಗಿತ್ತಿ ಜೊತೆ ಮಲಕ್ಕಂಡಿದ್ದೇನೋ?
ಅಪ್ಪಣ್ಣಯ್ಯ ತಲೆ ತಗ್ಗಿಸಿಕೊಂಡು ನಿಂತಿದ್ದ. ಒಂದು ಹತ್ತು ನಿಮಿಷ ತನಗೆ ತಿಳಿದಂತೆ ಆಶೀರ್ವಚನ ನುಡಿದಮೇಲೆ ಗಂಗಮ್ಮ ಕೇಳಿದಳು: 'ನಮ್ಮನ್ನೂ ಅಲ್ಲಿಗೇ ಕರ್ಕಂಡ್ ಹೋಗು ಅಂತ ಆ ಹಾದರಗಿತ್ತಿಯೇ ಅಂದ್ಲೇನೋ?'
ಅಪ್ಪಣ್ಣಯ್ಯ ಸ್ವಲ್ಪ ಧೈರ್ಯ ಮಾಡಿದ: 'ಅವ್ಳೇನು ಹೇಳಾದು? ನಾನೇ ಹಾಗಂದೆ. ಕರ್ಕಂಡ್ ಬರಾಣ. ಅವ್ಳುನ್ನ ಅಲ್ಲಿ ಯಾಕ್ ಬಿಟ್ಟಿರಬೇಕು?'
'ಕರ್ಕಂಡ್ ಹೋಗ್ತೀನಿ ಅಂತ ಅವ್ಳಿಗೆ ಹೇಳಿ ಬಂದಿದೀ ಏನೋ ಮಿಂಡ್ರಿಗ್ ಹುಟ್ಟಿದ ಸೂಳೇಮಗನೆ? ತಡೀ, ಅಣ್ಣಾಜೋಯಿಸರಿಗೆ ಹೇಳಿ ನಿಂಗ್ ಮಾಡುಸ್ತೀನಿ' – ಎಂದು ಮೇಲೆ ಎದ್ದವಳೇ ನೇರವಾಗಿ ಹೋಗಿ ಜೋಯಿಸನ ಮನೆಯ ಸೂರಿನ ಕೆಳಗೆ ನಿಂತು ಕೂಗಿದಳು: 'ಜೋಯಿಸ್ರೇ, ಇಲ್ಲಿ ಬನ್ನಿ ಸ್ವಲ್ಪ.'
ಇವಳು ಕೂಗಿದ ಜೋರಿಗೆ ಸುತ್ತಮುತ್ತಲಿನ ಏಳೆಂಟು ಜನ ಸೇರಿದರು. ಹೊರಗೆ ಬಂದ ಜೋಯಿಸನಿಗೆ ಇವಳು ಹೇಳಿದಳು: 'ನ್ಯನ್ನೆ ರಾತ್ರಿನಾಗೆ ಇವ್ನು ಹೋಗಿ ಆ ಹಾದರಗಿತ್ತಿ ತಾವ ಮಲೀಕ್ಕಂಡು ಬಂದಿದಾನೆ. ಇವತ್ತಿನಿಂದ ನಮ್ಮನೆಗೇ ಕರ್ಕಂಡ್ ಬತ್ತೀನಿ ಅಂತಾನೆ. ದೇವರ ಗುಡೀಲಿ ಗಂಡ ಹೆಂಡ್ತಿ ಇರಬೌದೆ ನೀವೇ ಹೇಳಿ.'
ಹನುಮಂತರಾಯ ಮೊದಲೇ ಬ್ರಹ್ಮಾಚಾರಿ ದೇವರು. ಅವನ ಗುಡಿಯಲ್ಲಿ ಗಂಡ ಹೆಂಡತಿ ಜೊತೆಯಲ್ಲಿರುವುದರಿಂದ ಧರ್ಮನಿಷಿದ್ಧವೇ. 'ಅವ್ನಿಗೆಲ್ಲೋ ಬುದ್ಧಿ ಕೆಟ್ಟದೆ. ಹಾಗೆ ಮಾಡಿದ್ರೆ ಎಲ್ರುನ್ನೂ ದೇವಸ್ಥಾನದಿಂದ ಹೊರಕ್ಕೆ ಕಳುಸ್ತೀನಿ. ಗ್ರಾಮದಲ್ಲಿ ಮಳೆ ಬೆಳೆ ಆಗ್ಬೇಕೋ ಬ್ಯಾಡ್ವೋ ಇಂಥ ಕೆಲ್ಸ ಮಾಡಿದ್ರೆ?' – ಎಂದ ಅಣ್ಣಾಜೋಯಿಸ, ತಾನೇ ಗುಡಿಗೆ ಬಂದು ಎಚ್ಚರಿಕೆ ಹೇಳಿ ಹೋದ. ಅಪ್ಪಣ್ಣಯ್ಯನ ಮುಖ ಸಪ್ಪಗಾಯಿತು. ಆದರೆ ರಾತ್ರಿ ಪಟ್ಟ ಸುಖದ ನೆನಪಾಗಿ ಹೆಂಡತಿಯನ್ನು ಬಿಟ್ಟಿರುವುದೂ ಅಸಾಧ್ಯವೆನಿಸಿತು. ಎಲ್ಲಿಲ್ಲದ

ಧೈ೦ರ್ಯ ತಂದುಕೊಂಡ ಅವನು ಅತ್ತಿಗೆ೦ಯ ಮನೆಗೆ ಹೋಗಿ, ನಡೆದ ಸಂಗತಿ ಹೇಳಿದ. ಅಷ್ಟರಲ್ಲಿ ಹಿಂದಿನಿಂದ ಬಂದ ಗಂಗಮ್ಮ ಬಾಗಿಲಿನ ಹೊರಗೇ ನಿಂತು ನಂಜಮ್ಮ, ಚೆನ್ನಿಗರಾ೦ಯ, ಇಬ್ಬರಿಗೂ ಸಹಸ್ರನಾಮ ಮಾಡಿದಳು. ಇನ್ನೂ ಮಲಗಿ ನಿದ್ರಿಸುತ್ತಾ ರಾತ್ರಿ೦ಯ ಪಾ೦ಯಸವನ್ನು ಅರಗಿಸಿಕೊಳ್ಳುತ್ತಿದ್ದ ಚೆನ್ನಿಗರಾ೦ಯರು ಎದ್ದು ಕುಳಿತರು. ಅವರು ಹೆಂಡತಿ೦ಯನ್ನು ಬ೦ಯ್ಯುತ್ತಿದ್ದರೋ ಏನೋ, ಆದರೆ ತಕ್ಷಣ ಕೆರೆ೦ಯ ಏರಿ೦ಯ ಹಿಂದಕ್ಕೆ ಹೋಗುವ ಅವಸರವಾಗಿದ್ದುದರಿಂದ ಒಂದು ಮಾತೂ ಆಡದೆ ಎದ್ದು ಬೇಗಬೇಗ ಅರೆ ಓಟದಿಂದ ಹೊರಟುಹೋದರು. ಈ ಮಗನೂ ತನಗೆ ವಿರೋಧವಾಗಿದ್ದಾನೆಂದು ಭಾವಿಸಿದ ಗಂಗಮ್ಮ ಅಲ್ಲಿ ನಿಲ್ಲದೆ ತನ್ನ ಮನೆಗೆ ಹಿಂದಿರುಗಿದಳು.

– 3 –

ಅಪ್ಪಣ್ಣ೦ಯ್ಯ ಆ ದಿನವೂ ಅತ್ತಿಗೆ೦ಯ ಮನೆ೦ಯಲ್ಲಿ ಉಳಿದ. ಎರಡು ಮೂರು ದಿನದಲ್ಲಿ ಒಂದು ತೀರ್ಮಾನವಾಯಿತು: ಅಪ್ಪಣ್ಣ೦ಯ್ಯ ಹೆಂಡತಿ ಮಕ್ಕಳ ಜೊತೆ೦ಯಲ್ಲಿ ಬೇರೆ೦ಯಾಗಿ ಇರುವುದು. ಅವನ ಅತ್ತೆ ಅವರೊಂದಿಗೆ ಇರುವುದನ್ನಂತೂ ಪ್ರತ್ಯೇಕವಾಗಿ ನಿಶ್ಚಯಿಸಬೇಕಾಗಿರಲಿಲ್ಲ. ಇನ್ನು ಜೀವನೋಪಾ೦ಯಕ್ಕೆ ದಾರಿ: ಇಷ್ಟು ವರ್ಷಗಳು ತಾಯಿ೦ಯ ಜೊತೆ೦ಯಲ್ಲಿ ಹಳ್ಳಿ ಹಳ್ಳಿ ತಿರುಗಿ ದೇಶಾವರಿ ಮಾಡಿ ಅನುಭವವಿದ್ದ ಅವನು, 'ತಿರುಪೇನಾದ್ರೂ ಮಾಡಿ ಹೆಂಡ್ತಿ ಮಕ್ಳನ್ನ ಸಾಕ್ತೀನಿ. ಗಂಡ್ಸಲ್ವೇನು?' ಎಂಬ ತಾಕತ್ತಿನ ಮಾತನಾಡಿದ. ಇನ್ನು, ವಾಸಿಸುವ ಜಾಗಕ್ಕೆ ಒಂದು ಏರ್ಪಾಟಾಗಬೇಕು.

ಕುರುಬರಹಳ್ಳಿ೦ಯ ಗುಂಡೇಗೌಡರದೇ ಈ ಊರಿನಲ್ಲಿ ಒಂದು ಹಿತ್ತಿಲಿದೆ. ಬೇಲಿ೦ಯೂ ಇಲ್ಲದ, ಸೊಪ್ಪುಸೆದೆ ಒಟ್ಟಲು ೦ಯಾರೂ ಉಪ೦ಯೋಗಿಸುತ್ತಲೂ ಇಲ್ಲದ ಅದು ಹನುಮಂತರಾ೦ಯನ ಗುಡಿಗೆ ಮೂವತ್ತು ಮಾರು ದೂರದಲ್ಲಿದೆ. ನಂಜಮ್ಮ ಅಪ್ಪಣ್ಣ೦ಯ್ಯನನ್ನು ಕರೆದುಕೊಂಡು ಕುರುಬರಹಳ್ಳಿಗೆ ಹೋಗಿ ಗುಂಡೇಗೌಡರನ್ನು ಕೇಳಿದಳು. ಅದರಲ್ಲಿ ಅಪ್ಪಣ್ಣ೦ಯ್ಯ ಸ್ವಂತ ಖರ್ಚಿನಿಂದ ಒಂದು ಗುಡಿಸಲು ಕಟ್ಟಿಕೊಂಡು ಇರಲು ತಮ್ಮದೇನು ಅಡ್ಡಿ ಇಲ್ಲವೆಂದು ಗೌಡರೇ ಒಪ್ಪಿಗೆ ಕೊಟ್ಟರು. ಅಪ್ಪಣ್ಣ೦ಯ್ಯ ಚೆನ್ನಿಗರಾ೦ಯರಂತೆ ಮೈಗಳ್ಳನಲ್ಲ. ಹುಮ್ಮಸ್ಸು ಬಂದು ೦ಯಾರಾದರೂ ಹೊಗಳಿ ದಾರಿ ತೋರಿಸಿದರೆ ದುಡಿ೦ಯುವ ಶಾರೀರಿಕ ಶಕ್ತಿ ಮತ್ತು ಉತ್ಸಾಹ, ಎರಡೂ ಇದ್ದುವು. ಬಹಳ ದಿನದಿಂದ ಕಾಣದ ಹೆಂಡತಿ೦ಯ ಸಹವಾಸ ಹುಮ್ಮಸ್ಸು ಕೊಟ್ಟಿತು. ನಂಜಮ್ಮನ ಮಾರ್ಗದರ್ಶನ ಲಭಿಸಿತು. ಸಾತು ತನ್ನೊಡನೆ ತಂದಿದ್ದ ಒಂದು ಸೇರಿನ ಬೆಳ್ಳಿ೦ಯ ಪಂಚಪಾತ್ರೆ೦ಯನ್ನು ಇಪ್ಪತ್ತೈದು ರೂಪಾಯಿಗೆ ಮಾರಿ ಹಣ ಕೊಟ್ಟಳು. ಹತ್ತು ಬಿದಿರು, ಹತ್ತು ಗಾಡಿಮಣ್ಣು, ಎರಡು ಕಲ್ಲುಕಂಬಗಳನ್ನು ದುಡ್ಡುಕೊಟ್ಟು ಹೇರಿಸುದುದಷ್ಟೇ. ಅಪ್ಪಣ್ಣ೦ಯ್ಯನೇ ಹದಿ ತೆಗ್ದು ಸೊಂಟದುದ್ದ ತಡಿಕೆ ಗೋಡೆ ಎಬ್ಬಿಸಿ ಕಲ್ಲುಕಂಬ ನೆಟ್ಟು ಬಿದಿರು, ಗಳು, ದಬ್ಬೆಕಟ್ಟಿದ. ಅವರಿವರ ತೋಟದಲ್ಲಿ ಕೇಳಿತಂದ ಆರು ಏಳು ನೂರು ಗರಿ ಸೋಗೆ ಹೊದಿಸಿ೦ಯಾಯಿತು. ಬಡಗಿ೦ಯ ಆಚಾರಿ ಮೂರು ರೂಪಾಯಿಗೆ ನಾಲ್ಕು ಅಡಿ ಎತ್ತರದ ಒಂದು ಬಾಗಿಲು ಕದ ಚಿಲಕವನ್ನೂ ಮಾಡಿ ಜೋಡಿಸಿಕೊಟ್ಟ. ಒಂದು ಶುಭ ದಿವಸ ಮಡಿಕೆ೦ಯಲ್ಲಿ ಹಾಲು ಉಕ್ಕಿಸಿ ಗೃಹಪ್ರವೇಶ ಮಾಡಿ ಆಯಿತು. ಇವರು ಗೃಹಪ್ರವೇಶ ಮಾಡುವ ತನಕ ಎಲ್ಲರ ಊಟವೂ ನಂಜಮ್ಮನ ಮನೆ೦ಯಲ್ಲೇ ಆಗುತ್ತಿತ್ತು.

ಇನ್ನು ಜೀವನಕ್ಕೆ ದಾರಿ೦ಯಾಗ ಬೇಕು. ಅಪ್ಪಣ್ಣ೦ಯ್ಯ ಈಗ ತಾಯಿ೦ಯ ಜೊತೆ ಬಿಟ್ಟು ಒಬ್ಬನೇ ಹಳ್ಳಿ೦ಯ ಕಡೆ ಹೋಗುತ್ತಾನೆ. ಶಿವೇಗೌಡನೆಂಬ ವ್ಯಕ್ತಿ೦ಯನ್ನು ಶಪಿಸಿ ಏನಾದರೂ ಕೊಡುವಂತೆ ಮನೆ ಮನೆಗಳಲ್ಲಿ ಕೇಳುತ್ತಾನೆ. ಅವನೇನು ಬೀದಿ೦ಯ ಬಾಗಿಲಿನಲ್ಲಿ ನಿಂತು ಜೋಳಿಗೆ ಹಿಡಿದು ಬೇಡುವ ಭಿಕ್ಷುಕನಲ್ಲ. ಆದುದರಿಂದ ಕೊಡುವವರು ಅಚ್ಚೇರಿಗೆ ಕಡಿಮೆಯಿಲ್ಲದೆ ಮೊರದಲ್ಲಿ೦ಯೇ ಕೊಡುತ್ತಾರೆ. ಅಷ್ಟರಲ್ಲಿ ಸುಗ್ಗಿ೦ಯ ಕಾಲ ಬಂತು. ಅವನು ಕಣಕ್ಕೇ ಹೋಗುತ್ತಾನೆ. ರಾಗಿ ಬಡಿದು ತೂರಿ ರಾಶಿಪೂಜೆ ಮಾಡಿದಾಗ, ಬಂದವರಿಗೆ ಮೊರದಲ್ಲಿ ದಾನ ಮಾಡಿದರೆ ರಾಶಿ ದೊಡ್ಡದಾಗುತ್ತದೆ ತಾನೇ? ಆದುದರಿಂದ ಅವನಿಗೆ ಮೊರದ ತುಂಬ ಸಿಕ್ಕುತ್ತದೆ. ಎಷ್ಟೋ ಸಲ ಒಂದೇ ಕಣದಲ್ಲಿ ಗಂಗಮ್ಮ. ಅಪ್ಪಣ್ಣ೦ಯ್ಯ, ಇಬ್ಬರೂ ಸಂಧಿಸುವುದುಂಟು. ಅವಳು ಮಗನನ್ನು ಮಾತನಾಡಿಸುವುದಿಲ್ಲ. ಇವನೂ ಮುಖವೆತ್ತಿ ನೋಡುವುದಿಲ್ಲ. 'ಇಬ್ಬಿಬ್ಬರು ಬ್ಯಾರೆ ಅಂತ ವೇಸ ಕಟ್ ಕಂಡು ಬಂದಿದೀರಾ? ಎಲ್ಡೆಲ್ಡು ಸಲಿ ನಾವೆಲ್ಲಿ ತರಾಣ? –ಎಂದು ಮೂದಲಿಸುವ ರೈತರೂ ಉಂಟು. ಸುಮ್ಮನೆ ಇಬ್ಬರಿಗೂ ಕೊಡುವವರೂ ಉಂಟು.

ಇದೇ ಪರಿಸ್ಥಿತಿ೦ಯು ಹಳ್ಳಿಗಳ ಕಡೆ೦ಯೂ ಆಗುತ್ತಿತ್ತು. ಹಿಂದೆ ತಾಯಿ ಮಗ ಜೊತೆ೦ಯಲ್ಲಿ ಹೋಗುತ್ತಿದ್ದ ಮನೆಗಳಿಗೆ ಈಗ ಇವರಲ್ಲಿ ೦ಯಾರಾದರೂ ಒಬ್ಬರು ಮೊದಲು ಹೋಗುತ್ತಿದ್ದರು. ಕೆಲವು ದಿನದ ನಂತರ ಹೋದವರನ್ನು 'ಅವ್ವ ಮಗ ಬ್ಯಾರೆ ಅಂತ ಆಟ ಕಟ್ಕಂಡ್ ಎಲ್ಡೆಲ್ಡು ಸಲಿ ಬಂದ್ರೆ ನಾವೆಲ್ಲಿಂದ ತರಾಣ್ರಿ?' ಎಂದು ಕೆಲವರು ಕೇಳುತ್ತಿದ್ದರು. ಇದನ್ನರಿತ ಗಂಗಮ್ಮ ಸುತ್ತಣ ಹಳ್ಳಿಗಳನ್ನೆಲ್ಲ ತಾನೇ ಮೊದಲು ಸುತ್ತುವರಿದು ಬಂದು ಬಿಟ್ಟಳು. ಅವಳದು ಎಷ್ಟಾದರೂ ಒಬ್ಬಳ ಹೊಟ್ಟೆ. ಖರ್ಚು ಕಡಿಮೆ. ಹೀಗಾಗಿ ಮೂರು ವರ್ಷ ತಿಂದು ಮುಗಿಸುವ ರಾಗಿ. ಕಾಳು, ಮೆಣಸಿನಕಾಯಿಗಳು ಅವಳ ಹತ್ತಿರ ದಾಸ್ತಾನಾದುವು. ಅಪ್ಪಣ೦ಯ್ಯ ಐದು ಹೊಟ್ಟೆ ಸಾಕಬೇಕು. ಅಲ್ಲದೆ ಗಂಡ ಸತ್ತ ಮುಪ್ಪಿನ ವ೦ಯಸ್ಸಿನ ವಿಧವೆ ಮನೆಗೆ ಬಂದು

ಕೇಳಿದರೆ ಜನಕ್ಕೆ ಉಂಟಾಗುತ್ತಿದ್ದ ಕರುಣೆ ಗಟ್ಟಿಮುಟ್ಟಾದ ಪ್ರಾ೦ಯದ ಗಂಡಸು ಬಂದು ಕೇಳಿದರೆ ಹುಟ್ಟುತ್ತಿರಲಿಲ್ಲ. 'ಕೂಲಿ ಮಾಡ್ಕಂಡ್ ತಿನ್ನಾಕೇನಾಗ್ಯೆ೦ಯ್ತು೦ಯ್ಯಾ? ಕೈ ಕಾಲು ಬಿದ್ಹೋಗ್ಯೆತಾ?' ಎಂದು ಕೇಳುವವರೂ ಇದ್ದರು.

ಹೆಂಡತಿ ಬಂದ ಹೊಸತರಲ್ಲಿ ಅಪ್ಪಣ೦ಯ್ಯನಿಗೆ ತುಂಬ ಉತ್ಸಾಹವಿತ್ತು. ನಾಲ್ಕು ದಿನ ಕಳೆದಂತೆ ಅದು ಸ್ವಲ್ಪ ಕಡಿಮೆ೦ಯಾಯಿತು. ದಿನವೆಲ್ಲ ಊರೂರು ತಿರುಗಿ ಎಲ್ಲರ ಮನೆ೦ಯ ಹೊಸಲು ತುಳಿದು ಅವರು ಅಂದಂತೆ ಅನ್ನಿಸಿಕೊಳ್ಳುವ ಬವಣೆ೦ಯು ಮನಸ್ಸಿಗೆ ಹಿತಕರವಾಗಿರಲಿಲ್ಲ. ಹಿಂದೆ ತಾಯಿ೦ಯ ಸಂಗಡ ಇದ್ದಾಗ ಬೇಡಿ ತರುವ ಕೆಲಸ ಅವಳದಾಗಿತ್ತು. ಕೆಂಪಿನ ಸೀರೆ೦ಯಲ್ಲಿ ಕಟ್ಟಿಕೊಂಡು ಒಂದು ಕಡೆ ತಂದು ಸುರಿ೦ಯುತ್ತಿದ್ದುದನ್ನು, ಗೋಣಿ ಚೀಲಕ್ಕೆ ತುಂಬಿ ಹೊತ್ತು ತರುವುದಷ್ಟೇ ಅವನ ಹೊರೆ೦ಯಾಗಿತ್ತು. ಸ್ವತಃ ಬೇಡುವ ಕಿರಿಕಿರಿಯಿಂದ ಈಗ ಅವನು ಮನಸ್ಸಿನಲ್ಲೇ ವ್ಯಘ್ರನಾಗುತ್ತಿದ್ದ.

ಒಂದು ದಿನ ನಂಜಮ್ಮ ಇವರ ಮನೆಗೆ ಬಂದಳು. ಅಪ್ಪಣ್ಣ೦ಯ್ಯ ಹಳ್ಳಿ೦ಯ ಮೇಲೆ ಹೋಗಿದ್ದ. ಆ ಮಾತು ಈ ಮಾತು ಆಡುತ್ತಾ ನಂಜಮ್ಮ ಎಂದಳು; 'ನಿಮ್ಮ ಜ೦ಯಲಕ್ಷ್ಮಿಗೆ ಆಗಲೇ ನಮ್ಮ ಪಾರ್ವತಿ೦ಯ ವ೦ಯಸ್ಸು. ಅವಳನ್ನೂ ಸ್ಕೂಲಿಗೆ ಸೇರಿಸಿ. ರಾಮಕೃಷ್ಣನನ್ನೂ ಸೇರಿಸಿ. ನಾಲ್ಕು ಅಕ್ಷರ ಕಲೀದಿದ್ರೆ ಮಕ್ಕಳ ಪಾಡೇನು?'

'ಸೇರುಸ್ಬೇಕು.'

'ಇನ್ನೊಂದು ವಿಷ೦ಯ ನಿಮಗೆ ಹೇಳ್ಬೇಕು ಅಂತಿದ್ದೆ. ನೀವು ಮನೆಗೆ ತಂದ ರಾಗೀನ ಮಾರ್ತಾ ಇರ್ತೀರಂತೆ. ಹಾಗೆ ಮಾರ್ಬಾರ್ದು. ಸುಗ್ಗೀಕಾಲದಲ್ಲಿ, ಸುಗ್ಗಿ ಕಳೆದ ಎರಡು ಮೂರು ತಿಂಗಳು ಜನ ದಿನಸಿ ಕೊಡ್ತಾರೆ. ಜ್ಯೇಷ್ಠಾ ಆಷಾಢ ಕಳೆದ ಮೇಲೆ ೦ಯಾರೂ ಒಂದು ಕಾಳೂ ಕೊಡುಲ್ಲ. ದಿನಸಿ ಈಗ ಕಳುದ್ರೆ ಮುಂದೆ ತುಂಬ ಕಷ್ಟ. ಸಣ್ಣೇನಹಳ್ಳಿಯಿಂದ ಒಂದೆರಡು ಮಣ್ಣಿನ ವಾಡೆ ತರಿಸಿ ಗುಡ್ಡೆ ಹಾಕಿಡಿ.'

'ಹಾಳು ರಾಗಿ ಇಟ್ಕಂಡೇನು ಮಾಡೋದು? ಅದನ್ಯಾರು ತಿಂತಾರೆ?' ವಿಧವೆ ತಂಗಮ್ಮ ಎಂದಳು.

ಇವರಿಗೆ ರಾಗಿ ತಿಂದರೆ ಮೈಗೆ ಆಗುವುದಿಲ್ಲವೆಂಬುದು ನಂಜಮ್ಮನಿಗೆ ಗೊತ್ತು. ಆದರೆ ಹಳ್ಳಿ೦ಯ ರಾಗಿ೦ಯಲ್ಲದೆ ಅಕ್ಕಿ ತಿನ್ನುವವರು ಎಷ್ಟು ಜನ ಇದ್ದಾರೆ? ಅಭ್ಯಾಸ ಮಾಡಿಕೊಂಡರೆ ತಾನಾಗಿ೦ಯೇ ಹೊಂದಿ ಕೊಳ್ಳುತ್ತದೆ. ಹೊಂದಿಸಿಕೊಳ್ಳದೆ ಜೀವನ ಮಾಡುವುದು ದಢೂತಿ ಜಮೀನ್ದಾರರಿಗೆ ಮಾತ್ರ ಸಾಧ್ಯ. ಇವರು ಹೀಗೆಂದರೆ ಹೇಗೆ? ಅವಳೇನೋ ತನಗೆ ತಿಳಿದ ವಿವೇಕ ಹೇಳಿದಳು. ವಿವೇಕದ ಇನ್ನೂ ಎರಡು ಮಾತನ್ನು ಹೇಳಿ೦ಯೇ ಬಿಡಬೇಕೆಂದು ಅವಳ ಮನಸ್ಸಿನಲ್ಲಿತ್ತು. ಅವರೆಲ್ಲರಿಗೂ ಕಾಫಿ ಕುಡಿ೦ಯುವ ಪದ್ಧತಿ. ಕಡೂರು ಸೀಮೆ೦ಯ ಅವರಿಗೆ ಚಿಕ್ಕ ವ೦ಯಸ್ಸಿನಿಂದ ಅಭ್ಯಾಸವಂತೆ. ಸಾತು ಮೊದಲು ಇಲ್ಲಿಗೆ ಬಂದಿದ್ದಾಗ ಅತ್ತೆ೦ಯ ಭ೦ಯ ಹೇಗೋ ಅದನ್ನು ತಡೆದುಕೊಂಡಿದ್ದಳು. ಈಗ ಕಾಫಿ ಕುಡಿ೦ಯುವ ಜನ ರಾಮಸಂದ್ರದಲ್ಲೂ ಹೆಚ್ಚುತ್ತಿದ್ದಾರೆ. ಅನುಕೂಲಸ್ಥರು ಕುಡಿ೦ಯಲೂ ಬಹುದು. ಆದರೆ ಅಪ್ಪಣ್ಣ೦ಯ್ಯನ ಸಂಸಾರ ಈ ನಾಲ್ವರಿಗೂ ದಿ ನಕ್ಕೆ ಎರಡು ಹೊತ್ತು ಬೇಕೇ ಆದರೆ ಎಲ್ಲಿಂದ ತರಬೇಕು?

'ನೀವು ಅದನ್ನು ಬಿಟ್ಟುಬಿಟ್ಟರೆ ಎಷ್ಟೋ ಉಳಿತಾ೦ಯವಾಗುತ್ತೆ ಅಲ್ಲವೆ?'

'ನಮಗಂತೂ ಆಗುಲ್ಲಪ್ಪ. ಬೆಳಗ್ಗೆ ಎದ್ದು ಅದು ಹ್ಯಾಗೆ ಬರೀ ಹೊಟ್ಟೇಲಿರೋದು? ನೀವಂತೂ ಬರಿ ರೊಟ್ಟಿ ತಿಂದ್ಕಂಡ್ ಇರ್ತೀರಿ. ನಾವು ಹಾಗೆ ಇದ್ದೋರಲ್ಲ' ತಂಗಮ್ಮ ಎಂದಳು. ನಂಜಮ್ಮ ಆ ಮಾತನ್ನು ಅಲ್ಲಿಗೇ ನಿಲ್ಲಿಸಿದಳು.

ಒಂದು ದಿನ ಸಾತು ಓರಗಿತ್ತಿ೦ಯ ಮನೆಗೆ ಬಂದು ಕುಳಿತು ಮಾತನಾಡುತ್ತಿದ್ದಳು. ನಂಜಮ್ಮ ಚಟಚಟನೆ ಕಡ್ಡಿ ಮುರಿ೦ಯುತ್ತಾ ಎರಡು ನಿಮಿಷಕ್ಕೆ ಒಂದರಂತೆ ಮುತ್ತುಗದೆಲೆ ಹಚ್ಚಿಸಿ ಹಾಕುತ್ತಿದ್ದಳು. 'ಅಕ್ಕಾ, ನೀವು ಇಷ್ಟೊಂದು ಕೆಲಸ ಮಾಡ್ತೀರ ಮನೆ ಕೆಲಸದ ಜೊತೆಗೆ, ಶ್ಯಾನುಭೋಗಿಕೆ ಲೆಕ್ಕ ಬರೀತೀರಾ. ಎಲೆ ಹೊತ್ಕಂಡು ಬಂದು ಎಲೇನೂ ಹಚ್ತೀರ. ನಮ್ಮ ಕೈಲಿ ಆಗುಲ್ಲಮ್ಮ.'

ನಂಜಮ್ಮ ಹೇಳಿದಳು; 'ನೋಡು, ನಿನ್ನ ಕೈಲಿ ಹೇಳ್ಬೇಕು ಅಂತ ನಂಗೆ ಆಗಲೇ ಎರಡು ಮೂರು ತಿಂಗಳು ಅನ್ನುಸ್ತಿದೆ. ನೀವೇನು ತಿಳ್ಕತ್ತೀರೋ ಅಂತ ಸುಮ್ಮನಿದ್ದೆ.'

'ಏನ್ ಹೇಳಿ.'

'ನಿಮ್ಮನೇಲಿ ಒಟ್ಟು ಊಟ ಮಾಡೋರು ಐದು ಜನ. ಸಂಪಾದನೆ ಮಾಡೋನು ಒಬ್ಬ. ಅದೂ ಭಿಕ್ಷೆ ಬೇಡಿ ೦ಯಾರೂ ಬದುಕಿಲ್ಲ. ಏನಾದ್ರೂ ಸ್ವಂತ ಮಾಡ್ಬೇಕು. ಸ್ವಂತ ಮಾಡು ತಿಳಿವಳಿಕೆ ಇದ್ರೆ ಈ ಸಂಸಾರ ೦ಯಾಕೆ ಈ ಸ್ಥಿತಿಗೆ ಬರ್ತಾ ಇತ್ತು? ನೀವಾರೂ ಏನಾದ್ರೂ ಮಾಡಿ. ಮನ್ಲಿ ನೀವು ಇಬ್ರು ಹೆಂಗಸ್ರಿದ್ದೀರಿ. ಮನೆ ಕೆಲ್ಸ ಮಾಡ್ಕೊಂಡು ಆಡಾಡ್ಕಂಡು ಹಚ್ಚಿಸಿದ್ರೂ ದಿನುಕ್ಕೆ ಮುನ್ನೂರು ಎಲೆ ಹಚ್ಚಿಸ್ಬೌದು. ಈಗ ಎಲೆ ಧಾರಣೆ ಮೂರಕ್ಕೆ ಏಳಾಣೆ೦ಯಾಗಿದೆ. ತಿಪಟೂರಿನಿಂದ ಎಷ್ಟಾದ್ರೂ ಲಾರೀಲಿ ಬೆಂಗಳೂರಿಗೆ ಕಳುಸ್ತಾರಂತೆ. ತಿಂಗ್ಳಿಗೆ ಮೂವತ್ತು ರೂಪಾಯಿ ಸಂಪಾದನೆ ಆದ್ರೆ ಎಷ್ಟೋ ಆ೦ಯ್ತುಲ್ಲ.'

'ಒಂದೇ ಸಮ ಮುತ್ತುಗದೆಲೆ ದಳದ್ರೆ ಉಷ್ಣವಾಗುಲ್ವೆ?'

'ಅಭ್ಯಾಸ ಮಾಡ್ಕಂಡ್ರೆ ಏನೂ ಆಗುಲ್ಲ. ಉಷ್ಣವಾದ್ರೂ ರಾತ್ರಿ ಮಲೀಕ್ಕಳೂವಾಗ ಅಂಗಾಲಿಗೆ ಹರಳೆಣ್ಣೆ

ತಿಕ್ಕಂಡ್ರೆ ಸರಿಯಾಗುತ್ತೆ.'
ತಾನೂ ಎಲೆ ಹಚ್ಚಿಸಬೇಕೆಂದು ಸಾತು ನಿಶ್ಚಯಿಸಿದಳು. ಮರುದಿನ ಓರಗಿತ್ತಿಯ ಮನೆಗೆ ಬಂದು ಅವಳ ಸಮಕ್ಕೂ ಕಡ್ಡಿ ಮುರಿದಳು. ನಂಜಮ್ಮ ನೂರ ಇಪ್ಪತ್ತು ಎಲೆ ಹಚ್ಚುವ ಹೊತ್ತಿಗೆ ಇವಳು ಹದಿನೆಂಟು ಮುಗಿಸಿದಳು. ಅಭ್ಯಾಸವಾದಂತೆ ಬೇಗಬೇಗ ಬರುತ್ತೆ ಎಂದು ನಂಜಮ್ಮ ಪ್ರೋತ್ಸಾಹದ ಮಾತನಾಡಿದಳು. ಆದರೆ ಮರುದಿನ ಹೊತ್ತಿಗೆ ಅವಳ ಕೈಕಾಲು ಉರಿಯಲು ಮೊದಲಾಯಿತು. 'ಕಟ್ಕಂಡ್ ಗಂಡ್ಸು ಹೆಂಡ್ತಿ ಮಕ್ಳುನ್ ಸಾಕ್ಬೇಕು. ನೀನು ಎಲೆ ಪಲೆ ಹಚ್ಚಬ್ಯಾಡಮ್ಮ ಮಗು' – ಎಂದು ತಂಗಮ್ಮ ಮಗಳಿಗೆ ಆರೈಕೆಯ ಮಾತು ಹೇಳಿದಳು. ಅಲ್ಲಿಗೆ ಅವಳ ಎಲೆ ಹಚ್ಚುವುದು ನಿಂತುಹೋಯಿತು. ಈ ನಡುವೆ ಅವಳು ಮುಟ್ಟು ಸಹ ಆಗಿರಲಿಲ್ಲ. ವಾಂತಿಯೂ ಪ್ರಾರಂಭವಾಯಿತು.
ಸಾತುವಿನ ತಂದೆ ಶ್ಯಾಮಭಟ್ಟರು ಪುರೋಹಿತರಾಗಿದ್ದವರು, ಪುರೋಹಿತರ ಮನೆತನಕ್ಕೆ ಸೇರಿದವರು. ಆದುದರಿಂದ ಮಡಿ ಮೈಲಿಗೆ, ಆಚಾರ ಕರ್ಮಗಳ ವಿಚಾರದಲ್ಲಿ ತಂಗಮ್ಮನಿಗೆ ಹೆಚ್ಚು ತಿಳಿವಳಿಕೆ ಇತ್ತು. ಗಂಗಮ್ಮನ ಮನೆಯಲ್ಲಿ ಮೊದಲಿಂದಲೂ ಮಡಿ ಸ್ವಲ್ಪ ಕಡಿಮೆಯೇ. ಅಲ್ಲದೆ ನಂಜಮ್ಮ ಹೊರಗೆ ಕಾಣಿಸುವಂತೆ ಅಲ್ಪಸ್ವಲ್ಪ ಮಾಡುತ್ತಿದ್ದಳೇ ಹೊರತು ಒಳಗಡೆಯಲ್ಲಿ ಏನೂ ಇಟ್ಟುಕೊಂಡಿರಲಿಲ್ಲ. ಮಡಿಕೆಯಲ್ಲಿ ಸಾರು ಮಾಡುತ್ತಾಳೆ. ಅನ್ನ ಮಾಡಿದ ದಿನ, ತಪ್ಪಲೆಗಿಂತ ತಂಪು ಎಂದು ಮಡಿಕೆಯಲ್ಲೇ ಮಾಡುತ್ತಾಳೆ. ಒಕ್ಕಲಿಗರಿಗೆ ಅದು ಸರಿ. ಬ್ರಾಹ್ಮಣರು ಹೀಗೆ ಮಾಡುವುದುಂಟೆ? ನಂಜಮ್ಮನ ಮಕ್ಕಳು ಎಷ್ಟೋ ದಿನ, ಮಾದೇವಯ್ಯನವರು ಕೊಟ್ಟುದನ್ನು ತಿಂದುಬಿಡುತ್ತಿದ್ದುವು. ಮೂರನೇ ಹುಡುಗ ನಾಲ್ಕು ವರ್ಷದ ವಿಶ್ವ ಮಾದೇವಯ್ಯನವರು ಅವರ ಜಾತಿಯವರ ಮನೆಯಲ್ಲಿ ಕಂತೆಭಿಕ್ಷೆ ಮಾಡಿಕೊಂಡು ಬಂದುದನ್ನು ಅವರ ತೊಡೆಯ ಮೇಲೆ ಕೂತುಕೊಂಡೇ ಎಷ್ಟೋ ದಿನ ಊಟ ಮಾಡಿ ಬಿಡುತ್ತಿತ್ತು. ಅದು ಗೊತ್ತಿದ್ದರೂ ನಂಜಮ್ಮ ಮಕ್ಕಳನ್ನು ಹೊಡೆದು ಬುದ್ಧಿ ಕಲಿಸುತ್ತಿರಲಿಲ್ಲ. ಇದೆಲ್ಲ ತಂಗಮ್ಮನಿಗಂತೂ ಸರಿಬೀಳುತ್ತಿರಲಿಲ್ಲ, ಸಾತುವಿಗೂ ಹಿಡಿಸುತ್ತಿರಲಿಲ್ಲ.
ಗ್ರಾಮದ ಪುರೋಹಿತರಾದ ಅಯ್ಯಾಶಾಸ್ತ್ರಿಗಳ, ಅಣ್ಣಾಜೋಯಿಸರ ಹೆಂಡತಿಯರಾದರೆ ಆಚಾರ ವ್ಯವಹಾರ ಮಡಿ ಮೈಲಿಗೆ ಇಟ್ಟುಕೊಂಡಿರುವ ಹೆಂಗಸರು. ಅಣ್ಣಾಜೋಯಿಸರ ಹೆಂಡತಿ ಮುಟ್ಟಾದಾಗ ಗಂಡನ ಕಣ್ಣಿಗೆ ಸಹ ಬೀಳುವುದಿಲ್ಲ. ಮುಟ್ಟಾದಾಗಲೂ ನಂಜಮ್ಮ ಕದ್ದು ಅಡಿಗೆ ಮಾಡುತ್ತಾಳೆ. 'ನಮ್ಮ ಪಾರ್ವತಿ ಮಾಡ್ತು ಅಂತ ಸುಳ್ಳು ಸುಳ್ಳೇ ಹೇಳ್ತಾಳೆ ಕಣ್ರೇ' – ಎಂದು ಅಣ್ಣಾಜೋಯಿಸನ ಹೆಂಡತಿ ವೆಂಕಟಲಕ್ಷ್ಮಿ ಹೇಳಿದಾಗ, ಇನ್ನೊಂದು ದಿನ ಅವಳ ಮನೆಗೆ ಹೋಗಬಾರದೆಂದು ತಂಗಮ್ಮ ನಿಶ್ಚಯಿಸಿಕೊಂಡಳು; 'ಇತರ ಜಾತಿ ಹೆಂಗಸರು ಮುಟ್ಟಾದ ದಿನವೇ ನೀರು ಹಾಕ್ಕಂಡು ಒಳಗೆ ಹೋಗಿ ಅಡಿಗೆ ಮಾಡ್ತಾರೆ. ಬ್ರಾಹ್ಮಣರಾಗಿ ಹುಟ್ಟಿ ಹೀಗೆ ಮಾಡೋದು ಅಂದ್ರೆ ಕೀಳು ಜಾತಿ ಕೆಟ್ಹೋಯ್ತು? ಥೂ.'
ಒಂದು ದಿನ ತಂಗಮ್ಮ, ಸಾತು, ಇಬ್ಬರೂ ಅಣ್ಣಾಜೋಯಿಸರ ಮನೆಗೆ ಹೋಗಿದ್ದಾಗ ಜೋಯಿಸರೇ ಒಂದು ಮಾತು ತೆಗೆದರು; ಪಿತ್ರಾರ್ಜಿತ ಆಸ್ತಿ ಅಂದಮೇಲೆ ಅಣ್ಣ ತಮ್ಮಂದಿರು ಇಬ್ಬರಿಗೂ ಸಮಪಾಲು ಬರಬೇಕು ಅಲ್ವೆ? ಉಳಿದ ಆಸ್ತಿಯಂತೂ ಹೋಯ್ತು. ಶ್ಯಾನುಭೋಗಿಕೇನ ಚೆನ್ನಿಗರಾಯ ಒಬ್ಬನೇ ಅನುಭವಿಸೋಸು, ಅಪ್ಪಣ್ಣಯ್ಯಂಗೆ ಅದರಲ್ಲಿ ಏನೂ ಇಲ್ಲ ಅಂದ್ರೆ ಏನೂ ನ್ಯಾಯ? ಅಣ್ಣ ತಮ್ಮ ಇಬ್ಬರಿಗೂ ಅದರ ಪೋಟಿಕೆ ಹಂಚಬೇಕು ಅಂತ ಸರ್ಕಾರದ ಕಾನೂನೇ ಇದೆ. ಹೀಗೆ ಎಷ್ಟು ದಿನ ಅಂತ ನಿಮಗೆ ಮೋಸ ಮಾಡ್ತಾರೆ ಅವ್ರು?'
ತಂಗಮ್ಮನ ಕಿವಿ ನೆಟ್ಟಗಾಯಿತು. ತಮಗೆ ಸೇರಬೇಕಾದುದರ ಬಗೆಗೆ ಬಾಯಿಯೇ ಬಿಡದೆ ಬುದ್ಧಿವಂತಿಕೆ ಮಾಡುತ್ತಿರುವ ಓರಗಿತ್ತಿ ನಂಜಮ್ಮನ ವಿಷಯದಲ್ಲಿ ಸಾತುವಿಗೆ ಒಳಗೇ ಕಿಚ್ಚು ಕವರಿತು. 'ಯಲ್ಲಾ ಬೂಟಾಟಿಕೆ ಇವಳದ್ದು' – ಮನಸ್ಸಿನಲ್ಲಿ ಅಂದುಕೊಂಡಳು.
'ನೀವೂ ಅಪ್ಪಣ್ಣಯ್ಯನೂ ಕೇಳಿ. ಅವ್ರು ಕೊಡುಲ್ಲ ಅಂದ್ರೆ ತಿಪಟೂರಿಗೆ ಹೋಗಿ ಅಮಲ್ದಾರ್ ಸಾಹೇಬರಿಗೆ ಅಡ್ಡಬಿದ್ದು ಕೇಳ್ಕಂಡ್ರೆ ಕೊಡುಸ್ತಾರೆ' ಜೋಯಿಸರು ಸಲಹೆ ಕೊಟ್ಟರು. ಆ ದಿನ ಸಂಜೆಗೆ ಅಪ್ಪಣ್ಣಯ್ಯ ಹಳ್ಳಿಯಿಂದ ಮನೆಗೆ ಬಂದಾಗ ಸಾತುವೇ ಎಲ್ಲವನ್ನೂ ಹೇಳಿದಳು; 'ನಮಗೂ ಮಕ್ಳು ಮರಿ ಇಲ್ವೆ? ಮುಂದೆ ಪಿತ್ರಾರ್ಜಿತವಾದುದ್ದು ಅಂತ ಅವುಕ್ಕೆ ಏನೂ ಸೇರಬ್ಯಾಡ್ವೆ? ನೂರ ಇಪ್ಪತ್ತು ರೂಪಾಯಿ ಪೋಟಿಗೇಲಿ ಅರ್ಧ, ಅಂದ್ರೆ ಅರವತ್ತು ಬರಬೇಕು. ಮೇಲೆ ಮಸಿ ಕಾಣಿಕೆ ಬರುವುದು ಬಿಟ್ಟಿಯೇನೋ?'
ಅಪ್ಪಣ್ಣಯ್ಯನಿಗೆ ಹಿಂದು ಮುಂದು ತಿಳಿಯದು. ಶ್ಯಾನುಭೋಗಿಕೆ ಪಟೇಲಿಕೆಗಳು ಯಾವಾಗಲೂ ಹಿರಿಯ ಮಗನಿಗೆ ಸೇರುತ್ತವೆ ಎಂಬುದನ್ನು ಅವನು ಕೇಳಿದ್ದ, ಕಂಡಿದ್ದ. ಆದರೆ ಸರ್ಕಾರದ ಕಾನೂನೇ ಬೇರೆ ಥರ ಇದೆಯೇನೋ! ಅಣ್ಣಾಜೋಯಿಸರಿಗಿಂತ ನನಗೇನು ಗೊತ್ತು ಎಂದವನು, ರಾತ್ರಿಯಾಗಿದ್ದರೂ ಜೋಯಿಸರ ಮನೆಗೆ ಹೋಗಿ ಕೇಳಿದ. ಅಣ್ಣ ತಮ್ಮಂದಿರಿಗೆಲ್ಲ ಅದರಲ್ಲಿ ಸಮಪಾಲು ಬರಬೇಕೆಂದು ಹೇಳಿ, 'ಇಷ್ಟು ವರ್ಷ ಅವರೇ ತಿಂದು ನಿನಗೆ ಎಷ್ಟೆ ಹಾಕಿದಾರಲ್ಲೋ ದಡ್ಡ' ಎಂದು ಅವರು ಹಿತನುಡಿದಾಗ ಅವನಿಗೆ ರೇಗಿಬಿಟ್ಟಿತು. ದುಡುದುಡನೆ ಅಲ್ಲಿಂದ ಓಡಿ ಅಣ್ಣನ ಮನೆಗೆ ಬಂದ. ಚನ್ನಿಗರಾಯರು ಇರಲಿಲ್ಲ. ಸೀಮೆಎಣ್ಣೆಯ

ಲ್ಯಾಂಪಿನಲ್ಲಿ ಪಾರ್ವತಿ ರಾಮಣ್ಣರಿಗೆ ಪಾಠ ಹೇಳಿಕೊಡುತ್ತಾ ಕುಳಿತಿದ್ದ ಅತ್ತಿಗೆ0ಯ ಮುಂದೆ ನಿಂತು ಕೇಳಿದ; 'ಹೀಗೆಲ್ಲ ಮೋಸ ಮಾಡಿದ್ರೆ ನಾನು ಕೇಳುಲ್ಲ. ಪೋಟಿಗೇಲಿ ಅರ್ಧ ನಂಗೂ ಕೊಟ್ಟಿಡಬೇಕು.'

ಅವನ ಮಾತು ನಂಜಮ್ಮನಿಗೆ ಅರ್ಥವಾಗಲಿಲ್ಲ; 0ಯಾವ ಪೋಟಿಗೇಲಿ? ಏನು ನೀವು ಹೇಳೂದು?'

'ಶ್ಯಾನುಬಾಕಿದು. ನಮ್ಮಪ್ಪ ಬರೀ ಚಿನ್ನ0ಯ್ಯ ಒಬ್ಬುನ್ನೇ ಹುಟ್ಸಿರಲಿಲ್ಲ. ನನ್ನೂ ಉಟ್ಸಿದ್ದ. ಸಮಪಾಲು ಕೊಡ್ದೆ ಇದ್ರೆ ನಾನು ಅಮಲ್ದಾರ್ರ ಹತ್ರುಕ್ಕೇ ಹೋಗ್ತೀನಿ. ಹೂ' – ಎಂದು ಹೇಳಿದ ಅವನು, ಅಣ್ಣನು ಮಾದೇವ0ಯ್ಯನವರ ಗುಡಿ0ಯಲ್ಲಿರಬಹುದೆಂದು 0ಯೋಚಿಸಿ ಅಲ್ಲಿಗೆ ಹೊರಟ ದಾರಿ0ಯ ಉದ್ದಕ್ಕೂ ಅವನ ಬಾಯಿ – 'ನಮ್ಮಪ್ಪ ನನ್ನೂ ಉಟ್ಸಿದ್ದ. ನಂಗೂ ಅರ್ಧ ಪೋಟಿಕೆ ಕೊಡ್ಬೇಕು. ನಾನು ಹಳ್ಳಿ ಹಳ್ಳಿ ತಿರುಗಿ ತಿರುಪೆ ಮಾಡೂದೂ, ಈ ಬೋಳೀಮಕ್ಳು ಪೋಟಿಕೆ ತಿಂದ್ಕಂಡು ಸುಖವಾಗಿರೋದೇನು!' ಎಂದು ಬೀದಿ 0ಯವರಿಗೆಲ್ಲ ಹೇಳುವಂತೆ ತನಗೆ ತಾನೇ ಬಡಿದುಕೊಳ್ಳುತ್ತಿತ್ತು.

ಅವನು ಮಾದೇವ0ಯ್ಯನವರ ಗುಡಿಗೆ ಹೋದುದು ನಂಜಮ್ಮನಿಗೆ ತಿಳಿ0ಯಲಿಲ್ಲ. ಅದೇನು ಪೂರ್ತಿ0ಯಾಗಿ ವಿಚಾರಿಸಬೇಕೆಂದು ಅವಳೇ ಎದ್ದು ಅಪ್ಪಣ್ಣ0ಯ್ಯನ ಮನೆಗೆ ಬಂದರೆ ಅವನಿರಲಿಲ್ಲ. 'ಅಪ್ಪಣ್ಣ0ಯ್ಯ ನಮ್ಮನೆಗೆ ಬಂದು, ನಮ್ಗೂ ಪೋಟಿಕೆ ಅರ್ಧ ಬರ್ಬೇಕು ಅಂತ ಏನೇನೋ ಕೂಗಾಡ್ಕಂಡು ಹೋದ್ರು. ಅದೇನು ಸಮಾಚಾರ?' ಎಂದು ಓರಗಿತ್ತಿ0ಯನ್ನು ಕೇಳಿದಳು.

ಸಾತು – 'ಅಣ್ಣ ತಮ್ಮ ಅಂತ ಇದ್ಮ್ಯಾಲೆ ಇಬ್ಬರಿಗೂ ಬರ್ಬ್ಯಾಡ್ವೆ? ಇವರಿಗೆ ತಿಳಿವಳಿಕೆ ಇಲ್ಲ ಅಂತ ಇಷ್ಟು ದಿನ ನೀವೊಬ್ರೇ ತಿನ್ಬೌದೇನೋ? ಈ ಕಾಲದಲ್ಲಿ 0ಯಾರನ್ನೂ ನಂಬುಕ್ ಆಗಲ್ಲ' ಎಂದಳು.

'ಸರ್ಕಾರದ ಕಾನೂನು ಹಾಗಿಲ್ಲ. ನಿಮಗೆ 0ಯಾರು ಹೇಳಿದೋರು ಹಾಗಂತ? ಪೋಟಿಕೆ ನೂರಿಪ್ಪತ್ತೇನೋ ಬರುತ್ತೆ. ಅದಕ್ಕೆ ಆಗೋ ಖರ್ಚೆಷ್ಟು? ಲೆಕ್ಕದ ಪುಸ್ತಕದ ಕಾಗದ ಶಾಯಿ0ಯ ಖರ್ಚೆಷ್ಟು? ಕಣ್ಣಿಗೆ ಎಣ್ಣೆ ಬಿಟ್ಕಂಡು ರೂಲು ಹಾಕಿ ಲೆಕ್ಕ ಬರೆ0ಯೋದೆಷ್ಟು? 0ಯಾವುದೂ 0ಯೋಚ್ನೆ ಮಾಡ್ದೆ ಅಪ್ಪಣ್ಣ0ಯ್ಯ ಹೀಗೆ ಬೀದಿ ೀಲೆಲ್ಲ ಕೂಗಾಡ್ಕಂಡು ಹೋಗ್ಬೌದೆ?'

'ಲೆಕ್ಕ ಏನು ಬರೆ0ಯೋದು, ಬೇಕಾದ್ರೆ ನಾನೂ ಬರ್ಕೊಡ್ತೀನಿ. ಕೈ ಕೆಸರಾದ್ರೆ ತಾನೆ ಬಾಯಿ ಮೊಸರು?'

ಇನ್ನು ಮಾತು ಬೆಳೆಸಬಾರದೆಂದು ನಂಜಮ್ಮ ಮನೆಗೆ ಹೊರಟುಹೋದಳು. ಚೆನ್ನಿಗರಾ0ಯರು ಗುಡಿ0ಯಲ್ಲಿರಲಿಲ್ಲ. ಕೆರೆ0ಯ ಏರಿ0ಯ ಕಡೆಗೆ ಹೋಗಿದ್ದವರು ಅಷ್ಟರಲ್ಲಿ ಮನೆಗೆ ಬಂದು ಸಂಧ್ಯಾವಂದನೆಗೆ ಕೂತಿದ್ದರು. ಹುಡುಗರು ಲ್ಯಾಂಪಿನ ಬೆಳಕಿನಲ್ಲಿ ಪಾಠ ಬರೆ0ಯುತ್ತಿದರು. ಸಂಧ್ಯಾವಂದನೆ ಮಾಡುವವರನ್ನು ಮಧ್ಯದಲ್ಲಿ ಮಾತನಾಡಿಸಬಾರದೆಂದು ನಂಜಮ್ಮ ಒಳಗೆ ಹೋಗಿ, ಅಡಿಗೆ ಮನೆ0ಯ ಕಸ ಗುಡಿಸಿ ತಟ್ಟೆ ಹಾಕಿ ದೇವರಿಗೆ ದೀಪ ಹಚ್ಚಿಸಿ ಪ್ರದಕ್ಷಿಣೆ ನಮಸ್ಕಾರ ಮಾಡಿದಳು. ಅಪ್ಪಣ್ಣ0ಯ್ಯನ ಸ್ವಭಾವ ಅವಳಿಗೆ ತಿಳಿ0ಯದುದಲ್ಲ. ಆದರೆ ಸಾತುವಿನ ವರ್ತನೆಯಿಂದ ಆಶ್ಚ0ರ್ಯವಾಯಿತು. ಗಂಡನಿಗೆ ಅವಳೇ ಹೇಳಿಕೊಟ್ಟಿದ್ದಾಳೆ. ಅವಳಿಗೆ 0ಯಾರು ಹೇಳಿಕೊಟ್ಟಿದ್ದಾರೆ0ಯೋ? 0ಯಾರೇ ಆಗಲಿ, ಅವಳು ಹೀಗೆ ಬದಲಾಯಿಸಬಾರದು. ಈ ಕಾಲದಲ್ಲಿ 0ಯಾರಿಗೂ ಉಪಕಾರ ಮಾಡಬಾರದು. ಜನಕ್ಕೆ ಉಪ್ಪು ತಿಂದ ಜ್ಞಾಪಕ ಉಳಿ0ಯುಲ್ಲ – ಎಂದು 0ಯೋಚಿಸುತ್ತಾ ಸುಮ್ಮನೆ ಕುಳಿತಳು.

ಅಷ್ಟರಲ್ಲಿ ಅಪ್ಪಣ್ಣ0ಯ್ಯ ಮತ್ತೆ ಬಂದ ಶಬ್ಧವಾಯಿತು. ಅವನ ಜೊತೆ0ಯಲ್ಲಿ ಎಂಟು ಹತ್ತು ಜನ ಬಂದ ಹಾಗೆ ಆಯಿತು. ಹಿಂದೆ0ಯೇ ಅತ್ತೆ ಗಂಗಮ್ಮನ ಗಂಟಲು ಕೇಳಿಸಿತು. ನಂಜಮ್ಮ ಹೊರಗೆ ಬಂದು ನೋಡುತ್ತಾಳೆ. ಅಣ್ಣಾಜೋಯಿಸ, ಅ0ಯ್ಯಾಶಾಸ್ತ್ರಿಗಳು, ರೇವಣ್ಣಶೆಟ್ಟಿ, ಗಾಣಿಗರಶಿಂಗ, ಹಿಂದಿನ ಶ್ಯಾನುಭೋಗ ಸಿವಲಿಂಗ, ಮೊದಲಾಗಿ ಒಂದು ಪಂಚಾಯ್ತಿ0ಯ ಜನವೇ ಸೇರಿದೆ. ಪಟೇಲ ಶಿವೇಗೌಡ ಮಾತ್ರ ಬಂದಿರಲಿಲ್ಲ.

ನಡುಮನೆ0ಯಲ್ಲಿ ಕೂತು ಸಂಧ್ಯಾವಂದನೆ ಮಾಡುತ್ತಿದ್ದ ಚನ್ನಿಗರಾ0ಯರು ಎದ್ದು ಪಂಚಪಾತ್ರೆ0ಯನ್ನು ಅಡಿಗೆಮನೆ0ಯ ಒಳಬಾಗಿಲಿಗೆ ಇಟ್ಟು ಪಂಚೆ ಹೊದೆದುಕೊಂಡರು. ನಂಜಮ್ಮ ಹೊರಗೆ ಬರುವುದೇ ತಡ, ಗಂಗಮ್ಮ ಸುರು ಮಾಡಿದಳು: 'ಬಾಕಿ ಜಮೀನಿನಲ್ಲಾದ್ರೆ ಅಜ್ಜಿ ಪಾಲು ಅಂತ ತೆಗೆ0ಯೋಲ್ವೆ? ಪುಣ್ಯಾತ್ಮರು ಇವರಿಬ್ಬರನ್ನೂ ಹುಟ್ಸಿದ್ದು. ನಿಜ. ನಂಗೆ ತಾಳಿ ಕಟ್ಟಿದ್ದೇ ಸುಳ್ಳೇ? ಪೋಟಿಕೇಲಿ ನಂಗೂ ಒಂದು ಪಾಲು ಬರ್ಬೇಕು. ನೀನೇ ಹೇಳು ರೇವಣ್ಣಶೆಟ್ಟಿ.'

ರೇವಣ್ಣಶೆಟ್ಟಿ ಎಂದ: 'ಹಿಂದೆ ಶ್ಯಾನುಬಾಕಿ ಮಾಡಿದ್ದೋರು ಸಿವಲಿಂಗಣ್ಣಾರಿಗೆ ಎಲ್ಲಾ ಗೊತ್ತೈತೆ. ಅವ್ರೇ ನ್ಯಾ0ಯ ಸ್ಥಾನದಲ್ಲಿ ಕುಂತ್ಕಳ್ಳಿ.'

ಸಿವಲಿಂಗ ತಕ್ಷಣ ಎದ್ದು ಬಂದು ಕಂಬದ ಹತ್ತಿರ ಕೂತು – 'ಏನಂತೀ0ಯ0ಯ್ಯಾ ಚಿನ್ನ0ಯ್ಯ?' ಎಂದ.

ಚೆನ್ನಿಗರಾ0ಯರಿಗೆ ಅಷ್ಟರಲ್ಲಿ ವಿಷ0ಯ ಅರ್ಥವಾಗಿತ್ತು. ಆದರೆ ಏನು ಹೇಳುವುದಕ್ಕೂ ತೋಚಲಿಲ್ಲ.

'ಅವ್ಳನ್ನೇ ಕೇಳಿ' – ಎಂದು ಹೆಂಡತಿ0ಯ ಕಡೆಗೆ ಕೈ ತೋರಿಸಿ, ತಾವು ಬಚಾವ್ ಆದವರಂತೆ ಕುಳಿತರು.

'ನೀವೇ ಅದೇನು ಹೇಳ್ರಮ್ಮ' – ಎಂದು ರೇವಣ್ಣಶೆಟ್ಟಿ ನಂಜಮ್ಮನ ಮುಖವನ್ನೇ ದಿಟ್ಟಿಸಿ ನೋಡುತ್ತಾ ಹೇಳಿ, ಒಂದು ನಿಮಿಷದ ಮೇಲೆ, 'ಹ್ಯದುರ್ಕಾಬ್ಯಾಡಿ' ಎಂದ.

ಅಷ್ಟರಲ್ಲಿ ಸಾತು ಮತ್ತು ತಂಗಮ್ಮ, ಇಬ್ಬರೂ ಬಂದು ಹೊರಬಾಗಿಲಿನ ಹತ್ತಿರ ನಿಂತಿದ್ದರು. ನಂಜಮ್ಮನಿಗೆ

ಕೋಪ ಏರಿಹೋಗಿತ್ತು. ಎಲ್ಲರಿಗೂ ಒಟ್ಟಿಗೆ ಹೇಳಿದಳು: 'ನಿಮ್ಮನ್ನೆಲ್ಲ ಇಲ್ಲಿ ಕರಸ್ದೋರು ಯಾರು? ಕಂಡೋರ ಮನೆ ಲೆಕ್ಕಾಚಾರ ಮಾಡುಕ್ಕೆ ಓಡಿ ಬತ್ತೀರಲ್ಲ, ನಿಮ್ಮ ನಿಮ್ಮ ಮನೆ ವ್ಯವಹಾರ ನೋಡ್ಕಂಡು ಮರ್ಯಾದೆಯಾಗಿರಿ. ನೀವೆಲ್ಲ ಈಗ ಎದ್ದು ಹೊರಿಕ್ ಹೋಗ್ತೀರೋ ಅಥವ ಮರ್ಯಾದೆ ಆಗ್ಬೇಕೋ?'
ಈ ಮಾತನ್ನು ಯಾರೂ ನಿರೀಕ್ಷಿಸಿರಲಿಲ್ಲ. ಗಾಣಿಗರ ಶಿಂಗ, ಹೊರಕೇರಿ ಗುರುವಯ್ಯ ಮೊದಲಾದವರಿಗೆ ಹಿಂದುಮುಂದು ಏನೂ ಗೊತ್ತಿರಲಿಲ್ಲ. 'ಪಂಚಾಯ್ತಿಯಾಗುತ್ತೆ ಬನ್ನಿ' – ಎಂದು ಅಪ್ಪಣ್ಣಯ್ಯ ಬೀದಿಯಲ್ಲಿ ಕೂಗಿಕೊಂಡು ಹೋಗಿದ್ದ. ಅವರು ಎದ್ದು ಬಂದಿದ್ದರು. ಎಷ್ಟಾದರೂ ಗ್ರಾಮದ ಶ್ಯಾನುಭೋಗಿಕೆ ಲೆಕ್ಕ ಇವರ ಹತ್ತಿರ ಇದೆ. ತಮಗೇಕೆ ಇಲ್ಲದ ನಿಷ್ಠುರ ಎಂದುಕೊಂಡು, ಅವರೆಲ್ಲ ಎದ್ದು ಸುಮ್ಮನೆ ಹೊರಟುಹೋದರು. ಅವರು ಹೋದದ್ದೇ ತಡ ಉಳಿದವರ ಧೈರ್ಯವೂ ಕುಗ್ಗಿತು. 'ಸುಮ್ನೆ ಎದ್ದು ಗಾಡಿಬಿಡ್ತೀರೋ ಇಲ್ವೋ ನೀವು?' – ಎಂದು ಅವಳು ಇನ್ನೊಂದು ಸಲ ಎಂದುದಕ್ಕೆ ಸಿವಲಿಂಗ ರೇವಣ್ಣಶೆಟ್ಟಿ ಮೊದಲಾದವರು ಎದ್ದು ಹೋದರು. 'ಅಪ್ಪಣ್ಣಯ್ಯ, ಅದ್ಯಾವ ಮನೆಹಾಳ ಹೇಳಿಕೊಟ್ಟ ನಿಮಗೆ?' – ಎಂದು ನಂಜಮ್ಮ ಮತ್ತೆ ಕೇಳಿದಳು. ಅಪ್ಪಣ್ಣಯ್ಯ ಉತ್ತರ ಹೇಳಲಿಲ್ಲ. ಆದರೆ ಈ ಮಾತು ಬಂದ ತಕ್ಷಣ ಅಣ್ಣಾಜೋಯಿಸ ಮೇಲೆ ಎದ್ದು, 'ಸಂಧ್ಯಾವಂದನೆಗೆ ಹೊತ್ತಾಗುತ್ತೆ. ನಿಮ್ಮ ನಿಮ್ಮ ಮನೆ ವ್ಯಾಜ್ಯ, ಸುಮ್ಮನೆ ಜನ ಕರೀಬ್ಯಾಡ ಅಂದ್ರೂ ಅಪ್ಪಣ್ಣಯ್ಯ ಊರೋರುನ್ನೆಲ್ಲ ಕೂಗಿದ. ಇವ್ನಿಗೆ ಬುದ್ಧಿ ಯಾವಾಗ ಬರುತ್ತೆ?' ಎಂದು ಹೊರಟುಹೋದ. ಅಯ್ಯಾಶಾಸ್ತ್ರಿಗಳು, ಹೊದೆದಿದ್ದ ಶಾಲು ಸರಿಮಾಡಿಕೊಂಡು ಅವನನ್ನು ಅನುಸರಿಸಿದರು.
'ಅಪ್ಪಣ್ಣಯ್ಯ, ಶ್ಯಾನುಭೋಗಿಕೆ ಯಾವಾಗ್ಲೂ ಹಿರೀ ಮಗಂದು. ನೀವು ಬೇಕಾದ್ರೆ ಹೋಗಿ ತಿಪಟೂರಲ್ಲೇ ಕೇಳ್ಕಂಡ್ ಬನ್ನಿ' – ಎಂದು ನಂಜಮ್ಮ ಹೇಳಿದ ತಕ್ಷಣ ಅವನು ಅಲ್ಲಿಂದ ಎದ್ದುಬಿಟ್ಟ. ಪಂಚಾಯಿತರೆಲ್ಲ ತಮ್ಮ ಕೈಬಿಟ್ಟು ನಡೆದಾಗಲೇ ಅವನಿಗೆ ನೀರಿನಲ್ಲಿ ಮುಳುಗಿಸಿದಂತೆ ಆಗಿತ್ತು. ಗಂಗಮ್ಮ ಮಾತ್ರ – 'ಈ ಮುಂಡೆ ನಾಲಿಗೆ ನೋಡು. ಊರೋರ್ನೆಲ್ಲ, ಹೀಗೆ ಅಟ್ಟಿಸ್ಕಂಡ್ ಮಾತಾಡಿದ್ಲಲ್ಲ. ಆಡ್ಲಿ. ನನ್ನ ಪಾಲು ಮಾತ್ರ ಬಿಡುಲ್ಲ' – ಎಂದು ಕೂಗಾಡುತ್ತಾ ಎದ್ದು ಹೋದಳು.
ಊಟ ಮಾಡುವಾಗ ಚೆನ್ನಿಗರಾಯರು ಆ ವಿಷಯವಾಗಿ ಏನೂ ಮಾತನಾಡಲಿಲ್ಲ. 'ನೋಡಿದ್ರಾ ಅವರ ಯೋಗ್ತೀನಾ?' – ಎಂದು ನಂಜಮ್ಮ ಹೇಳಿದುದಕ್ಕೆ, 'ಅಂದ್ರಂದ್ಕಂಡ್ರು' ಎಂದು ತಮಗೆ ಈ ವಿಷಯ ಏನೂ ಸಂಬಂಧವೇ ಇಲ್ಲವೇನೋ ಎಂಬಂತೆ, ಮಧ್ಯಾಹ್ನದ ತಂಗಳು ಸೊಪ್ಪಿನ ಹುಳಿಯನ್ನು ಸುರಿದುಕೊಂಡರು. ಆ ದಿನ ರಾತ್ರಿ ನಂಜಮ್ಮನಿಗೆ ಸರಿಯಾಗಿ ನಿದ್ರೆ ಬರಲಿಲ್ಲ. ತನ್ನ ಓರಗಿತ್ತಿಯ ಬದಲಾದ ಬಣ್ಣವನ್ನು ಕಂಡು ಮನಸ್ಸಿಗೆ ವ್ಯಥೆಯಾಗುತ್ತಿದ್ದರೆ, ನಿಜವಾಗಿಯೂ ಅವರಿಗೆ ಪಾಲು ಕೊಡಬೇಕೇನೋ ಎಂಬ ಅನುಮಾನ ಬೇರೆ. ಒಂದು ಹೆಜ್ಜೆ ತಿಮ್ಲಾಪುರಕ್ಕೆ ಹೋಗಿ ದ್ಯಾವರಸಯ್ಯನವರನ್ನೇ ಕೇಳಿಕೊಂಡು ಬರಬೇಕು ಎಂಬ ಯೋಚನೆ ನಡುರಾತ್ರಿಯ ಹೊತ್ತಿಗೆ ಹೊಳೆಯಿತು.
ಬೆಳಗಿನ ಜಾವದಲ್ಲಿ ಗಂಡನನ್ನು ಎಬ್ಬಿಸಿದರೆ – 'ನನ್ ಕೈಲಾಗುಲ್ಲ. ನೀನೇ ಓಗ್ ಬಾ' ಎಂದು ಅವರು ಮುಸುಕಿನ ಒಳಗೇ ಗೊಣಗಿದರು. ಪಾರ್ವತಿ, ರಾಮಣ್ಣ, ಇಬ್ಬರನ್ನೂ ಎಬ್ಬಿಸಿ ಮುಖ ತೊಳೆಸಿ, ಒಂದಿಷ್ಟು ಹುರಿಟ್ಟು ಕಲಸಿ ತಿನ್ನಿಸಿ ಕರೆದುಕೊಂಡು ಹೋದಳು.
ಇತ್ತೀಚೆಗೆ ವಯಸ್ಸಾಗಿ ದ್ಯಾವರಸಯ್ಯನವರ ಆರೋಗ್ಯ ಸರಿ ಇರುತ್ತಿರಲಿಲ್ಲ. ಹೀಗಾಗಿ ಅವರು ಚಳಿಯಲ್ಲಿ ಏಳದೆ ಮಲಗಿಯೇ ಇರುತ್ತಿದ್ದರು. ಹೊತ್ತು ಹುಟ್ಟಿದ ಒಂದು ಗಳಿಗೆಯಲ್ಲೇ ಬಂದ ನಂಜಮ್ಮನನ್ನು ಕಂಡು ಅವರಿಗೂ ಆಶ್ಚರ್ಯ. ಎರಡು ವರ್ಷದಿಂದ ಅವಳು ಇಲ್ಲಿಗೆ ಬಂದಿರಲಿಲ್ಲ. ಸ್ವತಂತ್ರವಾಗಿ ಶ್ಯಾನುಭೋಗಿಕೆಯ ಲೆಕ್ಕಪತ್ರಗಳನ್ನು ನಿಭಾಯಿಸಿಕೊಂಡು ಹೋಗುತ್ತಿದ್ದಾಳೆ ಎಂಬುದನ್ನು ತಿಳಿದ ಅವರು ಅವಳ ಬಗೆಗೆ ತೃಪ್ತಿಯಿಂದಿದ್ದರು. ಈಗ ಬಂದ ಸಮಾಚಾರ ತಿಳಿದು ಹೇಳಿದರು: 'ಅದರಲ್ಲೇನೂ ಅನುಮಾನವಿಲ್ಲ. ನಂಗೆ ಚನ್ನಾಗಿ ಗೊತ್ತು. ಹಿರೀ ಮಗ ಒಬ್ಬನಿಗೇ ಅದರ ಅಧಿಕಾರ. ಮಹಾರಾಜರ ಪಟ್ಟವೂ ಹಾಗೇ ಅಲ್ಲವೆ? ರಾಜ್ಯಾನಾ ಅಣ್ಣ, ತಮ್ಮ, ಇಬ್ಬರಿಗೆ ಹಂಚ್ತಾರೆಯೇ?'
ನಂಜಮ್ಮ ಮತ್ತು ಮಕ್ಕಳ ಸ್ನಾನ ತಿಂಡಿ ಆದಮೇಲೆ ಹೇಳಿದರು: 'ನಿಂಗೆ ಮನಸ್ಸಿಗೆ ಸಮಾಧಾನವಾಗಬೇಕು. ಕಂಬನಕೆರೆ ಏನೂ ಐಗಂಚಿ ಇಲ್ವಲ್ಲ. ಇಲ್ಲಿಗೆ ಮೂರು ಮೈಲಿ. ನೀನು ಒಂದು ಹೆಜ್ಜೆ ಅಲ್ಲಿಗೇ ಹೋಗಿ ಶೇಕ್ದಾರರನ್ನೇ ಕೇಳಿಬಿಡು. ಆಮ್ಯಾಲೆ ಮನುಸ್ನಲ್ಲಿ ಮುಳ್ಳು ಇರುಲ್ಲ.'
ದಾರಿ ತೋರಿಸಲು ಅವರು ಒಬ್ಬ ಆಳನ್ನು ಕಳಿಸಿದರು. ಮಕ್ಕಳನ್ನೂ ನಡೆಸಿಕೊಂಡು ನಂಜಮ್ಮ ಹೋಬಳಿಯ ಸ್ಥಳವಾದ ಕಂಬನಕೆರೆಗೆ ಹೆಜ್ಜೆ ಹಾಕಿದಳು. ಶೇಕ್ದಾರರು ಅವಳಿಗೆ ಗೊತ್ತು. ರಾಮಸಂದ್ರಕ್ಕೆ ಬಂದಾಗಲೆಲ್ಲ ಅವಳೇ ಅವರಿಗೆ ಬಿಳಿ ಅನ್ನ, ಸಾರು, ಚಟ್ನಿಗಳನ್ನು ಮಾಡಿ ಬಡಿಸಿದ್ದಾಳೆ. ತುಂಬಾ ನಿಧಾನ ಸ್ವಭಾವದ ಅವರು 'ಅಮ್ಮಾ' ಎಂದೇ ಅವಳನ್ನು ಮಾತನಾಡಿಸಿ ಊಟ ಮಾಡಿದ್ದಾರೆ. ಆದುದರಿಂದ ಅವಳು ಹೆಚ್ಚು ಭಯ, ಆತಂಕವಿಲ್ಲದೆ ಅವರ ಮನೆಗೆ ಹೋದಳು. ಇವಳನ್ನು ಕಂಡ ಅವರೇ ಮಾತನಾಡಿದರು: 'ಏನಮ್ಮಾ, ಶ್ಯಾನುಭೋಗಿಕೆ ಪ್ರೋಟಿಕೇಲಿ ತಮ್ಮನಿಗೂ ಪಾಲು ಕೊಡಬೇಕೇ ಬ್ಯಾಡವೇ ಅಂತ ಕೇಳೂಕೆ ಬಂದ್ರಾ?'
ನಂಜಮ್ಮನಿಗೆ ಆಶ್ಚರ್ಯವಾಯಿತು. ಮೂಕಳಾಗಿ ನಿಂತ ಅವಳಿಗೆ ಅವರು ಹೇಳಿದರು: 'ಈಗ ಒಂದರ್ಧ

ಗಂಟೆಯೂ ಆಗಿಲ್ಲ. ನಿಮ್ಮ ಮೈದುನ ಅಪ್ಪಣ್ಣಯ್ಯ, ಅವನ ಹೆಂಡತಿ ಬಂದಿದ್ದರು. ನನ್ನ ಕೈಲಿ ಮಾತಾಡುಕ್ಕೆ ಇಬ್ರಿಗೂ ಭಯ. ಬಾಗಿಲ ಹೊರಗೇ ಕೈಮುಕ್ಕಂಡು ಮರೇಲಿ ನಿಂತಿದ್ರು. ಅಣ್ಣಾಜೋಯಿಸರು, ಸಿವಲಿಂಗೇಗೌಡ ಅಂತ ಇಬ್ರು ಅವರ ಪರವಾಗಿ ಮಾತಾಡಿದ್ರು. ನಾಕು ಜನಕ್ಕೂ ಸೇರಿಸಿ ಮುಖದ ತುಂಬ ಉಗುಳಿ ಕಳುಸ್ದೆ. ನೀವೇನೂ ಯೋಚ್ನೆ ಮಾಡ್ಬ್ಯಾಡಿ. ಇದು ಹಿರಿ ಮಗುಂಗೆ ಮಾತ್ರ ಅನ್ನೋದು ಯಾರಿಗೆ ಗೊತ್ತಿಲ್ಲ? ಇಷ್ಟನ್ನ ಕೇಳೂಕ್ಕೆ ಇಷ್ಟು ದೂರ ಯಾಕ್ ಬಂದ್ರಿ ನಡ್ಕಂಡು?'

ನಂಜಮ್ಮನಿಗೆ ಧೈರ್ಯವಾಯಿತು. 'ಬಿಸಿಲಲ್ಲಿ ಬಂದಿದೀರ, ಒಳಗೆ ನಡೀರಿ' – ಎಂದು ಶೇಕ್ದಾರರು ತಮ್ಮ ಹೆಂಡತಿಗೆ ಹೇಳಿದರು. ಎಲ್ಲರಿಗೂ ಊಟ ಮಾಡಿಸಿ, ಸ್ವಲ್ಪ ಬಿಸಿಲು ಕಂದಿದ ಮೇಲೆ ಅವಳು ಹೊರಡಲು ಶೇಕ್ದಾರರು ಅನುಮತಿ ಕೊಟ್ಟರು. ಅವರ ಹೆಂಡತಿ, ಮನೆಗೆ ಬಂದ ಈ ಮುತ್ತೈದೆಗೆ ಎಲೆ ಅಡಿಕೆ ಜೊತೆಗೆ ಒಂದು ರವಿಕೆಕಣ ಮತ್ತು ತೆಂಗಿನಕಾಯಿಗಳನ್ನು ಇಟ್ಟು ಹುಡುಗರಿಬ್ಬರ ಕೈಗೂ ಬೆಲ್ಲದ ಮುರುಕು ಕೊಟ್ಟರು. ಕಂಬನಕೆರೆಗೂ ರಾಮಸಂದ್ರಕ್ಕೂ ನೇರವಾಗಿ ಐದು ಮೈಲಿ. ದಾರಿಯಲ್ಲಿ ಹುಡುಗರು ಕಾಲು ನೋವೆಂದು ಹಟ ಮಾಡುತ್ತಿದ್ದರು. ಶೇಕ್ದಾರರ ಮಾತಿನಿಂದ ನಂಜಮ್ಮನ ಮನಸ್ಸು ಸಮಾಧಾನವಾಗಿತ್ತು. ಹುಡುಗರನ್ನು ರಮಿಸುತ್ತಾ, ಎರಡು ಕೈಲೂ ಇಬ್ಬರ ಕೈಯನ್ನೂ ಹಿಡಿದುಕೊಂಡು ನಿಧಾನವಾಗಿ ನಡೆಸಿಕೊಂಡು ಕತ್ತಲಾಗುವ ಮುನ್ನ ಊರು ಮುಟ್ಟಿದಳು.

– 4 –

ಅಪ್ಪಣ್ಣಯ್ಯ ಹೆಂಡತಿಯ ಜೊತೆ ಬೇರೆ ವಾಸಮಾಡಲು ಪ್ರಾರಂಭಿಸಿದ ಮೇಲೆ ಗಂಗಮ್ಮನಿಗೆ ಒಂಟಿತನ ಸಹಿಸಲಾಗದುದು ಮಾತ್ರವಲ್ಲ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಕಂದನೇ ತನ್ನನ್ನು ದೂರ ಮಾಡಿದನೆಂಬ ಭಾವನೆ ಬೆಳೆಯಿತು. ಈ ಸೋಲನ್ನು ಹೇಗೆ ತಡೆದಾಳು? ತನ್ನಿಂದ ಮಗನನ್ನು ಬೇರೆ ಮಾಡಿಸುವುದಕ್ಕಾಗಿಯೇ ಹಿರಿಯ ಸೊಸೆ, ಇವನು ಗುಡಿಸಲು ಕಟ್ಟಿಕೊಳ್ಳಲು ಸಹಾಯ ಮಾಡಿದಳು ಎಂದೂ ಅವಳು ಅರ್ಥ ಮಾಡಿಕೊಂಡಳು.

ಅವನ ಅತ್ತೆ, ಹೆಂಡತಿ ಬಂದು ಒಂದೂವರೆ ವರ್ಷವಾಗಿತ್ತು. ಹಳ್ಳಿ ತಿರುಗಿ ಭಿಕ್ಷೆ ಬೇಡಿ ಜನಗಳು ಆಡಿದ ಮಾತುಗಳನ್ನು ಕೇಳಿ ಅವನಿಗೂ ಸಾಕಾಗಿಹೋಗಿತ್ತು. ಒಂದು ದಿನ ಅವನು ಕೆಂಚೇಗೌಡನ ಕೊಪ್ಪಲಿನಲ್ಲಿ ಕಲ್ಲೇಗೌಡನ ಮನೆಗೆ ಹೋದ. ಗೌಡ ಮನೆಯಲ್ಲಿದ್ದರೂ ಇವನಿಗೆ ಒಂದು ಮಣೆ ಹಾಕಿಕೊಡಲಿಲ್ಲ. ಹೇಳಿಸಿಕೊಳ್ಳದೆ ನೆಲದ ಮೇಲೆಯೇ ಕೂತು, ಒಂದಿಷ್ಟು ರಾಗಿ ಕೊಡಿಸುವಂತೆ ಇವನು ಕೇಳಿದುದೇ ತಡ, ಗೌಡ ಸಿಡಾರನೆ ಅಂದುಬಿಟ್ಟ; 'ನಿಂಗೇನ್ ಗುರ್ಗುಟ್ತದೇನಯ್ಯ? ಈಗ ನಿಮ್ಮವ್ವ ಬಂದು ಕುಂಡೋದ್ಲು. ಮತ್ತೆ ನೀನು ಬಂದಿದೀಯಾ. ರಾಗಿ ಏನು ಪುಗ್‌ಶೆಟ್ಟೆ ಬತ್ತೈತಾ? ರೊಟ್ಟಿ ಕೊಡ್ತೀವಿ, ಬಾ. ಹ್ವಲದಾಗೆ ಗೇಯಿ. ಎಲ್ಡುಸೇರು ಕೂಲಿತಗಂಡ್ ಒಗೀವಂತೆ.'

ಅಪ್ಪಣ್ಣಯ್ಯ ಕುಳಿತೇ ಇದ್ದ. ಗೌಡ –'ಸುಮ್ಕೆ ಎದ್ ಓಯ್ತಿಯೋ, ನಿಂಗೆ ಕುತ್ಕೆಮ್ಯಾಲೆ ಇಡುಮಿ ಆಚೀಕ್ ನೂಕ್‌ಬೇಕಯ್ಯಾ?'

ಅಪ್ಪಣ್ಣಯ್ಯನಿಗೆ ದುಃಖ ಒತ್ತರಿಸಿ ಬಂದು ಬಿಟ್ಟಿತು. ಕಳೆದ ಒಂದೂವರೆ ವರ್ಷದಿಂದ ಅವನು ಇಂಥ ನುಡಿಯನ್ನು ಹಲವು ಮನೆಗಳಲ್ಲಿ ಕೇಳಿದ್ದನಾದರೂ, ಕುತ್ತಿಗೆ ಮೇಲೆ ಇಡುಮಿ ಆಚೆಗೆ ನೂಕುವ ಮಾತನ್ನು ಯಾರೂ ಆಡಿರಲಿಲ್ಲ. ಕುಳಿತಿದ್ದವನು ಎದುರಿಗೆ ಇಟ್ಟುಕೊಂಡಿದ್ದ ಪಂಚೆ ಮತ್ತು ಪುಟ್ಟ ಗೋಣಿಯ ಚೀಲಗಳನ್ನು ಕೈಗೆ ತೆಗೆದುಕೊಂಡು, ತಾನೇ ಹೊರಗೆ ಬಂದ. ಅಷ್ಟರಲ್ಲಿ ಅವನಿಗೆ ಅಳು ಬಂದುಬಿಟ್ಟಿತು. ಕಣ್ಣೀರು ಒರೆಸಿಕೊಳ್ಳುತ್ತಾ ಮುಂದೆ ಹತ್ತು ಹೆಜ್ಜೆ ನಡೆದಿದ್ದ. ಮಡಿಲ ತುಂಬ ರಾಗಿ ಕಟ್ಟಿಕೊಂಡು ಎದುರಿಗೆ ಗಂಗಮ್ಮ ಸಿಕ್ಕಿದಳು. ಇಷ್ಟು ವಯಸ್ಸಿನ ಮಗ ಕಣ್ಣಿನಲ್ಲಿ ನೀರು ಸುರಿಸಿಕೊಂಡು ಅಳುವುದನ್ನು ಕಂಡ ಅವಳಿಗೆ ಕರುಳು ಚುರ್ ಎಂದಿತು. ಅವಳೇ –'ಯಾಕೋ ನನ್ ಕಂದ ಹೀಗ್ ಅಳ್ತೀಯಾ?' ಎಂದುದಕ್ಕೆ ಅವನ ಅಳು ಇನ್ನೂ ಹೆಚ್ಚಾಯಿತು. ನಡೆದ ಸಂಗತಿ ಹೇಳಿ, ಅವನು ಕೇಳಿದ; 'ಕಲ್ಲೇಗೌಡ ಹೀಗನ್‌ಭೌದಾ?' 'ಅಪ್ಪಣ್ಣಾ, ಬಾ. ಬಸವಣ್ಣನಗುಡೀಲಿ ಕೂತ್ಕಂಡು ಮಾತಾಡಾಣ' –ಎಂದು ಮಗನನ್ನು ಕರೆದು ಕೊಂಡು ಊರ ಮುಂದಿನ ಗುಡಿಯ ಜಗುಲಿಯ ಮೇಲೆ ಕೂರಿಸಿ ಹೇಳಿದಳು; 'ತಾಯಿ, ಮಗ, ಇಬ್ಬಿಬ್ರೂ ಕೇಳೂಕ್ಕೆ ಹೋದ್ರೆ ಅವ್ರು ತಾನೇ ಯೇನಂತಾರೆ? ನೀನ್ಯಾಕೆ ಬಂದ್ಯಪ್ಪಾ ಇಲ್ಲಿ ಕೇಳುಕ್ಕೇ?'

'ಬರ್ದೇ ಇದ್ರೆ ಜೀವನುಕ್ ಏನ್ ಮಾಡ್ಲಿ?'

'ಅಯ್ಯೋ ನಿನ್ನ ಹಣೇಬರವೇ, ಮುಂಡೇದೇ? ನನ್ನ ಹ್ವಟ್ಟೇಲಿ ಹುಟ್ಟಿ ನೀನು ಜೀವನುಕ್ಕೆ ತಾಪತ್ರಯಪಡಬೇಕೇನೋ? ಇಷ್ಟು ದಿನವೂ ನಿನ್ನ ರಾಜನ್ಹಾಗೆ ಸಾಕ್ಲಿರ್ಲಿಲ್ವೇನೋ?' ಹಳ್ಳಿ ಹಳ್ಳಿ ತಿರುಗಿ ತಿರುಪೆ ಮಾಡಿ ಆ ಮುಂಡೇರುನ್ನೆಲ್ಲ ಸಾಕೂದು ನಿನಗ್ಯಾವ ಹಣೆಬರ? ನೀನು ಓ ಲಕ್ಷ್ಮಣ ಹ್ವಟ್ಟೆಗೆ ಹಿಟ್ಟಿಲ್ವೋ ಅಂತ ಅಸ್ ಅಂದ್ಕಂಡು ರಾಗಿ ಭಿಕ್ಷ ಮಾಡ್ಕಂಡು ಮನಿಗೆ ತಂದ್ ಹಾಕೂದು. ಆ ಮುಂಡೇದು ಅದ ಮಾರಿಹಾಕಿ ಸಣ್ಣಕ್ಕಿ ಅನ್ನ, ತಗರಿಬ್ಯಾಳೆ ಸಾರು ಸುರ್ಕಂಡು ಹ್ವಡಿಯೂದು. ಜೊತೆಗೆ ಅವುಕ್ಕೆಲ್ಲ ಕಾಪಿ ಬ್ಯಾರೆ ಬೇಕು ಪೀಪಿ. ಆ ಮುಂಡೇರು ಉಟ್ಕಂಡಿರಾ ಬಣ್ಣ ಬಣ್ಣದ ಸೀರೇನೂ ನೋಡು, ನೀನು ಸುತ್ಕಂಡಿರಾ

ಈ ಹರಕಲು ಪಂಚೇನೂ ನೋಡು. ತನ್ನ ಸುಖ ಬಿಟ್ಟು ಮಿಂಡನ ಕಷ್ಟ ಸುಖ ಸೂಳೆಗ್ಯಾಕ್ ಬೇಕು?'
ಅಪ್ಪಣ್ಣಯ್ಯನಿಗೆ ತಾಯಿಯ ಮಾತು ನಿಜವೆನಿಸುತ್ತಿತ್ತು. ಹೆಂಡತಿ ಮಕ್ಕಳು ಬರುವ ಮೊದಲು ಅವನು ಯಾರ ಮನೆಯಲ್ಲಿಯೂ ಭಿಕ್ಷೆ ಕೇಳಿರಲಿಲ್ಲ. ಬೇಡುವುದು ಅಮ್ಮನ ಕೆಲಸ. ಊರ ಹೊರಗೆ ಎಲ್ಲಾದರೂ ಸುತ್ತುತ್ತಾ ಹೊಗೆಸೊಪ್ಪು ಹಾಕಿಕೊಂಡು, ಕೊನೆಗೆ ಅಮ್ಮ ಗುಡ್ಡೆ ಹಾಕಿದುದನ್ನು ಗೋಣಿಚೀಲದಲ್ಲಿ ಹೊತ್ತು ತರುವುದಷ್ಟೇ ಅವನ ಕಾರ್ಯವಾಗಿತ್ತು. ಜೊತೆಗೆ, ಇಬ್ಬರ ಸಂಸಾರದಲ್ಲಿ ಮೂರು ತಿಂಗಳು ಹಳ್ಳಿ ತಿರುಗಿದ್ದರೆ, ಉಳಿದಂತೆ ಸುಖವಾಗಿ ಕೂತು ತಿನ್ನಬಹುದಾಗಿತ್ತು. 'ನಿನ್ನ ಹೆಂಡ್ತಿ ಅಂತ ಅವ್ಳನ್ನ ಸಾಕ್ತಾ ಇದಿಯಾ. ನಾಚಿಕೆ ಇಲ್ದೆ ಬಂದು ಸೇರ್ಕಂಡಿರೋ ಅತ್ತೆ ಅನ್ನೂ ಮುಂಡೆಗೆ ನೀನ್ಯಾಕೆ ತಂದು ಹಾಕ್ಬೇಕೋ?'
ಆ ದಿನ ಮತ್ತೆ ಅಪ್ಪಣ್ಣಯ್ಯ ಯಾರ ಮನೆಗೂ ಕೇಳಲು ಹೋಗಲಿಲ್ಲ. ಅಮ್ಮ ಗುಡ್ಡೆ ಹಾಕಿದುದನ್ನು ತನ್ನ ಗೋಣಿಚೀಲಕ್ಕೆ ಬಾಯಿ ಕಟ್ಟಿ ತಲೆಯಮೇಲೆ ಇಟ್ಟುಕೊಂಡ. ಭಾರ ಹೊರುವುದೇನೂ ಅವನಿಗೆ ಕಷ್ಟದ ಕೆಲಸವಲ್ಲ. ದಾರಿಯಲ್ಲಿ ಗಂಗಮ್ಮ ಅಂದಳು: 'ಆ ಮಾದೇವಯ್ಯ ಅಂದ್ರೆ ಹೆತ್ತವ್ವಂಗೇ ಲಾಡಿ ಬಿಚ್ಚುವಂತ ಸೂಳೇಮಗ. ಅವ್ನು ನಿನ್ ಹತ್ರ ಸುಳ್‌ಸುಳ್ಳೇ ಪ್ರಮಾಣ ಮಾಡುಸ್ದ ಅಂತ ನೀನು ನಂಬಭೌದೇ? ನೀನು ಅವರ ಊರಿಗೆ ಒಂದು ಸಲಿ ಹೋಗಿದ್ಯೋ ಬಿಟ್ಟಿದ್ಯೋ. ಆ ಮಗು ನಿಂಗೇ ಹುಟ್ಟಿದ್ದು, ಅವ್ಳು ಆವಾಗ್ಲೇ ಬಸರಿಯಾದ್ಲು ಅಂತ ಹ್ಯಾಗೆ ಗೊತ್ತು?'
ಅಪ್ಪಣ್ಣಯ್ಯ ಯಾವ ಮಾತನ್ನೂ ಆಡದೆ ಸುಮ್ಮನೆ ಭಾರ ಹೊತ್ತು ಬರುತ್ತಿದ್ದ. ಊರು ಹತ್ತಿರ ಬಂದಾಗ ಗಂಗಮ್ಮ ಹೇಳಿದಳು: 'ನೀನು ಸುಮ್ನೆ ನನ್ ಜೊತೆ ಬಾ. ಮದ್ಲು ಇದ್ವಾಗೆ ಸುಖವಾಗಿರು.'
ಮಗ ಮತ್ತೆ ತಾಯಿಯ ಗೃಹಪ್ರವೇಶ ಮಾಡಿದ. ಅವನು ಯಾವ ಕೆಲಸವನ್ನೂ ಮಾಡಲಿಲ್ಲ. ಸುಮ್ಮನೆ ಮಲಗಿ ನಿದ್ರೆ ಮಾಡಿದ. ಗಂಗಮ್ಮ ಈರುಳ್ಳಿ, ಒಂದು ಹಿಲುಕು ಬೆಳ್ಳುಳ್ಳಿ ತಿರುವಿಹಾಕಿ ಚಿಲುಕಿಸಿದ ಅವರೇಬೇಳೆ ಮೇಲೋಗರ ಮಾಡಿ ಬಿಸಿಬಿಸಿಯಾಗಿ ರಾಗಿಹಿಟ್ಟು ತೊಳಸಿ ಮುದ್ದೆ ಕಟ್ಟಿ ಮಗನನ್ನು ಎಬ್ಬಿಸಿದಳು. ಊಟಕ್ಕೆ ಕೂತರೆ ಅವನಿಗೆ ಒಂದೂವರೆ ವರ್ಷದ ಹಿಂದಿನ ಸ್ವರ್ಗವೇ ಎದುರಿಗೆ ಬಂದಂತೆ ಆಗಿತ್ತು. ಅವನಿಗೆ ಮೊದಲಿನಿಂದಲೂ ಮುದ್ದೆ ಎಂದರೆ ಆಶೆ. ಚಿಲುಕಿಸಿದ ಅವರೇಬೇಳೆಯ ಮೇಲೋಗರಕ್ಕಿಂತ ಉತ್ತಮವಾದ ಅಡುಗೆ ಈ ಪ್ರಪಂಚದಲ್ಲಿ ಯಾವುದಿದೆ? ಅವನ ಹೆಂಡತಿ, ಅತ್ತೆ, ಒಂದು ದಿನವೂ ಮನೆಯಲ್ಲಿ ಮುದ್ದೆ ತೊಳಸಿಲ್ಲ. ಅವರೇಬೇಳೆ ವಾಯುವಂತೆ, ಇತರೇ ಜನ ತಿನ್ನುವುದಂತೆ.
'ಬಾನ್‌ಜೋತ್‌ಮುಂಡೇರ ತಂದು' – ಎಂದು ಮನಸ್ಸಿನಲ್ಲೇ ಬೈದುಕೊಂಡು ಮುದ್ದೆ ಮುರಿಯುತ್ತಾ ಸೌಟುಗಟ್ಟಲೆ ಮೇಲೋಗರ ಹೊಡೆದ.
ಆ ದಿನದಿಂದ ಅವನು ಹೆಂಡತಿಯ ಮನೆಗೆ ಹೋಗಲಿಲ್ಲ. ಮೊದಲ ದಿನ ಹಳ್ಳಿಯಿಂದ ಊರಿಗೆ ಬಂದಿಲ್ಲವೆಂದು ಭಾವಿಸಿದ ಅವರಿಗೆ, ಅವನು ತಾಯಿಯ ಮನೆಯಲ್ಲಿರುವುದು ತಿಳಿಯಿತು. ಆದರೆ ತಾವೇ ಹೋಗಿ ಕರೆಯುವಂತಿಲ್ಲ. ಮೂರನೆಯ ಹುಡುಗ ರಾಮಕೃಷ್ಣನನ್ನು ಕಳಿಸಿದರೆ ಹನುಮಂತರಾಯನ ಗುಡಿಯ ಬಾಗಿಲಿಗೆ ಬೀಗ ಹಾಕಿತ್ತು. ತಾಯಿ ಮಗ ಮತ್ತೆ ಹದಿನೈದು ದಿನ ಊರಿಗೆ ಬರಲಿಲ್ಲ. ಮಾರುವುದಕ್ಕೆ ಮನೆಯಲ್ಲಿ ರಾಗಿ ಇರಲಿಲ್ಲ. ಇದ್ದ ಅಕ್ಕಿ ಮುಗಿದು ಹೋಗಿದೆ. ಕಾಫಿಪುಡಿ ಇಲ್ಲ. ಕೆರೆಯ ಹಿಂದಿನ ಆಲೆಯಲ್ಲಿ ಅಡಿಗೆ ಇಳಿಸುವಾಗ ಜಯಲಕ್ಷ್ಮಿ, ರಾಮಕೃಷ್ಣ ಹೋಗಿ, ಅವರು ಕೊಡುತ್ತಿದ್ದ ಪಿಡಚೆ ಬೆಲ್ಲವೇನೋ ಇತ್ತು. ಆದರೆ ಬರೀ ಬೆಲ್ಲದಿಂದ ಕಾಫಿ ಆಗುವುದಿಲ್ಲ. ಅಪ್ಪಣ್ಣಯ್ಯ ಈಗ ಅಮ್ಮನ ಜೊತೆ ಸೇರಿಕೊಂಡನೆಂಬ ಸುದ್ದಿ ಇವರಿಗಿಂತ ಮೊದಲು ಊರಿನವರಿಗೆ ಗೊತ್ತಾಗಿತ್ತು. ಅಂಗಡಿಯಲ್ಲಿ ಕೇಳಿದರೆ ಸಾಲ ಹುಟ್ಟಲಿಲ್ಲ. ಉಪವಾಸವಂತೂ ಇರುವ ಹಾಗಿಲ್ಲ. ಕಾಫಿ ಕುಡಿಯದಿದ್ದರೆ ತಲೆನೋವು ಇಳಿಯುವುದಿಲ್ಲ. ಮನೆಯಲ್ಲಿದ್ದ ದೊಡ್ಡ ಬೆಳ್ಳಿಯ ಪಂಚೋಳ ತೆಗೆದುಕೊಂಡುಹೋಗಿ ಕಾಶಿಂಬಡ್ಡಿ ಸಾಹುಕಾರರ ಹತ್ತಿರ ಅಡವಿಟ್ಟು ಎರಡು ರೂಪಾಯಿ ತಂದರು. ಒಂದು ರೂಪಾಯಿಗೆ ಎಂಟು ಸೇರು ಅಕ್ಕಿ, ಮೇಲೆ ಎರಡಾಣೆ ಕಾಫಿಪುಡಿ, ಒಂದು ಆಣೆಯ ಹಾಲು ಮನೆಗೆ ಬಂದುವು.
ಅಪ್ಪಣ್ಣಯ್ಯ ತಾಯಿಯೊಡನೆ ಊರಿಗೆ ಬಂದರೂ ಹೆಂಡತಿಯ ಮನೆಗೆ ಬರಲಿಲ್ಲ. ನಾಲ್ಕು ತಿಂಗಳು ನಡೆಯುತ್ತಿದ್ದ ಸಾತು ರಾಮಕೃಷ್ಣನನ್ನು ಕಳಿಸಿದಳು. ಗಂಗಮ್ಮನೇ – 'ಅವ್ನು ಬರುಲ್ಲವಂತೆ ಅನ್ನು. ಅವ್ಳು ಅದ್ಯಾವನ್ನ ಇಟ್ಕಂಡು ನಿನ್ನ ಹೆತ್ಳೋ ಅವ್ನನ್ನೇ ಮನೆಗೆ ತಂದ್ಹಾಕು ಅಂತ ಹೇಳು' ಎಂದು ಕಳಿಸಿದಳು. ಹುಡುಗ ಮನೆಗೆ ಹೋಗಿ ತಾಯಿಯ ಕೈಲಿ ಅದೇ ಮಾತನ್ನು ಹೇಳಿದ. ಸಾತುವಿಗೆ ಸಿಟ್ಟು ಬಂತು. ಅವಳ ಅಮ್ಮ ತಂಗಮ್ಮನಂತೂ ಕಿಡಿಕಿಡಿಯಾದಳು. 'ಅಮ್ಮ, ನೀನು ಯಾವ ಮಾತಿಗೂ ಹೋಗ್ಬ್ಯಾಡ' – ಎಂದು ಮಗಳು ಹೇಳಿದರೂ ಕೇಳದೆ ಅವಳೇ ಹನುಮಂತರಾಯನ ಗುಡಿಯ ಮುಂದೆ ಹೋಗಿ ನಿಂತು, 'ಇಷ್ಟು ದಿನದಿಂದ ಮನೇಲಿ ತಿನ್ನೂಕಿಲ್ಲ. ಹೆಂಡ್ತಿ ಮಕ್ಳನ್ನ ಸಾಕೂ ಯೋಗ್ತಿ ಇಲ್ದೋನು ಮದುವೆ ಯಾವ ಸಂಪತ್ತಿಗೆ ಮಾಡ್ಕಬೇಕಾಗಿತ್ತು?' ಎಂದು ಕೇಳಿಬಿಟ್ಟಳು.
'ಹಾದರಗಿತ್ತಿ ಹೆಂಡ್ತಿ ನನ್ನ ಮಗ ಸಂಸಾರ ಮಾಡುಲ್ಲ ಕಣೇ ಜೋಯ್ಸಯ್ಯನ ಹೆಂಡ್ತೀ' – ಗಂಗಮ್ಮ ಜಾಡಿಸಿದಳು.

'ನನ್ನ ಮಗಳ್ಯಾಕೆ ಹಾದರಗಿತ್ತಿಯಾದಾಳು? ನೀನೇ ನಿನ್ನ ಮಗನ್ನೇ ಹಾದರಕ್ಕೆ ಹೆತ್ತಿದ್ದೆ ಏನೋ. ನಾವೇನೋ ಮರ್ಯಾದೆ ಕೊಟ್ರೆ ನಿನ್ನ ನಾಯಿಬುದ್ಧಿ ಎಲ್ಲಿ ಬಿಡ್ತೀಯ?' – ಎಂದು ತಂಗಮ್ಮ ಹೇಳುತ್ತಿರುವಷ್ಟರಲ್ಲಿ ಸಾತುವೇ ಅಲ್ಲಿಗೆ ಬಂದಳು. 'ಅಮ್ಮಾ, ನೀನ್ಯಾಕೆ ಮಾತಿಗೆ ಹೋದೆ? ಅವ್ರೇನಾದ್ರೂ ಅಂದ್ಕಳ್ಳಿ. ಅವ್ರು ಆಡಿದ ಪಾಪ ಅವ್ರುನ್ನೇ ತಿನ್ನುತ್ತೆ' – ಎಂದು ಅವಳು ತಾಯಿಗೆ ಸಮಾಧಾನ ಹೇಳುತ್ತಿರುವಾಗಲೇ ಗಂಗಮ್ಮ, 'ಅಪ್ಪಣ್ಣಯ್ಯ, ನೋಡಿದ್ಯೇನೋ ಈ ಉಮ್ಮೆ ಮರಳಿ ಮಾತ. ಹಿಂದಿನಿಂದ ಹೇಳ್ಕೊಟ್ಟು ಕಳ್ಸಿ ಈಗ ನಾನು ಮಾತಾಡಿದ್ದು ಪಾಪ ಅಂತಾಳೆ. ಗಂಡ ಇಲ್ದೆ ಇದ್ದಾಗ ಬಸುರಿಯಾಗಿ ಮಗು ಹೆರೂದು ಪಾಪ ಅಲ್ವೇನೋ!' – ಎನ್ನುತ್ತಿರುವಷ್ಟರಲ್ಲಿ ಅಪ್ಪಣ್ಣಯ್ಯ ಗಂಡುಗಲಿಯಾಗಿ ಒಳಗಿನಿಂದ ಎದ್ದು ಬಂದು, 'ಲೇ, ನಿನ್ನ ಮೆಟ್ನಲ್ಲಿ ಹ್ವಡ್ದುಬಿಡ್ತೀನಿ ನೋಡು ಮುಂಡೆ. ನಿನ್ನ ಯೇಕ್ತಿ ಎಲ್ಲ ನಂಗೆ ಗೊತ್ತಿಲ್ಲ ಅಂತ ತಿಳ್ಕಂಡಿದೀ ಏನೇ?' ಎಂದು ಕೇಳಿದ. ಜಬರಿಗೆ ಹೆದರಿ ತಂಗಮ್ಮ, ಸಾತು, ಇಬ್ಬರೂ ತಮ್ಮ ಮನೆಯ ಕಡೆಗೆ ಓಡಿದರು. ಗಂಗಮ್ಮ – 'ಅಲ್ಲೇನು ನೋಡ್ತಿಯೊ? ಅವಳ ತಾಳಿ ಕಿತ್ಕಂಡು ಓಡ್ಸೋ ಈ ಊರು ಬಿಟ್ಟು. ನೀನು ಕಟ್ಟಿದ ಮನೆ ಅದು. ಬೆಂಕಿ ಹಾಕ್ಬಿಡೋ ಅದುಕ್ಕೆ' ಎಂದಳು.

ಅಪ್ಪಣ್ಣಯ್ಯ ಅವರನ್ನು ಓಡಿಸಿಕೊಂಡು ಹೋದ. ಮನೆಯ ಬಾಗಿಲನ್ನು ಬಗ್ಗಿ ಒಳಗೆ ಹೋಗುವುದರಲ್ಲಿದ್ದ ಹೆಂಡತಿಯ ಕುತ್ತಿಗೆಗೆ ಅವನ ಕೈ ಹೋಯಿತು. ಹಿಂಭಾಗದಿಂದ ಸಿಕ್ಕಿದ ಕರೀಮಣಿ ಮಾಂಗಲ್ಯವನ್ನು ಹಿಡಿದು ಒಂದೇ ಏಟಿಗೆ ಜಗ್ಗಿ ಎಳೆದುದಕ್ಕೆ ನೂಲಿನ ಸೂತ್ರ ಕಿತ್ತುಹೋಗಿ ಕರಿಮಣಿಗಳು ನೆಲಕ್ಕೆ ಉದುರಿದುವು. ಮಾಂಗಲ್ಯ ಕೋವಿ ಗುಂಡುಗಳು ದಾರದಲ್ಲಿ ಸಿಕ್ಕಿ ಉಳಿದುವು. ಕುತ್ತಿಗೆಯ ಬಲಪಾರ್ಶ್ವ ಕೊರೆದು ರಕ್ತ ಬರುವಂತಾದ ಸಾತು, 'ಅಯ್ಯಯ್ಯಮ್ಮಾ' ಎಂದು ಅರಚಿಕೊಳ್ಳುತ್ತಾ ಕೆಳಗೆ ಬಿದ್ದಳು. ಅಪ್ಪಣ್ಣಯ್ಯ ಒಳಗೆ ನುಗ್ಗಿದ. ಅಡಿಗೆಮನೆಯ ಒಲೆ ಉರಿಯುತ್ತಿತ್ತು. ಒಂದು ಕುರುಂಬಾಳೆಯ ಬೆನ್ನುಸಿಪ್ಪೆಯನ್ನು ಎತ್ತಿ ಸೋಗೆಯ ಮೇಲ್ಛಾವಣಿಗೆ ತಗುಲಿಸಿದ. ಸೋಗೆ ಹೊತ್ತಿಕೊಂಡಿತು. ಹೊಗೆ ಕವರಿಕೊಂಡು ಮೇಲ್ಭಾಗದಲ್ಲಿ ಉರಿ ಕಾಣಿಸಿತು. ಅಷ್ಟರಲ್ಲಿ ಈ ಹೊಯ್ಲಾಟವನ್ನು ಕೇಳಿ ಬೀದಿಗೆ ಬಂದಿದ್ದ ಜನಗಳು ಹತ್ತಿರ ಸೇರಿದರು.

'ನಮ್ಮನೆ ಸಾಮಾನೆಲ್ಲ ಸುಟ್ಹೋಗುತ್ತೆ ಎಳ್ಕಳ್ರಪ್ಪಾ' – ಎಂದು ತಂಗಮ್ಮ ಅರಚಿಕೊಂಡಳು. ಒಳಗೆ ನುಗ್ಗಿದ ಜನಗಳು ಕೈಗೆ ಸಿಕ್ಕಿದ ಪಾತ್ರೆ ಪರಟಿ, ಬಟ್ಟೆ, ಮರ, ಕುಕ್ಕೆ, ಮಣೆ, ಬೀಸುವ ಕಲ್ಲು ಮೊದಲಾಗಿ ಬೇಗ ಬೇಗ ಹೊತ್ತುತಂದು ದೂರ ಹಾಕಿದರು. ಸೋಗೆಯ ಮನೆಗೆ ಹೊತ್ತಿದ ಬೆಂಕಿಯನ್ನು ನೀರು ಹುಯ್ದು ಆರಿಸಲು ಸಾಧ್ಯವೂ ಇರಲಿಲ್ಲ. ಹತ್ತಿರದಲ್ಲಿ ನೀರೂ ಇರಲಿಲ್ಲ. ಒಂದೂವರೆ ವರ್ಷದ ಹಿಂದೆ ಅಪ್ಪಣ್ಣಯ್ಯನೇ ಗುದ್ದಲಿ ಹಿಡಿದು ಕಟ್ಟಿದ ಮನೆ ಅರ್ಧ ಗಂಟೆಯಲ್ಲಿ ಉರಿದು ಬೂದಿಯಾಗಿ, ಬಿದ್ದುಹೋಯಿತು. ನಾಲ್ಕು ಸುತ್ತಲೂ ಇದ್ದ ಗೋಡೆಗಳು ಮತ್ತು ಎರಡು ಕಲ್ಲುಕಂಬಗಳು ಮಾತ್ರ ಉರಿಗೆ ಸಿಕ್ಕಿ ಕಪ್ಪು ಬಣ್ಣಕ್ಕೆ ತಿರುಗಿ ನಿಂತಿದ್ದುವು.

'ನೋಡ್ದೆ ಏನೇ ಮುಂಡೆ ಏನ್ ಮಾಡ್ದೆ ನಾನು?' – ಎಂದು ಅಪ್ಪಣ್ಣಯ್ಯ ಹುಲಿಯಂತೆ ಕೇಳಿದ.

'ನಿನ್ನ ಕೈ ಸೇದಿಹೋಗ' – ತಂಗಮ್ಮ ಹೇಳುತ್ತಿದ್ದಳು. ಎಚ್ಚತ್ತು ದೂರ ನಿಂತಿದ್ದ ಸಾತು – 'ಅಮ್ಮಾ ನನ್ನಾಣೆ, ನೀನು ಒಂದೂ ಮಾತಾಡಬ್ಯಾಡ' ಎಂದಳು.

ಕೈಲಿದ್ದ ತಾಳಿಯನ್ನು ಎತ್ತಿ ಹಿಡಿದು, 'ಆ ಮುಂಡೆ ತಾಳಿ ಕಿತ್ಕಂಡಿದೀನಿ. ಇನ್ನು ಅವ್ಳು ಹೆಂಡ್ತಿಯಲ್ಲ ನಾನು ಗಂಡನಲ್ಲ, ಹಾದರಗಿತ್ತಿ ತಂದು' ಎಂದು ಕೂಗುತ್ತಾ ಅಪ್ಪಣ್ಣಯ್ಯ ಊರಿನ ಬೀದಿ ಓಣಿಗಳಲ್ಲೆಲ್ಲ ಒಂದು ಸುತ್ತು ತಿರುಗಿದ.

ಮನೆಗೆ ಬೆಂಕಿ ಹೊತ್ತಿದಾಗ ನಂಜಮ್ಮನೂ ಓಡಿಬಂದಿದ್ದಳು. ಉಳಿದವರ ಜೊತೆ ಸೇರಿ ಒಳಗೆ ನುಗ್ಗಿ ಕೈಗೆ ಸಿಕ್ಕಿದ ಸಾಮಾನುಗಳನ್ನು ಎಳೆದು ಹೊರಗೆ ತಂದು ಹಾಕಿದ್ದಳು. ಮುಂದೆ ಏನು ಮಾಡಬೇಕು, ಏನು ಹೇಳಬೇಕು, ಎಂಬುದು ಅವಳಿಗೂ ತಿಳಿಯಲಿಲ್ಲ. ಈ ಸಂದರ್ಭದಲ್ಲಿ ಅಪ್ಪಣ್ಣಯ್ಯನನ್ನು ಮಾತನಾಡಿಸುವುದು ವಿವೇಕವಲ್ಲವೆಂದು ಅವಳಿಗೂ ಗೊತ್ತು. ಇನ್ನು ಅತ್ತೆ ಗಂಗಮ್ಮನೊಡನೆ ಮಾತನಾಡುವುದು ದೂರವೇ ಉಳಿಯಿತು.

'ನಾನೇನು ಮಾಡ್ಲಿ ನೀನೇ ಹೇಳು' –ಅವಳು ಕೇಳಿದಳು.

'ಸದ್ಯಕ್ಕೆ ಒಂದೆರಡು ದಿನ ನಿಮ್ಮನೇಲಿ ಇರ್ತೀವಿ. ಆಮೇಲೆ ಏನಾದ್ರೂ ಮಾಡ್ಬೌದು.'

ಇಲ್ಲವೆನ್ನುವುದು ನಂಜಮ್ಮನಿಗೆ ಸಾಧ್ಯವಾಗದ ಮಾತು. 'ಈ ಸಾಮಾನು ನಮ್ಮನೆಗೆ ತಂದು ಹಾಕ್ರಪ್ಪ' ಎಂದು, ಇನ್ನೂ ಅಲ್ಲಿದ್ದ ಕೆಲವು ಗಂಡಸರಿಗೆ ಹೇಳಿದಳು. ಅವರ ಜೊತೆಗೆ ಅವಳೂ ಕೈ ಸೇರಿಸಿದಳು. ಎಲ್ಲವನ್ನೂ ತಂದು ಅವಳ ಮನೆಯ ಒಂದು ಮೂಲೆಯಲ್ಲಿ ಗುಡ್ಡೆಹಾಕಿಯಾಯಿತು. ನಂಜಮ್ಮ ಅಡಿಗೆಮನೆ ಹೊಕ್ಕಳು. ಅವರು ರಾಗಿಹಿಟ್ಟು ತಿನ್ನುವವರಲ್ಲ. ಹಬ್ಬ ಹುಣ್ಣಿಮೆಗೆ ಇರಲಿ ಎಂದು ಇಟ್ಟಿದ್ದ ಅಕ್ಕಿಯನ್ನು ಹೊರಕ್ಕೆ ತೆಗೆದು ನೆನೆಸಿದಳು. ಮನೆಯಲ್ಲಿ ತೊಗರಿಬೇಳೆ ಇರಲಿಲ್ಲ. ಪಾರ್ವತಿಯನ್ನು ಕಳಿಸಿ ನಾಲ್ಕು ಆಣೆ ಕೊಟ್ಟು ಒಂದು ಸೇರು ತರಿಸಿದಳು.

ಇವರೆಲ್ಲ ಮತ್ತೆ ಹಿರಿಸೊಸೆಯ ಮನೆಗೆ ಹೋದುದರಿಂದ ಗಂಗಮ್ಮನಿಗೆ ಕಸಿವಿಸಿಯಾಯಿತು. 'ಅವಳು ತಂತ್ರಗಾರ ಮುಂಡೆ. ಮತ್ತೆ ಏನಾರ ಮಾಡಿ ನನ್ನ ಕಂದನ್ನ ಬಲೆಗೆ ಕೆಡವುಸ್ತಾಳೆ.' –ಎಂದು ಅವಳ ಬುದ್ಧಿ

0ಯೋಚಿಸಿತು. ತಕ್ಷಣ ಅಣ್ಣಾಜೋಯಿಸನ ಮನೆಗೆ ಹೋಗಿ; ಜೋಯಿಸರೇ, ಕೇಳೀದಿರಾ ಸಮಾಚಾರಾನಾ?'
'ಏನ್, ಗೊತ್ತಿಲ್ವಲ್ಲಾ?' ಗಂಗಮ್ಮನ ಬಾಯಿಯಿಂದಲೇ ಎಲ್ಲವನ್ನೂ ಚಿತ್ರವತ್ತಾಗಿ ಕೇಳುವ ಆಸೆಯಿಂದ
ಜೋಯಿಸ ಎಂದ.
ಮಗನು ಹೆಂಡತಿ0ಯು ತಾಳಿ ಕಿತ್ತುಕೊಂಡ ಪ್ರತಾಪವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ ಗಂಗಮ್ಮ ಕೇಳಿದಳು;
'ತಾಳಿ ಕೀಳುಸ್ಕಂಡೋಳ್ನ ಅವ್ಳು ಮನೆಗೆ ಸೇರಿಸ್ಕಂಡಿದಾಳಲ್ಲಾ, ನ್ಯಾ0ಯಕ್ಕೆ ಕೂರ್ಸಿ ಅವ್ಳಿಗೆ ದಂಡ ಹಾಕುಸ್
ಬ್ಯಾಡವೇ ನೀವೇ ಹೇಳಿ.'
ಧರ್ಮಶಾಸ್ತ್ರದ ಒಂದು ಹೊಸ ಪಾಯಿಂಟನ್ನು ಜೋಯಿಸರಿಗೆ ಹೇಳಿಕೊಟ್ಟಂತೆ ಆಯಿತು. ನಂಜಮ್ಮನನ್ನು
ಪಂಚಾಯ್ತಿಗೆ ಕೂರಿಸಿ ಇಪ್ಪತ್ತೈದು ರೂಪಾಯಿ0ಯಾದರೂ ತಪ್ಪು ದಂಡ ಹಾಕಬೇಕೆಂದು ಅವರ ಮನಸ್ಸು
0ಯೋಚಿಸಿತು. ಆದರೆ ಪೋಟಿಕೆ0ಯಲ್ಲಿ ಪಾಲು ಕೊಡಬೇಕೆಂಬ ಪಂಚಾಯ್ತಿ0ಯಲ್ಲಿ ಅವಳು ಎಲ್ಲರನ್ನೂ
ಮುಖಕ್ಕೆ ಹೊಡೆದಹಾಗೆ ಅಂದದ್ದು, ಮರು ದಿನ ಶೇಕ್ದಾರರು ಮಂಗಳಾರತಿ ಮಾಡಿದ್ದು ನೆನಪಾಗಿ ಒಂದು
ನಿಮಿಷ ಹಿಂಜರಿದರು. ಆಗ ಅಪಮಾನವಾಗಿತ್ತು; ಈಗ ಅದರ ಮುಯ್ಯಿ ತೀರಿಸಿಕೊಳ್ಳಬೇಕೆಂಬ
ಧೈ0ರ್ಯತಂದುಕೊಂಡು ತೀರ್ಮಾನಿಸಿದರು. ಅಲ್ಲಿ0ಯೇ ಕೂತಿರುವಂತೆ ಗಂಗಮ್ಮನಿಗೆ ಹೇಳಿ, ತಮ್ಮ ಚಿಕ್ಕಪ್ಪ
ಅ0ಯ್ಯಾಶಾಸ್ತ್ರಿಗಳ ಮನೆಗೆ ಹೋದರು. ಇಂಥ ಒಳ್ಳೆ0ಯ ಸಂದರ್ಭದಲ್ಲಿ ಮುದುಕ ಶಾಸ್ತ್ರಿಗಳದು ಸುಮ್ಮನಿರುವ
ಜೀವವಲ್ಲ. ಇದು ಬ್ರಾಹ್ಮಣಿಕೆಗೆ ಸೇರಿದ ಪ್ರಶ್ನೆ. ಬ್ರಾಹ್ಮಣ ಧರ್ಮ ಉಳಿ0ಯಬೇಕೋ ಸಾ0ಯಬೇಕೋ?
ಈ ಇಬ್ಬರು ಧರ್ಮಪಾಲಕರು ಊರಿನ ಇತರ ನಾಲ್ಕು ಜನ ಬ್ರಾಹ್ಮಣರನ್ನು ಹೊರಡಿಸಿಕೊಂಡು ನಂಜಮ್ಮನ
ಮನೆಗೆ ಬಂದರು. ಜೊತೆ0ಯಲ್ಲಿ ಗಂಗಮ್ಮ, ಅಪ್ಪಣ್ಣ0ಯ್ಯ. ಇವರೆಲ್ಲ ನ್ಯಾ0ಯ ಮಾಡುವುದಕ್ಕೆ ಬಂದಿ
ದ್ದಾರೆಂಬುದು ನಂಜಮ್ಮನಿಗೆ ತಕ್ಷಣ ತಿಳಿ0ಯಲಿಲ್ಲ. ಅಣ್ಣಾಜೊಯಿಸರೇ ಮಾತು ತೆಗೆದು ಹೇಳಿದರು;
'ಮಾಂಗಲ್ಯ ಹೋದ ಹೆಂಗಸು ವಿಧವೆಗೆ ಸಮಾನ. ಅಂಥೋಳ ಮುಖದರ್ಶನ ಸಹ ಮಾಡ್ಬಾರ್ದು.
ಅಂಥೋಳುನ್ನ ಮನೆಗೆ ಸೇರಿಸಿ ನೀವು ತಪ್ಪು ಮಾಡಿದೀರಿ. ಪ್ರಾ0ಯಶ್ಚಿತ್ತವಾಗಬೇಕು. ತಪ್ಪುದಂಡ
ಕೊಡಬೇಕು.'
ಚನ್ನಿಗರಾ0ಯರು ಈ ಮಾತನ್ನು ಕೇಳಿ ಹೆದರಿದರು. 'ನಂಗೇನೂ ಗೊತ್ತಿಲ್ಲ ಕಣ್ರೀ. ಇವಳೇ ಅವ್ಳುನ್ನೆಲ್ಲ
ಕರ್ಕಂಡ್ ಬಂದ್ಲು. ನಾನು ಬೇಕಾದ್ರೆ ಈಗ್ಲೂ ಕತ್ ಹಿಡ್ದು ಆಚೆಗ್ ನೂಕ್‌ಬಿಡ್ತೀನಿ.'
'ಹಾಗಾದ್ರೆ ಸರಿ. ಆದರೆ ಈಗ ಸೇರಿಸಿರೋದಕ್ಕೆ ಮೊದಲು ದಂಡಾನಂತು ಕೊಡಬೇಕು.'
'ಎಷ್ಟು ಕೊಡಬೇಕು?'
'ಎಷ್ಟು ಚಿಕ್ಕಪ್ಪ?' –ಅಣ್ಣಾಜೋಯಿಸರು ಕೇಳಿದುದಕ್ಕೆ ಅ0ಯ್ಯಾಶಾಸ್ತ್ರಿಗಳು, ಪಾಪ ಅವ್ರೂ ಬಡವ್ರು.
ಇಪ್ಪತ್ತೈದಾದರೆ ಸಾಕು. ಎಂದರು.
'ಅಷ್ಟೋಂದು ದುಡ್ಡು ಎಲ್ಲಿಂದ ತರಾಣ್ರೀ ನಾವು? ಒಂದಿಷ್ಟು ಕಮ್ಮಿ ಮಾಡಿ ಶಾಸ್ತ್ರಿಗಳೇ.'
'ದುಡ್ಡೇನು ನಮ್ಮಪ್ಪನ ಮನೆಗೆ ಬರುತ್ತೆ ಅಂತ ತಿಳ್ಕಂಡೆ0ಯಾ ಚಿನ್ನ0ಯ್ಯಾ? ಶೃಂಗೇರಿ ಮಠಕ್ಕೆ ಸೇರೂ ಹಣ.'
ಇನ್ನು ಮಾತನಾಡುವಂತೆ0ಯೇ ಇಲ್ಲ. ಚೆನ್ನಿಗರಾ0ಯರು ಹೆಂಡತಿ0ಯ ಕಡೆಗೆ ತಿರುಗಿ –'ನಿಂಗ್ಯಾಕೆ ಮುಂಡೆ
0ಯಜಮಾನಿಕೆ? ಈ ಅನಿಷ್ಟದೋವುನ್ನ 0ಯಾಕೆ ಕರ್ಕಂಡ್ ಬಂದೆ? ಈಗ ಇವುನ್ನ ಕುತ್ತಿಗೆ ಹಿಡ್ದು ಅಟ್ತಿ0ಯೋ
ಇಲ್ವೋ?' ಎಂದು ಗದರಿಸಿದರು.
ಅದುವರೆಗೂ ಅಡಿಗೆಮನೆ0ಯ ಒಳಬಾಗಿಲಿನಲ್ಲಿ ನಿಂತು ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದ ತಂಗಮ್ಮ ಹೊರಗೆ
ಬಂದು ಕೇಳಿದಳು; 'ಇಷ್ಟು ದಿನ ನಮಗೆ ಆಪ್ತರ ಹಾಗೆ ಇದ್ದೋರು, ಈಗ 0ಯಾಕೆ ಹೀಗ್ ಮಾಡ್ತೀರಾ
ಜೋಯಿಸ್ರೇ? ನಾವೇನು ನಿಮ್ಗೆ ಮಾಡಿದ್ದು?'
'ನಿಮ್ಮುನ್ನ ಕಂಡ್ರೆ ನಮಗೇನೂ ಆಗದೇ ಇಲ್ಲ ಕಣ್ರಮ್ಮ. ಧರ್ಮಶಾಸ್ತ್ರ ಹಾಗಿದೆ. ಕಂಡೂ ಕಂಡೂ ನಾವು
ಸುಮ್ನಿದ್ರೆ ಶೃಂಗೇರಿ ಮಠದೋರು ನಮ್ಮುನ್ನ ಸುಮ್ನೆ ಬಿಡ್ತಾರೆ0ಯೇ?' –ಅಣ್ಣಾಜೋಯಿಸರು ಹೇಳುತ್ತಿದ್ದರು.
ಇಲ್ಲಿ0ಯ ತನಕ ಸುಮ್ಮನೆ ನಿಂತಿದ್ದ ನಂಜಮ್ಮ ಮಾತನಾಡಿದಳು; 'ತಾಳಿ ಕಿತ್ಕಂಡೋರು ಅಪ್ಪಣ್ಣ0ಯ್ಯ. ಹೆಂಡ್ತಿ
ತಾಳಿ ಕಿತ್ಕಳೂ ಅಧಿಕಾರ ಶಾಸ್ತ್ರದಲ್ಲಿ ಅವರಿಗೆ ಇದೆ0ಯೇ? ದಂಡ ಗಿಂಡ ಹಾಕ್ಬೇಕಾಗಿದ್ರೆ ಅವ್ರಿಗೆ ಹಾಕಿ. ಇನ್ನು
ಮನೆ ಸುಟ್ಟುಹೋಗಿ ಹೆಂಗಸರು ಬೀದಿಪಾಲಾಗಿದ್ದಾಗ ಮನೆಗೆ ಸೇರುಸ್ದೇ ನಾವೇನು ಮಾಡಬೇಕಾಗಿತ್ತು? ಈ
ಕಷ್ಟಕಾಲದಲ್ಲಿ ಒಪ್ಪತ್ತು ಸಹಾ0ಯ ಮಾಡಕೂಡದು ಅಂತ ಬರೆದಿದೆ0ಯೆ ನಿಮ್ಮ ಧರ್ಮಶಾಸ್ತ್ರದಲ್ಲಿ?'
ಇಬ್ಬರು ಧರ್ಮಪಾಲಕರೂ ತಬ್ಬಿಬ್ಬಾದರು. ಈ ತಾಟಗಿತ್ತಿ ತಂತ್ರಗಾರ ಸೊಸೆ ತನ್ನ ಮಗನ ಮೇಲೆ0ಯೇ
ನ್ಯಾ0ಯ ತಿರುಗಿಸಿದುದನ್ನು ನೋಡಿದ ಗಂಗಮ್ಮನಿಗೂ ಏಟು ಬಿದ್ದಂತೆ ಆಯಿತು. 'ಅವ್ನು ಕಟ್ಟಿದ ತಾಳಿ,
ಅವ್ನು....' –ಎಂದು ಮುದುಕ ಅ0ಯ್ಯಾಶಾಸ್ತ್ರಿಗಳು ಏನೋ ಹೇಳುತ್ತಿದ್ದರು. ಅಷ್ಟರಲ್ಲಿ ಅಣ್ಣಾಜೋಯಿಸರು –
'ಚಿಕ್ಕಪ್ಪ, ನೀವು ಸುಮ್ನಿರಿ. ನೀನು ಕಟ್ಟಿದ ತಾಳಿ ನಂಗೆ ಬ್ಯಾಡ ಅಂತ ಅವ್ಳೇ ಕಿತ್ತು ಕೊಟ್ಟಂತೆ. ಅಲ್ವೇನ್
ಗಂಗಮ್ಮ?' ಎಂದರು.
'ಹೂಂ, ಹೂಂ. ಆ ಮುಂಡೆ0ಯೇ ನಂಗೆ ಈ ತಾಳಿ ಬ್ಯಾಡಿ ಅಂತ ಕಿತ್ತು ಎಸದ್ಲು.'

‘ಅನ್ಯಾ೦ಯಕಾರ ಮಾತು ೦ಯಾಕೆ ಆಡ್ತೀರಾ? ಹಾಗಂತ ಪ್ರಮಾಣ ಮಾಡ್ತೀರಾ ನೀವೆಲ್ಲಾ? –ಎಂದು ತಂಗಮ್ಮ ಕೇಳಿದುದಕ್ಕೆ ಗಂಗಮ್ಮ, ‘ಊರೆಲ್ಲ ಕಂಡಿರೂದಕ್ಕೆ ಪ್ರಮಾಣ ೦ಯಾಕ್ ಮಾಡಬೇಕೇ ತಾಟಗಿತ್ತಿ?’ ಎಂದು ಉತ್ತರಕೊಟ್ಟಳು.

ಹೀಗೆ ನ್ಯಾ೦ಯ ಎಲ್ಲಿಂದೆಲ್ಲಿಗೋ ಹೋಯಿತು. ಇವರ ಪರವಾಗಿ ನಿಂತು ಜೋರಿನಿಂದ ಮಾತನಾಡುವ ಒಬ್ಬ ಗಂಡಸಿದ್ದರೆ ಬೇರೆ೦ಯ ರೀತಿ೦ಯಾಗುತ್ತಿತ್ತು. ಇದನ್ನು ಬಲ್ಲ ನಂಜಮ್ಮ ಎಂದಳು; ‘ಜೋಯಿಸರೇ, ನಡೆದ ವಿಷ೦ಯ ಏನು ಅಂತ ನೀವು ಕಣ್ಣಾರೆ ಕಂಡಿಲ್ಲ. ಸುಮ್ಸುಮ್ನೆ ಕಂಡೋರ ಮನೇಲಿ ಜಗಳ ಮಾಡ್ಸಿ ತಮಾಷೆ ಮಾಡ್ತೀರಾ ನೀವು. ಇದು ಮ೦ರ್ಯಾದಸ್ಥರು ಮಾಡೂ ಕೆಲಸವಲ್ಲ. ನಿಮ್ಮನ್ನ ೦ಯಾರೂ ಕರೆಸಿರಲಿಲ್ಲ. ಸುಮ್ನೆ ಎದ್ದು ಹೊರಟುಹೋಗಿ. ಇನ್ನು ಮ್ಯಾಲೆ ಹೇಳದೆ ಕೇಳದೆ ನಮ್ಮನಿಗೆ ೦ಯಾರೂ ನ್ಯಾ೦ಯ ಪಾ೦ಯ ಅಂತ ಬರೂಕೂಡ್ದು.’

‘ನೋಡಿದ್ರಾ ಜೋಯಿಸ್ರೇ ಈ ಮುಂಡೆ ಅಹಂಕಾರಾನಾ? –ಎಂದು ಗಂಗಮ್ಮ ಹೇಳುತ್ತಿದಂತೆ೦ಯೇ ಇದುವರೆಗೂ ಅಡಿಗೆಮನೆ೦ಯ ಒಳಬಾಗಿಲಿನಲ್ಲಿ ನಿಂತಿದ್ದ ಸಾತು, ಹತ್ತಿರದಲ್ಲೇ ಇದ್ದ ಹಂಚೀಕಡ್ಡಿ ಕಸಪೊರಕೆ೦ಯನ್ನು ಕೈಲಿ ಹಿಡಿದು ಹೊರಗೆ ಬಂದು, ಈ ಮನೆ ಹಾಳು ಮುಂಡೆಯಿಂದಲೇ ಇಷ್ಟೆಲ್ಲ ಆದದ್ದು’ ಎಂದು ಪೊರಕೆ೦ಯನ್ನು ಗಂಗಮ್ಮನ ಮುಖದ ಮೇಲೆ ಬೀಸಿದಳು. ಗಂಗಮ್ಮ ಒಂದು ನಿಮಿಷ ಅವಾಕ್ಕಾದಳು. ಅಪ್ಪಣ್ಣ೦ಯ್ಯ ಕಿಡಿಕಿಡಿ೦ಯಾಗಿ ಮೇಲೆ ಎದ್ದ. ಪರಿಸ್ಥಿತಿ ಇಷ್ಟಕ್ಕೆ ಹೋದುದನ್ನು ಕಂಡ ನಂಜಮ್ಮ ಗಾಬರಿ೦ಯಾಗಿ ಸಾತು ತಂಗಮ್ಮರನ್ನು ಅಡಿಗೆಮನೆ೦ಯ ಒಳಗೆ ಕೂಡಿ, ಬಾಗಿಲು ಎಳೆದುಕೊಂಡು ಅಡ್ಡವಾಗಿ ನಿಂತು ಹೇಳಿದಳು; ‘ಈಗ ನೀವೆಲ್ಲ ಎದ್ದು ನಮ್ಮನೆಯಿಂದ ಹೊರಗೆ ಹೋಗ್ತೀರೋ ಇಲ್ವೋ?’

ಜೋಯಿಸರಿಬ್ಬರೂ ಜಾಗ ಬಿಟ್ಟರು. ಈ ಮಾತಿನಲ್ಲಿ ತಮ್ಮ ಜವಾಬ್ದಾರಿ ಇಲ್ಲವೆಂಬಂತೆ ಕುಳಿತಿದ್ದ ಇಬ್ಬರು ಬ್ರಾಹ್ಮಣರು ತಕ್ಷಣ ಮೇಲೆ ಎದ್ದರು. ಅಷ್ಟರಲ್ಲಿ ಗಂಗಮ್ಮನ ನಾಲಗೆಗೆ ಕಾವು ಬಂತು. ಮೂಲೆ೦ಯಲ್ಲಿದ್ದ ಒನಕೆ೦ಯನ್ನು ಕೈಲಿ ತೆಗೆದುಕೊಂಡು ಅವಳು ಅಡಿಗೆಮನೆ೦ಯ ಕಡೆಗೆ ನುಗ್ಗಿದಳು. ನಂಜಮ್ಮ ಬಾಗಿಲಿಗೆ ಅಡ್ಡ ನಿಂತು –‘ನಮ್ಮನೆ ಅಂದ್ರೆ ಶ್ಯಾನುಭೋಗಿಕೆ ಮನೆ. ಏನಾದ್ರೂ ಹೆಚ್ಚು ಕಮ್ಮಿ೦ಯಾದ್ರೆ ಶೇಕ್ದಾರ್ರಿಗೆ ಹೇಳಿ ಪೋಲಿ ೀಸ್ನೋರುನ್ನ ಕರುಸ್ತೀನಿ’ ಎಂದು ಜಬರಿದಳು. ಗಂಗಮ್ಮನಿಗೆ ಗಾಬರಿ೦ಯಾಯಿತು. ಅಪ್ಪಣ್ಣ೦ಯ್ಯನಂತೂ ಅರ್ಧ ಬೆವೆತುಬಿಟ್ಟ. ‘ಬಾರಮ್ಮ. ಈ ಮುಂಡೇರ ತಂಟೆ ಬ್ಯಾಡ’ –ಎಂದು ತಾಯಿ೦ಯ ಕೈ೦ಯ ಒನಕೆ೦ಯನ್ನು ಕಿತ್ತು ಇಟ್ಟು ಮನೆಯಿಂದ ಹೊರಗೆ ಹೋಗಿಬಿಟ್ಟ. ತಕ್ಷಣ ಹೊರಟರೆ ತನ್ನ ಗೌರವಕ್ಕೆ ಕಡಿಮೆ ಎಂಬ ಪ್ರಜ್ಞೆಯಿಂದ ಗಂಗಮ್ಮ ಮತ್ತೆ ಹತ್ತು ಮಾತು ಬೈದು, ನಂತರ ಮಗನನ್ನು ಅನುಸರಿಸಿದಳು.

ಅನ್ನ ಸಾರಿನ ಅಡಿಗೆ೦ಯಾಗಿದ್ದರೂ ಸಾತು, ತಂಗಮ್ಮ, ಊಟ ಮಾಡಲಿಲ್ಲ. ಆ ದಿನ ಮಧ್ಯಾಹ್ನದಿಂದ ನಡೆದುಹೋದ ಘಟನೆಗಳಿಂದ ಇಬ್ಬರೂ ಮೂಕರಾಗಿ ಹೋಗಿದ್ದರು. ಇನ್ನು ಮುಂದೆ ಜೀವನದ ಗತಿ ಏನು ಎಂಬ ೦ಯೋಚನೆ ತಾಯಿ, ಮಗಳು, ಇಬ್ಬರನ್ನೂ ತಿನ್ನುತ್ತಿತ್ತು.

– 5 –

ರಾತ್ರಿ೦ಯೆಲ್ಲ ತಾಯಿ ಮಗಳು ಮಾತನಾಡಿಕೊಳ್ಳುತ್ತಿದ್ದರು. ಬೆಳಗ್ಗೆ ಎದ್ದ ತಕ್ಷಣ ತಂಗಮ್ಮ ನಂಜಮ್ಮನಿಗೆ ಹೇಳಿದಳು; ‘ಇನ್ನು ಈ ಊರಿನಲ್ಲಿದ್ದು ಏನು ಸುಖ? ಊರಿನಲ್ಲಿ ನಮ್ಮದು ಅಂತ ಒಂದು ಮನೆ ಇತ್ತು. ಇಲಿ ್ಲಗೆ ಬರುವ ಆರು ತಿಂಗಳ ಮುಂಚೆ ಅದನ್ನೂ ಮಾರಿದ್ವು. ಈಗ ಪೌರೋಹಿತ್ಯದಲ್ಲಿ ಹಳ್ಳಿಗಳಿವೆ. ರಾಮಕೃಷ್ಣನಿಗೆ ಹ್ಯಾಗೂ ಎಂಟು ವರ್ಷವಾಗಿದೆ. ಅಲ್ಲೇ ೦ಯಾರ ಕೈಲಾದ್ರೂ ಒಂದೆಳೆ ಜನಿವಾರ ಹಾಕಿಸಿ ಒಂದು ಪುಣ್ಯಾವರ್ತನೆ, ಒಂದು ನವಗ್ರಹ ದಾನ, ಇಷ್ಟಾದರೂ ಹೇಳಿಸಿದರೆ ಜೀವನವಾಗುತ್ತೆ. ೦ಯಾರಾದರೂ ಪುಣ್ಯಾತ್ಮರ ಜಾಗದಲ್ಲಿ ಒಂದು ಗುಡಿಸಲು ಹಾಕ್ಕೊಂಡಿರ್ತೀವಿ.’

ನಂಜಮ್ಮ ಅವರಿಗೆ ಮತ್ತೆ ೦ಯಾವ ಸಲಹೆ೦ಯನ್ನೂ ಕೊಡುವ ಸ್ಥಿತಿ೦ಯಲ್ಲಿರಲಿಲ್ಲ. ಈ ತಾಯಿ, ಮಗಳು, ಇಬ್ಬರಿಗೂ ಕಷ್ಟದ ಕೆಲಸ ಮಾಡಿ, ಬಡತನದ ಹಿಟ್ಟು ರೊಟ್ಟಿ ತಿಂದು ಅಭ್ಯಾಸವಿರಲಿಲ್ಲ. ಅಭ್ಯಾಸ ಮಾಡಿಕೊಳ್ಳಬೇಕೆಂದು ಪ್ರ೦ಯತ್ನಿಸಿ೦ಯೂ ಇರಲಿಲ್ಲ. ಹಾಗೆ ಪ್ರ೦ಯತ್ನಿಸಿದ್ದರೆ ಅಪ್ಪಣ್ಣ೦ಯ್ಯ ಹೀಗೆ ಮಾಡುತ್ತಿರಲಿ ಲ್ಲವೇನೋ! ಇವರು ಮುಂದೆ ತಮ್ಮ ಊರಿಗೆ ಹೋದರೂ ಪರಿಪಾಟಲು ತಪ್ಪುವುದಿಲ್ಲ. ಆದರೆ ತಾನು ಏನೂ ಮಾಡುವಂತಿಲ್ಲ– ಎಂದು ೦ಯೋಚಿಸಿದ ನಂಜಮ್ಮ, ಅವರ ೦ಯೋಚನೆಗೆ ತನ್ನ ಸಮ್ಮತಿ ಕೊಟ್ಟಳು. ಈ ಊರನ್ನು ೦ಯಾವ ನಿಮಿಷದಲ್ಲಿ ಬಿಟ್ಟೇವೆ೦ಯೋ ಎಂದು ಅವರ ಮನಸ್ಸು ತಪಗುಟ್ಟುತ್ತಿತ್ತು. ಸಾತು ತನ್ನ ಎರಡು ಓಲೆಗಳನ್ನೂ ತೆಗೆದು ಮಾರಲು ಹೊರಟಳು. ನಂಜಮ್ಮನ ಮನೆ೦ಯ ಕೇರಿ೦ಯ ಒಬ್ಬ ಹೆಂಗಸು ಇಪ್ಪತ್ತೈದು ರೂಪಾಯಿಗೆ ಕೊಂಡುಕೊಂಡಳು. ದಾರಿ೦ಯ ಖರ್ಚಿಗೆ ಆಯಿತು. ಅದೇ ದಿನ ನಂಜಮ್ಮ ಒಂದು ಪಾ೦ಯಸ ಮಾಡಿ ಬಡಿಸಿ ಸಾತು, ಜ೦ಯಲಕ್ಷ್ಮಿ೦ಯ ಹಣೆಗೆ ಕುಂಕುಮವಿಟ್ಟು ಮರುದಿನ ಗಾಡಿ ಹೊಡಿಸಿ ಇವರ ಸಾಮಾನೆಲ್ಲವನ್ನೂ ತುಂಬಿಸಿ ತಾನೂ ಜೊತೆಗೆ ಮೋಟಾರು ರಸ್ತೆ೦ಯ ಹತ್ತಿರಕ್ಕೆ ಹೋದಳು. ತಿಪಟೂರಿನ ಕಡೆಗೆ ಹೋಗುವ ಮೊದಲಿ೦ಯಾರ್ ಮೋಟಾರು ಬರುವುದಕ್ಕೆ ಸ್ವಲ್ಪ ಮುಂಚೆ ಸಾತು ಕಣ್ಣೀರು ಒರೆಸಿಕೊಳ್ಳುತ್ತಾ ಎಂದಳು; ‘ಅಕ್ಕಾ, ಈ ಮನೆಗೆ ಸ್ವಸೆ೦ಯರಾಗಿ ನಾವಿಬ್ಬರೂ ಬಂದೆವು. ನೀವು ಹ್ಯಾಗೂ

ಹೆಣಗ್ತಾ ಇದೀರಾ. ನನ್ನ ಹಣೇಬರಹ ಹೀಗಾ0ಯ್ತು.'
ನಂಜಮ್ಮ ಅದಕ್ಕೆ ಏನೂ ಉತ್ತರ ಕೊಡಲಿಲ್ಲ. ಮದುವೆ0ಯಾಗಿ ತಾನೂ ಈ ಊರಿಗೆ ಬಂದಾಗಿನಿಂದ ನಡೆದುದೆಲ್ಲವೂ ಅವಳ ಮನಸ್ಸಿನಲ್ಲಿ ಒಂದೊಂದಾಗಿ ಬರತೊಡಗಿತು. ನಾವು 0ಯಾಕೆ ಹುಟ್ಟಿದೆವೋ, ಇಂಥಾ ಮನೆಗೆ 0ಯಾಕೆ ಸೇರಿದೆವೋ– ಎಂಬ ಪ್ರಶ್ನೆಗಳು ಅವಳ ಮನಸ್ಸಿನಲ್ಲಿ ಹುಟ್ಟುತ್ತಿದ್ದವು. ಮೋಟಾರಿನ ಟಾಪಿನ ಮೇಲೆ ಸಾಮಾನುಗಳನ್ನೆಲ್ಲ ಹಾಕಿಸಿದಮೇಲೆ ಅವರು ಒಳಗೆ ಹತ್ತಿ ಕುಳಿತರು. 'ನಮ್ಮೂರಿಗೆ ನೀವೊಂದು ಸಲ ಬರಬೇಕು' –ಎಂದು ಹೇಳುವಾಗ, ಮುಂದೆ ತಾವು ಒಬ್ಬರನ್ನೊಬ್ಬರು ನೋಡುವ ಬಗೆಗೆ ಅವರಲ್ಲಿ 0ಯಾರಿಗೂ ನಂಬಿಕೆ ಇರಲಿಲ್ಲ.
ಖಾಲಿ ಗಾಡಿ0ಯ ಮೇಲೆ ಕೂತು ನಂಜು ಮನೆಗೆ ಬಂದ ಸ್ವಲ್ಪ ಹೊತ್ತಿಗೆ ಸೂರಪ್ಪಮೇಷ್ಟರ ಹೆಂಡತಿ ರುಕ್ಕಮ್ಮ ಬಂದರು. ಆ ಮಾತು ಈ ಮಾತು ಆಡಿದ ಮೇಲೆ ಹೇಳಿದರು; 'ನಿಮಗೆ ಬಹಿಷ್ಕಾರ ಹಾಕಿಸಬೇಕು ಅಂತ ಅಣ್ಣಾಜೋಯಿಸರು ಶೃಂಗೇರಿಗೆ ಕಾಗದ ಬರೆದಿದಾರಂತೆ.
'ಬರ್ದು ಏನು ಮಾಡ್ತಾರಂತೆ?'
'ಅ0ಯ್ಯೋ ನಿಮಗೆ ಗೊತ್ತಿಲ್ವೇನ್ರಿ? ಇವರ ಮನೆಗೆ 0ಯಾರೂ ಹೋಗಕೂಡದು, ಬರೂಕೂಡದು; ನೀರು ಬೆಂಕೀನೂ ಕೊಡೂಕೂಡ್ದು ಅಂತ ಮಠದಿಂದ ಅಪ್ಪಣೆ0ಯಾಗುತ್ತೆ. ಜಾತಿಸ್ಥರು ದೂರ ಮಾಡಿದ್ರೆ ಜೀವನ ಮಾಡೋದು ಹ್ಯಾಗೆ?'
ಈ ಮಾತಿನಿಂದ ನಂಜಮ್ಮನಿಗೆ ಗಾಬರಿ ಏನೋ ಆಯಿತು. ಆದರೆ ಜಾತಿಸ್ಥರಿಂದ ಅವಳಿಗೆ ಆಗಿರುವ ಆಗುತ್ತಿರುವ ಉಪಕಾರವಾದರೂ ಏನು? 0ಯಾರು ಮನೆಗೆ ಬರದಿದ್ದರೂ ಬ್ಯಾಡ–ಎಂದುಕೊಂಡು ಸುಮ್ಮನಾದಳು.
ಹದಿನೈದು ದಿನವಾದ ಮೇಲೆ ಒಂದು ದಿನ ಅಣ್ಣಾಜೋಯಿಸರು ಅ0ಯ್ಯಾಶಾಸ್ತ್ರಿಗಳು ನಂಜಮ್ಮನ ಮನೆಗೆ ಬಂದು ಅವಳ ಕೈಗೆ ಒಂದು ಕಾಗದ ಕೊಟ್ಟರು. ಶೃಂಗೇರಿ ಸಂಸ್ಥಾನದ ಸರ್ವಾಧಿಕಾರಿಗಳ ರುಜುವಿನಿಂದ ಬಂದಿದ್ದ ಅದರಲ್ಲಿ, 'ಗಂಡನೇ ಬೇಡವೆಂದು ಮಾಂಗಲ್ಯ ಹರಿದು ಎಸೆದು ಹೋದ ಆ ಹೆಂಗಸನ್ನು ಮನೆಗೆ ಸೇರಿಸಿಕೊಂಡ ಶ್ಯಾನುಭೋಗ ಚೆನ್ನಿಗರಾ0ಯನ ಸಂಸಾರವನ್ನು ಬಹಿಷ್ಕರಿಸಲಾಗಿದೆ. ಶ್ರೀಮಠಕ್ಕೆ ಒಂದು ನೂರ ಒಂದು ರೂಪಾಯಿ ತಪ್ಪುದಂಡ ಕೊಟ್ಟು, ದರ್ಭೆ0ಯಲ್ಲಿ ನಾಲಿಗೆ ಸುಡಿಸಿಕೊಂಡು ಸ್ಥಳಪುರೋಹಿತರಿಂದ ಪ್ರಾ0ಯಶ್ಚಿತ್ತ ಮಾಡಿಕೊಳ್ಳುವ ತನಕ ಆ ಸಂಸಾರದ ಜೊತೆಗೆ 0ಯಾರೂ ಬೆಂಕಿನೀರಿನ ಸಂಬಂಧ ಮಾಡಕೂಡದು. ಹಾಗೆ 0ಯಾರಾದರೂ ಮಾಡಿದ್ದೇ ಆದರೆ ಅವರನ್ನೂ ಬಹಿಷ್ಕರಿಸಿ ಶ್ರೀಮಠಕ್ಕೆ ನಿವೇದಿ ಸತಕ್ಕದ್ದು' ಎಂದು ಬರೆದು ಮಠಮುದ್ರೆ0ಯನ್ನೂ ಹಾಕಿತ್ತು.
ಅವಳು ಓದಿ ಮುಗಿಸಿದ ಮೇಲೆ ಅ0ಯ್ಯಾಶಾಸ್ತ್ರಿಗಳು–'ಏನು ಮಾಡ್ತಿ0ಯಾ?' ಎಂದರು.
'ಇಷ್ಟು ವರ್ಷ ರಾಮನವಮಿ ದಿನ ಹ್ಯಾಗೋ ಪಾನಕ ಕೋಸಂಬರಿ ಮಾಡಿ ನಿಮಗೆಲ್ಲ ಕೊಡ್ತಿದ್ದೆ. ಇನ್ನು ಮಾಡೂ ಹಾಗಿಲ್ಲ' ನಂಜಮ್ಮ ಎಂದಳು.
'ಮಾಡಿದ್ರೆ ನಾವು ಬರುಲ್ಲ.'
'ನಿಮ್ಮ ಸಂತೋಷ.'
'ಅರಮನೆ ಎದುರಿಸಿ ಬದುಕಬಹುದು. ಗುರುಮನೆ ಬಹಿಷ್ಕಾರ ಹಾಕಿದ್ರೆ ಬದುಕೂಹಾಗಿಲ್ಲ ತಿಳ್ಕೋ'–ಎಂದು ಹೇಳಿ, ಇಬ್ಬರೂ ಹೊರಟು ಹೋದರು. ನಂಜಮ್ಮನಿಗೆ ಇದರಿಂದ ಅಪಮಾನವೆನಿಸಿತು; ಆದರೆ ಭ0ಯವಾಗಿರಲಿಲ್ಲ. ಮರುದಿನ ಕೂತು ಇಲ್ಲಿ ನಡೆದ ವಿದ್ಯಮಾನವನ್ನೆಲ್ಲ ತಾನೇ ವಿವರಿಸಿ, ತಾಯಿ0ಯ ಮಾತು ಕೇಳಿ ಗಂಡನೇ ಹೆಂಡತಿ0ಯ ತಾಳಿ ಹರಿದುಕೊಂಡನೆಂದೂ ಅವಳ ತಪ್ಪೇನೂ ಇಲ್ಲವೆಂದೂ, ದಿಕ್ಕಿಲ್ಲದ ಹೆಂಗಸರನ್ನು ತಾವು ಒಂದು ದಿನ ಮನೆ0ಯಲ್ಲಿ ಇಟ್ಟುಕೊಂಡಿದ್ದು ಊರಿಗೆ ಕಳಿಸಿಕೊಟ್ಟಿದ್ದು ನಿಜವೆಂದೂ, ಇದರಲ್ಲಿ ತಮ್ಮದೇನೂ ತಪ್ಪಿಲ್ಲವೆಂದೂ ಬರೆದು ಅದಕ್ಕೆ ಗಂಡನ ರುಜು ಹಾಕಿಸಿ, ಸೋಮವಾರದ ದಿನ ಪೋಸ್ಟ್‌ಮ್ಯಾನ್ ಬಂದಾಗ ಲಕೋಟೆ ತೆಗೆದು ಅವನಿಂದಲೇ ವಿಳಾಸ ಬರೆಸಿ ಕಳಿಸಿದಳು. ಆದರೆ ಎಷ್ಟು ದಿ ನವಾದರೂ ಅದಕ್ಕೆ ಮಠದಿಂದ ಉತ್ತರ ಬರಲಿಲ್ಲ.
ಪುಷ್ಯಮಾಸದಲ್ಲಿ ಅವಳ ಮಾವನವರ ಶ್ರಾದ್ಧ. ಇದುವರೆಗೂ ಅದು ಹಿರಿ0ಯ ಮಗನಾದ ಚೆನ್ನಿಗರಾ0ಯರ ಮನೆ0ಯಲ್ಲಿ0ಯೇ ನಡೆ0ಯುತ್ತಿತ್ತು. 0ಯಾವ ಖರ್ಚನ್ನೂ ಕೊಡದೆ ಅಪ್ಪಣ್ಣ0ಯ್ಯ ಇಲ್ಲಿಗೇ ಬಂದು ಕರ್ಮ ಮುಗಿಸಿಕೊಂಡು ಹೋಗುತ್ತಿದ್ದ. ಎಡಬಲಕ್ಕೆ ಹಾಕಿಕೊಳ್ಳುವುದು ಹಿರಿ0ಯ ಮಗ ಚೆನ್ನಿಗರಾ0ಯರ ಕೆಲಸ. ಪವಿತ್ರ ಇಟ್ಟುಕೊಂಡು ಸುಮ್ಮನೆ ಕೂತಿದ್ದು, ಜೋಯಿಸರು ಹೇಳಿದಾಗ ನಮಸ್ಕಾರ ಮಾಡುವುದಷ್ಟೇ ಕಿರಿ0ಯನ ಕರ್ತವ್ಯವಾಗಿತ್ತು. ಇವರು ಬೇರೆ0ಯಾದ ಕೆಲವು ದಿನ ಗಂಗಮ್ಮ ಗಂಡನ ಪ್ರಸಾದಕ್ಕೂ ಈ ಮನೆಗೆ ಬಂದಿರಲಿ ಲ್ಲ. ಆಮೇಲೆ, ಆ ಒಂದು ದಿನ ಬಂದು ಹೋಗುತ್ತಿದ್ದಳು. ಈ ವರ್ಷ ಇವರನ್ನು ಬಹಿಷ್ಕರಿಸಿರುವುದರಿಂದ ಶ್ರಾದ್ಧ ಮಾಡಿಸುವುದಕ್ಕಾಗಲಿ ಪೂರ್ವಪಂಕ್ತಿ ಭೋಜನಕ್ಕಾಗಲೀ ತಾವು ಬರುವುದಿಲ್ಲವೆಂದು ಜೋಯಿಸರಿಬ್ಬರೂ ಮೊದಲೇ ಹೇಳಿಬಿಟ್ಟರು. ಚೆನ್ನಿಗರಾ0ಯರಿಗೆ ಪೀಕಲಾಟಕ್ಕಿಟ್ಟುಕೊಂಡಿತು. ಇದಕ್ಕೆಲ್ಲ

0ಯಾರು ಕಾರಣ? ಹೆಂಡತಿ ತಾನೆ? 'ಅವ್ರು ನ್ಯಾಕೆ ಮನೆಗೆ ಸೇರುಸ್ದೆ0ಯೇ ಕತ್ತೆಮುಂಡೆ?' – ಎಂದು ಹೆಂಡತಿ0ಯನ್ನು ಬೈದುದರಿಂದ ಸಮಸ್ಯೆ ಬಗೆಹರಿ0ಯಲಿಲ್ಲ.

ಈ ಬಾರಿ ಶ್ರಾದ್ಧವನ್ನು ಗಂಗಮ್ಮನ ದೇವಸ್ಥಾನದಲ್ಲಿ0ಯೇ ಮಾಡಿಸುವುದು, ಅಪ್ಪಣ್ಣ0ಯ್ಯ ಎಡಬಲಕ್ಕೆ ಹಾಕಿಕೊಳ್ಳುವುದು ಎಂದು ಪುರೋಹಿತರಿಬ್ಬರೂ ತೀರ್ಮಾನಿಸಿದರು. ಎಡಬಲಕ್ಕೆ ಹಾಕಿಕೊಳ್ಳುವುದೆಂದರೆ 0ಯಜಮಾನಿಕೆ ಬಂದಂತೆ. ತಾನೂ ಒಬ್ಬ ಮುಖ್ಯ ಮನುಷ್ಯನಾಗುತ್ತೇನೆ ಎಂಬ ಭಾವನೆಯಿಂದ ಅಪ್ಪಣ್ಣ0ಯ್ಯನಿಗೆ ಒಂದು ತರದ ಹಿಗ್ಗೇ ಆಯಿತು. ಅಲ್ಲದೆ ತಿಥಿ0ಯನ್ನು ತಮ್ಮ ಮನೆ0ಯಲ್ಲೇ ಮಾಡಿದರೆ, ಉಳಿ0ಯುವ ವಡೆ ಪೂರಿ ರವೆ ಉಂಡೆಗಳನ್ನು ಎಂಟು ದಿನವಾದರೂ ಇಟ್ಟುಕೊಂಡು ತಿನ್ನಬಹುದು. ಆದರೆ ಪೂರ್ತಿ ಖರ್ಚನ್ನು ತಾವೇ ಹಾಕಬೇಕೆಂಬ ಅಂಶ ಅವನ 0ಯೋಚನೆಗೆ ಬರಲಿಲ್ಲ.

ಗಂಗಮ್ಮನ 0ಯೋಚನೆ ಅದಲ್ಲ. ಹದಿನೈದು ಹದಿನಾರು ರೂಪಾಯಿಗಳನ್ನು ಅವಳು ಹೇಗಾದರೂ ಹೊಂದಿಸಿ0ಯಾಳು. 0ಯಜಮಾನರ ತಿಥಿ ಎಂದು ತಾನು ತಿರುಗುವ ಹಳ್ಳಿಗಳಲ್ಲಿ ಕೇಳಿದರೆ ಪುಣ್ಯಾತ್ಮರು ನಾಲ್ಕಾಣೆ ಎರಡಾಣೆ, ಮೇಲೆ ಒಂದೊಂದು ತೆಂಗಿನಕಾಯಿ, ಬೆಳೆದವರು ಒಂದಿಷ್ಟು ಹುಚ್ಚೆಳ್ಳು, ಎಳ್ಳು, ಉದ್ದಿನಕಾಳು, ಅವರೇಕಾಳು ಕೊಟ್ಟರೆ ಮೂರು ತಿಥಿ ಮಾಡುವಷ್ಟು ಬಂದೀತು. ಆದರೆ ಹಿರಿ0ಯ ಮಗ ಜೀವಂತ ಇದ್ದೂ ಪಿಂಡವು ಅವನ ಕೈಲಿ ಬೀಳದೆ ಕಿರಿ0ಯವನು ಹಾಕಿದರೆ, ಅದನ್ನು ಸ್ವರ್ಗದಿಂದ ಕಾಗೆ0ಯ ರೂಪದಲ್ಲಿ ಬರುವ ತನ್ನ ಗಂಡನು ಮುಟ್ಟುತ್ತಾರೆ0ಯೋ ಇಲ್ಲವೋ! ಶ್ಯಾನುಭೋಗಿಕೆ0ಯು ಹೇಗೆ ಹಿರಿ0ಯ ಮಗನಿಗೆ ಸೇರಬೇಕೆಂದು ಸರ್ಕಾರೀ ಕಟ್ಲೆ ಇದೆ0ಯೋ ಹಾಗೆ0ಯೇ ಶ್ರಾದ್ಧಪಿಂಡವೂ ಹಿರಿ0ಯನ ಕೈಯಿಂದಲೇ ಬೀ ಳಬೇಕಲ್ಲವೆ? ಅವಳು ಆಗಲೇ ಜೋಯಿಸರ ಹತ್ತಿರ ಹೋದಳು. ನೂರೊಂದು ರೂಪಾಯಿ ಕೊಡುವ ಶಕ್ತಿ 0ಯಾರಿಗೂ ಇಲ್ಲ. ಇವರು ಮಾಡಿರುವ ತಪ್ಪಿಗೆ ಸ್ವರ್ಗದಲ್ಲಿರುವ ಅವಳ ಗಂಡ ಘೌತಿ ರಾಮಣ್ಣನವರು ವರ್ಷಕ್ಕೊಂದು ದಿನದ ಅನ್ನವನ್ನೂ ಕಾಣದೆ ಉಪವಾಸವಿರಬೇಕೆ? ಅಲ್ಲದೆ ತಪ್ಪು ಮಾಡಿರುವವಳು ಸುಖನಾತಿ ಸೊಸೆ0ಯೇ ಹೊರತು ತನ್ನ ಕಂದ ಚಿನ್ನ0ಯ್ಯನಲ್ಲ. ಇದಕ್ಕೆ ಏನಾದರೂ ಮಾಡಲೇಬೇಕು.

ಅವಳ ವಾದವನ್ನು ಜೋಯಿಸರಿಬ್ಬರೂ ಒಪ್ಪಿಕೊಂಡರು. ಅಲ್ಪವೋ ಸ್ವಲ್ಪವೋ ತಪ್ಪುದಂಡ ತೆಗೆದುಕೊಂಡು ಚೆನ್ನಿಗರಾ0ಯನನ್ನು ಜಾತಿಗೆ ಸೇರಿಸಿಕೊಳ್ಳುವುದು, ಅವನ ಹೆಂಡತಿ0ಯನ್ನು ಮಾತ್ರ ಬಹಿಷ್ಕಾರದಲ್ಲಿ0ಯೇ ಇಡುವುದೆಂದು ತೀರ್ಮಾನವಾಯಿತು. ದಂಡ ಕೊಡಲು ಚೆನ್ನಿಗರಾ0ಯರ ಹತ್ತಿರ ಏನಾದರೂ ಇದ್ದರೆ ತಾನೆ! ಜೋಯಿಸರಿಬ್ಬರೂ ಸಮಾಲೋಚಿಸಿ ತೀರ್ಮಾನಿಸಿದರು: ಗ್ರಾಮದಲ್ಲಿ ಅಣ್ಣಾಜೋಯಿಸರದು ಒಟ್ಟು ಒಂಬತ್ತು ರೂಪಾಯಿ ಎಂಟಾಣೆ ರೆವಿನ್ಯೂ ಕಂದಾ0ಯವಿದೆ. ಅ0ಯ್ಯಾಶಾಸ್ತ್ರಿಗಳದ್ದು ಆರು ರೂಪಾಯಿ ಮೂರಾಣೆ ಐದು ಪೈ. ಚೆನ್ನಿಗರಾ0ಯರು ಆ ವರ್ಷ ಇವರಿಬ್ಬರೂ ಸರ್ಕಾರಕ್ಕೆ ಕೊಡಬೇಕಾದ ಕಂದಾ0ಯ ಸಂದಿದೆ ಎಂದು ಇಬ್ಬರಿಗೂ ಬೇರೆ ಬೇರೆ0ಯಾಗಿ ರಶೀತಿ ಬರೆದು, ಪಟ್ಟಿಗೂ ನಮೂದಿಸಿ ಕೊಟ್ಟರು. ಹಣವನ್ನು ತಮ್ಮ ಪೋಟಿಗೆ0ಯಲ್ಲಿ ಖಜಾನೆ0ಯವರು ಕಠಾಯಿಸಿಕೊಳ್ಳುವ ವಿಧಾನ ಹೇಗೋ ಇದೆ. ಅಂತೂ ಶ್ಯಾನುಭೋಗ ಚೆನ್ನಿಗರಾ0ಯರು ಅಪ್ಪನಿಗೆ ಶ್ರಾದ್ಧ ಮಾಡುವ ಧಾರ್ಮಿಕ ಅಧಿಕಾರವನ್ನು ಪುನಃ ಸಂಪಾದಿಸಿದರು. ಅವರೊಬ್ಬರೇ ತಾಯಿ ಮತ್ತು ತಮ್ಮನ ಮನೆಗೆ ಹೋಗಿ ಶ್ರಾದ್ಧ ಮಾಡುವುದು. ಆ ದಿನ ಅವರ ಹೆಂಡತಿ0ಯಾಗಲಿ ಮಕ್ಕಳಾಗಲಿ ಆ ಕಡೆ ಬರಕೂಡದು ಎಂದು ನಿಶ್ಚ0ಯವಾಯಿತು.

ಪೂರ್ವಪಂಕ್ತಿಗೆ ಕುಳಿತುಕೊಳ್ಳಬೇಕಾಗಿದ್ದ ಅಣ್ಣಾಜೋಯಿಸರು ಆ ದಿನ ಬೆಳಗಿನಿಂದ ಉಪವಾಸವಿರಬೇಕಾಗಿತ್ತು. ಇನ್ನು ಮಾಡಲು ಏನೂ ಕೆಲಸವಿರಲಿಲ್ಲ. ಹೆಂಡತಿ ವೆಂಕಟಲಕ್ಷ್ಮಿ ಅಡಿಗೆಮನೆ0ಯಲ್ಲಿ ಸೊಪ್ಪು ಹೆಚ್ಚುತ್ತಿದ್ದಳು. ಉಪವಾಸವಿದ್ದುದರಿಂದಲೋ ಏನೋ, ಜೋಯಿಸರ ನೆನಪು ಅತ್ತೆ0ಯ ಮನೆ0ಯಲ್ಲಿ ಒಂದು ಸಲ ತುಪ್ಪದಲ್ಲಿ ಕರಿದ ಪೂರಿ ತಿಂದುದನ್ನು ಕುರಿತು ಸಾಗಿತ್ತು. ಅವರು ಹೆಂಡತಿಗೆ ಹೇಳಿದರು: 'ನಿಮ್ಮಮ್ಮ ಒಂದ್ಸಲ, ತುಪ್ಪದಲ್ಲೇ ಕರಿದ ಪೂರಿ ಕೊಟ್ಟಿದ್ದರು. ಅದರ ರುಚಿ0ಯೇ ರುಚಿ. ನೀನು ಹಾಗೆ ಒಂದೇ ಒಂದು ದಿನವೂ ನಂಗೆ ಮಾಡಿಕೊಟ್ಟಿಲ್ವಲ್ಲೇ?'

'ನೀವು ಅಷ್ಟೊಂದು ಬೆಣ್ಣೆ ತಂದುಕೊಡಿ. ನೀವು ಕೇಳಿ ಕೇಳಿದ್ದೆಲ್ಲ ತುಪ್ಪದಲ್ಲೇ ಕರಿದು ಕೊಡ್ತೀನಿ.'

'ಸೇರಿಗೆ ನಾಲ್ಕಾಣೆ0ಯಾಗಿದೆ. ಎಲ್ಲಿಂದ ತರೂದು?'

'ಹಾಗಾದ್ರೆ 0ಯಾಕೆ ಬ0ಯಸ್ತೀರಾ, ಸುಮ್ನಾದ್ರೂ ಇರೀ ಅಂದ್ರೆ.'

ಜೋಯಿಸರಿಗೆ ಪೆಚ್ಚೆನಿಸಿತು. ಆದರೆ ತಕ್ಷಣ ಒಂದು ಉಪಾ0ಯ ಹೊಳೆಯಿತು. 'ಇವತ್ತು ಬೆಣ್ಣೆ ಕಾಯಿಸಿದ ತುಪ್ಪದಲ್ಲೇ ಕರಿದ ಭಕ್ಷ್ಯ ತಿಂತೀನಿ ನೋಡು ಬೇಕಾದರೆ' – ಹೆಂಡತಿಗೆ ಸವಾಲು ಹಾಕಿದುದಕ್ಕೆ ಅವಳು, 'ನಿಮಗೆ ಮಾಡಿ ಬಡಿಸದೆ ಕೆಟ್ಟಿದಾರೆ ಸುಮ್ನಿರಿ' ಎಂದು ಅಣಕವಾಡಿದಳು.

'ನೋಡ್ತಿರು ಬೇಕಾದ್ರೆ' ಎಂದ ಜೋಯಿಸರು, 'ಲೋ, ನರಸಿಂಹಾ, ಈಗಲೇ ಓಡಿಹೋಗಿ ಅಪ್ಪಣ್ಣ0ಯ್ಯನ ಕರ್ಕಂಡ್ ಬಾ ಹೋಗು' ಮಗನಿಗೆ ಆದೇಶವಿತ್ತರು.

ಮಡಿ ಉಟ್ಟು ಒದ್ದೆ ಚೌಕ ಕಟ್ಟಿಕೊಂಡು ಅಡಿಗೆ0ಯಲ್ಲಿ ತಾಯಿಗೆ ಸಹಾ0ಯ ಮಾಡುತ್ತಿದ್ದ ಅಪ್ಪಣ್ಣ0ಯ್ಯ ಅರ್ಧ ಬರೀ ಮೈ0ಯಲ್ಲಿ ಓಡಿಬಂದ. 'ನೋಡು ಅಪ್ಪಣ್ಣ0ಯ್ಯ, ನಂಗೆ ಹುಶಾರಿಲ್ಲ. ನೆಗಡಿ, ಜ್ವರ ಬಂದುಬಿಟ್ಟಿದೆ.

ನಾನು ಬ್ರಾಹ್ಮಣಾರ್ಥ ಕೂತ್ಕಳ್ಳಕ್ಕೆ ಆಗುಲ್ಲ.'
'ಈಗ ಹಾಗಂದ್ರೆ ಹ್ಯಾಗೆ ಜೋಯಿಸ್ರೇ, ಆಗಲೇ ಹೊತ್ತು ನಾಕಾಳುದ್ದ ಏರಿದೆ. ಇಷ್ಟು ಹೊತ್ನಲ್ಲಿ ಇನ್ಯಾರುನ್ನ ತರಾಣ?'
'ನಿಮ್ಮಮ್ಮುನ್ನ ಕರಿ ಹೇಳ್ತೀನಿ.'
ಓಡಿಬಂದ ಗಂಗಮ್ಮ ವಿಷಯವನ್ನು ಕೇಳಿ, 'ಜೋಯಿಸರೇ, ನನ್ನ ಗಂಡುನ್ನ ಉಪವಾಸ ಬೀಳುಸ್ಬ್ಯಾಡಿ' – ಎಂದು ದೂರದಲ್ಲಿಯೇ ನೆಲ ಮುಟ್ಟಿ ಅಂಗಲಾಚಿದಳು.
'ಆಯ್ತು, ನೀನು ಇಷ್ಟು ಹೇಳುವಾಗ ಇಲ್ಲ ಅನ್ನೂಕೆ ಆಗುಲ್ಲ. ಬ್ರಾಹ್ಮಣಾರ್ಥಕ್ಕೆ ಬಂದು ಭಕ್ಷ್ಯ ತಿನ್ನದೇ ಇದ್ರೆ ಶಾಸ್ತ್ರಸಮ್ಮತವಲ್ಲ. ಒಂದು ಕೆಲಸ ಮಾಡು. ಎಲ್ಲಾ ಭಕ್ಷ್ಯಾನೂ ತುಪ್ಪದಲ್ಲಿ ಕರಿದುಬಿಡು. ನಾನು ತಿಂತೀನಿ.'
'ಈಗ ಅಷ್ಟೊಂದು ತುಪ್ಪ ಎಲ್ಲಿ ಸಿಕ್ಕುತ್ತೆ ಜೋಯಿಸ್ರೆ?'
'ದುಡ್ಡು ತಗಂಡು ಬಾ. ಗೌಡಗಳ ಹಟ್ಟೀಲಿ ಬೇಕಾದ್ರೆ ನಾನು ಹೋಗಿ ಬೆಣ್ಣೆ ತಂದುಕೊಡ್ತೀನಿ. ನಂದು ಹ್ಯಾಗೂ ಸ್ನಾನವಾಗಿಲ್ಲ.'
ಗಂಗಮ್ಮ ಮನೆಗೆ ಹೋದಳು. ಒಬ್ಬ ಬ್ರಾಹ್ಮಣರಿಗೆ ತುಪ್ಪದಲ್ಲಿ ಕರಿದುದನ್ನು ಬಡಿಸಿ ಇನ್ನೊಬ್ಬರಿಗೆ ಎಣ್ಣೆಯದನ್ನು ಬಡಿಸುವಂತಿಲ್ಲ. ತಮಗೇನೋ ಎಣ್ಣೆಯದೇ ಆಗುತ್ತೆ. ಇವರಿಬ್ಬರಿಗೆ ಆಗುವಷ್ಟು ಪೂರಿ, ವಡೆ, ಆಂಬೊಡೆ, ಚಿಕ್ಕಿನ ಉಂಡೆಗಳನ್ನು ಕರಿಯಬೇಕಾದರೆ ಅಳತೆ ಒಂದೂವರೆ ಸೇರು ತುಪ್ಪ ಬೇಕು. ಅಂದರೆ ಆರು ಏಳು ಸೇರು ಬೆಣ್ಣೆ. ಮನೆಯಲ್ಲಿ ಎರಡು ರೂಪಾಯಿ ಹೆಚ್ಚಾಗಿ ಇರಲಿಲ್ಲ. ಗಂಗಮ್ಮನ ಮದುವೆಯಲ್ಲಿ ಕೊಟ್ಟಿದ್ದ ಒಂದು ಬೆಳ್ಳಿಯ ಪಂಚಪಾತ್ರೆ ಇನ್ನೂ ಮನೆಯಲ್ಲಿತ್ತು. ಅಪ್ಪಣ್ಣಯ್ಯನನ್ನು ಅದರೊಡನೆ ಕಳಿಸಿದಾಗ ಕಾಶಿಂಬಡ್ಡಿ ಸಾಹುಕಾರರು ತೂಕ ಮಾಡಿ ನೋಡಿ, ಹನ್ನೆರಡು ತೊಲದ ಬೆಳ್ಳಿಗೆ ಎರಡು ರೂಪಾಯಿ ಕೊಟ್ಟರು. ದಿನಕ್ಕೆ ಎರಡು ಕಾಸು ಬಡ್ಡಿ.
ಬೆಣ್ಣೆ ಕಾಯಿಸಿದ ತುಪ್ಪದ ಭಕ್ಷ್ಯವನ್ನುಂಡು, ತಮ್ಮ ಮನೆಯ ಮಕ್ಕಳಿಗೆ ಎಂದು ಹೇಳಿ, ಉಳಿದುದನ್ನು ಬಾಳೆ ಎಲೆಯಲ್ಲಿ ಕಟ್ಟಿಸಿಕೊಂಡು ಮನೆಗೆ ಬಂದ ಜೋಯಿಸರು ಹೆಂಡತಿಗೆ – 'ನೀನೂ ತಿನ್ನೇ' ಎಂದಾಗ ಆಕೆ, 'ಇನ್ನೊಬ್ರ ಮನೆ ತಿಥಿ ಪ್ರಸಾದ ನಾವು ಹ್ಯಾಗೆ ತಿನ್ನೋದು ಅಂದ್ರೆ?' ಎಂದಳು.
'ಏನೂ ಹಿಡ್ಕಳುಲ್ಲ ತಿನ್ನೇ. ಹುಡುಗರಿಗೂ ಕೊಡು.'
'ನೋಡಿ, ನಾನು ಲೌಕಿಕರ ಮನೇಲಿ ಹುಟ್ಟಿದೋಳು. ಶಾಸ್ತ್ರ ಸಂಬಂಧ ಅಂದ್ರೆ ನಂಗೆ ತುಂಬ ಭಯ. ಜೋಯಿಸರಿಗೆ ಯಾವ ಭಯವೂ ಇಲ್ಲ ಅಲ್ವೆ?' – ಎಂದು ಅವಳು ನಕ್ಕಾಗ ಜೋಯಿಸರಿಗೆ ತಮ್ಮ ಧೈರ್ಯಕ್ಕೆ ತಮಗೇ ಹೆಮ್ಮೆ ಎನಿಸಿತು.

– 6 –

ಬ್ರಾಹ್ಮಣರ ಊಟವಾಗಿ ಶ್ರಾದ್ಧಕರ್ಮವೆಲ್ಲ ಮುಗಿದ ಮೇಲೆ ಚೆನ್ನಿಗರಾಯರು ದೇವರ ಎಲೆಯ ಮುಂದೆ ಕುಳಿತು ಪುಷ್ಕಳವಾಗಿ ಪ್ರಸಾದಭೋಜನ ಮಾಡಿದರು. ನಂತರ ಶರಟು ಹಾಕಿಕೊಂಡು ಕೆರೆಯ ಏರಿಯ ಕಡೆಗೆ ಹೋದರು. ಅಷ್ಟರಲ್ಲಿ ಮಧ್ಯಾಹ್ನಾನಂತರ ನಾಲ್ಕೂವರೆಯ ಸುಮಾರು. ಮಧ್ಯಾಹ್ನ ಸ್ನಾನ ಮಾಡಿದಾಗಿನಿಂದ ಅವರು ಹೊಗೆಸೊಪ್ಪು ಹಾಕಿಕೊಂಡಿರಲಿಲ್ಲ. ಹನುಮಂತರಾಯನ ಗುಡಿಯಲ್ಲಿ ಇದ್ದಿತಾದರೂ ಹತ್ತಿರ ಎಲೆ ಅಡಿಕೆಯೂ ಇರಲಿಲ್ಲ. ದುಡ್ಡು ಕೊಟ್ಟು ಕೊಳ್ಳಲು ಜೇಬಿನಲ್ಲಿ ಬಿಡಿಗಾಸಿರಲಿಲ್ಲ. ಏರಿಯಿಂದ ಅಮ್ಮನ ತೋಪಿನ ಮೂಲಕ ಊರ ಕಡೆಗೆ ಬರುವಾಗ ನರಸಿಯ ಅಂಗಡಿ ಸಿಕ್ಕುತ್ತದೆ. ತಾನು ಕಟ್ಟಿಸಿಕೊಂಡಿರುವ ಮೂರು ಅಂಕಣದ ಹೆಂಚಿನ ಮನೆಯ ಮುಂಭಾಗದ ಅಂಕಣವೇ ಅವಳ ಅಂಗಡಿ. ಒಳಗಿನದು ಸಾಮಾನು ಇಟ್ಟುಕೊಳ್ಳುವ ಜಾಗ. ಹಿಂದಿನದರಲ್ಲಿ ಅವಳ ಅಡಿಗೆ ಸಾಮಾನು ಇಡುವ ಜಾಗದ ಅಟ್ಟದ ಮೇಲೂ ಅಂಗಡಿಯ ಸರಕು ತುಂಬಿಕೊಂಡಿರುತ್ತಾಳಂತೆ.
ಶ್ಯಾನುಭೋಗರು ಬರುತ್ತಿದ್ದಾಗ ಅವಳು ಅಂಗಡಿಯಲ್ಲಿ ಕೂತಿದ್ದಳು. ಅವಳ ಮುಂಭಾಗದಲ್ಲಿ ತೆರೆದ ವೀಳ್ಯದೆಲೆಯ ಪಿಂಡಿ ಇತ್ತು. ಬಾಯಿ ತಡೆಯದೆ ಇವರು ಬಾಗಿಲಿನ ಹತ್ತಿರ ಹೋಗಿ ಕೇಳಿದರು: 'ನರಸಮ್ಮ, ಒಂದೆರಡು ಎಲೆ ಅಡಿಕೆ, ಒಂದು ಚೂರು ಹೊಗೆಸೊಪ್ಪು ಕೊಡ್ತಿಯಾ?'
ನರಸಿಯೂ ಎಲೆ ಜಗಿಯುತ್ತಿದ್ದಳು. ಅಗಲವಾದ ಕಣ್ಣುಗಳ, ದೊಡ್ಡ ಮುಖದ ಅವಳ ಬಾಯಿ ಯಾವಾಗಲೂ ಎಲೆಯ ರಂಗಿನಿಂದ ತುಂಬಿ, ತಾಂಬೂಲದ ರಸವು ತುಟಿಗಳಿಂದ ಹರಿದು ಸುರಿಯುತ್ತದೆಂಬಷ್ಟು ಸಮೃದ್ಧವಾಗಿರುತ್ತಿತ್ತು. ಜೀವನದಲ್ಲಿ ಯಾವ ಕಷ್ಟವೂ ಇಲ್ಲವೆಂಬಂತಿದ್ದ ಅವಳು ನಕ್ಕರೆ, ಎದುರು ನಿಂತವರನ್ನು ತೂರಿ ಕೆಡಹುವಂತಹ ಹೊಳಪು ಕಣ್ಣಿನಲ್ಲಿ ಕುಣಿಯುತ್ತಿತ್ತು. ಅವಳು ಕೇಳಿದಳು: 'ಇದೇನು ಶ್ಯಾನುಭೋಗ್ರೇ, ನನ್ನ ಎಲೆ ಕೇಳ್ತೀರಲ್ಲಾ, ನಿಮ್ಮ ಹೆಂಡ್ತಿ ಕೊಡಾಕುಲ್ಲ ಅಂದ್ರಾ?'
'ಮನ್ಲಿ ಎಲೆ ಇರ್ಲಿಲ್ಲ ಕಣಮ್ಮ. ನಮ್ಮಯ್ಯನ ವೈದಿಕ ಮಾಡಿಕೊಂಡು ಕೆರೆ ಕಡೆ ಹೋಗಿದ್ದೋನು ಹಾಗೇ ಬಂದೆ.'
'ಬಲ್ಲಿ ಬಲ್ಲಿ ಕೊಡ್ತೀನಿ. ಊರ ಶ್ಯಾನುಭಾಗ್ರು, ನಿಮ್ಗೆ ಇಲ್ಲ ಅಂದ್ರೆ ಆಯ್ತುದಾ?' – ಎಂದು ಅವಳು ಕಣ್ಣು

ಹೊರಳಿಸಿ ನಕ್ಕಳು. ಗ್ರಾಮದ ತಮ್ಮ ಅಧಿಕಾರವನ್ನು ಇವಳಾದರೂ ಒಪ್ಪಿಕೊಂಡದ್ದಕ್ಕೆ ಸಂತೋಷಪಟ್ಟ ಅವರು ಅಂಗಡಿ0ು ಒಳಗೆ ಹೋದರು. 'ಒಳಗೇ ಬಲ್ಲಿ' ಎಂದು ಮೇಲೆ ಎದ್ದು ಅವಳು ಇವರನ್ನು ಒಳಗಿನ ಅಂಕಣಕ್ಕೆ ಕರೆದೊ0ುದ್ದಳು. ಒಳಗಿನ ಮಬ್ಬುಗತ್ತಲೆ0ುಲ್ಲಿ ಇವರಿಗೆ ಎಲ್ಲವೂ ಸರಿ0ಾಗಿ ಕಾಣಲಿಲ್ಲ. ಅಂಗಡಿ ವ್ಯಾಪಾರದ ಹತ್ತಾರು ಮೂಟೆಗಳಿದ್ದುವು. ಗೋಡೆ0ು ಮೂಲೆಗೆ ಹಾಕಿದ್ದ ಮಂಚದ ಮೇಲೆ ಹಾಸಿಗೆ ಹಾಕಿತ್ತು. 'ಇಲ್ಲಿ ಕುಂತ್ಕಳಿ' – ಅವಳೆಂದಳು. 'ಕತ್ಲೆ0ುಲ್ಲಮ್ಮ' – ಎಂದು ಅವರು ತಡಕಾಡಿದುದಕ್ಕೆ 'ಕತ್ಲೆ0ಾದ್ರೆ ಏನ್ ಮಾಡ್ತೈತೆ. ಕುಂತ್ಕ ಬಲ್ಲಿ' – ಎಂದು ಹತ್ತಿರ ಬಂದು, ಅವರ ಎರಡೂ ತೋಳನ್ನೂ ಹಿಡಿದು ಎಳೆದು ಮಂಚದ ಮೇಲೆ ಕೂರಿಸಿ ತಾನೂ ಪಕ್ಕದಲ್ಲಿ ಕೂತಳು. ಹೊರಗಿನಿಂದ ಒಳಗೆ ಬಂದಿದ್ದ ಶ್ಯಾನುಭೋಗರ ಕಣ್ಣಿನ ಮಬ್ಬು ಈಗ ಸ್ವಲ್ಪ ಹರಿ0ುುತ್ತಿತ್ತು. ಆದರೆ ಅವರಿಗೇ ತಿಳಿ0ುದಂತೆ ಅವರ ಕೈ ಕಾಲು ಮೈಗಳೆಲ್ಲ ಮೂರರ ಚಳಿ ಬಂದಂತೆ ನಡುಗಲು ಮೊದಲಾಯಿತು. ಒಂದು ನಿಮಿಷದಲ್ಲಿ ನಡುಕವು ಮಿತಿ ಮೀರಿ ಎರಡೂ ದವಡೆಗಳೂ ಒಂದಕ್ಕೊಂದು ಕಟಕಟನೆ ಬಡಿದುಕೊಳ್ಳಲು ಶುರುವಾದುವು.
'ಅದ್ಯಾಕ0ೋರೇ ಹಿಂಗ್ ನಡುಕ್ತೀರಾ?'
'ನೀ ನೀ ನೀ ನೀನು ಹೀಗ್ ನನನ್ ಮುಟ್ಟಾ ಭೌ ಭೌದೇನಮ್ಮಾ?' – ಉಸಿರನ್ನು ಸಂಪಾದಿಸಿಕೊಂಡು ಅವರು ಕೇಳಿದರು.
'ನನ್ನ ತಾವುಕ್ ಬಂದು 0ುಲೆ ಕೇಳಿದ್ರಲ್ರೀ?'
ಅವಳ ಅರ್ಥ ಅವರಿಗೆ ಆಗಲೇ ಇಲ್ಲ: 'ದು ದು ದುಡ್ಡಿರ್ಲಿಲ್ಲ, ಕೇಳ್ದೆ.'
'ನಾನೇನು ದುಡ್ಡು ಕೇಳ್ತಿಲ್ವಲ್ಲಾ?'
'ಮ ಮ ಮತ್ತೆ ನನನ್ 0ಾಕ್ ಮು ಮು ಮುಟ್ದೆ?'
ಅವರ ತೋಳು ಹಿಡಿದು ಎಬ್ಬಿಸಿ ಹೊರಕ್ಕೆ ಕರೆತಂದು ಅವಳು ಹೇಳಿದಳು: 'ಸುಮ್ಕೆ ಮನ್ಗೆ ನಡೀರಿ.' ಭ0ುದಿಂದ ನಡುಗುತ್ತಿದ್ದ ಅವರು ಬೇಗ ಬೇಗ ಹೆಜ್ಜೆಯಿಟ್ಟು ಹೊರಗೆ ನಡೆದರು. 'ಒಂದು ಸಟಾಗ್ ನಿಂತ್ಕಳಿ'– ಎಂದು ಅವಳು ಕೂಗಿದುದಕ್ಕೆ ಅಷ್ಟೇ ಭ0ುದಿಂದ ನಿಂತುಕೊಂಡರು.
'ವಸೀ ಇಲ್ಲಿ ಬಲ್ಲಿ, ನಾನೇನ್ ನಿಮ್ಮುನ್ನ ತಿಂದ್ಕಣಾಕಿಲ್ಲ.'
ಅವರು ಮತ್ತೆ ಅಂಗಡಿ0ು ಮುಂದೆ ನಿಂತರು. ಒಂದು ಕವಳಿಗೆ ಎಲೆ, ಒಂದು ಹಿಡಿ ಅಡಿಕೆ, ಎರಡು ದೊಡ್ಡ ಎಸಳು ಹೊಗೆಸೊಪ್ಪುಗಳನ್ನು ತೆಗೆದು ಅವರ ಕೈಗೆ ಹಾಕಿ ಹೇಳಿದಳು: 'ಇದ ತಗಂಡ್ ಹ್ವಾಗಿ, ಮನ್ಲಿ ನಂಜವ್ವನ ಕುಟ್ಟಿ ಸುಣ್ಣಸವರಿಸ್ಕಂಡ್ ಹಾಕ್ಯಳಿ. ನೋಡಿ, ನಿಮ್ಮಂತೋರೆಲ್ಲ ಮನ್ಲಿ ಎಂಡ್ತಿ ಏಳ್ದಂಗೆ ಕೇಳ್ಕಂಡಿರ್ಬೇಕು. ಗೊತ್ತಾ0ಾ್ತ?'
ಶ್ಯಾನುಭೋಗರಿಗೆ ಸ್ವಲ್ಪ ಸಿಟ್ಟೇನೋ ಬಂತು. ಆದರೆ ಅವಳನ್ನು ಹೇಗೆ ಬ0ುುಬೇಕೆಂಬುದು ತಕ್ಷಣ ತಿಳಿ0ುಲಿಲ್ಲ. ಕೈಲಿದ್ದ ಎಲೆ ಅಡಿಕೆ ಹೊಗೆಸೊಪ್ಪನ್ನು ಹಿಡಿದುಕೊಂಡು ಊರೊಳಕ್ಕೆ ಹೊರಟರು. ನೇರವಾಗಿ ಮನೆಗೆ ಹೋದಾಗ, ಲೆಕ್ಕದ ಪುಸ್ತಕ ನೋಡುತ್ತಿದ್ದ ಹೆಂಡತಿ ಇವರನ್ನು ಮಾತನಾಡಿಸಲಿಲ್ಲ. ಇವರೂ ಏನೂ ಆಡಲಿಲ್ಲ. ಕಂಬದ ಹತ್ತಿರ ಹಾಸಿದ್ದ ಮಂದಲಿಗೆ0ು ಮೇಲೆ ಉರುಟಿಕೊಂಡು ತಾಂಬೂಲ ಹೊಗೆಸೊಪ್ಪುಗಳನ್ನು ಜಗಿ0ುಲು ಪ್ರಾರಂಭಿಸಿದರು.

## ಅಧ್ಯಾ0ು 10

– 1 –

ಗಂಡನನ್ನು ಒಳಗೆ ಸೇರಿಸಿಕೊಂಡು ತನ್ನೊಬ್ಬಳನ್ನು ಇನ್ನೂ ಬಹಿಷ್ಕಾರದಲ್ಲಿ ಇಟ್ಟ ಸಂಗತಿ0ುನ್ನು ಕೇಳಿದಾಗ ನಂಜುವಿಗೆ ದುಃಖಕ್ಕಿಂತ ಹೆಚ್ಚಾಗಿ ತಿರಸ್ಕಾರ ಉಂಟಾಯಿತು.
ಧರ್ಮ, ಕರ್ಮ, ಶ್ರಾದ್ಧ ಸಂಬಂಧ ಮೊದಲಾದ ಬಗೆಗೆ ಅವಳಲ್ಲಿ ಇತರರಿಗಿಂತ ಭಿನ್ನವಾದ ಅಭಿಪ್ರಾ0ು ಬೆಳೆದಿತ್ತು. ಅವಳ ತಂದೆ ಕಂಠೀಜೋಯಿಸರು ಈ ಊರಿನಲ್ಲಿ, ಅಥವಾ ಈ ಸುತ್ತಿನಲ್ಲೇ ಮೀರಿಸುವವರಿಲ್ಲದಷ್ಟು ಪೌರೋಹಿತ್ಯ ಕಲಿತವರು. ಶುಭಾಶುಭ ಎರಡೂ ವಿಧವಾದ ಕರ್ಮಗಳ ಬಗೆಗೆ 0ಾರಿಗಾದರೂ ಸಂಶ0ು ಬಂದರೆ ಅವರ ಹತ್ತಿರ ಬಂದು ಪರಿಹರಿಸಿಕೊಂಡು ಹೋಗುತ್ತಿದ್ದರು. ಅಂಥವರು ಸ್ವತಃ ತಮ್ಮ ತಂದೆ0ು ಶ್ರಾದ್ಧ ಮಾಡುತ್ತಿರಲಿಲ್ಲ. 0ಾರು ಕೇಳಿದರೂ –'ನಾನು ಗ0ಾಕ್ಕೆ ಹೋಗಿ ಪಿಂಡ ಹಾಕಿ ಬಂದಿದೀನಿ. ಇನ್ನು ಮಾಡೊಹಾಗಿಲ್ಲ' ಎನ್ನುತ್ತಿದ್ದರು. ಗ0ುೆ0ುಲ್ಲಿ ಪಿಂಡಪ್ರದಾನ ಮಾಡಿದಮೇಲೆ ಪ್ರಾತಿಸಾಂವತ್ಸರಿಕ ಶ್ರಾದ್ಧ ಮಾಡುವ ಅಗತ್ಯವಿಲ್ಲವೆನ್ನುವ ಒಂದು ಮಂತ್ರವನ್ನೇ ಹೇಳಿಬಿಡುತ್ತಿದ್ದರು. ಆದರೆ ಅವರು ನಿಜವಾಗಿ0ೂ ಗ0ುೆಗೆ ಹೋಗಿದ್ದರೋ, ಹೋಗಿದ್ದರೂ ಅಲ್ಲಿ ಪಿಂಡಪ್ರಧಾನ ಮಾಡಿದ್ದರೋ ಎಂಬ ಬಗೆಗೆ 0ಾರಿಗೂ ನಂಬಿಕೆ ಇಲ್ಲ. ಸ್ವತಃ ಅಕ್ಕಮ್ಮನಿಗೇ ನಂಬಿಕೆ ಇಲ್ಲ. ಆದರೆ ಕಂಠೀಜೋಯಿಸರ ಎದುರು ನಿಂತು ಮಾತನಾಡುವ ಎದೆ 0ಾರಿಗುಂಟು.
ಅಪ್ಪನಾದರೂ ಇದ್ದಿದ್ದರೆ ಈ ಊರ ಜೋಯಿಸರ ಬಾಲ ಬೆಳೆ0ುುತ್ತಿರಲಿಲ್ಲ. ನಮ್ಮ ಜಮೀನು ಹೋಗುತ್ತಿರಲಿಲ್ಲ. ಒಂದು ಸಲ ಬಂದು ಗುಡುಗು ಹಾಕಿದ್ದರೆ, ಗಂಡ ಅತ್ತೆ ಎಲ್ಲರೂ ಹೆದರಿ, ಹೇಳಿದಂತೆ

ಕೇಳುತ್ತಿದ್ದರು; ಜಮೀನು ಉಳಿಯುತ್ತಿತ್ತು. ಎಲ್ಲಿಗೆ ಹೋದನೋ ಏನು ಕತೆಯೋ! ಅವನು ಖಂಡಿತ ಸತ್ತಿಲ್ಲ. ಹಿಂದೆ ನಾನು ಮಗುವಾಗಿದ್ದಾಗ ಒಂದು ಸಲ ಹೀಗೆಯೇ ಊರು ಬಿಟ್ಟು ಹೋಗಿದ್ದವನು ನಾಲ್ಕು ವರ್ಷ ಬಂದಿರಲಿಲ್ಲವಂತೆ. ಕಾಶಿ, ರಾಮೇಶ್ವರ, ಎಲ್ಲೆಲ್ಲೋ ಸುತ್ತಿಕೊಂಡು ಬಂದಿದ್ದನಂತೆ. ಈಗ ಮತ್ತೆ ಎಲಿ ್ಲಹೋದನೋ? ಆದರೆ ಈ ಸಲ ಹೋಗಿ ಆಗಲೇ ಒಂಬತ್ತು ಒಂಬತ್ತು ವರ್ಷದ ಹತ್ತಿರ ಹತ್ತಿರ ಆಯಿತಲ್ಲ. ಪಾರ್ವತಿ ಹುಟ್ಟಿದ ಎಂಟನೆಯ ತಿಂಗಳಿಗೋ ಒಂಬತ್ತನೆಯ ತಿಂಗಳಿಗೋ ಹೋದದ್ದು. ಈಗ ಅವಳಿಗೆ ಒಂಬತ್ತು ನಡೆಯುತ್ತಿದೆ. ದೇಶಾಂತರ ಸುತ್ತುವುದು ಅವನ ಹಣೆಬರಹವೋ, ಅವನು ಹೀಗೆ ದೂರ ಹೋಗುವುದು ನಮ್ಮ ಹಣೆಬರಹವೋ!

ಶ್ರಾದ್ಧದ ದಿನ ತಾಯಿಯ ಮನೆಗೆ ಹೋದಮೇಲೆ ಅವಳ ಮನಸ್ಸು ಕಸಿವಿಸಿಯಾಯಿತು, ತನ್ನ ಮನೆಯಲ್ಲಿಯೇ ಕರ್ಮ ನಡೆದಿದ್ದರೆ ಅವಳು ಉಪವಾಸವಿದ್ದು, ತಲೆಗೂ ಸ್ನಾನ ಮಾಡಿ ಅಡಿಗೆ ಮಾಡಬೇಕಾಗಿತ್ತು. ಈಗ ತನ್ನನ್ನು ದೂರ ಇಟ್ಟಿದ್ದರೂ ತಾನು ಏನಾದರೂ ತಿನ್ನಬಹುದೋ ಬೇಡವೋ? ಮನೆಯ ಸೊಸೆ ತಾನು: ಗಂಡ ಎಡಬಲಕ್ಕೆ ಹಾಕಿಕೊಂಡು ಕರ್ಮ ಮಾಡುತ್ತಿದ್ದಾರೆ. ತಾನು ಹೇಗೆ ಏನಾದರೂ ತಿನ್ನುವುದು? –ಎಂದು ಯೋಚಿಸಿದ ಅವಳು, ಹುಡುಗರಿಗೆ ಮಾತ್ರ ರೊಟ್ಟಿ ಚಟ್ನಿ ಮಾಡಿಕೊಟ್ಟಳು. ಕರ್ಮವನ್ನು ಇಲ್ಲಿ ಮಾಡಿದ್ದರೂ ಹುಡುಗರು ತಿಂಡಿ ತಿನ್ನಬಹುದಾಗಿತ್ತು.

ಮಧ್ಯಾಹ್ನದ ಪ್ರಸಾದಕ್ಕೆ ಹುಡುಗರನ್ನು ಕರೆಯುತ್ತಾರೋ ಇಲ್ಲವೋ ಎಂಬ ಬಗೆಗೆ ಅವಳಿಗೇ ಅನುಮಾನ. ಆದುದರಿಂದ ಅವರಿಗಾದರೂ ಅಡಿಗೆ ಮಾಡುವುದೋ ಬೇಡವೋ ಎಂಬುದನ್ನು ತೀರ್ಮಾನಿಸಲಾರದೆ, ಕೊನೆಗೆ ಹೇಗಾದರೂ ಆಗಲಿ ಎಂದು ಮತ್ತೆ ಎಂಟು ಹತ್ತು ರೊಟ್ಟಿ ಮಾಡಿಟ್ಟಳು. ಅವರು ಕರೆದರೆ ರೊಟ್ಟಿ ಏನೂ ಹಳಸುವುದಿಲ್ಲ. ಕರೆಯದಿದ್ದರೆ ಅದನ್ನೇ ತಿನ್ನುತ್ತವೆ.

ಹುಡುಗರೆಲ್ಲ ಸ್ಕೂಲಿಗೆ ಹೋದರು. ಪಾರ್ವತಿ, ರಾಮಣ್ಣ, ಇಬ್ಬರೂ ನಾಲ್ಕನೇ ಕ್ಲಾಸಿನಲ್ಲಿದ್ದಾರೆ. ವಿಶ್ವನಾಥ ಎರಡನೆಯ ಕ್ಲಾಸು. ನಂಜು ಕೂತು ಎಲೆ ಹಚ್ಚಿಸುತ್ತಿದ್ದಳು. ಮಧ್ಯಾಹ್ನ ಅಲ್ಲಿ ಅತ್ತೆಯ ಮನೆಯಲ್ಲಿ ಅಪರಕರ್ಮ ಶುರುವಾಗುವ ಹೊತ್ತು. ಇಲ್ಲಿಗೆ ಮಾದೇವಯ್ಯನವರು ಬಂದರು. ಇವರ ಮನೆಗೆ ಆಗಾಗ್ಯೆ ಬರುತ್ತಿದ್ದರಾದರೂ ಅವರು ಈ ಹೊತ್ತಿನಲ್ಲಿ ಎಂದೂ ಬಂದವರಲ್ಲ. ಇದು ಅವರು ಕಂತೆಭಿಕ್ಷೆ ಮುಗಿಸಿ ಊಟ ಮಾಡುವ ಹೊತ್ತು. ಹಳ್ಳಿಯ ಕಡೆ ಭಿಕ್ಷಕ್ಕೆ ಹೋಗಿದ್ದರೆ ಹೊರಗೆ ಇರುವ ಹೊತ್ತು. ಅಯ್ಯನವರು ಇನ್ನೂ ಊಟ ಮಾಡಿದಂತೆ ಕಾಣಲಿಲ್ಲ. ಮುಖ ತುಂಬ ಸಪ್ಪಗಾಗಿತ್ತು. 'ನಾವಂತೂ ಸಂಸಾರಸ್ಥರು, ಬೆಳಿಗ್ಗೆ ಎದ್ದರೆ ಕಾಷ್ಠವ್ಯಸನ. ಸನ್ಯಾಸಿಗಳಾದ ಅವರಿಗೆ ಮುಖ ಸಪ್ಪಗಾಗುವಂಥದ್ದು ಏನು ನಡೆದಿದೆಯೋ!'–ಎಂದು ಯೋಚಿಸಿಕೊಂಡೇ ನಂಜಮ್ಮ ಮಂದಲಿಗೆ ಹಾಕಿಕೊಟ್ಟು ಕೇಳಿದಳು: 'ಏನು, ಅಯ್ನೋರ ಬಿನ್ನ ತೀರಿದಂತಿಲ್ಲ.'

'ಈ ಊರಿನ ನಮ್ಮ ಜಾತಿಯೋರ ಮನ್ಲಿ ಕಂತೆಭಿಕ್ಷೆ ಮಾಡಬ್ಯಾಡ್ದು ಅಂತ ಮಾಡಿದೀನಿ ಕಣವ್ವ.'

'ಏನಾಯ್ತು?'

''ಹಳ್ಳೀಕಡೆ ತಿರುಗಿ ರಾಗಿಕಾಳು ಎತ್ತಿಕೊಂಡು ಬತ್ತೀನಿ. ಪರಸ್ಥಳದೋರು ಇನ್ಯಾರಾದ್ರೂ ಸಾದು ಸನ್ಯಾಸಿಗಳು ಗ್ರಾಮಕ್ಕೆ ಬಂದಾಗ ಗುಡೀಲಿ ಅವರಿಗೆ ಸ್ಯೆಸ್‌ಪಾಕ ಕೊಡ್ತೀನಲ್ಲ. ಊರಿನಾಗಿದ್ರೆ ನನ್ನ ಊಟ ಕಂತೆಬಿಕ್ಷದಾಗೆ ಕಳೀತಿತ್ತು. ಈ ಊರ ಬಣಜಿಗರ ಕೇರಿಯೋರು ಏನೋ ಮಾತಾಡ್ಕಂಡಿರೋ ಹಂಗೆ ಕಾಣ್ತೈತೆ. ಈಗ ಭಿಕ್ಷೆಗೆ ಹೋಗಿದ್ದೆ. ಒಂದು ನಾಕು ಮನೆಗೆ ಹೋದ್ರೆ ಯಲ್ಲಾರೂ, 'ಈ ಅಯ್ನೋರಿಗೆ ಬೆಳಿಗ್ಗೆ ಕೋರಣ್ಯದ ಬಿಕ್ಷೆ ರಾಗಿಯೂ ಬೇಕು, ಮಧ್ಯಾಹ್ನ ಕಂತೆಬಿಕ್ಷದ ಮುದ್ದೆ ಎಸರೂ ಬೇಕು' ಅಂದ್ರು. ಬ್ಯಾಸರಾಯ್ತು. ಸುಮ್ಕೆ ಬಂದ್‌ಬಿಟ್ಟೆ.''

ನಂಜಮ್ಮನಿಗೆ ವ್ಯಸನವಾಯಿತು. ಅಯ್ಯನವರು ಹಳ್ಳೀಕಡೆಯಿಂದ ತಂದ ದಿನಸಿಗಳನ್ನು ಮಾರಿ ಗಂಟು ಮಾಡಿಕೊಳ್ಳುತ್ತಿರಲಿಲ್ಲ. ಅವರದಾಗಿ ಈ ಪ್ರಪಂಚದಲ್ಲಿ ಯಾವುದೂ ಇಲ್ಲ. ಅವರು ಕಷ್ಟಪಟ್ಟು ಭಿಕ್ಷೆ ಬೇಡುವುದು ಪರಸ್ಥಳದವರಿಗೆ ಅನ್ನವಿಕ್ಕುವುದಕ್ಕಾಗಿ.

'ಅಯ್ನೋರೇ, ನೀವು ಗುಡಿಗೆ ಹೋಗಿ ಅಡಿಗೆ ಮಾಡಿಕೊಳ್ಳೋದಿಲ್ವೆ?'

'ಮನ್ಸಿಲ್ಲ ಕಣವ್ವ. ಹ್ವಟ್ಟೆ ಏನೋ ಹಸೀತೈತೆ. ನೀನೇನಾದ್ರೂ ಇಕ್ಕಿದ್ರೆ ಉಣ್ತೀನಿ.'

ನಂಜಮ್ಮನಿಗೆ ಹೆಚ್ಚು ಆಶ್ಚರ್ಯವಾಗಲಿಲ್ಲ. ಜಂಗಮರಾದ ಈ ಸನ್ಯಾಸಿಗಳು ಇದುವರೆಗೂ ತನ್ನ ಮನೆಯಲ್ಲಿ ಒಂದು ಹನಿ ನೀರೂ ಕುಡಿದಿರಲಿಲ್ಲ. ಈಗ ಅವರೇ ಊಟ ಮಾಡುವುದಾಗಿ ಕೇಳುತ್ತಾರೆ. 'ಹಂಗೇ ಕುಂತ್ಕಳಿ, ಬ್ಯಾಗ ಒಂದಿಷ್ಟು ಅನ್ನ ಸಾರು ಮಾಡ್ತೀನಿ'–ಅವಳೆಂದುದಕ್ಕೆ, 'ಅದೆಲ್ಲ ಬ್ಯಾಡ. ಏನು ಮಾಡಿದ್ದೈತೋ ಅದ ಇಕ್ಕವ್ವ' ಎಂದರು. ನಂಜಮ್ಮ ಒಳಗೆ ಹೋಗಿ, ಮಾಡಿಟ್ಟಿದ್ದ ರೊಟ್ಟಿ ಚಟ್ನಿಗಳ ಜೊತೆಗೆ ಒಂದು ಅಲ್ಯೂಮಿನಿಯಂ ಬಟ್ಟಲಿನ ತುಂಬ ಮೊಸರನ್ನೂ ತಂದು ಅವರ ಮುಂದಿಟ್ಟಳು. ಎದ್ದು ಕೈ ತೊಳೆದುಕೊಂಡು ಅವರು ರೊಟ್ಟಿ ಮುರಿಯಲು ಪ್ರಾರಂಭಿಸಿದರು, ಅವರನ್ನು ನೋಡಿದ ನಂಜಮ್ಮನಿಗೆ ತಕ್ಷಣ ತನ್ನ ಮಾವನವರ ಶ್ರಾದ್ಧವು ಅತ್ತೆಯ ಮನೆಯಲ್ಲಿ ನಡೆಯುತ್ತಿರುವ ನೆನಪಾಯಿತು. ಇಷ್ಟು ಹೊತ್ತಿಗೆ ಅಲ್ಲಿ ಬ್ರಾಹ್ಮಣ ಭೋಜನ ಶುರುವಾಗಿರಬಹುದು. ಅವಳು ಹೇಳಿದಳು: 'ಅಯ್ನೋರೇ, ಇವತ್ತು ನಮ್ಮ ಮಾವ್ನೋರ

ವೈದೀಕ. ನನ್ನೊಬ್ಬಳಿಗೆ ಬಹಿಷ್ಕಾರ ಇನ್ನೂ ಇಟ್ಟಿದಾರೆ ಗೊತ್ತೆ?'
'ಗೊತ್ತು, ಗೊತ್ತು. ೦ಯಲ್ಲಾನೂ ತುಪ್ಪದಾಗೇ ಮಾಡಬೇಕು, ಇಲ್ದಿದ್ರೆ ನಾನು ಬಿನ್ನಾ ತೀರ್ಸಾಕ್ ಬರಾಕಿಲ್ಲ ಅಂತ ಬ್ರಾಹ್ಮಣೋತ್ತಂರು ಅಂದ್ರಂತೆ. ಅಪ್ಪಣ್ಣ೦ಯ್ಯ ಬೆಳ್ಳಿ ಪಂಚಪ್ರೇನ ಕಾಶಿಂಬಡ್ಡಿ ಅಂಗ್ಡೀಲಿ ಎಲ್ಡು ರೂಪಾಯಿಗೆ ಅಡುವು ಮಡಗಿ ಬೆಣ್ಣೆ ತಂದ. ನಾನು ಒಂಬತ್ತು ಹತ್ತು ಗಂಟೇನಾಗ ಗುಡಿ ಮುಂದೆ ಕುಂತಿದ್ದೆ. ದಾರೀಲಿ ಬತ್ತಾ ನನ್ನ ಕಂಡು ಹೇಳ್ದ. ಜೋಯಿಸರಿಗೆ ಜ್ವರ ಬಂತಂತೆ. ತುಪ್ಪದ್ದಾದ್ರೆ ವಡೆ, ಉಂಡೆ, ೦ಯಲ್ಲಾ ಭೋಜನ ಮಾಡ್ತಾರಂತೆ. ಎಣ್ಣೇದಾದ್ರೆ ವಲ್ಲೆ ಅಂದ್ರಂತೆ.'
ಇನ್ನು ಬಡ್ಡಿ ತೆತ್ತು ಅವರು ಬೆಳ್ಳಿ೦ಯ ಪಾತ್ರೆ ಬಿಡಿಸಿಕೊಳ್ಳುವುದಿಲ್ಲವೆಂಬುದನ್ನು ೦ಯಾರೂ ಬಾಯಿ ಬಿಟ್ಟು ಮಾತನಾಡಿಕೊಳ್ಳುವ ಅಗತ್ಯವಿರಲಿಲ್ಲ. 'ಅ೦ಯ್ನೋರೇ, ಈ ತಿಥಿ ಮತಿ ಅನ್ನೋದೆಲ್ಲ ನಿಜವೆ? ಇಂಥ ಜೋ೦ಯ್ಸರುಗಳನ್ನು ಕರ್ದು ಅನ್ನ ಹಾಕೂದು ಅಂದ್ರೆ ಅದೆಲ್ಲ ಸುಳ್ಳು ಅನ್ಸುತ್ತೆ.'
'ಅದು ನಿಜವೋ ಸುಳ್ಳೊ ೦ಯಾರಿಗೆ ಗೊತ್ತು? ನಿಜವಿದ್ರು ಇರ್ಭೌದು. ರಾಮಣ್ಣ ಶ್ಯಾನುಭಾಗರಿದ್ದಾಗ ನಿಮ್ಮತ್ತೆ ಒಂದಿನವೂ ಸಂಜೆಗಂಟ ಹ್ವಟ್ಟೆಗೆ ಹಿಟ್ಟು ಕಾಣಿಸ್ಲಿಲ್ಲ. ಗಂಡನ್ನ ನ್ಯಟ್ಟಗೆ ನಿಗಾ ಮಾಡ್ಲಿಲ್ಲ. ಈಗ ಹಳ್ಳಿಮ್ಯಾಲೆ ತಿರುಪೆ ಮಾಡ್ಕಂಡ್ ಬಂದಿ, ತುತೀ ಮಾಡ್ತೈತೆ ಆ ೦ಯಮ್ಮ.'
'ನಮ್ಮ ಮಾವ್ನೋರು ಬದುಕಿದ್ದಾಗ್ಲೂ ನೀವು ಈ ಊರಲ್ಲೇ ಇದ್ರಾ?'
'ಚಿನ್ನ೦ಯ್ಯ ಹುಟ್ಟಾದು ಮೂರು ವರ್ಷಕ್ಕೆ ಮುಂಚೆ ನಾನು ಇಲ್ಲಿಗೆ ಬಂದುದ್ದು.'
'ಹಾಗಾದ್ರೆ ನಿಮ್ಮೂರು ೦ಯಾವ್ದು?'
'೦ಯಾವ್ದಾದ್ರೆ ಏನು? ಶಿವ ಹುಟ್ಸಿದ ಮ್ಯಾಲೆ ಸಾ೦ಯೂಗಂಟ ೦ಯಾವ್ದಾದ್ರೂ ಒಂದೂರಾಗಿರಬೇಕಲ್ಲ'–ಎಂದರೇ ಹೊರತು ತಮ್ಮ ಊರಿನ ಹೆಸರು ಹೇಳಲಿಲ್ಲ. ಅವರ ಊರು ೦ಯಾರಿಗೂ ಗೊತ್ತಿಲ್ಲ. ಈ ಊರಿಗೆ ಬಂದ ಹೊಸತರಲ್ಲಿ ಅವರು ಹುಬ್ಬಳ್ಳಿ ಧಾರವಾಡದ ಕಡೆ೦ಯ ಉತ್ತರ ಸೀಮೆ೦ಯವರ ಹಾಗೆ ಮಾತನಾಡುತ್ತಿದ್ದರಂತೆ. ಬೋರೆಸಂತೆ, ರಾಮನಾಥಪುರ ಜಾತ್ರೆ ಮೊದಲಾದ ಕಡೆಗಳಲ್ಲಿ ಹೋರಿ ಜೋಡಿಗಳನ್ನು ಕೊಳ್ಳಲು ಬರುತ್ತಿದ್ದ ಉತ್ತರ ಸೀಮೆ೦ಯವರ ರೀತಿ ಇವರ ಮಾತು ಎಂದು ಆಗ ಜನರು ಗುರುತಿಸಿದ್ದರಂತೆ. ಮೊದಮೊದಲು ರಾಗಿ ಮುದ್ದೆ ನುಂಗುವುದು ಬರುತ್ತಿರದ ಇವರು ಬರೀ ರೊಟ್ಟಿ ತಿನ್ನುತ್ತಿದ್ದರಂತೆ. ಆದರೆ ಒಂದೆರಡು ವರ್ಷದಲ್ಲಿ ಇಲ್ಲಿ೦ಯವರ ಹಾಗೆ೦ಯೇ ಮಾತನಾಡುವುದನ್ನೂ ಕಲಿತರು, ಮುದ್ದೆ ಮುರಿ೦ಯುವುದನ್ನೂ ಅಭ್ಯಾಸ ಮಾಡಿಕೊಂಡರು. 'ನಿಮ್ದು ೦ಯಾವೂರು?'–ಎಂದರೆ, 'ರಾಮಸಂದ್ರದ ಚೋಳೇಶ್ವರನ ಗುಡಿ' ಎನ್ನಲು ಪ್ರಾರಂಭಿಸಿದರು. ಈಗ ೦ಯಾರೂ ಅವರನ್ನು ಈ ಪ್ರಶ್ನೆ ಕೇಳುವುದಿಲ್ಲ. ಏಕೆಂದರೆ ಚೆನ್ನಿಗರಾ೦ಯರಂತಹ ನಡುವ೦ಯಸ್ಸಿನವರಿಗಿಂತ ಅವರು ರಾಮಸಂದ್ರಕ್ಕೆ ಹಳಬರು. ನಂಜಮ್ಮ ಅವರ ಊರಿನ ವಿಷ೦ಯವಾಗಿ ಮತ್ತೆ ಕೇಳಲಿಲ್ಲ.
ಅಷ್ಟರಲ್ಲಿ ಅವರು ರೊಟ್ಟಿ ತಿಂದು ಮುಗಿಸಿದ್ದರು. ಮಧ್ಯಾಹ್ನದ ಊಟಕ್ಕೆಂದು ಹುಡುಗರು ಮನೆಗೆ ಬಂದರು. ಅಮ್ಮ ಕೊಟ್ಟ ರೊಟ್ಟಿ ಚಟ್ನಿಗಳನ್ನು ಗೊಣಗದೆ ತಿಂದು ನೀರು ಕುಡಿದು ಮತ್ತೆ ಸ್ಕೂಲಿಗೆ ಹೋದರು. ನಂಜಮ್ಮ ಮಾತ್ರ ತಿನ್ನಲಿಲ್ಲ. ಹುಡುಗರು ತಿಂದ ಮೇಲೆ ಏನೂ ಉಳಿ೦ಯಲಿಲ್ಲ. ಮತ್ತೆ ಮಾಡಲು ಮನಸ್ಸಿರಲಿಲ್ಲ. ಅ೦ಯ್ಯನವರು ಹೊರಗೆ ಕುಳಿತೇ ಇದ್ದರು. ಅವಳು ಹೊರಗೆ ಬಂದು, ಅದುವರೆಗೂ ಮನಸ್ಸಿನಲ್ಲೇ ೦ಯೋಚಿಸುತ್ತಿದ್ದ ಒಂದು ಪ್ರಶ್ನೆ೦ಯನ್ನು ಕೇಳಿದಳು: 'ಅ೦ಯ್ನೋರೇ, ಮತ್ತೆ ನಿಮ್ಮುನ್ನ ಒಂದು ಪ್ರಶ್ನೆ ಕೇಳ್ತೀನಿ. ಉತ್ತರ ಹೇಳ್ಬೇಕು ಅನ್ಸಿದ್ರೆ ಹೇಳಿ. ಇಲ್ದೆ ಇದ್ರೆ ಬ್ಯಾಡಿ. ನೀವು ಮನೆ ಮಠ ಬಿಟ್ಟು ೦ಯಾಕೆ ಹೀಗೆ ಬಂದುಬಿಟ್ರಿ?'
'ಮನೆ ಮಠ ಬಿಟ್ಟು ಎಲ್ಲಿ ಬಂದೆನವ್ವಾ? ಸಂಸಾರ ಎಲ್ಲಿತ್ತು? ಹುಟ್ಟಿದಾಗ್ಲೇ ಸನ್ಯಾಸಿ೦ಯಾಗಿ ಹುಟ್ಟಿದೆ. ಹಿಂಗೆ ಊರೂರು ಅಲ್ಕಂಡು ಬಂದೆ. ಇಲ್ಲಿರಾ ಮನಸ್ಸಾ೦ಯ್ತು ಇದೀನಿ' –ಎಂದರೇ ಹೊರತು ಅವಳ ಪ್ರಶ್ನೆಗೆ ಉತ್ತರ ಹೇಳಲಿಲ್ಲ. ಅವರಿಗೆ ಮನೆ, ಸಂಸಾರ, ಇತ್ತೋ ಇರಲಿಲ್ಲವೋ ಎಂಬುದೂ ಒಗಟಾಗಿ೦ಯೇ ಉಳಿಯಿತು.
ಅವಳು ಅವರ ಹಿಂದಿನ ಜೀವನದ ಬಗೆಗೆ ೦ಯೋಚಿಸುತ್ತಾ ಕುಳಿತಳು. ಮದುವೆ೦ಯಾಗಿದ್ದರೋ ಇಲ್ಲವೋ, ಅಥವಾ ಆದಮೇಲೆ ಸಂಸಾರ ಬಿಟ್ಟು ಹೀಗೆ ಹೊರಟುಬಂದರೋ! ಬಳ್ಳಾರಿ ಸೀಮೆ೦ಯವರಂತೆ; ಹೆಂಡತಿ ಏನೋ ಚಾತೂರ ಕೆಲಸ ಮಾಡಿದಳಂತೆ; ಅದಕ್ಕೆ ಬೇಜಾರಿನಿಂದ ಎಲ್ಲವನ್ನೂ ಬಿಟ್ಟು ಹೀಗೆ ಹೊರಟುಬಂದರಂತೆ–ಎಂದು ಪಕ್ಕದ ಮನೆ೦ಯ ಪುಟ್ಟವ್ವ ಒಂದು ದಿನ ನಂಜಮ್ಮನಿಗೆ ಹೇಳಿದಳು. 'ಇದು ನಿಂಗೆ ಹ್ಯಾಗೆ ಗೊತ್ತು?'– ಎಂದು ಕೇಳಿದುದಕ್ಕೆ ಅವಳು, 'ಹಂಗಂತ ೦ಯಾ೦ರ್ಯಾರೋ ಅಂದ್ಕಂತಿದ್ರು ಕಣವ್ವ. ನಾನು ಹುಡ್ಗಿ೦ಯಾಗಿದ್ದಾಗ ಅಂತಿದ್ದುದು. ಆಗ ಈ ವ೦ಯ್ನೋರು ಮುದುಕ್ರಾಗಿರ್ಲಿಲ್ಲ' ಎಂದಿದ್ದಳು. ಪುಟ್ಟವ್ವನ ಮಾತನ್ನು ಸಹ ನಂಬುವಂತಿಲ್ಲ. ಅ೦ಯ್ಯನವರು ತಾವಾಗಿ೦ಯೇ ಈ ಬಗೆಗೆ ಎಂದೂ ೦ಯಾರಲ್ಲಿ೦ಯೂ ಬಾಯಿ ಬಿಡುವುದಿಲ್ಲ ಎಂದು ೦ಯೋಚಿಸಿದ ಅವಳು, ಹೇಳದಿದ್ದರೆ ಬ್ಯಾಡ, ಅವರ ಮನಸ್ಸಿನ ದುಃಖ ಏನಿದೆ೦ಯೋ!' ಎಂದು ಸುಮ್ಮನಾದಳು.

ಒಂದು ಮಾತನ್ನೂ ಆಡದೆ ಇಬ್ಬರೂ ಸ್ವಲ್ಪ ಹೊತ್ತು ಕುಳಿತಿದ್ದರು. 'ಏನು ಏಚ್ನೆ ಮಾಡ್ತಾ ಕುಂತ್ಕಂಡೆಯವ್ವಾ?'–ಅಯ್ಯನವರು ಕೇಳಿದರು.

'ಏನೂ ಇಲ್ಲ.'

'ಈಟು ದಿನ ಈ ಊರ ಋಣವಿತ್ತು. ಬ್ಯಾರೆ ಎಲ್ಲಾರ ಹ್ವಾಗ್ ಬೇಕು ಅಂತ ಯೋಚಿಸ್ತಾ ಇದೀನಿ.'

'ಅಯ್ನೋರೇ, ನೀವು ಹೇಳಿ ಕೇಳಿ ಸನ್ಯಾಸಿಗಳು. ಯಾರೋ ತಿಳಿವಳಿಕೆ ಇಲ್ಲದ ನಾಕು ಜನ ಏನೋ ಅಂದ್ರೆ ನೀವು ಬೇಜಾರುಪಟ್ಟುಕೋಭೌದಾ? ನೀವು ಯಾವ ಊರಿಗೆ ಹೋದ್ರೂ ಇಂಥೋರು ಇರ್ತಾರೆ, ಅಂಥೋರೂ ಇರ್ತಾರೆ.'

'ಅದೂ ನಿಜ ಕಣವ್ವ'– ಎಂದರು. ಅವರಿಗೆ ಹೆಚ್ಚು ಮಾತನಾಡುವ ಲಹರಿ ಇರಲಿಲ್ಲವೆಂದು ಕಾಣುತ್ತದೆ. ಸ್ವಲ್ಪ ಹೊತ್ತಿನಲ್ಲಿ ಎದ್ದು ಗುಡಿಗೆ ಹೊರಟುಹೋದರು.

– 2 –

ಮಾದೇವಯ್ಯನವರು ಆ ದಿನ ಬೆಳಿಗ್ಗೆ ಹಳ್ಳಿಯ ಕಡೆ ಹೋದವರು ಎರಡು ಮೂರು ತಿಂಗಳಾದರೂ ರಾಮಸಂದ್ರಕ್ಕೆ ಹಿಂತಿರುಗಲಿಲ್ಲ. ಅವರು ಊರು ಬಿಟ್ಟು ಹೊರಟೇ ಹೋದರೇನೋ ಎಂದು ನಂಜಮ್ಮ ವ್ಯಾಕುಲಗೊಂಡಳು. ಒಳ್ಳೆಯ ಮನುಷ್ಯ ಎಂದು ಕರೆಯಬಹುದಾದ ವ್ಯಕ್ತಿ ಈ ಊರಿನಲ್ಲಿದ್ದವರು ಅವರೊಬ್ಬರೇ. ಅವರೂ ಬೇಸರಪಟ್ಟುಕೊಂಡು ಹೊರಟುಹೋಗಿದ್ದಾರೆ. ಮತ್ತೆ ಬರುತ್ತಾರೋ ಇಲ್ಲವೋ! ಅವರ ಸಾಮಾನುಗಳು ಮಾತ್ರ ಗುಡಿಯಲ್ಲಿಯೇ ಇವೆ. ಎರಡು ಮೂರು ಪಲ್ಲ ರಾಗಿ, ಎರಡು ಮೂಟೆ ಹುರುಳೀಕಾಳು, ಒಂದು ಗುಡಾಣ ಮೆಣಸಿನಕಾಯಿ, ಕೆಲವು ಅಲ್ಯುಮಿನಿಯಂ ಪಾತ್ರೆಗಳು, ನಾಲ್ಕೈದು ಚಾಪೆಗಳನ್ನು ಇಟ್ಟಿದ್ದ ಕೋಣೆಗೆ ಅವರು ಬೀಗ ಹಾಕಿಕೊಳ್ಳುತ್ತಿದ್ದರು. ಬೀಗದ ಕೈ ತೆಗೆದುಕೊಂಡು ಹೋಗಿದ್ದಾರಂತೆ. ಅಂದರೆ ಒಂದಲ್ಲ ಒಂದು ದಿನ ಹಿಂತಿರುಗುತ್ತಾರೆಂಬ ನಿರೀಕ್ಷೆ ಅವಳಿಗಿತ್ತು. ಅವರು ಹೋದಮೇಲೆ ದೇವಸ್ಥಾನದಲ್ಲಿ ಕಳೆಯೇ ಇರಲಿಲ್ಲ. ನಂಜಮ್ಮ ಅಲ್ಲಿಗೆ ಎಂದೂ ಹೋದವಳಲ್ಲ. ಈಗ ಚೆನ್ನಿಗರಾಯರಂಥವರಿಗೂ ಅಲ್ಲಿಗೆ ಹೋಗಿ ಕೂರಲು ಯಾವ ಆಕರ್ಷಣೆಯೂ ಇರಲಿಲ್ಲ.

ಪಾರ್ವತಿ, ರಾಮಣ್ಣ ಇಬ್ಬರೂ ಪ್ರೈಮರಿ ಸ್ಕೂಲು ಮುಗಿಸಿದರು. ರಾಮಣ್ಣ ತುಂಬ ಜಾಣ ಹುಡುಗ. ಸ್ಕೂಲಿಗೇ ಮೊದಲನೆಯವನಾಗಿದ್ದಾನೆಂದು ಮೇಷ್ಟರು ಸೂರಪ್ಪನವರು ಹೇಳುತ್ತಿದ್ದರು. ಹವಳ ಪೋಣಿಸಿದಷ್ಟು ದುಂಡಗೆ ಅಕ್ಷರ ಬರೆಯುತ್ತಿದ್ದ. ಶ್ಯಾನುಭೋಗಿಕೆ ಪುಸ್ತಕಕ್ಕೆ ತಪ್ಪಿಲ್ಲದೆ ರೂಲು ಹಾಕುತ್ತಿದ್ದ. ಅಲ್ಪಪ್ರಾಣ ಮಹಾಪ್ರಾಣ ಹ್ರಸ್ವದೀರ್ಘಗಳ ತಪ್ಪಿಲ್ಲದೆ ಕನ್ನಡದಲ್ಲಿ ಏನನ್ನಾದರೂ ಓದುತ್ತಿದ್ದ. ಮೂರು ಜನ ಮಕ್ಕಳಿಗೂ ನಂಜಮ್ಮ ಶಾಂತಾಕಾರಂ ಭುಜಗ ಶಯನಂ, ಭಜಗೋವಿಂದಂ ಮೂಢಮತೇ, ಮೊದಲಾಗಿ ಅನೇಕ ಸ್ತೋತ್ರಪಾಠಗಳನ್ನು ಹೇಳಿಕೊಟ್ಟಿದ್ದಳು. ನಳಚರಿತ್ರೆ, ಲವಕುಶ ಕಾಳಗಗಳನ್ನು ಸಹ, ಪಾರ್ವತಿ ರಾಮಣ್ಣರು ಬಾಯಿಪಾಠ ಮಾಡಿದ್ದರು. ಶ್ಯಾನುಭೋಗಿಕೆ ಮಾಡಲು ಇದಕ್ಕಿಂತ ವಿದ್ಯೆ ಬೇಕೆ? ಆದರೆ ನಂಜಮ್ಮನ ಯೋಚನೆ ಬೇರೆಯೇ ಇತ್ತು. ಈ ಕೆಲಸ ತನ್ನ ಮಕ್ಕಳಿಗೆ ಬೇಡ. ಅವು ಓದಿ ಯಾವುದಾದರೂ ನೌಕರಿ ಮಾಡಬೇಕು. ಕೊನೆಯ ಪಕ್ಷ ಶೇಕ್ದಾರಿಕೆ ಮಾಡುವಷ್ಟಾದರೂ ವಿದ್ಯೆ ಕಲಿಯಬೇಕು.

'ರಾಮಣ್ಣನನ್ನು ಮುಂದಕ್ಕೆ ಮಿಡ್ಲ್‌ಸ್ಕೂಲು ಓದಿಸಿ; ಬಿಡಬೇಡಿ'–ಸೂರಪ್ಪ ಮೇಷ್ಟರು ಹೇಳಿದರು. ಮಿಡ್ಲ್‌ಸ್ಕೂಲು ಇರುವುದು ಕಂಬನಕೆರೆಯಲ್ಲಿ, ರಾಮಸಂದ್ರಕ್ಕೆ ಐದು ಮೈಲಿ ದೂರ. ಆ ಊರಿನಲ್ಲಿ ಹದಿನೈದು ಇಪ್ಪತ್ತು ಬ್ರಾಹ್ಮಣರ ಮನೆಗಳಿವೆಯಂತೆ. ಯಾರಾದರೂ ಗಂಡಸರು ಹೋಗಿ ವಾರ ಮಾಡಿಕೊಟ್ಟು ಬಂದರೆ ಹುಡುಗ ಅಲ್ಲಿಯೇ ಇದ್ದು ಓದಬಹುದು. ಶನಿವಾರ ಊರಿಗೆ ಬಂದು ಸೋಮವಾರದ ಊಟ ಹೆಗಲಿಗೆ ಹಾಕಿಕೊಂಡು ಸ್ಕೂಲಿನ ಹೊತ್ತಿಗೆ ಹೋದರೆ ಒಟ್ಟು ನಾಲ್ಕು ವಾರ ಸಿಕ್ಕಿದರೆ ಸಾಕು. ಶನಿವಾರ ಮಧ್ಯಾಹ್ನಕ್ಕೆ ಯಾರಾದರೂ ಊಟ ಹಾಕಿದರೆ ಸರಿ. ಶೇಕ್ದಾರರನ್ನು ಕೇಳಿದರೆ ಒಂದು ವಾರ ಕೊಡಬಹುದು. ಇನ್ನು ನಾಲ್ಕು ದಿನಕ್ಕೆ ಯಾರನ್ನು ಕೇಳುವುದು? ಸೂರಪ್ಪ ಮೇಷ್ಟರಿಗೋ ದ್ಯಾವರಸಯ್ಯನವರಿಗೋ ಅಲ್ಲಿ ಗುರುತಿನವರಿರಬಹುದು.

ಆದರೆ ಇನ್ನೊಬ್ಬರ ಮನೆಯಲ್ಲಿ ಊಟ ಮಾಡಲು ರಾಮಣ್ಣ ಒಪ್ಪಲಿಲ್ಲ. ಹುಡುಗನಿಗೆ ಸಂಕೋಚವೋ ಅಥವಾ ಭಯವೋ. ದಿನವೂ ಊರಿನಿಂದ ಕಂಬನಕೆರೆಗೆ ನಡೆದೇ ಹೋಗಿ ಬರುತ್ತೇನೆಂದು ಹೇಳಿದ. ಹೋಗುತ್ತಾ ಐದು ಮೈಲಿ, ಬರುತ್ತಾ ಐದು ಮೈಲಿ. ರಾಮಸಂದ್ರದ ಅಮ್ಮನ ಗುಡಿಯ ಆಚೆ ಮುದಿಮಾವಿನ ಮರದ ಕೆಳಗಿನಿಂದ ಹಾಯ್ದು ಕಬ್ಬಳ್ಳಿ ಬುಗವನ್ನು ಏರಿ ಇಳಿದು ಹುತ್ತದ ದಿಬ್ಬದ ಮಗ್ಗುಲಿಗೆ ನಡೆಯಬೇಕು. ಆ ದಿಬ್ಬದ ತುಂಬ ಬರೀ ಹುತ್ತಗಳೇ ಇವೆ. ಅವುಗಳ ಒಳಗೆ ಎಷ್ಟು ಸಾವಿರ ಹಾವುಗಳಿವೆಯೋ. ಕೋಡುಗಳಂತೆ ಬೆಳೆದು ನಿಂತಿರುವ ಅವುಗಳ ಬಾಯಿಯನ್ನು ನೋಡಿದರೇ ಹೆದರಿಕೆಯಾಗುತ್ತೆ. ಅದರ ಆಚೆಗೆ ಗೌಡನ ಕೊಪ್ಪಲು. ಮುಂದೆ ಪಾಪಾಸುಕಳ್ಳಿಯ ಓಣಿಯಿಂದ ಹೋದರೆ ಕಂಬನಕೆರೆ. ರಾಮಣ್ಣ ಇನ್ನೂ ಒಂಬತ್ತು ವರ್ಷದ ಹುಡುಗ. ಒಬ್ಬನೇ ಈ ದಾರಿಯಲ್ಲಿ ಹೋಗಿಬರಬೇಕು. ಆದರೆ ಕಷ್ಟ ಪಡದೆ ವಿದ್ಯೆ ಬರುವುದು ಹೇಗೆ? ಸೂರಪ್ಪ ಮೇಷ್ಟರು ಕೊಟ್ಟ ಪ್ರೈಮರಿ ಸ್ಕೂಲಿನ ಸರ್ಟಿಫಿಕೇಟನ್ನು ದೇವರ ಮುಂದಿಟ್ಟು

ಪೂಜೆ ಮಾಡಿ ಕಣ್ಣಿಗೆ ಒತ್ತಿಕೊಂಡು ಕೈಗೆ ತೆಗೆದುಕೊಂಡ ಮೇಲೆ ನಂಜಮ್ಮ ಮಗನಿಗೆ ಮಾಡಿದ್ದ ರೊಟ್ಟಿ ಚಟ್ನಿಯನ್ನು ಕಟ್ಟಿ ಕೊಟ್ಟಳು. ಸ್ಕೂಲಿಗೆ ಹೋಗಿ ಸೇರಿಸಿ ಬರಲು ತಾವು ಹೋಗುತ್ತೇವೆಂದು ಚೆನ್ನಿಗರಾಯರೇನೋ ಒಪ್ಪಿಕೊಂಡಿದ್ದರು. ಹೊರಡುವ ದಿನ ಬೆಳಿಗ್ಗೆ ಏಳು ಗಂಟೆಗೆ ಏಳಬೇಕಾದಾಗ ಮುಸುಕಿನ ಒಳಗೇ, 'ನಾಳೆ ಹೋದ್ರಾತು' ಎಂದರು. ಆದರೆ ಮೊದಲೇ ಪಂಚಾಂಗ ನೋಡಿ ನಿಷ್ಕರ್ಷಿಸಿದ್ದ ದಿನವನ್ನು ಬಿಡುವಂತಿರಲಿಲ್ಲ. ಮಗನ ಜೊತೆಗೆ ನಂಜಮ್ಮನೇ ಹೊರಟಳು. ದೇವರಿಗೆ, ತಾಯಿಗೆ, ಅಕ್ಕ ಪಾರ್ವತಿಗೆ ರಾಮಣ್ಣ ನಮಸ್ಕಾರ ಮಾಡಿದ. ಮಲಗಿದ್ದವರಿಗೆ ನಮಸ್ಕಾರ ಮಾಡಬಾರದಲ್ಲ, ತೀರ್ಥರೂಪರು ಮೇಲೆ ಏಳಲಿಲ್ಲವಾದುದರಿಂದ ಅವರಿಗೆ ಸಲ್ಲಲಿಲ್ಲ. ತಾಯಿ ಮಗ, ಇಬ್ಬರೂ ಸ್ಕೂಲಿಗೆ ಹೋದರು. ಪೋಷಕರ ರುಜುವಿನ ಜಾಗದಲ್ಲಿ ತಾಯಿಯ ಸಹಿ ಹಾಕಿಸಿ ಎಂಟಾಣೆ ಪ್ರವೇಶ ಶುಲ್ಕದೊಡನೆ ಹೆಡ್ಮಾಸ್ಟರು ಹುಡುಗನನ್ನು ಸ್ಕೂಲಿಗೆ ಸೇರಿಸಿಕೊಂಡರು. ಅಲ್ಲಿಗೆ ಹೋಗಿ ಉಳಿದ ಹುಡುಗರನ್ನು ನೋಡಿದಾಗ ನಂಜಮ್ಮನಿಗೆ ಎನಿಸಿತು: ತನ್ನ ಮಗನಿಗೆ ಒಂದು ಲುಂಗಿಯ ಪಂಚೆ ತಂದು ಕೊಡಬೇಕು. ತಲೆಗೆ ಒಂದು ಕರಿ ಟೋಪಿ ಬೇಕು. ಇದು ಮಿಡ್ಲ್‌ಸ್ಕೂಲು. ಬರೀ ಚಡ್ಡಿ ಹಾಕಿಕೊಂಡು ಹೋಗುವಂತಿಲ್ಲ.

ಲುಂಗಿ ಎಂದರೆ ಎರಡಾದರೂ ಬೇಕು. ಒಂದನ್ನು ಒಗೆದರೆ ಇನ್ನೊಂದು ಬೇಕಲ್ಲ. ಎರಡು ಲುಂಗಿ ಒಂದು ಟೋಪಿಗೆ ಒಟ್ಟು ಎರಡು ರೂಪಾಯಿ ಬೇಕು. ಅಲ್ಲದೆ ಪುಸ್ತಕವಾಗಬೇಕು. ಸೀಸದ ಕಡ್ಡಿ. ಎಕ್ಸರ್‌ಸೈಜು ಪುಸ್ತಕ, ಅವನ್ನೂ ರೊಟ್ಟಿ ಚಟ್ನಿಗಳನ್ನೂ ಹಾಕಿಕೊಳ್ಳಲು ಒಂದು ಬಣ್ಣದ ಕೈಚೀಲ. ಒಟ್ಟು ಏಳೆಂಟು ರೂಪಾಯಿಯಾದರೂ ತಿನ್ನುತ್ತದೆ. ಮನೆಯಲ್ಲಿ ಅಷ್ಟು ದುಡ್ಡಿಲ್ಲ. ಅಟ್ಟದ ಮೇಲೆ ಹಚ್ಚಿಸಿ ಇಟ್ಟಿದ್ದ ಎಲೆಗಳ ಪಿಂಡಿಯಿತ್ತು. ಈ ಸಲ ಮದುವೆಯ ಕಾಲದಲ್ಲಿ ಹಳ್ಳಿಗಳವರೇ ಬಂದು ಎಲೆಗಳನ್ನು ಮನೆಯಿಂದ ಕೊಂಡು ಹೋಗಿದ್ದರು. ಉಳಿದದ್ದು ಅಟ್ಟದ ಮೇಲಿದೆ. ಮನೆಗೆ ಬಂದ ನಂಜಮ್ಮ ಅಟ್ಟ ಹತ್ತಿ ಎಣಿಸಿ ನೋಡಿದಳು. ಒಟ್ಟು ನೂರು ಪಿಂಡಿಗಳಿವೆ. ಪಿಂಡಿಗೆ ಏಳಾಣೆ ಅಂದರೆ ನಲವತ್ತನಾಲ್ಕೂ ಮುಕ್ಕಾಲು ರೂಪಾಯಿ ಆಯಿತು. ಒಟ್ಟಿಗೆ ಕೊಟ್ಟುಬಿಡಬೇಕು. ಆದರೆ ಬರೀ ನೂರು ಪಿಂಡಿಗಾಗಿ ತಿಪಟೂರಿಗೆ ಒಂದು ಗಾಡಿ ಹೂಡುವುದೆಂದರೆ ಬಾಡಿಗೆ ದಂಡ. ತಕ್ಷಣದಲ್ಲಿ ದುಡ್ಡು ಎಲ್ಲಿಂದ ಬರಬೇಕು?

ಅವಳು ಸರ್ವಕ್ಕನಿಗೆ ಹೇಳಿಕಳಿಸಿದಳು. ಸರ್ವಕ್ಕನ ಹತ್ತಿರವೂ ಎಂಬತ್ತು ಪಿಂಡಿಯಷ್ಟು ಎಲೆ ಇತ್ತು. ಇಬ್ಬರದೂ ಸೇರಿಸಿ ಕಳಿಸಿದರೆ ಗಾಡಿ ಬಾಡಿಗೆ ಅರ್ಧ ಅರ್ಧ ಹಂಚಿಕೊಳ್ಳಬಹುದು. ಸರ್ವಕ್ಕ ಹೇಳಿದಳು: 'ಯಾವುದೋ ಕೋಲ್ಟು ಸಾಕ್ಷಿಗೆ ನಮ್ಮೋರು ನಾಳಿಕ್ ತಿಪ್ಟೂರಿಗೆ ಓಯ್ತಾರೆ. ಕಮಾನು ಗಾಡೀಲಿ ಒಬ್ರೇ ಓಗಾದು. ಅದ್ರಾಗೆ ಆಕ್ ಕಳ್ಸಾಣ'.

'ಸರ್ವಕ್ಕ, ಕಳುಸ್‌ಭೌದು. ನಿಮ್ಮ ಯಜಮಾನರ ಸ್ವಭಾವ ನಿಮಗೇ ಗೊತ್ತಿದೆಯಲ್ಲ.'

'ಅದೂ ನಿಜ'–ಎಂದು ಅವಳು ಒಪ್ಪಿದಳು. ಕೊನೆಗೆ ಒಂದು ಉಪಾಯ ಹೊಳೆಯಿತು. ಇಬ್ಬರ ಎಲೆಯನ್ನೂ ತುಂಬಿಸಿಕೊಂಡು ಗಾಡಿಯಲ್ಲಿ ಗಂಡನ ಜೊತೆಗೆ ಸರ್ವಕ್ಕನೂ ಹೋಗುವುದು. ವ್ಯಾಪಾರವನ್ನು ಅವಳೇ ಮಾಡಿ ಕ್ಷೇಮವಾಗಿ ದುಡ್ಡು ತರುವುದು. ನಂಜಮ್ಮ ಸಲಹೆಗೆ ಒಪ್ಪಿದಳು. ಹಾಗೆಯೇ ರಾಮಣ್ಣನಿಗೆ ತರಬೇಕಾದ ಲುಂಗಿ, ಟೋಪಿ, ಪುಸ್ತಕ, ಅದರ ಚೀಲ ಮೊದಲಾದವುಗಳ ಪಟ್ಟಿಯನ್ನೂ ಹಾಕಿಕೊಟ್ಟಳು. ಮರುದಿನ ರಾತ್ರಿ ಗಾಡಿಯ ಮೇಲೆ ಗಂಡನ ಜೊತೆ ಸರ್ವಕ್ಕ ಹೋದಳು. ದುಡ್ಡು ತೆಗೆದುಕೊಂಡು, ನಂಜಮ್ಮ ಹೇಳಿದ ಸಾಮಾನುಗಳನ್ನೂ ಖರೀದಿ ಮಾಡಿ ಮುಂದಿನ ರಾತ್ರಿ ಗಾಡಿ ಹತ್ತಿದಳು. ದಾರಿಯಲ್ಲಿ ಅವಳೂ ತೂಕಡಿಸಿದಳು. ಬೆಳಗ್ಗೆ ಊರಿಗೆ ಬಂದು ಮನೆಯ ಮುಂದೆ ಗಾಡಿ ಇಳಿದಾಗ, ಅವಳು ಖರೀದಿ ಮಾಡಿ ತಂದಿದ್ದ ಸಾಮಾನುಗಳು ಇದ್ದವು. ಕೊರಳಿಗೆ ನೇತುಹಾಕಿಕೊಂಡಿದ್ದ ದುಡ್ಡಿನ ಚೀಲ ಇರಲಿಲ್ಲ. ಗಂಡನಿಗೆ ಹೇಳಿದುದಕ್ಕೆ–'ಕತ್ತೆ ಹಂಗ್ ಬಿದ್ಕಂಡ್ ನಿದ್ದೆ ಮಾಡ್ತಿದ್ದೆ. ದಾರೀಲಿ ಎಲ್ಲಿ ಉದುರುಸ್ಕಂಡು ಬಂದ್ಯೊ ಬಾಂಚೋತ್ ಮುಂಡೆ' ಎಂದು ರೇವಣ್ಣಶೆಟ್ಟಿ ಉಗ್ರರೂಪ ತಾಳಿದ. ಕಣ್ಣೀರು ಹಾಕುತ್ತಾ ಓಡಿ ಬಂದ ಸರ್ವಕ್ಕ ವಿಷಯ ತಿಳಿಸಿದಾಗ ನಂಜಮ್ಮನಿಗೆ ಏನು ಹೇಳುವುದಕ್ಕೂ ತಿಳಿಯಲಿಲ್ಲ. ನಂಜಮ್ಮನ ಸಾಮಾನಿಗೆ ಅವಳು ಒಟ್ಟು ಆರೂವರೆ ರೂಪಾಯಿ ಖರ್ಚು ಮಾಡಿದ್ದಳು. ಇನ್ನು ಮೂವತ್ತೆಂಟೂಕಾಲು ಕೊಡಬೇಕು. ಅವಳದೂ ಚೀಲದಲ್ಲಿ ಮೂವತ್ತೈದು ರೂಪಾಯಿ ಇತ್ತು.

'ನಂಜಮ್ಮಾರೇ, ನನ್ನ ಕೊಳ್ಳಲಿರಾ ಕರಡಿಗೆ ಆಣೆ ಮಡಗಿ ಏಳ್ತೀನಿ, ನನ್ನೇ ಕಳ್ಳಿ ಅಂತ ತಿಳ್ಕಬ್ಯಾಡಿ.'

'ನಂಜಮ್ಮ ತಾಳ್ಮೆಯಿಂದ ಯೋಚಿಸಿ ನಾಲ್ಕಾರು ಪ್ರಶ್ನೆ ಕೇಳಿದಳು. ನಂತರ ಎಂದಳು: 'ನೀವೇನೇ ಹೇಳಿ. ದುಡ್ಡು ಇನ್ನು ಹ್ಯಾಗೂ ಕಳೆದಿಲ್ಲ. ನೀವು ತೂಕಡುಸ್ತಾ ಇದ್ದಾಗ ನಿಮ್ಮ ಯಜಮಾನರೇ ಹೊಡೆದಿದಾರೆ.' ಅದೇ ನಿಜವೆಂದು ಸರ್ವಕ್ಕನಿಗೆ ತಕ್ಷಣ ಹೊಳೆಯಿತು. ನೇರವಾಗಿ ಮನೆಗೆ ಹೋಗಿ– 'ನೀವೇ ದುಡ್ಡು ತಗಂಡಿದೀರಾ. ನಂಜಮ್ಮಾರ ದುಡ್ಡಾರ ಕೊಟ್ಬುಡಿ' ಎಂದು ಹೇಳಿದುದಕ್ಕೆ ರೇವಣ್ಣಶೆಟ್ಟಿ, ವೀರಭದ್ರನ ಜಾತ್ರೆಯಲ್ಲಿ ಕುಣಿಯುವ ಭೂತದಂತೆ ಆಗಿ ಅವಳನ್ನು ಹಿಡಿದು ಮೈ ಕೈ ಮುರಿಯುವಂತೆ ಹೊಡೆದುಬಿಟ್ಟ. ಕೋರ್ಟಿಗೆ ಹೋಗಿ ಸಾಕ್ಷಿ ಹೇಳಿಬರುವಂತಹ ದೊಡ್ಡ ಮನುಷ್ಯನನ್ನು ಕಳ್ಳನೆಂದರೆ ಅವನು ಸಹಿಸುವುದು ಹೇಗೆ?

ತನಗೆ ಅಷ್ಟು ಏಟು ಬಿದ್ದರೂ ಸರ್ವಕ್ಕ ಮನಸ್ಸಿನಲ್ಲಿಯೇ ಏನೋ ನಿಶ್ಚಯಿಸಿದಳು. ಮರುದಿನ ಹೊತ್ತಿಗೆ ಮುಂಚೆ ಎದ್ದು, ತನ್ನ ಮಗಳು ರುದ್ರಾಣಿಯನ್ನು ಜೊತೆಗೆ ಕರೆದುಕೊಂಡು ತನ್ನ ತೌರೂರಾದ ಶಿವಗೆರೆಗೆ ನಡೆದೇಹೋದಳು. ಅವಳ ಕೊರಳಿನಲ್ಲಿ ತಂದೆಯ ಮನೆಯವರು ಹಾಕಿದ್ದ ಬಂಗಾರದ ಕರಡಿಗೆ ಇತ್ತು. ದೇವರು ಎಂಬ ಭಯದಿಂದಲೋ, ಅಥವಾ ಆ ಆಲೋಚನೆ ಹೊಳೆದಿರಲಿಲ್ಲವೋ, ರೇವಣ್ಣಶೆಟ್ಟಿಯ ದೃಷ್ಟಿ ಅದರ ಮೇಲೆ ಬಿದ್ದಿರದೆ ಅದು ಇನ್ನೂ ಉಳಿದಿತ್ತು. ಒಬ್ಬ ಅಕ್ಕಸಾಲಿಗನಿಗೆ ಅದನ್ನು ನೂರ ಐವತ್ತು ರೂಪಾಯಿಗೆ ಮಾರಿ ಎಂಟು ರೂಪಾಯಿಗೆ ಒಂದು ಬೆಳ್ಳಿಯ ಕರಡಿಗೆ ಮಾಡಿಸಿಕೊಂಡಳು. ಎರಡು ದಿನವಾದ ಮೇಲೆ ಊರಿಗೆ ಹಿಂತಿರುಗಿದ ಅವಳು ನಂಜಮ್ಮನಿಗೆ ಕೊಡಬೇಕಾದುದನ್ನು ಕೊಟ್ಟು, ಉಳಿದ ಹಣವನ್ನೂ ಅವಳ ಕೈಲೇ ಇಟ್ಟು ಹೇಳಿದಳು: 'ಮನ್ಲಿ ತಿನ್ನಾಕ್ ಇಲ್ಲದ ದಿನ ಬಂದ್ ಕೇಳಿ ರೂಪಾಯಿ, ಎಂಟಾಣೆ, ಇಸ್ಕಂಡ್ ಹೋಯ್ತೀನಿ. ನೀವು ಮಡೀಕಂಡಿರಿ.'

'ಇಷ್ಟು ದೊಡ್ಡ ಗಂಟು ನಾನು ಎಲ್ಲಿ ಇಟ್ಟಿರ್ಲಿ ಸರ್ವಕ್ಕ? ಅಕಸ್ಮಾತ್ ಏನಾದ್ರೂ ಆದ್ರೆ ನನ್ನ ಗತಿ ಏನು?'

'ಒಂದು ಮಡಕೇಲಿ ಹಾಕಿ ಅಟ್ಟದಮ್ಯಾಲೆ ಎಲೆ ಸರದ ಒಳಗೆ ಮಡಗಿ. ಯಾರ್ಗೂ ತಿಳಿಯಾಕುಲ್ಲ.'

ನಂಜಮ್ಮ ಹಾಗೆಯೇ ಮಾಡಿದಳು.

– 3 –

ರಾಮಣ್ಣ ಮಿಡ್ಲ್‌ಸ್ಕೂಲಿಗೆ ಹೋಗಿಬರಲು ಶುರುವಾದ ಮೇಲೆ ಪಾರ್ವತಿ ಮನೆಯಲ್ಲಿ ಉಳಿದಳು. ಅದುವರೆಗೂ ಅವಳ ಬಗೆಗೆ ಮೂಡದಿದ್ದ ಹೊಸ ಯೋಚನೆಯೊಂದು ನಂಜಮ್ಮನ ಮನಸ್ಸಿನಲ್ಲಿ ಹುಟ್ಟಿ ಕಾಡತೊಡಗಿತು. ಅವಳಿಗಾಗಲೇ ಹನ್ನೆರಡು ವರ್ಷ. ತನ್ನಂತೆಯೇ ಎತ್ತರವಾದ ತುಂಬುಮೈಕಟ್ಟಿನ ಅವಳು ಹನ್ನೆರಡಕ್ಕಿಂತ ದೊಡ್ಡ ವಯಸ್ಸಿನ ಹುಡುಗಿಯಂತೆ ಕಾಣುತ್ತಾಳೆ. ಮದುವೆ ಮಾಡಬೇಕು. ಗಂಡು ಹುಡುಕುವವರು ಯಾರು? ದುಡ್ಡು ಹೊಂದಿಸುವುದೆಲ್ಲಿ? ಇಷ್ಟು ದಿನವೂ ತಾನು ಬರೀ ಸಂಸಾರ ಸಾಗಿಸಿಕೊಂಡು ಬಂದಿದೀನಿ. ಈಗ ರಾಮಣ್ಣನ ವಿದ್ಯಾಭ್ಯಾಸದ ಖರ್ಚಿಗೂ ಒದಗಿಸಬೇಕು. ಇದರ ಮೇಲೆ ಮಗಳ ಮದುವೆ ಮಾಡುವುದೆಂದರೆ ಹುಡುಗಾಟವಲ್ಲ. ಆದರೆ ಮಾಡದೆ ಬಿಡುವ ಕೆಲಸವಲ್ಲ ಅದು. ಪಾರ್ವತಿ ಸ್ಕೂಲಿಗೆ ಹೋಗುತ್ತಿದ್ದಾಗಲೇ, ತಾಯಿಗೆ ಬರುತ್ತಿದ್ದ ಹಾಡುಹಸೆಗಳನ್ನೆಲ್ಲ ಕಲಿತಿದ್ದಳು. ಹಬ್ಬದ ಅಡಿಗೆಯನ್ನು ಸಹ ನಂಜಮ್ಮ ಇತ್ತೀಚೆಗೆ ಅವಳ ಕೈಲಿ ಮಾಡಿಸುತ್ತಿದ್ದಳು. ಸ್ಕೂಲು ಮುಗಿದ ಮೇಲೆ ಮನೆಯಲ್ಲಿ ಕೂತು ಮಾಡುವುದೇನು? ಬೆಳಗಿನಿಂದ ಸಂಜೆಯ ಹೊತ್ತಿಗೆ ಇನ್ನೂರು ಎಲೆ ಹಚ್ಚಿಹಾಕುತ್ತಿದ್ದಳು. ಬೆಳೆಯುವ ಹುಡುಗಿ, ಒಂದಿಷ್ಟು ಹಾಲು ತುಪ್ಪ ಹಾಕಬೇಕು. ವಿಶ್ವನ ಬಾಣಂತಿತನದಲ್ಲಿ ಅಕ್ಕಮ್ಮ ತಂದುಕೊಟ್ಟಿದ್ದ ಹಸುವಿನ ಹೆಣ್ಣುಗರು ಈಗ ಕರು ಹಾಕಿದೆ. ಅದಕ್ಕೆ ಆರೈಕೆ ಇಲ್ಲ. ಹೊರಗೆ ಹಸುರಿನಲ್ಲಿ ಕಾಲಾಡಿಸಿಸುವವರಿಲ್ಲದೆ ಅಂಥ ಒಳ್ಳೆಯ ತಳಿ ದಿನಕ್ಕೆ ಮೂರು ಪಾವು ಹಾಲಿಗೆ ಇಳಿದಿದೆ. ಊಟಕ್ಕೆ ಮೂರು ಕರಟ ಮೊಸರು ಹಾಕದೆ ಇದ್ದರೆ ಯಜಮಾನರು ಹಲಲೋ ಎಂದು ಕಿರುಚಿಕೊಳ್ಳುತ್ತಾರೆ. ಉಳಿದುದರಲ್ಲಿ ಯಾವ ಮಕ್ಕಳಿಗೆ ಎಷ್ಟೆಷ್ಟು ಹಾಕುವುದು? ದಿನಾ ಅಷ್ಟೊಂದು ಮುತ್ತುಗದೆಲೆ ಹಚ್ಚಿ ಉಷ್ಣವಾಗುವ ಹುಡುಗಿ. ದಿನಕ್ಕೆ ಹತ್ತು ಮೈಲಿ ತಿರುಗಿ ಸ್ಕೂಲಿಗೆ ಹೋಗಿಬರುವ ಹುಡುಗ. ಊರಿನಲ್ಲೇ ಸ್ಕೂಲಿಗೆ ಹೋಗುತ್ತಿದ್ದು ಬೆಳೆಯುವ ಚಿಕ್ಕವನು. ಇವರಲ್ಲಿ ಯಾರಿಗೆ ಕಡಮೆ ಮಾಡಬಹುದು, ಯಾರಿಗೆ ಹೆಚ್ಚು ಮಾಡಬಹುದು!

ಆ ವರ್ಷ ಜ್ಯೇಷ್ಠ ಆಷಾಢವಾದರೂ ಮಳೆಯಾಗಲಿಲ್ಲ. ಮಲೆಸೀಮೆಯಲ್ಲಿ ಮಳೆ ಇಲ್ಲವೆಂದು ಯಾರೋ ಹೇಳಿದರು. ಬರೀ ಪಡುವಲಗಾಳಿ ಹೊಡೆಯುತ್ತಿತ್ತು. ಬೇಸಿಗೆಯಲ್ಲಿ ಒಣಗಿದ ಭೂಮಿಯಲ್ಲಿ ಹಸುರು ಚಿಗುರಿಲ್ಲ. ಹೊಟ್ಟೆಗಿಲ್ಲದ ಹಸು ಒಂದು ಪಾವು ಹಾಲಿಗೆ ಇಳಿದದ್ದು ಕೊನೆಗೆ ಪೂರ್ತಿ ಮಾನಿಸಿಕೊಂಡುಬಿಟ್ಟಿತು. ಮನೆಯಲ್ಲಿ ಮಜ್ಜಿಗೆಯ ನೀರು ಪೂರ್ತಿ ಇಲ್ಲವಾಯಿತು. ಯಾರೂ ಹೊಲವನ್ನು ಗೇಯ್ದಿಲ್ಲ. ಈ ವರ್ಷದ ಬೆಳೆ ಪೂರ್ತಿ ಕೈಕೊಡುತ್ತದೆಯೋ ಅಥವಾ ಹಿಂಗಾರಾದರೂ ನಡೆಸಿ ರಾಗಿ ಕೈಗೆ ಬರುತ್ತದೆಯೋ ಎಂಬ ಬಗೆಗೆ ಹಳ್ಳಿಗಳಲ್ಲೆಲ್ಲ ಕಳವಳ. ಹೊಸ ವರ್ಷದ ಕಂದಾಯಕ್ಕೆ ನಂಜಮ್ಮ ಎಂದಿನಂತೆ ಪಟೇಲ ಗುಂಡೇಗೌಡರು ಮತ್ತೆ ಇಬ್ಬರಿಗೆ ನೂರು ರೂಪಾಯಿಗೆ ಗಂಡನಿಂದ ರಶೀತಿ ಬರೆಸಿದ್ದಳು. ಆದರೆ ಮಳೆ ಹೀಗೆ ಕೈಕೊಟ್ಟಿದ್ದನ್ನು ಕಂಡ ಗೌಡರು ಹೇಳಿದರು: 'ಅವ್ವಾ. ನನ್ನ ಹಗೇವಿನಲ್ಲಿರಾ ರಾಗಿ ಇದೊಂದು ವರ್ಷ ಬೆಳೆಯಾಗದಿದ್ರೂ ಮನೆಯೋರ್ಗೆ ಆಳುಗಳಿಗೆ ಆಯ್ತದೆ. ನಮ್ಮ ಜಮ್ನೇನಳ್ಳಿ ಬೀಗರ ಮನೇಲಿ ಒಂದು ಕಾಳೂ ಇಲ್ವಂತೆ. ಒಂದ್ ನಾಕ್ ಖಂಡುಗನಾದ್ರೂ ಬೇಕು ಅಂತ ಏಳಿ ಕಳಿಸಿದ್ರು. ಕೊಡಾಹಂಗಿಲ್ಲ, ಬಿಡಾಹಂಗಿಲ್ಲ; ಹಂಗಾಗೈತೆ. ನಿನ್ನ ರಶೀತಿಗೆ ಬೇಕಾದ್ರೆ ದುಡ್ಡು ತಗಾ. ಈ ವರ್ಷ ರಾಗಿ ಇಲ್ಲ.'

ಆಗಲೇ ದುಡ್ಡು ತೆಗೆದುಕೊಂಡು ರಾಗಿ ಕೊಂಡಿದ್ದರೆ ನಂಜಮ್ಮ ಬುದ್ಧಿವಂತಳಾಗುತ್ತಿದ್ದಳು. ಮುಂದೆ ಹೀಗಾಗುತ್ತದೆಂಬುದು ಅವಳಿಗಾದರೂ ಏನು ಗೊತ್ತು? ಮನೆಯಲ್ಲಿ ಇನ್ನೂ ಸ್ವಲ್ಪ ದಾಸ್ತಾನಿತ್ತು. ಅದು ಮುಗಿಯುವ ಹೊತ್ತಿಗೆ ಮತ್ತೆ ಎರಡು ತಿಂಗಳು ಕಳೆಯಿತು. ಇನ್ನೂ ಮಳೆ ಬೀಳಲಿಲ್ಲ. ಅಷ್ಟರಲ್ಲಿ ರಾಗಿಯ ಧಾರಣೆ ರೂಪಾಯಿಗೆ ಎಂಟು ಸೇರಿಗೆ ಏರಿತ್ತು. ಮೂರು ರೂಪಾಯಿಗೆ ಪಲ್ಲವೆಲ್ಲಿ, ಈಗ ಆಗಿರುವ ಹನ್ನೆರಡು ರೂಪಾಯಿಗೆ ಪಲ್ಲದ ದುಬಾರಿ ಧಾರಣೆ ಎಲ್ಲಿ? ಅವಳ ಎದೆ ಜಲ್ ಎಂದಿತು. ಒಂದು ದಿನ

ದುಡ್ಡನ್ನೇ ಕೇಳಲು ಕುರುಬರಹಳ್ಳಿಗೆ ಹೋದಾಗ ಗುಂಡೇಗೌಡರು ಎಂದರು: 'ನಿಮ್ಮಲ್ಲಿ ರಾಗಿ ಐತೇನೋ ಅಂತ ನಾನ್ ತಿಳ್ಕಂಡಿದ್ದೆ. ನೀನು ಬರ್ಲಿಲ್ಲ. ಈಗಲೇ ಸಿಕ್ದೋಟು ತೆಗ್ದು ಮಡೀಕಂಡುಬುಡು. ಇನ್ನೊಂದೆಲ್ಡು ತಿಂಗ್ಳು ಹ್ವಾದ್ರೆ ಬೀಜಕ್ಕೂ ರಾಗಿ ಸಿಕ್ಕಾಕುಲ್ಲ.'

'ಹಾಗಾದ್ರೆ ನೀವೇ ಎಲ್ಲಾದ್ರೂ ಕೊಡ್ಸಿ ಗೌಡ್ರೆ.'

ಕುರುಬರಹಳ್ಳಿ0ಯ ಪಕ್ಕದ ನಾಗೇನಹಳ್ಳಿ0ಯ ಚಿಕ್ಕತಮ್ಮೇಗೌಡರು ಇನ್ನೂ ಹಗೇವು ಕಿತ್ತಿರಲಿಲ್ಲ. ಅವರು ಕಿತ್ತಿದ್ದನ್ನು ವಿಚಾರಿಸಿ ಗುಂಡೇಗೌಡರು ಐದು ಪಲ್ಲ ರಾಗಿ ತೆಗೆಸಿ ಕಳಿಸಿದರು. ಈಗ ಧಾರಣೆ ಇನ್ನೂ ಏರಿತ್ತು. ಪಲ್ಲಕ್ಕೆ ಹದಿನಾರು ರೂಪಾಯಿ. ಎಂದರೆ ರೂಪಾಯಿಗೆ ಆರು ಸೇರು. ಗುಂಡೆಗೌಡರ ಕಂದಾ0ಯದ ಎಂಬತ್ತು ರೂಪಾಯಿ ಅಷ್ಟಕ್ಕೆ ಮುಕ್ತಾ0ಯವಾಯಿತು. ಇನ್ನು ಉಳಿದಿರುವ ಇಪ್ಪತ್ತು ರೂಪಾಯಿ, ಮೇಲೆ 0ಯಾವುದಾದರೂ ಚಿಲ್ಲರೆ ಖರ್ಚಿಗೆ ಬೇಕು. ನಂಜಮ್ಮ ಅದನ್ನು ನಗದು ಇಸಿದುಕೊಂಡಳು.

ಐದು ಜನಕ್ಕೆ ಕೊನೆ0ಯ ಪಕ್ಷ ದಿನಕ್ಕೆ ನಾಲ್ಕು ಸೇರು ರಾಗಿ0ಯಾದರೂ ಬೇಕು.

ಮೇಲೆ ಕೈತುಂಬ ಹಾಲು ಮೊಸರು ತರಕಾರಿ ಬೇಳೆ ಕಾಳುಗಳಿದ್ದರೆ ಹಿಟ್ಟಿನ ಖರ್ಚು ಕಡಿಮೆ. 0ಯಾವುದೂ ಇಲ್ಲದೆ ಬರೀ ಅದರಲ್ಲಿ0ಯೇ ಹೊಟ್ಟೆ ತುಂಬಬೇಕೆಂದರೆ ನಾಲ್ಕು ಸೇರು ಬೇಕೇ ಬೇಕು. ಬೆಳಗಿನ ರೊಟ್ಟಿ ನಿಲಿ ್ಲಸಿದರೆ ಒಂದು ಸೇರು ಉಳಿತಾ0ಯವಾಗುತ್ತೆ. ಆದರೆ ಸ್ಕೂಲಿಗೆ ಹೋಗುವ ರಾಮಣ್ಣನಿಗೆ ತೆಗೆದುಕೊಂಡು ಹೋಗಲು ರೊಟ್ಟಿ ತಟ್ಟಬೇಕು. ಹಿರಿ0ಯನಿಗೆ ತಟ್ಟಿ ನೆಲ್ಲಿ0ಯಕಾಯಿ ಉಪ್ಪಿನಕಾಯಿ ಕೊಟ್ಟಾಗ ಕೊನೆ0ಯ ವಿಶ್ವ ಬಿಡುವುದಿಲ್ಲ. ಬೆಳೆ0ಯುತ್ತಿರುವ ಹುಡುಗಿ ಪಾರ್ವತಿಗೆ ಹೇಗೆ ಇಲ್ಲವೆನ್ನುವುದು? ಹುಡುಗರ ಹೊಟ್ಟೆ0ಯನ್ನು ಹೇಗಾದರೂ ಕಟ್ಟಿಸಬಹುದು. 0ಯಜಮಾನರನ್ನು ಸಮಾಧಾನ ಮಾಡುವುದು ಹುಡುಗಾಟದ ಮಾತಲ್ಲ. ಎದ್ದ ತಕ್ಷಣ ರೊಟ್ಟಿ0ಯಾಗದಿದ್ದರೆ ಅವರು ಬಾಗಿಲಿನಿಂದ ಹೊರಗೆ ಹೋಗಿ ಬೀದಿ0ಯಲ್ಲಿ ನಿಂತು, 0ಯಕ್ಷಗಾನ ಕುಣಿತದವರು ಊರಿಗೆಲ್ಲ ಕೇಳುವಂತೆ ಕಿರುಚುವ ಹಾಗೆ ಗಟ್ಟಿ0ಯಾಗಿ ಮುಂಡೆ ರಂಡೆಗಳ ಮಂತ್ರ ಪ್ರಾರಂಭಿಸುತ್ತಾರೆ. ಬೆಳಿಗ್ಗೆ ಎದ್ದರೆ ಮನೆ0ಯ ಮ0ರ್ಯಾದೆ ಊರಿಗೆಲ್ಲ ಕೇಳುವುದು ಅವಳಿಗೆ ಬೇಡ. ಅಲ್ಲದೆ ಬೆಳೆ0ಯುವ ಹುಡುಗರ ಕಿವಿಗೆ ಈ ಮಾತು ಪದೇ ಪದೇ ಬೀಳುವುದನ್ನು ತಪ್ಪಿಸಲು ಅವಳು ಸಾಧ್ಯವಾದ ಮಟ್ಟಿಗೂ ಪ್ರ0ಯತ್ನಿಸುತ್ತಿದ್ದಳು.

ಪರಿಣಾಮವೆಂದರೆ ದಿನಕ್ಕೆ ನಾಲ್ಕು ಸೇರಿನಂತೆ ಐದು ಪಲ್ಲ ರಾಗಿ ನಾಲ್ಕು ತಿಂಗಳಿನಲ್ಲಿ ಚಟ್- ಎದ್ದುಹೋಗುತ್ತೆ. ಮತ್ತೆ ಕೊಳ್ಳಲು ದುಡ್ಡಿಲ್ಲ. ಆದುದರಿಂದ ಮುಂದಿನ ಸಂಪಾದನೆ ಏನಿದ್ದರೂ ಎಲೆ ಹಚ್ಚುವುದರಲ್ಲಿ ಆಗಬೇಕು. ಸರಿ, ತಾಯಿ ಮಗಳು ಇಬ್ಬರೂ ಕೂತು, ದಿನಕ್ಕೆ ನಾನ್ನೂರರಷ್ಟು ಎಲೆ ದಳೆ0ಯುತ್ತಿದ್ದರು. ಈ ವರ್ಷ ಪಹಣಿ ಬರೆ0ಯುವ ಕೆಲಸವಿಲ್ಲ. ಎಲ್ಲೂ 0ಯಾವ ಬೆಳೆ0ಯೂ ಆಗದೆ ಹೊಲಗದ್ದೆಗಳಲ್ಲಿ ಸುಟ್ಟ ಬೂದಿ0ಯ ಬ0ಯಲಿನಂತೆ ಆಗಿರುವಾಗ ಪಹಣಿ ಬರೆ0ಯುವುದೇನಿದೆ. ಆದರೆ ಲೆಕ್ಕದ ಪುಸ್ತಕ ಹೊಲಿದು ಹೆಡಿಂಗ್ ಕಟ್ಟಿ ಉದ್ದ ಅಡ್ಡ ರೂಲುಗಳನ್ನು, ಕೆಂಪು ಶಾಯಿ ಸೀಸದ ಕಡ್ಡಿಗಳಲ್ಲಿ ಹಾಕಬೇಕು. ಪ್ರತಿ0ಯೊಂದು ಸರ್ವೆ ನಂಬರಿನ ಜಾಗದಲ್ಲೂ-'ಖಾಲಿ', 'ಖಾಲಿ' ಎಂದಾದರೂ ಬರೆ0ಯಬೇಕು. ಸರ್ಕಾರೀ ಲೆಕ್ಕವೆಂದರೆ ಲೆಕ್ಕ. ಬಾಗಾ0ಯ್ತು ನಂಬರಿನಲ್ಲಿ ತೆಂಗು, ಮಾವು ಎಂಬುದನ್ನು 'ಖಾಲಿ' ಎಂದು ಬರೆ0ಯುವಂತಿಲ್ಲ. ಮುತ್ತಗದೆಲೆ, ಮನೆಗೆಲಸಗಳ ಜೊತೆಗೆ ನಂಜಮ್ಮ ಅದನ್ನೂ ನಿಭಾಯಿಸಿದಳು.

ಮುಂದಿನ ಪುಷ್ಯ, ಮಾಘ ಬರುವ ಹೊತ್ತಿಗೆ, ಜನಗಳಿಗೆ ಬಂದಿದ್ದ ಹಾಹಾಕಾರ ಪೂರ್ತಿ0ಯಾಗಿ ದನಗಳಿಗೂ ಬಡಿಯಿತು. ಎಲ್ಲಿ0ಯೂ ಕುಡಿ0ಯುವ ನೀರಿಲ್ಲ; ಮೇ0ಯಲು ಹುಲ್ಲಿಲ್ಲ. ಬೆಳೆ0ಯೇ ಇಲ್ಲದಿರುವಾಗ ಗೊಂತಿನಲ್ಲಿ ತಿನ್ನುವ ಹುಲ್ಲಿಗೂ ತೊಂದರೆ0ಯಾಗಿತ್ತು. ಸ್ವಲ್ಪ ಹೆಚ್ಚಾಗಿ ಹುಲ್ಲು ಇಟ್ಟಿದ್ದವರು ಕೊಪ್ಪಲಿನಿಂದ ತೆಗೆದು ಅಟ್ಟಕ್ಕೆ ಸಾಗಿಸಿದರು. ಇಲ್ಲದಿದ್ದರೆ ಕಳವಳವಾಗುತ್ತಿತ್ತು. ಇದ್ದುದನ್ನೇ ಒಪ್ಪವಾಗಿ ದಿನಕ್ಕೆ ಅರ್ಧ ತಬ್ಬಿನಂತೆ ಹಾಕಿ, ಜನದ ಜೀವದಂತೆ ದನದ ಜೀವವನ್ನೂ ಶರೀರಕ್ಕೆ ಅಂಟಿಸಿ ಇಡುವ ಪ್ರ0ಯತ್ನ ಮಾಡುತ್ತಿದ್ದರು. ಹುಲ್ಲು ಇಲ್ಲದವರ ದನಗಳು ಸತ್ತು ಬೀಳುತ್ತಿದ್ದವು. ತನ್ನ ಮನೆ0ಯಲ್ಲಿ ಹುಟ್ಟಿದ ಹೋರಿ ಕರುಗಳನ್ನು ಅವು ಬೆಳೆದಂತೆ ನಂಜಮ್ಮ ಮಾರಿಬಿಡುತ್ತಿದ್ದಳು. ಇನ್ನು ಉಳಿದಿದ್ದ ಎರಡು ಹಸು ಒಂದು ಮೊಳಕ, ಹುಲ್ಲಿಲ್ಲದೆ ಸಾ0ಯಲಾದುವು. ಅವನ್ನು ನಾಗಲಾಪುರಕಾದರೂ ಹೊಡೆದು ಕಳಿಸುವ 0ಯೋಚನೆ ಮಾಡಿದಳು. ಆದರೆ ಅಲಿ ್ಲ0ಯೂ ಇದೇ ಕ್ಷಾಮವಂತೆ. ಬರವು ಬರೀ ರಾಮಸಂದ್ರಕ್ಕೇ ಬಂದಿರಲಿಲ್ಲ. ತುಮಕೂರು, ಹಾಸನ, ಕೋಲಾರ, ಮೊದಲಾದ ಬ0ಯಲುಸೀಮೆ0ಯಲ್ಲೆಲ್ಲ ಈ ವರ್ಷ ಅನಾವೃಷ್ಟಿ0ಯಾಗಿತ್ತು. ನಾಲೆ ಬ0ಯಲಿನವರೇ ಪುಣ್ಯವಂತರು. ಎಷ್ಟೋ ಜನ ಗನ್ನಿ ಶ್ರೀನಿವಾಸಪುರಗಳಿಗೆ ಹೋಗಿ ಒಂದು ಗಾಡಿ ನೆಲ್ಲು ಹುಲ್ಲಿಗೆ ಐವತ್ತು ರೂಪಾಯಿ ಕೊಟ್ಟು ಹೇರಿಕೊಂಡು ಬಂದರು. ಎರಡನೆ0ಯ ಸಲ ಹೋದಾಗ ಗಾಡಿಗೆ ಅರವತ್ತೈದು ರೂಪಾಯಿಗೆ ಏರಿಸಿದ್ದರಂತೆ. ನಂಜಮ್ಮನಿಗೆ ಏನೂ ತಿಳಿ0ಯಲಿಲ್ಲ. ಒಂದು ದಿನ ತನ್ನ ಮನೆ0ಯ ಎರಡು ಹಸು ಒಂದು ಮೊಳಕ, ಮೂರನ್ನೂ ಹೊಡೆದುಕೊಂಡು ಕುರುಬರಹಳ್ಳಿಗೆ ಹೋಗಿ ಗುಂಡೇಗೌಡರ ಮುಂದೆ ನಿಲ್ಲಿಸಿ ಹೇಳಿದಳು: 'ಗೌಡರೇ, ಇವನ್ನ ನಾನು ಗೋದಾನ ಮಾಡ್ತೀನಿ ಅಂತ ತಿಳಕಂಡು ತಗಂಡುಬಿಡಿ. ದಿನಕ್ಕೆ ಒಂದು ಹೊರತೆ0ಯಾದರೂ ಹುಲ್ಲು ಹಾಕಿ ಸಾಕಿ ಬದುಕಿಸಿಕೊಳ್ಳಿ. ಉಳುದ್ರೆ ಮುಂದೆ ನಿಮ್ಮ ಮಮ್ಮಕ್ಕಳು ಹಾಲು

ಕುಡಿತೂವೆ. ಅವು ಸಾಯೂದು ನಾನು ನೋಡ್ಲಾರೆ.'
'ಅವ್ವಾ, ಒಕ್ಕಲಿಗನಾಗಿ ಹುಟ್ಟಿ ನಾನು ಗೋದಾನ ತಗಳ್ಲಾ?'
'ಹಾಗಾದ್ರೆ ಮೂರರಿಂದ ಒಟ್ಟು ಮೂರು ಬಿಲ್ಲೆ ಕೊಟ್ಟುಬಿಡಿ. ಹಗ್ಗ ಹಿಡಿದು, ಖರೀದಿ ಅಂತ ನಿಮ್ಮ ಕೈಲಿ ಡ್ತೀನಿ. ಅವುಗಳ ಜೀವ ಉಳ್ಕೊಳ್ಳೋದು ಮುಖ್ಯ.'
ಗೌಡರಿಗೂ ಹುಲ್ಲಿನ ಕಷ್ಟ. ಅವರು ದಿಮ್ಮನೆಯ ಕುಳವೇನೋ ಹೌದು. ಮುಂದಿನ ಒಂದು ವರ್ಷಕ್ಕೆ ಆಗುವ ದಾಸ್ತಾನು ಯಾವಾಗಲೂ ಇಡುತ್ತಿದ್ದರು. ಮುಂದಿನ ವರ್ಷವೂ ಮಳೆರಾಯ ಹೀಗೆ ಕಣ್ಣಾಮುಚ್ಚಾಲೆ ಆಡಿದರೆ ಗತಿ ಏನು? ಆದರೆ ಮುಂದಿನ ವರ್ಷದ ಅನಿಶ್ಚಿತತೆಗೆ ಹೆದರಿ ಅವರು ಈಗ, ತಮ್ಮ ಮನೆಯ ಬಾಗಿಲಿಗೆ ಬಂದಿರುವ ನಂಜಮ್ಮನಂತಹ ಹೆಂಗಸಿನ ಕೋರಿಕೆಯನ್ನು ಹೇಗೆ ತಳ್ಳಿಹಾಕಬಲ್ಲರು? ಅದು ಬರೀ ಶ್ಯಾನುಭೋಗಮ್ಮನ ಮಾತಿನ ಪ್ರಶ್ನೆಯಲ್ಲ, ಮೂರು ಗೋದನಗಳ ಪ್ರಶ್ನೆ. 'ಆಯ್ತು, ನಾನ್ ಮಡೀಕಂಡ್ ಸಾಕ್ತೀನಿ. ದಾನವೂ ಬ್ಯಾಡ, ಖರೀದಿಯೂ ಬ್ಯಾಡ. ಇದರ ಜಾತೀದ ಒಂದು ಹೆಣ್ಣುತಳಿ ನಂಗೆ ಆಮ್ಯಾಕೆ ಕೊಟ್ಬುಡು. ಬೆಳ್ಳಗೆ ಒಳ್ಳೇ ಚಂದಾಗೈತೆ.'
ನಂಜಮ್ಮನ ಯೋಚನೆ ತಪ್ಪಿತು. ಅವಳು ಊರಿಗೆ ಹಿಂತಿರುಗಿದಳು. ರಾಮಸಂದ್ರದಲ್ಲಿ ಎಷ್ಟೋ ದನಗಳು ಸತ್ತುಹೋದವು. ಉಳಿದುವೆಲ್ಲ ಸಾಯುವ ಸ್ಥಿತಿಗೆ ಬಂದಿದ್ದವು.
ತಾಯಿ ಮಗಳು ಕೂತು ಬೇಗ ಬೇಗ ಹಚ್ಚಿದುದರಿಂದ ಆ ವರ್ಷದ ಎಲೆಯ ಸರಗಳೆಲ್ಲ ಮಾರ್ಗಶೀರ್ಷ ಮಾಸಕ್ಕೇ ಮುಗಿದುಹೋದುವು. ಅಷ್ಟರಲ್ಲಿ ಮನೆಯಲ್ಲಿದ್ದ ರಾಗಿಯೂ ಮುಗಿದು ಹಿಟ್ಟಿನ ಮಡಕೆ ಲೊಟ್ಟೆ ಹಾಕುತ್ತಿತ್ತು. ಅಟ್ಟ ಹತ್ತಿ ಎಣಿಸಿ ನೋಡಿದರೆ ಒಟ್ಟು ಇಪ್ಪತ್ತು ಸಾವಿರಕ್ಕೂ ಮೀರಿ ಎಲೆಗಳಿದ್ದವು. ಈಗ ಧಾರಣೆ ಏರಿರಬಹುದು. ಎಲ್ಲ ಸಾಮಾನುಗಳ ಬೆಲೆಯೂ ಏರಿರುವಾಗ ಅದು ಏರದೆ ಇರುತ್ತದೆಯೆ? ನೂರಕ್ಕೆ ಎಂಟಾಣೆ ಅಂತ ಲೆಕ್ಕ ಹಾಕಿದರೂ ಒಟ್ಟು ಒಂದು ನೂರು ರೂಪಾಯಿ ಬರಬೇಕು. ಎರಡು ಗಾಡಿ ಮಾಡಿಸಿಕೊಂಡು, ರಾಮಣ್ಣ ಮತ್ತು ಸರ್ವಕ್ಕನ ಸಂಗಡ ನಂಜಮ್ಮ ತಿಪಟೂರಿಗೆ ಹೋದಳು. ಸರ್ವಕ್ಕನದು ಆರು ಸಾವಿರ ಎಲೆಯಾಗಿತ್ತು. ಇಷ್ಟೊಂದು ಎಲೆ ಒಟ್ಟಿಗೆ ಬಂದುದನ್ನು ನೋಡಿದ ವ್ಯಾಪಾರಿ ಕ್ವಾಮಟಿಗ ಶೆಟ್ಟಿ ಹೇಳಿದ: 'ಅಮ್ಮಯ್ಯಾರೇ, ಎಲ್ಲೆಲ್ಲೂ ಬರ. ಉಣ್ಣಾಕೇ ಇಲ್ದೆ ಇರುವಾಗ ಎಲೆ ಯಾರಿಗೆ ಬೇಕು? ಏನೋ ನೀವು ತಂದಿದೀರ ಅಂತ ನಾನು ತಗಾತೀನಿ. ನೂರಕ್ಕೆ ನಾಲ್ಕಾಣೆ ಧಾರಣೆ.'
'ಇದೇನು ಶೆಟ್ರೆ ಹೀಗಂತೀರ? ನಾವು ತಲೆಮೇಲೆ ಹೊತ್ತು, ಪೋಣಿಸಿ, ಒಣಗಿಸಿ, ಆಮೇಲೆ ಹಚ್ಚಿ ಎಲ್ಲ ಮಾಡಿದುದಕ್ಕೆ ನಾಕಾಣೆ ಅಂದ್ರೆ ಯಾವ ಧರ್ಮ?'
'ಧರ್ಮ ಕರ್ಮದ ಮಾತಲ್ಲ. ಬೇಕಾದರೆ ಇನ್ನೊಂದು ಕಡೆ ವಿಚಾರಿಸಿ.'
ಬೇರೆ ಅಂಗಡಿಗಳಲ್ಲಿ ವಿಚಾರಿಸಿದರೆ ಮೂರಾಣೆ ಎಂದರು. ಮೊದಲನೆಯವನಿಗೇ ಎರಡು ಗಾಡಿಗಳ ಪಿಂಡಿಯನ್ನೂ ಸೀಯ್ದು ಇಬ್ಬರೂ ಹಂಚಿಕೊಂಡು ನಂಜಮ್ಮ ಮೂರೂವರೆ ರೂಪಾಯಿಯನ್ನೂ ಸರ್ವಕ್ಕ ಒಂದೂವರೆಯನ್ನೂ ಗಾಡಿಯ ಬಾಡಿಗೆ ಕೊಟ್ಟರು. ನಂಜಮ್ಮ ತನಗೆ ಮಗಳಿಗೆ ಒಟ್ಟು ಮೂರು ಮೂರು ರೂಪಾಯಿನ ಎರಡು ಸೀರೆ, ರಾಮಣ್ಣನಿಗೆ ಒಂದು ಅಂಗಿ, ವಿಶ್ವನಿಗೆ ಒಂದು ಅಂಗಿ, ಒಂದೊಂದು ಚಡ್ಡಿಗಳನ್ನು ಕೊಂಡಳು. ಎಲ್ಲ ಕಳೆದು ಇನ್ನು ಮೂವತ್ತೇಳು ರೂಪಾಯಿ ಉಳಿಯಿತು. ತೆಗೆದುಕೊಂಡು ಹೋಗಿದ್ದ ಒಣ ರೊಟ್ಟಿಯನ್ನೇ ಕಡಿದುಕೊಂಡು ಎಲ್ಲರೂ ಊರಿಗೆ ಬಂದರು ಅಷ್ಟರಲ್ಲಿ ರಾಗಿಯ ಧಾರಣೆ ಪಲ್ಲಕ್ಕೆ ಇಪ್ಪತ್ತಕ್ಕೆ ಏರಿತ್ತು.

– 4 –

ಅದೇ ಸಮಯಕ್ಕೆ ಎಲ್ಲೆಲ್ಲಿಯೂ ಪ್ಲೇಗುಮಾರಿ ಬಂದಳು. ಈ ಸಲ ಗೂಡೆ ಮಾರಮ್ಮನೂ ಬರಲಿಲ್ಲ. ಯಾರಿಗೂ ಅವಳ ಸುಳಿವು ಸೂಕ್ಷ್ಮ ಏನೂ ತಿಳಿಯಲಿಲ್ಲ. ಇದ್ದಕ್ಕಿದ್ದ ಹಾಗೆ ಕಾಣಿಸಿಕೊಂಡ ಪಿಡುಗು, ಊರು ಊರುಗಳಲ್ಲೆಲ್ಲ ಆಹುತಿ ತೆಗೆದುಕೊಳ್ಳಲಾರಂಭಿಸಿತು. ಸುತ್ತಮುತ್ತ ಯಾವ ಊರಿನಲ್ಲಿ ಕೇಳಿದರೂ ಇಲಿ ಬೀಳುತ್ತಿತ್ತು. ಕೆಲವು ಊರುಗಳಲ್ಲಂತೂ ಇಲಿ ಬಿದ್ದುದು ಗಮನಕ್ಕೆ ಬರುವ ಮೊದಲು ಜನಗಳೇ ಬಿದ್ದು ಹೋದರು. ರಾಮಸಂದ್ರದಲ್ಲೂ ಕೆಲವರಿಗೆ ಗೆಡ್ಡೆ ಬಂತು. ತಡ ಮಾಡದೆ ಎಲ್ಲರೂ ಊರು ಬಿಟ್ಟರು. ಸ್ವಂತ ಜಮೀನು ಇದ್ದವರು ತಮ್ಮ ಹೊಲ ತೋಟಗಳಲ್ಲಿ ಶೆಡ್ಡು ಹಾಕಿದರೆ, ಎಲ್ಲ ಜಮೀನನ್ನೂ ಕಳೆದುಕೊಂಡಿದ್ದ ನಂಜಮ್ಮ, ಗಂಗಮ್ಮ, ಸರ್ವಕ್ಕನಂಥವರು ಗ್ರಾಮದೇವತೆಯ ಗುಡಿಯ ಹಿಂಭಾಗದಲ್ಲಿ ಹಾಕಿಕೊಂಡರು. ಹೊಸ ವರ್ಷದಲ್ಲಿ ಮಳೆ ಇಲ್ಲದೆ ಮುತ್ತುಗದ ಗಿಡಗಳೂ ಚಿಗುರದೆ, ಒಳ್ಳೆಯ ಎಲೆಗಳನ್ನು ಬಿಟ್ಟಿಲ್ಲ. ಹಳೆಯ ಎಲೆಗಳು ಚಕ್ಕಳದಂತೆ ಗಟ್ಟಿಯಾಗಿವೆ. ಅವನ್ನು ಕಿತ್ತು ತಂದರೂ ಹಚ್ಚಲಾಗುವುದಿಲ್ಲ. ಶೆಡ್ಡಿನಲ್ಲಿ ಸುಮ್ಮನೆ ಕೂತು ಮಾಡುವುದಾದರೂ ಏನು? ತಿಪಟೂರಿನಲ್ಲಿ ಎಲೆ ಮಾರಿದ ದುಡ್ಡಿನ ರಾಗಿಯೂ ಮುಗಿಯುತ್ತಾ ಬಂದಿದೆ. ಇನ್ನು ಮೂರು ದಿನ ಕಳೆದರೆ ಒಲೆ ಹಚ್ಚುವಂತೆಯೂ ಇಲ್ಲ. ಕೆಲವು ಗಂಡಸರಂತೂ ರಾತ್ರಿ ಹೊತ್ತು ಅವರಿವರ ತೆಂಗಿನ ತೋಟಗಳಿಗೆ ನುಗ್ಗಿ ಮರ ಹತ್ತಿ ಕೈಗೆ ಸಿಕ್ಕಿದಷ್ಟು ಎಳೆಗಾಯಿಯೋ ಬಳಲುಗಾಯಿಯೋ ಕಿತ್ತು ತರುತ್ತಾರೆ. ಬರೀ ಅವನ್ನೇ ಸುಲಿದು ಒಡಲು ತುಂಬಿಸಿಕೊಳ್ಳುತ್ತಾರೆ. ಅದನ್ನು

ಕಂಡ ತೋಟದ ೦ಯಜಮಾನರು ರಾತ್ರಿ ಕಾವಲು ಕಾ೦ಯಲು ಹೋದರೆ ಅವರಿಗೇ ಕಲ್ಲೇಟು ಬಿತ್ತು. ಜೀವಭ೦ಯದಿಂದ ಅವರು, ತೋಟ ಕಾ೦ಯುವುದನ್ನೇ ಬಿಟ್ಟುಬಿಟ್ಟರು. ಇನ್ನು ೦ಯಾವ ದಾರಿ೦ಯೂ ಇಲ್ಲದಿದ್ದ ಜನರ ಮನೆ೦ಯ ಚಿನ್ನ ಬೆಳ್ಳಿಗಳು ಕಾಶಿಂಬಡ್ಡಿ ಸಾಹುಕಾರರ ಅಂಗಡಿ ಸೇರಿದುವು. ಆನಂತರ ಒಂದೊಂದಾಗಿ ಹಿತ್ತಾಳೆ ತಾಮ್ರದ ಪಾತ್ರೆಗಳೂ ಅಲ್ಲಿಗೇ ಹೋಗಿ ತುಂಬಿದುವು.

ಇವರ ಮನೆ೦ಯ ರಾಗಿ ಮುಗಿದುಹೋದ ಮರುದಿನ ರಾಮಣ್ಣ ಹಟಮಾಡಿದವನಂತೆ ಉಪವಾಸವೇ ಸ್ಕೂಲಿಗೆ ನಡೆದು ಹೋದ. ಕಂಬನಕೆರೆ೦ಯ ಅವನ ಸ್ಕೂಲು ಊರ ಹೊರಗೆ ಎರಡು ಫರ್ಲಾಂಗ್ ದೂರದಲ್ಲಿ ಎತ್ತರವಾದ ಜಾಗದಲ್ಲಿದ್ದುದರಿಂದ ಅದನ್ನು ಬಿಡುವ ಕಾರಣವಿರಲಿಲ್ಲ. ಓದುವುದೆಂದರೆ ರಾಮಣ್ಣನಿಗೆ ಇನ್ನಿಲ್ಲದ ಆಶೆ. ಅವನ ಪುಸ್ತಕದ, ಮುಂದಿನ ಪಾಠಗಳನ್ನೆಲ್ಲ ತನಗೆ ತಾನೇ ಓದಿಕೊಂಡುಬಿಟ್ಟಿದ್ದ. ಮುಂದಿನ ಅಧ್ಯಾ೦ಯದ ಲೆಕ್ಕ ಇಂಗ್ಲಿಷ್ ಪುಸ್ತಕವನ್ನು ಬಾಯಿಪಾಠ ಮಾಡಿಹಾಕಿದ್ದ. ಒಂದು ದಿನವಾದರೂ ಸ್ಕೂಲು ಕಳೆದುಕೊಳ್ಳುವುದು ಅವನಿಗೆ ಇಷ್ಟವಿಲ್ಲ. ಉಪವಾಸವೇ ಐದು ಮೈಲಿ ನಡೆದ ಅವನು ಸ್ಕೂಲಿನಲ್ಲಿ ಮಂಕಾಗಿ ಕುಳಿತಿದ್ದ. ಒಂದೂವರೆ ಗಂಟೆ ಹೊಡೆದಾಗ ಊರಿನ ಹುಡುಗರು ತಮ್ಮ ತಮ್ಮ ಶೆಡ್ಡುಗಳಿಗೆ ಊಟಕ್ಕೆ ಹೋದರು. ಹಳ್ಳಿ೦ಯ ಹುಡುಗರು ರೊಟ್ಟಿ ತಿನ್ನಲು ಸ್ಕೂಲಿನ ಹಿಂಬದಿಗೆ ಇದ್ದ ಕೆರೆ೦ಯ ಹತ್ತಿರಕ್ಕೆ ನಡೆದರು. ಒಣಗಿದ ಕೆರೆ೦ಯ ಅಂಗಳದಲ್ಲಿ ಈಗ, ಇಳಿ೦ಯುವ ಬಾವಿ ತೋಡಿದ್ದರು. ಇವನು ಸ್ಕೂಲಿನ ಹಿಂದಿನ ಮರದ ಕೆಳಗೆ ಮುದುರಿಕೊಂಡು ಕೂತಿದ್ದ.

ಮಗ ಉಪವಾಸ ಹೋಗಿದ್ದಾನೆಂದು ಮನೆ೦ಯಲ್ಲಿ ನಂಜಮ್ಮ ಕೊರಗುತ್ತಿದ್ದಳು. ಪಾರ್ವತಿ ಸಪ್ಪೆ ಮುಖ ಹಾಕಿಕೊಂಡು ಒಂದು ಕಡೆ ಕೂತಿದ್ದರೆ, ವಿಶ್ವ ಹಸಿವೆ೦ಯೆಂದು ಗಲಾಟೆ ಮಾಡಿ ಅಮ್ಮನ ಸೆರಗು ಹಿಡಿದು ಎಳೆ೦ಯುತ್ತಿದ್ದ. ಒಂದು ದಿನ ಉಪವಾಸವಿರಬಹುದು; ಎರಡು ದಿನ ಇರಬಹುದು. ಹೀಗೆ೦ಯೇ ಎಷ್ಟು ದಿನ ಇರಲು ಸಾಧ್ಯ? ಅದುವರೆಗೂ ನಂಜಮ್ಮ ೦ಯಾವ ಪಾತ್ರೆ೦ಯನ್ನೂ ಕಾಶಿಂಬಡ್ಡಿ೦ಯ ಹತ್ತಿರ ಅಡವು ಹಾಕಲಿಲ್ಲ. ಮತ್ತೆ ಕೊಳ್ಳಬೇಕಾದರೆ ಇಪ್ಪತ್ತು ರೂಪಾಯಿ ಕೊಡಬೇಕಾದ ಪಾತ್ರೆಗೆ ಕಾಶಿಂಬಡ್ಡಿ ಎರಡು ರೂಪಾಯಿ ಕೊಡುತ್ತಿದ್ದ. ರಾಗಿ೦ಯ ಧಾರಣೆ ರೂಪಾಯಿಗೆ ಎರಡು ಸೇರು ಆಗಿದೆ. ಎರಡು ರೂಪಾಯಿ ಕೊಟ್ಟು ನಾಲ್ಕು ಸೇರು ತಂದರೆ ಒಂದು ದಿನ, ತಪ್ಪಿದರೆ ಒಂದೂವರೆ ದಿನವಾದೀತು. ಮತ್ತೆ ಇನ್ನೊಂದು ಪಾತ್ರೆ ಅಡವಿಡಬೇಕು. ಒಟ್ಟು ಹದಿನೈದು ಇಪ್ಪತ್ತು ದಿನಗಳಲ್ಲಿ ಮನೆ೦ಯ ಪಾತ್ರೆಗಳೆಲ್ಲ ಕಳೆದುಕೊಂಡರೆ ಮುಂದೆ೦ಯೂ ಈ ಉಪವಾಸದ ಸಮಸ್ಯೆ ತಪ್ಪುವುದಿಲ್ಲ. ದೇವರು ಕಾಲವನ್ನು ಹೀಗೆ೦ಯೇ ಇಟ್ಟಿರುವುದಿಲ್ಲ. ಮತ್ತೆ ರಾಗಿ ಸಿಕ್ಕುವ ಕಾಲ ಬರಬಹುದು. ಆದರೆ ಕಳಕೊಂಡ ಪಾತ್ರೆಗಳನ್ನು ಪುನಃ ಮಾಡುವುದು ಸಾಧ್ಯವಿಲ್ಲ. ಅದೂ ಅಕ್ಕಮ್ಮ ತಂದುಕೊಟ್ಟವು ಅವು.

ನಂಜಮ್ಮನ ವಿವೇಕವೇನೋ ಹೀಗೆ ಲೆಕ್ಕ ಹಾಕುತ್ತಿತ್ತು. ಆದರೆ ಹೊಟ್ಟೆಗೂ ಮೆದುಳಿಗೂ ದೂರ ಜಾಸ್ತಿ. ಪಾರ್ವತಿ ಮಲಗಿಬಿಟ್ಟಿದ್ದಾಳೆ. ಅತ್ತು ರಂಪ ಮಾಡಿ ಸಾಕಾದ ವಿಶ್ವ ಅಮ್ಮನನ್ನು ಹೊಡೆದು, ಅವಳ ಕೈಲಿ ಮಾತನಾಡದೆ ಹೋಗಿ ಒಂದು ಮೂಲೆ೦ಯಲ್ಲಿ ಬಿದ್ದುಕೊಂಡಿದ್ದಾನೆ. ಅವಳ ಹೊಟ್ಟೆ೦ಯ ಒಳಗೂ ಉರಿ ಹಾಕಿದ ಹಾಗೆ ಆಗುತ್ತಿದೆ. ೦ಯಜಮಾನರು ಮಧ್ಯಾಹ್ನದಿಂದ ಎಲ್ಲಿಗೋ ಹೋಗಿದ್ದಾರೆ. ಅವರ ತಾಯಿ೦ಯ ಶೆಡ್ಡಿಗೆ ಹೋಗಿರಬಹುದು. ಅಲ್ಲಿ೦ಯೇ ಏನಾದರೂ ಕವಳ ಸಿಕ್ಕಿರಬಹುದು. ಗಂಗಮ್ಮನ ಹತ್ತಿರ ಇನ್ನೂ ರಾಗಿ ಇದೆ. ತಾಯಿ ಮಗ ಇಬ್ಬರೇ ಆದುದರಿಂದ ಅವರು ಸಾಕಷ್ಟು ಹಳೆ೦ಯ ದಾಸ್ತಾನು ಇಟ್ಟಿದ್ದರು. ಕಳೆದ ಮೂರು ತಿಂಗಳಿನಲ್ಲಿ ಎರಡು ಸಲ ನಾಲೆ ಬ೦ಯಲಿನ ಕಡೆಗೆ ದೇಶಾವರಿ ಹೋಗಿ ಅಕ್ಕಿ೦ಯ ಮೂಟೆ೦ಯನ್ನೇ ತಂದಿದ್ದರು. ರಾಮಣ್ಣ ಇನ್ನೂ ಸ್ಕೂಲಿನಿಂದ ಬಂದಿಲ್ಲ. ಕತ್ತಲಾಗಿ ಆಗಲೇ ಎಷ್ಟೋ ಹೊತ್ತಾಗಿದೆ. ಹುಡುಗ ಉಪವಾಸ ಹೋಗಿದ್ದ. ನಡೆ೦ಯಲು ಶಕ್ತಿ ಇಲ್ಲದೆ ಎಲ್ಲಿ೦ಯಾದರೂ ಬಿದ್ದುಬಿಟ್ಟನೋ ಏನು ಕಥೆ೦ಯೋ! ಕಂಬನಕೆರೆ೦ಯ ದಾರಿ೦ಯಲ್ಲಿ ಸ್ವಲ್ಪ ಹೋಗಿ ನೋಡಬೇಕು. ಆದರೆ ಹೆಂಗಸಾದ ತಾನು ಒಬ್ಬಳೇ ಕತ್ತಲೆ೦ಯಲ್ಲಿ ಹೇಗೆ ಹೋಗುವುದು? ಪಾರ್ವತಿ ಮೇಲೆ ಏಳಲಾರದೆ ಮಲಗಿದ್ದಾಳೆ. ಅವಳನ್ನು ಕರೆದುಕೊಂಡು ಹೊರಟರೆ ಶೆಡ್ಡಿನಲ್ಲಿ ವಿಶ್ವ ಒಂದೇ ಹೇಗೆ ಇದ್ದೀತು? ಇಷ್ಟು ಹೊತ್ತಿನಲ್ಲಿ ಶೆಡ್ಡಿನ ಬಾಗಿಲು ಹಾಕಿಕೊಂಡು ಹೋಗುವುದೂ ಅಪಾ೦ಯವೇ. ೦ಯಾರಾದರೂ ನುಗ್ಗಿ ಕೈಗೆ ಸಿಕ್ಕಿದ ಪಾತ್ರೆ ಪರಟೆ ಹೊತ್ತುಕೊಂಡು ಹೋಗಬಹುದು. ಹೊಟ್ಟೆಗಿಲ್ಲದ ಕಾಲದಲ್ಲಿ ಏನು ಸಿಕ್ಕಿದರೂ ಕಳವಾಗುತ್ತದೆ.

ಪಾರ್ವತಿ ವಿಶ್ವರನ್ನು ಮನೆ೦ಯಲ್ಲಿ ಬಿಟ್ಟು–'ಇಲ್ಲೇ ಕೆರೆ ಕಡೆ ಹೋಗ್ತೀನಿ ಇರಿ'ಎಂದು ಹೇಳಿ ಅವಳು ಹೊರಗೆ ಬಂದಳು. ಕಂಬನಕೆರೆ೦ಯ ದಾರಿ೦ಯಲ್ಲಿ ಮೂರು ಫರ್ಲಾಂಗು ನಡೆದರೆ ಮುದಿ ಮಾವಿನಮರವಿದೆ. ೦ಯಾವ ಪುರಾತನ ಕಾಲದ್ದೋ, ಪೊಟರೆಗಳ ತುಂಬ ಗೂಬೆಗಳಿವೆ. ರಾತ್ರಿ೦ಯ ಹೊತ್ತು ಅವು ಕೂಗುವುದು ಇವರ ಶೆಡ್ಡಿಗೂ ಕೇಳಿಸುತ್ತಿರುತ್ತದೆ. 'ಗೂ ಗ್ಗೂ ಗ್ಗೂ, ಗುದ್ಲೀ ತಾ'–ಎಂಬ ಅದರ ಕೂಗೇ ಕೆಟ್ಟ ಸೂಚನೆ. ೦ಯಾರ ಮನೆ೦ಯ ಮೇಲಾದರೂ ಕೂತು ಅದು 'ಗುದ್ಲೀ ತಾ' ಎಂದು ಕೂಗಿದರೆ ಆ ಮನೆ೦ಯಲ್ಲಿ ಒಂದು ಚಿಕ್ಕ ಮಗುವೋ ಹುಡುಗನೋ ಸಾ೦ಯುತ್ತಾರೆ. ದೊಡ್ಡವರು ಸತ್ತರೆ ಸುಡುವುದು, ಚಿಕ್ಕವರನ್ನು ಹೂಳುವುದು. ಬ್ರಾಹ್ಮಣರಲ್ಲದವರಾದರೆ ೦ಯಾರು ಸತ್ತರೂ ಹೂಳುತ್ತಾರೆ. ಆದುದರಿಂದ ಗೂಬೆ ಬ್ರಾಹ್ಮಣರ ಮನೆ೦ಯ

ಮೇಲೆ ಕೂಗಿದರೆ ಹುಡುಗರು ಮಾತ್ರ, ಇತರರ ಮನೆ0ಯ ಮೇಲೆ ಕೂತು ಕೂಗಿದರೆ 0ಯಾರು ಬೇಕಾದರೂ ಸಾ0ಯುವ ಸೂಚನೆ. ಆ ಮರದ ಹತ್ತಿರಕ್ಕೆ ಬರುವ ವೇಳೆಗೆ ನಂಜಮ್ಮನಿಗೆ ಹೆದರಿಕೆ0ಯಾಯಿತು. ಹಿಂತಿರುಗಿ ಹೋಗಿ ಬಿಡಲೇ ಎಂಬ 0ಯೋಚನೆ0ಯೂ ಬಂತು. ಆದರೆ ರಾಮಣ್ಣ ಆ ಮರದ ಕೆಳಗಿನಿಂದಲೇ ಬರಬೇಕು. ಹತ್ತು ವರ್ಷದ ಹುಡುಗ ಹೇಗೆ ಧೈ0ರ್ಯವಾಗಿ ಬಂದೀತು?
ಅವಳು ಹಿಂತಿರುಗಿ ಹೋಗಲಾರಳು, ಅಲ್ಲಿ0ಯೇ ಇರಲಾರಳು. ಆದುದರಿಂದ ಇನ್ನೂ ಎರಡು ಫರ್ಲಾಂಗು ನಡೆದಳು. ದಾರಿ0ಯ ಹತ್ತಿರ ಒಂದು ಕಲ್ಲುಬಂಡೆ ಇತ್ತು. ಅದನ್ನು ಹತ್ತಿ ನಿಂತು, ರಾಮಣ್ಣ ಬರಬೇಕಾದ ದಾರಿ0ಯ ಕಡೆಗೆ ನಿಟ್ಟಿಸುತ್ತ ನಿಂತಳು. ಅರ್ಧ ಗಂಟೆ ಕಳೆದರೂ ಅವನು ಬರಲಿಲ್ಲ. ಅವಳಿಗೆ ಹೆದರಿಕೆ0ಯಾಯಿತು. ಹರಿಶ್ಚಂದ್ರನ ಕಥೆ ಜ್ಞಾಪಕಕ್ಕೆ ಬಂತು. ಚಂದ್ರಮತಿ ರೋಹಿತಾಶ್ವನನ್ನು ಹೀಗೆ0ಯೇ ಕಾ0ಯುತ್ತಿರುತ್ತಾಳೆ. ಆದರೆ ರೋಹಿತಾಶ್ವ ಹಾವು ಕಡಿದು ಸತ್ತುಬಿದ್ದಿದ್ದಾನೆ. ಆಮೇಲೆ, ಅವನ ಜೊತೆ ಹೋಗಿದ್ದ ಇತರ ಹುಡುಗರಿಂದ ವಿಷ0ಯ ತಿಳಿ0ಯುತ್ತದೆ. ಚಂದ್ರಮತಿ ಎಷ್ಟು ಗಟ್ಟಿ0ಯಾಗಿ ಗೊಳೋ ಎಂದು ಅತ್ತಳೋ! ನಂಜಮ್ಮನಿಗೂ ಅಳು ಬಂತು. ಕಂಬನಕೆರೆ ದಾರಿ0ಯಲ್ಲೂ ಹುತ್ತಗಳಿವೆ. ಕಬ್ಬಳ್ಳಿಬುಗದ ಆಚೆಗೆ ಇರುವ ಹುತ್ತದ ದಿಬ್ಬದ ಮಗ್ಗುಲಿಗೇ ದಾರಿ ಇದೆ. ಇಡೀ ದಿಬ್ಬದ ತುಂಬ ಹುತ್ತದ ಕೋಡುಗಳೇ ಸೆಟೆದು ನಿಂತಿವೆ. ಸುತ್ತ ಹಳ್ಳ ಕೊಳ್ಳಗಳಲ್ಲಿ ಕಪ್ಪೆ ಹಿಡಿ0ಯಲು ಹೋಗುವ ಹಾವುಗಳೆಲ್ಲ ಆ ಹುತ್ತಗಳಿಗೇ ಹೋಗಿ ಸೇರಿಕೊಳ್ಳುತ್ತವಂತೆ. ಬರುವಾಗ ಹುಡುಗ ಎತ್ತಲೋ ನೋಡುತ್ತಾ 0ಯಾವುದಾದರೂ ಹಾವನ್ನು ತುಳಿದಿರಬಹುದು. ಅಥವಾ ಹುತ್ತದ ಹತ್ತಿರ ತಲೆ ಹಾಕುತ್ತಿದ್ದ ಹಾವಿಗೆ ಕೀಟಲೆಗೆಂದು ಕಲ್ಲು ಹೊಡೆದಿರಬಹುದು. ದೇವರೇ, ಹಾಗೆ ಏನೂ ಆಗದಿರಲಿ. ರಾಮಣ್ಣ ಜಾಣ ಹುಡುಗ. ಹಾಗೆಲ್ಲ ಕೀಟಲೆ ಮಾಡುವುದಿಲ್ಲ. ಕೀಟಲೆ ಏನಿದ್ದರೂ ವಿಶ್ವನದು.
ಅವಳು ಇನ್ನೂ ಸ್ವಲ್ಪ ಹೊತ್ತು ಹಾಗೆ0ಯೇ ನಿಂತಳು. ಶೆಡ್ಡಿಗೆ ಹಿಂತಿರುಗಿ ಹೋಗಿ 0ಯಾರಾದರೂ ಸುತ್ತಲಿನ ಗಂಡಸರಿಗೆ ಹೇಳಿ ಹುಡುಕಲು ಕಳಿಸಲೇ, ತಾನೂ ಜೊತೆ0ಯಲ್ಲಿ ಹೋಗಲೇ, ಎಂಬ 0ಯೋಚನೆ ಬಂತು. ಹುಟ್ಟಿಸಿದ ಅಪ್ಪನಿಗೆ ಮಾತ್ರ ಇಂತಹ 0ಯಾವ 0ಯೋಚನೆ0ಯೂ ಇಲ್ಲ. ಮಧ್ಯಾಹ್ನದಿಂದ ಅವರ ಮುಖವೂ ಇಲ್ಲ. ಶೆಡ್ಡಿಗೆ ಹಿಂತಿರುಗಲು ಅವಳು ಕಾಲು ತಿರುಗಿಸಿದಳು. ಮತ್ತೆ ಇನ್ನೂ ಸ್ವಲ್ಪ ಹೊತ್ತು ಕಾ0ಯಲು ನಿಂತಳು. ದೃಷ್ಟಿ ರಾಮಣ್ಣ ಬರಬಹುದಾದ ದಿಕ್ಕಿನಲ್ಲಿ0ಯೇ ನೆಟ್ಟಿತ್ತು. ಅವಳು ನಿಂತಿದ್ದ ಜಾಗವೂ ಒಳ್ಳೆ0ಯದಲ್ಲ, ಚೆನ್ನೇನಹಳ್ಳಿ0ಯ ಪಟೇಲ ಶಿದ್ದೇಗೌಡನನ್ನು ಈಗ ಮೂರು ವರ್ಷದಲ್ಲಿ ತಾನೇ, ಅವಳ ಹತ್ತಿರ ಇದ್ದ ಕಲ್ಲುಬಂಡೆ0ಯ ಮಗ್ಗುಲಿನಲ್ಲಿ ಖೂನಿ ಮಾಡಿದ್ದರು. ಬಂಡೆ0ಯ ಮೇಲೆ ಮಲಗಿಸಿಕೊಂಡು ಅವನ ತಲೆ0ಯನ್ನು ಕಲ್ಲುಗುಂಡಿನಿಂದ ಜಜ್ಜಿ ಸಾಯಿಸಿದ್ದರಂತೆ. ಚನ್ನೇಗೌಡ ದೆವ್ವವಾಗಿ ಈ ಬಂಡೆ0ಯ ಹತ್ತಿರ ಕತ್ತಲೆ0ಯ ರಾತ್ರಿಗಳಲ್ಲಿ ಸುತ್ತುತ್ತಿರುತ್ತಾನಂತೆ. ಒಂದೊಂದು ಸಲ ಗೋಳೋ ಎಂದು ಅವನು ಅಳುತ್ತಿರುವುದನ್ನು ತಿಪಟೂರಿನಿಂದ ಗಾಡಿ0ಯಲ್ಲಿ ಬಂದವರು ಕೇಳಿದ್ದಾರೆ.
ನಂಜಮ್ಮನಿಗೆ ಭ0ಯವಾಯಿತು. ಮೈ ಕೈ ಒಂದು ನಿಮಿಷ ಕಂಪಿಸಿತು. ಹಿಂತಿರುಗಿ ಹೋಗಿಬಿಡಲೇ ಎಂಬ 0ಯೋಚನೆ ಬಂತು. ಆದರೆ ಮಗ ಮನೆಗೆ ಬಂದಿಲ್ಲ. ದೊಡ್ಡವಳಾದ ತಾನೇ ಹೆದರಿಕೊಂಡು ಹೋಗಿಬಿಟ್ಟರೆ ಸಣ್ಣ ಹುಡುಗ ಒಬ್ಬನೇ ಹೇಗೆ ಬಂದಾನು?–ಎಂದು 0ಯೋಚಿಸಿ ದಾರಿ ನೋಡುತ್ತ ಅಲ್ಲಿ0ಯೇ ನಿಂತಳು. ಆದರೆ ಕತ್ತಲೆ0ಯಲ್ಲಿ ದೃಷ್ಟಿ ದೂರ ಹೋಗುತ್ತಿರಲಿಲ್ಲ.
ದೆವ್ವ ಒಂದು ಕಡೆ ಇರುವುದಿಲ್ಲವಂತೆ. ಸುತ್ತ ಮುತ್ತ ಅಲೆ0ಯುತ್ತಿರುತ್ತದಂತೆ. ಇಲ್ಲಿಂದ ಹಾಗೆ0ಯೇ ಕಂಬನಕೆರೆ0ಯ ಕಡೆಗೆ ಸಂಚಾರ ಹೋಗಿ, ಒಬ್ಬನೇ ಬರುತ್ತಿದ್ದ ರಾಮಣ್ಣನನ್ನು ಹಿಡಿದುಬಿಟ್ಟಿದ್ದರೆ ಏನು ಗತಿ?–ಎಂಬ 0ಯೋಚನೆ0ಯೂ ಬಂತು. ಆದರೆ ಮನಸ್ಸು ತಕ್ಷಣ ಸಮಾಧಾನ ಹೇಳಿಕೊಂಡಿತು: ದೆವ್ವ ಗಿವ್ವ ಅನ್ನೂದೆಲ್ಲ ಸುಳ್ಳು. ನಮ್ಮ ಅಪ್ಪ, ಕಲ್ಲೇಶಣ್ಣ0ಯ್ಯ, ಎಂಥ ಕತ್ತಲಿನಲ್ಲೂ ಒಬ್ಬೊಬ್ಬರೇ ಹತ್ತು ಹತ್ತು ಹರಿದಾರಿ ಹೋಗೂದಿಲ್ಲವೆ? ದೆವ್ವವೇ ಇದ್ದರೆ ಅವರನ್ನು 0ಯಾಕೆ ಏನು ಮಾಡುಲ್ಲ?–ಈ 0ಯೋಚನೆಯಿಂದ ಮನಸ್ಸು ಸಮಾಧಾನಗೊಂಡರೂ ರಾಮಣ್ಣ ಚಿಕ್ಕ ಹುಡುಗ ಎಂಬ ನೆನಪಾಗಿ, ಮತ್ತೆ ಆತಂಕ ಭ0ಯಗಳು ಆಕ್ರಮಿಸಿದುವು.
ಅಷ್ಟರಲ್ಲಿ 0ಯಾರೋ ಬಂದಂತೆ ಆಯಿತು. ಹೌದು, ಮನುಷ್ಯರೇ. ಆದರೆ ತಲೆ0ಯ ಮೇಲೆ ಏನೋ ದೊಡ್ಡ ಗಂಟು ಇರುವಂತಿದೆ. ಸ್ಕೂಲಿಗೆ ಹೋದ ಹುಡುಗನ ತಲೆ0ಯ ಮೇಲೆ ಗಂಟು ಎಲ್ಲಿಂದ ಬರಬೇಕು? ಅವನು ರಾಮಣ್ಣನಲ್ಲ; ಮತ್ತೆ 0ಯಾರೋ ಇರಬಹುದು. ಅಷ್ಟರಲ್ಲಿ ಅವರು ಆ ದಾರಿ0ಯನ್ನು ಬಿಟ್ಟು ತೋಟದ ಕಡೆ ಹೊರಟಂತೆ ಆಯಿತು. ಆಮೇಲೆ ಏನೋ ನೋಡಿ ಹೆದರಿದವರಂತೆ ಬೇಗ ಬೇಗ ನಡೆದರು. ಅವಳೇ ಧೈ0ರ್ಯ ತಂದುಕೊಂಡು, '0ಯಾರದು?' ಎಂದು ಕೇಳಿದಳು. ಅವರು ಮಾತನಾಡಲಿಲ್ಲ. ಅವಳು ಮತ್ತೊಮ್ಮೆ–'0ಯಾರು ಆ ಕಡೆ ಹೋಗ್ತಿರೂದು?' ಎಂದಾಗ ಅವರು ಅಲ್ಲಿ0ಯೇ ನಿಂತುಕೊಂಡರು. ಆಮೇಲೆ, '0ಯಾರು, ಅಮ್ಮನೇ?'–ಎಂದು ಕೇಳಿದಾಗ ಅವನು ರಾಮಣ್ಣನೆನ್ನುವುದು ಗೊತ್ತಾಯಿತು.
'ನಾನು ಕಣೋ ಮರಿ, ಅದ್ಯಾಕೆ ಆ ಕಡೆ ಹೋಗ್ತಿದೀ0ಯಾ ಕಲ್ಲು ಮುಳ್ನಲ್ಲಿ?'

ರಾಮಣ್ಣ ಹತ್ತಿರ ಬಂದ. ಅವನ ತಲೆ0ುಮೇಲೆ ದಪ್ಪನಾದ ಮೂರು ಹಲಸಿನಕಾಯಿಗಳಿದ್ದುವು. ಈಚಲ ಶೆಬ್ಬೆ0ು ಕಟ್ಟುಹಾಕಿದ್ದ ಅವನ್ನು ಅವನು ಉಟ್ಟ ಲುಂಗಿ0ುನ್ನು ಬಿಚ್ಚಿ ಶಿಂಬಿ ಮಾಡಿ ತಲೆ0ುಮೇಲೆ ಇಟ್ಟುಕೊಂಡಿದ್ದ.

'ಅದ್ಯಾಕೆ ಆ ಕಡೆ ಹೋಗ್ತಿದ್ದೆ ಮರಿ?'–ಅಮ್ಮ ಕೇಳಿದಳು.

'ಅಲ್ಲಿಂದ ದೂರದಲ್ಲಿ ಕರ್ರಗೆ ಕಾಣಿಸ್ತು. ಇಲ್ಲಿ ಕಲ್ಲುಬಂಡೆ ಹತ್ರವಲ್ವೆ ಆವಾಗ ಚೆನ್ನೇನಹಳ್ಳಿ ಶಿವೇಗೌಡುನ್ನ ಖೂನಿ ಮಾಡಿದ್ದು? ಅವ್ನು ದೆವ್ವವಾಗಿದಾನೆ ಅಂತಿರ್ಲಿಲ್ವೆ? ದೆವ್ವ ಅಂತ ತಿಳ್ಕಂಡು ಆ ಕಡೆ ವಾಟಹ್ವಡೀತಿದ್ದೆ. ನೀನು ಅಂತ ನನಗೇನು ಗೊತ್ತು?'

'ಇದುನ್ನೆಲ್ಲಿಂದ ತಂದೆ? ನಾನು ಹೊತ್ಕತ್ತೀನಿ ಕೊಡು'–ಎಂದು, ಹೊರೆ0ುನ್ನು ಅವಳು ತನ್ನ ತಲೆ0ು ಮೇಲೆ ಇಟ್ಟುಕೊಂಡಳು.

'ಅಲ್ಲಿ ದಾರೀಲಿ, ಗೌಡನ ಕೊಪ್ಪಲು ಸಿಕ್ಕುತ್ತಲ್ಲಾ, ಅದರ ಒಂದು ತ್ವಾಟದಲ್ಲಿ ಹಲಸಿನ ಮರದಲ್ಲಿ ಕಾಯಿ ಬಿಟ್ಟುದ್ದುದು ನೋಡಿದ್ದೆ. ಬೇಕು ಅಂತಲೇ ಕತ್ಲೆ ಮಾಡ್ಕಂಡು ಹೊರಟೆ. ಮೆಲ್ಲಗೆ ಬೇಲಿ ನುಸ್ದು ಈ ಮೂರು ಕಾಯಿ ಕಿತ್ಕಂಡು ಬಂದೆ. ಈಚಲು ಕಟ್ಟು ಕಂಬನಕೆರೆ ಹತ್ರುಲ್ಲೇ ಕಿತ್ಕಂಡು ಚೀಲುಕ್ಕೆ ಹಾಕ್ಕಂಡಿದ್ದೆ. ಹಚ್ಚಿ ಪಲ್ಯ ಮಾಡ್ಕಂಡು ತಿಂದ್ರೆ ಹೊಟ್ಟೆ ತುಂಬಲ್ವೇನಮ್ಮ?'

ಮಗನ ಸಾಹಸ ಮತ್ತು ಬುದ್ಧಿವಂತಿಕೆಗೆ ಏನು ಹೇಳಬೇಕೆಂಬುದು ಅವಳಿಗೆ ತಿಳಿ0ುಲಿಲ್ಲ. ಕಳ್ಳತನ ಮಾಡುವುದು, ಸುಳ್ಳು ಹೇಳುವುದು ಪಾಪವೆಂದು ಅವಳು ಮಕ್ಕಳಿಗೆ ಹೇಳಿಕೊಟ್ಟಿದ್ದಳು. ರಾಮಣ್ಣ ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿದ್ದಾನೆ. ಈ ಪಾಪ ಪುಣ್ಯದ ವಿಚಾರ ಅವನಿಗೆ ಗೊತ್ತಿಲ್ಲದೆ ಇಲ್ಲ. ಈಗ ಅವಳು ಮಗನಿಗೆ ಬುದ್ಧಿ ಹೇಳಲು ಹೋಗಲಿಲ್ಲ. ಇಬ್ಬರೂ ಬೇಗ ಬೇಗ ಹೆಜ್ಜೆ ಹಾಕಿದರು. ಮನೆ0ುಲ್ಲಿ ಹುಡುಗರು ಸುಸ್ತಾಗಿ ಬಿದ್ದುಕೊಂಡಿವೆ. ತಾವಿಬ್ಬರೂ ಹಸಿದಿದ್ದಾರೆ. ರಾಮಣ್ಣ ಹತ್ತು ಮೈಲಿ ನಡೆದಿದೆ. ಹಲಸಿನಕಾಯಿ ಹೆಚ್ಚಿ ಪಲ್ಯ ಮಾಡಿದರೆ ಹೊಟ್ಟೆಗೆ ಆಧಾರವಾಗುತ್ತೆ.

ಅವಳು ಶೆಡ್ಡಿಗೆ ಬರುವ ವೇಳೆಗೆ 0ುಜಮಾನರು ಬಂದು ಹಾಸಿಗೆ ಹಾಸಿಕೊಂಡು ಮಲಗಿ ಗೊರಕೆ ಬಿಡುತ್ತಿದ್ದರು. ಹೊಟ್ಟೆ ಭರ್ತಿ ಇರದಿದ್ದರೆ ಗೊರಕೆ ಎಲ್ಲಿಂದ ಬರುತ್ತದೆ, ಎಂಬಷ್ಟು ಅನುಭವ ಅವಳಿಗೂ ಇತ್ತು. ತಿಳಿವಳಿಕೆ ರಾಮಣ್ಣನಿಗೂ ಇತ್ತು. ಇಬ್ಬರಲ್ಲಿ 0ಯಾರೂ ಮಾತನಾಡಲಿಲ್ಲ. ಅವರನ್ನು ಎಬ್ಬಿಸಲೂ ಇಲ್ಲ. ಪಾರ್ವತಿ, ವಿಶ್ವ, ಇಬ್ಬರೂ ಸುರುಟಿಕೊಂಡು ನಿದ್ರೆ ಮಾಡುತ್ತಿದ್ದರು. ಈಳಿಗೆಮಣೆ ತೆಗೆದುಕೊಂಡು ನಂಜಮ್ಮ ಮೂರು ಕಾಯಿಗಳನ್ನೂ ಬೇಗ ಬೇಗ ಹೆಚ್ಚಿದಳು. ಸಿಪ್ಪೆ ಮೂಗುಗಳನ್ನು ತೆಗೆದುಹಾಕಿ, ಸ್ವಲ್ಪ ಬಲಿತಿದ್ದ ಬೀಜವನ್ನೂ ಬೇ0ುಲು ಬಿಟ್ಟಳು. ಅದಕ್ಕೇ ಒಂದು ಹಿಡಿ ಮೆಣಸಿನ ಪುಡಿ ಹಾಕಿದಳು.

ಅದು ಬೇ0ುತ್ತಿರುವಾಗ ರಾಮಣ್ಣ ಮೆಲ್ಲನೆ ಕೇಳಿದ: 'ಅಮ್ಮ, ಒಕ್ಲಿಗರ ಮನೇ ರೊಟ್ಟಿ ತಿಂದ್ರೆ ಪಾಪ ಬರುಲ್ವೇನಮ್ಮ?'

'0ಯಾಕೆ ಮರಿ?'

''ಇವತ್ತು ಮಧ್ಯಾಹ್ನ ನಾನು ತಿಂಡಿ ಇಲ್ದೆ ಮರದ ಕೆಳಗೆ ಕೂತಿದ್ದೆ. ನನ್ನ ಸ್ನೇಹಿತ ಒಬ್ಬ ಇದಾನೆ, ಕೆಂಗಲಾಪುರದ ನರಸೇಗೌಡ ಅಂತ. ಅವನ ರೊಟ್ಟಿ ಉಳಿದಿತ್ತು. ಅದ್ಯಾಕ್ ನೀನು ರೊಟ್ಟಿ ತಿನ್ಲಿಲ್ಲ ಅಂತ ಕೇಳ್ದ. ನಾನು ಹೇಳಲಿಲ್ಲ. ಅವನೇ, 'ತಿಂದ್ರೆ ಏನೂ ಆಗುಲ್ಲ, ನಾನು 0ಯಾರ ಕೈಲೂ ಹೇಳುಲ್ಲ, ತಿನ್ನೋ'– ಅಂತ ಒಂದು ರೊಟ್ಟಿ ಹುಚ್ಚೆಳ್ಳು ಹುಡಿ ಕೊಟ್ಟ. ರೊಟ್ಟಿ ಒಳ್ಳೇ ಅಂಗೈ ಮಂದಕ್ಕಿತ್ತು. ತಿಂದುಬಿಟ್ಟೆ. ಅವ್ನು 0ಯಾರಿಗೂ ಹೇಳುಲ್ಲ ಅಂತ ಅಂಗೈ ಮುಟ್ಟಿ ಭಾಷೆ ಇಕ್ಕಿದಾನೆ.''

ಅಮ್ಮ 0ಯಾವ ಮಾತನ್ನೂ ಆಡಲಿಲ್ಲ. ರಾಮಣ್ಣನೇ, 'ಹೇಳಮ್ಮ, ಅದು ಪಾಪವಾ? ದೇವ್ರು ಏನೂ ಮಾಡಲ್ವ?' ಎಂದು ಇನ್ನೊಂದು ಸಲ ಕೇಳಿದಾಗ ಹೇಳಿದಳು: 'ವಿಶ್ವ ಮಾದೇವ0ಯ್ನೋರ ತಟ್ಟೇಲಿ ಊಟ ಮಾಡ್ತಿರ್ಲಿಲ್ವೆ?'

'ಅವ್ನು ಹುಡುಗ. ನಾನು ದೊಡ್ಡೋನಲ್ವ.'

ಮಗನ ಪ್ರಶ್ನೆಗೆ ಉತ್ತರ ಹೇಳಲು ಅವಳಿಗೆ ತಿಳಿ0ುಲಿಲ್ಲ. ಹುಡುಗರಿಗಿಲ್ಲದ ಪಾಪ ಪುಣ್ಯ ದೊಡ್ಡವರಿಗೆ ಎಲ್ಲಿಂದ ಬರುತ್ತೆ? ಹ್ಯಾಗೆ ಬರುತ್ತೆ?–ಎಂಬ ಪ್ರಶ್ನೆ0ುನ್ನು ಕುರಿತು ಮನಸ್ಸು ಚಿಂತಿಸುತ್ತಿತ್ತು. ರಾಮಣ್ಣನೂ ಮತ್ತೆ ಕೇಳಲಿಲ್ಲ. ಹಲಸಿನ ಹೋಳು ಬೆಂದಮೇಲೆ ಉಪ್ಪುಹಾಕಿ ಕೆಳಕ್ಕೆ ಇಟ್ಟು ಪಾರ್ವತಿ ವಿಶ್ವರನ್ನು ಎಬ್ಬಿಸಿದಳು.

'ಹಲಸಿನಕಾಯಿ ಪಲ್ಯ ತಿಂತೀರಾ?'–ಎಂದು 0ುಜಮಾನರನ್ನು ಕೇಳಿದುದಕ್ಕೆ, 'ನಂಗೇನ್ ಬ್ಯಾಡ' ಎಂದು ಅವರು ನಿದ್ದೆಗಣ್ಣಿನಲ್ಲೇ ಹೇಳಿ ಮತ್ತೆ ಗೊರಕೆ ಶುರುಮಾಡಿದರು. ಪಲ್ಯ ಅದೆಷ್ಟು ರುಚಿ0ಯಾಗಿತ್ತೋ! ಹುಡುಗರು ಹೊಟ್ಟೆ ತುಂಬ ತಿಂದರು. ಜೊತೆಗೆ ಅಮ್ಮನಿಗೂ ಸಾಕಾಯಿತು. ರಾತ್ರಿ ಮಲಗಿದ ಮೇಲೆ ಅವಳು ರಾಮಣ್ಣನಿಗೆ ಹೇಳಿದಳು: 'ಮತ್ತೆ ಹೀಗೆ ಆ ತೋಟಕ್ಕೆ ಹೋಗ್ಬ್ಯಾಡ. ಒಂದು ದಿನ ಕಳ್ಳತನವಾ0ುತ್ತು ಅಂತ ಗೊತ್ತಾದ್ ಮೇಲೆ ಅವರು ಕಾ0ಯ್ತಾ ಇರ್ತಾರೆ.'

ಆಹಾರದ ಹಾಹಾಕಾರ ಹೆಚ್ಚಾದಂತೆಲ್ಲ ಅದರ ಶೋಧನೆಯ ಪ್ರಯತ್ನವೂ ಹೆಚ್ಚಾಯಿತು. ಕೆರೆ ಎಲ್ಲ ಒಣಗಿ, ಅದರ ಬಯಲಿನ ಕರಿಯ ನೆಲ ಬಿರುಕು ಬಿಟ್ಟಿತ್ತು. ಗೋಡು ಮಣ್ಣನ್ನು ಅಗೆದರೆ ಶತ್ತೆಯ ಬೇರು ಸಿಕ್ಕುತ್ತದೆಂದು ಬೆಸ್ತರ ಮಾಟ ಕಂಡು ಹಿಡಿದ. ಒಂದು ದಿನ ಅವನು ಅದನ್ನು ತಂದುದೇ ತಡ, ಊರೆಲ್ಲ ಅಲ್ಲಿಗೆ ನುಗ್ಗಿತು. ಒಬ್ಬೊಬ್ಬರು ಒಂದೊಂದು ಜಾಗದಲ್ಲಿ ಅಗೆಯಲು ನಿಂತರು. ಹೆಬ್ಬೆಟ್ಟು ದಪ್ಪದ ಬೇರುಗಳು ಗೆಣಸಿನಂತೆ ಅಲ್ಲೊಂದು ಇಲ್ಲೊಂದು ಸಿಕ್ಕುತ್ತಿದ್ದವು. ಬೆಳಗಿನಿಂದ ಸಂಜೆಯತನಕ ಒಬ್ಬರು ಹೀಗೆ ಮಣ್ಣು ಶೋಧಿಸಿದರೆ ರಾತ್ರಿ ನಾಲ್ಕು ಜನಕ್ಕೆ ಆಗುವಷ್ಟು ಬೇರು ಸಿಕ್ಕುತ್ತಿತ್ತು. ಕಾಯಕಕ್ಕೆ ನಂಜಮ್ಮ ಪಾರ್ವತಿ ಒಂದು ಕೈಪಿಕಾಸಿ, ಗೆರಸಿಕುಕ್ಕೆ ತೆಗೆದುಕೊಂಡು ಜೊತೆಯಲ್ಲಿ ಹೊರಟರು. ಎಲೆ ಹಚ್ಚುವ ಬದಲು ಈ ಕೆಲಸ. ತಲೆಯ ಮೇಲೆ ಸೆರಗು ಹೊದೆದುಕೊಂಡಿದ್ದರೂ, ಕಾಯುವ ಬಿಸಿಲು ಮುಖ ಮೈಗಳನ್ನು ಸುಡುತ್ತಿತ್ತು. ಮೊದಲ ದಿನ ಬೇರನ್ನು ತಂದು ಬಾವಿಯ ನೀರಿನಲ್ಲಿ ಉಜ್ಜಿ ಉಜ್ಜಿ ತೊಳೆದು ಉಪ್ಪುಕಾರ ಹಾಕಿ ಬೇಯಿಸಿದರೆ ಅದರ ವಾಸನೆ ತಿನ್ನುವುದಕ್ಕೆ ಬಿಡುತ್ತಿರಲಿಲ್ಲ. ಆದರೆ ಹೊಟ್ಟೆ ಕೇಳುತ್ತಿರಲಿಲ್ಲ. ಅಂತೂ ಬೇಯಿಸಿದುದರಲ್ಲಿ ಸ್ವಲ್ಪವೂ ಉಳಿಯಲಿಲ್ಲ. ನಾಳೆ ಬೆಳಿಗ್ಗೆ ಬಿಸಿಲು ಏರುವ ಮೊದಲೇ ಹೋಗಬೇಕೆಂದು ತಾಯಿ ಮಗಳು ನಿಶ್ಚಯಿಸಿದರು.

ಮರುದಿನ ಇವರು ಹೊರಟಾಗ ಸರ್ವಕ್ಕನೂ ಬಂದು ಸೇರಿಕೊಂಡಳು. ಮೂವರೂ ಜೊತೆಯಲ್ಲಿ ಮಣ್ಣು ಅಗೆಯುತ್ತಿದ್ದಾಗ ನಂಜಮ್ಮ ಎಂದಳು: 'ನೋಡ್ರಿ, ಮಾದೇವಯ್ನೋರು ಹೋಗಿಯೇ ಹೋದ್ರು. ಊರಿಗೆ ಈ ಗತಿ ಬಂತು. ಸಾಧು ಸಜ್ಜನರ ಶಾಪ ಒಳ್ಳೇದಲ್ಲ ಅನ್ನೂದು ಇದುಕ್ಕೇ.'

'ಯಾರೋ ನಾಕು ಜನ ಕೈಟ್ಟಮುಂಡೇವು ಹಿಂಗಂದುದಕ್ಕೆ ನೋಡಿ ಊರಿಗೇ ಕೇಡು ಬಂತು.'

'ನಿಮ್ಮ ಜನವೇಯಂತೆ ಅವ್ರುನ್ನ ಹಂಗಂದುದ್ದು.'

'ನಂಜಮ್ಮಾರೇ, ನಿಮಗಿನ್ನೂ ವಳಗಡೆ ಮಾತು ಗೊತ್ತಿಲ್ಲ. ನಮ್ಮ ಜನದೋರ್ ಕೈಲಿ ಹಂಗಂತ ಏಳ್ಕೊಟ್ಟಿದ್ದು ನಮ್ಮನೆಯೋರೇಯಂತೆ. ಇಂತದೆಲ್ಲ ಲಾಯ್ರಿ ಪೈಂಟು ಇವ್ರಿಗೇ ಅಲ್ವಾ ತಿಳಿಯಾದು?'

'ಅವ್ರು ಮತ್ತೆ ಬಂದ್ರೂ ಬರ್ಬ್ಬದು ಅನ್ಸುತ್ತೆ ಕಣ್ರೀ. ಗುಡೀಲಿ ಅವರುದ್ದೊಂದಿಷ್ಟು ಪಾತ್ರೆ, ರಾಗಿ, ಕಾಳು, ಮೆಣಸಿನಕಾಯಿ ಇಟ್ಟು ಹೋಗಿದಾರೆ. ಬೀಗದ ಕೈ ಅವರ ಹತ್ರವೇ ಇದೆ. '

ಏಳೆಂಟು ದಿನ ಸರ್ವಕ್ಕ ಇವರ ಜೊತೆಯಲ್ಲೇ ಗೆಡ್ಡೆ ಅಗೆಯಲು ಬಂದಳು. ಒಂದು ದಿನ ಅವಳೇ ಯಾರಿಗೂ ಕಾಣದಂತೆ ಮುಚ್ಚಿಕೊಂಡು ನಂಜಮ್ಮನ ಶೆಡ್ಡಿಗೆ ಐದು ಸೇರು ರಾಗಿ, ಒಂದು ಸೇರು ಅಕ್ಕಿ ತಂದುಕೊಟ್ಟು ಹೇಳಿದಳು: ' ಯಾರಿಗೂ ಏಳ್ಬ್ಯಾಡಿ ನಂಜಮ್ಮಾರೇ. ನಮ್ಮನೆಯೋರು ಎಲ್ಡು ಮೂಟೆ ರಾಗಿ ಇಪ್ಪತ್ತೈದು ಸೇರು ಅಕ್ಕಿ, ಕಾಪಿ ಬೀಜ, ಎಲ್ಲ ತಂದವ್ರೆ; ಕೋರ್ಟ್ಟಿನ ಕೆಲಸಕ್ಕೆ ತಿಪಟೂರಿಗೆ ಓಗಿದ್ರಂತೆ'.

ಈ ರಾಗಿಯನ್ನು ಮುಚ್ಚಿಟ್ಟು ಒಪ್ಪವಾಗಿ ಮಾಡಿದರೆ ಸ್ಕೂಲಿಗೆ ನಡೆಯುವ ರಾಮಣ್ಣ ಮತ್ತು ಚಿಕ್ಕ ಹುಡುಗ ವಿಶ್ವ, ಇಬ್ಬರಿಗೂ ಎಂಟು ದಿನ ಬೆಳಗಿನ ಹೊತ್ತು ರೊಟ್ಟಿ ಮಾಡಿಕೊಡಬಹುದು. ಈ ಗೆಡ್ಡೆ ತಿಂದು ಹೊಟ್ಟೆ ಉರಿಹತ್ತಿದೆ. ಒಂದು ದಿನವಾದರೂ ಅನ್ನಮಾಡಿ ಹುಣಿಸೆ ನೀರಿನ ಜೊತೆ ತಿನ್ನಬಹುದು. ಸರ್ವಕ್ಕನ ಅಂತಃಕರಣಕ್ಕೆ ನಂಜಮ್ಮನಿಗೆ ಸಂತೋಷವಾಯಿತು. ರೇವಣ್ಣಶೆಟ್ಟಿಯಲ್ಲಿ ಉಳಿದ ದುರ್ಗುಣಗಳೆಷ್ಟಿದ್ದರೂ, ಸಮಯದಲ್ಲಿ ಬುದ್ಧಿ ಉಪಯೋಗಿಸುತ್ತಾನೆ. ಯಾವುದೋ ಕೋರ್ಟಿನ ಗಿರಾಕಿ ಹಿಡಿದು ಏನೋ ಗೋಲಸ್ ಮಾಡಿದಾನೆ. ಇಲ್ಲದಿದ್ದರೆ ಎರಡು ಮೂಟೆ ರಾಗಿ, ಇಪ್ಪತ್ತೈದು ಸೇರು ಅಕ್ಕಿ, ಇವೆಲ್ಲ ತರಲು ದುಡ್ಡೆಲ್ಲಿಂದ ಬರಬೇಕು? ಆದರೆ ಅವನ ಸಂಪಾದನೆ ಎಲ್ಲ ಮನೆಹಾಳು ದಾರಿಯದು–ಎಂದುಕೊಂಡು ನಂಜಮ್ಮ ರಾಗಿ ಬೀಸಲು ಕುಳಿತಳು.

ಐದು ಆರು ದಿನದಲ್ಲಿ ಗ್ರಾಮದ ಬಣಜಿಗರಿಗೂ, ನೊಣಬಗೌಡರಿಗೂ ಉಳಿದ ಮತಸ್ಥರಿಗೂ ಜಗಳ ಹುಟ್ಟಿತು. ಮಾದೇವಯ್ಯನವರು ದೇವಸ್ಥಾನದ ತಮ್ಮ ಕೋಣೆಯಲ್ಲಿ ರಾಗಿ, ಕಾಳುಗಳನ್ನಿಟ್ಟಿದ್ದ ಸಂಗತಿ ಎಷ್ಟೋ ಜನಕ್ಕೆ ಗೊತ್ತು. ನಂಜಮ್ಮ ಸ್ವಾಭಾವಿಕವಾಗಿ ಅದನ್ನು ಸರ್ವಕ್ಕನಿಗೆ ಹೇಳಿದ ಮೇಲೆ ಅವಳು ಅದನ್ನು ಗಂಡನಿಗೆ ಹೇಳಿದಳು. ಆ ದಿನಸಿ ತಮ್ಮ ಮನೆಗೆ ಬರಲಿ ಎಂಬ ಆಶೆ ಅವಳಿಗೆ ಇಲ್ಲದೆ ಇರಲಿಲ್ಲ. ಇಂಥದರಲ್ಲೆಲ್ಲ ರೇವಣ್ಣಶೆಟ್ಟಿಯ ಬುದ್ಧಿ ತುಂಬ ಚುರುಕು. ಒಂದು ದಿನ ಬಿಟ್ಟು ಊರಿನ ಗುಡಿಗೆ ಹೋಗಿ ಆ ಕೋಣೆಯ ಬಾಗಿಲ ಬೀಗ ಮುರಿದು ದಿನಸಿಯನ್ನು ಹೊಡೆದುಕೊಳ್ಳಬೇಕೆಂದು ಅವನು ಯೋಚಿಸಿದ. ಆದರೆ ಬಿಟ್ಟ ಊರಿಗೆ ಒಬ್ಬನೇ ಹೋಗಲು ಹೆದರಿಕೆ. ಸಂಕಲಮ್ಮ ಊರಿನಲ್ಲೆಲ್ಲ ಸಂಚಾರ ಮಾಡುತ್ತಿರುತ್ತಾಳೆ. ಈ ಕೆಲಸಕ್ಕೆ, ಅದೂ ರಾತ್ರಿಯ ಹೊತ್ತು, ಹೋಗಬೇಕು. ಹೋಗಿ ಈಶ್ವರ ಗುಡಿಯ ಒಳಗಣ ಅಂಕಣಕ್ಕೆ ನುಗ್ಗಿ ಬೀಗ ಒಡೆಯಬೇಕು. ಸುಂಕಲಮ್ಮನೆಂದರೆ ಈಶ್ವರನ ಹೆಂಡತಿ ಪಾರ್ವತಿಯೇ ತಾನೇ? ಅವಳ ಗುಡಿಗೇ ಹೋದರೆ ಸುಮ್ಮನಿರಾಕಿಲ್ಲ. ನೆತ್ಲ ಕಾರ್ಕಂಡ್ ಬೀಳಿಸ್ ಬಿಡ್ತಾಳೆ. ಆದರೆ ಅಲ್ಲಿ ಇಟ್ಟಿರುವ ರಾಗಿ ಮತ್ತು ಕಾಳುಗಳ ಆಶೆಯನ್ನ ಅವನು ಬಿಡಲೂ ಆರ. ಒಬ್ಬರಿಗಿಂತ ಇಬ್ಬರು ವಾಸಿ ಎಂದು ಈ ಯೋಚನೆಯನ್ನು ತನ್ನ ದಾಯಾದಿ ಪುಟ್ಟಣ್ಣಶೆಟ್ಟಿಗೆ ಹೇಳಿದ. ಪುಟ್ಟಣ್ಣಶೆಟ್ಟಿ ಆ ದಿನ ರಾತ್ರಿ ತನ್ನ ಹೆಂಡತಿಯ ಕೈಯಲ್ಲಿ ಪಿಸುಗುಟ್ಟಿದ. ಹೀಗಾಗಿ ಅದು ಬಣಜಿಗರಿಗೆಲ್ಲ ತಿಳಿದು ಬಿಟ್ಟಿತು. 'ಮಾದೇವಯ್ನೋರು ನಮ್ಮ ಜಾತಿ. ನಾವೆಲ್ಲ ಒಟ್ಟಿಗೆ

ಹಂಚಿಕಳಾಣ'–ಎನ್ನುವ ಮಟ್ಟಿಗೆ ಮಾತು ಹೋಯಿತು. ಇದು ನೊಣಬಗೌಡರಿಗೆ ತಿಳಿದು, ಒಕ್ಕಲಿಗ, ಕುರುಬ, ಮಗ್ಗ, ಬೆಸ್ತ, ಹೀಗೆ ಊರಿಗೆಲ್ಲ ಹರಡಿತು. 'ಅ೦ಯ್ನೋರು ಬರೀ ಬಣಜಿಗರ ಮನ್ಲೇ ಅಲ್ಲ ಬಿಕ್ಷಾ ಮಾಡಿದ್ದು. ನಮ್ಮ ಜಾತಿ೦ಯೋರೂ ಆಕಿದೀವಿ. ನಂಗೂ ಪಾಲು ಸಿಕ್ಬೇಕು'–ಎಂದು ಪ್ರತಿ೦ಯೊಬ್ಬರೂ ಹಠ ಹಿಡಿದರು. ಈ ಹಠ ಜಗಳಕ್ಕೆ ತಿರುಗಿ ಹೊಡೆದಾಟ ಆಯಿತು. ಕೊನೆಗೆ ಗ್ರಾಮದ ಪಟೇಲ ಶಿವೇಗೌಡ ನ್ಯಾ೦ಯ ಹೇಳಿ, ದಿನಸಿ೦ಯನ್ನು ಪ್ರತಿ೦ಯೊಬ್ಬರೂ ಹಂಚಿಕೊಳ್ಳಬೇಕೆಂದು ನಿರ್ಣ೦ಯ ಮಾಡಿದ. ಎಲ್ಲರೂ ಒಪ್ಪಬೇಕಾಯಿತು. ಪ್ರತಿ೦ಯೊಬ್ಬರಿಗೂ ಎರಡೆರಡು ಸೇರು ರಾಗಿ ಇದರಿಂದ ಸಿಕ್ಕಬಹುದು.

ಒಂದು ದಿನ ಮಧ್ಯಾಹ್ನ ಮನೆಗೆ ಒಂದಾಳಿನಂತೆ ಸೇರಿ ಊರಿನೊಳಕ್ಕೆ ಹೋದರು. ಗುಡಿ೦ಯ ಒಳಗಡೆ ಪ್ರವೇಶಿಸಿ ನೋಡಿದಾಗ ಅ೦ಯ್ಯನವರ ಕೋಣೆ ಬಾಗಿಲಿಗೆ ಬೀಗವೇ ಇರಲಿಲ್ಲ. ಒಳಗೆ ನೋಡಿದರೆ ರಾಗಿ೦ಯ ಚೀಲವೂ ಇಲ್ಲ, ಕಾಳಿನ ಮೂಟೆ೦ಯೂ ಇಲ್ಲ. ಇನ್ನೊಂದು ಮಡಕೆ೦ಯಲ್ಲಿದ್ದ ಮೆಣಸಿನಕಾಯಿ೦ಯೂ ಖಾಲಿ೦ಯಾಗಿದೆ. ಅಲ್ಯುಮಿನಿ೦ಯಂ ಪಾತ್ರೆಗಳು ಮಾತ್ರ ಅಲ್ಲಿ೦ಯೇ ಇವೆ.

'೦ಯಾವನೋ ನನ್ಮಗ ಕೊಟ್ಟವ್ನೆ ಕೈ೦ಯ'–ಎಂದು ಎಲ್ಲರೂ ತೀರ್ಮಾನಿಸಿದರಾದರೂ ಆ ಮಗ ೦ಯಾರೆಂಬುದನ್ನು ಪತ್ತೆ ಹಚ್ಚುವ ೦ಯಾವ ಉಪಾ೦ಯವೂ ೦ಯಾರಿಗೂ ಹೊಳೆ೦ಯಲಿಲ್ಲ. ನಿರಾಶೆಯಿಂದ ಎಲ್ಲರೂ ಹಿಂತಿರುಗಿದರು.

ಕೆರೆ೦ಯ ಶೆತ್ತೆಗೆಡ್ಡೆ ಮುಗಿದುಹೋಯಿತು. ಇಡೀ ಕೆರೆ೦ಯ ಬ೦ಯಲಿನಲ್ಲಿ ಜನಗಳು ಅಗೆ೦ಯದೆ ಬಿಟ್ಟ ಒಂದು ಅಂಗುಲ ಜಾಗವೂ ಉಳಿದಿರಲಿಲ್ಲ. ಅಷ್ಟರಲ್ಲಿ ೦ಯಾರೋ ಒಂದು ದಿನ ಕತ್ತಾಳೆ ಗಿಡವನ್ನು ಕಡಿದು ಅದರ ಗಿಣ್ಣನ್ನು ತಂದು ಬೇಯಿಸಿ ತಿಂದರಂತೆ. ಅದೂ ಶತ್ತೆಗೆಡ್ಡೆ೦ಯ ಹಾಗೆ೦ಯೇ ಇರುತ್ತದೆ ಎಂದು ತಿಳಿದ ಮೇಲೆ ಊರಿನವರ ಗಮನವೆಲ್ಲ ಸುತ್ತಮುತ್ತ ಇದ್ದ ಕತ್ತಾಳೆ ಗಿಡಗಳನ್ನು ಧ್ವಂಸಮಾಡಲು ಹೋಯಿತು. ಶತ್ತೆಗೆಡ್ಡೆ೦ಯಾದರೆ ಅಗೆದು ಅಗೆದು ಆರಿಸಿ ಶೋಧಿಸಿ ಸಾಕಾಗಬೇಕು. ಕತ್ತಾಳೆಗಿಣ್ಣು ದಪ್ಪವಾಗಿರುವುದರಿಂದ ಅಷ್ಟು ಕಷ್ಟ ಪಡಬೇಕಾಗಿ೦ಯೂ ಇರಲಿಲ್ಲ. ಆದುದರಿಂದ ಎಲ್ಲರೂ ಹೊಟ್ಟೆ ತುಂಬವೇ ತಿಂದರು. ತಿಂದ ಎರಡನೆ೦ಯ ದಿನಕ್ಕೇ ಊರಿನವರಿಗೆಲ್ಲ ಭೇದಿ ಶುರುವಾಯಿತು. ಮೊದಲೇ ಒಳಗೆ ಏನೂ ಇಲ್ಲದೆ ಚಕ್ಕಳವಾಗಿದ್ದ ಹೊಟ್ಟೆಗಳು ಈಗ ಭೇದಿ೦ಯೂ ಆದಮೇಲೆ ಮಡಿಸಿಕೊಂಡು ಬೀಳುವ ಹಾಗೆ ಆದವು. ಊರಿನಲ್ಲಿ ಒಟ್ಟು ಹದಿನಾರು ಜನ ಅದರಲ್ಲಿ ಸತ್ತುಹೋದರು. ಉಳಿದವರು ಭೇದಿ೦ಯ ಕಾರಣವನ್ನು ಅರ್ಥಮಾಡಿಕೊಂಡು ಕತ್ತಾಳೆ ಗಿಣ್ಣು ಕಡಿ೦ಯುವುದು ಬಿಟ್ಟುಬಿಟ್ಟರು.

– 6 –

ನಂಜಮ್ಮ, ಪಾರ್ವತಿ, ಸರ್ವಕ್ಕ, ಮೂವರೂ ಕೆರೆಗೆ ಶತ್ತೆಗೆಡ್ಡೆ ಶೋಧಿಸಲು ಹೋಗಿದ್ದಾಗ ಒಂದು ದಿನ ಪಾರ್ವತಿಗೆ ತುಂಬ ತಲೆನೋವು ಬಂತು. ತಲೆಗೆ ಸೆರಗಿನ ಮುಸುಕು ಹಾಕಿಕೊಂಡರೂ ಬಿಸಿಲಿನ ಕಾವಿಗೆ ಅದು ತಡೆ೦ಯಾಗಲಿಲ್ಲ. 'ಮಗ, ನೀನು ಶೆಡ್ಡಿಗೆ ಹ್ವಾಗು. ನಾನು ನಂಜವ್ವಾರು ಆದೋಟು ಕಿತ್ಕಂಡ್ ಬತ್ತೀವಿ'–ಎಂದು ಸರ್ವಕ್ಕ ಹೇಳಿದಳು. ನಂಜಮ್ಮನೂ ಅದೇ ಮಾತು ಹೇಳಿದ ಮೇಲೆ ಪಾರ್ವತಿ ಒಬ್ಬಳೇ ಮನೆಗೆ ಹೊರಟಳು.

ಕಾವಿಗೆ ಬಿರಿದು ಒಡೆದ ಗೋಡುಮಣ್ಣನ್ನು ತುಳಿದುಕೊಂಡು ಗುಡಿ೦ಯ ಸಮೀಪದಿಂದ ಹತ್ತಿ ಏರಿ೦ಯಮೇಲೆ ನಡೆದು ಅವಳು ಶೆಡ್ಡಿನ ಕಡೆಗೆ ಹೋಗುತ್ತಿದ್ದಾಗ ಏರಿ೦ಯ ಕೊನೆ೦ಯಲ್ಲಿ ನರಸಿ ಸಿಕ್ಕಿದಳು. ನೀರಿನ ಕಡೆಗೆ ಹೋಗಿದ್ದಳೆಂದು ಅವಳು ಬಂದ ದಿಕ್ಕೇ ಹೇಳುತ್ತಿತ್ತು. ಅವಳು ಪಾರ್ವತಿ೦ಯನ್ನು ಕೇಳಿದಳು: 'ಗೆಡ್ಡೆ ಕಿತ್ ಆ೦ಯ್ತಾ ಮಗಾ?'

'ಇನ್ನೂ ಇಲ್ಲ ಕಣಮ್ಮ. ತಲೆ ನೋಯ್ತಿತ್ತು ನಾನು ಬಂದೆ.'

'ಹಂಗೆ ನಮ್ಮಂಗ್ಡಿ ತಾವುಕ್ ಬಾ. ಒಂದೀಟು ಕಡ್ಲೆ ಕೊಡ್ತೀನಿ ತಿನ್ನೀವಿ.'

ಪಾರ್ವತಿ ಅದಕ್ಕೆ ಏನೂ ಹೇಳಲಿಲ್ಲ. ಶೆಡ್ಡಿನ ಕಡೆಗೆ ತಿರುಗುವ ಜಾಗ ಬಂದಾಗ ಸುಮ್ಮನೆ ತನ್ನ ಪಾಡಿಗೆ ತಾನು ನಡೆದಳು. ನರಸಿ೦ಯೇ–'ಏನ್ ನಾಚ್ಕಬ್ಯಾಡ ಬಾರವ್ವ. ನಮ್ ಜನ ಮಾಡಿದ್ ಕಡ್ಲೆ ತಿಂದ್ರೆ ಏನೂ ಆಗಾಕುಲ್ಲ' ಎನ್ನುತ್ತಿರುವಷ್ಟರಲ್ಲಿ ಶೆಡ್ಡಿನ ಹತ್ತಿರ ಆಡುತ್ತಿದ್ದ ವಿಶ್ವ ಅಕ್ಕನನ್ನು ಕಂಡು ಹತ್ತಿರ ಬಂತು. ನರಸಿ ಮತ್ತೆ ಕಡಲೆ೦ಯ ಮಾತಾಡಿದುದನ್ನು ಕೇಳಿದ ಅದು 'ನಡಿ೦ಯಕ್ಕ೦ಯ್ಯಾ, ಈಸ್‌ಕಂಡ್ ಬರಾಣ' ಎಂದು ಹಟ ಹಿಡಿಯಿತು. ಇಬ್ಬರೂ ಅಂಗಡಿಗೆ ಬಂದರು. ನರಸಿ ಇಬ್ಬರಿಗೂ ಎರಡೆರಡು ಶಾರೆ ಹುರಿಗಡಲೆ, ಮೇಲೆ ಒಂದೊಂದು ಮುರುಕು ಬೆಲ್ಲ ಕೊಟ್ಟಳು. ವಿಶ್ವ ತನ್ನ ಪಾಲಿನದನ್ನು ಬಾಚಿ ಮುಕ್ಕಲು ಶುರು ಮಾಡಿತು. ಪಾರ್ವತಿ ಒಂದು ಹಿಡಿ೦ಯನ್ನು ಬಾಯಿಗೆ ಹಾಕಿಕೊಂಡಳು. ಆದರೆ ತಕ್ಷಣ ಅವಳ ಕಣ್ಣಿನಲ್ಲಿ ನೀರು ತುಂಬಿಕೊಂಡಿತು. '೦ಯಾಕ್ ಮಗಾ ಅಳ್ತೀ೦ಯಾ?'–ಎಂದು ನರಸಿ ಕೇಳಿದರೆ ಕಣ್ಣೀರು ಇನ್ನೂ ಹೆಚ್ಚಾಗಿ, ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿತು. ನರಸಿ೦ಯೇ ಹತ್ತಿರ ಬಂದು ಅವಳ ಬೆನ್ನು ಸವರಿ ಕೇಳಿದ ಮೇಲೆ ಹೇಳಿದಳು: 'ನಮ್ಮ ರಾಮಣ್ಣ ಉಪಾಸ ಕಂಬನಕೆರೆಗೆ ಹೋಗಿದಾನೆ.'

ನರಸಿಗೆ ದುಃಖವಾಯಿತು. ಇನ್ನೆರಡು ಶಾರೆ ಕಡಲೆ, ಒಂದು ಮುರುಕು ಬೆಲ್ಲವನ್ನು ಪಾರ್ವತಿ೦ಯ ಸೆರಗಿಗೆ

ಹಾಕಿ–'ಅದು ಬಂದಮ್ಯಾಲೆ ಕೊಡು' ಎಂದಮೇಲೆ ಪಾರ್ವತಿ೦ು ಕಣ್ಣೀರು ಕಡಿಮೆ೦ುಾಯಿತು. 'ನಾವು ಹೋಗ್ತೀವಿ ಕಣ್ ನರಸಮ್ಮ'–ಎಂದು ಹೇಳಿ ಅವಳು ವಿಶ್ವನ ಕೈಹಿಡಿದು ಶೆಡ್ಡಿಗೆ ನಡೆದಳು. ಬೀಗ ತೆಗೆದು ಒಳಗೆ ಹೋಗಿ ಚಾಪೆ ಹಾಸಿ ಮಲಗಿದ ಮೇಲೆ ಅವಳ ಮನಸ್ಸು ೦ುೋಚಿಸಲು ಮೊದಲುಮಾಡಿತು. ತಾನು ಇದುವರೆಗೂ ನರಸಮ್ಮನ ಕೈಲಿ ಮಾತನಾಡಿರಲಿಲ್ಲ. ಅವಳು ಕೆಟ್ಟವಳಂತೆ. ಇವತ್ತು ಅವಳೇ ತನ್ನನ್ನು ಕರೆದು ಕಡಲೆ ಕೊಟ್ಟಳು. ತಾನು ತಿನ್ನಬಾರದಾಗಿತ್ತೋ ಏನೋ. ಅದು ಅಮ್ಮನಿಗೆ ಗೊತ್ತಾದರೆ ಬೈ೦ುುತ್ತಾಳೆ. ಅಮ್ಮ ಬಂದಮೇಲೆ ಹೇಳಲೇಕೂಡದು–ಎಂದು ನಿಶ್ಚಯಿಸಿದಳು. ಆದರೆ ರಾಮಣ್ಣನಿಗೆ ಇಟ್ಟುಕೊಂಡಿದ್ದ ಕಡಲೆ೦ು ನೆನಪಾಯಿತು. ಅವನು ಬಂದಮೇಲೆ, ಇದೆಲ್ಲಿ ಬಂತು ಅಂತ ಕೇಳಿದರೆ ಏನು ಹೇಳುವುದು? ಈ ವಿಶ್ವ, ಅಮ್ಮನು ಬಂದ ತಕ್ಷಣ ಹೇಳಿ ಬಿಡುತ್ತೆ. ಈಗ ಏನು ಮಾಡಬೇಕು?–ಎಂದು ಅರ್ಧ ಗಂಟೆ ೦ುೋಚಿಸಿದಳು. ಕೊನೆಗೆ ಒಂದು ಉಪಾ೦ು ಹೊಳೆಯಿತು. ಸೆರಗಿನಲ್ಲಿದ್ದ ಕಡಲೆ ಬೆಲ್ಲವನ್ನು ಬಿಚ್ಚಿ ವಿಶ್ವನಿಗೆ ಕೊಟ್ಟು ಹೇಳಿದಳು: 'ಇದ ನೀನೇ ತಿನ್ನೋ.'

'ರಾಮಣ್ಣನಿಗೆ? ' – ಅವನು ಕೇಳಿದ.

'ಅವ್ನು ಬರೂಹೊತ್ತಿಗೆ ಅಮ್ಮ ಬಂದು ಗೆಡ್ಡೆ ಬೇಸಿರ್ತಾಳೆ. ಅವ್ನಿಗೆ ಹುರಿಗಡ್ಲೆ ಬೆಲ್ಲಸೇರುಲ್ಲ. ನೀನೇ ತಿನ್ನು.'

'ನೀನೊಂದಿಷ್ಟು, ನಾನೊಂದಿಷ್ಟು' –ಎಂದು ವಿಶ್ವ ಹೇಳಿದರೂ ಕೇಳದೆ ಎಲ್ಲವನ್ನೂ ಅವನಿಗೇ ತಿನ್ನಿಸಿದಳು. ಚೊಂಬಿನಲ್ಲಿ ನೀರು ಬಗ್ಗಿಸಿಕೊಂಡು ಅವನು ಕುಡಿದ ಮೇಲೆ ಹತ್ತಿರ ಕರೆದು ಕೂರಿಸಿಕೊಂಡು ಹೇಳಿದಳು: 'ನೋಡು , ಇವತ್ತು ನರಸಮ್ಮನ ಅಂಗ್ಡೀಲಿ ಇದ ತಿಂದಿದ್ದು ಗೊತ್ತಾದ್ರೆ ಅಮ್ಮ ಹ್ವಡೀತಾಳೆ. ೦ುಾರ ಕೈಲೂ ನೀನು ಹೇಳ್ ಕೂಡ್ದು.'

'೦ುಾಕೆ ಹೊಡೀತಾಳೆ?'

'೦ುಾಕೋ? ನರಸಮ್ಮ ಕೆಟ್ಟೋಳು ಅಂತ ಎಲ್ಲಾರೂ ಮಾತಾಡ್ಕಳಲ್ವೆ? ನೀನು ೦ುಾರ ಕೈಲೂ ಹೇಳ್ ಕೂಡ್ದು.'

'ಹೂಂ.'

'ಹಾಗಂತ ಆಣೆ ಇಡು.'

ವಿಶ್ವ ಅವಳ ಅಂಗೈಮೇಲೆ ತನ್ನ ಅಂಗೈಯಿಂದ ಬಡಿದು ಒಂದು ಸಲ ಚಿಗುಟಿ ಭಾಷೆ ಕೊಟ್ಟ. ಆದರೆ ಅಷ್ಟರಿಂದ ಮಾತ್ರ ಅವಳಿಗೆ ಧೈ೦ುರ್ಯ ಬರಲಿಲ್ಲ. ಅವನನ್ನು ಹತ್ತಿರವೇ ಇದ್ದ ಗ್ರಾಮದೇವತೆ ಕಾಳಮ್ಮನ ಗುಡಿಗೆ ಕರೆದುಕೊಂಡು ಹೋಗಿ, ಬಾಗಿಲು ಹಾಕಿದ್ದ ಹೊಸಲನ್ನು ಮುಟ್ಟಿಸಿ ಆಣೆ ಮಾಡಿ–'ಈಗ ಅಮ್ಮನ ಮ್ಯಾಲೆ ಆಣೆ ಹಾಕಿದೀ೦ುಾ. ನೀನೇನಾದ್ರೂ ಹೇಳಿದ್ರೆ ಗುಡೀಲಿರೂ ಬ್ಯಾತಾಳ ಬಂದು ನಿನ್ನ ನುಂಗಿಹಾಕಿಬಿಡುತ್ತೆ' ಎಂದು ಹೆದರಿಸಿದಳು.

'ನಾನೇನು ಹೇಳುಲ್ಲ ಕಣೆ, ನಂಗೊತ್ತಿಲ್ವೆ?'–ಎಂದು ಅವನು ರೇಗಿ ನುಡಿದ ಮೇಲೆ ಅವಳು ಸುಮ್ಮನಾದಳು. ಸಂಜೆಗೆ ಅಮ್ಮ ಮನೆಗೆ ಬಂದು ಗೆಡ್ಡೆ೦ುನ್ನು ತೊಳೆದು ಶೋಧಿಸಿ ಬೇಯಿಸಲು ಇಟ್ಟಳು. ಹೊತ್ತು ಮುಳುಗಿದ ಮೇಲೆ ರಾಮಣ್ಣ ಬಂದ. ಚೆನ್ನಿಗರಾ೦ುರೂ ಎಲ್ಲಿ೦ುೋ ಹೋಗಿದ್ದವರು ಹಿಂತಿರುಗಿದರು. ಗೆಡ್ಡೆ ತಿನ್ನಲು ಕುಳಿತಾಗ ವಿಶ್ವ ಅರ್ಧಕ್ಕೇ ಬೇಡವೆಂದು ಬಿಟ್ಟ. '೦ುಾಕೋ, ಏನು ತಿಂದಿದ್ದೀ೦ುೋ?'–ಎಂದು ಅಮ್ಮ ಕೇಳಿದಾಗ ಪಾರ್ವತಿ೦ು ಉಸಿರು ಹಿಡಿದುಕೊಂಡಿತು.

ಆದರೆ ವಿಶ್ವ, 'ಇವತ್ತು ಚೆನ್ನಾಗಿಲ್ಲ ಕಣಮ್ಮ, ಕೆಟ್ಟ ವಾಸನೆ'–ಎಂದನೇ ಹೊರತು ಮತ್ತೆ ಏನೂ ಹೇಳಲಿಲ್ಲ. ಎಲ್ಲರೂ ತಿಂದಮೇಲೆ ಅವನೇ ಅಕ್ಕನನ್ನು ಶೆಡ್ಡಿನಿಂದ ಹೊರಗೆ ಕರೆದುಕೊಂಡು ಹೋಗಿ–'ನಾನ್ ಹೇಳಿದ್ನೇನೆ?' ಎಂದು ಕೇಳಿದ.

'ಇಲ್ಲ, ನೀನು ಜಾಣ'–ಎಂದು ಮೆಚ್ಚುಗೆ ಹೇಳಿ ಅವಳು ಒಳಗೆ ಬಂದಳು.

– 7 –

ಸುತ್ತಮುತ್ತ ಎಲ್ಲೆಲ್ಲಿ೦ುೂ ಪ್ಲೇಗು ಅಡಗಿಹೋದುದರಿಂದ ಎಲ್ಲ ಹಳ್ಳಿಗಳವರೂ ಶೆಡ್ಡುಗಳನ್ನು ಬಿಟ್ಟು ಊರಿಗೆ ಹಿಂತಿರುಗಿದರು. ರಾಮಸಂದ್ರದವರೂ ಬಂದರು. ಊರಿಗೆ ಬಂದಿದ್ದಕ್ಕೂ ಹೊರಗೆ ಇದ್ದದ್ದಕ್ಕೂ ಹೆಚ್ಚು ವ್ಯತ್ಯಾಸವೇನೂ ಇರಲಿಲ್ಲ. ಅಲ್ಲಿ೦ುೂ ಹೊಟ್ಟೆಗೆ ಇರಲಿಲ್ಲ; ಇಲ್ಲಿ೦ುೂ ಇಲ್ಲ.

ನಂಜಮ್ಮನಿಗೆ ಒಂದು ಉಪಾ೦ು ಹೊಳೆಯಿತು. ಹಿಂದೆ ಅಪ್ಪಣ್ಣ೦ು್ಯ ಗುಡಿಸಲು ಕಟ್ಟಿ ಆಮೇಲೆ ಬೆಂಕಿ ಹಚ್ಚಿ ಸುಟ್ಟುಹಾಕಿದುದು ಗುಂಡೇಗೌಡರ ಹಿತ್ತಲಿನ ಜಾಗ. ಆ ವರ್ಷ ಬರ ಬಂದು ಎಲ್ಲೆಲ್ಲಿ೦ುೂ ಬೆಳೆ ಇಲ್ಲದುದರಿಂದ ನಾಲೆ ಬ೦ುಲನ್ನುಳಿದು ಇತರ ಕಡೆಗಳಲ್ಲೆಲ್ಲ ಸರ್ಕಾರದವರು ರೆವಿನ್ಯೂ ಕಂದಾ೦ುವನ್ನು ವಜಾ ಮಾಡಿದರು. ಆ ವರ್ಷ ವಸೂಲಿಗೆ ಸಹ ಅವರು ಕುರುಬರಹಳ್ಳಿಗೆ ಹೋಗಿರಲಿಲ್ಲ. ವರ್ಷದ ಪೋಟಿಕೆಗೆ ವಜಾ ಹಾಕಿಕೊಳ್ಳಲು ಗುಂಡೇಗೌಡರು ಕೊಟ್ಟು, ಕೊಡಿಸಿದ್ದ ನೂರು ರೂಪಾಯಿ೦ು ದಿಕ್ಕೇನು? ಚೆನ್ನಿಗರಾ೦ುರು ಕಳೆದ ಎಂಟು ದಿನದಿಂದ ಊರಿನಲ್ಲಿರಲಿಲ್ಲ. ಎಲ್ಲಿಗೆ ಹೋಗಿದ್ದಾರೆಂಬುದು ೦ುಾರಿಗೂ ಗೊತ್ತಿಲ್ಲ.

ನಂಜಮ್ಮನೇ ಕುರುಬರಹಳ್ಳಿಗೆ ಹೋಗಿ ಕೇಳಿದಳು: 'ಗೌಡರೇ, ಈ ವರ್ಷ ಕಂದಾಯವಿಲ್ಲ. ನಿಮ್ಮ ದುಡ್ಡನ್ನು ಮುಂದಿನ ವರ್ಷಕ್ಕೆ ಹಾಕ್ಕೊಳ್ತೀನಿ.'

'ಆಯ್ತು ಬುಡವ್ವ, ಈಗ ಹಣ ವಾಪಸ್ ತಾ ಅಂದ್ರೆ ನೀನೆಲ್ಲಿ ತತ್ತೀಯಾ?

'ಇನ್ನೂ ಒಂದು ಮಾತು. ನಿಮ್ಮ ಹಿತ್ಲು ಇದೆಯಲ್ಲ. ಅದಕ್ಕೆ ಬೇಲಿ ಹಾಕ್ಕಂಡು ನಾನು ಒಂದಿಷ್ಟು ದಂಟಿನ ಸೊಪ್ಪು ಬೆಳ್ಕತ್ತೀನಿ.'

'ಬ್ಯಳ್ಕ. ನನ್ ಗಂಟೇನ್ ಹೋಯ್ತದೆ?'

ಮನೆಗೆ ಬಂದ ಮುತ್ತೈದೆ ಎಂದು ಗೌಡರು ಒಂದು ತೆಂಗಿನಕಾಯಿ ಒಂದು ಸೇರು ರಾಗಿಹಿಟ್ಟು ಕೊಟ್ಟು ಕಳುಹಿಸಿದರು. ಅವರನ್ನೂ ಅವರ ಮುಂದಿನ ಪೀಳಿಗೆಯನ್ನೂ ಹರಸುತ್ತಾ ಊರಿಗೆ ಬರುವಾಗ ಒಂದು ಯೋಚನೆ ಬಂತು. ಆ ವರ್ಷದ ಕಂದಾಯವನ್ನೇನೋ ಸರ್ಕಾರದವರು ವಜಾ ಮಾಡಿದಾರೆ. ಆದರೆ ಶ್ಯಾನುಭೋಗರ ಪೋಟಿಕೆಯಂತೂ ಬರುತ್ತೆ. ಯಜಮಾನರ ಕೈಗೆ ಪೂರ್ತಿ ಪೋಟಿಕೆ ಹಣ ಸಿಕ್ಕಿದರೆ ಅದು ಮುಗಿಯುವತನಕ ಅವರು ತಿಪಟೂರಿನ ಹೋಟೆಲನ್ನು ಬಿಡುವುದಿಲ್ಲ. ಹಣ ಅವರ ಕೈಗೆ ಸಿಕ್ಕದಂತೆ ಏನಾದರೂ ಮಾಡಬೇಕು. ಯಾರ ಸಹಾಯ ಕೇಳುವುದು? ಕಂಬನಕೆರೆಗೆ ಹೋಗಿ ಶೇಕ್ದಾರರಿಗೇ ಕೈ ಮುಗಿಯಬೇಕು. ಮತ್ತೆ ಯಾರೂ ಈ ವಿಷಯದಲ್ಲಿ ಸಹಾಯ ಮಾಡಲು ಅಸಮರ್ಥರು–ಎಂದು ತೀರ್ಮಾನಕ್ಕೆ ಬಂದಳು.

ಯಜಮಾನರು ಎಂಟು ದಿನದಿಂದ ಊರಿನಲ್ಲಿರಲಿಲ್ಲ. ಗಂಗಮ್ಮ ಅಪ್ಪಣ್ಣಯ್ಯರೂ ಇಲ್ಲ. ಅವರು ನಾಲೆ ಬಯಲು ಕಡೆ ಬತ್ತದ ದೇಶಾವರಿಗೆ ಹೋಗಿದ್ದಾರೆ. ದಿನವೂ ಸುಖವಾಗಿ ಊಟ ಸಿಕ್ಕುತ್ತದೆಂದು ಇವರೂ ತಾಯಿ ತಮ್ಮನನ್ನು ಕೂಡಿಕೊಂಡಿರಬಹುದು.

ಮರುದಿನ ರಾಮಣ್ಣನ ಜೊತೆ ಅವಳು ಕಂಬನಕೆರೆಗೆ ಹೋದಳು. ತಾಯಿ ಮಗ ಇಬ್ಬರೂ ಶೇಕ್ದಾರರ ಮನೆಗೆ ಹೋಗಿ ಕೈಮುಗಿದಾಗ ಅವರು–'ಏನಮ್ಮಾ ಬಂದ್ರಿ? ಈ ವರ್ಷ ವಸೂಲಿಯೂ ಇಲ್ಲ, ಪಹಣಿಯೂ ಇಲ್ಲ. ಮುಂದಿನ ವರ್ಷ ಏನಾಗುತ್ತೋ ಏನೋ!' ಎಂದರು.

ನಂಜಮ್ಮ ತನ್ನ ಗಂಡನ ವಿಷಯ ಹೇಳಿ, ಪ್ರತಿವರ್ಷವೂ ಕುರುಬರಹಳ್ಳಿಯ ಪಟೇಲ ಗುಂಡೇಗೌಡರು, ಮತ್ತೆ ಇಬ್ಬರ ಕಂದಾಯಕ್ಕೆ ಪೋಟಿಕೆ ವಜಾ ಕಟ್ಟಿಸುತ್ತಿದ್ದುದನ್ನು ತಿಳಿಸಿ, ಈ ವರ್ಷ ಕಂದಾಯ ರಿಮಿಶನ್ ಆಗಿರುವುದರಿಂದ ಉದ್ಭವಿಸಿರುವ ಸಮಸ್ಯೆಯನ್ನು ವಿವರಿಸಿದಳು.

'ನೋಡಿ ಅಮ್ಮ, ಚೆನ್ನಿಗರಾಯರ ಕಥೆ ನಂಗೂ ಗೊತ್ತು. ಈ ಹೋಬಳೀಲಿ ಅವರ ವಿಷಯ ಮಾತಾಡದೇ ಇರೋ ಶ್ಯಾನುಭೋಗರೇ ಇಲ್ಲ. ಆದರೆ ಕಾನೂನು ಪ್ರಕಾರ ನಾನು ಏನೂ ಮಾಡೂಹಾಗಿಲ್ಲ. ಸಾಹೇಬರಿಗೆ ಒಂದು ಮಾತು ಹೇಳ್ತೀನಿ.'

'ನೀವು ಏನಾದರೂ ಮಾಡಿ ಮಕ್ಕಳ ಅನ್ನ ಕೊಡಿಸಿಕೊಡಬೇಕು.'

ಶೇಕ್ದಾರರ ಹೆಂಡತಿ ಗಂಡನಿಗೆ ಹೇಳಿದರು: 'ಇವತ್ತು ಹ್ಯಾಗೂ ತಿಪಟೂರಿಗೆ ಹೋಗ್ತೀರಲ್ಲ. ಇವರುನ್ನೂ ಕರ್ಕಂಡು ಹೋಗಿ ಸಾಹೇಬರಿಗೇ ತೋರಿಸಿ ನೀವೇ ಎಲ್ಲಾ ಹೇಳಿ. ಅವನ ಯೋಗ್ತಿ ಅವರಿಗೆ ಗೊತ್ತಾಗ್ಲಿ.'

ಹನ್ನೊಂದು ಗಂಟೆಯ ಮೊದಲಿಯಾರ್ ಮೋಟಾರಿನಲ್ಲಿ ತಮ್ಮೊಡನೆ ತಿಪಟೂರಿಗೆ ಬರುವಂತೆ ಶೇಕ್ದಾರರು ಕರೆದರು. ಮೋಟಾರು ಛಾರ್ಜಿಗೆ ತಾನು ದುಡ್ಡು ತಂದಿಲ್ಲವೆಂದು ಅವಳು ಜೀವ ಹಿಂಡಿಕೊಂಡು ಹೇಳಿದಮೇಲೆ, 'ಪರವಾಗಿಲ್ಲ, ನಿಂಗೆ ನಾಲ್ಕಾಣೆ, ಹುಡುಗನಿಗೆ ಅರ್ಧ ಛಾರ್ಜು ಹಾಕ್ಕೋ ಅಂತೀನಿ. ಆರಾಣೆ ನಾನೇ ಕೊಡ್ತೀನಿ ಬನ್ನಿ.'

ತಾಯಿ ಮಗ ಇಬ್ಬರಿಗೂ ಅವರ ಮನೆಯಲ್ಲಿ ಉಪ್ಪಿಟ್ಟು ಕಾಫಿ ಆಯಿತು. ಮೋಟಾರು ಹತ್ತಿ ಹನ್ನೆರಡು ಗಂಟೆಯ ಹೊತ್ತಿಗೆ ಇವರು ತಾಲ್ಲೂಕ್ ಆಫೀಸಿಗೆ ಹೋದ ತಕ್ಷಣ ಶೇಕ್ದಾರರು ಹೋಬಳಿ ಗುಮಾಸ್ತನನ್ನು ವಿಚಾರಿಸಿದರು. ಅವನು ಹೇಳಿದ: 'ರಾಮಸಂದ್ರ ಫಿರ್ಖಾದ ಪೋಟಿಕೆ ಕೊಟ್ಟು ಆಗಲೇ ಎಂಟು ದಿ ನವಾಯ್ತಲ್ಲ ಸಾರ್.'

ನಂಜಮ್ಮನ ಎದೆ ಧಸ್ಸಕ್ಕೆಂದಿತು. 'ಈಗ ಏನು ಮಾಡೂದಮ್ಮ?'–ಶೇಕ್ದಾರರು ಕೇಳಿದರು.

'ಹಾಗಾದ್ರೆ ಅವ್ರು ಈ ಊರಿನಲ್ಲೇ ಇರಬೌದು ಸ್ವಾಮಿ. ಪೂರ್ತಿ ದುಡ್ಡು ಇನ್ನೂ ಖರ್ಚಾಗಿರುಲ್ಲ. ನೀವು ದೊಡ್ಡ ಮನಸ್ಸು ಮಾಡಿ ಅವ್ರನ್ನ ಹೆದ್ರಿಸಿದ್ರೆ ಕೊಡ್ತಾರೆ.'

'ಮಾಧವಭಟ್ರ ಹೋಟ್ಲಿನ ಹತ್ರಾನೇ ಇರ್ತಾರೆ ಸಾರ್ ಅವ್ರು. ನೀವು ಈಗ ಬೇಕಾದ್ರೆ ಅಲ್ಲಿಗೆ ಹೋಗಿ. ಒಳಗೆ ಕೂತು ಊಟ ಹೊಡೀತಿರ್ತಾರೆ.'–ಹೋಬಳಿಯ ಗುಮಾಸ್ತ ಹೇಳಿದ.

ಅರಳಿಕಟ್ಟೆಯ ಹತ್ತಿರ ಇದ್ದ ಹೋಟೆಲಿಗೆ ಮೂವರೂ ಹೋದರು. ನಂಜಮ್ಮ ರಾಮಣ್ಣ ಹೊರಗೆ ನಿಂತರು. ಶೇಕ್ದಾರರು ಊಟದ ಹಾಲಿನ ಬಾಗಿಲಿನಲ್ಲಿ ನಿಂತು ಬಗ್ಗಿ ನೋಡಿದರೆ ಗುಮಾಸ್ತನ ಮಾತು ನಿಜವಾಗಿತ್ತು. ಮಣೆಯ ಮೇಲೆ ಕೂತು ಅಗ್ರದ ಬಾಳೆ ಎಲೆಯಲ್ಲಿ ಅವರು ಆಲೂಗಡ್ಡೆ ಬದನೇಕಾಯಿ ನೀರುಳ್ಳಿಗಳ ಸಾಂಬಾರಿನಿಂದ ಕಲಸಿದ ರಾಶಿ ಹಾಕಿಕೊಂಡು ತುತ್ತು ಎತ್ತುತ್ತಿದ್ದರು. ಅನ್ನದ ರಾಶಿಯ ಸುತ್ತಲೂ ಪಲ್ಯ,

ಗೊಜ್ಜು, ಉಪ್ಪಿನಕಾಯಿ, ಹಪ್ಪಳಗಳ ಸಾಮಂತಗುಪ್ಪೆಗಳಿದ್ದವು. ಶೇಕ್ದಾರರು ಅವರನ್ನು ಮಾತನಾಡಿಸಲಿಲ್ಲ. ಹೊರಗೆ ಬಂದು ಒಂದು ಕುರ್ಚಿ೦ಯ ಮೇಲೆ ಕುಳಿತರು. ಅರ್ಧ ಗಂಟೆ೦ಯ ಕಾಲ ಹೊರಗೆ ನಂಜಮ್ಮ ರಾಮಣ್ಣ, ಒಳಗೆ ಶೇಕ್ದಾರರು ಕಾ೦ಯುತ್ತಲೇ ಇದ್ದರು. ಭೋಜನ ಮುಗಿಸಿದ ಶ್ಯಾನುಭೋಗರು ಹೊರಗೆ ಬರುತ್ತಾರೆ: ಶೇಕ್ದಾರರನ್ನು ಕಂಡು ತಕ್ಷಣ ಕೈ ಮುಗಿದು– 'ಕೈ ಮುಗಿದೆ ಮಹಾಸ್ವಾಮಿ' ಎಂದರು.

'ಏನು ಶ್ಯಾನುಭೋಗ್ರೇ ಬಂದಿದ್ರಿ?'

'ಇಇಇಇ ಇಲ್ಲೇ ಒಂದಿಷ್ಟು ಕ್ಯ ಕ್ಯ ಕ್ಯಲ್ಸವಿತ್ತು ಮಾಸ್ವಾಮಿ.'

'ಮೊದಲು ಅವರಿಗೆ ಊಟದ ದುಡ್ಡು ಕೊಡಿ. ಒಂದಿಷ್ಟು ಮಾತಿದೆ.'

ಚೆನ್ನಿಗರಾ೦ಯರು ಹತ್ತು ಆಣೆ ಕೊಟ್ಟು ಹೊರಗೆ ಬಂದರೆ ಹೆಂಡತಿ ಮಗ ನಿಂತಿದ್ದಾರೆ. ಶೇಕ್ದಾರರು, 'ನೋಡಿ, ನಿಮ್ ಮ್ಯಾಲೆ ಪೋಲೀಸ್ ವಾರಂಟ್ ಇದೆ. ಅಮಲ್ದಾರ್ ಸಾಹೇಬ್ರು ನಿಮ್ಮನ್ನ ಅರೆಸ್ಟ್ ಮಾಡಿಸೋಕೆ ಹೇಳಿದಾರೆ.'

ಚೆನ್ನಿಗರಾ೦ಯರು ನಡುಗಿಹೋದರು. ಶೇಕ್ದಾರರು: 'ರೈತರ ಹತ್ರ ಪೋಟಿಗೇಲಿ ಕಟಾಯ್ಸ್ತೀನಿ ಅಂತ ಹೇಳಿ ಕಂದಾ೦ಯ ತಗಂಡು ಇಲ್ಲಿ ಬಂದು ಪೋಟಿಗೆ ಖರ್ಚು ಹಾಕಿಸಿ ಕಂಡಿದೀರಲ್ಲ, ಅದು ಕ್ರಿಮಿನಲ್ ಅಲ್ವೆ?'

'ತಪ್ಪಾ೦ಯ್ತು ಸ್ವಾಮಿ, ಈ ಈ ಮುಂ.....'ಎಂದವರು ತಕ್ಷಣ ನಾಲಿಗೆ ಬಿಗಿಹಿಡಿದು ಕೇಳಿದರು:'ಇವ್ರು ಹೇಳಿದ್ಲಾ ಸ್ವಾಮಿ.'

'೦ಯಾರಾದ್ರೂ ಹೇಳ್ಲಿ. ಸಾಹೇಬ್ರ ಆಫೀಸಿಗೆ ಬನ್ನಿ.'

'ನಿ ನಿಮ್ ಕಾಲಿಗೆ ಬೀಳ್ತೀನಿ ಸ್ವಾಮಿ. ಪೋಲೀಸ್ನೋರ್ಗೆ ಹಿಡ್ಕೊಡ್ ಬ್ಯಾಡಿ. ನಾನು ಮ೦ರ್ಯಾದಸ್ಥ.'

'ಆ೦ಯ್ತು, ನಿಮ್ಮ ಹತ್ರ ಈಗ ಎಷ್ಟು ರೂಪಾಯಿ ಇದೆ? ತೆಗೆದು ನನ್ನ ಕೈಲಿ ಕೊಡಿ. ಈ ನಿಮಿಷವೇ ತೆಗೀಬೇಕು. ಹುಂ.'

'ಕೊಡ್ತೀನಿ ಸ್ವಾಮಿ. ವಳಗಡೆ ಇದೆ.'

'ಆದ್ರೂ ಪರವಾಗಿಲ್ಲ. ಇಲ್ಲೇ ತೆಕ್ಕೊಡ್ ಬೇಕು.'

ಚೆನ್ನಿಗರಾ೦ಯರು ತಮ್ಮ ಅಂಗಿ೦ಯನ್ನು ಎತ್ತಿ ಕಚ್ಚೆಪಂಚೆ೦ಯ ಗಂಟಿನಿಂದ ನುಸಿಸಿ ಲಂಗೋಟಿ೦ಯ ಜೊತೆಗೆ ಕಟ್ಟಿದ ಅರಿವೆ ಬಳಲಿನ ಒಂದು ಗಂಟನ್ನು ತೆಗೆದರು. ಹತ್ತು ರೂಪಾಯಿಗಳ ಆರು ನೋಟು, ಐದರದು ಒಂದು ಇದ್ದವು. ಹಣವನ್ನು ಎಣಿಸಿದ ಶೇಕ್ದಾರರು ಕೇಳಿದರು: 'ಉಳಿದದ್ದು ಏನಾ೦ಯ್ತು?'

'ಖರ್ಚಾತು ಸ್ವಾಮಿ.'

'ಮನೇಲಿ ಹೆಂಡ್ತಿ ಮಕ್ಳನ್ನ ಉಪವಾಸ ಕೆಡವಿ ಇಲ್ಲಿ ಬಂದು ಹಂದಿ ತಿಂದ ಹಾಗೆ ತಿಂತೀ೦ಯಲ್ಲ, ನಾಚಿಕೆ೦ಯಾಗುಲ್ವೇನ೦ಯ್ಯ ನಿಂಗೆ? ಹಸಿದಿರೋ ನಾಯಿಗೆ ರೊಟ್ಟಿ ಹಾಕಿದ್ರೂ ಕಚ್ಕಂಡು ಹೋಗಿ ಅದರ ಮರಿಗೆ ಕೊಡುತ್ತೆ'–ಎಂದು ಬೈದ ಅವರು, ಹಣವನ್ನು ನಂಜಮ್ಮನ ಕೈಗೆ ಕೊಟ್ಟು ಚೆನ್ನಿಗರಾ೦ಯರಿಗೆ ಹೇಳಿದರು: 'ಶ್ಯಾನುಭೋಗಿಕೆ ಲೆಕ್ಕ ಬರಿ೦ಯುಕ್ಕೆ ನಿಂಗೆ ಬರುಲ್ಲ. ಈ೦ಯಮ್ಮನೇ ಬರೆ೦ಯೋದು ಅಂತ ನಂಗೆ ಗೊತ್ತಿದೆ. ಇನ್ನೊಂದು ದಿನ ಏನಾದ್ರೂ ಹೀಗೆ ಹೆಂಡ್ತಿ ಮಕ್ಳಿಗೆ ಕಾಣದ ಹಾಗೆ ಪೋಟಿಗೆ ತಗಂಡು ತಿಂದ್ರೆ ನಿನ್ನ ಅರೆಸ್ಟ್ ಮಾಡಿಸಿಬಿಡ್ತೀನಿ. ನಾನು ವರ್ಗವಾಗಿ ಹೋದ್ರೂ ಮುಂದಿನ ಶೇಕ್ದಾರರಿಗೆ ಹೇಳಿ ಹೋಗ್ತೀನಿ. ಸಾಹೇಬರ ಕೈಲೂ ಹೇಳ್ತೀನಿ.'

ಚೆನ್ನಿಗರಾ೦ಯರು ಬೀದಿ೦ಯಲ್ಲಿ೦ಯೇ ಬಾಗಿ, ಬೂಟು ಹಾಕಿದ್ದ ಅವರ ಕಾಲು ಹಿಡಿದುಕೊಂಡು–'ಸಾಹೇಬ್ರಿಗೆ ಹೇಳ್ ಬ್ಯಾಡಿ ಸ್ವಾಮಿ. ನಾನು ಬಡವ' ಎಂದು ನಡುಗುತ್ತಾ ಕೇಳಿಕೊಂಡಮೇಲೆ ಶೇಕ್ದಾರರು, 'ಅಮ್ಮಾ, ನಾಕು ಗಂಟೆಗೆ ಮೋಟಾರಿದೆ. ಅಷ್ಟರಲ್ಲಿ ನೀವು ಏನಾದ್ರೂ ಸಾಮಾನು ಗೀಮಾನು ತಗೂಳೂದಿದ್ರೆ ತಗಳಿ. ನಾನು ತಾಲ್ಲೂಕ್ ಆಫೀಸಿಗೆ ಹೋಗ್ ಬೇಕು. ಅದೇ ಬಸ್ಸಿನಲ್ಲಿ ನಾನೂ ಬರ್ತೀನಿ' ಎಂದು ಹೇಳಿಹೋದರು. ಚೆನ್ನಿಗರಾ೦ಯರು ಮಾನಭಂಗವಾದವರಂತೆ ಅರಳೀಕಟ್ಟೆ೦ಯ ಮೇಲೆ ಹತ್ತಿ ತಲೆ೦ಯನ್ನು ಮಂಡಿಗಳ ಸಂದಿನಲ್ಲಿ ಬಗ್ಗಿಸಿಕೊಂಡು ಕುಕ್ಕರಗಾಲಿನಲ್ಲಿ ಕುಳಿತುಬಿಟ್ಟರು. ರಾಮಣ್ಣ, 'ಅಮ್ಮ, ಹೋಟ್ಲಲ್ಲಿ ನಾನು ೦ಯಾವತ್ತೂ ಊಟ ಮಾಡಿಲ್ಲ. ಇವತ್ತು ಇಕ್ಕಿಸು' ಎಂದ.

'ಊರಲ್ಲಿ ಅಕ್ಕ೦ಯ್ಯ, ವಿಶ್ವ ಉಪವಾಸ ಇವೆ೦ಯಲ್ಲಾ ಮರಿ. ಬೆಳಿಗ್ಗೆ ಒಂದೊಂದು ರೊಟ್ಟಿ ತಿಂದಿದ್ವು.' ಅವನು ಉತ್ತರ ಹೇಳಲಿಲ್ಲ. ಮುಖ ಸಪ್ಪಗೆ ಮಾಡಿಕೊಂಡ. ಅಮ್ಮನ ಹೊಟ್ಟೆ ಚುರ್ ಎಂದಿತು. ಮಗನನ್ನು ಒಳಗೆ ಕರೆದುಕೊಂಡು ಹೋಗಿ–'ಈ ಹುಡುಗ್ನಿಗೆ ಊಟಕ್ಕೆ ಎಷ್ಟು?' ಎಂದು ಕೇಳಿದಳು. ಅವರು– 'ಆರಾಣೆ'ಎಂದರು. 'ಇವನಿಗೆ ಇಕ್ಕಿ'–ಎಂದುದಕ್ಕೆ ಅವನು, 'ಅಮ್ಮ, ನೀನು ಮಾಡದಿದ್ರೆ ನಂಗೂ ಬ್ಯಾಡ' ಎಂದ. ಅವಳು ಕುಳಿತಳು. ದೊಡ್ಡವರಿಗೆ ಹತ್ತಾಣೆ. ಗಮ ಗಮ ಎನ್ನುವ ಹಾಗೆ ಅಡಿಗೆ ಮಾಡಿದ್ದರು.

'ಸಾಮಾನೆಲ್ಲ ಇದ್ರೆ ಮನೇಲಿ ನಾವೂ ಹೀಗೇ ಮಾಡ್ಬೌದು. ನೀನು ದೊಡ್ಡೋನಾಗಿ ಸಂಬಳ ತರುವಾಗ ನಾನು ಚನ್ನಾಗಿ ಮಾಡಿ ಇಕ್ತೀನಿ'–ಎಂದು ಹೇಳುತ್ತಾ ಅವಳು ಊಟ ಮುಗಿಸಿದಳು. ಇಬ್ಬರಿಂದ ಒಂದು ರೂಪಾಯಿ ಆಯಿತು. ಮನೆ೦ಯಲ್ಲಿ ಮಕ್ಕಳಿಗೆಂದು ನಾಲ್ಕಾಣೆಗೆ ಖಾರಾ ಶೇವು, ನಾಲ್ಕಾಣೆಗೆ ಕಡಲೆಪುರಿ, ಎಂಟಾಣೆಗೆ

ಮೈಸೂರು ಪಾಕುಗಳನ್ನು ಕಟ್ಟಿಸಿಕೊಂಡು ಅವಳು ಹತ್ತಿರವೇ ಇದ್ದ ಒಂದು ದೊಡ್ಡ ಅಂಗಡಿಗೆ ಹೋಗಿ ವಿಚಾರಿಸಿದರೆ ರಾಗಿ೦ು ಧಾರಣೆ ಪಲ್ಲಕ್ಕೆ ಮೂವತ್ತೇ ರೂಪಾಯಿ. ಅದೇ ರಾಮಸಂದ್ರದಲ್ಲಿ ಐವತ್ತಕ್ಕೆ ಮಾರುತ್ತಿತ್ತು. ಅರವತ್ತು ರೂಪಾಯಿ ಕೊಟ್ಟು ಎರಡು ಪಲ್ಲ ರಾಗಿ ಕೊಂಡು, ಅದನ್ನು ಮೋಟಾರಿಗೆ ಹಾಕಿಸಿಕೊಡುವಂತೆ ಅಂಗಡಿ೦ುವನನ್ನೇ ಕೇಳಿಕೊಂಡಳು. ಅದೇ ಬಸ್ಸಿಗೆ ಬಂದ ಶೇಕ್ದಾರರು ಹೇಳಿದ ಮೇಲೆ ಮೋಟಾರಿನವನು ರಾಗಿ೦ು ಮೂಟೆಗಳಿಗೆ ಛಾರ್ಜು ಮಾಡಲಿಲ್ಲ. ಚೆನ್ನಿಗರಾ೦ುರು ಎಲ್ಲಿ ಹೋದರೋ ೦ುಾರಿಗೂ ಗೊತ್ತಾಗಲಿಲ್ಲ.

ಊರಿಗೆ ಒಂದು ಮೈಲಿ ದೂರದ ರಸ್ತೆ೦ುಲ್ಲಿ ರಾಗಿ೦ು ಮೂಟೆಗಳನ್ನು ಇಳಿಸಿ ಮೋಟಾರು ಮುಂದೆ ಹೋದಾಗ, ರಾಮಣ್ಣ ಊರಿಗೆ ಹೋಗಿ ಕುಳವಾಡಿಗೆ ಹೇಳಿ ಒಂದು ಗಾಡಿ ಹೂಡಿಸಿಕೊಂಡು ಬಂದ. ಅದುವರೆಗೂ ಮೂಟೆ೦ುನ್ನು ಕಾ೦ುುತ್ತಾ ನಂಜಮ್ಮ ರಸ್ತೆ೦ು ದಡದಲ್ಲೇ ಇದ್ದಳು.

ಚೆನ್ನಿಗರಾ೦ುರು ಮರುದಿನ ಕಾಲುನಡಿಗೆ೦ುಲ್ಲಿ ಒಂದು ಊರು ಸೇರಿದರು. ನಂಜಮ್ಮ ಅವರನ್ನು ಏನೂ ಅನ್ನಲಿಲ್ಲ. ರಾಮಣ್ಣ ಅಪ್ಪನನ್ನು ಛೇಡಿಸುವ ಮಾತನಾಡಿದಾಗ ಅವಳೇ–'ಮಗೂ ಅವರು ಏನೇ ಮಾಡಿದರೂ ಹೆತ್ತ ತಂದೆ. ನೀನು ಜಾಣ. ಹಾಗೆಲ್ಲ ಅವರನ್ನ ಅನ್ಬಾರ್ದು' ಎಂದು ಹೇಳಿ ಸುಮ್ಮನಾಗಿಸಿದಳು.

ಮನೆಗೆ ಎರಡು ಪಲ್ಲ ರಾಗಿ ಬಂದದ್ದು ಎಲ್ಲರಿಗೂ ಸ್ವರ್ಗದ ಕಾಮಧೇನುವೇ ಬಂದಷ್ಟು ಸಂತೋಷ. ಹೊಟ್ಟೆಗಿಲ್ಲದೆ ನಂಜಮ್ಮ ಒಣಗಿದ ಹತ್ತಿ೦ು ಗಿಡದಂತೆ ಆಗಿದ್ದಳು. ತುಂಬಿಕೊಂಡು ಬೆಳೆ೦ುುತ್ತಿದ್ದ ಪಾರ್ವತಿ ರಾಮಣ್ಣರು ಸೀಕಲು ಕೋತಿಗಳಾಗಿದ್ದರು. ವಿಶ್ವ ಮೊದಲಿನಿಂದ ತುಂಬ ದಷ್ಟಪುಷ್ಟನಾದ ಹುಡುಗ. ಈಗ ಅವನನ್ನೂ ನೋಡುವಂತಿರಲಿಲ್ಲ. ಇದು ಅವರೊಬ್ಬರ ಪಾಡಲ್ಲ. ಊರಿನಲ್ಲಿ ಮುಕ್ಕಾಲು ಜನರ ಸ್ಥಿತಿ ಹೀಗೆ೦ುೇ ಆಗಿತ್ತು. ಉಳಿದ ಕಾಲುಭಾಗ ಚನ್ನಾಗಿದ್ದರು. ಇವರ ಮನೆ೦ುಲ್ಲಿ ಚೆನ್ನಿಗರಾ೦ುರ ಕಾ೦ು ಸ್ವಲ್ಪ ಕಂದಿದ್ದರೂ ಇದ್ದದ್ದರಲ್ಲಿ ಚನ್ನಾಗಿತ್ತು.

ಹೊಟ್ಟೆ ತುಂಬ ತಿಂದರೆ ರಾಗಿ ಎರಡು ತಿಂಗಳಿಗೆ ಚಟ್ಟೆದ್ದುಹೋಗುತ್ತೆ. ದಿನಕ್ಕೆ ಎರಡು ಸೇರಿಗಿಂತ ಹೆಚ್ಚು ಖರ್ಚು ಮಾಡಕೂಡದೆಂದು ನಂಜಮ್ಮ ನಿರ್ಧರಿಸಿದಳು. ಈ ವರ್ಷ ಇನ್ನೂ ಮಳೆ೦ುಾಗಿಲ್ಲ; ಮುಂದೆ ಕಾಲ ಇದಕ್ಕಿಂತ ಕೆಡಬಹುದು ಎಂದು ೦ುೋಚಿಸಿದ ಅವಳು ಪಾರ್ವತಿಗೆ ಹೇಳಿದಳು: 'ಬೆಳಗ್ಗೆ ಸಮನಾಗಿ ಏಳು ರೊಟ್ಟಿ ಮಾಡು. ಎಲ್ಲ ರೊಟ್ಟಿ೦ುೂ ಒಂದೇಸಮಕ್ಕಿರಬೇಕು. ಎಲ್ಲರಿಗೂ ಒಂದೊಂದು ರೊಟ್ಟಿ. ರಾಮಣ್ಣ ಒಂದು ತಗಂಡು ಹೋಗ್ತಾನೆ. ಮಧ್ಯಾಹ್ನ ವಿಶ್ವ, ನೀನು, ಅರ್ಧ ಅರ್ಧ ತಿನ್ನಿ. ಇನ್ನು ರಾತ್ರಿತನಕ ಏನೂ ಇಲ್ಲ. ರಾತ್ರಿ ಒಂದು ಸೇರು ರಾಗಿ ಬೀಸಿ ಹಿಟ್ಟು ಹು೦ುು್ದ ಸಮನಾಗಿ ಐದು ಮುದ್ದೆ ಕಟ್ಟು. ೦ುಾರಿಗೆ ಸಾಕಾದರೂ ಅಷ್ಟೇ ಬೇಕಾದರೂ ಅಷ್ಟೇ.'

ಈ ವ್ಯವಸ್ಥೆ೦ು ಊಟ ಹುಡುಗರಿಗೆ ಹೇಗೋ ಹೊಟ್ಟೆ ತುಂಬಿದಂತೆ ಆಗುತ್ತಿತ್ತು. ನಂಜಮ್ಮ ಹಸಿವು ತಡೆ೦ುುವುದಕ್ಕೆ ಸಿದ್ಧಳಾಗಿ೦ುೇ ಇದ್ದಳು. ಚೆನ್ನಿಗರಾ೦ುರ ಹೊಟ್ಟೆಗೇ ತಾಪತ್ರ೦ು. ಅವರು ಹೆಂಡತಿ೦ು ಮೇಲೆ ರೇಗಿದಾಗ, ರಾಮಣ್ಣ ಪಾರ್ವತಿ೦ುರೇ ತಿರುಗಿಬಿದ್ದರು. ಜೊತೆಗೆ ಕಿರಿ೦ುವನಾದ ವಿಶ್ವ–'ನೀನು ಅಣ್ಣನಲ್ವೆ, ಅಕ್ಕಿ ತಂದ್ಬಾಕು. ನಾನು ಅನ್ನ ಉಣ್ಣಬೇಕು' ಎಂದು ಕೇಳಿತು.

'ಇವರವ್ವನಾ..... ಹಿಡಕಂಡು'–ಎಂದು ಬೈ೦ುುತ್ತಾ ಅವರು ಏರಿ೦ು ಕಡೆಗೆ ಹೊರಟು ಹೋದರು.

ಅಡಿಗೆ ಮತ್ತು ಇತರ ಕೆಲಸಗಳನ್ನು ಪೂರ್ತಿ೦ುಾಗಿ ಪಾರ್ವತಿ೦ು ಮೇಲೆ ಬಿಟ್ಟು ನಂಜಮ್ಮ ಹಿತ್ತಿಲನ್ನು ಒಂದು ಹದಕ್ಕೆ ತರಲು ನಿಂತಳು. ಅಪ್ಪಣ್ಣ೦ು್ಯ ಸುಟ್ಟುಹಾಕಿದ ಮೇಲೆ ಮಸಿ ಕಟ್ಟಿದ ಗೋಡೆಗಳು ಹಾಗೆ೦ುೇ ನಿಂತಿದ್ದವು. ಅವುಗಳನ್ನೆಲ್ಲ ಹಾರೆಯಿಂದ ಉರುಳಿಸಿ ಕೆಡೆವಿದ ಮೇಲೆ ಅವಳು ಇಡೀ ಹಿತ್ತಿಲಿಗೆ ಬೆಳಿಗ್ಗೆ ಸಂಜೆ ಬಾವಿಯಿಂದ ನೀರು ಸೇದಿಹು೦ು್ದಳು. ಒಂದು ವರ್ಷದಿಂದ ನೀರನ್ನೇ ಕಾಣದ ನೆಲದ ಒಂದೊಂದು ಮೊಳ ಜಾಗವೂ ಬಿಂದಿಗೆ ಬಿಂದಿಗೆ ನೀರು ಕುಡಿಯಿತು. ನೆಲ ಮೆದುವಾದ ಮೇಲೆ, ತಾನೇ ಒಂದು ಕಡೆಯಿಂದ ಅಗೆ೦ುಲು ಶುರುಮಾಡಿದಳು. ಹೊಲೆ೦ುರ ಬೇಲೂರನಿಗೆ ಎರಡು ರೂಪಾಯಿಕೊಟ್ಟು ಒಂದು ಗಾಡಿ ಬಿದಿರುಮುಳ್ಳು ತರಿಸಿದಳು. ಹಿತ್ತಲಿನ ನಾಲ್ಕು ಕಡೆಗೂ ಸಾಲಿಗೆ ಕಳ್ಳೀಕೊಂಬೆಗಳನ್ನು ನೆಟ್ಟು ಬಿಗಿ೦ುಾಗಿ ಎರಡು ವರಸೆ ಬಿದಿರುಮುಳ್ಳು ಕೊಟ್ಟು ಈಚಲು ಶಬ್ಬೆಯಿಂದ ಕಟ್ಟಿದಳು. ನಡುವೆ ತೆಳ್ಳಗೆ ಗೊಬ್ಬಳಿ೦ು ಮುಳ್ಳು ಸೇರಿಸಿ ಬೇಲಿ೦ುನ್ನು ಬಂದೋಬಸ್ತ್ ಮಾಡಿ ಒಂದು ಬಾಗಿಲು, ತದ್ದಲು ಕಟ್ಟಿ ಬೀಗ ಹಾಕುವಂತೆ ಮಾಡಿದಳು. ಒಂದು ಸ್ವಲ್ಪ ಜಾಗಕ್ಕೆ ದಂಟು, ಇನ್ನು ಸ್ವಲ್ಪಕ್ಕೆ ಕೀರೇಗಿಡಗಳನ್ನು ಹಾಕಿದ ಮೇಲೆ, ತಾನೇ ಕಂಬನಕೆರೆ೦ು ಸಂತೆಗೆ ಹೋಗಿ ತಿಂಗಳು ಹುರುಳಿ, ಬದನೆ ಬೀಜಗಳನ್ನು ತಂದಳು. ಬದನೆ೦ು ಒಟ್ಟಲುಹಾಕಿ ಗುಣಿ ತೋಡಿ ತಿಂಗಳುಹುರುಳಿ೦ು ಬೀಜ ಬಿತ್ತಿದಳು. ಹೊಟ್ಟೆಗಿಲ್ಲದಿದ್ದರೆ ತರಕಾರಿ೦ುನ್ನಾದರೂ ಬೆಳೆ೦ುಬೇಕು. ಬಾವಿ೦ು ಗಂಗಮ್ಮ ತಾಯಿ ಮಾತ್ರ ಕಣ್ಮರೆ೦ುಾಗಿಲ್ಲ–ಎಂದು ಬೆಳಿಗ್ಗೆ ಸಂಜೆ ನೀರು ಸೇದಿ ಹು೦ುು್ಯತ್ತಿದ್ದಳು.

ಈ ನಡುವೆ ಸರ್ವಕ್ಕನ ಮಗಳು ರುದ್ರಾಣಿಗೆ ವಾಂತಿ ಭೇದಿ ತಗುಲಿತು. ಎರಡನೇ ದಿನದಲ್ಲಿ ಸುಸ್ತಾಗಿ ಹುಡುಗಿ ಸತ್ತೂ ಹೋದಳು. ಅವಳಿಗೆ ವಾಂತಿ ಭೇದಿ೦ುಾಗಿದ್ದ ವಿಷ೦ು ನಂಜಮ್ಮನಿಗೂ ತಿಳಿದಿರಲಿಲ್ಲ;

ಯಾರಿಗೂ ಗೊತ್ತಿರಲಿಲ್ಲ. ಸುದ್ದಿ ತಿಳಿದ ತಕ್ಷಣ ನಂಜಮ್ಮ ಸರ್ವಕ್ಕನ ಮನೆಗೆ ಹೋದರೆ, ಅಷ್ಟರಲ್ಲಿ ಶವವನ್ನು ದುಪ್ಪಟಿಯ ಮೇಲೆ ಹಾಕಿ ನಾಲ್ಕು ಜನ ನಾಲ್ಕು ಮೂಲೆಗಳನ್ನು ಹಿಡಿದುಕೊಂಡು ಹೋಗುತ್ತಿದ್ದರು. ರೇವಣ್ಣಶೆಟ್ಟಿ ತಲೆತಗ್ಗಿಸಿ ಮಗಳ ಹೆಣದ ಹಿಂದೆ ಹೆಜ್ಜೆ ಹಾಕುತ್ತಿದ್ದ. ಅವರ ಜನರ ಪದ್ಧತಿಯಂತೆ ಹೆಣದ ಹಿಂದೆ ಒಬ್ಬರು ಹಿಡಿ ಹಿಡಿ ಪುರಿ ಎರಚಿಕೊಂಡು ನಡೆಯುತ್ತಿದ್ದರು. ಸರ್ವಕ್ಕ ಮನೆಯ ಹೊಸಿಲಿಗೆ ಹಣೆ ಚಚ್ಚಿಕೊಂಡು ಕಣ್ಣೀರು ಸುರಿಸುತ್ತಿದ್ದಳೇ ಹೊರತು ಗಟ್ಟಿಯಾಗಿ ಅಳುತ್ತಿರಲಿಲ್ಲ.

ರುದ್ರಾಣಿ ಪಾರ್ವತಿಗಿಂತ ನಾಲ್ಕು ವರ್ಷಕ್ಕೆ ದೊಡ್ಡವಳು. ಮಾಡಿದ್ದರೆ ಮದುವೆಯಾಗಿ ಇಷ್ಟರಲ್ಲಿ ಒಂದೆರಡು ಮಕ್ಕಳ ತಾಯಿಯಾಗಬೇಕಾಗಿದ್ದ ಹುಡುಗಿ. ಸರ್ವಕ್ಕನ ಹಾಗೆಯೇ ದೊಡ್ಡ ಹೆಣ್ಣು, ತುಂಬಿದ ತಲೆಕೂದಲು. ಹಿಂದಿನಿಂದ ನೋಡಿದರೆ ತಾಯಿ ಮಗಳಲ್ಲಿ ವ್ಯತ್ಯಾಸವೇ ಕಾಣುತ್ತಿರಲಿಲ್ಲ. ನಂಜಮ್ಮ ಹೋಗಿ ಹತ್ತಿರ ಕೂತು ಸೂತಕದ ಸರ್ವಕ್ಕನ ಕೈಹಿಡಿದು–'ತಲೆ ಚಚ್ಚಿಕಂಡ್ರೆ ಏನು ಬಂತು? ಹಾಗೆ ಮಾಡಬ್ಯಾಡ ಕಣ್ರೆ. ಏನಾಗಿತ್ತು ಮಗೀಗೆ?' ಎಂದು ಸಮಾಧಾನ ಹೇಳಿದುದಕ್ಕೆ ಮಗಳನ್ನು ಕಳೆದುಕೊಂಡ ತಾಯಿ, 'ಬಂದಿತ್ತು ಅವರಪ್ಪನ ರ್‍ವಾಗ' ಎಂದವಳೇ ಆ ದುಃಖದಲ್ಲೂ ನಾಲಿಗೆ ಕಚ್ಚಿಕೊಂಡಳು.

ಹೆಣವನ್ನು ಮಣ್ಣುಮಾಡಿ ರೇವಣ್ಣಶೆಟ್ಟಿ ಮನೆಗೆ ಹಿಂತಿರುಗುವವರೆಗೂ ನಂಜಮ್ಮ ಅಲ್ಲಿ ಕೂತಿದ್ದಳು. ಸುತ್ತಮುತ್ತ ಎಷ್ಟೋ ಜನ ಹೆಂಗಸರೂ ಗಂಡಸರೂ ಬಂದು ನಿಂತಿದ್ದರು. ರೇವಣ್ಣಶೆಟ್ಟಿ ಬಂದತಕ್ಷಣ ಹೆಂಗಸರೆಲ್ಲ, ರೊಂಯ್ ಎಂದು ಬೀಸಿಬಂದ ಕಲ್ಲಿಗೆ ಹಕ್ಕಿಗಳು ಪ್ರವೃತ್ತಿಮಾತ್ರದಿಂದ ಹೆದರಿ ಹಾರುವಂತೆ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಗಂಡಸರು ಮಾತ್ರ ಉಳಿದರು. ನಂಜಮ್ಮನೂ ತನ್ನ ಮನೆಗೆ ಬಂದಳು. ಸರ್ವಕ್ಕನ ಮನೆಗೂ, ನಂಜಮ್ಮ ತರಕಾರಿ ಹಾಕಿದ್ದ ಹಿತ್ತಲಿಗೂ ಹತ್ತಿರ. ಸರ್ವಕ್ಕನನ್ನು ಅಲ್ಲಿಗೇ ಕರೆದುಕೊಂಡು ಹೋಗಿ ಕೂರಿಸಿಕೊಂಡು ಮರುದಿನದಿಂದ ನಂಜಮ್ಮ ಸಮಾಧಾನ ಹೇಳುತ್ತಿದ್ದಳು. ಜೀವ ಯಾರಿಗೆ ಶಾಶ್ವತ? ಜವರಾಯ ಯಾವತ್ತು ಬಾ ಅಂದ್ರೂ ಹೋಗಬೇಕು. ತಾಯಿ ಮಗಳು, ನಾವು ಹೆತ್ತದ್ದು. ನಮ್ಮನ್ನು ಹೆತ್ತವರು, ಅನ್ನುವುದೆಲ್ಲ ಬರೀ ಮಾಯೆ–ಎಂದು ತನಗೆ ತಿಳಿದಂತೆ ಅವಳು ಎಷ್ಟು ಹೇಳಿದರೂ ಸರ್ವಕ್ಕನ ದುಃಖ ಆರಲಿಲ್ಲ. ಅವಳು ತಾನಾಗಿಯೇ ನಂಜಮ್ಮನ ಹಿತ್ತಿಲಿಗೆ ಬಂದು ಕೂರುವಳು. ಒಂದು ಮಾತೂ ಆಡುತ್ತಿರಲಿಲ್ಲ. ನಂಜಮ್ಮ ತನ್ನ ಮನೆಯ ಬಾವಿಯಿಂದ ನೀರು ಸೇದಿ, ಸೊಂಟದಲ್ಲೊಂದು ಬಲಗೈಯಲ್ಲೊಂದು ಬಿಂದಿಗೆ ಹಿಡಿದು ತಂದು ಸೊಪ್ಪಿನ ಮಡಿ, ಬದನೆಯ ಗುಳಿಗಳಿಗೆ ಹಾಕುವಳು. ನಡುವೆ ಅವಳು ಮಾತನಾಡಿಸಿದರೂ ಸರ್ವಕ್ಕ ಮಾತನಾಡುತ್ತಿರಲಿಲ್ಲ. ಒಂದು ದಿನ ಸಂಜೆ ನಂಜಮ್ಮ ಸೊಪ್ಪಿನ ಮಡಿಗೆ ನೀರು ಹಾಕಿದ ಮೇಲೆ ಸರ್ವಕ್ಕ ಎಂದಳು: 'ಹುಟ್ಟಿಸಿದ ಅಪ್ಪನೇ ಮಗಳನ್ನು ಕೊಂದ್ರೆ ಹಣೇಬರಾವು ಏನು ಮಾಡ್ತೈತ್ರೀ?'

'ಹಾಗಂದ್ರೇನು ಸರ್ವಕ್ಕ?'

'ಒಕ್ಕಳ್ಳಿ ಬುಡಿ.'

'ಅದೇನು ಹೇಳಿ. ನಾನು ಯಾರ ಕೈಲೂ ಹೇಳುಲ್ಲ. ನಿಮ್ಮಾಣೆ.'

'ಕೋಲ್ಟ್ನಲ್ಲಿ ಸಾಕ್ಷಿ ಏಳಿ ನಮ್ಮೋರು ಎಲ್ಡು ಪಲ್ಲ ರಾಗಿ ಇಪ್ಪತ್ತೈದು ಸೇರು ಅಕ್ಕಿ, ಯಲ್ಲಾ ತಂದ್ರು ಅಂತ ನಾನು ನಿಮಗೆ ಒಂದೀಟು ರಾಗಿ ತಂದ್ ಕೊಡಲಿಲ್ವರಾ?'

'ಹೂಂ.'

'ಅದು ಕೋಲ್ಟಿಂದಲ್ವರಂತೆ. ಆ ಪರದೇಶಿ ನನ್ಮಗ ಕಾಶಿಂಬಡ್ಡಿ, ಅವನ ಹೆಂಡ್ತಿ ಮಕ್ಳು ಯಲ್ಲಾ ಮಲೆಯಾಳದಲ್ಲವ್ರಂತೆ. ಅವ್ನ ತಾವ ನಮ್ಮೋರು ದುಡ್ಡು ಇಸ್ಕಂಡ್ರಂತೆ.'

'ಇಸ್ಕಂಡ್ರೇನಾಯ್ತು?'

'ನಾನೂ ನೀವೂ ಶೆತ್ತೆಗ್ಯಡ್ಡೆ ಕೀಣಾಕೆ ಕೆರೆಗೆ ಓಯ್ತಿರ್ಲಿಲ್ವರಾ? ಆಗ ನಮ್ಮನೆಯೋರೇ ಅವ್ನುನ್ನ ನಮ್ಮ ಶೆಡ್ಡಿಗೆ ಕರ್ಕಂಡ್ ಬತ್ತಿದ್ರಂತೆ. ರುದ್ರಾಣಿ ಬಸುರಿಯಾಗ್ಬಿಟ್ಳು.'

ಸರ್ವಕ್ಕ ಹೇಳಿದುದನ್ನು ಸರಿಯಾಗಿ ಕಲ್ಪಿಸಿಕೊಳ್ಳುವುದು ನಂಜಮ್ಮನಿಗೆ ಕಷ್ಟವಾಯಿತು. ಈ ಸಲ ಗ್ರಾಮಕ್ಕೆ ಬಂದಿದ್ದ ಬರದಲ್ಲಿ ಎಷ್ಟೋ ಜನ ಹೆಂಗಸರು ಮಾನ ಬಿಟ್ಟು ಹೊಟ್ಟೆಗೆ ಸಂಪಾದಿಸಿದರೆಂಬುದನ್ನು ಅವಳು ಕೇಳಿದ್ದಳು. ಆದರೆ ತಂದೆಯೇ ಮಗಳಿಂದ ಹೀಗೆ ಮಾಡಿಸುತ್ತಾನೆಂಬುದನ್ನು ಅವಳು ತಕ್ಷಣ ನಂಬಲಾರದಾದಳು.

'ಕೈ ಹಿಡಿದ ಗಂಡನ ಮ್ಯಾಲೆ ನಾನ್ ಸುಳ್ ಏಳ್ತೀನೇನ್ರೀ? ಅಪ್ಪ ಅನ್ನಿಸ್ಕಂಡ್ ಸೂಳೆ ಮಗ ಹಿಂಗ್ ಏಳ್ದ ಅಂತ ಅವ್ಳು ಹ್ಯಂಗೆ ಒಪ್ಕಂಡ್ಳು? ಶಿವಗೆರೆ ಕಡೆಯೋರೇ ಕೇಳಾಕ್ ಬಂದಿದ್ರು. ಮದ್ವೆ ಮಾಡಾನ ಅಂತ ನಾನು ಏಟೇಟು ಏಳ್ದೆ. ಅನ್ನ ಖರ್ಚಿಗೆ ದುಡ್ಡಿಲ್ಲ ತಡಿ, ಆಮ್ಯಾಲೆ ಮಾಡಾನ ಅಂತ ಇವ್ರೇ ಅಂದಿದ್ರು.'

'ಮುಂದೇನಾಯ್ತು?'

''ನಂಗ್ ಗೊತ್ತೇ ಇಲ್ಲ. ಮೂರು ತಿಂಗ್ಳು ಆದಮ್ಯಾಲೆ ಗೊತ್ತಾಯ್ತು. ಮುಂಡೆ ನಿಂದೇ ತೆಪ್ಪು ಅಂತ ಇವ್ರು ಅವ್ಳುನ್ನೇ ಹ್ವಡದ್ರು. 'ಇಲ್ಲ ಕಣವ್ವ. ಅಪ್ಪಾಜಿಯೇ, ಏನೂ ಪರವಾಗಿಲ್ಲ ಹೈದರ್ಕಾಬ್ಯಾಡ ಅಂತ ಏಳಿ

ಕಾಶಿಂಬಡ್ಡಿನ ವಳಕ್ಕೆ ಬುಟ್ಟು, ಅವ್ರು ಈಚೆಕಡೆ ಬಾಕ್ಲು ಆಕ್ಕಂಡ್ರು' ಅಂತ ಅವ್ರು ಆಣೆ ಮಾಡಿದ್ಲು. ಇನ್ನೇನ್ ಮಾಡಾಕಾಯ್ತುದೆ? ಇವ್ರೇ ಆ ನರಸೀ ತವ ಔಸ್ತಿ ತಂದು ಮೂರು ದಿನ ಕುಡಿಸಿದ್ರು. ಬರೀ ನೆತ್ಲ ಹ್ವಂಡಾಕೆ ಶುರುವಾಯ್ತು. ನಿಲ್ಲೇ ಇಲ್ಲ. ನನ್ಮಗು ಸತ್ಹೋಗ್ ಬುಡ್ತು."

ನಂಜಮ್ಮ ಮೂಕಳಾದಳು. ಸರ್ವಕ್ಕ ಮತ್ತೆ ಒಂದು ಸಲ ಗಟ್ಟಿಯಾಗಿ ಅತ್ತು ಕಣ್ಣೀರು ಒರೆಸಿಕೊಳ್ಳುತ್ತಿರುವಾಗ ನಂಜಮ್ಮನ ಯೋಚನೆಯು ಪಾರ್ವತಿಯ ಕಡೆಗೆ ಹೋಯಿತು. ಅವಳಿಗಾಗಲೇ ಹನ್ನೆರಡು ವರ್ಷ ತುಂಬುವುದರಲ್ಲಿದೆ. ಈ ಬರ ಬರದೆ ಹೊಟ್ಟೆಗೆ ನೆಮ್ಮದಿಯಾಗಿದ್ದರೆ ಇಷ್ಟರಲ್ಲಿಯೇ ಮೈನೆರೆಯುತ್ತಿದ್ದಳೇನೋ. ಅಕಸ್ಮಾತ್ ಮೊದಲೇ ನೆರೆದು ಕೂತರೆ ಗತಿ ಏನು? ಇಂತಹ ದುರ್ಭಿಕ್ಷ ಬಂದಿರುವಾಗ ಮದುವೆ ಮಾಡುವುದು ಹೇಗೆ? ಎಷ್ಟೇ ಬಡತನದ ಮದುವೆ ಎಂದರೂ, ಹುಲ್ಲು ನೀರು ಇರುವ ಒಂದು ಗೊಂತು ಹುಡುಕಿ ಕಟ್ಟಬೇಕೆಂದರೆ ಏಳು ಎಂಟು ರೂಪಾಯಿಯಾದರೂ ಬೇಕು. ಬೆಳಿಗ್ಗೆ ಸಂಜೆಯ ಹೊಟ್ಟೆಗೇ ಸಂಕಟ ಬಂದಿರುವ ಈ ಕಾಲದಲ್ಲಿ ಎಂಟು ನೂರು ರೂಪಾಯಿ ಎಲ್ಲಿಂದ ಬಂದೀತು?

'ನಂಜಮ್ಮಾರೇ, ನೀವು ಯಾರ ಕುಟ್ಲೂ ಏಳ್ಕೂಡ್ದು.'

'ದೇವರಾಣೆಗೂ ಹೇಳುಲ್ಲ ಸರ್ವಕ್ಕ. ನಿಮ್ಮ ಮರ್ಯಾದೆ ಬ್ಯಾರೆಯಲ್ಲ ನನ್ನ ಮರ್ಯಾದೆ ಬ್ಯಾರೆಯಲ್ಲ.'

'ಈ ಗಂಡನ ಸವಾಸ ಬ್ಯಾಡ, ಬುಟ್ ತೌರೂರಿಗೆ ಓಗಿಬಿಡಾನಾ ಅನ್ನುಸ್ತೈತೆ. ಆದ್ರೆ ಅಲ್ಲಿ ಓಗಿ ಅತ್ತಿಗೇರ ಕೈಕೆಳಗೆ ಬೀಳ್ಬೇಕು. ನಾವು ಯಾಕೆ ಬದುಕಿದೀವಿ ನೀವಾರ ಹೇಳಿ.'

ಸರ್ವಕ್ಕ ಈಗ ಕೇಳಿದ ಪ್ರಶ್ನೆಯನ್ನು ನಂಜಮ್ಮ ಈ ಹಿಂದೆ ಅನೇಕ ಸಲ ತನ್ನನ್ನು ತಾನೇ ಕೇಳಿಕೊಂಡಿದ್ದಳು. ತನ್ನ ಜೀವನದಲ್ಲಾದರೂ ಏನಿತ್ತು. ಗಂಡನ ಪ್ರೀತಿಯೇ? ಅತ್ತೆಯ ಅಂತಃಕರಣವೇ? ತೌರಿನ ಸುಖವೆ? ಆದರೂ ತಾನು ಸಾಯದೆ ಬದುಕಿದೆ. ಮಕ್ಕಳಾದವು. ಈಗ ತಾನು ಯಾಕೆ ಬದುಕಿದ್ದೀನಿ ಎಂಬ ಪ್ರಶ್ನೆಗೆ ಉತ್ತರ ಹುಡುಕುವಾಗ ಮಕ್ಕಳು ಎದುರಿಗೆ ನಿಲ್ಲುತ್ತವೆ. ಹಿತ್ತಿಲಿನ ತರಕಾರಿಗೆ ನೀರು ಹುಯ್ದು, ಗಂಡ ಕದ್ದು ಪೋಟಿಕೆ ಹಣ ತಿನ್ನದಂತೆ ಕಾವಲು ಕಾಯ್ದು, ಬೆಳಿಗ್ಗೆ ಸಂಜೆ ಮುತ್ತಗದೆಲೆ ಹಚ್ಚಿ ಅವಕ್ಕೆ ಒಂದು ರೊಟ್ಟಿ ಅರ್ಧ ಮುದ್ದೆ ಹಿಟ್ಟು, ಅದೂ ಇಲ್ಲದಿದ್ದರೆ ಒಂದು ಹಿಡಿ ಸೊಪ್ಪು, ಇಷ್ಟನ್ನು ತೂತು ಬಿದ್ದು ಅರಿವೆ ಬಳಲು ಹಾಕಿ ಮುಚ್ಚಿದ ಅಲ್ಯೂಮಿನಿಯಂ ತಟ್ಟೆಗೆ ಬಡಿಸುವುದಕ್ಕೆ ಮಾತ್ರವೇ ಬದುಕಿರಬೇಕೆ? ಅಷ್ಟೇ, ಇನ್ನೇನುಂಟು ಬದುಕಿನಲ್ಲಿ?–ಎಂದುಕೊಂಡಳು.

– 8 –

ಪ್ಲೇಗಿನ ಸುಂಕಲಮ್ಮ ಪೂರ್ತಿಯಾಗಿ ಹೊರಟುಹೋದಮೇಲೆ ಬಹಳ ಜನಕ್ಕೆ ನಾಗರು ಬಡಿಯಿತು. ಯಾರನ್ನು ನೋಡಲಿ ತುರಿ, ಕಜ್ಜಿ, ಕುರು ಏಳುತ್ತಿದ್ದವು. ಎಲ್ಲರೂ ಕೂತಲ್ಲಿ, ನಿಂತಲ್ಲಿ, ಮೈ ಕೈಗಳನ್ನು ಪರಪರ ಕೆರೆದುಕೊಳ್ಳುವವರೇ. ಕಾಲು ತೊಡೆಗಳ ಮೇಲೆ ಕುರು ಎದ್ದವರು ಕುಂಟಿಕೊಂಡು ನಡೆಯುವರು. ಬೆಂಕಿಯ ಶಾಖ ಕೊಟ್ಟು ಅದು ಒಡೆಯುವ ತನಕ ಅವರ ಯಾತನೆ ಹೇಳತೀರದು. ಕಜ್ಜಿ ಎದ್ದವರ ಮೈ ಕೈ ಮತ್ತು ಬೆರಳ ಸಂದುಗಳೆಲ್ಲ ರಸಿಕೆಯಿಂದ ಮೆತ್ತಿಕೊಂಡಿರುತ್ತಿದ್ದವು.

ನಂಜಮ್ಮನ ಮನೆಯಲ್ಲಿಯೂ ಕಜ್ಜಿ ಎದ್ದಿತು. ಮೊದಲು ಆದದ್ದು ರಾಮಣ್ಣನಿಗೆ. ಆಮೇಲೆ ಪಾರ್ವತಿ ವಿಶ್ವರಿಗೆ ತಗುಲಿ, ಅಮ್ಮನಿಗೂ ಆಯಿತು. ಎಳೆ ಬಿಸಿಲು ಕಾಸುವುದು, ಇಲ್ಲದಿದ್ದರೆ ಒಲೆಗೆ ಉರಿ ಹಾಕಿ, ಬೆಂಕಿಯ ಮುಂದೆ ಕಜ್ಜಿ ಎದ್ದ ಭಾಗಗಳನ್ನು ಹಿಡಿದು ಹಾ ಎನ್ನುವ ಹಾಗಾಗುವಂತೆ ಕಾಯಿಸುವುದಷ್ಟೇ ಅವರು ಮಾಡುತ್ತಿದ್ದ ಔಷಧಿ. ಒಂದೊಂದು ದಿನ ಬೆಳಗಾಗುವ ವೇಳೆಗೆ ಅಂಗೈ ಮುಂಗೈಗಳ ಮೇಲೆ ಉಪ್ಪಿಯ ಹಣ್ಣಿನಂತೆ ಬೆಳ್ಳಗೆ ಗುಳ್ಳೆಗಳೆದ್ದುಬಿಡುವುವು. ಅವನ್ನು ಹಾಗೆಯೇ ಬಿಡುವುದು ಹುಡುಗರಿಗೆ ಆಗುತ್ತಿರಲಿಲ್ಲ. ಏನಾದರೂ ಮಾಡಿ ಒಡೆದು ಕೀವನ್ನು ಹೊರಗೆ ತೆಗೆಯಬೇಕು. ಗೊಬ್ಬಳಿಮುಳ್ಳಿನಿಂದ ಚುಚ್ಚಿ ರಸಿಕೆ ಹೊರಡಿಸುವುದೇ ಒಂದು ಕೆಲಸ. ಹಾಗೆ ಹೊರಡಿಸುವಾಗ ಅಕ್ಕಪಕ್ಕದ ಭಾಗಗಳಿಗೆ ತಗುಲಿ ವ್ರಣ ಅಲ್ಲಿಗೂ ಹರಡುತ್ತಿತ್ತು. ಮೊದಲು ಹುಚ್ಚುಕಡಿತ, ಅದನ್ನು ತಡೆಯಲಾರದೆ ಮಾಡುವ ಕೆರೆತ. ನಂತರ ಆಗುವ ಉರಿಯನ್ನು ತಾಳಲಾರದೆ ವಿಶ್ವನಂತೂ ಗಟ್ಟಿಯಾಗಿ ಅತ್ತುಬಿಡುತ್ತಿತ್ತು. ರಾಮಣ್ಣ ಪಾರ್ವತಿಯರೂ ಒಂದೊಂದುಸಲ ಅಳು ತಡೆಯುತ್ತಿರಲಿಲ್ಲ. ಇದುವರೆಗೂ ಮನೆಗೆಲಸವೆಲ್ಲ ಪಾರ್ವತಿಯ ಮೇಲಿತ್ತು. ಎರಡು ಕೈಗಳಲ್ಲೂ ಕಜ್ಜಿಯಾದ ಮೇಲೆ ಅವಳು ಪಾತ್ರೆ ತಿಕ್ಕಲಾರಳು. ಗೂಟ ಹಿಡಿದು ಬೀಸುವ ಕಲ್ಲು ತಿರುಗಿಸಲಾರಳು. ಅದೇ ರೀತಿ ನಂಜಮ್ಮ ಹಿತ್ತಿಲಿನ ಗಿಡಗಳಿಗೆ ಹಗ್ಗ ಹಿಡಿದು ನೀರು ಸೇದಲಾರಳು. ಇಷ್ಟು ದಿನ ಕಷ್ಟಪಟ್ಟು ದುಡಿದು ಚಿಗುರಿಸಿದ್ದ ಸೊಪ್ಪು ತರಕಾರಿಗಳು ಒಣಗುವ ಸ್ಥಿತಿಗೆ ಬಂದುವು.

ಊರಿನವರೆಲ್ಲ ನಾಗಪ್ಪನಿಗೆ ಹರಕೆ ಹೊತ್ತರು. ನಂಜಮ್ಮನೂ ಎಂಟು ದಿನ ಒಂದೇ ಸಮನಾಗಿ ಹುಡುಗರಿಗೂ ಸ್ನಾನ ಮಾಡಿಸಿ ತಾನೂ ತಣ್ಣೀರು ಹುಯ್ದುಕೊಂಡು, ತಮ್ಮೇಗೌಡನ ಮನೆಯಲ್ಲಿ ಇಸಿದುಕೊಂಡು ಬಂದ ಅರ್ಧ ಬಟ್ಟಲು ಹಾಲನ್ನು ಹುತ್ತಕ್ಕೆ ತನಿ ಎರೆದು ಹುಡುಗರಿಂದ ಅಡ್ಡ ಬೀಳಿಸಿ ಬಂದಳು. ಆದರೂ ನಾಗಪ್ಪ ಪ್ರಸನ್ನವಾಗಲಿಲ್ಲ. ಕಜ್ಜಿ ತುರಿಗಳು ಇನ್ನೂ ರೇಗಿದವು.

ಇವರಿಗೆಲ್ಲ ಕಜ್ಜಿಯ ನರಳಾಟ ಶುರುವಾದ ಒಂದು ತಿಂಗಳಿನ ಹೊತ್ತಿಗೆ ಚೆನ್ನಿಗರಾಯರಿಗೂ ಹತ್ತಿತು.

ಮೊದಲ ಸಲದ ಗುಳ್ಳೆಗೇ ಅವರು ಎದ್ದು ಕುಣಿದುಬಿಟ್ಟರು. ಊರಿಗೆಲ್ಲ ಕಜ್ಜಿ೦ಯಾಗಿದ್ದರೂ ಪಟೇಲ ಮೊದಲಾದ ಕೆಲವು ಅನುಕೂಲಸ್ಥರಿಗೆ ಏನೂ ಆಗಿರಲಿಲ್ಲ. ಗಂಗಮ್ಮ ಅಪ್ಪಣ್ಣ೦ಯ್ಯರಿಗೂ ಅದರ ಸೋಂಕು ತಗುಲಿರಲಿಲ್ಲ. ಕೈಬೆರಳ ಸಂದುಗಳಲ್ಲಿ ರಸಿಕೆ ಸೋರುವ ವ್ರಣದಿಂದ ಚೆನ್ನಿಗರಾ೦ಯರು ತಾಯಿ೦ಯ ಮನೆಗೆ ಹೋದಾಗ ಗಂಗಮ್ಮ ಎಂದಳು: 'ಶೃಂಗೇರಿ ಗುರುಗಳಿಂದ ಬಹಿಷ್ಕಾರವಾಗಿದೆ. ಆ ಲೌಡಿ ಪ್ರಾ೦ಯಶ್ಚಿತ್ತ ಮಾಡ್ಕಳ್ಲಿಲ್ಲ. ಮುಟ್ಟು ಚಟ್ಟು ಅಂತ ಮಡಿ ಮೈಲಿಗೆ ಮಾಡುಲ್ಲ. ಮುಟ್ಟಾದೋಳು ಸೊಪ್ಪಿನ ಮಡಿ ಮುಟ್ಟಿ ನೀರು ಹು೦ಯ್ದರೆ ನಾಗಪ್ಪ ಬರದೆ ಇರುತ್ತೆ೦ಯೆ? ಆ ಮುಂಡೆಯಿಂದ ನಿಂಗೂ ಬಂತು. ಚಿನ್ನ೦ಯ್ಯ, ಅವ್ಳುನ್ನ ಬಿಡದೆ ಇದ್ರೆ ನಿಂಗೆ ಇದು ಹುಶಾರಾಗುಲ್ಲ.'

ಬಿಡುತ್ತೇನೆಂದು ಹೇಳಿದರೆ ಹೆಂಡತಿ ಹೆದರುವುದಿಲ್ಲವೆಂದು ಚೆನ್ನಿಗರಾ೦ಯರಿಗೆ ಗೊತ್ತು. ಅವಳನ್ನು ಬಿಟ್ಟು ತಾವು ಕವಳಕ್ಕೆ ಏನು ಮಾಡಬೇಕು? ಅವಳೇನಾದರೂ ಹೋಗಿ ಶೇಕ್ದಾರರಿಗೆ ಹೇಳಿದರೆ! ಆದುದರಿಂದ ಅವರು ಈ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಆದರೆ ಕಜ್ಜಿಗೆ ಏನಾದರೂ ಮಾಡಲೇಬೇಕು. ತಾಯಿ ಮಗ, ಇಬ್ಬರೂ ಅಣ್ಣಾಜೋಯಿಸರ ಮನೆಗೆ ಹೋದರು. ಅವರು ಏನೋ ಉಪಾ೦ಯ ಹೇಳುತ್ತಿರುವಷ್ಟರಲಿ ಲ್ಲ೦ಯೇ ಅ೦ಯ್ಯಾಶಾಸ್ತ್ರಿಗಳು ಬಂದರು. ಶಾಸ್ತ್ರಿಗಳು ವ೦ಯಸ್ಸಿನಲ್ಲಿ ಹಿರಿ೦ಯರು. ೦ಯಾರ ೦ಯಾರ ಮನೆ೦ಯಲ್ಲಿ ೦ಯಾವ ೦ಯಾವ ಶಾಸ್ತ್ರ ಸಂಪ್ರದಾ೦ಯಗಳಿದ್ದುವು ಎಂಬುದೆಲ್ಲ ಅವರಿಗೆ ಗೊತ್ತು. ಹೇಳಿದರು: 'ಗಂಗಮ್ಮ, ನಿನ್ನ ಗಂಡನ ಕಾಲದಲ್ಲಿ ನಾಗರು ಮಾಡ್ತಿದ್ದುದು ಜ್ಞಾಪಕವಿಲ್ಲವೆ? ಗಂಡ ಸತ್ತ ಮೇಲೆ ಒಂದು ಸರ್ತಿ೦ಯಾದರೂ ನೀನು ಮಾಡಿಸಿದೀ೦ಯಾ? ನಾಗಪ್ಪ ಹಿಡಿದು ಕಾಡದೆ ಇನ್ನೇನಾಗುತ್ತೆ?'

ಗಂಗಮ್ಮನಿಗೆ ನೆನಪಾಯಿತು. ಅದು ತುಂಬ ಭಕ್ತಿ ಶ್ರದ್ಧೆಗಳಿಂದ ಮಾಡಬೇಕಾದ ಕರ್ಮ. ಪಕ್ಷದ ೦ಯಾವುದೋ ಒಂದು ಷಷ್ಠಿ೦ಯ ದಿನ ಮನೆ೦ಯವರೆಲ್ಲ ತೋಟಕ್ಕೆ ಹೋಗಬೇಕು. ಹಿಂದಿನ ದಿನವೇ ಗಂಡಸರು ಹೋಗಿ ತೋಟದಲ್ಲಿ ಒಂದು ಪುಟ್ಟ ಬಾವಿ ತೆಗೆದು ಬಂದಿರಬೇಕು. ಈಗ ಅದರಲ್ಲಿ ಬಂದಿರುವ ಜಲದಲ್ಲಿ ವಡೆ, ಒಬ್ಬಟ್ಟು, ಪಾ೦ಯಸ, ಅನ್ನ ಸಾರು ಹುಳಿಗಳ ಅಡುಗೆ೦ಯಾಗಬೇಕು. ಇಬ್ಬರು ಪುರೋಹಿತರು, ಅವರ ಹೆಂಡತಿ೦ಯರು, ಒಬ್ಬ ವಿಧವೆ, ಒಬ್ಬ ವಿಧುರ, ಒಬ್ಬ ಬ್ರಹ್ಮಚಾರಿ, ಇಷ್ಟು ಜನ ಹೊರಗಿನವರನ್ನು ಊಟಕ್ಕೆ ಕರೆ೦ಯಬೇಕು. ಗೋಧಿ ಹಿಟ್ಟು ಅಕ್ಕಿ೦ಯ ಹಿಟ್ಟುಗಳನ್ನು ಕಲೆಸಿ, ಅದರಲ್ಲಿ ಹೆಡೆ ಎತ್ತಿರುವ ನಾಗಪ್ಪನನ್ನು ಹೊಸೆದು, ಅವನಿಗೆ ಸಕಲ ಪೂಜೆಗಳನ್ನೂ ಸಲ್ಲಿಸಿದಮೇಲೆ ಈ ಬ್ರಾಹ್ಮಣ ಮುತ್ತೈದೆ, ವಿಧುರ, ವಿಧವೆ, ಬ್ರಹ್ಮಚಾರಿಗಳಿಗೆ, ಶ್ರಾದ್ಧದ ದಿನ ಬಡಿಸುವಷ್ಟೇ ಧಾರಾಳವಾದ ಭೋಜನ ಮಾಡಿಸಿ ಕೊನೆ೦ಯ ಪಕ್ಷ ಒಂದೊಂದು ಬೆಳ್ಳಿ೦ಯ ರೂಪಾಯಿ ದಕ್ಷಿಣೆ, ಗಂಡಸರಿಗೆ ಪಂಚೆ ಹೆಂಗಸರಿಗೆ ರವಿಕೆಕಣ, ಬ್ರಹ್ಮಚಾರಿಗೆ ಒಂಟಿಪಂಚೆ , ಒಂಟಿ ಜನಿವಾರ ದಕ್ಷಿಣೆ ಕೊಡಬೇಕು. ನಂತರ ಇವರು ಪ್ರಸಾದರೂಪವಾಗಿ ಊಟ ಮಾಡಿದ ಮೇಲೆ ಸಂಜೆ ನಾಗಪ್ಪನಿಗೆ ಮಹಾಮಂಗಳಾರತಿ ಮಾಡಿ, ಅವನನ್ನೂ ಅಲ್ಲಿಗೆ ತೆಗೆದುಕೊಂಡು ಹೋಗಿ, ಉಳಿದಿದ್ದ ಅಕ್ಕಿ, ಬೇಳೆ, ಗೋಧಿಹಿಟ್ಟು ಮೊದಲಾದುವನ್ನೂ ಬಾವಿಗೆ ಹಾಕಿ ಬಾವಿ೦ಯನ್ನು ಮುಚ್ಚಿಬಿಟ್ಟು ಮತ್ತೆ ಹಿಂತಿರುಗಿ ನೋಡದೆ ಸಂಜೆಗತ್ತಲಿನಲ್ಲಿ ಊರಿಗೆ ಬರಬೇಕು. 'ಇಷ್ಟು ಮಾಡಿದರೆ ಕಜ್ಜಿ ಕುರು ಎಲ್ಲ ತಾನೇ ಓಡಿಹೋಗುತ್ತೆ. ನಿನ್ನ ಗಂಡ ಇದ್ದಾಗ ನಿಮಗೆ ೦ಯಾವತ್ತಾದ್ರೂ ಹೀಗೆ ಆಗಿತ್ತಾ? ನೀವು ಮಾಡೂ ಕರ್ಮ ಬಿಟ್ಟಿರಿ. ಇಂಥದೆಲ್ಲ ಆಗ್ತಾ ಇದೆ'–ಎಂದು, ತಮಗೂ ಎದ್ದಿದ್ದ ಕಜ್ಜಿ೦ಯ ಕೈ೦ಯನ್ನು ತುರಿಸುತ್ತಾ ಅ೦ಯ್ಯಾಶಾಸ್ತ್ರಿಗಳು ಕೇಳಿದಾಗ ಗಂಗಮ್ಮ, ಏನಾದರೂ ಸರಿ ನಾಗಪ್ಪನನ್ನು ಮಾಡಿ೦ಯೇ ತೀರಬೇಕೆಂದು ನಿರ್ಧರಿಸಿದಳು.

ಅಣ್ಣಾಜೋಯಿಸರು ಎಂದರು: 'ಉಳಿದದ್ದಕ್ಕೆ ೦ಯೋಚನೆ ಮಾಡಬ್ಯಾಡ. ಬ್ರಾಹ್ಮಣರಾಗಿ ನಾನು, ಅ೦ಯ್ಯಾ ಚಿಕ್ಕಪ್ಪ, ಚಿಕ್ಕಮ್ಮ, ನನ್ನ ಹೆಂಡತಿ ಇದೀವಿ. ಬ್ರಹ್ಮಚಾರಿ೦ಯಾಗಿ ನಮ್ಮ ನರಸಿಂಹನೇ ಇದಾನೆ. ವಿಧವೆಗೆ ಬೇಕಾದ್ರೆ ಕೊಂಡೇನಹಳ್ಳಿಯಿಂದ ನನ್ನ ತಂಗಿ ಕರುಸ್ತೀನಿ. ವಿಧುರನಿಗೆ ರಂಗಾಪುರದಿಂದ ನನ್ನ ಹೆಂಡ್ತಿ ಅಣ್ಣನಿಗೆ ಹೇಳಿಕಳುಸ್ತೀನಿ. ನೀನು ಉಳಿದದ್ದೆಲ್ಲ ಅಣಿಮಾಡಿಕೊ.'

ಸಧ್ಯದಲ್ಲಿ೦ಯೇ ಮನೆತನದ ಈ ಧಾರ್ಮಿಕ ವಿಧಿ೦ಯನ್ನು ಪೂರೈಸುವುದಾಗಿ ಹೇಳಿ ಗಂಗಮ್ಮ ತನ್ನ ಮನೆಗೆ ಬಂದಳು. 'ಚಿನ್ನ೦ಯ್ಯ, ಅರ್ಧ ಖರ್ಚು ಕೊಡು ಅಂತ ನಿನ್ನ ಹೆಂಡ್ತಿಗೆ ಹೇಳು'–ಎಂದು ಹೇಳಿಕಳಿಸಿದಳು. ಗಂಡ ಹೇಳಿದ ವರ್ಣನೆ೦ಯನ್ನು ಕೇಳಿದ ಮೇಲೆ ನಂಜಮ್ಮ ಲೆಕ್ಕ ಹಾಕಿದಳು. ಒಟ್ಟಿನಲ್ಲಿ ಇದಕ್ಕೆ ಒಂದು ನೂರು ರೂಪಾಯಿ೦ಯಾದರೂ ಬೇಕು. ಅರ್ಧವೆಂದರೆ ಐವತ್ತು. ಇದರ ಜೊತೆಗೇ ಈ ಜೋಯಿಸರು ತಮ್ಮ ಬಹಿಷ್ಕಾರದ ಪ್ರಾ೦ಯಶ್ಚಿತ್ತದ ಪ್ರಶ್ನೆ೦ಯನ್ನೂ ಎತ್ತಿ ದುಡ್ಡು ಕೇಳುತ್ತಾರೆ. ಸದ್ಯ, ಹೊಟ್ಟೆಗೇ ಇಲ್ಲದ ಈ ಸ್ಥಿತಿ೦ಯಲ್ಲಿ ಇದಕ್ಕೆಲ್ಲ ಎಲ್ಲಿ ತರುವುದು? ಈ ನಾಗಪ್ಪನ ಕೆಲಸವೇ ಬೇಡವೆಂದು ಅವಳು ನಿರ್ಧರಿಸಿದಳು. ಆದರೆ ಅದೇ ಕಜ್ಜಿ ಕುರುಗಳ ಕಾರಣವಾಗಿದ್ದು, ನಾಗಪ್ಪ ಮುನಿದು ರೇಗಿ ೦ಯಾರನ್ನಾದರೂ ಬಲಿ ತೆಗೆದುಕೊಂಡರೆ? – ಎಂಬ ಭ೦ಯ ಒಂದು ಕಡೆ.

ಸೊಸೆ ಮತ್ತು ಮೊಮ್ಮಕ್ಕಳ ಗತಿ ಏನಾದರೂ ಆಗಬಹುದು, ತನಗೂ ಅಪ್ಪಣ್ಣ೦ಯ್ಯನಿಗೂ ಕಜ್ಜಿ ಆದರೆ ಏನು ಗತಿ ಎಂಬ ೦ಯೋಚನೆ ಗಂಗಮ್ಮನಿಗೆ ಹತ್ತಿತು. ಜೊತೆಗೆ ಮಗ ಚೆನ್ನಿಗರಾಯನನ್ನೂ ಕರೆದುಕೊಂಡು

ಹೊಳೆಸೀಮೆ೦ಯಾದ ಅಕ್ಕಿಹೆಬ್ಬಾಳಿನ ಕಡೆಗೆ ದೇಶಾವರಿ ಹೊರಟಳು.. 'ದೇವರ ಕೆಲಸವಾಗಬೇಕು ಧರ್ಮ ಕೊಡಿ'–ಎಂದು ಹಳ್ಳಿಗಳ ಮನೆಮನೆಗೆ ಹೋದರೆ ದುಡ್ಡಂತೂ ಇಲ್ಲ. ಎರಡು ಸೇರು ಬತ್ತ ಇಲ್ಲವೆಂದರೆ ಅವರಿಗೂ ಪಾಪ. ಹೀಗೆ ಬತ್ತ ಗುಡ್ಡೆ ಹಾಕಿ ಅದನ್ನು ಮಾರಿ ಒಟ್ಟಿನಲ್ಲಿ ಒಂದು ತಿಂಗಳಿನಲ್ಲಿ ನೂರು ರೂಪಾಯಿ ಮಾಡಿಕೊಂಡು ಊರಿಗೆ ಬಂದು ಮೂವರೂ ಕೂಡಿ ತೋಟದ ನಾಗಪ್ಪನನ್ನು ಮಾಡುವ ದಿನ ನಿಷ್ಕರ್ಷೆಮಾಡಿದರು.

ಕಜ್ಜಿ ವಿಪರೀತವಾಗಿದ್ದರೂ ರಾಮಣ್ಣ ಸ್ಕೂಲಿಗೆ ಹೋಗುವುದನ್ನು ಮಾತ್ರ ನಿಲ್ಲಿಸಲಿಲ್ಲ. ಈಗ ಅವನು ಇಂಗ್ಲಿಷ್ ಎರಡನೇ ಕ್ಲಾಸು. ಅವನ ಸ್ಕೂಲಿನಲ್ಲಿ ಹೀಗೆ೦ಯೇ ಕಜ್ಜಿ ಹತ್ತಿದ ಹುಡುಗರು ಕಡಿಮೆ ಇರಲಿಲ್ಲ. ಊರೂರಿಗೆಲ್ಲ ಪ್ಲೇಗಿನ ಅಮ್ಮ ಬಂದಂತೆ ಈಗ ಎಲ್ಲೆಲ್ಲಿ೦ಯೂ ನಾಗರು ಬಂದಿತ್ತು. ಕಜ್ಜಿ ಎದ್ದವರನ್ನೆಲ್ಲ ಮೇಷ್ಟರು ಪ್ರತ್ಯೇಕವಾಗಿ ಕೂರಿಸುತ್ತಿದ್ದರು. ಒಂದು ದಿನ ಸ್ಕೂಲು ಹೆಡ್ಮಾಸ್ಟರೇ ಹುಡುಗರ ಈ ಅಸಹ್ಯವನ್ನು ನೋಡಲಾರದೆ, ಹೋಗಿ ಸರ್ಕಾರಿ ಆಸ್ಪತ್ರೆ೦ಯ ಡಾಕ್ಟರಿಗೆ ಹೇಳಿದರು. ಗ್ರಾಮಪಂಚಾಯ್ತಿ೦ಯ ಛೇರ್‌ಮನ್ ಮತ್ತು ಡಾಕ್ಟರು ಮೇಲಕ್ಕೆ ಬರೆದು ಮಿಲ್ಕ್ ಇಂಜೆಕ್ಷನ್ ಟ್ಯೂಬುಗಳನ್ನು ತರಿಸಿದರು. ಡಾಕ್ಟರು ಎಲ್ಲ ಹುಡುಗರಿಗೂ ಎರಡು ದಿನ ಚುಚ್ಚಿ, ಹಚ್ಚಿಕೊಳ್ಳಲು ಮುಲಾಮು ಕೊಟ್ಟು ಕಳುಹಿಸಿದರು. ಗಂಧಕದ ಮುಲಾಮು ಹಚ್ಚಿಕೊಳ್ಳದಿದ್ದರೂ ಇಂಜೆಕ್ಷನ್ ತೆಗೆದುಕೊಂಡಮೇಲೆ ಹುಡುಗರ ಕಜ್ಜಿ ತಾನಾಗಿ೦ಯೇ ಒಣಗಿ ಚರ್ಮದ ಮೇಲಿನ ಬುರುಗು ಕೆಲವು ದಿನಗಳಲ್ಲಿ ಒಣಗಿ ಹೋಯಿತು.

ರಾಮಣ್ಣ ಅಮ್ಮನಿಗೆ ಹೇಳಿದ: 'ಆ ಇಂಜೆಕ್ಷನ್ ಚುಚ್ಚಿಸಿಕೊಳ್ಳುವಾಗ ನೋ೦ಯುತ್ತೆ ಕಣಮ್ಮ. ನನ್ನ ಮೈ ನೋಡು. ಹ್ಯಾಗೆ ವಾಸಿ೦ಯಾಗಿದೆ. ನೀವೆಲ್ಲ ಒಂದು ದಿನ ಬನ್ನಿ. ಆಸ್ಪತ್ರೇಲಿ ಅದ ಚುಚ್ಚಿಸಿಕೊಳ್ಳಿ.'

ಒಂದು ದಿನ, ಪಾರ್ವತಿ ಮತ್ತು ವಿಶ್ವರೊಡನೆ ನಂಜಮ್ಮ ಕಂಬನಕೆರೆಗೆ ಹೋದಳು. ತಮ್ಮ ಕಷ್ಟ ಸುಖ ಹೇಳಿಕೊಂಡ ಮೇಲೆ ಡಾಕ್ಟರು ದುಡ್ಡಿಲ್ಲದೆ೦ಯೇ ಸೂಜಿ ಚುಚ್ಚಿದರು. ಮತ್ತೆ ನಾಲ್ಕು ದಿನದ ನಂತರ ಹೋಗಿ ಇನ್ನೊಂದು ಸಲ ಚುಚ್ಚಿಸಿಕೊಂಡು ಬಂದಮೇಲೆ ಇವರ ಮೈ೦ಯೂ ಒಣಗಲು ಶುರುವಾಯಿತು. ಒಂದು ದಿನ ರಾಮಣ್ಣನೇ ಹೇಳಿದ: 'ಅಮ್ಮ, ನಮ್ಮ ಹೆಡ್ಮೇಷ್ಟ್ರು ಹೇಳಿದರು. ಹೋದ ವರ್ಷವೆಲ್ಲ ಮಳೆ ಬೆಳೆಯಿಲ್ಲ. ೦ಯಾರಿಗೂ ಹಾಲು ಮೊಸರಿಲ್ಲ. ಹೊಟ್ಟೆಗಿಲ್ಲದೆ ಗೆಡ್ಡೆ ಗೆಣಸು ಅಂತ ಸಿಕ್ಕಿದ್ದೆಲ್ಲ ತಿಂದು ರಕ್ತ ಕೆಟ್ಟು ಕಜ್ಜಿ೦ಯಾಗಿದೆ೦ಯಂತೆ. ನಾಗರು ಪಾಗರು ಅನ್ನೋದೆಲ್ಲ ಸುಳ್ಳಂತೆ. ಊರಿನೋರೆಲ್ಲ ಹೀಗೆ ಇಂಜೆಕ್ಷನ್ ತಗಂಡ್ರೆ ವಾಸಿ೦ಯಾಗುತ್ತಂತೆ.'

ಅಷ್ಟರಲ್ಲಿ ಗಂಗಮ್ಮ, ಅಪ್ಪಣ್ಣ೦ಯ್ಯ, ಚೆನ್ನಿಗರಾ೦ಯರು ಹೋಗಿ ಜೋಯಿಸರಿಗೆ ಪಂಚೆ ಸೀರೆ ದಕ್ಷಿಣೆಗಳೊಡನೆ ಶ್ರದ್ಧಾ ಭಕ್ತಿ೦ಯ ಭೋಜನವನ್ನೂ ಮಾಡಿಸಿ ತೋಟದ ನಾಗರು ಮಾಡಿಕೊಂಡು ಬಂದರು. ನಂಜಮ್ಮ ಹುಡುಗರ ಜೊತೆ ಹೋಗಿ ಔಷಧಿ ತೆಗೆದುಕೊಂಡಳೆಂಬುದು ಗೊತ್ತಾದಾಗ ಗಂಗಮ್ಮ ಹೇಳಿದಳು: 'ದೇವರು ಬಂದಿರುವಾಗ ಮುಂಡೆ ಔಸ್ತಿ ತಗಂಡಿದಾಳೆ. ಮೈ ಕೈ ಎಲ್ಲ ಕೊಳೆತು ಸಾ೦ಯ್ತಾಳೆ ನೋಡು. ನಾಗಪ್ಪ ಅಂದ್ರೆ ಏನಂತ ತಿಳ್ಕಂಡಿದಾಳೆ ಅವ್ಳು!'

ನಂಜಮ್ಮ ಮತ್ತು ಅವಳ ಮಕ್ಕಳಿಗೆ ಗುಣವಾಗಿ ಮೈ ಕೈ೦ಯ ಕಲೆ೦ಯೂ ಇಲ್ಲವಾದ ಮೇಲೆ ಊರಿನ ಇತರ ಎಷ್ಟೋ ಜನರು ಒಬ್ಬೊಬ್ಬರಾಗಿ ಕಂಬನಕೆರೆಗೆ ಹೋದರು. ಒಂದು ಇಂಜೆಕ್ಷನ್ ಐದು ರೂಪಾಯಿ.

– 9 –

ಜ್ಯೇಷ್ಠ ಆಷಾಢ ಕಳೆದರೂ ಒಂದು ಹನಿ ಮಳೆ ಬಿದ್ದಿರಲಿಲ್ಲ. ಈ ವರ್ಷವೂ ಹೋದ ಸಲದಂತೆ೦ಯೇ ಬರವು ಮುಂದುವರಿ೦ಯುವುದು ನಿಶ್ಚ೦ಯವಾಗಿತ್ತು. ಹೋದ ವರ್ಷ ಹಳೆ೦ಯ ದಿನಸಿ ಇಟ್ಟುಕೊಂಡಿದ್ದ ದಿಮ್ಮನೆ೦ಯ ಕುಳಗಳೂ ಈ ಸಲ ಬಾಯಿ ಬಿಡುತ್ತಿದ್ದರು. ಆಕಾಶದಲ್ಲಿ ಮೋಡಗಳು ಬರುತ್ತಿದ್ದವು. ಆದರೆ ಎತ್ತಲಿಂದಲೋ ಏಳುವ ಗಾಳಿ೦ಯೂ ಅವನ್ನು ಎಬ್ಬಿಸಿಕೊಂಡು ಹೊರಟುಹೋಗುತ್ತಿತ್ತು. ಈ ವರ್ಷ ಮೂರು ಕೊಳಗ ಮಳೆ೦ಯಾದರೆ ಒಂಬತ್ತು ಕೊಳಗ ಗಾಳಿ ಎಂದು ಪಂಚಾಂಗದಲ್ಲಿ೦ಯೇ ಬರೆದಿತ್ತು. ಗಾಳಿ೦ಯೇನೋ ಸಿಕ್ಕಾಬಟ್ಟೆ ಇದೆ. ಆದರೆ ಅದರ ಮೂರರಲ್ಲಿ ಒಂದು ಭಾಗವಿರಲಿ, ನೂರರಲ್ಲಿ ಒಂದು ಭಾಗ ಮಳೆ೦ಯೂ ಬಿದ್ದಿಲ್ಲ. ಕಜ್ಜಿ ವಾಸಿ೦ಯಾದ ಮೇಲೆ ನಂಜಮ್ಮ ಹಗಲು ಸಂಜೆ ಹಿತ್ತಿಲಿನಲ್ಲಿ೦ಯೇ ಕೆಲಸ ಮಾಡುತ್ತಾಳೆ. ಈಗೀಗ ದಿನಕ್ಕೆ ಒಂದೇ ಸೇರು ರಾಗಿ೦ಯಲ್ಲಿ ಎಲ್ಲರ ಊಟವೂ ಆಗಬೇಕು. ಹೊಟ್ಟೆ ತುಂಬುವಷ್ಟು ದಂಟಿನಸೊಪ್ಪು, ಬದನೆಕಾಯಿ, ತಿಂಗಳಹುರುಳಿ ಮೊದಲಾಗಿ ಬೇಯಿಸಿ ತಿನ್ನುತ್ತಾರೆ. ಈ ಉಪಾ೦ಯ ಮಾಡಿರುವುದು ಅವಳದೊಂದೇ ಸಂಸಾರ. ರಾತ್ರಿ೦ಯ ವೇಳೆ ತನ್ನ ಹಿತ್ತಿಲಿನಲ್ಲಿ ಕಳ್ಳತನವಾಗುವುದು ತೀರ ಸಹಜವೆಂಬುದು ಅವಳಿಗೆ ಗೊತ್ತು. ಆದುದರಿಂದ ಒಂದು ರಾತ್ರಿಗೆ ನಾಲ್ಕು ಬಾರಿ೦ಯಂತೆ ಎದ್ದು ಹುಡುಗರನ್ನೂ ಕರೆದುಕೊಂಡು ಹೋಗಿ ನೋಡಿ ಬರುತ್ತಾಳೆ. ಹೋದ ವರ್ಷವೆಲ್ಲ ಮಳೆ ಇಲ್ಲದುದಕ್ಕೆ ಈ ಸಲ ತೆಂಗಿನ ಮರಗಳೂ ಮಂಕಾಗಿವೆ. ತೋಟದ ಮಾಲೀಕರೇ ಎಳೆಗಾಯಿಗಳನ್ನು ಕಿತ್ತು ತಿಪಟೂರಿಗೆ ಹೇರಿ ಮಾರತೊಡಗಿದುದರಿಂದ ಕಾಯಿಗಳ್ಳರಿಗೆ ಅದೂ ಇಲ್ಲದಂತೆ ಆಗಿದೆ.

ಒಂದು ನಡುರಾತ್ರಿ೦ಯಲ್ಲಿ ಇದ್ದಕ್ಕಿದ್ದಹಾಗೆ೦ಯೇ ಮಳೆ ಬೀಳಲು ಶುರುವಾಯಿತು. ಆಕಾಶದಿಂದ ಆಲಿಕಲ್ಲುಗಳು

ಬಿದ್ದಂತೆ0ಯೇ ಮಳೆ0ಯ ನೀರೇ ಪಟಪಟನೆ ಹೊಡೆ0ಯುತ್ತಾ ಸುರಿಯಿತು. ಮುಂಗಾರಿನ ಕಾಲ ಹೋಗಿ, ಹಿಂಗಾರಿನ ದಿನವೂ ಕಳೆ0ಯುತ್ತಿರುವ ಈಗ ಇದ್ದಕ್ಕಿದ್ದಂತೆ ಮುಂಗಾರನ್ನು ಮೀರಿಸುವಷ್ಟು ಜೋರಾಗಿ ಮಳೆ ಜಡಿಯಿತು. ಮಲಗಿದ್ದ ಊರಿನವರಿಗೆಲ್ಲ ಎಚ್ಚರ. ಎಲ್ಲರೂ ತಮ್ಮ ತಮ್ಮ ಮನೆಗಳಿಂದ ಹೊರಗೆ ಬಂದು ನೋಡುತ್ತಾರೆ: ಸ್ವಲ್ಪವೂ ಗಾಳಿಯಿಲ್ಲ. ಬರೀ ಮಳೆ. ಆಕಾಶ ಕರ್ರಗೆ ಹೆಪ್ಪುಗಟ್ಟಿ ನಿಂತಿದೆ. ಭೂಮಿ0ಯ ಮೇಲೆ ದಢದಢನೆ ನೀರು ಸುರಿ0ಯುವುದು ಬಿಟ್ಟರೆ ಅದಕ್ಕೆ ಬೇರೆ 0ಯಾವ ಕೆಲಸವೂ ಇಲ್ಲವೆಂಬಂತೆ ಕಾಣಿಸುತ್ತಿದೆ. ಇಷ್ಟು ದಿನ ಇಲ್ಲದ ನೀರು ಮೋಡಗಳು ಒಂದೇ ದಿನ ಆಕಾಶದಲ್ಲಿ ಎಲ್ಲಿ ಸೇರಿಕೊಂಡಿತೋ 0ಯಾವಾಗ ಕೂಡಿಕೊಂಡಿತೋ! ಗ್ರಾಮದೇವರು ಚೋಳೇಶ್ವರನ ಕೃಪೆ0ಯೇ ಸೈ. ಇಲ್ಲದಿದ್ದರೆ ಕಾಲ ಕಳೆದ ಮೇಲೆ0ಯಾದರೂ ಮಳೆ ಎಲ್ಲಿಂದ ಬರಬೇಕು? ಅರ್ಧ ಗಂಟೆ0ಯಲ್ಲಿ0ಯೇ ಊರ ಬೀದಿ ತುಂಬಿ ನೀರು ಕೊಚ್ಚೆ ಹರಿ0ಯಲು ಮೊದಲಾಯಿತು. ಈ ಮಳೆ0ಯ ಜೋರಿಗೆ ಹಿತ್ತಿಲಿನ ದಂಟು, ಬದನೆ, ತಿಂಗಳಹುರುಳಿ ಮೊದಲಾದ ತರಕಾರಿಗಳೆಲ್ಲ ಕೊಚ್ಚಿಹೋಗಿವೆ–ಎಂದು ನಂಜಮ್ಮನಿಗೆ ಒಂದು ಕಡೆ ಆತಂಕವಾದರೆ ಇನ್ನೊಂದೆಡೆ0ಯಲ್ಲಿ ಸಂತೋಷ. ಊರಿಗೆಲ್ಲ ಮಳೆ0ಯಾಗಿ ಬೆಳೆ ಬೆಳೆದರೆ ತಮಗೂ ತಿನ್ನುವ ಹಿಟ್ಟು ಸಿಕ್ಕುತ್ತದೆ. ಕೊಚ್ಚಿಹೋದ ತನ್ನ ಹಿತ್ತಿಲಿನ ಗಿಡಗಳನ್ನು ಮತ್ತೆ ಬೀಜ ಹಾಕಿ ಬೆಳೆಸಬಹುದು. ಸದ್ಯ ಬೆಳೆ0ಯಾದರೆ ಸಾಕು. ಮಳೆ0ಯೇ ಇಲ್ಲದಿರುವಾಗ 0ಯಾರೂ ಮನೆ0ಯ ಹೆಂಚು ಕೈ0ಯಾಡಿಸುವ 0ಯೋಚನೆಗೆ ಹೋಗಿರಲಿಲ್ಲ. ಅಲ್ಲದೆ ವಿಪರೀತ ಗಾಳಿಗೆ ಸಿಕ್ಕಿ ವರ್ಷದ ಶುರುವಿನಿಂದ ಹೆಂಚುಗಳು ಸರುಗಿದ್ದವು. ಆ ರಾತ್ರಿ ಸೋರದಿರುವ ಮನೆ0ಯೇ ಇಲ್ಲ. ಮನೆ ಸೋರಲಿ, ಕೊನೆಗೆ ಗೋಡೆ ಕುಸಿ0ಯಲಿ, ಸದ್ಯ, ಮಳೆ0ಯಾಯಿತಲ್ಲ ಅಷ್ಟೇ ಸಾಕು–ಎಂದು ಎಲ್ಲರೂ 0ಯೋಚಿಸುತ್ತಿದ್ದರು.

ಬೆಳಗಿನ ಜಾವದ ಹೊತ್ತಿಗೆ ಮಳೆ ನಿಂತಿತು. ಬೆಳಿಗ್ಗೆ ಎದ್ದು ಎಲ್ಲರೂ ಅವರವರ ಹೊಲಗದ್ದೆಗಳ ಕಡೆಗೆ ಹೊರಟರು. ಒಂದೇ ರಾತ್ರಿ0ಯಲ್ಲಿ ಊರ ಕೆರೆಗೆ ಅರ್ಧ ನೀರು ಬಂದಿದೆ: ಎಂದರೆ ಮೇಲ್ಭಾಗದ ಹಳ್ಳಿಗಳಿಗೂ ಮಳೆ0ಯಾಗಿದೆ.

ನಂಜಮ್ಮ ಹಿತ್ತಿಲಿನ ಹತ್ತಿರಕ್ಕೆ ಹೋಗುತ್ತಿದ್ದಳು. ದಾರಿ0ಯಲ್ಲಿ ಮಾದೇವ0ಯ್ಯನವರು ಬಂದರು. ಈ ಊರನ್ನೇ ಬಿಟ್ಟು ಹೊರಟುಹೋದ ಅ0ಯ್ಯನವರು ಇನ್ನು ಮತ್ತೆ ಬರಲಾರರೆಂದು ಅವಳೂ ಭಾವಿಸಿದ್ದಳು.

'ಅ0ಯ್ನೋರೇ, ನಮ್ಮುನ್ನೆಲ್ಲ ಬಿಟ್ ಇಷ್ಟ್ ದಿನ ಹೊರಟುಹೋಗಿದ್ರಲ್ಲಾ?'

'ಕಾಶಿಗೆ ಹೋಗಿದ್ದೆ ಕಣವ್ವಾ. ಈಟು ದಿನ ಅಲ್ಲೇ ಇದ್ದೆ. ಏನೋ ಮತ್ತೆ ಇಲ್ಲಿಗೇ ಬರಾಣ ಅನ್ನುಸ್ತು. ಬಂದೆ.'

ಅ0ಯ್ಯನವರನ್ನು ಮನೆಗೆ ಕರೆದುಕೊಂಡು ಹೋದಳು. ಚೆನ್ನಿಗರಾ0ಯರು ಎದ್ದು ಹೊರಗೆ ಹೋಗಿದ್ದರು. ನಂಜಮ್ಮ ಕೇಳಿದಳು: '0ಯಾವಾಗ ಬಂದ್ರಿ?'

'ರಾತ್ರಿ ಹೊತ್ತಾಗಿತ್ತು. ನಾನೇ ಬಂದು ನಿಮ್ಮುನ್ನ ಎಬ್ಬಿರಿಸಾನ ಅಂತಿದ್ದೆ. ಓಟ್ರಲ್ಲಿ ಮಳೆ ಬಂತು.'

ಅವರು ಈ ಮಾತು ಹೇಳುವಷ್ಟರಲ್ಲಿ 0ಯಾತಕ್ಕೋ ಸರ್ವಕ್ಕ ಅಲ್ಲಿಗೆ ಬಂದಳು. ಅ0ಯ್ಯನವರು ಊರಿಗೆ ಬಂದರಂತೆ. ಬಂದ ತಕ್ಷಣ ಮಳೆ ಬಂದಿದೆ. ಅವರು ಹೋಗಿ ಎಷ್ಟು ದಿನವಾಯಿತು? ಅವಳ ಮನಸ್ಸಿನಲ್ಲಿ, ತಕ್ಷಣ ಹೊಳೆದುಬಿಟ್ಟಿತು: ನಮ್ಮ ಬಣಜಿಗ ಜಾತಿ0ಯೋರು ಅವ್ರಿಗೆ ಕಂತೆಬಿಕ್ಷೆ ಹಾಕಾಕುಲ್ಲ ಅಂತ ಅಂದ್ರು. ಕ್ವಾಪಮಾಡ್ಕಂಡು ಅ0ಯ್ನೋರು ಹೊಂಟೋದ್ರು. ಆವಾಗ್ಲಿಂದ ಮಳೆ ಇಲ್ಲ. ನ್ಯನ್ನೆ ರಾತ್ರಿ ಇವ್ರು ಬಂದ್ರು. ಮಳೆ ಬಂತು. ಸಾದು ಶರಣರು ಅಂದ್ರೆ ಏನಂತ ತಿಳ್ಕಂಡವ್ರೆ ನಮ್ಮ ಜನ? ಸರ್ವಕ್ಕ ಹತ್ತಿರ ಬಂದು ಅ0ಯ್ಯನವರ ಪಾದಕ್ಕೆ ಅಡ್ಡಬಿದ್ದಳು.

'ಅ0ಯ್ನೋರೇ, ನಮ್ಮೂರ ಬಿಟ್ಟು ಬೇಜಾರು ಮಾಡ್ಕಂಡು 0ಯಾಕೆ ಹೋದ್ರಿ?'–ನಂಜಮ್ಮ ಕೇಳಿದಳು.

'ಏನೋ ಎಲ್ಲಾರ ಹ್ವಾಗ್ಬೇಕು ಅಂತ ಮನ್ಸಾತು ಕಣವ್ವ. ನನ್ನಂತೋರೇ ಒಬ್ರು ಜೋಡಿ ಸಿಕ್ಕಿದ್ರು. ವಿಶ್ವನಾಥನ ಪಾದ, ಕಾಶಿಗೆ ಹ್ವಾದೆ. ಜಂಗಮವಾಡಿ ಮಠ ಅಂತ ಐತೆ. ನಮ್ಮ ಕಡೆ ಜಂಗಮರು 0ಯಾರು ಹ್ವಾದ್ರೂ ಏನೂ 0ಯೋಚ್ನೆ ಇಲ್ದೆ ಇರ್ಬೌದು. ಇಲ್ಲಿ ಮಾಡಾ ಭಜನೆ ಅಲ್ಲೇ ಮಾಡ್ಕಂತಿದ್ದೆ. ಏಟಾದ್ರೂ ಅದು ನಮ್ಮ ದೇಸವಲ್ಲ, ನಮ್ಮ ಜನವಲ್ಲ. ಮಠದೋರೇನೋ ನಮ್ಮೋರು. ಇಲ್ಲಿಗೆ ಬರಾನ ಅನ್ನುಸ್ತು. ಬಂದ್ಬುಟ್ಟೆ.'

'ಅ0ಯ್ನೋರೇ, ನಿಮ್ಮ ರಾಗಿ, ಅವರೇಕಾಳೆಲ್ಲ ಕಳ್ಳನವಾಗೈತಂತೆ ನೋಡ್ಕಂಡ್ರಾ?'–ಸರ್ವಕ್ಕ ಕೇಳಿದಳು.

'ರಾತ್ರಿನಾಗ ಕಡ್ಡಿ ಗೀರಿ ನೋಡ್ದೆ. ಇರ್ಲಿಲ್ಲ. ಸುತ್ತಮುತ್ತ ಬರ ಬಂದೈತಿ. ಹ್ವಟ್ಟೆಗಿಲ್ದೋರು 0ಯಾರೋ ತಿಂದವ್ರೆ. 0ಯಾರು ತಿಂದ್ರೂ ಮಣ್ಣಾಗಾದೇ ಅಲ್ವ?'

ನಂಜಮ್ಮನ ಹತ್ತಿರ ಒಂದು ಸೇರು ಹಸಿಟ್ಟು ಸಾಲ ಕೇಳಲು ಬಂದಿದ್ದ ಸರ್ವಕ್ಕ ಅದನ್ನು ಇಸಿದುಕೊಂಡು ಹೊರಟುಹೋದಳು. ಅವರ ಮನೆಗೆ 0ಯಾರೋ ನೆಂಟರು ಬಂದಿದ್ದಾರೆ. ಸರ್ವಕ್ಕ ಹೋದಮೇಲೆ ಅ0ಯ್ಯನವರು ಹೇಳಿದರು: 'ನಿಮ್ಮ ಅಪ್ಪಾಜೀನ ನಾನು ನೋಡಿದೆ.'

'ಎಲ್ಲಿ?'–ನಂಜಮ್ಮ ಉತ್ಸುಕಳಾಗಿ ಕೇಳಿದಳು. ಅವಳ ತಂದೆ ಕಂಠೀಜೋಯಿಸರು ಇದ್ದಕ್ಕಿದ್ದ ಹಾಗೆ0ಯೇ ಕಾಣೆ0ಯಾಗಿ ಒಟ್ಟು ಹನ್ನೆರಡು ವರ್ಷವೇ ಆಗಿತ್ತು. ಹನ್ನೆರಡು ವರ್ಷ ತುಂಬಿದರೆ ಮುಖ ತೋರೆ0ಯುತ್ತೆ. ಜೀವಂತ ಬದುಕಿದ್ದಾರೆ0ಯೋ ಸತ್ತಿದ್ದಾರೆ0ಯೋ ಎಂದು ಅವಳು ಹಲವು ಸಲ ತನ್ನಲ್ಲಿ0ಯೇ 0ಯೋಚಿಸಿದ್ದಳು.

"ಕಾಶೀಲೇ ಅವ್ರೆ ಕಣವ್ವ. ಈಗ ಒಂದು ತಿಂಗಳಿನಲ್ಲಿ ಒಂದು ದಿನ ಬೆಳಿಗ್ಗೆ ನದೀ ದಡಕ್ಕೆ ಹ್ವಾಗಿದ್ದೆ. ಹನುಮಾನ್ ಘಾಟ್ ಅಂತ ಆ ಘಾಟಿನ ಹೆಸರು, ನಮ್ಮ ಕಡೆ ಬ್ರಾಂಬ್ರು ಯಾರ್ಯಾರೋ ಇದ್ರು. ನಮ್ಮ ಕಡೇಯೋರೇನು. ಹಿಂದೂಸ್ಥಾನದ ಎಲ್ಲಾ ಕಡೆ ಮಂದೀನೂ ಕಾಶಿಗೆ ದಿನಾ ಬರ್‍ತ್ಾನೇ ಇರ್‍ತಾರೆ. ಅವ್ರು ತಿಥಿಕರ್ಮ ಮಾಡ್ತಾ ಇದ್ರು. ನಿಮ್ಮ ಅಪ್ಪಾಜಿ ಗಟ್ಟಿಯಾಗಿ ಮಂತ್ರ ಹೇಳ್ತಿತ್ತು. ನಾನೇ ಮಾತಾಡುಸ್ದೆ. ಆಮೇಲೆ ಎಲ್ಡು ದಿನವಾದ್ಮ್ಯಾಲೆ ಅವರೇ ನಾನು ಠಿಕಾಣಿ ಹಾಕಿದ್ದ ಜಂಗಮವಾಡಿ ಮಠಕ್ಕೆ ಬಂದ್ರು. ಅವ್ರೇ ಹ್ಯದಿ ್ರಹ್ಯದರ್ಕಂಡು–ನನ್ನ ಅರೆಸ್ಟ್ ಮಾಡಬೇಕು ಅಂತ ಪೋಲೀಸ್ನೋರ ಹುಕುಂ ಇನ್ನೂ ಐತಾ?' ಅಂತ ಕೇಳಿದ್ರು. ಯಾವ್ದು, ಅಂದೆ. 'ನಮ್ಮೂರ ಶ್ಯಾನುಭೋಗ ಶ್ಯಾಮಣ್ಣ ಸತ್ತದ್ದು'–ಅಂದ್ರು. ನಂಗೆ ಅದೆಲ್ಲ ತಪ್ಸೀಲು ಗೊತ್ತಿರ್ನಿಲ್ಲ. ನಂಗ್ ಗೊತ್ತಿದ್ದುನ್ ಹೇಳ್ದೆ: 'ಅಲ್ಲಾ ಸ್ವಾಮಿ, ಕೋರ್‍ಟಿನಾಗೆ ನೀವೇ ವ್ಯಾಜ್ಯ ಗೆದ್ರಂತೆ. ಗೆದ್ದಮ್ಯಾಲೆ ಯಾಕೆ ಊರು ಬಿಟ್ಟು ಹ್ವಂಟುಬುಟ್ರಿ?' ಅವರೇನೂ ಜವಾಬು ಹೇಳ್ಲಿಲ್ಲ. 'ನಾನು ಊರು ಬಿಟ್ಟು ಹನ್ನೆಲ್ಡು ವರ್ಷವಾಗ್ತಾ ಬಂತು. ಊರ್‍ಕಡಿಕ್ ಹೋಯ್ತೀನಿ' ಅಂದ್ರು. ಆಮ್ಯಾಲೆ ಮತ್ತೆ ನಂಗ್ ಸಿಕ್ನೇ ಇಲ್ಲ. ಅವ್ರೆಲ್ಲಿದಾರೆ ಅಂತ್ಲೂ ಏಳ್ಲಿಲ್ಲ."

ನಂಜಮ್ಮನಿಗೆ ಈಗ ಎಲ್ಲವೂ ಅರ್ಥವಾಯಿತು. ಕೋರ್ಟಿನಲ್ಲಿ ಕೇಸು ಮುಗಿಸಿಕೊಂಡು ಊರಿಗೆ ಬಂದ ಶ್ಯಾಮಣ್ಣ–'ಆ ನನ್ಮಗ ಸಿಕ್ಲಿ, ಜಡ್ಜಿಗಳೇ ನೇಣುಗಟ್ಟುಸ್ತಾರೆ' ಎಂದಿದ್ದ. ಅದಕ್ಕೇ ಹೆದರಿ ಅವರು ಹೀಗೆ ದೇಶಾಂತರ ಹೋಗಿರಬಹುದು. ಇಂಥ ಕೇಸುಗಳ ಜೀವ ಹನ್ನೆರಡು ವರ್ಷ ಇರುತ್ತಂತೆ. ಆಮೇಲೆ ಸರ್ಕಾರದವರು ಆ ಕಾಗದ ಪತ್ರಗಳನ್ನು ಸುಟ್ಟುಹಾಕಿಬಿಡುತ್ತಾರಂತೆ. ಹೀಗೆ ಮನೆ ಮಠ ಬಿಟ್ಟು ದೇಶಾಂತರ ತಿರುಗುವುದೇ ತನ್ನ ತಂದೆಯ ಹಣೆಯಲ್ಲಿ ಬರೆದಿದೆಯೇ ಎಂದು ಯೋಚಿಸುತ್ತಾ ಅವಳು ಅಂತರ್ಮುಖಿಯಾದಳು. ಅಷ್ಟರಲ್ಲಿ ಚೆನ್ನಿಗರಾಯರು ಮನೆಗೆ ಬಂದರು. ಅಯ್ಯನವರನ್ನು ಕಂಡ ಇವರಿಗೂ ಎಷ್ಟೋ ಸಂತೋಷ. ಅವರು ಹಾಡುತ್ತಿದ್ದ ತತ್ವ, ಭಜನೆ, ಲಾವಣಿಗಳನ್ನು ಕೇಳಿಕೊಂಡು ಇವರಿಗೆ ಸಲೀಸಾಗಿ ಹೊತ್ತು ಹೋಗುತ್ತಿತ್ತು. ಅಯ್ಯನವರು ಇದುವರೆಗೂ ಎಲ್ಲಿದ್ದರು ಇತ್ಯಾದಿ ಕುಶಲೋಪರಿಗಳನ್ನು ವಿಚಾರಿಸಿದ ಚೆನ್ನಿಗರಾಯರಿಗೆ, ಕಾಶಿ ಎಂಬುದನ್ನು ಕೇಳಿದ ತಕ್ಷಣ ಒಂದು ಪ್ರಶ್ನೆ ಕೇಳಬೇಕೆನ್ನಿಸಿತು. ಕಾಶಿಯ ಬಗೆಗೆ ಅವರು ಅನೇಕರಿಂದ ಏನೇನೋ ಕೇಳಿದ್ದರು. ಆದರೆ ಮಾದೇವಯ್ಯನವರಂತೆ ಅಲ್ಲಿಯೇ ವರ್ಷ ವರ್ಷವರೆ ಇದ್ದು ತಿಳಿದವರು ಯಾರನ್ನೂ ಇದುವರೆಗೆ ಕಂಡಿರಲಿಲ್ಲ.

'ಅಯ್ನೋರೇ, ಅಲ್ಲಿ ರಾಜ ಮಹಾರಾಜರು ದಿನಾ ಸಮಾರಾಧನೆ ಮಾಡುಸ್ತಾರಂತೆ. ಊಟದಲ್ಲಿ ಒಂದೊಂದು ಲಾಡು ಉಂಡೆ ತಿಂದ್ರೆ ಒಂದೊಂದು ರೂಪಾಯಿ ದಕ್ಷಿಣೆ ಕೊಡ್ತಾರಂತೆ ನಿಜವೆ?'–ಅವರು ಕೇಳಿದರು.

'ಅಲ್ಲಿ ರಾಜ ಮಹಾರಾಜರ ಧರ್ಮಶಾಲೆ ಏನೋ ಬಹುತ್ ಅವೆ. ಹೋದೋರಿಗೆ ಒಂದೊಂದು ಧರ್ಮಶಾಲೇಲಿ ಮೂರು ಮೂರು ದಿನ ಮುಫತ್ ಊಟ ನೀಡ್ತಾರೆ. ಹಬ್ಬದ ದಿನ ಊಟ ಹಾಕುಸ್ತಾರೆ. ಒಂದೊಂದು ದಫ ಒಂದು ಲಾಡು ತಿಂದ್ರೆ ಒಂದೊಂದು ರೂಪಾಯಿ ಕೊಡೋದೂ ಉಂಟು.'

'ಹಾಗಾದ್ರೆ ಅಲ್ಲಿಗೇ ಹೋಗಿ ಇದ್ದು ಬಿಡಬೇಕುಕಣ್ರೀ.'

'ಶ್ಯಾನುಭೋಗ್ರೇ, ಕಾಶೀಲೇನು ಭಿಕ್ಷುಕರಿಲ್ಲ ಅಂತೀರಾ? ನಿಮ್ಹಂಗೆ ಅಲ್ಲಿಗೆ ಹೋಗಿ ಇರಬೇಕು ಅನ್ನೋರು ಏನು ಕಮ್ಮಿ ಅವ್ರೆ ಅಂತೀರಾ? ಹಿಂಗೆ ಯಲ್ರಿಗೂ ದಿನಾ ಮುಫತ್ ಭೋಜನ ಕೊಡ್ಸಕ್ಕೆ ಯಾವ ರಾಜನ ಕೈಲಿ ಆಗ್ತೈತಿ?'

'ಥೂ, ಆ ರಾಜನ ಅವ್ವನ ಯೋಗ್ತಿಗೆ ನನ್ ಯಕ್ಡ ಹ್ವಡೆಯ. ಆ ಸಂಪತ್ತಿಗೆ ಅವನೆಂಥಾ ಮಹಾರಾಜ?' ಅಯ್ಯನವರು ಅದಕ್ಕೆ ಯಾವ ಉತ್ತರ, ಟಿಪ್ಪಣಿಗಳನ್ನೂ ಹೇಳಲಿಲ್ಲ. ಸ್ವಲ್ಪ ಹೊತ್ತು ಕೂತಿದ್ದು ಅವರು ಹೊರಟಾಗ ನಂಜಮ್ಮ, 'ನಿಮ್ಮ ಗುಡೀಲಿದ್ದ ರಾಗಿ, ಕಾಳು, ಎಲ್ಲಾ ಕಳವಾಗಿದೆ. ಇವತ್ತಿಗೆ ಒಂದಿಷ್ಟು ಹಸಿಟ್ಟು, ಬ್ಯಾಳೆ, ಖಾರದ ಪುಡಿ ಕೊಡ್ತೀನಿ. ಇಲ್ದೆ ಇದ್ರೆ ನಮ್ಮನ್ಲೇ ಬಿನ್ನ ತೀರುಸ್ತೀರಾ?'

ಒಂದು ನಿಮಿಷ ಯೋಚಿಸಿದ ಅವರು–'ಈ ಊರಲ್ಲಿರಾಣ ಅಂತ ಬಂದೆ. ಸುತ್ತ ಹಳ್ಳೀಲಿ ಜೋಳಿಗೆ ಹಿಡಿದು ಭಿಕ್ಷೆ ಮಾಡ್ತೀನಿ. ಜಾತಿಸ್ಥರ ಮುಲಾಜೇನು ಇಲ್ಲ. ಇಲ್ಲೇ ಬಿನ್ನಕ್ಕೆ ಬರ್‍ತೀನಿ' ಎಂದು ಹೇಳಿ ಹೊರಟುಹೋದರು.

ಅವರು ಗುಡಿಗೆ ಹೋಗಿ ಇನ್ನೂ ಅರ್ಧ ಗಂಟೆ ಕಳೆದಿರಲಿಲ್ಲ. ಒಬ್ಬೊಬ್ಬರಾಗಿ ಬಣಜಿಗರ ಗಂಡಸರೆಲ್ಲ ಬಂದು ಸೇರಿದರು. ರೇವಣ್ಣಶೆಟ್ಟಿ, ಶೆಟ್ಟಪ್ಪ, ಮುರಳಶೆಟ್ಟಪ್ಪ, ಲಿಂಗದೇವರು, ಎಲ್ಲರೂ ಒಟ್ಟಿಗೆ ಬಂದು ಅಯ್ಯನವರಿಗೆ ಉದ್ದಕ್ಕೆ ಅಡ್ಡಬಿದ್ದರು. ರೇವಣ್ಣಶೆಟ್ಟಿ ಹೇಳಿದ: 'ಅಯ್ನೋರೇ, ನೀವು ಮಹಾಂತರು. ನಮ್ಮೂರ ಮ್ಯಾಲೆ ಸಿಟ್ಕಂಡು ಹೊಂಟೋದ್ರಿ. ಊರಲ್ಲಿ ಮಳೆ ಬರ್ನಿಲ್ಲ, ಬೆಳೆ ಬೆಳೀನಿಲ್ಲ. ನೆನ್ನೆ ರಾತ್ರಿ ಬಂದ್ರಿ. ಮಳೆ ಬಂತು. ನಾವು ನಿಮ್ಮುನ್ನ ಅಂದು ಪಾಪ ಮಾಡಿಬಿಟ್ವಿ. ನೀವು ಆದ ಮರ್ತು, ನಮ್ಮಗಳ ಮನೆಗೆ ದಿನಾ ಕಂತೆಭಿಕ್ಷಕ್ಕೆ ಬರ್‌ಬೇಕು.'

ಅಯ್ಯನವರು ಈ ವಿಚಾರವನ್ನೇ ಮರೆತುಬಿಟ್ಟಿದ್ದರು. ಈಗ ಇವರು ಹೀಗೆ ಹೇಳುತ್ತಿದ್ದಾರೆ. ತಾವು ಊರು ಬಿಟ್ಟುದರಿಂದಲೇ ಇಲ್ಲಿ ಮಳೆ ಹೋಯಿತೇ? ಬರೀ ರಾಮಸಂದ್ರಕ್ಕೆ ಮಾತ್ರ ಹೋಗಿಲ್ಲ, ಸೀಮೆಗೇ ಹೋಗಿದೆ.

ತಮಿಳು ತೆಲುಗು ದೇಶಗಳಲ್ಲೂ ಇಲ್ಲದುದನ್ನು ಅವರು ರೈಲಿನಲ್ಲಿ ಬರುವಾಗ ನೋಡಿದ್ದರು. ನೆನ್ನೆ ತಾವು ಈ ಊರು ತಲುಪಿದ್ದಕ್ಕೂ ಇಲ್ಲಿ ಮಳೆ ಆದದ್ದಕ್ಕೂ ಅದೇನು ಶಿವನ ಸಂಬಂಧ?–ಈ ಊರ ಮೇಲಣ ಹಳ್ಳಿಗಳಲ್ಲೂ ಮಳೆಯಾಗ್ಯೆತೆ. ಅವರೇ ಅಂದ್ರು: 'ನಾವೇನೂ ಮಹಂತರಲ್ಲ. ಮಳೆ ಬೆಳೆ ಹೋಗಾದು ಬರಾದು ಶಿವನ ಇಚ್ಚೆ. ಜನಗಳ ಪಾಪ ಪುಣ್ಯಕ್ಕೆ ತಕ್ಕ ಹಂಗೆ ಶಿವ ಕೊಡ್ತಾನೆ. ನಮ್ಮ ಮುದ್ದೆ ನಾವು ತೊಳಸ್ಕಂತೀವಿ.'

ಆದರೆ ಅವರು ಕೇಳಲಿಲ್ಲ. ದಿನವೂ ಮಧ್ಯಾಹ್ನ ತಮ್ಮ ಮನೆಗಳಲ್ಲಿ ಕಂತೆಭಿಕ್ಷೆ ಇಕ್ಕಿಸಿಕೊಂಡು ತಮ್ಮನ್ನು ಧನ್ಯರನ್ನಾಗಿ ಮಾಡಬೇಕೆಂದು ಮತ್ತೊಮ್ಮೆ ಕೈಮುಗಿದರು. ಅಯ್ಯನವರು ಬೇಡವೆನ್ನಲಿಲ್ಲ. ಈಗ ಊರಿನಲ್ಲಿ ಎಲ್ಲರ ಮನೆಯಲ್ಲೂ ಕವಳಕ್ಕೆ ಕಷ್ಟವೆಂದು ಅವರು ಕೇಳಿದ್ದರು. ಆದರೂ ಅವರು ಮಧ್ಯಾಹ್ನ ಕಂತೆಭಿಕ್ಷೆ ಮಾಡಿ ಗುಡಿಗೆ ತಂದು ಕೂತು ಉಂಡರು. ನಂಜಮ್ಮನ ಮನೆಗೆ ರಾತ್ರಿ ಬರುವುದಾಗಿ ಹೇಳಿ ಬಂದರು. ಅವಳ ಮಗ ವಿಶ್ವ ಆಗಲೇ ಅಯ್ಯನವರನ್ನು ಅರ್ಧ ಮರೆತುಬಿಟ್ಟಿದ್ದ. ಅವನು ಸ್ಕೂಲಿಗೆ ಬೇರೆ ಹೋಗುತ್ತಾನೆ. ಅವರು ಉಣ್ಣುವಾಗ ಜೊತೆಯಲ್ಲಿ ಜೊತೆಯಲ್ಲಿ ಕೂರಲು ಆಗ ಸ್ಕೂಲಿನ ಸಮಯ.

ಮಾದೇವಯ್ಯನವರು ಊರು ಬಿಟ್ಟು ಹೋದುದಕ್ಕೆ ಊರಿನಲ್ಲಿ ಮಳೆ ಬೆಳೆ ಆಗಲಿಲ್ಲ. ನೆನ್ನೆ ರಾತ್ರಿ ಅವರು ಹಿಂತಿರುಗಿ ಬಂದದ್ದರಿಂದಲೇ ಮಳೆ ಬಂತು ಎಂಬ ಸುದ್ದಿ ಊರಿನಲ್ಲೆಲ್ಲ ಹರಡಿತು. ಕುರುಬ ಕುಂಬಾರ, ಬಡಗಿ, ಚಮ್ಮಾರರಾದಿಯಾಗಿಯೂ ಗುಡಿಗೆ ಬಂದು ಅವರಿಗೆ ಕೈಮುಗಿದು ಹೋದರು. ಪಟೇಲ ಶಿವೇಗೌಡನಂತಹ ಕೆಲವರು ಮಾತ್ರ ಇದನ್ನು ನಂಬಲಿಲ್ಲ. ಆ ದಿನ ರಾತ್ರಿ ಅಯ್ಯನವರು ಒಬ್ಬರೇ ಗುಡಿಯಲ್ಲಿ ಮಲಗಿದ್ದರು. ನಡುರಾತ್ರಿಯ ವೇಳೆಗೆ ಯಾರೋ ಒಬ್ಬ ಬಂದು, 'ಅಯ್ಯಾರೇ, ಅಯ್ಯಾರೇ' ಎಂದು ಕೂಗಿ ಎಬ್ಬಿಸಿದ. ಅಯ್ಯನವರು ಎದ್ದು ಬೆಂಕಿಕಡ್ಡಿ ಗೀರಿ ನೋಡಿದರು. ಬಂದಿದ್ದವನು ಪಟೇಲ ಶಿವೇಗೌಡರ ಮನೆಯ ಜೀತದ ಆಳು ಗೊರವ. ಇವರ ಕಾಲು ಮುಟ್ಟಿ ಹೇಳಿದ: 'ಯಪ್ಪ, ನಂಗೆ ಸಾಪ ಆಕ್‌ಬ್ಯಾಡ. ನಂದೇನೂ ತೆಪ್ಪಿಲ್ಲ.'

'ಯಾಕೆ ಏನಾಯ್ತು? ಏಳು.'

'ನಿನ್ನ ರಾಗಿ, ಅವರೇಕಾಳು, ಯಲ್ಲಾನೂ ನಮ್ಮ ಗೌಡ್ರು ರಾತ್ರಿನಾಗ, ಬಿಟ್ಟ ಊರಿಗೆ ಬಂದು ಒರುಸ್ಕಂಡು ಕುಂಡೊಯ್ದ್ರು. ಅವ್ರೇ ಬಂದು ಬೀಗ ಮುರುದ್ರು. ನಾನು ಒತ್ಕಂಡೋಗಿ ಅವ್ರ ಶೆಡ್ಡಿಗೆ ಆಕ್ದೆ. ನನ್ ಮನ್ಗೇನೂ ತಗಂಡಿಲ್ಲ.'

'ಆಗ್ಲಿ ಬುಡು, ನಿಂದೇನೂ ತೆಪ್ಪಿಲ್ಲ.'

'ನಾನ್ಹಿಂಗಂದೆ ಅಂತ ಯಾರ್‌ಕುಟ್ಟೂ ಅನ್‌ಬ್ಯಾಡ.'

'ಹೇಳಾಕುಲ್ಲ'–ಎಂದು ಅವರು ಮಾತು ಕೊಟ್ಟ ಮೇಲೆ ಅವನು ಹೊರಟು ಹೋದ.

ಪಟೇಲ ಶಿವೇಗೌಡರು ಎಂಥವರೆಂಬುದು ಅಯ್ಯನವರಿಗೆ ಗೊತ್ತಿಲ್ಲದ ಸಂಗತಿಯಲ್ಲ. ಬಿಟ್ಟ ಊರಿನಲ್ಲಿ ದೇವಸ್ಥಾನದ ಕೋಣೆಯ ಬೀಗ ಮುರಿದು ರಾಗಿಯ ಕಳವು ಮಾಡುವುದೆಂದರೆ ಯಾರೋ ಇಂಥವರೊಬ್ಬರ ಕುಮ್ಮಕ್ಕಿಲ್ಲದೆ ಬರೀ ಹೊಟ್ಟೆಗಿಲ್ಲದ ಕಳ್ಳರು ಮಾಡಲಾರರೆಂದು ಅವರೂ ಊಹಿಸಿದ್ದರು.

ಮರುದಿನ ಬೆಳಿಗ್ಗೆ ಸುಮಾರು ಹತ್ತು ಗಂಟೆಯಲ್ಲಿ ಒಂದು ವಿಶೇಷ ನಡೆಯಿತು. ನೂರು ರೊಂಯಿಪಟಗಳು ಒಂದೇ ಸಮನೆ ಮೊರೆದಂತೆ ಅದೇನೋ ಸದ್ದಾಯಿತು. ಹೊಲ ಗದ್ದೆಗಳ ಅಟ್ಟಲು ಮಣ್ಣಿನ ಮೇಲೆ ನಡೆಯುತ್ತಿದ್ದ ಜನಗಳೆಲ್ಲ ಕತ್ತೆತ್ತಿ ನೋಡುತ್ತಾರೆ: ಆಕಾಶದಲ್ಲಿ ಬೆಳ್ಳನೆಯ ಭಾರೀ ಗರುಡ ಪಕ್ಷಿಯಂಥದೊಂದು ಹೋಗುತ್ತಿದೆ. ರೆಕ್ಕೆ ಆಡಿಸುತ್ತಿಲ್ಲ. ಅದಕ್ಕೆ ಕೊಕ್ಕಿಲ್ಲ. ಆದರೆ ಬಾಲದಂತೆ ಏನೋ ಇದೆ. ರೆಕ್ಕೆಯಂತೆ ಎರಡು ಕಡೆಯೂ ಹರಡಿದೆ. ಊರ ಮೇಲೆ ಬಂದಾಗ ಅದರಿಂದ ಅದೇನೋ ಕೆಳಗೆ ಬಿತ್ತು. ಬಿರುಗಾಳಿಗೆ ತೂರುವ ತರಗು ಎಲೆಗಳಂತೆ ಊರ ಮೇಲೆಲ್ಲ ಚದುರಿ ಬಿದ್ದ ಕಾಗದದ ಚೀಟಿಗಳಾಗಿದ್ದವು. ಮೇಲೆ ಹೋದದ್ದು ವಿಮಾನವೆಂದು, ಈ ಹಿಂದೆ ಅಂಥದ್ದನ್ನು ನೋಡಿರದಿದ್ದರೂ ಎಷ್ಟೋ ಜನಕ್ಕೆ ಗೊತ್ತಾಯಿತು. ನಂಜಮ್ಮ ಕೆಳಗೆ ಬಿದ್ದ ಒಂದು ಚೀಟಿಯನ್ನು ತೆಗೆದುಕೊಂಡು ಓದಿದಳು.

ಮೈಸೂರು ರಾಜ್ಯವನ್ನಾಳುವ ಮಹಾಸ್ವಾಮಿ ಶ್ರೀಮನ್ ಮಹಾರಾಜರ ಘನ ಸರ್ಕಾರವು ಅದನ್ನು ಅಚ್ಚುಹಾಕಿಸಿತ್ತು. ಈಗ ಯುದ್ಧ ನಡೆಯುತ್ತಿದೆಯಂತೆ. ಯೂರೋಪು ದೇಶದಲ್ಲಿ ಜರ್ಮನಿಯವರು ಮುನ್ನುಗ್ಗುತ್ತಿದ್ದಾರಂತೆ. ಜಪಾನಿನವರು ಇಂಡಿಯಾ ದೇಶವನ್ನು ಕಬಳಿಸಲು ಬರುತ್ತಿದ್ದಾರೆ. ನಮ್ಮ ಮೈಸೂರು ದೇಶದ ಮೇಲೂ ಬಾಂಬು ಬಂದು ಬೀಳಬಹುದು. ವಿಮಾನಗಳು ಬಂದಾಗ ಜನಗಳು ನಿಂತು ನೋಡಬಾರದು. ನಿಂತಲ್ಲಿಯೇ ಮಕಾಡೆ ಮಲಗಿಬಿಡಬೇಕು. ಶತ್ರುಗಳನ್ನು ಹೊಡೆದೋಡಿಸಲು ಯುದ್ಧನಿಧಿಗೆ ಜನಗಳೆಲ್ಲ ಸಹಾಯ ಮಾಡಬೇಕು–ಎಂದು ಬರೆದು ಕೊನೆಯಲ್ಲಿ, 'ವಿಜಯ' ಎಂದು ಹಾಕಿತ್ತು.

ಇದಾದ ಒಂದು ವಾರದಲ್ಲಿ ಶೇಕ್‌ದಾರರು ರಾಮಸಂದ್ರಕ್ಕೆ ಬಂದರು. ಯುದ್ಧನಿಧಿಗೆ ಹಣ ಕೊಡಿಸಬೇಕೆಂದು ಸರ್ಕಾಸದ ಆಜ್ಞೆಯಾಗಿದೆ. ಮಳೆ ಬೆಳೆ ಇಲ್ಲವೆಂದು ಅದೇ ಸರ್ಕಾರ ಹೋದ ವರ್ಷ ಕಂದಾಯ ವಜಾ ಮಾಡಿತ್ತು. ಆದರೆ ಈಗ ಇಂಗ್ಲೆಂಡ್ ಚಕ್ರವರ್ತಿಗಳು ಹಣವಿಲ್ಲದೆ ಯುದ್ಧ ಗೆಲ್ಲಲು ಸಾಧ್ಯವಿಲ್ಲ. ಜನಗಳು

ಆದಷ್ಟು ಕೊಡಲೇಬೇಕು. ಶೇಕ್‌ದಾರರೇ ಬಂದ ಮೇಲೆ ಮಾಡುವುದೇನು? ಶಿವೇಗೌಡ ಕಾಶಿಂಬಡ್ಡಿ ಮೊದಲಾದವರಿಂದ, ಶೇಕ್‌ದಾರರು ಹೇಳಿದಷ್ಟು ವಸೂಲಿ0ಾಯಿತು. ಊರ ಹೊರಗೆ ತನ್ನದೇ ಕಿರಾಣಿ ಅಂಗಡಿ ನಡೆಸುತ್ತಿದ್ದ ನರಸಿ0ುೂ ಐದು ರೂಪಾಯಿ ಕೊಟ್ಟಳು. ಒಟ್ಟಿನಲ್ಲಿ ರಾಮಸಂದ್ರದಲ್ಲಿ ನೂರು ರೂಪಾಯಿ ವಸೂಲಾಯಿತು. 'ನಿಮ್ಮ ಗ್ರಾಮದ ಮ0ುರ್ಾದೆ ಉಳೀತು'–ಎಂದು ಶೇಕ್‌ದಾರರು ಹೇಳಿ ಹೋದರು.

ಮರುದಿನ ರಾಮಣ್ಣ ಸ್ಕೂಲಿನಿಂದ ಬರುವಾಗ ಅವನ ಶರಟಿನ ವ್ ಎಂಬ ಆಕಾರದಲ್ಲಿ ಅಚ್ಚುಮಾಡಿರುವ ಗುರುತಿನ ಒಂದು ಬಣ್ಣದ ಕಾಗದವನ್ನು ಗುಂಡುಸೂಜಿಯಿಂದ ಚುಚ್ಚಿಕೊಂಡಿದ್ದ. ಅವನು ಮನೆಗೆ ಬಂದು ಹೇಳಿದ: "ಅಮ್ಮ, ನಮ್ಮ ಸ್ಕೂಲಿನಲ್ಲಿ ಇದನ್ನ ಎಲ್ಲ ಹುಡುಗರಿಗೂ ಹಾಕಿ ಮೆರೆವಣಿಗೆ ಮಾಡಿಸಿದರು. ಇದು ನೋಡು, ನಾನು ನಿಂಗೆ ಹೇಳ್ಕೊಟ್ಟಿಲ್ಲಾ? ಇಂಗ್ಲಿಷಿನ 'ವಿ' ಅನ್ನೂ ಅಕ್ಷರ. 'ವಿ'ಅಂದ್ರೆ 'ವಿಕ್ಟರಿ'ಅಂತ. 0ುದ್ಧದಲ್ಲಿ ನಮಗೆಲ್ಲ ವಿಜ0ುವಾಗಲಿ ಅಂತ. ಅದಕ್ಕೆ ಎಲ್ಲ ಹುಡುಗರೂ ಎರಡೆರಡಾಣೆ ತರಬೇಕು ಅಂತ ಹೆಡ್ಮೇಷ್ಟರು ಹೇಳಿದಾರೆ" ಎಂದು ಹುಡುಗ ವಿವರಿಸುತ್ತಿದ್ದ. ಎರಡಾಣೆ0ುನ್ನು ಎಲ್ಲಿ ಹೊಂಚುವುದೆಂದು ಅಮ್ಮ 0ೋಚಿಸತೊಡಗಿದಳು.

## ಅಧ್ಯಾ0ು 11

– 1–

ಇಷ್ಟು ದಿನವಾದರೂ ಕಮಲುವಿನ ಹೊಟ್ಟೆ0ುಲ್ಲಿ ಮಕ್ಕಳಾಗಲಿಲ್ಲ. ತಾನು ಸಾಕಿ ಬೆಳೆಸಿದ ಮೊಮ್ಮಗನಿಂದ ವಂಶ ಬೆಳೆ0ುದ್ದನ್ನು ಕಂಡ ಅಕ್ಕಮ್ಮ ಕೊರಗುತ್ತಿದ್ದಳು. ಮಕ್ಕಳಿಲ್ಲದಿದ್ದರೆ ಬೇಡ, ಇವಳು ತನ್ನ ಗಂಡ ಮತ್ತು ಅಜ್ಜಿ0ುನ್ನೂ ಸಂತೋಷವಾಗಿಡುತ್ತಿರಲಿಲ್ಲ.

ರಾಮಸಂದ್ರದಲ್ಲಿ ಮಳೆ ಬೆಳೆ ಹೋದಾಗ ನಾಗಲಾಪುರದಲ್ಲಿ0ುೂ ಹೋಯಿತು. ಆದರೆ ಕಲ್ಲೇಶ ಜಾಣ ಗೃಹಸ್ಥ. ಒಂದು ವರ್ಷಕ್ಕಾದರೂ ಹೆಚ್ಚಾಗಿ ದಿನಸಿ0ು ದಾಸ್ತಾನು ಇಡುತ್ತಿದ್ದ. ಕಳೆದ ಸಲ ಮಳೆ ಕೈಕೊಡುತ್ತದೆಂಬ ಸೂಚನೆ ತಿಳಿದ ತಕ್ಷಣ ಹೊಲಕ್ಕೆ ಹಾರಕ ಹಾಕಿಸಿದ. ಮಳೆ0ಾಗದೆ ಇದ್ದರೂ ಹೊಲದಲ್ಲಿ ಮೂರು ಖಂಡುಗ ಹಾರಕ ಬಂತು.

ಮನೆ0ುಲ್ಲಿ ರಾಗಿ ಏನೋ ಇತ್ತು. ಎಡವಟ್ಟಾದದ್ದು ಬತ್ತಕ್ಕೆ. ಇಷ್ಟಿದ್ದರೆ ಸಾಕೇಸಾಕು. ಹಾರಕದ ಅನ್ನವೂ ಸೊಗಸಾಗಿರುತ್ತೆ. ಆದರೆ ಕಲ್ಲೇಶನಿಗೆ ಅದು ಆಗುತ್ತಿರಲಿಲ್ಲ. ವಾ0ುುವಿನಿಂದ ಕೂಡಿದ ಅದನ್ನು ತಿಂದರೆ, ಮೊದಲೇ ಸ್ವಲ್ಪ ಸ್ವಾಧೀನ ತಪ್ಪಿದ್ದ ಅವನ ಎಡಗೈ ಅದುರಲು ಶುರುವಾಗುತ್ತಿತ್ತು. ಆದುದರಿಂದ ತಿನ್ನಲಾರ. ಮನೆ0ುಲ್ಲಿ ಇದ್ದ ಒಂದು ಪಲ್ಲ ಬತ್ತವನ್ನೇ 0ಾತದಲ್ಲಿ ಆಗಾಗ್ಗೆ ಕುಟ್ಟಿಕೊಂಡರೆ ಐವತ್ತೈದು ಸೇರಾದರೂ ಅಕ್ಕಿ ಬರುತ್ತದೆ. ದಿನಾ ಅವನ ಪೂರ್ತಿ ಅರ್ಧ ಪಾವು ಅಕ್ಕಿ0ು ಅನ್ನ ಮಾಡಿದರೆ ಹಿಟ್ಟಿನ ಜೊತೆಗೆ ಸಾಕು. ಇಷ್ಟು ವ0ುಸ್ಸಾದರೂ ಮುದುಕಿ0ಾದ ತನಗೆ ಹಾರಕದ ಅನ್ನದಿಂದ ಏನೂ ಆಗುತ್ತಿರಲಿಲ್ಲ; ತಾನು, ಕಮಲು, ಇಬ್ಬರೂ ಅದನ್ನೇ ತಿನ್ನುವುದು ಎಂದು ಅಕ್ಕಮ್ಮ ತೀರ್ಮಾನಿಸಿದಳು.

ಎರಡು ಬಗೆ0ು ಅನ್ನ ಮಾಡಿ ತನ್ನ ಗಂಡನಿಗೇ ಒಂದು ತರಹ, ತನಗೆ ಬೇರೆ ತರಹ ಬಡಿಸಿದುದನ್ನು ಕಂಡಾಗ ಕಮಲು ಉರಿದುಬಿದ್ದಳು. ಅವನದ್ದೇನು ಹೆಚ್ಚು, ತನ್ನದೇನು ಕಡಿಮೆ?–ಎಂಬುದು ಅವಳ ಪ್ರಶ್ನೆ. ನಾಗಲಾಪುರಕ್ಕೆ ಬಂದು ಹನ್ನೆರಡು ವರ್ಷವಾದರೂ, ತಾನು ಹಾಸನದ ಪೇಟೆಗೆ ಸೇರಿದವಳು ಎಂಬ ಭಾವನೆ ಅವಳಲ್ಲಿ ಹೋಗಲಿಲ್ಲ. ಆದುದರಿಂದ ಹಟದಿಂದ ಎಂಬಂತೆ ಇದುವರೆಗೆ ಒಂದು ದಿನವೂ ರಾಗಿ0ು ಹಿಟ್ಟನ್ನು ಕೈಲಿ ಮುಟ್ಟಿರಲಿಲ್ಲ. ಈಗ ಹಾರಕದ ಅನ್ನ ಗಂಟಲಿನಲ್ಲಿ ಹೇಗೆ ಇಳಿದೀತು? ಒಂದು ದಿನ ಅಕ್ಕಮ್ಮ ಅಡಿಗೆ ಮಾಡಿಟ್ಟು ಹೋಗಿ ಹಿತ್ತಿಲಿನ ಕಡೆ ಪರಂಗಿ ಗಿಡ`ದ ಕೆಳಗೆ ಕುಳಿತುಕೊಂಡಳು. ಕಲ್ಲೇಶ ತರಕಾರಿ0ು ಗಿಡಗಳ ಕೆಳಗೆ ಕೈಪಿಕಾಸಿಯಿಂದ ಕುಕ್ಕುತ್ತಿದ್ದ. ರಾಗಿ, ಅಕ್ಕಿ, ಕಾಳುಗಳು ಸುಭಿಕ್ಷವಿರಲಿ ದುರ್ಭಿಕ್ಷವಿರಲಿ, ಹಿತ್ತಿಲು ತುಂಬ ತರಕಾರಿ ಬೆಳೆ0ುುವುದನ್ನು ಅವನು ಎಂದೂ ನಿಲ್ಲಿಸುತ್ತಿರಲಿಲ್ಲ. ಸುಮ್ಮನೆ ಕೂತಿರುವುದು ಅವನ ಸ್ವಭಾವದಲ್ಲಿ0ೇ ಇರಲಿಲ್ಲ. ತಾನು ಕುಕ್ಕುತ್ತಿದ್ದ ಮಣ್ಣನ್ನು ಮೇಲೆ ತೆಗೆದು, ಒಳಗೆ ಸಗಣಿಗೊಬ್ಬರ ಕೆಮ್ಮಣ್ಣು ತುಂಬಿ, ಮತ್ತೆ ಮೇಲೆ ಹಳೆ0ು ಮಣ್ಣನ್ನೇ ಹಾಕಿ ಪಾತಿ ಮಾಡಿ, ಎರಡು ಬಿಂದಿಗೆ ನೀರು ಸೇದಿ ಹು0ು್ದ ಮೇಲೆ, ಊಟವಾದ ನಂತರ 0ಾವ ಗಿಡಕ್ಕೆ ಏನು ಮಾಡಬೇಕೆಂಬುದನ್ನು ನೋಡಿ ನಿರ್ಧರಿಸಿ, ಹೇಳಿದ: 'ಅಕ್ಕಮ್ಮ, ಊಟಕ್ಕಿಕ್ಕು ಏಳು.'

ಕಲ್ಲೇಶ ಇನ್ನೊಂದು ಬಿಂದಿಗೆ ನೀರು ಸೇದಿ ಬಾವಿ0ು ದಡದ ಕಲ್ಲುಚಪ್ಪಡಿ0ು ಮೇಲೆ ನಿಂತು ಕೈಕಾಲು ತೊಳೆದುಕೊಳ್ಳುತ್ತಿದ್ದ. ಅಕ್ಕಮ್ಮ ಒಳಗೆ ಹೋಗಿ ನೋಡುತ್ತಾಳೆ: ಕಮಲು ಬೆಳ್ಳಿ0ು ತಟ್ಟೆ ಹಾಕಿಕೊಂಡು ಕೂತು ಊಟ ಮಾಡುತ್ತಿದ್ದಾಳೆ. ಗಂಡನಿಗೆ ಮಾಡಿದ ಅಕ್ಕಿ0ು ಅನ್ನವೆಲ್ಲ ಅವಳ ತಟ್ಟೆ0ುಲ್ಲಿದೆ. ಅನ್ನದ ಸಣ್ಣ ಚರಕು ಖಾಲಿ0ಾಗಿ ಬಿದ್ದಿದೆ. ತನಗೆ ಬೇಕಾದಷ್ಟು ತುಪ್ಪ ಸುರಿದು, ಬೆರಕೆ ಬೇಳೆಸಾರಿನ ತಿಳಿ ಬಗ್ಗಿಸಿಕೊಂಡು ಸುರಿಸುರಿ0ುುತ್ತಾ ಹೊಡೆ0ುುತ್ತಿದ್ದಾಳೆ. ಒಳಗೆ ಬಂದ ಅಕ್ಕಮ್ಮ ಮೂಕಳಾಗಿ ನಿಂತುಬಿಟ್ಟಳು. ಕಮಲು, ಅವಳು ಬಂದರೆ ತನಗೇನು ಎಂಬಂತೆ ತನ್ನ ಪಾಡಿಗೆ ತಾನು ಊಟ ಮುಂದುವರಿಸುತ್ತಿದ್ದಳು. ಅಷ್ಟರಲ್ಲಿ

ಕಲ್ಲೇಶನೂ ಒಳಗೆ ಬಂದ. ನೋಡಿದ ಕೂಡಲೇ ಅವನಿಗೆ ಎಲ್ಲವೂ ಅರ್ಥವಾಯಿತು. ನೇರವಾಗಿ ಅಡಿಗೆ0ು ಒಲೆ0ು ಹತ್ತಿರ ಹೋಗಿ, ಅಲ್ಲಿ0ುೇ ಇದ್ದ ಒಂದು ಹೊಳಕೆ ಸೌದೆ ತೆಗೆದುಕೊಂಡವನೇ ಅವಳ ಬೆನ್ನು, ಕೈ, ತೊಡೆಗಳ ಮೇಲೆ ಎತ್ತಿ ಎತ್ತಿ ಸದೆ0ುಲು ಶುರುಮಾಡಿದ.

'ತಿಂದ್ಕಳ್ಳಿ, ಹಾಗೆ ಹ್ವಡೀಬ್ಯಾಡ ಕಣೋ'–ಎಂದು ಬಿಡಿಸಿಕೊಳ್ಳಲು ಹೋದ ಅಕ್ಕಮ್ಮನನ್ನು ಅವನು ಎಡಗೈಯಿಂದ ನೂಕಿದ ರಭಸಕ್ಕೆ ಮುದುಕಿ ಗೋಡೆ0ು ಹತ್ತಿರ ಕುಕ್ಕರಿಸಿ ಬಿದ್ದುಬಿಟ್ಟಳು.

'ಹೊಡೀತೀ ಏನೋ, ನಿನ್ಮನೆ ಅನ್ನ ತಿಂದುದ್ದ್‌ಕ್ ಹ್ವಡೀತೀ0ಾ? ಹೆಂಡ್ತಿಗೆ ಒಂದಿಷ್ಟ್ ಅನ್ನ ತಂದ್ ಹಾಕುಕ್ಕೆ 0ೋಗ್ತಿ ಇಲ್ದೆ ಹಾರಕದ ಅನ್ನ ತಿನ್ನು ಅಂತೀ0ಾ? ಹ್ವಡಿ0ುಕ್ಕೆ ಮಾತ್ರ ಬತ್ತೀ0ುಲ್ಲಾ, ನಾಚಿಕೆ0ಾಗುಲ್ವೆ?'ಕಮಲು ಕೇಳಿದಳು.

ಕಲ್ಲೇಶನ ಕೋಪ ಇನ್ನೂ ಏರಿತು. ಮುಖ ಮೊರೆ ನೋಡದೆ ಹೊಡೆದುದಕ್ಕೆ ಸೌದೆ0ು ಹೊಳಕೆ ಮುರಿದುಹೋಯಿತು. ಅದನ್ನು ಹಿಡಿದಿದ್ದ ಅವನ ಅಂಗೈಗೂ ಸಿಗುರು ಚುಚ್ಚಿ ರಕ್ತ ಬರುತ್ತಿತ್ತು. ಕಮಲುವಿನ ಮೈಕೈ ಎಲ್ಲ ಊದಿ ರಕ್ತ ಒಸರುತ್ತಿತ್ತು. ಮುರಿದು ತುಂಡಾದ ಸೌದೆ0ುನ್ನು ಅಲ್ಲಿ0ುೇ ಬಿಸಾಕಿದ ಅವನು ಅಲ್ಲಿಂದ ಹೊರಗೆ ಬಂದು ಶರಟು ಹಾಕಿಕೊಂಡು ಊಟವನ್ನೂ ಮಾಡದೆ ಹೊರಟುಹೋದ. ಅವನು ಹೀಗೆ ಮನೆ ಬಿಟ್ಟು ಹೋಗುವುದು ಇದೇ ಮೊದಲಲ್ಲ. ಇಂಥಾ ಕಡೆಗೇ ಹೋಗುತ್ತಾನೆಂಬುದು ಅಕ್ಕಮ್ಮನಿಗೂ ಗೊತ್ತು, ಕಮಲುವಿಗೂ ಹೆಚ್ಚು ಕಡಿಮೆ ಗೊತ್ತು. ಮರುವನಹಳ್ಳಿ0ು ದೇವರ ಸೂಳೆ ದೇವಿ0ು ಮನೆಗೋ, ಅಥವಾ ನಾಗಲಾಪುರದಲ್ಲೇ ಪುಟ್ಟಿ0ು ಮನೆಗೋ, ಅದೇ ಊರಿನ ಪೋಲೀಸು ಕಾನಿಸ್ಟೆಬಲ್ ಮಮ್ಮಿಸಾಬಿ0ು ಮೂರನೆ0ು ಹೆಂಡತಿ0ು ಹತ್ತಿರಕ್ಕೋ, ಅಥವಾ ಮತ್ತೆ ಎಲ್ಲಿಗೋ ಹೋಗುತ್ತಾನೆ. ಅವನ ಊಟ ತಿಂಡಿ ಅಲ್ಲಿ0ುೇ ಆಗುತ್ತದೆ. ಎಲ್ಲಿಗೆ ಹೋದರೂ ಅರ್ಧ ರಾತ್ರಿ0ು ಒಳಗೆ ಮನೆಗೆ ಬರುತ್ತಾನೆ. ಇನ್ನೆಲ್ಲಾದರೂ ಹೋದರೂ ಒಂದು ದಿನಕ್ಕಿಂತ ಹೆಚ್ಚಾಗಿ ಅಲ್ಲಿ ಇರುವುದಿಲ್ಲ.

ಅವನು ಹೋದ ತಕ್ಷಣ ಕಮಲು ಅಕ್ಕಮ್ಮನ ಕಡೆಗೆ ತಿರುಗಿ, 'ಮುದುಕಿಮುಂಡೆ, ನಿನ್ನ ಮೊಮ್ಮಗನಿಗೆ ಹೇಳಿ ನನ್ನ ಹೀಗೆ ಹೊಡೆಸಿದಿ0ುಲ್ಲೇ, ನಿನ್ನ ಹೊಟ್ಟೆಗೆ ಅನ್ನ ಬೀಳದೆ ಹೋಗ. ನಿನ್ನ ಹೆಣ ಬೀದಿನಾಯಿ ತಿನ್ನ......' ಎಂದು ಆಶೀರ್ವದಿಸಿದಳು.

ಅಕ್ಕಮ್ಮ ಒಂದು ಮಾತೂ ಆಡಲಿಲ್ಲ. ಎಷ್ಟೇ ಚೆನ್ನಾಗಿ ಅಡಿಗೆ ಮಾಡಿಟ್ಟಿದ್ದರೂ ಮಧ್ಯಾಹ್ನದ ಹೊತ್ತಿಗೆ ಸರಿ0ಾಗಿ ಕೂತು ಊಟ ಮಾಡುತ್ತಿದ್ದೇವೆಂಬುದು ಈ ಮನೆ0ುಲ್ಲಿ ನಿಶ್ಚಿತವಿಲ್ಲ. ಕಲ್ಲೇಶ ವಿನಾಕಾರಣ ರೇಗಿದರೂ ಆಯಿತು, ಅವನ ಹೆಂಡತಿ ಹೀಗೆ ರೇಗಿಸಿದರೂ ಆಯಿತು. ಇಂಥದು ಏನಾದರೂ ಆಗುತ್ತೆ. ಆದರೆ ಈ ದಿನ ಆಗಿರುವುದು ಸ್ವಲ್ಪ ಹೆಚ್ಚಿನದೇ. ಅವಳು ಎದ್ದು ಹೊರಗೆ ಬಂದು ಮತ್ತೆ ಪರಂಗಿ ಗಿಡದ ನೆರಳಿನಲ್ಲಿ ಕುಳಿತಳು.

ಕಲ್ಲೇಶ ಹೆಂಡತಿ0ುನ್ನು ಹೊಡೆ0ುುವಾಗ ಕೈಕರಣದ ಜೊತೆಗೆ ಮಂತ್ರೋಚ್ಚಾರವನ್ನೂ ಮಾಡುತ್ತಿದ್ದ. ಬಡಿತದ ಸದ್ದು ಸುತ್ತಣ ನಾಲ್ಕೇ ಮನೆಗೆ ಕೇಳಿದರೆ ಬೈಗುಳದ ಅಬ್ಬರವು ಇಪ್ಪತ್ತು ಮನೆ0ು ತನಕ ಹೋಗುತ್ತಿತ್ತು. ಅವನು ಈ ದಿನ ಶರಟು ಹಾಕಿಕೊಂಡು ಹೋದ ಸ್ವಲ್ಪ ಹೊತ್ತಿನ ಮೇಲೆ ಶ್ಯಾನುಭೋಗ ಶ್ಯಾಮಣ್ಣನ ಸೊಸೆ ಬಂದಳು. ಹೆಚ್ಚು ಕಡಿಮೆ ಕಮಲುವಿನ ವ0ುಸ್ಸಾಗಿದ್ದ ಅವಳಿಗೂ ಕಮಲುವಿಗೂ ಕಳೆದ ಐದು ಆರು ವರ್ಷದಿಂದ ತುಂಬ ವಿಶ್ವಾಸ ಬೆಳೆದಿತ್ತು. ಇಬ್ಬರೂ ಕೂಡಿ0ುೇ ಕೆರೆಗೆ ಹೋಗುತ್ತಿದ್ದರು. ಇವಳು ಎಷ್ಟೋ ದಿನ ಅವರ ಮನೆಗೆ ಹೋಗಿ ಬರುತ್ತಿದ್ದಳು. ಈಗ ಎರಡು ವರ್ಷದ ಹಿಂದೆ ಶ್ಯಾಮಣ್ಣನ ಹೆಂಡತಿ ಸತ್ತುಹೋದಮೇಲೆ ಸೊಸೆ ಪುಟ್ಟ ಗೌರಿ0ುೇ ಮನೆಗೆ 0ುಜಮಾಂತಿ. ಅವಳ ಗಂಡನೂ ಅವಳು ಹೇಳಿದ ಹಾಗೆ ಕೇಳುತ್ತಿದ್ದ. ಹೀಗಾಗಿ ಅವಳು ಕಮಲುವಿನ ಸಲಹೆಗಾರ್ತಿ ಆಗಿದ್ದಳು. ಅವಳು ಬಂದು ಹೋಗಿ ಮಾಡುವುದನ್ನು ಕಲ್ಲೇಶ ಖಡಾಖಂಡಿತ ವಿರೋಧಿಸುತ್ತಿರಲಿಲ್ಲ. ಅವಳು ಮನೆಗೆ ಬರಕೂಡದೆಂದು ಅಕ್ಕಮ್ಮನೇನೋ ಹೇಳಿದ್ದಳು. ಆದರೆ ಹಟ ಮಾಡಿದಂತೆ ಅವಳು ಬಂದು ಕಮಲುವಿನ ಕೈಲಿ ಮಾತನಾಡಿ, ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು. ತನ್ನ ಮನೆ0ು ಸೊಸೆ0ು ಮನಸ್ಸು ಕೆಡಿಸಿ ಸದಾ ಜಗಳ ಕಾಯಿಸಿ ತಮಾಷೆ ನೋಡುವುದಕ್ಕೇ ಶ್ಯಾಮಣ್ಣ ಅವನ ಸೊಸೆ0ುನ್ನು ಕಳಿಸುತ್ತಿದ್ದಾನೆಂದು ಅಕ್ಕಮ್ಮನ ಊಹೆ. ಅವಳ ಊಹೆ ಸರಿ ಎಂದು ಕಲ್ಲೇಶನಿಗೂ ಗೊತ್ತು. ಆದರೂ ಅವಳು ಬಂದು ಹೋಗುವುದನ್ನು ವಿರೋಧಿಸುವುದನ್ನು ಇತ್ತೀಚೆಗೆ ಅವನು ಬಿಟ್ಟುಬಿಟ್ಟಿದ್ದ. 0ಾಕೆ ಎಂಬುದು ಅಕ್ಕಮ್ಮನಿಗೆ ತಿಳಿ0ುುತ್ತಿರಲಿಲ್ಲ. ಆ ಪುಟ್ಟ ಗೌರಿ0ು ಸಹವಾಸ ತಪ್ಪಿದರೆ ಇವಳು ಎಷ್ಟೋ ಮಟ್ಟಿಗೆ ಹದಕ್ಕೆ ಬರುತ್ತಾಳೆಂಬುದು ಅವಳ ನಂಬಿಕೆ0ಾಗಿತ್ತು.

ಆ ದಿನ ಕಲ್ಲೇಶ ಹೊರಟುಹೋದ ಮೇಲೆ ಪುಟ್ಟಗೌರಿ ಬಂದಳು. ಕಮಲು ತನ್ನ ಮಲಗುವ ಕೋಣೆಗೆ ಹೋಗಿ ಚಾಪೆ0ು ಮೇಲೆ ದುಪ್ಪಟಿ ಹೊದೆದು ಬಿದ್ದುಕೊಂಡಳು. ಏಟು ಬಿದ್ದ ಜಾಗಕ್ಕೆ, ತಾನೇ ಉಪ್ಪಿನ ಶಾಖ ಕೊಟ್ಟು ಸ್ನೇಹಿತೆಗೆ ಸಮಾಧಾನ ಹೇಳಿದ್ದೇ ಅಲ್ಲದೆ ಸಾ0ುಂಕಾಲ ತನ್ನ ಮನೆಯಿಂದ ಒಂದು ಚೆಟ್ಟಿ0ುಲ್ಲಿ ಅನ್ನ ಹುಳಿ ಕಲಸಿ ತಂದು ತಿನ್ನಿಸಿದಳು. ಈ ಮನೆಗೆ ಇದಕ್ಕಿಂತ ಇನ್ನು ಅಪಮಾನ ಬೇಕೆ?

‘ಕಲ್ಲೇಶ ಜೋ0ುಸ್ನ ಮನೇಲಿ ಹೆಂಡ್ತಿಗೆ ಹಾಕೂಕ್ಕೆ ಅನ್ನವಿಲ್ಲ. ನಾನು ಹೋಗಿ ಕೊಟ್ಟು ಬಂದೆ ನೋಡಿ’–ಎಂದು ನಾಲ್ಕು ಮನೆಗೆ ಚೆಟ್ಟಿ0ುನ್ನು ತೋರಿಸಿ0ೇ ಪುಟ್ಟಗೌರಿ ಮನೆಗೆ ಹೋದಳು.
ಕಲ್ಲೇಶ ಮರುದಿನ ಬೆಳಿಗ್ಗೆ ಮನೆಗೆ ಬಂದ. ಅಷ್ಟರಲ್ಲಿ ಹೆಂಡತಿ ಮೇಲೆ ಎದ್ದು ಹಿತ್ತಿಲ ಕಡೆಗೆ ಹೋಗಿ ಬಂದು ಮುಖ ತೊಳೆದು ಕಾಫಿ ಮಾಡಿಕೊಂಡು ಕುಡಿದು ಮತ್ತೆ ಕೋಪಗೃಹದಲ್ಲಿ ಮಲಗಿದ್ದಳು. ಅವಳು ಆಗ ನೋಡಿಕೊಂಡಳಂತೆ: ನೆನ್ನೆ ಅವನು ಹೊಡೆದ ಬಿರುಸಿಗೆ ಅವಳ ಕಿವಿ0ು ಎರಡು ಬೆಂಡೋಲೆಗಳೂ ಒಡೆದು ಪುಡಿ0ುಾಗಿ ಹೋಗಿದ್ದವು. ಚೂರುಗಳನ್ನು ಮುದುಕಿ ತಿಳಿ0ುದೆ ಗುಡಿಸಿಹಾಕಿದೆ0ೋ ಅಥವಾ ಮೊಮ್ಮಗಳ ಮನೆಗೆ ಸಾಗಿಸುವುದಕ್ಕೆ ಅಂತ ಕದ್ದು ಇಟ್ಟಿದೆ0ೋ. ‘ನಾನೇನಂಥಾ ಕಳ್ಳಮುಕ್ಕ ಅಲ್ಲ ಕಣೇ’–ಎಂದು ಅಕ್ಕಮ್ಮ ವಾದಿಸುತ್ತಿದ್ದಳು. ‘ನನ್ನ ಮದುವೇಲಿ ಇಟ್ಟಿದ್ದ ವಾಲೆ ಹೋ0ುತ್ತು. ಈಗ ಮಾಡಿಸಿ ಕೊಡದೆ ಇರಲಿ. ನಮ್ಮಪ್ಪನಿಗೆ ಕಾಗದ ಬರೀತೀನಿ’–ಕಮಲು ಸಾಧಿಸುತ್ತಿದ್ದಳು.
ಮನೆಗೆ ಬರುವ ವೇಳೆಗೆ ಕಲ್ಲೇಶನ ಕೋಪವೂ ಸ್ವಲ್ಪ ಇಳಿದಿತ್ತು. ಆ ದಿನ ಬೆಳಿಗ್ಗೆ ಅಕ್ಕಮ್ಮ ತಿಪ್ಪೆ0ುಲ್ಲಿ ಕಸ ಎಸೆದ ಜಾಗವನ್ನೆಲ್ಲ ಅವನೇ ತೆಗೆದು ಕೆದಕಿ ಹುಡುಕಿದ. ಹೆಂಡತಿ ಹೇಳುವ ಹಾಗೆ ಅಕ್ಕಮ್ಮ ಕದ್ದು ಮುಚ್ಚಿಟ್ಟಿದ್ದಾಳೆ ಎಂಬುದರಲ್ಲಿ ಅವನಿಗೆ ನಂಬಿಕೆ ಬರಲಿಲ್ಲ. ತಾನು ಬೆನ್ನಿಗೆ ಮಾತ್ರ ಹೊಡೆ0ುಬೇಕಾಗಿತ್ತು, ಕಿವಿಗೆ ತಗುಲುವಂತೆ ಸದೆ0ುಬಾರದಾಗಿತ್ತು ಎಂದು ಒಳಗೇ ಪಶ್ಚಾತ್ತಾಪ ಪಟ್ಟುಕೊಂಡ.
ಎರಡು ತಿಂಗಳು ಕಮಲು ಬರೀ ಕಿವಿ0ುಲ್ಲಿ ತಿರುಗಿದಳು. ಹೆಂಡತಿ ಹೀಗೆ ಬರೀ ಕಿವಿ0ುಲ್ಲಿರುವುದು ತನಗೇ ಮ0ುರ್ಾದಿಗೆ ಕಡಿಮೆ. ಕಲ್ಲೇಶ ಹೇಗೋ ಮಾಡಿ ಎಪ್ಪತ್ತು ರೂಪಾಯಿ ಕೂಡಿಸಿ ಬಿಳೀ ಕಲ್ಲಿನ ಒಂದು ಜೊತೆ ಬೆಂಡೋಲೆ ಮಾಡಿಸಿ ತಂದುಕೊಟ್ಟ.
– 2 –
ಸುಮಾರು ಒಂದು ವರ್ಷ ಕಳೆದಿತ್ತು. ಮಳೆ ಇಲ್ಲದೆ ಊರಿನಲ್ಲಿ ಕುಡಿ0ುುವ ನೀರಿಗೆ ತೊಂದರೆ0ುಾಗಿತ್ತು. 0ುಾವಾಗಲೂ ಊರಿನ ಜನ ಅರ್ಧ ಮೈಲಿ ದೂರದ ಕೆರೆಯಿಂದ ಸಿಹಿನೀರು ತರುತ್ತಿದ್ದರು. ಕೆರೆ0ುೆಲ್ಲ ಒಣಗಿ ಹೋದಮೇಲೆ ನಡುಗೆರೆ0ುಲ್ಲಿ ನಾಲ್ಕು ಸಣ್ಣ ಸಣ್ಣ ಬಾವಿ ತೋಡಿದ್ದರು. ಮೊದಲೇ ದೂರ. ಈಗ ಊರಿಗೆ ಇನ್ನೂ ದೂರ ಹೋಗಬೇಕಾಗಿತ್ತು. ಒಂದು ಮಧ್ಯಾಹ್ನ ಕಮಲು ಕೆರೆಗೆ ಹೋಗಿದ್ದಳು.
ಏಕಾದಶಿ0ುಾಗಿದ್ದುದರಿಂದ ಅಕ್ಕಮ್ಮ ಊರ ಹೊರಗಿನ ಕೇಶವ ದೇವರ ಗುಡಿಗೆ ಹೋಗಿದ್ದಳು. ಪುಟ್ಟಗೌರಿ ತಲೆ0ು ಮೇಲೊಂದು, ಕೈ0ುಲ್ಲೊಂದು ಬಿಂದಿಗೆ0ೊಡನೆ ಕಲ್ಲೇಶನ ಮನೆಗೆ ಬಂದಳು. ಕಮಲಮ್ಮಾ’–ಎಂದು ಕೂಗಿಕೊಂಡು ಒಳಗಿನ ತನಕ ಬಂದರೂ 0ುಾರೂ ಇರಲಿಲ್ಲ. ಹಿತ್ತಿಲು ತನಕ ಹೋಗಿ ನೋಡಿದಳು. 0ುಾರೂ ಕಾಣಲಿಲ್ಲ. ಹಿಂತಿರುಗಿ ಹೋಗಲು ಒಳಗೆ ಬಂದಾಗ ಬೀದಿ0ು ಬಾಗಿಲನ್ನು ಹಾಕಿದ್ದಂತೆ ಕಂಡಿತು. ಇದೇನೆಂದು ತಿರುಗಿ ನೋಡಿದರೆ ಹಿತ್ತಿಲ ಬಾಗಿಲನ್ನೂ ಹಾಕಿದ್ದಂತೆ ಕಂಡಿತು. ಒಳಗೆ ಕತ್ತಲೆ0ುಲ್ಲಿ ಒಬ್ಬಳೇ ಉಳಿದ ಅವಳು ‘ಅ0ು್ಯ0ೊ್ಯ’ಎಂದು ಪೂರ್ತಿ ಕೂಗಿಕೊಳ್ಳುವ ಮೊದಲೇ 0ುಾರೋ ಬಾ0ುನ್ನು ಹಿಡಿದು ಮುಚ್ಚಿದಂತೆ ಆಯಿತು.
ಮನೆಗೆ ಹೋಗುವಾಗ ಅವಳ ಎದೆ ಹೊಡೆದುಕೊಳ್ಳುತ್ತಿತ್ತು. ಕಲ್ಲೇಶಜೋಯಿಸ ಅಂಥವನೆಂದು ಎಷ್ಟೋ ಜನ ಆಡಿಕೊಳ್ಳುತ್ತಿದ್ದರು. ಊರ ಹೊರಗೆ ಅವನು ಏನಾದರೂ ಮಾಡಿಕೊಳ್ಳಲಿ. ಬ್ರಾಹ್ಮಣಿ0ುಾದ ತನ್ನನ್ನು, ಅದೂ ಅವನ ಹೆಂಡತಿ0ುನ್ನು ನೀರಿಗೆ ಕರೆ0ುಲು ಹೋದಾಗ ಹೀಗೆ ಮನೆ0ುಲ್ಲಿ ಸೇರಿಕೊಂಡು, ಗಟ್ಟಿ0ುಾಗಿ ಕಿರಿಚಿಕೊಳ್ಳುವ ಮೊದಲೇ ಬಾಯಿ ಮುಚ್ಚಿಬಿಡಬಹುದೇ!
ಅವಳ ಕೈ ಕಾಲು ನಡುಗುತ್ತಿತ್ತು. ಅಸಹ್ಯದಿಂದ ಮೈ ಎಲ್ಲ ಉರಿ0ುುತ್ತಿತ್ತು.
ಅವಳು ಇನ್ನೂ ಮನೆ ಸೇರಿಲ್ಲ. ಕಲ್ಲೇಶನ ಮನೆ0ು ಸುತ್ತಲಿನ ನಾಲ್ಕೈದು ಜನರು ಬಂದು ಕೇಳಿದರು:
‘ನೀವು ಹಾಗೆ ಕಿರುಚಿಕೊಂಡಲ್ಲಾ, ಏನಾ0ುತ್ತು?’
ಅವಳ ಮಾವ ಶ್ಯಾಮಣ್ಣ, ಗಂಡ ನಂಜುಂಡ0ು್ಯ ಮನೆ0ುಲ್ಲೇ ಇದ್ದರು.
‘ಏನೂ ಇಲ್ಲ. ಅವರ ಮನೆ ಬೆಕ್ಕು ಮೇಲೆ ಬಿದ್ದುಬಿಡ್ತು.’
‘ಇದೇನು ಅಂತ ನಾವು ಓಡಿಬಂದ್ವು. ಬೀದಿ ಬಾಗಿಲು ಒಳಗಡೆಯಿಂದ ಅಗುಳಿ ಹಾಕಿತ್ತು.’
ಮುಂದೆ ಏನು ಹೇಳುವುದಕ್ಕೂ ತಿಳಿ0ುದೆ ಅವಳು–‘ಹೂಂ. ಕಮಲಮ್ಮ ಹಿತ್ತಿಲ ಕಡೆ ಇದ್ದಳು’ ಎಂದಳು. ಜನಗಳು ಹೊರಟು ಹೋದರು. ಅದೇ ಸಮ0ುದಲ್ಲಿ ಅವರ ಮನೆ0ು ಮುಂದೆ0ೇ ಕಲ್ಲೇಶನ ಹೆಂಡತಿ ಕಮಲಮ್ಮ ನೀರು ಹೊತ್ತುಕೊಂಡು ಕೆರೆ0ು ಕಡೆಯಿಂದ ಮನೆಗೆ ಹೋಗುತ್ತಿದ್ದಳು. ಅನುಮಾನ ಬಂದ ಶ್ಯಾಮಣ್ಣ ಒಳಗೆ ಹೋಗಿ ಕೇಳಿದರು: ‘ನಿಜ ಹೇಳು. 0ುಾವ್ನಾದ್ರೂ ಬೇಕೂಫ್‌ಗಿರಿ ಮಾಡಿದ್ರೆ ನೇಣು ಹಾಕಿಸ್‌ಬಿಡ್ತೀನಿ. ಹೇಳು., ಹೆದರ್ಕ್ಯಾಡ.’
‘‘ಕಮಲಮ್ಮ ಇದಾಳಾ ಅಂತ ನಾನು ಹಿತ್ಲ ತಂಕ ಹೋದೆ. 0ುಾರೂ ಇರ್ಲಿಲ್ಲ. ಹಿಂತಿರುಗಿ ಬತ್ತಿದ್ದೆ. ಕಲ್ಲೇಶ ಜೋಯಿಸ್ರು, ‘ನಮ್ಮನೆಗೆ 0ುಾಕ್ ಬಂದೆ ನೀನು?–ಅಂತ ಕೇಳಿಬಿಟ್ರು. ಹೆದರಿಕೆ0ುಾ0ುತ್ತು. ಕಿರುಚ್ಕಂಡು ಹಿತ್ಲ್ ಕಡೆಯಿಂದ ಓಡಿ, ದನ ಬರೂ ಬಾಗಿಲಿನಿಂದ ಬಂದ್‌ಬಿಟ್ಟೆ. ಅವ್ರು ನನ್ನ ಹೀಗೆ ನೀನು ತಾನು ಅಂತ

ಮಾತಾಡುಸ್ತೌದಾ?''
ಸೊಸೆಯ ಮಾತನ್ನು ಪೂರ್ತಿಯಾಗಿ ನಂಬುವುದೋ ಬೇಡವೋ ಎಂಬುದಕ್ಕಿಂತ, ಅದನ್ನು ಶಂಕಿಸಿ ಗದ್ದಲ ಮಾಡಿದರೆ ತಮ್ಮ ಸಂಸಾರದ ಮಾನವೇ ಹೋಗುತ್ತದೆಂದು ಅವರ ವಿವೇಕ ಹೇಳಿತು. ಅವರ ಮಗ ನಂಜುಂಡಯ್ಯನಿಗೆ ಮಾತ್ರ ಏನೂ ಅರ್ಥವಾಗಲಿಲ್ಲ. 'ಬೋಳೀಮಗ ಹಾಗಂದ್ನೇ? ಇನ್ನೊಂದ್ ದಿನ ಅವ್ನ ಮನೆಗೆ ಹೋಗ್‌ಬ್ಯಾಡ'–ಎಂದು ಹೆಂಡತಿಗೆ ಕಟ್ಟಾಜ್ಞೆ ಮಾಡಿದ.
ಶ್ಯಾಮಣ್ಣ ಕಲ್ಲೇಶನ ಮನೆಗೆ ಬಂದಾಗ ಕಮಲಮ್ಮ ಇದ್ದಳು. ಅಕ್ಕಮ್ಮ ಇನ್ನೂ ಬಂದಿರಲಿಲ್ಲ. ಕಲ್ಲೇಶ ಅಷ್ಟರಲ್ಲಿ ಮನೆಯಲ್ಲಿರದೆ ಎಲ್ಲಿಯೋ ಹೋಗಿದ್ದ. ಶ್ಯಾಮಣ್ಣನವರು ಕಮಲಮ್ಮನಿಗೆ, 'ನನ್ನ ಸೊಸೆ ನಿನ್ನ ನೀರಿಗೆ ಕರೆಯಕ್ಕೆ ಅಂತ ಬಂದ್ರೆ ನಿನ್ನ ಗಂಡ ಮರ್ಯಾದೆ ಬಿಟ್ಟು ಮಾತಾಡಿದ್ನಂತೆ. ಅವನ ಮೇಲೆ ಕೇಸು ಹಾಕಿ ಬೇಕಾದ್ರೆ ಸಜ ಕೊಡುಸ್ತಿದ್ದೆ. ಏನೋ ಹೋಗ್ಲಿ ಅಂತ ಸುಮ್ನಾಗಿದೀನಿ. ಇನ್ಮೇಲೆ ನೀನು ನಮ್ಮನಿಗೆ ಬರಬ್ಯಾಡ. ನನ್ನ ಸ್ವಸೆ ನಿಮ್ಮನಿಗ್ ಬರೂದು ಬ್ಯಾಡ' ಎಂದು ಕಟ್ಟುನಿಟ್ಟಾಗಿ ಹೇಳಿ ಹೊರಟುಹೋದರು.
ಕಲ್ಲೇಶ ಎರಡು ದಿನ ಊರಿಗೆ ಬರಲಿಲ್ಲ. ಮೂರನೆಯ ದಿನ ರಾತ್ರಿ ಹತ್ತು ಗಂಟೆಗೆ ಮನೆಗೆ ಬಂದ. ಅಕ್ಕಮ್ಮ ಎದ್ದು ಅನ್ನ ಹುಣಿಸೇನೀರು ಮಾಡಿ ಇಕ್ಕಿದಳು. ಶ್ಯಾಮಣ್ಣ ತನ್ನ ಮೇಲೆ ಏನಾದರೂ ಗಲಾಟೆ ಮಾಡಿದನೇ ಎಂದು ಕೇಳಿದುದಕ್ಕೆ ಅವಳು ಸೊಸೆಗೆ ಕೇಳದಂತೆ ಪಿಸುಮಾತಿನಲ್ಲಿ, 'ಮೊನ್ನೆ ದಿನ ಅವ್ನು ಬಂದಿದ್ದಾಗ ನನ್ನ ಮನೆಗೆ ಯಾಕ್ ಬಂದೆ ನೀನು ಅಂತ ಅಂದು ಕಳಿಸಿದೆಯಂತೆ. ನನ್ನ ಸ್ವಸೇನ ಅವ್ನು ಹೀಗನ್ಸೌದೇ, ಇನ್ನುಮ್ಯಾಲೆ ಅವ್ಳು ಅವ್ನ ಮನೆಗೆ ಹೋಗೂದೂ ಬ್ಯಾಡ, ನಮ್ಮನೆಗೆ ಅವ್ನ ಹೆಂಡ್ತಿ ಬರೂದೂ ಬ್ಯಾಡ ಅಂತ ಅಂದುಹೋದನಂತೆ. ಹೋಗ್ಲಿ, ಶನಿ ಕಳ್ದಹಾಗಾಯ್ತು. ಇದೇ ಮಾತು ನೀನು ಈಗ ನಾಲ್ಕು ವರ್ಷಕ್ಕೆ ಮೊದಲೇ ಅಂದು ಕಳ್ಸಿದ್ರೆ. ಅವ್ಳು ಇಲ್ಲಿಗ್ ಬಂದ್ ಬಂದ್ ಈ ಕಪಿಗೆ ಹೆಂಡ ಕುಡ್ಸೂದೂ ತಪ್ತಿತ್ತು. ಇದು ತುಸುವಾದ್ರೂ ನೆಟ್ಟಗಾಗ್ತಿತ್ತು.'
ಶ್ಯಾಮಣ್ಣ ಏನೂ ಗದ್ದಲ ಮಾಡಿಲ್ಲವೆಂದು ಖಚಿತವಾಗಿ ಕಲ್ಲೇಶನ ಮನಸ್ಸಿಗೆ ಸಮಾಧಾನವಾಯಿತು. ಅವನು ಎರಡೊಂದು ಕೆಲಸ ಸಾಧಿಸಿದಂತೆ ಆಯಿತು. ಅದೂ ಅಕ್ಕಮ್ಮನಿಗೂ ಗೊತ್ತಿಲ್ಲ; ಅವನ ಹೆಂಡತಿಗೂ ತಿಳಿದಿರಲಿಕ್ಕಿಲ್ಲ.
ಪುಟ್ಟಗೌರಿ ಕಮಲುವಿನ ಸಂಪರ್ಕ ಸಂಪೂರ್ಣ ನಿಂತುಹೋಯಿತು. ಒಂದು ದಿನ ಅವರಿಬ್ಬರೂ ಕೆರೆಯ ಬಾವಿಯಲ್ಲಿ ಒಬ್ಬರನ್ನೊಬ್ಬರು ನೋಡಿದರು. ಕಮಲು ಮಾತನಾಡಿಸಿದರೂ ಅವಳು ಈ ಕಡೆ ಮುಖ ತಿರುಗಿಸಿ ನೋಡದೆ ಹೊರಟುಹೋಗಿಬಿಟ್ಟಳು. ಇನ್ನು ತನಗೂ ಅವಳಿಗೂ ಮಾತು ಎಂದೆಂದಿಗೂ ಬಿಟ್ಟು ಹೋದಂತೆಯೇ ಎಂಬುದು ಎಂಟು ದಿನದಲ್ಲಿ ಇವಳಿಗೆ ಖಚಿತವಾಯಿತು. ಒಬ್ಬ ಆಪ್ತ ಸ್ನೇಹಿತೆ ಕಳೆದುಹೋದ ದುಃಖದ ಜೊತೆಗೆ ಅವಳಿಗೆ ಆತಂಕವಾಗುವ ಇನ್ನೊಂದು ಕಾರಣವಿತ್ತು. ಆದರೆ ಅದನ್ನು ಯಾರ ಕೈಲೂ ಹೇಳಲಾರಳು. ಹೇಳದೆ ಇರಲೂ ಆರಳು.
ಎಂಟು ದಿನ ತನ್ನಲ್ಲಿಯೇ ತೊಳಲಾಡಿ, ಒಂದು ದಿನ ಬೆಳಿಗ್ಗೆ ಎದ್ದವಳೇ ಶ್ಯಾಮಣ್ಣನ ಮನೆಗೆ ಹೋದಳು. ಆ ಹೊತ್ತಿನಲ್ಲಿ ಶ್ಯಾಮಣ್ಣನಾಗಲಿ ನಂಜುಂಡಯ್ಯನಾಗಲಿ ಮನೆಯಲ್ಲಿರುವುದಿಲ್ಲವೆಂಬುದು ಅವಳಿಗೆ ಗೊತ್ತು. ನೇರವಾಗಿ ಒಳಗೆ ಹೋಗಿ ಪುಟ್ಟಗೌರಿಯ ಮುಂದೆ ನಿಂತು ಎಂದಳು: 'ಅವರೇನೋ ಒಂದು ಮಾತು ಅಂದಿರ್ಬೌದು. ಹಾಗಂತ ನನ್ನ ನಿನ್ನ ಸ್ನೇಹ ಹೋಗ್ಬೇಕೇನಮ್ಮ?'
ಏನು ಹೇಳಬೇಕೆಂಬುದು ಪುಟ್ಟಗೌರಿಗೆ ತಕ್ಷಣ ತಿಳಿಯಲಿಲ್ಲ. ಆದರೂ ಹೇಳಿದಳು: 'ಒಂದು ಮಾತಂತೆ! ಸಾಕು ಸಾಕು. ನಿನ್ನ ಸ್ನೇಹವೂ ಬ್ಯಾಡ; ನಿಮ್ಮ ಮನೆಗೆ ಬರೂದೂ ಬ್ಯಾಡ. ಈಗ ನೀನು ಇಲ್ಲಿಗೆ ಬಂದದ್ದು ನಮ್ಮ ಮಾವ್‌ನೋರಿಗೆ ತಿಳಿದ್ರೆ ನಿನ್ನ ಕಾಲು ಕತ್ತರಿಸಿ ಹಾಕಿಬಿಟ್ಟಾರು. ನಡಿ, ನಡಿ ಸುಮ್ನೆ.'
'ಹೋಗ್ತೀನಿ, ನನ್ನ ಬೆಂಡೋಲೇನೂ ದುಡ್ನೂ ಕೊಡು.'
'ಯಂಥಾ ಬೆಂಡೋಲೆ, ಯಂಥಾ ದುಡ್ಡು?'–ಏನೂ ಅರಿಯದವಳಂತೆ ಅವಳು ಕೇಳಿದಳು.
'ಇದೇನಮ್ಮ ಹೀಗಂತೀಯಾ? ಈಗ ಒಂದು ವರ್ಷದಲ್ಲಿ ನಮ್ಮ ಯಜಮಾನ್ರು ನನ್ನ ಹ್ವಡದ ದಿನ ನಿಂಗೆ ಬಿಚ್ಚಿ ಕೊಟ್ಟಿರ್ಲಿಲ್ವೆ ನಾನು? ನೀರಿಗೆ ಹೋಗೂವಾಗ ಬಿಂದಿಗೇಲಿ ತುಂಬ್ಕಂಡು ಬಂದು ನಾನು ನಿಂಗೆ ಕೊಟ್ಟಿದ್ದ ಅಕ್ಕಿ, ಕಾಫಿ ಬೀಜ, ಇದ್ರುದ್ದೆಲ್ಲ ಒಟ್ಟು ಹದಿನೈದು ರೂಪಾಯಿ ಕೊಡ್‌ಬ್ಯಾಡ್ವೆ?'
'ಕಮಲಮ್ಮ, ಇಲ್ಲದ್ದ ಆಡಿದ್ರೆ ನಿನ್ನ ನಾಲಿಗೇಲಿ ಹುಳು ಸುರಿಯುತ್ತೆ. ನಡಿ, ನಡಿ. ನಮ್ಮನೇಲಿ ಒಂದು ನಿಮಿಷವೂ ನಿಂತುಕೋಬ್ಯಾಡ. ನಮ್ಮಾವ್ನೋರು ಬತ್ತಾರೆ ನೋಡೀಗ.'
ಕೋಪದಿಂದ ಕಮಲುವಿನ ಮೈ ಉರಿಯಲು ಮೊದಲಾಗಿ ತುಟಿ ನಡುಗುತ್ತಿದ್ದವು. ಮತ್ತೆ ಮಾತನಾಡಲು ಏನೂ ತಿಳಿಯಲಿಲ್ಲ. ಹಿಂದಿನ ಕಾಲದ ಗಟ್ಟಿ ಬೆಂಡೋಲೆ. ಏನಿಲ್ಲವೆಂದರೂ ಎಂಬತ್ತು ರೂಪಾಯಿಯಾಗುತ್ತೆ. ಉಳಿದದ್ದು ಹದಿನೈದು ರೂಪಾಯಿ. ಈ ಮುಂಡೆ ಎರಡನ್ನೂ ದಕ್ಕಿ ಹಾಕೂಕ್ಕೆ ಮಾಡಿದಾಳೆ. ದುಡ್ಡು ದಕ್ಕಿಹಾಕುಕ್ಕೇ, ನಿನ್ನ ಗಂಡ ನನ್ನ ಹಾಗಂದ ಅಂತ ಸುಳ್ಳು ಸುಳ್ಳೇ ಹುಟ್ಟಿಸ್ಕಂಡು ನನ್ನ ಕೈಲಿ ಮಾತು ಬಿಟ್ಟಿದಾಳೆ. ಈ ಮುಂಡೆಗೆ ನನ್ನ ದುಡ್ಡು ಬಿಟ್ಟುಬಿಟ್ರೆ ನಾನು ಹಾಸನದ ಹೆಣ್ಣೇ ಅಲ್ಲ ಎಂದು ನಿಶ್ಚಯ

ಮಾಡುತ್ತಿರುವಾಗಲೇ ಕಣ್ಣನ್ನು ಸುತ್ತ ಹೊರಳಿಸಿದಳು. ಹಿಂಭಾಗದ ನೀರು ಮನೆಯಲ್ಲಿದ್ದ ದೊಡ್ಡ ಹಂಡೆ ಕಣ್ಣಿಗೆ ಬಿತ್ತು. ತಾನು ಏನು ಮಾಡುತ್ತಿದ್ದೇನೆ, ಅದರ ಪರಿಣಾಮ ಮುಂದೆ ಏನಾಗುತ್ತೆ ಎಂಬ ಪರಿಜ್ಞಾನವೇ ಇರಲಿಲ್ಲ. ನೀರು ಮನೆಗೆ ಹೋಗಿ ಹಂಡೆಯನ್ನು ನೂಕಿ ಉರುಳಿಸಿ ನೀರನ್ನು ಚೆಲ್ಲಿದವಳೇ, ಅದನ್ನು ಎತ್ತಿ ಎರಡು ಕೈಲೂ ಹಿಡಿದುಕೊಂಡು–'ನನ್ನ ದುಡ್ಡು ಕೊಟ್ಟು ನಿನ್ನ ಹಂಡೆ ಬಿಡಿಸ್ಕಂಡು ಹೋಗು' ಎಂದು ಹೊರಟುಬಿಟ್ಟಳು. ಪುಟ್ಟಗೌರಿ ಬಿಟ್ಟಾಳೆಯೇ?: 'ಅಯ್ಯೊ ಕಳ್ಳಮುಂಡೆ, ಮನೆ ನುಗ್ಗಿ ಹಂಡೆ ಹೊತ್ಕಂಡು ಹೋಗ್ತೀಯಾ?'–ಎಂದು ಮುಂದೆ ನುಗ್ಗಿ ಅವಳನ್ನು ತಡೆದಳು. ಆದರೆ ಕಮಲು ಅವಳಿಗಿಂತ ಶಕ್ತಿವಂತೆಯಾದ ಹೆಂಗಸು. ಅವಳನ್ನು ಕೆಳಕ್ಕೆ ನೂಕಿ ಮನೆಯಿಂದ ಹೊರಗೆ ಬಂದು, ತಳದ ಮಸಿಯನ್ನೂ ನೋಡದೆ ಹಂಡೆಯನ್ನು ತಲೆಯ ಮೇಲೆ ಇಟ್ಟುಕೊಂಡು ತನ್ನ ಮನೆಗೆ ದುಡು ದುಡು ಓಡಿ ಬಂದುಬಿಟ್ಟಳು.

ಕಲ್ಲೇಶನ ಹೆಂಡತಿ ದೊಡ್ಡ ಹಂಡೆ ಹೊತ್ತು ಹೋಗುವುದನ್ನು ಬೀದಿಯ ನಾಲ್ಕಾರು ಜನರು ನೋಡಿದರು. ಅಷ್ಟರಲ್ಲಿ ಯಾರಿಗೂ ಯಾವ ಮಹತ್ವವೂ ಕಾಣಿಸಲಿಲ್ಲ. ಅವಳು ಮನೆಗೆ ಬಂದಾಗ ಗಂಡ ಇರಲಿಲ್ಲ. ಹಂಡೆಯನ್ನು ಅಡಿಗೆಯ ಮನೆಯ ಒಳಭಾಗದಲ್ಲಿ ಇಟ್ಟು ಮನೆಯ ಮುಂಬಾಗಿಲನ್ನು ಮುಚ್ಚಿಕೊಂಡಳು. ಅಕ್ಕಮ್ಮನಿಗೆ ಏನೂ ಅರ್ಥವಾಗಲಿಲ್ಲ. 'ಏನೇ ಇದು? ಯಾರ ಮನೇದೇ ಹಂಡೆ?'–ಎಂದು ಕೇಳಿದರೆ ಅವಳು ಯಾವ ಉತ್ತರವನ್ನೂ ಹೇಳಲಿಲ್ಲ. 'ಕಳ್ಳಲೌಡಿ ತಂದು, ನನ್ನ ದುಡ್ಡು ದಕ್ಕಿಹಾಕುಕ್ಕೆ ಅಂತ ಆಟ ತೆಗೆದಿದ್ಲು. ನಮ್ಮನೆಯೋರ್ದು ಸಿಟ್ಟಿನ ಸ್ವಭಾವ ಅಂತ ಗೊತ್ತಿಲ್ವೆ? ಯಾಕ್ ಬಂದ್ರಿ ಅಂತ ಕೇಳಿರ್ತ್ಯಾರು. ಅದೇ ನೆವವಾಯ್ತೀನೋ ನುಂಗಿಹಾಕುಕ್ಕೆ? ಹಂಡೆ ಕೇಳುಕ್ಕೆ ನಮ್ಮನೆ ಬಾಗ್ಲಿಗೆ ಬರ್ಲಿ. ಮೋಸಗಾರ ಮುಂಡೆಗೆ ತೋರುಸ್ತೀನಿ ನಾನೆಂಥೋಳು ಅಂತ'–ಎಂದು ಅವಳು ಆಲೋಚಿಸುತ್ತಿದ್ದುದು ಅಕ್ಕಮ್ಮನಿಗೆ ಪಿಟಿಪಿಟಿ ಕೇಳುತ್ತಿತ್ತು; ಆದರೆ ಅರ್ಥವಾಗಲಿಲ್ಲ.

ಅರ್ಧ ಗಳಿಗೆಯೂ ಕಳೆದಿಲ್ಲ. ಬೀದಿಯಲ್ಲಿ ಗದ್ದಲವಾಯಿತು. ಶ್ಯಾಮಣ್ಣ, 'ನಮ್ಮನೆ ಹಂಡೆ ಕದ್ಕಂಡ್ ಬಂದೆ ಏನೇ ಕಳ್ಳೀ?' ಎಂದು ಕೂಗುತ್ತಾ ಬರುತ್ತಿದ್ದುದು ಕೇಳಿಸಿತು. ಇನ್ನೂ ಇಪ್ಪತ್ತು ಮೂವತ್ತು ಜನ ಗುಂಪು ಕಟ್ಟಿಕೊಂಡು ಬಂದ ಶಬ್ದವೂ ಆಯಿತು. ಶ್ಯಾಮಣ್ಣನೇ ಬೀದಿಯ ಬಾಗಿಲು ತಟ್ಟಿದ. 'ಅವ್ರು ಮನೆಗೆ ಬರೂತಂಕ ಬಾಗಿಲು ತೆಗೀಬ್ಯಾಡಿ'– ಎಂದು ಹೇಳುತ್ತಿದ್ದರೂ, ಹಿಂದು ಮುಂದು ಗೊತ್ತಿಲ್ಲದ ಅಕ್ಕಮ್ಮ ಹೋಗಿ ಬಾಗಿಲು ತೆಗೆದಳು. ಮನೆಯ ಮುಂದೆಲ್ಲ ಜನ ಜಾತ್ರೆಗೆ ನೆರೆದಂತೆ ತುಂಬಿದ್ದಾರೆ. ಶ್ಯಾಮಣ್ಣ–

'ಅಕ್ಕಮ್ಮ, ನಿಮ್ಮ ಸ್ವಸೆ ನಮ್ಮನೆ ಹಂಡೆ ಹೊತ್ಕೊಂಡ್ ಬಂದಿದಾಳೆ ಕೊಟ್ಬಿಡಿ' ಎಂದ.

'ನನ್ ದುಡ್ ಕೊಡೂತಂಕ ನಾನ್ ಕೊಡುಲ್ಲ'–ಎಂದು ಕಮಲು ಒಳಗಿನಿಂದ ಕೂಗಿದಳು.

ಏನೊಂದೂ ಅರ್ಥವಾಗದ ಅಕ್ಕಮ್ಮ ಎಂದಳು: 'ನಮ್ಮ ಕಲ್ಲೇಶ ಊರ ಮುಂದಕ್ಕೆ ನೀರ ಕಡೆ ಹೋಗಿದಾನೆ. ಯಾರಾರೂ ಹೋಗಿ ಕರ್ಕಂಡು ಬನ್ನಿ. ಯಜಮಾನ ಬರೂತಂಕ ನಮಗೇನೂ ಗೊತ್ತಿಲ್ಲ.'

ಇಬ್ಬರು ಓಡಿದರು. ಸ್ವಲ್ಪ ಹೊತ್ತಿನಲ್ಲಿ ಬಂದ ಕಲ್ಲೇಶನಿಗೆ, ಹೆಂಡತಿ ಮಾಡಿದ್ದ ಕೆಲಸವನ್ನು ಅವನನ್ನು ಕರೆತಂದವರೇ ಹೇಳಿದ್ದರು. ಅವಳ ಕೆಲಸದ ಏನು ಎಂತುಗಳು ತಿಳಿಯದೆ ಅವನು ಸುಮ್ಮನೆ ಬಂದು ಮನೆಯ ಒಳಗೆ ಹೋಗಿ ಹೆಂಡತಿಯನ್ನು ಕೇಳಿದ: 'ಏನೇ ಇದು?'

'ಆ ಕಳ್ಳ ಮುಂಡೆ ನನ್ನ ದುಡ್ಡು ನುಂಗಿಹಾಕ್ಕಂಡಿದಾಳೆ.'

'ಅದ್ಯಾವ ದುಡ್ಡು, ಅದೆಲ್ಲಿಂದ ಬಂತು ಕೇಳು'–ಶ್ಯಾಮಣ್ಣ ಹೇಳಿದ.

'ನಂದೊಂಜತೆ ಬೆಂಡೋಲೆ, ಮೇಲೆ ಹದಿನೈದು ರೂಪಾಯಿ ಕೊಡಬೇಕು.'

'ಯಂಥ ಬೆಂಡೋಲೆ? ಯಾರಪ್ಪನ ಮನೇದು ಇದು?'

'ನನ್ನ ಬೆಂಡೋಲೆಯೇ. ಮುರಿದ್ಹೋಗಿತ್ತು. ಸರಿಮಾಡಿಸಿಕೊಡ್ತೀನಿ ಅಂತ ಹೇಳಿ ನಿಮ್ಮ ಸ್ವಸೆ ಇಸ್ಕಂಡಿದ್ಲು.'

'ನಿನ್ನ ಬೆಂಡೋಲೆ ಮುರಿದಿದ್ರೆ ನಿನ್ನ ಗಂಡನ ಕೈಲಿ ಕೊಟ್ಟು ಸರಿ ಮಾಡಿಸ್ಕಾಬೇಕಾಗಿತ್ತು. ಅವಳ ಕೈಲಿ ಯಾಕೆ ಕೊಟ್ಟೆ? ಹದಿನೈದು ರೂಪಾಯಿ ಯಾವ್ದು?'

'ನನ್ನ ಹತ್ರ ಅವ್ಳು ಅಕ್ಕಿ ಕಾಪಿ ಬೀಜ ಇಸ್ಕಂಡಿದ್ಲು.'

'ಕೇಳಿದ್ರೇನ್ರಯ್ಯ. ಯಾರಾದ್ರೂ ನಂಬ್ತಾರಾ ಈ ಮಾತ?'–ಎಂದು ಶ್ಯಾಮಣ್ಣ ಬೀದಿಯ ತುಂಬ ಸೇರಿದ್ದವರಿಗೆ ಒಪ್ಪಿಸಿದ.

'ಯಾರೇನು ಒಪ್ಪದು? ನನ್ನ ಗಂಟು ನುಂಗಿಹಾಕ್ಬೇಕು ಅಂತ ಸುಳ್ ಸುಳ್ಳೇ ನಿನ್ನ ಗಂಡ ಹಾಗಂದ ಹೀಗಂದ ಅಂತ ನ್ಯವ ಮಾಡ್ಕಂಡ್ ಅವ್ಳು ನನ್ನ ಕೈಲಿ ಮಾತು ಬಿಟ್ಲು. ನನ್ನ ಗಂಡ ಅವ್ಳುನ್ನ ಏನಂದದ್ದು? ಅವ್ಳುನ್ನೇ ಕರೀರಿ. ಅವ್ಳ ಮಕ್ಳು ಹಿಡಕಂಡು ಪ್ರಮಾಣ ಮಾಡಿ ಹೇಳ್ಲಿ.'

'ಮಕ್ಳಿಲ್ಲದ ಬಡ್ಡಿ, ನೀನು ಯಾರುನ್ನ ಹಿಡ್ಕಂಡು ಪ್ರಮಾಣ ಮಾಡ್ತೀಯಾ?–ಶ್ಯಾಮಣ್ಣ ಕೇಳಿದ.

ಮಾತು ಎತ್ತ ಸರಿಯುತ್ತಿದೆ ಎಂಬುದನ್ನು ಕಲ್ಲೇಶ ಅರ್ಥಮಾಡಿಕೊಂಡ. ಆಣೆ ಪ್ರಮಾಣದ ಮಾತು ಬಂದಾಗ ಹಿಂದೆ ಮುಂದೆ ಯೋಚಿಸದೆ ಪುಟ್ಟಗೌರಿ ನಿಜ ಹೇಳಿಬಿಡಬಹುದು ಎಂಬ ಭಯವಾಯಿತು. ಅಕ್ಕಮ್ಮನ ಕಡೆ ತಿರುಗಿ–'ಹಂಡೆ ಎಲ್ಲಿದೆ?' ಎಂದು ಕೇಳಿದ.

'ಅಡಿಗೇಮನ್ಲಿಟ್ಟಿದಾಳೆ.'
ಸುಮ್ಮನೆ ಹೋಗಿ ಅವನು ಅದನ್ನು ಎತ್ತಿಕೊಂಡು ಬಂದು ಶ್ಯಾಮಣ್ಣನ ಮುಂದಿಟ್ಟ. 'ನನ್ನ ದುಡ್ಡು ಬೆಂಡೋಲೆ ಕೊಡೂತಂಕ ಅದ ಕೊಡ್ಕೂಡ್ದು'–ಎಂದು ಅಡ್ಡ ಬಂದ ಹೆಂಡತಿಯನ್ನೂ ಕಾಲೆತ್ತಿ ಒದೆದು ನೂಕಿದ.
'ಕಳ್ಳಮುಂಡೆ ತಂದು. ಹಿಡಕಂಡು ನೆತ್ತಿ ಕೂದ್ಲು ಬೀಳೂತಂಕ ಕೆರದಲ್ಲಿ ಹೊಡೀಬೇಕು'–ಎನ್ನುತ್ತಾ ಶ್ಯಾಮಣ್ಣ ಅಲ್ಲಿಯೇ ಇದ್ದ ತಳವಾರನಿಗೆ, 'ಹಂಡೆ ತಗಂಡು ನಡಿಯೋ' ಎಂದು ಹೇಳಿದ.
ಗುಂಪು ನಿಧಾನವಾಗಿ ಮನೆಯ ಮುಂದಿನಿಂದ ಚದುರಿತು. ಆದರೆ ಗ್ರಾಮದಲ್ಲಿ ಇಂತಹ ವಿಶೇಷ ನಡೆದಿರುವಾಗ ಜನಗಳು ಅದನ್ನು ಬಿಟ್ಟು ಅಷ್ಟು ಬೇಗ ತಮ್ಮ ಪಾಡಿಗೆ ತಾವು ಹೊರಟುಹೋಗಲಾರರು. ಕಲ್ಲೇಶನ ಮನೆಯ ಮುಂದಿನ ಆಚೆಯ ತಿರುವನ್ನು ಹಾಯ್ದು ಮತ್ತೆ ಒಟ್ಟಿಗೆ ಸೇರಿ, ಅದರ ಬಗೆಗೇ ಲಲ್ಲೆ ಹೊಡೆಯಲು ಪ್ರಾರಂಭಿಸಿದರು. ಇಲ್ಲಿಯ ತನಕ ವಿಷಯವೇ ಗೊತ್ತಿಲ್ಲದವರೂ ಒಬ್ಬೊಬ್ಬರಾಗಿ ಬಂದು ಸೇರಿದರು.
ಕಲ್ಲೇಶ ಮನೆಯ ಬಾಗಿಲು ಹಾಕಿಕೊಂಡವನೇ, ಕೈಗೆ ಸಿಕ್ಕಿದ ಒಂದು ದನಕಟ್ಟುವ ಹಗ್ಗವನ್ನು ಜೋಡಿಸಿ ಹಿಡಿದುಕೊಂಡ. ತಪ್ಪೊಪ್ಪಿಕೊಳ್ಳಲು ಪೋಲೀಸಿನವರು ಕಳ್ಳರನ್ನು ಬಡಿಯುವ ಹಾಗೆ ಹಗ್ಗದಲ್ಲಿ ಬೀಸಿ ಬೀಸಿ ಹೆಂಡತಿಯ ಮೈಕೈಗಳಿಗೆ ಬಾರಿಸಲು ಶುರುಮಾಡಿದ. ಈ ಸಮಯದಲ್ಲಿ ಬಿಡಿಸಿಕೊಳ್ಳಲು ಹೋದರೆ ಅದೇ ಹಗ್ಗದಲ್ಲಿ ತನಗೂ ಶೆಣೆಯುತ್ತಾನೆಂದು ಗೊತ್ತಿದ್ದ ಅಕ್ಕಮ್ಮ, ಸುಮ್ಮನೆ ಹಿತ್ತಿಲ ಕಡೆಗೆ ಹೋಗಿ ದನದ ಕೊಟ್ಟಿಗೆಯಲ್ಲಿ ಕುಳಿತಳು. 'ಬೆಂಡೋಲೇನ ಏನು ಮಾಡ್ಬೇಕು ಅಂತ ಅವ್ರಿಗೆ ಕೊಟ್ಟಿದ್ದೆ ಹೇಳೇ ಬೋಸುಡಿ'–ಎಂದು ಹದಿನೈದು ಇಪ್ಪತ್ತು ಸಲ ಶೆಣೆದ ಮೇಲೆ ಅವಳು ಬಾಯಿ ಬಿಟ್ಟಳು: 'ನಮ್ಮ ರಂಗಮಣೀಗೆ ಕೊಡಬೇಕು ಅಂತ ಇಟ್ಟಿದ್ದೆ.' ರಂಗಮಣಿ ಕಮಲುವಿನ ತಂಗಿ; ಈಗ ಮದುವೆಗೆ ಬಂದಿದ್ದಳು.
'ಅಕ್ಕಿ ಕಾಫಿ ಬೀಜ ಹ್ಯಾಗೆ ಕೊಟ್ಟೆ?'
ಅವಳು ಬಾಯಿ ಬಿಡಲಿಲ್ಲ. ಮತ್ತೆ ಒಂದು ಡಜನ್ ಒಂದೇಸಮನೆ ಬಿದ್ದಮೇಲೆ ಬಾಯಿ ತೆಗೆದಳು: 'ನೀರಿಗೆ ಹೋಗೂವಾಗ ಬಿಂದಿಗೇಲಿ ಹಾಕ್ಕಂಡು ಹೋಗ್ತಿದ್ದೆ.'
ಕಲ್ಲೇಶಿ ಹಗ್ಗವನ್ನು ಎಸೆದ. ಅಡಿಗೆ ಮನೆಗೆ ಹೋಗಿ ಒಂದು ಸೌದೆ ಹೊಳಕೆ ತಂದ, ಅದನ್ನು ಕಂಡು ಅವಲು ಭಯದಿಂದ, 'ಅಯ್ಯಯ್ಯಪ್ಪಾ ನನ್ನ ಸಾಯಿಸ್ತಾನಲ್ಲಪ್ಪಾ, ನಾನ್ ಸತ್ಹೋದೆ' ಎಂದು ಕಿರುಚಿಕೊಂಡಳು. ಅವರ ಮನೆಯ ಆಚೆಯ ತಿರುವಿನಲ್ಲಿ ಸೇರಿದ್ದ ಜನರ ಗುಂಪು ಶಬ್ದ ಮಾಡದೆ ಬಂದು ಮನೆಯ ಮುಂದೆ ಸೇರಿತು. ಫಟ್ ಫಟ್ ಎಂಬ ಹೊಳಕೆಯ ಬಡಿತ, ಅವಳ ಚೀತ್ಕಾರ, ಶಾಪಗಳು, ಮತ್ತು ಮಧ್ಯ ಮಧ್ಯದಲ್ಲಿ ಕಲ್ಲೇಶ ಅನ್ನುತ್ತಿದ್ದ ಮಾದರ್‌ಚೋತ್ ಬಾನ್‌ಚೋತ್ಗಳು, ಹೊರಗಿದ್ದ ಎಲ್ಲರ ಕಿವಿಯಮೇಲೂ ಬಡಿಯುತ್ತಿದ್ದವು. ಬಾಗಿಲು ಬಡಿದು ಒಳಗೆ ನುಗ್ಗಿ ಬಿಡಿಸಿಕೊಳ್ಳಬೇಕೆಂದು ದೂರದ ಮನೆಗಳ ಒಬ್ಬಿಬ್ಬರು ಮುಂದೆ ನುಗ್ಗಿದರು. ಇದು ವಿಶೇಷವೇನೂ ಇಲ್ಲದ ಸಾಮಾನ್ಯ ಸಂಗತಿ ಎಂಬುದನ್ನು ಬಲ್ಲ ಹತ್ತಿರದ ಮನೆಗಳವರು, ಕೈಸನ್ನೆ ಮಾಡಿ ತಡೆದು ನಿಲ್ಲಿಸಿದರು.
ಸೌದೆಯ ಹೊಳಕೆ ಮುರಿಯಿತೋ ಅಥವಾ ಅವನಿಗೇ ಸಾಕೆನಿಸಿತೋ, ಕಲ್ಲೇಶ ಹೊಡೆಯುವುದನ್ನು ನಿಲ್ಲಿಸಿದ. ಅಳುವುದಕ್ಕೂ ಶಕ್ತಿ ಸಾಲದೆ ಬಿದ್ದುಕೊಂಡಿದ್ದ ಅವಳ ಬೆನ್ನು ಭುಜ ತೋಳುಗಳಿಂದ ರಕ್ತ ಬರುತ್ತಿತ್ತು. ಅವಳ ಕಿವಿಗೆ ಕೈಹಾಕಿ, ತಾನು ಹೋದ ವರ್ಷ ಮಾಡಿಸಿ ತಂದಿದ್ದ ಎರಡು ಬೆಂಡೋಲೆಗಳನ್ನೂ ಬಿಚ್ಚಿ ಆಟ್ಟ ಹತ್ತಿ ತನ್ನ ಪೆಟ್ಟಿಗೆಯಲ್ಲಿಟ್ಟು, ಬೀಗದ ಕೈಯನ್ನು ಉಡಿದಾರಕ್ಕೆ ಕಟ್ಟಿಕೊಂಡು ಅವನು ಬೀದಿಯ ಬಾಗಿಲು ತೆರೆದು ಹೊರಗೆ ಬಂದ. ಮನೆಯ ಮುಂದಕ್ಕೇ ಬಂದು ನಿಂತಿದ್ದ ಗುಂಪನ್ನು ಕಂಡು ರೇಗಿ–'ಒಳಗೇನು ಕರಡಿ ಕುಣೀತಿತ್ತೇನ್ರುಲಾ ಇಲ್ಲಿ ನಿಂತ್ಕಳಾಕೆ?' ಎಂದು ಅವನು ಕೇಳಿದ ರೀತಿಗೇ ಹೆದರಿ ಎಲ್ಲರೂ ಚದುರಿ ಹೊರಟುಹೋದರು.
ಗಟ್ಟಿಯಾಗಿ ಅತ್ತು ಎರಡು ಗಂಟೆಯ ಕಾಲ ಬಿಕ್ಕಳಿಸಿ ಮುಸಿಗುಟ್ಟಿ, ಗಂಡನ ಕೈ ಸೇದಿ ಕಾಲು ಮುರಿದು ಅವನನ್ನು ಜೈಲಿನಲ್ಲಿ ನೇಣುಗಟ್ಟಲೆಂದು ಶಪಿಸಿದ ಮೇಲೆ ಕಮಲುವಿನ ಬುದ್ಧಿ ಬೆಳಿಗ್ಗೆಯಿಂದ ನಡೆದುದನ್ನೆಲ್ಲ ತಿರುವುಹಾಕಲು ಶುರುಮಾಡಿತು. ಆ ಕಳ್ಳಮುಂಡೆ ನನ್ನ ಬೆಂಡೋಲೆ, ಹದಿನೈದು ರೂಪಾಯಿ ನುಂಗಿಕೊಂಡಿದ್ದರೂ ಹೋಗಲಿ. ನಾನು ಅವಳ ಮನೆ ಹಂಡೆ ಹೊತ್ಕಂಡು ಬರಬಾರದಾಗಿತ್ತು. ಅದನ್ನ ತಂದುದ್ರಿಂದಲೇ ಹೋದ ವರ್ಷ ಆದುದ್ದೆಲ್ಲ ಗೊತ್ತಾದ್ದು. ಈ ಪಾಪರ್‌ಮುಂಡೇಮಗ ನನ್ನ ಸಾಯೂಹಾಗೆ ಹೊಡೆದದ್ದು–ಎಂಬ ಅರಿವಾಯಿತು. ಆದರೆ ಅವನು ಹೊಡೆದದ್ದಕ್ಕೆ ಬುದ್ಧಿ ಕಲಿಸಬೇಕು. ಸುಮ್ಮನಾದರೆ ಇನ್ನೊಂದು ದಿನ ಇನ್ನೂ ಜಾಸ್ತಿ ಹೊಡೀತಾನೆ ಯಮಮುಂಡೇಮಗ–ಎಂದೂ ನಿಶ್ಚಯಿಸಿದಳು.
– 3 –
ಆ ದಿನವೆಲ್ಲಾ ಮರುವನಹಳ್ಳಿಯ ದೇವಿಯ ಮನೆಯಲ್ಲಿದ್ದು ಮರುದಿನ ಬೆಳಿಗ್ಗೆ ಎದ್ದು ಕಲ್ಲೇಶ ಊರಿಗೆ ಹೊರಟ. ತೋಟದ ಕತ್ತಾಳೆಯ ಓಣಿಯಲ್ಲಿ ಬರುತ್ತಿರುವಾಗ ರೊಯ್ ಎಂದು ನಾಲ್ಕಾರು ಕಲ್ಲುಗಳು ಬಂದು ಅವನನ್ನು ಹೊಡೆದವು. ಯಾರೆಂದು ಕತ್ತೆತ್ತಿ ನೋಡುತ್ತಿರುವಾಗ ಹಿಂಭಾಗದಿಂದ ಇನ್ನೊಂದು ಕಲ್ಲು

ಬಂತು. 'ಯಾವನ್ರಲೇ ಅದು ನಿಮ್ಮಪ್ಪನಾ'–ಎಂದು ಅವನು ಒಂದು ಸಲ ಕೂಗಿದ. ಕಲ್ಲುಗಳು ಬರುವುದು ನಿಂತುಹೋಯಿತು. ತಾನೇ ಮೇಲೆ ಬಿದ್ದು ಆ ಕಡೆ ನುಗ್ಗಲು ಭಯ ತುಂಬ ಜನರಿದ್ದು ಒಟ್ಟಿಗೆ ಮೇಲೆ ಬಿದ್ದರೆ, ಎಂಬ ಅಂಜಿಕೆ. ಸುಮ್ಮನೆ ಹೋದರೆ ಯಾರು, ಯಾಕೆ ಹೀಗೆ ಮಾಡಿದರು, ಎಂಬುದು ತಿಳಿಯುವುದಿಲ್ಲ. ಹೇಗೂ ಬೆಳಗಿನ ಹೊತ್ತು ಎಂದು ಧೈರ್ಯ ಮಾಡಿ ಕತ್ತಾಳೆಯ ಸಂದಿನಲ್ಲಿ ನುಸಿದು ನೋಡಿದ. ಬೇಲಿಯ ಮರೆಯಲ್ಲಿ ಅಡಗಿ ಕೂತಿದ್ದವರ ಮುಖ ಕಂಡಿತು. ತಮ್ಮನ್ನು ಅವನು ಗುರುತಿಸಿದನೆಂದು ತಿಳಿದ ಅವರೇ ಸಂದಿನಲ್ಲಿ ನುಸಿದು ಓಡಿಬಿಟ್ಟರು.

ಅವರೆಲ್ಲ ಶ್ಯಾಮಣ್ಣನ ಕುಳಗಳು, ಗ್ರಾಮದ ತೋಟಿ ತಳವಾರರು. ಸುಮ್‌ಸುಮ್ಮನೆ ಬಂದು ತನಗೆ ಕಲ್ಲು ಹೊಡೆಯಲು ಅವರಿಗೂ ತನಗೂ ಯಾವ ದ್ವೇಷವೂ ಇಲ್ಲ. ಇದು ಶ್ಯಾಮಣ್ಣನ ಕಿತಾಪತಿಯೇ ಸರಿ ಎಂದು ಅವನು ಅರ್ಥಮಾಡಿಕೊಂಡ. ಈ ಶ್ಯಾನುಭೋಗನ ಬುದ್ಧಿಯೇ ಹಾಗೆ. ತಾನೇ ಮುಂದೆ ನುಗ್ಗಿ ಏನು ಮಾಡುವುದಕ್ಕೂ ಧೈರ್ಯವಿಲ್ಲ. ಹಿಂದೆಯೇ ಮಾಡಿಸುತ್ತಾನೆ. ಅಪ್ಪ ಇದ್ದಾಗ ಒಂದು ದಿನ ನಮ್ಮ ಮನೆ ಮೇಲೆ ಹೀಗೆಯೇ ಕಲ್ಲು ಬೀರಿಸಿದ್ದ. ಅದರಿಂದಲೇ ಅಲ್ಲವೆ ಅಪ್ಪ ಹಾಡುಹಗಲು ಹೋಗಿ ಅವನ ಮನೆ ಹೆಂಚು ಬಡಿದದ್ದು? ಆದರೆ ಅಪ್ಪನಂತೆ ಮಾಡುವ ಎದೆಗಾರಿಕೆ ತನಗಿಲ್ಲವೆಂಬುದು ಕಲ್ಲೇಶನಿಗೂ ಗೊತ್ತು. ಈ ಶ್ಯಾಮಣ್ಣ ಯಾಕೆ ಹೀಗೆ ಮಾಡಿಸಿದ? ನೆನ್ನೆ ಇವಳು ಹಂಡೆ ಹೊತ್ತುಕೊಂಡು ಬಂದದ್ದಕ್ಕಿರಲಾರದು. ಅದನ್ನ ನಾನೇ ವಾಪಸ್ಸು ಕೊಟ್ಟಿದೀನಿ. ಸೊಸೆಗೆ ಆದದ್ದು ಅವನಿಗೆ ಅರ್ಥವಾಗಿದೆ. ಬಾಯಿಬಿಟ್ಟು ಜಗಳ ಆಡುಕ್ಕೆ ಹೊರಟರೆ ಅವನ ಮನೆಗೇ ಅವಮಾನ. ಅದಕ್ಕೆ ಹೀಗೆ ತೀರುಸ್ಕಳುಕ್ಕೆ ಹೊರಟಿದಾನೆ ಸೂಳೆಮಗ. ಇವನ ಹತ್ರ ಜರೂರತ್ತಿಗೆ ಹೋಗಬಾರ್ದು; ತಂತ್ರಾನೇ ಮಾಡಬೇಕು. ಆ ಪುಟ್ಟಗೌರಿ ತಂಟೆಗೆ ಹೋಗದೇ ಇದ್ರೂ ಆಗ್ತಿತ್ತು. ಅವಳ್ಯಾವ ಸುಂದರಿ ಅಂತ. ಆದ್ರೂ ತುಂಬ ದಿನದಿಂದ ಮನಸ್ನಲ್ಲಿ ಹುಟ್ಟಿತ್ತು. ತೀರಿತು–ಎಂದು ಯೋಚಿಸುತ್ತಾ ಮನೆಗೆ ಬರುವ ಹೊತ್ತಿಗೆ ಇನ್ನೊಂದು ಸಂದರ್ಭ ಕಾದಿತ್ತು. ಅಕ್ಕಮ್ಮ ಹೇಳಿದಳು: "ನೀನು ನೆನ್ನೆ ಎಲ್ಲ ಎಲ್ಲಿಗೆ ಹೋದೆಯೋ? ಅವ್ಳು, 'ಬಾವಿಗೆ ಬಿದ್ಬಿಡ್ತೀನಿ. ನಿನ್ನೂ ನಿನ್ನ ಮೊಮ್ಮಗನ್ನೂ ಸೇರಿಸಿ ನೇಣುಗಟ್ಟುಸ್ತೀನಿ' ಅಂತ ನಿನ್ನೆ ಎಲ್ಲ ಹೆದರಿಸಿದ್ಲು. ನಾನು ರಾತ್ರಿ ಎಲ್ಲ ಕಣ್ಣು ಮುಚ್ಚಿಲ್ಲ. ವಾರದ ಹೊನ್ನನ್ನ ಕರದು ಮನೇಲೇ ಇಟ್ಕಂಡಿದ್ದೆ."

ಕಮಲು ಇನ್ನೂ ಕೋಪಗೃಹದಲ್ಲೇ ಇದ್ದಳು. 'ಏನೇ ಬೋಸುಡಿ?'–ಎಂದು ಕೇಳಿದುದಕ್ಕೆ, 'ನಿನ್ನ ಓಲುಗಟ್ಟಿಸಿಯೇ ಕಟ್ಟುಸ್ತೀನಿ' ಎಂದು ರಾಂಗಾಗಿ ಜವಾಬು ಕೊಟ್ಟಳು. ಒಂದು ಸೌದೆ ಹೊಳಕೆ ಕೈಗೆ ತೆಗೆದುಕೊಳ್ಳಬೇಕೆಂದು ಅವನ ಮನಸ್ಸು ತಕ್ಷಣ ಯೋಚಿಸಿತಾದರೂ, ನೆನ್ನೆ ಅದರಲ್ಲೇ ಅಷ್ಟು ಹೊಡೆದರೂ ಅವಳು ಬಗ್ಗದಿರುವುದನ್ನು ನೆನೆಸಿಕೊಂಡ ಅದು ಆ ಯೋಚನೆಯನ್ನು ಕೈಬಿಟ್ಟಿತು. ಹಿಂದೆ ಒಂದು ಸಲ ಅವಳು ಬಾವಿಗೆ ಬಿದ್ದಿದ್ದ ನೆನಪೂ ಆಯಿತು. ತಕ್ಷಣ ಒಂದು ಉಪಾಯ ಹೊಳೆದು ಅವನು ಕೇಳಿದ: 'ಬಾವಿಗೆ ಬೀಳ್ತೀ ಏನೇ?'

'ಹೂಂ ಕಣೋ.'

'ಬಾ ಹಾಗಾದ್ರೆ'–ಎಂದು ಅವಳ ರೆಟ್ಟೆ ಹಿಡಿದು ದರದರನೆ ಹಿತ್ತಿಲ ಬಾವಿಯ ಹತ್ತಿರಕ್ಕೆ ಎಳೆದುಕೊಂಡು ಹೋದ. 'ಏನಾರ ಹೆಚ್ಚುಕಮ್ಮಿಯಾಗಿ ನಮ್ ಮ್ಯಾಲೆ ಬಂದೀತು ಕಣೋ'–ಎಂದು ಅಡ್ಡಬಂದ ಅಕ್ಕಮ್ಮನನ್ನು ದೂರ ನೂಕಿ, ಬಾವಿಯ ಹತ್ತಿರವೇ ಇದ್ದ ಹೊಸ ಹಗ್ಗದ ಜೇರುಗುಣಿಕೆಯನ್ನು ಅಗಲ ಮಾಡಿ ಅವಳ ಕಂಕುಳಿಗೆ ಹಾಕಿ ಬಿಗಿಮಾಡಿದ. ಅವಳು ಬಡಬಡಿಸುತ್ತಿರುವಾಗಲೇ ತನ್ನ ಎರಡು ಕಾಲುಗಳನ್ನೂ ಬಾವಿಯ ಕಟ್ಟೆಗೆ ಒದೆ ಕೊಟ್ಟು, ಹೊಸದಾಗಿ ಹಾಕಿದ್ದ ರಾಟೆಯಿಂದ ಅವಳನ್ನು ನಿಧಾನವಾಗಿ ಒಳಕ್ಕೆ ಬಿಟ್ಟು, ಅಯ್ಯಯ್ಯಪ್ಪೋ ಎಂದು ಅವಳು ಅಳುತ್ತಿರುವಾಗಲೇ ಹಗ್ಗವನ್ನು ಕೆಳಗೆ ಬಿಡುತ್ತಿದ್ದ. ಕೆಳಗೆ ನೀರು ಹತ್ತಿರ ಬಂದು ಅವಳ ಕಾಲು, ಮೊಣಕಾಲು, ತೊಡೆ ಸೊಂಟಗಳ ಭಾಗವು ನಿಧಾನವಾಗಿ ನೀರೊಳಗೆ ಇಳಿದವು. 'ಅಯ್ಯಯ್ಯೋ'–ಎಂದು ಹೊಡೆದುಕೊಳ್ಳುತ್ತಿರುವಾಗಲೇ ಮೇಲಿನಿಂದ ಹಗ್ಗವನ್ನು ಸಡಿಲಬಿಟ್ಟು ಪೂರ್ತಿಯಾಗಿ ತಲೆಯನ್ನು ಒಂದು ಸಲ ಮುಳುಗಿಸಿ ಮತ್ತೆ ಕಂಕುಳಿನ ತನಕ ಮೇಲೆ ಎತ್ತಿದ. ಒಳಗಿದ್ದ ಅವಳು ಬೆವೆತು ನಡುಗುತ್ತಿದ್ದಳು.

'ಬಾವಿಗೆ ಬೀಳ್ತೀ ಏನೇ?'–ಮೇಲಿನಿಂದ ಇವನು ಕೂಗಿ ಕೇಳಿದ.

'ಇಲ್ಲಾ"" ಇಲ್ಲಾ"""."

'ನೀನು ತಾನು ಅಂತ ಮಾತಾಡ್ತೀ ಏನೇ?'

'ಇಲ್ಲ, ಇಲ್ಲ, ನಿಮ್ಮ ದಮ್ಮಯ್ಯ ಅಂತೀನಿ. ಮೇಲುಕ್ಕೆ ಎಳ್ಕಳಿ.'

ಕಟ್ಟೆಗೆ ಎರಡು ಕಾಲನ್ನೂ ಒದೆಕೊಟ್ಟು ಇವನು ಗಟ್ಟಿಯಾಗಿ ಎಳೆಯಲು ಹೋಗುತ್ತಾನೆ: ತನ್ನೊಬ್ಬನ ಕೈಲಿ ಸಾಧ್ಯವಾಗುವ ತೂಕವಲ್ಲ ಅದು ಎನಿಸಿತು. ಯಾರಾದರೂ ಇನ್ನೊಬ್ಬ ಗಂಡಸನ್ನು ಕರೆಯಬೇಕು. ಆದರೆ ಹೊರಗಿನವರನ್ನು ಕರೆದರೆ ಏನಾದರೂ ಗಲಾಟೆಯಾಗಬಹುದು. ಅಷ್ಟರಲ್ಲಿ ಯಾರೋ ಬೀದಿಯ ಬಾಗಿಲನ್ನು ತಟ್ಟಿದಂತೆ ಆಯಿತು. 'ತಡಿ, ಬಾಗ್ಲು ತೆಗೀಬ್ಯಾಡ'–ಎಂದು ಅವನು ಅಕ್ಕಮ್ಮನಿಗೆ ಹೇಳುತ್ತಿರುವಷ್ಟರಲ್ಲಿ

ಬಾಗಿಲು ತಟ್ಟಿದವರು, 'ಅಕ್ಕಮ್ಮಾ, ಕಲ್ಲೇಶಾ, ಬಾಗಿಲು'ಎಂದರು. ಅದು ತನ್ನ ಮಗ ಕಂಠಿ0ು ಧ್ವನಿ ಎಂಬುದನ್ನು ಅಕ್ಕಮ್ಮ ಗುರುತು ಹಿಡಿದಳು. ಎದ್ದು ಹೋಗಿ ಬಾಗಿಲನ್ನು ತೆಗೆದು, ಅವರು ಒಳಗೆ ಬಂದ ಮೇಲೆ ಒಳಗಿನಿಂದ ಮತ್ತೆ ಹಾಕಿಕೊಂಡಳು. ತಮ್ಮ ಎಡಭುಜದ ಹಿಂದೆ, ಮುಂದೆ, ಎರಡು ಕಡೆ0ುೂ ಭಾರವಾಗಿ ತುಂಬಿ ತೂಗುತ್ತಿದ್ದ ಒಂದು ಹಸುಬೆ ಚೀಲ ಮತ್ತು ಕೈ0ುಲ್ಲಿದ್ದ ಇನ್ನೊಂದು ಚೀಲವನ್ನು ಕೆಳಗೆ ಇಟ್ಟ ಮಗನ ಕ್ಷೇಮಸಮಾಚಾರ ಕೇಳುವ ಮೊದಲೇ ಅಕ್ಕಮ್ಮ, 'ಸ್ವಲ್ಪ ಅಲ್ಲಿಗೆ ಬಾ. ಏನೂ ಮಾತಾಡಬ್ಯಾಡ' ಎಂದಳು. ತಂದೆ ಮಗ ಸೇರಿ ಸೊಸೆ0ುನ್ನು ಮೇಲೆ ಎಳೆದು ಹಾಕಿದರು. ಒದ್ದೆ ಸೀರೆ0ುಲ್ಲಿ0ೇು ಕೋಣೆ ಸೇರಿದ ಅವಳು ಮತ್ತೆ ಮಾತನಾಡಲಿಲ್ಲ. ಸದ್ದು ಗದ್ದಲ ಮಾಡಲಿಲ್ಲ.
ಉಭ0ು ಕುಶಲೋಪರಿಗಳಾದವು. ಜೋಯಿಸರು ಈಗ ಸನ್ಯಾಸಿ0ುಂತೆ ಗಡ್ಡ ಬಿಟ್ಟಿದ್ದರು. ತಾವು ಇಷ್ಟು ದಿನ ಕಾಶಿ0ುಲ್ಲಿದ್ದುದಾಗಿ ಹೇಳಿದರು. 0ಾಕೆ ಹೋಗಿದ್ದೆ ಎಂಬ ಪ್ರಶ್ನೆಗೆ ಮಾತ್ರ ಉತ್ತರವಿಲ್ಲ. ಈ ಕಡೆ ಬಂದವರು ಶ್ಯಾಮಣ್ಣ ಬದುಕಿದ್ದಾನೆ0ೋು ಇಲ್ಲವೋ ಎಂಬ ಬಗೆಗೆ ಹತ್ತಿರದ ಒಂದೆರಡು ಹಳ್ಳಿಗಳಲ್ಲಿ ವಿಚಾರಿಸಿಕೊಂಡೇ ಗ್ರಾಮ ಪ್ರವೇಶ ಮಾಡಿದ್ದರು.
'ಇದೇನು ಹೀಗೆ ಗಡ್ಡ ಬಿಟ್ಟಿದ್ದೀ0ಾು, ಸನ್ಯಾಸ ತಗಂಡೆ ಏನು?–ತಾಯಿ ಕೇಳಿದಳು.
'ಏನೂ ಇಲ್ಲ. ಲೋ ಕಲ್ಲೇಶ, ಹಜಾಮ್ರೋನ್ನ ಕರ್ಸು.'
ಹಜಾಮ ಬಂದ. ಮೊದಲಿನಂತೆ0ೇು ಕಂಠೀಜೋಯಿಸರು ತಲೆ0ು ಮೇಲೆ ಗಂಟು ಹಾಕುವಂತೆ ಜುಟ್ಟು ಬಿಟ್ಟು ನೆತ್ತಿ ಗಡ್ಡಗಳನ್ನು ಬೋಳಿಸಿಕೊಂಡರು. ಕಳೆದ ಹನ್ನೆರಡು ವರ್ಷದಲ್ಲಿ ಅವರು ಸ್ವಲ್ಪವೂ ಕಂದಿಲ್ಲ. ನಲುಗಿಲ್ಲ; ಬಡವಾದಂತೆ0ುೂ ಇಲ್ಲ ಮೈ ಕೈ ತುಂಬಿಕೊಂಡು ಸುಖವಾಗಿದ್ದಾನೆ. ಸ್ನಾನ ಮುಗಿದ ಮೇಲೆ ಕುಳಿತು ಸಂಧ್ಯಾವಂದನೆ ಮುಗಿಸಿ ಜಪ ಮಾಡಿದರು. ಜಪ ಈಗ ಅವರು ಹೊಸದಾಗಿ ಕಾಶಿ0ುಲ್ಲಿ ಕಲಿತಿದ್ದಿರಬಹುದು. ಅಡಿಗೆ0ಾುಗಿ ಊಟಕ್ಕೆ ಬಡಿಸುವಾಗ ಅಕ್ಕಮ್ಮ ಕೇಳಿದಳು: 'ಕಂಟೀ, ನೀನು ಹೋಗಿ ಹನ್ನೆರಡು ವರ್ಷ ಕಳೆದಿತ್ತಲ್ಲ, ಮುಖ ತೋರದು ಹೋಗಿತ್ತು. 0ಾುವುದಾದರೂ ದೇವಸ್ಥಾನದಲ್ಲಿ ಮೊದಲು ಮುಖದರ್ಶನ ಆಗಬೇಕಾಗಿತ್ತು.'
'ಕಾಶಿ ಗಂಗೆ ತಂದಿದೀನಿ. ಅದು ಜೊತೇಲಿರುವಾಗ ಅದೆಲ್ಲ ಏನೂ ಬ್ಯಾಡ ನೋಡು, ಗಂಗಾ ಸಮಾರಾಧನೆ ಮಾಡಬೇಕು.'
'ಈ ಕಾಲದಲ್ಲಿ ಸಮಾರಾಧನೆ ಅಂದ್ರೆ ಎಷ್ಟು ಕಷ್ಟ. ಹೋದ ವರ್ಷವೆಲ್ಲ ಮಳೆ ಇಲ್ದೆ ಮನೇಲಿ ಏನೂ ಇಲ್ಲ'–ಕಲ್ಲೇಶ ಎಂದ.
'ನಾನು ದುಡ್ಡು ತಂದಿದೀನಿ. ಮಹಾ ಅದೆಷ್ಟು ಖರ್ಚಾಗುತ್ತೆ?'
ಕಂಠೀಜೋಯಿಸರು ಹಿಂತಿರುಗಿ ಬಂದದ್ದನ್ನು ತಿಳಿದಮೇಲೆ ಊರಿನ ಎಷ್ಟೋ ಜನ ಬಂದು ನೋಡಿ ಮಾತನಾಡಿಸಿಕೊಂಡು ಹೋದರು. ಹನ್ನೆರಡು ವರ್ಷ ಕಾಶಿ0ುಲ್ಲಿದ್ದು ಬಂದ ಅವರು ಈಗ ಮೊದಲಿಗಿಂತ ಮಹಾ ಪಂಡಿತರಾಗಿದ್ದಾರೆ. ಕಾಶೀ0ಾುತ್ರೆ ಮಾಡಬೇಕೆಂಬ ಹಂಬಲವಿದ್ದು ಕೈಗೂಡದಿದ್ದ ಕೆಲವರು ಅವರ ಕಾಲು ಮುಟ್ಟಿ ನಮಸ್ಕಾರ ಮಾಡಿದರು. ಅಂಥವರಿಗೆಲ್ಲ ಜೋಯಿಸರು ಒಂದೊಂದು ಕಾಲಭೈರವ ದಾರದ ಎಳೆ ಕೊಟ್ಟರು. ಎಂಟು ದಿನದಲ್ಲಿ ಅದ್ದೂರಿ0ಾುಗಿ ಗಂಗಾ ಸಮಾರಾಧನೆ ಆಯಿತು. ಎಲ್ಲರೂ ಬಂದರೂ ಸಮಾರಾಧನೆಗೆ ಶ್ಯಾಮಣ್ಣನಾಗಲಿ ಅವರ ಮನೆ0ುವರಾಗಲಿ ಬರಲಿಲ್ಲ.
ಅಷ್ಟರಲ್ಲಿ ಜೋಯಿಸರು ಊರಿನಲ್ಲೆಲ್ಲ ಸುತ್ತಿ ತಮ್ಮ ಹಳೆ0ು ಸ್ನೇಹಿತರನ್ನೆಲ್ಲ ಕಂಡು ಊರಿನ ಸಂಗತಿಗಳನ್ನು ತಿಳಿದುಕೊಂಡಿದ್ದರು. ಗಂಗಾ ಸಮಾರಾಧನೆ0ಾುದ ರಾತ್ರಿ ಬೆಳದಿಂಗಳಿನಲ್ಲಿ ಹಿತ್ತಿಲ ಬಾವಿ0ು ಹತ್ತಿರ ಕೂತುಕೊಂಡು ಅವರು ಮಗನನ್ನು ಕೇಳಿದರು: 'ಕಲ್ಲೇಶ, ನೀನು ಹೊಡೆದೆ ಅನ್ನೋ ಸಿಟ್ಟಿಗೆ ಅವ್ಳು ಬೆಂಡೋಲೇನ ಕದ್ದು ಅಪ್ಪನ ಮನೆಗೆ ಸಾಗಿಸಿ ತಂಗಿಗೆ ಕೊಡಬೇಕು ಅಂತ ಮಾಡಿದ್ಲಂತೆ. ಇದಕ್ಕೆ ಆ ಶ್ಯಾಮಣ್ಣನ ಸೊಸೆ ಶರೀಕಾಗಿದ್ಲಂತೆ. ನಿಜವೆ?'
'ಹುಂ.'
'ಅವ್ಳುನ್ನ ನೀನು ಅವಮಾನ ಮಾಡಿದೆ0ುಂತೆ.'
'ನಮ್ಮನೆಗೆ ಬರಬ್ಯಾಡ ಅಂದೆ.'
'ನೋಡು, ನಾನು ಕಾಶಿಗೆ ಹೋಗಿ ಬಂದಿರೋನು; ಹುಟ್ಟಿಸಿದ ಅಪ್ಪ. ನನ್ನ ಕೈಲಿ ನಿಜ ಹೇಳು. ಬರೀ ನಮ್ಮನೆಗೆ ಬರಬ್ಯಾಡ ಅಂದೆ0ೋು ಅಥವಾ ಇನ್ನೇನಾರೂ ಆ0ೊು್ತೀ?'
'ನಿನಗೆ 0ಾುರು ಏನು ಹೇಳಿದ್ರು?'
'ಊರಲ್ಲೆಲ್ಲಾ ಬೇರೆ ಥರಾ ಮಾತಾಡ್ಕತ್ತಾರೆ. ನಿಜವಿಷ0ು ಬಾಯಿಬಿಟ್ಟು ಮಾತಾಡುಕ್ಕೆ ಶಾಮಣ್ಣನಿಗೆ ಅವಮಾನವಂತೆ.'
'ಹುಂ'–ಕಲ್ಲೇಶ ಕತ್ತು ಬಗ್ಗಿಸಿ ಹೇಳಿದ: 'ಇವ್ಳ ಬುದ್ಧಿ ಕೆಡಿಸುಕ್ಕೆ ಅಂತಲೇ ಆ ಶಾಮಣ್ಣ ಸೊಸೇನ ಕಳುಸ್ತಾ ಇದ್ದ. ಅಂಥೋರಿಗೆ ಇನ್ನೇನು ಮಾಡ್ಬೇಕು?'

'ನೋಡು, ಗಂಡಸು ಬೇಕಾದ ಪರಾಕ್ರಮ ಮಾಡಿ ಜಯಿಸ್ಕಾಭೌದು. ಅದೊಂದರಲ್ಲಿ ಬಿಗಿ೦ಯಾಗಿರಬೇಕು. ಅದು ಸಡ್ಲವಾ೦ಯ್ತು, ಅವ್ನು ಏನ್ನೂ ಜಯಿಸ್ಕಳುಕ್ ಆಗುಲ್ಲ. ನೀನು ಮಾಡಿದ್ದು ತಪ್ಪು ಕೆಲ್ಸ.'
ಕಲ್ಲೇಶನಿಗೆ ನಾಚಿಕೆ೦ಯಾಯಿತು. ಆದರೆ ತನ್ನ ಕೆಲಸವನ್ನು ಸಮರ್ಥಿಸಿಕೊಳ್ಳಲು ಹೇಳಿದ: 'ನೀನು ಊರಿಗೆ ಬಂದ ದಿನ ನಾನು ಮರುವನಹಳ್ಳಿಯಿಂದ ಬರ್ತಾ ಇದ್ದೆ. ಶ್ಯಾಮಣ್ಣ ಆಳುಗಳ ಕಳ್ಸಿ ನನ್ನ ಮೇಲೆ ಕಲ್ಲು ಬೀರುಸ್ದ. ಅವ್ನು ಅಂತಾ ಕೆಲ್ಸ ಮಾಡ್‌ಭೌದೊ?'
'ಎಲಾ ಸೂಳೆ ಮಗುನ್ನ ತಂದು. ನಮ್ಮನೆ ಮ್ಯಾಲೆ ಕಲ್ಲು ಬೀರಿಸಿದ್ದಕ್ಕೆ ಅವ್ನಿಗೆ ಹೀಗೆಲ್ಲ ಆ೦ಯ್ತು. ಕಂಠಿ ಸತ್ಹೋಗಿಬಿಟ್ಟ ಅಂತ ತಿಳ್ಕಂಡ್ನೇನು ಅವ್ನು? ನಾನು ನೋಡ್ಕತ್ತೀನಿ ಬಿಡು'–ಎಂದು ಅವರು ತೀರ್ಮಾನಿಸಿಕೊಂಡರು. ಅದೇನೆಂಬುದನ್ನು ಬಾಯಿಬಿಟ್ಟು ಹೇಳಲಿಲ್ಲ.
ಇದಾದ ಎರಡು ದಿನಕ್ಕೆ ಶುಕ್ರವಾರ. ಎಂದರೆ ನಾಗಲಾಪುರದ ಸಂತೆ. ಸುತ್ತಿನ ಊರಿನವರೆಲ್ಲ ಸೇರುವ ಸಂತೆಗೆ ಹೋಗದೆ ಇರುವವರೇ ಇಲ್ಲ. ಮಧ್ಯಾಹ್ನದ ಮೂರು ಗಂಟೆ೦ಯ ಹೊತ್ತಿನಲ್ಲಿ ಶ್ಯಾನುಭೋಗ ಶ್ಯಾಮಣ್ಣನವರು ತಮ್ಮ ಮನೆಯಿಂದ ಹೊರಟು ಸಂತೆ೦ಯ ಕಡೆಗೆ ಹೋಗುತ್ತಿದ್ದಾರೆ. ಬಿಳಿ೦ಯ ಕಚ್ಚೆ ಪಂಚೆ, ಮೈಮೇಲೆ ಅಂಗಿ, ಒಂದು ಉತ್ತರೀ೦ಯ. ಹಣೆಗೆ ಕರಿ೦ಯ ಸಾದು ಇಟ್ಟು ಶ್ಯಾನುಭೋಗಿಕೆ೦ಯ ದರ್ಪದಿಂದ ನಡೆ೦ಯುತ್ತಿದ್ದರು. ಅದೆಲ್ಲಿ ಕಾದು ಕುಳಿತಿದ್ದರೋ, ಕಂಠೀಜೋಯಿಸರು ಬಂದು ಅವರ ಮುಂದೆ ಪ್ರತ್ಯಕ್ಷರಾದರು. ಕಚ್ಚೆ ಪಂಚೆ, ಕಾಷಾ೦ಯ ಬಣ್ಣದ ಅಂಗಿ ಧರಿಸಿ ಹಣೆಗೆ ತ್ರಿಪುಂಡ್ರವಿಟ್ಟು ಕೊರಳಿಗೆ ಮಾಲೆ ಹಾಕಿದ್ದ ಅವರ ಕೈಲಿ ಒಂದು ದಪ್ಪ ಮಡಕೆಯಿತ್ತು. ಅದರಿಂದ ಬರುತ್ತಿದ್ದ ನಾತ, ಸುತ್ತ ಇದ್ದವರ ಮೂಗು ಮುಚ್ಚಿಸುವಂತಿತ್ತು. 'ನನ್ನ ಮಗನ ಮೆಲೆ ಕಲ್ಲು ಹೊಡೆಸಿದೆ ಏನೋ ಹೆಣ್ಣಿಗ ಸೂಳೇಮಗನೆ'–ಎನ್ನುತ್ತಾ ಅವರು, ಕೈಲಿದ್ದ ಮಡಕೆ೦ಯನ್ನು ಎತ್ತಿ ಶ್ಯಾಮಣ್ಣನವರ ತಲೆ೦ಯಮೇಲೆ ಅಭಿಷೇಕ ಮಾಡಿದಂತೆ ತಪತಪನೆ ಸುರಿದುಬಿಟ್ಟರು. ವಾಸನೆ, ಬಣ್ಣಗಳಲ್ಲಿ೦ಯೇ ಸುತ್ತಮುತ್ತ ಇದ್ದವರಿಗೆಲ್ಲ ಗೊತ್ತಾಯಿತು: ಅದು ಮನುಷ್ಯರ ಅಮೇಧ್ಯ. ಅಷ್ಟೊಂದು ಪ್ರಮಾಣದ ಅದನ್ನು ಅವರು ಎಲ್ಲಿ, ಹೇಗೆ ಸಂಗ್ರಹಿಸಿದ್ದರೋ, ಅದೆಲ್ಲವನ್ನೂ ಹೇಗೆ ಒಂದೇ ಹದದಲ್ಲಿ ಕಲಸಿ ಇಟ್ಟು ತಂದರೋ, ಅವರು ಹನ್ನೆರಡು ವರ್ಷ ಪೂಜಿಸಿದ ಕಾಶಿ ವಿಶ್ವೇಶ್ವರನಿಗೇ ಗೊತ್ತು. ಎಲ್ಲವನ್ನೂ ಸುರಿದಮೇಲೆ ಶ್ಯಾಮಣ್ಣನವರ ಬಿಳಿ೦ಯ ಅಂಗಿ೦ಯ ಮೇಲೆ ಸುತ್ತಲೂ ಇಳಿದು ಮೆತ್ತಿಕೊಂಡಿತು. ಮಡಕೆ೦ಯನ್ನು ತಮ್ಮ ವೈರಿ೦ಯ ತಲೆ೦ಯ ಮೇಲೆ ದಬ್ಬ ಬಡಿದು ಕಂಠೀಜೋಯಿಸರು ಜನರ ಮಧ್ಯದಲ್ಲಿ ಮರೆ೦ಯಾಗಿ ಹೋದರು.

– 4 –

ಮತ್ತೆ ಒಂದು ತಿಂಗಳು ಕಂಠೀಜೋಯಿಸರು ನಾಗಲಾಪುರದಲ್ಲಿ ಇರಲಿಲ್ಲ. ೦ಯಾವ ಊರಿನಲ್ಲಿದ್ದರೋ ೦ಯಾರಿಗೂ ಗೊತ್ತಿಲ್ಲ. ಕಲ್ಲೇಶ ಮೂರು ನಾಲ್ಕು ದಿನಕ್ಕೆ ಒಂದು ಸಲದಂತೆ ೦ಯಾವುದೋ ಊರಿಗೆ ಹೋಗಿ ಬರುತ್ತಿದ್ದ. ಅಪ್ಪನನ್ನು ಕಂಡು ಇಲ್ಲಿ೦ಯ ವಿದ್ಯಮಾನಗಳನ್ನು ತಿಳಿಸುವುದಕ್ಕೇ ಅವನು ಹೋಗುತ್ತಿದ್ದಾನೆಂದು ಎಷ್ಟೋ ಜನ ಊಹಿಸಿದರು. ಅವನು ಹೋಗುತ್ತಿದ್ದುದು ರಾತ್ರಿ೦ಯ ವೇಳೆ೦ಯಾಗಿದ್ದುದರಿಂದ ೦ಯಾರೂ ಅವನನ್ನು ಹಿಂಬಾಲಿಸುವ ಧೈ೦ರ್ಯ ಮಾಡಲಿಲ್ಲ. ಹಿಂತಿರುಗುವಾಗ ಹಗಲು ಹೊತ್ತೇ ಬರುತ್ತಿದ್ದ. ಅದನ್ನು ತಿಳಿದುಕೊಂಡು ೦ಯಾರಿಗೆ ಏನಾಗಬೇಕು? ಕಳೆದ ಹನ್ನೆರಡು ವರ್ಷಗಳ ಅನುಪಸ್ಥಿತಿ೦ಯಲ್ಲಿ ಕಂಠೀಜೋಯಿಸರೆಂದರೆ ಒಬ್ಬ ಪುರಾಣಪುರುಷರೇ ಆಗಿಹೋಗಿದ್ದರು. ಈಗ ಊರಿಗೆ ಬಂದು ಗಂಗಾ ಸಮಾರಾಧನೆ ಮಾಡಿದ ಮೂರು ದಿನಕ್ಕೇ ಅವರು ಆ ಸುತ್ತಿನಲ್ಲಿ ಎಲ್ಲೂ ೦ಯಾರೂ ಮಾಡದಿದ್ದ ಒಂದು ಸಾಹಸವನ್ನೇ ಮಾಡಿಬಿಟ್ಟಿದ್ದಾರೆ. ಶ್ಯಾಮಣ್ಣ ಆ ಕ್ಷಣವೇ ಮನೆಗೆ ಓಡಿಹೋಗಿ ಬಚ್ಚಲಿಗೆ ಇಳಿದು ಸೀಗೆಪುಡಿ ಹಾಕಿ ತೆಂಗಿನ ಗುಂಜಿನಿಂದ ತಿಕ್ಕಿ ತಲೆ ಮೈ ಕೈ೦ಯನ್ನು ತೊಳೆದುಕೊಂಡರು. ಅವರಿಗೆ ಆದದ್ದನ್ನು ವಾಸ್ತವವಾಗಿ ಕಂಡವರು ಹತ್ತಿಪ್ಪತ್ತು ಮಂದಿ ಮಾತ್ರ. ಮನೆಗೆ ಓಡಿಬರುವಾಗ ಅವರ ಗುರುತು ಸಿಕ್ಕಿದುದು ಎಲ್ಲೋ ಮೂರು ನಾಲ್ಕು ಜನಕ್ಕೆ. ಆದರೆ ಊರಿನವರೆಲ್ಲರೂ ತಾವೇ ಸ್ವತಃ ಕಣ್ಣುಗಳಿಂದ ನೋಡಿದೆವು ಎಂದು ಕಂಠೀಜೋಯಿಸರು ಸುರಿದದ್ದು, ಶ್ಯಾಮಣ್ಣನವರ ಬಾಯಿಗೆ ಸಹ ಅದು ಹೋದದ್ದು, ಮೈ ಕೈ ಮೇಲೆಲ್ಲಾ ಅಲಾಬಿ ಹಬ್ಬದ ಹುಲಿ೦ಯ ಬಣ್ಣದಂತೆ ಹರಿದದ್ದು ಮೊದಲಾಗಿ ರಂಗುರಂಗಾಗಿ ವರ್ಣಿಸುತ್ತಿದ್ದರು. ಕಂಠೀಜೋಯಿಸನ ಮೇಲೆ ಕೇಸು ಹಾಕಲು ಸಾಧ್ಯವಿಲ್ಲವೆ?–ಎಂದು ಶ್ಯಾಮಣ್ಣನವರು ೦ಯೋಚಿಸಿದರು. ಆದರೆ ಆ ಕೆಲಸ ನಡೆದಾಗ ಪ್ರತ್ಯಕ್ಷವಾಗಿ ಅಲ್ಲಿ ಇದ್ದು ಕಂಡವರ ೦ಯಾರ ನೆನಪೂ ಅವರಿಗೆ ಸ್ಪಷ್ಟವಾಗಿ ಇಲ್ಲ. 'ಅವನು ನಂಗೆ ಹೀಗೆ ಮಾಡಿದ'–ಅಂತ ತಾವೇ ಹೋಗಿ ಹೇಳಿಕೊಳ್ಳಲು ನಾಚಿಕೆ ಬೇರೆ. ೦ಯಾರೂ ಅದನ್ನು ಅವರ ಎದುರಿಗಂತೂ ಮಾತನಾಡುತ್ತಿರಲಿಲ್ಲ. ತಾವಾಗಿ೦ಯೇ ಕೆದಕಿ ಇನ್ನೂ ಪ್ರಚುರ ಮಾಡುವುದು ವಿವೇಕವಲ್ಲವೆಂದು ೦ಯೋಚಿಸಿದರು. ಅಲ್ಲದೆ ಹಿಂದೊಮ್ಮೆ ಈ ಕಂಠೀಜೋಯಿಸನ ಮೇಲೆ ಕೇಸು ಹೊತ್ತು ನರಸೀಪುರಕ್ಕೆ ತಿರುಗಿ, ಕೇಸು ಖುಲಾಸೆ೦ಯೂ ಆದಮೇಲೆ ಅವನ ಕೈಲಿ ಪೆಟ್ಟು ತಿಂದಿದ್ದುದೂ ನೆನಪಾಯಿತು.
'ಆ ಮುಂಡೇಮಗ ಸತ್ತುಹೋಗಿದಾನೆ ಅಂತ ತಿಳ್ಕಂಡಿದ್ದೆ. ಅವನ ಮಗ ಕಲ್ಲೇಶನ ಹೆಂಡ್ತೀನೂ ದೂರವೇ ಇಟ್ಟಿದ್ರೆ ಏನೂ ಆಗ್ತಿರ್ಲಿಲ್ಲ. ಈ ಮುಪ್ಪಿನ ವ೦ಯಸ್ಸಿನಲ್ಲಿ ಇನ್ನೆಂಥ ತಾಪತ್ರ೦ಯಕ್ಕೆ ಸಿಕ್ಕಿಕೊಳ್ಲಿ?'–ಎಂದು

0ಯೋಚಿಸುವಾಗ ಅವರ ಮನಸ್ಸನ್ನು ಇನ್ನೂ ಒಂದು ಅಂಶವು ಕೊರೆ0ಯುತ್ತಿತ್ತು: ಕಂಠೀಜೋಯಿಸನ ಮಗ ಕಲ್ಲೇಶ ಅಪ್ಪನ ಹಾಗೆ ಖದೀಮ. ಕಷ್ಟಕಾಲ ಅಂದ್ರೆ ತಂತ್ರಾನೂ ಮಾಡ್ತಾನೆ. ಧೈರ್ಯವೂ ಇದೆ. ನನ್ನ ಮಗ ನಂಜುಂಡ ರಣಹೇಡಿ ಮುಂಡೇದು. ಮೇಲೆ ಬಿದ್ದು ನಾನು ಜಗಳ ಕಾ0ಯೂ ಕಾಲ ಮುಗೀತು.

ಒಂದು ತಿಂಗಳ ನಂತರ ಕಂಠೀಜೋಯಿಸರು ಊರಿಗೆ ಬಂದರು. ಅವರನ್ನು 0ಯಾರೂ ಆ ವಿಷ0ಯವಾಗಿ ನೇರವಾಗಿ ಕೇಳಲಿಲ್ಲ. ಅವರೂ ಮಾತನಾಡಲಿಲ್ಲ. ಕೊರಳಿಗೆ ಜಪದ ಸರ ಹಾಕಿಕೊಂಡು, ಹಣೆಗೆ ತ್ರಿಪುಂಡ್ರವಿಟ್ಟು ಬೀದಿ0ಯಲ್ಲಿ ಹೊರಟರೆ ಜನ ಅವರನ್ನು ಗೌರವದಿಂದಲೇ ಕಂಡು ದೂರ ಬಳಸಿ ಹೋಗುತ್ತಿದ್ದರು.

## ಅಧ್ಯಾ0ಯ 12

– 1 –

ಆ ವರ್ಷ ನಿಧಾನವಾಗಿ ಮಳೆ ಬಂದರೂ ರಾಗಿ0ಯ ಬೆಳೆ0ಯಾಯಿತು. 0ಯೂರೋಪು ಖಂಡದಲ್ಲಿ ಇಂಗ್ಲಿಷರಿಗೂ ಜರ್ಮನಿ0ಯವರಿಗೂ ಜೋರಿನಿಂದ 0ಯುದ್ಧ ನಡೆ0ಯುತ್ತಿದೆ0ಯಂತೆ. ಇತ್ತ ಬರ್ಮಾ ದೇಶದ ಕಡೆ0ಯೂ ಕಾಳಗವಾಗುತ್ತಿದೆ0ಯಂತೆ. ಸರ್ಕಾರ ಆಹಾರ ಧಾನ್ಯಗಳನ್ನು ರೇಷನ್ ಮಾಡಿದೆ0ಯಂತೆ. ಒಂದು ದಿನ ಊರಿಗೆ ಬಂದ ಶೇಕ್ದಾರರು ರೇಷನ್ ಎಂದರೆ ಏನು ಎಂಬುದನ್ನು ನಂಜಮ್ಮನಿಗೆ ವಿವರಿಸಿ, ಮುಂದಿನ ಸಲದಿಂದ ಪಹಣಿ ಬರೆ0ಯುವಾಗ ಬೆಳೆ0ಯ ಅಂದಾಜು ಹಾಕುವ ಕ್ರಮವನ್ನೂ ಹೇಳಿಕೊಟ್ಟರು. ಒಂದು ಎಕರೆ ಹೊಲದಲ್ಲಿ ಆರು ಖಂಡುಗ ರಾಗಿ ಬೆಳೆ0ಯುವಂತೆ ಕಂಡರೆ ಹದಿನಾರಾಣೆ ಎಂದು. ನಾಲ್ಕೂವರೆ ಖಂಡುಗವೆಂದರೆ ಹನ್ನೆರಡಾಣೆ. ಮೂರು ಖಂಡುಗಕ್ಕೆ ಎಂಟಾಣೆ. ಹೀಗೆ ರಾಗಿ, ಬತ್ತ, ಹುರುಳಿ, ಅವರೆ, ಮೊದಲಾದ ಎಲ್ಲ ಬೆಳೆಗಳ ಅಂದಾಜನ್ನೂ ಹಾಕಬೇಕು. ಸರ್ಕಾರದವರು ಅದರ ಪ್ರಕಾರ ಪ್ರತಿ0ಯೊಬ್ಬ ರೈತನ ಬೆಳೆ0ಯನ್ನೂ ನಿರ್ಧರಿಸಿ, ಖಾನೇಷುಮಾರಿ ಲೆಕ್ಕದಂತೆ ಅವನ ಮನೆ ಖರ್ಚನ್ನು ಕಳೆದು, ಬೀಜಕ್ಕೆ ಬಿಟ್ಟು, ಉಳಿದುದನ್ನು ಸರ್ಕಾರೀ ಧಾರಣೆ0ಯಲ್ಲಿ ಕೊಂಡುಕೊಳ್ಳುತ್ತಾರೆ. ಎಂದರೆ ಲೆಕ್ಕ ಬರೆ0ಯುವ ಶ್ಯಾನುಭೋಗರಿಗೆ ಹೊಸ ಅಧಿಕಾರ ಬಂತು.

ನಂಜಮ್ಮ ಒಂದು ದಿನ ಕುರುಬರಹಳ್ಳಿಗೆ ಹೋಗಿ ಹೊಸ ಲೆಕ್ಕದ ವಿಷ0ಯವನ್ನು ಗುಂಡೇಗೌಡರಿಗೆ ಹೇಳಿದಳು. ಅವರು–'ನಾವು ಕಷ್ಟಬಿದ್ದು ಬೆಳೆದದ್ದ ಆ ನಮ್ಕಿಗೆ ಕೊಡಬೇಕಾ?'ಎಂದು ಕೇಳಿದರು.

'ಸರ್ಕಾರೀ ಕಾನೂನೇ ಮಾಡಿದಾರೆ. ಇಲ್ದೆ ಇದ್ರೆ ಪೋಲೀಸ್ನೋರು ಬತ್ತಾರಂತೆ.'

0ಯಾರಿಗೆ 0ಯಾವ ತೊಂದರೆ0ಯಾದರೂ ಕುರುಬರಹಳ್ಳಿಗೆ ಹಾನಿ ತಟ್ಟಕೂಡದೆಂದು ನಂಜಮ್ಮನ ಆಶೆ0ಯಾಗಿತ್ತು. ಊರಿಗೆ ಹಾನಿ0ಯಾದರೆ ಗುಂಡೇಗೌಡರ ಪಟೇಲಿಕೆಗೂ ಅಗೌರವ. ತನ್ನ ಸಂಸಾರವನ್ನು ಸಾಕಿದ ಗ್ರಾಮಕ್ಕೆ ತೊಂದರೆ0ಯಾಗುವುದನ್ನು ಅವಳು ಹೇಗೆ ಸಹಿಸಿ0ಯಾಳು? ಆದರೆ ಊರಿನವರೆಲ್ಲ ಕುರಿಮಂದೆ0ಯುಳ್ಳವರು. ಪ್ರತಿವರ್ಷ ಹೊಲಕ್ಕೆ ಮಂದೆ ಕಟ್ಟಿಸುವುದರಿಂದ ಬಹು ಜನ ಎಕರೆಗೆ ಆರು ಖಂಡುಗಕ್ಕಿಂತ ಹೆಚ್ಚು ಬೆಳೆ0ಯುತ್ತಾರೆ. ತಾನು ಅಂದಾಜನ್ನು ಕಡಿಮೆ ಬರೆ0ಯಬೇಕು. ಆದರೆ ಶ್ಯಾನುಭೋಗರ ಅಂದಾಜನ್ನು ಪರಿಶೀಲಿಸಲು ಅಮಲ್ದಾರ ದಣಿಗಳೇ ಬಂದು ಹೊಲಗಳನ್ನು ಪರೀಕ್ಷಿಸುತ್ತಾರೆಂದು ಶೇಕ್ದಾರರು ಹೇಳಿದ್ದರು.

ನಂಜಮ್ಮ ಗುಂಡೇಗೌಡರು ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದರು: ಸಾಮಾನ್ಯವಾಗಿ ಎಂಟು ಆಣೆ, ಒಂಬತ್ತು ಆಣೆ ಬೆಳೆ ಎಂದು ಇವಳು ಪಹಣಿ0ಯಲ್ಲಿ ಅಂದಾಜು ಬರೆ0ಯುವುದು. ಗ್ರಾಮದ ಒಟ್ಟಿನಲ್ಲಿ ನೂರು ರೂಪಾಯಿಗಳಷ್ಟು ಎತ್ತಿ ಶೇಕ್ದಾರರಿಗೂ ಮೇಲಿನವರಿಗೂ ಕೊಟ್ಟು ಸರಿಮಾಡಿಕೊಳ್ಳುವುದು. ಸರ್ಕಾರದವರು ದಿನಸಿ ಎತ್ತಲು ಬಂದಾಗ ಸರ್ಕಾರೀ ಬೆಳೆ0ಯಲ್ಲಿ0ಯೇ ಒಟ್ಟು ಹತ್ತು ಹನ್ನೆರಡು ಖಂಡುಗ ಕೊಡುವುದು.

ಆ ವರ್ಷ ಹಾಗೆ0ಯೇ ನಡೆಯಿತು. ನೂರು ರೂಪಾಯಿ ನಗದು, ಹನ್ನೆರಡು ಖಂಡುಗ ಕ್ರ0ಯಕ್ಕೆ ರಾಗಿ0ಯನ್ನು ಕೊಟ್ಟು ನಲವತ್ತು ಒಕ್ಕಲಿನ ಕುರುಬರಹಳ್ಳಿ0ಯವರು ಪಾರಾದರು. ಈ ಮೊದಲೂ ಆ ಊರಿನವರು ಶ್ಯಾನುಭೋಗರ ಮಸಿ ಕಾಣಿಕೆ ಕೊಡುತ್ತಿದ್ದರು. ಈಗ ಅದರ ಜೊತೆಗೆ ಮನೆಗೆ ಹತ್ತು ಸೇರು ರಾಗಿ0ಯಂತೆ ಎತ್ತಿಕೊಡಲು ಪ್ರಾರಂಭಿಸಿದರು. ಆಹಾರ ನಿ0ಯಂತ್ರಣದ ಆಜ್ಞೆಯಿಂದ ಪೆಟ್ಟು ಬಿದ್ದುದು ರಾಮಸಂದ್ರ ಮತ್ತು ಲಿಂಗಾಪುರಗಳಿಗೆ. ಬೆಳೆ0ಯ ಅಂದಾಜು ಹಾಕುವುದು ಎಂದರೇನೆಂಬುದು ರಾಮಸಂದ್ರದ ಪಟೇಲ ಶಿವೇಗೌಡನಿಗಾಗಲಿ, ಲಿಂಗಾಪುರದ ಪಟೇಲ ಪುರದಪ್ಪನಿಗಾಗಲಿ ಗೊತ್ತಿರಲಿಲ್ಲ. ನಂಜಮ್ಮ ಈ ಎರಡು ಊರುಗಳ ಪಹಣಿ0ಯನ್ನೂ ಇದ್ದುದು ಇದ್ದಹಾಗೇ ಬರೆದಿದ್ದಳು. ಸುಗ್ಗಿ0ಯ ಕಾಲ ಮುಗಿದುದೇ ತಡ, ಒಂದು ದಿನ ಶೇಕ್ದಾರರು, ಅವರ ಇಬ್ಬರ ಜವಾನರು, ಇಬ್ಬರು ಪೋಲೀಸ್ ಕಾನಿಸ್ಟೇಬಲುಗಳು ಊರಿಗೆ ಬಂದರು. ಶೇಕ್ದಾರರ ನಿರ್ದೇಶನದಲ್ಲಿ ಜವಾನರು ಪ್ರತಿ0ಯೊಂದು ಮನೆಗೂ ನುಗ್ಗಿದರು. ಅಟ್ಟ, ಪೆಟ್ಟಿ, ಕೊಮ್ಮೆ, ಹಗೇವು, ಮಡಕೆ ಗುಡಾಣಗಳಾದಿ0ಯಾಗಿ ಪ್ರತಿ0ಯೊಂದನ್ನೂ ಶೋಧಿಸಿದರು. ಉದ್ದನೆ0ಯ ಬಿದಿರಿನ ಕೋಲನ್ನು ಪೆಟ್ಟಿ0ಯ ರಾಗಿ0ಯ ಒಳಕ್ಕೆ ಹೂಳಿ ಅದರ ಉದ್ದ ಅಗಲಗಳನ್ನು ಅಂದಾಜು ಮಾಡುವುದು. ಮನೆ0ಯಲ್ಲಿ ಇಷ್ಟೇ

ದಿನಸಿ ಇದೆ ಎಂದು ಊಹೆಯಿಂದಲೇ ಲೆಕ್ಕ ಮಾಡಿ, ಮನಸ್ಸಿಗೆ ಬಂದಷ್ಟನ್ನು ಅಳೆದು ಮೂಟೆ ಕಟ್ಟಿಸಿ ತಂದು ಮಾದೇವಯ್ಯನವರ ಗುಡಿಯ ಮುಂದೆ ರಾಶಿ ಹಾಕುವುದು. ಅಟ್ಟಕ್ಕೆ ಹತ್ತಿದ ಶೇಕ್‌ದಾರರ ಜವಾನ ಮನೆಯ ಯಜಮಾನನಿಂದ ಅಲ್ಲಿಯೇ ಇಪ್ಪತ್ತು, ನಲವತ್ತು, ಐವತ್ತು, ಹೀಗೆ ರೂಪಾಯಿ ಇಸಿದುಕೊಂಡು ಕೆಳಗೆ ಬಂದು, 'ಒಟ್ಟು ಎಲ್ಡೇ ಪಲ್ಲ ಸಾರ್' ಎಂದು ಹೇಳುವುದೂ ನಡೆಯಿತು. ಅನಂತರ ಅದರಲ್ಲಿ ಶೇಕ್‌ದಾರರಿಗೆ ಅವನು ಕೊಟ್ಟಿದ್ದು, ತಾನು ನುಂಗಿದ್ದೇ ಲೆಕ್ಕ. ತಮಗೆ ಬಂದದ್ದರಲ್ಲಿ ಶೇಕ್‌ದಾರರು ಪೋಲೀಸಿನವರಿಗೂ ಕಾಣಿಕೆ ಕೊಡಬೇಕಾಗಿತ್ತು.

ಒಟ್ಟಿನಲ್ಲಿ ಒಂದೇ ದಿನ ರಾಮಸಂದ್ರದಿಂದ ನಾನೂರು, ಲಿಂಗಾಪುರದಿಂದ ನೂರು ಪಲ್ಲ ರಾಗಿ ತುಂಬಿಸಿಕೊಂಡು ಶೇಕ್‌ದಾರರು ಹೊರಟುಹೋದರು. ಪಟೇಲ ಶ್ಯಾನುಭೋಗರ ಸಮ್ಮುಖದಲ್ಲಿ ಅವರು ಕೊಡುತ್ತಿದ್ದ ರಸೀತಿಯನ್ನು ಹಾಜರುಪಡಿಸಿ, ಸಂಬಂಧಿಸಿದ ಅಧಿಕಾರಿಗಳಿಗೆ ಸಂಭಾವನೆ ಕೊಟ್ಟು ರೈತರು ಅದರ ಹಣ ಪಡೆಯಬೇಕಾಗಿತ್ತು. ರಾಗಿ ಅಳೆಯುತ್ತಿದ್ದ ವರಸೆಯಲ್ಲಿ ಪಲ್ಲಕ್ಕೆ ಏಳು ಎಂಟು ಸೇರು ಹೆಚ್ಚು ಎತ್ತಿ ಬಿಡುತ್ತಿದ್ದರು.

ಇದಾದ ಹದಿನೈದು ದಿನದ ನಂತರ ಒಂದು ದಿನ ಪಟೇಲ ಶಿವೇಗೌಡ ಕುಳುವಾಡಿಯ ಕೈಲಿ ನಂಜಮ್ಮನಿಗೆ ಹೇಳಿಕಳಿಸಿದ. ಪಟೇಲ ಹೇಳಿಕಳಿಸಿದಾಗ ಶ್ಯಾನುಭೋಗ ಹೋಗಬೇಕೋ, ಶ್ಯಾನುಭೋಗ ಹೇಳಿಕಳಿಸಿದಾಗ ಪಟೇಲ ಬರಬೇಕೋ ಎಂಬುದು ಅವರವರ ಆಸ್ತಿ ಪಾಸ್ತಿ, ಮತ್ತು ದರ್ಪಗಳನ್ನವಲಂಬಿಸಿರುತ್ತದೆ. ಇದುವರೆಗೆ ಶಿವೇಗೌಡ ಹೇಳಿಕಳಿಸುವುದು, ಚೆನ್ನಿಗರಾಯರು ಹೋಗುವುದೇ ರೂಢಿಯಾಗಿತ್ತು. ಆದರೆ ಈ ದಿನ ಅವನು ನಂಜಮ್ಮನಿಗೆ ಹೇಳಿಕಳುಹಿಸಿದ್ದ.ಅವಳಿಗೆ ರೇಗಿತು. ಆದರೆ ತಾಳ್ಮೆ ಕಳೆದುಕೊಳ್ಳದೆ ಕುಳವಾಡಿಗೆ ಹೇಳಿದಳು: 'ಏನಾರ ಕೆಲ್ಸವಿದ್ರೆ ಅವ್ರಿಗೇ ಇಲ್ಲಿ ಬಂದು ಹೋಗಾಕ್ ಹೇಳು.'

ಸ್ವಲ್ಪ ಹೊತ್ತಿನಲ್ಲಿ ಪಟೇಲನೇ ಬಂದ. ಅವನ ಹಿಂದೆಯೇ ಬಂದ ಕುಳವಾಡಿ ಬಾಗಿಲ ಹತ್ತಿರ ನಿಂತುಕೊಂಡ. ಕಂಬದ ಹತ್ತಿರ ಹಾಕಿದ್ದ ಈಚಲು ಚಾಪೆಯ ಮೇಲೆ ಕುಳಿತ ಗೌಡ, ಹೇಗೆ ಮಾತು ಪ್ರಾರಂಭಿಸಬೇಕೆಂಬುದು ತಿಳಿಯದೆ ಐದು ನಿಮಿಷ ತಡಕಾಡುತ್ತಿದ್ದು ನಂತರ, 'ಕುರುಬರಹಳ್ಳೀಲಿ ಹನ್ನೆಲ್ಡು ಕಂಡುಗ ತಗಂಡು ಓದ್ರಂತೆ. ನಮ್ಮೂರ್ನಾಗೆ ನಾನೂರು ಪಲ್ಲ ಹ್ಯಂಗೆ ಕೊಂಡೊಯ್ದ್ರು?'

'ಅದು ನಂಗೇನು ಗೊತ್ತು ಪಟೇಲ್ರೇ?'

'ಏನು ಗೊತ್ತು ಅಂತ ನೀನು ಏಳ್ಬೇಕು ಕಣಮ್ಮ. ಲ್ಯಕ್ಕ ಬರೆಯಾಕುಲ್ವ ನೀನು?'

'ಪಟೇಲ್ರೇ, ನೀನು ತಾನು ಅಂತ ಮಾತಾಡುಕ್ಕೆ ನಾನೇನು ನಿಮ್ಮನೇಲಿ ಭಿಕ್ಷೆ ಕೇಳುಕ್ಕೆ ಬಂದಿಲ್ಲ. ಸ್ವಲ್ಪ ಮರ್ಯಾದೆ ಇಟ್ಟು ಮಾತಾಡಿ'–ಎಂದು ಹೇಳಿದ ನಂಜಮ್ಮ ಅಡಿಗೆ ಮನೆಗೆ ಹೊರಟುಹೋದಳು.

'ಚೆನ್ನಿಗರಾಯನ್ನ ಉಟ್ದಾಗಿನಿಂದ ನಾನು ಬಲ್ಲೆ.'

'ಹಾಗಿದ್ರೆ ಅವ್ರುನ್ನೇ ಕೇಳಿ. ನಿಮ್ಮನೆ ಹತ್ರುಕ್ಕೆ ಬರಬೇಕು ಅಂತ ಕುಳವಾಡಿ ಕೈಲಿ ಹೇಳ್ಕಳಿಸಿದ್ರಲಾ, ನಿಮ್ಮ ಪಟೇಲಿಕೆ ಅಂದ್ರೆ ದೌಲತ್ತು ಅಂತ ತಿಳ್ಕಂಡ್ರಾ?'

ಶಿವೇಗೌಡನಿಗೆ ಮುಖಕ್ಕೆ ಹೊಡೆದಂತೆ ಆಯಿತು. ಅವನು ಎಂದೂ ಈ ಹೆಂಗಸಿನೊಡನೆ ನೇರವಾಗಿ ಮಾತನಾಡಿರಲಿಲ್ಲ. ಮನೆ ಮಠಗಳನ್ನೆಲ್ಲ ಕಳೆದುಕೊಂಡು ಎಲೆ ಹಚ್ಚಿ ಮಾರಿ, ತರಕಾರಿ ಬೆಳೆದು ತಿಂದು ಗಂಡನ ಶ್ಯಾನುಭೋಗಿಕೆ ಲೆಕ್ಕ ಬರೆಯುತ್ತಿದ್ದ ಇವಳ ಗತ್ತನ್ನು ಕಂಡ ಅವನಿಗೆ ಮೈಯುರಿಯಿತು.

'ನಮ್ಮೂರ ಪಾಣಿ ಬರೆಯೂವಾಗ ಯಾಕಮ್ಮ ಕಮ್ಮಿ ಅಂದಾಜು ಆಕ್ಲಿಲ್ಲ?'

'ಅದುನ್ನ ಕೇಳುಕ್ಕೆ ನೀವ್ಯಾರು?'–ನಂಜಮ್ಮ ಒಳಗಿನಿಂದಲೇ ಹೇಳಿದಳು.

'ಎಂಗ್ಸು ಸರ್ಕಾರಿ ಲ್ಯಕ್ಕ ಬರೀಬೌದಾ ಅಂತ ನಾನು ಸರ್ಕಾರಾನೇ ಕೇಳ್ತೀನಿ'–ಎಂದು ಶಿವೇಗೌಡ ಎದ್ದುಹೋದ. ಇಡೀ ಊರಿಗೇ ದೊರೆಯಂತೆ ಮೆರೆಯುತ್ತಿದ್ದ ಅವನಿಗೆ ಈ ದಿನ ಪರಾಭವದ ಅನುಭವವಾಯಿತು. ಅದೂ, ಇಷ್ಟುದಿನ ತಾನು ಧಿಂ ಎಂದು ದರ್ಪಮಾಡುತ್ತಿದ್ದ ಕುಳವಾಡಿಯ ಎದುರಿನಲ್ಲಿಯೇ ಈ ಹೆಂಗಸು ಹೀಗೆ ಮಾತನಾಡಿ ಕಳಿಸಿದ್ದಳು. ತನ್ನ ಭಾವಮೈದ ಸಿವಲಿಂಗನನ್ನೂ ಜೊತೆಗೆ ಕರೆದುಕೊಂಡು ಅವನು ನೇರವಾಗಿ ಕಂಬನಕೆರೆಗೆ ಹೋಗಿ ಶೇಕ್‌ದಾರರನ್ನು ಕಂಡು, ಹೆಂಗಸು ಸರ್ಕಾರೀ ಲೆಕ್ಕ ಬರೆಯಬಹುದೇ ಎಂಬ ಅಂಶವನ್ನು ಕೇಳಿದ. ಶೇಕ್‌ದಾರರಿಗೆ ಈ ಪ್ರಶ್ನೆಯ ಹಿಂದು ಮುಂದುಗಳೆಲ್ಲ ಗೊತ್ತು. ಆ ಹೋಬಳಿಗೆ ಅವರು ಬಂದು ಆರು ತಿಂಗಳು ಮಾತ್ರವಾಗಿದ್ದರೂ, ಹಿಂದಿದ್ದವರು ಇವರಿಗೆ ಪ್ರತಿಯೊಂದು ಫಿರ್ಕಾದ ಒಳವಿಷಯಗಳನ್ನೆಲ್ಲ ತಿಳಿಸಿ ಹೋಗಿದ್ದರು. ಉಪಾಯವಾಗಿ ಮಾತನಾಡಿ ಅವರು, ಶಿವೇಗೌಡನ ಆಕ್ಷೇಪದ ಹಿನ್ನೆಲೆಯನ್ನು ಅವನ ಬಾಯಿಂದಲೇ ಹೊರಡಿಸಿದರು. ಶ್ಯಾನುಭೋಗರ ಪಹಣಿಯಲ್ಲಿ ಹೆಚ್ಚು ಅಂದಾಜು ಬರೆದರೆ ಅವರಿಗೂ ಲಾಭವಿತ್ತು; ಕಡಿಮೆ ಬರೆಯುವಾಗಲೂ ಲಾಭವಿತ್ತು.

ಆದುದರಿಂದ ಶೇಕ್‌ದಾರರು ಶ್ಯಾನುಭೋಗರನ್ನು ಯಾಕೆ ಬಿಟ್ಟುಕೊಟ್ಟಾರು? ಅವರು ಹೇಳಿದರು: 'ನೋಡಿ ಶಿವೇಗೌಡ್ರೇ, ಆಯಮ್ಮ ಲೆಕ್ಕ ಬರೀತಾರೆ ಅಂತ ಡಿಪ್ಟಿಕಮಿಶನರ್ ಸಾಹೇಬ್ರಿಗೂ ಗೊತ್ತು. ಇಡೀ ತುಮಕೂರು ಡಿಸ್ಟ್ರಿಕ್ಟಿನಲ್ಲೇ ಅಷ್ಟು ಚೆನ್ನಾಗಿ ಯಾರೂ ಬರೆಯುಲ್ಲ ಅಂತ ಅವ್ರೇ ಹುಜೂರ್ ಜಮಾಬಂದೀಲಿ ಹೇಳಿದಾರೆ.

ಹೆಂಗಸು ಲೆಕ್ಕ ಬರೀಬ್ಯಾಡ್ದು ಅಂತ ಸರ್ಕಾರೀ ರೂಲು ಏನೂ ಇಲ್ಲ.'
ಸೋತ ಮುಖ ಹಾಕಿಕೊಂಡು ಶಿವೇಗೌಡ ತನ್ನ ಭಾಮೈದನೊಡನೆ ಊರಿಗೆ ಹಿಂತಿರುಗಿದ. ದಾರಿ೦ಯಲ್ಲಿ ಶಿವೇಗೌಡ ಭಾಮೈದನನ್ನು ಕೇಳಿದ: 'ಆ ನನ್ ಮಗ ಶೇಕ್‌ದಾರ ಊರಿಗೆ ಬಂದಾಗ ಈ ಬೋಸುಡಿ ಮುಂಡೆ ಉಪ್ಪಿಟ್ಟು ಕಾಫಿ ಮಾಡಿ ಕೊಡ್ತಾಳೆ ಅಂತ ಹೆಂಗ್ ವೈಸ್ಕಂಡ ನೋಡ್ದಾ ತಮ್ಮ೦ಯ್ಯ?'
'ಬರೀ ಉಪ್ಪಿಟ್ಟು ಕಾಫಿಗೆ ಹಿಂಗ್ ವೈಸ್ಕತ್ತಾನಾ ತಗಾ ಮಾವ೦ಯ್ಯ? ಅವ್ನು ಬಂದಾಗೆಲ್ಲ ಇವ್ಳು ಅವನ ತಾವ ಆಸಿಗೆ ಆಸ್ಕಂಡು ಮನೀಕತ್ತಾಳೆ.'
'ಸೂಳೆಗಾರಮುಂಡೆ, ಸೂಳೆಗಾರಮುಂಡೆ'–ಎಂದುಕೊಂಡು ಶಿವೇಗೌಡ ಮನಸ್ಸಿಗೆ ಸಮಾಧಾನ ತಂದುಕೊಂಡ. ಆದರೆ ಊರಿಗೆ ಬಂದಮೇಲೆ ಇದೇ ಮಾತನ್ನು ಮತ್ತೆ ೦ಯಾರ ಎದುರಿಗಾದರೂ ಆಡಲು ಅವನಿಗಾಗಲಿ ಭಾಮೈದ ಸಿವಲಿಂಗನಿಗಾಗಲಿ ಧೈ೦ರ್ಯ ಬರಲಿಲ್ಲ.
ಶಿವೇಗೌಡನ ದರ್ಪವನ್ನು ಕಂಡು ನಂಜಮ್ಮ ಮನಸ್ಸಿನಲ್ಲಿ೦ಯೇ ತಿರಸ್ಕಾರ ಪಡುತ್ತಿದ್ದಳು. ಅದು ಬರೀ ಪಟೇಲಿಕೆ೦ಯ ದರ್ಪವಾಗಿರಲಿಲ್ಲ. ಕಾಶಿಂಬಡ್ಡಿ ಲೇವಾದೇವಿ೦ಯ ಹಣ ಇವನದ್ದೇ ಎಂಬುದು ಈಗ ಊರಿನವರಿಗೆಲ್ಲ ಗೊತ್ತು. ಪರಸ್ಥಳದವನಾದ ಕಾಶಿಂಬಡ್ಡಿಗೆ ಈ ಊರಿನಲ್ಲಿ ಸ್ಥಳ ಮಾಡಿ ಮನೆ ಮಠ ಕಟ್ಟಿ ಜಮೀನು ತೆಗೆದುಕೊಳ್ಳುವುದು ಬೇಕಾಗಿರಲಿಲ್ಲ. ತನ್ನ ಭಾಗದ ಬಡ್ಡಿ ಎಣಿಸಿಕೊಂಡು ಅವನು ತನ್ನ ದೇಶವಾದ ಮಲೆ೦ಯಾಳಕ್ಕೆ ಕಳಿಸಿಬಿಡುತ್ತಿದ್ದನಂತೆ. ಮೊದಮೊದಲು ಇವರಿಬ್ಬರ ಬಡ್ಡಿ೦ಯ ವ್ಯವಹಾರ ಚಿನ್ನ ಬೆಳ್ಳಿ ತಾಮ್ರ ಹಿತ್ತಾಳೆಗಳ ಅಡವಿನ ಮೇಲೆ ನಡೆ೦ಯುತ್ತಿತ್ತು. ಈ ಲೋಹಗಳನ್ನು ಕಳೆದುಕೊಂಡವರು ತಮ್ಮ ಚೂರು ಪಾರು ಭೂಮಿ೦ಯನ್ನು ಆಧಾರ ಬರೆದು ಕಾಸಿನ ಬಡ್ಡಿ ಲೆಕ್ಕದಲ್ಲಿ ಸಾಲ ತೆಗೆ೦ಯುತ್ತಿದ್ದರು. ಆಧಾರ ಶಿವೇಗೌಡನ ಹೆಸರಿಗೆ ಆಗುತ್ತಿತ್ತು. ಮೂರು ತಿಂಗಳ ಕಾಸಿನ ಬಡ್ಡಿ೦ಯನ್ನು ಅವರು ಮೊದಲೇ ಕಟಾಯಿಸಿ ಕೊಡುತ್ತಿದ್ದರು. ಎಂದರೆ ಒಂದು ಸಾವಿರ ರೂಪಾಯಿಗೆ ಆಧಾರ ಬರೆದರೆ ಹೆಚ್ಚು ಕಡಿಮೆ ಐನೂರು ಕೈಗೆ ಬರುತ್ತಿತ್ತು. ಇದರ ಮೇಲೆ ಶೇಕಡ ಹನ್ನೆರಡರಂತೆ ಒಂದು ಸಾವಿರಕ್ಕೆ ಕೋರ್ಟಿಗೆ ಹೋದರೂ ಲೆಕ್ಕ ಸಿಕ್ಕುತ್ತಿತ್ತು. ಕಳೆದ ಕೆಲವು ವರ್ಷಗಳಲ್ಲಿ, ಅದರಲ್ಲಿ೦ಯೂ ಮಳೆ ಬೆಳೆ ಹೋದ ಎರಡು ವರ್ಷಗಳಲ್ಲಿ ಶಿವೇಗೌಡ ಬಹಳ ಬೆಳೆದುಬಿಟ್ಟಿದ್ದ. ಅವನನ್ನು ತಗ್ಗಿಸುವುದು ಆ ಊರಿನಲ್ಲಿ ೦ಯಾರಿಗೂ ಸಾಧ್ಯವಾಗದ ಮಾತು. ನಂಜಮ್ಮನಿಗೂ ಅದು ಗೊತ್ತಿತ್ತು. ಆದರೆ ತನ್ನ ಮೇಲೂ ದೌಲತ್ತು ತೋರಿಸಲು ಬಂದಾಗ ಅವಳು, ಅವನಿಗೆ ತಕ್ಕ ಜವಾಬು ಕೊಟ್ಟು ಕಳಿಸಿದ್ದಳು. ಆಹಾರ ಇಲಾಖೆ೦ಯ ಕಂಟ್ರೋಲ್ ಬಂದಮೇಲೆ ಶೇಕ್‌ದಾರರು ಊರಿಗೆ ಆಗಾಗ್ಗೆ ಬರಬೇಕಾಗುತ್ತಿತ್ತು. ಅವನು ಅವರನ್ನು ಕಾಣಲು ಹೋಗಿದ್ದ ವಿಷ೦ಯವೂ ತಿಳಿದ ಮೇಲೆ, ಅವನಿಗೆ ತಕ್ಕ ಮ೦ರ್ಯಾದೆ ಆಯಿತು ಎಂದುಕೊಂಡು ಸುಮ್ಮನಾದಳು.

– 2–

ಮಳೆ ಬಂದ ಮೇಲೆ ಬೆಳೆ ಚೆನ್ನಾಗಿ ಆದರೂ ಧಾನ್ಯಗಳ ಬೆಲೆ ಮಾತ್ರ ಇಳಿ೦ಯಲಿಲ್ಲ. ೦ಯುದ್ಧ ನಡೆ೦ಯುತ್ತಲೇ ಇತ್ತು. ಶ್ಯಾನುಭೋಗಿಕೆ೦ಯ ಸಾಮಾನ್ಯ ಲೆಕ್ಕದ ಜೊತೆಗೆ ಆಹಾರ ನಿ೦ಯಂತ್ರಣ, ಬೆಳೆ, ಧಾನ್ಯಸಂಗ್ರಹ, ಮೊದಲಾದ ಲೆಕ್ಕಗಳೂ ಹೆಚ್ಚಾದವು. ಸರ್ಕಾರವು ಶ್ಯಾನುಭೋಗರಿಗೆಲ್ಲ ವಾರ್ಷಿಕ ಪೋಟಿಗೆ೦ಯ ಮೇಲೆ ಪ್ರತ್ಯೇಕ ಭತ್ಯೆ ಕೊಡಲು ಪ್ರಾರಂಭಿಸಿತು. ಈಗ ನಂಜಮ್ಮ ಶ್ಯಾನುಭೋಗಿಕೆ೦ಯ ಹಳೆ೦ಯ ಪೋಟಿಕೆ ನೂರ ಇಪ್ಪತ್ತಾದರೆ ಮೇಲೆ ಒಂದು ನೂರು ರೂಪಾಯಿ ಸಿಕ್ಕುತ್ತಿತ್ತು. ಹೆಚ್ಚಿನ ಲೆಕ್ಕ ಪತ್ರಗಳ ಗಡಿಬಿಡಿ೦ಯೇ ಆಗುತ್ತಿದ್ದುದರಿಂದ ಅವಳಿಗೆ ಎಲೆ ಹಚ್ಚಲು ಬಿಡುವಿರುತ್ತಿರಲಿಲ್ಲ. ಪಾರ್ವತಿ ಮನೆ ಕೆಲಸ ಮಾಡಿಕೊಂಡು, ಉಳಿದ ವೇಳೆ೦ಯಲ್ಲಿ ಹಿತ್ತಿಲಿನ ತರಕಾರಿಗೆ ನೀರು ಹು೦ಯ್ಯುತ್ತಿದ್ದಳು. ಗುಂಡೇಗೌಡರ ಮನೆಯಿಂದ ಹಿಂದಕ್ಕೆ ತಂದ ಹಸುಗಳ ಪಾಲನೆ೦ಯೂ ಅವಳದೇ. ರಾಮಣ್ಣ ಈಗ ಮಿಡ್ಲ್‌ಸ್ಕೂಲಿನ ಮೂರನೆ೦ಯ ಕ್ಲಾಸಿನಲ್ಲಿ, ಅವನ ಕ್ಲಾಸಿಗೇ ಮೊದಲನೆ೦ಯವನಾಗಿ ಓದುತ್ತಿದ್ದಾನೆ. ತಾಯಿ೦ಯ ಹೊಸಹೊಸ ಲೆಕ್ಕಗಳ ಪುಸ್ತಕಕ್ಕೆ ರೂಲು ಹಾಕುವುದರಿಂದ ಹಿಡಿದು, ಪಲ್ಲ ಸೇರುಗಳ ಕೂಡಿ ಕಳೆ೦ಯುವ ಲೆಕ್ಕಗಳನ್ನೆಲ್ಲ ತಪ್ಪಿಲ್ಲದೆ ಮಾಡುತ್ತಾನೆ. ಅಮ್ಮ ಮಾಡಿದ ಲೆಕ್ಕವನ್ನು ನೋಡಿ, ನಡುವೆ ತಪ್ಪು ಕಂಡುಹಿಡಿದು ತೋರಿಸುತ್ತಾನೆ. ಒಂದು ಸಲ ಶೇಕ್‌ದಾರರೇ ಅವನಿಗೆ ಹೇಳಿಕಳಿಸಿ ತಮ್ಮ ಒಂದು ಲೆಕ್ಕದ ಪುಸ್ತಕದ ನಕಲು ಮಾಡಿಸಿಕೊಂಡರು. ಮಗ ಬುದ್ಧಿವಂತನಾದನೆಂದು ನಂಜಮ್ಮನಿಗೆ ಹಿಗ್ಗೋ ಹಿಗ್ಗು. ಮುಂದೆ ರಾಮಣ್ಣ ಶ್ಯಾನುಭೋಗನಾಗುವುದು ಮಾತ್ರ ಅವಳಿಗೆ ಬೇಡ. ಹೈಸ್ಕೂಲಾದರೂ ಮುಗಿಸಬೇಕು.ಕೊನೆ೦ಯ ಪಕ್ಷ ಶೇಕ್‌ದಾರಿಕೆ ಮಾಡಬೇಕು. ದೇವರ ದ೦ಯವಿದ್ದರೆ ೦ಯಾಕಾಗುವುದಿಲ್ಲ, ರಾಮಣ್ಣನಿಗೆ ಇಷ್ಟೆಲ್ಲ ಬುದ್ಧಿ ಇದೆ೦ಯಲ್ಲ–ಎಂದು ಮನಸ್ಸಿನಲ್ಲಿ೦ಯೇ ೦ಯೋಚಿಸುತ್ತಿದ್ದಳು.
ವಿಶ್ವ ಕನ್ನಡ ಮೂರರಲ್ಲಿದ್ದಾನೆ. ಅವನಂತಹ ತುಂಟ ಇಡೀ ಊರಿನಲ್ಲಿ೦ಯೇ ಇಲ್ಲ. ಅಷ್ಟೇ ಧೈ೦ರ್ಯಶಾಲಿ. ಊರಿನ ಕೆರೆ೦ಯಲ್ಲಿ ದೊಡ್ಡವರಂತೆ ಐವತ್ತು ಅರವತ್ತು ಮಾರು ದೂರ ಈಜಿಕೊಂಡು ಹೋಗುತ್ತಾನೆ. ಒಬ್ಬನೇ ಶ್ಮಶಾನದ ಹತ್ತಿರ ತಿರುಗಿ ಜೇನುಗೂಡು ಹುಡುಕಿ, ಬಿಚ್ಚಿ, ಅಡಿಕೆಪಟ್ಟಿ೦ಯಲ್ಲಿ ತುಪ್ಪ ಹಿಂಡಿ ತರುತ್ತಾನೆ. ಮಾತುಕತೆ, ಗತ್ತು, ಧೈ೦ರ್ಯ, ಎಲ್ಲದರಲ್ಲೂ ಅಜ್ಜ ಕಂಠೀಜೋಯಿಸರೇ ಅವನು. ಈಗ

ಅವನಿಗೂ ಮಾದೇವ0ಯ್ಯನವರಿಗೂ ಮೊದಲಿಗಿಂತ ಹೆಚ್ಚು ಪ್ರೀತಿ ಬೆಳೆದಿದೆ. ಅವರು ತತ್ವ ಹಾಡುತ್ತಿದ್ದರೆ ಚನ್ನಾಗಿ ಏಕತಾರಿ ಬಾರಿಸುತ್ತಾನೆ. ದಮಡಿ ಬಡಿ0ಯುತ್ತಾನೆ. ಅವರ ಕಂತೆಭಿಕ್ಷದ ಊಟವನ್ನು ಮತ್ತೆ ಅಭ್ಯಾಸ ಮಾಡಿಕೊಂಡಿದ್ದಾನೆ.

ಉಂಡು ತಿನ್ನಲು ನಂಜಮ್ಮನ ಸಂಸಾರಕ್ಕೆ 0ಯಾವ ತೊಂದರೆ0ಯೂ ಇಲ್ಲ. ಆಹಾರದ ಲೆಕ್ಕ ಬಂದಮೇಲೆ, ಉಳಿದ ಶ್ಯಾನುಭೋಗ ಪಟೇಲರುಗಳಿಗೆ ಹೆಚ್ಚಾದಂತೆ ಅವಳಿಗೂ ಸಂಪಾದನೆ ಏರಿದೆ. ಮನೆ0ಯಲ್ಲಿ ಈಗ ಎಲ್ಲರಿಗೂ ಎರಡೆರಡು ಜೊತೆ ಬಟ್ಟೆ ಬರೆಗಳಾಗಿವೆ. ರಾತ್ರಿ ಚಳಿಗಾಲದಲ್ಲಿ ಹೊದೆ0ಯಲು ಕುರುಬರ ಹಳ್ಳಿ0ಯವೇ ನಾಲ್ಕು ಕಂಬಳಿಗಳನ್ನೂ ಕೊಂಡಿದ್ದಾಳೆ. ಆದರೆ ಒಂದು 0ಯೋಚನೆ ಅವಳನ್ನು ಕಾಡುತ್ತಿದೆ. ಪಾರ್ವತಿಗೆ ಆಗಲೇ ಹದಿಮೂರು ತುಂಬುತ್ತಿದೆ. ಈ ಮಧ್ಯೆ ಎರಡು ವರ್ಷ ಬರ ಬರದೆ ಪುಷ್ಟಿ0ಯಾದ ಆಹಾರ ಬಿದ್ದಿದ್ದರೆ ಅವಳು ಇಷ್ಟರಲ್ಲಿ ಮೈನೆರೆದುಬಿಡುತ್ತಿದ್ದಳು. ಹೊಟ್ಟೆಗಿಲ್ಲದೆ ಕಡ್ಡಿ0ಯಂತೆ ಆಗಿದ್ದ ಅವಳು ಈಗ ಎರಡು ಹೊತ್ತೂ ಊಟ, ಬೆಳಗಿನ ಹೊತ್ತು ರೊಟ್ಟಿ ಮೊಸರು ತಿನ್ನುತ್ತಿದ್ದಾಳೆ. ಇನ್ನೂ ಅವಳ ಮದುವೆ0ಯಾಗಿಲ್ಲ. ಮದುವೆಗೆ ಮೊದಲೇ ಮೈನೆರೆದು ಬಿಟ್ಟರೆ ಏನು ಗತಿ ಎಂದು ನಂಜಮ್ಮ ಒಳಗೇ ತಪಿಸುತ್ತಿದ್ದಾಳೆ.

ಮದುವೆ ಎಂದರೆ ಹುಡುಗಾಟವೆ? ಎಷ್ಟೇ ಬಡತನದಲ್ಲಿ ಮಾಡಿದರೂ ಏಳು ಎಂಟು ನೂರು ರೂಪಾಯಿ ಬೇಕು. ಗಂಡು ಹುಡುಕಿ ಮುಂದೆ ನಿಂತು ಮಾಡಲು ಒಬ್ಬ ಗಂಡಸು ಬೇಕು. ತನ್ನ ಗಂಡ ಎಂಥವರೆಂಬುದು ಅವಳಿಗೇ ಗೊತ್ತು. ದೇವರು ಹ್ಯಾಗೆ ನಡೆಸುತ್ತಾನೋ?–ಎಂಬ 0ಯೋಚನೆ ಮೂರು ಹೊತ್ತೂ ಕಾಡುತ್ತಿತ್ತು. ತಿಪಟೂರಿನ ಹತ್ತಿರದ ತಿರುಮಗೊಂಡನಹಳ್ಳಿ0ಯಲ್ಲಿ ಒಂದು ವರವಿದೆ ಎಂದು 0ಯಾರೋ ಹೇಳಿದರು. ಹೋಗಿ ನೋಡಿಕೊಂಡು ಬರುವಂತೆ ಅವಳು ಗಂಡನನ್ನೂ, ಜೊತೆಗೆ ಆ ಊರಿನ ಹೊಸದಾಗಿ ಬಂದಿದ್ದ ಮೇಷ್ಟರು ವೆಂಕಟೇಶ0ಯ್ಯನವರನ್ನೂ ಕಳಿಸಿದಳು. ಇವರು ಹೋದ ಎರಡನೆ0ಯ ದಿನ ವಾಪಸು ಬಂದ ಮೇಷ್ಟರು ಹೇಳಿದರು: ''ನಂಜಮ್ನೋರೇ, ಈ ಶ್ಯಾನುಭೋಗ್ರನ್ನ ಕಟ್ಟಿಕೊಂಡು ಹೋದ್ರೆ ವರ ನಿಶ್ಚ0ಯವಾಗುತ್ತೆ0ಯೇ? ನಾವು ಅವರ ಮನೆಗೆ ಹೋಗಿ ಜಾತಕ ಕೇಳಿದೆವು. ಹುಡುಗಿ ಜಾತಕ ಮೊದಲು ಕೊಡಿ ಅಂದ್ರು. ಕೊಟ್ಟೆ. ಊಟ ಮಾಡಿ ಅಂದ್ರು. 'ಹೆಣ್ಣು ಕೊಡೋಕೆ ಬಂದಿದೀವಿ ದೈವಸಂಕಲ್ಪವಿದ್ದು ಕನ್ಯಾದಾನವಾಗೂ ತನಕ ನಾವು ನಿಮ್ಮ ಮನೇಲಿ ಗಂಗೋದಕಾನೂ ಸ್ವೀಕರಿಸಬಾರ್ದು ಅಂತ ಶಾಸ್ತ್ರವೇ ಇದೆ0ಯಲ್ಲ'ಅಂತ ನಾನು ಅಂದೆ. ಆದ್ರೆ ಶ್ಯಾನುಭೋಗ್ರು ಕೇಳ್ಲೇ ಇಲ್ಲ. ಬ್ಯಾಡಿ ಕಣ್ರೆ ಅಂತ ನಾನು ಬಾಯಿಬಿಟ್ಟು ಹೇಳಿದ್ರೂ ಕೇಳದೆ ಎದ್ದು ಅಂಗಿ ಬಿಚ್ಚಿ ಕೈಕಾಲು ತೊಳಕೊಂಡು ಊಟಕ್ಕೆ ಕೂತೇಬಿಟ್ರು. ನಾನು ಮಾತ್ರ ಮಾಡ್ಲಿಲ್ಲ. ಅವರ ಊಟವಾದ ಮೇಲೆ ಹುಡುಗನ ತಂದೆ0ಯ ತಮ್ಮನೇ ಹೊರಗೆ ಬಂದು ನನ್ನ ಕೈಲಿ, 'ಕನ್ಯೆ0ಯ ತಂದೆ0ಯೇ ನಮ್ಮನೇಲಿ ಊಟ ಮಾಡಿಬಿಟ್ರು. ಇನ್ನು ಮದುವೆ ಪ್ರಸ್ತಾಪ ಮುಂದುವರಿಸಬಾರ್ದು. ಶಾಸ್ತ್ರ ನಿಮಗೇ ಗೊತ್ತಿದೆ0ಯಲ್ಲ' ಅಂದುಬಿಟ್ರು.''

ಮೇಷ್ಟರ ಮಾತು ಕೇಳಿದ ನಂಜಮ್ಮನಿಗೆ ಸಂಕಟ ಕೋಪ, ಎರಡೂ ಒಟ್ಟಿಗೆ ಉಂಟಾದುವು. ಅಲ್ಲಿ0ಯೇ ಚಾಪೆ0ಯ ಮೆಲೆ ಮಲಗಿ ಸುಧಾರಿಸಿಕೊಳ್ಳುತ್ತಿದ್ದ ಗಂಡನನ್ನು–'ಮೇಷ್ಟ್ರು ಹೇಳಿದರೂ 0ಯಾಕೆ ಹೀಗೆ ಮಾಡಿದಿರಿ?' ಎಂದು ಕೇಳಿದುದಕ್ಕೆ ಅವರು, 'ಹ್ವಟ್ಟೆ ಹಸ್ದಿದ್ರೆ ಇನ್ನೇನ್ ಮಾಡ್‌ಬೇಕೋ ಕಾಣೆ' ಎಂದು ಕೊಸರಿಕೊಂಡೇ ಹೇಳಿದರು. ಹೇಲಿನಮೇಲೆ ಕಲ್ಲೆಸೆದು ಮೋರೆಮೇಲೆ ಸಿಡಿಸಿಕೊಳ್ಳಬಾರದೆಂಬ ನೆನಪಾಗಿ ಅವಳು ಅವರನ್ನು ಮತ್ತೆ ಏನೂ ಅನ್ನಲಿಲ್ಲ. ಮುಂದೆ ನಿಂತು ಈ ಹುಡುಗಿ0ಯ ಮದುವೆ ಮಾಡುವವರು 0ಯಾರು ಎಂದು ತನ್ನಲ್ಲಿ0ಯೇ 0ಯೋಚಿಸುತ್ತಾ ಸುಮ್ಮನಾದಳು.

ಅವಳ ಅದೃಷ್ಟಕ್ಕೆ ಆ ದಿನ ರಾತ್ರಿ0ಯೇ ಪಾರ್ವತಿ ಮೈನೆರೆದುಬಿಟ್ಟಳು. ಅದು ಅನಿರೀಕ್ಷಿತವಲ್ಲದಿದ್ದರೂ ಹಾಗೆ ಆದಾಗ ನಂಜಮ್ಮನ ಎದೆ ಹೊಡೆದುಕೊಂಡಿತು. ಮೈನೆರೆದ ಹುಡುಗಿ0ಯನ್ನು ಮದುವೆ0ಯಾಗುವವರು 0ಯಾರು? ತಿಪಟೂರಿನಂಥ ದೊಡ್ಡ ಊರಿನಲ್ಲಿ ದೊಡ್ಡದೊಡ್ಡವರ ಮನೆಗಳಲ್ಲಿ ಈಗೀಗ ನೆರೆದ ಹುಡುಗಿ0ಯರಿಗೇ ಮದುವೆ ಮಾಡುತ್ತಾರಂತೆ–ಎಂದೇನೋ ಕೇಳಿದ್ದಳು. ಆದರೆ ಅದು ದೊಡ್ಡವರ ಮನೆ0ಯ ಮಾತು. ನಾವು ಎಷ್ಟಾದರೂ ಬಡವರು, ಅಲ್ಲದೆ ಹಳ್ಳಿಗಾಡಿನವರು. ಹುಡುಗಿ ಮದುವೆ0ಯಾಗದೆ ಮೈನೆರೆದಳೆಂದರೆ ತಾವು ಉಳಿ0ಯುವಂತಿಲ್ಲ. ಊರಿನ ಜೋಯಿಸರುಗಳು ಮೊದಲೇ ತನಗೂ ಮಕ್ಕಳಿಗೂ ಬಹಿಷ್ಕಾರ ಹಾಕಿದ್ದಾರೆ. ಒಂದು ಪಕ್ಷ ಹಣ ಒದಗಿ ಗಂಡು ಗೊತ್ತಾದರೂ ಅವರು ದಂಡ ತಿನ್ನದೆ ಬಂದು ಮದುವೆ ಮಾಡಿಸುವುದಿಲ್ಲ. ಇನ್ನು ಇದು ಗೊತ್ತಾದರೆ ದೊಡ್ಡ ಗಲಾಟೆ0ಯೇ ಆಗುತ್ತೆ. ವಿಷ0ಯ ನಾಲ್ಕು ಜನಕ್ಕೆ ತಿಳಿದರೆ ಅವಳನ್ನು ನೋಡಲು 0ಯಾವ ಗಂಡಿನವರು ಬಂದರೂ ಕಿವಿಗೆ ಊದಿ ಮದುವೆ ತಪ್ಪಿಸಿಬಿಡುತ್ತಾರೆ. ನಂಜಮ್ಮ ಒಂದು ಗಂಟೆ0ಯ ಕಾಲ ಮಂಕುಹಿಡಿದವಳಂತೆ ಕೂತುಬಿಟ್ಟಳು. ಚೆನ್ನಿಗರಾ0ಯರು ಸುಖವಾಗಿ ಮಲಗಿ ನಿದ್ರಿಸುತ್ತಿದ್ದರು. ಅವರಿಗೆ ವಿಷ0ಯ ತಿಳಿ0ಯುವುದೂ ಒಂದೇ ಕಹಳೆ0ಯ ಬಾಯಿಗೆ ಪಿಸುಮಾತು ಹೇಳುವುದೂ ಒಂದೇ.

ಅವಳು ಒಂದು ತೀರ್ಮಾನ ಮಾಡಿದಳು. 0ಯಾರಿಗೂ ಹೇಳಕೂಡದೆಂದು ಕಟ್ಟುನಿಟ್ಟಾಗಿ ಹೇಳಿ

ಪಾರ್ವತಿ0ುನ್ನು ತನ್ನ ಹಾಸಿಗೆ0ು ಸಾಲಿನಲ್ಲೇ ಮಲಗಿಸಿಕೊಂಡಳು. ಬೆಳಗ್ಗೆ ಅವಳನ್ನು ಮನೆಗೆಲಸಕ್ಕೆ ಬಿಡಲಿಲ್ಲ. ಹೊಟ್ಟೆನೋವೆಂದು ಹೇಳುವಂತೆ ಹೇಳಿ, ಒಂದು ಕಡೆ ಹಾಸಿಗೆ ಹಾಕಿ ಮಲಗಲು ಹೇಳಿದಳು. ವಿಷ0ು ರಾಮಣ್ಣನಿಗೆ ತಿಳಿಸಿದಳು. ಅವನು ಜಾಣ ಹುಡುಗ. 0ಯಾರ ಕೈಲೂ ಬಾಯಿ ಬಿಡುವವನಲ್ಲ.

ಆದರೆ ವಿಶ್ವನಿಗೆ ಇನ್ನೂ ತಿಳಿವಳಿಕೆ ಇಲ್ಲ. ಅವನಿಗಾಗಲಿ ಗಂಡ ಚೆನ್ನಿಗರಾ0ುನಿಗಾಗಲಿ ಏನೂ ತಿಳಿಸಲಿಲ್ಲ. ಮಕ್ಕಳು ಆರೋಗ್ಯವಾಗಿರಲಿ ರೋಗದಿಂದ ನರಳುತ್ತಿರಲಿ, ಚೆನ್ನಿಗರಾ0ುರು ಎಂದಿಗೂ ಅವರನ್ನು ವಿಚಾರಿಸುತ್ತಿರಲಿಲ್ಲ. ಆದರೆ ವಿಶ್ವ ಅಕ್ಕ0ು್ಯನನ್ನು ಮುಟ್ಟಿ, ಅವಳ ಹೊಟ್ಟೆ ನೋವು ಹೇಗಿದೆ ಎಂದು ವಿಚಾರಿಸಿದ. ಹಾಗೆ0ುೇ ಅಡಿಗೆ ಮನೆಗೂ ಬಂದ. ಮಗಳು ಮನೆಗೆಲಸ ಮಾಡುವಂತಾದ ಮೇಲೆ, ನಂಜಮ್ಮ ತಾನು ಮುಟ್ಟಾದಾಗ ಮೈಲಿಗೆ ಕೂರುತ್ತಿದ್ದಳು. ಮುಟ್ಟಾದ ಅಕ್ಕ0ು್ಯನನ್ನು ಮುಟ್ಟಿಕೊಂಡು ವಿಶ್ವ ಈಗ ಕೋಣೆಗೇ ಬಂದಿದ್ದಾನೆ. ನಂಜಮ್ಮ ಮಡಿ ಸೀರೆ ಸುತ್ತಿಕೊಂಡು ಸಾಲಿಗ್ರಾಮವನ್ನು ತೆಗೆದು ಒಂದು ಮಡಿ ತಾಮ್ರದ ಚೊಂಬಿನಲ್ಲಿಟ್ಟು, ಮೇಲೆ ತೊಲೆ0ು ಮೇಲೆ ಇಟ್ಟುಬಿಟ್ಟಳು. ಉಳಿದ ಮಡಿ ಮೈಲಿಗೆ0ು ಬಗೆಗೆ ಅವಳಿಗೆ ಹೆದರಿಕೆ ಇರಲಿಲ್ಲ. ಸಾಲಿಗ್ರಾಮದ ಸಹವಾಸ ಎಷ್ಟಾದರೂ ಕಷ್ಟದ್ದೇ.

ರಾಮಣ್ಣ ಹೇಗೂ ಕಂಬನಕೆರೆಗೆ ದಿನವೂ ಹೋಗುತ್ತಾನೆ. ನಂಜಮ್ಮ ಅವನ ಕೈಲಿ ಎಳ್ಳು ತರಿಸಿದಳು. ತಾನೇ ಒಂದು ದಿನ ಕುರುಬರಹಳ್ಳಿಗೆ ಹೋಗಿ, ದೇವರ ಕೆಲಸವೆಂದು ನಾಲ್ಕು ಮನೆಗಳಲ್ಲಿ ಕೇಳಿ ಒಟ್ಟು ಇಪ್ಪತ್ತು ಗಿಟುಕು ಕೊಬ್ಬರಿ ತಂದಳು. 0ಯಾರಿಗೂ ತಿಳಿ0ುದಂತೆ ಪಾರ್ವತಿ0ುನ್ನು ಅಡಿಗೆಮನೆ0ುಲ್ಲಿ ಕೂರಿಸಿ ಬೆಲ್ಲ ಹಾಕಿದ ಎಳ್ಳಿನ ಚಿಗಳಿ, ಕೊಬ್ಬರಿ ಬೆಲ್ಲ ಮತ್ತು ಮೆಂತ್ಯದ ಹಿಟ್ಟುಗಳನ್ನು ದಿನವೂ ತಿನ್ನಿಸಿದಳು. ಈಗ ಬೆಣ್ಣೆ0ು ಧಾರಣೆ ಸೇರಿಗೆ ಹತ್ತು ಆಣೆ0ುಾಗಿತ್ತು. ಅದನ್ನೂ ರಾಮಣ್ಣ ಗುಟ್ಟಾಗಿ ಕಂಬನಕೆರೆ0ುಿಂದ ತಂದು ಕೊಡುತ್ತಿದ್ದ. ಅಷ್ಟೇ ಗುಟ್ಟಾಗಿ ನಂಜಮ್ಮ ಮಗಳಿಗೆ ತುಪ್ಪ ತಿನ್ನಿಸುತ್ತಿದ್ದಳು. ಅವಳು ನೆರೆದಿರುವುದನ್ನು ಮುಚ್ಚಿಡಬಹುದು. ಆದರೆ ಈ ಕಾಲದಲ್ಲಿ ಸ್ವಲ್ಪವಾದರೂ ಆರೈಕೆ ಮಾಡದಿದ್ದರೆ ಮುಂದೆ ಹುಡುಗಿ0ು ಆರೋಗ್ಯ ಶಕ್ತಿಗಳ ಗತಿ ಏನು?–ಎಂಬ 0ುೋಚನೆ ಸದಾ ಅವಳಲ್ಲಿ ಜಾಗೃತವಾಗಿತ್ತು.

ಹೊರಗಿನವರಿಗೆ ಸ್ವಲ್ಪವೂ ಸುಳಿವು ಸಿಕ್ಕದಂತೆ ಹೀಗೆ ಐದು ತಿಂಗಳು ಕಳೆ0ುಿತು. ಆದರೆ ಪಾರ್ವತಿ0ು ಮೈಕೈ ಮುಖಗಳಲ್ಲಿ0ುೂ ಆಗುತ್ತಿದ್ದ ಬದಲಾವಣೆ0ು, 0ಯಾರು ನೋಡಿದರೂ ಇವಳು ದೊಡ್ಡವಳಾಗಿದ್ದಾಳೆ ಎಂದು ತಿಳಿ0ುುವಂತೆ ಮಾಡುತ್ತಿತ್ತು. ತಾಯಿ0ುಂತೆ0ುೇ ಎತ್ತರವಾದ ಮೈಕಟ್ಟು, ಅಗಲವಾದ ಭುಜ, ಮುಖದ ಹುಡುಗಿ. ಬಡತನವೆಂದು ಮಾಡುತ್ತಿದ್ದರೂ ಎಳ್ಳು, ಬೆಲ್ಲ, ಕೊಬ್ಬರಿ ಮೆಂತ್ಯಗಳು ಶರೀರಕ್ಕೆ ಬೀಳುತ್ತಿವೆ. ವಾರಕ್ಕೊಂದು ಸಲ ಎಣ್ಣೆ ನೀರು ಆಗುತ್ತಿದೆ. ಮೊದಲಿನಂತೆ ಈಗ ಬಿಸಿಲಿನಲ್ಲಿ ಸೊಪ್ಪಿನ ಮಡಿಗೆ ಸಹ ಹೋಗುತ್ತಿಲ್ಲ. ಮೈ ಮುಖದ ಬಣ್ಣವೂ ಬೆಳ್ಳಗಾಗಿದೆ. ಅವಳ ಈ ರೂಪವನ್ನು ಮುಚ್ಚಿಡುವುದು ಹೇಗೆ? ಅಥವಾ, ಒಳಗೇ ಮಾಡುತ್ತಿದ್ದ ಆರೈಕೆ0ುನ್ನು ನಿಲ್ಲಿಸಿಬಿಟ್ಟರೆ ಮುಂದೆ ಹುಡುಗಿ0ು ಶರೀರಶಕ್ತಿ ಉಳಿ0ುುವುದಿಲ್ಲ. ನಂಜಮ್ಮನಿಗೆ ಉಭ0ುಸಂಕಟ. ಮಗಳ ಆರೋಗ್ಯ0ುುತ ಮೈಕಟ್ಟನ್ನು ನೋಡಿ ಒಂದು ನಿಮಿಷ ಸಂತೋಷವೆನಿಸಿದರೆ ಅದೇ ಕ್ಷಣದಲ್ಲಿ ತಮ್ಮ ಸ್ಥಿತಿ0ು ಅರಿವಾಗಿ, 'ಇವಳಿಗೆ ನಿಜವಾಗಿ0ುೂ ಮದುವೆ0ುಾಗುತ್ತದ0ುೇ? ನಮ್ಮ ಮರ್ಯಾದೆ ಉಳಿ0ುುತ್ತದೆ0ುೇ'–ಎಂಬ 0ುೋಚನೆ0ುಿಂದ ಮನಸ್ಸು ಭಾರವಾಗುವುದು.

ಪಾರ್ವತಿ ಸೂಕ್ಷ್ಮಬುದ್ಧಿ0ು ಹುಡುಗಿ. ತಾಯಿ0ು ಮನದ ಸಮಸ್ಯೆ ಅವಳಿಗೂ ಪೂರ್ತಿ0ುಾಗಿ ಗೊತ್ತು. ಅದು ತನ್ನ ಜೀವನದ್ದೇ ಸಮಸ್ಯೆ. ತನ್ನ ಮದುವೆ0ುಂತೂ ಆಗಬೇಕು. ಹಿಂದಿನ ಕಾಲದಲ್ಲಿ ಮದುವೆಗೆ ಮೊದಲು ಹುಡುಗಿ0ುರು ಮೈನೆರೆದರೆ ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟುಬಿಡುತ್ತಿದ್ದರಂತೆ. ಹೇಗೋ ಅಮ್ಮ ಮದುವೆ ಮಾಡುತ್ತಾಳೆ. ಆದರೆ ಎಂತಹ ಗಂಡು ಸಿಕ್ಕುತ್ತೆ? ತನ್ನ ತಂದೆ0ುಂಥದೇ, ಚಿಕ್ಕಪ್ಪನಂಥದೇ, ಸೋದರಮಾವ ಕಲ್ಲೇಶಜೋಯಿಸರಂಥದೇ? ರೇವಣ್ಣಶೆಟ್ಟಿ, ಶಿವೇಗೌಡ–ಆ ಊರಿನಲ್ಲಿ 0ಯಾರನ್ನು ಕುರಿತು 0ುೋಚಿಸಿದರೂ ಅಂತಹ ಗಂಡ ತನಗೆ ಬೇಡವೆಂದು ಅವಳ ಮನಸ್ಸು ಹೇಳುತ್ತಿತ್ತು. ಇಂಥದು ಬೇಕು, ಇಂಥದು ಬೇಡ ಎಂದು ತಾನೇನೋ ಅಮ್ಮನ ಕೈಲಿ ಹೇಳಬಹುದು ಆದರೆ ತನ್ನ ಇಷ್ಟದಂತೆ0ುೇ ಗಂಡು ಹುಡುಕಿ ಮಾಡುವ ಶಕ್ತಿ ತಮಗಿಲ್ಲವೆಂಬ ಅರಿವು ಅವಳಲ್ಲಿ ಸದಾ ಇರುತ್ತಿತ್ತು. ತಾನು ಹುಟ್ಟದಿದ್ದರೇ ಚನ್ನಾಗಿತ್ತು. ಈಗಲೂ ಸತ್ತುಹೋದರೆ ಒಂದು ಥರಕ್ಕೆ ಚನ್ನ. ಸಾ0ುುವುದು ಎಂದರೆ ಅಮ್ಮ, ರಾಮಣ್ಣ, ವಿಶ್ವರನ್ನು ಬಿಟ್ಟು ಹೊರಟುಹೋಗುವುದು–ಎಂಬ ಅರಿವಾಗಿ, ಸಾ0ುುವ ವಿಚಾರ ಅವಳ ಮನಸ್ಸಿನಿಂದ ಹೊರಟುಹೋ0ುಿತು. ಎಂಥ ಗಂಡು ಸಿಕ್ಕಿದರೂ ಸರಿ. ಸಂಸಾರ ಮಾಡಲೇಬೇಕು. ಅಮ್ಮ ಮಾಡುತ್ತಿಲ್ಲವೇ, ಹಾಗೆ. ಅದೃಷ್ಟ ಚನ್ನಾಗಿದ್ದರೆ ಒಳ್ಳೆ0ುವರೂ ಸಿಕ್ಕಬಹುದು. ಈ ಊರು ಸ್ಕೂಲು ಮೇಷ್ಟರು ವೆಂಕಟೇಶ0ು್ಯನವರು ಹೆಂಡ್ತೀನ ಹೊಡೆ0ುಲ್ಲ, ಬಡಿ0ುಲ್ಲ. ಹೊಗೆಸೊಪ್ಪು, ಬೀಡಿ 0ಯಾವ ಅಭ್ಯಾಸವೂ ಇಲ್ಲ. ಬಾ0ುಲ್ಲಿ ಕೆಟ್ಟ ಮಾತೇ ಬರುಲ್ಲ. ಅಂಥೋರು ಸಿಕ್ಕಿದರೆ ಸಾಕು–ಎಂಬ ಹಲವಾರು 0ುೋಚನೆ ಆಶೆಗಳು ಮನಸ್ಸನ್ನು ಒಳಗೇ ಕೊರೆ0ುುತ್ತಿದ್ದವು.

ಒಂದು ದಿನ ಸಂಜೆ ಮನೆಗೆ ಬಂದ ಚೆನ್ನಿಗರಾ0ುರು ಹೆಂಡತಿ0ುನ್ನು ಕೇಳಿದರು: 'ಪಾರ್ವತಿ ಮೈ ಗಿ0ುಜ್

ನೆರೆದಿದಾಳೇನೇ?'

ಈ ಮಾತು ಕೇಳಿದಾಗ ಪಾರ್ವತಿ ಎದುರಿಗೇ ಇದ್ದಳು. ನಂಜಮ್ಮನಿಗೆ ರೇಗಿತು. ಅವಳು ಎಂದಳು:

'ನಿಮಗೇನು ಬುದ್ಧಿ ನ್ಯಟ್ಟಗಿದೆ೦ಯೋ ಇಲ್ವೋ? ೦ಯಾರು ಹಾಗಂದ್ರು?'

'೦ಯಾಕ್ ನಿನ್ಮಗಳು ಇತ್ತೀಚೆಗೆ ಸೊಪ್ಪಿನ ಹಿತ್ಲಿಗೆ ಬರೂದೇ ಇಲ್ಲ? ೦ಯಾವಾಗ್ಲೂ ಮನ್ಲೇ ಇರ್ತಾಳೆ. ಮೈ ಗಿ೦ಯ್ ನೆರೆದಿದಾಳೆ ಏನೋ ಅಂತ ಅಣ್ಣಾಜೋಯಿಸ್ರು ಕೇಳಿದ್ರು.'

'ಅದಕ್ಕೆ ನೀವೇನಂದ್ರಿ?'

'ನಂಗೊತ್ತಿಲ್ಲ. ನಮ್ಮನ್ಲಿ ಇವ್ಳುನ್ನ ಕೇಳ್ತೀನಿ ಅಂದೆ.'

'ಇಲ್ಲ ಅನ್ನುಕ್ಕೆ ನಿಮಗೇನಾಗಿತ್ತು?'

'ನಂಗೇನು ಗೊತ್ತೆ ಅದೆಲ್ಲ'–ಎಂದು ಸಿಟ್ಟನ್ನೇ ತೋರಿಸಿದರು.

'ಇನ್ನೂ ಇಲ್ಲ. ಈಗ ಮನ್ಲಿ ಎಲೆ ಹಚ್ಚುವ ಕೆಲ್ಸವೇ ಅವ್ಳಿಗೆ ಆಗುತ್ತೆ ಅಂತ ಹೇಳಿ'–ಎಂದು ನಂಜಮ್ಮ ಉಪಾ೦ಯವಾಗಿ ಹೇಳಿದಳು. ಅಲ್ಲಿಗೆ ಪಾರ್ವತಿ ಅಪ್ಪ ಸುಮ್ಮನಾದರು.

ಎಂದರೆ ಊರಿನ ಇತರ ಬ್ರಾಹ್ಮಣರುಗಳಿಗೆ ಆಗಲೇ ಅನುಮಾನ ಬಂದಿದೆ. ಎಷ್ಟೇ ಗುಟ್ಟಿನಿಂದ ಇದ್ದರೂ ಇಂಥ ವಿಷ೦ಯವನ್ನು ಹೆಚ್ಚು ದಿನ ಮುಚ್ಚಿಡುವುದು ಕಷ್ಟ. ಬಳ್ಳಿ೦ಯಲ್ಲಿ ಮಲ್ಲಿಗೆ೦ಯ ಮೊಗ್ಗು ಬಿರಿ೦ಯುವಾಗ ಅದನ್ನು ಎಷ್ಟು ಮುಚ್ಚಿದರೂ ಎಲ್ಲರಿಗೂ ಗೊತ್ತಾಗುವ ಹಾಗೆ, ದೊಡ್ಡವಳಾಗಿ ಸ್ವಲ್ಪ ಆರೈಕೆ ಮಾಡಿಸಿಕೊಳ್ಳುವ ಹುಡುಗಿ೦ಯ ವಿಷ೦ಯವೂ ತಿಳಿದುಬಿಡುತ್ತದೆ.

– 3 –

ಇದಾದ ಎರಡನೆ೦ಯ ದಿನ ಮಧ್ಯಾಹ್ನ ಅವರ ಮನೆ೦ಯ ಮುಂದೆ ಒಂದು ಕಮಾನು ಗಾಡಿ ಬಂದು ನಿಂತಿತು. ಎತ್ತಿನ ಕೊರಳಿಗೆ ಗಂಟೆಸರ ಕಟ್ಟಿದ್ದ ಅದರ ನೊಗ ಇಳುಕುವ ಮೊದಲೇ ಹಿಂಭಾಗದಿಂದ ೦ಯಾರೋ ಒಬ್ಬ ಎತ್ತರವಾದ, ತುಂಬಿದ ಮೈಕಟ್ಟಿನ ವ್ಯಕ್ತಿ ಇಳಿದರು. ಹಣೆಗೆ ತ್ರಿಪುಂಡ್ರ ಕೊರಳಿಗೆ ಜಪದ ಸರಗಳನ್ನು ಧರಿಸಿದ್ದ ಅವರನ್ನು ಪಾರ್ವತಿ ಈ ಮೊದಲು ನೋಡಿರಲಿಲ್ಲ. ಆದರೆ ನೊಗ ಇಳುಕಿದ ಮೇಲೆ ಅಕ್ಕಮ್ಮ ಇಳಿದಳು. ಅಕ್ಕಮ್ಮ ಇಲ್ಲಿಗೆ ಬಂದು ಆಗಲೇ ನಾಲ್ಕು ವರ್ಷದ ಮೇಲೆ ಆಗಿತ್ತು. ಈಗ ಅವಳ ಬೆನ್ನು ಮೊದಲಿಗಿಂತ ಗೂನು ಬಿದ್ದಿದೆ. 'ಅಮ್ಮಾ, ಅಕ್ಕಮ್ಮ ಬಂದಳು'–ಎಂದು ಒಳಗೆ ತಿರುಗಿ ಪಾರ್ವತಿ ಹೇಳಿದ ತಕ್ಷಣ ನಂಜ ಎದ್ದು ಓಡಿಬಂದಳು. ಎದುರಿಗೆ ನೋಡಿದರೆ ತನ್ನ ತಂದೆ.

'ನಂಜಾ, ಆಗ ನೋಡಿದುದಕ್ಕೂ ಈಗ್ಲೂ ನೀನು ತುಂಬ ಬಡವಾಗಿದೀ೦ಯ. ಇವಳೇ ಏನು ಅಲ್ಲಿ ಹುಟ್ಟಿದೋಳು?'–ಅವರು ಕೇಳಿದರು.

ತಮ್ಮ ಅಜ್ಜ೦ಯ್ಯನ ಬಗೆಗೆ ಪಾರ್ವತಿ ಆದಿ೦ಯಾಗಿ ಎಲ್ಲ ಹುಡುಗರೂ ಕೇಳಿದ್ದರು. ಈಗ ಅವರನ್ನು ನೋಡುವ ೦ಯೋಗವಾಯಿತು. ಅಕ್ಕಮ್ಮ ಕೋಡುಬಳೆ ಚಕ್ಕುಲಿಗಳನ್ನೆಲ್ಲ ತಂದಿದ್ದಳು. ಅಜ್ಜ೦ಯ್ಯ ಮಗಳಿಗೆ ಮೊಮ್ಮಗಳಿಗೆ ಸೀರೆ, ಉಳಿದ ಗಂಡು ಹುಡುಗರಿಗೆ ಅಂಗಿ ಚಡ್ಡಿಗಳನ್ನು ಹೊಲಿಸಿ ತಂದಿದ್ದರು. ಜೊತೆಗೆ ಒಂದು ಥಾಲಿ ಕಾಶಿಗಂಗೆ. ಸ್ಕೂಲಿನಿಂದ ಬಂದ ವಿಶ್ವನಿಗೆ ಸಂಭ್ರಮವೋ ಸಂಭ್ರಮ.

'ಅಪ್ಪಾ, ನೀನು ದೇಶ ಬಿಟ್ಟು ಹೋಗಿ ಹನ್ನೆರಡು ತುಂಬಿ ಹದಿಮೂರು ವರ್ಷವಾ೦ಯ್ತಲ್ಲವೆ? ಮೊದಲು ಒಂದು ದೇವಸ್ಥಾನಕ್ಕೆ ಬಂದು ನಮ್ಮುನ್ನ ಅಲ್ಲಿಗೆ ಕರ್ಸಬಾರದಾಗಿತ್ತೆ?'

'ಕಾಶಿಗೆ ಹೋಗಿದ್ದೋರಿಗೆ ಅದೆಲ್ಲ ಏನಿಲ್ಲ. ಜೊತೇಲಿ ಗಂಗೇನೂ ತಂದಿದೀನಿ.'

ಅವರು ಹೇಳದೆ ಕೇಳದೆ ಇಷ್ಟು ವರ್ಷ ಕಾಶಿಗೆ ೦ಯಾಕೆ ಹೋದರು?–ಎಂಬ ಪ್ರಶ್ನೆ ಬಂದಾಗ ಕಂಠೀಜೋಯಿಸರು ಸರಿ೦ಯಾಗಿ ಉತ್ತರ ಹೇಳಲಿಲ್ಲ. 'ಏನೋ ವಿಶ್ವೇಶ್ವರನ ಸನ್ನಿಧಾನದಲ್ಲಿ ಹೋಗಿ ಇರಬೇಕು ಅಂತ ಮನಸ್ಸಾ೦ಯ್ತು. ಹೋಗಿಬಿಟ್ಟೆ. ನಂಗೆ ಎಲ್ಲಿದ್ದರೇನು?'–ಎಂದರು. ಅಕ್ಕಮ್ಮ ಆ ದಿನವೆಲ್ಲ ಮೊಮ್ಮಗಳಿಗೆ ಊರಿನ ವಿದ್ಯಮಾನಗಳನ್ನು ಹೇಳುತ್ತಿದ್ದಳು. ಕಂಠೀಜೋಯಿಸರು ಊರಿನ ಜೋಯಿಸರಿಬ್ಬರ ಮನೆಗೂ ಹೋಗಿ ಅವರ ಸಂಗಡ ತಮ್ಮ ಕಾಶಿ೦ಯ ಹನ್ನೆರಡು ವರ್ಷದ ಅನುಭವವನ್ನು ಹೇಳಿ, ತಾಂಬೂಲ ತೆಂಗಿನಕಾಯಿಗಳನ್ನು ಪಡೆದು ಬಂದರು.

ಅವರಿಬ್ಬರೂ ಈಗ ಬಂದಿರುವ ಕಾರಣವನ್ನು ಅಕ್ಕಮ್ಮನೇ ಪ್ರಸ್ತಾಪ ಮಾಡಿದಳು. 'ಆ ಗೊಡ್ಡು ಮುಂಡೆ ಹ್ವಟ್ಟೇಲಿ ಮಕ್ಕಳಂತೂ ಆಗುಲ್ಲ. ಮದುವೆ೦ಯಾಗಿ ಹದಿನಾರು ವರ್ಷ ಆ೦ಯ್ತಲ್ಲ. ಅದರ ೦ಯೋಗ್ತಿ೦ಯೂ ಹೀಗಿದೆ. ವಂಶ ನಿಂತುಹೋದ್ರೆ ನಮಗೆ ಪಿಂಡ ಹಾಕೋರು ೦ಯಾರು? ಕಲ್ಲೇಶುಂಗೆ ಬ್ಯಾರೆ ಮದುವೆ ಮಾಡ್‌ಬೇಕು ಅಂತ ತೀರ್ಮಾನ ಮಾಡಿದೀವಿ.'

'ಅದುಕ್ಕೆ ಅಣ್ಣ೦ಯ್ಯ ಒಪ್ಪಿದಾನೆ೦ಯೇ?'

'ಹೂಂ. ಒಪ್ಪದೇ ೦ಯಾಕಿದ್ದಾನು? ಅವ್ನೇ ನಮ್ಮಿಬ್ರುನ್ನೂ ಎತ್ತು ಗಾಡಿ ಮಾಡಿ ಕಳಿಸಿಕೊಟ್ಟ.'

'ಅದುಕ್ಕೆ ನಾನೇನು ಹೇಳ್ಲಿ? ನಂಗೇನು ತಿಳಿ೦ಯುತ್ತೆ?'

'ಪಾರ್ವತೀನ ಕೊಟ್ಟುಬಿಡು. ಒಂದು ದಿನದಲ್ಲಿ ಧಾರೆ ಹುಯ್ಸಿಬಿಡಾಣ'–ಅಕ್ಕಮ್ಮ ಹೀಗೆ ಹೇಳಿದಾಗ

ಪಾರ್ವತಿ ಎದುರಿಗೇ ಇದ್ದಳು. ಇದನ್ನು ಕೇಳಿದ ಅವಳಿಗೆ ತಕ್ಷಣ ಏನೂ ತಿಳಿಯಲಿಲ್ಲ. ನಂಜಮ್ಮನಿಗೆ ಸಹ ಈ ಅನಿರೀಕ್ಷಿತ, ಅನೂಹ್ಯ ಮಾತಿನಿಂದ ಏನೂ ಅರ್ಥವಾಗಲಿಲ್ಲ. ಅಕ್ಕಮ್ಮನೇ ಮುಂದುವರಿಸಿದಳು: 'ಕಂಠಿ ಕಾಶಿಯಿಂದ ಮೂರು ಸಾವಿರ ರೂಪಾಯಿ, ಇಪ್ಪತ್ತು ಚಿನ್ನದ ಉಂಗುರ, ಎಲ್ಲಾ ತಂದಿದಾನೆ. ದುಡ್ಡೆಲ್ಲ ನಮ್ಮ ಹುಡುಗಿಗೇ ಆಗುತ್ತೆ. ರಾಣಿ ಹಾಗೆ ಇರ್ತಾಳೆ.'

''ಅಕ್ಕಮ್ಮ, ಪಾರ್ವತಿಯ ವಯಸ್ಸೆಷ್ಟು, ಅಣ್ಣಯ್ಯನ ವಯಸ್ಸೆಷ್ಟು? ಹೇಳಿ ಕೇಳಿ ಅವನು ಸೋದರಮಾವ, ಇವಳು ಸೋದರಸೊಸೆ. ಅವನಿಗೆ ಗಂಡು ಮಗ ಇದ್ದಿದ್ರೆ ಇವಳನ್ನ ಕೊಡಬೇಕಾಗಿತ್ತು.'

'ಗಂಡು ಮಗ ಇದ್ದಿದ್ರೆ ಬ್ಯಾರೆ ಮದುವೆ ಯಾಕೆ ಆಗ್ತಿದ್ದ? ಸೋದರಮಾವುನ್ನ ಎಷ್ಟು ಜನ ಮದುವೆ ಮಾಡ್ಕಂಡಿಲ್ಲ? ಅವ್ನಿಗೆ ಯಾವ ಮಹಾ ವಯಸ್ಸು? ಮೂವತ್ತಾರೋ ಮೂವತ್ತೇಳೋ. ಇನ್ನೂ ರಾಜಕುಮಾರನ ಹಾಗೆ ಗಟ್ಟಿಗಟ್ಟಿಯಾಗಿದಾನೆ.'

'ಅತ್ತಿಗೆಮ್ಮ ಸುಮ್ನಿರ್ತಾಳೆಯೆ?'

'ಸುಮ್ನಿರ್ದೆ ಏನ್ಮಾಡ್ತಾಳೆ? ಇವಳ ಹೊಟ್ಟೇಲಿ ಒಂದು ಮಗು ಆಗ್ಲಿ. ಬೇಕಾದ್ರೆ ಇವ್ಳ ಪಾದಸೇವೆ ಮಾಡ್ಕಂಡಿರ್ತಾಳೆ. ಇಲ್ದೇ ಇದ್ರೆ ಹಳೇಸೀರೆ ಇರುಕ್ಕಂಡು ಅವರಪ್ಪನ ಮನೆಗೆ ಹೋಗ್ತಾಳೆ.'

ತಕ್ಷಣ ಉಂಟು ಇಲ್ಲ ಎಂದು ಏನು ಹೇಳುವುದಕ್ಕೂ ನಂಜಮ್ಮನಿಗೆ ತಿಳಿಯಲಿಲ್ಲ. ಅವಳ ಮನಸ್ಸಿನಲ್ಲಿ ಗಡಿಬಿಡಿ ಎದ್ದಿತು. ಅಕ್ಕಮ್ಮ ಅಂದಳು: 'ನೀನೇ ನೋಡಿದೀಯಲ್ಲ, ಊರಲ್ಲಿ ಉಣ್ಣಕ್ಕೆ ತಿನ್ನಾಕೆ ಏನು ಕಮ್ಮಿ? ಕಲ್ಲೇಶ ಕಷ್ಟಪಟ್ಟು ಜಮೀನು ಮಾಡುಸ್ತಾನೆ. ಅಂಥಾ ಚನ್ನಾದ ಮನೆ. ಕಂಠಿ ಮೂರು ಸಾವಿರ ತಂದಿದಾನೆ. ಬೇಕು ಅಂದ್ರೆ ಅದರಲ್ಲಿ ಬರೀ ಚಿನ್ನ ತಂದು ಇವ್ಳಿಗೆ ಹಾಕ್ತಾನೆ. ಇತ್ಲಾಗೆ ಮೊಮ್ಮಗಳಾದಳು. ಅತ್ಲಾಗೆ ಸೊಸೆಯಾದಳು. ಕಲ್ಲೇಶನ ಹೊಟ್ಟೇಲಿ ಮಕ್ಕಳಾಗದೆ ಸತ್ರೆ ನಂಗಾದ್ರೂ ಹ್ಯಾಗೆ ಸದ್ಗತಿಯಾಗುತ್ತೆ? ಏನೋ ನಿಮ್ಮಮ್ಮನ ಹೊಟ್ಟೇಲಿ ಹುಟ್ಟಿದ್ದುಕ್ಕೆ ನೀವಿಬ್ರು ಉಳ್ಕಂಡ್ರಿ. ನಾನು ಸಾಕಿದೆ. ಈಗ ನಾನೇ ಬಂದು ಕೇಳ್ತಿದೀನಿ. ಅವ್ನೇನು ದೂರವೇನಲ್ಲ ಕೊಟ್ಟುಬಿಡು.'

ನಂಜಮ್ಮನ ಕರುಳೇನೋ ಕೊರೆಯಿತು. ಆದರೆ ಮನಸ್ಸು ಒಳಗೇ ಇದನ್ನು ಬೇಡವೆನ್ನುತ್ತಿತ್ತು. ಅವಳು ಯಾವ ಮಾತನ್ನೂ ಆಡಲಿಲ್ಲ. ಆ ದಿನ ರಾತ್ರಿ ಊಟವಾದ ಮೇಲೆ ಕಂಠೀಜೋಯಿಸರೇ ಮಗಳೊಡನೆ ಮಾತು ತೆಗೆದಾಗ ಚೆನ್ನಿಗರಾಯರೂ ಇದ್ದರು. ಅವರಿಗೆ ಮಾವನವರೆಂದರೆ ಮೊದಲಿನಿಂದಲೂ ಭಯ. ತಮಗೆ ಶಿವಲಿಂಗನಿಂದ ಶ್ಯಾನುಭೋಗಿಕೆ ಕೊಡಿಸಿದವರೇ ಅವರು. ಅಕ್ಕಮ್ಮ ಮೊಮ್ಮಗಳು ಮರಿಮಗಳಿಗೆ ಹೇಳುವುದನ್ನೆಲ್ಲ ಅವರೂ ಈಗ ಮಾತನಾಡಿ, ಅಳಿಯನ ಕಡೆ ತಿರುಗಿ ಎಂದರು: 'ಏನಂತೀಯಾ ಚಿನ್ನಯ್ಯ? ಊರಿನಲ್ಲಿ ಅಷ್ಟೊಂದು ಜಮೀನು, ಮನೆ, ಮೇಲೆ ಮೂರುಸಾವಿರ ರೂಪಾಯಿ ನಿನ್ನ ಮಗಳಿಗೇ ಸೇರುತ್ತೆ. ಈಗ ಇನ್ನೊಂದು ಕಡೆ ಗಂಡು ಹುಡುಕಿ ನೀನು ಎಲ್ಲಿ ಅಂತ ಮದುವೆ ಮಾಡ್ತೀಯಾ? ಸುಮ್ಮನೆ ಹೂಂ ಅಂದುಬಿಡು.'

ಚೆನ್ನಿಗರಾಯರು ಏಕೆ ಬೇಡವೆಂದಾರು? 'ಆಗ್‌ಭೌದು. ಈ ಮುಂ....'ಎಂದವರು ನಾಲಿಗೆಯನ್ನು ಬಿಗಿ ಹಿಡಿದುಕೊಂಡು ಹೇಳಿದರು: 'ಇ ಇ ಇವ್ಳಿಗೆ ನೀವೇ ಹೇಳಿ. ನಂದೇನೂ ಇಲ್ಲ.'

'ನಿನ್ನ ಗಂಡನೂ ಒಪ್ಕಂಡಿದಾನೆ. ಏನಂತೀಯಾ ನಂಜಾ?'

ನಂಜಮ್ಮನಿಗೆ ಈಗಲೂ ಏನು ಹೇಳಬೇಕೆಂಬುದು ತಿಳಿಯಲಿಲ್ಲ. 'ಇರ್ಲಿ, ನಾಳೆ ಯೋಚನೆ ಮಾಡಿ ಮಾತಾಡಾಣ'–ಎಂದಳು.

'ಯೋಚನೆ ಮಾಡೂದೇನು ಅದರಲ್ಲಿ? ನಾವೆಲ್ಲ ಒಪ್ಪಿದಮ್ಯಾಲೆ ನಿಶ್ಚಯವಾದ ಹಾಗೇ. ಊರಿಗೆ ಹೋಗಿ ಎಲ್ಲಾ ಮಾಡುಸ್ತೀನಿ. ಇನ್ನು ಎಂಟು ದಿನದಲ್ಲಿ ಮದುವೆ ಮುಗಿಸ್ಬಿಡ್ತೀನಿ'–ಕಂಠೀಜೋಯಿಸರು ತೀರ್ಮಾನವನ್ನೇ ಹೇಳಿಬಿಟ್ಟರು.

'ನೀವು ಹ್ಯಾಗೂ ಒಂದು ನಾಕು ದಿನ ಇರ್ತೀರಲ್ಲ, ಮಾತಾಡಾಣ.'

'ಈಗ ಇದುಕ್ಕೆ ಬಿಡುವೇ ಇಲ್ಲ. ಊರಿಗೆ ಹೋಗಿ ಮದುವೆ ಸಾಮಾನು ಗೀಮಾನು ಮಾಡಬೇಕು. ನೀನು ಒಂದು ಕಾಸು ಖರ್ಚೂ ಇಟ್ಟುಕೋಬ್ಯಾಡ'–ಅಕ್ಕಮ್ಮ ಎಂದಳು.

ಅಕ್ಕಮ್ಮನಿಗೆ ಉಪ್ಪಿಟ್ಟಿನ ಫಲಾರ ಮತ್ತು ಉಳಿದವರಿಗೆ ಊಟವಾದ ಮೆಲೆ ಎಲ್ಲರೂ ಮಲಗಿದರು. ಬಂದಿದ್ದ ಇಬ್ಬರಿಗೂ ಬೇಗ ನಿದ್ದೆ ಬಂದುಬಿಟ್ಟಿತು. ಚೆನ್ನಿಗರಾಯರು ಗೊರಕೆ ಹೊಡೆಯುತ್ತಿದ್ದರು. ಹುಡುಗರೂ ಮಲಗಿಕೊಂಡರು. ಅಕ್ಕಮ್ಮನ ಹತ್ತಿರ ಮಲಗಿದ ನಂಜುವಿನ ಕಣ್ಣು ಮಾತ್ರ ಮುಚ್ಚಲಿಲ್ಲ. ಇದ್ದಕ್ಕಿದ್ದಹಾಗೆಯೇ ಬಂದ ಈ ಮಾತನ್ನು ಒಪ್ಪಿಕೊಳ್ಳುವ ಅಥವಾ ಬಿಡುವ ಮೊದಲೇ ಅವರು ತೀರ್ಮಾನವೇ ಮಾಡಿಬಿಟ್ಟಿದ್ದಾರೆ. ಅವರು ಹೇಳುವ ಹಾಗೆ ನಾಗಲಾಪುರದಲ್ಲಿ ಉಣ್ಣುವುದಕ್ಕೆ ತಿನ್ನುವುದಕ್ಕೆ ಯಾವ ತೊಂದರೆಯೂ ಇಲ್ಲ. ಕರಾವಿಲ್ಲದೆ ಅವರು ಎಂದೂ ಊಟ ಮಾಡುವುದಿಲ್ಲ. ವರ್ಷಕ್ಕಾಗಿ ಉಳಿಯುವಷ್ಟು ರಾಗಿ ಬತ್ತ ಭರಣ ಬೆಳೆಯುತ್ತಾರೆ. ಮೇಲೆ ಮೂರು ಸಾವಿರ ಇವಳಿಗೇ ಬರುತ್ತೆ. ಮೂರು ಸಾವಿರ ಎಂದರೆ ಕಮ್ಮಿ ಹಣವಲ್ಲ. ಅಷ್ಟು ರೂಪಾಯಿಯನ್ನೂ ಒಟ್ಟಿಗೆ ತಾವು ಕೈಲಿ ಸಹ ಮುಟ್ಟಿ ಕಂಡಿಲ್ಲ. ನಮ್ಮ ಹುಡುಗಿ ಇಲ್ಲಿ ಹುಟ್ಟಿದ

ಮೇಲೆ ಇದುವರೆಗೂ ಅನುಭವಿಸಿರುವ ಸುಖವಾದರೂ ಏನು? ಹೊಟ್ಟೆಗಾದರೆ ಬಟ್ಟೆಗಿಲ್ಲ, ಬಟ್ಟೆಗಾದರೆ ಹೊಟ್ಟೆಗಿಲ್ಲ–ಎಂಬ 0ಯೋಚನೆ ಸ್ವಲ್ಪ ಹೊತ್ತು ಅವಳ ಮನಸ್ಸಿನಲ್ಲಿತ್ತು. ಆದರೆ ಈ ಮಹಾಮಾರಿ ಮೊದಲ ಹೆಂಡತಿ ಇರುವಾಗ, ಅದೂ ತನ್ನ ಅಣ್ಣನಿಗೇ, ಹೆಣ್ಣು ಕೊಡಬಹುದೇ?–ಎಂಬ ಪ್ರಶ್ನೆ ತಾನಾಗಿ0ಯೇ ಸುಳಿಯಿತು. ಅಣ್ಣ0ಯ್ಯ ತನಗಿಂತ ಏಳು ವರ್ಷಕ್ಕೆ ದೊಡ್ಡವನು ಅಂದರೆ ಪಾರ್ವತಿಗೂ ಅವನಿಗೂ ಇಪ್ಪತ್ತೆರಡು ವರ್ಷ ವ್ಯತ್ಯಾಸ. ಮೂವತ್ತು ವರ್ಷ ವ್ಯತ್ಯಾಸವಿದ್ದು ಎರಡನೇ, ಮೂರನೇ, ಮದುವೆ ಮಾಡಿಕೊಂಡವರನ್ನು ಅವಳು ಕಾಣದೆ ಇರಲಿಲ್ಲ. ಮಕ್ಕಳಿಲ್ಲದ್ದಕ್ಕೆ ಹಿರಿ0ಯಳಿರುವಾಗಲೂ ಕಿರಿ0ಯ ಒಬ್ಬಳನ್ನು ತರುವುದೂ ಅಪರೂಪವಲ್ಲ. ಆದರೆ ಅಣ್ಣ0ಯ್ಯನಿಗೆ ಮಕ್ಕಳು 0ಯಾಕೆ ಆಗಿಲ್ಲ? ಅವನ ಹೊರಚಾಳಿಯಿಂದಲೇ ಆಗಿಲ್ಲವೋ, ಅಥವಾ ಅವಳೇ ಗೊಡ್ಡು ಹೆಂಗಸೋ? ಅವಳೇನೋ ಕಿರಾತಕ ಜಾತಿ0ಯ ಹೆಂಗಸು. ಆದರೆ ಇವನಿಗೆ ಕೊಟ್ಟರೆ ನನ್ನ ಮಗು ಸುಖವಾಗಿರುತ್ತದೆ0ಯೇ?

ಈ ಪ್ರಶ್ನೆಗೆ ಉತ್ತರ ಹುಡುಕಿಕೊಂಡು ನಾಳೆ ಬೆಳಿಗ್ಗೆ ಎದ್ದ ತಕ್ಷಣ ಅಕ್ಕಮ್ಮ, ಅಪ್ಪ, ಇಬ್ಬರಿಗೂ ಅವಳು ಸ್ಪಷ್ಟವಾಗಿ ಹೇಳಬೇಕು. ಇಂಥ ಪರಿಸ್ಥಿತಿ0ಯಲ್ಲಿ 0ಯಾರ ಜೊತೆ ಕಷ್ಟ ಸುಖ ವಿಚಾರ ಮಾಡಿ ಆಲೋಚನೆ ಮಾಡುವುದು? ಮನೆ ತುಂಬ ದಿನಸಿ ಧಾನ್ಯ, ಮೇಲೆ ಮೂರು ಸಾವಿರ ರೂಪಾಯಿ ಅಂದ ತಕ್ಷಣ ಹುಡುಗಿ0ಯ ಅಪ್ಪ ಅನ್ನಿಸಿಕೊಂಡ ಪ್ರಾಣಿ ಬಾಯಿ ಬಿಟ್ಟೇಬಿಟ್ಟಿತು. ಮಕ್ಕಳ ಮದುವೆಗೆ ತಂದೆ ತಾಯಿ ಇಬ್ಬರೂ ಕೂಡಿ ಆಲೋಚಿಸಬೇಕು. ಇಲ್ಲದ ಈ ಭಾಗ್ಯವನ್ನು ಬ0ಯಸಿ ಸುಮ್ಮಸುಮ್ಮನೆ ಮನಸ್ಸಿಗೆ ವ್ಯಥೆ ಮಾಡಿಕೊಳ್ಳುವುದು 0ಯಾಕೆ? ಇದ್ದಕ್ಕಿದ್ದಹಾಗೆ0ಯೇ ಮಾದೇವ0ಯ್ಯನವರ ನೆನಪಾಯಿತು. ಅವರನ್ನು ಕೇಳಿ ನಿಶ್ಚ0ಯ ಮಾಡುವುದೇ ವಿವೇಕವೆಂದು 0ಯೋಚಿಸಿ ಅವಳು, ಮೆಲ್ಲನೆ ಮಲಗಿದ್ದಲ್ಲಿಂದ ಎದ್ದು ಕತ್ತಲೆ0ಯಲಿ ್ಲ0ಯೇ ಹೊರಗೆ ಬಂದಳು. ಶಬ್ಧವಾಗದಂತೆ ಬಾಗಿಲು ಹಾಕಿಕೊಳ್ಳುತ್ತಿರುವಾಗ ಅವಳ ಹಿಂದೆ0ಯೇ ಪಾರ್ವತಿ0ಯೂ ಬಂದುದನ್ನು ಕಂಡ ಅವಳಿಗೆ ಹೆಚ್ಚು ಆಶ್ಚ0ರ್ಯವೆನಿಸಲಿಲ್ಲ. ಶಬ್ದ ಮಾಡಬೇಡವೆಂದು ಅವಳಿಗೆ ಸನ್ನೆಮಾಡಿ, ಮೆಲ್ಲಗೆ ಬಾಗಿಲು ಮುಚ್ಚಿ ಮುಂದೆ ನಡೆದಳು. ಹಿಂದೆ0ಯೇ ಪಾರ್ವತಿ ಬಂದಳು. ಗುಡಿಗೆ ಬಂದು ಅ0ಯ್ಯನವರನ್ನು ಎಬ್ಬಿಸಿ, ಅವರು ದೀಪ ಹಚ್ಚಿದಾಗ ಪಾರ್ವತಿ0ಯ ಕಣ್ಣಿನಲ್ಲಿ ನೀರು ಹರಿ0ಯುತ್ತಿದ್ದುದು ಅದರ ಬೆಳಕಿನಲ್ಲಿ ಕಂಡಿತು. ಅ0ಯ್ಯನವರೇ ಅಂದರು: 'ಏನವ್ವಾ, ಸ್ವಾದರಮಾವನ್ನ ಮದುವೆ0ಯಾಗಾದು ವಲ್ಲೆ ಅಂತ ಅಳ್ತಿದೀ0ಯಾ?'

'ನಿಮಗೆ ಇದೆಲ್ಲ ಹ್ಯಾಗೆ ಗೊತ್ತು ಅ0ಯ್ನೋರೇ?'–ನಂಜಮ್ಮ ಕೇಳಿದಳು.

'ಸಂಜೀನಾಗ ನಿಮ್ಮ ಅಪ್ಪಾಜಿ ಬಂದಿತ್ತು. ನನ್ನ ಕುಟ್ಟೆ ಎಲ್ಲಾನೂ ಹೇಳ್ತು. ನೀ ಏನಂತ 0ಯೋಚ್ನೆ ಮಾಡೀ0ಯಾ?'

'ನಂಗೆ ಏನೂ ತಿಳಿ0ಯಲಿಲ್ಲ ಅಂತ ಇಲ್ಲಿಗೆ ಬಂದೆ.'

ಅಷ್ಟರಲ್ಲಿ ರಾಮಣ್ಣ ಅಲ್ಲಿಗೆ ಬಂದು ಸೇರಿಕೊಂಡ. 'ಮನೇನ ಹಾಗೇ ಬಿಟ್ಟು ನೀನ್ಯಾಕೆ ಬಂದೆ?–ಎಂದು ಅಮ್ಮ ಕೇಳಿದಳು.

'ಹೊರಗಡೆಯಿಂದ ಮೆಲ್ಲಗೆ ಬೀಗ ಹಾಕ್ಕಂಡು ಬಂದಿದೀನಿ. ನನಗೂ ನಿದ್ದೆ ಬಂದಿರಲಿಲ್ಲ. ನೀವು ಇಲ್ಲಿಗೇ ಬಂದಿದೀರಾ ಅಂತ ಗೊತ್ತಾ0ಯ್ತು'–ಎಂದು ಅವನು ಬೀಗದ ಕೈ ತೋರಿಸಿದ.

'ಅಕ್ಕ0ಯ್ಯನ ಮದುವೆಗೆ ಏನು ಹೇಳ್ತೀ0ಯಪ್ಪಾ?'–ಅ0ಯ್ಯನವರು ಕೇಳಿದರು.

'ಬ್ಯಾಡ ಕಣ್ರೀ ಅ0ಯ್ನೋರೇ, ಕಲ್ಲೇಶಮಾವ ನರಸೀ ಮನೆಗೆ....'–ಎಂದು ಹೇಳುತ್ತಿದ್ದವನು, ಆ ಮಾತನ್ನು ದೊಡ್ಡವರೆದುರು ಆಡಬಾರದೆಂದು ತಕ್ಷಣ ನಿಲ್ಲಿಸಿ, 'ಅವ್ನಿಗೆ ಕೊಡೂದು ಬ್ಯಾಡ ಕಣ್ರೀ' ಎಂದ.

ಅ0ಯ್ಯನವರೆಂದರು: 'ನೋಡವ್ವ, ನಿನ್ನ ಮನಸ್ನಲ್ಲಿರೋದ್ನೇ ನಾನೂ ಅಂತೀನಿ. ಅಣ್ಣ ಅಂತ ಹೆಣ್ಣು ಕೊಡಬ್ಯಾಡ. ನನ್ನ ಕೇಳಿದ್ರೆ ಈ ಸುತ್ನಲ್ಲೇ 0ಯಾರೂ ಬ್ಯಾಡ. ವಿವೇಕವಾಗಿರೋರು 0ಯಾರವ್ರೆ? ಸರ್ಕಾರಿ ಕೆಲ್ಸದಾಗಿರೋರೇ ವೈನವಾದ ಗಂಡುಗಳು. ಏನೇ ಕಷ್ಟ ಬಿದ್ರೂ ಒಬ್ರು ಇಸ್ಕೂಲು ಮೇಷ್ಟ್ರಂಥೋರಿಗೆ ಕೊಡು. ಮ0ರ್ಯಾದೆ0ಯಾಗಿರ್ತಾರೆ. ಉಳಿದೋರೆಲ್ಲ ತಲೆಹೋಕಗಳು.'

ಪಾರ್ವತಿ0ಯ ಮನಸ್ಸಿನಲ್ಲಿದ್ದುದನ್ನೆ ಅ0ಯ್ಯನವರು ಹೇಳಿದರು. ಅವರ ಮಾತು ಸಾಧುವಾದುದೆಂದು ನಂಜಮ್ಮನಿಗೆ ತೋರಿತು. 'ಆದರೆ'–ಅವಳು ಧ್ವನಿ ತಗ್ಗಿಸಿ ಹೇಳಿದಳು. 'ಹುಡುಗಿ ವ0ಯಸ್ಸು ನೋಡಿ. ದೊಡ್ಡೋಳಾಗಿಬಿಟ್ರೆ ಮುಂದೆ ಗತಿ?'

'ಈಗ ದೊಡ್ಡ ಊರುಗಳಲ್ಲಿ ಅದೆಲ್ಲ ಇಲ್ವಂತೆ. ಅಂತಾ ಊರಲ್ಲೇ 0ಯಾರಿಗಾದ್ರೂ ನೋಡಿ ಕೊಡಿ. ಈಗೇನು, ಹ್ಯಂಗೂ ಸರ್ಕಾರೀ ದಿನಸಿ ಲೆಕ್ಕ ಕೈ0ಯಾಗೈತೆ. ನಿಮ್ಮ ಶ್ಯಾನುಭೋಕಿ ಹಳ್ಳೀಲಿ ಚಂದಾ ಎತ್ತಿದ್ರೆ ಒಂದ್ಹೈನೂರು ಆರುನೂರು ಏನೂ ಕಷ್ಟದ ಗಂಟಲ್ಲ.

'ದೊಡ್ಡ ಊರ್ನಲ್ಲಿ ತುಂಬ ವರದಕ್ಷಿಣೆ ಕೇಳ್ತಾರಂತೆ ಕಣ್ರೀ ಅ0ಯ್ನೋರೇ. ನಾನು ಹೆಣ್ಣುಮಗಳ ಮದ್ವೆ ಮಾಡಿ ಗೆಲ್ತೀನೇ ಅನ್ಸಿದೆ.'

'ಅಮ್ಮ, ನಾನು ಹ್ಯಾಗೂ ಮುಂದ್ಲ ಕ್ಲಾಸಿನಲ್ಲಿದೀನಲ್ಲ. ಅಕ್ಕಯ್ಯಂಗೆ ಪಾಠ ಹೇಳ್ಕೊಡ್ತೀನಿ. ಅವ್ಳಿಗೂ

ಲೋಂಯರ್ ಸೆಕೆಂಡರಿ ಪ್ರೈವೇಟ್‌ನಲ್ಲಿ ಮಾಡಿಸಿಬಿಟ್ರೆ ಸ್ಕೂಲು ಮೇಡಂ ಮಾಡಿಸ್‌ಭೌದು. ಮದುವೆಂಯಾಗದೆ ಇದ್ರೆ ಕತ್ತೆಬಾಲ ಕುದುರೆಜುಟ್ಟು'–ರಾಮಣ್ಣ ಎಂದ.

'ಅದ ಆಮ್ಯಾಲೆ ನೋಡ್ಕಳಾಣ. ಬೇಕಾದ್ರೆ ಮೇಷ್ಟ್ರು ಂಯಂಕ್‌ಟೇಶಂಯ್ನೋರುನ್ನ ಒಂದು ಮಾತು ಕೇಳಿ. ಆಮ್ಯಾಲೆ ನಿಮ್ಮ ಅಪ್ಪಾಜಿಗೆ ಜವಾಬು ಹೇಳಿ.'

ಅಮ್ಮ ಹೇಳಿದಂತೆ ರಾಮಣ್ಣ ವೆಂಕಟೇಶಂಯ್ಯನವರನ್ನು ಕರೆತರಲು ಹೋದ. 'ಂಯಾರನ್ನೂ ಎಬ್ಬಿಸಕೂಡದು. ಂಯಾರಿಗೂ ಗೊತ್ತಾಗಬಾರದು'–ಎಂದು ಅಮ್ಮ ಎಚ್ಚರ ಹೇಳಿದಳು. ಸ್ವಲ್ಪ ಹೊತ್ತಿನಲ್ಲಿ ಮೇಷ್ಟರು ಬಂದರು. ಪಾರ್ವತಿ ಎದ್ದು ಹೋಗಿ ಕಂಬದ ಮರೆಂಯಲ್ಲಿ ಕುಳಿತಳು. ಇರುವ ಸಂಗತಿಂಯನ್ನೆಲ್ಲ ನಂಜಮ್ಮ ಬಿಡಿಸಿ ಹೇಳಿದಮೇಲೆ ಮೇಷ್ಟರು ಎಂದರು. 'ಅಮ್ಮಾ, ಅರಸೀಕೆರೆ ಬಾಣಾವರ ಆ ಕಡೇಲೆಲ್ಲ ಸಣ್ಣ ಊರುಗಳಲ್ಲೇ ಹೆಣ್ಣುಮಕ್ಳು ಮದುವೆಂಯಾಗೋಕೆ ಮುಂಚೆಂಯೇ ಮೈನೆರೆದಿರ್ತಾರೆ. ಂಯಾರೂ ಬಾಯಿ ಬಿಟ್ಟು ಮಾತ್ರ ಹೇಳುಲ್ಲ. ಅದುಕ್ಕೆ ನೀವು ಹೆದುರ್ಕಾಬ್ಯಾಡಿ. ನಾನು ಬೇಕಾದ್ರೆ ಹುಡುಕಿ ಗಂಡು ಗೊತ್ತುಮಾಡ್ತೀನಿ. ಪ್ರೈಮರಿ ಸ್ಕೂಲು ಮೇಷ್ಟ್ರು ಅಂದ್ರೆ ಸಂಬಳ ಕಮ್ಮಿ. ಅಂಥೋರು ಸಿಕ್ತಾರೆ. ನೀವು ದುಡ್ಡು ಜೊತೆ ಮಾಡ್ಕಳಿ. ಐನೂರು ಆರು ನೂರಾದ್ರೆ ಸಾಕು.'

'ಮೇಷ್ಟ್ರೇ, ಹುಡುಗನ ಂಯೋಗ್ತಿ ಚೆನ್ನಾಗಿರಬೇಕು. ಅವಿವೇಕ ಇರಕೂಡದು. ಸಂಬ್ಳ ಕಮ್ಮಿಂಯಾದ್ರೆ ನಮ್ಮ ಹುಡುಗೀಗೆ ಎಲೆ ಹಚ್ಚೋಕೆ ಬರುಲ್ವೆ? ಮನೇಲಿ ಕೂತು ಅದ್ರಲ್ಲೇ ತಿಂಗ್ಳಿಗೆ ಏನಿಲ್ಲ ಅಂದ್ರೂ ಹದಿನೈದು ರೂಪಾಯಿ ದುಡೀತಾಳೆ.'

'ಅದು ನಂಗೆ ಗೊತ್ತಿಲ್ವೆ? ಪಾರ್ವತಮ್ಮನ ಕೈಹಿಡೀಬೇಕಾದ್ರೆ ಂಯಾವನಾದ್ರೂ ಪುಣ್ಯ ಮಾಡಿರ್ಬೇಕು.'

ಅಂತೂ ತೌರಿಗೆ ಹೆಣ್ಣನ್ನು ಹಿಂತಿರುಗಿ ಕೊಡಕೂಡದೆಂದು ನಿಶ್ಚಂಯವಾಯಿತು. ''ನಾನು ವಲ್ಲೆ ಅಂತ ಹುಡುಗಿ ಹಟಹಿಡಿದುಬಿಡ್ಲಿ. 'ಹುಡುಗಿಂಯೇ ಹೀಗಂತಾಳೆ ನಾನೇನು ಮಾಡ್ಲಿ? ಋಣಾನುಬಂಧವಿಲ್ಲ'–ಅಂತ ನೀವು ಜಾರಿಕಂಡುಬಿಡಿ. ಸುಮ್‌ಸುಮ್ನೆ ವರಟಾಗಿ ಹೆಣ್ಣು ಕೊಡುಲ್ಲ ಅಂತ ಅನ್ಲೇಬ್ಯಾಡಿ''–ಎಂದು ಮೇಷ್ಟರೇ ಹೇಳಿಕೊಟ್ಟರು.

ಮೂವರೂ ಬಂದು ಶಬ್ಧವಾಗದಂತೆ ಮನೆಂಯ ಬಾಗಿಲು ತೆಗೆದು ಮಲಗಿದರು.

ಬೆಳಿಗ್ಗೆ ಎದ್ದ ತಕ್ಷಣ, ತಾವು ಹೊರಡಬೇಕೆಂದು ಗಡಿಬಿಡಿ ಮಾಡಿದ ಕಂಠೀಜೋಯಿಸರು ಕೇಳಿದರು:

'ನಂಜಾ, ಇನ್ನು ಎಂಟು ದಿನಕ್ಕೆ ಒಂದು ಲಗ್ನ ಇದೆ. ಮದುವೆ ಇಲ್ಲಿ ನಿನ್ನ ಮನ್ಲಿ ಮಾಡಾಣೋ ಅಥವಾ ಅಲ್ಲೇ ಆಗ್ಲೋ?'

'ಅಪ್ಪಾ, ಮದುವೆಂಯಾಗೋ ಹುಡುಗೀನ ಒಂದು ಮಾತು ಕೇಳಿ ಏನಾದ್ರೂ ತೀರ್ಮಾನ ಮಾಡಾಣ. ನಾವು ನಾವೇ ಮಾತಾಡ್ಕಂಡ್ರೆ ಹ್ಯಾಗೆ?'

'ಅವ್ಳನ್ನೇನ್ ಕೇಳಾದು? ನಿನ್ನ ಮದುವೇಲಿ ನಾನು ನಿನ್ನ ಕೇಳಿದ್ನೆ? ಲೇ ಪುಟ್ಟಾ, ಬಾರೇ ಇಲ್ಲಿ'–ಎಂದು ಮೊಮ್ಮಗಳನ್ನು ಕರೆದು ಕಂಠೀಜೋಯಿಸರು ಕೇಳಿದರು: 'ಏನಂತೀಂಯೇ ನೀನು?'

ಪಾರ್ವತಿ ತಕ್ಷಣ ಮಾತನಾಡಲಿಲ್ಲ. ಅಜ್ಜಂಯ್ಯನೇ ಇನ್ನೊಂದು ಸಲ ಕೇಳಿದ ಮೇಲೆ, 'ನಂಗೆ ಬ್ಯಾಡ' ಎಂದಳು.

'ಂಯಾಕೆ ಬ್ಯಾಡ?'

'ನಂಗೆ ಇಷ್ಟವಿಲ್ಲ, ಬ್ಯಾಡಕಣಜ್ಜಂಯ್ಯ'–ಎಂದು ಹೇಳಿ ಅವಳು ಅಡಿಗೆಮನೆಗೆ ಹೊರಟುಹೋದಳು.

'ಏನೇ ನಂಜಾ, ಇವ್ಳು ಹೀಗಂತಾಳೆ?'

'ಅವ್ಳಿಗೆ ಇಷ್ಟವಿಲ್ಲದಮ್ಯಾಲೆ ಬ್ಯಾಡ ಬಿಡಪ್ಪ.'

ಕಂಠೀಜೋಯಿಸರಿಗೆ ರೇಗಿತು. ತಾವೂ ಅಡಿಗೆಂಯಮನೆ ಒಳಗೆ ಹೋಗಿ ಪಾರ್ವತಿಂಯ ಮುಂದೆ ನಿಂತು–

'ಂಯಾಕೆ ಬ್ಯಾಡ?' ಎಂದು ಮತ್ತೆ ಕೇಳಿದರು.

'ನಂಗೆ ಇಷ್ಟವಿಲ್ಲ. ನನ್ನ ಬಲವಂತ ಮಾಡಕೂಡ್ದು'–ಅಂದದ್ದೇ ತಡ, ತೆಗೆದು ಅವಳ ಕಪಾಳಕ್ಕೆ ಒಂದು ಬಾರಿಸಿಬಿಟ್ಟರು. ಪಾರ್ವತಿಂಯನ್ನು ಅವಳ ಅಮ್ಮನೇ ಒಂದು ದಿನವೂ ಹೊಡೆದಿರಲಿಲ್ಲ. ಶಬ್ದ ಕೇಳಿದ ತಕ್ಷಣ ನಂಜಮ್ಮ ಒಳಗೆ ಬಂದು ಹೇಳಿದಳು. 'ಅಪ್ಪಾ, ಆ ಹುಡುಗೀನ ಂಯಾಕೆ ಹೊಡೀತೀಂಯಾ? ಮನಸ್ನಲ್ಲಿ ಬಂದ ಹಾಗೆ ಎಲ್ಲಾ ಆಗಿಬಿಡಬೇಕು ಅಂತ ನಿನ್ನ ಹಟ. ನನ್ನ ಮದುವೆನಾದ್ರೂ ಸ್ವಲ್ಪ ಹಿಂದುಮುಂದು ವಿಚಾರಿಸಿ ಮಾಡಿದೆಂಯಾ? ಅಣ್ಣಂಯ್ಯನ ಮದುವೇನ ಸರಿಂಯಾಗಿ ವಿಚಾರಿಸಿ ಮಾಡಿದೆಂಯಾ? ಮಕ್ಳು ಆಗೂದು ಬಿಡೂದು ಹಣೇಬರಹದಲ್ಲಿರಬೇಕು. ಆದರೆ ಹುಡುಗೀ ಗುಣ ಸ್ವಭಾವಾನ ವಿಚಾರಿಸಿ ಮಾಡಿದ್ರೆ ಅವ್ನಿಗೆ ಒಳ್ಳೇ ಹೆಂಡ್ತಿಂಯಾದ್ರೂ ಸಿಕ್ತಿದ್ಲು.'

'ಈಗ ನಿಂಗೇನಾಗಿದೆ?'

'ಇನ್ನೇನಾಗಬೇಕು? ಇದ್ದಬಿದ್ದ ಜಮೀನೆಲ್ಲ ಕಳದು ನಿನ್ನ ಅಳಿಂಯ ಬೀಗಿತ್ತಿ ಸೇರ್ಕಂಡು ಸಂಸಾರ ಈ ಸ್ಥಿತಿಗೆ ತಂದ್ರು. ನಾನು ಕಷ್ಟಪಟ್ಟು ದುಡೀದೇ ಇದ್ರೆ ಮಕ್ಳು ಹೊಟ್ಟೇಗಿಲ್ಲದೆ ಸಾಯ್ತಿದ್ವು.'

‘ಅದುಕ್ಕೆಯೇ ತಿನ್ನುಕ್ಕೆ ಉಣ್ಣುಕ್ಕೆ ಇದೆ ಅಂತಲೇ ಕಲ್ಲೇಶನಿಗೆ ಕೊಡು ಅಂದುದ್ದು.’
‘ನೀವು ಯಾರು ಏನಂದ್ರೂ ಹುಡುಗಿಯೇ ಬ್ಯಾಡ ಅಂದ್ಮೇಲೆ ನಾನು ಕೊಡುಲ್ಲ. ಅವ್ನಿಗೆ ಮಾಡ್ಲೇ ಬೇಕು ಅಂದ್ರೆ ಇನ್ನೆಲ್ಲಾದ್ರೂ ಹೆಣ್ಣು ಹುಡುಕು ಹೋಗು.’
‘ಹಾಗಾದ್ರೆ ನೀನು ಮಗಳಲ್ಲ, ನಾನು ಅಪ್ಪನಲ್ಲ. ಬಾಂಚೋತ್ ಲೌಡಿ’–ಎನ್ನುತ್ತಾ ಹೊರಗೆ ಬಂದ ಕಂಠೀಜೋಯಿಸರು, ‘ನಡಿ ಅಕ್ಕಮ್ಮ, ಈ ಮಾದಿಗಿತ್ತಿ ಮನ್ಲಿ ಒಂದು ಹನಿ ನೀರೂ ಕುಡೀಬಾರ್ದು’–ಎಂದು ತಮ್ಮ ಬಟ್ಟೆಗಳನ್ನು ಜೋಡಿಸಿಕೊಂಡು ಹೋಗಿ, ಮನೆಯ ಮುಂದೆ ನಿಂತಿದ್ದ ಗಾಡಿಯ ಮೇಲೆ ಕುಳಿತರು. ತಾವು ಬಂದ ಕಾರ್ಯವಾಗಲಿಲ್ಲವೆಂದು ಅಕ್ಕಮ್ಮನಿಗೂ ಸಿಟ್ಟು ಬಂದಿತ್ತು. ಅವಳೂ ತನ್ನ ಸೀರೆಯ ಗಂಟು ಕಟ್ಟಿಕೊಂಡು ಹೋಗಿ ಗಾಡಿಯನ್ನೇರಿದಳು. ಆಳು ಕೊರಳೆತ್ತುವ ಮುನ್ನ ನಂಜಮ್ಮನೇ ಹೊರಗೆ ಬಂದು, ‘ಋಣಾನುಬಂಧವಿಲ್ಲ, ಆಗುಲ್ಲ. ಅದಕ್ಯಾಕೆ ಸಿಟ್ಮಾಡ್ಕಂಡು ಹೋಗ್ತೀರ? ಇವತ್ತು ಇದ್ದು ಹೋದ್ರೆ ಆಗುಲ್ವೆ?’ ಎಂದದ್ದಕ್ಕೆ ಅಕ್ಕಮ್ಮ, ‘ನಿನ್ನ ಸಾಕಿ ಬೆಳೆಸಿ ಬಾಣಂತನ ಮಾಡಿದ್ದುಕ್ಕೆ ನಂಗೆ ಒಳ್ಳೇ ಮರ್ಯಾದೆ ಕೊಟ್ಟೆ’ ಎಂದಳು. ಕಂಠೀಜೋಯಿಸರು–‘ನನ್ನ ಮಾತಾಡುಸ್ಬೇಡ. ನೀನು ಮಗಳಲ್ಲ ನಾನು ಅಪ್ಪನಲ್ಲ ಅಂತ ಹೇಳ್ಲಿಲ್ವೇನೆ?’ ಎಂದುಬಿಟ್ಟರು. ನಂಜಮ್ಮ ಮತ್ತೆ ಮಾತನಾಡಲಿಲ್ಲ.

– 4–

ಎಂಟು ದಿನ ಕಳೆದಿತ್ತು. ಒಂದು ಇಳಿಮಧ್ಯಾಹ್ನ ನಂಜಮ್ಮ, ಪಾರ್ವತಿ, ಇಬ್ಬರೂ ಜೋಡಿಯಲ್ಲಿ ಒಂದೇ ಗೂಟ ಹಿಡಿದು ರಾಗಿ ಬೀಸುತ್ತಾ ಕುಳಿತಿದ್ದರು. ಮನೆಯಲ್ಲಿ ಮತ್ತೆ ಯಾರೂ ಇರಲಿಲ್ಲ. ಯಾರೋ ಒಳಗೆ ಬಂದ ಹಾಗಾಯಿತು. ನಂಜಮ್ಮ ಕತ್ತು ತಿರುಗಿಸಿ ನೋಡುತ್ತಾಳೆ: ನರಸಿ. ನರಸಿ ಇದುವರೆಗೆ ಒಂದು ದಿನವೂ ಈ ಮನೆಗೆ ಬಂದಿಲ್ಲ. ಅವಳ ಅಂಗಡಿಯ ಮುಂದೆ ಹಾಯ್ದು ಹೋಗುವಾಗಲೂ ನಂಜಮ್ಮ ತಾನಾಗಿಯೇ ಅವಳನ್ನು ಮಾತನಾಡಿಸುತ್ತಿರಲಿಲ್ಲ. ಅವಳಾಗಿಯೇ, ‘ಏನ್ರವ್ವಾ, ಕುರುಬರಳ್ಳೀಗ್ ಹ್ವಂಟ್ರಾ?’ ಎಂದರೆ ‘ಹೂಂ’ ಎನ್ನುತ್ತಿದ್ದುದೆಷ್ಟೋ ಅಷ್ಟೇ. ಈಗ ಅವಳೇ ಬಂದಿದ್ದಾಳೆ. ಮನೆಗೆ ಬಂದವಳನ್ನು ಮಾತನಾಡಿಸದೆ ಇರಬಾರದು. ಇಷ್ಟಕ್ಕೂ ನರಸಿಗೂ ತನಗೂ ಜಗಳವೇನೂ ಇಲ್ಲ. ಆದರೆ ಅವಳ ನಡತೆ, ವಿಶ್ವಾಸ ಮಾಡುವಂಥದಲ್ಲ.

‘ಕೂತ್ಕಳಮ್ಮ’–ಎಂದು ನಂಜಮ್ಮ ಹೇಳಿದಮೇಲೆ ನರಸಿ ಕಂಬವನ್ನೊರಗಿ ಕೂತಳು. ಪಾರ್ವತಿ ಮೇಲೆ ಎದ್ದು ಅಡಿಗೆ ಮನೆಗೆ ಹೋಗಿಬಿಟ್ಟಳು. ಯಾವುದೋ ಮುಖ್ಯ ವಿಷಯವಿರಬೇಕು, ಇಲ್ಲದಿದ್ದರೆ ಅವಳು ಮನೆಗೆ ಬರುತ್ತಿರಲಿಲ್ಲ. ಎಂದು ಯೋಚಿಸಿದ ನಂಜಮ್ಮ ಕೇಳಿದಳು: ‘ಏನಮ್ಮ ಬಂದೆ?’

‘ಅವ್ವಾ, ನಿಮ್ಕುಟ್ಟೆ ಒಂದು ಸಮಾಚಾರ ಏಳ್ಬೇಕು ಅಂತ ಬಂದೆ. ನಿಮ್ಮ ಪಾರ್ವತವ್ವಾರುನ್ನ ನಿಮ್ಮಣ್ಣಾರಿಗೆ ಕೊಡ್ತೀರಂತೆ ನಿಜವಾ?’

‘ನಿಂಗೆ ಯಾರು ಹೇಳಿದ್ರು?’

‘ಶಿಂಗೇನಳ್ಳೀಲಿ ನಮ್ಮ ನ್ಯಂಟ್ರಿಲ್ವಾ, ಅವ್ರಿಗೆ ನಾಗಲಾಪುರದಾಗೆ ನ್ಯಂಟ್ರವ್ರೆ. ನಾಗಲಾಪುರದಾಗೆ ಹಂಗಂತ ಮಾತಾಡ್ಕಂತಿದ್ರಂತೆ.’

ಆದರೆ ಒಳವಿಷಯವನ್ನೆಲ್ಲ ಅವಳ ಕೈಲಿ ಹೇಳಲು ನಂಜಮ್ಮನಿಗೆ ಇಷ್ಟವಾಗಲಿಲ್ಲ. ‘ಅದೆಲ್ಲ ಸುಳ್ಳು ಕಣಮ್ಮ’–ಎಂದಳು.

‘ನಿಮ್ಮಯ್ಯಾರೂ ಅಜ್ಜವ್ವನೂ ಬಂದಿದ್ರಲ್ಲ, ಅದ್ಕೇ ಬಂದಿರಬೈದು ಅಂತ ನಾನು ಅರ್ತ ಮಾಡ್ಕಂಡಿದ್ದೆ. ಸುಳ್ಳೇ ಆಗ್ಲಿ. ನಾನ್ ಹಿಂಗಂದೆ ಅಂತ ಯಾರ್ಕುಟ್ಟೂ ಏಳ್ಬ್ಯಾಡಿ. ನೀವು ಅಣ್ಣಾ ತಂಗಿ ಚಂದಾಗಿದ್ರೆ ನಂಗೇನ್ ಹ್ವಟ್ಟೆಕಿಚ್ಚಾ? ಆ ಎಣ್ಮಗ ಕೊಡ್ಬ್ಯಾಡಿ.’

ಈ ಮಾತಿಗೆ ಏನು ಹೇಳುವುದಕ್ಕೂ ತಿಳಿಯದೆ ನಂಜಮ್ಮ ಅವಳ ಮುಖ ನೋಡಿದಳು. ನರಸಿಯೇ ಎಂದಳು: ‘ಅಂತೋರಿಗ್ ಕೊಡಾಬದ್ಲು ಬಾವಿಗೆ ನೂಕಿದ್ರೆ ಸುಖವಾಗಿ ಸಾಯ್ತದೆ.’

‘ನಮ್ಮಣ್ಣಯ್ಯ ಈಗ್ಲೂ ನಿನ್ನ ಮನ್ಗೆ ಬತ್ತಾರೇನಮ್ಮ?’

‘ಇಲ್ಲ. ಈಗ ನಾಕು ವರ್ಷದಾಗೆ ನಾನೇ ಒದ್ದು ದೂರ ಮಾಡ್ದೆ. ಸೂಳೆ ತಾವುಕ್ ಓದ್ರೂ ಆ ವಯ್ಯಂಗೆ ನೀಯತ್ತಿಲ್ಲ.’

ನಂಜಮ್ಮ ಮಾತನಾಡಲಿಲ್ಲ. ಬೆಳೆದ ಹುಡುಗಿ ಪಾರ್ವತಿ ಅಡಿಗೆಮನೆಯಲ್ಲಿದ್ದಾಳೆ. ಅವಳಿಗೆ ಕೇಳುವಂತೆ ಇಂಥಾ ಮಾತುಗಳನ್ನಾಡಬಾರದು. ಆದರೆ ಈ ಸೂಕ್ಷ್ಮ ನರಸಿಗೆ ಎಲ್ಲಿಂದ ಬರಬೇಕು? ‘ಹೋಗ್ಲಿ ಬಿಡು ನರಸಮ್ಮ , ಆ ಮಾತು ಬ್ಯಾಡ.’

‘ನಾನೇನು ಆ ವಯ್ಯನ ಮ್ಯಾಲಿನ ಸಿಟ್ಟಿಗೆ ಏಳ್ತಿಲ್ಲ ಕಣವ್ವ. ನೂರು ಜನ ಬತ್ತಾರೆ, ನೂರು ಜನ ಹೋಯ್ತಾರೆ. ನಾನು ಯಾವನ ಮ್ಯಾಲಿನ ಸಿಟ್ನೂ ಗ್ಯಾಪಕ್ದಾಗೆ ಮಡೀಕಳಾದಿಲ್ಲ. ಪಾರ್ವತವ್ವ ನನ್ನ ಮಗಳಿದ್ದಾಂಗೆ. ಯಾರಾದ್ರೂ ಅಪ್ಪಂಗ್ಹುಟ್ಟಿದ ನಿಯತ್ತುಗಾರಂಗೆ ಕೊಟ್ಟಿ ಮದ್ವೆ ಮಾಡಿ. ನನ್ ತಾವ ಮನೀಕಂಡಿದ್ದು ನಡುರಾತ್ರೀಲಿ ನಂಗೆ ನಿದ್ದೆ ಬಂದಾಗ ಅಂಗ್ಡಿ ದುಡ್ಡು ಎಗರಿಸ್ಕಂಡು ಜೇಬಿಗೆ ಆಕ್ಯಬೌದಾ ಆ

ವ೦ಯ್ಯ?'
ನಂಜಮ್ಮ ಈಗಲೂ ಮಾತನಾಡಲಿಲ್ಲ. ತಾನು ಬಂದ ಕೆಲಸವಾಯಿತೆಂಬಂತೆ–'ನಾನು ಹೋಯ್ತೀನಿ ಕಣ್ರವ್ವ. ಮನಸ್ಸು ತಡೀಲಿಲ್ಲ. ಏಳ್ಹೋಗಾನಾ ಅಂತ ಬಂದೆ' ಎಂದ ಮೇಲೆ ಎದ್ದು ನರಸಿ ಹೊರಟುಹೋದಳು. ಅವಳು ಹೋದಮೇಲೆ ಪಾರ್ವತಿ ಹೊರಗೆ ಬಂದು ಮತ್ತೆ ಬೀಸುವ ಕಲ್ಲಿನ ಗೂಟ ಹಿಡಿದುಕೊಂಡಳು. ಒಂದೇ ಕಲ್ಲನ್ನು ಹಿಡಿದು ಬೀಸುತ್ತಿದ್ದ ತಾಯಿ ಮಗಳು, ಇಬ್ಬರ ಮನಸ್ಸೂ ಒಂದೇ ವಿಷ೦ಯವಾಗಿ ೦ಯೋಚಿಸುತ್ತಿತ್ತು. ಈ ಮದುವೆ ಬೇಡವೆಂದು ಹೇಳಿ ಕಳಿಸಿದುದು ತುಂಬ ಒಳ್ಳೆ೦ಯದಾಯಿತೆಂದು ಇಬ್ಬರೂ ೦ಯೋಚಿಸುತ್ತಿದ್ದರೂ ೦ಯಾರೂ ಬಾಯಿ ಬಿಟ್ಟು ಏನೂ ಆಡಲಿಲ್ಲ.

– 5–

ಈ ಬಾರಿ ಮಗಳ ಮದುವೆ ಮಾಡಿ ಮುಗಿಸಲೇಬೇಕೆಂದು ನಂಜಮ್ಮ ನಿಶ್ಚಯಿಸಿದಳು. ದುಡ್ಡಿನ ವ್ಯವಸ್ಥೆ ಮಾಡಿಕೊಳ್ಳದೆ ಗಂಡು ಹುಡುಕಲು ಹೊರಟು, ಅಕಸ್ಮಾತ್ ಗಂಡು ನಿಶ್ಚ೦ಯವಾಗಿ ಕೈಲಿ ಕಾಸಿಲ್ಲದೆ ಅವಮಾನವಾಗುವ ಸ್ಥಿತಿ ಬರಬಾರದೆಂಬ ೦ಯೋಚನೆ೦ಯೂ ಬಂತು. ಈಗ ದಿನಸಿ ಲೆಕ್ಕ ಬಂದಮೇಲೆ ಕಂದಾ೦ಯದ ಮುಂಗಡ ಬರೆಸಿ ಕುರುಬರಹಳ್ಳಿಯಿಂದ ರಾಗಿ ತರುವುದು ನಿಂತಿತ್ತು. ಅಲ್ಲದೆ ಲೆಕ್ಕ ಹೆಚ್ಚು ಬರೆ೦ಯುವುದಕ್ಕೆ ಸರ್ಕಾರದವರು ಪ್ರತ್ಯೇಕವಾಗಿ ವರ್ಷಕ್ಕೆ ನೂರು ರೂಪಾಯಿ ಕೊಡುತಿದ್ದರು. ಒಟ್ಟಿನಲ್ಲಿ ಇನ್ನೂರ ಇಪ್ಪತ್ತು ರೂಪಾಯಿ ತನ್ನ ಕೈಗೆ ಬರುತ್ತದೆ ಎಂಬ ಖಾತ್ರಿ ಏನೋ ಇದೆ. ಆದರೆ ಸಾಲಾಖೈರಿನಲ್ಲಿ ೦ಯಜಮಾನರು ತಿಪಟೂರಿಗೆ ಹೋಗಿ ೦ಯಾರಿಗೂ ಗೊತ್ತಾಗದಂತೆ ಪೋಟಿಕೆ ಫುಡ್‌ಪೋಟಿಕೆಗಳನ್ನು ಖರ್ಚು ಹಾಕಿಸಿಕೊಂಡು ತಿಂದುಬಿಟ್ಟರೆ?– ಎಂಬ ಒಂದು ೦ಯೋಚನೆ೦ಯೂ ಇತ್ತು. ಒಂದು ದಿನ ಗುಂಡೇಗೌಡರು ಬಂದಿದ್ದಾಗ, ಅವರೂ ಸೇರಿ ಕುರುಬರಹಳ್ಳಿ೦ಯ ಒಟ್ಟು ಆರು ಜನದ ಹೆಸರಿಗೆ, ತಾನೇ ಆ ವರ್ಷದ ಕಂದಾ೦ಯದ ರಶೀತಿಗಳನ್ನು ಬರೆದು ಅದಕ್ಕೆ ರುಜು ಮಾಡುವಂತೆ ಗಂಡನಿಗೆ ಹೇಳಿದಳು.
ಅವರು–'ನಾನು ಮಾಡುಲ್ಲ' ಎಂದರು.
'ಗೌಡ್ರೇ, ಮಗಳ ಮದುವೆ ಮಾಡ್‌ಬೇಕು ಈ ದುಡ್ಡು ನಿಮ್ಮ ಹತ್ರ ಇರ್ಲಿ. ನೀವೇ ಹೇಳಿ ರುಜು ಮಾಡಿಸಿ'– ಎಂದು ನಂಜಮ್ಮ ವಿವರಿಸಿದಮೇಲೆ ಗೌಡರು ಕೇಳಿದರು: 'ಲೇ ಚೆನ್ನ೦ಯ್ಯ, ಅದುಕ್ಕೆ ರುಜು ಹೆಟ್ಟೀ೦ಯೋ ನಿಂಗೆ ಇಡ್ಕಂಡು ಗುದಿಗೆ ಮಡಗ್ಬೇಕೋ?'
'ಅದ್ಯಾಕ್ರೀ ನೀವೂ ಅವ್ಳೂ ಸೇರ್ಕಂಡು ನಂಗೆ ಒಂದು ಕಾಸೂ ಇಲ್ದಹಾಗೆ ಮಾಡ್ತೀರಾ? ನಾನೇನು ಶ್ಯಾನುಭೋಗನೆ ಅಲ್ವ? ನಾನು ರುಜು ಹಾಕುಲ್ಲ ಅಂದ್ರೆ ಏನು ಮಾಡ್ತೀರಿ?'
'ಗುದಿಗೆ ಬುಡ್ತೀನಿ ನೋಡು. ನೀನು ನಮ್ಮೂರಿಗೆ ಹ್ಯಾಂಗೆ ಕಾಲಿಡ್ತೀ೦ಯಾ ನೋಡ್ತೀನಿ ತಡಿ'–ಎಂದು ಗೌಡರು ತಮ್ಮ ತಿರುಗಾಡುವ ದೊಣ್ಣೆ೦ಯನ್ನು ಕೈಗೆ ತೆಗೆದುಕೊಂಡು ಎದ್ದು ನಿಂತದ್ದಕ್ಕೆ ಚೆನ್ನಿಗರಾ೦ಯರು ಹೆದರಿ ಎಲ್ಲದಕ್ಕೂ ರುಜು ಹಾಕಿದರು. ಆದರೆ ಅವರ ಕೋಪ ಮಾತ್ರ ನಿಲ್ಲಲಿಲ್ಲ. 'ಮಾದಿಗಂಗ್ ಹುಟ್ಟಿದ ಮುಂಡೆ ತಂದು'–ಎಂದು ಬೈದುಕೊಳ್ಳುತ್ತಾ ಮನೆ ಬಿಟ್ಟು ಹೋದರು.
ನಂಜಮ್ಮ ಎಂದಳು: 'ನೋಡಿ ಈಗ ಇನ್ನೂರು ರೂಪಾಯಿ ಆ೦ಯ್ತು. ಮದ್ವೆ ಅಂದ್ರೆ ಆರು ನೂರು ಏಳು ನೂರಾದ್ರೂ ಬೇಕು. ಮುಂದೆ ಏನು ಮಾಡಬೇಕೋ ನಂಗೆ ಗೊತ್ತಿಲ್ಲ. ನೀವೇ ದಿಕ್ಕು.'
'ವಳ್ಳೇ ಲಕ್ಷ್ಮಿ ಹಂಗೈತೆ ನಿನ್ನ ಎಣ್ಮಗ. ನಮ್ಮ ಜಾತೀಲಾಗಿದ್ರೆ ಈಟೊತ್ತಿಗ್ ಬಂದು ಅಡ್ಡಿಕೆ, ನಾಗರು, ವಾಲೆ, ೦ಯಲ್ಲಾ ಮಡಗಿ ಎಣ್ಣು ಆರಿಸ್ಕಂಡು ಓಗ್ತಿದ್ರು. ನಿಮ್ದು ಕೆಟ್ಟ ಜಾತಿ ಕಣವ್ವ.'
'ಎಂಥಾ ಜಾತಿ೦ಯಾದ್ರೂ ಹುಟ್ಟಿದಮೇಲೆ ಜಾತಿಗೆ ತಕ್ಕಹಾಗೆ ಮಾಡ್ಬೇಕಲ್ಲ.'
'ನೀನು ಕಾಯಿ ಕಸಿ ಬ್ಯಾಳೆ ಕಾಳಿಗೆ ೦ಯೇಚ್ನೆ ಮಾಡ್‌ಬ್ಯಾಡ. ಉಡುಗನ್ನ ಗೊತ್ತು ಮಾಡು. ನಮ್ಮೂರಾಗೆ ಮನೆಗೆ ಅತ್ತು, ಐದು, ಚಂದಾ ಎತ್ತಿಕೊಡ್ತೀನಿ. ನಲವತ್ತು ಮನೆ ಗ್ರಾಮ. ಮದ್ವೆ ಲಗ್ನ, ಊರ ಸ್ಯಾನುಬಾಗ್ರು ಅಂದ್ರೆ ಒಂದ್ ಮುನ್ನೂರು ರೂಪಾಯಿ ಎತ್ತಕಾಗಾಕಿಲ್ವ? ಫುಡ್ ಲೆಕ್ಕದಾಗೆ ನೀನು ನಮ್ಮೂರ ತಲೆ ಕಾ೦ಯ್ತಾ ಇಲ್ವಾ? ಒಟ್ನಲ್ಲಿ ನಿನ್ನ ಐನೂರು ರೂಪಾಯಿ ಆ೦ಯ್ತುಲ್ಲ. ಬಡ್ತನದಲ್ಲಿ ಹ್ಯಂಗೋ ಮಾಡು.'
ಗೌಡರಿಂದ ಇಷ್ಟು ಆಶ್ವಾಸನೆ ದೊರೆತದ್ದೇ ತಡ, ಅವಳ ಮನಸ್ಸಿನ ಹೊರೆ ಇಳಿದಂತಾಯಿತು. ಇನ್ನು ಹ್ಯಾಗಾದರೂ ಮಾಡಿ ಗಂಡು ಹುಡುಕಿಸಬೇಕು ಎಂದು ನಿಶ್ಚಯಿಸಿದಳು. ಊರಿಗೆ ಹೊರಡುವಾಗ ಗುಂಡೇಗೌಡರು ಪಾರ್ವತಿ೦ಯನ್ನು ಹೊರಕ್ಕೆ ಕರೆದು–'ನೀನೊಳ್ಳೆ ಚಂದುಳ್ಳಿ ಎಣ್ಣು ಕಣ್ಮಗ. ವಳ್ಳೇ ಮೋಪುಗಾರ ಉಡುಗನೇ ಸಿಕ್ತಾನೆ ಬುಡು'ಎಂದು ಆಶೀರ್ವಾದ ಹೇಳಿದರು.
ಗಂಡು ಹುಡುಕಲು ತನ್ನ ಅಣ್ಣನ ನೆರವು ಕೋರಲು ನಂಜಮ್ಮ ೦ಯೋಚಿಸಿದ್ದಳು. ಆದರೆ ಅವನೇ ವರನಾಗುವ ಕೇಳಿಕೆ ಬಂದು ತಂದೆ ಅಜ್ಜಿ ಸಿಟ್ಟುಗೊಂಡು ಹೋದಮೇಲೆ ಮತ್ತೆ ೦ಯಾರನಾದರೂ ಕರೆ೦ಯದೆ ಕೆಲಸ ಆಗುವಂತಿರಲಿಲ್ಲ. ಅದರಲ್ಲಿ೦ಯೂ ೦ಯಾರಾದರೂ ನಂಬಿಕಸ್ಥರೇ ಬೇಕು. ಇಲ್ಲದಿದ್ದರೆ ಸಂಭಾವಿತ ಹುಡುಗ ಸಿಕ್ಕುತ್ತಾನೆಂಬ ಭರವಸೆ೦ಯೂ ಇಲ್ಲ. ನಂಜಮ್ಮ ಎಲ್ಲ ಭಾರವನ್ನೂ ಮೇಷ್ಟರು ವೆಂಕಟೇಶ೦ಯ್ಯನವರ ಮೇಲೆ ಹಾಕಿ ಹೇಳಿದಳು: 'ಕನ್ಯಾದಾನ ಮಾಡಿಸಿದ ಫಲ ನಿಮಗೇ ಸೇರುತ್ತೆ. ನೀವೇ ಒಂದು ದಾರಿ ಮಾಡಬೇಕು.'

ಮೇಷ್ಟರು ನಾಲ್ಕಾರು ಊರಿಗೆ ಹೋಗಿ ಬಂದರು. ಎಲ್ಲಿ0ಯೂ ಕೆಲಸವಾಗಲಿಲ್ಲ. ಅರಸೀಕೆರೆ0ಯ ಹತ್ತಿರದ ಒಂದು ಊರಿನ ಭಾರೀ ಜಮೀನುದಾರರೊಬ್ಬರಂತೆ. ಅವರ ಎರಡನೇ ಮಗನಿಗೆ ಈ ಹೆಣ್ಣನ್ನು ತಂದುಕೊಳ್ಳುವುದಾಗಿ ಅವರೇ ಹೇಳಿಕಳಿಸಿದ್ದರು. ವೆಂಕಟೇಶ0ಯ್ಯನವರೆಂದರು: 'ಅಮ್ಮಾ, ನಾನು ಅವರಿಗೆ ನಿಶ್ಚ0ಯವಾಗಿ ಏನೂ ಹೇಳಿಬರಲಿಲ್ಲ. ನಂಗನ್ಸುತ್ತೆ: ಅಂಥಾ ಜಮೀನುದಾರ್ರು ಬಡವರ ಮನೆ ಹುಡುಗಿ ತಂದ್ಕೊತ್ತೀವಿ ಅನ್ಬೇಕಾದ್ರೆ ಹುಡುಗನಲ್ಲಿ ಏನೋ ಐಬಿರಬೇಕು.'

'ಇದ್ರೂ ಇರಭೌದು. ವಿವಾದಕ್ಕೂ ವಿವಾಹಕ್ಕೂ ಸಮಗ್ಯೆ ಇರಬೇಕು ಅಂತ ಗಾದೆ0ಯೂ ಇದೆ0ಯಲ್ಲ. ಅಂಥ ದೊಡ್ಡ ಮನೆಗೆ ನಮ್ಮ ಹುಡುಗಿ ಕೊಡೋದು ಬ್ಯಾಡಿ'–ನಂಜಮ್ಮನೂ ಒಪ್ಪಿದಳು.

ಹೀಗೆ ನಾಲ್ಕು ತಿಂಗಳು ಹುಡುಕಾಟವಾದ ಮೇಲೆ ಒಂದು ಪ್ರಸ್ತಾಪ ಬಂತು: ಹಿಂದೆ ಇವರ ಶ್ಯಾನುಭೋಗಿಕೆ ಲೆಕ್ಕ ಬರೆದುಕೊಡುತ್ತಿದ್ದು, ನಂಜಮ್ಮನಿಗೆ ಲೆಕ್ಕ ಕಲಿಸಿದ ತಿಮ್ಲಾಪುರದ ದ್ಯಾವರಸ0ಯ್ಯನವರಿಂದ ಬಂದದ್ದು. ಅವರ ಹೆಂಡತಿ ಕಡೆ0ಯ ದೂರದ ಸಂಬಂಧದ ಒಬ್ಬ ಹುಡುಗನಂತೆ. ಹೆಸರು ಸೂ0ರ್ಯನಾರಾ0ಯಣ. ಎಸ್.ಎಸ್.ಎಲ್.ಸಿ. ಓದಿ ಮಿಡ್ಲ್ ಸ್ಕೂಲು ಮೇಷ್ಟರಾಗಿದಾನೆ . ವ0ಯಸ್ಸು ಇಪ್ಪತ್ತೇಳು. ಮೊದಲ ಮದುವೆ0ಯಾಗಿ ಈಗ ನಾಲ್ಕು ತಿಂಗಳಿನಲ್ಲಿ ತಾನೇ, ಹೆಂಡತಿ ಸತ್ತುಹೋದಳಂತೆ. ಮೂರು ವರ್ಷದ ಒಂದು ಹೆಣ್ಣು ಮಗುವಿದೆ. ಹುಡುಗನಿಗೆ ತಂದೆ ತಾಯಿ 0ಯಾರೂ ಇಲ್ಲ. ಈಗ ಮಗುವನ್ನು ತಾನೇ ಸಾಕುತ್ತಿದ್ದಾನೆ. ಸ್ಕೂಲಿಗೆ ಹೋಗುವಾಗ ಜೊತೆ0ಯಲ್ಲಿ ಕರೆದುಕೊಂಡು ಹೋಗಿ ಕೂರಿಸಿಕೊಂಡಿರುತ್ತಾನೆ. ಹುಡುಗ ಲಕ್ಷಣವಂತ. ಅರವತ್ತು ರೂಪಾಯಿ ಸಂಬಳ. ಕೈ ಬೆಂದಿರುವವನು. ಚಿನ್ನದಂತಹ ಗುಣ. 'ಅಮ್ಮಾ, ನೀನು ಅನುಮಾನ ಮಾಡಬ್ಯಾಡ ಹೆಣ್ಣು ಕೊಡು. ತುಂಬ ವಿವೇಕಸ್ಥ. ನಿನ್ನ ಮಗಳು ಸುಖವಾಗಿರ್ತಾಳೆ. ಅವನ ಹೆಣ್ಣು ಮಗೂನ ನಿನ್ನ ಮಗಳು ಬಲ ಮಗು ಅಂತ ತಿಳಕೊಳ್ಳದೆ ನೋಡಿಕೋಬೇಕು'–ಎಂದು ದ್ಯಾವರಸ0ಯ್ಯನವರು ತಮ್ಮ ಮಗನ ಕೈಲಿ ಹೇಳಿಕಳಿಸಿದ್ದರು. ಅವರಿಗೆ ಈಗ ಅಷ್ಟು ದೂರ ನಡೆದು ಬರಲು ಕೈಲಾಗುತ್ತಿರಲಿಲ್ಲ.

ದ್ಯಾವರಸ0ಯ್ಯನವರು ವಿವೇಕಿಗಳೆಂಬ ಬಗೆಗೆ ನಂಜಮ್ಮನಿಗೆ 0ಯಾರೂ ಹೇಳಬೇಕಾಗಿರಲಿಲ್ಲ. ಅಂಥವರ ಮಾತಿನಲ್ಲಿ ವಿಶ್ವಾಸವಿಡದಿದ್ದರೆ ಇನ್ನು 0ಯಾರ ಮಾತನ್ನು ನಂಬಬೇಕು? 'ಹುಡುಗನ್ನ ನೀವು ನೋಡಿದೀರಾ?'–ನಂಜಮ್ಮ ಕೇಳಿದಳು.

'ನಮಗೆ ಸರಿ0ಯಾಗಿ ಗೊತ್ತಿಲ್ಲ. ನಮ್ಮಮ್ಮನ ಊರಿನ ದೂರದ ಬಳಗವಂತೆ. ಹುಡುಗ ಈಗ ಗುಬ್ಬಿ ತಾಲ್ಲೂಕು ಬಾಳೇಕೆರೆ ಮಿಡ್ಲ್‌ಸ್ಕೂಲಿನಲ್ಲಿ ಮೇಷ್ಟರಂತೆ. ನೀವು ಹೇಳಿಕಳಿಸಿದರೆ ಹೆಣ್ಣು ನೋಡುಕ್ಕೆ ಬತ್ತಾರೆ.'

ನಂಜಮ್ಮ ಹೋಗಿ ವೆಂಕಟೇಶ0ಯ್ಯನವರನ್ನು ಕೇಳಿದಳು. ಅವರೇ ದ್ಯಾವರಸ0ಯ್ಯನವರ ಮಗನ ಸಂಗಡ ತಿಮ್ಲಾಪುರಕ್ಕೆ ಹೋಗಿ ವರನ ಬಗೆಗೆ ವಿಚಾರಿಸಿಕೊಂಡು ಊರಿಗೆ ಬಂದು ಹೇಳಿದರು: 'ನಂಜಮ್ನೋರೆ, ಆತ ನಂಗೂ ಗೊತ್ತು. ನಾನು ಗುಬ್ಬಿ ತಾಲ್ಲೂಕು ಕಡಬದಲ್ಲಿ ಇದ್ದಾಗ ಸಂಬಳದ ದಿನ ತಾಲ್ಲೂಕ್ ಆಫೀಸಿನಲ್ಲಿ ಎಷ್ಟೋ ಸಲ ನೋಡಿ ಮಾತಾಡಿದೀನಿ ತುಂಬ ವಳ್ಳೇಮನುಷ್ಯ. ಪಾಪ, ಹೆಂಡತಿ ಹೀಗೆ ಆದ್ರು ಅಂತ ನಂಗೆ ಗೊತ್ತಿರಲಿಲ್ಲ. ಎರಡನೇ ವರ ಅನ್ನೋದೊಂದು ಬಿಟ್ಬುಬಿಟ್ರೆ ಅಂಥ ವರ ಸಿಕ್ಕೂದು ನಿಜವಾಗಿ0ಯೂ ಕಷ್ಟವೇ.'

ನಂಜಮ್ಮ ಪಾರ್ವತಿ0ಯನ್ನು ಕೇಳಿದಳು. 'ಅಮ್ಮ, ನೀನು ಒಪ್ಪಿದರೆ ಆ0ಯ್ತು. ನನ್ನೇನೂ ಕೇಳಬೇಡ'–ಅವಳೆಂದಳು. ಗಂಡನ ಹೆಸರಿನಲ್ಲಿ ಚೀಟಿ ಬರೆದು ನಂಜಮ್ಮ ಕುಳುವಾಡಿ0ಯ ಕೈಲಿ ತಿಮ್ಲಾಪುರಕ್ಕೆ ಕಳಿಸಿಕೊಟ್ಟಳು.

ಇದಾದ ಹದಿನೈದು ದಿನಕ್ಕೆ ಗಾಡಿ0ಯ ಮೇಲೆ ಕುಳಿತು ದ್ಯಾವರಸ0ಯ್ಯನವರು, ಅವರ ಹೆಂಡತಿ ಮತ್ತು ಮಗ, ಸೂ0ರ್ಯನಾರಾ0ಯಣನೊಡನೆ ಹೆಣ್ಣು ನೋಡಲು ಬಂದರು. ವರನಿಗೆ ಇಪ್ಪತ್ತೇಳಕ್ಕಿಂತ ಹೆಚ್ಚು ವ0ಯಸ್ಸಾಗಿಲ್ಲವೆಂಬುದು ಮುಖ ನೋಡಿದರೇ ತಿಳಿ0ಯುತ್ತಿತ್ತು. ಗಂಭೀರ ಸ್ವಭಾವ. ಮಿತಭಾಷಿ. ಅವನ ಮೂರು ವರ್ಷದ ಹೆಣ್ಣು ಮಗು ಒಂದು ನಿಮಿಷವೂ ತಂದೆ0ಯ ಹತ್ತಿರದಿಂದ ದೂರವಿರುತ್ತಿರಲಿಲ್ಲ. ವೆಂಕಟೇಶ0ಯ್ಯ ಮೇಷ್ಟರು ಬಂದರು. ಇವರು ಸೂ0ರ್ಯನಾರಾ0ಯಣನಿಗಿಂತ ವ0ಯಸ್ಸಿನಲ್ಲಿ ತುಂಬ ದೊಡ್ಡವರು. ಇಬ್ಬರೂ ಪರಸ್ಪರ ಮಾತುಕತೆ0ಯಾಡಿದರು. ಮಧ್ಯಾಹ್ನಕ್ಕೆ ಪಾ0ಯಸದ ಅಡಿಗೆ ಮಾಡಿ ಎಲ್ಲರಿಗೂ ಬಡಿಸಿ ಹೆಣ್ಣು ತೋರಿಸುವ ಹೊತ್ತಿಗೆ ಸೂ0ರ್ಯನಾರಾ0ಯಣನ ಮಗು ರತ್ನ, ನಂಜಮ್ಮನಿಗೆ ಹೊಂದಿಕೊಂಡಿತ್ತು. ನಂಜಮ್ಮ ಅದನ್ನು ಕಂಕುಳಿಗೆ ಎತ್ತಿಕೊಂಡೇ ತಿರುಗಾಡುತ್ತಿದ್ದಳು. ಅಡಿಗೆ0ಯ ಮನೆ0ಯಲಿ ಲ್ಲ0ಯೇ ಕೂತಿದ್ದ ಪಾರ್ವತಿ0ಯ ತೊಡೆ0ಯ ಮೇಲೆ ಓಡಿ0ಯಾಡಿದ ಅದು, ಕೊನಗೆ ವಿಶ್ವನ ಕೈ ಹಿಡಿದುಕೊಂಡು ಆಟವಾಡಲು ಬೀದಿಗೆ ಹೋಯಿತು. ಸೂ0ರ್ಯನಾರಾ0ಯಣ ಹೇಳಿದ: 'ಅವಳು 0ಯಾರ ಕೈಲೂ ಹೀಗೆ ಹೊಂದಿಕೊಳ್ಳಲಿಲ್ಲ. ಅವರನ್ನ ಕಂಡ ಅರ್ಧ ಗಂಟೆ0ಯಲ್ಲೇ ಹತ್ತಿರ ಹೋಗಿಬಿಟ್ಟಳು.'

ಹೆಣ್ಣು ನೋಡಿ0ಯಾಯಿತು. ಸೂ0ರ್ಯನಾರಾ0ಯಣನೇ ನಂಜಮ್ಮನಿಗೆ ಹೇಳಿದ: 'ಅಮ್ಮ, ನನ್ನ ಜಾತಕ ತಂದಿದಿ ೀನಿ. ನಿಮಗೆ ಬೇಕಾದ್ರೆ ಎರಡು ಜಾತಕಾನೂ 0ಯಾರಿಗಾದ್ರೂ ತೋರಿಸಿ. ನನಗಂತೂ ಅದರಲ್ಲಿ ನಂಬಿಕೆ0ಯೇ

ಹೋಗಿಬಿಟ್ಟಿದೆ. ಮೊದಲ ಸಲ ಜಾತಕ ನೋಡಿದ ಎರಡು ಮೂರು ಜನ ಜೋಯಿಸರು, ಇಷ್ಟು ಚೆನ್ನಾಗಿ ಹೊಂದುವ ಜೋಡಿ0ುೀ ಇಲ್ಲ ಅಂದಿದ್ದರು. ಮದುವೆ0ಾದ ನಾಲ್ಕು ವರ್ಷಕ್ಕೇ ಹೀಗೆ ಆಗಿಬಿಡ್ತು. ನನ್ನ ವಿಷ0ುವೆಲ್ಲ ದ್ಯಾವರಸ ಮಾವ0್ಯು ಹೇಳಿದಾರೆ. ನಿಮ್ಮ ವಿಷ0ಾನೂ ಹೇಳಿದಾರೆ. ಬೇಕಾದ್ರೆ ನೀವು ಇನ್ನೂ ನಾಕು ಜನದ ಹತ್ತಿರ ವಿಚಾರಿಸಿ. ನಿಮಗೆಲ್ಲ ಸಂತೋಷವಿದ್ದರೆ ಒಂದು ಹುಣಿಸೇನೀರು ಅನ್ನ ಮಾಡಿ ಒಂದು ದಿನ ಧಾರೆ ಎರೆದುಕೊಡಿ. ಭೇದಭಾವ ಮಾಡದೆ ನನ್ನ ಮಗೂನ ತನ್ನದು ಅಂತಲೇ ತಿಳಕಂಡು ನಿಮ್ಮ ಮಗಳು ನೋಡಿಕೊಂಡು ಹೋಗೂ ವಿಷ0ು ಮಾತ್ರ ನಾನು ಈಗಲೇ ಖಂಡಿತವಾಗಿ ಹೇಳಿಬಿಡ್ತೀನಿ.'

ಜಾತಕ ಗುಣಿಸುವುದು ಮೇಷ್ಟರಿಗೆ ಅಲ್ಪ ಸ್ವಲ್ಪ ಮಾತ್ರ ಗೊತ್ತು. ದ್ಯಾವರಸ0್ಯುನವರೂ ಸುಮಾರಾಗಿ ತಿಳಿದವರೇ. ಇಬ್ಬರೂ ಕೂಡಿ ಗುಣಾಕಾರ ಮಾಡಿ ನೋಡಿದರು. ಗ್ರಹಮೈತ್ರಿಕೂಟ, 0ೋನಿಕೂಟ, ನಾಡಿಕೂಟಗಳೆಲ್ಲ ಕೂಡಿದವು. ಒಟ್ಟಿನಲ್ಲಿ ಇಪ್ಪತ್ತಮೂರು ಗುಣ ಕೂಡಿಬಂತು. ಇದಕ್ಕಿಂತ ಉತ್ತಮವಾಗಿ ಹೊಂದುವುದು ಸಾಮಾನ್ಯವಲ್ಲ. ವೆಂಕಟೇಶ0್ಯುನವರು ಸೂ0ುರ್ನಾರಾ0ುಣನನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಇಲ್ಲಿ ಮನೆ0ುಲ್ಲಿ ದ್ಯಾವರಸ0್ಯುನವರು ಚೆನ್ನಿಗರಾ0ುರನ್ನು ಕೇಳಿದರು: 'ನೀವು ಏನಂತೀರಾ ಶ್ಯಾನುಭೋಗ್ರೆ.'

'ನಾನೇನು ಅನ್ನಬೇಕು? ನನ್ನೇನು ಹೇಳಿ ಕೇಳಿ ಮಾಡ್ತಾಳೇನ್ರಿ ಇವ್ಳು?'

'0ುಜಮಾನ್ರು ನೀವು. ಕೆಲ್ಸ ಅವ್ರು ನಿಭಾಯಿಸಿದ್ರೂ 0ುಜಮಾನಸ್ಥಾನ ನಿಮ್ಮದು ತಾನೇ?'

'ಇಷ್ಟೆಲ್ಲ ಕುಣೀತಾ ಇದಾಳಲ್ಲಾ, ದುಡ್ಡಿಗೆ ಏನು ಮಾಡ್ತಾಳಂತೆ ಕೇಳ್ರೀ.'

'ಏನು ಮಾಡ್ತೀ0ಾ ಅಂತ ನಿಮ್ಮ ಹೆಂಡ್ತೀನ ನೀವೇ ಕೇಳಿ.'

ಹೆಂಡತಿ0ು ಕಡೆ ತಿರುಗಿ ಅವರು–'ದುಡ್ಡಿಗೆ ಏನು ಮಾಡ್ತೀ0ೀ ಮುಂ.....'ಎಂದವರು, ತಮ್ಮ ಮಾತಿಗೆ ತಮಗೇ ನಾಚಿಕೆ0ಾಗಿ ಮತ್ತೆ ಮೊದಲಿನಿಂದ ಪ್ರಾರಂಭಿಸಿ, 'ದುಡ್ಡು ಎಲ್ಲಿ ಹೊಂದುಸ್ತಿ0ುೆ?' ಎಂದರು.

'ಈ ವರ್ಷದ ಪೋಟಿಕೆ ದುಡ್ಡು ಗುಂಡೇಗೌಡರ ಹತ್ರ ಇದೆ. ಅದರ ಮೇಲೆ ಕುರುಬರಹಳ್ಳೀಲಿ ಒಂದಿಷ್ಟು ಎತ್ತಿಕೊಡ್ತೀವಿ ಅಂತ ಹೇಳಿದಾರೆ.'

ತಮ್ಮ ಮೇಲೆ ಜಬರುದಸ್ತಿ ಮಾಡಿ ರಶೀತಿಗಳಿಗೆ ರುಜು ಮಾಡಿಸಿಕೊಂಡ ನೆನಪಾಗಿ ಶ್ಯಾನುಭೋಗರು– 'ಅವನೊಬ್ಬ ಮನೆಹಾಳ ಸೂಳೇಮಗ' ಎಂದರು. ನಂಜಮ್ಮ ಮತ್ತೆ ಮಾತನಾಡಲಿಲ್ಲ. ಇವರ ಸ್ವಭಾವವನ್ನು ಬಲ್ಲ ದ್ಯಾವರಸ0್ಯುನವರೂ ಸುಮ್ಮನಾದರು.

ವೆಂಕಟೇಶ0್ಯುನವರು ತಮ್ಮ ಮನೆಗೆ ಮಾದೇವ0್ಯುನವರನ್ನೂ ಕರೆಸಿ ವರನನ್ನು ತೋರಿಸಿದರು. ಅಲ್ಲಿಂದ ಮೂವರೂ ನಂಜಮ್ಮನ ಮನೆಗೆ ಬಂದರು. ಮದುವೆ ನಿಷ್ಕರ್ಷೆ0ಾಯಿತು. ಧಾರೆ0ು ದಿನವೇ ಲಗ್ನಪತ್ರಿಕೆ ಶಾಸ್ತ್ರ ಮುಗಿಸಬಹುದೆಂದೂ ಇನ್ನು ಒಂದು ತಿಂಗಳಿನಲ್ಲಿ ಮದುವೆ ಮಾಡಿಕೊಡಬೇಕೆಂದೂ ಹೇಳಿದ ಸೂ0ುರ್ನಾರಾ0ುಣ. 'ನೀವು ಹೆಚ್ಚಿಗೆ 0ಾವ ಖರ್ಚಿಗೂ ಹೋಗ್ಬೇಡಿ. ಹೆಣ್ಣಿಗೆ ತರಬೇಕಾದ್ದೆಲ್ಲ ನಾನು ತರ್ತೀನಿ. ವರೋಪಚಾರಕ್ಕೆ ಒಂದು ಜೊತೆ ಮಿಲ್ಲುಪಂಚೆ, ತಾಮ್ರದ ಪಂಚಪಾತ್ರೆ ಉದ್ಧರಣೆ, ಇಷ್ಟು ತಂದ್ರೆ ಸಾಕು'–ಎಂದು ತಾನಾಗಿ0ೀ ಹೇಳಿದ. ಹೊರಡೂವಾಗ ನಂಜಮ್ಮನಿಗೂ ಚೆನ್ನಿಗರಾ0ುರಿಗೂ ನಮಸ್ಕಾರ ಮಾಡಿ, ಅದುವರೆಗೂ ಬೀದಿ0ುಲ್ಲಿ ವಿಶ್ವನ ಜೊತೆ ಆಡುತ್ತಿದ್ದ ಮಗುವಿನಿಂದಲೂ ಮಾಡಿಸಿ, ಅದನ್ನು ಎತ್ತಿಕೊಂಡು ಹೊರಟ. ಗಾಡಿ ಕೊರಳೆತ್ತಿದ್ದರೂ ಅವನು, ದ್ಯಾವರಸ0್ಯುನವರು, ಅವರ ಮಗ, ಮೂವರೂ ಊರು ಬಿಡುವತನಕ ನಡೆದೇ ಹೊರಟರು. ವೆಂಕಟೇಶ0್ಯು ಮೇಷ್ಟರು ಮತ್ತು ಮಾದೇವ0್ಯುನವರು ಊರ ಆಚಿನ ತನಕ ಹೋಗಿ ಇವರನ್ನು ಕಳಿಸಿ ಬಂದರು.

– 4 –

ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ಕುರುಬರಹಳ್ಳಿಯಿಂದ ಎರಡು ಗಾಡಿ ಸೋಗೆಯ ಜೊತೆಗೆ ಇಬ್ಬರು ಗಂಡಾಳುಗಳು ಬಂದರು. ಅವರು ಈ ಬಿಟ್ಟ ಊರಿನೊಳಗೆ ಬರಲಿಲ್ಲ. ರಾಮಸಂದ್ರದ ಕುಳವಾಡಿ ಶ್ಯಾನುಭೋಗರ ಮನೆಯ ಮುಂದಿದ್ದ ಬಿದಿರುಗಳನ್ನು ಗಾಡಿಗೆ ತುಂಬಿ ತಂದ. ಅಮ್ಮನ ಗುಡಿಯ ಹಿಂಭಾಗದ ತೋಪಿನ ಹತ್ತಿರದ ಬಯಲಿನಲ್ಲಿ ಮಧ್ಯಾಹ್ನದ ಹೊತ್ತಿಗೆ ಒಂದು ಶೆಡ್ಡು ತಯಾರಾಯಿತು. ಮೇಷ್ಟರೇ ಏರಿ ಮೇಲಿನ ಗುಡಿಗೆ ಬಂದು ಇವರ ಮನೆಯ ಬೀಗದ ಕೈ ಒಯ್ದು ಪಾತ್ರೆ ಪರಟೆ ದಿನಸಿ ಬಟ್ಟೆ ಬರೆ ಮೊದಲಾಗಿ ತಮಗೆ ತಿಳಿದ ಸಮಾನುಗಳನ್ನು ಗಾಡಿಗೆ ತುಂಬಿ ಕಳಿಸಿದರು. ಆ ದಿನ ಸಂಜೆಯ ಒಳಗೆ ಊರು ಪೂರ್ತಿಯಾಗಿ ಖಾಲಿಯಾಗುತ್ತಿತ್ತು.

ವಿಶ್ವನಿಗೆ ಜ್ವರ ಒಂದೇಸಮನಾಗಿತ್ತು. ಆದರೆ ಗೆಡ್ಡೆಗಳು ಕಾಣಿಸಿಕೊಳ್ಳಲಿಲ್ಲ. ಪಾರ್ವತಿ ರಾಮಣ್ಣರಿಗೆ, ಜ್ವರ ಬಂದ ಇಪ್ಪತ್ತುನಾಲ್ಕು ಗಂಟೆಯೊಳಗೇ ಗೆಡ್ಡೆ ಹುಟ್ಟಿತ್ತು. ವಿಶ್ವನಿಗೆ ಜ್ವರ ಬಂದು ಎರಡು ದಿನವಾಗಿದೆ. ಆದರೂ ಗೆಡ್ಡೆ ಕಂಡಿಲ್ಲ. ಅಯ್ಯನವರು ಕುಡಿಸುತ್ತಿರುವ ಔಷಧಿಯ ಪರಿಣಾಮವಿರಬಹುದು. ಅಥವಾ ಜ್ವರ ಕಂಡಮೇಲೆ ನಿಧಾನಮಾಡದೆ ಹೊಸ ಸಾವು ಇಷ್ಟಕ್ಕೇ ನಿಲ್ಲುತ್ತದೆಂದು ಹೇಳಬಲ್ಲವರಿಲ್ಲ. ಅಯ್ಯನವರು ಹೇಳುತ್ತಿದ್ದರು: 'ನಂಜವ್ವಾ, ಇದು ಈಸ್ವರದೇವರ ಗುಡಿ. ಇದರೊಳಕ್ಕೆ ಮಾರಿ ಹ್ಯಂಗೆ ಬಂದಾಳು? ಅದ್ಕೇ

ವಿಶ್ವಣ್ಣಂಗೆ ಗೆಡ್ಡೆ ಬಂದಿಲ್ಲ. ನೀನು ಹ್ಯದರ್‌ಬ್ಯಾಡ.'
ನಂಜಮ್ಮ ಒಂದು ಮಾತೂ ಆಡಲಿಲ್ಲ. ಕಲ್ಲುತುಂಡಿನಂತೆ ಸುಮ್ಮನೆ ದೂರದಲ್ಲಿ ಕೂತು ವಿಶ್ವನನ್ನೇ ನೋಡುತ್ತಾ, ಬೆಳಕು ಹರಿಯುವತನಕ ಕಣ್ಣು ಮುಚ್ಚದೆ ಕುಳಿತಿದ್ದಳು. ಬೆಳಗಾಗುವ ವೇಳೆಗೆ ಅಯ್ಯನವರು ಆಯಾಸದಿಂದ ಬಳಲಿಹೋಗಿದ್ದರು. ಇಡೀ ನೆನ್ನೆ ಮತ್ತು ಮೊನ್ನೆ ಎಲ್ಲ, ಅವರ ಹೊಟ್ಟೆಗೆ ಏನೂ ಬಿದ್ದಿರಲಿಲ್ಲ. ಮೊನ್ನೆ ರಾತ್ರಿ ಗಾಡಿಯ ಪ್ರಯಾಣದಲ್ಲಿ ಕಳೆದ ಸ್ವಲ್ಪ ನಿದ್ರೆ ಬಿಟ್ಟರೆ ಅವರು ಮತ್ತೆ ಕಣ್ಣು ಮುಚ್ಚಿರಲಿಲ್ಲ. ಅವರ ಸರಿಯಾದ ವಯಸ್ಸು ಈ ಊರಿನಲ್ಲಿ ಯಾರಿಗೂ ಗೊತ್ತಿಲ್ಲ. ಆದರೂ ಎಪ್ಪತ್ತೈದನ್ನು ಮೀರಿರುವುದರಲ್ಲಿ ಸಂದೇಹವಿಲ್ಲ. ಶರೀರ ಎರಡು ದಿನದಿಂದ ಒಂದೇಸಮನೆ ದುಡಿದಿತ್ತು. ಕಂಬವನ್ನೊರಗಿ ಕುಳಿತಿದ್ದ ಅವರು, ತಮಗೇ ತಿಳಿಯದಂತೆ ನೆಲಕ್ಕೆ ಉರುಟಿಕೊಂಡರು. ಹಾಗೆಯೇ ನಿದ್ದೆ ಹೋದರು. ನರಸಿ ಮಾತನಾಡಿದಳು: 'ಅವ್ವಾರೇ, ನಂಗೆ ದೇವ್ರು ಮಕ್ಳು ಕೊಡ್ಲಿಲ್ಲ. ಮಕ್ಕಿಲ್ಲ ಅಂತ ಚಿಂತೆ ಮಾಡ್ತಿದ್ದೆ. ಮಕ್ಳಾದ್ರೂ ಚಿಂತೆಯಾಯ್ತದೆ.'
ನಂಜಮ್ಮ ಸುಮ್ಮನೆ ಕೂತಿದ್ದಳು. ಅಷ್ಟರಲ್ಲಿ ಮೇಷ್ಟರು ಬಂದು, ಅಯ್ಯನವರ ಹತ್ತಿರವೇ ಇದ್ದ ನಂಜಮ್ಮನ ಮನೆಯ ಬೀಗದ ಕೈಯನ್ನು ಒಯ್ದರು. ನಂಜಮ್ಮ ಒಂದೇ ಸಮನೆ ಕೂತಿದ್ದಳು. ಮತ್ತೆ ಮಾತಾಡಲು ನರಸಿಗೂ ತಿಳಿಯಲಿಲ್ಲ. ಆದರೆ ಅವಳು ತಪ್ಪದೆ ಮಗುವಿಗೆ ಔಷಧಿ ಹಾಕುತ್ತಿದ್ದಳು. ಅದರ ತಲೆ ಅವಳ ತೊಡೆಯ ಮೇಲೆಯೇ ಇತ್ತು. ಸ್ವಲ್ಪ ಹೊತ್ತಿನಲ್ಲಿ ಮೇಷ್ಟರ ಹೆಂಡತಿ ಬಂದರು. ಅವರು ಕಣ್ಣಿನಲ್ಲಿ ನೀರು ಹಾಕಿಕೊಂಡರೂ ನಂಜಮ್ಮ ಅಳಲಿಲ್ಲ.
'ಏಳಿ ನಮ್ಮ ಶೆಡ್ಡಿಗೆ ಹೋಗಾಣ. ಮಡಿ ಉಟ್ಕಳಿ. ಒಂದಿಷ್ಟು ಉಪ್ಪಿಟ್ಟು ಕೆದಕಿದೀನಿ. ನೀವು ನೆನ್ನೆ ಎಲ್ಲ ಏನೂ ತಿಂದಿಲ್ಲ.'
ತಾನು ಬರುವುದಿಲ್ಲವೆಂದು ನಂಜಮ್ಮ ತಲೆಯಾಡಿಸಿದಳು. ಮೇಷ್ಟರ ಹೆಂಡತಿ ಸುಮ್ಮನೆ ಹಿಂತಿರುಗಿ ಹೋಗಿ, ತಾವೇ ಒಂದು ಚರುಕಿನಲ್ಲಿ ಉಪ್ಪಿಟ್ಟು ತಂದರು. ನಂಜಮ್ಮ ಮುಖ ತೊಳೆಯಲೂ ಸಹ ಮೇಲೆ ಏಳಲಿಲ್ಲ. ನರಸಿ ಕೇಳಿದಳು: 'ಚಿನ್ನಯ್ಯಾರು ಎಲ್ಲಿ?'
'ರಾತ್ರಿ ಮಶಾಣದಿಂದ ಬಂದಮೇಲೆ ನಮ್ಮ ಶೆಡ್ಡಿನ ಹೊರಗೆ ಗೋಣೀಚೀಲ ಹಾಕ್ಕಂಡು ಮಲೀಕಂಡ್ರು. ಈಗ ತಾನೇ ಅವರಿಗೆ ಉಪ್ಪಿಟ್ಟು ಕೊಟ್ಟು ಬಂದೆ.'
'ಮಗ ಇಲ್ಲೈತೆ ಅಂತ ಅವ್ರಿಗೆ ಗೊತ್ತಿಲ್ವರಾ?'
'ಗೊತ್ತಿದೆ. ನಮ್ಮನೆಯೋರೇ ಹೇಳಿದ್ರು. ಈಗ ಬರ್‌ಭೌದು.'
'ಅಮ್ಮಾರೇ, ಈ ನರಸಿ ಕೆಟ್ಟ ಮಾತಡ್ತಾಳೆ ಅನ್‌ಬ್ಯಾಡ್ರಿ. ನನ್ನಂತ ಸೂಳೆಗೆ ಮಕ್ಕಳಾದ್ರೆ ಅವುಕ್ಕೆ ಕಷ್ಟ ಸುಖ ಅಂದ್ರೆ ಯಾವನೂ ಬರಾಕಿಲ್ಲ. ಅವು ಯಾರಿಗೆ ಉಟ್ಟುದ್ವು ಅಂತ ಯಾವನ್ಗೂ ಗೊತ್ತಿಲ್ದ ಮ್ಯಾಲೆ ಯಾಕೆ ಬತ್ತಾನೆ? ಈ ಚಿನ್ನಯ್ಯ ತನ್ನ ಹ್ವಟ್ಟೇಲಿ ಉಟ್ಟಿದ ಮಗಾ ನೋಡಾಕೆ ಬರ್ದೆ ಉಪ್ಪಿಟ್ಟು ತಿಂತವ್ನಾ?'
ಮಾತನಾಡಬೇಡವೆಂದು ನಂಜಮ್ಮ ನರಸಿಗೆ ಕೈಸನ್ನೆ ಮಾಡಿದಳು. ಮೇಷ್ಟರ ಹೆಂಡತಿ ನಂಜಮ್ಮನಿಗೆ ಹೇಳಿದರು: 'ನೋಡಿ, ಈ ಗ್ರಾಮದೇವತೆ ಮಾರಮ್ಮ, ಸುಂಕ್ಲಮ್ಮ, ಇವೆಲ್ಲ ಒಳ್ಳೇವಲ್ಲ. ಇವು ಹಾಳು ಮಾಡ್ತವೆಯೇ ಹೊರತು ಕಾಪಾಡೂ ದೇವರಲ್ಲ. ಎಂಥ ಕಷ್ಟವಾದ್ರೂ ಶೃಂಗೇರಿ ಶಾರದಮ್ನೋರು ಪರಿಹಾರ ಮಾಡ್ತಾರೆ. ವಿಶ್ವನಿಗೆ ಹುಶಾರಾದ್ರೆ ಈ ಸಲ ನವರಾತ್ರೀಗೆ ನಿನ್ನ ಸನ್ನಿಧಿಗೆ ಬಂದು ಕುಂಕುಮಾರ್ಚನೆ ಮಾಡುಸ್ತೀನಿ ಅಂತ ಹರಕೆ ಕಟ್ಕಳಿ. ಖಂಡಿತಾ ಹುಶಾರಾಗುತ್ತೆ. ನಿಮಗೆ ಸೂತಕ. ನೀವೇನೂ ಮಾಡ್‌ಬ್ಯಾಡಿ. ನಾನು ಮನೆಗೆ ಹೋಗಿ ಮಡಿಸೀರೆ ಉಟ್ಕಂಡು ನಿಮ್ಮ ಹೆಸರಿನಲ್ಲಿ ನಾಲ್ಕಾಣೆ ಪಾವ್‌ಲಿ ಕಟ್ಟಿ ಇಡ್ತೀನಿ.'
ಬೇಡವೆಂದು ನಂಜಮ್ಮ ತಲೆ ಅಲ್ಲಾಡಿಸಿದಳು.
'ಅದ್ಯಾಕೆ ಹಾಗಂತೀರಿ?'
'ಯಾವ ದೇವರೂ ಏನೂ ಮಾಡುಲ್ಲ. ದೇವರು ಗೀವರೆಲ್ಲ ಸುಳ್ಳು. ಆಯುಸ್ಸಿದ್ರೆ ಬದುಕುತ್ತೆ. ಇಲ್‌ದಿದ್ರೆ ಇಲ್ಲ.
ನರಸಿ ಎಂದಳು: 'ನಂಜವ್ವಾರೇ, ಕ್ವಾಪದಲ್ಲಿ ಹಂಗನ್‌ಬ್ಯಾಡಿ. ತಪ್ಪಾಯ್ತು ಅನ್ನಿ. ಹರಕೆ ಕಟ್ನಿ.'
'ತಪ್ಪೂ ಇಲ್ಲ ಗಿಪ್ಪೂ ಇಲ್ಲ. ಯಾವ ದೇವರ ಹರಕೆಯೂ ಬ್ಯಾಡ'–ನಂಜಮ್ಮ ಖಂಡಿತವಾಗಿ ಅಂದುಬಿಟ್ಟಳು. ಮತ್ತೊಮ್ಮೆ ಅವರಿಬ್ಬರೂ ಬಲವಂತ ಮಾಡಿದಮೇಲೆ–'ನಿಮಗೆ ತಿಳಿದ ಹಾಗೆ ಮಾಡಿ' ಎಂದಳು. ಮೇಷ್ಟರ ಹೆಂಡತಿ ಹೊರಟುಹೋದರು. ಅಷ್ಟರಲ್ಲಿ ಗುಡಿಯ ಹತ್ತಿರಕ್ಕೆ ಒಬ್ಬೊಬ್ಬರಾಗಿ ಎಷ್ಟೋ ಜನ ಊರಿನವರು ಬರತೊಡಗಿದರು. ಎಲ್ಲರಿಗೂ ಅವರವರ ಶೆಡ್ಡನ್ನು ವ್ಯವಸ್ಥೆಗೊಳಿಸಿಕೊಳ್ಳುವ ಕೆಲಸ. ಆದರೆ ನಂಜಮ್ಮನಿಗೆ ಸಮಾಧಾನ ಹೇಳಬಂದವರು ಪೇಚಾಡಿದರು. ಪಾರ್ವತಿಯ ರೂಪ ಗುಣಗಳನ್ನು ಹೊಗಳಿದರು. ರಾಮಣ್ಣನ ಬುದ್ಧಿಶಕ್ತಿಯನ್ನು ಕೊಂಡಾಡಿದರು. ಬದುಕಿದ್ದರೆ ಮುಂದೆ ಅಮಲ್ದಾರಿ ಮಾಡುವ ಬುದ್ಧಿ ಇದ್ದ ಹುಡುಗ, ಇಂಥ ಬುದ್ಧಿವಂತರು ಈ ಪ್ರಪಂಚದಲ್ಲಿರಬ್ಯಾಡ್‌ದು, ತನ್ನ ತಾವ್‌ಲೇ ಇರ್‌ಬೇಕು ಅಂತ ಸಿವ ಎಳ್ಕಂಡ್‌ಬುಟ್ಟ. ಅಸೀ ಮೈಲಿ ಪಾರ್ವತಮ್ಮುನ್ನ ಹ್ವಸ ಸೀರೆ ಉಡಿಸಿ ಕರ್ಕಂಡ್ ಹ್ವಾಗ್‌ಬ್ಯಾಡ್‌ದಾಗಿತ್ತು.

ಅಮ್ಮನ ಕಣ್ಣು ಮದ್ಲು ಆ ಉಡುಗೀಮ್ಯಾಲೇ ಬಿದ್ದುಬಿಡ್ತು–ಎಂದು ಎಲ್ಲರೂ ತಮಗೆ ತಿಳಿದಂತೆ ಮತನಾಡಿದರು. ಊರಿನಲ್ಲಿ ಇನ್ನೂ ಎಂಟು ಜನಕ್ಕೆ ಪ್ಲೇಗು ಆಗಿದೆಯಂತೆ. ನೆನ್ನೆ ರಾತ್ರಿಯೇ ನಾಲ್ಕು ಜನ, ಈ ದಿನ ಬೆಳಿಗ್ಗೆ ಇಬ್ಬರು ಸತ್ತರಂತೆ. ಊರ ಹೊರಗಿನ ದೇವಸ್ಥಾನದಲ್ಲಿದ್ದ ನಂಜಮ್ಮನಿಗಾಗಲಿ ನರಸಿಗಾಗಲಿ ಇದು ತಿಳಿದಿರಲಿಲ್ಲ. ಬಂದವರೆಲ್ಲ ಒಬ್ಬೊಬ್ಬರಾಗಿ ಹೋದರು. ಸರ್ವಕ್ಕ ಒಬ್ಬಳೇ ನಂಜಮ್ಮನ ಜೊತೆಗೆ ಉಳಿದಳು.

ನಂಜಮ್ಮ, ಸರ್ವಕ್ಕ, ಕಷ್ಟ ಸುಖಗಳಲ್ಲಿ ಒಬ್ಬರಿಗೊಬ್ಬರು ಆಗಿದ್ದ ಗೆಳತಿಯರು. ಸರ್ವಕ್ಕನೂ ವಯಸ್ಸಿಗೆಬಂದ ಮಗಳನ್ನು ಕಳೆದುಕೊಂಡವಳು. ತನ್ನ ಮಗಳ ಸಾವಿನ ಸಂಗಡವೇ ಅವಳಿಗೆ ನರಸಿಯ ನೆನಪಾಯಿತು. ಅದೇ ನರಸಿ ಈಗ ಇಲ್ಲಿ ಕೂತಿದಾಳೆ. ನಂಜಮ್ಮನವರ ಮಗ ಅವಳ ತೊಡೆಯ ಮೇಲಿದೆ. ಅದು ತನ್ನ ಮಗುವೇ ಅಲ್ಲವೇನೋ ಎಂಬಂತೆ ನಂಜಮ್ಮನವರು ದೂರ ಕೂತಿದ್ದಾರೆ. ನರಸಿ ಎಂದರೆ ಸರ್ವಕ್ಕನ ಮೈಕೈ ಎಲ್ಲ ಉರಿಯುತ್ತದೆ. ಉಳಿದ ಸಮಯದಲ್ಲಾಗಿದ್ದರೆ ಸರ್ವಕ್ಕ ಅವಳಿಗೆ ಕೆರದಲ್ಲಿ ಹೊಡೆಯುತ್ತಿದ್ದಳು. ಆದರೆ ಈಗ ಏನೂ ಅರ್ಥವಾಗದೆ ಸುಮ್ಮನೆ ಕುಳಿತುಬಿಟ್ಟಳು. ನಂಜಮ್ಮನನ್ನು ಬಿಟ್ಟು ಹೋಗಲು ಅವಳಿಗೆ ಮನಸ್ಸಿಲ್ಲ. ಏನಾದರೂ ಮಾತನಾಡಲೂ ತೋಚುತ್ತಿಲ್ಲ.

ಅಷ್ಟರಲ್ಲಿ ಮಗು ಗಟ್ಟಿಯಾಗಿ ಉಸಿರಾಡಲು ಪ್ರಾರಂಭಿಸಿತು. ಜ್ವರ ತುಂಬ ರೇಗಿದಂತೆ ಆಯಿತು. 'ಅವ್ವಾರೇ, ಜ್ವರಕ್ಕೆ ನನ್ನ ತ್ವಡೆ ಎಲ್ಲಾ ಸುಡ್ತಾವೆ. ಮಗ ಗಟ್ಟಿಯಾಗಿ ಉಸುರು ಬಿಡ್ತೈತೆ. ನಂಗ್ ಹ್ಯದ್ರಿಕೆಯಾಯ್ತೈತೆ. ನೋಡಿ'–ನರಸಿ ಎಂದಳು.

'ನಾನು ಕೈಯಿಂದ ಮುಟ್ಟಲ್ಲ. ನೀವೇ ನೋಡಿ ಸರ್ವಕ್ಕ'–ನಂಜಮ್ಮ ಬಾಯಿಬಿಟ್ಟಳು.

ಸರ್ವಕ್ಕ ಹತ್ತಿರ ಹೋಗಿ ಮಗುವಿನ ಹೊದಿಕೆಯೊಳಗೆ ಕೈಯಿಟ್ಟು ನೋಡುತ್ತಾಳೆ: ಮೈ ಬೆವರುತ್ತಿತ್ತು. ಅವಳ ಅಂಗೈ ಸ್ಪಷ್ಟವಾಗಿ ಒದ್ದೆಯಾಯಿತು. ಇದರ ಅರ್ಥ ಅವಳಿಗೂ ತಿಳಿಯಲಿಲ್ಲ. ಸಮಾನ್ಯಸಮಯದಲ್ಲಾಗಿದ್ದರೆ ನಂಜಮ್ಮನಿಗೆ ತಿಳಿಯುತ್ತಿತ್ತೇನೋ. ಆದರೆ ಈಗ ಏನೂ ಗೊತ್ತಾಗುತ್ತಿಲ್ಲ. ನರಸಿ ಅಯ್ಯನವರನ್ನು ಕೂಗಿದಳು. ಅವರಿಗೆ ಗಾಢನಿದ್ರೆ. ಸರ್ವಕ್ಕನೇ ಅವರ ಭುಜ ಹಿಡಿದು ಅಲುಗಿಸಿದಮೇಲೆ ಎದ್ದುಕೂತರು. ಒಂದು ನಿಮಿಷ ಕಣ್ಣು ಹೊಸಕಿಕೊಂಡು ಸುತ್ತಮುತ್ತ ನೋಡಿದಮೇಲೆ ಇವರಿಗೆ ಸರ್ವಕ್ಕನ ಮಾತು ಅರ್ಥವಾಯಿತು. ಅವರೂ ಮಗುವಿನ ಎದೆಗೆ ಕೈಯಿಟ್ಟು ನೋಡಿ ಹೇಳಿದರು: ಮೈ ಬೆವರ್ತೈತೆ. ಜ್ವರ ಇಳಿಯಾಕೆ ಮುಂಚೆ ಹಿಂಗೇ ಆಗಾದು. ಗೆಡ್ಡೆ ಪಡ್ಡೆ ಬಂದಿಲ್ಲ. ನಂಜವ್ವಾ, ವಿಶ್ವಣ್ಣ ಬಚಾವಾದ, ಬಚಾವಾಯ್ತು ಜೀವ.'

ನಂಜಮ್ಮ ಮೂಕಲಂತೆ ಮಗುವನ್ನು ನೋಡುತ್ತಲೇ ಕುಳಿತಿದ್ದಳು. 'ಸದ್ಯ ಸಿವ ಕಣ್ ಬಿಟ್ಟು ನೋಡ್ದ'–ಸರ್ವಕ್ಕ ಎಂದಳು. ಮಗು ಹಾಗೆಯೇ ಬೆವರುತ್ತಿತ್ತು. ಸ್ವಲ್ಪ ಹೊತ್ತಿಗೆ ಜ್ವರ ಎಷ್ಟೋ ಕಡಿಮೆಯಾಯಿತು. ಅಷ್ಟರಲ್ಲಿ ರೇವಣ್ಣಶೆಟ್ಟಿ ಅಲ್ಲಿಗೆ ಬಂದ. ನಂಜಮ್ಮ ಇದುವರೆಗೆ ಒಂದು ಸಲವೂ ಅವನ ಕೈಲಿ ಮಾತನಾಡಿರಲಿಲ್ಲ. ಅವನೂ ನಂಜಮ್ಮನನ್ನು ನೇರವಾಗಿ ಮಾತನಾಡಿಸಿರಲಿಲ್ಲ. ಮಗುವಿನ ಮೈ ಬೆವರುತ್ತಿರುವುದನ್ನು ಕೇಳಿದ ಅವನೂ ಮೈ ಮುಟ್ಟಿ ನೋಡಿ, 'ಬಚಾವಾಯ್ತು' ಎಂದ. 'ನಂಜವ್ನೋರೇ, ಈ ಗ್ರಾಮಕ್ಕೇ ಬುದ್ಧಿ ಹೇಳೂ ತಿಳುವಳಿಕೆ ಇರೋರು ನೀವು. ನಿಮಗೆ ಯಾರು ಏನು ಸಮಾಧಾನ ಹೇಳ್‌ಭೌದು?'–ಎಂದು ತನಗೆ ತಿಳಿದಂತೆ ಮಾತನಾಡಿ ಹೆಂಡತಿಯ ಕಡೆಗೆ ತಿರುಗಿ, 'ಅಯ್ನೋರಿಗೆ ಎಲ್ಡು ದಿನ್‌ದಿಂದ ಬಿನ್ನವಿಲ್ಲ ಅಂತ ಕಾಣ್ತೈತೆ. ಮನೆಗೆ ಹ್ವಾಗಿ ಮುದ್ದೆ ತ್ವಳಸ್ಕಂಡು ತಂದು ಮಡಗು' ಎಂದು ಹೇಳಿ ಅವಳನ್ನು ಕರೆದುಕೊಂಡು ತಾನೂ ಮನೆಗೆ ಹೋದ. ಅಯ್ಯನವರು ಬಲವಂತ ಮಾಡಿ ನಂಜಮ್ಮನನ್ನು ಎಬ್ಬಿಸಿ ಮುಖ ತೊಳೆಸಿದರು. ಮೇಷ್ಟರ ಹೆಂಡತಿ ತಂದಿದ್ದ ಉಪ್ಪಿಟ್ಟು ಪಾತ್ರೆಯಲ್ಲೇ ಇತ್ತು. 'ಇನ್ನು ವಿಶ್ವಣ್ಣನ ನಿಗಾ ನೀನು ತಗಾಬೇಕು. ಕೆಲ್ಸ ಮಾಡಾಕೆ ಸಗುತಿ ಇಲ್ದೆ ಇದ್ರೆ ಹ್ಯಂಗೆ? ನೀನ್ ತಿನ್ನವ್ವ'–ಎಂದರೂ ಅವಳು ಕೇಳಲಿಲ್ಲ. ಕೊನೆಗೆ ಅಯ್ಯನವರು ಗದರಿಸಿಕೊಂಡರು. ನರಸಿ ಬಲವಂತ ಮಾಡಿದಳು. ನಂಜಮ್ಮ ಒಂದು ಪಿಡಚೆ ಉಪ್ಪಿಟ್ಟು ತೆಗೆದು ಬಾಯಿಗಿಟ್ಟುಕೊಂಡು ನುಂಗಲಾರದೆ ಎದ್ದು ಹೋಗಿ ಉಗುಳಿ ಬಂದು ಪಾತ್ರೆಯನ್ನು ಅತ್ತ ಸರಿಸಿದಳು. ಅಯ್ಯನವರು ತಮ್ಮ ಸಾಮಾನಿನ ಮಧ್ಯದ ಒಂದು ಪುಟ್ಟ ಡಬ್ಬಿಯನ್ನು ಹುಡುಕಿ ತೆಗೆದು, ಅದರಲ್ಲಿದ್ದ ಎರಡು ಚಿಟಿಕೆ ಕಪ್ಪು ಬಣ್ಣದ ಪುಡಿಯನ್ನು ಹಿಡಿದು, 'ಇದನ್ನ ಹೊಟ್ಟೆಗೆ ತಗ' ಎಂದರು.

'ಇದೇನು ಅಯ್ನೋರೇ?'

'ಶಿವನ ಪ್ರಸಾದ. ಕಾಶಿಯಿಂದ ತಂದಿದ್ದೆ. ಉಳ್ದಿತ್ತು. ಇದ ತಗಾ. ನಿನ್ನ ಗ್ರಾಚಾರ ಕಳೀತದೆ. ಮಗು ಹ್ಯಂಗೂ ಬೆವರ್ತಿದೆ. ಜ್ವರ ಇಳ್‌ದಾವೆ.'

ನಂಜಮ್ಮ ಅದನ್ನು ಸುಮ್ಮನೆ ನುಂಗಿದಳು. ಒಂದು ತರಹ ಕಹಿ, ಒಗಚು, ಸಿಹಿಗಳ ಮಿಶ್ರಣವಾಗಿತ್ತು. ಮತ್ತೆ ಕಂಬವನ್ನೊರಗಿ ಮಗುವನ್ನೇ ನೋಡುತ್ತಾ ಕೂತುಕೊಂಡಳು. ಅಷ್ಟರಲ್ಲಿ ಚೆನ್ನಿಗರಾಯರು ಬಂದರು.

'ಈಟಾತಂಕಾ ಏನ್ಮಾಡ್ತಿದ್ರಿ ಸ್ಯಾನುಬಾಗ್ರೆ?'–ನರಸಿ ಅವರನ್ನು ಕೇಳಿದಳು.

'ಬರಾಣ ಅಂತ ಹ್ವರ್‌ಟಿದ್ದೆ. ಯಾರ್ಯಾರೋ ಬಂದು ಸಮಾಧಾನ ಹೇಳುಕ್ಕೆ ಅಂತ ನಿಲ್ಲಿಸ್ಕಂಡ್ರು. ಹಾಗೇ

ಕೂತ್ಕಂಡೆ.'
'ವಾರೆ, ಹುಟ್ಟಿಸಿದ ಗಂಡೇ'–ನರಸಿ ಅಂದದಕ್ಕೆ ಅವರು ಅವಳನ್ನು ಮಿಕಮಿಕನೆ ನೋಡಿದರು.
'ನರಸವ್ವಾ, ಏನೂ ಮಾತಾಡ್‌ಬ್ಯಾಡ'–ಅಯ್ಯನವರೆಂದರು.
ಹತ್ತು ನಿಮಿಷದಲ್ಲಿ ನಂಜಮ್ಮನ ಕಣ್ಣು ತೂಗುತ್ತಿತ್ತು. ಕಂಬವನ್ನೊರಗಿ ಕೂತಿದ್ದ ಅವಳು ಹಾಗೆಯೇ ಮಂಡಿಗೆ ತಲೆ ಕೊಟ್ಟುಕೊಂಡಳು. ನೆನ್ನೆ ರಾತ್ರಿ ಹೊತ್ತು ತಂದಿದ್ದ ಹಾಸಿಗೆಯನ್ನು ಹತ್ತಿರವೇ ಹಾಸಿ, ಅಯ್ಯನವರು ಅವಳ ಭುಜ ಹಿಡಿದು ಮಲಗಿಸಿ, ಮೇಲೆ ಒಂದು ಹಳೆಯ ದುಪ್ಪಟಿ ಹೊದ್ದಿಸಿದರು. ಮತ್ತೆ ಎರಡು ನಿಮಿಷದಲ್ಲಿ ಅವಳಿಗೆ ಗಾಢನಿದ್ರೆ ಬಂದುಬಿಟ್ಟಿತು.
'ಅಯ್ಯಾರೇ ನೀವು ನಂಜಮ್ಮಾರಿಗೆ ಕೊಟ್ಟುದ್ದೇನು?'–ನರಸಿ ಕೇಳಿದಳು.
'ನಿದ್ದೆ ಬರಾ ಔಸ್ತಿ. ಕಾಶೀಲಿ ಇದ ತಿಂತಾರೆ. ಅಲ್ಲಿಂದ ಬರೂವಾಗ ತಂದಿದ್ದೆ. ಹಳೇದು ಒಂದೀಟಿತ್ತು.'
'ಹಾಗಾರೆ ನಂಗೊಂದಿಷ್ಟು ಕೊಡ್ರೀ'–ಚೆನ್ನಿಗರಾಯರು ಕೇಳಿದರು.
'ಅದು ಗಂಡಸರು ತಗಾಳಾದಲ್ಲ. ನಂಜವ್ವನಿಗೆ ರಾತ್ರಿ ಕಳೆದು ನಾಳೆಗಂಟ ಎಚ್ಚರವಾಗಾಕಿಲ್ಲ. ನೀವು ಇಲ್ಲೇ ಇರಿ. ನಿಮಗೆ ಇಲ್ಲಿಗೇ ಬಿನ್ನ ತಂದು ಮಡಗೂ ಹಂಗೆ ಮೇಷ್ಟರ ಹೆಂಗಸ್ರಿಗೆ ಏಳಿಕಳುಸ್ತೀನಿ'–ಎಂದು ಚೆನ್ನಿಗರಾಯರಿಗೆ ಆಶ್ವಾಸನೆಯಿತ್ತ ಅಯ್ಯನವರು ನರಸಿಗೆ ಹೇಳಿದರು. 'ನರಸವ್ವಾ, ಇನ್ನು ಹೆದರಿಕೆಯಿಲ್ಲ ಮಗಾನ ಕೆಳಗೆ ಮನಗ್ಸು. ನೀನು ಮನಿಗೆ ಹ್ವಾಗಿ ಏನಾರ ಹ್ವಟ್ಟೆಗೆ ಮಾಡ್ಕ. ರಾತ್ರಿಯೆಲ್ಲ ನಿಂಗೂ ನಿದ್ದೆ ಇಲ್ಲ. ಮನೆಗೆ ಹ್ವಾಗಿ ಮನೀಕ್ಕ.'
'ಅಯ್ಯಾರೇ, ಉಡ್ಗ ಉಳ್ಕಂಡ್ರೆ ಸಾಕು. ಇನ್ನೂ ಎಲ್ಡು ದಿನ ಹಿಂಗೇ ಇರ್ತೀನಿ.'
'ಮನೀಗ್ ಹ್ವಾಗಿ ಊಟ ನಿದ್ದೆ ಮಾಡ್ಕಂಡ್ ಬಾ.
ಒಂದು ಪುಟ್ಟ ಕಂಬಳಿಯನ್ನು ಮಡಿಸಿ ಅಯ್ಯನವರು ಕೊಟ್ಟರು. ಅದರ ಮೇಲೆ ಮಗುವಿನ ತಲೆಯನ್ನಿಟ್ಟು ನರಸಿ ಎದ್ದು ಮನೆಗೆ ಹೋದಳು. ನಂಜಮ್ಮನಿಗೆ ಎಚ್ಚರವಾಗಲೇ ಇಲ್ಲ. ಮಧ್ಯಾಹ್ನದ ಹೊತ್ತಿಗೆ ಕುರುಬರಹಳ್ಳಿಯ ಗುಂಡೇಗೌಡರಾದಿಯಾಗಿ ಹತ್ತಾರು ಜನ ಗುಡಿಯ ಹತ್ತಿರ ಬಂದರು. ಗಟ್ಟಿಯಾಗಿ ಮಾತನಾಡಿ ಸದ್ದು ಮಾಡಬಾರದೆಂದು ಅಯ್ಯನವರು ಹೇಳಿದುದರಿಂದ ಎಲ್ಲರೂ ಚೆನ್ನಿಗರಾಯರನ್ನೇ ಹೊರಗೆ ಕರೆದುಕೊಂಡು ಹೋಗಿ ಸಮಾಧಾನ ಹೇಳಿದರು. 'ನಾವೂ ಕಂಡ ಬುದ್ಧಿಯೆಲ್ಲ ಖರ್ಚುಮಾಡಿಬಿಟ್ವಿ ಕಣ್ರೀ, ಮುಂಡೇವು ಉಳ್ಕಳ್ಲಿಲ್ಲ'–ಎಂದು ಹೇಳುವಾಗ ಚೆನ್ನಿಗರಾಯರಿಗೆ ಕಣ್ಣೀರು ಬರುತ್ತಿತ್ತು.
ಇಲ್ಲಿ ನಡೆದ ಕೆಟ್ಟ ಸಮಾಚಾರವನ್ನು ಸೂರ್ಯನಾರಾಯಣನಿಗೆ ಬರೆದು 'ಕ್ಷೇಮ' ಬರೆಯುವ ಜಾಗದಲ್ಲಿ ಕಪ್ಪುಬಣ್ಣ ಮಾಡಿ ಮೇಷ್ಟರು ಕಾರ್ಡನ್ನು ಪೋಸ್ಟಿಗೆ ಕಳಿಸಿದರು.

– 5 –

ಇಬ್ಬರು ಮಕ್ಕಳೂ ಸತ್ತು ಇಂದಿಗೆ ಆರು ದಿನಗಳಾಗಿವೆ. ನಂಜಮ್ಮ ತನ್ನ ಶೆಡ್ಡಿಗೆ ಬಂದಿದ್ದಾಳೆ. ಈಗ ಶೆಡ್ಡಿನಲ್ಲಿ ಅವಳು ಮತ್ತು ಚೆನ್ನಿಗರಾಯರು, ಇಬ್ಬರೇ. ಜ್ವರ ಪೂರ್ತಿಯಾಗಿ ಬಿಟ್ಟು ವಿಶ್ವ ಹುಷಾರಾಗಿದ್ದಾನೆ. 'ಸೂತಕದ ಮನೆಗೆ ಅವನು ಬರಾದು ಬ್ಯಾಡ. ಹತ್ತು ದಿನ ಕಳೆಯಾಗಂಟ ನಮ್ಮ ಗುಡೀಲೇ ಮಡಿಕ್ಕಂಡಿರ್ತೀನಿ'–ಎಂದು ಮಾದೇವಯ್ಯನವರು ಹೇಳಿದುದರಿಂದ ಅವನನ್ನು ಅಲ್ಲಿಯೇ ಬಿಟ್ಟಿದ್ದಾಳೆ. ಇಲ್ಲಿಗೆ ಕರೆದುತರಲು ಅವಳಿಗೇ ಹೆದರಿಕೆ. ಬೆಳಗ್ಗೆ, ಮಧ್ಯಾಹ್ನ, ಗುಡಿಗೆ ಹೋಗುತ್ತಾಳೆ. ತನಗೆ ಸೂತಕವೆಂಬ ನೆನಪಾಗಿ ಈಗ ಅವಳು ಗುಡಿಯ ಒಳಗೆ ಹೋಗುವುದಿಲ್ಲ. ವಿಶ್ವನಿಗೂ ಸೂತಕವಿದ್ದರೂ ಅವನು ಹುಡುಗ, ಎದ್ದುಕೂರುವ ಶಕ್ತಿಯಿದ್ದರೂ ಅವನನ್ನು ಅಯ್ಯನವರು ಯಾವಾಗಲೂ ಮಲಗಿಸಿರುತ್ತಾರೆ. ಗುಡಿಯ ಬಾಗಿಲಿನಲ್ಲಿ ಕೂತು ಅವನನ್ನು ನೋಡಿಕೊಂಡು, ಅಯ್ಯನವರ ಕೈಲಿ ಸಹ ಮಾತನಾಡದೆ ಅವಳು ಶೆಡ್ಡಿಗೆ ಹಿಂತಿರುಗುತ್ತಾಳೆ. ಪಾರ್ವತಿ ರಾಮಣ್ಣರಿಗೆ ತಂದಿದ್ದ ಹೇಮಾದಿ ಪಾನಕದ ಶೀಶೆಗಳನ್ನು, ಜ್ವರ ಬಿಟ್ಟಿದ್ದರೂ ಅಯ್ಯನವರು ಅವನಿಗೆ ಕುಡಿಸುತ್ತಿದ್ದಾರೆ.
ಹೆತ್ತ ತಾಯಿಯ ಎದುರಿಗೆ ಮಕ್ಕಳು ಯಾಕೆ ಸಾಯುತ್ತವೆ? – ಎಂಬ ಪ್ರಶ್ನೆ ಅವಳನ್ನು ಸದಾ ಬಾಧಿಸುತ್ತಿದೆ. ಎಷ್ಟು ಯೋಚಿಸಿದರೂ ಉತ್ತರ ಹೊಳೆಯುತ್ತಿಲ್ಲ. ಒಂದು ದಿನ ಅಯ್ಯನವರನ್ನೇ ಕೇಳಿದಳು. ಅವರು ಹೇಳಿದರು: ''ಅವ್ವಾ, ಇದು ದೇವರ ಮಾಯ. ಕೃಷ್ಣ ಸಣ್ಣೋನಾಗಿದ್ದಾಗ ಅವನ ಅವ್ವನ್ನ ಥರ ಥರಾವರಿಯಾಗಿ ಪರೀಕ್ಷೆ ಮಾಡಿದ್ನಂತೆ. ಅವ್ನು ಉಪಾಸ ಇದ್ರೆ ಅವ್ವೂ ಉಪಾಸ ಮಾಡಿದ್ಲು. ಅವ್ನು ಹಾಲು ಕುಡಿಯೂ ತನಕ ಅವ್ಳು ನೀರೂ ಕುಡೀತಿರ್ನಿಲ್ಲ. ಈ ತಾಯಿಪ್ರೇಮ ಇನ್ನೂ ಪರೀಕ್ಷೆ ಮಾಡ್ಬೇಕು ಅಂತ ಒಂದು ದಿನ ಕೇಳಿದ್ನಂತೆ: 'ಅವ್ವಾ, ನಾನ್ ಸತ್ಹೋದ್ರೆ ನೀನ್ ಏನ್ ಮಾಡ್ತೀಯಾ?'
''ಮಗಾ, ನಿನ್ನ ಬಿಟ್ಟು ನಾನಿರ್ತೀನಾ? ಹಿದ್‌ಗುಟ್ಟೇ ನಾನೂ ಸಾಯ್ತೀನಿ' – ಅಂದಳು.
''ನಿಜವಾ?' –ಅಂತ ಕೇಳ್ದ.
''ನಿನ್ನಾಣೆಗೂ ನನ್ನ ಕಂದ' –ಅಂತ ಆಣೆ ಮಾಡಿದ್ಲು.
''ಒಂದು ದಿನ ಅವ್ನು ಹತ್ರುದಲ್ಲೇ ಇದ್ದ ಮಡೂನ ಒಳಕ್ಕೆ ಕಾಲು ಜಾರಿ ಬಿದ್ದುಬಿಟ್ಟ. ಒಂದ್ ಸಲ ಮುಳುಗಿ

ಮತ್ತೆ ಮೇಲಕ್ಕೆ ಎದ್ದಹಂಗೆ ಮಾಡಿ, 'ಅವ್ವಾ, ಮ್ಯಾಲುಕ್ಕೆ ಯಳ್ಕ. ನೀನೂ ನೀರಿಗೆ ಬಾ. ನಾನು ಸಾಯ್‌ತಿದೀನಿ. ಬದುಕುಸ್ಕ' ಅಂತ ಬಡಕಂಡ ಬಾಯಿಗೆಲ್ಲ ನೀರು ಹೋಯ್ತಿತ್ತು. ಗೋಪಮ್ಮ ದಡದಲ್ಲೇ ನಿಂತ್ಕಂಡು, 'ಯಾರಾದ್ರೂ ನನ್ನ ಮಗೂನ ಯಳ್ಕ ಬನ್ರಪ್ಪಾ' ಅಂತ ಕಿರುಚ್ಕಂಡ್ಳು. ಯಾರೂ ಬರ್ಲಿಲ್ಲ. ಉಟ್ಟಿದ್ದ ಸೀರೇನೇ ಬಿಚ್ಚಿ, ಒಂದ್ ದಡ ಹಿಡ್ಕಂಡಿ, ಇನ್ನೊಂದು ಕಡೆ ಅವ್ನಿಗೆ ಎಸೆದ್ಲು. ಅದು ಸಿಕ್ಲಿಲ್ಲ. 'ಅವ್ವಾ, ಅವ್ವಾ' ಅಂತ ಕೂಕ್ಕಳ್ತಾಲೇ ಅವ್ನು ನೀರಿಗೆ ಮುಳುಗಿಬಿಟ್ಟ. ಸತ್ತೇ ಹ್ವಾಗಿಬಿಟ್ಟ. ಗೋಪಮ್ಮ ಸೀರೆ ಸುತ್ಕಂಡು ದಡದಲ್ಲೇ ಕುಂತ್ಕಂಡು ಅತ್ಲೂ ಅತ್ಲೂ, ಓಟೊಂತರ ಅತ್ಲು. ತಾನೂ ನೀರಿಗೆ ಬಿದ್ದು ಸಾಯಾಕೆ ಹೆದ್ರಿಕೆಯಾಯ್ತು. ವಳಿಕ್ಕೆ ಮಾತ್ರ ಬೀಳ್ಲಿಲ್ಲ. ಮಗನ್ನ ನುಂಗಿ ಹಾಕಿದ ಗಂಗಾಮಾತೇನ ಬಯ್‌ದ್ಳು. ಬಾಯಿ ಬಾಯಿ ಬಡಕಂಡ್ಳು. ದಡದಲ್ಲೇ ಕೂತ್‌ಳು. ನೀರಿಗೆ ಮಾತ್ರ ಬೀಳ್ಲಿಲ್ಲ. ಒಂದು ದಿನ ಕಳೀತು, ಎಲ್ಡು ದಿನ ಕಳೀತು, ಗೋಪಮ್ಮ ದಿನಾ ಬಂದು ಮಡೂನ ದಡದಲ್ಲಿ ಕುಂತು ಅಳ್ತಿದ್ಲು. ನೀರಿಗೆ ಮಾತ್ರ ಬೀಳ್ಲಿಲ್ಲ. ಮೂರನೇ ದಿನ ಕೃಷ್ಣನೇ ನೀರಿನೊಳಗಿನಿಂದ ಎದ್ದು ಬಂದು –'ಅವ್ವಾ, ಈಟೇನಾ ನಿನ್ನ ಪ್ರೇಮ? ನಾನು ಸತ್ರೂ ನೀನು ಸಾಯ್‌ಲಿಲ್ಲ. ಇನ್ನುಮ್ಯಾಲೆ ತಾಯಿ ಎದುರಿಗೆ ಹೆತ್ತ ಮಕ್ಳು ಸಾಯಲಿ' ಅಂತ ಶಾಪ ಕೊಟ್ಟ. ಅದುಕ್ಕೆ ಹಿಂಗೆ ಆಯ್ತಂತೆ."

ಈ ಮಾತನ್ನು ಕೇಳಿದ ನಂಜಮ್ಮನಿಗೆ ಗೋಪಿಯ ಮೇಲೆ ವಿಪರೀತ ಸಿಟ್ಟು ಬಂತು. ಅವಳೊಬ್ಬಳು ನಿಶ್ಚಿಂತೆಯಿಂದ ಮಡುವಿಗೆ ಧುಮುಕಿದ್ದರೆ ಪ್ರಪಂಚದಲ್ಲಿ ತಾಯಿಯ ಕಣ್ಣೆದುರಿಗೆ ಮಕ್ಕಳು ಸಾಯುವುದೇ ಇರುತ್ತಿರಲಿಲ್ಲ. ಗೋಪಿ ಎಷ್ಟಾದರೂ ಮನುಷ್ಯಳು. ಶ್ರೀಕೃಷ್ಣ, ದೇವರು. ಮನುಷ್ಯತಾಯಿಯ ಪ್ರೇಮಪರೀಕ್ಷೆ ಮಾಡುಕ್ಕೇ ಅವನು ಹೀಗೆ ಮಾಡಿದ. ದೇವತಾಯಿ ಆಗಿದ್ದರೆ ಸತ್ತೇಬಿಡ್ತಿದ್ದಳೋ ಏನೋ! ಆದರೆ ದೇವತೆಗೆ ಸಾವೇ ಇಲ್ಲ. ಅವಳ ಮಗನಿಗೂ ಸಾವಿಲ್ಲ. ಆಗ ಈ ಕಥೆ ನಡೆಯುತ್ತಿರಲಿಲ್ಲ.

ಶೆಡ್ಡಿಗೆಬಂದ ಮೇಲೂ ಅವಳ ಮನಸ್ಸು ಇದನ್ನೆ ಚಿಂತಿಸುತ್ತಿತ್ತು. ಇದೇನು ಬರಿ ಕಥೆಯೋ ಅಥವಾ ನಿಜವೋ?–ಎಂಬ ಪ್ರಶ್ನೆ ಮನಸ್ಸಿನಲ್ಲಿ ಹುಟ್ಟಿತು. ಕಥೆಯಾಗಿದ್ದರೂ ಇರಬಹುದು. ಪಾರ್ವತಿ ರಾಮಣ್ಣ ಸತ್ತುದಕ್ಕೆ ತಾನೇಕೆ ಸಾಯಲಿಲ್ಲ?–ಎಂಬ ಪ್ರಶ್ನೆ ಮನಸ್ಸಿನಲ್ಲಿ ಹುಟ್ಟಿತು. ಅದು ಹುಟ್ಟಿದ ತಕ್ಷಣ ಅವಳಿಗೆ ಆಶ್ಚರ್ಯವಾಯಿತು. ಜೊತೆಗೆ, ತಾನೂ ಸಾಯಬೇಕೆಂಬ ಬಲವಾದ ನಿಶ್ಚಯ ಮನಸ್ಸಿನಲ್ಲಿ ಮೂಡಿತು. ಅಷ್ಟು ಹೊತ್ತಿಗೆ ರಾತ್ರಿ ಎಂಟು ಗಂಟೆ. ಚೆನ್ನಿಗರಾಯರು ಹೊಗೆಸೊಪ್ಪು ಅಗಿಯುತ್ತಾ ಶೆಡ್ಡಿನ ಎದುರಿನ ಕಲ್ಲು ಚಪ್ಪಡಿಯ ಮೇಲೆ ಕುಳಿತಿದ್ದರು. ನಂಜಮ್ಮ ಒಳಗೆ ಹಾಸಿಗೆ ಹಾಕಿ ಮಲಗಿಬಿಟ್ಟಳು. ನಿದ್ರೆ ಮಾತ್ರ ಬರಲಿಲ್ಲ. ತಾನು ಈ ದಿನ ಸಾಯಬೇಕು. ಪಾರ್ವತಿ ರಾಮಣ್ಣರನ್ನು ಹಿಂಬಾಲಿಸಬೇಕು ಎಂಬ ನಿಶ್ಚಯ ಅವಳನ್ನು ಬಲವಾಗಿ ಹಿಡಿಯಿತು. ತಾನು ದೃಢ ಮನಸ್ಸಿನಿಂದ ಸತ್ತರೆ ದೇವರು ತನ್ನನ್ನೂ ಬದುಕಿಸಿ, ತನ್ನ ಇಬ್ಬರು ಮಕ್ಕಳನ್ನೂ ವಾಪಸ್ಸು ಕೊಡುತ್ತಾನೆಯೋ ಎಂಬ ಒಂದು ಆಶಾಪೂರಿತ ಪ್ರಶ್ನೆ ಮನಸ್ಸಿನಲ್ಲಿ ಹುಟ್ಟಿತು. ಅವಳು ನೋಡಿದ ಯಕ್ಷಗಾನ ನಾಟಕಗಳಲ್ಲಿ, ಕಲಿತಿದ್ದ ಹಾಡುಗಳಲ್ಲಿ, ಓದಿದ್ದ ಪುರಾಣಗಳಲೆಲ್ಲಾ ಆಗುತ್ತಿದ್ದುದು ಹೀಗೆ. ತನಗೂ ಯಾಕೆ ಹಾಗೆ ಆಗಬಾರದು? ಆದರೆ ಇಬ್ಬರು ಮಕ್ಕಳೂ ಒಂದೇ ದಿನ ಸತ್ತ ದಿನದಿಂದ ಅವಳಿಗೆ ದೇವರು ಪುರಾಣಗಳಲ್ಲಿ ನಂಬಿಕೆ ಹಾಳಾಗಿತ್ತು. ಗೋಪಿ ಕೃಷ್ಣನಿಗಾಗಿ ಸಾಯಲು ಹಿಂಜರಿದಳೋ ಬಿಟ್ಟಳೋ ನನಗೆ ಅದು ಬ್ಯಾಡ. ಈಗ ನನ್ನ ಮಕ್ಕಳು ಸತ್ತಿವೆ. ಈ ಆರು ದಿನ ಅವಿಲ್ಲದೆ ನಾನು ನರಕ ಅನುಭವಿಸಿದೀನಿ. ಈ ನರಕ ಬ್ಯಾಡ. ನಾನೂ ಸಾಯಬೇಕು.

ಅಷ್ಟರಲ್ಲಿ ಅವಳ ಗಂಡ ಒಳಗೆ ಬಂದು ಮಲಗಿದ್ದರು. ಅವರ ಗೊರಕೆಯೂ ಸ್ಪಷ್ಟವಾಗಿ ಕೇಳುತ್ತಿತ್ತು. ನಂಜಮ್ಮ ಮೇಲೆ ಎದ್ದಳು. ಆಗಲೇ ಹತ್ತು ಹನ್ನೊಂದು ಗಂಟೆಯಾಗಿರಬಹುದು. ಅವಳು ಶೆಡ್ಡಿನ ಬಾಗಿಲು ಹಾಕಿಕೊಂಡು ಹೊರಗೆ ಬಂದಳು. ಎಲ್ಲಿಗೆ ಹೋಗುವುದು? ಹೇಗೆ ಸಾಯುವುದು?–ಎಂದು ವ್ಯಕ್ತವಾಗಿ ಯೋಚಿಸದೆಯೇ ಮನಸ್ಸು ಅವಳನ್ನು ಏರಿ ಇಳಿಸಿ, ಅವಳ ಇಬ್ಬರು ಮಕ್ಕಳನ್ನೂ ಭಸ್ಮ ಮಾಡಿದ ಶ್ಮಶಾನದ ಕಡೆಗೆ ಕರೆದೊಯ್ದಿತು. ಹೆಣ ಸುಡುವಾಗ ಅವಳು ಹೋಗಿರಲಿಲ್ಲ. ಹೆಂಗಸರು ಶ್ಮಶಾನಕ್ಕೆ ಹೋಗಬಾರದಂತೆ. ಈಗ ನೇರವಾಗಿ ಅಲ್ಲಿಗೆ ಹೋದಳು. ಯಾವ ಭಯವೂ ಇಲ್ಲ. ಅಳುಕು ಅಂಜಿಕೆಗಳಿಲ್ಲ. ಗಾಳಿ, ದೆವ್ವ ಪಿಶಾಚಿಗಳ ಯೋಚನೆ ಮನಸ್ಸಿನಲ್ಲಿ ಸುಳಿಯಲಿಲ್ಲ. ಕತ್ತಲೆಯಲ್ಲಿಯೂ, ಎರಡು ಹೆಣಗಳನ್ನು ಸುಟ್ಟ ಜಾಗ ಕಾಣುತ್ತಿತ್ತು. ಅವರ ಇಬ್ಬರು ಮಕ್ಕಳಲ್ಲದೆ ಸಧ್ಯದಲ್ಲಿ ಮತ್ತೆ ಯಾವ ಬ್ರಾಹ್ಮಣ ಹೆಣವೂ ಬಿದ್ದಿರಲಿಲ್ಲ. ಆದುದರಿಂದ ಈಗ ಕಾಣುತ್ತಿದ್ದ ಎರಡು ಜಾಗಗಳು ಅವಳ ಮಕ್ಕಳವೇ. ಅವುಗಳಲ್ಲಿ ಪಾರ್ವತಿಯದು ಯಾವುದು, ರಾಮಣ್ಣನದು ಯಾವುದು ಎಂಬುದು ಮಾತ್ರ ತಿಳಿಯಲಿಲ್ಲ. ಅದು ತಿಳಿದಾದರೂ ಏನಾಗಬೇಕು ಎಂಬ ಯೋಚನೆ ಬಂತು. ಮೂರನೇ ದಿನ ಎರಡು ಕಡೆಗಳಲ್ಲಿಯೂ ಬೂದಿ ಎತ್ತಿದ ಸಂಸ್ಕಾರ ಮುಗಿದಿತ್ತು. ಆದರೂ ಅವಳು ಬಾಗಿ ಎರಡರಲ್ಲಿಯೂ ಒಂದೊಂದು ಹಿಡಿ ಬೂದಿಯನ್ನು ತೆಗೆದು ತನ್ನ ಸೆರಗಿಗೆ ಕಟ್ಟಿಕೊಂಡಳು. ಶ್ಮಶಾನದ ಹತ್ತಿರದಲ್ಲಿ ಒಂದು ಕೊಳವಿದೆ. ಹೆಣ ಸುಟ್ಟಮೇಲೆ ಶವವಾಹಕರು, ಸಂಸ್ಕಾರಕರ್ತೃಗಳು ಸ್ನಾನ ಮಾಡಿ ಬರುವುದು ಅದರಲ್ಲಿಯೇ. ಉಳಿದಂತೆ ಅದನ್ನು ಯಾರೂ ಉಪಯೋಗಿಸುವುದಿಲ್ಲ. ಹೀಗಾಗಿ ನೀರು ಸ್ವಲ್ಪ ಮಟ್ಟಿಗೆ ಮಲೆತಿರುತ್ತದೆ. ತಾನು ಕೊಳಕ್ಕೆ ಬೀಳಬೇಕು. ಮೆಟ್ಟಿಲಿನ ಎದುರು ಭಾಗದ ನಾಲಿಗೆಕಲ್ಲಿನ ಮೇಲೆ ನಿಂತು ಧುಮುಕಬೇಕು. ಹಾಗೆಯೇ ಕಣ್ಣು ಮುಚ್ಚಿದಳು.

ಕಪ್ಪು ಮಬ್ಬಾಗಿದ್ದ ಕತ್ತಲೆಯು ಗಾಢ ಕತ್ತಲೆಯಾಯಿತು. ನರನರಗಳು ಉಬ್ಬಿದಂತಾಗಿ ಎರಡು ಕ್ಷಣ ಸ್ವಾದಿ ೕನ ತಪ್ಪಿದವು. ಕೈ ಕಾಲು ಮೈಗಳೆಲ್ಲ ಹಿಡಿತ ತಪ್ಪಿ ನಡುಗಿದವು. ಬಾವಿಯ ನೀರು ಕಲಕಿ ಮೂಲೆ ಮೂಲೆಗೂ ಬಡಿಯುತು. ಆದರೆ ಕ್ರಮೇಣ ನರಗಳು ಶಾಂತವಾದುವು. ಶರೀರದ ನಡುಕ ನಿಂತಿತು. ಯಾವ ಯೋಚನೆ ಭಾವನೆಗಳೂ ಇಲ್ಲದೆ ಸಕವ ವ್ಯಾಪಾರವೂ ಸತ್ತಂತೆ ಆಗಿ, ಮನಸ್ಸು ಶೂನ್ಯವಾಯಿತು. ಸಾವು ಎಂದರೆ ಇದೇಯೆ?, ಇಷ್ಟೇಯೆ? ಅಲ್ಲಿ ಯಾರೂ ಇಲ್ಲ. ಪಾರ್ವತಿ, ರಾಮಣ್ಣ, ಕೊನೆಗೆ ತಾನೂ–ಏನೂ ಇಲ್ಲ. ಅರ್ಧ ಹೆಜ್ಜೆ ಮುಂದೆ ಇಟ್ಟು ನೀರಿಗೆ ಧುಮುಕುವುದೊಂದೇ ಉಳಿದಿದೆ. ಅದು ಸ್ವಲ್ಪವೂ ಕಷ್ಟವಿಲ್ಲದೆ ಪ್ರಯತ್ನವೇ ಬೇಡದೆ ನಿರಾಯಾಸವಾಗಿ ನಡೆದುಹೋಗುವ ಹೆಜ್ಜೆ.

ಆ ಹೆಜ್ಜೆಯನ್ನಿಡುವ ಮೊದಲು ಒಂದು ಸಲ, ಈ ಊರಿನಲ್ಲಿ ಉಳಿದವರ ನೆನಪು ಬಂತು. ಇನ್ನು ಉಳಿದಿರುವವರು ಇಬ್ಬರು: ಗಂಡ. ಅವರ ಪಾಡು ಅವರಿಗೆ. ವಿಶ್ವ? ವಿಶ್ವನ ನೆನಪು ಬಂದ ತಕ್ಷಣ ಮನಸ್ಸು ವಿಚಲಿತವಾಯಿತು. ಅವನು ಪ್ಲೇಗುಮಾರಿಯಿಂದ ಸಾಯಲಿಲ್ಲ; ಉಳಿದುಕೊಂಡಿದ್ದಾನೆ. ಅವನನ್ನು ಸಾಕುವವರಾರು? ಅಯ್ಯನವರೇ ಅವನಿಗೆ ದಿಕ್ಕು ಎಂದು ಮನಸ್ಸು ನುಡಿಯಿತು. ಮಕ್ಕಳು ಸತ್ತ ದುಖಃಕ್ಕೆ ನಂಜಮ್ಮ ಪ್ರಾಣ ಕಳಕೊಂಡಿದ್ದಾಳೆ ಅಂತ ತಿಳಿದ ಅಯ್ಯನವರು ಎಂದಿಗೂ ಅವನ ಕೈಬಿಡುಲ್ಲ–ಎಂಬ ಭರವಸೆ ಹುಟ್ಟಿತು. ಆದರೆ ತಾನಿಲ್ಲದೆ ಅವನು ತಬ್ಬಲಿಯಾಗುತ್ತಾನೆ. ಅಯ್ಯನವರು ಏನು ಮಾಡಿದರೂ ಅವನಿಗೆ ತಾಯಿ ಇದ್ದ ಹಾಗೆ ಎಲ್ಲಿ ಆಗುತ್ತೆ? ಪಾರ್ವತಿ ರಾಮಣ್ಣರಿಗೆ ರೋಗ ತಗುಲಿದಾಗ ತನಗೂ ಯಾಕೆ ತಗುಲಲಿಲ್ಲ? ವಿಶ್ವನನ್ನು ಸಾಕುಕ್ಕೆ ಅಂತಲೇ ನನ್ನನ್ನು ದೇವರು ಬದುಕಿಸಿದನೇನೋ. ನನ್ನಿಂದ ಸಾಕಿಸಿಕೋಬೇಕು ಅಂತಲೇ ಅವನನ್ನು ಉಳಿಸಿದನೇನೋ. ವಿಶ್ವನ ಮುಖ ನೆನಪಿಗೆ ಬಂತು. ಪಾರ್ವತಿಯ ಅಗಲವಾದ ತುಂಬುಮುಖ, ರಾಮಣ್ಣನ ಬುದ್ಧಿಶಕ್ತಿ, ಎರಡೂ ಅವನದು. ಅವರಿಬ್ಬರ ಪರವಾಗಿ ಅವನು ಉಳ್ಕೊಂಡಿದಾನೆ. ತಾನು ಪ್ರಾಣ ಕಳಕೊಂಡರೆ ಏನು ದಾರಿ?

ಈ ಯೋಚನೆಯೊಡನೆ ಅವಳು ನಾಲಿಗೆಕಲ್ಲಿನ ಮೇಲೆಯೇ ಕುಕ್ಕುರುಗಾಲಿನಲ್ಲಿ ಕುಳಿತಳು. ತಾನು ಮದುವೆಯಾಗಿ ಈ ಊರಿಗೆ ಬಂದದ್ದು, ಈ ಮಕ್ಕಳು ಹುಟ್ಟಿದ್ದು, ಎಲ್ಲವೂ ನೆನಪಿಗೆ ಬಂದುವು. ಮಧ್ಯೆ ಆದ ಕಷ್ಟಸುಖಗಳು. ಮಳೆ ಬೆಳೆ ಇಲ್ಲದೆ ಊರಿಗೇ ಬಂದ ಬರ. ಪಾರ್ವತಿ ರಾಮಣ್ಣ ಎಷ್ಟು ಸಮಾಧಾನದಿಂದ ಹಸಿವು ಸಹಿಸಿಕೊಳ್ಳುತ್ತಿದ್ದರು! ಅಷ್ಟು ಒಳ್ಳೆಯೋರು ಅಂತಲೇ ದೇವರು ಕರಕೊಂಡ. ವಿಶ್ವ ಹಸಿವು ತಡೆಯಲಾರದೆ ತನ್ನನ್ನು ಹಿಡಿದು ಹೊಡೆಯುತ್ತಿದ್ದ. ಅವನ ಸ್ವಭಾವವೇ ಹಾಗೆ. ಧೈರ್ಯ, ಸಿಟ್ಟು, ದುಡುಕು, ಊಟದಲ್ಲಿ ಮುಂದು. ಆದರೆ ಅಪ್ಪನ ಹಾಗೆ ತನ್ನ ಒಡಲು ಮಾತ್ರ ತುಂಬಿಕೊಳ್ಳುವ ನೀಚಬುದ್ಧಿಯಿಲ್ಲ. ತಿಪ್ಪೆಯ ಮೇಲೆ ಸುತ್ತಿ ಗಣಿಕೆಹಣ್ಣು ಬಿಡಿಸಿಕೊಂಡು ಬಂದರೂ ಅಮ್ಮನಿಗೆ ಅಣ್ಣ ಅಕ್ಕಯ್ಯರಿಗೆ ಕೊಡದೆ ಯಾವತ್ತೂ ತಿಂದವನಲ್ಲ. ಅವನನ್ನು ಹೀಗೆ ಬಿಟ್ಟು ತಬ್ಬಲಿಯಾಗಿ ಮಾಡಿ ನಾನು ಸತ್ತು, ಬರುವ ಭಾಗ್ಯವೇನು? ಈಗ ಸತ್ತು ಆ ಲೋಕಕ್ಕೆ ಹೋದರೂ ಅಲ್ಲಿ ಪಾರ್ವತಿ ರಾಮಣ್ಣ, ಇಬ್ಬರೂ, 'ಅಮ್ಮ, ನೀನು ವಿಶ್ವನನ್ನು ಹೀಗೆ ಬಿಟ್ಟು ಬಂದೆಯಲ್ಲ, ಅವನ ಗತಿ ಏನು? ನಿನಗೆ ಅಷ್ಟೂ ಬುದ್ಧಿ ಇರಲಿಲ್ಲವೆ?' ಅಂದ್ರೆ ಏನು ಹೇಳುವುದು?

ತನಗೇ ತಿಳಿಯದಂತೀದ್ದು ಅವಳು ನಾಲಿಗೆಕಲ್ಲಿನಿಂದ ಹಿಂದೆ ನಡೆದಳು. ಕಲ್ಲು ಮುಳ್ಳುಗಳನ್ನು ನೋಡಿಕೊಂಡು, ಬಂದ ದಾರಿಯಲ್ಲಿಯೇ ನಡೆದು ಶ್ಮಶಾನಕ್ಕೆ ಬಂದಳು. ಪಾರ್ವತಿ ರಾಮಣ್ಣರನ್ನು ಸುಟ್ಟ ಜಾಗಗಳ ನಡುವೆ ಸ್ವಲ್ಪ ಹೊತ್ತು ನಿಂತಿದ್ದಳು. ಅಲ್ಲಿಂದ ಹೊರಟು ತೋಟದ ಮಾರ್ಗವಾಗಿ ನಡೆದು ಕೆರೆಯ ಏರಿ ಹತ್ತಿದಳು. ಆದರೆ ಶೆಡ್ಡಿಗೆ ಹೋಗಲು ಬಲಕ್ಕೆ ತಿರುಗದೆ, ಹೆಜ್ಜೆಗಳು ದೇವಸ್ಥಾನದ ಕಡೆಗೆ ಎಡಕ್ಕೆ ತಿರುಗಿದವು. ಏರಿಯ ಮೇಲಿನ ದಾರಿ ಕತ್ತಲೆಯಲ್ಲಿಯೂ ಸ್ಪಷ್ಟವಾಗಿ ಕಾಣುತ್ತಿತ್ತು. ಎತ್ತಿನ ಗಾಡಿಗಳು ಹೋಗಿ ಬರುವಷ್ಟು ಅಗಲವಾದ ಏರಿ ಅದು. ದೇವಸ್ಥಾನದ ಹತ್ತಿರ ಬರುವ ಹೊತ್ತಿಗೆ ಅಯ್ಯನವರು ಒಳಗೆ ಕೂತು ಹಾಡುತ್ತಿರುವುದು ಕೇಳಿಸುತ್ತಿತ್ತು. ಅವಳು ಒಳಗೆ ಹೋದಾಗ ಹರಳೆಣ್ಣೆಯ ಹಣತೆ ದೇವಸ್ಥಾನದ ನಡು ಅಂಕಣದಲ್ಲಿ ಉರಿಯುತ್ತಿತ್ತು. ವಿಶ್ವ ಹಾಸಿಗೆಯ ಮೇಲೆ ಮಲಗಿ ನಿದ್ದೆ ಮಾಡುತ್ತಿತ್ತು. ಅದಕ್ಕೆ ಕಂಬಳಿ ಹೊದೆಸಿ, ಅದೇ ಹಾಸಿಗೆಯ ಒಂದು ಪಕ್ಕದಮೇಲೆ ಕುಳಿತು ಅಯ್ಯನವರು ಬಲಗೈಲಿ ಏಕತಾರಿ ಮೀಟಿಕೊಂಡು ಹಾಡುತ್ತಿದ್ದರು:

ಹಳ್ಳ ಕೊಳ್ಳದ ಬಳಿ ತನುವು ತಂಪಿದ ಬಳಿ
ಗುಳ್ಳದ ಹಣ್ಣು ಫಲಮಾದುದು
ಗುಳ್ಳದ ಹಣ್ಣು ನೆಲಕುದುರಿ ಬೀಳುವಾಗ
ಅದರ ಬಳ್ಳಿಗೆ ಹೇಳಿ ಹೋಯಿತೆ ಒಂದು ಮಾತ......

ಬಾಗಿಲಲ್ಲಿ ಬಂದು ನಿಂತ ಆಕೃತಿಯನ್ನು ಗಮನಿಸಿದ ಅಯ್ಯನವರು ಈ ಕಡೆಗೆ ತಿರುಗಿ ನೋಡಿದರು. ಅವಳ ಗುರುತು ಸಿಕ್ಕಿ ಹೇಳಿದರು: 'ಸಂಜೆ ತಾನೇ ಬಂದಿದ್ದೆ. ಈಗ ಮತ್ತೆ ಬಂದೆಯಲ್ಲವ್ವಾ. ಯಾಕೆ ಬಂದೆ? ಏನೂ ಯೇಚ್ನೆ ಬ್ಯಾಡ. ವಿಶ್ವಣ್ಣ ಕಲ್ಲುಗುಂಡಿನ ಹಂಗೆ ಅವ್ನೆ. ಇನ್ನುಮ್ಯಾಲೆ ಅವನನ್ನ ವಿಶ್ವಣ್ಣ ಅನ್ನಬ್ಯಾಡ. ಗುಂಡಣ್ಣ

ಅನ್ನು. ಗುಂಡಿನ ಹಂಗೆ ಬೆಳೀತಾನೆ.'
ಅಯ್ಯನವರ ಬಾಯಹರಕೆ ದೊಡ್ಡದು. ಅವರ ಮಾತೇ ಸರಿ. ಇನ್ನು ಮೇಲೆ ಅವನನ್ನು ಗುಂಡಣ್ಣ ಅಂತಲೇ ಕೂಗಬೇಕು–ಎಂದು ಮನಸ್ಸಿನಲ್ಲಿ ಮಾಡಿಕೊಂಡ ಅವಳು, 'ಏನೂ ಇಲ್ಲ. ಹೋಗ್ತೀನಿ'ಎಂದಳು.
'ಈಗ ಯಾಕೆ ಬಂದೆ?'
'ಸುಮ್ನೆ ಬಂದೆ.'
'ಬೇಕಾದ್ರೆ ಇಲ್ಲೇ ಇರು. ಆದ್ರೆ ನೋಡವ್ವ, ಜನದ ಬಾಯಿ ಒಂದೇ ತರ ಇರಾಕಿಲ್ಲ. ನೀನು ಮನೆಗೆ ಹ್ವಾಗು.'
'ಹೋಗ್ತೀನಿ'–ಎಂದು ಹೊರಟಳು.
'ವಸೀ ದೂರ ಬಂದು ಕಳುಸ್ತೀನಿ ತಾಳವ್ವ.'
'ಬ್ಯಾಡಿ ಬ್ಯಾಡಿ. ಮಗು ಒಂದೇ ಮಲಗಿದೆ'–ಎಂದು ಹೇಳಿ ಬೇಗ ಬೇಗ ನಡೆದು ಅವಳು ಏರಿಯ ಮೇಲಕ್ಕೆ ಬಂದಳು. ಶೆಡ್ಡಿನ ಹತ್ತಿರಕ್ಕೆ ಬರುವ ಮೊದಲು ಸೆರಗಿಗೆ ಕಟ್ಟಿಕೊಂಡಿದ್ದ ಬೂದಿಯ ನೆನಪಾಯಿತು. ಏರಿಯ ಎಡಗಡೆ ಇಳಿದು ಸೆರಗಿನ ಗಂಟು ಬಿಚ್ಚಿ ಕೆರೆಯ ನೀರಿಗೆ ಅದನ್ನು ಕದಡಿ– 'ಗಂಗಮ್ಮತಾಯಿ, ಇದು ನಿನ್ನ ಹೊಟ್ಟೆಯ ಒಳಕ್ಕೆ ಸೇರಿಕೊಳ್ಳಲಿ' ಎಂದು ಹೇಳಿ ಮತ್ತೆ ಏರಿ ಹತ್ತಿ ನಡೆದು ಶೆಡ್ಡಿಗೆ ಬಂದು ಮಲಗಿದಳು.
– 6 –
ಆ ದಿನ ಬೆಳಿಗ್ಗೆ ಅವಳು ದೇವಸ್ಥಾನಕ್ಕೆ ಹೋಗಿ ವಿಶ್ವನನ್ನು ನೋಡಿಕೊಂಡು ಬಂದು ತನ್ನ ಶೆಡ್ಡಿನಲ್ಲಿ ಕೂತಿದ್ದಳು. ಇವತ್ತಿಗೆ ಏಳನೆಯ ದಿನ. ಕ್ರಮವಾಗಿ ಶುರುವಾಗಿದ್ದರೆ ರಾಮಣ್ಣನ ತಿಥಿ ಕೆಲಸ ಇವತ್ತಿನಿಂದ ಶುರುವಾಗಬೇಕು. ಏನು ಶಾಸ್ತ್ರವೋ ಏನು ಸುಡುಗಾಡೋ, ಅವಳು ಆ ಬಗೆಗೆ ಹೆಚ್ಚಾಗಿ ಯೋಚಿಸಿಯೂ ಇಲ್ಲ. ಯಾರೂ ಜ್ಞಾಪಿಸಿಯೂ ಇಲ್ಲ. ಪಾರ್ವತಿಯ ಕೆಲಸ ಅವಳ ಗಂಡನದು.
ಮಧ್ಯಾಹ್ನ ಹನ್ನೆರಡು ಗಂಟೆಯಾಗಿತ್ತು. ನಂಜಮ್ಮ ಮಂಡಿಗೆ ತಲೆ ಕೊಟ್ಟು ಶೆಡ್ಡಿನ ಒಳಗೆ ಕೂತಿದ್ದಳು. ಚೆನ್ನಿಗರಾಯರು ಎಲ್ಲೋ ಹೋಗಿದ್ದರು. ಬಿಳಿಯ ಬಟ್ಟೆ ಉಟ್ಟ ಯಾರೋ ಮನೆಗೆ ಬಂದಂತೆ ಆಯಿತು. ಕತ್ತೆತ್ತಿ ನೋಡುತ್ತಾಳೆ: ಬಂದವನು ಸೂರ್ಯನಾರಾಯಣ, ಪಾರ್ವತಿಯ ಯಜಮಾನರು. ಎಡಗೈಲಿ ಮಗು ರತ್ನನ ಕೈ ಹಿಡಿದಿದ್ದಾನೆ. ಕಂಕುಳಿಗೆ ನೇತುಹಾಕಿದ ಒಂದು ದೊಡ್ಡ ಚೀಲ. ಬಲಗೈಲಿ ಹಿಡಿದಿದ್ದ ದೊಡ್ಡದೊಂದು ತೂಕವಾದ ಬಿದಿರುಬುಟ್ಟಿ. ಬಂದವರಿಗೆ ನಂಜಮ್ಮ ಕುಳಿತುಕೊಳ್ಳಿ ಎಂದೂ ಹೇಲಲಿಲ್ಲ. ಅಳಿಯ ಬಂದರೆ ಲಜ್ಜೆ ಮರ್ಯಾದೆಗಳಿಂದ ಎದ್ದು ಒಳಗೂ ಹೋಗಲಿಲ್ಲ. ಸೂರ್ಯನಾರಾಯಣನೇ ರತ್ನನಿಗೆ–'ಅಜ್ಜೀ ಹತ್ರುಕ್ಕೆ ಹೋಗು ಮಗು' ಎಂದ.
ಮಗು ಈ ಅಜ್ಜಿಯ ಗುರುತು ಮರೆತಿರಲಿಲ್ಲ. ನೇರವಾಗಿ ಹತ್ತಿರ ಬಂದು ಅವಳ ಭುಜವನ್ನು ಮುಟ್ಟಿತು. ಅದರ ಕೈ ಹಿಡಿದುಕೊಂಡು ಅವಳು ತೊಡೆಯ ಮೇಲೆ ಕೂರಿಸಿಕೊಂಡಳು. ಸೂರ್ಯನಾರಾಯಣ ಬುಟ್ಟಿಯ ಬಾಯಿ ತೆಗೆದು–'ಇದನ್ನ ತೆಗೆದಿಡಿ. ಶಖೆಗೆ ಬಾಡಿಹೋಗುತ್ತೆ' ಎಂದು ಒಂದೊಂದಾಗಿ ಹೊರಗೆ ತೆಗೆದಿಟ್ಟ. ಗಮಗಮಿಸುವ ಮಲ್ಲಿಗೆ ಹೂವಿನ ಪೊಟ್ಟಣ. ಚಿಗುರು ವೀಳ್ಯದೆಲೆ ಕಟ್ಟು. ಕಿತ್ತಲೆ ಹಣ್ಣು, ಬಾಳೆಹಣ್ಣಿನ ಚಿಪ್ಪು. ಹೋಟೆಲು ತಿಂಡಿಯ ಕಾಗದದ ಪೊಟ್ಟಣಗಳು. ಅವನ್ನು ನೋಡುನೋಡುತ್ತಾ ನಂಜಮ್ಮನಿಗೆ ತಡೆಯಲಾಗಲಿಲ್ಲ. ರತ್ನನನ್ನು ತಬ್ಬಿಕೊಂಡು ಒಂದು ಸಲ ಬಿಕ್ಕಳಿಸಿದಳು. ಕಕ್ಕಾವಿಕ್ಕಿಯಾದ ಸೂರ್ಯನಾರಾಯಣ ಕತ್ತೆತ್ತಿ ನೋಡಿದ. ನಂಜಮ್ಮ ಮಗುವನ್ನು ಅಲ್ಲಿಯೇ ಬಿಟ್ಟು ಎದ್ದು ಅಡಿಗೆಯ ಭಾಗದ ಮರೆಗೆ ಹೊರಟುಹೋದಳು. ಅವನಿಗೆ ಏನೂ ತಿಳಿಯಲಿಲ್ಲ. ಒಳಗಿನಿಂದ ಬಿಕ್ಕಿಬಿಕ್ಕಿ ಅಳುವುದು ಮಾತ್ರ ಕೇಳುತ್ತಿತ್ತು.
'ಅಮ್ಮಾ, ಏನು ಸಮಾಚಾರ? ಯಾಕೆ ಅಳ್ತೀರಿ?'–ಅವನು ಕೇಳಿದ.
ಅವಳು ಉತ್ತರ ಹೇಳಲಿಲ್ಲ. ತಾನೇ ಎದ್ದು ಅಡಿಗೆಯ ಭಾಗದ ಹತ್ತಿರ ಬಂದು ಕೇಳಲು ಅವನಿಗೆ ಸಂಕೋಚ. ಏನೂ ತಿಳಿಯದೆ ಸುಮ್ಮನೆ ಕೂತುಬಿಟ್ಟ. ಆದರೆ ಅವನ ಮನಸ್ಸಿನಲ್ಲಿಯೂ ಒಂದು ವಿಧವಾದ ಅವ್ಯಕ್ತ ಶಂಕೆ ಭೀತಿಗಳು ಹುಟ್ಟಿದುವು. ಅರ್ಧ ಗಂಟೆ ಹೀಗೆಯೇ ಕಳೆಯಿತು. ಸೂರ್ಯನಾರಾಯಣನೇ– 'ಅಮ್ಮಾ, ನನ್ನ ಕೈಲಿ ಬಾಯಿಬಿಟ್ಟು ಮಾತಾಡಬಾರದೇ?' ಎಂದ. ನಂಜಮ್ಮ ಮಾತಾಡಲಿಲ್ಲ. ಅಲ್ಲಿಂದ ಬಂದು ಶೆಡ್ಡಿನ ಹೊರಗೆ ಹೋದಳು. ಹತ್ತಿರದ ಇನ್ನೊಂದು ಶೆಡ್ಡಿನ ಹತ್ತಿರ ಆಡುತ್ತಿದ್ದ ಒಬ್ಬ ಹುಡುಗನನ್ನು ಕೂಗಿ–'ಮರಿ, ಮೇಷ್ಟರ ಶೆಡ್ಡಿಗೆ ಹೋಗಿ ನಾನು ಕರ್ದೆ ಅಂತ ಈಗಲೇ ಕರ್ಕಂಡ್‌ಬಾ ಹೋಗು' ಎಂದು ಹೇಳಿಕಳಿಸಿದಳು. ಹುಡುಗ ಓಡಿಹೋದ. ಐದು ನಿಮಿಷದಲ್ಲೇ ಮೇಷ್ಟರು ಬಂದರು. 'ಯಾಕೆ, ಹೇಳಿಕಳ್ಸಿದ್ರಂತೆ?'–ಎಂದು ಕೇಳಿದ ಅವರಿಗೆ, 'ನಮ್ಮ ಶೆಡ್ಡಿಗೆ ಹೋಗಿ ನೋಡಿ' ಎಂದು ಹೇಳಿದ ಅವಳು ಅಲಿ
್ಲ ನಿಲ್ಲದೆ ಏರಿಯ ಕಡೆಗೆ ನಡೆದು ದೇವಸ್ಥಾನಕ್ಕೆ ಹೊರಟುಹೋದಳು.
ಏನೂ ಗೊತ್ತಾಗದೆ ಮೇಷ್ಟರು ಶೆಡ್ಡಿಗೆ ಬಂದು ನೋಡುತ್ತಾರೆ, ಸೂರ್ಯನಾರಾಯಣ ಬೆಪ್ಪು ಹಿಡಿದವನಂತೆ ಕುಳಿತಿದ್ದಾನೆ. ಅವನ ಎದುರಿಗೆ ಹಣ್ಣು, ಹೂವು, ವೀಳ್ಯೆದೆಲೆ, ತಿಂಡಿಗಳ ಪೊಟ್ಟಣಗಳು.
ಮಗು ರತ್ನ ತಂದೆಯ ಭುಜ ಹಿಡಿದುಕೊಂಡು ನಿಂತಿದೆ. 'ಯಾವಾಗ ಬಂದ್ರಿ? ನನ್ನ ಕಾಗದ ತಲ್ಪಲಿಲ್ವೆ?'

'ಯಾವ ಕಾಗದ? ಇಲ್ವಲ.'
'ಇವತ್ತಿಗೆ ಐದು ದಿನವಾಯ್ತು ಬರ್‍ದು.'
ನಮ್ಮೂರಿಗೆ ಪೋಸ್ಟ್ ಬರೂದು ವಾರಕ್ಕೊಂದು ದಿನ.'
ಮೇಷ್ಟರು ಬಾಯಿ ಬಿಟ್ಟು ಮಾತನಾಡಲಿಲ್ಲ. 'ನಂಗೇನೂ ತಿಳಿತಾ ಇಲ್ಲ. ಅದೇನು ಮಾತಾಡಿ ವೆಂಕಟೇಶಯ್ನೋರೇ'–ಸೂರ್ಯನಾರಾಯಣನೇ ಕೇಳಿದ.
'ಬಾಯಿಬಿಟ್ಟು ಹ್ಯಾಗೆ ಹೇಳ್ಲಿ?'
'ಇಲ್ಲ ಹೇಳಿ'–ಎನ್ನುವಾಗ ಅವನ ಧ್ವನಿಯಲ್ಲಿ ಆತಂಕ ಒಡೆಯುತ್ತಿತ್ತು.
'ಪಾರ್ವತಮ್ಮ, ರಾಮಣ್ಣ, ಇಬ್ರೂ ಹೋಗಿಬಿಟ್ರು. ಇವತ್ತಿಗೆ ಏಳನೇ ದಿನ.'
'ಏನು?'– ಬಿಟ್ಟ ಬಾಯಿ ಬಿಟ್ಟಂತೆಯೇ ಅವನು ಕೇಳಿದ.
'ಪ್ಲೇಗು. ಊರಿಗೆ ಬಂದ ಮಾರಿ ಇವರ ಮನೆಗೇ ಮೊದಲು ಬಡೀತು. ಅಕ್ಕ ತಮ್ಮ ಇಬ್ರೂ ಒಂದೇ ದಿನ ಒಬ್ಬರ ಹಿಂದೆ ಒಬ್ರು ಹೊರಟ್ಹೋದ್ರು. ವಿಶ್ವ ಸುಧಾರಿಸ್ಕತ್ತಾ ಇದಾನೆ'–ಎಂದು ಅವರು ಎಲ್ಲವನ್ನೂ ವರ್ಣಿಸಿದರು.
ಸೂರ್ಯನಾರಾಯಣ ಮೂಕನಂ,ತೆ ಕೂತು ಕೇಳುತ್ತಿದ್ದ. ಎಲ್ಲವನ್ನೂ ಹೇಳಿ ಮುಗಿಸಿದ ಮೇಷ್ಟರು–'ಗ್ರಾಚಾರ ಕಣ್ರೀ, ಹಣಬರಹ ಯಾರು ತಪ್ಪುಸ್ಕಾಗುತ್ತೆ?' ಎಂದಾಗ ಅವನಿಗೆ ತಡೆಯಲಾಗಲಿಲ್ಲ. ಅದುಮಿ ಹಿಡಿದುಕೊಂಡರೂ ಒಳಗಿನಿಂದ ಅಳು ಉಕ್ಕಿ ಬಂತು. ಬಿಕ್ಕಿ ಬಿಕ್ಕಿ ಅಳುತ್ತಾ ತಡೆತಡೆದು ಉಸಿರು ಬಿಟ್ಟ. ತಂದೆಯೇ ಅಳುವುದನ್ನು ಕಂಡ ರತ್ನ ತಾನೂ ಅಳಲು ಪ್ರಾರಂಭಿಸಿತು. ಅದಕ್ಕೆ ಏನು ತಿಳಿಯಿತೋ ಏನು ಬಿಟ್ಟಿತೋ!
'ವೆಂಕಟೇಶಯ್ನೋರೇ, ನಾನು ನತದೃಷ್ಟ'–ಎಂದು ಮಗುವನ್ನು ಎಳೆದು ತಬ್ಬಿಕೊಂಡು ಅವನು ತನ್ನ ಮುಖವನ್ನು ಅದರ ಬೆನ್ನಿನಲ್ಲಿ ಹುದುಗಿಸಿಕೊಂಡ.
ಮುಂದೆ ಆಡಲು ಮೇಷ್ಟರಿಗೆ ಏನೂ ತಿಳಿಯಲಿಲ್ಲ. ಹತ್ತು ನಿಮಿಷ ಸುಮ್ಮನೆ ಕೂತಿದ್ದ ಅವರು–'ಏಳಿ, ನಮ್ಮನೆಗೆ ಹೋಗಾಣ' ಎಂದರು.
'ಇಲ್ಲ. ಈಗ ಏನೂ ಬ್ಯಡ. ನಾನು ವಾಪಸು ಹೊರಡ್ತೀನಿ.'
'ಹೊರ್‍ಡೋರಂತೆ. ಬನ್ನಿ, ಮಗೂಗಾದ್ರೂ ಏನಾದ್ರೂ ಒಂದಿಷ್ಟು ಹೊಟ್ಟೆಗೆ ಬೀಳಬೇಕಲ್ಲ'– ಎಂದು ಬಲವಂತ ಮಾಡಿ ಅವನನ್ನು ಎಬ್ಬಿಸಿ ಶೆಡ್ಡಿನ ಬಾಗಿಲು ಹಾಕಿ, ಬೀಸುವ ಕಲ್ಲಿನ ಮೇಲೆ ಇಟ್ಟಿದ್ದ ಬೀಗ ಮೆಟ್ಟಿಕೊಂಡು ಹೊರಟರು. ಅವರ ಶೆಡ್ಡಿಗೆ ಹೋದಮೇಲೆ ಸೂತಕದ ರತ್ನನಿಗೆ ಒಂದು ಮುತ್ತುಗದೆಲೆ ಹಾಕಿ ಮೇಷ್ಟರ ಹೆಂಡತಿ ಊಟಕ್ಕೆ ಇಕ್ಕಿದರು. ಸೂರ್ಯನಾರಾಯಣ ಒಂದು ಲೋಟ ಕಾಫಿಯನ್ನೂ ಮುಟ್ಟಲಿಲ್ಲ. ರತ್ನನ ಊಟವಾದಮೇಲೆ ಅವನೇ ಎಲೆ ತೆಗೆದು ಎಸೆದು ಗೋಮಯ ಹಾಕಿ–'ನಡೀರಿ, ದೇವಸ್ಥಾನಕ್ಕೆ ಹೋಗಿ ಮಗೂನ ನೋಡಿಕೊಂಡು ಬರಾಣ' ಎಂದ. ಇಬ್ಬರೂ ಕೆರೆಯ ಏರಿಯ ಕಡೆಗೆ ಹೊರಟರು. ಸೂರ್ಯನಾರಾಯಣ ರತ್ನನನ್ನು ಎತ್ತಿಕೊಂಡ.
ಇವರು ದೇವಸ್ಥಾನಕ್ಕೆ ಹೋಗುವ ಹೊತ್ತಿಗೆ ನಂಜಮ್ಮ ಶೆಡ್ಡಿಗೆ ಹಿಂತಿರುಗಿದ್ದಳು. ಮೇಷ್ಟರು ಮನೆಗೆ ಒಬ್ಬ ಹುಡುಗನನ್ನು ಕಳಿಸಿ ಬೀಗದ ಕೈ ತರಿಸಿಕೊಂಡಳು. ಅಲ್ಲಿಯ ತನಕ ಚೆನ್ನಿಗರಾಯರ ಊಟ ಮೇಷ್ಟರ ಮನೆಯಲ್ಲೇ ಆಗುತ್ತಿತ್ತು. ಅವರ ಹೆಂಡತಿ ಶೆಡ್ಡಿಗೆ ತಂದು ಇಡುತ್ತಿದ್ದ ಅನ್ನವನ್ನು ನಂಜಮ್ಮ ಒಂದು ತುತ್ತು ತಿಂದರೆ ತಿನ್ನುತ್ತಿದ್ದಳು; ಇಲ್ಲದಿದ್ದರೆ ನಾಯಿಗೆ ಹಾಕಿಬಿಡುತ್ತಿದ್ದಳು. ಈಗ ಬಾಗಿಲು ತೆಗೆದು ಒಳಗೆ ಬಂದರೆ ಸೂರ್ಯನಾರಾಯಣ ತಂದು ಒಟ್ಟಿಗೆ ಇಟ್ಟಿದ್ದ ಹಣ್ಣು ಹೂವು ತಿಂಡಿಗಳು ಅಲ್ಲೇ ಇದ್ದುವು. ಅವುಗಳನ್ನು ನೋಡಲಾರದೆ ಅವಳು ಮುಖವನ್ನು ಬೇರೆ ಕಡೆಗೆ ತಿರುಗಿಸಿಕೊಂಡು ಒಳಗೆ ಹೋದಳು. ಶ್ಯಾನುಭೋಗಿಕೆಯ ಲೆಕ್ಕದ ಪುಸ್ತಕಗಳನ್ನಿಡುವ ದೊಡ್ಡ ಪೆಟ್ಟಿಗೆಯಲ್ಲಿ ಪಾರ್ವತಿಯ ಮದುವೆಯ ಸೀರೆಗಳು, ಸೂರ್ಯನಾರಾಯಣನೇ ಇಟ್ಟಿದ್ದ ಬೆಂಡೋಲೆ, ಬೇಸರಿ, ಬೆಳ್ಳಿಯ ಬಳೆಗಳಿದ್ದುವು. ಎಲ್ಲವನ್ನೂ ಹೊರಕ್ಕೆ ತೆಗೆದು ಒಂದು ಬಿಳಿಯ ಚೌಕದಲ್ಲಿ ಕಟ್ಟಿ ಇಟ್ಟಳು.
ಒಂದು ಗಂಟೆಯ ಹೊತ್ತಿಗೆ ಅವರು ದೇವಸ್ಥಾನದಿಂದ ಹಿಂತಿರುಗಿ ಬಂದರು. ಸೂರ್ಯನಾರಾಯಣ ಸುಮ್ಮನೆ ನಿಂತಿದ್ದ. ಮೇಷ್ಟರೇ–'ಅವರು ಹೊರಡ್ತಾರಂತೆ. ನಾಳೆ ಎಲ್ಲ ಏರ್ಪಾಡೂ ಮಾಡ್ಕಂಡು ನಾಡಿದ್ದು ಒಂಬತ್ತನೇ ದಿನದಿಂದಲಾದ್ರೂ ಕರ್ಮ ಶುರುಮಾಡ್‌ಬೇಕು' ಎಂದರು. ನಂಜಮ್ಮ ಅದಕ್ಕೆ ಏನೂ ಹೇಳಲಿಲ್ಲ. ತಾನು ಕಟ್ಟಿಟ್ಟಿದ್ದ ಗಂಟನ್ನು ತಂದು ಮುಂದೆ ಇಟ್ಟು–'ಇದು ಅವಳ ಸೀರೆ ಒಡವೆ, ನಿಮಗೆ ಸೇರಿದ್ದು. ಚೀಲಕ್ಕೆ ಹಾಕ್ಕಳಿ' ಎಂದಳು.
ಅವನಿಗೆ ಇದನ್ನು ಕಂಡು ಕಣ್ಣಿನಲ್ಲಿ ನೀರು ತುಂಬಿಕೊಂಡಿತು. 'ಅಮ್ಮ, ನನ್ನ ಮುಖ್ಯ ಪದಾರ್ಥವೇ ಹೋದಮೇಲೆ ಇದನ್ನ ತಗಂಡು ಹೋಗಿ ಏನು ಮಾಡ್ಲಿ? ನಂಗೆ ಬ್ಯಾಡ'–ಎಂದ.
'ಧಾರೆ ಎರೆದ ತಕ್ಷಣ ಅವ್ಳು ನಿಮ್ಮ ವಸ್ತುವಾಗಿಹೋದ್ಲು. ಅವ್ಳ ಸೀರೆ ಒಡವೆ ನಮ್ಮನ್ಲಿ ಇಟ್ಕಂಡು ಏನು

ಮಾಡ್ಲಿ? ಅದು ಕಣ್ಣಿಗೆ ಬೀಳ್ತಿದ್ರೆ ನಂಗೂ ತಡೆಯುಕ್ಕಾಗುಲ್ಲ.'
ಮೇಷ್ಟರೂ ಹೇಳಿದಮೇಲೆ ಅವನು ಅದನ್ನು ತೆಗೆದು ತನ್ನ ಕೈಚೀಲಕ್ಕೆ ಹಾಕಿಕೊಂಡ. ತಾನು ನಿಂತಲ್ಲಿಯೇ ಬಾಗಿ ನೆಲಮುಟ್ಟಿ ಅತ್ತೆಮ್ಮನಿಗೆ ನಮಸ್ಕರಿಸಿ ಮಗುವನ್ನೂ ಮಕಾಡೆ ಮಲಗಿಸಿ ಅಡ್ಡ ಬೀಳಿಸಿ ಒಂದು ಕೈಲಿ ಚೀಲ, ಇನ್ನೊಂದು ಕೈಲಿ ಮಗುವಿನ ಕೈಹಿಡಿದುಕೊಂಡು ನಿಧಾನವಾಗಿ ಹೆಜ್ಜೆ ಹಾಕುತ್ತಾ ಹೊರಟುಹೋದ. ಮೋಟಾರು ರಸ್ತೆಯ ತನಕ ಮೇಷ್ಟರೂ ಹೋದರು.
ಈಗ ರಸ್ತೆಯಲ್ಲಿ ಒಟ್ಟು ಮೂರು ಮೋಟಾರುಗಳು ತಿರುಗುತ್ತಿವೆ. ಮೊದಲಿಯಾರಿ ಬಸ್ಸಿನ ಜೊತೆಗೆ ಸಿ.ಪಿ.ಸಿ. ಕಂಪನಿಯವು ಎರಡು ನಡೆಯುತ್ತಿವೆ. ರಸ್ತೆಗೆ ಹೋದ ಹತ್ತು ನಿಮಿಷಕ್ಕೇ ಅವರಿಗೆ ತಿಪಟೂರಿನ ಕಡೆಯ ಬಸ್ಸು ಸಿಕ್ಕಿತು. ಬಸ್ಸು ಹತ್ತಿಸಿ ಹಿಂತಿರುಗಿ ಬರುವ ಹೊತ್ತಿಗೆ ನಂಜಮ್ಮ ಮೇಷ್ಟರ ಶೆಡ್ಡಿನಲ್ಲಿದ್ದಳು. ಮೇಷ್ಟರು ಅವಳ ಕೈಲಿ ಎಂದರು: 'ಪಾರ್ವತಮ್ಮನ ಕೆಲಸ ಅವ್ರು ನಾಡಿದ್ದಿನಿಂದ ಮಾಡಿ ಚುಟುಕದಲ್ಲಿ ಮುಗುಸ್ತಾರಂತೆ. ರಾಮಣ್ಣ ಮುಂಜಿಯಾಗಿದ್ದ ಹುಡುಗ. ಎಂಥಾದದ್ರೂ ಶಾಸ್ತ್ರ ಅಂತ ಮಾಡಲೇಬೇಕು. ಈ ಜೋಯಿಸರ ಕೈಗೆ ಸಿಕ್ಕಿಹಾಕ್ಕಂಡ್ರೆ ಬೋಳಿಸಿಬಿಡ್ತಾರೆ. ಮನುಷ್ಯನ ಕಷ್ಟ ಸುಖ ಏನೂ ನೋಡುಲ್ಲ. ಎಲ್ಲಾ ಯಜಮಾನಿಕೇನೂ ನನಗೆ ಬಿಟ್ಟುಬಿಡಿ. ಒಂದು ಇಪ್ಪತ್ತೈದು ರೂಪಾಯೀಲಿ ಎಲ್ಲಾನೂ ಮುಗುಸ್ತೀನಿ. ಇಲ್ಲಿ ನಾವು ಏನು ಮಾಡಿದ್ರೂ ಅಲ್ಲಿ ಸತ್ತ ಜೀವಕ್ಕೆ ಏನೂ ಆಗುಲ್ಲ. ಬರೀ ನಮ್ಮ ಕರ್ಮ ಕಳ್ಕಳುಕ್ಕೆ ಅಂತ ನಾವು ಮಾಡೂದು.'
'ಈಗ ದುಡ್ಡಿಗೇ ತೊಂದರೆಯಾಗಿದೆ. ನೀವೇ ಒಂದು ಹೆಜ್ಜೆ ಕುರುಬರ ಹಳ್ಳಿಗೆ ಹೋಗಿ ಬನ್ನಿ. ಗುಂಡೇಗೌಡ್ರು ಇಂಥ ಸಮಯ ಅಂದ್ರೆ ಇಲ್ಲ ಅನ್ನಲ್ಲ. ಮುಂದಿನ ವರ್ಷ ಕಂದಾಯಕ್ಕೆ ಹಾಕ್ಕಂಡ್ರೆ ಆಗುತ್ತೆ.'
ಮೇಷ್ಟರು ಆಗಲೇ ಕುರುಬರಹಳ್ಳಿಗೆ ಹೊರಟರು. ನಂಜಮ್ಮ ತನ್ನ ಶೆಡ್ಡಿಗೆ ಬಂದಳು.

– 7 –

ಅದೇ ದಿನ ಸಂಜೆಯ ಹೊತ್ತಿಗೆ ಗಾಡಿಯಲ್ಲಿ ಕುಳಿತು ಅಕ್ಕಮ್ಮ, ಕಲ್ಲೇಶ, ಇಬ್ಬರೂ ಬಂದರು. ಅಕ್ಕಮ್ಮ ಒಂದೇಸಮನೆ ಅಳುತ್ತಿದ್ದಳೆಂಬುದು ಗಾಡಿಯಿಂದ ಇಳಿಯುವಾಗಲೇ ಕಾಣುತ್ತಿತ್ತು. ಕಲ್ಲೇಶನ ಮುಖವೂ ಮ್ಲಾನವಾಗಿತ್ತು. ಶೆಡ್ಡಿನ ಒಳಗೆ ಬಂದ ಅಕ್ಕಮ್ಮ ಅಳುತ್ತಲೇ ಎಂದಳು: 'ನಂಜಾ, ನಾವೆಲ್ಲಾ ಸತ್ತುಹೋಗಿದ್ದೆವೆ? ಇವತ್ತಿಗೆ ಏಳು ದಿನ ಆಯ್ತಂತಲ. ನಮಗೆ ಹೇಳಿಕಳುಸ್ಲೇಬ್ಯಾಡ್‌ವೇನೆ?'
ಈ ಸಮಯದಲ್ಲಿ ತನ್ನ ತೌರಿನ ಬಂಧುಗಳನ್ನು ಕಂಡ ನಂಜಮ್ಮನಿಗೂ ಅಳು ಬಂತು. ಆದರೆ ಸಮಾಧಾನ ಮಾಡಿಕೊಂಡು ಹೇಳಿದಳು: 'ಯಾವ ಸಂತೋಷದ ಸಮಾಚಾರ ಅಂತ ಹೇಳಿಕಳುಸ್ಲಿ ಹೇಳು.'
'ಕಷ್ಟ ಸುಖ ಅಂದ್ರೆ ನಾವು ಆಗ್‌ಲೇಬ್ಯಾಡವೆ? ನಾವೇನು ದೂರವಾಗಿಬಿಟ್ಟೆವೆ? ಏಳು, ಒಂದೆರಡು ತಿಂಗಳು ಊರಲ್ಲಿ ಇದ್ದು ಬರುವಂತೆ. ಇದೆಲ್ಲ ಸ್ವಲ್ಪ ಮರೆಯುತ್ತೆ'–ಕಲ್ಲೇಶ ಎಂದ.
ನಂಜಮ್ಮ ತಕ್ಷಣ ತೌರಿಗೆ ಹೋಗುವ ಸಾಧ್ಯತೆಯಂತೂ ಇಲ್ಲ. ವಿಶ್ವ ಇನ್ನೂ ಸುಧಾರಿಸಿಕೊಳ್ಳುತ್ತಿದ್ದಾನೆ. ನಾಡಿದ್ದಿನಿಂದ ಚುಟಕದಲ್ಲಾದರೂ ರಾಮಣ್ಣನ ಕರ್ಮವಾಗಬೇಕು. ಅಲ್ಲದೆ ತೌರಿಗೆ ಹೋಗಲು ಅದೇನೋ ಅವಳಿಗೇ ಇಷ್ಟವಿಲ್ಲ. ಅವಳು ಅಲ್ಲಿಗೆ ಹೋಗಿ ವರ್ಷಗಳೇ ಆಗಿಹೋಗಿವೆ. ಆದರೆ ಕಲ್ಲೇಶ ಬಲವಂತ ಮಾಡಿದ. ಅವನು, ಅಕ್ಕಮ್ಮ, ಇಬ್ಬರೂ ದೇವಸ್ಥಾನಕ್ಕೆ ಹೋಗಿ ವಿಶ್ವನನ್ನು ನೋಡಿಕೊಂಡು ಬಂದರು. ಅಕ್ಕಮ್ಮ, ಉಳಿದುಕೊಂಡ ಆ ಒಬ್ಬ ಮರಿಮಗನನ್ನು ತಬ್ಬಿ ಕಣ್ಣೀರು ಹಾಕಿದಳು.
ಹನ್ನೊಂದನೆಯ ದಿನ ಸೂತಕ ಕಳೆಯುವ ತನಕ ಇಬ್ಬರೂ ಅಲ್ಲಿಯೇ ಉಳಿದರು. ಅಕ್ಕಮ್ಮ ಕಲ್ಲೇಶರಿಗೆ ಮೂರನೆಯ ದಿನ ಸೂತಕ ಹೋಗಿದ್ದುದರಿಂದ ಅಕ್ಕಮ್ಮ ಈ ಶೆಡ್ಡಿನಲ್ಲೇ ಅಡಿಗೆ ಶುರುಮಾಡಿದಳು. ಕಲ್ಲೇಶ ರೇವಣ್ಣಶೆಟ್ಟಿಯ ಶೆಡ್ಡು ಹುಡುಕಿಕೊಂಡು ಹೋದ.
ಅಕ್ಕಮ್ಮ ನಂಜುವಿಗೆ ಹೇಳಿದಳು: 'ನೋಡು, ಕಂಟಿ ಈಗಲೂ ಊರಲ್ಲಿರುಲ್ಲ. ಮೊದ್‌ಲಿತ್ತಲ್ಲ ಆ ಕುದುರೆ, ಅವನು ಕಾಶಿಗೆ ಹೋದ ನಾಲ್ಕು ವರ್ಷಕ್ಕೆ ಸತ್ತುಹೋಯ್ತು. ಈಗ ಇನ್ನೊಂದು ಕುದುರೆ ತಗಂಡಿದಾನೆ. ಎಲ್ಲೆಲ್ಲೋ ತಿರುಗ್ತಿರ್ತಾನೆ. ಕಾಶಿಯಿಂದ ಬಂದ ಮೇಲೆ ಎಂಥೆಂಥೆದೋ ಇನ್ನೂ ಹೊಸ ಮಂತ್ರ ತಂತ್ರ ಕಲ್ತುಕಂಡಿದಾನಂತೆ. ಮಾಟ ಮದ್ದು ಅಂತ ಚನ್ನರಾಯಪಟ್ಣ, ಶಾಂತಿಗ್ರಾಮ, ಹಾಸನ, ಅರಕಲುಗೂಡು ಆ ಕಡೆಯೋರೆಲ್ಲ ಕರ್ಕಂಡು ಹೋಗ್ತಾರೆ. ಅವ್ನು ಊರು ಬಿಟ್ಟು ಇಪ್ಪತ್ತು ದಿನವಾಯ್ತು.'
ಆಮೇಲೆ ಹೇಳಿದಳು: ''ಕುರುಬರಹಳ್ಳೀ ನಿಂಗೇಗೌಡ ಅನ್ನೋನ ಮಗಳ್ನ ನಮ್ಮೂರ ಕೋಳಿ ಚಿಕ್ಕಣ್ಣನ ತಮ್ಮಂಗೆ ಕೊಟ್ಟಿಲ್ವೆ? ನಿಂಗೇಗೌಡ ನೆನ್ನೆ ದಿನ ನಮ್ಮೂರಿಗೆ ಬಂದಿದ್ನಂತೆ. ಇವತ್ತು ಬೆಳಿಗ್ಗೆ ಚಿಕ್ಕಣ್ಣನೇ ಬಂದು–'ನಿಮ್ಮ ಮಮ್ಮಗಳ ಎಲ್ಡು ಮಕ್ಳೂ ತೀರ್ಕಂಡ್ವಂತೆ. ಯಲ್ಲಾ ಊರು ಬಿಟ್ಟವ್ರಂತೆ. ನೀವು ಹ್ವಾಗಾಕಿಲ್ವಾ?' ಅಂತ ಕೇಳ್ದ. ನಂಗೆ ಇದೇನು ಸುಳ್ಳೋ ನಿಜವೋ ಅನ್ನುಸ್ತು. ನಮ್ಮ ಬೀಗ್ರೇ ಅಂದ್ರು ಕಣವ್ವ ಅಂದ. ಕಲ್ಲೇಶ ಆಗಲೇ ಹೊನ್ನನಿಗೆ ಹೇಳಿ ಗಾಡಿ ಕಟ್ಟುಸ್ದ. ಹ್ವರಟೇಬಿಟ್ವು.''
'ಅಣ್ಣಯ್ಯಂಗೆ ಇನ್ನೆಲ್ಲೂ ಹೆಣ್ಣು ಹುಡುಕ್‌ಲಿಲ್ವೆ?'
''ಕಂಟಿ ಒಂದು ಕಡೆ ಗೊತ್ತುಮಾಡಿದ್ದ. ಆನೆಕೆರೆ ಹತ್ರದ ಆಲನಹಳ್ಳೀದು. ಈ ಉಮ್ಮೆಮರಳಿಗೆ ಗೊತ್ತಾಗಿ ಅವ್ಳು ಒಳಗೇ ಕದ್ದು ಅಪ್ಪಂಗೆ ಕಾಗದ ಬರದಿದ್ಲು ಅಂತ ಕಾಣುತ್ತೆ. ಅವಳ ಅಪ್ಪ ಬಂದು ಕಲ್ಲೇಶನ ಕೈ

ಹಿಡ್ಕಂಡು ಕಣ್ಣೀರು ಹಾಕ್ತಾ, 'ನಿನ್ನ ಕಷ್ಟಕಾಲದಲ್ಲಿ ಮಗ ಅಂತ ತಿಳ್ಕಂಡು ನಾನು ಸೇವೆಮಾಡಿದೀನಿ. ದೇವ್ರು ಕೊಡ್ಲಿಲ್ಲ, ಮಕ್ಳಾಗ್ಲಿಲ್ಲ. ಇನ್ನೊಂದು ಮದ್ವೆ ಮಾಡ್ಕಬ್ಯಾಡ' ಅಂದ. ಅಲ್ಲೀತಂಕ ಮಾಡ್ಕತೀನಿ ಅಂತಿದ್ದ ಇವ್ನು ಮನಸ್ಸು ಬದಲಾಯಿಸಿಬಿಟ್ಟ. ನಂಗೆ ಮದ್ವೆ ಬ್ಯಾಡ ಅಂದ್ಬಿಟ್ಟ. ನಾನು, ಕಂಟಿ, ಎಷ್ಟು ಹೇಳಿದ್ರೂ ಕೇಳ್ಲಿಲ್ಲ."

ಮೇಷ್ಟರ ನಿರ್ದೇಶನದಲ್ಲಿ ರಾಮಣ್ಣನ ಕರ್ಮ ಇಪ್ಪತ್ತೈದು ರೂಪಾಯಿಯಲ್ಲೇ ಮುಗಿಯಿತು. ಸೂತಕ ಕಳೆದಮೇಲೆ ನಂಜಮ್ಮ ವಿಶ್ವನನ್ನು ಎತ್ತಿಕೊಂಡು ಬಂದಳು. ಅವನು ಈಗ ಎದ್ದು ನಿಧಾನವಾಗಿ ಹೆಜ್ಜೆ ಇಡುವಂತೆ ಆಗಿದ್ದ. ಮೈ ಕೈ ತುಂಬಿಕೊಂಡು ಬಸವನಂತೆ ಬೆಳೆದಿದ್ದ ಹುಡುಗ ಈಗ ಬಡಕಲು ಕರುವಿನಂತೆ ಇಳಿದುಹೋಗಿದ್ದ. ಇವರು ಬಂದ ಬೆಳಿಗ್ಗೆಯೇ ಊರಿನಿಂದ ತಂದಿದ್ದ ಗಾಡಿಯನ್ನು ವಾಪಸು ಕಳಿಸಿಬಿಟ್ಟರು. ಈಗ ಕಲ್ಲೇಶ ಮತ್ತೆ ಕೇಳಿದ: 'ನಂಜಾ, ಒಂದು ಕಮಾನು ಗಾಡಿ ಬಾಡಿಗೆಗೆ ಮಾಡ್ತೀನಿ. ನಡಿ ಊರಿಗೆ ಹೋಗಾಣ.'

ಹೋಗಬಾರದೆಂದು ಅವಳ ಮನಸ್ಸು. ಆದರೆ ಒರಟುತನ ಮಾಡಬಾರದು. ಅತ್ತಿಗೆ ಕೆಟ್ಟವಳಾಗಿರಬಹುದು. ಅಣ್ಣ ತನಗೇನು ಕೆಟ್ಟದ್ದು ಮಾಡಿಲ್ಲ. ಹೆಣ್ಣು ಕೊಡಿ ಅಂತ ಕೇಳಿದರು. ನಾನು ಇಲ್ಲ ಅಂದೆ. ಸಿಟ್ಟುಮಾಡಿಕೊಂಡು ಮದುವೆಗೆ ಬರಲಿಲ್ಲ. ಈಗ ಅವರೇ ಬಂದು ಕರೀತಿದಾರೆ. ಯಾಕೆ ಹೋಗಬಾರದು? ಆದರೆ ಅದು ಕಂದಾಯದ ವಸೂಲಿಯ ಕಾಲ. ಇಷ್ಟು ದಿನವೂ ಆ ಕಡೆ ಗಮನವೇ ಕೊಟ್ಟಿಲ್ಲ. ತಾನು ತೌರಿಗೆ ಹೋದರೆ ಗಂಡ ಒಬ್ಬರೇ ಇಲ್ಲಿ ಇರುವುದೂ ಇಲ್ಲ; ಸರ್ಕಾರದ ಕೆಲಸ ಮಾಡುವುದೂ ಇಲ್ಲ. ಅವಳು ಹೇಳಿದಳು: 'ಅಕ್ಕಮ್ಮ, ಇಲ್ಲಿ ಇರ್ಲಿ. ಈ ಕಿಸ್ತಿನ ವಸುಲಿ ಇರ್ಸಾಲು ಆದಮೇಲೆ ನಾನು ಅಕ್ಕಮ್ಮನ ಜೊತೆ ಬತ್ತೀನಿ. ಆಮೇಲೆ ಹತ್ತು ಹದಿನೈದು ದಿನ ಇದ್ದು ಮುಂದಿನ ಕಿಸ್ತಿನ ವಸೂಲಿ ಶುರುವಾಗೂ ಹೊತ್ತಿಗೆ ವಾಪಸು ಬಂದುಬಿಡಬೇಕು.'

ಕಲ್ಲೇಶ ಒಬ್ಬನೇ ನಡಿಗೆಯಲ್ಲಿ ಊರಿಗೆ ಹಿಂತಿರುಗಿದ.

## ಅಧ್ಯಾಯ 14

### – 1 –

ಆ ಬಾರಿ ಗಂಡಸಿ, ದುದ್ದದ ಕಡೆ ಹಳ್ಳಿಗಳಿಗೆ ಹೋದ ಗಂಗಮ್ಮ ಅಪ್ಪಣ್ಣಯ್ಯರು ಒಂದೂವರೆ ತಿಂಗಳ ನಂತರ ಊರಿಗೆ ಹಿಂತಿರುಗಿದರು. ಆದರೆ ಎಲ್ಲರೂ ಊರು ಬಿಟ್ಟಿದ್ದಾರೆಂಬ ಸಮಾಚಾರ ಇನ್ನೂ ಊರಿಗೆ ಹತ್ತು ಮೈಲಿ ದೂರದಲ್ಲಿರುವಾಗಲೇ ತಿಳಿಯಿತು. ಊರಿಗೆ ಬಂದರೆ ಗಳು, ಸೋಗೆ ಹೊಂದಿಸಿ ಶೆಡ್ಡು ಹಾಕಬೇಕು. ಪಾತ್ರೆ ಪರಟಿಗಳೆಲ್ಲ, ಬಿಟ್ಟ ಊರಿನ ಗುಡಿಯ ಕೋಣೆಯಲ್ಲಿವೆ. ಬಾಗಿಲು ತೆಗೆದು ಅವನ್ನು ತರಬಹುದೋ ಬಾರದೋ ಎಂಬ ಅನುಮಾನ ಬೇರೆ. ಈ ತೊಂದರೆಯೇ ಬೇಡವೆಂದ ಅವರು ಪುನಃ ಪಶ್ಚಿಮಾಭಿಮುಖವಾಗಿ ಹೊರಟುಬಿಟ್ಟರು. ಈ ಹಿಂದೆ ತಾಗಲಾಡದ ಸುತ್ತುಗಳನ್ನೆಲ್ಲ ತಿರುಗಿ ಹಬ್ಬನಘಟ್ಟ, ಹಾರನಹಳ್ಳಿಗಳ ಸೀಮೆಯನ್ನೆಲ್ಲ ಸುತ್ತಿ ನಿಧಾನವಾಗಿ ಊರು ಮುಟ್ಟುವ ಹೊತ್ತಿಗೆ ಮೂರು ತಿಂಗಳು ಕಳೆದಿತ್ತು. ಎರಡು ಹದ ಮಳೆಯಾಗಿ ಎಲ್ಲರೂ ಶೆಡ್ಡು ಬಿಟ್ಟು ಊರಿಗೆ ಹಿಂತಿರುಗಿದ್ದರು.

ಇಬ್ಬರು ಮೊಮ್ಮಕ್ಕಳೂ ಒಂದೇ ದಿನ ಸತ್ತದ್ದನ್ನು ಕೇಳಿದ ಗಂಗಮ್ಮನಿಗೆ ಸೊಸೆಯನ್ನು ಬೈಯಬೇಕೆನ್ನಿಸುವಷ್ಟು ಕೋಪ ಬಂತು. ಆದರೆ ಅವಳ ಎದುರು ನಿಂತು ಬಾಯಿ ತೆರೆಯಲು ಒಂದು ವಿಧವಾದ ಭಯ. ಸೊಸೆಯ ಮನೆಗೆ ಹೋದಾಗ ಅವಳಿಗೇ ತಿಳಿಯದಂತೆ ಅಳು ಬಂದುಬಿಟ್ಟಿತು. 'ಆ ಹೆಂಡರು ಸತ್ತೋನಿಗೆ ಹೆಣ್ಣು ಕೊಟ್ರೆ ಅದು ಉಳಿಯುತ್ತಾ? ಆಗ ನನ್ನಾದ್ರೂ ಹೇಳಿ ಕೇಳಿ ನೀನು ಮದುವೆ ಗೊತ್ತು ಮಾಡ್ದ್ಯಾ?'–ಎಂದು ತನ್ನ ದುಃಖವನ್ನು ಪ್ರಕಟಿಸಿದಳು. ಇಬ್ಬರು ಮಕ್ಕಳೂ ಬದುಕಿದ್ದಾಗ ಅವಳಿಗೂ ಅವರಿಗೂ ಹೆಚ್ಚು ಸಂಪರ್ಕ ಇರಲಿಲ್ಲ. ಅವಳು ಆಗಾಗ್ಗೆ ಊರು ಬಿಟ್ಟು ಹೋಗುತ್ತಿದ್ದಳು. ಊರಿನಲ್ಲಿದ್ದಾಗ ಇವರ ಮನೆಗೆ ಬರುತ್ತಿರಲಿಲ್ಲ. ಮಕ್ಕಳು ಅವಳ ಮನೆಗೆ ಹೋಗುತ್ತಿರಲಿಲ್ಲ. ಒಂದೊಂದು ದಿನ ಸೊಪ್ಪಿನ ಮಡಿಯ ಹತ್ತಿರವೋ ಕೆರೆಯ ಹತ್ತಿರವೋ ಪಾರ್ವತಿ ಸಿಕ್ಕಿದರೆ, 'ನಿಮ್ಮಮ್ಮ ವಸೂಲಿಗೆ ಹೋಗಿದ್ಲಂತಲಾ ಕುರುಬರಹಳ್ಳಿಗೆ, ಮಸೀಕಾಣಿಕೆ ಎಷ್ಟು ಸಿಕ್ತಂತೆ?' ಎಂದು ಕೇಳುತ್ತಿದ್ದಳು. 'ನಂಗೇನು ಗೊತ್ತಜ್ಜಿ?' ಎಂದು ಅವಳು ಉತ್ತರ ಕೊಡುವುದರಲ್ಲಿ ಅಜ್ಜಿ ಮೊಮ್ಮಗಳ ಪ್ರೀತಿ ಮುಗಿಯುತ್ತಿತ್ತು. 'ನೀನು ಇಂಗ್ಲೀಷ್ ಓದಿ ಶೇಕ್‌ದಾರಿಕೆ ಮಾಡ್ತೀಯಂತೆ. ನಂಗೊಂದು ಕೆಂಪಿನ ಪಟ್ಟೆಸೀರೆ ತಂದ್‌ಕೊಡ್ತೀ ಏನೋ?' ಎಂದರೆ, 'ಆಗ್ಲಿ ಕಣಜ್ಜಿ' ಎಂದು ರಾಮಣ್ಣ ಹೇಳುವುದರಲ್ಲಿ ಸಂಭಾಷಣೆ ಕೊನೆಯಾಗುತ್ತಿತ್ತು. ಆದರೆ ಈಗ ಅವಲಿಗೆ ಅದೇಕೋ ಅವರಿಬ್ಬರ ನೆನಪು ಕಾದಲು ಶುರುವಾಯಿತು. ಮೂರು ನಾಲ್ಕು ದಿನ ಮೊಮ್ಮಕ್ಕಳನ್ನು ನೆನೆಸಿಕೊಂಡು ಸೊಸೆಯನ್ನು ಬೈಯುವ ಮೂಲಕ ತನ್ನ ದುಃಖವನ್ನು ವ್ಯಕ್ತಪಡಿಸುತ್ತಾ ಅವಳೂ ಗುಡಿಗೆ ಬಂದವರ ಹತ್ತಿರ ಪೇಚಾಡಿಕೊಂಡಳು. ಹೆಚ್ಚು ದುಃಖಪಟ್ಟವನು ಅಪ್ಪಣ್ಣಯ್ಯ. ಪಾರ್ವತಿಯ ಮದುವೆಯಲ್ಲಿ ಅವನು ಮೈ ಮುರಿದು ದುಡಿದಿದ್ದ. ಆದರಿಂದಲೋ ಏನೋ, ಅವನಿಗೆ ಅವಳ ಮೇಲೆ ತುಂಬ ಪ್ರೀತಿ ಹುಟ್ಟಿತ್ತು. ರಾಮಣ್ಣ ಅವನ ಕ್ಲಾಸಿಗೇ ಮೊದಲನೆಯವನಾಗಿ ಓದುತ್ತಾನೆಂದು ಕೇಳಿದುದರಿಂದ ಅವನ ಮೇಲೆ ಅಭಿಮಾನ ಹುಟ್ಟಿತ್ತು.

ಶೇಕ್‌ದಾರರಿಗೇ ಲೆಕ್ಕ ಬರೆದುಕೊಟ್ಟಿದ್ದ ಹುಡುಗ ಅವನು. ಇಂಗ್ಲಿಷ್ ಕಲಿತು ಮುಂದೆ ಶೇಕ್‌ದಾರಿ ಮಾಡಬಹುದು. ಹೆಚ್ಚಾಗಿ ಅವನೊಡನೆ ಮಾತನಾಡಿರದಿದ್ದರೂ, ಅವು ತನ್ನವೇ ಮಕ್ಕಳು ಎಂಬ ಭಾವ ಅವನಲ್ಲಿ ಅದು ಹೇಗೋ ಬೆಳೆದಿತ್ತು. ಈಗ ಅಪ್ಪಣ್ಣಯ್ಯ ಹೋಗಿ ಅತ್ತಿಗೆಯ ಮುಂದೆ ನಿಂತು ಕಣ್ಣೀರು ಹಾಕಿ–'ನಾವು ಪಾಪಿ ಮುಂಡೇಮಕ್ಳು. ಉಳಿಸ್ಕಳೂದು ಹಣೇಲಿ ಬರೀಲಿಲ್ಲ' ಎಂದ.

ಆ ಬಾರಿ ಮಳೆ ಬೆಳೆ ಚೆನ್ನಾಗಿ ಆಗಿತ್ತು. ಪಹಣಿ ಲೆಕ್ಕ ಬರೆದು ಮುಗಿದಿತ್ತು. ಒಂದು ದಿನ ಮೇಷ್ಟರ ಹೆಂಡತಿ ಬಂದು ನಂಜಮ್ಮನಿಗೆ ಹೇಳಿದರು: 'ನೋಡಿ, ಶೃಂಗೇರಿ ಶಾರದಮ್ನೋರ ದರ್ಶನಮಾಡಿ ಕುಂಕುಮಾರ್ಚನೆ ಮಾಡುಸ್ತೀನಿ ಅಂತ ನಾನು ನಿಮ್ಮ ವಿಶ್ವನ ಹೆಸರಿನಲ್ಲಿ ಹರಕೆಗಟ್ಟಿದ್ನಲ. ಅದು ನಮ್ಮನೆ ದೇವರಗೂಡಲ್ಲೇ ಇದೆ. ಇನ್ನು ಎಂಟು ದಿನಕ್ಕೆ ನವರಾತ್ರಿ ಬರುತ್ತಲಾ, ಆಗ ನೀವು ಮಗು ಕರ್ಕಂಡು ಹೋಗಿ ಬಂದುಬಿಡಿ. ನಾನು ಹರಕೆ ಕಟ್ಟಿದ ದಿನವೇ ಅವನಿಗೆ ಜ್ವರ ಇಳೀತು. ದೇವರ ಹರಕೆ ನಿಲ್ಲುಸ್ಬಾರ್ದು.'

ತಾವು ಶೃಂಗೇರಿಗೆ ಹೋಗಿಬರಬೇಕೆಂದು ನಂಜಮ್ಮ ನಿಶ್ಚಯಿಸಿದಳು. ಯಾವ ದೇವರ ಶಕ್ತಿ ಹೇಗಿರುತ್ತೆಯೋ! ಅದನ್ನು ಮರೆತು ಕೂತರೆ ನಾಳೆ ಏನಾದರೂ ಆಪತ್ತು ಬರಬಹುದು. ನನಗಿರೂದು ವಿಶ್ವ ಒಂದೇ ಬಳ್ಳಿ. ಹೋಗಲೇಬೇಕು. ಅಲ್ಲಿಗೆ ಹೋಗುವ ಮಾರ್ಗವನ್ನು ಮೇಷ್ಟರು ಹೇಳಿದರು. ತಿಪಟೂರಿನಿಂದ ರೈಲು ಹತ್ತಿ ತರೀಕೆರೆಯಲ್ಲಿ ಇಳಿಯಬೇಕು. ಮಧ್ಯೆ ಬೀರೂರಿನಲ್ಲಿ ಬೇರೆ ಗಾಡಿಗೆ ಬದಲಾಯಿಸಬೇಕು. ರಾತ್ರಿ ತರೀಕೆರೆ ಸ್ಟೇಷನ್ನಿನಲ್ಲಿ ಮಲಗಿದ್ದು, ಬೆಳಿಗ್ಗೆ ಹೊರಡುವ ಸಣ್ಣ ರೈಲಿನಲ್ಲಿ ನರಸಿಂಹರಾಜಪುರಕ್ಕೆ ಹೋಗಬೇಕು. ಅಲ್ಲಿಂದ ಶೃಂಗೇರಿಗೆ ಮೋಟಾರಿದೆ. ಕೊಪ್ಪದ ಮೇಲೆ ಹೋಗುತ್ತೆ. ತಿಪಟೂರಿನಿಂದ ತರೀಕೆರೆಗೆ ಒಬ್ಬರಿಗೆ ಹದಿನೈದಾಣೆ. ಅಲ್ಲಿಂದ ನರಸಿಂಹರಾಜಪುರಕ್ಕೆ ಆರೂ ಮುಕ್ಕಾಲಾಣೆ. ಮುಂದೆ ಮೋಟಾರಿಗೆ ಎರಡು ರೂಪಾಯಿ. ಶೃಂಗೇರಿಯಲ್ಲಿ ಯಾತ್ರಾರ್ಥಿಗಳಿಗೆ ಇಳಿದುಕೊಳ್ಳಲು ಛತ್ರವಿದೆ. ಮಠದಲ್ಲಿ ಎರಡು ಹೊತ್ತೂ ಭೋಜನ ಸೌಕರ್ಯವಿದೆ.

ವಿಶ್ವನ ಜೊತೆ ತಾನು ಹೊರಡುವುದಂತೂ ಸರಿಯೆ. ರೈಲು ಪ್ರಯಾಣಮಾಡಿ, ದೂರ ದೇಶ ತಿರುಗಿರುವ ಯಾರಾದರೂ ಒಬ್ಬರು ಜೊತೆಗೆ ಬೇಕು. ಈಗ ಅಷ್ಟೊಂದು ದುಡ್ಡು ಹೊಂದಿಸುವುದೂ ಕಷ್ಟ. ಕುಂಕುಮಾರ್ಚನೆಗೆ ಐವತ್ತು ರೂಪಾಯಿ ಕೊಡಬೇಕು. ಅಪ್ಪಣ್ಣಯ್ಯ ತಾನೇ ಬಂದು ಒಂದು ದಿನ ಗುಟ್ಟಿನಲ್ಲಿ ಹೇಳಿದ: 'ಯಾರಿಗೂ ಹೇಳ್‌ಬ್ಯಾಡಿ. ನನ್ನ ಹತ್ರ ಇಪ್ಪತ್ತು ರೂಪಾಯಿ ಇದೆ. ಕೊಟ್ಟಿರ್ತೀನಿ. ಆಮ್ಯಾಲೆ ನಾನು ಕೇಳಿದಾಗ ಕೊಡೂರಂತೆ. ಜೊತೆಗೆ ನಾನೂ ಬತ್ತೀನಿ.' ದೇಶಾವರಿ ಮಾಡುವಾಗ ಸಿಕ್ಕಿದ ರಾಗಿ ಕಾಳುಗಳನ್ನು ಅವರು ಅಲ್ಲಲ್ಲಿಯೇ ಮಾರಿಬಿಡುತ್ತಿದ್ದರು. ಕೆಲವು ಸಲ ಅಪ್ಪಣ್ಣಯ್ಯ ತಾಯಿಗೆ ಕಾಣದಂತೆ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಮಾರಿ ಎಲೆ ಹೊಗೆಸೊಪ್ಪಿನ ದುಡ್ಡು ಮಾಡಿಕೊಳ್ಳುತ್ತಿದ್ದ.

ಇಪ್ಪತ್ತು ರೂಪಾಯಿಯಲ್ಲಿ ಎಲ್ಲವೂ ಸಾಕಾಗುವುದಿಲ್ಲ. ಮಗಳ ಮದುವೆ, ನಂತರ ಆದ ಕೆಲಸಗಳು, ಹೀಗೆ ನಂಜಮ್ಮ ಇದ್ದಬದ್ದದ್ದನ್ನೆಲ್ಲ ಖರ್ಚುಮಾಡಿದ್ದಳು. ಕುರುಬರಹಳ್ಳಿಯವರನ್ನು ಎಷ್ಟೆಂದು ಕೇಳುವುದು? ಅಪ್ಪಣ್ಣಯ್ಯ ಹೇಳಿದ: 'ಇಲ್ಲಿಂದ ತಿಪಟೂರಿಗೆ ನಡ್ಕಂಡೇ ಹೋಗ್‌ಭೌದು. ನರಸಿಂಹರಾಜಪುರದ ತಂಕ ರೈಲು ಆಗುತ್ತೆ. ಮುಂದಕ್ಕೆ ಮೋಟಾರು ದಾರೀನ ಮತ್ತೆ ನಡೀಭೌದು. ಇಪ್ಪತ್ತು ರೂಪಾಯಿ ಸಾಕಾಗುತ್ತೆ.' ಅಷ್ಟು ದುಡ್ಡು ಸಾಕು. ನಂಜಮ್ಮ, ವಿಶ್ವ, ಅಪ್ಪಣ್ಣಯ್ಯ ಹೊರಡುವುದೆಂದು ತೀರ್ಮಾನಿಸಿದರು. ಆದರೆ ಚೆನ್ನಿಗರಾಯರು ಬಿಟ್ಟಾರೆಯೆ? ತಾವೂ ಬರುವುದಾಗಿ ಹಟ ಹಿಡಿದರು. ಮತ್ತೆ ದುಡ್ಡು ಹೊಂದಿಸುವುದೆಲ್ಲಿ? ಅಲ್ಲದೆ ಅವರು ಇವರ ಹಾಗೆ ನಡೆಯುತ್ತಾರೆಂಬ ಭರವಸೆ ಇಲ್ಲ. 'ನಾನೆಲ್ಲೋ ದುಡ್ಡು ತತ್ತೀನಿ ನಿಂಗ್ಯಾಕೆ?'–ಎಂದರು. 'ಯಾರ ಹತ್ರವೂ ಕಂದಾಯದ ರಶೀತಿ ಬರ್ದು ತರಕೂಡದು'–ಅವಳು ನಿರ್ಬಂಧ ಹಾಕಿದಳು. 'ಇಲ್ಲ'ವೆಂದು ಅವರು ಒಪ್ಪಿಕೊಂಡರು. ಅಂತೂ ಎಲ್ಲಿ ದುಡ್ಡು ಹೊಂದಿಸಿಕೊಂಡರೋ ಏನೋ, ಅವರ ಖರ್ಚೇ ಬೇರೆ. ಇವರು ಮೂವರ ಖರ್ಚೇ ಬೇರೆ. ನಂಜಮ್ಮ ಐದು ಸೇರು ಹುರಿಟ್ಟು ಬೀಸಿದಳು. ತಾವು ದೇಶಾವರಿ ಮಾಡಿ ತಂದಿದ್ದ ಪೈಕಿ ಅಪ್ಪಣ್ಣಯ್ಯ ಎಂಟು ಸೇರು ಭತ್ತವನ್ನು ಅಮ್ಮನಿಗೆ ಕಾಣದಂತೆ ತಂದುಕೊಟ್ಟ. ಅವಲಕ್ಕಿ ಹಾಕಿಸಿ ನಂಜಮ್ಮ ಅದನ್ನೂ ಕಟ್ಟಿಕೊಂಡಳು. ಯಾತ್ರೆಗೆ ಹೊರಡಲು ಗಂಗಮ್ಮನಿಗೂ ಆಶೆ. ಆದರೆ ಈ ಸೊಸೆಯ ಜೊತೆ ಹೋಗುವುದು ಬೇಡ. ಮಗನನ್ನೂ ಹೋಗಬೇಡವೆಂದಳು. ಆದರೆ ಖರ್ಚೆಲ್ಲ ಅತ್ತಿಗೆ ಕೊಡುವಾಗ ಯಾಕೆ ಹೋಗಬಾರದೆಂದು ಅವನು ಉತ್ತರ ಹೇಳಿ ಹೊರಟ.

ಪ್ಲೇಗು ಹುಶಾರಾದ ಈ ಆರು ತಿಂಗಳಿನಲ್ಲಿ ನಂಜಮ್ಮ ವಿಶ್ವನಿಗೆ ಸಾಕಷ್ಟು ಹಾಲು ತುಪ್ಪದ ಆರೈಕೆ ಮಾಡಿದ್ದಳು. ಅವನು ಮೊದಲಿನಿಂದಲೂ ಶಕ್ತಿವಂತ ಹುಡುಗ. ಒಂದು ದಿನ ಬೆಳಗಿನ ಜಾವಕ್ಕೆ, ಎಂದರೆ ಹಿಂದೆ ಅವಳು ಮುತ್ತುಗದ ಎಲೆಗೆ ಹೊರಡುತ್ತಿದ್ದುದಕ್ಕಿಂತ ಮುಂಚೆ, ನಂಜಮ್ಮ ವಿಶ್ವ ಅಪ್ಪಣ್ಣಯ್ಯರು ರೊಟ್ಟಿ ಚಟ್ನಿಗಳನ್ನು ಕಟ್ಟಿಕೊಂಡು ಹೊರಟರು. ಮೋಟಾರಿನವನು ಗುರುತಿರುವುದರಿಂದ ತಾವು ಅದರಲ್ಲಿ ತಿಪಟೂರಿಗೆ ಬಂದು ಇವರನ್ನು ಕೂಡಿಕೊಳ್ಳುವುದಾಗಿ ಚೆನ್ನಿಗರಾಯರು ಎಂದರು. ರೊಟ್ಟಿಯ ಬುತ್ತಿ, ಹುರಿಟ್ಟು, ಅವಲಕ್ಕಿ, ಬೆಲ್ಲ, ಹುಣಿಸೆಹಣ್ಣು, ನಾಲ್ಕು ಸುಲಿದ ತೆಂಗಿನಕಾಯಿ, ಎರಡು ಸೇರು ಅಕ್ಕಿ, ಎರಡು ಪಾತ್ರೆ ಒಂದೆರಡು ಬಟ್ಟೆಗಳನ್ನು, ಒಂದು ಪುಟ್ಟ ಗೋಣೀಚೀಲಕ್ಕೆ ತುಂಬಿ ಕಟ್ಟಿ ತಲೆಯಮೇಲೆ ಇಟ್ಟುಕೊಂಡು

ಅಪ್ಪಣ್ಣಯ್ಯ ಹೊರಟ. ತನ್ನ ಎರಡು ಸೀರೆ ರೌಕೆ, ವಿಶ್ವನ ಬಟ್ಟೆ, ಎರಡು ದುಪ್ಪಟಿ ಒಂದು ಜಮಖಾನಗಳ ಸಣ್ಣ ಗಂಟನ್ನು ಕಂಕುಳಲ್ಲಿ ಇರುಕಿಕೊಂಡು, ಇನ್ನೊಂದು ಕೈಯಲ್ಲಿ ವಿಶ್ವನ ಕೈಹಿಡಿದು ನಂಜಮ್ಮ ನಡೆದಳು. ಬೆಳಕು ಹರಿಯುವ ಹೊತ್ತಿಗಾಗಲೇ ಅವರು ಒಂದು ಹರಿದಾರಿ ನಡೆದಿದ್ದರು. ವಿಶ್ವ ಅಮ್ಮನ ಕೈಬಿಟ್ಟು ಚಿಕ್ಕಪ್ಪನಿಗಿಂತ ಮುಂದೆ ಓಡುತಿದ್ದ. 'ಅಮ್ಮ ನೋಡು, ನಿನಗಿಂತ ನಾನು ಶಕ್ತಿಯಾಗಿಲ್ವೋ?' –ಎಂದು ಕೇಳುತ್ತಿದ್ದ. ಆರು ಮೈಲಿ ಕಳೆದಮೇಲೆ ದಾರಿಯಲ್ಲಿ ಸಿಕ್ಕಿದ ಒಂದು ಕಟ್ಟೆಯ ಹತ್ತಿರ ಕೂತು ಮೂವರೂ ರೊಟ್ಟಿ ಚಟ್ನಿ ತಿಂದರು. ಇನ್ನು ಎರಡು ಮೂರು ಮೈಲಿ ನಡೆಯುವ ಹೊತ್ತಿಗೆ ವಿಶ್ವನ ನಡಿಗೆ ನಿಧಾನವಾಗುತ್ತಿತ್ತು. ಈಗ ಮತ್ತೆ ಅಮ್ಮನ ಕೈಹಿಡಿದು ಹೆಜ್ಜೆ ಹಾಕಲು ಶುರುಮಾಡಿದ. ಕಾಲು ನೋಯುತ್ತದೆನ್ನಲು ಅವನಿಗೇ ಮರ್ಯಾದೆಗೆ ಕಮ್ಮಿ. ಅಷ್ಟರಲ್ಲಿ ಅವರ ಹಿಂದಿನಿಂದ ಬಂದ ಮೋಟಾರು ಭರ್ ಎಂದು ಮುಂದೆ ಹೋಯಿತು.

'ಅವ್ನು ಹಿಂದ್‌ಗಡೆ ಸೀಟಿನಾಗೆ ಕೂತಿದ್ದ ನೋಡಿದ್ರಾ?'–ಅಪ್ಪಣ್ಣಯ್ಯ ಕೇಳಿದ.

'ಇಲ್ಲ.'

'ಅಮ್ಮ, ಮೋಟ್ರುನೋರು ಅಣ್ಣೂನ್ನ ಹಾಗೇ ಕೂರಿಸ್ಕತಾರಲ, ನನ್ನೂ ಯಾಕೆ ಕೂರಿಸ್ಕಳುಲ್ಲ?'–ವಿಶ್ವ ಕೇಳಿದ.

'ಹೂಂ. ಹಾಗೇ ಕೂರಿಸ್ಕತಾರೆ! ಬ್ಯಾಳಿಕಾಳು ತೊಸ್ಸೆ, ಅವನವ್ವನಾ.....'–ಅಪ್ಪಣ್ಣಯ್ಯ ಉತ್ತರ ಹೇಳಿದ.

'ಹೋಗಲಿ ಬಿಡಿ'–ಎಂದು ನಂಜಮ್ಮ ಸಮಧಾನ ಹೇಳುತ್ತಿದ್ದರೂ ಅವನು ಮುಂದುವರಿಸಿದ: 'ನೀವೇನೇ ಹೇಳಿ. ನಮ್ಮ ಚಿನ್ನಯ್ಯ ಅಂದ್ರೆ ನೀಚಮುಂಡೇಮಗ. ಚಿಕ್ಕಂದ್ನಿಂದ್ಲೂ ಅಷ್ಟೆ. ತಾನಾಯ್ತು ತನ್ನ ವಡ್ಡಾಳ್ಯಾಯ್ತು. ಇಂಥಾ ನನ್‌ಮಕ್ಕಿಗೆ ಯಕ್‌ಡ ತಗಂಡು ಹ್ವಡೀಬೇಕು. ಇವರವ್ವನ......'

'ಅಪ್ಪಣ್ಣಯ್ಯ, ದೇವರ ಯಾತ್ರೆಗೆ ಹೋಗ್ತಿದೀವಿ. ನಮ್ಮ ಬಾಯಲ್ಲಿ ಕೆಟ್ಟ ಮಾತು ಯಾಕೆ ಬರ್‌ಬೇಕು? ಹೋಗ್‌ಲಿ ಬಿಡಿ'–ಎಂದ ನಂಜಮ್ಮ ವಿಶ್ವನಿಗೆ, ಮರೀ, ನಾನು ನಿಂಗೆ ಹೇಳ್‌ಕೊಟ್ಟಿದ್ನಲಾ, ಭಜ ಗೋವಿಂದಂ ಭಜ ಗೋವಿಂದಂ, ಅದ ಹೇಳು ನೋಡಾಣ. ಶೃಂಗೇರಿಗೆ ಹೋಗ್ತೀವಲ್ಲ, ಆ ಮಠದ ಶಂಕರಾಚಾರ್ಯರು ಹೆಣೆದಿದ್ದು ಅದು' ಎಂದಳು.

ವಿಶ್ವ ರಾಗವಾಗಿ ನಿಧಾನವಾಗಿ ಹೇಳಲು ಶುರುಮಾಡಿದ. ಅವನು ತಪ್ಪಿದ ಕಡೆ ಅಮ್ಮ ತಿದ್ದುತ್ತಿದ್ದಳು. ಅಪ್ಪಣ್ಣಯ್ಯನ ಬಾಯಿಗೆ ಏನಾದರೂ ಬೇಕಿತ್ತು. ಮತ್ತೆ ಏನೂ ತೋಚದೆ ಜೇಬಿಗೆ ಕೈಹಾಕಿ ವೀಳ್ಯದೆಲೆ ಚೀಲ ತೆಗೆದು ಅರ್ಧ ಎಲೆಗೆ ಸುಣ್ಣ ತೀಡಿ ಒಂದು ಗೋಟು ಅಡಿಕೆಯೊಡನೆ ಹಾಕಿಕೊಂಡು, ಅದರಮೇಲೆ ಒಂದು ತುಂಡು ಹೊಗೆಸೊಪ್ಪು ಪುಡಿಮಾಡಿ ತುಂಬಿಕೊಂಡ. ಸ್ವಲ್ಪ ಹೊತ್ತಿನಲ್ಲೇ ಬಾಯಿತುಂಬ ತಂಬುಲದ ರಸ ತುಂಬಿಕೊಂಡಿತು. ಉದ್ದಕ್ಕೂ ಉಗುಳಿಕೊಂಡು ನಡೆದ.

ರೈಲು ತಿಪಟೂರಿಗೆ ಬರುತ್ತಿದ್ದುದು ಒಂದು ಗಂಟೆಗೆ. ಮಧ್ಯೆ ಒಂದು ಸಲ ಸುಧಾರಿಸಿಕೊಂಡರೂ ಇವರು ನಡುನಡುವೆ ಹತ್ತಿರದ ಕಾಲುದಾರಿ ಹಿಡಿದುದರಿಂದ ಹನ್ನೆರಡು ಗಂಟೆಗೇ ಸ್ಟೇಷನ್ ಮುಟ್ಟಿದರು. ಈ ಮೂವರೂ ಮತ್ತೆ ಒಂದು ಸಲ ರೊಟ್ಟಿ ಚಟ್ನಿ ತಿಂದರು. ಅಷ್ಟರಲ್ಲಿ ಅರಳೀಕಟ್ಟೆ ಹತ್ತಿರದ ಮಾಧವಭಟ್ಟರ ಹೋಟೆಲಿನಲ್ಲಿ ಊಟ ಮಾಡಿಕೊಂಡು ಚೆನ್ನಿಗರಾಯರು ಅಲ್ಲಿಗೆ ಬಂದರು. ಎರಡೂವರೆ ಟಿಕೆಟ್ಟನ್ನು ಅಪ್ಪಣ್ಣಯ್ಯ ತಂದ. ತಮ್ಮದನ್ನು ಚೆನ್ನಿಗರಾಯರು ತೆಗೆದುಕೊಂಡರು.

ರಾತ್ರಿ ತರೀಕೆರೆ ಸ್ಟೇಷನ್ನಿನ ನಲ್ಲಿಯಲ್ಲಿ ನೀರು ಹಿಡಿದುಕೊಂಡು ಇವರು ಮೂವರೂ ರೊಟ್ಟಿಚಟ್ನಿ ತಿಂದರು. ಚೆನ್ನಿಗರಾಯರು ಊರು ನೋಡಿಕೊಂಡು ಬರುವುದಾಗಿ ಹೇಳಿ ಹೋದರು. 'ಅವ್ನೀಗ ಎಲ್ಲಿಗ್ಹೋದ ಗೊತ್ತಾ?'–ಅಪ್ಪಣ್ಣಯ್ಯ ಕೇಳಿದ. 'ಎಲ್ಲಿಗಾದ್ರೂ ಹೋಗ್ಲಿ, ನಮಗೆ ಆ ಮಾತು ಬ್ಯಾಡಿ ಸುಮ್ನಿರಿ'–ನಂಜಮ್ಮ ಹೇಳಿದಳು. ಜಮಖಾನ ಹಾಕಿಕೊಂಡು ವಿಶ್ವನ ಜೊತೆ ನಂಜಮ್ಮ ಸ್ಟೆಷನ್ನಿನ ಒಂದು ಮೂಲೆಯಲ್ಲಿ ಮಲಗಿದಳು. ಇವರ ತಲೆಯ ಕಡೆಯಲ್ಲಿ ಒಂದು ಗೋಣಿತಟ್ಟು ಹಾಸಿ ದುಪಟಿ ಹೊದೆದು ಚೀಲದ ಗಂಟನ್ನು ತಲೆ ಹಾಸಿಗೆ ಮಾಡಿಕೊಂಡು ಅಪ್ಪಣ್ಣಯ್ಯ ಮಲಗಿದ. ತಕ್ಷಣ ಮೂವರಿಗೂ ನಿದ್ರೆ ಹೊತ್ತಿತು. ಭೋಜನ ಮುಗಿಸಿ ಹಿಂತಿರುಗಿದ ಚೆನ್ನಿಗರಾಯರು ತಮ್ಮನ ಮಗ್ಗುಲಲ್ಲಿ ಒಂದು ಪಂಚೆ ಹಾಸಿಕೊಂಡು ಪವಡಿಸಿದರು. ಮರುದಿನ ಬೆಳಿಗ್ಗೆಯ ಹೊತ್ತಿಗೆ ಇವರ ಬುತ್ತಿಯಲ್ಲಿ ಇನ್ನೂ ಹತ್ತು ರೊಟ್ಟಿ ಉಳಿದಿತ್ತು. ಮೊನ್ನೆ ರಾತ್ರಿ ಮಾಡಿದ ಅದು ಕಟುಕಾಗಿದ್ದರೂ ನೀರಿನಲ್ಲಿ ನೆನೆಸಿಕೊಂಡು ತಿನ್ನಬಹುದಾಗಿತ್ತು. ಆದರೆ ಚಟ್ನಿ ಹಳಸಿಹೋಗಿತ್ತು. ಹೋಟೆಲಿನಲ್ಲಿ ಒಂದು ಆಣೆಗೆ ಸಾಂಬಾರು ತರುವುದಾಗಿ ಅಪ್ಪಣ್ಣಯ್ಯ ಹೇಳಿದ. ಚೆನ್ನಿಗರಾಯರು ಅಷ್ಟರಲ್ಲಿ ಮುಖ ತೊಳೆದು ಹೋಟೆಲು ಹೊಕ್ಕಿದ್ದರು. ವಿಶ್ವ ಬಾಯಿ ಬಾಯಿ ಬಿಡುತ್ತಿತ್ತು. ನಂಜಮ್ಮ ಹೇಳಿದಳು: 'ಒಂದಾಣೆಗೆ ಸಾಂಬಾರು ತನ್ನಿ, ಹಾಗೆಯೇ ವಿಶ್ವನಿಗೆ ಒಂದು ಇಡ್ಲಿ, ಎರಡು ಖಾಲಿ ದೋಸೆ ತನ್ನಿ. ಒಟ್ಟು ಮೂರಾಣೆಯಾಗುತ್ತೆ.'

ನರಸಿಂಹರಾಜಪುರದ ಸಣ್ಣ ರೈಲು ಹೊರಟದ್ದೇ ತಡ, ವಿಶ್ವನಿಗೆ ಏನೋ ಒಂದು ವಿಧವಾದ ಹಿಗ್ಗು. ಕಿಟಕಿಯ ಹೊರಗೆ ಎಷ್ಟೊಂದು ಮರಗಳು! ಒಂದರ ಪಕ್ಕದಲ್ಲಿ ಒಂದರಂತೆ ಎಣಿಸುವುದಕ್ಕೇ ಆಗದಂತಹ ಹೆಮ್ಮರಗಳು. ಅವುಗಳಿಗೆ ಹಬ್ಬಿದ ಹಸುರು ಬಳ್ಳಿಗಳು. ಆಗ ತಾನೇ ಮಳೆಗಾಲ ಕಳೆದು ಆಶ್ವಯುಜದಲ್ಲಿ

ಎಲ್ಲೆಲ್ಲಿಯೂ ಮರಗಿಡಗಳು ಕಳಕಳಿಸುತ್ತಿದ್ದವು. ವಿಶ್ವ ನೋಡುನೋಡುತ್ತಿರುವಂತೆಯೇ ಒಂದು ದೊಡ್ಡ ಪ್ರಾಣಿ ನಡೆದುಹೋಯಿತು. ತನ್ನ ಪುಸ್ತಕದಲ್ಲಿ ನೋಡಿದ್ದ ಚಿತ್ರದ ನೆನಪಿನಿಂದ ಅದು ಆನೆ ಎಂದು ಅವನು ಗುರುತು ಹಿಡಿದುಬಿಟ್ಟ. 'ಅಮ್ಮ, ಕಾಡು ಅಂದ್ರೆ ಇದೇ ಏನಮ್ಮ?'–ಎಂದು ಕೇಳಿದ. ಇದೇ ಹೌದು ಎಂದು ಅಮ್ಮನಿಗೆ ಅರ್ಥವಾಯಿತು. ಆದರೆ ಅವಳು ಸಹ ಇದುವರೆಗೂ ಇಷ್ಟು ದಟ್ಟವಾದ ಮರಗಿಡಗಳನ್ನು ನೋಡಿರಲಿಲ್ಲ.

ಅಪ್ಪಣ್ಣಯ್ಯ ಹೇಳಿದ: 'ಈ ಕಡೆಗೆಲ್ಲ ಹೀಗೆಯೇ. ಶಿವಮೊಗ್ಗದ ಆಚೆಗೆ ಹೋದರೆ ಇನ್ನೂ ಭಯಂಕರ ಕಾಡು.'

'ನೀವು ಶಿವಮೊಗ್ಗಕ್ಕೆ ಯಾವಾಗ ಹೋಗಿದ್ರಿ?'

ಅದೇನೋ ನೆನಪಾಗಿ ಅಪ್ಪಣ್ಣಯ್ಯ ಸುಮ್ಮನಾಗಿಬಿಟ್ಟ. ತಕ್ಷಣ ನಂಜಮ್ಮನಿಗೂ ಅದು ಜ್ಞಾಪಕಕ್ಕೆ ಬಂತು. ತಾನು ಹಾಗೆ ಕೇಳಬಾರದಾಗಿತ್ತೆಂದು ಅವಳಿಗೂ ಎನ್ನಿಸಿತು. ಇದೇ ಅತ್ತಿಗೆಯನ್ನು ಕಾಲಿನಿಂದ ಒದೆದು, ಪೋಲೀಸರು ಹಿಡಿದುಕೊಂಡು ಹೋಗುತ್ತಾರೆಂದು ಹೆದರಿ ತಾನು ಈ ಹಿಂದೆ ಈ ಭಾಗಗಳಲ್ಲೆಲ್ಲಸುತ್ತಿದ್ದ ನೆನಪಿನಿಂದ ಅವನು ಮಂಕಾಗಿ ಕಿಟಿಕಿಯ ಹೊರಗೆ ನೋಡುತ್ತಾ ಕುಳಿತ. ಚೆನ್ನಿಗರಾಯರು ಹೊಗೆಸೊಪ್ಪು ಉಜ್ಜುತ್ತಿದ್ದರು.

ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಸಣ್ಣ ರೈಲು ನರಸಿಂಹರಾಜಪುರ ಮುಟ್ಟಿದಾಗ ಬಸ್ಸಿನ ಏಜೆಂಟರುಗಳು ಬಂದು– 'ಶೃಂಗೇರಿ ಶೃಂಗೇರಿ. ಅರ್ಜೆಂಟ್ ಶೃಂಗೇರಿ' ಎಂದು ಮುತ್ತಿಕೊಂಡರು.

'ನೀವು ಮೋತಾರಿಗೆ ಬತ್ತೀರೋ ನಡ್ಕಂಡ್ ಬತ್ತೀರೋ?'–ಚೆನ್ನಿಗರಾಯರು ಕೇಳಿದರು.

'ಮೋಟಾರಿಗೆ ಬರುಕ್ಕೆ ದುಡ್ಡೆಲ್ಲಿದೆ?'–ಅಪ್ಪಣ್ಣಯ್ಯ ಉತ್ತರ ಹೇಳಿದ.

'ನಂಗೆ ಕಾಲು ಉಳಿಕಿಬಿಟ್ಟಿದೆ. ನಾನು ಮೋಟಾರ್ನಲ್ಲಿ ಹೋಗ್ತೀನಿ. ಮದ್ಲೇ ಹೋಗಿ ಛತ್ರದಲ್ಲಿ ಕೇಳಿ ಜಾಗ ಮಾಡಿರ್ತೀನಿ. ನೀವು ಹಿಂದ್‌ಗಡಿಂದ ಬನ್ನಿ'–ಎಂದು ಅವರು ಮುಂದೆ ನಡೆದರು.

''ಚಿನ್ನಯ್ಯ ಸ್ವಲ್ಪ ನಿಂತ್ಕಳೋ. ಅತ್ತಿಗಮ್ಮುನ್ನೂ ವಿಶ್ವುನ್ನೂ ಕರ್ಕಂಡ್‌ಹೋಗೋ. ಮೂರು ರೂಪಾಯಾಗುತ್ತೆ. ವಿಶ್ವುಂಗೆ ಅರ್ಧ ಚಾರ್ಜು. 'ನಾವು ಬದವ್ರು, ಹುಡುಗನ್ನ ತ್ವಡೇಮ್ಯಾಲೆ ಕೂರಿಸ್ಕತ್ತೀವಿ, ಚಾರ್ಜು ಮಾಫಿ ಮಾಡಿ' ಅಂತ ಕೇಳಿದ್ರೆ ಅವ್ನುನ್ನ ಹಾಗೇ ಕೂರುಸ್ಕಾಭೌದು. ನಾನು ಹಿಂದ್ಗಡಿಂದ ನಡ್ಕಂಡ್ ಬತ್ತೀನಿ''– ಅಪ್ಪಣ್ಣಯ್ಯ ಕೂಗಿ ಹೇಳಿದ.

'ನನ್ನ ಹತ್ರ ದುಡ್ಡಿಲ್ಲ. ಅವಳ ಹತ್ರ ಇದ್ರೆ ಬರ್ಲಿ'–ಎಂದು ಅವರು ಮುಂದೆ ಮುಂದೆ ನಡೆದರು. ನೂರುಗಟ್ಟಲೆ ಇಳಿದ ಪ್ರಯಾಣಿಕರ ಗುಂಪು ಓಡಿ ಓಡಿ ಹೋಗಿ ಬಸ್ಸುಗಳಿಗೆ ತುಂಬಿಕೊಳ್ಳುತ್ತಿತ್ತು. ಚೆನ್ನಿಗರಾಯರೂ ಹತ್ತಿ ಜಾಗ ಮಾಡಿಕೊಂಡರು.

ಒಣಗಿದ ರೊಟ್ಟಿಯನ್ನು ನೀರಿನಲ್ಲಿ ನೆನೆಸಿ ಈ ಮೂವರೂ ತಿಂದರು. ಅಲ್ಲಿಗೆ ರೊಟ್ಟಿಯ ಬುತ್ತಿ ಮುಗಿಯಿತು. ಅದು ಸಾಲಲಿಲ್ಲ. ನಂಜಮ್ಮ ಬೆಲ್ಲ ಹುಣಿಸೆ ಗೊಜ್ಜಿನಲ್ಲಿ ಒಂದೂವರೆ ಪಾವಿನಷ್ಟು ಹುರಿಟ್ಟು ಕಲಸಿದಳು. ಆಮೇಲೆ ವಿಶ್ವನ ಜೇಬಿಗೆ ಅವಲಕ್ಕಿ ತುಂಬಿ ಒಂದು ಮುರುಕು ಬೆಲ್ಲ ಕೊಟ್ಟಳು. ಅಪ್ಪಣ್ಣಯ್ಯ ಅತ್ತಿಗೆಯ ಗಂಟನ್ನೂ ತನ್ನ ಗೋಣೀಚೀಲಕ್ಕೆ ಹಾಕಿ ಕಟ್ಟಿ ತಲೆಯ ಮೇಲೆ ಇಟ್ಟುಕೊಂಡು ಹೊರಟ. ವಿಶ್ವನ ಕೈ ಹಿಡಿದು ಅವಳು ನಡೆದಳು.

– 2 –

ಅಂತಹ ಕಾದನ್ನು ಅವಳು ಈ ಹಿಂದೆ ನೋಡಿಲ್ಲ. ಮರ, ಗಿಡ, ಹಸಿರೆಂದರೆ ಅವಳಿಗೆ ಯಾವಾಗಲೂ ಆಶೆ. ಒಂದು ತೆರನದ ಅಲೌಕಿಕ ಆಕರ್ಷಣೆ. ಮುತ್ತುಗದ ಎಲೆ ತರಲು ಚೋಳನ ಗುಡ್ಡಕ್ಕೆ ಹೋದಾಗ, ಊರ ಸುತ್ತ ಪೈರು ಬೆಳೆದು ಹೊಲ ಗದ್ದೆಗಳೆಲ್ಲ ತುಂಬು ಹಸಿರಿನಿಂದ ಕೂಡಿದಾಗ ಸುತ್ತಲೂ ನೋಡುತ್ತಾ ನಿಂತುಬಿಡುತ್ತಿದ್ದಳು. ಇಲ್ಲಿ ಎಲ್ಲೆಲ್ಲಿಯೂ ಕಾಡು–ಭಾರಿಭಾರಿಯಾದ ಹೆಮ್ಮರಗಳ ಕಾಡು. ಏನೊ ಒಂದು ರೀತಿಯ ಭಾವ ಮನಸ್ಸನ್ನು ಆಕ್ರಮಿಸಿಬಿಡುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ ಅದು ಅಂತರಂಗವನ್ನು ಕಲಕುತ್ತಿತ್ತು. ಮನಸ್ಸನ್ನು ಮುದಗೊಳಿಸುವ ಆ ಹಸಿರೇ ಮಕ್ಕಳಿಬ್ಬರ ನೆನಪನ್ನೂ ಹೊಡೆದೆಬ್ಬಿಸುತ್ತಿತ್ತು. ಈ ತೇಗದ ಎಲೆಗಳು ಎಷ್ಟು ಅಗಲವಾಗಿವೆ! ಒಂದೊಂದು ಎಲೆಯಮೇಲೆಯೇ ಬಡಿಸಿಕೊಂಡು ಊಟ ಮಾಡಬಹುದು. ಮುತ್ತುಗದೆಲೆ ಇಷ್ಟು ಅಗಲವಾಗಿದ್ದರೆ ಹಚ್ಚುವ ಕಷ್ಟವೇ ಇಲ್ಲ. ಮುತ್ತುಗದೆಲೆ ತರಲು ಬರುತ್ತಿದ್ದಾಗ ದೊಡ್ಡ ಎಲೆಗಳನ್ನು ಕಂಡರೆ ರಾಮಣ್ಣ ನಿಧಿ ಕಂಡವನಂತೆ–'ಅಮ್ಮ, ನೋಡಿಲ್ಲಿ ಎಷ್ಟು ದೊಡ್ಡ ಎಲೆ' ಎಂದು ಕೂಗಿಕೊಂಡು ಓಡಿ ಹೋಗಿ ಕುಯ್ದುಕೊಳ್ಳುತ್ತಿದ್ದ. ಎಲೆ ತುಂಬ ದೊಡ್ಡದಾದರೆ ಹಚ್ಚಿಸಲು ಸರಿಯಲ್ಲ. ಊರಗಲವಾಗಿಬಿಡುತ್ತೆ. ಮುತ್ತುಗದ ರಸ ಸಿಡಿದು ಅವನ ಶರಟೆಲ್ಲ ಕರೆಯಾಗಿತ್ತು. ಅದಕ್ಕೆಂತಲೇ ಬೇರೆ ಒಂದು ಹರಕಲು ಶರಟಿತ್ತು.

ಪಾರ್ವತಿ ಎಲೆಗೆ ಬರುತ್ತಿದ್ದಾಗ ಬಾಯಿಯಲ್ಲಿ ಏನದರೂ ಗುನುಗಿಕೊಳ್ಳುತ್ತಿದ್ದಳು. ಹಾಡು ಹಸೆ ಎಂದರೆ ಅವಳಿಗೆ ಎಷ್ಟು ಆಶೆ! ತನಗೆ ಬರುತ್ತಿದ್ದುದನ್ನೆಲ್ಲ ಅವಳು ಕಲಿತಿದ್ದಳು. ಹನ್ನೆರಡು ವರ್ಷವಾಗುವ ಹೊತ್ತಿಗೇ

ರಾಗಿಬೀಸುವುದನ್ನು ತನ್ನಿಂದ ಪೂರ್ತಿ ಬಿಡಿಸಿಬಿಟ್ಟಿದ್ದಳು. ಬೆಳಗಿನಜಾವ ಬೀಸುವಾಗ ಅವಳು ರಾಗವಾಗಿ ಹಾಡು ಹೇಳುತ್ತಿದ್ದುದನ್ನು ಕೇಳುವುದೇ ಒಂದು ಚಂದ. ಮೇಷ್ಟರು ಹೇಳಿದ್ದರು: ಅವಳ ಗಂಡನಿಗೆ ಹಾಡು ಹಸೆ ಅಂದರೆ ಬಹಳ ಇಷ್ಟವಂತೆ. ಸೂರ್ಯನಾರಾಯಣ ಹಾರ್ಮೋನಿಯಂ ಶೃತಿ ಇಟ್ಟುಕೊಂಡು ಭಾರತದ ಪದ್ಯಗಳನ್ನು ರಾಗವಾಗಿ ಹೇಳುತ್ತಿದ್ದರೆ, ಕೇಳಿದವರ ಕಣ್ಣಿನಲ್ಲಿ ನೀರು ಬರುತ್ತಿತ್ತಂತೆ. ಅದಲ್ಲದೆ ಎಷ್ಟೋ ಶ್ಲೋಕಗಳು ದೇವರನಾಮಗಳು ಬರುತ್ತಿತ್ತಂತೆ. ಮನೆಯಲ್ಲಿ ಕೂತು ದಿನಾ ಭಾರತ ಓದಿಕೊಳ್ಳುತ್ತಿದ್ದನಂತೆ. ಅವನ ಸ್ವಭಾವ ತುಂಬ ಒಳ್ಳೆಯದು. ಕೋಪವಿಲ್ಲ, ತಾಪವಿಲ್ಲ. ಹೊಟ್ಟೆಯಲ್ಲಿ ಹುಟ್ಟಿದ ರತ್ನನ ಎಷ್ಟು ನಿಗವಾಗಿ ನೋಡಿಕೊಳ್ಳುತ್ತಿದ್ದ! ಗಂಡಸು ಅಂದರೆ ಹಾಗಿರಬೇಕು. ಅಂಥವನ ಜೊತೆ ಸಂಸಾರ ಮಾಡುಕ್ಕೆ ನಮ್ಮ ಪದಾರ್ಥಕ್ಕೆ ಯೋಗವಿರಲಿಲ್ಲವೋ ಏನೋ! ಅವಳ ಮನಸ್ಸು, ಸೂರ್ಯನಾರಾಯಣನ ಸಂಗಡ ತನ್ನ ಗಂಡ ಚೆನ್ನಿಗರಾಯರನ್ನು ಹೋಲಿಸುತ್ತಿತ್ತು. ಹೇಸಿಗೆ ಎನಿಸಿ, ಅದೆಲ್ಲ ಅವರವರ ಪೂರ್ವ ಜನ್ಮದ ಫಲ ಎಂದುಕೊಂಡು ಮನಸ್ಸು ಬೇರೆ ದಿಕ್ಕಿನಲ್ಲಿ ತೊಡಗುತ್ತಿತ್ತು.

ಕಾಡನ್ನು ನೋಡುನೋಡುತ್ತ ವಿಶ್ವ ಹಿಗ್ಗಿ ಹೀರೇಕಾಯಿಯಾಗುತ್ತಿದ್ದ.

'ಅಮ್ಮ ನೋಡಲ್ಲಿ, ನಮ್ಮೂರ ತೋಪಿನ ಹುಳಿಮಾವಿನ ಮರಕ್ಕಿಂತ ದೊಡ್ಡದಾಗಿದೆ'– ಎನ್ನುವನು. ತಕ್ಷಣ– 'ಅದರ ಪಕ್ಕದ್ದು ನೋದು ಆಕಾಶದೆತ್ತರ ಇದೆ' ಎಂದು ದೃಷ್ಟಿಯನ್ನು ಮುಂದೆ ತಿರುಗಿಸಿ, ನೋಡು, ಆ ಕೋತಿ ತಿಮ್ಮಣ್ಣ, ಮೂತಿ ಯಾಕೆ ಹಾಗಿದೆ? ನಮ್ಮೂರ ಕೋತಿ ತಿಮ್ಮಣ್ಣ ಇದಕ್ಕಿಂತ ಚೆನ್ನಾಗಿದೆ ಅಲ್ವಾ'? ಎಂದು ಕೇಳುತ್ತಿದ್ದ.

'ಇದು ಕಾಡುಕೋತಿ ಮಗು.'

'ಹಾಗಾದ್ರೆ ನಮ್ಮೂರಲ್ಲಿರೋದು ಎಂಥಾ ಕೋತಿ?'

'ಊರ ಕೋತಿ.'

'ಹಾಗಾದ್ರೆ ಊರೊಳಗೆ ಇರೂದೇ ಇಲ್ವಲ? ಅದು ತ್ವಾಟದ ಕೋತಿ'–ಎಂದು ತಾನೇ ಉತ್ತರ ಹೇಳುವನು. ರಸ್ತೆಯಲ್ಲಿ ಹೋಗುತ್ತಾ ಹೋಗುತ್ತ ಅವರಿಗೆ ಒಂದೆರಡು ಹಾವುಗಳೂ ಕಂಡವು. ಹಾವೆಂದರೆ ಅವರು ಕಾಣದ ಜಂತುವಲ್ಲ. ರಾಮಸಂದ್ರದಲ್ಲೂ ಇವೆ. ಇಲ್ಲಿ ಇಷ್ಟೊಂದು ಕಾಡಿರುವುದರಿಂದ ತುಂಬ ಇವೆ. ಎಚ್ಚರವಾಗಿ ನಡೆಯಬೇಕು. ಮಲೆನಾಡಿನಲ್ಲಿ ಹೆಬ್ಬಾವು ಇರುತ್ತವಂತೆ. ಒಬ್ಬೊಬ್ಬ ಮನುಷ್ಯನನ್ನೇ ನುಂಗುತ್ತವಂತೆ. ಮರದ ಕೊರಡಿನ ಹಾಗೆ ಬಿದ್ದಿರುತ್ತವಂತೆ.

ಒಂದೇಸಮನೆ ಅಮ್ಮನ ಕೈ ಹಿಡಿದುಕೊಂಡು ನಡೆದ ವಿಶ್ವನಿಗೆ ಬೇಸರವಾಗಿ ಕೈ ಕೊಡವಿಕೊಂಡು ಒಬ್ಬನೆ ನಡೆಯುತ್ತಿದ್ದ. ಒಮ್ಮೆ ಇಪ್ಪತ್ತು ಮಾರು ಮುಂದೆ ಓಡಿಬಿಡುತ್ತಿದ್ದ. ಇನ್ನೊಮ್ಮೆ ಹತ್ತು ಹೆಜ್ಜೆ ಹಿಂದೆ ಉಳಿಯುತ್ತಿದ್ದ. ಒಂದು ಬಾರಿ ಅಮ್ಮ ಅವಳ ಯೋಚನೆಯಲ್ಲೇ ಮುಲುಗಿ ಹೆಜ್ಜೆ ಹಾಕುತ್ತಿದ್ದಳು. ಅಪ್ಪಣ್ಣಯ್ಯ ಎಂದಿನಂತೆ ಇವರಿಗಿಂತ ಹತ್ತು ಮಾರು ಮುಂದೆ ಮುಂದೆ ನಡೆಯುತ್ತಿದ್ದ. ಇದ್ದಕ್ಕಿದ್ದಹಾಗೆಯೆ ಏನೋ ಎನ್ನಿಸಿ ನಂಜಮ್ಮ ತಿರುಗಿ ನೋಡುತ್ತಾಳೆ: ವಿಶ್ವನೇ ಇಲ್ಲ. ಅವಳಿಗೆ ಎದೆ ಜಗ್ ಎಂದಿತು. ಹಾಡಿನಲ್ಲಿ ಹುಲಿ ಕಿರುಬಗಳು ಇರುತ್ತವಂತೆ–ಎಂಬುದು ಮೊದಲಬಾರಿಗೆ ನೆನಪಿಗೆ ಬಂತು. ಹಾವು ಹುಳುಗಳ ಕಾಟವೂ ಕಮ್ಮಿಯಿಲ್ಲ. 'ಅಪ್ಪಣ್ಣಯ್ಯ, ವಿಶ್ವ ಎಲ್ಲೋ ಕಾಣುಲ್ಲ ನೋಡಿ'–ಎಂದು ಕೂಗಿದಳು. ಇಬ್ಬರೂ ಹಿಂತಿರುಗಿ ನೋಡಿಕೊಂಡು ಹೊರಟರು. ಒಂದು ಫರ್ಲಾಂಗ್ ಹಿಂದೆ ರಸ್ತೆಯ ದಡದ ಒಂದು ಪುಟ್ಟ ತೇಗದ ಮರ ಹತ್ತಿ ಅವನು 'ಕೀ ಕೀ ಕಲ, ಕೀ ಕೀ ಕಲ'–ಎಂದು ಎದುರು ಬದಿಯ ಮರದ ಮೇಲಿದ್ದ ಕೋತಿಗಳನ್ನು ಅಣಕಿಸುತ್ತಿದ್ದಾನೆ. 'ಹೇಳ್ದೆ ಕೇಳ್ದೆ ಅದ್ಯಾಕೋ ಹೀಗೆ ಮಾಡ್ದೆ?'–ಎಂದು ಕೇಳಿದರೆ, 'ಆ ಕೋತಿ ತಿಮ್ಮಣ್ಣ ನನ್ನ ಆಡ್ಕತಲ' ಎಂದು ಉತ್ತರಕೊಟ್ಟ.

ಆಗಿನಿಂದ ಅವನನ್ನು ಹಿಂದೆ ಬಿಡದೆ ಮುಂದೆ ಮುಂದೆಯೇ ನಡೆಸಿಕೊಂಡು ಹೊರಟಳು.

ಅಪ್ಪಣ್ಣಯ್ಯನಿಗೆ ಕಾಡಿನ ಸೌಂದರ್ಯ ಗಿಂವ್ದರ್ಯವೆಂಬುದು ತಿಳಿಯುತ್ತಿರಲಿಲ್ಲ. ಈ ಹಾಳು ಕಾಡಿಗಿಂತ ನಮ್ಮ ಬಯಲು ಸೀಮೆಯೇ ಚನ್ನ. ಇಲ್ಲಿ ಬರೀ ಬತ್ತ. ರಾಗಿಯೇ ಇಲ್ಲ. ಮುದ್ದೆ ತಿನ್ನದೆ ಕೈಕಾಲಿನಲ್ಲಿ ಶಕ್ತಿ ಹ್ಯಾಗೆ ಬರುತ್ತೆ? ಮಲೆಸೀಮೆಯೋರು ನಮ್ಮಷ್ಟು ಶಕ್ತಿಯಾಗಿರೂಲ್ಲವಂತೆ–ಎಂಬ ಯೋಚನೆಯ ಜೊತೆಗೆ ಅವನಿಗೂ ತನ್ನ ಜೀವನದ ಹಿಂದಿನ ಎಲ್ಲ ಘಟನೆಗಳ ನೆನಪಾಗುವುದು. ಅವನ ಮಗಳು ಜಯಲಕ್ಷ್ಮಿಗೆ ಪಾರ್ವತಿಯದೇ ವಯಸ್ಸು. ಎರಡನೆಯ ರಾಮಕೃಷ್ಣ ಅವಳಿಗಿಂತ ತುಂಬ ಚಿಕ್ಕವನು. ಮೂರನೆಯದು ಎಂಥದೋ! ರಾಮಕೃಷ್ಣ ನಿಜವಾಗಿಯೂ ನಂಗೇ ಹುಟ್ಟಿದ್ದು. ನಮ್ಮಮ್ಮ ಮಾತ್ರ, ಅಲ್ಲ ಅಂದ್ಳಲ್ಲ. ಅಲ್ಲಿಗೆ ಹೋಗಿದ್ದ ನಂಗೆ ಅದು ಗೊತ್ತಿಲ್ವೆ? ಅದೇನಾದ್ರೂ ಸ್ಕೂಲು ಗೀಲಿಗೆ ಹೋಗ್ತಿದೆಯೋ ಇಲ್ಲವೋ? ಮಂತ್ರ ಕಲಿಸಿ ಜೋಯಿಸಿಗೆ ಮಾಡುಸ್ತೀವಿ ಅಂದ್ರಂತೆ ಅವರು. ಇಷ್ಟು ಹೊತ್ತಿಗೆ ಅದು ಒಂದೇ ಹೋಗಿ ಹಳ್ಳೀಕಡೆ ದಾನ ಗೀನ ತರ್ತಿರ್ಭೌದು. ಅವ್ಳು ಈಗ ಹ್ಯಾಗಿದಾಳೋ. ನನ್ನೇನಾದ್ರೂ ಜ್ಞಾಪಿಸ್ಕತಿದಾಳೋ ಇಲ್ವೋ. ನಾನು ತಾಳಿ ಕಿತ್ಕಂಡು ಕಳಿಸಬಾರದಾಗಿತ್ತು. ಕತ್ತೆಮುಂಡೆ, ಅವ್ಳೂ ಒಂದಿಷ್ಟು ಎಲೆ ಪಲೆ ಹಚ್ಚಿ ಉಪ್ಪು ಮೆಣಸಿನಕಾಯಿ ಖರ್ಚು ಹೊಂದಿಸಿದ್ರೆ ಹ್ಯಾಗಾದ್ರೂ ಸುಖವಾಗಿರ್ಭೌದಾಗಿತ್ತು. ಇವುಕ್ಯಾಕೆ

ಬೆಳಗ್ಗೆದ್ರೆ ಕಾಫಿ? ಬಿಳಿ ಅನ್ನ, ತೊಗರಿಬೇಳೆ ಸಾರು ಕಾಪಿ ಬೇಕು ಅಂದ್ರೆ ದಿನಾ ಅದ್‌ಹ್ಯಾಗೆ ಆಗುತ್ತೆ? ಇವಳಪ್ಪ ಗಂಟು ಮಾಡಿ ಕೊಟ್ಟಿದ್ನೇ? ಆದ್ರೂ ಆ ಮುಂಡೆ ನನ್ನ ಬಿಟ್ಟು ಹೋಗಬಾರ್‌ದಾಗಿತ್ತು– ಎಂದುಕೊಳ್ಳುತ್ತಲೇ ಅವನಿಗೆ ತನ್ನ ಒಂಟಿತನದ ಅನುಭವವಾಗುವುದು. ಏನೋ ಒಂದು ವಿಧವಾದ ಬೇಸರ, ಜೀವನದಲ್ಲಿ ಸುಖವಿಲ್ಲವೆಂಬ ಭಾವ 'ಕೇಳುಸ್ತೇ'–ಹಿಂದೆ ಬರುತ್ತಿದ್ದ ಅತ್ತಿಗೆಯನ್ನು ಅವನು ಕೇಳಿದ.

'ಏನಂದ್ರಿ?'

'ಆ ಹುಡುಗೀಗೂ ಇಷ್ಟೊತ್ತಿಗೆ ಮದ್ವೆ ಗಿದ್ವೆ ಮಾಡಿರ್ತಾರಾ?'

'ಯಾರಿಗೆ ಅಂತೀರಿ?'

ಇಂಥವಳು ಎಂದು ನಿರ್ದಿಷ್ಟವಾಗಿ ಬಾಯಿಬಿಟ್ಟು ಹೇಳಲು ನಾಚಿಕೆಯಾಗಿ ಅವನು ಸುಮ್ಮನಾದ. 'ಯಾವ ಹುಡುಗಿಗೆ?'–ಎಂದು ಅತ್ತಿಗೆಯೇ ಇನ್ನೊಂದು ಸಲ ಕೇಳಿದುದಕ್ಕೆ, 'ಯಾರಿಗೂ ಇಲ್ಲ ಬಿಡಿ. ನಂಗೆ ರೇವಣ್ಣಶೆಟ್ಟಿ ಮನೆ ರುದ್ರಾಣಿ ಜ್ಞಾಪಕವಾಯ್ತು' ಎಂದ.

'ರುದ್ರಾಣಿ ಸತ್ತು ಎಷ್ಟು ವರ್ಷವಾಯ್ತು! ಇದೇನು ಹೀಗಂತೀರಾ?'="ಎಂದುದಕ್ಕೆ" ಅವನು ಉತ್ತರ ಹೇಳಲಿಲ್ಲ. ತನ್ನ ಯೋಚನೆಯಲ್ಲೆ ಒಳಸರಿದಿದ್ದ ಅವಳ ಮನಸ್ಸು ಅವನ ಮಾತಿನ ಹಿನ್ನೆಲೆಯನ್ನು ಊಹಿಸಿಕೊಳ್ಳಲಿಲ್ಲ. ಅವರು ಮತ್ತೆ ಮೌನವಾಗಿ ನಡೆಯಲು ಶುರುಮಾಡಿದರು. ಅವನು ಹತ್ತು ಮಾರು ಮುಂದೆ. ಅವಳು ಅಷ್ಟು ಹಿಂದೆ. ತನ್ನ ಪಾಡಿಗೆ ಏನಾದರು ಹರಟಿಕೊಳ್ಳುತ್ತಾ ವಿಶ್ವ ಒಂದೊಂದು ಸಲ ಚಿಕ್ಕಪ್ಪನಿಗಿಂತ ಮುಂದೆ ಹೋಗುವನು. ಇಲ್ಲದಿದ್ದರೆ ಇಬ್ಬರಿಗೂ ಮಧ್ಯೆ ನಡೆಯುವನು. ಬೇಸರವೆನಿಸಿದರೆ ಅಮ್ಮನ ಕೈ ಹಿಡಿದುಕೊಂಡು, 'ಕಥೆ ಹೇಳಮ್ಮ' ಎನ್ನುವನು.

ಮಧ್ಯ ಒಂದು ಸಲ ಕೂತು ಸುಧಾರಿಸಿಕೊಂಡು ಅವರು ರಾತ್ರಿ ಏಳು ಗಂಟೆಯ ಹೊತ್ತಿಗೆ, ಹದಿನಾಲ್ಕು ಮೈಲಿಯ ಕೊಪ್ಪವನ್ನು ಮುಟ್ಟಿದರು. ಒಂದು ಪಾತ್ರೆಯಲ್ಲಿ ಅವಲಕ್ಕಿ ನೆನಸಿ ಸೆಲ್ಲ ಹಾಕಿ, ಇನ್ನೊಂದರಲ್ಲಿ ಹುರಿಟ್ಟು ಕಲಸಬಹುದು. ಅಥವಾ ಯಾವುದಾದರೂ ಮರದ ಕೆಳಗೆ ಮೂರು ಕಲ್ಲು ಹೂಡಿ ಒಂದಿಷ್ಟು ಅನ್ನ ಬೇಯಿಸಿ ಹೋಟೆಲಿನಿಂದ ಎರಡಾಣೆ ಸಾರು ತರಬಹುದು–ಎಂದು ನಂಜಮ್ಮ ಯೋಚಿಸಿದಳು.

'ಮಲ್ನಾಡು ಕಡೆ ಸಾವ್ಕಾರ್ರಮನ್ಲಿ ಎಷ್ಟು ಜನ ಬಂದ್ರೂ ಅನ್ನ ಹಾಕ್ತಾರೆ. ಹೋಗಿ ಊಟ ಮಾಡ್ಕಂಡ್ ಬರಾಣ'–ಅಪ್ಪಣ್ಣಯ್ಯ ಸೂಚಿಸಿದ.

ಅತ್ತಿಗೆ–'ಯಾರ ಮನೆಗೂ ಊಟಕ್ಕೆ ಹೋಗೂದು ಬ್ಯಾಡ'ಎಂದಳು.

'ಹಾಗಾದ್ರೆ ನಾನೂ ವಿಶ್ವ ಹೋಗಿ ಊಟ ಮಾಡ್ಕಂಡ್ ಬತ್ತೀವಿ. ನಿಮಗೆ ಕಲ್ಲು ಹೂಡಿಕೊಟ್ಟು ಹೋಟಲಲ್ಲಿ ಹುಳಿ ತಂದುಕೊಡ್ತೀನಿ.'

'ಯಾರು ಹೋಗೂದೂ ಬ್ಯಾಡ. ನಾವು ತಂದ ಪದಾರ್ಥ ತಿನ್ನಾಣ.'

ಕೊನೆಗೆ ಅವಳು ಹೇಳಿದಂತೆಯೇ ಆಯಿತು. ಅಪ್ಪಣ್ಣಯ್ಯ ಕಲ್ಲು ಹೂಡು ಪುಳ್ಳೆ ತಂದು ಕೊಟ್ಟ. ಅವಳು ಅನ್ನ ಮಾಡಿದಳು. ಎರಡಾಣೆ ಕೊಟ್ಟಿದ್ದಕ್ಕೆ ಹೋಟೆಲಿನವರು ಅರ್ಧ ಕೊಳದಪ್ಪಲೆಗಿಂತ ಹೆಚ್ಚು ಹುಳಿ ಕೊಟ್ಟರು. ಮೂರು ಜನಕ್ಕೂ ಹೊಟ್ಟೆ ತುಂಬ ಊಟವಾಯಿತು. ಒಂದು ಅಂಗಡಿಯ ಜಗುಲಿಯ ಮೇಲೆ ಮಲಗಿದ್ದು ಬೆಳಗ್ಗೆ ಎದ್ದು ಹುರಿಟ್ಟು ಕಲಸಿದರು. ಒಂದು ತೆಂಗಿನಕಾಯಿ ಒಡೆದು ಅಪ್ಪಣ್ಣಯ್ಯ ಹೋಟೆಲಿಗೆ ಹೋಗಿ ಈಳಿಗೆ ಮಣೆಯಲ್ಲಿ ಒಂದು ಹೋಳು ತುರಿದುಕೊಂಡು ಬಂದ. ನೆನಸಿದ ಅವಲಕ್ಕಿಗೆ ಕಾಯಿತುರಿ ಬೆಲ್ಲ ಬೆರೆಸಿದರು. ಮೂವರೂ ಹೊಟ್ಟೆ ತುಂಬ ತಿಂದು ಉಳಿದ ನೆನೆದ ಅವಲಕ್ಕಿಯನ್ನು ವಿಶ್ವನಿಗೆಂದು ಇಟ್ಟುಕೊಂಡು ಮತ್ತೆ ಹೆಜ್ಜೆ ಹಾಕಿದರು. ಮೊನ್ನೆ ಊರಿನಿಂದ ತಿಪಟೂರಿಗೆ ಹದಿನಾರು ಮೈಲಿ, ನೆನ್ನೆ ನರಸಿಂಹರಾಜಪುರದಿಂದ ಕೊಪ್ಪಕ್ಕೆ ಹದಿನಾಲ್ಕು ಮೈಲಿ ಒಂದೇಸಮನೆ ನಡೆದದ್ದರಿಂದ ವಿಶ್ವನ ಎರಡು ತೊಡೆಗಳಲ್ಲೂ ನೋವು ಕಾಣಿಸಿಕೊಂಡಿತ್ತು. ಅವನ ಅಮ್ಮನ ಎರಡು ಹೆಜ್ಜೆಗಳೂ ನೋಯುತ್ತಿದ್ದುವು. ಆದರೆ ನಡೆಯದೆ ವಿಧಿಯಿಲ್ಲ. 'ಕಾಲು ನೋಯುತ್ತೆ ಏನೋ ಮರಿ?'–ಎಂದು ಕೇಳಿದುದಕ್ಕೆ ವಿಶ್ವ, 'ಗಂಡ್‌ಹುಡುಗುರ್ಗೆ ನೋಯುಲ್ಲ' ಎಂದು ಮುಂದೆ ಓಡಿದ. ಅಲ್ಲಿಗೆ ಆರು ಮೈಲಿ ಹರಿಹರಪುರವಂತೆ. ಅಲ್ಲಿಯೂ ಶೃಂಗೇರಿಯ ಮಠವೇ ಇದೆಯಂತೆ. ನಿಧಾನವಾಗಿ ನಡೆದು ಹತ್ತುಗಂಟೆಯ ಹೊತ್ತಿಗೆ ಹರಿಹರಪುರ ಮುಟ್ಟಿದರು. ನದಿಯ ಸ್ನಾನ ದೇವರ ದರ್ಶನವಾದಮೇಲೆ ಮಠದಲ್ಲಿ ಊಟವಾಯಿತು. ಇವರಂತೆಯೇ ಬಂದಿದ್ದ ಸುಮಾರು ನೂರು ಜನ ಬ್ರಾಹ್ಮಣ ಮುತ್ತೈದೆಯರು ಊಟಕ್ಕೆ ಸೇರಿದ್ದುದರಿಂದ ನಂಜಮ್ಮನಿಗೆ ಸಂಕೋಚವೆನಿಸಲಿಲ್ಲ. ಊಟವಾದ ಮೇಲೆ ವಿಶ್ವ ತೂಕಡಿಸಲು ಶುರುಮಾಡಿದ. ಮುಂದೆ ಶೃಂಗೇರಿ ಹನ್ನೆರಡು ಮೈಲಿಯಂತೆ. ನಂಜಮ್ಮನ ಕಾಲು ನೋವು ಇನ್ನೂ ಹೆಚ್ಚಾಗಿತ್ತು. ರಾತ್ರಿ ಅಲ್ಲಿಯೇ ಉಳಿದಿದ್ದು ಬೆಳಿಗ್ಗೆ ಹೋಗುವುದೆಂದು ಅವರು ನಿಶ್ಚಯಿಸಿದರು. ಒಂದು ಸಾಲೆಯಲ್ಲಿ ವಿಶ್ವನನ್ನು ಮಲಗಿಸಿದರು. ಅವನ ಹತ್ತಿರ ಚಿಕ್ಕಪ್ಪನೂ ಮಲಗಿಕೊಂಡ. ಎದುರಿಗೆ ಹರಿಯುತ್ತಿದ್ದ ಹೊಳೆಯ ಹತ್ತಿರ ಕುಳಿತುಕೊಳ್ಳಬೇಕೆಂದು ನಂಜಮ್ಮನಿಗೆ ಆಶೆಯಾಯಿತು. ಮರಳಿನಲ್ಲಿ ನಡೆದು ಹೋಗಿ ನದಿಯ ನೀರಿನಲ್ಲಿ ಎರಡು ಹೆಜ್ಜೆಗಳನ್ನೂ ಮುಳುಗಿಸಿಕೊಂಡು ಅವಳು ಒಂದು ಕಲ್ಲಿನ ಮೇಲೆ ಕುಳಿತಳು. ಕಾಲಿಗೆ, ಹಾ ಎನಿಸುವಷ್ಟು ಹಿತವಾಗಿತ್ತು.

ರಾಮಣ್ಣ ಪಾರ್ವತಿಯರ ನೆನಪು ಮನಸ್ಸನ್ನು ಆಕ್ರಮಿಸಿಬಿಟ್ಟಿತ್ತು. ಅವೂ ಬದುಕಿದ್ದು ಇಲ್ಲಿಗೆಲ್ಲ ಬಂದಿದ್ದರೆ ಎಷ್ಟು ಸಂತೋಷಪಡುತ್ತಿದ್ದವೋ! ಮಾತಾಡಿಕೊಂಡು ಜೊತೇಲಿ ನಡೀಭೌದಾಗಿತ್ತು. ನಾನೊಂದು ಪಾಪಿ– ಎಂದು ಕಣ್ಣೀರು ಒರೆಸಿಕೊಂಡು ಅವಳು, ಸಂಜೆಯ ಹೊತ್ತಿಗೆ ವಿಶ್ವ ಅಪ್ಪಣ್ಣಯ್ಯರು ಬಂದು ಕೂಗುವತನಕ ಹಾಗೆಯೇ ಕುಳಿತಿದ್ದಳು.

– 3 –

ಇವರು ಮುಟ್ಟುವ ಹೊತ್ತಿಗೆ ಶೃಂಗೇರಿ ಚೆನ್ನಿಗರಾಯರಿಗೆ ಹಳೆಯದಾಗಿತ್ತು. ಮಠ, ಉಗ್ರಾಣ, ಪಾಕಶಾಲೆ, ಊಟಕ್ಕೆ ಬಡಿಸುವ ಎಷ್ಟು ತೊಟ್ಟಿಗಳಿವೆ, ಒಂದೊಂದು ತೊಟ್ಟಿಯಲ್ಲೂ ಎಷ್ಟೆಷ್ಟು ಜನರು ಕೂರಬಹುದು, ಯಾವ ತೊಟ್ಟಿಗೆ ಬಡಿಸುವವರು ಬೇಗ ಬರುತ್ತಾರೆ, ಎಂಬುದೇ ಅಲ್ಲದೆ ಹೊಳೆಯ ಆಚೆಯ ನರಸಿಂಹವನ, ಕಾಲಭೈರವಗುಡ್ಡ, ಮೊದಲಾಗಿ ಎಲ್ಲವನ್ನೂ ತಿಳಿದು ಮುಗಿಸಿದ್ದರು. ಅವರು ಬಂದ ತಕ್ಷಣ ಛತ್ರದಲ್ಲಿ ಪ್ರತ್ಯೇಕ ಕೋಣೆಗೋಸ್ಕರ ಪ್ರಯತ್ನವೇನೋಪಟ್ಟರು. ಸಾವಿರ ಸಾವಿರ ಜನಗಳು ಬರುತ್ತಿದ್ದ ನವರಾತ್ರಿ ಕಾಲದಲ್ಲಿ ಎಂತೆಂತಹ ದೊಡ್ಡವರಿಗೇ ಜಾಗ ಸಿಕ್ಕದಿರುವಾಗ ಚೆನ್ನಿಗರಾಯರಿಗೆ ಸಿಕ್ಕುವುದು ಸಾಧ್ಯವಿರಲಿಲ್ಲ. ಪಾರುಪತ್ಯೆಗಾರರನ್ನು ಕಾಡಿ ಬೇಡಿದುದಕ್ಕೆ ಮಹಡಿ ಹತ್ತುವ ಮೆಟ್ಟಿಲಿನ ಕೆಳಗಿನ ಜಾಗವನ್ನು ಕೊಟ್ಟರು. ಹತ್ತಿ ಇಳಿಯುವವರ ದಢ ದಢ ಸದ್ದು ಇದ್ದರೂ ಅಷ್ಟಾದರೂ ಜಾಗ ಸಿಕ್ಕಿತು. ಛತ್ರದ ಕಾವಲುಗಾರ ಹತ್ತಿರವೇ ಇರುತ್ತಿದ್ದುದರಿಂದ ಅವರ ಪಂಚೆಯ ಗಂಟನ್ನು ನಿರ್ಭಯವಾಗಿ ಅಲ್ಲಿ ಇಟ್ಟು ಹೋಗಬಹುದಾಗಿತ್ತು.

ನಂಜಮ್ಮ ಬೆಳಗಿನ ಒಂಬತ್ತು ಗಂಟೆಯ ಶೃಂಗೇರಿ ತಲುಪಿದ ತಕ್ಷಣ ಪತಿದೇವರ ದರ್ಶನವಾಯಿತು. ಛತ್ರದಲ್ಲಿ ಅವರ ಜೊತೆಯೇ ತಮ್ಮ ಸಾಮಾನನ್ನೂ ಇಟ್ಟು, ವಿಶ್ವ ಅಪ್ಪಣ್ಣಯ್ಯರೊಡನೆ ಅವಳು ಮಠದ ಹತ್ತಿರಕ್ಕೆ ಬಂದಳು. ಹೊಳೆಯಲ್ಲಿ ಮಡಿ ಉಟ್ಟು ಒಗೆದ ಬಟ್ಟೆಗಳನ್ನು ಬಿಸಿಲಿನಲ್ಲಿ ಒಣಗಿಸಿಕೊಂಡು ಹೋಗಿ ದೇವಸ್ಥಾನಗಳನ್ನೆಲ್ಲ ನೋಡಿದಳು. ಕುಂಕುಮಾರ್ಚನೆಗೆ ಆಗಲೇ ಹೊತ್ತಾಗಿಹೋಗಿದ್ದುದರಿಂದ ನಾಳೆ ಬೆಳಿಗ್ಗೆ ಮಾಡಿಸಿದರಾಯಿತೆಂದು ತೀರ್ಮಾನಿಸಿದಳು. ಮಧ್ಯಾಹ್ನ ಊಟವಾದ ಮೇಲೆ ಇವರು ಮೂವರೂ ದೋಣಿಯಲ್ಲಿ ಕೂತು ಹೊಳೆದಾಟಿ ನರಸಿಂಹವನಕ್ಕೆ ಹೊರಟರೆ ಜೊತೆಗೆ ಚೆನ್ನಿಗರಾಯರೂ ಸೇರಿಕೊಂಡರು. 'ನಮ್ಮನ್ನ ಬಿಟ್ಟು ನೀನೊಬ್ನೇ ಮೋಟಾರಲ್ಲಿ ಬಂದೆಯಲ, ನೀನು ನಮ್ಮ ಜೊತೆ ಬರ್‌ಬ್ಯಾಡ'–ಎಂದು ವಿಶ್ವ ಅಪ್ಪನನ್ನು ದಬಾಯಿಸಿತು. ಅಪ್ಪಣ್ಣಯ್ಯನೂ ವಿಶ್ವನ ಜೊತೆ ಸೇರಿ ಮಾತನಾಡುತ್ತಿದ್ದ. ನಂಜಮ್ಮನೇ–'ಯಾರೂ ಒಂದು ಮಾತೂ ಆಡಬೇಡಿ. ವಿಶ್ವ, ನೀನು ಜಾಣನಲ್ಲ ನೋಡು' ಎಂದು ಗದ್ದರಿಸಿದಳು.

ನರಸಿಂಹವನಕ್ಕೆ ಹೋದರೆ ಅದೆಷ್ಟು ಗುಲಾಬಿ ಹೂವುಗಳು! ಇಷ್ಟೊಂದು ಗುಲಾಬಿಯ ಗಿಡಗಳನ್ನು ಇದುವರೆಗೆ ಮನಸ್ಸಿನಲ್ಲಿಯೂ ಕಲ್ಪಿಸಿಕೊಂಡಿರಲಿಲ್ಲ. ಭಕ್ತಾದಿಗಳು ಅವನ್ನು ಕೈತುಂಬ ಕುಯ್ದು ತೆಗೆದುಕೊಂಡು ಹೋಗಿ ಶಾರದಮ್ಮನವರಿಗೆ ಒಪ್ಪಿಸುತ್ತಾರಂತೆ. ಯಾರು ಬೇಕಾದರೂ ಕುಯ್ದು ಗುಡಿಗೆ ಒಯ್ಯಬಹುದು. ವಿಶ್ವ ಓಡಿಹೋಗಿ ಎರಡು ಹೂವು ಕುಯ್ದು, ಬೆರಳಿಗೆ ಮುಳ್ಳು ಚುಚ್ಚಿಕೊಂಡರೂ ಲೆಕ್ಕಿಸದೆ ತಂದು ಅಮ್ಮನಿಗೆ ಕೊಟ್ಟು, 'ನೀನು ಮುಡ್ಕಳಮ್ಮ'ಎಂದಿತು. 'ಇದು ನಾವು ಮುಡ್ಕಬಾರ್ದು ಮಗು. ದೇವರಿಗೆ'–ಎಂದು ಅವಳು ಅದನ್ನು ಕೈಲಿ ಹಿಡಿದುಕೊಂಡಳು. ತಕ್ಷಣ ಮಗಳ ನೆನಪಾಯಿತು. ಪಾರ್ವತಿಯದು ಒತ್ತಾಗಿ ಉದ್ದವಾದ ಕೂದಲು. ಬಾಚಿ ಹೆರಳು ಹಾಕಿದರಂತೂ ದೃಷ್ಟಿಯಾಗುವಷ್ಟು ದಪ್ಪನಾಗುತ್ತಿತ್ತು. ಸುರುಗಿ ಹೂವಿನ ಕಾಲದಲ್ಲಿ ರಾಮಣ್ಣ ನಸುಕಿನಲ್ಲಿಯೇ ಹೋಗಿ ಮರ ಹತ್ತಿ ಒಂದೊಂದು ಜೋಳಿಗೆ ಅರಳು ಮೊಗ್ಗು ತರುತ್ತಿದ್ದ. ಪಾರ್ವತಿ ಆಶೆಯಿಂದ ಅದನ್ನು ದಪ್ಪ ದಂಡೆಯಾಗಿ ಕಟ್ಟುತ್ತಿದ್ದಳು. ಅವಳು ಮೈನೆರೆದಮೇಲಂತೂ ಒಂದು ದಿನ ಹೆರಳು ಹಾಕಿ ಸುರಗಿ ದಂಡೆ ಮುಡಿಸಿದಾಗ ಎಷ್ಟು ಚೆನ್ನಾಗಿ ಕಾಣುತ್ತಿದ್ದಳೋ! ಅವನ ಸ್ಕೂಲಿನ ಕಾಂಪೌಂಡಿನಿಂದ ರಾಮಣ್ಣ ಒಂದು ದಿನ ಎರಡು ಗುಲಾಬಿ ಹೂವು ಕಿತ್ತು ತಂದಿದ್ದ. ಅದನ್ನು ಮುಡಿದರೂ ಚನ್ನಾಗಿ ಕಾಣುತ್ತಿದ್ದಳು. ಅಕ್ಕ ತಮ್ಮ ಅಂದರೆ ಒಬ್ಬರಿಗೊಬ್ಬರು ಅಷ್ಟು ಅಂತಃಕರಣ ಇಟ್ಟುಕೊಂಡಿದ್ದರು.

ಗುಲಾಬಿ ಹೂಗಳನ್ನು ನೋಡಿದ ನಂಜಮ್ಮನಿಗೆ ಮನಸ್ಸು ಮುದುಡಿಹೋದರೂ ಅವರೊಡನೆ ಅಲ್ಲೆಲ್ಲ ಸುತ್ತಿದಳು. ದೊಡ್ಡ ಗುರುಗಳು ತಪಸ್ಸು ಮಾಡುತ್ತಿದ್ದ ಗವಿ, ಭೈರವನ ಬೆಟ್ಟ, ಮೊದಲಾಗಿ ಚೆನ್ನಿಗರಾಯರು ಎಲ್ಲವನ್ನೂ ತಿಳಿಯ ಹೇಳಿದರು. ಹಿಂತಿರುಗುವಾಗ ಒಂದು ಒದ್ದೆ ಚೌಕದ ತುಂಬ ಗುಲಾಬಿ ಹೂವುಗಳನ್ನು ಕುಯ್ದು ತಂದು ಅವಳು ಅಮ್ಮನವರ ಗುಡಿಗೆ ಕೊಟ್ಟಳು.

ಮರುದಿನ ಬೆಳಿಗ್ಗೆ ಕುಂಕುಮಾರ್ಚನೆಗೆಂದು ಸ್ವಲ್ಪಮೊದಲೇ ಹೊರಟರು. ದೇವರ ಕೆಲಸವಾಗುವತನಕ ವಿಶ್ವನೂ ಉಪವಾಸವಿರಬೇಕು. ಆಗಲೇ ಬೆಳಿಗ್ಗೆ ಏಳೂವರೆ ಗಂಟೆಯ ಹೊತ್ತು. ಹೊರಗೆ ಹೋಗಿದ್ದ ಚೆನ್ನಿಗರಾಯರು ಛತ್ರಕ್ಕೆ ಹಿಂತಿರುಗಿದರು. ಪಂಚೆಯ ಸೆರಗಿನಲ್ಲಿ ದಪ್ಪನಾದ ಹದಿನೈದು ಇಪ್ಪತ್ತು ಹಾಗಲಕಾಯಿ ಇತ್ತು.

'ಇದುನ್ನ ಯಾಕೆ ತಂದ್ಯೊ?'–ಅಪ್ಪಣ್ಣಯ್ಯ ಕೇಳಿದ.

'ಒಳ್ಳೇ ಚನ್ನಾಗಿದೆ. ಒಂದೂವರೆ ಆಣೆಗೆ ಇಷ್ಟೊಂದು ಕೊಟ್ರು. ಇದರಲ್ಲಿ ಗೊಜ್ಜು ಮಾಡೇ'–ಅವರು

ಹೆಂದತಿಗೆ ಆಜ್ಞಾಪಿಸಿದರು.

'ನಿಮಗೇನು ಹುಡುಗಾಟವೇ? ನಾವೀಗ ದೇವಸ್ಥಾನಕ್ಕೆ ಹೊರಟಿದೀವಿ.'

'ಅಲ್ಲಿಂದ ಬಂದಮೇಲೆ ಮಾಡು. ನನ್ನ ಹತ್ರ ಇರೂ ಟಿಫನ್‌ಕ್ಯಾರಿಯರ್ನಲ್ಲಿ ತಗಂಡು ಹೋಗಿ ಅಲ್ಲಿ ಸಮಾರಾಧನೆ ಊಟದ ಜೊತೆಗೆ ಹಾಕ್ಕತ್ತೀನಿ. ಅವರು ಬಡಿಸೂ ಸಾರು ಹುಳಿ, ಉಪ್ಪು ಖಾರವಾಗಿರುಲ್ಲ.'

'ಸಾವಿರಾರು ಜನ ಊಟ ಮಾಡುತ್ತೆ. ನೀವು ಹೀಗೆ ತಗಂಡು ಹೋಗಿ ಮಧ್ಯೆ ಹಾಕ್ಕಂಡ್ರೆ ಯಾರಾದ್ರೂ ನಗುಲ್ವೆ?'

'ಅದ್ಯಾವ್‌ನು ನಗ್ತಾನೆ–ಅವನವ್ವನ.'

'ಪುಣ್ಯಕ್ಷೇತ್ರಕ್ಕೆ ಬಂದಿದೀರಿ. ಕೆಟ್ಟ ಮಾತ್ಯಾಕಾಡ್ತೀರಿ?'

ಅಪ್ಪಣ್ಣಯ್ಯ ಅಂದ: 'ಇಲ್ಲಿ ವಲೆ ಎಲ್ಲಿದೆ, ಅದಕ್ಕೆ ಅರೆಯೂದೆಲ್ಲಿ ತಿರುವೂದೆಲ್ಲಿ? ಹಾಗಲಕಾಯಿ ಗೊಜ್ಜು ನೀನು ಇಲ್ಲೇ ಬಯಸಬೇಕೇನೋ?'

'ಛತ್ರದಲ್ಲಿ ಒರಳುಕಲ್ಲಿದೆ. ಇಲ್ಲೇ ಮೂರು ಇಟ್ಟಿಗೆ ಇಟ್ಕಂಡ್ರೆ ಆಗುತ್ತೆ. ಕಾವಲುಗಾರುಂಗೆ ಕೇಳಿದ್ರೆ ಒಂದೆರಡು ಸೌದೆ ಕೊಡ್ತಾನೆ.'

'ಅಮ್ಮ, ಅಲ್ಲಿ ಮಾಡ್‌ಬ್ಯಾಡ ಕಣಮ್ಮ'–ವಿಶ್ವ ಹೇಳಿತು.

'ಮುಂಡ್ಯೇತ್ತುದ್ದೇ, ಹಾಗಂತ ಹೇಳ್ಕೊಡ್ತೀ ಏನೋ ನಿನ್ನವ್ವನ......'

ಛತ್ರದ ಕಾವಲುಗಾರನಿಗೆ ಇದು ಕೇಳಿತು. 'ಇಲ್ಲಿ ಕೆಟ್ಟ ಮಾತಾಡಕೂಡ್ದು ಕಣ್ರೀ. ಪಾರುಪತ್ತೆಗಾರ್ರಿಗೆ ಗೊತ್ತಾದ್ರೆ ಓಡಿಸಿಬಿಡ್ತಾರೆ'– ಎಂದು ಅವನು ಎಚ್ಚರಿಕೆಯಿತ್ತ. ಅಲ್ಲಿ ಇಟ್ಟಿಗೆ ಹೂಡಿ ಸೌದೆ ಗಲೀಜು ಮಾಡಕೂಡದೆಂದೂ ಹೇಳಿದ. ಚೆನ್ನಿಗರಾಯರಿಗೆ ನಿರಾಶೆಯಾಯಿತು. ಹಾಗಲಕಾಯಿ ಗೊಜ್ಜು ಎಂದರೆ ಅವರಿಗೆ ಅಷ್ಟೊಂದು ಪ್ರೀತಿ. ರಾಮಸಂದ್ರದಲ್ಲಿ ಇಂಥಾ ಒಳ್ಳೆಯ ಹಾಗಲಕಾಯಿ ಸಿಕ್ಕುವುದಿಲ್ಲ. ಇಲ್ಲಿ ಸಿಕ್ಕಿದರೂ ಪ್ರಯೋಜನವಾಗಲಿಲ್ಲ. 'ಹಾಳು ಪಾರುಪತ್ತೆಗಾರನ'– ಎಂದು ಬೈದುಕೊಂಡು ಸುಮ್ಮನಾದರು. ಕುಂಕುಮಾರ್ಚನೆ ಮಾಡಿಸುವಾಗ ನಂಜಮ್ಮನಿಗೆ ಒಂದು ತೆರನಾದ ಮನಶ್ಶಾಂತಿ ಸಿಕ್ಕಿತು. ಶಾರದಮ್ಮನವರನ್ನು ಅವಳು ಇದುವರೆಗೂ ಪಟದಲ್ಲಿ ನೋಡಿದ್ದಳು. ನೆನ್ನೆ ಮಧ್ಯಾಹ್ನ ಬಂದ ತಕ್ಷಣ ಇಲ್ಲಿಗೆ ಬಂದು ನೋಡಿದ್ದಳು. ಆಗ ಇನ್ನೂ ಅಲಂಕಾರ ಮಾಡಿರಲಿಲ್ಲ. ಈಗ ಅದೆಷ್ಟೋ ಜನ ಭಕ್ತರು ಒಟ್ಟಿಗೆ ಕುಂಕುಮಾರ್ಚನೆ ಮಾಡಿಸುತ್ತಿದ್ದಾರೆ. ಅಮ್ಮನವರು ಅಂದರೆ ಅದೇನು ಕಳೆ, ಅದೇನು ಗಂಭೀರ. ರಾಮಸಂದ್ರದ ಕಾಳಮ್ಮನ ಮುಖ ನೋಡಿದರೆ ಹೆದರಿಕೆಯಾಗುತ್ತೆ. ಆದರೆ ಶಾರದಮ್ಮನವರ ಮುಖ ನೋಡಿದರೆ ಎಂಥ ಹೆದರಿಕೆಯೂ ಹೋಗುತ್ತೆ. ಅಮ್ಮನವರ ಕೃಪೆಯಿಂದಲೇ ವಿಶ್ವ ಉಳಿದುಕೊಂಡದ್ದು. ಇನ್ನು ಮೇಲೆ ಕಷ್ಟ ಸುಖ ಜಡ್ಡು ಜಾಪತ್ತು ಏನಿದ್ದರೂ ಇವರೊಬ್ಬರಿಗೇ ಹರಕೆ ಕಟ್ಟಬೇಕು. ಉಳಿದ ಯಾವ ದೇವರೂ ಬೇಡ–ಎಂದು ತೀರ್ಮಾನಿಸಿದ ಅವಳು ವಿಶ್ವನನ್ನು ಮೂರು ಬಾರಿ ಅಡ್ಡಗೆಡವಿ ತಾನೂ ಪ್ರದಕ್ಷಿಣೆ ನಮಸ್ಕಾರ ಮಾಡಿದಳು. ಹರಕೆಯ ಹಣ ನಾಲ್ಕು ಆಣೆಯ ಪಾವಲಿಯನ್ನೂ ಡಬ್ಬಿಗಡಿಗೆಗೆ ಹಾಕಿ, ಅವರು ಕೊಟ್ಟ ಪ್ರಸಾದದ ಕುಂಕುಮವನ್ನು ಇಸಿದುಕೊಂಡಳು. ಅಪ್ಪಣ್ಣಯ್ಯನೂ ಭಕ್ತಿಯಿಂದ ಪ್ರದಕ್ಷಿಣೆ ನಮಸ್ಕಾರ ಹಾಕಿದ.

ಮರುದಿನ ಇವರು ಎದ್ದು ಶೌಚ ಮುಗಿಸಿದ್ದರು. ಬೆಳಿಗ್ಗೆ ಏಳು ಗಂಟೆಯ ಸಮಯವಾಗಿತ್ತು. ಸ್ನಾನಕ್ಕೆ ಹೊಳೆಗೆ ಹೋಗಬೇಕು. ವಿಶ್ವ ಛತ್ರದ ಹೊರಗೆ ಎಲ್ಲೋ ಇರಬೇಕು. ಅವನನ್ನು ನೋಡಿದರೆ ಇಲ್ಲ. ಚೆನ್ನಿಗರಾಯರೇನೋ ಹೊಳೆಯ ಕಡೆ ಹೋಗುತ್ತೇನೆಂದು ಹೇಳಿ ಹೋಗುತ್ತಾರೆ; ಹಿಂತಿರುಗುವ ಹೊತ್ತು ಗೊತ್ತಿಲ್ಲ. ಅವರನ್ನು ಕಾಯುವ ಅಗತ್ಯವು ಇಲ್ಲ. ಜನಗಂಗುಳಿಯಲ್ಲಿ ಈ ಹುಡುಗ ಎಲ್ಲಿ ಹೋಯಿತೋ ಎಂದು ನಂಜಮ್ಮ ಅಪ್ಪಣ್ಣಯ್ಯ ಇಬ್ಬರೂ ಯೋಚಿಸುತ್ತಿರುವಷ್ಟರಲ್ಲಿ ಅವನೇ ಅಳುತ್ತಾ ಬಂದು ಅಮ್ಮನ ಸೆರಗು ಹಿಡಿದು–'ನಂಗೆ ದ್ವಾಸೆ ಕೊಡ್ಸು ಬಾ'–ಎಂದು ಜಗ್ಗಿದ.

'ಮಡಿ ಉಟ್ಕಂಡಮೇಲೆ ಹುರಿಟ್ಟುಕಲಸಿಕೊಡ್ತೀನಿ ಮರಿ' – ಎಂದರೆ, 'ಹ್ಞೂ, ಅಣ್ಣ ದ್ವಾಸೆ ತಿಂತಿದಾನೆ. ನಂಗೂ ಕೊಡ್ಸು' ಎಂದು ಹಟ ಮಾಡಿದ.

'ಈಗ ನೀನೆಲ್ಲಿಗೆ ಹೋಗಿದ್ಯೋ?'–ಅಪ್ಪಣ್ಣಯ್ಯ ಕೇಳಿದ.

''ಅಣ್ಣ ಒಬ್ನೇ ಹೋಟ್ಳಿಗೆ ಹೋಗ್ತಿದ್ದ. ನಾನೂ ಹಿಂದ್‌ಗಡೆ ಹೋದೆ. ಅವ್ನು ಕೂತ್ಕೊಂಡು, ಎರಡು ದ್ವಾಸೆ ಕೊಡಿ ಅಂತ ಕೇಳ್ದ. ಆಮ್ಯಾಲೆ ನನ್ನ ನೋಡಿ, 'ನೀನ್ಯಾಕೆ ಬಂದ್ಯೋ?' ಎಂದ. 'ನಂಗೂ ದ್ವಾಸೆ ಕೊಡ್ಸು' ಅಂದೆ. 'ನನ್ಹತ್ರ ದುಡ್ಡಿಲ್ಲ, ನಿಮ್ಮಮ್ಮನ್ನ ಕೈಲಿ ಹುರಿಟ್ಟು ಇಸ್ಕಂಡ್ ತಿನ್ಹೋಗು' ಅಂದ. 'ನಂಗೆ ದ್ವಾಸೆ ಕೊಡುಸ್ದೇ ಇರು, ಆಗಲ್ಲ' ಅಂತ ನಾನೂ–'ನಂಗೂ ದ್ವಾಸೆ ಕೊಡ್ರೀ' ಅಂತ ಹೋಟ್ಳುನೋರುನ್ನ ಕೇಳ್ದೆ. ಅದುಕ್ಕೆ, 'ಇದ್ಯಾವುದೋ ಹುಡ್ಗ ಕೇಳ್ತಿದೆ. ಆಮ್ಯಾಲೆ ನನ್ನ ದುಡ್ಡು ಕೇಳ್‌ಬ್ಯಾಡಿ ಕಣ್ರೀ' ಅಂತ ಅಣ್ಣ ಅಂದ. ಹೋಟ್ಳುನೋರು ನನ್ನ ಗದರಿಸ್ಕಂಡ್ ಓಡುಸ್‌ಬಿಟ್ರು.''

'ಇಲ್ಲಿ ಅವಲಕ್ಕಿ ಹುರಿಟ್ಟಿನ ಪಾಲಿಗೂ ಬತ್ತಾನೆ. ಅಲ್ಲಿ ಕದ್ದು ಹೋಟ್ಳಿಗೂ ಹೋಗ್ತಾನೆ. ನೋಡಿದ್ರಾ ಆ ಕಳ್ಳ

ಲೌಡಿಮಗುನ್ನ'– ಅಪ್ಪಣ್ಣಯ್ಯ ಎಂದ.
'ಏನಾದ್ರೂ ಆಕ್ಕಳ್ಳಿ. ನೀವು ಮಾತಾಡ್‌ಬ್ಯಾಡಿ. ಮಗೂನ ಕರ್ಕಂಡ್ ಹೋಗಿ ಒಂದಾಣಿ ದೋಸೆ ಕೊಡ್ಸಿ.'
ಅಮ್ಮ ಒಂದಾಣಿ ಕೊಟ್ಟಳು. ಚಿಕ್ಕಪ್ಪ ಹೋಗಿ ತಿನ್ನಿಸಿಕೊಂಡು ಬಂದ. ಆಮೇಲೆ ಇವರು ಮೂವರೂ ಸ್ನಾನಕ್ಕೆ ಹೊಳೆಗೆ ಹೋದರು. ಮೀನುಗಳಿರುವ ಕಡೆ ಸ್ನಾನ ಮಾಡಬೇಕೆಂದು ವಿಶ್ವನಿಗೆ ಆಶೆ. ಅಷ್ಟು ದಪ್ಪದ ಮೀನುಗಳನ್ನು ಅವನಾಗಲಿ ಅವನ ಅಮ್ಮನಾಗಲಿ ನೋಡಿರಲಿಲ್ಲ. ಅಂಥದನ್ನು ರಾಮನಾಥಪುರದಲ್ಲಿ ತಾನು ನೋಡಿರುವುದಾಗಿ ಅಪ್ಪಣ್ಣಯ್ಯ ಎಂದ. ಏನಾದರೂ ತಿಂಡಿ ಎರಚಿದರೆ ಮೀನುಗಳು ದಂಡು ಕಟ್ಟಿಕೊಂಡು ಬರುತ್ತಿದ್ದ ರಭಸವನ್ನು ಎಷ್ಟು ನೋಡಿದರೂ ವಿಶ್ವನಿಗೆ ತೃಪ್ತಿಯಿಲ್ಲ. ತನ್ನ ಚಡ್ಡೀಜೇಬಿಗೆ ಹಾಕಿಸಿಕೊಂಡಿದ್ದ ಅವಲಕ್ಕಿಯನ್ನೆಲ್ಲ ಅವನು ಮೀನುಗಳಿಗೇ ಎರಚಿದ.
ಸ್ನಾನಘಟ್ಟದಿಂದ ಸ್ವಲ್ಪ ಮೇಲ್ಭಾಗದ ಮರಗಳ ಹತ್ತಿರ ಹೋಗಿ ಮೊದಲು ನಂಜಮ್ಮ ಸ್ನಾನ ಮಾಡಿ ಬಟ್ಟೆ ಒಗೆದಳು. ನಂತರ ವಿಶ್ವನ ಜೊತೆಗೆ ಅಪ್ಪಣ್ಣಯ್ಯ ಇಳಿದ. ಆದರೆ ಅದಾವ ಮಾಯದಲ್ಲೋ ವಿಶ್ವ ಅವರಿಬ್ಬರ ಕಣ್ಣನ್ನೂ ತಪ್ಪಿಸಿಬಿಟ್ಟಿದ್ದ. ಎರಡೇ ನಿಮಿಷದಲ್ಲಿ ಅವನು ಸೆಳೆತಕ್ಕೆ ಸಿಕ್ಕಿ ಕೆಳಭಾಗಕ್ಕೆ ಹೋಗುತ್ತಿದ್ದ. ಆದರೆ ಈಜು ಬಲ್ಲವನಾದುದರಿಂದ ನೀರಿನಲ್ಲಿ ಮುಳುಗಿರಲಿಲ್ಲ. 'ಮಗು ಮುಳಿಕ್ಕಳ್ತಿದೆ ಹಿಡ್ಕಳ್ರಪ್ಪಾ'–ನಂಜಮ್ಮ ಉಸಿರು ಕಟ್ಟಿದಂತೆ ಕೂಗಿದಳು. ಹಿಂದೆಯೇ ಅಪ್ಪಣ್ಣಯ್ಯ ಈಜುಬಿದ್ದು ನುಗ್ಗಿದ. ಆದರೆ ಅಷ್ಟರಲ್ಲಿ ವಿಶ್ವ ಎಷ್ಟೋ ಮುಂದೆ ಹೋಗಿಬಿಟ್ಟಿದ್ದ. ಒಂದೇ ಉಸಿರಿಗೆ ಕೈ ಬಗೆದು ಮುಂದೆ ಸಾಗಿದ ಅಪ್ಪಣ್ಣಯ್ಯ ವಿಶ್ವನನ್ನು ಹಿಡಿದ. ವಿಶ್ವನೂ ಕೈ ಬಗೆಯುತ್ತಿದ್ದ. ಅಂತೂ ಇಬ್ಬರೂ ದಡ ಮುಟ್ಟಿದರು. ನಂಜಮ್ಮನ ಹೋದ ಜೀವ ಬಂತು. ದಡದಲ್ಲಿಯೇ ಓಡಿ, ಅವರು ಬರುವ ಜಾಗಕ್ಕೆ ಬಂದಳು. ಅಷ್ಟರಲ್ಲಿ ಈ ದೃಶ್ಯವನ್ನು ಕಂಡ ಎಷ್ಟೋ ಜನ ಗುಂಪುಗಟ್ಟಿದರು.
ದಡ ಮುಟ್ಟಿದ ವಿಶ್ವ–'ಅಮ್ಮ, ಕೆರೇಲಾದ್ರೆ ಹ್ಯಾಗೆ ಬೇಕಾದ್ರೂ ಈಜಾಡ್‌ಭೌದು. ಹ್ವಳೇಲಿ ಎತ್ತೆತ್ಲಗೋ ಯಳ್ಕಂಡ್ ಹೋಗಿಬಿಡುತ್ತೆ' ಎಂದ.
ಅವಳಿಗೆ ತಡೆಯಲಾರದಷ್ಟು ಸಿಟ್ಟು ಬಂತು. ಹಿಡಕಂಡು ಬೆನ್ನಿನ ಮೇಲೆ ಬಲವಾಗಿ ನಾಲ್ಕು ಬಾರಿಸಿದಳು.
'ನಂಗೆ ಈಜಾಡಬೇಕು ಅನ್ನಿಸ್ತು, ಬಿದ್ದೆ'–ಎಂದು ಅವನು, ತನ್ನನ್ನು ತಾನು ಸಮರ್ಥಿಸಿಕೊಂಡ.
'ಇನ್ನೂ ಕೈಳಗಡೆ ಹ್ವಾಗಿದ್ರೆ ಸುಳಿಗೆ ಸಿಕ್‌ಹಾಕ್ಕಬೇಕಾಗಿತ್ತು'–ಹತ್ತಿರದಲ್ಲಿಯೇ ಇದ್ದ ಒಬ್ಬರು ಎಂದರು.
ಅವರು ಶೃಂಗೇರಿಯಲ್ಲಿ ಒಟ್ಟು ಆರು ದಿನ ಇದ್ದರು. ದಿನವೂ ಬೆಳಿಗ್ಗೆ ಅಮ್ಮನವರಿಗೆ ಕುಂಕುಮಾರ್ಚನೆಯಾಗುವುದರಿಂದ ಹಿಡಿದು ರಾತ್ರಿ ಸ್ವಾಮಿಗಳು ಸಿಂಹಾಸನ ಏರುವ ತನಕ ನೋಡಿದರು. ಚಂಡೀ ಹೋಮವಾದ ಮರುದಿನವೇ ಊರಿಗೆ ಹೊರಟರು. 'ಇರೂ ದುಡ್ಡು ಲೆಕ್ಕ ಹಾಕಿ. ತಿಪಟೂರು ತನಕ ರೈಲು ಚಾರ್ಜು ಆದರೆ ಸಾಕು. ದುಡ್ಡಿದ್ದರೆ ಚೆನ್ನಯ್ಯನ ಜೊತೆ ನೀವು ವಿಶ್ವ ಮೋಟಾರಲ್ಲಿ ನಾಡಿದ್ದು ಬನ್ನಿ. ನಾನು ಇವತ್ತೇ ಹೊರಟು ನರಸಿಂಹರಾಜಪುರಕ್ಕೆ ನಡಕಂಡು ಬರ್ತೀನಿ'–ಎಂದು ಅಪ್ಪಣ್ಣಯ್ಯ ಹೇಳಿದ. ಹಾಗೆ ಮಾಡಿದ್ದರೂ ಆಗುತ್ತಿತ್ತು. ಬಸ್ಸಿಗೆ ಮೂರು ರೂಪಾಯಿ ಖರ್ಚು ಮಾಡಿದರೆ, ದಾರಿಯಲ್ಲಿ ವಿಶ್ವ ಏನಾದರೂ ಕೇಳಿದರೆ ಕೊಡಿಸಲು ಚಿಲ್ಲರೆ ಕಾಸಿಗೆ ಸೊನ್ನೆ ಬೀಳುತ್ತಿತ್ತು. ಅಲ್ಲದೆ ಅಂತಹ ಕಾಡನ್ನು ಮತ್ತೆ ನೋಡುವೆನೋ ಇಲ್ಲವೋ! ತನಗೇ ತಿಳಿಯದಂತೆ ಅವಳು ಕಾಡನ್ನು ಅಷ್ಟೊಂದು ಪ್ರೀತಿಸತೊಡಗಿದ್ದಳು. ಕಾಲು ನೋಯ್ದರೂ ನಡೆಯುವುದಕ್ಕೆ ವಿಶ್ವನೇನೂ ಹೆದರುವವನಲ್ಲ. ಸರಿ, ಮೂವರೂ ನಡದೇ ಹೊರಟರು. ಗಂಟನ್ನು ಅಪ್ಪಣ್ಣಯ್ಯ ಹೊತ್ತ. ತಾನು ಕೊಂಡಿದ್ದ ಶಾರದಮ್ಮನವರ ಮೂರು ಪಟಗಳನ್ನು ಸುತ್ತಿ ಅವಳು ಕೈಲಿ ಹಿಡಿದುಕೊಂಡಳು.
ದಾರಿಯಲ್ಲಿ ನಂಜಮ್ಮನ ಮನಸ್ಸು ಪ್ರಸನ್ನವಾಗಿತ್ತು. ತನ್ನ ಇಬ್ಬರು ಮಕ್ಕಳೂ ಸಾಯುವುದು ದೇವರ ಇಚ್ಛೆಯಾಗಿತ್ತೇನೋ! ದೇವರ ಇಚ್ಛೆ ತಪ್ಪಿಸುವುದು ಯಾರಿಗೆ ಸಾಧ್ಯ? ಎಂಬ ಭಾವ ಅವಳಲ್ಲಿ ಬರುತ್ತಿತ್ತು. ವಿಶ್ವ ಹೊಳೆಯಲ್ಲಿ ಸೆಳೆಯಲ್ಪಟ್ಟು ಬದುಕಿ ಬಂದಿದ್ದಾನೆ. ಅವನಿಗೆ ಕಂಟಕವಿತ್ತೇನೋ; ಕಳೆದಂತೆ ಆಗಿದೆ. ಊರಿಗೆ ಹೋದಮೇಲೆ ತನ್ನ ಅಪ್ಪನಿಗೆ ಹೇಳಿಕಳಿಸಿ ಸರಿಯಾಗಿ ವಿಶ್ವನ ಜನ್ಮಭವಿಷ್ಯ ಬರೆಸಬೇಕು ಎಂದು ಯೋಚಿಸುತ್ತಿದ್ದಳು. ಅಪ್ಪಣ್ಣಯ್ಯ ಯಾಕೋ ತುಂಬ ಮಂಕಾಗಿದ್ದ. ಶೃಂಗೇರಿಯಲ್ಲಿ ಸಹ ಅದೇನೋ ಯೋಚಿಸುವವನಂತೆ ಮೌನಿಯಾಗಿದ್ದ. ಅವನು ಹೀಗೆ ತನ್ನ ಜೊತೆ ಇದ್ದುದೇ ಇಲ್ಲ. ಸದಾ ಅವರಮ್ಮನ ಜೊತೆ ಇರುತ್ತಿದ್ದ; ದೇಶಾವರಿ ಸಂಚಾರ ಮಾಡುತ್ತಿದ್ದ. ಸಂಕೋಚದಿಂದ ಹೀಗಿರಬಹುದೆಂದು ನಂಜಮ್ಮ ಸುಮ್ಮನಿದ್ದುಬಿಟ್ಟಳು.
ನರಸಿಂಹರಾಜಪುರಕ್ಕೆ ಬಂದು ಅನ್ನ ಮಾಡಿ ಹೋಟೆಲಿನಿಂದ ಹುಳಿ ತಂದು ಊಟ ಮುಗಿಸುವ ಹೊತ್ತಿಗೆ ನಾಡಿದ್ದು ಮಧ್ಯಾಹ್ನ ಒಂದು ಗಂಟೆಯಾಗಿತ್ತು. ಉಳಿದಿದ್ದ ಅನ್ನವನ್ನು ಪಾತ್ರೆಯಲ್ಲಿ ಹಾಕಿ ಕಟ್ಟಿ ಇಟ್ಟಿದ್ದರು. ಅಷ್ಟರಲ್ಲಿ ಚೆನ್ನಿಗರಾಯರ ಮೋಟಾರು ಬಂತು. ವಿಶ್ವ ಅಪ್ಪನ ಮುಖ ಕಂಡ ತಕ್ಷಣ–'ಅಮ್ಮ, ಅನ್ನಾನ ಅಪ್ಪಿಗೆ ಕೊಡ್‌ಕೂಡ್ದು. ಅವ್ನ್ಯಾಕೆ ನಂಗೆ ದ್ವಾಸೆ ಕೊಡುಸ್ದೆ ಒಬ್ನೇ ತಿಂದ–' ಎಂದ. ಆ ಮಾತು ಇನ್ನಾರಿಗಾದರೂ ಕೇಳಿದರೆ ಏನೆಂದುಕೊಂಡಾರು ಎಂಬ ಅಂಜಿಕೆ ಅಮ್ಮನಿಗೆ. ಅವರ ರೈಲಿಗೆ ಇನ್ನೂ ಹೊತ್ತಿತ್ತು. ಇವರ

ಅನ್ನವನ್ನು ಚೆನ್ನಿಗರಾಯರೇನೂ ಕೇಳಲಿಲ್ಲ. ಸ್ಟೇಷನ್ ಹತ್ತಿರ ಹೋಟೆಲಿನಲ್ಲಿ ಊಟವಿತ್ತು.
ರಾತ್ರಿ ತರೀಕೆರೆಯಲ್ಲಿ ನಾಲ್ಕೂ ಜನರೂ ಮಲಗಿದರು. ಮರುಬೆಳಿಗ್ಗೆ ಒಂಬತ್ತು ಗಂಟೆಯ ಹೊತ್ತಿಗೆ ರೈಲು ಬರುವ ಮುಂಚೆ ನಂಜಮ್ಮ ಅನ್ನ ಮಾಡಿದಳು. ಅಪ್ಪಣ್ಣಯ್ಯ ಹುಳಿ ತಂದ. ಚೆನ್ನಿಗರಾಯರು ಈಗಲೂ ಇವರ ಜೊತೆ ಊಟ ಮಾಡಲಿಲ್ಲ.
ಆ ಬೆಳಿಗ್ಗೆಯಿಂದಲೂ ಅಪ್ಪಣ್ಣಯ್ಯ ಹೆಚ್ಚು ಮಂಕಾಗಿದ್ದ. ರೈಲು ಹತ್ತಿದ ಮೇಲೂ ಸಪ್ಪಗೆ ಕುಳಿತಿದ್ದ. ಅವನ ಅಣ್ಣನೇ ಕೊಡಲು ಬಂದರೂ ಒಂದು ಸಲ ಹೊಗೆಸೊಪ್ಪು ಸಹ ಹಾಕಿಕೊಳ್ಳಲಿಲ್ಲ. ಬೀರೂರಿನಲ್ಲಿ ಗಾಡಿ ಬದಲಾಯಿಸಿದಮೇಲೆ ಅವನ ಮುಖದಾಲ್ಲಿ ಇನ್ನೂ ಚಿಂತೆ ಕಾಣುತ್ತಿತ್ತು. ಯಾಕೆ ಎಂದು ಮಾತನಾಡಿಸಬೇಕೆಂದು ನಂಜಮ್ಮನಿಗೆ ಎನ್ನಿಸಿದರೂ ಗಂಡನ ಎದುರಿಗೆ ಕೇಳಬಾರದೆಂದು ಸುಮ್ಮನಾದಳು. ಕಡೂರು ಸ್ಟೇಷನ್ನಿನಲ್ಲಿ ನೀರು ತುಂಬಿಕೊಳ್ಳಲು ಗಾಡಿ ತುಂಬ ಹೊತ್ತು ನಿಲ್ಲುತ್ತದೆಂದು ಅಕ್ಕಪಕ್ಕದವರು ಹೇಳಿದರು. ವಡೆ ಬೋಂಡ ಹುಡುಕಿಕೊಂಡು ಚೆನ್ನಿಗರಾಯರು ಕೆಳಗೆ ಇಳಿದರು. ಅಪ್ಪಣ್ಣಯ್ಯ ಅತ್ತಿಗೆಗೆ ಹೇಳಿದ: 'ತಿಪಟೂರಿನಿಂದ ನೀವು ವಿಶ್ವ ಮೋಟಾರಲ್ಲಿ ಹೋಗೂವಷ್ಟು ದುಡ್ಡಿದೆಯೆ?'
'ಯಾಕೆ?'
'ನೀವು ಹೋಗಿ. ನಾನು ಇಲ್ಲೇ ನುಗ್ಗೀಕೆರೆಗೆ ಹೋಗಿಬತ್ತೀನಿ.'
ಅನಿರೀಕ್ಷಿತವಾದರೂ ನಂಜಮ್ಮನಿಗೆ ಈ ಮಾತಿನಿಂದ ಸಂತೋಷವಾಯಿತು. ಇನ್ನಿಲ್ಲದ ರೀತಿಯಲ್ಲಿ ಹೊಡೆದು ಬಡಿದು, ಹೆಂಡತಿಯ ಮಾಂಗಲ್ಯ ಕಿತ್ತುಕೊಂಡು ಇಷ್ಟು ವರ್ಷಗಳಾಗಿವೆ. ಈಗ ಇವನು ಹೋದರೆ ಅವರು ಮಾತನಾಡಿಸುತ್ತಾರೆಯೋ ಇಲ್ಲವೋ? ಏನೋ ಅವ್ವನ ಮಾತು ಕೇಳಿಕೊಂಡು ಅಪ್ಪಣ್ಣಯ್ಯ ಹಾಗೆ ಮಾಡಿದ. ಈಗಲಾದರೂ ಸಂಸಾರ ಒಂದಾದರೆ ಚನ್ನ– ಎಂದು ಅವಳು ಯೋಚಿಸುತ್ತಿರುವಾಗ ಅವನೇ,
'ಹುಡುಗ್ರನ್ನಾದ್ರೂ ನೋಡಬೇಕು ಅನ್ನುಸ್ತಿದೆ' ಎಂದ.
ನಂಜಮ್ಮ ದುಡ್ಡು ಎಣಿಸಿ ನೋಡಿದಳು. ಒಟ್ಟು ಎರಡು ರೂಪಾಯಿ, ಎರಡೂವರೆ ಆಣೆ ಇತ್ತು. ತನಗೆ ವಿಶ್ವನಿಗೆ ಮೋಟಾರಿನಲ್ಲಿ ಒಟ್ಟು ಹನ್ನೆರಡಾಣೆ ಸಾಕು. ಒಂದು ರೂಪಾಯಿ ತೆಗೆದು ಅಪ್ಪಣ್ಣಯ್ಯನ ಕೈಗೆ ಕೊಟ್ಟು –'ಹೋಗಿ ನೋಡ್ಕಂಡು ಬನ್ನಿ. ಜಯಲಕ್ಷ್ಮಿಗೆ ಈಗ ಮದುವೆಯ ವಯಸ್ಸು. ತಂದೆ ಅನ್ನಿಸ್ಕೊಂಡೋರು ಮಕ್ಕಳ ನಿಗಾ ನೋಡ್ದೆ ಇದ್ರೆ ಯಾರು ನೋಡಬೇಕು? ರಾಮಕೃಷ್ಣ ಸ್ಕೂಲಿಗೆ ಹೋಗ್ತಾ ಇದಾನೋ ಅಥವಾ ಬರೀ ದಾನದ ಹಳ್ಳಿ ಸುತ್‌ತಾ ಇದಾನೋ! ನೋಡ್ಕಂಡು ಬನ್ನಿ' ಎಂದಳು.
ಗೋಣೀಚೀಲದ ಗಂಟು ಬಿಚ್ಚಿ ಅಪ್ಪಣ್ಣಯ್ಯ ತನ್ನ ಅಂಗಿ ಪಂಚೆಗಳನ್ನು ತೆಗೆದುಕೊಳ್ಳುವಾಗ ಚೆನ್ನಿಗರಾಯರು ಹಿಂತಿರುಗಿದರು. 'ಎಲ್ಲಿಗ್ಹೋಗ್ತಿಯೋ?'–ಅವರು ಕೇಳಿದರು. 'ನುಗ್ಗೀಕೆರೆಗೆ'–ಎಂದು ಅವನು ಏನೂ ಯೋಚಿಸದೆ ಹೇಳಿಬಿಟ್ಟ. ಆದರೆ ಅದನ್ನು ಹೇಳಬಾರದಾಗಿತ್ತೆಂಬ ಅರಿವು ಅವನಿಗೆ ಬರುವ ಮೊದಲೇ ಶ್ಯಾನುಭೋಗರು–'ಬಿಟ್ಟ ಹೆಂಡ್ತಿ ನೋಡುಕ್ಕೆ ಹೊರಟೆ ಏನೋ ಕೆಟ್ಟರಾಮ?' ಎಂದು ಕೇಳಿದರು. ಅಷ್ಟರಲ್ಲಿ ರೈಲು ಹೊರಟಿತು. ಅಪ್ಪಣ್ಣಯ್ಯ ಉತ್ತರ ಕೊಡಲಿಲ್ಲ. ಬೇಗ ಬೇಗ ಇಳಿದ.
ಮಧ್ಯಾಹ್ನ ಮೂರು ಗಂಟೆಗೆ ತಿಪಟೂರು ಮುಟ್ಟಿದ ಅವರು ಸಂಜೆ ಆರರ ಹೊತ್ತಿಗೆ ಊರು ಸೇರಿದರು. ರಾತ್ರಿಗೆ ಸ್ವಲ್ಪ ಅನ್ನವಿತ್ತು. ಅವಳು ಮತ್ತೆ ಅಡಿಗೆ ಮಾಡಲಿಲ್ಲ. ಅಮ್ಮನವರ ಪ್ರಸಾದ ಮತ್ತು ಪಟವನ್ನು ಕೊಟ್ಟುಬರಲು ಆಗಲೇ ಮೇಷ್ಟರ ಮನೆಗೆ ಹೋದಳು.
ಶೃಂಗೇರಿಯಿಂದ ತಂದ ಮನಶ್ಶಾಂತಿಯನ್ನು ಅವಳು ಉಳಿಸಿಕೊಳ್ಳುವುದು ಕಷ್ಟವಾಯಿತು. ಅಪ್ಪಣ್ಣಯ್ಯ ಹೆಂಡತಿಯ ಊರಿಗೆ ಹೋದ ಸಂಗತಿಯನ್ನು ಚೆನ್ನಿಗರಾಯರಿಂದ ತಿಳಿದ ಗಂಗಮ್ಮ ಮರುದಿನ ಮಧ್ಯಾಹ್ನ ಬಂದು– 'ಮತ್ತೆ ಅವರಿಬ್ಬರಿಗೂ ಪ್ರಸ್ತ ಮಾಡಿಸ್ಬೇಕು ಅಂತ ಕಳುಸ್ದೆ ಏನೇ ತಲೆಹಿಡುಕ ಮುಂಡೆ?' ಎಂದು ಎರಡು ಗಂಟೆ ನಡುಬೀದಿಯಲ್ಲಿ ನಿಂತು ಬೈದಳು. ನಂಜಮ್ಮ ಮಾತಿಗೆ ಹೋಗಲಿಲ್ಲ. ಅಜ್ಜಿಯನ್ನು ದಬಾಯಿಸುತ್ತೇನೆಂದು ಹೊರಟ ವಿಶ್ವನನ್ನು ಹಿಡಿದು ಒಳಗೆ ಕೂರಿಸಿದಳು. ಅತ್ತೆ ಸಹಸ್ರನಾಮ ಮುಗಿಸಿ ಹೋದಮೇಲೆ ಒಂದು ಪ್ರಶ್ನೆ ಅವಳ ಮನಸ್ಸನ್ನು ಕಾಡುತ್ತಿತ್ತು; ನಮ್ಮ ಪಾಡಿಗೆ ನಾವು ಇರ್ತೀವಿ ಅಂದ್ರೂ ದೇವರು ಯಾಕೆ ಹೀಗೆಲ್ಲ ಮಾಡುಸ್ತಾನೆ? ನಾನು ಬ್ಯಾಡ ಅಂದ್ರೂ ಯಾಕೆ ಇವರು ಬಂದು ಜಗಳ ಕಾಯ್ತಾರೆ? ಮಾದೇವಯ್ಯನವರನ್ನು ಕೇಳಿದರೂ ಇದಕ್ಕೆ ಸರಿಯಾದ ಉತ್ತರ ಸಿಕ್ಕಲಿಲ್ಲ. 'ನಮ್ಮುನ್ನ ಪರೀಕ್ಷೆ ಮಾಡಾಕೆ ಶಿವ ಹಿಂಗೆ ಮಾಡ್ತಾನೆ'–ಎಂದು ಅವರೇನೋ ಶ್ರದ್ಧಾಪೂರ್ವಕ ನುಡಿದರು. ಇದೆಂತಹ ಪರೀಕ್ಷೆ? ಯಾಕೆ ಇದೆಲ್ಲ ಪರೀಕ್ಷೆ ಮಾಡಬೇಕು ಶಿವ?–ಎಂದು ಅವಳು ಮನಸ್ಸಿನಲ್ಲಿ ಕೇಳಿಕೊಳ್ಳುತ್ತಿದ್ದಳು.
ನಾಲ್ಕೈದು ದಿನಗಳ ಮೇಲೆ ಒಂದು ದಿನ ಸರ್ವಕ್ಕ ಬಂದಿದ್ದಾಗ ಹೇಳಿದಳು: 'ನಂಜಮ್ಮಾರೇ, ನಿಮ್ಮ ಅಜ್ಜಿ ಪಾರ್ವತಮ್ಮುಂಗೆ ಚಿನ್ನದ ಶ್ಯಾವಂತಿಗೆ ಹೂವು ಕೊಟ್ಟಿತ್ತಲಾ, ಅದ ಏನ್ ಮಾಡಿದ್ರಿ?'
ಅದು ಅವಳಿಗೆ ನೆನಪಿಲ್ಲ. ಪಾರ್ವತಿಯ ಒಡವೆಗಳನ್ನೆಲ್ಲ ಸೂರ್ಯನಾರಾಯಣನಿಗೆ ಕೊಟ್ಟಾಗ ಅದನ್ನೂ ಹಾಕಿದ್ದೆನೇನೋ ಎಂಬ ಅನಿಮಾನ ಬಂತು. ಆದರೆ ತನಗೆ ಜ್ಞಾಪಕವಿರುವ ಮಟ್ಟಿಗೆ ಹಾಕಿಲ್ಲ. ಈಗ ಮನೆಯಲ್ಲಿ ಹುಡುಕಿ ನೋಡಬೇಕು. ಆದರೆ ಮಗಳಿಗೆ ಸಂಬಂಧಿಸಿದ ಯಾವ ವಸ್ತುವನ್ನೂ

ಹುಡುಕುವುದಾಗಲಿ ಕಣ್ಣಿನಿಂದ ನೋಡುವುದಾಗಲಿ ಅವಳಿಗೆ ಬೇಕಿರಲಿಲ್ಲ. ರಾಮಣ್ಣನ ಬಟ್ಟೆಗಳನ್ನು ಸಹ ಹೊಲೆಯರ ಮರಿಯನ ಮಗನಿಗೆ ಕೊಟ್ಟುಬಿಟ್ಟಿದ್ದಳು.

'ನಂಗೆ ಗೊತ್ತಿಲ್ಲ. ಯಾಕೆ ಸರ್ವಕ್ಕ?'

'ನೀವು ಶೃಂಗೇರಿಗೆ ಹೋಗಾಕೆ ಮದ್ಲು ನಿಮ್ಮ ಯಜಮಾನ್ರು ಅದುನ್ನ ಕಾಶಿಂಬಡ್ಡಿಗೆ ಐವತ್ತು ರೂಪಾಯಿಗೆ ಖರೂದಿ ಮಾರಿದ್ರಂತೆ.'

'ನಿಮಗೆ ಯಾರು ಹೇಳಿದ್ರು?'

'ಶಿವೇಗೌಡನ ಮಗಳು. ಹಿಂದಿನ ಕಾಲ್‌ದಾಗೆ ಮಾಡಿದ್ದು. ತುಂಬ ವೈನಾಗೈತೆ ಅಂತ ಅವ್ಳು ಹಾಕ್ಯತಾ ಅವ್ಳೆ.'

ತನ್ನ ಗಂಡನ ಶೃಂಗೇರಿ ಯಾತ್ರೆ ಎಲ್ಲ ಅವಳಿಗೆ ನೆನಪಾಯಿತು. ಮನಸ್ಸು ಸಿಟ್ಟಿನಿಂದ ಕುದಿಯಿತು. ಆದರೆ ಎರಡು ನಿಮಿಷದಲ್ಲಿ ತನಗೆ ತಾನೇ ಸಮಾಧಾನ ತಂದುಕೊಂಡಳು. ಈಗ ಆಗೂದು ಆಗಿದೆ. ಇನ್ನು ಅವರನ್ನ ಬೈದ್ರೆ ಏನು ಬಂತು? ಅವರ ಸ್ವಭಾವ ತಿದ್ದುಕ್ಕೆ ಯಾರಿಗೂ ಆಗುಲ್ಲ– ಎಂದು ಯೋಚಿಸಿ, 'ಹೋಗ್ಲಿ ಬಿಡಿ ಸರ್ವಕ್ಕ. ಅದು ಮನೇಲಿದ್ರೆ ನಂಗೆ ಕಣ್ಣಲ್ಲಿ ನೋದುಕ್ಕೆ ಆಗ್ತಿರ್ಲಿಲ್ಲ' ಎಂದು ಆ ಮಾತನ್ನು ಅಲ್ಲಿಗೆ ಮುಗಿಸಿದಳು.

– 4 –

ಕಡೂರಿನಿಂದ ಒಂಬತ್ತು ಮೈಲಿ ದೂರದ ನುಗ್ಗೀಕೆರೆಗೆ ಹೋಗುವಾಗ ಅಪ್ಪಣ್ಣಯ್ಯನ ಮನಸ್ಸಿನಲ್ಲಿ ನಾನಾ ವಿಧವಾದ ಯೋಚನೆಗಳು. ಈಗ ಹುಡುಗರು ಹ್ಯಾಗೆ ಕಾಣ್ತಾರೆ? ಅವ್ಳು ನನ್ನ ಮಾತಾಡುಸ್ತಾಳೋ ಇಲ್ವೋ? ಮನೆ ಅಂದ್ರೆ ಒಂದು ಗಂಡು ದಿಕ್ಕು ಬೇಕು. 'ಇಲ್ಲೇ ಇದ್‌ಬಿಡಿ. ನೀವೂ ಹಳ್ಳೀಲಿ ದಾನ ಪಾನ ತರೂರಂತೆ'– ಅಂದ್ರೆ ಏನು ಮಾಡೂದು? ಇಲ್ಲಿಂದ ಹೋಗುವಾಗ ಅವ್ಳು ಬಸುರಿಯಾಗಿದ್ಲು. ಎಂಥ ಮಗುವಾಗಿದ್ಯೋ ಏನೋ! ಒಂದು ತೆರನಾದ ಭಯವೂ ಅವನ ಮನಸ್ಸನ್ನು ಆವರಿಸಿತ್ತು. 'ಇಲ್ಲಿಗ್ಯಾಕೆ ಬಂದೆ ನಡಿ'–ಅಂದ್‌ಬಿಟ್ರೆ ಏನ್ ಮಾಡೂದು? ಈಗಲೇ ವಾಪಸ್ ಹೊರಟುಹೋಗಿಬಿಡ್ಲೇ?–ಎಂದುಕೊಂಡು ಅವನು ನುಗ್ಗೀಕೆರೆ ತಲುಪುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. ಅವರು ಈಘ ಎಲ್ಲಿದ್ದಾರೆ ಎಂದು ವಿಚಾರಿಸಿದಾಗ ತಿಳಿಯಿತು: ಈ ಊರು ಬಿಟ್ಟು ಮೂರು ನಾಲ್ಕು ವರ್ಷದ ಮೇಲೆ ಆಯಿತಂತೆ. ಅಲ್ಲಿ ಜೀವನ ನಡೆಯುಲ್ಲ ಅಂತ ದೊಡ್ಡ ಊರು ಕಡೂರಲ್ಲೇ ಇದಾರಂತೆ. ಪೇಟೆಬೀದಿ ಗಂಗಾಧರಪ್‌ನೋರ ಅಂಗಡಿ ಹಿಂಭಾಗದಲ್ಲೇ ಅವರ ಮನೆಯಂತೆ.

'ಅಲ್ಲಿ ಜೀವನಕ್ಕೆ ಏನ್ ಮಾಡ್ತಾರೆ?'

'ನಂಗೇನು ಗೊತ್ತು? ನೀವು ಅವ್ರಿಗೇನಾಗಬೇಕು?'–ಅವರು ನಕ್ಕು ಕೇಳಿದರು.

ತನ್ನ ಗುರುತು ಹೇಳಲು ಅವನಿಗೆ ಇಷ್ಟವಾಗಲಿಲ್ಲ. ಆದುದರಿಂದ ಮುಂದೆ ಯಾವ ಪ್ರಶ್ನೆಯನ್ನೂ ಕೇಳದೆ ಅಲಿ ್ಲಂದ ಹೊರಟು ದಾರಿಯ ಕೆರೆ ಏರಿಯ ಈಚೆ ಕಡೆಗೆ ಸಿಕ್ಕುವ ವಡ್ಡರಹಳ್ಳಿಗೆ ಬಂದ. ಪರಸ್ಥಳದವರೆಂದು ಹೇಳಿ ಒಂದು ಮನೆಯಲ್ಲಿ ಜೋಳದ ಹಿಟ್ಟು ಇಸಿದುಕೊಂಡು ರೊಟ್ಟಿ ತಟ್ಟಿ ತಿಂದು ರಾತ್ರಿ ಮಲಗಿದ್ದು, ಉಳಿದ ರೊಟ್ಟಿಯನ್ನು ಬೆಳಿಗ್ಗೆ ತಿಂದು ಮತ್ತೆ ಕಡೂರು ಕಡೆಗೆ ಕಾಲು ಹಾಕಿದ.

ಕಡೂರು ಅವನು ಕಾಣದ ಊರಲ್ಲ. ಹಿಂದೆ ಬಂದು ಹೋಗಿದ್ದ. ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ಅಲ್ಲಿಗೆ ಬಂದು ಪೇಟೆಬೀದಿ ಗಂಗಾಧರಪ್ಪನವರ ಅಂಗಡಿಯನ್ನು ವಿಚಾರಿಸಿಕೊಂಡು ಹೋದ. ಅಂಗಡಿಯ ಪಕ್ಕದಲ್ಲಿ ಒಂದು ಪುಟ್ಟ ಗಲ್ಲಿ. ಅದರಲ್ಲಿ ಹೋದರೆ ಹಿಂಭಾಗದಲ್ಲಿ ಒಂದು ಸಣ್ಣ ಮಂಗಳೂರು ಹೆಂಚಿನ ಮನೆ. ಬಾಗಿಲಿಗೆ ಗಾಜಿನ ಮಣಿಗಳ ತೋರಣ ಹಾಕಿದ್ದ ಅದು, ಇವರು ಇರುವ ಮನೆಯೋ ಅಲ್ಲವೋ ಎಂದು ಅನುಮಾನಪಡುತ್ತಾ ಅವನು ನಿಂತಿದ್ದಹಾಗೇ ಒಳಗಿನಿಂದ ಒಬ್ಬ ಹುಡುಗಿ ಬಂದಳು. ಹದಿನಾಲ್ಕು ಹದಿನೈದು ವಯಸ್ಸಿನ ಅವಳ ಕೈಲಿ ಪುಸ್ತಕಗಳಿದ್ದವು. ಮಿಣ ಮಿಣ ಮಿಂಚುವ ಸೀರೆ ಉಟ್ಟಿದ್ದಳು. ಮುಖಕ್ಕೆ ಪೌಡರ್ ಹಾಕಿದ್ದ ಅವಳನ್ನು ನೋಡಿದ ಒಂದು ನಿಮಿಷದಲ್ಲಿ ಗುರುತು ಸಿಕ್ಕಿತು: ಜಯಲಕ್ಷ್ಮಿ. ತನ್ನ ಹಿರೀ ಮಗಳು.

'ಇದೇ ಏನೇ ಮನೆ?–ಇವನು ಕೇಳಿದುದಕ್ಕೆ ಹುಡುಗಿ ಗುರುತು ಸಿಕ್ಕದವಳಂತೆ ನೋಡಿ, 'ಯಾರು ನೀವು?' ಎಂದಳು.

'ಗುರ್ತೇ ಸಿಕ್ಲಿಲ್ವೆ? ನಿಮ್ಮಣ್ಣಲ್ವೇ?'

'ಯಾವೂರಣ್ಣಾ?'–ಎನ್ನುತ್ತಾ ಅವಳು ಒಳಗೆ ಹೊರಟುಹೋದಳು.

'ಎಲಾ ಇವಳವ್ವನ'–ಮನಸ್ಸಿನಲ್ಲಿಯೇ ಎಂದುಕೊಂಡು ಅವನೂ ಒಳಗೆ ಹೋದರೆ ಒಳಗಿನ ವೈಭವವೇನು! ಮೆತ್ತೆ ಹಾಕಿದ ಕುರ್ಚಿ. ಗೋಡೆಗೆಲ್ಲ ಪಟಗಳು. ಮೇಜದ ಮೇಲೆ, ಹೋಟೆಲಿನಲ್ಲಿ ಇರುವಂಥ ರೇಡಿಯೋ. ಅವನ ಹೆಂಡತಿ, ರೇಷ್ಮೆ ಸೀರೆ ಉಟ್ಟು ಹೆರಳು ಹಾಕಿಕೊಂಡು ಕುರ್ಚಿಯ ಮೇಲೆ ಕೂತಿದಾಳೆ. ಮುಖವೆಲ್ಲ ಪೌಡರು. ಈಗ ಎಷ್ಟು ಚೆನ್ನಾಗಿ ಕಾಣ್ತಿದಾಳೆ ಅವಳು. ತೊಡೆಯ ಮೇಲೆ ಎರಡು ವರ್ಷದ ಒಂದು ಹೆಣ್ಣು ಮಗು. ಹತ್ತಿರದ ಇನ್ನೊಂದು ದೊಡ್ಡ ಕುರ್ಚಿಯ ಮೇಲೆ ಆರಾಮವಾಗಿ ಒರಗಿಕೊಂಡು, ಸುಮಾರು ನಲವತ್ತು ವರ್ಷದ ಒಬ್ಬ ದೊಡ್ಡ ಮನುಷ್ಯರು ಸಿಗರೇಟು ಸೇದುತ್ತಿದ್ದಾರೆ. ಅವರ ಬೆರಳುಗಳಲ್ಲಿ

ಹೊಳೆಯುವ ಉಂಗುರಗಳೇನು, ಕೊರಳಿನ ಚೈನು, ಕೈಗೆ ಬಂಗಾರದ ಗಡಿಯಾರವೇನು!

'ಇದೆಯಾ ಮನೆ? ನಾನು ನುಗ್ಗೀಕೆರೆಗೆ ಹೋಗಿ ಬಂದೆ?'–ಅಪ್ಪಣ್ಣಯ್ಯ ಕೇಳಿದ.

ಸಾತು ದಿಗ್ಭ್ರಮೆ ಹಿಡಿದವಳಂತೆ ಒಂದು ಕ್ಷಣ ಆವನನ್ನೇ ನೋಡುತ್ತಾ ಮಂಕಾಗಿಬಿಟ್ಟಳು. ಆದರೆ ಅವನ ಮತ್ತೆ ಮಾತನಾಡಲು ಬಾಯಿತೆರೆಯುವ ಮೊದಲೇ–'ಯಾರು ನೀವು ಇಲ್ಲಿಗ್ಯಾಕೆ ಬಂದ್ರಿ?' ಎಂದಳು.

'ನನ್ನ ಯಾರು ಅಂತಿ ಏನೆ?'

'ಇವ್ನನ್ನ ಮನೆಯಿಂದ ಕಳ್ಸಿ'–ಎಂದು ಹೇಳಿ ಅವಳು ಪಕ್ಕದ ರೂಮಿಗೆ ಹೊರಟುಹೋದಳು.

'ಯಾವನೋ ನೀನು?'–ಎಂದು ಆ ಗಂಡಸು ಕೇಳಿದ ರೀತಿಗೇ ಅಪ್ಪಣ್ಣಯ್ಯ ಹೆದರಿಬಿಟ್ಟ. ಅಲ್ಲಿ ನಿಲ್ಲದೆ ಒಂದೇ ಏಟಿಗೆ ಹಿಂತಿರುಗಿದವನು, ಹಿಂಭಾಗದಿಂದ ನಾಯಿ ಓಡಿಸಿಕೊಂಡು ಬಂದವನಂತೆ ಥಪಥಪನೆ ಕಾಲು ಹಾಕುತ್ತಾ ಓಡಿದ. ತಾನು ಎತ್ತ ಹೋಗುತ್ತಿದೀನಿ, ಯಾವ ದಿಕ್ಕಿನಲ್ಲಿ ಹೋಗುತ್ತಿದೀನಿ ಎಂಬ ಪರಿವೆಯೂ ಇಲ್ಲದೆ ಓಡಿದ ಅವನು ಸುಸ್ತಾಗಿ ದೊಡ್ಡ ದೊಡ್ಡ ಹೆಜ್ಜೆ ಹಾಕತೊಡಗಿದ. ಸ್ವಲ್ಪ ಹೊತ್ತಾದಮೇಲೆ ದೂರದಲ್ಲಿ ಒಂದು ಊರು ಕಾಣಿಸಿತು. 'ಅದು ಯಾವೂರು?'–ಎಂದು ಕೇಳಿದುದಕ್ಕೆ ಯಾರೋ, 'ಬೀರೂರು' ಎಂದರು. ಬೇಗ ಬೇಗ ನಡೆದು ಅಲ್ಲಿಗೆ ಬಂದ. ತಿಪಟೂರಿಗೆ ಹೋಗುವ ರೈಲು, ಇನ್ನೇನು ಈಗ ಬರುತ್ತೆ ಎಂದು ಯಾರೋ ಹೇಳಿದರು. ಸ್ಟೇಷನ್ನಿಗೆ ಹೋಗಿ ಟಿಕೇಟು ತೆಗೆದುಕೊಂಡು ರೈಲು ಬಂದಮೇಲೆ ಕುಳಿತರೆ ಹಾಳು ರೈಲು ಮತ್ತೆ ಕಡೂರಿಗೇ ಬಂದು ನಿಂತಿತು. ಅವರು ತನ್ನನ್ನು ಹುಡುಕಿದರೆ ಏನು ಗತಿ ಎಂಬ ಭಯದಿಂದ ತನ್ನ ಕಡೆಯ ಕಿಟಕಿಯನ್ನು ಮುಚ್ಚಿ, ರೈಲು ಹೊರಡುವ ತನಕ ಮೈಗೂಡರಿಸಿಕೊಂಡು ಕೂತಿದ್ದ. ತಿಪಟೂರು ಮುಟ್ಟುವತನಕ ಹೆದರಿಕೆ ಇದ್ದೇ ಇತ್ತು. ಸ್ಟೇಷನ್ನಿನಲ್ಲಿ ಇಳಿದು, ಹತ್ತಿರ ಉಳಿದಿದ್ದ ಐದು ಆಣೆಗೆ ಖಾಲಿ ದೋಸೆ ತಿಂದು ಊರ ಕಡೆ ಹೆಜ್ಜೆ ಹಾಕುವಾಗ– 'ಅವನು ಯಾರಿರಭೌದು?'–ಎಂಬ ಜಿಜ್ಞಾಸೆ ಮೂಡಿತು. 'ಆ ಸೂಳೆಮಗುನ್ನ ಇಟ್ಕಂಡಿದಾಳೆ ಈ ಕತ್ತೆಮುಂಡೆ'– ಎಂಬ ಉತ್ತರ ಹೆಚ್ಚು ಕಷ್ಟವಿಲ್ಲದೆ ಹೊಳೆಯಿತು. ಹಾಗೆಯೇ ಹಿಂತಿರುಗಿ ಹೋಗಿ ಅವಳನ್ನು ಕಸಪೊರಕೆಯಿಂದಲಾದರೂ ಹೊಡೆಯಬೇಕೆಂದು ಮನಸ್ಸು ತವಕಿಸಲು ಮೊದಲುಮಾಡಿತು. ಆದರೆ ಆ ಕಡೆಗೆ ಹೆಜ್ಜೆ ತಿರುಗಿಸುವುದಕ್ಕೆ ಭಯವಾಗುತ್ತಿದೆ.

ಮಧ್ಯೆ ಎಲ್ಲೂ ನಿಲ್ಲದೆ ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಊರಿಗೆ ಬಂದು ಹನುಮಂತರಾಯನ ಗುಡಿಯ ಬಾಗಿಲು ಬಡಿದು– 'ನಾನು' ಎಂದಾಗ ಅವನ ಅಮ್ಮ ಬಾಗಿಲನ್ನೇನೋ ತೆಗೆದಳು. ಸೀಮೆ ಎಣ್ಣೆ ಬುಡ್ಡಿ ಹೊತ್ತಿಸಿದಮೇಲೆ ಇವನು ಒಳಗೆ ಹೋಗಿ ಕೂರುವುದೇ ತಡ, ಕೇಳಿದಳು: 'ಮತ್ತೆ ಆ ಸೂಳೆ ಹುಡಿಕ್ಕಂಡು ಹೋಗಿದ್ಯಲಾ, ಅವಳ ಸೆಜ್ಜೆಮನೆಗೆ ನಿನ್ನ ಸೇರ್ಸುಲ್ಲ ಅಂದ್ಲೇನೋ?'

ಅಪ್ಪಣ್ಣಯ್ಯ ಮಾತನಾಡಲಿಲ್ಲ. ಅಮ್ಮನೇ–'ಭಂಡಗೆಟ್ಟ ಸೂಳೇಮಗನೇ, ನಾಚಿಕೆಯಾಗುಲ್ವೇನೋ? ಶೃಂಗೇರಿ ಯಾತ್ರೆಗೆ ಹೋಗ್ತೀನಿ ಅಂತ ಸುಳ್ ಹೇಳಿ ಅವಳ ಹತ್ರ ಹಾದರ ಮಾಡುಕ್ಕೆ ಹೋಗಿದ್ಯಾ? ಈ ದೇವರ ಗುಡಿ ವಳೀಕ್ ಬಂದ್ ಕೂತಿದೀಯಲ, ಬೆಳಿಗ್ಗೆ ಅಣ್ಣಾಜೋಯಿಸರನ್ನ ಕರೆಸಿ ನಿಂಗೆ ಬಹಿಷ್ಕಾರ ಹಾಕುಸ್ತೀನಿ ತಾಳು. ಬಿಟ್ಟ ಹೆಂಡ್ತಿ ಕೂಡುಕ್ ಹೋಗಿದ್ದ ಕೆಟ್ಟರಾಮ.'

ಅಪ್ಪಣ್ಣಯ್ಯನಿಗೆ ವಿಪರೀತ ಕೋಪ ಬಂತು. 'ಸುಮ್ನೆ ಬಾಯಿ ಮುಚ್ಕತ್ತೀಯೋ ಇಲ್ವಮ್ಮ?'–ಎಂದ.

'ನಾನ್ಯಾಕೆ ಬಾಯಿ ಮುಚ್ಕಬೇಕೋ ಭಂಡ? ಗಂಜಲು ಮೂಸಿಕಂಡು ಹೋದ್ಯಲೋ ವಾಸನೆ ಹಿಡ್ಕಂಡು, ನಾಯಿಮುಂಡೆ ಹೆತ್ತುದ್ದೇ.....'

ಅವಳು ಬೈಯುವುದನ್ನು ಕೇಳುಕೇಳುತ್ತಾ ಅವನಿಗೆ ಮೈಕೈ ಉರಿಯುವಷ್ಟು ಕೋಪ ಬಂತು. 'ಬಾಯಿ ಮುಚ್ಕತ್ತಿಯೋ ಇಲ್ವೋ'–ಎಂದು ಇನ್ನೊಂದು ಸಲ ಕಿರುಚಿದ. ಅವಳು ಇನ್ನೂ ಜೋರಾಗಿ ಬೈಯಲು ಶುರುಮಾಡಿದಳು. ಅವನ ಎದುರಿಗೇ ಈಚಲು ಕಸಪೊರಕೆ ಇತ್ತು. ಎದ್ದು ಅದನ್ನು ತೆಗೆದುಕೊಂಡು ಅಮ್ಮನ ಮುಖ ಮೋರೆ ಬೆನ್ನು ಮೈ ಕೈಗಳನ್ನು ನೋಡದೆ ರಪರಪನೆ ಇಪ್ಪತ್ತು ಮೂವತ್ತು ಏಟು ರಾಚಿದ.

'ಅಯ್ಯಯ್ಯಪ್ಪೋ, ನನ್ನ ಸಾಯಿಸ್ತಾನಲೋ ಇವ್ನು'–ಎಂದು ಅವಳು ಊಳಿಟ್ಟ ಸದ್ದಿಗೆ ಏಳು ಎಂಟು ಜನ ಎದ್ದು ಬಂದರು. ಇನ್ನೂ ನಾಲ್ಕು ಜನ ಸೇರಿದರು. ಗಂಗಮ್ಮನೇ ಅಣ್ಣಾಜೋಯಿಸರನ್ನು ಕರೆಸಿದಳು. ಅಯ್ಯಾಶಾಸ್ತ್ರಿಗಳೂ ಬಂದರು.

ಹೆತ್ತ ತಾಯೀನ ಕಸಪೊರಕೇಲಿ ಹೊಡೆಯುವಂಥ ಮಹಾಪಾಪ ಉಂಟೆ?'–ಅಯ್ಯಾಶಾಸ್ತ್ರಿಗಳು ಕೇಳಿದರು.

'ನೂರ ಒಂದು ರೂಪಾಯಿ ದಂಡ ಕೊಟ್ಟು ಪ್ರಾಯಶ್ಚಿತ್ತ ಮಾಡಿಸಿಕೋಬೇಕು'– ಅಣ್ಣಾಜೋಯಿಸರು ತೀರ್ಪು ಹೇಳಿದರು.

'ನಂತಾವ ಒಂದು ಕೂದ್ಲೂ ಕಿತ್ಕಳಾಕಾಗುಲ್ಲ ಹೋಗ್ರುಲೇ'– ಅಪ್ಪಣ್ಣಯ್ಯ ರೇಗಿ ಅಂದ.

ಇಂಥವನನ್ನು ದೇವಸ್ಥಾನದಲ್ಲಿ ಇಟ್ಟುಕೊಳ್ಳುವುದು ಹೇಗೆ? ಅವನಿಗೆ ಬಹಿಷ್ಕಾರ ಹಾಕಿ ಆ ಕ್ಷಣವೇ ಅಲ್ಲಿಂದ ಹೊರಡಿಸಿದರು. 'ಇವ್ನು ಈ ಊರೇ ಬಿಡಬೇಕು'–ಎಂದು ಅಣ್ಣಾಜೋಯಿಸರ ವಾದ. 'ಈ ಊರೇನು ನಿಮ್ಮಪ್ಪನ ಜಾಗೀರಿಯಲ್ಲ ಕಣ್ಲೇ ಜೋಯಿಸ!'–ಅಪ್ಪಣ್ಣಯ್ಯ ಹೇಳಿದ. ಅವನಿಗೆ ಇಷ್ಟೊಂದು ಧೈರ್ಯ ಬಂದದ್ದನ್ನು ಇದುವರೆಗೆ ಯಾರೂ ಕಂಡಿರಲಿಲ್ಲ. ಎಲ್ಲರೂ ಸ್ತಬ್ಧರಾದರು. ಅವನೇ ತನ್ನ ಬಟ್ಟೆ ಬರೆಗಳನ್ನು

ಜೋಡಿಸಿಕೊಂಡು ಹೊರಟುಹೋದ. 'ಈ ಸೂಳೇಮಗನ ಕೈಗೆ ಹುಳಬೀಳ'–ಎಂದು ಅವನ ಅಮ್ಮ ಶಾಪ ಹಾಕುತ್ತಿದ್ದಳು.

ಅತ್ತಿಗೆಯ ಮನೆಗೆ ಹೋಗಬೇಕೆಂದು ಅವನಿಗೆ ಮನಸ್ಸಾಯಿತು. ನುಗ್ಗೀಕೆರೆಯ ವಿಷಯ ಕೇಳಿದರೆ ಏನು ಹೇಳುವುದು?– ಎಂಬ ಯೋಚನೆಯಾಗಿ ಅಲ್ಲಿಗೆ ಹೋಗಲಿಲ್ಲ. ಸದ್ದು ಮಾಡದಂತೆ ನಡೆದು ಮಾದೇವಯ್ಯನವರ ಗುಡಿಯ ಜಗುಲಿಗೆ ಹೋಗಿ ಮಲಗಿ ರಾತ್ರಿಯನ್ನು ಕಳೆದ. ಮತ್ತೆ ಸುಮಾರು ಒಂದು ತಿಂಗಳು ಅವನು ಊರಿನಲ್ಲಿರಲೇ ಇಲ್ಲ.

ನೆನ್ನೆ ರಾತ್ರಿ, ನಡೆದ ಸಂಗತಿ ನಂಜಮ್ಮನಿಗೆ ತಿಳಿಯಿತು. ಅವನು ಹೆಂಡತಿಯ ಊರಿಗೆ ಹೋಗಿದ್ದ ಸಂಗತಿಯನ್ನು ಊರಿಗೆ ಬಂದ ತಕ್ಷಣ ಹೋಗಿ ಅಮ್ಮನಿಗೆ ಮುಟ್ಟಿಸಿದ ತನ್ನ ಗಂಡನ ಬಗೆಗೆ ಅವಳಿಗೆ ವಿಪರೀತ ಕೋಪ ಬಂತು. ಆದರೆ ಅವರನ್ನು ಕೇಳಿ ಪ್ರಯೋಜನವಿಲ್ಲ. ಗಂಗಮ್ಮ ಆ ಮಗನನ್ನೇ ಅಲ್ಲದೆ ಅವಳನ್ನೂ ಮನಸ್ಸಿಗೆ ಬಂದ ಹಾಗೆ ಬೈದುಕೊಂಡು ತಿರುಗುತ್ತಿದ್ದಳು. ಅದಕ್ಕೂ ನಂಜಮ್ಮ ಉಭ ಶುಭ ಅನ್ನಲಿಲ್ಲ. ಅಜ್ಜಿ ಬೀದಿಯಲ್ಲಿ ಸಿಕ್ಕಿ ಏನಾದರೂ ಅಂದರೂ, ಅವರ ಕೈಲಿ ಮಾತಾಡಕೂಡದೆಂದು ವಿಶ್ವನಿಗೆ ಹೇಳಿದಳು.

ಒಂದು ತಿಂಗಳಾದಮೇಲೆ ಒಂದು ದಿನ ಅಪ್ಪಣ್ಣಯ್ಯ ಅತ್ತಿಗೆಯ ಮನೆಗೆ ಬಂದ. ಚೆನ್ನಿಗರಾಯರು ಮನೆಯಲಿ ್ಲರಲಿಲ್ಲ. ಅವನು ಹೇಳಿದ: 'ಈ ಬೋಸುಡಿ ಮುಂಡೇ ಜೊತೆ ಇಲ್ದೆ ಇದ್ರೆ ನನ್ನ ಕೈಲೇನು ಜೀವನ ಮಾಡುಕ್ಕಾಗುಲ್ವೆ? ಹಿರೀಸಾವೆ ಸುತ್ತ ಹಳ್ಳೀಕಡೆಗೆ ಹೋಗಿ ಒಂದೂವರೆ ಪಲ್ಲ ರಾಗಿ, ಅವರೇಕಾಳು. ಮೆಣಸಿನಕಾಯಿ ಎಲ್ಲ ಗುಡ್ಡೆ ಹಾಕ್ಕಂಡ್ ಬಂದಿದೀನಿ. ನಂದು ಇಪ್ಪತ್ತು ರೂಪಾಯಿ ಇಸ್ಕಂಡಿದ್ರಲ, ಕೊಡಿ. ಒಂದೆರಡು ಪಾತ್ರೆ ಕೊಂಡ್ಕತೀನಿ.'

'ಎಲ್ಲಿರ್ತೀರಿ?'

'ಕುರುಬರಹಟ್ಟಿ ಬೀರೇಗೌಡನ ದನದ ಕೊಟ್ಟಿಗೆ ಜಗುಲೀಮ್ಯಾಲೆ ಒಂದು ಕ್ವಾಣೆ ಇದೆಯಲ. ಅವ್ನುನ್ನ ಕೇಳ್ದೆ. ನೀವು ಮಾರಾಯರ ಹಾಗೆ ಅಲ್ಲಿ ಅಡಿಗೆ ಮಾಡ್ಕಂಡು ಉಂಡ್ಕಂಡಿರಿ ಅಂತ ಬೀರೇಗೌಡ ಹೇಳಿದಾನೆ.'

ಮೂರು ದಿನಗಳಲ್ಲಿ ನಂಜಮ್ಮ ಅವನ ದುಡ್ಡು ಹೊಂದಿಸಿಕೊಟ್ಟಳು. ಕಂಬನಕೆರೆಯ ಸಂತೆಗೆ ಹೋಗಿ ಅವನು ಅಲ್ಯೂಮಿನಿಯಂ ಚೆಟ್ಟಿ, ಡಬರಿ, ಲೋಟ, ಒಂದು ಗಡಿಗೆ, ಒಂದು ಹಿಟ್ಟು ತೊಳಸುವ ಮಡಕೆ, ಒಂದು ಮಂದಲಿಗೆಗಳನ್ನು ತಂದ. ಊರಿನಲ್ಲಿದ್ದ ದಿನ ಮುದ್ದೆ ತೊಳೆಸಿಕೊಳ್ಳುತ್ತಿದ್ದ. ಅದಕ್ಕೆ ಹುಳಿ ಮಾಡುತ್ತಿದ್ದುದು ಅಪರೂಪ. ಅತ್ತಿಗೆಯ ಮನೆಗೆ ಬಂದು ಎರಡು ಹೊತ್ತುಗೂ ಆಗುವಷ್ಟು ಇಸಿದುಕೊಂಡು ಹೋಗುತ್ತಿದ್ದ. ಒಂದೊಂದು ದಿನ ಇಲ್ಲಿಯೇ ಪೂರ್ತಿ ಊಟವನ್ನೂ ಮಾಡುತ್ತಿದ್ದ. ಅವನನ್ನು ಮನೆಗೆ ಸೇರಿಸುತ್ತಿರುವುದಕ್ಕೆ ಇವಲಿಗೆ ಬಹಿಷ್ಕಾರ ಹಾಕಬೇಕೆಂದು ಗಂಗಮ್ಮ ಜೋಯಿಸರಿಗೆ ಹೇಳಿದಳು. ಆದರೆ ಸರ್ಕಾರದ ಆಹಾರದ ಲೆಕ್ಕ ಬರೆಯುವ ಅವಳು ಸ್ವತಃ ಶೃಂಗೇರಿ ಯಾತ್ರೆ ಮಾಡಿ ಬಂದಿದಾಳೆ. ಅವಳ ಬಗೆಗೆ ಜೋಯಿಸರಿಗೇ ಭಯ ಹುಟ್ಟಿತ್ತು. ಅವರಿಬ್ಬರಲ್ಲಿ ಯಾರೂ ಶೃಂಗೇರಿಯ ದಿಕ್ಕನ್ನೂ ಕಂಡಿರಲಿಲ್ಲ.

ಒಂದು ದಿನ ನಂಜಮ್ಮ ಅಪ್ಪಣ್ಣಯ್ಯನನ್ನು ಕೇಳಿದಳು: 'ನುಗ್ಗೀಕೆರೇಲಿ ಅವರು ಏನಂದ್ರು?'

'ಆ ಮುಂಡೇರು ಆ ಊರಲ್ಲಿ ಇಲ್ವೇ ಇಲ್ಲ.'

'ಎಲ್ಲಿಗೆ ಹೋಗಿದಾರೆ ಅಂತ ಯಾರೂ ಹೇಳ್ಲಿಲ್ವೆ?'

'ಹೇಳೂದೇನು, ಕಡೂರಲ್ಲಿ ಯಾವನೋ ಸಾವ್ಕಾರುನ್ನ ಮಡೀಕಂಡಿದಾಳೆ ಹೊಲೆಮಾದಿಗಮುಂಡೆ'–ಎಂದು ಅವನು, ತಾನು ಕಂಡದ್ದನ್ನು ಪೂರ್ತಿಯಾಗಿ ವಿವರಿಸಿದ.

ಅದನ್ನು ಕೇಳಿದ ನಂಜಮ್ಮನ ಮನಸ್ಸು ಮುದುಡಿಹೋಯಿತು. ಈ ಮನೆಗೆ ತಾವಿಬ್ಬರು ಸೊಸೆಯರಾಗಿ ಬಂದೆವು. ಇಬ್ಬರಲ್ಲಿ ಯಾರೂ ತಮ್ಮ ಹೆಂಡಂದಿರನ್ನು ವಿವೇಕದಿಂದ ಬಾಳಿಸಲಿಲ್ಲ. ತಮಗೇ ವಿವೇಕದಿಂದ ಬಾಳುವುದು ಗೊತ್ತಿಲ್ಲದವರು ಹೆಂಡಂದಿರನ್ನು ಏನು ಬಾಳಿಸುತ್ತಾರೆ? ಆದರೆ ಅಣ್ಣನಿಗಿಂತ ತಮ್ಮ ಉತ್ತಮ. ಒಳ್ಳೆಯ ಮಾತನಾಡಿದರೆ ಹೇಳಿದ ಹಾಗೆ ಕೇಳುತ್ತಾರೆ. ಮೈಮುರಿದು ದುಡಿಯುತ್ತಾರೆ. ಸಾತು ವಿವೇಕವಾಗಿದಿ ್ದದ್ದರೆ ಹೀಗೆಲ್ಲ ಆಗುತ್ತಿರಲಿಲ್ಲವೇನೋ!– ಎಂಬ ಯೋಚನೆ ಬಂತು. ಆದರೆ ಕಷ್ಟ ಅನುಭವಿಸುಕ್ಕೆ ಎಲ್ಲರಿಗೂ ಒಂದೇ ಥರ ಶಕ್ತಿ ಇರುಲ್ಲ. ಈ ಅತ್ತೆ, ಈ ಗಂಡನ ಮಾತು, ಭಾಷೆ, ಇವಲ್ಲ ಸಹಿಸ್ಕಂಡಿರಕ್ಕೂ ಎಲ್ರಿಗೂ ಆಗುಲ್ಲ. ತಾಯಿಯ ಮಾತು ಕೇಳಿಯೇ ಅಪ್ಪಣ್ಣಯ್ಯ, ತಾನೇ ಕಟ್ಟಿದ್ದ ಗುಡಿಸಲಿಗೆ ಬೆಂಕಿ ಹಾಕಿ ಸುಟ್ಟು, ಹೆಂಡತಿಯ ತಾಳಿ ಕಿತ್ಕಂಡುಬಿಟ್ರು. ಆದರೂ ಈ ಮನೆಗೆ ಬಂದ ಇನ್ನೊಬ್ಬ ಸೊಸೆ, ತನ್ನ ಓರಗಿತ್ತಿ, ಹೀಗೆ ಮಾಡಬಾರದಾಗಿತ್ತು–ಎಂದು ಮನಸ್ಸಿನಲ್ಲೇ ಕೊರಗಿಕೊಂಡು ಅಪ್ಪಣ್ಣಯ್ಯನನ್ನು ಕೇಳಿದಳು: 'ಈ ವಿಷಯ ಯಾರಿಗಾದ್ರೂ ಹೇಳಿದೀರಾ?'

'ಇಲ್ಲ.'

'ಹೇಳ್ಬ್ಯಾಡಿ. ನಮ್ಮ ಮರ್ಯಾದೆಯೇ ಹೋಗುತ್ತೆ.'

'ಆ ಮುಂಡೇರ ಮಾತ ನನ್ನ ನಾಲಿಗೇಲಿ ನುಡುದ್ರೆ ಹೇಲು ತಿಂದಷ್ಟು ಅಸಹ್ಯವಾಗುತ್ತೆ. ನಾನು ಆಡುಲ್ಲ.'

'ಹಾಗಲ್ಲ. ಒಂದೊಂದು ಸರ್ತಿ ಸಿಟ್ಟು ಬಂದಾಗ ನಿಮಗೆ ಏನು ಆಡ್ತೀನಿ ಏನು ಆಡುಲ್ಲ ಅಂತ ಜ್ಞಾಪಕವೇ ಇರುಲ್ಲ. ಖಂಡಿತ ಇದ ಯಾರ ಕೈಲೂ ಹೇಳುಲ್ಲ ಅಂತ ದೇವರಮೆಲೆ ಆಣೆ ಇಟ್ಟು ಹೇಳಿ.'

ಶೃಂಗೇರಿ ಶಾರದಮ್‌ನೋರ ಆಣೆಗೂ ಹೇಳುಲ್ಲ'– ಎಂದು ಅವನು, ಗೋಡೆಯ ಮೇಲೆ ತೂಗುಹಾಕಿದ್ದ ಶಾರದಮ್ಮನವರ ಪಟವನ್ನು ಮುಟ್ಟಿ ಹೇಳಿದ.

ಅಧ್ಯಾಯ 15

– 1 –

ಈಗ ಎಂಟು ವರ್ಷದಲ್ಲಿ ಊರ ಹೊರಗಡೆ ಸರ್ಕಾರದವರು ಹೊಸ ಪ್ರೈಮರಿಸ್ಕೂಲಿನ ಕಟ್ಟಡ ಕಟ್ಟಿಸಿದ್ದರು. ಶಿವೇಗೌಡನಿಗೆ ಸ್ಕೂಲು ಕಟ್ಟಡದ ಬಾಡಿಗೆ ಬರುವುದು ನಿಂತು ಹೋಗಿತ್ತು. ಹೊಸ ಸ್ಕೂಲಿಗೆ ಹೊಂದಿಕೊಂಡು ದೊಡ್ಡ ಆಟದ ಬಯಲು, ಸುತ್ತ ಮೂರು ಕಡೆಯೂ ಹೊಲಗಳು.

ಒಂದು ದಿನ ನಂಜಮ್ಮ ಮುಂದಿನ ವರ್ಷದ ಖಿರ್ದಿ ಪುಸ್ತಕ ಹೊಲಿಯುತ್ತಾ ಕೂತಿದ್ದಳು. ಮೇಷ್ಟರು ಮನೆಗೆ ಬಂದು ಹೇಳಿದರು: 'ನಂಜಮ್ನೋರೇ, ನಿಮ್ಮ ವಿಶ್ವ ಎಂಥಾ ಕೆಲ್ಸ ಮಾಡಿದಾನೆ ಅಂತೀರಾ?'

ಮೇಷ್ಟರೇ ಬಂದು ಹೇಳಬೇಕಾದರೆ ಅವನು ತುಂಬ ದೊಡ್ಡ ತುಂಟತನ ಮಾಡಿರಬೇಕು. ಅವಳು ಆತಂಕದಿಂದ ಕೇಳಿದಳು: 'ಸ್ಕೂಲಿನ ಹಿಂದುಗಡೆ ಆಟದ ಬಯಲಿದೆಯಲ, ಅದರ ಆಚೆ ಕಡೆಯೇ ಒಂದು ಹುತ್ತ ಇದೆ ನೋದಿದೀರಾ? ಅದರ ಪಕ್ಕದ ಬೇಲೀಲಿ ಒಂದು ಹಾವು ಇತ್ತು ಅಂತ ಕಾಣುತ್ತೆ. ಪೊರೆ ಬಿಡೂಕೆ ಮೊದ್ಲು ಹಾವು ಚಟುವಳಿಕೆಯಾಗಿರುಲ್ಲ ನೋಡಿ. ಅದೇನು ಬಿಸಿಲು ಕಾಯಿಸ್ಕತ್ತಾ ಇತ್ತೋ ಏನೋ. ಇವ್ನು ಒಂದು ಸೋಗೆದಿಂಡಿ ತಗಂಡು ಹಿಂದುಗಡಿಂದ ಹೋಗಿ ಅದಕ್ಕೆ ಹೊಡೆದುಬಿಟ್ಟಿದ್ದಾನೆ.'

'ಆಮೇಲೆ?'–ನಂಜಮ್ಮ ಹೆದರಿಕೆಯಿಂದ ಕೇಳಿದಳು.

'ಅದೃಷ್ಟಕ್ಕೆ ಅದು ಮೇಲೆ ಬೀಳಲಿಲ್ಲ. ಸರ್ ಅಂತ ಹರಿದು ಹುತ್ತದೊಳಗೆ ನುಗ್ಗಿ ಬಿಡ್ತು. ಅದು ನುಗ್ಗಿ ಹೋದದ್ದು ನಾನೂ ನೋಡಿದೆ. ಇವ್ನು ಹಿಂದಿನಿಂದ ಓಡಿಸ್ಕಂಡು ಹೋಗ್ತಿದ್ದ. ನಾನು ಹಿಡ್‌ಕಂಡು ಎರ್ಡು ಕೊಟ್ಟೆ.'

'ಕೈ ಮುರಿಯೂ ಹಾಗೆ ಹಾಕಬೇಕಾಗಿತ್ತು.'

'ಈಗ ಅವ್ನನ್ನ ಹೊಡೆದು ಪ್ರಯೋಜನವಿಲ್ಲ. ಹಾವು ಹನ್ನೆರಡು ವರ್ಷ ಸೇಡು ಹಾಯುತ್ತೆ. ಇವ್ನು ಅದೇ ಸ್ಕೂಲಿಗೆ ಬರ್ತಾನೆ. ಯಾವತ್ತಾದ್ರೂ ಕಾದು ಮುಗಿಸಿಬಿಟ್ರೆ ಏನು ಗತಿ?'

ಅವಳ ಎದೆ ಹೊಡೆದುಕೊಳ್ಳಲು ಶುರುವಾಯಿತು. ಈ ಹುಡುಗನ ಸ್ವಭಾವವೇ ಹಾಗೆ. ಧೈರ್ಯ ಅಂದರೆ ಪ್ರಚಂಡ ಧೈರ್ಯ. ಅದು ನನ್ನ ಜೀವಕ್ಕೆ ಬರುತ್ತೆ. 'ಈಗ ಏನು ಮಾಡೂದು ಮೇಷ್ಟ್ರೆ?'

'ಹಾವು ಹುತ್ತದಲ್ಲೇ ಇರ್‌ಭೌದು. ನಾಕು ಜನ ಆಳುಗಳನ್ನ ಬಿಡಿಸಿ ಹುತ್ತ ಅಗೆದು ಹಾಕ್ಸಿ ಅದುನ್ನ ಸಾಯಿಸಿಬಿಡಬೇಕು. ನಿಧಾನ ಮಾಡ್‌ಬ್ಯಾಡಿ.'

ನಂಜಮ್ಮ ತಕ್ಷಣ ಎದ್ದು ಮನೆಗೆ ಬೀಗ ಹಾಕಿಕೊಂಡು ಹೋಗಿ ಕುಳುವಾಡಿಗೆ ಹೇಳಿಕಳಿಸಿದಳು. ಜೊತೆಗೆ ನೀರುಗಂಟಿ ಬಂದ. ಹಾವು ಹೊಡೆಯುವುದರಲ್ಲಿ ಊರಿಗೇ ಗಟ್ಟಿಗನೆನಿಸಿದ ವಾಲ್ಮೀಕಿ ಸಂಜೀವನಾಯಕನಿಗೆ ಒಂದು ರೂಪಾಯಿ ಕೊಡುವುದಾಗಿ ಹೇಳಿ ಅವನನ್ನು ಅವರ ಜೊತೆಗೆ ಬಿಟ್ಟಳು. ಅವರೊಡನೆ ತಾನೂ ಹೋದಾಗ ವಿಶ್ವ ಹತ್ತಿರ ಇದ್ದ ಆಟದ ಬಯಲಿನಲ್ಲಿ ಒಬ್ಬನೇ ಪಲ್ಟಿ ಹೊಡೆಯುತ್ತಿದ್ದ.

'ಹಾವಿಗೆ ಯಾಕೋ ಹೊಡೆಯುಕ್ಕೆ ಹೋಗಿದ್ದೆ?'–ಎಂದು ಅಮ್ಮ ಕೇಳಿದುದಕ್ಕೆ, 'ಸಂಜೀವನಾಯ್ಕ ಅವತ್ತು ತಿರುಮಲಯ್ಯನ ಮನೆ ಹಿತ್ಲಲ್ಲಿ ಹೊಡೆದಿದ್ನಲ್ಲ, ಹಾಗೆ ನಾನೂ ಹ್ವಡೆದೆ' ಎಂದ.

ಸಂಜೀವನಾಯಕನ ಕೈಲಿ ಬಿದಿರುಕೋಲು ಭರ್ಜಿ ಹಿಡಿದು ಎದುರಿಗೆ ನಿಂತುಕೊಂಡ. ಕುಳುವಾಡಿ ನೀರುಗಂಟಿಗಳು ಹುತ್ತ ಅಗೆಯಲು ಶುರುಮಾಡಿದರು. ಅದರ ಬಿಲ ಎತ್ತೆತ್ತಲೋ ಇಳಿದು ಹರಡಿತ್ತು. ಇವರು ಎಲ್ಲವನ್ನೂ ಬಿಡದೆ ಸಂಜೆಯ ತನಕ ಶೋಧಿಸಿ ಮುಗಿಸಿದರೂ ಹಾವು ಸಿಕ್ಕಲಿಲ್ಲ.

'ಈಗ ಉತ್ತ ಸೋದ್ಸಾಕೆ ಬರ್ತಾರೆ ಅಂತ ತಿಳ್ಕಂಡು ಅಣ್ಣಯ್ಯ ಜಾಗ ಬುಟ್ಟಿ ಹ್ವಂಟವ್ನೆ'–ಎಂದು ಸಂಜೀವನಾಯಕ ಹೇಳಿದ. ಇನ್ನು ಅದನ್ನು ಹುಡುಕುವುದು ಸಾಧ್ಯವಿಲ್ಲ. 'ಅವ್ನು ಯಾವತ್ತಾದರೂ ಕಾಯ್ಕಂಡಿದ್ದು ಉಡುಗುಂಗೆ ಹಲ್ ಆಕ್ತಾನೆ'– ನಾಯಕನೂ ಹೇಳಿದ.

ನಂಜಮ್ಮನಿಗೆ ತಡೆಯಲಾರದಷ್ಟು ಸಿಟ್ಟು ಬಂತು. ನಾಯಕನ ಕೈಲಿದ್ದ ಬಿದಿರುಕೋಲು ತೆಗೆದುಕೊಂಡು ವಿಶ್ವನ ಬೆನ್ನಿನ ಮೇಲೆ ನಾಲ್ಕು ಬಾರಿಸಿದಳು. ಅವನು ಅಳುತ್ತಾ ನಿಂತ. 'ಇನ್ನು ಆಗೂದಾಗಿದೆ. ಹೊಡದ್ರೆ ಏನಾಗುತ್ತೆ?'–ಮೇಷ್ಟರು ಸಮಾಧಾನ ಹೇಳಿದರು. ನಂಜಮ್ಮ ಹುಡುಗನ ಕೈ ಹಿಡಿದು ಮನೆಗೆ ಬಂದಳು. ಇಬ್ಬರು ಮಕ್ಕಳೂ ಹೋದಮೇಲೆ ಅವಳಿಗೆ ಇರುವವನು ಇವನೊಬ್ಬ. ಈಜುತ್ತಾ ನಡುಗೆರೆಗೆ ಹೋಗುವುದು, ನದಿಯಲ್ಲೇ ಈಜುಬೀಳುವುದು, ಮಾದೇವಯ್ಯನವರ ಗುಡಿಯ ಮಾಳಿಗೆಯ ಮೇಲೆ ಹತ್ತಿ ಕೆಳಕ್ಕೆ ಧುಮುಕುವುದು, ಕದ್ದು ಬೇರೆಯವರ ಮರಿಕುದುರೆ ಹತ್ತಿ ಸವಾರಿ ಮಾಡುವುದು, ಹೆಜ್ಜೇನಿನ ಗೂಡನ್ನು ಒಬ್ಬನೇ ಬಿಚ್ಚಲು ಹೋಗುವುದು, ಒಬ್ಬನೇ ಹಾವು ಹೊಡೆಯುವುದು, ಇಂತಹ ಸಾಹಸ ಕೆಲಸವೇ ಅವನದು.

ಅವಳಿಗೆ ತನ್ನ ತಂದೆಯ ನೆನಪಾಯಿತು. ಅಜ್ಜನ ಹಾಗೆಯೇ ಹುಟ್ಟಿದಾನೆ ಇವನು. ಮುಂದೆ ಅದೇ ಬುದ್ಧಿ ಬರದಿದ್ದರೆ ಸಾಕು. ಈಗ ಇವನು ಮಾಡಿ ಬಂದಿರುವ ಗಂಡಾಂತರಕ್ಕೆ ಏನು ಮಾಡುವುದು? ಹಾವು ಹನ್ನೆರಡು ವರ್ಷ ಹಗೆ ತೀರಿಸುತ್ತೆ. ಇವನು ಬೆಳಗ್ಗೆದ್ದರೆ ಅಲ್ಲಿಗೇ ಸ್ಕೂಲಿಗೆ ಹೋಗಬೇಕು. ಆ ದಿನ ಬೆಳಿಗ್ಗೆ ಅವಳು 'ಸ್ಕೂಲಿಗೆ ಕಳುಸ್ದೆ ಇರೂದೇನೋ ಸರಿ. ಆದರೆ ಎಷ್ಟು ದಿನ ಅಂತ ಹುಡುಗನನ್ನ ಹಿಂಗೇ ಮನೇಲಿ ಕೂರಿಸ್ಕಂಡಿರ್ತೀರಿ?'

ಅದು ಒಂದು ಪ್ರಶ್ನೆಯೇ. ಪ್ರೈಮರಿ ಮುಗಿದು ಅವನು ಕಂಬನಕೆರೆಯ ಮಿಡ್ಲ್ ಸ್ಕೂಲಿಗೆ ಹೋಗಬೇಕು. ತಿಪಟೂರಿಗೂ ಹೋಗಿ ಹೈಸ್ಕೂಲು ಓದಬೇಕು. ಅಷ್ಟಾದರೆ ಮುಂದೆ ಶೇಕ್‌ದಾರಿ ಆದೀತು. ಇಲ್ಲದಿದ್ದರೆ ಮಿಡ್ಲ್‌ಸ್ಕೂಲು ಮೇಷ್ಟರಾಗಬಹುದು. ವಿದ್ಯೆ ಇಲ್ಲದಿದ್ದರೆ ಅವನ ಅಪ್ಪ ಅಥವಾ ಚಿಕ್ಕಪ್ಪ ಆದಾನು. ಏನು ಮಾಡಬೇಕೆಂದು ಅವಳಿಗೆ ತಿಳಿಯಲಿಲ್ಲ. ಹೋಗಿ ಮಾದೇವಯ್ಯನವರನ್ನು ಕೇಳಿದಳು. ಒಂದು ದಿನವೆಲ್ಲ ಯೋಚನೆ ಮಾಡಿ ಅವರೇ ಮನೆಗೆ ಬಂದು ಹೇಳಿದರು: ' ಈಗ ಇವ್ನು ಹ್ಯಂಗೂ ಮೂರನೇ ಕಲಾಸು. ಕರ್ಕಂಡ್ ಹೋಗಿ ನಿಮ್ಮ ಅಣ್ಣಯಾರ ಮನ್ಲಿ ಬಿಟ್‌ಬಿಡಿ. ನಾಕನೇ ಕಲಾಸು ಅಲ್ಲಿ ಮುಗುಸ್ಲಿ, ಆಮ್ಯಾಲೆ ಅವ್ನು ಈ ಸ್ಕೂಲಿಗೆ ಬರಾಕಿಲ್ಲ. ಕಂಬನಕೆರೇಲಿ ಏನಾದ್ರೂ ಅನ್ನದ ದಾರಿ ಮಾಡಿ ಇಂಗ್ಲೀಷ್ ಇಸ್ಕೂಲಿಗೆ ಸೇರಿಸ್‌ಬುಡಿ. ರಜದಾಗೆ ಊರಿಗೆ ಬಂದ್ರೂ ಈ ಊರ ಇಸ್ಕೂಲ್ ಕಡೆ ಹೋಗದೇ ಇದ್ರೆ ಆಯ್ತು. ಅಷ್ ಹೊತ್ಗೆ ಹುಡ್ಗ ಬೆಳ್ದಿರ್ತಾನೆ. ಮನುಷ್ರುಗೇ ಗುರ್ತು ಸಿಕ್ಕಾಕುಲ್ಲ. ಇನ್ನು ಹಾವಿಗೆ ಹ್ಯಂಗೆ ತಿಳೀತೈತಿ?'

'ಅಲ್ಲಿ ನಮ್ಮ ಅತ್ತಿಗೆ ಎಂಥೋಳು ಅಂತ ನಿಮಗೇ ಗೊತ್ತಿದೆಯಲ ಅಯ್ನೋರೇ?'

'ಅವ್ಳು ಹ್ಯಂಗಿದ್ರೇನು? ಮನ್ಲಿ ಅಜ್ಜಿ ಐತಿ. ಯಾವ್ದೂ ಮಕ್ಳಿಲ್ಲ. ನಿಮ್ಮಣ್ಣಯ್ಯನೂ ವೈನಾಗಿ ನೋಡ್ಕಂತೈತಿ.' ಇದೇ ಉತ್ತಮ ಉಪಾಯವೆಂದು ಅವಳಿಗೂ ಎನ್ನಿಸಿತು. ಆದರೆ ಇರುವ ಒಬ್ಬ ಮಗನನ್ನು ಅಲ್ಲಿ ಬಿಟ್ಟು ಬಿಟ್ಟು ತಾನೊಬ್ಬಳೇ ಇಲ್ಲಿ ಹೇಗೆ ಇರಬೇಕು?–ಎಂಬ ಕೊರಗು ಬಾಧಿಸುತ್ತಿತ್ತು. ಊರಿನಲ್ಲಿಟ್ಟುಕೊಂಡರೆ ಅವನಿಗೂ ಸಾವು ತಪ್ಪಿದ್ದಲ್ಲ ಎಂಬ ಭಯದ ಮುಂದೆ ಆ ಕೊರಗು ದೊಡ್ಡದಲ್ಲ. ರಜ ಬಂದಾಗ ಊರಿಗೆ ಕರ್‌ಕೊಂಡು ಬರಬಹುದು. ನಾನೇ ಮಧ್ಯೆ ಮಧ್ಯೆ ಹೋಗಿ ನೋಡಿಕೊಂಡು ಬರೂದು. ಅಂತೂ ಇನ್ನು ಒಂದೂವರೆ ವರ್ಷ ಅವನು ಅಲ್ಲಿರುವುದೇ ಸರಿ ಎಂದು ತೀರ್ಮಾನಿಸಿದಳು.

ಮರುದಿನ ಅವನಿಗೆ ನೀರು ಹಾಕಿದಳು. ದರ್ಜಿಗೆ ಹೇಳಿ ಹೊಸ ಶರಟು ಚಡ್ಡಿಗಳನ್ನು ಹೊಲಿಸಿದಳು. ಕೋಡುಬಳೆ ಚಕ್ಕುಲಿ ಬೇಯಿಸಿದಳು. 'ಅಮ್ಮ, ನಾನು ಇನ್ನೇನೂ ಮಾಡುಲ್ಲ. ನನ್ನ ಎಲ್ಲೂ ಕಳಿಸ್‌ಬ್ಯಾಡ'–ಎಂದು ವಿಶ್ವ ಅಂಗಲಾಚಲು ಶುರುಮಾಡಿದ. 'ಇನ್ನು ಒಂದು ವರ್ಷ ಮರಿ. ಆಮ್ಯಾಲೆ ಕಂಬನಕೆರೆಗೆ ಬರೂವಂತೆ. ನಾನೇ ಬೇಕಾದ್ರೆ ಅಲ್ಲಿಗೆ ಬಂದು ನಿಂಗೆ ಅಡಿಗೆ ಮಾಡ್ಕಂಡು ಇರ್ತೀನಿ. ನೀನು ಸುಮ್ನಿರ್ಲಾರ್ದೆ ಆ ಹಾವು ಯಾಕೆ ಹ್ಡಿಯುಕ್ಕೆ ಹೋಗಿದ್ದೆ?'–ಎಂದು ಕಣ್ಣೀರು ಹಾಕುತ್ತಾ ಅವನ ಕಣ್ಣೀರನ್ನು ಒರಸಿ ಸಮಾಧಾನ ಮಾಡಿದಳು. ಎರಡು ಮೂಟೆ ರಾಗಿ ಇಪ್ಪತ್ತು ಸೇರು ಅವರೇಕಾಳು ಒಂದು ಮೊಗೆ ಹರಳೆಣ್ಣೆ, ಒಂದು ಧಡಿಯ ಸೀಗೆಪುಡಿಗಳನ್ನು ಗಾಡಿಗೆ ಹಾಕಿಸಿದಳು. ಸರ್ಟಿಫಿಕೇಟನ್ನು ಜೋಪಾನವಾಗಿ ಇಟ್ಟುಕೊಂಡು ವಿಶ್ವನೊಡನೆ ಹೊರಟಳು. ಚೆನ್ನಿಗರಾಯರು ಸಂಗಡ ಬರಲಿಲ್ಲ.

ತಂಗಿಯ ಮಗನನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಕಲ್ಲೇಶನಿಗೂ ಸಂತೋಷವೇ. ಅಕ್ಕಮ್ಮನಿಗಂತೂ ಎಷ್ಟೋ ಉತ್ಸಾಹ. ನೀರು ಗೀರು ಸೇದಲು ಅವಳ ಕೈಲಿ ಆಗುವುದಿಲ್ಲ. ಆದರೂ ಸರಿ, ತಾನು ಮರಿಮಗನಿಗೆ ವಾರಕ್ಕೊಂದು ಸಲ ಎಣ್ಣೆ ನೀರು ಹಾಕುವುದಾಗಿ ಹೇಳಿದಳು. ಹೆಡಸು ತೋರಿಸಿದವಳು ಕಲ್ಲೇಶನ ಹೆಂಡತಿಒಬ್ಬಳೇ. ಆದರೆ ಅವಳ ವರ್ತನೆ ಯಾರಿಗೂ ಅನಿರೀಕ್ಷಿತವಾದದ್ದಲ್ಲ.

ಸಂಗಡ ತಂದಿದ್ದ ದಿನಸಿ ಧಾನ್ಯಗಳನ್ನು ಕಂಡ ಕಲ್ಲೇಶ–'ಇವನ್ನೆಲ್ಲ ಯಾಕೆ ತಂದೆ? ನನ್ನಮನೇಲಿ ಇಷ್ಟು ಅನ್ನವಿಲ್ಲವೆ? ವಾಪಸ್ ಹೇರ್ಕಂಡು ಹೋಗು' ಎಂದ.

'ಮಗನ ಊಟದ ಖರ್ಚು ಅಂತ ನಾನು ತರಲಿಲ್ಲ. ಅವನಿಗೆ ಅನ್ನ ಹಾಕೂಕೆ ನೀನು ಬಾಧ್ಯಸ್ಥನೇ. ಏನೋ ಮನೇಲಿತ್ತು ಅಂತ ತಂದೆ. ನಿನ್ನ ಮನೇಲೂ ತುಂಬ ಕರಾವಾಗುತ್ತೆ. ಅವನಿಗೆ ಹಾಲು ತುಪ್ಪಕ್ಕೇನೂ ಯೋಚನೆ ಇಲ್ಲ. ನೀನು ಇನ್ನೇನೂ ಮಾಡಬ್ಯಾಡ. ಅವನ ತುಂಟತನ ವಿಪರೀತ. ನಮ್ಮೂರಿನಲ್ಲಿ ಅವನಿಗೆ ಗಂಡಸರ ಭಯವಿರಲಿಲ್ಲ. ಎಷ್ಟೇ ಹೊಡೆದರೂ ಗಂಡುಮಕ್ಕಳು ಹೆಂಗಸರಿಗೆ ಗೆದರೂದಿಲ್ಲ. ನಾನೇನಂತಾಳೋ ಅಂತ ಪಟ್ಟುಕೋಬ್ಯಾಡ. ನಾಲ್ಕು ಕೊಟ್ಟು ಭಯದಲ್ಲಿಟ್ಟು ಬುದ್ಧಿ ಕಲಿಸು. ಓದಿ ಬರಿಯೋದ್ರಲ್ಲಿ ಅವನು ಜಾಣ. ಊರಿನಲ್ಲಿರೂತನಕ ನಾನು ಮನೇಲಿ ಪಾಠ ಹೇಳಿಕೊಡ್ತಿದ್ದೆ. ಇಲ್ಲಿ ನಿಂಗೆ ಆದ್ರೆ ಹೇಳಿಕೊಡು. ಇಲ್ದೆ ಇದ್ರೆ ಮೇಷ್ಟ್ರನ್ನ ಗೊತ್ತುಮಾಡು. ನಾನು ತಿಂಗ್ಳಿಗೆ ಒಂದು ರೂಪಾಯಿ ಕೊಟ್ಟುಕಳುಸ್ತೀನಿ.'

ಇನ್ನು ಕಲ್ಲೆಶ ಮತ್ತೆ ಮಾತನಾಡುವಂತಿರಲಿಲ್ಲ. 'ನಾಲ್ಕು ದಿನ ಇದ್ದು ಹೋಗು'–ಎಂದು ಅವನೂ ಅಕ್ಕಮ್ಮನೂ ಹೇಳಿದರೂ, ಅವಳಿಗೆ ಊರಿನಲ್ಲಿ ಲೆಕ್ಕದ ಕೆಲಸವಿತ್ತು. ಮರುದಿನ ಅದೇ ಗಾಡಿಯಲ್ಲಿ ಹೊರಟಳು.

'ಅಮ್ಮ, ನಾನೂ ಊರಿಗ್ ಬತ್ತೀನಿ'–ಎಂದು ವಿಶ್ವ ಅಳುತ್ತಿದ್ದ. ಅಮ್ಮನಿಗೂ ಅಳು ಬರುತ್ತಿತ್ತು. ಕಣ್ಣೀರು

ಒರೆಸಿಕೊಳ್ಳುತ್ತಾ ಅವಳು ಗಾಡಿಯ ಮೇಲೆ ಕೂತಳು.

ಅಪ್ಪ ಕಂಠೀಜೋಯಿಸರನ್ನು ಕಾಣಲಾಗಲಿಲ್ಲ. ಅವರು ಊರಿಗೆ ಬಂದು ಮೂರು ತಿಂಗಳಾಯಿತಂತೆ.

– 2 –

ವಿಶ್ವನನ್ನು ಬಿಟ್ಟು ಬಂದಮೇಲೆ ನಂಜಮ್ಮನಿಗೆ ಹೊತ್ತು ಹೋಗುವುದೇ ಕಷ್ಟವಾಯಿತು. ಮಾಡುವುದಕ್ಕೆ ಕೆಲಸವೇನೋ ಇರುತ್ತಿತ್ತು. ಆದರೆ ಸದಾ ಬಿಕೋ ಎನ್ನುತ್ತಿತ್ತು. ಪಾರ್ವತಿ ರಾಮಣ್ಣರ ನೆನಪು ಮತ್ತೆ ಕಾಡಲು ಶುರುವಾಯಿತು. ಅವಳು ಕೂತು ಶ್ಯಾನುಭೋಗಿಕೆ ಲೆಕ್ಕ ಬರೆಯುವ, ರಾಗಿ ಮಾಡುವ, ಬೀಸುವ, ಬಂದವರೊಡನೆ ಮಾತನಾಡುವ ನಡುಮನೆಯಲ್ಲೇ ಇಬ್ಬರು ಮಕ್ಕಳೂ ಕಾಯಿಲೆ ಮಲಗಿ ಒಬ್ಬರ ಹಿಂದೆ ಒಬ್ಬರಂತೆ ಸತ್ತುಹೋದುದು. ಈ ಮನೆಯಲ್ಲಿರುವುದೇ ಬೇಡವೆನಿಸುತ್ತಿತ್ತು. ಆದರೆ ಬೇರೆ ಎಲ್ಲಿಗೆ ಹೋಗುವುದು? ಇದೇ ಸಮಯದಲ್ಲಿ ಅವಳಿಗೆ ನೆನಪಾಯಿತು: ಈ ಮನೆಗೆ ಬಂದು ಹೆಚ್ಚು ಕಡಿಮೆ ಹದಿ ಮೂರು ವರ್ಷವಾಯಿತು. ಗುಂಡೇಗೌಡರ ಮನೆ ತನ್ನ ಸ್ವಂತ ಮನೆಯೇ ಎನ್ನುವಂತೆ ಆಗಿಹೋಗಿದೆ. ಅವರಿಗೇನೂ ಇದರ ಅಗತ್ಯವಿಲ್ಲ. ಆದರೆ ತಾನು ಊರಿನಲ್ಲಿ ಒಂದು ಸ್ವಂತ ಮನೆಯನ್ನಾದರೂ ಮಾಡಬೇಕು– ಎಂಬ ಆಶೆಯೊಂದು ಹುಟ್ಟಿತು.

ಹೊಸ ಮನೆಯಾದರೂ ಯಾಕೆ ಬೇಕು? ಮುಂದೆ ವಿಶ್ವ ಈ ಊರಿನಲ್ಲಿರುವುದು ಅವಳಿಗೆ ಬೇಡ. ಅವನು ಶೇಕ್‌ದಾರನಾಗಬೇಕು. ಇಲ್ಲದಿದ್ದರೆ ಮಿಡ್ಲ್ ಸ್ಕೂಲು ಮೇಷ್ಟರಾದರೂ ಆಗಬೇಕು. ಅವನೇನೂ ಇಲ್ಲಿ ಇರುವವನಲ್ಲ. ಮಗ ಇದ್ದಲ್ಲಿ ಹೋಗುವವಳು ತಾನು ಆದರೆ ತನ್ನ ಊರು ಅಂತ ಒಂದು ಗೂಡು ಇರಬೇಕು. ರಜ ಬಂದಾಗ ಬಂದು ನಾಲ್ಕು ದಿನ ಇರುವುದಕ್ಕೆ ಒಂದು ಜಾಗ ಬೇಕು. ಇದೇ ಸಂದರ್ಭದಲ್ಲಿ ಒಂದು ನಿವೇಶನ ಖರೀದಿಗೆ ಬಂತು. ಗಾಣಿಗರ ಚೆಲುವಶೆಟ್ಟಿ ಎಂಬುವವನಿಗೆ ಹೆಂಡತಿಯ ಊರಿನಲ್ಲಿ ಒಳ್ಳೆಯ ಆಸ್ತಿ ಸಿಕ್ಕಿತು. ಇಲ್ಲಿಯದನ್ನೆಲ್ಲ ಮಾರಿಹಾಕಿ ಅಲ್ಲಿಗೆ ಹೋಗಬೇಕೆಂದು ಅವನು ನಿರ್ಧರಿಸಿದ. ಅವನ ಮಾರಾಟದ ಕಾಗದ ಪತ್ರಗಳನ್ನೆಲ್ಲ ತಾನೇ ಬರೆಸಿಕೊಡುವುದಾಗಿ ಒಪ್ಪಿಕೊಂಡಳು. ಎಂದರೆ ಲೇಖನ ಅವಳದು. ಅಕ್ಷರ ಚೆನ್ನಿಗರಾಯರದು. ಜಮೀನು ಕೊಳ್ಳುವವರು ಬರವಣಿಗೆಗೆ ಇವರಿಗೆ ಏನೂ ಕೊಡುವಂತಿಲ್ಲ. ಒಟ್ಟಿನಲ್ಲಿ ಆದ ಖರೀದಿಯ ಒಳಗೆ ಈ ನಿವೇಶನವೂ ಸೇರಬೇಕು. ಇದೊಂದನ್ನು ಚೆಲುವಶೆಟ್ಟಿ ಇವರಿಗೆ ಬರೆದುಕೊಡಬೇಕು. ಇವರು ಐವತ್ತು ರೂಪಾಯಿ ಖರೀದಿ ಕೊಟ್ಟರೆ ಸಾಕು. ಹಾಗೆಯೇ ಎಲ್ಲವೂ ಆಯಿತು. ಸರ್ಕಾರಿ ಕಾನೂನನ್ನು ಬಲ್ಲ ನಂಜಮ್ಮ ನಿವೇಶನವನ್ನು ತನ್ನ ಹೆಸರಿಗೇ ಬರೆಸಿಕೊಂಡಳು. ಕಂದಾಯದ ರಶೀತಿಯ ಮೆಲೆ ಇತರ ಜಮೀನು ಕೊಂಡವರಿಂದ ಐವತ್ತು ರೂಪಾಯಿಯನ್ನು ಕೊಡಿಸಿದಳು. ಎರಡು ಅಂಕಣ ಜಗುಲಿ, ಒಳಗೆ ಮೂರು ಅಂಕಣದ ತೊಟ್ಟಿ, ಒಂದು ಅಂಕಣದ ಅಡಿಗೆ ಮನೆ, ಇನ್ನೊಂದು ರಾಗಿ ಪಾಗಿ ತುಂಬಲು ಅಥವಾ ಮುಂದೆ ಮಗನಿಗೆ ಮದುವೆಯಾದಮೇಲೆ ಅವರು ಮಲಗಲು; ಇಷ್ಟು ಅಂದಾಜು ಹಾಕಿ ಹಿಂಭಾಗದಲ್ಲಿ ಎರಡು ಹಸುಗಳನ್ನು ಕಟ್ಟುವಂತೆ ಗುಡಿಸಲು, ಉಳಿದ ಜಾಗದಲ್ಲಿ ಒಂದಿಷ್ಟು ತರಕಾರಿ ಬೆಳೆದುಕೊಳ್ಳುವುದು. ಒಟ್ಟು ಈ ಅಂದಾಜಿಗೆ ನಾಡಹೆಂಚು ಹೊದಿಸಿದರೆ ಏನಿಲ್ಲವೆಂದರೂ ಒಂದೂವರೆ ಸಾವಿರ ರೂಪಾಯಿ ಬೇಕು.

ಈಗಲೂ ದಿನಸಿ ಲೆಕ್ಕವಿದೆ. ಮೊದಲಿನಷ್ಟೇ ಆದಾಯವೂ ಇದೆ. ಕುರುಬರಹಳ್ಳಿಯವರೇ ಅಲ್ಲದೆ ರಾಮಸಂದ್ರ ಲಿಂಗಾಪುರದವರೂ ದಿನಸಿ ಲೆಕ್ಕ ಬಂದಮೇಲೆ ಮನೆಗೆ ಇಷ್ಟು ರಾಗಿ ಎಂದು ಕೊಡಲು ಪ್ರಾರಂಭಿಸಿದ್ದಾರೆ. ಮನೆಯಲ್ಲಿ ಮೊದಲಿನಷ್ಟು ಖರ್ಚಿಲ್ಲ. ಒಪ್ಪತ್ತು ಅಡಿಗೆ ಮಾಡಿದರೆ ಎರಡು ಹೊತ್ತಿಗೂ ಸಾಕು. ಒಟ್ಟು ಜಮಾವಣೆಯಾದ ರಾಗಿಯನ್ನು ಮಾರಬಹುದು. ಈಗ ರಾಗಿ ಖಂಡುಗಕ್ಕೆ ತೊಂಬತ್ತು ರೂಪಾಯಿಯಾಗಿದೆ. ಜೊತೆಗೆ ಎರಡು ವರ್ಷದ ಪೋಟಿಕೆ ಹಣವೆಂದರೆ ಐನೂರು ರೂಪಾಯಿಯಾಗುತ್ತೆ. ಮುಂದಿನ ವರ್ಷದ ಕಂದಾಯವನ್ನೂ ಈಗಲೇ ಕೊಟ್ಟಿರಿ ಅಂದರೆ ಕುರುಬರಹಳ್ಳಿಯವರು ಕೊಡುತ್ತಾರೆ.

ಇದೇ ಸಂದರ್ಭದಲ್ಲಿ ಒಂದು ದಿನ ಮೇಷ್ಟರು ಬಂದು ಹೇಳಿದರು: 'ನೋಡಿ, ಈಗ ಸರ್ಕಾರದೋರು ವಯಸ್ಕರ ಶಿಕ್ಷಣ ಸಮಿತಿ ಅಂತ ಮಾಡಿದಾರೆ. ಗಂಡಸರು ಹೆಂಗಸರೆಲ್ಲ ಓದಿ ಬರೆಯೂದು ಕಲಿಯಬೇಕು ಅಂತ ಸರ್ಕಾರದ ಹುಕುಂ ಆಗಿದೆ. ಹದಿನೆಂಟು ವರ್ಷಕ್ಕೆ ಮೇಲ್ಪಟ್ಟವರಿಗೆ ರಾತ್ರಿ ಏಳು ಗಂಟೆಯಿಂದ ಒಂಬತ್ತು ಗಂಟೆ ತನಕ ಓದಿ ಬರೆಯೂದು ಹೇಳಿಕೊಡೂದು. ಅದಕ್ಕೆ ನೈಟ್ ಸ್ಕೂಲ್ ಅಂತಾರೆ. ಈ ಊರಲ್ಲಿ ಗಂಡಸರ ನೈಟ್ ಸ್ಕೂಲಿಗೆ ನನ್ನನ್ನ ನೇಮಕಮಾಡಿದಾರೆ. ಸಂಬಳವಲ್ಲದೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಕೊಡ್ತಾರೆ. ಈ ಊರಲ್ಲಿ ವಿದ್ಯಾವಂತೆಯಾದ ಹೆಂಗಸರು ಯಾರಿದಾರೆ ಅಂತ ನಮ್ಮ ಇನ್‌ಸ್ಪೆಕ್ಟರು ಕೇಳಿದರು. ನಾನು ನಿಮ್ಮ ಹೆಸರು ಹೇಳಿದೆ.'

'ನನ್ನ ಕೈಲಿ ಆ ಕೆಲಸ ಆಗುತ್ತದೆಯೇ ಮೇಷ್ಟರೆ?'

ಇದೇನು ಹೀಗಂತೀರಾ? ಒಟ್ಟು ಎಂಟು ತಿಂಗಳ ಕೆಲಸ ಅದು. ಒಂದು ಗುಂಪು ಆದಮೇಲೆ ಇನ್ನೊಂದು ಗುಂಪಿಗೆ ಶುರು ಮಾಡೂದು. ಅ ಆ ಇ ಈ ಕಲಿಸಿ ಎರಡನೇ ಪುಸ್ತಕ ಓದುವಷ್ಟಾದರೆ ಸಾಕು. ಆಮೇಲೆ ಅವರೇ ಮನೇಲಿ ಪೇಪರು ಗೀಪರು ಓದ್ಕಂಡು ಚಾಲ್ತಿ ಮಾಡ್ಕಬೇಕು. ತಿಂಗಳಿಗೆ ಇಪ್ಪತ್ತೈದು ರೂಪಾಯಿ

ಬರುತ್ತೆ. ಬರೀ ಹೆಂಗಸರೇ ಸೇರಬೇಕು.'

'ಅಕ್ಷರ ಕಲಿಯುಕ್ಕೆ ಯಾರಿಗೆ ಆಶೆ ಇದೆ , ಅದೂ ಈ ಊರ ಹೆಂಗಸರಿಗೆ?'

'ಸರ್ಕಾರ್‍ದೋರೇ ಸ್ಲೇಟು ಪುಸ್ತಕ, ಬಳಪ, ಸೀಸದ ಕಡ್ಡಿ, ಎಲ್ಲಾ ಕೊಡ್ತಾರೆ. ನಿಮ್ಮ ಉರಿಸೋ ದೀಪದ ದುಡ್ಡೂ ಕೊಡ್ತಾರೆ. ಬೋರ್ಡು, ಸೀಮೇಸುಣ್ಣ, ಎಲ್ಲಾ ಕೊಡ್ತಾರೆ. ನಿಮ್ಮ ಮನೇಲಿ ಸ್ಕೂಲು ಮಾಡಿ. ಮೊದಲು ಒಂದೇಳೆಂಟು ಜನ ಹೆಂಗಸರನ್ನ ಗುಡ್ಡೆ ಹಾಕಿದ್ರೆ ಆಮ್ಯಾಲೆ ಬಾಕಿಯೋರು ಬರ್‍ಭೌದು. ಬೇಕಾದ್ರೆ ನಮ್ಮನೆಯೋಳುನ್ನೂ ಕಳುಸ್ತೀನಿ.'

ನಂಜಮ್ಮ ಇದಕ್ಕೆ ಒಪ್ಪಲಿಲ್ಲ. ಒಂದು ದಿನ ಇವರ ಮನೆಗೆ ಬಂದ ಶೇಕ್‍ದಾರರೂ ಇದೇ ಮಾತು ಹೇಳಿದಮೇಲೆ ಒಪ್ಪಿಕೊಂಡಳು. ಕಂಬನಕೆರೆಯ ಮಿಡ್ಲ್‍ಸ್ಕೂಲ್ ಹೆಡ್ಮಾಸ್ಟರು ಇದರ ಮೇಲ್ವಿಚಾರಕರಾಗಿದ್ದರು. ಅವರೇ ಒಂದು ದಿನ ಗಾಡಿ ಹೊಡೆಸಿಕೊಂಡು ಬಂದು ಸ್ಲೇಟು ಪುಸ್ತಕ ಬೋರ್ಡು, ಲಾಟೀನು ಮೊದಲಾದ ಎಲ್ಲವನ್ನೂ ಕೊಟ್ಟು ಹೋದರು. ಮೇಸ್ಟರ ಹೆಂಡತಿಗೆ ಅ ಆ ಇ ಈ ಬರುತ್ತಿತ್ತು. ಆದರೂ ಮೇಸ್ಟರು ಅವರನ್ನು ಸೇರಿಸಿಕೊಂಡರು. ನಂಜಮ್ಮನಿಗೆ ಆಶ್ಚರ್ಯವಾದುದೆಂದರೆ ಸರ್ವಕ್ಕ ತಾನಾಗಿಯೇ ಬಂದು ಸೇರಿಕೊಂಡಳು. ಗಂಡ ಮನೆಯಲ್ಲಿ ಅಡ್ಡಿ ಮಾಡಿದರೂ ಅವಳು ಕೇಳಲಿಲ್ಲ. ಲಿಂಗಾಯಿತರ ಪೈಕಿ ನಾಲ್ಕು ಜನ, ಮಗ್ಗದ ಇಬ್ಬರು, ಕುರುಬರಕೇರಿಯ ಎರಡು ಹೆಣ್ಣು ಹುಡುಗಿಯರು ಮೊದಲಾಗಿ ಒಟ್ಟು ಹದಿನಾಲ್ಕು ಜನರಾಯಿತು. ಅ ಆ ಇ ಈ ಎಂದು ಬೋರ್ಡಿನ ಮೇಲೆ ಬರೆದು ಎಲ್ಲರಿಗೂ ಕ್ಲಾಸು ಮಾಡುವುದು ನಂಜಮ್ಮನಿಗೆ ಹೊಸ ಅನುಭವ.

ಕಲಿತವರು ಕಲಿತರು; ಇಲ್ಲದವರು ಇಲ್ಲ. ಆದರೆ ಸರ್ವಕ್ಕನಿಗೆ ಇಷ್ಟು ಬುದ್ಧಿ ಇದೆ ಎಂಬುದು ನಂಜಮ್ಮನಿಗೆ ಗೊತ್ತಿರಲಿಲ್ಲ. ಒಂದೇ ದಿನಕ್ಕೆ ಅವಳು ಎಂಟು ಅಕ್ಷರ ಕಲಿತಳು. ಎಂಟು ದಿನದಲ್ಲಿ ಐವತ್ತೆರಡನ್ನೂ ಕಲಿತು ಸರಳ ಅಕ್ಷರಗಳನ್ನು ಸೇರಿಸಿ ಓದತೊಡಗಿದಳು.

'ನಂಜಮ್ಮಾರೇ, ಮೊದ್ಲು ನೀವು ನಂಗೆ ಇದಾರ ಏಳ್ಕೊಟ್ಟಿದ್ರೆ ಕಲ್ತ್ಕತ್ತಿದ್ದೆ ಕಣ್ರಿ. ನಾನು ನಿಮ್ಹಾಗೆ ಲೆಕ್ಕ ಗಿಕ್ಕ ಬರೀಭೌದಾಗಿತ್ತು'– ಎಂದಳು.

'ಲೆಕ್ಕ ಬರಿಯುಕ್ಕೆ ಎಲ್ಲರಿಗೂ ಶ್ಯಾನುಭೋಗಿಕೆ ಎಲ್ಲಿರುತ್ತೆ ಸರ್ವಕ್ಕ?'

'ಅದೂ ನಿಜ ಅನ್ನಿ.'

ದಿನವೂ ಬೆಳಗಿನಿಂದ ಸಂಜೆಯತನಕ ಮನೆಗೆಲಸ ಶ್ಯಾನುಭೋಗಿಕೆಯ ಲೆಕ್ಕಗಳಾಗುತ್ತಿದ್ದವು. ಒಂದೊಂದು ದಿನ ಇಳಿಮಧ್ಯಾಹ್ನದ ಹೊತ್ತು ಮಾದೇವಯ್ಯನವರು ಬಂದು ಕೂತು ಏನಾದರೂ ಮಾತನಾಡುತ್ತಿದ್ದರು. ರಾತ್ರಿಯ ಎಂಟೂವರೆ ಒಂಬತ್ತರ ತನಕ ಕ್ಲಾಸು ನಡೆಯುತ್ತಿತ್ತು. ಆಮೇಲೆ ಊಟಮಾಡಿ ಮಲಗಿದರೆ ಬೇಗ ನಿದ್ದೆ ಬರುತ್ತಿತ್ತು. ಅದೊಂದು ಉಪಯೋಗ. ಪಾಠ ಹೇಳುವಾಗ ಅವಳಿಗೆ ವಿಶ್ವನ ನೆನಪು ಬರುವುದು. ಈಗ ಅವನು ಹೇಗಿದ್ದಾನೋ! ಅಮ್ಮನನ್ನು ನೆನೆಸಿಕೊಂಡು ಅಳಬಹುದು. ಅಕ್ಕಮ್ಮ ಇರುವ ತನಕ ಯೋಚನೆ ಇಲ್ಲ. ಅವಳು ಮನಸ್ಸು ನೋಯಿಸುವುದಿಲ್ಲ.

ಕ್ಲಾಸು ಎರಡು ಮೂರು ತಿಂಗಳು ನಡೆಯಿತು. ಸೇರಿದವರಲ್ಲಿ ಆರು ಜನ ಬಿಟ್ಟು ಈಗ ಎಂಟು ಜನ ಮಾತ್ರ ಬರುತ್ತಿದ್ದಾರೆ. 'ಅವರು ಬಿಟ್ಟರೂ ನೀವು ಅಟೆಂಡನ್ಸ್ ರಿಜಿಸ್ಟರಿನಲ್ಲಿ ಮಾತ್ರ ಎಲ್ಲರಿಗೂ ಪ್ರಸಂಟ್ ಹಾಕ್ಕೊಂಡು ಬನ್ನಿ'–ಎಂದು ಮೇಷ್ಟರು ಹೇಳಿದ್ದರು. ಮೇಷ್ಟರ ಗಂಡಸರ ರಾತ್ರಿ ಸ್ಕೂಲೇ ಉತ್ತಮವಾಗಿತ್ತು. ಒಟ್ಟು ಸೇರಿದ್ದ ಇಪ್ಪತ್ತೆರಡು ಜನ ದಲ್ಲಿ ಇಪ್ಪತ್ತು ಜನ ತಪ್ಪದೆ ಹೋಗುತ್ತಿದ್ದರು.

ಒಂದು ದಿನ ಮನೆಯಲ್ಲಿ ಚೆನ್ನಿಗರಾಯರು ಇರಲಿಲ್ಲ. ಮೇಷ್ಟರು ಬಂದರು. ಅವರ ರಾತ್ರಿ ಸ್ಕೂಲಿನ ವಿಷಯ ಹೇಳುತ್ತಿದ್ದರು: 'ಇಷ್ಟು ವಯಸ್ಸಾದ್ರೂ ನಾಲ್ಕು ದಿನ ಹೇಳಿಕೊಟ್ರೂ ಅಕ್ಷರಾನೇ ಜ್ಞಾಪಕದಲ್ಲಿ ಇಟ್ಕಳುಲ್ಲ. ಅವರ ಜ್ಞಾನ ಎತ್ತಲೋ ಇರುತ್ತೆ. ಸ್ಕೂಲಿನೊಳಗೆ ಬೀಡಿ ಸೇದ್‍ಕೂಡ್ದು ಅಂದ್ರೂ ಬಿಡುಲ್ಲ. ಈ ಜನ ಹ್ಯಾಗೆ ಅಕ್ಷರಸ್ಥರಾಗ್ತಾರೆಯೋ ದೇವರಿಗೇ ಗೊತ್ತು.'

'ಮೇಷ್ಟರೇ, ನಮ್ಮ ಅಪ್ಪಣ್ಣಯ್ಯ ನಾಳೆ ಸಾರು ತಗಂಡುಹೋಗೂಕೆ ಬಂದಾಗ ಹೇಳ್ತೀನಿ. ಅವ್ನುನ್ನೂ ನಿಮ್ಮ ರಾತ್ರಿ ಸ್ಕೂಲಿಗೆ ಸೇರಿಸ್ಕಳಿ. ಹಗಲು ಹೊತ್ತೂ ಅವರು ಊರಲ್ಲಿದ್ದ ದಿನ ನೀವು ಒಂದಿಷ್ಟು ಹೇಳಿಕೊಡಿ. ಸ್ವಲ್ಪನಾದ್ರೂ ವಿದ್ಯವಿದ್ರೆ ಅವರ ಪಾಡು ಹೀಗಾಗ್ತಾ ಇರ್‍ಲಿಲ್ಲ.'

'ಓ, ಅಪ್ಪಣ್ಣಯ್ಯನೋರು ಬೇರೆ ರಾತ್ರಿ ಸ್ಕೂಲಿಗೆ ಹೋಗ್ತಿದಾರೆ'– ಎಂದು ಅವರು ನಕ್ಕರು.

'ಏನು ಸಮಾಚಾರ?'

'ಈಗ ಅವರಿಗೂ ನರಸಿಗೂ ಸ್ನೇಹವಂತೆ.'

ನಂಜಮ್ಮ ಇದನ್ನು ನಂಬದಾದಳು. ಅಪ್ಪಣ್ಣಯ್ಯನ ಹತ್ತಿರ ದುಡ್ಡು ದುಗ್ಗಾಣಿ ಇದೆ? ಶೋಕೀದಾರನೆ? ದೇಶಾವರಿಯಲ್ಲಿ ರಾಗಿ ಕಾಳು ತಂದು ಮುದ್ದೆ ತೊಳಸಿ ತಿನ್ನುವ ಬ್ರಾಹ್ಮಣ. ಬೇರೆ ಹೆಂಗಸರನ್ನು ಹಾಗೆಲ್ಲ ಕತ್ತೆತ್ತಿ ನೋಡುವ ಸ್ವಭಾವವೂ ಅಲ್ಲ.

'ಇದೆಲ್ಲೋ ಸುಳ್ಳು ಸಮಾಚಾರ ಇರ್‍ಭೌದು ಮೇಷ್ಟ್ರೆ'–ನಂಜಮ್ಮ ತನಗೆ ಎನ್ನಿಸಿದುದನ್ನು ಹೇಳಿದಳು.

‘ಇಲ್ಲ ನಿಜವಂತೆ. ಈಗ ಅವಳನ್ನೂ ಮೂಸೋರು ಯಾರೂ ಇಲ್ಲ. ಅವಳಿಗೇನು ದುಡ್ಡಿಗೆ ತಾಪತ್ರಯವಿಲ್ಲ. ಅಪ್ಪಣ್ಣಯ್ನೋರಿಗೂ ಯಾರು ಜೊತೆ? ಹೆಂಡತಿಯೇ, ಮಕ್ಕಳೇ, ತಾಯಿಯೇ? ಅಲ್ಲಿ ತಿರುಪೆ ಮಾಡಿ ಇಲ್ಲಿ ತಂದು ಬೇಯಿಸ್ಕಂಡ್ ತಿಂತಾರೆ. ಹ್ಯಾಗೆ ಬೆಳೀತೋ ಸಂಬಂಧ, ದೇವರಿಗೇ ಗೊತ್ತು.’

ನಂಜಮ್ಮನಿಗೆ ಯಾಕೋ ನಾಚಿಕೆಯಾದಂತೆ ಆಯಿತು. ಎಷ್ಟಾದರೂ ಅವರು ತನ್ನ ಮನೆಯವರೇ. ತನಗೆ ಮೈದುನನಾಗಬೇಕು. ತಿರುಪೆ ಮಾಡಿ ಜೀವಿಸುವುದು ಅವರ ಹಣೇಲಿ ಬರೆದಿರಬಹುದು. ಆದರೆ ಇಷ್ಟು ದಿನವಾದಮೇಲೆ ಈ ಪ್ರಾರಬ್ಧ ಯಾಕೆ ಅಂಟಬೇಕು? ಅವರೊಬ್ಬರು ದೇಶಾವರಿಗೆ ಹೋಗದೆ ತನ್ನ ಮನೆಯಲ್ಲೇ ಊಟ ಮಾಡಿಕೊಂಡಿರಲಿ. ಇರುವ ಎರಡು ಹಸುಗಳ ನಿಗ ನೋಡಿಕೊಂಡಿದ್ದರೆ ಸಾಕು–ಎಂಬ ಯೋಚನೆ ಅವಳಿಗೆ ಕೆಲವು ದಿನದಿಂದ ಬಂದಿತ್ತು. ಆದರೆ ಹಾಗೆ ಹೇಳಿದರೆ ಅತ್ತೆ ಗಂಗಮ್ಮ ಜಗಳ ತೆಗೆಯುತ್ತಾರೆ. ಸಲ್ಲದ ಅಪಪ್ರಚಾರವನ್ನೂ ಮಾಡಬಹುದು. ಅಲ್ಲದೆ ಅಪ್ಪಣ್ಣಯ್ಯನ ಸ್ವಭಾವವೂ ಒಂದು ತೆರನಾಗಿರುವುದಿಲ್ಲ. ದೇಶಾವರಿ ಸಂಚಾರ ಮಾಡದಿದ್ದರೆ ಅವರ ಕಾಲು ಕಡಿಯುತ್ತಿರುತ್ತೆ. ಅವರವರ ಹಣೆಯಲ್ಲಿ ಬರೆದದ್ದು ಅವರವರಿಗೆ–ಎಂದು ಸುಮ್ಮನಾಗಿದ್ದಳು. ಆದರೆ ಮೇಷ್ಟರು ಈಗ ಹೇಳುವುದನ್ನು ಕೇಳಿದ ಮೇಲೆ ಮನಸ್ಸು ತಡೆಯಲಿಲ್ಲ.

ಅಪ್ಪಣ್ಣಯ್ಯನಿಗೆ ಈ ವಿಷಯದಲ್ಲಿ ಬುದ್ಧಿ ಮಾತು ಹೇಳಲೇ ಎಂದು ಅವಳು ನಾಲ್ಕು ದಿನ ಅಳೆದು ಸುರಿದು ನೋಡಿದಳು. ಕೊನೆಗೆ ಮನಸ್ಸು ತಡೆಯಲಿಲ್ಲ. ಒಂದು ಮಧ್ಯಾಹ್ನ ಅವನು ಸಾರಿನ ಪಾತ್ರೆ ಹಿಡಿದು ಬಂದಾಗ ಚೆನ್ನಿಗರಾಯರು ಮನೆಯಲ್ಲಿರಲಿಲ್ಲ. ಅವಳೇ–‘ಅಪ್ಪಣ್ಣಯ್ಯ, ಒಂದು ಮಾತು ಕೇಳ್ತೀನಿ. ನೀವು ಏನೂ ತಿಳ್ಕಕೂಡ್ದು’ ಎಂದಳು.

‘ಏನ್ಹೇಳಿ.’

‘ಜನದ ನಾಲಿಗೆಗೆ ಯಾವತ್ತೂ ಹಿಡಿತವಿಲ್ಲ. ನೀವು ನರಸಮ್ಮನ ಅಂಗ್ಡೀಲಿ ಹೊಗೆಸೊಪ್ಪು ಕೊಂಡ್ಕಳುಕ್ಕೆ ಹೋಗೋದುನ್ನೇ ನೆವ ಮಾಡ್ಕಂಡು ಏನೇನೋ ಅಂತಾರೆ. ನೀವು ಬೇರೆ ಅಂಗಡೀಲಿ ಹೊಗೆಸೊಪ್ಪು ಕೊಂಡ್ಕೊಂಡ್ರೆ ಆಗುಲ್ವೆ? ಸುಮ್‌ಸುಮ್ನೆ ಯಾಕೆ ಜನದ ನಾಲಿಗೆಗೆ ಸಿಕ್ಕಾಬೇಕು?

‘ಅವುರವ್ವನಾ, ಅದ್ಯಾವ್‌ನು ಹಾಗಂದೋನು?’

‘ಯಾರಾದ್‌ರೂ ಆಕ್ಕಳ್ಳಿ. ನಮ್ಮ ಎಚ್ಚರ ನಮಗಿದ್ರೆ ಒಳ್ಳೇದಲ್ವೆ?’

ಅಪ್ಪಣ್ಣಯ್ಯ ಮತ್ತೆ ಮಾತನಾಡಲಿಲ್ಲ. ಹುಳಿ ಇಸಿದುಕೊಂಡು ಹೋದ. ಆದರೆ ಮರುದಿನ ಸಾರಿಗೆ ಬರಲಿಲ್ಲ. ದಿನವೂ ಹೆಚ್ಚಾಗಿ ಮಾಡಿಟ್ಟು ಒಟ್ಟು ಎಂಟು ದಿನ ದಂಡವಾದಮೇಲೆ ನಂಜಮ್ಮ ಕಡಿಮೆ ಮಾಡಲು ಶುರುಮಾಡಿದಳು. ತಾನು ಯಾಕಾದರೂ ಹಾಗೆ ಕೇಳಿದೆನೋ, ತನ್ನ ಮೇಲಿನ ಸಿಟ್ಟಿಗೋ ಅಥವಾ ನಾಚಿಕೆಗೋ ಅವನು ಬಂದಿಲ್ಲ. ಗಂಡಸು ಒಬ್ಬನೇ ಹಿಟ್ಟು ತೊಳೆಸಿಕೊಳ್ಳುವುದರ ಜೊತೆಗೆ ಬೇಳೆಯನ್ನೂ ಬೇಯಿಸುವುದೆಂದರೆ ಎಷ್ಟು ತಾಪತ್ರಯ! ಅವರವರ ಕರ್ಮ. ಏನಾದರೂ ಮಾಡಿಕೊಂಡಿರಲಿ ಎಂದು ಯೋಚಿಸುತ್ತಿದ್ದಾಗ ತಿಳಿಯಿತು: ಅಪ್ಪಣ್ಣಯ್ಯ ಊರಿನಲ್ಲೇ ಇರಲಿಲ್ಲ. ಆ ಸಲ ಅವನು ಊರು ಬಿಟ್ಟು ಹೋದವನು ಮತ್ತೆ ಮೂರು ತಿಂಗಳು ಹಿಂತಿರುಗಲಿಲ್ಲ.

ಅವನು ನಾಲೆಬಯಲು ಸೀಮೆಗೆ ಒಬ್ಬನೇ ಹೋಗಿದ್ದನಂತೆ. ಹಿಂತಿರುಗಿ ಬಂದವನು ಅತ್ತಿಗೆಗೆ ಒಂದು ಪಲ್ಲ ಬತ್ತ ತಂದುಕೊಟ್ಟ. ಆಮೇಲೆ ದಿನವೂ ಸಾರು ತೆಗೆದುಕೊಂಡು ಹೋಗುತ್ತಿದ್ದ.

ಇನ್ನೊಂದು ದಿನ ಮೇಷ್ಟರೇ ಹೇಳಿದರು: ‘ಈಗ ಅಪ್ಪಣ್ಣಯ್ಯನೋರು ಆ ಕಡೆ ಹೋಗೂದಿಲ್ವಂತೆ. ನಾಲೆಬಯಲಿಗೆ ಹೋಗಿ ಬಂದಮೇಲೆ ಅವಳ ಅಂಗಡಿ ಮುಂದೆ ತಿರುಗಾಡೂದೂ ಇಲ್ವಂತೆ.’

– 3 –

ಸೋದರ ಮಾವನೆಂದರೆ ವಿಶ್ವನಿಗೆ ಒಳಗೇ ಭಯ. ಕಲ್ಲೇಶನೇನೋ ಅವನ ಬಗೆಗೆ ಅಸಡ್ಡೆ ಮಾಡುತ್ತಿರಲಿಲ್ಲ. ಸಂತೆಯ ದಿನ ಕಡಲೆಪುರಿ, ಖಾರಸೇವು, ಬತ್ತಾಸು, ತಂದುಕೊಡುತ್ತಿದ್ದ. ತನ್ನ ಜೊತೆ ಹೊಲಗದ್ದೆಗಳಿಗೆ ಕರೆದುಕೊಂಡು ಹೋಗುತ್ತಿದ್ದ. ಆದರೆ ತುಂಟಾಟ ಮಾಡಿದಾಗ ಅವನು ಗದ್ದರಿಸಿಕೊಂಡು ಕಣ್ಣು ತಿರುಗಿಸುತ್ತಿದ್ದ ರೀತಿಗೇ ಹುಡುಗ ಬೆವರುತ್ತಿದ್ದ. ಒಂದು ದಿನ, ಸ್ಕೂಲಿನಲ್ಲಿ ಇನ್ನೊಬ್ಬ ಹುಡುಗನ ಕೂಡ ಜಗಳಕಾಯ್ದನೆಂದು ಕಲ್ಲೇಶ ಅವನ ಕಪಾಳಕ್ಕೆ ಹೊಡೆದುಬಿಟ್ಟ. ಏಟಿನ ಜೋರಿಗೆ ಅವನು ಕಳಲಿ ಬಿದ್ದುದೇ ಅಲ್ಲ, ಚಡ್ಡಿಯ ಒಳಗೇ ಉಚ್ಚೆ ಹುಯ್ದುಕೊಂಡ. ಅಕ್ಕಮ್ಮ ಕಲ್ಲೇಶನನ್ನು ಬೈದು ಮಗುವನ್ನು ಎತ್ತಿ ಹತ್ತಿರ ಕೂರಿಸಿಕೊಂಡು ಸಮಾಧಾನ ಮಾಡಿದಳು.

ಕಮಲುವಿಗೆ ವಿಶ್ವನ ಬಗೆಗೆ ಸ್ವಲ್ಪವೂ ಸಹಾನುಭೂತಿ ಇಲ್ಲ. ಅವನು ಕೂತರೆ, ನಿಂತರೆ, ಮಾತನಾಡಿದರೆ ಅವಳಿಗೆ ತಪ್ಪು ಕಾಣುತ್ತಿತ್ತು. ಆದರೆ ಅಕ್ಕಮ್ಮ ಮತ್ತು ಗಂಡನ ಭಯಕ್ಕೆ ಅವಳು ಅವನನ್ನು ಬೈದು ಹೊಡೆದು ಮಾಡದೆ ಸುಮ್ಮನಿರುತ್ತಿದ್ದಳು. ‘ಈ ಮುಂಡೇದು ಬ್ಯಾರೆ ಒಂದು ಬಂತು ನಮ್ಮನೆ ಕೂಳು ತಿನ್ನೂಕೆ’–ಎಂದು ಪಿಟ ಪಿಟ ಬೈದುಕೊಳ್ಳುತ್ತಿದ್ದಳು.

ಈಗ ಹುಡುಗ ಮೊದಲಿನಷ್ಟು ಸುಟಿಯಾಗಿಲ್ಲ. ಸ್ಕೂಲಿನಲ್ಲಿ ಓದುವುದರಲ್ಲೂ ತನ್ನ ಊರಿನಲ್ಲಿದ್ದಾಗಿನಷ್ಟು

ಜಾಣನೆನಿಸಲಿಲ್ಲ. 'ಸರಿಯಾದ ಭಯವಿಲ್ಲದೆ ಇವನು ದಡ್ಡನಾಗಿದಾನೆ' –ಎಂದು ಕಲ್ಲೇಶ ಶಿಸ್ತನ್ನು ಮಾಡಿದ. ಆದರೂ ಅವನು ದಿನೇ ದಿನೇ ದಡ್ಡನೇ ಎನಿಸಿಕೊಳ್ಳುತ್ತಿದ್ದ. ಕಲ್ಲೇಶ ಪಾಠ ಹೇಳಿಕೊಡಲು ಕೂತರೆ, ಸಾಯುವ ಆಡಿನಂತೆ ಕಣ್ಣು ಬಿಟ್ಟುಕೊಂಡು, ಅವನ ಕೈ ಯಾವಾಗ ತನ್ನ ಮೇಲೆ ಬೀಳುವುದೋ ಎಂದು ಕಿರುಗಣ್ಣಿನಿಂದ ನೋಡಿಕೊಳ್ಳುವುದರಲ್ಲೇ ಅವನ ಗಮನವೆಲ್ಲ ಹೋಗುತ್ತಿತ್ತು. ಅಕ್ಕಮ್ಮ ಅಕ್ಷರವನ್ನರಿಯಳು. ತಂಗಿಯ ಮಗನನ್ನು ಹಿಡಿತದಲ್ಲಿಟ್ಟಿದ್ದೇನೆಂಬ ತೃಪ್ತಿ ಮಾತ್ರ ಕಲ್ಲೇಶನಿಗಿತ್ತು.

ನಾಗಲಾಪುರದ ಕೆರೆ ರಾಮಸಂದ್ರದ್ದಕ್ಕಿಂತ ದೊಡ್ಡದು. ಊರ ಕಡೆಯ ಭಾಗದಲ್ಲಿ ನೀರಿನ ಮಧ್ಯ ಮಧ್ಯ ಬೇಕಾದಷ್ಟು ಬಂಡೆಗಲ್ಲುಗಳು. ಈಜಿ ಹೋಗಿ ಆ ಬಂಡೆಗಳ ಮೇಲೆಲ್ಲ ಕೂತು ಮೈನೀರು ಒಣಗುವ ತನಕ ಬಿಸಿಲು ಕಾಯಿಸಿ ಮತ್ತೆ ನೀರಿಗೆ ಬೀಳಬೇಕೆಂದು ವಿಶ್ವನಿಗೆ ಇನ್ನಿಲದ ಆಶೆ. ಆದರೆ ನೀರಿಗೆ ಇಳಿಯಕೂಡದೆಂದು ಮಾವನ ಕಟ್ಟಾಜ್ಞೆಯಾಗಿದೆ. ಅದನ್ನು ನೆನೆಸಿಕೊಂಡಾಗಲೆಲ್ಲ ಅವನು ಅತ್ತು ಕಣ್ಣೀರು ಹಾಕುತ್ತಿದ್ದ. ಈ ಊರಿನಲ್ಲಿ ಜೇನು ಬಿಚ್ಚುವಂತಿಲ್ಲ. ಮರ ಹತ್ತುವಂತಿಲ್ಲ. ತನ್ನ ಊರಿಗೆ ಓಡಿಹೋಗಿಬಿಡಲೇ ಎಂಬ ಯೋಚನೆ ಬರುತ್ತಿತ್ತು. ಆದರೆ ಅಮ್ಮ ತನ್ನನ್ನು ಹಿಡಿದು ತಂದು ಮತ್ತೆ ಇಲ್ಲಿಗೇ ಒಪ್ಪಿಸುತ್ತಾಳೆಂಬ ಭಯವೂ ಆಗುತ್ತಿತ್ತು. ಅಮ್ಮನನ್ನು ಮನಸ್ಸಿನಲ್ಲೇ ಬೈದುಕೊಳ್ಳುತ್ತಿದ್ದ.

ಒಂದು ದಿನ ಬೆಳಿಗ್ಗೆ ಅವನು ಎದ್ದು ಸ್ಲೇಟು ಪುಸ್ತಕ ಹಿಡಿದು ಸ್ಕೂಲಿಗೆ ಹೋಗುತ್ತಿದ್ದ. ಎಷ್ಟೋ ಜನ ಹುಡುಗರು ದೊಡ್ಡವರೆಲ್ಲ ಗುಂಪು ಕಟ್ಟಿಕೊಂಡು ಇವನ ಸ್ಕೂಲಿನ ಕಡೇಗೆ ಹೋಗುತ್ತಿದ್ದಾರೆ. ಗುಂಪಿನ ಮುಂಭಾಗದಲ್ಲಿರುವವರು ಬಿಳಿಯ ಅಂಗಿ, ಬಿಳಿಯ ಟೋಪಿ ಹಾಕಿದ್ದಾರೆ. ಅವರ ಕೈಲಿ ಒಂದು ಬಾವುಟ. ಮುಂಭಾಗದಲ್ಲಿ ಬಾವುಟ ಹಿಡಿದು ಹೋಗುತ್ತಿದ್ದವರು ಬಾಯಿಗೆ ಅದೆಂಥದೋ ಇಟ್ಟುಕೊಂಡು– 'ಬೋಲೋ ಭಾರತ ಮಾತಾಕೀ' ಎಂದು ಕೂಗುತ್ತಾರೆ. ಅದು ಗಟ್ಟಿಯಾಗಿ ಕೇಳುತ್ತದೆ. ಹಿಂದಿದ್ದ ಜನವೆಲ್ಲ– 'ಜೈ' ಎನ್ನುತ್ತಾರೆ. 'ಮಹಾತ್ಮಾ ಗಾಂಧೀಕೀ'–ಎಂದು ಅವರು ಕೂಗುತ್ತಾರೆ. ಇವರು–'ಜೈ' ಎನ್ನುತ್ತಾರೆ. ಅವರು ಇನ್ನೂ ಏನೇನೋ 'ಕೀ' ಎಂದರೆ ಇವರೆಲ್ಲ ಎಂದು ಒಟ್ಟಿಗೆ, ಜಾತ್ರೆಯ ದಿನ ತೇರು ಎಳೆಯುವಾಗ ಹರಹರ ಮಹಾದೇವ ಎನ್ನುವಂತೆ ಕೂಗುತ್ತಾರೆ. ವಿಶ್ವನಿಗೆ ಒಳ್ಳೆಯ ಮಜವೆನಿಸಿತು. ನಾಲ್ಕು ಸಲ ಕೇಳಿದ್ದಕ್ಕೆ ಮುಂದಿನವರು ಕೂಗುವುದೆಲ್ಲ ಅವನಿಗೂ ಬಂದಿತು. ಅವರು ನಿಲ್ಲಿಸಿದ ತಕ್ಷಣ ಇವನೇ–'ಬೋಲೋ ಭಾರತ ಮಾತಾಕೀ' ಎಂದ. ಎಲ್ಲರೂ 'ಜೈ' ಎಂದರು. ಇವನು ಮುಂದಿನ ಏಳೆಂಟು 'ಕೀ'ಗಳನ್ನೂ ಕೂಗಿದ. ಎಲ್ಲದಕ್ಕೂ ಜೈ ಎಂದರು. ಮುಂದಿದ್ದವರು ಇವನ ಬೆನ್ನು ತಟ್ಟಿ, 'ಜಾಣ ಮರಿ, ನೀನೇ ಕೂಗು ಬಾ. ಈ ಬಾವುಟ ಹಿಡ್ಕೊ' ಎಂದು ಇವನ ಕೈಲೇ ಕೊಟ್ಟರು. ಇವನ ಬಾಯಿಯ ಮುಂದೆ ಅವರೇ ಅದನ್ನು ಹಿಡಿದರು. ಎಲ್ಲರ ಮುಂದಾಳೂ ಇವನೇ. ಬಲು ಮಜವೆನಿಸಿತು.

ಗುಂಪು ಇವನ ಸ್ಕೂಲಿನ ಹತ್ತಿರಕ್ಕೆ ಹೋಯಿತು. ಎದುರಿನ ಮೈದಾನದಲ್ಲಿ ಎಲ್ಲರೂ ಕೂತರು. ಇವನಿಗೆ ಬಾವುಟ ಕೊಟ್ಟವರು ನಿಂತುಕೊಂಡರು. ಇನ್ನೊಬ್ಬರು ಅವರ ಬಾಯಿಯ ಮುಂದೆ ಅದನ್ನು ಹಿಡಿದು ನಿಂತರು. ಅದರಿಂದ ಒಂದು ತಂತಿ ಹಾಕಿ ಹತ್ತಿರದಲ್ಲೇ ಒಂದು ಮೇಜಿನ ಮೇಲೆ ಅಗಲವಾದ ಕಹಳೆಯಂತಹ ಒಂದು ಏನನ್ನೋ ಇಟ್ಟರು. ಅವರು ಮಾತನಾಡಲು ಶುರುಮಾಡಿದರು: 'ಸೋದರರೇ ಸೋದರಿಯರೇ, ಈಗ ನಮ್ಮ ದೇಶ ಕೆಂಪು ಕೋತಿಗಳ ಕೈಗೆ ಸಿಕ್ಕಿದೆ. ಅವರು ನಮ್ಮ ಚಿನ್ನ ಬೆಳ್ಳಿಯನ್ನೆಲ್ಲ ಲೂಟಿಹೊಡೆಯುತ್ತಿದ್ದಾರೆ. ನಮ್ಮ ತಾಯಿಯನ್ನು ಸ್ವತಂತ್ರಮಾಡಲು ನಾವೆಲ್ಲ ಸಿದ್ಧರಾಗಬೇಕು. ಈಗ ನಾವೆಲ್ಲ ಯುದ್ಧಕ್ಕೆ ನಿಂತ ಸಿಪಾಯಿಗಳು.....'

ಅವರು ಮಾತನಾಡುವುದು ತುಂಬ ಗಟ್ಟಿಯಾಗಿ ಕೇಳುತ್ತಿದೆ. ಅದಕ್ಕೆ ಲೌಡ್ ಸ್ಪೀಕರ್ ಎನ್ನುತ್ತಾರಂತೆ. ಇನ್ನೂ ಎರಡು ಮೂರು ಜನ ಮಾತನಾಡಿದರು. ಕೊನೆಗೆ ಹೇಳಿದವರು– 'ಇವತ್ತು ಶನಿವಾರ. ಮಧ್ಯಾಹ್ನ ಚನ್ನರಾಯಪಟ್ಟಣದಲ್ಲಿ ಸಂತೆ ಸೇರುತ್ತೆ. ಅಲ್ಲಿ ಭಾರೀ ಸಭೆಯಾಗುತ್ತೆ. ನೀವೆಲ್ಲ ಅಲ್ಲಿಗೆ ಬರಬೇಕು. ದೇಶಭಕ್ತಿ ತೋರಿಸಬೇಕು' ಎಂದರು. ಎಷ್ಟೋ ಜನ ಅವರೊಡನೆ ಹೊರಟರು. ವಿಶ್ವನಿಗೂ ಹೋಗಬೇಕೆಂಬ ಆಶೆಯಾಯಿತು. ತನಗೆ ಬಾವುಟ ಕೊಟ್ಟವರ ಹತ್ತಿರ ಹೋಗಿ, 'ನಾನೂ ಬತ್ತೀನಿ ಕಣ್ರೀ' ಅಂದ.

'ಎಂಟು ಮೈಲಿ ನಡೀತೀಯಾ ಮರಿ?' ಅವರು ಕೇಳಿದರು.

'ಓ, ನಾನು ಶೃಂಗೇರಿಗೆ ನಡೆದಿದೀನಿ.'

ಸರಿ. ಗುಂಪು ಹೊರಟಿತು. ಇವನೂ ಹೊರಟ. ದಾರಿಯಲ್ಲಿ ಮರಳಹಳ್ಳ, ಈಚಲವನ, ಆಲದತೋಪು, ಕಾರೆಗುಚ್ಚಿ, ಇನ್ನೂ ಏನೇನೋ. ಶೃಂಗೇರಿಯ ದಾರಿಯ ಹಾಗೆ ಇಲ್ಲಿ ಕಾಡಿಲ್ಲ. ಆದರೂ ಮಜವಾಗಿದೆ. ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಎಲ್ಲರೂ ಚೆನ್ನರಾಯಪಟ್ಟಣ ಸೇರಿದರು. ಅಷ್ಟು ಹೊತ್ತಿಗೆ ಅವನಿಗೆಹೊಟ್ಟೆ ಹಸಿದು ಸುಸ್ತಾಗಿತ್ತು. 'ನಂಗೆ ಹ್ವಟ್ಟೆ ಹಸಿಯುತ್ತೆ ಕಣ್ರೀ'–ಎಂದು ಅವರನ್ನು ಕೇಳಿದ. 'ಎಲ್ಲ ್ರಗೂ ಊಟಕ್ಕೆ ಇಕ್ತಾರೆ ಬಾ'–ಎಂದು ಅವರು ಕೈಹಿಡಿದು ಕರೆದೊಯ್ದರು. ಒಂದು ಕಡೆ ದೊಡ್ಡ ದೊಡ್ಡ ತಪ್ಪಲೆ ಕೊಳದಪ್ಪಲೆ ಇಟ್ಟು ಅಡಿಗೆ ಮಾಡಿದ್ದರು. ಶೃಂಗೇರಿಯಲ್ಲಿ ಬಡಿಸಿದ ಹಾಗೆಯೇ ಸಮಾರಾಧನೆಯಾಯಿತು. ಆಮೇಲೆ ಎಲ್ಲರೂ ಸಂತೆಯ ಮೈದಾನಕ್ಕೆ ಹೋದರೆ ಜನವೋ ಜನ. ಅವನು

ಅಷ್ಟು ಜನವನ್ನು ಶೃಂಗೇರಿಯಲ್ಲೂ ನೋಡಿರಲಿಲ್ಲ. ರಾಮಸಂದ್ರದ ಅಮ್ಮನ ಜಾತ್ರೆಯಲ್ಲೂ ನೋಡಿರಲಿಲ್ಲ. ನಾಗಲಾಪುರದ ಸಂತೆಯಲ್ಲೂ ಇಲ್ಲ. ಮೈದಾನದ ಮಧ್ಯೆ ಎರಡಾಳೆತ್ತರದ ಅಟ್ಟಣೆ ಕಟ್ಟಿ ಅದರ ಮೇಲೆ ಲೌಡ್‌ಸ್ಪೀಕರ್ ಇಟ್ಟಿದ್ದಾರೆ.

ವಿಶ್ವನಿಗೆ ಬಾವುಟ ಕೊಟ್ಟು ಕರೆದುಕೊಂಡು ಬಂದವರು ಹೊಳೇನರಸಿಪುರದವರಂತೆ. ಅವರು ಇವನನ್ನು ಕೇಳಿದರು: 'ಮರಿ, ನೀನೂ ಭಾಷಣ ಮಾಡ್ತೀಯಾ?'

'ಹಾಗಂದ್ರೇನ್ರೀ?'

'ನಾಗಲಾಪುರದಲ್ಲಿ ನಾನು ನಿಂತ್ಕಂಡು ಮಾತಾಡಿದ್ನಲಾ, ಹಾಗೆ.'

'ಓ, ಮಾಡ್ತೀನಿ.'

'ಏನೇನ್ ಮಾತಾಡಬೇಕು ಅಂತ ನಾನು ಹೇಳ್‌ಕೊಡ್ತೀನಿ.'

'ನೀವು ಮಾತಾಡಿದ್ದೆಲ್ಲ ನಂಗೆ ಗ್ಯಾಪಕವಿದೆ. ಅದುನ್ನೇ ಹೇಳ್ತೀನಿ: ಕೆಂಪು ಕೋತಿಗಳು ನಮ್ಮ ತಾಯೀನ ಜೈಲಿನಲ್ಲಿಟ್ಟಿದ್ದಾರೆ ಅಂತ.'

'ರೈಟ್. ನಾನು ಇನ್ನೂ ಹೇಳ್ಕೊಡ್ತೀನಿ ತಡಿ'– ಎಂದು ಅವರು ಏನೇನೋ ಹೇಳಿಕೊಟ್ಟರು.

ಸಭೆ ಶುರುವಾಗುವ ಮೊದಲು ಒಬ್ಬರು ಅಟ್ಟಣೆಗೆ ಹತ್ತಿ ಲೌಡ್‌ಸ್ಪೀಕರ್ ಮುಂದೆ ನಿಂತು 'ವಂದೇ ಮಾತರಂ' ಅಂತ ಚನ್ನಾಗಿ ಹಾಡು ಹೇಳಿದರು. ಆಮೇಲೆ– 'ಈಗ ಮೊದಲು ಭಾರತ ಮಾತೆಯ ಒಬ್ಬ ಕಿಶೋರ ಭಾಷಣಮಾಡ್ತಾನೆ. ಅವನ ಮಾತಿನಿಂದ ನಾವೆಲ್ಲ ಸ್ಫೂರ್ತಿ ಪಡೆಯಬೇಕು' ಎಂದು ಹೇಳಿ ಪಕ್ಕಕ್ಕೆ ನಿಂತುಕೊಂಡರು. ಹೊಳೆನರಸೀಪುರದವರು ವಿಶ್ವನನ್ನು ಮೇಲೆ ಹತ್ತಿಸಿದರು. ತಾವೂ ಹತ್ತಿ ಅವನನ್ನು ಮೈಕಿನ ಮುಂದೆ ನಿಲ್ಲಿಸಿದರು. ಅವನು ಎದುರಿಗಿದ್ದ ಜನಗಳನ್ನು ನೋಡುತ್ತಾನೆ: ಕೋಡಿ ಹರಿಯುವಂತೆ ಕೆರೆಯಲ್ಲಿ ನೀರು ತುಂಬಿರುವ ಹಾಗೆ ಸೇರಿಬಿಟ್ಟಿದ್ದಾರೆ. ಅವನಿಗೆ ಹೆದರಿಕೆಯಾಯಿತು. ಮುಖ ಕೆಂಪಗಾಯಿತು. ಅವನ ಜೊತೆ ಬಂದವರು–'ಬೋಲೋ ಭಾರತ ಮಾತಾಕೀ ಅನ್ನು' ಎಂದು ಮೆಲ್ಲನೆ ಹೇಳಿಕೊಟ್ಟರು. ವಿಶ್ವ ಅದನ್ನು ಕೂಗಿದ. ಎಲ, ಅವನು ಕೂಗಿದರೂ ಎಷ್ಟು ಗಟ್ಟಿಯಾಗಿ ಕೇಳುತ್ತೆ! ಲೌಡಿಸ್ಪೀಕರ್ ಅಂದ್ರೆ ಹ್ಯಾಗೆ ಮಾಡಿರ್ತಾರೆ? ಅದರೊಳ್ಗೆ ಎಂಥದಿಟ್ಟಿರ್ತಾರೆ? ಅಂಥದು ತಾನೂ ಒಂದು ಇಟ್ಕಾಬೇಕು. ಅಷ್ಟರಲ್ಲಿ ಜನರೆಲ್ಲ 'ಜೈ' ಎಂದದ್ದು , ಲೌಡ್‌ಸ್ಪೀಕರ್‌ನಲ್ಲಿ ಇವನ ಕೂಗಿಗಿಂತ ಗಟ್ಟಿಯಾಗಿ ಮೊಳಗಿತು. ಇವನು ತನಗೆ ಗೊತ್ತಿದ್ದ ಎಂಟು ಹತ್ತು 'ಕೀ' ಗಳನ್ನೂ ಕೂಗಿದ. ಎಲ್ಲಕ್ಕೂ ಜನರು ಜೈ ಎನ್ನುತ್ತಾರೆ. 'ಈಗ ಮಾತು ಶುರು ಮಾಡು'– ಎಂದು ಅವರು ಹೇಳಿದರು. ತುಂಬಿದ ಕೆರೆಯಲ್ಲಿ ಈಜು ಬೀಳುವಂತೆ ಅವನು ಮಾತನಾಡಲು ಶುರುಮಾಡಿಯೇ ಬಿಟ್ಟ: 'ಸೋದರರೇ, ಸೋದರಿಯರೇ, ನಿಮಗೆ ಗೊತ್ತಿದೆಯಲ, ನಮ್ಮ ಭಾರತ ಮಾತೆಯ ಕೈ ಕಾಲಿಗೆಲ್ಲ ಸರಪಣಿ ಹಾಕಿದಾರೆ. ನಾವೆಲ್ಲ ಗುಲಾಮರಾಗಿದೀವಿ. ಈ ಕೆಂಪು ಕೋತಿ ಸೂಳೇಮಕ್ಳು ನಮ್ಮ ಕಂದಾಯಾನೆಲ್ಲ ಬಾಚ್ಕಂಡು ಹೋಗ್ತಿದಾರೆ. ನೀವ್ಯಾರೂ ಕಂದಾಯ ಕೊಡಬ್ಯಾಡಿ. ನಮಗೆಲ್ಲ ಅವರು ಹೆಂಡ ಕುಡುಸ್ತಾರೆ.' ಒಂದೇಸಮನೆ ಮಾತಾಡಿದ ಅವನು, ಅವರು ಹೇಳಿಕೊಟ್ಟದ್ದನ್ನೆಲ್ಲ ಆಡಿದುದೇ ಅಲ್ಲದೆ ಕೆಂಪುಕೋತಿಗಳ ಬಗೆಗೆ ಬೋಳೀಮಕ್ಕಳು, ಸೂಳೇಮಕ್ಕಳು ಎಂದು ಆ ಕ್ಷಣದಲ್ಲಿ ಬಾಯಿಗೆ ಬಂದದ್ದನ್ನೆಲ್ಲ ಸೇರಿಸಿದ. ಅವ್ವ, ಅಪ್ಪ ಎಂಬ ಬೈಗುಳಗಳನ್ನು ಆಡಬಾರದೆಂದು ಅವನು ಅದು ಹೇಗೋ ಅರ್ಥ ಮಾಡಿಕೊಂಡಿದ್ದ. ಭಾಷಣ ಮುಗಿದ ತಕ್ಷಣ, ಪಕ್ಕದಲ್ಲಿ ನಿಂತಿದ್ದವರು ಇವನ ಕೊರಳಿಗೆ ಸೇವಂತಿಗೆ ಹೂವಿನ ಒಂದು ಹಾರ ಹಾಕಿ– 'ಭಾರತ ಮಾತಾಕೀ' ಎಂದರು. 'ಜೈ' ಎಂದದ್ದೇ ಅಲ್ಲದೆ ಕೆರೆಯ ಕೋಡಿ ಮೊರೆಯುವಂತೆ ಒಂದೇ ಸಮನೆ ಚಪ್ಪಾಳೆ ತಟ್ಟಿದರು. ಇವನನ್ನು ಕೆಳಗೆ ಇಳಿಸಿದ ಮೇಲೆ ಇನ್ನೊಬ್ಬ ಹೊಸಬರು ಅಟ್ಟಣೆ ಹತ್ತಿ ಮಾತನಾಡಲು ಶುರುಮಾಡಿದರು. ಅವರ ಭಾಷಣವೆಂದರೇನು, ವಿಶ್ವನನ್ನು ಹೊಗಳಿದ್ದೂ ಹೊಗಳಿದ್ದೇ. 'ಇಂಥಾ ಧೈರ್ಯಶಾಲಿಯಾದ ಹುಡುಗನಿಂದ ನಮಗೆಲ್ಲ ಸ್ಫೂರ್ತಿ ಬರಬೇಕು. ಈ ಹುಡುಗ ಹೇಗೆ ಸಿಂಹದ ಮರಿಯಂತೆ ನಿಂತು ಪರಕೀಯರನ್ನು ವಿರೋಧಿಸಿದಾನೆಯೋ ಹಾಗೆ ನೀವೆಲ್ಲ ವಿರೋಧಿಸಬೇಕು. ಈ ವರ್ಷ ನಿಮ್ಮಲ್ಲಿ ಯಾರೂ ಕಂದಾಯ ಕೊಡಕೂಡದು. ಪೋಲೀಸಿನವರು ಬಂದರೆ ಈ ಹುಡುಗನನ್ನು ಜ್ಞಾಪಿಸಿಕೊಳ್ಳಿ. ನಿಮಗೆ ಧೈರ್ಯ ಬರುತ್ತೆ'– ಎಂದು ಮುಂತಾಗಿ ಅವನಿಗೆ ಅರ್ಥವೇ ಆಗದಷ್ಟು ಏನೇನೋ ಮಾತನಾಡಿದರು.

ಅಷ್ಟರಲ್ಲಿ ಜನರು ಇದ್ದಕ್ಕಿದ್ದಹಾಗೆಯೇ ಎದ್ದು ಚದುರಲು ಮೊದಲಾಯಿತು. ಖಾಕಿ ಬಟ್ಟೆ ಹಾಕಿದ್ದ ಎಷ್ಟೋ ಜನ ಪೋಲೀಸಿನವರು, ಕೈಲಿ ಉದ್ದುದ್ದನೆಯ ಬಿದಿರುದಡಿಯಂತಹ ಕೋಲು ಹಿಡಿದು ಬಂದರು. ಬೆಳ್ಳನೆಯ ಟೋಪಿ ಹಾಕಿದ್ದವರನ್ನೆಲ್ಲ ಸುತ್ತುಗಟ್ಟಿ ಲೌಡ್‌ಸ್ಪೀಕರನ್ನು ತೆಗೆದಿಟ್ಟುಕೊಂಡರು. ಅವರಿಗೂ ಇವರಿಗೂ ಏನೇನೋ ಮಾತುಕತೆಯಾಯಿತು. ಕೊನೆಗೆ ಎಲ್ಲರನ್ನೂ ಕೂಡಿಸಿ ಪೋಲೀಸ್ ಸ್ಟೇಷನ್ನಿಗೆ ಎಳೆದೊಯ್ದರು. ಅವರಲ್ಲಿ ವಿಶ್ವನೂ ಇದ್ದ. ಎಲ್ಲರನ್ನೂ ಒಂದು ದೊಡ್ಡ ಕೋಣೆಯಲ್ಲಿ ತುಂಬಿ ಕಬ್ಬಿಣದ ಸಲಾಕಿಯ ಬಾಗಿಲು ಬೀಗ ಹಾಕಿ ಜಡಿದರು. ಒಳಗಿದ್ದವರು– 'ಭಾರತ ಮಾತಾಕೀ ಜೈ' ಎಂದು ಕೂಗುತ್ತಿದ್ದರು. ಕೆಲವರು ಏನೇನೋ ಮಾತನಾಡಿಕೊಳ್ಳುತ್ತಿದ್ದರು. ಇನ್ನು ಕೆಲವರು ಇಂಗ್ಲಿಷ್‌ನಲ್ಲಿ ಆಡಿಕೊಳ್ಳುತ್ತಿದ್ದರು. ವಿಶ್ವನಿಗೆ ಯಾರ

ಗುರುತೂ ಇಲ್ಲ. ಅವನನ್ನು ಕರೆದುಕೊಂಡುಬಂದು ಭಾಷಣ ಹೇಳಿಕೊಟ್ಟವರು ಅಲ್ಲಿಲ್ಲ. ಅವನಿಗೆ ಅಳು ಬಂದುಬಿಟ್ಟಿತು. ಬಿಕ್ಕಿ ಬಿಕ್ಕಿ ಅಳಲು ಶುರುಮಾಡಿದ. 'ಹೆದರಿಕೋಬ್ಯಾಡ ಕಣೋ ಮರಿ. ನಾವೆಲ್ಲ ಇಲ್ಲವೆ? ನೀನು ಜಾಣ'–ಎಂದು ಅವನ ಹತ್ತಿರ ಇದ್ದವರು ಸಮಾಧಾನ ಹೇಳಿ
ಬೆನ್ನಿನ ಮೆಲೆ ಕೈ ಆಡಿಸಿದರು. ಅವನು ಅಳುವನ್ನು ನಿಲ್ಲಿಸಿದ. ಆದರೂ ಭಯ. ಬೆಳಿಗ್ಗೆಯಿಂದ ನಡೆದುದೆಲ್ಲಾವನಿಗೆ ತುಂಬ ಮಜವೆನಿಸುತ್ತಿತ್ತು. ಆದರೆ ಈಗ ಊಟವು ಇಲ್ಲದೆ ಇಲ್ಲಿ ಯಾಕೆ ಕೂಡಿಹಾಕಿದಾರೆ" ಜೈಲು ಅಂದರೆ ಇದೆಯಾ?
'ಜೈಲು ಅಂದ್ರೆ ಇದೆ ಏನ್ರೀ?'–ಅವನು ಕೇಳಿದ.
'ಅಲ್ಲ ಮಗು. ಇದು ಅರಮನೆ'– ಒಬ್ಬರು ಹೇಳಿದರು.
'ಹಾಗಾದರೆ ಸಿಂಹಾಸನ ಎಲ್ಲಿದೆ?'
'ಪ್ರಚಂಡ ಹುಡುಗ!'–ಎಲ್ಲರೂ ಮಾತನಾಡಿಕೊಂಡರು. ಯಾರೂ ಅವನ ಪ್ರಶ್ನೆಗೆ ಉತ್ತರ ಹೇಳಲಿಲ್ಲ. ಅಷ್ಟರಲ್ಲಿ ಬಾಗಿಲು ತೆಗೆದುಕೊಂಡು ಒಳಗೆ ಬಂದ ಪೋಲೀಸಿನವರು ಅವನ ಕೈ ಹಿಡಿದು 'ಹೊರಗೆ ಬಾ' ಎಂದರು.
'ನಾವು ಈ ಹುಡುಗನ್ನ ಬಿಡೂದಿಲ್ಲ. ನೀವು ಅವನನ್ನ ಹೊಡೀತೀರಿ'–ಎಂದು ಉಳಿದವರು ಎದ್ದು ನಿಂತರು.
'ಇಂಥಾ ಚಿಕ್ಕೋನನ್ನ ನಾವ್ಯಾಕೆ ಹೊಡೀತೀವಿ? ಅವರ ಪೋಷಕರು ಬಂದಿದಾರೆ'– ಎಂದು ಹೇಳಿ ಅವರು ಅವನ ಕೈಹಿಡಿದು ಕರೆದುಕೊಂಡು ಹೋಗಿ, ಉಳಿದವರನ್ನು ಒಳಗೇ ಕೂಡಿ, ಬಾಗಿಲು ಹಾಕಿ ಬೀಗ ಮೆಟ್ಟಿದರು. ಆಫೀಸಿಗೆ ಕರೆದೊಯ್ದು ನಿಲ್ಲಿಸಿದ ಮೇಲೆ ಕುರ್ಚಿಯ ಮೇಲೆ ಕೂತಿದ್ದ ಒಬ್ಬ ದಪ್ಪನೆಯ ಪೋಲಿ ೀಸಿನವರು ಅವನನ್ನು ಕೇಳಿದರು: 'ನಿಂದು ಯಾವೂರೋ ಹುಡುಗ>'
'ರಾಮಸಂದ್ರ.'
'ರಾಮಸಂದ್ರ?' ಎಲ್ಲಿದ್ರೀ ಅದು?'–ಎಂದು ಅವರು, ನಿಂತಿದ್ದ ಪೋಲೀಸರನ್ನು ಕೇಳಿದರು.
ವಿಶ್ವನೇ ಹೇಳಿದ: 'ತುಮಕೂರು ಡಿಸ್ಟ್ರಿಕಟ್ಟು ತಿಪಟೂರು ತಾಲ್ಲೋಕ್ ಕಂಬನಕೆರೆ ಹೋಬಳಿ ರಾಮಸಂದ್ರ.'
'ಪರವಾಗಿಲ್ಲ. ನಿಂಗೆ ಎಲ್ಲ ಗೊತ್ತಿದೆ. ಏನ್ ಓದ್ತಾ ಇದೀಯಾ?'
'ಮೂರನೇ ಕ್ಲಾಸು.'
'ನೀನು ಯಾರ ಮಗ?'
'ಶ್ಯಾನುಭೋಗ ಚೆನ್ನಿಗರಾಯರ ಮಗ.'
'ಶ್ಯಾನುಭೋಗರ ಮಗನಾಗಿ ಇಂಥದುದ್ದೆಲ್ಲ ಬತ್ತಾರೇನೋ? ಯಾರೋ ನಿನ್ನ ಕರ್ಕಂಡ್ ಬಂದದ್ದು?'– ಎಂದು ಅವರು ಕೇಳುತ್ತಿರುವಾಗ, ನಿಂತಿದ್ದ ಪೋಲೀಸಿನವರು, 'ರಾಮಸಂದ್ರ ಬೇರೆ ಡಿಸ್ಟ್ರಿಕ್ಕಿಂದು ಸಾರ್. ಇವನು ಅಲ್ಲಿಂದ ಬಂದಿಲ್ಲ' ಎಂದು ಹೇಳಿ ಇವನನ್ನು ಕೇಳಿದರು: 'ನೀನ್ಯಾವೂರಿಂದ ಬಂದೆ?'
'ನಾಗಲಾಪುರದಿಂದ.'
'ಅಲ್ಲಿಗೆ ಯಾಕೆ ಬಂದಿದ್ದೆ?'
'ಸ್ಕೂಲಿಗೆ ಹೋಗ್ತಾ ಇದೀನಿ.'
'ಯಾರ ಮನೇಲಿದೀಯಾ?'
'ಕಲ್ಲೇಶ ಜೋಯಿಸ್ರ ಮನ್ಲಿ.'
'ಅವ್ರು ನಿಂಗೇನಾಗ್ಬೇಕು?'
'ನಮ್ಮಮ್ಮನ ಅಣ್ಣ.'
ನಿಂತಿದ್ದ ಪೋಲೀಸಿನವರು ಕೂತಿದ್ದ ದೊಡ್ಡವರಿಗೆ ಹೇಳಿದರು: 'ಓ, ಈಗ ಗೊತ್ತಾಯ್ತಾ ಸಾರ್. ಆ ಕಲ್ಲೇಶ ನನ್ನ ಜೊತೆ ಪಿ.ಸಿ. ಆಗಿದ್ದ. ಈ ಊರ ಮಸೀದಿ ಹಿಂದುಗಡೆ ದೆವ್ವದ ಮನೆ ಅಂತ ಇದೆಯಲಾ. ಅಲ್ಲಿ ಒಬ್ಬರೇ ಇಲ್ವೇ ಕಂಠೀಜೋಯಿಸರು ಅಂತ, ಮಾಟ ಮಂತ್ರ ಮಾಡ್ತಾರೆ ನೋಡಿ, ಅವರ ಮಗ ಕಲ್ಲೇಶ. ಲೋ, ಮಗು, ನೀನಿಲ್ಲಿಗೆ ಹ್ಯಾಗೆ ಬಂದೆಯೋ?'
ವಿಶ್ವ ತಾನು ಬೆಳಿಗ್ಗೆ ಮನೆಯಿಂದ ಹೊರಟಿದ್ದರಿಂದ ಚೆನ್ನರಾಯಪಟ್ಟಣ ಮುಟ್ಟುವವರೆಗೆ ನಡೆದ ಎಲ್ಲವನ್ನೂ ಹೇಳಿದ. 'ಆ ಕಂಠೀಜೊಯಿಸ್ರ ಹತ್ರುಕ್ ಕಳಿಸ್ಬಿಡು. ವ್ಯೈ ಬಾದರೇಶನ್?'–ಎಂದ ದೊಡ್ಡವರು ಅವನ ಕಡೆ ತಿರುಗಿ ಹೆದರಿಕೆಯಾಗುವಂತೆ ಕಣ್ಣುಬಿಟ್ಟು, 'ಲೋ, ಇನ್ನೊಂದ್‌ಸಲ ಇವ್ರ ಜೊತೆ ಸೇರ್ಕಂಡ್ ಜೈಗೀಯ್ ಅಂತ ಕೂಗಿದ್ರೆ ನಿಂಗೆ ಬೆಲ್ಟು ತಗಂಡ್ ಬಾರಿಸ್‌ಬಿಡ್ತೀವಿ. ಹೂಂ' ಎಂದು ಹಲ್ಲು ಕಡಿದು ಬೂಟಿನ ಕಾಲನ್ನು ನೆಲಕ್ಕೆ ಗಟ್ಟಿಸಿದರು. 'ಇಲ್ಲ, ಇಲ್ಲ' –ಎಂದು ಅವನು ಹೆದರಿಕೊಂಡು ಹೇಳಿದ. ನಿಂತಿದ್ದ ಪೋಲೀಸಿನವರು ಅವನ ಕೈಹಿಡಿದು ಆ ರಾತ್ರಿಯಲ್ಲೇ ಕರೆದುಕೊಂಡು ಹೊರಟರು. ಪೇಟೆ ಬೀದಿ ದಾಟಿ ಸಾಬರ ಮಸೀದಿಯ ಹಿಂಭಾಗದ ಒಂದು ದೊಡ್ಡ ಮನೆಯ ಮುಂದೆ ನಿಂತು ಬಾಗಿಲು ಬಡಿದರು. 'ಯಾರು?'–ಎಂದು ಒಳಗಿನಿಂದ ಕೂಗಿದುದಕ್ಕೆ, 'ಬಾಗಿಲು ತೆಗೀರಿ. ನಿಮ್ಮ ಮೊಮ್ಮಗ' ಎಂದರು. ಒಳಗೆ ದೀಪ ಹಚ್ಚಿ ಬಾಗಿಲು ತೆರೆದವರು

ಅಗಲವಾದ ಮುಖದ ಎತ್ತರವಾದ ಆಳು. 'ನಿಮ್ಮ ಮಗಳ ಮಗ ಕಾಂಗ್ರೆಸ್ಸಿನೋರ ಜೊತೆ ಸೇರ್ಕಂಡ್ ತಿಳಿವಳಿಕೆ ಇಲ್ದೆ ಬಂದುಬಿಟ್ಟಿದ್ದಾನೆ, ಕರ್ಕಳಿ. ಇನ್ನು ಮ್ಯಾಲೆ ಹ್ವರಗೆ ಬಿಡ್‌ಬ್ಯಾಡಿ'–ಎಂದು ಹೇಳಿ ಅವರು ಹೊರಟುಹೋದರು.

ಈ ಅಜ್ಜಯ್ಯನನ್ನು ನೋಡಿದ್ದ ನೆನಪು ವಿಶ್ವನಿಗೆ. ಅಕ್ಕಯ್ಯನ ಮದುವೆಗೆ ತುಂಬ ಮುಂಚೆ ಇವರು ಅಕ್ಕಮ್ಮನ ಜೊತೆ ಊರಿಗೆ ಬಂದಿದ್ದರಲ್ಲವೆ? ಆದರೆ ಸರಿಯಾದ ಜ್ಞಾಪಕವಿಲ್ಲ. ಅವರ ಜೊತೆ ಒಳಗೆ ಹೋಗಿ ನೋಡುತ್ತಾನೆ: ಅವನಿಗೆ ಹೆದರಿಕೆಯಾಯಿತು. ಒಳಗೆ ಹುಲಿ ಚರ್ಮ ಹಾಸಿದೆ. ಮನುಷ್ಯರ ತಲೆಬುರುಡೆ, ಮೂಳೆಗಳನ್ನೆಲ್ಲ ಇಟ್ಟಿದೆ. ಕವಡೆಮಣಿ, ತಾಮ್ರದ ತಗಡು, ಹಸಿನೂಲು, ಎಷ್ಟೋ ಜೊತೆ ಎಕ್ಕಡಗಳು..

'ನಂಗಿಲ್ಲಿ ಹೆದರಿಕೆಯಾಗುತ್ತೆ'–ಅವನೆಂದ.

'ಇವತ್ತು ಅಷ್ಟು ಧೈರ್ಯವಾಗಿ ಭಾಷಣ ಮಾಡಿದೆ. ಹೆದರಿಕೆ ಯಾಕೋ? ನೀನೇ ನನ್ನ ಮಗಳ ಮಗ ಅಂತ ನಂಗೆ ಗೊತ್ತಾಗಲಿಲ್ಲ. ವಾರೆವಾ, ರುಸ್ತುಂ ಗಂಡು. ನನ್ನ ಮಗಳ ಹ್ವಟ್ಟೇಲಿ ಹುಟ್ಟಿದ್ದುಕ್ಕೂ ಸಾರ್ಥಕ'–ಎಂದು ಕೈಹಿಡಿದು ಕೂರಿಸಿಕೊಂಡರು.

ಕಂಠೀಜೋಯಿಸರಿಗೆ ಮಗಳಮೇಲೆ ಬಂದಿದ್ದ ಸಿಟ್ಟು ಅವಳ ಮಕ್ಕಳು ಸತ್ತ ವರ್ತಮಾನ ತಿಳಿದಾಗಲೂ ಇಳಿದಿರಲಿಲ್ಲ. ತಮ್ಮ ಮಾತು ಮೀರಿ ಅವಳು, ಮಗನಿಗೆ ಹೆಣ್ಣು ಕೊಡುವುದಿಲ್ಲವೆಂದ ಅವಿಧೇಯತೆಯನ್ನು ಅವರು ಮರೆಯಲಾರರು. ಅವರಿಗೂ ಮೊಮ್ಮಕ್ಕಳಿಗೂ ಯಾವ ಸಂಪರ್ಕವೂ ಇರಲಿಲ್ಲ. ಅವರ ಮರಣದಿಂದ ಮಗಳಿಗೆ ದುಃಖವಾಗಿರುವುದು ಸಹಜವೆಂದು ಒಂದೊಂದು ಸಲ ಎನ್ನಿಸುತ್ತಿದ್ದರೂ, ಆ ಮೊಮ್ಮಕ್ಕಳಮೇಲೆ ಅವರಿಗೆ ಹುಟ್ಟುತ್ತಿದ್ದ ಅಸ್ಪಷ್ಟ ವಾಂಛಲ್ಯವೇನಿದ್ದರೂ ಮಗಳ ಮೂಲಕ ಒಸರುತ್ತಿದ್ದ ಮೂಕಭಾವ ಮಾತ್ರ. ಜೊತೆಗೆ ಕೋಪವೂ ಸೇರಿಕೊಂಡಿತ್ತು. ಆದರೆ ಈಗ ಈ ಮೊಮ್ಮಗ ರುಸ್ತುಂ ಕೆಲಸ ಮಾಡಿದ್ದಾನೆ. ಹದಿನೈದು ಇಪ್ಪತ್ತು ಸಾವಿರ ಜನದ ಎದುರಿಗೆ ನಿಂತು ಪೋಲೀಸಿನವರಿಗೂ ಹೆದರದೆ ಭಾಷಣ ಮಾಡಿ ಹಾರ ಹಾಕಿಸಿಕೊಂಡಿದ್ದಾನೆ. ಜನಗಳು 'ಸಿಂಹದ ಮರಿ' ಎಂದು ಮೆಚ್ಚಿ ಮಾತನಾಡಿಕೊಂಡದ್ದನ್ನು ತಾವೇ ನೋಡಿದ್ದಾರೆ. ಅವನು ಭಾಷಣ ಮಾಡುವಾಗ ಅವರೂ ಕೇಳುತ್ತಿದ್ದರು. ಅವರಿಗೆ ಈಗ ಅವನ ಮೇಲೆ ಅಭಿಮಾನ ಉಕ್ಕಿತು. 'ಯಾವೂರಿಂದ ಬಂದೆ?'–ಎಂದು ಕೇಳಿದರು.

ತಾನು ಈಗ ನಾಗಲಾಪುರದಲ್ಲಿರುವ ವಿಷಯ ಹೇಳಿದ. ಇತ್ತೀಚೆಗೆ ಅವರು ಊರಿಗೆ ಹೋಗಿಯೇ ಇಲ್ಲ. ಚೆನ್ನರಾಯಪಟ್ಟಣದಲ್ಲೂ ಸರಿಯಾಗಿ ಇಲ್ಲ. ಹಾಸನ, ಕೌಶಿಕ, ಮಗ್ಗೆ, ರಾಮನಾಥಪುರಗಳ ಕಡೆ ಇದ್ದುಬಿಟ್ಟಿದ್ದರು.

'ಹೊಟ್ಟೆ ಹಸೀತಿದೆಯೆ?'–ಅವರು ಕೇಳಿದರು.

'ಹೂಂ.'

'ನೋಡು ಈಗ ಬಾಳೆಹಣ್ಣು ಸಕ್ರೆ ಇದೆ. ತಿಂದು ಮಲಕ್ಕೊ. ಬೆಳಕು ಹರಿದಮೇಲೆ ಹೋಟ್‌ಲಲ್ಲಿ ತಿಂಡಿ ತಿನ್ನೂವಂತೆ.'

'ದೊಸೆಯಾ?'

'ಹೂಂ, ನೀನು ಕೇಳಿದ್ದು.'

ಅವರೇ ಸುಲಿದು ಸಕ್ಕರೆಯಲ್ಲಿ ಅದ್ದಿ ಅದ್ದಿ ಕೊಟ್ಟ ಬಾಳೆಯ ಹಣ್ಣನ್ನು ಅವನು ಹೊಟ್ಟೆ ತುಂಬ ತಿಂದ. ತಮ್ಮ ಹಾಸಿಗೆಯಮೇಲೆ ಮಲಗಿಸಿಕೊಂಡು ಅವರು ತಮ್ಮ ಶಾಲನ್ನೇ ಅರ್ಧ ಹೊದೆಸಿ ದೀಪ ಆರಿಸಿದರು. ಅವನಿಗೆ ನಿದ್ದೆ ಬಂತು; ಅವರಿಗೆ ಬರಲಿಲ್ಲ. ಹೋಗಿ ಮಗಳನ್ನು ನೋಡಿಕೊಂಡು ಬರಬೇಕೆಂದು ಮನಸ್ಸಾಯಿತು. ಅವಳ ಮಕ್ಕಳು ಸತ್ತು ಹೆಚ್ಚು ಕಡಿಮೆ ವರ್ಷವಾಗ್ತಾ ಬಂತು. ಎಷ್ಟು ಕೊರಗಿದಾಳೋ! ನಾನು ಆ ಹುಡುಗೀ ಮದುವೆಗೂ ಹೋಗಲಿಲ್ಲ. ಒಳ್ಳೇ ಹುಡುಗನಿಗೆ ಕೊಟ್ಟು ಮಾಡಿದಳು ಅಂತ ಅಕ್ಕಮ್ಮ ಹೇಳಿದ್ದಳು. ನಂಜನ ಗಂಡ ನಫರತ್ ಬಾಸ್‌ಚೋತ್. ನನ್ನಂಥೋನ ಮಗಳ ಕೈಹಿಡಿಯೋ ಯೋಗ್ಯತೆ ಆ ನಾಯಿಮರಿಗೆ ಎಲ್ಲಿದೆ? ಆದ್ರೂ ಪರವಾಗಿಲ್ಲ. ಇದೊಂದು ಗಂಡುಮರಿ ಅವಳ ಹೊಟ್ಟೇಲಿ ಹುಟ್ಟಿದೆಯಲ, ಅಷ್ಟೇ ಸಾಕು–ಎಂಬ ಯೋಚನೆಯಲ್ಲಿ ಅವರು ಹೊರಳಾಡುತ್ತಾ ಇದ್ದರು.

ಅಷ್ಟರಲ್ಲಿ ಯಾರೋ ಹದ ಬಡಿದು–'ಬಾಗಿಲು' ಎಂದ ಹಾಗಾಯಿತು. ಇನ್ನೊಂದು ಸಲ ಕೂಗಿದಾಗ ಕಲ್ಲೇಶನ ಧ್ವನಿ ಎಂದು ಗೊತ್ತಾಯಿತು. ಎದ್ದು ದೀಪ ಹೊತ್ತಿಸಿ ಬಾಗಿಲು ತೆಗೆದರು. ವಿಶ್ವ ಇಲ್ಲಿ ಮಲಗಿದ್ದುದನ್ನು ನೋಡಿದ ಕಲ್ಲೇಶನಿಗೆ ಆತಂಕ ನಿವೃತ್ತಿಯಾಯಿತು. ಮಧ್ಯಾಹ್ನದ ತನಕ ಹುಡುಗನ ಹಾದಿ ಕಾಯ್ದು ಅವನು ಊರಿನ ಕೆರೆ ಬಾವಿಗಳನ್ನೆಲ್ಲ ಹುಡುಕಿದ್ದ. ಚೆನ್ನರಾಯಪಟ್ಟಣಕ್ಕೆ ಹೋದ ಗುಂಪಿನಲ್ಲಿ ಅವನೂ ಇದ್ದ ಹಾಗಿತ್ತು ಎಂದು ಯಾರೋ ರಾತ್ರಿಯ ಹೊತ್ತಿಗೆ ಹೇಳಿದರು. ಆಗಲೇ ಇಲ್ಲಿಗೆ ಹೊರಟುಬಂದೆ. ಅರ್ಧರಾತ್ರಿಯಾಗಿ ಎಲ್ಲರೂ ಮಲಗಿದ್ದರು. ಅನುಮಾನ ಬಂದು ಪೋಲೀಸು ಸ್ಟೇಷನ್ನಿಗೆ ಹೋಗಿ ವಿಚಾರಿಸಿದ. ಇವನ ಹಳೇ ಸಹೋದ್ಯೋಗಿಯಾಗಿದ್ದು ಈಗ ದಫೇದಾರನಾಗಿದ್ದ ಯಲ್ಲಪ್ಪನೇ ಇವನ ವಿಷಯ ಹೇಳಿ–'ನಿಮ್ಮ ಅಯ್ಯ ಅವರು ದೆವ್ವದ ಮನ್ಲಿ ಅವ್ರೆ. ನಾನೇ ಹೋಗಿ ಬಿಟ್ಟುಬಂದೆ' ಎಂದು

ಹುಡುಗನ ಧೈರ್ಯವನ್ನು ವರ್ಣಿಸಿದ.
ಮೊಮ್ಮಗನ ಪ್ರತಾಪವನ್ನು ಕಂಠೀಜೋಯಿಸರೂ ಹೇಳಿದರು. ಮಕ್ಕಳು ಸತ್ತಮೇಲೆ ನಂಜ ಶೃಂಗೇರಿಗೆ ಹೋದದ್ದು, ಅಲ್ಲಿ ಇವನು ಹೊಳೆಯಲ್ಲಿ ಈಜಿದ ಸಾಹಸ, ಊರಿನಲ್ಲಿ ಹಾವು ಹೊಡೆದು ಅದು ತಪ್ಪಿಸಿಕೊಂಡಿರುವುದು, ಈಗ ಓದಲು ನಾಗಲಾಪುರಕ್ಕೆ ಕಳಿಸಿರುವುದು, ಎಲ್ಲವನ್ನೂ ಕಲ್ಲೇಶ ವಿವರಿಸಿದ.
ಬೆಳಿಗ್ಗೆ ಎಲ್ಲರೂ ಹೊತ್ತಾಗಿ ಎದ್ದರು. ಎಚ್ಚರವಾಗಿ ವಿಶ್ವ ಹೊರಳಿ ನೋಡಿದರೆ ಮಾವ ಕೂತಿದ್ದಾನೆ. ಅವನು ಹೆದರಿಕೆಯಿಂದ ಮಂಕಾಗಿಹೋದ. ಎದ್ದು ಮುಖ ತೊಳೆದು ಕೆರೆಯ ಕಡೆಗೆ ಹೋಗಿ ಬಂದಮೇಲೆ ಮೂವರೂ ಹೋಟೆಲಿಗೆ ಹೋದರು. 'ಮಸಾಲೆದೋಸೆ ತಿಂತೀಯಾ ಪಾಪ?'–ಎಂದು ಅಜ್ಜ ಕೇಳಿದರೆ ಅವನ ಉತ್ತರವೇ ಇಲ್ಲ. ಇನ್ನೊಂದು ಸಲ ಕೇಳಿದುದಕ್ಕೆ, 'ನಂಗೆ ಎಂಥದೂ ಬ್ಯಾಡ' ಎಂದ. ಕಲ್ಲೇಶನನ್ನು ಕಂಡರೆ ಹುಡುಗನಿಗೆ ಇಷ್ಟು ಹೆದರಿಕೆ ಇದೆ ಅನ್ನುವುದು ಅವರಿಗೆ ತಿಳಿಯಲಿಲ್ಲ. ಅವರೇ ಹೇಳಿ ಅವನಿಗೆ ಎರಡು ಮಸಾಲೆದೋಸೆ, ಮೈಸೂರುಪಾಕು ಮೊದಲಾಗಿ, ರುಚಿರುಚಿಯಾದ ತಿಂಡಿಗಳನ್ನೆಲ್ಲ ಕೊಡಿಸಿದರು. ಕಲ್ಲೇಶ ಹೊರಡುವಾಗ ಹೇಳಿದರು: 'ಹುಡುಗನ್ನ ನಡಸ್ಕಂಡು ಹೋಗ್‌ಬ್ಯಾಡ. ನಾನು ಹೊಸ ಕುದುರೆ ತಗಂಡಿದೀನಿ. ಹಿಂದ್‌ಗಡೆ ಕಟ್ಟಿಹಾಕಿದೀನಿ. ಜೀನುಹಾಕ್ಕಂಡು ಕೂರುಸ್ಕಂಡು ಹೋಗು.'
ಅವರೇ ಕುದುರೆಯನ್ನು ಬಿಚ್ಚಿ ತಂದು ಜೀನು ಹಾಕಿ ಅದರ ಮೇಲೆ ವಿಶ್ವನನ್ನು ಹತ್ತಿಸಿ ಕೂರಿಸಿದಾಗ ಅವನು ಹಿಗ್ಗಿದ. ಊರಿನಲ್ಲಿದ್ದಾಗ ಪಟೇಲನ ಮನೆಯ ಕುದುರೆಮರಿಯನ್ನು ಆಗಾಗ್ಗೆ ಕದ್ದು ಏರಿ ಓಡಿಸುವ ಅಭ್ಯಾಸವೇನೋ ಇತ್ತು. ಆದರೆ ಇಂತಹ ಹೊಳೆಯುವ ಜೀನಿನ ಇಷ್ಟು ದೊಡ್ಡ ಕೆಂಪು ಕುದುರೆಯ ಮೇಲೆ ಅವನು ಕೂತಿರಲಿಲ್ಲ. ಒಂದು ನಿಮಿಷ ಹೆದರಿಕೆಯಾದರೂ ಕೆಳಗೆ ಇಳಿಯುತ್ತೇನೆಂದು ಮಾತ್ರ ಹೇಳಲಿಲ್ಲ. ಕಲ್ಲೇಶನೂ ಹತ್ತಿ ಅವನ ಹಿಂದೆ ಕೂತಮೇಲೆ ಅಜ್ಜಯ್ಯ ಹೇಳಿದರು: 'ಇಲ್ನೋಡು, ಕುದುರೆ ಬೇಕಾದ್ರೆ ಒಂದು ಹದಿನೈದು ದಿನ ಅಲ್ಲೇ ಇರ್ಲಿ. ಅಷ್ಟರಲ್ಲಿ ಇವನಿಗೆ ಸವಾರಿ ಅಭ್ಯಾಸ ಮಾಡ್ಸು. ಗಂಡು ಹುಡುಗ ಅಂದಮೇಲೆ ಕುದುರೆ ಸವಾರಿ ಬರ್‌ಬೇಕು.'
ಸವಾರಿ ಬಲು ಮಜವಾಗಿತ್ತು. ದಾರಿಯಲ್ಲಿ ಮಾವ ಬೈಯಲಿಲ್ಲ; ಒಂದು ಮಾತೂ ಆಡಲಿಲ್ಲ. ಕುದುರೆಯನ್ನು ಇನ್ನೂ ಜೋರಾಗಿ ಓಡಿಸಬೇಕೆಂದು ಅವನ ಆಸೆ. ಆದರೆ ಬಾಯಿ ಬಿಟ್ಟು ಮಾವನ ಕೈಲಿ ಹೇಳಲು ಭಯ. ಸುಮ್ಮನೆ ಕೂತು ಸವಾರಿಯ ಸುಖ ಅನುಭವಿಸುತ್ತಿದ್ದ. ನೆನ್ನೆ ತಾನೆ ಮಾಡಿದ ಭಾಷಣದ ಮಾತುಗಳು ನೆನಪಿಗೆ ಬರುತ್ತಿದ್ದವು. ''ಈ ಕುದುರೆ ನಂದೇ ಆದ್ರೆ ಎಷ್ಟು ಚೆನ್ನ! ನಂಗೇ ಕೊಡು ಅಂತ ಅಜ್ಜಯ್ಯನ್ನ ಕೇಳಬೇಕು. ಇದರ ಮೇಲೆ ಹತ್ಕಂಡು ರಾತ್ರಿ ಹೊತ್ನಲ್ಲಿ ಒಬ್ಬನೇ ನಮ್ಮೂರಿಗೆ ಹೋಗಿ ಅಮ್ಮನ್ನ ಎಬ್ಬಿಸಬೇಕು. ಇನ್ನುಮ್ಯಾಲೆ ನಮ್ಮೂರಲ್ಲೇ ಇದ್ದುಬಿಡಬೇಕು. ಅಮ್ಮ ಇಲ್ದೆ ಒಬ್ಬನೇ ಇರ್‌ಕೂಡದು. ಯಾವಾಗ್ಲೂ ಕುದುರೆ ಮೇಲೆ ಕೂತ್ಕಂಡು ತಿರುಗ್ತಾ ಇದ್ರೆ ಹಾವು ಅದ್‌ಹ್ಯಾಗೆ ಕಡಿಯುತ್ತೆ? ಮತ್ತೆ ನಮ್ಮೂರ ಸ್ಕೂಲ್ಗೇ ಸೇರ್ಕಬೇಕು. ಸ್ಕೂಲಿನಲ್ಲೂ, 'ನಾನು ಕುದುರೆ ಮ್ಯಾಲೆ ಕೂತ್ಕಂಡಿರ್ತೀನಿ, ನೀವು ಹಾಗೇ ಪಾಠ ಹೇಳ್ಕೊಡಿ' ಅಂತ ಮೇಷ್ಟರಿಗೆ ಹೇಳಬೇಕು. ಪ್ರೈಮರಿ ಸ್ಕೂಲು ಆದಮ್ಯಾಲೆ ಈ ಕುದುರೆಮ್ಯಾಲೆ ಕೂತು ನಮ್ಮೂರಿನಿಂದ ದಿನಾ ಕಂಬನಕೆರೆ ಮಿಡ್ಲ್‌ಸ್ಕೂಲಿಗೆ ಹೋಗೂದು. ಈ ಮಾವ ಈಗ ಜೊತೇಲಿ ಇಲ್ದೆ ಇದ್ದಿದ್ರೆ ಇದ ಓಡಿಸ್ಕಂಡು ಹೀಗಿಂದ ಹೀಗೇ ನಮ್ಮೂರಿಗೆ ಹೋಗ್‌ಭೌದಾಗಿತ್ತು. ನನ್ನ ಹೊಡೀತಾನಲ, ಈ ಮಾವನ ಕೈ ಸೇದಿಹೋಗ''– ಎಂದು ಅವನು ತನ್ನಲ್ಲಿಯೇ ಯೋಚಿಸುತ್ತಿದ್ದ.
ಊರು ಸೇರಿದ ಮೇಲೆ ಮನೆಯ ಮುಂದೆ ಕುದುರೆ ನಿಲ್ಲಿಸಿ ಇವನನ್ನು ಇಳಿಸಿದಾಗ ಬಾಗಿಲಲ್ಲೆ ಅಕ್ಕಮ್ಮ ಬಂದು–'ಎಲ್ಲಿಗೆ ಹೋಗಿದ್ಯೋ ನನ್ ಕಂದಾ?' ಎನ್ನುತ್ತಾ ಬಂದು ತಬ್ಬಿಕೊಂಡಳು. ಕಲ್ಲೇಶ ಎಕ್ಕಡವನ್ನು ಹೊರಗೆ ಬಿಟ್ಟು ನೇರವಾಗಿ ಅಡಿಗೆ ಮನೆಗೆ ಹೋದ. ಅಷ್ಟರಲ್ಲಿ ಅಕ್ಕಮ್ಮ ವಿಶ್ವರು ಒಳಗೆ ಬಂದಿದ್ದರು. ಕೈಗೆ ಸಿಕ್ಕಿದ ಒಂದು ಹೊಳಕೆ ಸೌದೆ ತಂದ ಮಾವ ಅವನ ಎಡ ರೆಟ್ಟೆ ಹಿಡಿದು ಬೆನ್ನಿನಮೇಲೆ ಎತ್ತಿ ಎತ್ತಿ ಬಾರಿಸಲು ಶುರುಮಾಡಿದ. 'ಅಯ್ಯೋ, ಮಗು ಸತ್ಹೋಗುತ್ತೆ ಕಣೋ ದೈತ್ಯಸೂಳೇಮಗನೆ. ಹಾಗೆ ಹೊಡೀಬಾರ್ದು ಕಣೋ'–ಎಂದು ಬಿಡಿಸಿಕೊಳ್ಳಲು ಹೋದ ಅಕ್ಕಮ್ಮನ ಕೈಮೇಲೆ ಏಟು ಬಿದ್ದು ಅವಳು ಅಯ್ಯಯ್ಯೋ ಎಂದು ಗೋಳಿಡುತ್ತಾ, 'ಯಮಮುಂಡೇಗಂಡ, ಮಗೂನ ಹಾಗೆ ಹೊಡೀತಾರೇನೋ' ಎನ್ನುತ್ತಿರುವಂತೆಯೇ ಅವನು ಮತ್ತೆ ಎಂಟು ಹತ್ತು ಏಟು ಬಾರಿಸಿಬಿಟ್ಟಿದ್ದ.
'ಕಟ್ಟಿಲ್ಲದ ಪಂಜಿನ ಹಾಗೆ ಬೆಳೆದಿದಾನೆ ಭಡವ. ಸಿಕ್ಕಿದೋರ್ ಜೊತೆ ಹೋಗಿದ್ನಲಾ, ಏನಾದ್ರೂ ಆಗಿದ್ರೆ ಕೆಟ್ಟ ಹೆಸರು ಯಾರಿಗೆ ಬತ್ತಿತ್ತು?'–ಎನ್ನುವಾಗ ಅವನ ಕಣ್ಣು ಹುಡುಗನ ಮೇಲೆ ಹೋಯಿತು. ಬೆನ್ನಿನಿಂದ ರಕ್ತ ಸೋರುತ್ತಿತ್ತು. ಅವನು ಕೆಳಗೆ ಬಿದ್ದು ಜ್ಞಾನ ತಪ್ಪಿತ್ತು. ತೊಟ್ಟ ಚಡ್ಡಿಯ ಒಳಗೇ ಉಚ್ಚೆ ಹುಯ್ದುಕೊಂಡು ನೆಲದ ಮೇಲೆಲ್ಲ ಹರಿದಿತ್ತು. 'ಅಲ್ಲಿ ಹಾವು ಕಡಿಯುತ್ತೆ ಅಂತ ಹೆದರ್ಕಂಡು ಅವಳು ಇದ್ದ ಒಂದು ಕಂದನ್ನ ಇಲ್ಲಿಗೆ ಕಳ್ಸಿದ್ರೆ ನೀನು ಹೊಡೆದು ಸಾಯಿಸ್ದೆ ಏನೋ!'–ಎಂದು ಅಕ್ಕಮ್ಮ ಬಾಯಿಬಡಿದುಕೊಂಡಳು.
ಅಕ್ಕಪಕ್ಕದವರು ಓಡಿಬಂದರು. ಕಲ್ಲೇಶ ವಿಶ್ವನನ್ನು ಮುಟ್ಟಿ ಪರೀಕ್ಷಿಸಿದ. ಪ್ರಾಣ ಹೋಗಿರಲಿಲ್ಲ. ಓಡಿಹೋಗಿ ಒಂದು ಚೊಂಬು ತಣ್ಣೀರು ತಂದು ಚೆನ್ನಾಗಿ ತಲೆಗೆ ತಟ್ಟಿದಮೇಲೆ ಜ್ಞಾನ ಬಂತು. ಅಂಗಿ ಬಿಚ್ಚಿ ನೋಡಿದರೆ

ಬೆನ್ನಮೇಲೆಲ್ಲ ಛಿದ್ರ ವಿಚ್ಛಿದ್ರ ಗಾಯಗಳಾಗಿ ಒಸರುತ್ತಿದ್ದ ರಕ್ತ ಹಾಗೆಯೇ ಹೆಪ್ಪುಗಟ್ಟಿ ಕಪ್ಪು ತಿರುಗುತ್ತಿತ್ತು. ಕಲ್ಲೇಶ ಗಾಯಗಳನ್ನು ತೊಳೆದು, ಮನೆಯಲ್ಲಿ ಇಟ್ಟಿದ್ದ ನಾಟಿಗಂಧದ ಎಣ್ಣೆ ಹಚ್ಚುವಾಗ ಹುಡುಗ, 'ಅಯ್ಯಯ್ಯೋ ಉರಿಯುತ್ತೆ' ಎಂದು ಗೋಳಿಡುತ್ತಿದ್ದ.

– 4 –

ಈ ನಡುವೆ ಮೇಷ್ಟರಿಗೆ ರಾಮಸಂದ್ರದಿಂದ ವರ್ಗವಾಯಿತು. ಈ ಊರಿಗೆ ಅವರು ಬಂದು ಐದು ವರ್ಷವಾಗಿತ್ತು. ಸ್ವಂತ ಊರಾದ ಹುಳಿಯಾರಿಗೆ ವರ್ಗ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅದೃಷ್ಟಕ್ಕೆ ಅದೇ ಊರಿಗೆ ಸಿಕ್ಕಿತು. ಅವರು ಹೊರಟುಹೋದುದು ನಂಜಮ್ಮನಿಗೆ ಬಹಳ ಬೇಸರವೆನಿಸಿತು. ಸ್ವಂತ ಅಣ್ಣನಂತೆ ಅವಳ ಕಷ್ಟ ಸುಖಗಳನ್ನೆಲ್ಲ ಅರಿತು ಆಗುತ್ತಿದ್ದರು. ಅವರ ಹೆಂಡತಿಗೂ ಅವಳಿಗೂ ತುಂಬ ಹೊದಿತ್ತು. ಆರು ತಿಂಗಳು ನಡೆದ ಅವಳ ನೈಟ್ ಸ್ಕೂಲು ಸಹ ಮುಗಿದಿತ್ತು. ಕಂಬನಕೆರೆಯ ಹೆಡ್ಮಾಸ್ಟರು ಬಂದು ಮೊದಲ ನೈಟ್ ಸ್ಕೂಲು ಸರಿಯಾಗಿ ನಡೆಯಿತೆಂದು ರಿಪೋರ್ಟ್ ಬರೆದು, ಎರಡನೇ ಸಲ ಪ್ರಾರಂಭಿಸಲು ಶಿಫಾರಸು ಮಾಡಿದ್ದರು. ಸದ್ಯದಲ್ಲೆ ಮೊದಲ ಸಲದ ಸಂಭಾವನೆ ನೂರ ಇಪ್ಪತ್ತು ರೂಪಾಯಿಯನ್ನು ಸರ್ಕಾರ ಕಳಿಸುವುದಾಗಿ ಹೇಳಿ ಅವಳಿಂದ ರಶೀತಿ ತೆಗೆದುಕೊಂಡು ಹೋಗಿದ್ದರು. ಆ ಮೇಷ್ಟರ ಜಾಗಕ್ಕೆ ಬೇರೆಯವರು ಬಂದರು. ಆದರೆ ಅವರಿಗೂ ನಂಜಮ್ಮನಿಗೂ ಪರಿಚಯವಿಲ್ಲ. ವೆಂಕಟೇಶಯ್ಯ ಮೇಷ್ಟರು ಹೋದದ್ದರಿಂದ ಮಾದೇವಯ್ಯನವರಿಗೂ ಬೇಸರ.

ಇದೇ ಸಮಯದಲ್ಲಿ ನಂಜಮ್ಮ ಹೊಸ ಮನೆ ಶುರು ಮಾಡಿದಳು. ತಕ್ಷಣದಲ್ಲಿ ಹೇಗೂ ಬೇರೆ ಕೆಲಸವಿರಲಿಲ್ಲ. ಈ ಬಾರಿಯ ಮಳೆಗಾಲಕ್ಕೆ ಮೊದಲು, ಹೆಂಚು ಹೊದಿಸಿಯೇಬಿಡಬೇಕೆಂದು ಒಂದೇಸಮನೆ ಕೆಲಸ ಮಾಡಿಸುತ್ತಿದ್ದಳು. ಮನೆ ಕಟ್ಟಿಸಿ ಅವಳಿಗೆ ಅಭ್ಯಾಸವಿಲ್ಲ. ಎಲ್ಲ ಕೆಲಸವನ್ನೂ ಸ್ವಂತ ಜವಾಬ್ದಾರಿ, ಸ್ವಂತ ನಿರ್ದೇಶದಿಂದ ಮಾಡಬೇಕು. ಇಲ್ಲದಿದ್ದರೆ ದುಬಾರಿ ಖರ್ಚು ಬರುತ್ತದೆ. ಅವಳು ಈಗ ಹೊಂದಿಸಿಕೊಂಡಿರುವ ದುಡ್ಡು ಗೋಡೆ, ಮರಮುಟ್ಟು, ಬಿದಿರುಗಳಿಗೆ ಸಾಕು. ಅಟ್ಟದ ಹಲಗೆಯನ್ನು ಯಾವಾಗ ಬೇಕಾದರೂ ಹಾಕಿಕೊಳ್ಳಬಹುದು. ಹೆಂಚಿಗೆ ದುಡ್ಡು ಹೊಂದಿಸಬೇಕು. ಉಳಿದ ಗೋಡೆಯ ಸಾರಣೆ ಕಾರಣೆಗಳು ನಿಧಾನವಾಗಿ ಆದರೂ ತೊಂದರೆಯಿಲ್ಲ. ಪ್ರತಿಯೊಂದು ಸಾಮಾನು ಕೊಳ್ಳುವಾಗಲೂ, ಗೋಡೆ ಮರಗೆಲಸಗಳಲ್ಲಿಯೂ, ಮಾದೇವಯ್ಯನವರು ತಮಗೆ ತಿಳಿದಂತೆ ಕೆಲಸದವರಿಗೆ ತಿಳಿವಳಿಕೆ ಕೊಡುತ್ತಿದ್ದರು. ತನಗೆ ಮನೆಯಲ್ಲಿ ಬೇರೆ ಕೆಲಸವಿರಲಿಲ್ಲ. ಸುಮ್ಮನೆ ಕುಳಿತಿರದೆ ತಾನೂ ಕೆಲಸಕ್ಕೆ ಕೈಹಾಕಿದಳು. ಗಂಡಾಳುಗಳು ಕಲಸಿದ ಮಣ್ಣಿನ ಮುದ್ದೆಯನ್ನು ತಾನೇ ಕೈಲಿ ತೆಗೆದು ಮಾಡಿನ ಗೋಡೆಯ ಮೇಲಕ್ಕೆ ಎಸೆಯುವಳು. ಮಣ್ಣು ಕಲಸಲು ಗಡಿಗೆಯಲ್ಲಿ ನೀರು ಸೇದಿ ತರುವಳು. ಶ್ಯಾನುಬಾಕಿ ಲೆಕ್ಕ ಬರೆಯುವ ಈ ಅಮ್ಮ ಕೆಲಸ ಮಾಡುವುದು ಆಳುಗಳಿಗೇ ಸಂಕೋಚ. ಆದರೆ ತನ್ನ ಮನೆ, ತಾನು ದುಡಿದು ಕಟ್ಟಬೇಕು; ಸುಮ್ಮನೆ ಕೂತು ಮಾಡುವುದೇನು ಎಂಬುದು ಅವಳ ದೃಷ್ಟಿ.

ಆಗಲೆ ಒಂದೂವರೆ ಆಳುದ್ದದ ಗೋಡೆ ಏರಿತ್ತು. ಹೆಂಚಿಗೆ ದುಡ್ಡು ಹೊಂದಿಸುವುದೊಂದೇ ಬಾಕಿ. ಒಂದು ದಿನ ಸಂಜೆ, ಕಲಸಿದ ಜಾಗದಲ್ಲಿ ನೆಲಕ್ಕೆ ಅಂಟಿದ್ದ ಮಣ್ಣನ್ನು ಗುದ್ದಲಿಯಿಂದ ಕೆರೆದು ಉಂಡೆ ಮಾಡಿ, ಮೇಲೆ ಕೂತು ಗೋಡೆ ಹಾಕುವವನಿಗೆ ಕೊಡುತ್ತಿದ್ದಳು. ಅವಳ ತಂದೆ ಅಲ್ಲಿಗೆ ಬಂದರು. ಹೆಗಲಿಗೆ ಒಂದು ಹಸಿಬೇಚೀಲ ಹಾಕಿ ಪಂಚೆ ಉಟ್ಟು ಶಾಲು ಹೊದೆದಿದ್ದ ಅವರು, ಹಿಂದಿನ ಬೂಟು, ಹ್ಯಾಟು, ಬಿಳೀಕುದುರೆಯ ಕಂಠೀಜೋಯಿಸರಾಗಿರಲಿಲ್ಲ. ಕುದುರೆಯೂ ಇಲ್ಲದೆ ನಡೆದು ಬಂದಿದ್ದಾರೆ. 'ನಂಜಾ, ಮನೆ ಕಟ್ಟುಸ್ತಿದೀಯಾ? ವಳ್ಳೇದಾಯ್ತು'–ಎಂದರು.

ಗುದ್ದಲಿಯನ್ನು ಅಲ್ಲಿ ಬಿಟ್ಟು, ನಾಳೆ ಮಾಡಬೇಕಾದ ಕೆಲಸದ ಬಗೆಗೆ ಗೋಡೆಯ ಆಳಿಗೆ ಹೇಳಿ ಅವಳು ತಂದೆಯೊಡನೆ ಮನೆಗೆ ಬಂದಳು. ಕೈ ಕಾಲು ಮುಖ ತೊಳೆದು ಅಡಿಗೆಯ ಮನೆ ಹೊಕ್ಕು, ಒಲೆ ಹಚ್ಚಿದಳು. 'ನಂಜಾ, ನಂಗೆ ಅಂತ ವಿಶೇಷ ಏನೂ ಮಾಡ್ಬ್ಯಾಡ. ಅನ್ನ ಹುಣಿಸೆನೀರು ಮಾಡಿಬಿಡು ಸಾಕು'–ಎನ್ನುತ್ತಾ ತಾವೂ ಅಡಿಗೆಮನೆಗೆ ಬಂದು, ಒಲೆಯ ಹತ್ತಿರ ಗೋಡೆಗೆ ಒರಗಿಸಿದ್ದ ಮಣೆ ಹಾಕಿಕೊಂಡು ಕುಳಿತು, 'ನಿನ್ನ ಮಗ ರುಸ್ತುಂ ಗಂಡು ನೋಡು. ಹುಟ್ಟಿದ್ರೆ ಹಾಗೆ ಹುಟ್ಟಬೇಕು. ಇಪ್ಪತ್ತು ಸಾವಿರ ಜನ ಸಿಂಹದ ಮರಿ ಅಂದ್ರು' ಎಂದು ತಾವು ಕಂಡದ್ದನ್ನೆಲ್ಲ ವಿವರಿಸಿದರು. ಮಗನ ಹೊಗಳಿಕೆಯನ್ನು ಕೇಳಿದ ಅವಳಿಗೂ ಹಿಗ್ಗು. ಆದರೆ ಈ ಹುಡುಗ ಹೀಗೆ ಮುಂದೆ ನುಗ್ಗಿ ಪೋಲೀಸಿನವರಿಂದ ಬುರುಡೆ ಹೊಡೆಸಿಕೊಂಡರೆ ಏನು ಗತಿ ಎಂಬ ಯೋಚನೆ. 'ನಾನು ಈ ಕಡೆ ಬಂದೇ ಇರ್ಲಿಲ್ಲ. ನೆನ್ನೆ ನಿನ್ನ ಮಗನ್ನ ನೋಡ್ದೆ. ಹೇಳಿದ್ನಲ್ಲ, ರಾತ್ರಿ ಪೋಲೀಸ್ನೋರು ಬಂದು ನನ್ನ ಹತ್ರುಕ್ಕೆ ಬಿಟ್ಟುಹೋದ್ರು. ಇವತ್ತು ಬೆಳಿಗ್ಗೆ ಕುದುರೇ ಮೇಲೆ ಕೂರಿಸಿ ಅವ್ನನ್ನೂ ಕಲ್ಲೇಶನ್ನೂ ಊರಿಗೆ ಕಳುಸ್ದೆ. ಯಾಕೋ ನಿನ್ನ ನೋಡಬೇಕು ಅನ್ನುಸ್ತು. ಯಾಕೆ ನಿಧಾನ ಮಾಡಬೇಕು ಅಂತ ಹಸಿಬೇಚೀಲ ಹೆಗಲಿಗೆ ಹಾಕ್ಕಂಡು ಹೊರಟೇಬಿಟ್ಟೆ ನೋಡು'–ಕಂಠೀಜೋಯಿಸರು ಎಂದರು.

ಮಕ್ಕಳು ಸತ್ತ ವಿಷಯವಾಗಿ ಅವರೂ ಮಾತಾಡಲಿಲ್ಲ; ಅವಳೂ ಹೇಳಲಿಲ್ಲ. ಅವರು ಕೇಳಿದರು: 'ಮನೆ

ಕಟ್ಟುಸ್ತಿದೀಯಾ ವಳ್ಳೇದಾಯ್ತು. ಮೊದ್ಲೇ ಗೊತ್ತಿದ್ರೆ ನಾನು ಒಂದಿಷ್ಟು ದುಡ್ಡು ಕೊಡ್ತಿದ್ದೆ. ಮಂಗಳೂರು ಹಂಚೇ ಹಾಕುಸ್‌ಭೌದಾಗಿತ್ತು. ಈಗ ಒಂದು ತಿಂಗ್ಳಲ್ಲಿ ಎಂಟು ನೂರು ರೂಪಾಯಿ ಕೊಟ್ಟು ಒಂದು ಕುದುರೆ ತಗಂಡುಬಿಟ್ಟೆ. ಕ್ವಾ ಇಲ್ಲಿ, ಇನ್ನೂರು ರೂಪಾಯಿ ಇದೆ'–ಅವರು ತಮ್ಮ ಒಳ ಅಂಗಿಯ ಜೇಬಿಗೆ ಕೈಹಾಕಿ ಒಂದು ಬಟ್ಟೇಯಲ್ಲಿ ಸುತ್ತಿದ್ದ ನೋಟಿನ ಕಂತೆಯನ್ನು ತೆಗೆದು, 'ತಗೋ, ಮನೆ ಕಟ್ಟಿಸುಕ್ಕೆ ಖರ್ಚು ಮಾಡ್ಕ' ಎಂದು ಅವಳ ಹತ್ತಿರ ಇಟ್ಟರು.

'ನಿಂಗೆ ಯಾತಕ್ಕಾದರೂ ಬೇಕಾಗುತ್ತೆ. ಇಟ್ಕ. ಮನೆಗೆ ನಾನು ಏರ್ಪಾಡು ಮಾಡ್ಕಂಡಿದೀನಿ.'

'ನಂಗೇನು ದುಡ್ಡಿಗೆ ತಾಪತ್ರಯ ಇಲ್ಲ. ನೀನ್ ಇಟ್ಕ.'

ಆ ದಿನ ರಾತ್ರಿ ಮಲಗಿದಮೇಲೂ ತಂದೆ ಮಗಳು ತುಂಬಹೊತ್ತು ಮಾತನಾಡುತ್ತಿದ್ದರು. ನಂಜು ಕೇಳಿದಳು: 'ಅಪ್ಪ, ನಿಂಗೆ ಇಷ್ಟು ವಯಸ್ಸಾಯ್ತು. ದೇವರು ಕೈಕಾಲೇನೋ ಇನ್ನೂ ಗಟ್ಟಿಯಾಗಿಟ್ಟಿದ್ದಾನೆ. ನೀನ್ಯಾಕೆ ಊರೂರು ತಿರುಗ್ತೀರಿ? ಮೂರು ತಿಂಗಳು ಆರು ತಿಂಗಳು ಊರಲ್ಲೇ ಇರುಲ್ಲ, ನೀನೆಲ್ಲಿರ್ತೀಯೋ ಗಿತ್ತಿಲ್ಲ ಅಂತ ಅಕ್ಕಮ್ಮ ಹೇಳಿದ್ಲು. ಇನ್ನು ಮೇಲಾದ್ರೂ ಹಾಯಾಗಿ ಮನೇಲಿರ್‌ಬಾರ್‌ದೇ?'

'ಊರಲ್ಲಿದ್ದು ಏನು ಮಾಡ್‌ಲಿ?'

'ಸುಮ್ನಿರು.'

'ಸುಮ್ನೆ ಹ್ಯಾಗಿರೂದು? ಏನಾದ್‌ರೂ ಕೆಲ್ಸ ಮಾಡಬೇಕಲ?'–ಈ ಪ್ರಶ್ನೆಗೆ ನಂಜಮ್ಮನಿಗೆ ಉತ್ತರ ತಿಳಿಯಲಿಲ್ಲ. ಸ್ವಲ್ಪ ಹೊತ್ತಾದಮೇಲೆ ಅವರೇ ಅಂದರು: 'ಕಲ್ಲೇಶನ ಹೆಂಡ್ತಿ ಯೋಗ್ತಿ ನಿಂಗೇ ಗೊತ್ತಿದೆ. ಆ ಮುಂಡೇನ ಒದ್ದು ಓಡ್ಸೂತಂಕ ಯಾರಿಗೂ ಸುಖವಿಲ್ಲ. ಅವ್ನೂ ಅವ್ಳನ್ನ ಹೊಡೀತಾನೆ, ಬಡೀತಾನೆ, ಓಡ್ಸುಲ್ಲ. ಅವ್ಳನ್ನ ಖೂನಿಮಾಡಿ ಯಾವ್ದಾದ್ರೂ ಹೊಲದಲ್ಲಿ ಹೂತುಬಿಡೂದೇನೂ ಕಷ್ಟವಲ್ಲ. ಅವಳ ಜೊತೆ ಹೆಣಗಬೇಕು ಅಂತ ಅವನ ಹಣೇಲಿ ಬರೆದಿದ್ರೆ ನಾನ್ಯಾಕೆ ಮಧ್ಯೆ ಏನಾರಮಾಡ್ಲಿ ಅಂತ ಸುಮ್ಮನಾಗಿಬಿಟ್ಟೆ. ನಂದೇನು ಯಾವೂರಲ್ಲಿದ್ರೂ ಆಗುತ್ತೆ ಬಿಡು.'

ನಂಜಮ್ಮ ಮಾತಾಡಲಿಲ್ಲ. 'ಇಲ್ಲಿಯೇ ಬಂದು ಇರು'–ಎಂದು ಅವಳು ಹೇಳುವ ಮನಸ್ಸು ಅವಳದು. ಆದರೆ ಅವರು ಮಗಳ ಮನೆಯಲ್ಲಿ ಎಂದಿಗೂ ಬಂದು ಇರುವವರಲ್ಲ. ಅಲ್ಲದೆ ಅವರು ಇಲ್ಲಿದ್ದರೆ ತನ್ನ ಗಂಡ ಮನೆ ಬಿಟ್ಟು ಹೋಗುತ್ತಾರೆ. ಗಂಡನ ನಡವಳಿಕೆ ಕಂಡರೆ ಸಿಟ್ಟು ಬಂದು ಅವರು ಹಿಡಿದು ಎರಡು ಹೊಡೆದರೂ ಸರಿಯೇ. ಅವಳು ಯಾವ ಮಾತೂ ಆಡಲಿಲ್ಲ. ಇಪ್ಪತ್ತು ಮೈಲಿ ನಡೆದು ಬಂದಿದ್ದ ಅವರಿಗೆ ಬೇಗ ನಿದ್ರೆ ಬಂದುಬಿಟ್ಟಿತು.

ನಂಜಮ್ಮ ಸ್ವಲ್ಪ ಹೊತ್ತು ಹೊರಳಾಡುತ್ತಲೇ ಇದ್ದಳು. ವಿಶ್ವನನ್ನು ಪೋಲೀಸ್ ಸ್ಟೇಷನ್ನಿಗೆ ಹಿಡಿದುಕೊಂಡು ಹೋಗಿದ್ದುದೇ ಯೋಚನೆ. ನಿದ್ರೆ ಬಂದಮೇಲೆ ಅದೇ ಕನಸು. ಅವನನ್ನು ಪೋಲೀಸಿನವರು ಬಿಟ್ಟುಬಿಟ್ಟಿದ್ದಾರೆ. ಆದರೆ ತನ್ನನ್ನು ಹಿಡಿದುಕೊಳ್ಳಲು ಬಂದಿದ್ದಾರೆ. ಓಡಿ ಓಡಿ ಹೋಗುತ್ತಿರುವ ಅವಳನ್ನು ಇಬ್ಬರು ಕರಿಯ ಬಣ್ಣದ ಕಾನಿಸ್ಟೇಬಲುಗಳು ಹಿಂಬಾಲಿಸುತ್ತಿದ್ದಾರೆ. ಎದುರಿಗೆ ಒಂದು ಹಳ್ಳ ಸಿಕ್ಕುತ್ತದೆ. ಅದನ್ನು ದಾಟಿ ದೂರ ಓಡಿ ಬಂದಮೇಲೆ ಅವರು– 'ನಮ್ಮ ಕೈಯಿಂದ ತಪ್ಪಿಸಿಕೊಂಡು ಎಲ್ಲಿ ಹೋಗ್ತಿಯಾ ಬಿಡು' ಎಂದು ಗಹಗಹಿಸಿ ನಗುತ್ತಾ ಅಲ್ಲಿಯೇ ನಿಂತುಕೊಳ್ಳುತ್ತಾರೆ. ಅವಳಿಗೆ ತಕ್ಷಣ ಎಚ್ಚರವಾಯಿತು. ಏನೋ ಕೆಟ್ಟ ಕನಸು. ತಾನೇನು ಅಂಥ ತಪ್ಪು ಕೆಲಸ ಮಾಡಿದೆ, ಪೋಲೀಸಿನವರು ಹೀಗೆ ಓಡಿಸಿಕೊಂಡು ಬರುಕ್ಕೆ?–ಎಂದು ಯೋಚಿಸುತ್ತಾ ಮಲಗಿದಳು. ಎಷ್ಟೋ ಹೊತ್ತು ನಿದ್ದೆ ಬರಲಿಲ್ಲ.

ಕಂಠೀಜೋಯಿಸರು ಮಗಳ ಮನೆಯಲ್ಲಿ ಮೂರು ದಿನ ಇದ್ದರು. ಮನೆಯ ಕಟ್ಟಡ ನೋಡಿ ತಮಗೆ ತಿಳಿದ ಸಲಹೆಗಳನ್ನು ಕೊಟ್ಟರು. ಹಾಸನದ ತಾಲ್ಲೂಕು ಕಟ್ಟಾಯದಲ್ಲಿ ಒಂದು ಮನೆಗೆ ಕಟ್ಟು ಮಾಡಬೇಕಾಗಿದ್ದುದರಿಂದ ಹೆಚ್ಚು ದಿನ ಇರದೆ ಹೊರಟುಬಿಟ್ಟರು.

ಹೆಂಚಿನ ದುಡ್ಡಿಗೆ ಏನು ಮಾಡುವುದೆಂದು ಯೋಚಿಸುತ್ತಿರುವಾಗಲೇ ಅವಳ ತಂದೆ ಇನ್ನೂರು ರೂಪಾಯಿ ಕೊಟ್ಟು ಹೋಗಿದ್ದರು. ಅವರು ಹೊರಟ ದಿನವೇ ಅವಳು ಸಣ್ಣೇನ ಹಳ್ಳಿಗೆ ಹೋಗಿ, ದುಡ್ಡು ದುಡ್ಡು ಹೊಂದಿಸಿರುವುದಾಗಿಯೂ ಇನ್ನು ಎರಡು ದಿನಕ್ಕೆ ಹೆಂಚು ತಂದು ಹಾಕಿ ಹಣ ಎಣಿಸಿಕೊಂಡು ಹೋಗಬೇಕಾಗಿಯೂ ಹೇಳಿ ಬಂದಳು. ಮೇಲೆ ಎದ್ದ ಗೋಡೆ ಸ್ವಲ್ಪ ಒಣಗುವುದೇ ತಡ. ಕಂಬ ಇಟ್ಟು ತೊಲೆ, ಕವೆಗಂಬ, ತೀರು ಏರಿಸಿ ದಬ್ಬೆ ಕಟ್ಟಬೇಕು. ಎಲ್ಲವೂ ಸಿದ್ಧವಾಗಿವೆ. ಹೆಂಚಿಗೆ ಕೊಟ್ಟಮೇಲೂ ಐವತ್ತು ರೂಪಾಯಿ ಕೈಲಿ ಉಳಿಯುತ್ತೆ. ಹಿಡಿದ ಕೈಲೇ ಕೆಮ್ಮಣ್ಣುಗಾಜು, ಸುಣ್ಣ ಮಾಡಿಬಿಡಬೇಕು. ಮನೆಯೊಂದಾದರೆ ಸರಿ. ಗೃಹಪ್ರವೇಶದ ಖರ್ಚಿಗೆ ಹೇಗಾದರೂ ಹೊಂದಿಸಬಹುದು. ಅಷ್ಟರಲ್ಲಿ ನೈಟ್ ಸ್ಕೂಲಿನ ದುಡ್ಡು ಬಂದರೆ ಅದರಲ್ಲಿ ಐವತ್ತು ರೂಪಾಯಿ ಖರ್ಚಿನಲ್ಲಿ ಹೇಗೋ ಹೊಸಮನೆ ಶಾಸ್ತ್ರ ಮಾಡಬೇಕು. ತನ್ನ ಅಪ್ಪನಿಗೇ ಹೇಳಿಕಳಿಸಬೇಕು. ಈ ಊರ ಜೋಯಿಸರನ್ನು ಕರೆಯುವುದು ಬೇಡ. ಗೃಹಪ್ರವೇಶಕ್ಕೆ ವಿಶ್ವನನ್ನು ಕರೆಸಿಕೊಳ್ಳುವುದಂತೂ ಸರಿ. ಅಕ್ಕಮ್ಮ ಬತ್ತಾಳೆ. ಕಲ್ಲೇಶನೂ ಬಂದೇಬತ್ತಾನೆ. ಅವನ ಹೆಂಡ್‌ತೀದು ನೆಚ್ಚಿಗೆ ಇಲ್ಲ.

ಈ ಸಲ ಇನ್ನೂ ಬೇಸಿಗೆ ಶುರುವಾಗುವ ಮೊದಲೇ ಆಕಾಶದಲ್ಲಿ ಮೋಡಗಳು ಕಾಣಿಸಿಕೊಂಡವು. ಹೆಂಚು ಹೊದೆಸುವ ಮೊದಲು ಮಳೆ ಬಂದರೆ ಗೋಡೆ ಕಲಸಿಕೊಳ್ಳುತ್ತದೆ. ಆದುದರಿಂದ ಮೇಲಿನ ಕೆಲಸ ಬೇಗ ಮುಗಿಯಬೇಕು. ಮರಗೆಲಸದವರಿಗೆ ವರಾತ ಮಾಡಿ ಅವಳು ಮತ್ತೆ ಒಂದು ದಿನ ಸಣ್ಣೇನಹಳ್ಳಿಗೆ ಹೋದಳು. ಕುಂಬಾರಶೆಟ್ಟಿ ಮನೆಯಲ್ಲಿರಲಿಲ್ಲ. ಅವನು ಬರುವತನಕ ಅವನ ಮನೆಯಲ್ಲೇ ಕೂತಿದ್ದು, ನಿಧಾನ ಮಾಡುತ್ತಿರುವುದಕ್ಕೆ ಅವನಿಗೆ ಎಚ್ಚರ ಹೇಳಿ ಊರಿಗೆ ಬಂದಳು. ಮರುದಿನವೇ ಹೆಂಚು ಬಂತು. ಬಿಸಿಲು ಒಂದೇಸಮನೆ ಸುಡುತ್ತಿತ್ತು. ಆಕಾಶದಲ್ಲಿ ಮೋಡಗಳು ಹೆದರಿಕೆ ಹುಟ್ಟಿಸುತ್ತಿದ್ದವು. ಬೇಗ ಬೇಗ ಹೆಂಚು ಮೇಲೆ ಏರಬೇಕು. ಹೆಂಚು ಹೊದಿಸುವ ಕೆಲಸವೂ ಪ್ರಾರಂಭವಾಯಿತು. ಮನೆಯ ಎರಡು ಕಡೆಯೂ, ಕೆಲಸ ಬಲ್ಲವರು ಸೂರಿನ ಮೇಲಿನಿಂದ ಹತ್ತಿ ಕೂತರು. ಹೆಣ್ಣಾಳುಗಳು ಏಣಿಯಮೇಲೆ ಹತ್ತಿ ಹೆಂಚಿನ ಉಂಡೆಗಳನ್ನು ಮೇಲೆ ಏರಿಸುತ್ತಿದ್ದರು. ಆ ಸಂಜೆಗೆ ಮಳೆ ಬರಬಹುದು. ನಂಜಮ್ಮ ಬೆಳಗಿನಿಂದ ಒಂದೇಸಮನೆ ತಾನೂ ಹೆಂಚು ಎತ್ತಿ ಮೇಲೆ ಕೊಡುವ ಕೆಲಸ ಮಾಡುತ್ತಿದ್ದಳು. ಆಳುಗಳಲ್ಲಿ ಯಾರೂ ಸುಧಾರಿಸಿಕೊಳ್ಳಲಿಲ್ಲ. ಸಂಜೆ ನಾಲ್ಕು ಗಂಟೆಯ ವೇಳೆಗೆ ಎಲ್ಲವೂ ಮುಗಿದು, ನಡುವಿನ ದಬ್ಬಹೆಂಚನ್ನು ಹೊದೆಸಿ ಆಯಿತು. 'ಅವ್ವಾ, ನಿಮ್ಮ ಕೆಲ್ಸ ಆಯ್ತು. ನೀವು ಗೆದ್ರಿ'–ಎಂದು ಹೇಳಿ ಕೆಲಸದವರು ಕೆಳಗೆ ಇಳಿದರು.
ಅಲ್ಲಿಯೇ ಇದ್ದ ಮಾದೇವಯ್ಯನವರು ಎಂದರು: 'ನಂಜಮ್ಮ, ಅಪ್ಪಣ್ಣಯ್ಯ ಕಬ್ಬಿನ ಗದ್ದೆಗೆ ಬೆಂಕಿ ತಗುಲ್‌ಸಿದ್‌ನಲಾ, ಅದಕ್ಕೆ ತಾನೇ ನಿಮ್ಮ ಜಮೀನೆಲ್ಲ ಹ್ವಾದದ್ದು? ಅವತ್ತು ಅವನೂ ಚಿನ್ನಯ್ಯ, ಇಬ್ಬರೂ ಸೇರಿ ಮನೆಮ್ಯಾಲೆ ಹತ್ತಿ, ಒನಕೆ ತಗಂಡಿ ಹೆಂಚು ಒಡೆದು ಹಾಕಿದ್ರು. ನಾನು ಹೇಳ್ತಿದ್ನಲ–ಮನೆ ವಡೆಯಾದು ಸುಲಭ, ಕಟ್ಟಾದು ಕಷ್ಟ ಅಂತ. ಅಂತೂ ನೀನು ಸ್ವಂತ ಕಟ್ಟಿ ಮುಗಿಸ್ದೆ.'
ಅವರು ಹಾಗೆ ಹೇಳುವಾಗ ಅಲ್ಲಿಯೆ ಇದ್ದ ಚೆನ್ನಿಗರಾಯರು ಸಿಟ್ಟು ಬಂದು ಅಲ್ಲಿಂದ ಹೊರಟುಹೋದರು. ಮೋಡ ಅಬ್ಬರ ಮಾಡಿದುದೆಷ್ಟೋ ಅಷ್ಟೇ. ಸಂಜೆ ಮಳೆ ಬರಲಿಲ್ಲ. ರಾತ್ರಿಯ ವೇಳೆಗೆ ಆಕಾಶದಲ್ಲಿ ಏನೂ ಇರಲಿಲ್ಲ. ಬೆಳಗಿನಿಂದ ಹೆಂಚು ಎತ್ತಿ ಎತ್ತಿ ನಂಜಮ್ಮನಿಗೆ ಸಾಕಾಗಿ ಹೋಗಿತ್ತು. ಆದರೂ ಹೊಟ್ಟೆಗೆ ಏನಾದರೂ ಮಾಡಬೇಕು. ರಾತ್ರಿ ಒಲೆ ಹಚ್ಚಿ ಒಂದಿಷ್ಟು ಅನ್ನ ಬೇಯಿಸಿದಳು. ಮಜ್ಜಿಗೆಯಲ್ಲಿ ಗಂಡನಿಗೂ ಹಾಕಿ ತಾನೂ ತಿಂದು ಮಲಗಿದರೆ, ಸತ್ತ ಮಕ್ಕಳ ಯೋಚನೆ ಮನಸ್ಸನ್ನು ಮುತ್ತಿತ್ತು. ನಮ್ಮ ಸ್ವಂತ ಮನೆಯಲ್ಲಿ ಅವು ಒಂದು ದಿನವೂ ಇರಲಿಲ್ಲ–ಎಂಬ ಕೊರಗು ಬಾಧಿಸಿತು. ಹಾಗೆಯೇ ವಿಶ್ವನ ಯೋಚನೆ ಬಂತು. ಅವನು ನಾಗಲಾಪುರಕ್ಕೆ ಹೋಗಿ ಆರು ತಿಂಗಳ ಮೇಲೆ ಆಯಿತು. ಇನ್ನು ಹದಿನೈದು ದಿನದಲ್ಲಿ ಬೇಸಿಗೆ ರಜ ಬರುತ್ತೆ. ಊರಿಗೆ ಕರಕೊಂಡು ಬರಬೇಕು. ಈ ಊರ ಸ್ಕೂಲಿನ ಹತ್ತಿರ ಹೋಗದ ಹಾಗೆ ನೋಡಿಕೊಂಡರೆ ಸಾಕು. ನಾನೇ ಗಾಡಿ ಹೂಡಿಸ್ಕಂಡು ಹೋಗಬೇಕು. ಅಮ್ಮ ಅಮ್ಮ ಅಂತ ಎಷ್ಟು ಹಲುಬುತ್ತಿರುತ್ತೋ ಅದು! ಅವನ ಜೊತೇಲೇ ಅಕ್ಕಮ್ಮನನ್ನೂ ಕರಕೊಂಡು ಬರಬೇಕು. ಇನ್ನೊಂದು ವರ್ಷ ಅವನು ಅಲ್ಲಿರೂದು. ಆಮೇಲೆ ಕಂಬನಕೆರೆ. ರಾಮಣ್ಣ ಕಷ್ಟಪಟ್ಟ ಹಾಗೆ ಅವನು ದಿನಾ ಹೋಗ್ತಾ ಐದು ಮೈಲಿ ಬರ್ತಾ ಐದು ಮೈಲಿ ತಿರುಗೂದು ಬ್ಯಾಡ. ಒಂದು ಸಣ್ಣ ಮನೆ ಬಾಡಿಗೆಗೆ ಮಾಡಿಕೊಂಡು ನಾವೂ ಅಲ್ಲೇ ಇರಬೇಕು. ಅಲ್ಲಿಂದಲೇ ಇಲ್ಲಿಗೆ ಬಂದು ಶ್ಯಾನುಭೋಗಿಕೆ ಲೆಕ್ಕ ಬರೆದರೂ ಆಗುತ್ತೆ–ಹೀಗೆಯೇ ಯೋಚಿಸುತ್ತಿದ್ದ ಅವಳಿಗೆ ಎಷ್ಟೋ ಹೊತ್ತಿನ ಮೇಲೆ ನಿದ್ರೆ ಬಂತು.
ಬೆಳಿಗ್ಗೆ ಎಚ್ಚರವಾಗುವ ಹೊತ್ತಿಗೆ ಮೈ ಕೈ ಭಾರವಾಗಿ ಜ್ವರ ತುಂಬಕೊಂಡಿತ್ತು. ಎರಡು ಕಂಕುಳಲ್ಲೂ ನೋವು. ನೆನ್ನೆಯ ದಿನವೆಲ್ಲ ಬಿಸಿಲಿನಲ್ಲಿ ನಿಂತು ಅಷ್ಟೊಂದು ಹೆಂಚುಗಳನ್ನು ಎತ್ತಿಕೊಟ್ಟಿದ್ದಳು. ಬಿಸಿಲು ಅವಳಿಗೆ ಹೊಸತೇನಲ್ಲ. ಆದರೆ ನೆನ್ನೆ ಕಾದುದು ಮಳೆ ಬರುವಂತಹ ತೀಕ್ಷ್ಣವಾದ ಬಿಸಿಲು. ಮನುಷ್ಯರ ಶರೀರ ಒಂದೇಸಮ ಇರುಲ್ಲ. ಅಷ್ಟೊಂದು ಹೆಂಚುಗಳನ್ನು ಎತ್ತಿದ್ದಕ್ಕೆ ಎರಡು ಕಂಕುಳುಗಳಲ್ಲೂ ಅದಗಳಲೆ ಕಟ್ಟಿದ ಹಾಗೆ ಆಗಿದೆ–ಎಂದುಕೊಂಡು ಎದ್ದು ಮುಖ ತೊಳೆದು ಕರು ಬಿಟ್ಟು ಹಾಲು ಕರೆದಳು. ವಿಶ್ವನನ್ನು ಕಳಿಸಿದಮೇಲೆ ಹಾಲು ಮೊಸರು ಖರ್ಚೇ ಆಗುತ್ತಿಲ್ಲ. ಈಗ ಒಂದು ತಿಂಗಳಿನಿಂದ ಅಪ್ಪಣ್ಣಯ್ಯನೂ ಊರಿನಲ್ಲಿಲ್ಲ. ಹೀಗಾಗಿ ತುಂಬಾ ಮಜ್ಜಿಗೆ ಉಳಿದುಬಿಡುತ್ತಿದೆ. ಜ್ವರ ಬಂದಿದ್ದರೂ ಅವಳೇ ಆರು ರೊಟ್ಟಿ ಹಾಕಿದಳು. ತಾನು ಒಂದರ್ಧ ತಿಂದು, ಉಳಿದ ಐದೂವರೆಯನ್ನು ಗಂಡನಿಗೆ ಇಟ್ಟು ಹಾಸಿಗೆ ಹಾಕಿಕೊಂಡು ಮಲಗಿಬಿಟ್ಟಳು. ಅರ್ಧ ನಿದ್ದೆ ಅರ್ಧ ಎಚ್ಚರ. ಸಂಜೆಯ ತನಕ ಹೀಗೆಯೇ ಕಳೆಯಿತು. ಮನೆಗೆ ಯಾರೂ ಬರಲಿಲ್ಲ. ಗಂಡನಂತೂ ಸರಿಯೇ ಸರಿ. ಸಂಜೆ ತಾನೇ ಎದ್ದು ಶುಂಠಿ ಮೆಣಸಿನ ಕಷಾಯ ಮಾಡಿಕೊಂಡು ಕುಡಿದು ಮತ್ತೆ ಮಲಗಿದಳು. ಅರೆನಿದ್ದೆಯ ಸ್ಥಿತಿ. ಯಾವಾಗ ರಾತ್ರಿಯಾಯಿತೋ, ಗಂಡ ಯಾವಾಗ ಬಂದು ಮಲಗಿದರೋ ಗೊತ್ತಿಲ್ಲ.
ಅರ್ಧ ರಾತ್ರಿ ಹೊತ್ತಿನಲ್ಲಿ ಅವರ ಗೊರಕೆಯ ಸದ್ದಿಗೆ ಎಚ್ಚರವಾಯಿತು. ಜಲಬಾಧೆ ತೀರಿಸಲು ಹೋಗುವಂತಾಗಿ ಮೇಲೆ ಏಳುತ್ತಾಳೆ: ಎರಡು ತೊಡೆಯ ಸಂದುಗಳಲ್ಲೂ ನೋಯುತ್ತಿದೆ. ಮತ್ತೆ ಬಂದು ಮಲಗಿದಾಗ ಅವಳಿಗೆ ಅನುಮಾನ ಬಂತು. ಹೆಂಚು ಎತ್ತಿದ್ದಕ್ಕೆ ಕಂಕುಳುನೋವು ಬಂದಿರಬಹುದು. ಏಣಿ

ಹತ್ತಿ ಇಳಿದು ಮಾಡಿದ್ದಕ್ಕೆ ತೊಡೆಯ ಸಂದಿನಲ್ಲಿ ನೋವು ಆಗುವುದಿದ್ದರೆ ಇವತ್ತು ಬೆಳಿಗ್ಗೆಯೇ ಯಾಕೆ ಕಾಣಿಸಿಕೊಳ್ಳಲಿಲ್ಲ? ಇದೇನು ಪ್ಲೇಗೇ? ಹಾಗಾದರೆ ಊರಿನಲ್ಲಿ ಎಲ್ಲಿಯೂ ಇಲಿ ಗಿಲಿ ಬಿದ್ದ ಸುದ್ದಿಯೇ ಕೇಳಿಲ್ಲ. ಹೋದ ಸಲ ಪಾರ್ವತಿ ರಾಮಣ್ಣನಿಗೆ ಬಂದಾಗಲೂ ಸದ್ದಿಲ್ಲದೆ, ಯಾವ ಸೂಚನೆಯೂ ಕೊಡದೆ ಬಂತು. ಈಗಲೂ ಹಾಗೆಯೇ ಕಳ್ಳತನದಿಂದ ಬಂದಿದೆಯೆ? ಅವಳಿಗೆ ಹೆದರಿಕೆಯಾಯಿತು. ಹೇಗಾದರಾಗಲಿ, ಮಾದೇವಯ್ಯನವರನ್ನಾದರೂ ಕೇಳಬೇಕು.

'ನೋಡಿ, ಎಚ್ಚರವಾಯ್ತೆ?'–ಎಂದು ಗಂಡನನ್ನು ಕೂಗಿದಳು. ಅವರ ಗೊರಕೆ ಮುರಿಯಲಿಲ್ಲ. ಮತ್ತೆ ಒಂದು ಸಲ ಕೂಗಿ ಕೈ ನೀಡಿ ಅವರ ಭುಜ ಅಲುಗಿಸಿದಳು.

'ಸುಮ್ಮುನ್ ಬಿದ್ಗಳೇ, ರಾತ್ರಿ ಅಡಿಗೇನೂ ಮಾಡ್ಲಿಲ್ಲ. ಈಗ ನಿದ್ದೆ ಬ್ಯಾರೆ ಕೆಡುಸ್ತಾಳೆ'–ಅವರು ನಿದ್ದೆಗಣ್ಣಿನಲ್ಲೇ ಗದ್ದರಿಸಿಕೊಂಡರು.

ಅವಳಿಗೆ ಸಿಟ್ಟು ಬಂತು. 'ನೀವೇನು ಮನುಷ್ಯರೋ ದನವೋ?'–ಎಂದು ಕೇಳಿಬಿಡಬೇಕೆನ್ನಿಸಿತು. ಆದರೆ ಅದರಿಂದ ಅವರು ಇನ್ನೂ ಬಾಯಿಗೆ ಬಂದಂತೆ ಬಯ್ದು ತನ್ನ ಮನಸ್ಸಿಗೆ ಕರಕರೆಯಾಗುತ್ತದೆ ಎಂದು, ನಾಲಿಗೆಗೆ ಬಂದಿದ್ದ ಮಾತನ್ನು ಒಳಗೇ ನುಂಗಿಕೊಂಡು ಹೇಳಿದಳು: 'ನಂಗೆ ಪ್ಲೇಗು ಆಗಿದೆ ಅಂತ ಕಾಣುತ್ತೆ. ಹೋಗಿ ಮಾದೇವಯ್ನೋರುನ್ನ ಕರ್ಕಂಡ್ ಬನ್ನಿ.'

ಅವರು ಮಾತನಾಡಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಗೊರಕೆ ಹೊಡೆಯುತ್ತಿದ್ದರು. ಬೆಳಗಿನ ತನಕ ಕಾದರೂ ಆದೀತು. ಆದರೆ ಸಾಧ್ಯವಾದಷ್ಟು ಬೇಗ ಔಷಧ ತೆಗೆದುಕೊಳ್ಳಬೇಕು. ಅವಳೇ ಮೇಲೆ ಎದ್ದು ಕಂಬಳಿ ಹೊದೆದು ಬಾಗಿಲು ತೆಗೆದುಕೊಂಡು ಹೊರಗೆ ಹೊರಟಳು. ಮೈ ತೂರಾಡುವಂತೆ ಆಗುತ್ತಿತ್ತು. ನಡೆಯುವಾಗ ತೊಡೆಯ ಸಂದಿನಲ್ಲಿ ನೋವು ಕಾಣುತ್ತಿದ್ದರೂ ಕಂಕುಳಿನಷ್ಟು ಆಗುತ್ತಿರಲಿಲ್ಲ. ಹೇಗೋ ದೇವಸ್ಥಾನದ ಬಾಗಿಲಿಗೆ ಹೋಗಿ–'ಅಯ್ನೋರೇ ಎಂದಳು. ಬೇಸಿಗೆಯಾಗಿದ್ದುದರಿಂದ ಜಗುಲಿಯ ಮೇಲೆ ಮಲಗಿದ್ದ ಅವರು 'ಅ್ಞ' ಎಂದ ತಕ್ಷಣ, 'ನಂಗೆ ಪ್ಲೇಗ್ ಆಗಿದೆ ಅಂತ ಕಾಣುತ್ತೆ. ನಮ್ಮನೆಗೆ ಬನ್ನಿ' ಎಂದು ಹೇಳಿ ಹಿಂತಿರುಗಿ ಹೊರಟಳು. ತೂರಾಡಿಕೊಂಡು ಮತ್ತೆ ಮನೆಯ ಬಾಗಿಲಿಗೆ ಬರುವ ಹೊತ್ತಿಗೆ, ಹಿಂದಿನಿಂದ ಬಂದ ಅಯ್ಯನವರೇ ಬಾಗಿಲು ತೆಗೆದರು. ಒಳಗೆ ಹೋಗಿ ತಲೆಯ ದಿಂಬಿನ ಹತ್ತಿರ ಇಟ್ಟುಕೊಂಡಿದ್ದ ಬೆಂಕಿಯಪೊಟ್ಟಣ ತೆಗೆದು ಕಡ್ಡಿ ಗೀರಿ ಲ್ಯಾಂಪು ಹಚ್ಚಿಸಿ ಹಾಸಿಗೆಯ ಮೇಲೆ ಮಲಗಿಬಿಟ್ಟಳು. ಬೆಳಕಿನಲ್ಲಿ ಅಯ್ಯನವರು ನೋಡುತ್ತಾರೆ: ಅವಳ ಮುಖವೆಲ್ಲ ಕೆದರಿಹೋಗಿ ಕಣ್ಣು ಕೆಂಡದ ಉಂಡೆಯಂತೆ ಕಾಣುತ್ತಿವೆ. ಮೈಯಲ್ಲಿ ಜ್ವರವಿರುವುದು ಮುಖ ನೋಡಿದರೇ ತಿಳಿಯುತ್ತಿತ್ತು.

'ಜ್ವರ ಯಾವಾಗ ಬಂತವ್ವ?'

'ನೆನ್ನೆ ರಾತ್ರಿಯೇ ಬಂತು. ನೆನ್ನೆ ಎಲ್ಲ ಕಂಕುಳು ನೋಯುತ್ತಿತ್ತು. ಹೆಂಚು ಎತ್ತಿ ಎತ್ತಿ ಅಡಗಳಲೆ ಅಂತಿದ್ದೆ. ಈಗ ಎಚ್ಚರವಾದ ತಕ್ಷಣ ತೊಡೆ ಸಂದಿನಲ್ಲಿ ನೋಯ್ತಿದೆ.'

ಒಂದು ನಿಮಿಷ ಯೋಚಿಸಿದಮೇಲೆ ಅಯ್ಯನವರು ಕೇಳಿದರು: 'ಸಣ್ಣೇನಹಳ್ಳಿಗೆ ಹಂಚಿಗೆ ಹೇಳಾಕೆ ಅಂತ ಹ್ವಾಗಿದ್ಯಲಾ, ಊರ ವಳಗೆ ಹ್ವಾಗಿದ್ಯಾ, ಹ್ವರಗೇ ಇದ್ಯೋ?'

'ಲಕ್ಕಯ್ಯಶೆಟ್ಟಿ ಮನೆ ಊರ ಮಧ್ಯದಲ್ಲಲ್ವೆ ಇರೂದು? ಯಾಕೆ?'

'ಅವನ ಮನ್ಲಿ ಕುಂತ್ಕಂಡಿದ್ಯಾ?'

'ಹೂಂ, ನಾನು ಹೋದಾಗ ಅವ್ನು ಮನ್ಲಿರ್ಲಿಲ್ಲ. ಬರೂತಂಕ ಎರಡು ಗಂಟೆ ಕಾಯ್ಕಂಡು ಕೂತಿದ್ದೆ ಯಾಕೆ?'

'ಆ ಊರಲ್ಲಿ ಹತ್ತು ಹನ್ನೆಲ್ಡು ದಿನದಿಂದ ಇಲಿ ಬೀಳ್ತಾವಂತೆ. ಹಳ್ಳೀಮುಂಡೇವು ತಿಳಿಯಾಕುಲ್ಲ. ಊರು ಗೀರು ಬಿಡದೆ ಅಲ್ಲೇ ಅವೆ. ಇವತ್ತು ಬೆಳಿಗ್ಗೆ ನಾನು ಕೋರುಣ್ಯದ ಭಿಕ್ಷಕ್ಕೆ ಆ ಕಡೆ ಹ್ವಾಗಿದ್ದೆ. ಹಿಂಗೆ ಅಂತ ತಿಳೀತು. ನಾನು ಊರೊಳಿಕ್ಕೆ ಹ್ವಾಗ್‌ಲೇ ಇಲ್ಲ.'

'ಹಾಗಾದ್ರೆ ನಂಗೆ ಆಗಿರೂದು ಪ್ಲೇಗೇ ಅಂತೀರಾ?'

'ಹೇಳಾಕಾಗಾಕುಲ್ಲ. ಹ್ಯಂಗಾದ್ರೆ ಹಂಗಾಗ್ಲಿ. ಬ್ಯಾಗ ಔಸ್ತಿ ಮಾಡುಸ್ಬೇಕು.'

ಇಷ್ಟು ಮಾತಾಡುವ ಹೊತ್ತಿಗೆ ಅವಳಿಗೆ ಆಯಾಸವಾಗಿತ್ತು. ಸ್ವಲ್ಪ ಹೊತ್ತು ಹಾಗೆಯೇ ಕಣ್ಣು ಮುಚ್ಚಿಕೊಂಡಿದ್ದಮೇಲೆ–'ಮನ್ಲಿ ಐವತ್ತು ರೂಪಾಯಿ ಇದೆ. ಏನು ಔಸ್ತಿಯಾದ್ರೂ ತರ್ಸಿ. ನೀವೇ ದಿಕ್ಕು' ಎಂದು ಹೇಳಿ ಕಣ್ಣು ಮುಚ್ಚಿದಳು. ಈಗ ಅವಳಿಗೆ ಯಾವ ಔಷಧಿ ಮಾಡಿಸಬೇಕು–ಎಂದು ಅಯ್ಯನವರು ಯೋಚಿಸಿದರು. ಹೋದ ಸಲ ವಿಶ್ವನನ್ನು ಗಾಡಿಯ ಮೇಲೆ ಹೇರಿಕೊಂಡು ಕಂಬನಕೆರೆ ಆಸ್ಪತ್ರೆಗೆ ಹೋಗಿದ್ದ ನೆನಪಾಯಿತು. 'ಈ ಡಾಕ್ಟ್ರು ಏನೂ ಮಾಡಾಕಿಲ್ಲ. ಹೇಮಾದಿ ಪಾನಕವೇ ಸರಿ'–ಎಂದು ನಿರ್ಧರಿಸಿದರು. ದುಡ್ಡು ಇದ್ದ ಜಾಗವನ್ನು ನಂಜಮ್ಮ ಹೇಳಿದಳು. ಈಗ ಇನ್ನೂ ಅರ್ಧ ರಾತ್ರಿಯಾಗಿರಬಹುದು. ಅವರು ಹೊರಗೆ ಬಂದು ಆಕಾಶ ನೋಡಿದರು. ಮಂಚದ ಕಾಲು ಕಾಣಿಸುತ್ತಿತ್ತು. ಈಗ ಅರ್ಜೆಂಟ್ ತಿಪಟೂರಿಗೆ ನಡೆದು ಹೋಗಿ ಹೇಮಾದಿ ಪಾನಕ ತಗಂಡು ತಕ್ಷಣ ಸಿಕ್ಕುವ ಮೋಟಾರಿನಲ್ಲಿ ತಿಂತಿರುಗಿ ಬರಬಲ್ಲವರು ಯಾರು? ಚೆನ್ನಿಗರಾಯರಿಗೆ ರಾತ್ರಿಯ ಕತ್ತಲಲ್ಲಿ ನಡೆಯುವ ಧೈರ್ಯವಿಲ್ಲ. ಅವರ ಮೈಗಳ್ಳತನ ಎಲ್ಲರಿಗೂ

ಗೊತ್ತಿರುವುದೇ. ಕೈಗೆ ಸಿಕ್ಕಿದ ಔಷಧಿಯ ದುಡ್ಡಿನಲ್ಲಿ ಮಸಾಲೆ ದೋಸೆ ಮೈಸೂರುಪಾಕು ತಿನ್ನುತ್ತಾ ಅಲ್ಲಿಯೇ ಉಳಿದುಬಿಟ್ಟರೂ ಕಷ್ಟ. ಅಪ್ಪಣ್ಣಯ್ಯ ಊರಿನಲ್ಲಿಲ್ಲ. ತಾವೇ ಹೋಗಬಹುದು. ಆದರೆ ಒಂದೇ ಉಸಿರಿಗೆ ತಿಪಟೂರು ತನಕ ನಡೆಯುವ ಶಕ್ತಿ ತಮಗಿಲ್ಲ. ತಾವು ಅಲ್ಲಿಗೆ ಹೋದರೆ ಇಲ್ಲಿ ಈ ರೋಗಿಯ ಹತ್ತಿರ ಯಾರೂ ದಿಕ್ಕಿಲ್ಲ. ಕಷ್ಟಕಾಲದಲ್ಲಿ ನರಸಿ ಯಾರಿಗಾದರೂ ಆಗುತ್ತಾಳೆ. ತಿಪಟೂರಿನಿಂದ ತನ್ನ ಅಂಗಡಿಗೆ ಸಾಮಾನು ತಂದು ಸಹ ಅವಳಿಗೆ ಅಭ್ಯಾಸವಿದೆ. ಆದರೆ ಹೆಣ್ಣು ಹೆಂಗಸು ರಾತ್ರಿಯ ಹೊತ್ತು ನಡೆಯಲಾರಳು. ಹೇಗಾದರೂ ಸರಿ, ಅವಳನ್ನು ಕೇಳುವುದು. ಅವಳು ಇನ್ಯಾರನ್ನಾದರೂ ಕಳಿಸಬಹುದು–ಎಂದು ಯೋಚಿಸಿದ ಅವರು, ಊರ ಹೊರಗೆ ಹೋಗಿ ಅವಳ ಅಂಗಡಿ ಬಾಗಿಲು ತಟ್ಟಿದರು. ತಕ್ಷಣ ಎದ್ದು ದೀಪ ಹಚ್ಚಿ ಹೊರಗೆ ಬಂದ ಅವಳು ಇವರು ಹೇಳಿದುದನ್ನು ಕೇಳಿ, 'ಅಯ್ಯಾರೇ ನೀವೇನ್ ಹ್ಯದರ್ಕಾಬ್ಯಾಡಿ. ಲಿಂಗಾಪುರದ ಸಂಬಣ್ಣಾರು ಅವ್ರೆ. ನಾನು ಏಳಿದ್ರೆ ಖಂಡ್‌ತ ಅವ್ರು ಕೆಲ್ಸ ಮಾಡ್ಕಂಡ್ ಬತ್ತಾರೆ' ಎಂದಳು. ಅವಳೇ ಒಳಗೆ ಹೋಗಿ ಅವನನ್ನು ಎಬ್ಬಿಸಿದಳು. ಲಿಂಗಾಪುರದ ಸಂಬೇಗೌಡ ಅಯ್ಯನವರಿಗೇ ಗೊತ್ತಿರುವ ಮನುಷ್ಯನೇ. ನೊಣಬಗೌಡನಾದ ಅವನ ಮನೆಯಲ್ಲಿ ಅಯ್ಯನವರು ಬಿನ್ನ ಸಹ ತೀರಿಸಿದ್ದಾರೆ. ತಾನು ಇಲ್ಲಿರುವುದು ಅಯ್ಯನವರಿಗೆ ಗೊತ್ತಾಗಿ ಎದುರಿಗೆ ನಿಲ್ಲುವ ಪ್ರಸಂಗ ಬಂದುದಕ್ಕೆ ನಾಚಿ ಅವನು ತಲೆ ತಗ್ಗಿಸಿ ನಿಂತುಕೊಂಡ, ಒಂದು ಕಾಗದದ ಮೇಲೆ ಅಯ್ಯನವರು–'ತಿಪಟೂರು ಪೇಟೇಬೀದಿ ವೆಂಕಟಾಚಲಶೆಟ್ಟರ ಅಂಗಡಿ. ಹೇಮಾದಿ ಪಾನಕ. ಪಿಳೇಗಿನ ಔಸ್ತಿ' ಎಂದು ಬರೆದು ಇಪ್ಪತ್ತು ರೂಪಾಯಿ ಕೊಟ್ಟರು. 'ಈಗ್ಲೇ ವಾಟ ಹ್ವಡ್‌ಕಂಡ್‌ಹ್ವಾಗಿ ಮೋಟಾರ್ನಾಗೆ ಬಂದ್‌ಬಿಡಬೇಕು'–ಎಂದು ನರಸಿ ಹುಕುಂ ಮಾಡಿದಳು. ಕಾಲಿಗೆ ಎಕ್ಕಡ ಮೆಟ್ಟಿಕೊಂಡ ಅವನು ತಲೆಗೆ ಲಪ್ಪಟೆ ಸುತ್ತಿ ದಾಪುಹೆಜ್ಜೆ ಹಾಕುತ್ತಾ ಕತ್ತಲೆಯಲ್ಲಿ ಹೊರಟುಹೋದ. ನರಸಿ ಅಯ್ಯನವರನ್ನು ಕೇಳಿದಳು: 'ಅಯ್ಯಾರೇ, ಈ ಊರಾಗೆ ನಂಜವ್ವನಂತಾ ಒಳ್ಳೇ ಗರತಿಯಿಲ್ಲ. ಆ ಯಮ್ಮನಿಗೆ ಬಂದಂತಾ ಕಷ್ಟ ಯಾರಿಗೂ ಬರ್ನಿಲ್ಲ. ಈಗ ಮತ್ತೆ ಅವ್ರಿಗೆ ಪಿಳೇಗ್ ಆಗೈತೆ. ದರ್ಮವಾಗಿ ಯಾಕಿರಬೇಕು ನೀವೇ ಏಳಿ.'

ಅಯ್ಯನವರಿಗೆ ಉತ್ತರ ತಿಳಿಯಲಿಲ್ಲ. ಈ ಸಂದರ್ಭದಲ್ಲಿ ಅದರ ಬಗೆಗೆ ಯೋಚಿಸಲು ಬುದ್ಧಿ ಮಂಕಾಗಿತ್ತು. 'ಇನ್ನೊಂದ್ ದಿನ ಏಳ್ತೀನಿ. ಈಗ ಆ ಯಮ್ಮನ ನೋಡೂರು ಯಾರೂ ಇಲ್ಲ'–ಎಂದು ಅವರು ಹೊರಟರು.

'ನಾನೂ ಬರ್ಲಾ?'

'ಏನೂ ಬ್ಯಾಡ'–ಎಂದು ಮುಂದೆ ಹೊರಟರು.

'ವಸಿ ನಿಂತ್ಕಳಿ'–ಎಂದು ಕೂಗಿದ ನರಸಿ ಹತ್ತಿರ ಬಂದು ಹೇಳಿದಳು: 'ನಾನು ಬರಾಕಿಲ್ಲ. ನೋಡಿ, ನಂಜವ್ವ ರಾತ್ರಿ ಹೊತ್ತು ಎಂಗ್‌ಸ್ರಿಗೆ ಇಸ್ಕೂಲು ಮಾಡ್ತಿತ್ತಲಾ, ಅದ್ಕೆ ನಾನು ಶೇರ್ಕಂತೀನಿ ಅಂತ ಏಳಿಕಳ್ಸಿದ್ದೆ. ಬ್ಯಾಡ ಅಂತ ಅಂದ್‌ಬಿಡ್ತಂತೆ. ಈಗ ನಾನು ಬಂದ್ರೂ ಆ ಯಮ್ಮನಿಗೆ ವಲ್ಲೆ ಅನ್ನುಸ್‌ಭೈದು.'

'ನಿನ್ನ ಸೇರಿಸ್ಕಳ್ಳಿಲ್ಲ ಅಂತ ಕ್ವಾಪವೇನು?'

'ಇಲ್ಲ ಬುಡಿ. ಶೇರಿಸ್ಕಂಡಿದ್ರೆ ಬಾಕಿ ಎಂಗುಸ್ರು ಬತ್ತಿರ್ಲಿಲ್ಲ'–ಎಂದು ಅವಳೇ ಹೇಳಿದಳು.

ಔಷಧಿ ಬಂದ ತಕ್ಷಣ ಕಳಿಸಿಕೊಡಬೇಕೆಂದು ಹೇಳಿ ಅಯ್ಯನವರು ಮನೆಗೆ ಬರುವ ಹೊತ್ತಿಗೆ ನಂಜಮ್ಮ ನಿದ್ರೆ ಮಾಡುತ್ತಿದ್ದಳು. ಸೀಮೆ ಎಣ್ಣೆಯ ಲ್ಯಾಂಪು ಉರಿಯುತ್ತಿತ್ತು. ಈಗ ರೋಗಿಯನ್ನು ಎಬ್ಬಿಸುವುದು ಬೇಡವೆಂದು ಅವರು ಸುಮ್ಮನೆ ಅವಳ ಮುಖವನ್ನೇ ನೋಡುತ್ತಾ ಕಂಬವನ್ನೊರಗಿ ಕುಳಿತರು. ಚೆನ್ನಿಗರಾಯರನ್ನು ಎಬ್ಬಿಸಲೇ ಎಂಬ ಯೋಚನೆ ಬಂತು. ಅವರು ಎದ್ದಿದ್ದರೆ ಈ ಯಮ್ಮನೇ ಯಾಕೆ ಗುಡಿಗೆ ಬರ್ತಿತ್ತು?– ಎಂದು ಯೋಚಿಸಿ ಸುಮ್ಮನಾದರು. ಅವಳ ಮುಖವನ್ನು ನೋಡುತ್ತಾ ನೋಡುತ್ತಾ, ಮದುವೆಯಾಗಿ ಊರಿಗೆ ಬಂದಾಗಿನಿಂದ ಇಲ್ಲಿಯ ತನಕ ಅವಳ ಜೀವನ ನಡೆದ ರೀತಿ ಎಲ್ಲವೂ ಅವರ ನೆನಪಿಗೆ ಬರುತ್ತಿತ್ತು. ಸೊಸೆಯಾಗಿ ಈ ಊರಿಗೆ ಬಂದ ಹೊಸತರಲ್ಲಿ ಅವಳು ಹೊರಗಿನ ಯಾರ ಕೈಲೂ ಮಾತನಾಡಿದವಳಲ್ಲ. ಅತ್ತೆಮನೆಯ ಸೊಸೆಯಂತೆಯೇ ಇದ್ದಳು. ಸೊಸೆಯನ್ನು ಬಾಳಿಸದ ಅತ್ತೆ. ಯಾರ ಬಗೆಗೂ ಪ್ರೀತಿ ವಿಶ್ವಾಸಗಳಿಲ್ಲದ ಗಂಡ. ಜಮೀನು ಹೋದದ್ದು. ಅದನ್ನು ಉಳಿಸಿಕೊಳ್ಳಲು ಈ ಸೊಸೆ ಮಾಡಿದ ವಿವೇಕಪೂರ್ಣ ಪ್ರಯತ್ನ. ಏಕಾಕಿಯಾಗಿ ಮಕ್ಕಳೊಡನೆ ಬೇರೆ ಬಂದು ಸಂಸಾರವನ್ನು ಕಟ್ಟಿ ನಿಲ್ಲಿಸಿದುದು. ಮಗನ ವಿದ್ಯಾಭ್ಯಾಸ. ಮಗಳ ಮದುವೆ. ಮಕ್ಕಳಿಬ್ಬರ ಸಾವು. ಈಗ ಸಾವು ಈ ಯಮ್ಮನನ್ನೂ ನುಂಗಲು ಬಂದಂತಿದೆ. ನರಸಿ ತಮ್ಮನ್ನು ಕೇಳಿದ ಪ್ರಶ್ನೆ ಅವರಿಗೆ ನೆನಪಾಯಿತು. ನಂಜವ್ವನಂತಾ ವಳ್ಳೇ ಗರತಿ ಇಲ್ಲ. ಈ ಯಮ್ಮನಿಗೆ ಬಂದಂತಾ ಕಷ್ಟ ಯಾರಿಗೂ ಬರಲಿಲ್ಲ. ಈಗ ಮತ್ತೆ ಇವರಿಗೇ ಪಿಳೇಹು ಆಗೈತೆ. ದರ್ಮವಾಗಿ ಯಾಕಿರಬೇಕು? ಶಿವ ಸಜ್ಜನರ ಕಾಯ್ತಾನೆ; ದುರ್ಜನರ ದಂಡಿಸ್ತಾನೆ. ಆದರೆ ನಂಜವ್ವ ಏನು ಕೆಟ್ಟದ್ದು ಮಾಡಿದ್ದಳು? ಅತ್ತೆಯ ಅವಿವೇಕ, ಗಂಡನ ಹೀನತನಕ್ಕೆ ಇವಳು ಕಷ್ಟಪಟ್ಟಳು. ಆದರೆ ಪ್ಲೇಗುಮಾರಿ ಇವಳ ಮನೆಗೇ, ಇವಳ ಮಕ್ಕಳಿಗೇ, ಕೊನೆಗೆ ಇವಳಿಗೇ ಹೊಡೆಯಬೇಕೆ? ಪ್ರಪಂಚದಲ್ಲಿ ಧರ್ಮ ಕರ್ಮಕ್ಕೆ ಶಿಕ್ಷೆ ಕೊಡುವುದಕ್ಕೆ ದೇವರು ರೋಗ ರುಜಿನಗಳನ್ನು ಮಾಡಿದ್ದಾನೆಂದು ಅವರು ತತ್ವ ಮತ್ತು ಲಾವಣಿಯ ಪದಗಳಲ್ಲಿ ಓದಿದ್ದರು. ಆದರೆ ಇದುವರೆಗೂ ಅರ್ಥಮಾಡಿಕೊಂಡಿದ್ದುದೇ ಈಗ ಅವರಿಗೆ ಅರ್ಥವಾಗದಂತೆ

ಆಗುತ್ತಿತ್ತು.
ಅದೇ ಸಮಯಕ್ಕೆ ಸರಿಯಾಗಿ ನಂಜಮ್ಮ ಬೆಚ್ಚಿಬಿದ್ದು, 'ಅಯ್ಯಯ್ಯೋ' ಎನ್ನುತ್ತಾ ಎಚ್ಚರವಾದಳು.
'ಯಾಕವ್ವ?'–ಅವರು ಕೇಳಿದರು. ಐದು ನಿಮಿಷ ಏನೂ ತಿಳಿಯದಂತೆ ಕಣ್ಣು ಬಿಟ್ಟು ನೋಡಿ ಅವಳು ಕೇಳಿದಳು: 'ನೀವಾ?'
'ಹೂಂ, ಏನಾಯ್ತು?'
'ಕನಸು. ಹಿಂದೆ ಒಂದು ಸಲ ಬಿದ್ದಿತ್ತು. ಇಬ್ಬರು ಕರೀ ಪೋಲೀಸಿನೋರು ಓಡಿಸ್ಕಂಡು ಬಂದಿದ್ರು. ನಾನು ಹಳ್ಳ ದಾಟಿಬಿಟ್ಟೆ. ನಮ್ಮ ಕೈಯಿಂದ ತಪ್ಪಿಸ್ಕಂಡು ಎಲ್ಲಿಗೆ ಹೋಗ್ತೀಯಾ ಬಿಡು ಅಂದಿದ್ರು. ಈಗ ಮತ್ತೆ ಅದೇ ಕನಸು. ನಾನು ಹಳ್ಳ ದಾಟೂ ಮೊದಲೇ ಇಬ್ಬರೂ ಬಂದು ನನ್ನ ಹಿಡ್ಕಂಡು ಕರೀ ಹಗ್ಗದಲ್ಲಿ ಕಟ್ತಾ ಇದ್ರು. ಅಷ್ಟರಲ್ಲಿ ಎಚ್ಚರವಾಯ್ತು.'
'ಜ್ವರದ ತಾಪಕ್ಕೆ ಹ್ಯಂಗೆ ಹ್ಯಂಗೋ ಕನಸು ಬೀಳ್ತೈತಿ. ಸುಮ್ನೆ ಮನಿಕ್ಕಳವ್ವಾ.'
'ಜ್ವರಕ್ಕಲ್ಲ ಅಯ್ನೋರೇ, ನಾನು ಈಗ ಸಾಯೂದು ಖಂಡಿತ. ನಂಗೆ ಒಂದು ಬಟ್ಲು ಗಂಜಿ ಮಾಡಿಕೊಡ್ತೀರಾ? ಬ್ರಾಹ್ಮಣರ ಕೋಣೆ ಅಂತ ಏನೂ ಸಂಕೋಚಮಾಡ್ಕಾಬ್ಯಾಡಿ. ನಮ್ಮಯ್ಯ ಬಂದಾಗ ಉಪ್ಪಿಟ್ಟಿಗೆ ಅಂತ ಅಕ್ಕಿತರಿ ಒಡೆದಿದ್ದೆ. ಬಡೂನಮ್ಯಾಲೆ ಕರೀ ಡಬ್ಬದಲ್ಲಿದೆ. ಕಡುಬಿನ ಕೊಳದಪ್ಲೇಲಿ ಬೆಲ್ಲ ಇದೆ. ಬೆಲ್ಲ ಸಿಕ್ದೇ ಇದ್ರೆ ಸಪ್ಪೆಗಂಜಿಯಾದ್ರೂ ಸರಿ, ಮಾಡಿ ತನ್ನಿ.'
ಅವರು ಎದ್ದು ಲ್ಯಾಂಪು ಹಿಡಿದು ಒಳಗೆ ಹೋದರು. ನೆನ್ನೆ ರಾತ್ರಿ ಚೆನ್ನಿಗರಾಯರು ತಿಂದು ಕೆಳಗೆ ಉದುರಿದ್ದ ರೊಟ್ಟಿಯ ಚೂರುಗಳ ಮೇಲೆ, ಕತ್ತಲೆಯಲ್ಲೂ ನೊಣ ಹಾರುತ್ತಿದ್ದುವು. ಅಕ್ಕಿಯ ತರಿ, ಬೆಲ್ಲ ಅವರಿಗೆ ತಕ್ಷಣ ಅವರಿಗೆ ಸಿಕ್ಕಿತು. ಸೋಗೆಗರಿ ಹಚ್ಚಿ ಒಂದು ಚರುಕಿನಲ್ಲಿ ಗಂಜಿಮಾಡಿ ಒಂದು ಲೋಟದೊಡನೆ ತಂದುಕೊಟ್ಟರು. ಅವರೇ ಭುಜ ಹಿಡಿದು ಎಬ್ಬಿಸಿ ಕೂರಿಸಿದಮೇಲೆ ಅಷ್ಟನ್ನೂ ಕುಡಿದು ಅವಳು ಮತ್ತೆ ಮಲಗಿಕೊಂಡಳು.
ಐದು ನಿಮಿಷವಾದಮೇಲೆ ಮಾತನಾಡಿದಳು: 'ಈಗ ಗಂಜಿ ಕುಡಿದು ಶಕ್ತಿ ಬಂದಿದೆ. ಆಮ್ಯಾಲೆ ಜ್ಞಾನ ತಪ್ಭೌದು. ಈಗಲೇ ನಿಮ್ಮ ಕೈಲಿ ಮಾತಾಡಿಬಿಡ್ತೀನಿ.'
'ಜ್ವರದ ಪಿರುಚಿನಾಗೆ ಜಾಸ್ತಿ ಮಾತಾಡಬಾರ್ದವ್ವ ಸುಮ್ಕೆ ಮನಿಕ್ಕ.'
''ಈಗ್ಲೆ ಆಡ್ತೀನಿ ಕೇಳಿ. ನಾನು ಹುಟ್ಟಿದಾಗಲೇ ನನ್ನ ಅಮ್ಮ ಸತ್ಹೋದಳಂತೆ. ನಾನು ಒಂದು ವರ್ಷದ ಮಗುವಂತೆ. ಒಂದು ದಿನ ತೊಟ್ಟಿಲಲ್ಲಿ ಮಲಿಕ್ಕಂಡು ಒಂದೇಸಮನೆ ಕಿರುಚ್ಕಂಡು ಅಳ್ತಾ ಇದ್ನಂತೆ. ಹೊರಗೆ ಮರ್ರೋ ಅಂತ ಮಳೆ ಬೀಳ್ತಿತ್ತು. ದನದ ಕೊಟ್ಟಿಗೇಲಿದ್ದ ಅಕ್ಕಮ್ಮನಿಗೆ ನಾನು ಅಳ್ತಿರೂದು ಕೇಳುಸ್ಲಿಲ್ಲ. ನಮ್ಮಪ್ಪ ಯಾವುದೋ ಸಂಸ್ಕೃತದ ಮಂತ್ರ ಬಾಯಿಪಾಠ ಮಾಡ್ಕತ್ತಿದ್ರಂತೆ. ನಾನು ಅತ್ತುದ್ರಿಂದ ಅವರ ಬಾಯಿಪಾಠಕ್ಕೆ ಅಡ್ಡವಾಯ್ತು. ಇದೊಂದು ಋಣಮುಂಡೇದು ಬಡ್ಕಳುತ್ತೆ ಅಂತ ಸಿಟ್ಟಿನಲ್ಲಿ ತೊಟ್ಲನ್ನೇ ತಗಂಡು ಹೋಗಿ, ದಢ ದಢ ಅಂತ ಮಳೆನೀರು ಸುರಿಯೋ ಸೂರುಕಟ್ಟಿನ ಕೆಳಗೆ ಇಟ್ಟು ಒಳಗೆ ಹೋಗಿ ಮಂತ್ರ ಹೇಳ್ಕಳುಕ್ಕೆ ಶುರು ಮಾಡಿದ್ರಂತೆ. ಸ್ವಲ್ಪ ಹೊತ್ತಾದಮೇಲೆ ಅಕ್ಕಮ್ಮ ಒಳಗೆ ಬಂದು ನೋಡ್ತಾಳೆ: ತೊಟ್ಲೇ ಇಲ್ಲ. 'ಎಲ್ಲೋ ಮಗು?'–ಅಂತ ಕೇಳಿದ್ದುಕ್ಕೆ, 'ಸೂರುಕಟ್ಟಿನ ಕೆಳಗೆ' ಅಂದ್ರಂತೆ. ನನ್ನ ಮುಖ, ಬೀಳೂ ನೀರಿನ ಕೆಳಗೆ ಇರದೆ ಕಾಲು ಮಾತ್ರ ಇತ್ತಂತೆ. ಮುಖ ಬೀದೀ ಕಡೆಗೆ ಇತ್ತಂತೆ. ಇಲ್ದೆ ಇದ್ರೆ ನಾನು ಆಗ್ಲೇ ಸಾಯ್ತಿದ್ದೆ. ಅಕ್ಕಮ್ಮ ಕರ್ಕಂಡು ಬಂದು ಬ್ರಾಂದಿ ಗೀಂದಿ ಕುಡಿಸಿ ಶೀತ ಹೊಡೆಸಿಹಾಕಿ ನನ್ನ ಬದುಕಿಸ್ಕಂಡ್ಳಂತೆ.''
ಕಂಠೀಜೋಯಿಸರು ಹಾಗೆ ಮಾಡಿರುವುದು ಅಸಹಜವೇನಲ್ಲ ಎಂದು, ಅವರನ್ನು ಬಲ್ಲ ಅಯ್ಯನವರು ಯೋಚಿಸುತ್ತಿದ್ದರು. ನಂಜಮ್ಮ ಎಂದಳು: 'ನಾನು ಆಗಲೇ ಸಾಯಬೇಕಾಗಿತ್ತು. ಆದರೆ ಯಾಕೆ ಸಾಯಲಿಲ್ಲ? ಇಷ್ಟು ವರ್ಷ ಬೆಳೆದು ಇಂಥಾ ಗಂಡನ ಕೈಹಿಡಿದು, ಇಷ್ಟು ಒಳ್ಳೇ ಮಕ್ಳನ್ನು ಹೆತ್ತು, ಅವನ್ನ ಕಳ್ಕಂಡು, ಈಗ ಸಾಯಬೇಕೆ? ಇದ್ಯಾಕೆ ಹೀಗೆಲ್ಲ ಆಗುತ್ತೆ ಅಯ್ನೋರೇ?'
ಅಯ್ಯನವರು ಇದೇ ಪ್ರಶ್ನೆಯನ್ನು ಕಳೆದ ಒಂದು ಗಂಟೆಯಿಂದಲೂ ಯೋಚಿಸುತ್ತಿದ್ದರು. ನರಸಿ ಕೇಳಿದ್ದುದೂ, ಈಗ ನಂಜವ್ವ ಕೇಳುತ್ತಿರುವುದೂ ಒಂದೇ ಪ್ರಶ್ನೆ. ಯಾಕೆ ಹೀಗಾಗುತ್ತೆ? ಶಿವನ ಇಚ್ಛೆ ಏನಿರ್ಭೌದು? ಅವರು ವೇದಾಂತ ಓದಿದ ಅಯ್ಯನವರಲ್ಲ. ತತ್ವ, ಲಾವಣಿ, ಪದಗಳಷ್ಟೇ ಅವರು ಅರ್ಜಿಸಿದ ಜ್ಞಾನ. ಕಾಶಿಗೆ ಹೋಗಿದ್ದಾಗ ಇಂಥದೇ ಪ್ರಶ್ನೆಗಳ ಮೇಲೆ ಮಠದಲ್ಲಿ ಹೊರಗಡೆ, ತರ್ಕಮಾಡುವುದನ್ನು ಕುತೂಹಲದಿಂದ ಕೇಳುತ್ತಿದ್ದರು. ಆದರೆ ಈಗ ನಂಜವ್ವ, ಒಂದು ಗಂಟೆಯ ಹಿಂದೆ ನರಸಿ, ಕೇಳಿದ ಪ್ರಶ್ನೆಗೆ ಮಾತ್ರ ಉತ್ತರ ಅವರಲ್ಲಿರಲಿಲ್ಲ. ನಂಜವ್ವ ತಮಗಿಂತ ಹೆಚ್ಚು ಬುದ್ಧಿಶಾಲಿ, ಅಕ್ಷರಸ್ಥೆ. ತಮಗೆ ಸರಿಯಾಗಿ ಅರ್ಥವಾಗದಿದ್ದ ಭಾರತದ ಪದ್ಯಗಳನ್ನು ಸರಾಗವಾಗಿ ಹೇಳಿ ಅರ್ಥ ಬಿಡಿಸುತ್ತಿದ್ದಳು. ಆದರೆ ಅವಳು ಈಗ ಕೇಳುತ್ತಿರುವುದಕ್ಕೆ ಉತ್ತರವೇನು? ಅವಳು ಮಗುವಾಗಿದ್ದಾಗಲೇ ಸಾಯಬಾರದಾಗಿತ್ತು? ತಮಗಿಂತ ಹೆಚ್ಚು ಬುದ್ಧಿವಂತೆಯಾದ ಅವಳಿಗೇ ತಿಳಿಯದೆ ತಮ್ಮನ್ನು ಕೇಳಿದ್ದಾಳೆ.

ಅಷ್ಟರಲ್ಲಿ ಅವಳಿಗೆ ಮಂಪರು ಬಂದಿತ್ತು. ಅಯ್ಯನವರು ಅವಳ ಮುಖವನ್ನೇ ನೋಡುತ್ತಾ ಕುಳಿತಿದ್ದರು. ಜ್ವರಕ್ಕೆ ಕಾದು ಕೆದರಿದ್ದ ಮುಖದಮೇಲೆ ಏನೇನೋ ಗೆರೆಗಳು ಹುಟ್ಟಿ ತಿರುಗಿ ಮಾಯವಾಗುವಂತೆ ಕಾಣುತ್ತಿದ್ದುವು. ಸ್ವಲ್ಪ ಹೊತ್ತಿಗೆ ಕಣ್ಣು ಬಿಟ್ಟು ಅವಳು ಮಾತನಾಡಲು ಪ್ರಯತ್ನಪಟ್ಟಳು. ಆದರೆ ಆಯಾಸದಿಂದ ಸರಿಯಾಗಿ ಮಾತು ಹೊರಡುತ್ತಿರಲಿಲ್ಲ. ಪ್ರಯತ್ನಪಟ್ಟು ತನ್ನ ಶಕ್ತಿಯನ್ನೆಲ್ಲ ಕೂಡಿಸಿಕೊಂಡು ಆಡಿದಳು: 'ಪಾರ್ವತಿ ರಾಮಣ್ಣ ಸತ್ತಾಗ ಗೀಪಿಯ ಕಥೆ ನೀವು ಹೇಳಿದಿರಿ. ಮಗು ಸತ್ತಾಗ ಜೀವ ಕೊಡುಕ್ಕೆ ಹೆದರಿ ಗೋಪಿ ದಡದಲ್ಲೇ ನಿಂತಳು. ಅದೇ ದಿನ ರಾತ್ರಿ ನಾನು ಸ್ಮಶಾನದ ಬಾವಿ ಬೀಳೂಕೆ ಹೋಗಿದ್ದೆ. ಧೈರ್ಯವಾಗಿ ನೀರಿಗೆ ಧುಮುಕ್ತಿದ್ದೆ. ವಿಶ್ವನ ಗತಿ ಏನು ಅಂತ ಯೋಚನೆಮಾಡಿ ವಾಪಸು ಬಂದೆ. ಈಗ ನಾನೇ ಸಾಯ್ತೀನಿ. ವಿಶ್ವನಿಗೆ ಯಾರು ಗತಿ? ಅಕ್ಕಮ್ಮ ಒಂದಿಷ್ಟು ಬೇಯ್ಸಿ ಹಾಕ್ತಾಳೆ. ನಮ್ಮಣ್ಣಯ್ಯನಮೇಲೆ ನನಗೆ ನಂಬಿಕೆ ಇಲ್ಲ. ಹುಡುಗನ ಹಿಟ್ಟು ಮುಖ್ಯವಲ್ಲ. ಅವ್ನು ಬುದ್ಧಿವಂತನಾಗಬ್ಯಾಡ್ವೆ?' ಇಷ್ಟು ಮಾತನಾಡುವ ಹೊತ್ತಿಗೆ ಸಂಕಟವಾಗಿ ಹಾಗೆಯೇ ಕಣ್ಣು ಮುಚ್ಚಿ ಮಲಗಿದಳು. ಮತ್ತೆ ಅಡಲಿಲ್ಲ. ಮಂಪರು ಹೊತ್ತಿದ ಸ್ವಲ್ಪ ಹೊತ್ತಿನಲ್ಲೇ ನಿದ್ದೆ ಬಂದಂತೆ ಆಯಿತು. ಅಯ್ಯನವರು ಸುಮ್ಮನೆ ಕುಳಿತಿದ್ದರು. ಬೆಸ್ತರ ಕೇರಿಯಲ್ಲಿ ಕೋಳಿ ಕೂಗಿದ ಶಬ್ದವಾಯಿತು. ಅದು ಅವರು ದಿನವೂ ಏಳುವ ಹೊತ್ತು. ಕೆರೆ ಏರಿಯ ಕಡೆಗೆ ಹೋಗಿ ಬರಬೇಕೆನಿಸಿತು. ಚೆನ್ನಿಗರಾಯರನ್ನು ಎಬ್ಬಿಸಿ ಹೇಳಿ ಹೋಗಬೇಕೆಂಬ ಯೋಚನೆ ಬಂದರೂ, ಅವರು ಎದ್ದು ರೋಗಿಗೆ ಆಗುವ ಪ್ರಯೋಜನವಾದರೂ ಏನು ಎಂಬ ವಿಚಾರ ಬಂದು, ಉರಿಯುವ ಲ್ಯಾಂಪನ್ನು ಹಾಗೆಯೇ ಬಿಟ್ಟು ಬಾಗಿಲು ಮುಂದಕ್ಕೆ ಮಾಡಿಕೊಂಡು ಹೊರಗೆ ಹೋದರು. ಏರಿಯ ಕಡೆಯಿಂದ ವಾಪಸು ಬರುವ ಹೊತ್ತಿಗೆ ಕಾಗೆ ಕೂಗುತ್ತಿತ್ತು. ಅಷ್ಟರಲ್ಲಿ ಎದ್ದು ಏರಿಯ ಕಡೆಗೆ ಬರುತ್ತಿದ್ದ ಜನರು ಮಾತನಾಡಿಕೊಳ್ಳುತ್ತಿದ್ದರು: ಸುತ್ತಣ ಊರುಗಳಲ್ಲಿ ಇಲಿ ಬೀಳುತ್ತಿವೆ. ಈ ಊರಿನಲ್ಲಿ ಬೀಳುವ ಮೊದಲೆ ನೆನ್ನೆ ರಾತ್ರಿ ಊರ ಮುಖ್ಯರು ಸೇರಿ, ಎಲ್ಲರೂ ತಕ್ಷಣ ಊರು ಬಿಡಬೇಕೆಂದು ತೀರ್ಮಾನಮಾಡಿದ್ದಾರೆ. ಈ ದಿನ ಬೆಳಿಗ್ಗೆ ಬೇಲೂರು ಊರಲ್ಲೆಲ್ಲ ತಮ್ಮಟೆ ಬಡಿದು ಸಾರುತ್ತಾನೆ. ನೆನ್ನೆ ಸಂಜೆ ಕಂಬನಕೆರೆಯ ಸರ್ಕಾರೀ ಇಲಾಖೆಯವರು ಹೇಳಿಕಳಿಸಿದ್ದಾರಂತೆ. ಇವತ್ತು ಬೆಳಿಗ್ಗೆ ಈ ಊರಿಗೆ ಅವರು ಬರುತ್ತಾರೆ. ಅಮ್ಮನ ಗುಡಿಯ ಹತ್ತಿರ ಊರ ಹೆಂಗಸರು ಮಕ್ಕಳಾದಿಯಾಗಿ ಎಲ್ಲರೂ ಬಂದು ಇನಾಕ್ಯುಲೇಶನ್ ಸೂಜಿ ಚುಚ್ಚಿಸಿಕೊಳ್ಳಬೇಕಂತೆ. ರೋಗ ಹಬ್ಬುವ ಮೊದಲೇ ಹಳ್ಳಿಹಳ್ಳಿಯಲ್ಲೂ ಸೂಜಿ ಚುಚ್ಚಬೇಕು ಅಂತ ಸರ್ಕಾರದ ಹುಕುಂ ಆಗಿದೆಯಂತೆ.

– 5 –

ಎಲ್ಲರೂ ಎರಡೇ ದಿನದಲ್ಲಿ ಊರು ಬಿಟ್ಟರು. ನಂಜಮ್ಮನ ಮನೆ ಕಟ್ಟಿಸಿ ಉಳಿದಿದ್ದ ಗಳು, ದಬ್ಬೆಗಳನ್ನು ಅಯ್ಯನವರೇ ಸಾಗಿಸಿಸಿ ಒಂದು ಶೆಡ್ಡು ಹಾಕಿಸಿದರು. ಅವರ ಸ್ವಂತಕ್ಕಂತೂ ಏರಿಯ ಮೇಲಿನ ಗುಡಿ ಇದ್ದೇ ಇದೆ. ಎಲ್ಲರಿಗೂ ಆಶ್ಚರ್ಯವಾದ ಸಂಗತಿ ಎಂದರೆ ಗಂಗಮ್ಮ ಅದೇ ಶೆಡ್ಡಿಗೆ ಬಂದು ಸೊಸೆಯ ಸೇವೆಗೆ ನಿಂತದ್ದು. 'ಹಾಳು ಮನೆ ಕಟ್ಟುಸ್ದೆ ಇದ್ರೆ ಏನಾಗ್ತಿತ್ತು? ಆ ಸಣ್ಣೇನಹಳ್ಳಿಗೆ ಹೋಗಿ ಮಾರಿ ಬಡುಸ್ಕಂಡ್ ಬಂದ್ಲು. ಹಿರಿಯೋರ ಮಾತು ಕೇಳಿದ್ರೆ ಈ ಮುಂಡೇದುಕ್ಕೆ ಏನೂ ಆಗ್ತಿರ್ಲಿಲ್ಲ'–ಎಂದು ಸದಾ ಗೊಣಗಿಕೊಳ್ಳುತ್ತಿದ್ದರೂ, ಅಯ್ಯನವರು ಹೇಳಿದಂತೆ ಹೇಮಾದಿ ಪಾನಕ ಗಂಜಿಗಳನ್ನು ಅವಳಿಗೆ ಬೇಡವೆಂದರೂ ಕ್ರಮವಾಗಿ ಬಾಯಿ ಮೆಟ್ಟಿ ಕುಡಿಸುತ್ತಿದ್ದಳು.

ಚೆನ್ನಿಗರಾಯರು ಇನಾಕ್ಯುಲೇಶನ್ ಮಾಡಿಸಿಕೊಂಡು ಎಡ ರಟ್ಟೆ ನೋವು ಬಂದದ್ದರಿಂದ ಅಯ್ಯನವರ ಏರಿಯ ಮೇಲಿನ ಗುಡಿಯಲ್ಲೋ, ಅಥವಾ ಹೊರಗಿನ ಗುಡಿಯ ಜಗುಲಿಯ ಮೇಲೋ ಮಲಗಿರುತ್ತಿದ್ದರು. 'ಸನ್ಯಾಸಿ, ನಂಗ್ಯಾಕೆ ಈ ಸೂಜಿ, ನಾನು ಸತ್ರೆ ಅಳೋರ್ಯಾರು?'–ಎಂದರೂ 'ನೀವು ಸಾಯೂದು ಮುಖ್ಯವಲ್ಲ. ನಿಮ್ಮಿಂದ ಖಾಯ್ಲೆ ಉಳಿದೋರಿಗೆ ಹರಡುತ್ತೆ' ಎಂದು ವೈದ್ಯಖಾತೆಯವರು ಅಯ್ಯನವರಿಗೂ ಚುಚ್ಚಿದರು. ಒಂದು ದಿನ ತೋಳು ಸ್ವಲ್ಪ ನೋಯುತ್ತಿತ್ತು. ಆದರೆ ಊರಿನವರೆಲ್ಲ ಅದರಲ್ಲಿಯೇ ಶೆಡ್ಡು ಹಾಕಿ, ಸಾಮಾನು ಸಾಗಿಸುತ್ತಿದ್ದರು. ಗಂಗಮ್ಮ ಮಾತ್ರ ಬಿಲ್‌ಕುಲ್ ಸೂಜಿ ಚುಚ್ಚಿಸಿಕೊಳ್ಳಲಿಲ್ಲ. ನಂಜಮ್ಮ ಮಲಗಿದ್ದ ಹಾಸಿಗೆಯನ್ನೆ ನಾಲ್ಕು ಜನರು ನಾಲ್ಕು ಕಡೆಗಳಲ್ಲೂ ಹಿಡಿದು ತಂದು ಶೆಡ್ಡಿನಲ್ಲಿ ಮಲಗಿಸಿದರು. ಅಷ್ಟರಲ್ಲಿ ಅವಳಿಗೆ ತಪ್ಪಿದ ಪ್ರಜ್ಞೆ ಮತ್ತೆ ಒಂದು ದಿನ ಬರಲಿಲ್ಲ. ಆದರೆ ಬಲವಂತವಾಗಿ ಅತ್ತೆ ಗಂಗಮ್ಮ ಹುಯ್ಯುತ್ತಿದ್ದ ಔಷಧಿ ಮತ್ತು ತಿಳಿಗಂಜಿಯನ್ನು ಮಾತ್ರ ಗುಟುಕಿಸುತ್ತಿದ್ದಳು. ಶೆಡ್ಡಿಗೆ ಸಾಗಿಸಿದ ಎರಡನೆಯ ಬೆಳಿಗ್ಗೆ ಅವಳಿಗೆ ಸ್ವಲ್ಪ ಜ್ಞಾನ ಬಂದಂತಾಗಿ ಮಾತನಾಡಲು ಪ್ರಯತ್ನಿಸಿದಳು. ಹತ್ತಿರವೇ ಕೂತಿದ್ದ ಅಯ್ಯನವರು ಅವಳ ಮುಖದ ಹತ್ತಿರ ತಮ್ಮ ಕಿವಿಯನ್ನು ತಂದು –'ಏನು?' ಎಂದರು.

'ವಿ.....ಶ್ವಾ.....'

'ನೋಡಬೇಕೆ?'

ಹೂಂ, ಎಂಬಂತಹ ಅವಳ ಮುಖಭಾವವನ್ನು ಗುರುತಿಸಿದ ಅವರೇ–'ಆಳು ಕಳುಸ್ತೀನಿ ಕರ್ಕಂಡ್ ಬರಾಕೆ' ಎಂದು ಹೇಳಿ ಹೊರಗೆ ಹೋದರು. ಊರೆಲ್ಲ ತಮ್ಮ ತಮ್ಮ ಶೆಡ್ಡುಗಳನ್ನು ಸರಿಮಾಡಿಕೊಳ್ಳುವುದರಲ್ಲಿ

ವ್ಯಸ್ತವಾಗಿದೆ. ಈಗ ಆಳು ಎಲ್ಲಿ ಸಿಕ್ಕಬಹುದು?–ಎಂದು ಯೋಚಿಸುತ್ತಾ ಕುಳುವಾಡಿಯ ಶೆಡ್ಡಿಗೆ ಹೋಗಿ ಹೇಳಿದರು: 'ನಂಜವ್ವ ಇನ್ನೇನು ಸಾಯುತ್ತೆ. ಮಗಾ ನೋಡ್ಬೇಕು ಅನ್ನುತ್ತೆ. ಯಾರಾರ ನಾಗಲಾಪುರಕ್ಕೆ ಹ್ವಾಗಿ, ಉಡುಗನ್ನ ಕರ್ಕಂಡ್ ಬರಬೇಕಲಪ್ಪಾ?'

'ಅಯ್ಯಾವ್ರೇ, ನೀವೇ ನೋಡಿ, ನನ್ನ ಶೆಡ್ಡಿಗೆ ಒಂದೇ ಜೋಡಿ ಸ್ವಾಗೆ ಬುಟ್ಟುದೀನಿ. ಇವತ್ತು ಗೌಡ್ರ ತ್ವಾಟಕ್ಕೆ ಹ್ವಾಗಿ ಸ್ವಾಗೆ ತರಬೇಕು' ಎಂದ ಕುಳುವಾಡಿ.

'ಅದು ನಾಳೆ ಮಾಡ್ಕಂಡ್ರೆ ಆಯ್ತದೆ. ಸಾಯೂ ಅವ್ವನ ಬಾಯಿಗೆ ಮಗ ನೀರು ಬಿಡಬ್ಯಾಡ್ದಾ? ಹೋಗಪ್ಪ.'

'ಆಗ್ಲಿ'–ಎಂದು ಅವನು ಒಪ್ಪಿಕೊಂಡ. ತಕ್ಷಣ ಹೊರಡುವಂತೆ ಹೇಳಿ ಅವರು ಶೆಡ್ಡಿಗೆ ಬಂದರು. ಅಷ್ಟರಲ್ಲಿ ಗಂಗಮ್ಮ ಎಂದಳು: 'ಅದೇನೋ ಅಂದ್ಲು. ನಂಗೆ ತಿಳೀಲಿಲ್ಲ. ನೀವೇ ಕೇಳಿ ಅಯ್ನೋರೇ.'

ಮತ್ತೆ ಅವಳ ಮುಖದ ಹತ್ತಿರಕ್ಕೆ ತಮ್ಮ ಕಿವಿಯನ್ನು ತಂದು–'ಏನವ್ವಾ' ಎಂದು ಅವರು ಕೇಳಿದರು. ಐದು ನಿಮಿಷದ ಮೇಲೆ, ಅದು ಕೇಳಿಸಿದಂತೆ ಅವಳು ಏನೋ ಪಿಸುಗಿಟ್ಟಿದಳು. 'ಕೇಳಲಿಲ್ಲ, ವಸಿ ಗಟ್ಟಿಯಾಗಿ ಅನ್ನು'–ಎಂದಮೇಲೆ ಮತ್ತೆ ಪಿಸುಗುಟ್ಟಿದಳು. ಸ್ಪಷ್ಟವಾಗಿ ಕೇಳದಿದ್ದರೂ– ಊರಿನಲ್ಲಿ ಪ್ಲೇಗು ರೋಗ ಇದೆ. ಹುಡುಗನನ್ನ ಕರೆಸಬೇಡಿ' ಎಂಬ ಒಟ್ಟು ಅರ್ಥ ಆಯಿತು. 'ನೀನು ಹ್ವಾಗ್‌ಬ್ಯಾಡ ಅಂತ ಕುಳುವಾಡಿಗೆ ಏಳಿಬತ್ತೀನಿ'–ಎಂದು ಅವರು ಶೆಡ್ಡಿನ ಹೊರಗೆ ಬಂದರು. ರೋಗ ಬಡಿದ ಊರಿಗೆ ವಿಶ್ವ ಬರುವುದು ಬೇಡವೆಂದು ಅವರೂ ನಿರ್ಧರಿಸಿದರು. ನಂಜವ್ವ ಸಾಯುವುದು ಖಂಡಿತ. ಮಗು ಬಂದು ಬಾಯಿಗೆ ನೀರು ಬಿಡದಿದ್ದರೂ ಬೇಡ, ಅವನು ಆಯಸ್ಸು ಗಟ್ಟಿಯಾಗಿ ಉಳಿದಿದ್ದರೆ ಸಾಕು ಎನ್ನುವುದು ಅವಳ ಇಚ್ಛೆ. ಆದರೆ ಅವಳನ್ನು ಸಾಕಿದ ಅಜ್ಜಿ ಮತ್ತು ಅಣ್ಣನಿಗಾದರೂ ಸಮಾಚಾರ ತಿಳಿಸಬೇಕು ಎಂದು ಯೋಚಿಸಿದ ಅವರು ಕುಳುವಾಡಿಯ ಶೆಡ್ಡಿಗೆ ಓಡಿದರು. ಅವನು ಆಗತಾನೇ ಮುದ್ದೆ ಮುರಿದು ಮುಗಿಸಿ ಹೊರಡಲು ಸಿದ್ಧನಾಗುತ್ತಿದ್ದ. ಮಗುವನ್ನು ಖಂಡಿತ ಕರತರಕೂಡದೆಂದೂ, ಅಜ್ಜಿ ಅಣ್ಣಯ್ಯರನ್ನು ಕರೆದುಕೊಂಡು ಬರಬೇಕೆಂದು ಅಯ್ಯನವರು ಹೇಳಿದರು.

ಕುಳುವಾಡಿ ನಾಗಾಲೋಟ ಹೊಡೆದ. ಅವನು ಎಷ್ಟೇ ಉಸಿರು ಹಿಡಿದು ಓಡಿದರೂ ಚೋಳನಗುಡ್ಡ, ಮರಳಹಳ್ಳ, ಕೆಮ್ಮಣ್ಣುಹಳ್ಳ, ಕತ್ತಾಳೆ ಒಣಿಗಳನ್ನು ಹಾಯ್ದು ಅಷ್ಟು ದೂರದ ನಾಗಲಾಪುರವನ್ನು ಮುಟ್ಟುವ ಹೊತ್ತಿಗೆ ಮದ್ಯಾಹ್ನ ಎರಡು ಗಂಟೆಯಾಯಿತು. ಅಲ್ಲಿ ನೋಡಿದರೆ ಆ ಊರಿನವರೂ ಊರು ಬಿಟ್ಟಿದ್ದಾರೆ. ಕಲ್ಲೇಶಜೋಯಿಸರ ಶೆಡ್ಡನ್ನು ವಿಚಾರಿಸಿಕೊಂಡು ಇವನು ಹೋದಾಗ ವಿಶ್ವ ಸ್ಕೂಲಿಗೆ ಹೋಗಿದ್ದ. ಕಲ್ಲೇಶಜೋಯಿಸರು ಊರಿನಲ್ಲಿರಲಿಲ್ಲ; ಹಾಸನಕ್ಕೆ ಹೋಗಿದ್ದರು. ಮಾರನೆಯ ದಿನ ಬರುತ್ತಾರಂತೆ. ಇವನು ಹೇಳಿದ ವಿಷಯ ಕೇಳಿ ಅಕ್ಕಮ್ಮ ಹೌಹಾರಿದಳು. ಕಲ್ಲೇಶನಿಗೆ ಕಾಯುವಂತಿಲ್ಲ. ಅವನು ನಾಳೆ ಬಂದ ತಕ್ಷಣ ಕಳಿಸುವಂತೆ ಕಮಲುವಿಗೆ ಹೇಳಿ, ಅವಳನ್ನು ನಂಬದೆ ಪಕ್ಕದ ಎರಡು ಶೆಡ್ಡಿನವರಿಗೂ ಹೇಳಿ, ಅವರ ಜಮೀನು ಹೊಡೆಯುವ ಹೊನ್ನನ ಗಾಡಿ ಹೂಡಿಸಿಕೊಂಡು ಅಕ್ಕಮ್ಮ ತಕ್ಷಣ ಹೊರಟುಬಿಟ್ಟಳು.

ಹಾಳು ಪ್ಲೇಗು ಅವಳ ಇಬ್ಬರು ಮರಿಮಕ್ಕಳನ್ನು ಹೋದ ವರ್ಷ ತಾನೆ ಬಲಿ ತೆಗೆದುಕೊಂಡಿದೆ. ಈ ವರ್ಷ ಮೊಮ್ಮಗಳಿಗೇ ಬಂದಿದೆ. ವಿಶ್ವನಿಗೆ ಬಂದಿದ್ದಾಗ ಶೃಂಗೇರಿಯ ಶಾರದಮ್ಮನವರಿಗೆ ಹರಕೆ ಕಟ್ಟಿದ್ದುದರಿಂದ ವಾಸಿಯಾಯಿತಂತೆ. ಈಗ ಅವರು ಯಾರಾದರೂ ಅದೇ ದೇವರಿಗೆ ಹರಕೆ ಕಟ್ಟಿದ್ದಾರೆಯೋ ಇಲ್ಲವೋ. ದಾರಿಯಲ್ಲಿ ಒಂದು ಸಣ್ಣ ಕಟ್ಟೆ ಸಿಕ್ಕಿತು. ಎರಡು ನಿಮಿಷ ಗಾಡಿ ನಿಲ್ಲಿಸಿ ಕೆಳಗೆ ಇಳಿದು ಕಟ್ಟೆಯಲ್ಲಿ ಕೈ ಕಾಲು ತೊಳೆದು ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡು ತಂದಿದ್ದ ದುಡ್ಡಿನಲ್ಲಿ ಒಂದು ಬೆಳ್ಳಿ ರೂಪಾಯಿ ಕೈಲಿ ಹಿಡಿದು, ಮೊಮ್ಮಗಳಿಗೆ ಹುಶಾರಾದರೆ ಅವಳನ್ನು ಮತ್ತೆ ಶೃಂಗೇರಿಗೆ ಕಳಿಸಿ ಕುಂಕುಮಾರ್ಚನೆ ಮಾಡಿಸುವುದಾಗಿ ಹರಕೆ ಹೇಳಿ, ಬಂದು ಗಾಡಿಯ ಮೇಲೆ ಕೂತಳು.

ಈ ಸಲ ಎಲ್ಲೆಲ್ಲಿಯೂ ಊರು ಬಿಟ್ಟಿದ್ದಾರೆ. ಆದರೆ ಎಲ್ಲ ಊರಿನಲ್ಲೂ ಸರ್ಕಾರದವರು ಸೂಜಿ ಚುಚ್ಚಿದ್ದಾರೆ. ನಾಗಲಾಪುರದಲ್ಲಿ ವಿಶ್ವ, ಕಲ್ಲೇಶ, ಕಮಲು, ಎಲ್ಲರೂ ಚುಚ್ಚಿಸಿಕೊಂಡಿದ್ದಾರೆ. ಆದರೆ ಮುದುಕಿಯಾದ ತಾನು ಮಾತ್ರ ಬೇಡವೆಂದುಬಿಟ್ಟಳು. ಇಷ್ಟು ದಿನದಲ್ಲಿ ಒಂದು ದಿನವೂ ಆಸ್ಪತ್ರೆಯ ನೀರು ಕುಡಿಯದಿರುವ ತಾನು ಆ ಸೂಜಿಯ ನೀರನ್ನು ಮೈಯೊಳಗೆ ಚುಚ್ಚಿಸಿಕೊಳ್ಳುವುದು ಯಾಕೆ?

ಮೊಮ್ಮಗಳ ಸ್ಥಿತಿಯ ಬಗೆಗೆ ಅವಳು ಕುಳುವಾಡಿಯನ್ನು ಬಾರಿ ಬಾರಿಗೂ ಕೇಳುತ್ತಿದ್ದಳು. ಪ್ರತ್ಯಕ್ಷವಾಗಿ ಹೆಚ್ಚು ತಿಳಿಯದಿದ್ದ ಅವನು, ತಾನು ಕೇಳಿದುದನ್ನೆಲ್ಲ ಹೇಳುತ್ತಿದ್ದ. ಜೀವಕ್ಕೆ ಯಾವ ಅಪಾಯವೂ ಇಲ್ಲವೆಂದು ತನಗೆ ತಾನೆ ಮನಸ್ಸಿನಲ್ಲಿ ಮಾಡಿಕೊಳ್ಳುತ್ತಾ ಅಕ್ಕಮ್ಮ, ಎತ್ತುಗಳನ್ನು ಚಬುಕು ಮಾಡುವಂತೆ ಹೊನ್ನನಿಗೆ ಹೇಳುತ್ತಿದ್ದಳು. ಎಷ್ಟೇ ಜೋರು ಮಾಡಿದರೂ ಅವರ ಗಾಡಿ ರಾಮಸಂದ್ರ ಮುಟ್ಟುವ ಹೊತ್ತಿಗೆ ರಾತ್ರಿ ಕತ್ತಲಾಗಿಹೋಗಿತ್ತು.

– 6 –

ಶೆಡ್ಡಿಗೆ ಬಂದು ನೋಡಿದರೆ ಮೊಮ್ಮಗಳು ಇರಲಿಲ್ಲ. ಬೀಗಿತ್ತಿ ಗಂಗಮ್ಮ ಬಾಯಿ ಬಡಿದುಕೊಂಡು ಅಳುತ್ತಿದ್ದಳು. ಮಾದೇವಯ್ಯನವರು ಹೇಳಿದರು: ಮದ್ಯಾಹ್ನದ ಹೊತ್ತಿಗೇ ನಂಜಮ್ಮನ ಜೀವ ಹೋಯಿತು.

ಪ್ಲೇಗಾದ ಊರಿಗೆ ಮಗನನ್ನು ಕರೆಸಬೇಡಿ ಅಂದದ್ದೇ ಕೊನೆಯ ಮಾತು. ಮತ್ತೆ ಮಾತನಾಡಲಿಲ್ಲ. ಸಾಯುವ ಮೊದಲು ಯಾವ ಗೆಡ್ಡೆಯೂ ಒಡೆಯಲಿಲ್ಲ. ಐದೇ ನಿಮಿಷ ಉಸಿರು ಹತ್ತಿಬಂದು ಪ್ರಾಣವಾಯು ಹೊರಟುಹೋಯಿತು. ಹತ್ತಿರವೇ ಇದ್ದ ಅತ್ತೆ ಗಂಗಮ್ಮ ಬಾಯಿಗೆ ನೀರು ಬಿಟ್ಟಳು. ಇವರು ಬರುತ್ತಾರೆಂದು ಸಂಜೆಯತನಕ ಹೆಣ ಇಟ್ಟುಕೊಂಡು ಕಾಯುತ್ತಿದ್ದ ಅವರು, ಇನ್ನು ರಾತ್ರಿಯಾದರೆ ನಾಳೆಯ ತನಕ ಕಾಯಬೇಕು, ಪ್ಲೇಗಿನ ಹೆಣ ನಾರಲು ಶುರುವಾಗಬಹುದು ಎಂದು ದಹನಕ್ಕೆ ಕಳಿಸಿಕೊಟ್ಟು ಇನ್ನೂ ಅರ್ಧ ಗಂಟೆಯಾಯಿತು.

ಅಕ್ಕಮ್ಮ ಒಂದು ಸಲ ಎದೆ ಬಡಿದುಕೊಂದು ಅತ್ತಳು. 'ನನಗೆ ಮುಖಾನೂ ಸಿಕ್ಕಿಲ್ಲ. ಅಲ್ಲೇ ಹೋಗಿ ನೋಡ್ತೀನಿ'–ಎಂದು ಕತ್ತಲೆಯಲ್ಲೇ ಶ್ಮಶಾನದ ಕಡೆಗೆ ಹೊರಟಳು. ಹೆಂಗಸರು ಅಲ್ಲಿಗೆ ಹೋಗಬಾರದೆಂದು ಅಯ್ಯನವರು ಹೇಳಿದರೂ ಕೇಳಲಿಲ್ಲ. ಹಣ್ಣು ಮುದುಕಿ ಕತ್ತಲೆಯಲ್ಲಿ ಎಲ್ಲಾದರೂ ಬಿದ್ದಾಳೆಂದು ಅವಳ ಕೈ ಹಿಡಿದುಕೊಂಡು ಅವರೂ ಜೊತೆಗೆ ಹೊರಟರು. ಇವರು ಏರಿ ಇಳಿಯುವ ಜಾಗದಲ್ಲಿ ಅಯ್ಯಾಶಾಸ್ತ್ರಿಗಳು ಒಬ್ಬರೇ ಸೊಂಟ ಬಗ್ಗಿಸಿಕೊಂಡು ನಿಂತಿದ್ದರು. ಇವರಿಬ್ಬರನ್ನು ಕಂಡ ಅವರೇ–'ಯಾರು? ಎಂದರು.

'ನಂಜವ್ವನ ಅಜ್ಜಮ್ಮ'–ಎಂದು ಹೇಳಿದ ಅಯ್ಯನವರು ಅಕ್ಕಮ್ಮನ ಸಂಗಡ ತೋಟದ ಕಡೆಗೆ ಇಳಿದರು. ಏರಿ ಇಳಿದು ತೋಟದ ಸಂದಿಯಲ್ಲಿ ನಡೆದು ಇವರು ಹೋಗುವ ಹೊತ್ತಿಗೆ ಶಾಸ್ತ್ರದ ಭಾಗವೆಲ್ಲ ಮುಗಿದು ಹೆಣವನ್ನು ಚಿತೆಯ ಮೇಲೆ ಇಟ್ಟು, ಅದೀಗ ತಾನೇ ಅದರ ಬಟ್ಟೆ ಬರೆಗಳನ್ನೆಲ್ಲ ತೆಗೆದುಹಾಕಿದ್ದರು. ತನ್ನ ಮೊಮ್ಮಗಳು ಹುಟ್ಟಿದಾಗ ಇದ್ದ ಸ್ಥಿತಿಯಲ್ಲೇ ಈಗಲೂ ಅಕ್ಕಮ್ಮ ಅವಳನ್ನು ಕಂಡಳು. ಆಗ ಎಷ್ಟು ಬೆಳ್ಳಗಿದ್ದ ಮಗು, ಈಗ ಮೈ ಎಲ್ಲ ಕಪ್ಪು ಬಣ್ಣಕ್ಕೆ ತಿರುಗಿದೆ. ಅವಳು ಓಡಿ ಬಂದು, ಚಿತೆಯ ಮೇಲೆ ಇದ್ದ ಹೆಣವನ್ನೇ ತಬ್ಬಿಕೊಂಡಳು. ಅಕ್ಕಮ್ಮನನ್ನು ಸಮಾಧಾನಪಡಿಸಿ ಮೇಲೆ ಎತ್ತುವುದಕ್ಕೆ ಉಳಿದವರಿಗೆ ಸಾಕುಸಾಕಾಯಿತು. ಅವಳ ಎದುರಿಗೇ ಹೆಣದ ಮೇಲೆ ಸೌದೆ ಒಟ್ಟಿ ಬೆಂಕಿ ತೋರಿಸಿದರು. ಬೆಂಕಿ ನಿಧಾನವಾಗಿ ಹರಡಿ ಹೊತ್ತಿಕೊಂಡು ದಗ ದಗ ಉರಿಯುವತನಕ ಒಂದೇಸಮನೆ ಅದನ್ನು ನೋದುತ್ತಿದ್ದ ಅಕ್ಕಮ್ಮ ಇದ್ದಕ್ಕಿದ್ದಹಾಗೆಯೇ ಕೂಗಿಕೊಂಡಳು: 'ಕಳ್ಳಮುಂಡೇ, ಕೊನೆಗೂ ಹೀಗ್ ಮಾಡಿದೆಯಾ? ನಿಂಗೆ ಮಾಡ್ತೀನಿ ತಾಳು.'

ಅವಳು ಏನು ಹೇಳುತ್ತಿದ್ದಾಳೆಂದು ಯಾರಿಗೂ ಅರ್ಥವಾಗಲಿಲ್ಲ. ಅಕ್ಕಮ್ಮ ಅಲ್ಲಿಂದ ಹಿಂತಿರುಗಿ ಹೆಜ್ಜೆ ಹಾಕಿ ದುಡುದುಡುನೆ ಹೊರಟಳು. ಕತ್ತಲೆಯಲ್ಲಿ ಬಿದ್ದಾಳೆಂದು ಅಯ್ಯನವರು ಹಿಂದೆಯೇ ಬಂದು ಕೈ ಹಿಡಿದುಕೊಂಡರೆ, ಬೇಡವೆಂದು ಕೊಸರಿಕೊಂಡು ಮುಂದೆ ನಡೆದಳು. ಏರಿ ಹತ್ತುವ ಜಾಗದಲ್ಲಿ ನಿಂತಿದ್ದ ಅಯ್ಯಾಶಾಸ್ತ್ರಿಗಳು–'ಇದ್ಯಾಕಮ್ಮ ಹೀಗೆ ಓಡಿ ಹೋಗ್ತಿದೀರಾ?' ಎಂದುದು ಅವಳಿಗೆ ಕೇಳಲಿಲ್ಲ. ನೇರವಾಗಿ ಶೆಡ್ಡಿಗೆ ಬಂದಳು. ಒಳಗೆ ಹೋದ ತಕ್ಷಣ ಬಾಗಿಲ ಹತ್ತಿರ ಇದ್ದ ಈಚಲುಪೊರಕೆಯನ್ನು ಕೈಗೆ ತೆಗೆದುಕೊಂಡು ಗಾಡಿಯ ಹತ್ತಿರಬಂದು, ಹೊನ್ನ ಕೆಳಗೆ ಬಿಟ್ಟಿದ್ದ ಒಂದು ಎಕ್ಕಡವನ್ನು ಇನ್ನೊಂದು ಕೈಲಿ ಹಿಡಿದು ಊರ ಕಡೆಗೆ ನುಗ್ಗಿದಳು. ಸ್ವಲ್ಪ ಹೊತ್ತು ಗಂಗಮ್ಮನಿಗೂ ದಿಗ್ಭ್ರಮೆ. ಹೊನ್ನನಿಗೂ ಏನೂ ತಿಳಿಯಲಿಲ್ಲ. ಅಮಾವಾಸ್ಯೆಯ ಮುಂದಿನ ದಿನಗಳಾದ್ದರಿಂದ ಕತ್ತಲು ಹೆಪ್ಪುಗಟ್ಟಿದಂತೆ ನಿಂತಿತ್ತು. ಕತ್ತಲಲ್ಲೆ ಬೀದಿಯ ಗುರುತು ಹಿಡಿದುಕೊಂಡು ಅಕ್ಕಮ್ಮ ಊರ ಒಳಕ್ಕೆ ನುಗ್ಗಿದಳು. ನೇರವಾಗಿ ತನ್ನ ಮೊಮ್ಮಗಳು ವಾಸಮಾಡುತ್ತಿದ್ದ ಮನೆಯ ಮುಂದೆ ಬಂದು ನಿಂತು ಬಾಗಿಲನ್ನು ಪೊರಕೆ ಮತ್ತು ಎಕ್ಕಡಗಳಿಂದ ಹೊಡೆಯುತ್ತಾ ಗಟ್ಟಿಯಾಗಿ ಕಿರುಚಿಕೊಂಡಳು. 'ಎಲೇ ಮಾರಿಮುಂಡೇ, ಯಲ್ಲಾರನ್ನೂ ಬಿಟ್ಟು ಈ ಮನೆಗೇ ಯಾಕೆ ಮತ್ತೆ ಮತ್ತೆ ಬತ್ತಿಯೇ? ನಿನ್ನ ಕಣ್ಣು ಅವಳ ಇಬ್ಬರು ಮಕ್ಕಳಮ್ಯಾಲೆ ಬಿತ್ತು. ಈಗ ಶಾರದಾಮ್ನೋರಿಗೆ ಹರಕೆ ಮಾಡ್ಕಳ್ಳೋ ಮೊದ್ಲೇ ಅವ್ಳನ್ನ ನುಂಗ್‌ಕಂಡೆ ಏನೇ? ನಿಂಗೆ ಹೆದರಿಕಂಡ್ರೆ ಮ್ಯಾಲೆ ಅಮರಿಕತ್ತೀಯಾ? ಪಾಪಿಲೌಡಿ, ಲೇ ನಿಂಗೆ ಯಕ್ಕಡದ ಏಟೇ ಸರಿ. ಕದ್ದು ಒಳಗಡೆ ಕೂತಿದೀ ಏನೇ? ಬಾ ಹೊರಗಡೆಗೆ, ನಿನ್ನ ನೆತ್ತಿ ಕೂದ್ಲು ಉದುರೂತಂಕ ಕೆರ ತಗಂಡು ಹೊಡೀತೀನಿ.'

ಅಕ್ಕಮ್ಮ ಎಕ್ಕಡದಿಂದ ಬಾಗಿಲಿಗೆ ಮತ್ತೆ ಮತ್ತೆ ಹೊಡೆದಳು; ಮತ್ತೆ ಮನಸ್ಸಿಗೆ ಬಂದಂತೆ ಪ್ಲೇಗುಮಾರಿಯನ್ನು ಬೈದಳು. ಅಷ್ಟು ಹೊತ್ತಿಗೆ ಅವಳಿಗೆ ಆಯಾಸವಾಗಿತ್ತು. ಹಾಗೆಯೇ ಜಗುಲಿಯ ಮೇಲೆ ಕೂತುಕೊಂಡಳು. ಕಸಪೊರಕೆ ಎಕ್ಕಡಗಳು ಕೈಲೇ ಇದ್ದವು. ಅರ್ಧ ಗಂಟೆಯಲ್ಲಿ ಅವಳ ಸಿಟ್ಟು ಇಳಿಯಿತು. ಹೋದ ವರ್ಷ ಇಬ್ಬರು ಮರಿಮಕ್ಕಳು ಸತ್ತಾಗಲೂ ಅವಳು ಇದೇ ಮನೆಗೆ ಬಂದು ಮೊಮ್ಮಗಳಿಗೆ ಸಮಾಧಾನ ಹೇಳಿದ್ದಳು. ಇದೇ ಮನೆಯಲ್ಲಿ ಪಾರ್ವತಿಯ ಮದುವೆಯಾಗಿತ್ತು. ಈ ಮನೆಯನ್ನೇ ಯಾಕೆ ಹುಡುಕಿಕೊಂಡು ಬರಬೇಕು ಹಾಳು ಪ್ಲೇಗುಮಾರಿ? ಅಕ್ಕಮ್ಮನಿಗೆ ಈಗ ಅಳು ಬಂದಿತು. ಬಿಕ್ಕಿ ಬಿಕ್ಕಿ ಪ್ರಾರಂಭವಾದ ಅಳು, ಕೊನೆಗೆ ಪ್ರವಾಹದಂತೆ ಹರಿಯಿತು. ಸ್ವಲ್ಪ ಹೊತ್ತಿನಮೇಲೆ ಅವಳು ಮೇಲೆ ಎದ್ದಳು. ಕಸಪೊರಕೆಯಲ್ಲಿ ಬಾಗಿಲು ಹೊಡೆಯುವುದಕ್ಕಾಗಲಿ, ಪ್ಲೇಗುಮಾರಿಯನ್ನು ಬೈಯುವುದಕ್ಕಾಗಲಿ ಮನಸ್ಸು ಬರಲಿಲ್ಲ. ಕತ್ತಲೆಯಲ್ಲಿ ನಡೆದು ಊರ ಹೊರಗೆ ಬಂದಳು.

ಅಷ್ಟರಲ್ಲಿ ಎದುರಿಗೆ ಬರುತ್ತಿದ್ದ ಅಯ್ಯನವರು ಇವಳನ್ನು ಗುರುತಿಸಿ ಎಂದರು: 'ನಿಮ್ನೇ ಹುಡಿಕ್ಕಂಡ್ ನಾವು

ಎಲ್ಲೆಲ್ಲೋ ನೋಡಿದ್ವು. ಬಿಟ್ಟ ಊರವಳಿಕ್ಕೆ ಯಾಕೆ ಹ್ವಾಗಿದ್ರಿ?'
'ಪ್ಲೇಗುಮುಂಡೆಗೆ ಯಕ್ಕಡದಲ್ಲಿ ಹ್ವಡಿಯುಕ್ಕೆ ಹೋಗಿದ್ದೆ.'
ಶವ ಸುಟ್ಟವರು ಹಿಂತಿರುಗಿದ್ದರು. ಚೆನ್ನಿಗರಾಯರು ಕಣ್ಣೀರು ಒರೆಸಿಕೊಂಡು ಅಳುತ್ತಾ ಕೂತಿದ್ದರು: 'ಹಾಳು ಮನೆ ಕಟ್ದೇ ಇದ್ದಿದ್ರೆ ಇವಳಿಗೆ ಏನಾಗ್ತಿತ್ತು? ಹೊಸ ಮನೆ ಕಟ್ಟಿಯೇ ಅಮ್ಮ ಹಿಡಕಂಡ್ಲು.'
ಅಕ್ಕಮ್ಮ ರಾತ್ರಿ ಎಲ್ಲ ಅಳುತ್ತಿದ್ದಳು. ಇನ್ನು ಬೆಳಿಗ್ಗೆ ಎದ್ದು ಗಾಡಿಯ ಮೇಲೆ ಹಿಂತಿರುಗುವುದೋ, ಅಥವಾ ಕಲ್ಲೇಶ ಬರುವತನಕ ಇಲ್ಲೇ ಉಳಿಯುವುದೋ ಎಂಬ ಬಗೆಗೆ ಮಾತು ನಡೆಯಿತು. 'ಅವರು ಬರಾತಂಕ ಇರಿ'– ಅಯ್ಯನವರೆಂದರು. ಎತ್ತು ಗಾಡಿಯೊಡನೆ ಹೊನ್ನನೂ ಉಳಿದ.
ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಗುಡಿಸಿಲ ಒಳಗೆ ಅಕ್ಕಮ್ಮ ಮಲಗಿದ್ದಳು. ಗಂಗಮ್ಮ ತಲೆಯ ಮೇಲೆ ಕೈಹೊತ್ತು ಕೂತಿದ್ದಳು. ಚೆನ್ನಿಗರಾಯರು ಗ್ರಾಮದೇವತೆಯ ಗುಡಿಯ ಜಗುಲಿಯ ಮೇಲೆ ಮಲಗಿ, ತಮ್ಮ ದುಃಖ ಮರೆಯಲು ನಿದ್ದೆ ಮಾಡುತ್ತಿದ್ದರು. ವಿಶ್ವ ಬೇಗ ಬೇಗ ಹೆಜ್ಜೆ ಇಡುತ್ತ ಊರ ಕಡೆಗೆ ಹೋಗುತ್ತಿದ್ದ. ಊರ ಹೊರಗೆ ತನ್ನ ಅಂಗಡಿಯಲ್ಲಿ ಕೂತಿದ್ದ ನರಸಿ ಇದನ್ನು ಕಂಡು ಓಡಿಬಂದು–'ಎಲ್ಲಿಗ್ ಹೋಗ್ತೀಯಾ ಮಗಾ?' ಎಂದರೆ 'ನಮ್ಮಮ್ಮ ಸತ್ಹೋದ್ಲಂತೆ ನಿಜವಾ?' ಎಂದು ಕೇಳಿದ.
ನರಸಿ ಅವನನ್ನು ತಬ್ಬಿ ಹಿಡಿದುಕೊಂಡಳು. 'ನನ್ನ ಯಾಕೆ ಹಿಡ್ಕತ್ತೀಯಾ? ನಮ್ಮನೆಗೆ ಹೋಗ್ತೀನಿ ಬಿಡು ನರಸಮ್ಮ'–ಅವನು ಕೊಸರಿಕೊಂಡ.
'ಹೋಗಿ ಏನು ಮಾಡ್ತೀಯಾ ಮಗಾ?'
'ನಮ್ಮಮ್ಮ ಇದಾಳೆ. ಅವ್ಳು ಸತ್ಹೋಗಿಲ್ಲ.'
'ಇಲ್ಲಿ ಬಾ, ನಾನ್ ಏಳ್ತೀನಿ'–ಎಂದು ಅವನ ಎರಡು ಕೈಯನ್ನೂ ಹಿಡಿದು ತನ್ನ ಅಂಗಡಿಗೆ ಎಳೆದೊಯ್ದು ಕೂರಿಸಿಕೊಂಡು ಕೇಳಿದಳು: 'ಒಬ್ನೇ ಬಂದ್ಯಾ?'
'ಹೂಂ.'
'ಅಮ್ಮ ಸತ್ತೈತೆ ಅಂತ ಯಾರು ಏಳಿದ್ರು?'
'ನಮ್ಮ ಪಕ್ಕದ ಶೆಡ್ಡಿನ ನಾಗಮ್ಮತ್ತೆ.'
'ಅವರು ಅಂದ ಸಟೀಗೇ ಓಡಿಬಂದ್ಯಾ?'
'ಹೂಂ.'
'ನಿಂಗೆ ದಾರಿ ಗೊತ್ತಿತ್ತಾ?'
'ಗಾಡಿಮ್ಯಾಲೆ ಕೂತ್ಕಂಡು ಹೋಗೂವಾಗ ನೋಡ್ಕಂಡಿದ್ನಲಾ, ಕೆರೆ ಏರಿ ಮೇಲ್ಹಾಸಿ, ಕತ್ತಾಳೆ ಓಣಿ ಕಣಗಲಹಳ್ಳ ದಾಟಿ ಹೂವಿನಹಳ್ಳ ಹಾದು, ಚೋಳನಗುಡ್ಡದ ಮುತ್ತುಗದಹಳ್ಳ ದಾಟಿ ಬಂದೆ.'
ನರಸಿಗೆ ಅಳು ಬಂತು. ಅವಳು ಇನ್ನೊಂದು ಸಲ ಅವನನ್ನು ತಬ್ಬಿಕೊಂಡಳು.
'ಅದ್ಯಾಕ್ ನರಸಮ್ಮ ಅಳೀಯಾ? ನಮ್ಮನಿಗೆ ಹೋಗ್ತೀನಿ ಬಿಡು'–ಎಂದು ಅವನು ಬಿಡಿಸಿಕೊಳ್ಳಲು ಎದ್ದ. 'ನಾ ಕರ್ಕಂಡ್ ಹೋಯ್ತೀನಿ ಬಾ'– ಎಂದು ಕೈಹಿಡಿದು ಅವರ ಶೆಡ್ಡಿಗೆ ಕರೆದೊಯ್ದಳು. ಮರಿಮಗನನ್ನು ಕಂಡ ಅಕ್ಕಮ್ಮ ಎದ್ದು ಅವನನ್ನು ಬಾಚಿ ಹಿಡಿದುಕೊಂಡು–'ತಬ್ಬಲಿಯಾದ್ಯಲೋ ನನ್ನ ಕಂದಾ' ಎಂದು ಗಟ್ಟಿಯಾಗಿ ಅತ್ತಳು. ವಿಃವನಿಗೂ ಅಳು ಬಂತು. 'ಅಮ್ಮ ಸತ್ಹೋಗಿದಾಳಾ?'–ಎಂದು ಕೇಳಿದವನೇ ಗೋಳೋ ಎನ್ನುತ್ತಾ ಕಳಲಿ ಬಿದ್ದುಬಿಟ್ಟ.
– 7 –
ಸಾಯಂಕಾಲದ ಹೊತ್ತಿಗೆ ಅಕ್ಕಮ್ಮನಿಗೆ ಜ್ವರ ಬಂತು. ಮೈ ಕೈ ಕತ್ತರಿಸಿದಂತೆ ಆಗುವುದು, ಕಣ್ಣು ವಿಕಾರವಾಗಿ ಕೆಂಪಗಾಗಿದ್ದುದು, ಮತ್ತು ಮುಖ ಕೆದರಿದ ಲಕ್ಷಣಗಳಿಂದ ಅದು ಪ್ಲೇಗು ಎಂದು ಅಯ್ಯನವರು ತಕ್ಷಣ ಹೇಳಿದರು. ಈ ಅಜ್ಜಿ ಉಳಿಯುವುದಿಲ್ಲವೆಂದು ಅವರ ಮನಸ್ಸಿಗೆ ಎನ್ನಿಸಿತು. ವಿಶ್ವನನ್ನು ರೋಗಿಯ ಹತ್ತಿರ ಬಿಡಕೂಡದು ಎಂದು ಯೋಚಿಸಿದ ಅವರು, ಅವನನ್ನು ಕರೆತಂದು ನರಸಿಯ ಹತ್ತಿರ ಬಿಟ್ಟು ಹೇಳಿದರು: 'ನೋಡವ್ವ, ಇವನನ್ನ ನಿನ್ನ ಮನೆಯಿಂದ ಹೊರಗೆ ಬಿಡ್‌ಬ್ಯಾಡ. ಊಟ ತಿಂಡಿ ಏನಿದ್ರೂ ನೀನೇ ತಿನ್ಸು. ಜಾತಿ ಏನೂ ಹೋಗಾಕಿಲ್ಲ. ಶೆಡ್ಡಿನಲ್ಲಿ ಅಜ್ಜಿಗೆ ಪ್ಲೇಗು ಬಡಿದೈತಿ. ಇವನಿಗೆ ಮುಟ್ಟು ಬ್ಯಾಡ್‌ದು.'
ವಿಶ್ವ ಏನೂ ತಿನ್ನಲಿಲ್ಲ. ತನ್ನ ಅಮ್ಮನನ್ನು ನೆನೆಸಿಕೊಂಡು ಅಳುತ್ತಲೇ ಇದ್ದ. ಅವನನ್ನು ಎಲ್ಲಿಯೂ ಬಿಡದೆ ನರಸಿ ಹತ್ತಿರವೇ ಕೂರಿಸಿಕೊಂಡಳು.
ನಂಜಮ್ಮನಿಗೆಂದು ತರಿಸಿದ್ದ ಹೇಮಾದಿ ಪಾನಕ ಇನ್ನು ಉಳಿದಿತ್ತು. ಶೆಡ್ಡಿಗೆ ಬಂದ ಅಯ್ಯನವರು ಕುಡಿಸಲು ಹೋದರೆ ಅಕ್ಕಮ್ಮ ಬ್ಯಾಡವೆಂದಳು. ಏನು ಮಾಡಿದರೂ ಬಾಯಿ ತೆಗೆಯಲಿಲ್ಲ. ತಾನು ಸಾಯಬೇಕೆಂದೇ ಅವಳು ನಿಶ್ಚಯಿಸಿದಂತಿತ್ತು.
ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಕಲ್ಲೇಶ ಬಂದ. ನಡೆದುದೆಲ್ಲವನ್ನೂ ಅಯ್ಯನವರು ಹೇಳಿದರು. ಎರಡು ನಿಮಿಷ ಅವನೂ ಕಣ್ಣೀರು ಹಾಕಿದ. ಇನ್ನು ಮುಂದಿನ ಕೆಲಸ ಯೋಚಿಸಬೇಕು. ಅವನೇ ಹೇಳಿದ: 'ವಿಶ್ವನಿಗೆ

ಇನಾಕ್ಯುಲೇಶನ್ ಆಗಿದೆ. ನಾಗಲಾಪುರಾನೂ ಬಿಟ್ತದೆ. ಈ ಊರು ಬಿಟ್ಟಿದೆ. ಅವನು ಇಲ್ಲಿದ್ದರೂ ಭಯವಿಲ್ಲ. ಅವನು ಅಮ್ಮನ ತಿಥಿ ಆಗೂತಂಕ ಇಲ್ಲಿಯೇ ಇರ್ಲಿ. ಆಮೇಲೆ ನಾನು ಬಂದು ಕರ್ಕಂಡು ಹೋಗ್ತೀನಿ. ಬಿಟ್ಟ ಊರೊಳಕ್ಕೆ ಹೋಗಿ ಅಷ್ಟು ಹೊತ್ತು ಕೂತಿದ್ದರಿಂದ ಅಕ್ಕಮ್ಮನಿಗೆ ರೋಗ ಬಡಿದಿದೆ. ಇನಾಕ್ಯುಲೇಶನ್ ಬ್ಯಾಡ ಅಂತ ಹಟಮಾಡಿದ್ಳು. ಈಗ ಗಾಡಿಮ್ಯಾಲೆ ಅವಳನ್ನ ಕರ್ಕಂಡ್ ಹೋಗ್ತೀನಿ.'

ಅದಕ್ಕೆ ಬದಲು ಹೇಳುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. 'ಹಂಗೇ ಮಾಡಿ'–ಎಂದು ಅಯ್ಯನವರೆಂದರು. 'ನಾನಲ್ಲಿಗೆ ಬರುಲ್ಲ. ನನ್ನ ಮಮ್ಮಗಳುನ್ನ ಸುಟ್ಟ ಜಾಗದಲ್ಲೆ ನನ್ನೂ ಸುಡ್‌ಬೇಕು'–ಅಕ್ಕಮ್ಮ ಹೋರಿದಳು. ಕಲ್ಲೇಶ ಕೇಳಲಿಲ್ಲ. ಮೆತ್ತಗಾಗುವಂತೆ ಗಾಡಿಗೆ ಹುಲ್ಲು ಹಾಕಿಸಿ, ಮೇಲೆ ಒಂದು ಗೋಣೀಚೀಲ ಒಂದು ಸೀರೆ ಹಾಸಿ, ಅಕ್ಕಮ್ಮನನ್ನು ಎತ್ತಿ ಮಲಗಿಸಿ, ಮೇಲೆ ಬೆಚ್ಚಗೆ ನಂಜಮ್ಮನ ಒಂದು ಕಂಬಳಿ ಹೊದೆಸಿ ಆ ರಾತ್ರಿಯೇ ಗಾಡಿ ಕಟ್ಟಿಸಿಕೊಂಡು ಹೊರಟುಹೋದ.

ಮರುದಿನ ಅಪ್ಪಣ್ಣಯ್ಯ ಊರಿಗೆ ಬಂದ. ಪ್ಲೇಗು ಬಂದು ಊರು ಬಿಟ್ಟಿರುವುದಾಗಲಿ ಅತ್ತಿಗೆ ಸತ್ತುಹೋದುದಾಗಲಿ ಅವನಿಗೆ ಗೊತ್ತಿಲ್ಲ. ಶೆಡ್ಡಿಗೆ ಬಂದು ಕುತ ಅವನು ಕಣ್ಣುತುಂಬ ನೀರು ಸುರಿಸಿದ. ಪಾರ್ವತಿಯ ಮದುವೆಯಾದಮೇಲೆ ಅವನಿಗೆ ಅತ್ತಿಗೆಯ ಬಗೆಗೆ ಸ್ವಲ್ಪ ಅಂತಃಕರಣ ಬೆಳೆದಿತ್ತು. ಇಬ್ಬರು ಮಕ್ಕಳು ಸತ್ತು, ಅವಳೊಡನೆ ಶೃಂಗೇರಿಗೆ ಹೋಗಿ ಬಂದಮೇಲಂತೂ ತುಂಬ ಗೌರವವೇ ಹುಟ್ಟಿಬಿಟ್ಟಿತ್ತು. ತನ್ನ ಅಮ್ಮನಿಂದ ಬೇರೆಯಾದಮೇಲೆ, ದಿನವೂ ಅವಳು ಮಾಡಿದ ಸಾರು ಹುಳಿಗಳನ್ನೆ ತಿನ್ನುತ್ತಿದ್ದ. ಈಗ ಈ ಊರಿನಲ್ಲಿ ಅವನಿಗೆ ತನ್ನವರೆಂಬ ಯಾರೂ ಇಲ್ಲವೆನ್ನಿಸುತ್ತಿತ್ತು. ನರಸಿಯ ಮನೆಗೆ ಹೋಗಿ ಅವನೇ ವಿಶ್ವನನ್ನು ಕರೆದುಕೊಂಡು ಬಂದ. ಈಗ ಅಯ್ಯನವರನ್ನು ಬಿಟ್ಟರೆ ಈ ಊರಿನಲ್ಲಿ ವಿಶ್ವನಿಗೆ ನಿಕಟವಾಗಿ ಉಳಿದಿರುವವರು ಚಿಕ್ಕಪ್ಪ ಒಬ್ಬರೇ. ರೇವಣ್ಣಶೆಟ್ಟರ ಹೆಂಡತಿ ಸರ್ವಕ್ಕ ಮೊದಲಾಗಿ ಎಷ್ಟೋ ಜನ ಹೆಂಗಸರು ಶೆಡ್ಡಿಗೆ ಬಂದು ಅವನ ಕೆನ್ನೆಯನ್ನು ಮುಟ್ಟಿ ಮುತ್ತಿಟ್ಟು ಕಣ್ಣೀರು ಹಾಕಿ ಹೋದರು. ಆದರೆ ಯಾರೂ ಅವನ ಅಮ್ಮನನ್ನು ಕರೆದುಕೊಂಡು ಬರುವುದಿಲ್ಲ. ಅವಳನ್ನು ಶ್ಮಶಾನದಲ್ಲಿ ಸುಟ್ಟುಹಾಕಿದರಂತೆ. ಸತ್ತು ಬೂದಿ ಯಾದವರು ಇನ್ನು ಬರುವುದಿಲ್ಲವಂತೆ. ಇವರು ಯಾಕೆ ಸುಡಬೇಕಾಗಿತ್ತು? ಹಾಗೆಯೇ ಇಟ್ಟಿದ್ದರೆ ಅವಳಿಗೆ ಪ್ರಾಣ ಬರುತ್ತಿರಲಿಲ್ಲವೆ?–ಎಂದು ಅವನು ಯೋಚಿಸುತ್ತಿದ್ದ.

ಇನ್ನು ಅತ್ತಿಗೆಯ ತಿಥಿಯಾಗಬೇಕು. ಅಪ್ಪಣ್ಣಯ್ಯ ಅಣ್ಣನಿಗೆ ಹೇಳಿದ: 'ನನ್ನ ಹತ್ರ ಅರವತ್ತು ರೂಪಾಯಿ ಇದೆ. ನಿನ್ನ ಹತ್ರ ಏನಿದೆ ಕೊಡು. ಕ್ರಮವಾಗಿ ಮಾಡಾಣ. ಅವರು ಪುಣ್ಯಾತ್ಗಿತ್ತಿ. ಶ್ರದ್ಧೆ ಭಕ್ತಿಯಿಂದ ಕೆಲಸವಾಗಬೇಕು.'

'ಕತ್ತೆಮುಂಡೆ ಇದ್ದ ಬದ್ದ ದುಡ್ಡಲೆಲ್ಲ ಮನೆ ಕಟ್ಟಿಸಿದಳು. ನಂಗೆ ಯಾವ ಯಜಮಾನಿಕೆ ಬಿಟ್ಟಿದ್ದಳು ದುಡ್ಡು ಇರೂಕ್ಕೆ?'

ಅಯ್ಯನವರೆಂದರು: 'ಔಸ್ತಿ ತರಿಸಿದಮೇಲೆ ಮೂವತ್ತೆಲ್ಡು ರೂಪಾಯಿ ಉಳಿದೈತಿ.

ರೂಪಾಯಿ ನನ್ನ ತಾವ ಅವೆ. ಅದ್ನೂ ತಗಾಳಿ. ಹ್ಯಂಗೋ ಬಡತನದಾಗೇ ಮಾಡಿ. ಈ ಜೋಯಿಸರಿಗೆ ನೀವು ಏನು ದಾನ ಕೊಟ್ರೂ ಸತ್ತ ಅಮ್ಮನಿಗೆ ಏನೂ ಸಿಕ್ಕಾಕುಲ್ಲ.'

ಆದರೆ ಅದೇ ದಿನವೇ ಕಂಬನಕೆರೆಯ ಹೆಡ್ಮಾಸ್ಟರು ಬಂದರು. ರಾತ್ರಿ ಸ್ಕೂಲಿನ ನೂರಾ ಇಪ್ಪತ್ತು ರೂಪಾಯಿಯನ್ನು ಚೆನ್ನಿಗರಾಯರಿಗೆ ಕೊಟ್ಟು, ಹಣ ಪಡೆಯಬೇಕಾದವರು ಸತ್ತುಹೋಗಿರುವುದರಿಂದ ಅವರ ಗಂಡನಾದ ತಾವು ಸ್ವೀಕರಿಸಿರುವುದಾಗಿ ಬರಸಿ ರುಜುಮಾಡಿಸಿಕೊಂಡು ಹೋದರು. ಆ ಹಣವನ್ನು ತಿಥಿಗೆ ಕೊಡುವಂತೆ ಅಪ್ಪಣ್ಣಯ್ಯ ಕೇಳಿದ.

'ಅದ ಖರ್ಚು ಮಾಡ್‌ಬ್ಯಾಡಿ. ಓದಾ ಹುಡುಗನಿಗೆ ಅಂಗಿ ಪಂಗಿ ಹೊಲಿಸಾಕೆ, ಪುಸ್ತಕ ಗಿಸ್ತಕ ತಗಾಳಾಕೆ ಆಯ್ತದೆ'–ಎಂದು ಮಾದೇವಯ್ಯನವರು ಹೇಳಿದರು. 'ಹಾಗಾದ್ರೆ ಅಯ್ನೋರ ಕೈಲಿ ಕೊಡು'– ಅಪ್ಪಣ್ಣಯ್ಯನೇ ಹೇಳಿದ. ಚೆನ್ನಿಗರಾಯರು ಯಾರಿಗೂ ಕೊಡಲಿಲ್ಲ. ಒಂದು ಅರಿವೆ ಬಳಲಿನಲ್ಲಿ ಸುತ್ತಿ ಸೊಂಟಕ್ಕೆ ಬಿಗಿದುಕೊಂಡೇ ತಿರುಗಾಡಲು ಪ್ರಾರಂಭಿಸಿದರು.

ವಿಶ್ವ ಮುಂಜಿಯಾಗದ ಹುಡುಗ. ಅವನ ಪರವಾಗಿ ಪುತ್ರಸ್ಥಾನದಲ್ಲಿ ನಿಂತು ಎದಬಲಕ್ಕೆ ಹಾಕಿಕೊಂಡು ಅಪ್ಪಣ್ಣಯ್ಯ ಎಲ್ಲ ಕೆಲಸವನ್ನೂ ಮಾಡುತ್ತಿದ್ದ. ತೋಟದ ಬಾವಿಯ ಹತ್ತಿರಕ್ಕೆ ಕರೆದುಕೊಂಡು ಹೋಗಿ ವಿಶ್ವನಿಗೆ ತಲೆ ಬೋಳಿಸಿಸಿ, ಕರ್ಮಗಳು ನಡೆಯುವಾಗ ಸುಮ್ಮನೆ ಒಂದು ಕಡೆ ಕೂರಿಸುತ್ತಿದ್ದರು. ಅಣ್ಣಾಜೋಯಿಸರ ಮಂತ್ರ ತಂತ್ರಗಳು. ನಂಜಮ್ಮನ ಸಂಸಾರದ್ದೇ ಪಾತ್ರೆ ಪರಟೆಗಳಿದ್ದವು. ಅವನ್ನು ವೈಕುಂಠಸಮಾರಾಧನೆಯ ದಿನ ಧಾರಾಳವಾಗಿ ಬ್ರಾಹ್ಮಣರಿಗೆ ದಾನಮಾಡಿದರು.

– 8 –

ವೈಕುಂಠಸಮಾರಾಧನೆಯಾದ ಹತ್ತು ದಿನಕ್ಕೆ ಕಲ್ಲೇಶ ಬಂದ. ಅಕ್ಕಮ್ಮ, ಊರು ಸೇರಿದ ಎರಡನೆಯ ದಿನವೇ ಸತ್ತುಹೋದಳಂತೆ. ಅವನು ಹಾಸನ, ಕೌಶಿಕ, ಮಾವಿನಕೆರೆ, ಗೊರೂರು, ಹೆಬ್ಬಾಲೆ ಮೊದಲಾಗಿ ಎಲ್ಲೆಲಿ ್ಲಯೋ ತಿರುಗಿ ಅವನ ತಂದೆ ಕಂಠೀಜೋಯಿಸರನ್ನು ಪತ್ತೆಮಾಡಿ ಅವಳ ಶ್ರಾದ್ಧವನ್ನು ಮುಗಿಸಿದ. ಈಗ

ವಿಶ್ವನನ್ನು ಕರೆದುಕೊಂಡು ಹೋಗಲು ಬಂದಿದ್ದಾನೆ.
ಅಮ್ಮನ ತಿಥಿಯಾದ ಮೇಲೆ ವಿಶ್ವ ಅಳುವುದನ್ನು ಬಿಟ್ಟಿದ್ದ. ಏರಿಯ ಮೇಲಿನ ಗುಡಿಗೆ ಹೋಗಿ ಅಯ್ಯನವರ ಮುಂದೆ ಸುಮ್ಮನೆ ಕೂರುತ್ತಿದ್ದ. ಅವನಿಗೆ ಊಟವೇ ಸೇರದು. ಅವರು ಬಲವಂತಮಾಡಿ, ಕಂತೆಭಿಕ್ಷದ ಮುದ್ದೆ ಎಸರುಗಳನ್ನು ಸ್ವಲ್ಪ ತಿನ್ನಿಸುತ್ತಿದ್ದರು. ಗುಡಿಗೆ ಹೋದದಿದ್ದರೆ ಅವನು ನರಸಮ್ಮನ ಅಂಗಡಿಗೆ ಹೋಗುತ್ತಿದ್ದ. 'ನರಸಮ್ಮ, ಊರೊಳಕ್ಕೆ ಹೋಗಿ ನೋಡಿದರೆ ನಮ್ಮಮ್ಮ ಇರುಲ್ಲವೆ? ಅವಳು ಸತ್ತಿದ್ದಾಳೆ ಅಂತ ಇವರೆಲ್ಲ ಸುಳ್ಳು ಸುಳ್ಳು ಹೇಳ್ತಿಲ್ಲವೆ?'–ಎಂದು ಕೇಳುತ್ತಿದ್ದ. ಉತ್ತರ ಹೇಳಲು ತಿಳಿಯದೆ ಅವಳು– 'ನಂಗೊತ್ತಿಲ್ಲ ಮಗ, ಕ್ವಾ. ಬಿಸ್ಕತ್ತು ತಿನ್ನು'ಎಂದು ತನ್ನ ಅಂಗಡಿಯ ಬಿಸ್ಕತ್ತು ಕೊಡಲು ಬರುವಳು. 'ನಂಗೆ ಬಿಸ್ಕತ್ತು ಬ್ಯಾಡ. ನಮ್ಮಮ್ಮ ಮನೇಲಿಲ್ವೆ ಹೇಳು'–ಅವನು ಕೇಳುತ್ತಿದ್ದ. ಒಂದು ದಿನ ಯಾರಿಗೂ ಕಾಣದಂತೆ ಒಬ್ಬನೇ ಊರೊಳಕ್ಕೆ ಹೋಗಿ, ಬೀಗ ಹಾಕಿದ್ದ ತನ್ನ ಮನೆ ಯನ್ನು ನೋಡಿಕೊಂಡು ಸುಮ್ಮನೆ ಹಿಂತಿರುಗಿ ಬಂದಿದ್ದ.
ಈಗ ಮಾವ ತನ್ನನ್ನು ಕರೆಯಲು ಬಂದಾಗ ಧೈರ್ಯವಾಗಿ ಹೇಳಿಬಿಟ್ಟ: 'ನಾನು ಬರುಲ್ಲ.'
'ಯಾಕೋ?'
'ನೀನು ಹೊಡೀತಿಯಾ, ನಾನು ಈ ಊರಲ್ಲೇ ಇಸ್ಕೂಲಿಗೆ ಹೋಗ್ತೀನಿ.'
ಈ ಊರಿನಲ್ಲಿ ಅವನನ್ನು ಸಾಕುವವರ್ಯಾರು? ಗಂಗಮ್ಮ ತಾನು ಇಟ್ಟುಕೊಳ್ಳುವುದಾಗಿ ಹೇಳಿದಳು. ಆದರೆ ಅವಳದು ಯಾವ ನೆಚ್ಚಿಕೆ? 'ಇಲ್ಲ ಮರಿ. ಮಾವನ ಊರಿಗೇ ಹ್ವಾಗು'–ಅಯ್ಯನವರೆಂದರು.
'ಇಲ್ಲ ಕಣ್ರೀ, ಅವನು ದನ ಸದೆಯೂ ಹಾಗೆ ಸದೀತಾನೆ?' ಅವನು ಮಾವನ ಎದುರಿಗೇ ಹೇಳಿದ.
'ಖಂಡಿತ ಹ್ವಡೆಯುಲ್ಲ'–ಎಂದು ಕಲ್ಲೇಶನೂ ಭರವಸೆ ಕೊಟ್ಟ. ಉಳಿದವರೂ ಬಲವಂತ ಮಾಡಿದರು. ನಿರುಪಾಯನಾಗಿ ಅವನು ಹೊರಟ. ಕಳಿಸಲು ಅಯ್ಯನವರು ಚಿಕ್ಕಪ್ಪ, ಇಬ್ಬರೂ ಒಂದು ಮೈಲಿಯ ತನಕ ಹೋದರು. ಇವರಿಬ್ಬರೂ ಹಿಂತಿರುಗುವಾಗ ವಿಶ್ವ ಅಯ್ಯನವರನ್ನು ಕೂಗಿ ನಿಲ್ಲಿಸಿದ. ಅವರ ಹತ್ತಿರ ಓಡಿಬಂದು, 'ನಮ್ಮಮ್ಮ ಸತ್ತಿದಾಳೆ ಅಂತ ನೀವೆಲ್ಲ ಅಂತೀರಲ. ಅದು ಸುಳ್ಳಿದ್ರೂ ಇರ್‌ಭೌದು. ಊರೋರೆಲ್ಲ ಶೆಡ್ಡು ಬಿಟ್ಟು ಊರಿಗೆ ಹೋದಮೇಲೆ ಅವ್ಳು ಬತ್ತಾಳೆ. ನಾಗಲಾಪುರಕ್ಕೆ ಬಂದು ನನ್ನ ಕರ್ಕಂಡು ಬಾ ಅಂತ ಹೇಳಿ' ಎಂದ. 'ಆಗಲಿ ಮರಿ'–ಎಂದು ಅವರು ಅಲ್ಲಿಯೇ ನಿಂತರು. ಕಲ್ಲೇಶ ಅವನ ಕೈಹಿಡಿದುಕೊಂಡು ಮುಂದೆ ನಡೆದ. ಹಿಂತಿರುಗಿ ನೋಡುತ್ತಾ ನೋಡುತ್ತಾ ವಿಶ್ವ ಅವನ ಹಿಂದೆ ಹಿಂದೆ ಕಾಲು ಎಳೆದು ಹಾಕುತ್ತಿದ್ದ. ಅವರು ಎದುರಿನ ಬೋರೆ ಏರಿ ಮರೆಯಾಗುವ ತನಕ ಈ ಇಬ್ಬರೂ ಹಾಗೆಯೇ ನಿಂತಿದ್ದರು. 'ನಾಗಲಾಪುರಕ್ಕೆ ಕಳಿಸುವ ಮೊದಲು ವಿಶ್ವ ಎಷ್ಟು ಕಳಕಳಿಯಾಗಿದ್ದ. ಈಗ ಮುಖದಮೇಲೆ ಮಂಕು ಬಡಿದಿದೆ. ಕೈ ಕಾಲುಗಳು ಶೆಣೆತುಕೊಂಡಿವೆ. ಅವನು ಹೇಳುವ ಹಾಗೆ ಈ ಮಾವ ದನ ಸದೆಯುವಂತೆ ಸದೆಯಬಹುದು. ಇಲ್ಲಿಯ ತನಕ ಅಜ್ಜಿ ಇತ್ತು. ಇನ್ನು ಆ ಅತ್ತೆ ಇವನನ್ನು ಹೇಗೆ ನೋಡಿಕೊಳ್ಳುತ್ತಾಳೆಯೋ? ತಂಗಿ ಸತ್ತಮೇಲೆ ಕಲ್ಲೇಶಜೋಯಿಸರು ಹೊಡೆಯುವುದನ್ನು ಬಿಟ್ಟು ಹುಡುಗನನ್ನು ಚೆನ್ನಾಗಿ ನೋಡಿಕೊಳ್ಳಬಹುದು. ತಾಯಿ ಸತ್ತ ಇಂಥಾ ಹುಡುಗರಿಗೆ ಶಿವನೇ ಗತಿ'–ಎಂದು ಯೋಚಿಸುತ್ತಾ ಅಯ್ಯನವರು ಊರ ಕಡೆ ಹೆಜ್ಜೆ ಹಾಕಿದರು.
ಅಪ್ಪಣ್ಣಯ್ಯ ಶೆಡ್ಡಿಗೆ ಬಂದ. ಅದುವರೆಗೂ ಅವನು ಒಂದು ವಿಷಯವನ್ನೂ ಯೋಚಿಸಿರಲಿಲ್ಲ. ಈಗ ನೆನಪಿಗೆ ಬಂತು: ಅಡಿಗೆಯ ಪಾತ್ರೆ ಸಾಮಾನೆಲ್ಲ ಊರೊಳಗೆ ಬೀರೇಗೌಡನ ದನದ ಮನೆಯ ಜಗುಲಿಯ ಕೋಣೆಯಲ್ಲಿತ್ತು. ಈಗ ಊರು ಬಿಟ್ಟಿದೆ. ತನ್ನೊಬ್ಬನಿಗಾಗಿ ಬೇರೆ ಗುಡಿಸಲು ಹಾಕಿಕೊಳ್ಳಬೇಕು ಅದು ಅವನಿಗೆ ಬೇಸರವೆನಿಸಿತು. ಮಳೆ ಬರುವ ತನಕ ಎಲ್ಲ ಶೆಡ್ಡಿನಲ್ಲಿರುತ್ತಾರೆ. ಆಮೇಲೆ ಊರೊಳಕ್ಕೆ ಹೋಗುತ್ತಾರೆ. ಅಲ್ಲಿಯ ತನಕ ತಾನು ಯಾವುದಾದರೂ ಪ್ರಾಂತ್ಯದಲ್ಲಿ ಸುತ್ತಾಡಿಕೊಂಡು ಬಂದರೆ ಸರಿ. ನಾಳೆ ಬೆಳಿಗ್ಗೆ ಹೊರಡಬೇಕು– ಎಂದು ನಿಶ್ಚಯಿಸಿದ.
ಆ ದಿನ ರಾತ್ರಿ ಊಟಕ್ಕಿದ ಮೆಲೆ ಗಂಗಮ್ಮ ಎಂದಳು: 'ಅಪ್ಪಿದ್ದಾಗ ನಿಂಗೆ ಹೇಳ್ಕೊಟ್ಟು ನನ್ನ ಕೈಲಿ ಜಗಳ ಆಡಿಸಿದ್ಲು. ಈಗ ನೀನ್ಯಾಕೆ ಬ್ಯಾರೆ ಇರ್‌ಬೇಕು, ಜೊತೇಲೇ ಇರೋ.'
ಅಪ್ಪಣ್ಣಯ್ಯನಿಗೆ ಇದ್ದಕ್ಕಿದ್ದಹಾಗೆಯೇ ಸಿಟ್ಟು ಬಂತು. 'ಅವರೇನು ನಂಗೆ ಹೇಳ್ಕೊಟ್ಟಿರ್‌ಲಿಲ್ಲ. ನೀನೇ ಬೋಸುಡಿಮುಂಡೆ.'
'ಹೆತ್ತ ತಾಯೀನ ಮತ್ತೆ ಹೀಗಂತೀ ಏನೋ ಚಾಂಡಾಲ ಸೂಳೇಮಗನೇ?'
'ಹೂಂ ಕಣೆ ಮುಂಡೆ, ನಿನ್ನ ಜೊತೆ ನಾನಿರುಲ್ಲ. ನೀನು ಸತ್ರೆ ತಿಥೀನೂ ಮಾಡುಲ್ಲ–ಎಂದು ಹೇಳಿದ ಅವನು ತನ್ನ ಪಂಚೆ, ಅಂಗಿ, ದುಪಟಿ, ಗೋಣೀಚೀಲಗಳನ್ನು ತೆಗೆದುಕೊಂಡು ಶೆಡ್ಡು ಬಿಟ್ಟು ಹೊರಟುಹೋದ. ಹೊರಗೆ ಬೆಳದಿಂಗಳಿತ್ತು. ಯಾವ ಕಡೆಗೆ ಹೋಗುವುದೆಂದು ಇನ್ನೂ ನಿಶ್ಚಯಿಸಿರಲಿಲ್ಲ. ಐದು ನಿಮಿಷ ನಿಂತು ಯೋಚಿಸಿದ. ಈ ರಾಗೀಸೀಮೇಲೆಲ್ಲ ಹೆಚ್ಚು ಕಮ್ಮಿ ಊರು ಬಿಟ್ಟಿದ್ದಾರೆ. ನಾಲೆಬೈಲಿಗೆ ಹೋಗೂದೇ ಸರಿ. ಈಗ ಹ್ಯಾಗೂ ಬೆಳದಿಂಗಳಿದೆ. ಬೆಂಡೇಕೆರೆ ಎಂಟು ಮೈಲಿಯಾಗುತ್ತೆ. ನಡಕಂಡು ಹೋಗಿ ಊರ ಹೊರಗಿನ

ದೇವಸ್ಥಾನದ ಜಗುಲಿ ಮೇಲೆ ಮಲಗಿರೂದು. ಬೆಳಿಗ್ಗೆ ಎದ್ದು ಮುಂದಕ್ಕೆ ಹೋಗೂದು–ಎಂದು ತೀರ್ಮಾನಿಸಿ ಹೆಜ್ಜೆ ಹಾಕಿದ.

ಸಂಸಾರವಿಲ್ಲದ ಅಪ್ಪಣ್ಣಯ್ಯ ಹೀಗೆ ಮತ್ತೆ ದೇಶಾವರಿಗೆ ಹೊರಟಾಗ ಚೆನ್ನಿಗರಾಯರು ಅಣ್ಣಾಜೋಯಿಸರ ಶೆಡ್ಡಿನಲ್ಲಿ ಕೂತು ತಮ್ಮ ಮುಂದಿನ ಸಂಸಾರದ ಬಗೆಗೆ ಮಾತನಾಡುತ್ತಿದ್ದರು. ನಂಜಮ್ಮನ ವೈಕುಂಠಸಮಾರಾಧನೆಯಾದ ದಿನವೇ ಜೋಯಿಸರು ಇವರ ಮದುವೆಗೆ ಪ್ರಸ್ತಾಪ ಹಾಕಿದ್ದರು. ತಿಪಟುರಿಗೆ ಮೂರು ಮೈಲಿ ದೂರದ ಬೇವಿನಹಳ್ಳಿಯಲ್ಲಿ ಒಂದು ಕನ್ಯೆ ಇದೆಯಂತೆ. ಹುಡುಗಿಗೆ ತಂದೆಯಿಲ್ಲ. ತಾಯಿ ತುಂಬ ಕಷ್ಟದ ಸ್ಥಿತಿಯಲ್ಲಿದ್ದಾಳೆ. ಒಬ್ಬ ಬ್ರಾಹ್ಮಣನ ಕೈಲಿ ಇಟ್ಟು ಕೃತಾರ್ಥಳಾಗಬೇಕೆಂದು ತಾಯಿಯ ಆಶೆ. 'ನಿನಗೇನು, ಇನ್ನೂ ಯಾವ ವಯಸ್ಸು? ಮದುವೆ ಮಾಡ್ಕ. ಹೊಸದಾಗಿ ಕಟ್ಟಿರೂ ಮನೆ, ವಂಶಾನುಗತವಾಗಿ ಬಂದ ಶ್ಯಾನುಭೋಗಿಕೆ. ಇದಕ್ಕಿಂತ ಏನು ಬೇಕು? ಹುಡುಗಿ ಲಕ್ಷಣವಾಗಿದೆ. ಒಬ್ಬನೇ ಹೀಗೆ ಎಷ್ಟು ದಿನ ಇರ್ತೀಯಾ?'–ಜೋಯಿಸರು ಕೇಳಿದರು.

ಚೆನ್ನಿಗರಾಯರಿಗೆ ಹುಮ್ಮಸ್ಸು ಬಂತು: 'ಹೆಣ್ಣು ಕೊಡುಸ್ರೀ. ಮಾಡ್ಕಂಡೇಬಿಡ್ತೀನಿ.'

ತಾವು ಹೋಗಿ ಹುಡುಗಿಯ ತಾಯಿಯ ಕೈಲಿ ಮಾತಾಡಿಕೊಂಡು ಬರಬೇಕು, ಮಾತಿಗೆ ಹೋಗುವಾಗ ಹುಡುಗಿಗೆ ಹೊಸಸೀರೆ ತೆಗೆದುಕೊಂಡು ಹೋಗಬೇಕು, ದೊಡ್ಡ ಶ್ಯಾನುಭೋಗರು ಅಂತ ಅವರಿಗೆ ತೋರಿಸಬೇಕಾದರೆ ತಾವು ಸಹ ಚನ್ನಾದ ಒಂದು ಶಾಲು ಹೊದೆದುಕೊಂಡು ಹೋಗಬೇಕು. 'ಒಟ್ಟಿನಲ್ಲಿ ಎಪ್ಪತ್ತೈದು ರೂಪಾಯಿಯಾದರೂ ಬೇಕು. ಕೊಡು'–ಎಂದರು. ಹೆಣ್ಣು ಬೇಕಾದರೆ ದುಡ್ಡು ಬಿಚ್ಚಬೇಕು. ನಂಜಮ್ಮ ರಾತ್ರಿ ಸ್ಕೂಲು ನಡೆಸಿದ ನೂರ ಇಪ್ಪತ್ತು ಇವರ ಸೊಂಟದಲ್ಲೇ ಇತ್ತು. ಅದು ಗೊತ್ತಿಲ್ಲದಿದ್ದರೆ ಜೋಯಿಸರು ಈ ಪ್ರಸ್ತಾಪ ಮಾಡುತ್ತಿರಲಿಲ್ಲ. ಚೆನ್ನಿಗರಾಯರು ಅವರ ಎದುರಿಗೇ ಸೊಂಟದ ಅರಿವೆ ಬಿಚ್ಚಿ ಎಪ್ಪತ್ತೈದು ರೂಪಾಯಿ ಎಣಿಸಿ ಕೊಟ್ಟರು. ಇನ್ನು ಉಳಿದದ್ದೆಷ್ಟು ಎಂಬ ಲೆಕ್ಕ ಜೋಯಿಸರಿಗೂ ತಿಳಿಯಿತು. ಮರುದಿನವೆ ಜೋಯಿಸರು ಮೋಟಾರಿನಲ್ಲಿ ತಿಪಟೂರಿಗೆ ಹೋದರು. ಅವರು ಇಪ್ಪತ್ತು ರೂಪಾಯಿಯ ಒಂದು ಹಸುರು ಶಾಲನ್ನು ಕೊಂಡು ಹೊದೆದು ಹಿಂತಿರುಗಿದ್ದನ್ನು ಚೆನ್ನಿಗರಾಯರೇ ನೋಡಿದರು. ಹುಡುಗಿಗೆ ಅರವತ್ತು ರೂಪಾಯಿಯ ಸೀರೆ ಕೊಟ್ಟು ಬಂದಿದ್ದರೆನ್ನುವುದಕ್ಕೆ ಇದೇ ಸಾಕ್ಷಿಯಲ್ಲವೆ? ಎರಡು ದಿನದ ನಂತರ ಒಂದು ಶುಭ ಲಗ್ನ ನೋಡಿ ಇವರಿಬ್ಬರೂ ಮೋಟಾರಿನಲ್ಲಿ ತಿಪಟುರಿಗೆ ಹೋದರು. ರಾತ್ರಿ ಹೋಟೆಲಿನಲ್ಲಿ ಭೋಜನವಾದಮೆಲೆ ಇಬ್ಬರೂ ಛತ್ರದ ಜಗುಲಿಮೇಲೆ ಮಲಗಿದರು. ಜೋಯಿಸರು ಹೇಳಿದ್ದಂತೆ ಚೆನ್ನಿಗರಾಯರು ತಮ್ಮ ಪಂಚೆ, ಜಮಾಬಂದಿಯ ಕೋಟು ಪೇಟಗಳನ್ನು ಚೌಳು ಹಾಕಿ ಒಗೆಸಿ ತಂದಿದ್ದರು. ಬೆಳಿಗ್ಗೆ ಎದ್ದು ಅವೆಲ್ಲಕ್ಕೂ ಇಸ್ತ್ರಿ ತಿಕ್ಕಿಸಿದ ಮೇಲೆ ಜೋಯಿಸರು ಕೆರೆಯ ದಡಕ್ಕೆ ಒಬ್ಬ ಹಜಾಮನನ್ನು ಕರೆದುಕೊಂಡು ಬಂದರು. ವೈದಿಕ ಜೋಯಿಸರಾದ ಅವರು ಹಜಾಮನ ಸೆಲೂನಿಗೆ ಹೋಗುವಂತಿರಲಿಲ್ಲ. ಕೆರೆಯ ದಡದಲ್ಲಿ ಕೂರಿಸಿ ಚೆನ್ನಿಗರಾಯರ ಬಿಳಿ ಗಡ್ಡ ಮತ್ತು ತಲೆಯ ಬಿಳಿಯ ಕೂದಲಿನ ಸಣ್ಣ ಕೂಳೆಯೂ ಕಣ್ಣಿಗೆ ಬೀಳದಂತೆ ಉಲ್ಟಾ ಹೊಡೆಸಿಸಿ, ಅವರಿಗೆ ಸ್ನಾನ ಮಾಡಲು ಹೇಳಿದರು. ಸ್ನಾನ ಮಾಡಿ ಇಸ್ತ್ರಿ ಮಾಡಿದ ಪಂಚೆಯುಟ್ಟು, ಅಂಗಿ ಕೋಟು ತೊಟ್ಟು, ಜಮಾಬಂದಿಗೆ ಹೋಗುವಾಗ ಕಟ್ಟುವಂತೆ ಪೇಟ ಕಟ್ಟಿ ನಿಂತಮೇಲೆ ಜೋಯಿಸರೇ ಅಂದರು: 'ಈಗ ಹೋಟೆಲಿಗೆ ಹೋಗಾಣ ಬಾ. ಅಲ್ಲಿ ದೊಡ್ಡ ಕನ್ನಡಿ ಇದೆಯಲ. ಅದರಲ್ಲಿ ನೋಡ್ಕ–ಹ್ಯಾಗೆ ಕಾಣ್ತೀಯಾ.'

ಹೋಟೆಲಿನಲ್ಲಿ ಕೂತು ಇವರು ಹೇಳಿದ ಮಸಾಲೆದೋಸೆ ಬೆಂದು ಬರುವ ತನಕ ಚೆನ್ನಿಗರಾಯರು ಕನ್ನಡಿಯಲ್ಲಿ ತಮ್ಮನ್ನು ತಾವೇ ನೋಡಿಕೊಳ್ಳುತ್ತಾರೆ: ಅವರಿಗೇ ಆಶ್ಚರ್ಯವಾಗುತ್ತಿದೆ. ತಾವು ಇಷ್ಟು ಚೆನ್ನಾಗಿ ಈ ಹಿಂದೆ ಯಾವತ್ತೂ ಕೋಟು ಪೇಟ ಹಾಕಿಕೊಂಡೇ ಇರಲಿಲ್ಲ. ಅವರ ಹೆಂಡತಿಯಾಗಿದ್ದ ಆ 'ಮುಂಡೆ' ಒಂದು ದಿನವೂ ಇವರಿಗೆ ಇಸ್ತ್ರಿಯಾದ ಪಂಚೆ, ಅಂಗಿ, ಕೋಟು, ಪೇಟಗಳನ್ನು ಹಾಕಿಸಿ ಜಮಾಬಂದಿಗೆ ಕಳಿಸಿರಲಿಲ್ಲ. ಮಸಾಲೆದೊಸೆ, ಇಡ್ಲಿಸಾಂಬಾರ್, ಮೈಸೂರ್ ಪಾಕು, ಮೇಲೆ ಕಾಫಿ ಕುಡಿದು, ಸಂಜೆಯ ತನಕ ಜೊತೆಯಲ್ಲೇ ಇದ್ದು ವಾಪಸು ಕರಕೊಂಡು ಬರಬೇಕೆಂದು ಹೇಳಿ ಜೋಯಿಸರು ಎಂಟು ರೂಪಾಯಿಗೆ ಒಂದು ಕುದುರೆಗಾಡಿ ಗೊತ್ತುಮಾಡಿದರು.

ಬೇವಿನಹಳ್ಳಿ ಹದಿನೈದು ಮನೆಗಳ ಕಗ್ಗಾಡುಹಳ್ಳಿ. ಈ ಹೆಣ್ಣಿನದೊಂದೇ ಬ್ರಾಹ್ಮಣರ ಮನೆ. ಅಲ್ಪ ಸ್ವಲ್ಪ ಜಮೀನಿದ್ದರೂ ವಿಧವೆಯಾದ ಆಕೆ ಅದನ್ನು ಮಾಡಿಸಲಾರದೆ, ವಾರ ಪಾಲಿನವನು ಕೊಟ್ಟಷ್ಟನ್ನು ತಿಂದು, ಸಾಲದುದಕ್ಕೆ ತಿರುಪೆ ಮಾಡಿ ಜೀವನ ಸಾಗಿಸುತ್ತಿದ್ದರು. ಮನೆಯ ಮುಂದೆ ಕುದುರೆಯ ಗಾಡಿ ಬಂದು ನಿಂತಾಗ ಆಕೆಗೆ ಕೈ ಕಾಲೇ ಆಡದಷ್ಟು ಸಂಭ್ರಮವಾಯಿತು. ಹುಡುಗಿಗೆ ಹದಿನಾಲ್ಕು ವರ್ಷ. ಇನ್ನೂ ಮೈನೆರೆದಿಲ್ಲವೆಂದು ತಾಯಿ ಹೇಳುತ್ತಾರೆ. ಹುಡುಗಿಯನ್ನು ನೋಡದೆ ಇದ್ದರೂ ಚೆನ್ನಿಗರಾಯರು ಸಮ್ಮತಿ ಕೊಡುತ್ತಿದ್ದರು. ಈಗ ನೋಡಿದ ಮೇಲೆ ಪ್ರಶ್ನೆಯೇ ಇಲ್ಲ.

'ಸದಾ ಶ್ಯಾನುಭೋಗಿಕೆ ಲೆಕ್ಕ ಬರೆದು ನಮ್ಮ ಚೆನ್ನಿಗರಾಯರು ಹೀಗೆ ಕಾಣ್ತಾರೆ. ಮೂವತ್ತೆರಡು ವರ್ಷದ ಮೇಲೆ ಆಗಿಲ್ಲ. ಸ್ವಂತ ಮನೆ, ಶ್ಯಾನುಭೋಗಿಕೆ, ನಾಲ್ಕೆಕರೆ ಹೊಲ ಇದೆ. ಈ ಕಾಲದಲ್ಲಿ ಒಂದು

ಶ್ಯಾನುಭೋಗಿಕೆ ಇದ್ರೆ ಸಾಕು ಸಂಸಾರ ಸಾಕ್‌ಭೌದು. ನಿಮ್ಮ ಹುಡುಗಿ ದಿನಾ ಊಟವಾದ ಮೇಲೆ ಹಾಲಿನಲ್ಲಿ ಕೈ ತೊಳೆಯುತ್ತೆ, ನೀರಿನಲ್ಲಲ್ಲ'–ಜೋಯಿಸರು ಇವರ ಪರವಾಗಿ ಹೇಳಿದರು.

ಮದುವೆ ನಿಶ್ಚಯವಾಯಿತು. ತಡ ಯಾಕೆ ಮಾದಬೇಕು. ಎಂದು ಜೋಯಿಸರು, ತಮ್ಮ ಸಂಗಡವೇ ತಂದಿದ್ದ ಬಿಳಿಯ ಕಾಗದದ ಮೇಲೆ ಲಗ್ನಪತ್ರಿಕೆಯನ್ನೂ ಬರೆದುಬಿಟ್ಟರು. 'ಜಾತಕಗಳು ಕೂಡುತ್ತವೆ. ವೈಶಾಖದಲ್ಲಿ ಹ್ಯಾಗೂ ಒಳ್ಳೆಯ ಲಗ್ನವಿದೆ. ಹುಣಿಸೇನೀರು ಅನ್ನ ಮಾಡಿ ಬೇಕಾದರೂ ಮದುವೆ ಮುಗಿಸಿಬಿಡಿ'– ಎಂದಾಗ ಹುಡುಗಿಯ ತಾಯಿಗೆ ಮೈಮೇಲಿನ ಹೊರೆ ಇಳಿಸಿದಷ್ಟು ಸಂತೋಷವಾಯಿತು. ಆಕೆ ಇದ್ದದ್ದರಲ್ಲಿ ಹೊಂದಿಸಿ ತುಪ್ಪನ್ನ ಪಾಯಸ ಮಾಡಿ ಬಡಿಸಿದರು. ತಾಂಬೂಲ ತೆಗೆದುಕೊಂಡ ಇವರು ಕ್ಯದುರೆ ಗಾಡಿ ಹತ್ತಿ ತಿಪಟೂರಿಗೆ ಬರುವ ಹೊತ್ತಿಗೆ ಊರಿನ ಕಡೆಯ ಮೋಟಾರು ಸಿಕ್ಕಿದರೂ ಇಬ್ಬರಲ್ಲಿ ಯಾರೂ ಊರಿಗೆ ಹೊರಡಲು ಆತುರರಾಗಿರಲಿಲ್ಲ. ಹೋಟೆಲಿನವರು ಆಲುಗಡ್ಡೆ ನೀರುಳ್ಳಿ ಹಾಕಿ ಚೆನ್ನಾಗಿ ಹುಳಿಮಾಡುತ್ತಾರೆ. ನಾಳೆ ಬೆಳಿಗ್ಗೆ ಹೋದರಾಯಿತು. ಜೋಯಿಸರು ಜವಳಿ ಅಂಗಡಿಗೆ ಹೋಗಿ ಒಂದು ಜೊತೆ ಪಂಚೆ ಒಂದು ಸೀರೆ ತೆಗೆದುಕೊಂಡರು. ಅವರು ದುಡ್ಡು ತಂದಿರಲಿಲ್ಲ. ಚೆನ್ನಿಗರಾಯರೇ ಇಪ್ಪತ್ತೆರಡು ರೂಪಾಯಿಯನ್ನು ಅಂಗಡಿಯವನಿಗೆ ಕೊಟ್ಟರು.

ಚೆನ್ನಿಗರಾಯರ ಮದುವೆ ಸುದ್ದಿ ಊರಲ್ಲಿ ಎಲ್ಲರಿಗೂ ತಿಳಿಯಿತು.'ಆ ವಯ್ಯಂಗೆ ಹತ್ತಿರಾ ಚಟಾ ನೋಡು– ಅದು ನಿಜವಾಗ್ಲೂ ಎಂಡ್ತಿ ಆಳ್ತೈತಾ?' ಎಂದು ನರಸಿ ಆಡಿಕೊಂಡರೆ ಸರ್ವಕ್ಕ, 'ಆ ಯಮ್ಮ ಒಂದು ನೀಯುಸ್ತು ಅಂದ್ರೆ ಇನ್ನು ಈ ವಯ್ಯನ್ನ ಕಟ್ಕಂಡ ಹುಡುಗಿ ನೀಯುಸ್ತೈತಾ!' ಎಂದು ಉದ್ಗಾರ ತೆಗೆದಳು. ರೇವಣಶೆಟ್ಟಿ ಒಂದು ದಿನ ಇವರಿಗೆ ಸಿಕ್ಕಿ, 'ಶ್ಯಾನುಭೋಗ್ರೇ, ನೀವು ರಾಜಾ ಕೆಲ್ಸ ಮಾಡಿದ್ರಿ. ಮದುವೆ ಮಾಡ್ಕಳಿ. ಇಲ್ದೆ ಇದ್ರೆ ಬೇಸಿ ಹಾಕಾರು ಯಾರು?–ಎಂದು ಹುರಿದುಂಬಿಸಿದ. ತಾಯಿ ಗಂಗಮ್ಮ ಮಾತ್ರ ಈ ವಿಷಯದಲ್ಲಿ ನಿರಾಸಕ್ತಿ ತೋರಿಸಿದಳು. 'ಯಾವ ಮುಂಡೆ ಬಂದ್ರೆ ನಂಗೆ ಮಾಡೂದೇನು? ಯಾವಳೂ ನನ್ನ ಸೇವೆ ಮಾಡುಲ್ಲ'–ಎಂದುಬಿಟ್ಟಳು.

ಒಂದು ವಾರದಲ್ಲಿ ಚೈತ್ರ ಕಳೆದು ವೈಶಾಖ ಬಂತು. ಈ ತಿಂಗಳೇ ಮದುವೆಯಾಗಬೇಕು. ಮೊದಲ ಹೆಂಡತಿಯದೇ ಓಲೆ ಮೂಗುಬೊಟ್ಟುಗಳಿವೆ. ಬೂದಿಯಲ್ಲಿ ಹುಡುಕಿ ತೆಗೆದ ಮಾಂಗಲ್ಯದ ಚಿನ್ನ ಸಹ ಇದೆ. ಮೇಲೆ ನೂರು ರೂಪಾಯಿ ಹೊಂದಿಸಿಕೊಂಡರೆ ಸಾಕು. ಒಂದು ಹಸುವನ್ನು ನೂರು ರೂಪಾಯಿಗೆ ಮಾರಿ ಅದನ್ನೂ ಹೊಂದಿಸಿಕೊಂಡರು. ಆದರೆ ಮುಂದಿನ ಮಾತಾಡಲು ಹೆಣ್ಣಿನ ಕಡೆಯ ಯಾರೂ ಬರಲಿಲ್ಲ. ಇನ್ನು ಹತ್ತು ಹನ್ನೆರಡು ದಿನದಲ್ಲಿ ತಮ್ಮ ತೌರಿನ ಕಡೆಯ ಸಂಬಂಧಿ ಸಿದ್ಧವಳ್ಳಿ ವೆಂಕಟರಾಮಯ್ಯ ಅನ್ನುವವರನ್ನು ಕಳಿಸುವುದಾಗಿ ಹುಡುಗಿಯ ತಾಯಿ ಹೇಳಿದ್ದರು. ಆದರೆ ಯಾರೂ ಬರಲಿಲ್ಲ. ಮದುವೆ ಇನ್ನು ಆರೇ ದಿನ ಉಳಿಯಿತು. ಚೆನ್ನಿಗರಾಯರಿಗೆ ಆತಂಕ ತಡೆಯಲಾಗಲಿಲ್ಲ. ಜೋಯಿಸರನ್ನು ಕೇಳಿದರೆ–'ಏನು ಸಮಾಚಾರವೋ ಏನೋ? ನಂಗೆ ಪುರುಸೊತ್ತಿಲ್ಲ. ನೀನೇ ಹೋಗಿ ಬಾ' ಎಂದರು. ಇವರೇ ಒಂದು ದಿನ ತಿಪಟೂರಿಗೆ ಹೋಗಿ, ಹಿಂದಿನ ದಿನದಂತೆಯೇ ಕ್ಷೌರ ಮಾಡಿಸಿಕೊಂಡು ಇಸ್ತ್ರಿ ಬಟ್ಟೆ ಧರಿಸಿ ಬೇವಿನಹಳ್ಳಿಗೆ ಹೋದರೆ ಮನೆಯಲ್ಲಿ ವೃದ್ಧ ವಯಸ್ಸಿನ ಒಬ್ಬ ಗಂಡಸರಿದ್ದರು. ತಮ್ಮ ಪರಿಚಯವನ್ನು ತಾವೇ ಹೇಳಿಕೊಂಡ ಚೆನ್ನಿಗರಾಯರು ಅವರೊಡನೆ ಮಾತು ಪ್ರಾರಂಭಿಸುವಷ್ಟರಲ್ಲಿ ಒಳಗಿನಿಂದ ಬಂದ ಹುಡುಗಿಯ ತಾಯಿ ಪಟಪಟನೆ ಅಂದುಬಿಟ್ಟಳು: 'ಯಾವ ಗಂಡೂ ಸಿಕ್ಕದೇ ಇದ್ರೆ ನಮ್ಮ ಹುಡುಗೀನ ಬಾವಿಗೆ ನೀಕ್ತೀನಿ. ನಿಮ್ಮಂಥೋರಿಗೆ ಕೊಡುಲ್ಲ.'

ಶ್ಯಾನುಭೊಗ್ ಚೆನ್ನಿಗರಾಯರು ಏನೂ ಅರ್ಥವಾಗದೆ ಆಕೆಯನ್ನು ಪಿಳಪಿಳನೆ ನೋಡುತ್ತಾ ಕೂತುಬಿಟ್ಟರು. ಆಕೆಯೇ ಮಾತನಾಡಿದರು: 'ಆ ಜೋಯಿಸ ಮುಂಡೇಗಂಡ ದೂರದ ಗುರುತಿನೋನು ಅಂತ ನಂಬಿದ್ರೆ ಗಂಡು ಗೊತ್ತು ಮಾಡಿ ಕೊಡ್ತೀನಿ ಅಂತ ನನ್ನ ಹತ್ರ ಇಪ್ಪತ್ತು ರೂಪಾಯಿ ಕಿತ್ತು ನಿಮ್ಮಂತ ನಾಮರ್ದ್ ಮುದುಕನ್ನ ತೋರಿಸಿ ಮೋಸ ಮಾಡಿಬಿಟ್ಟ. ನಂಗೆ ಸದ್ಯಕ್ಕೆ ಒಬ್ಬ ಪುಣ್ಯಾತ್ಮರು ಎಲ್ಲಾ ಮೊದ್ಲೇ ಹೇಳಿದ್ರು.'

'ನನನನನ್ನ ತತಪ್ಪೇನು ಹ್ಯೇ ಹ್ಯೇ ಹ್ಯೇಳಿ ಅಮ್ಮ'– ಇವರಿ ಧೈರ್ಯ ತಂದುಕೊಂಡು ಕೇಳಿದರು.

'ಏನು ತಪ್ಪೆ? ಮೊದಲ ಹೆಂಡ್ತೀನ ಹ್ಯಾಗೆ ಬಾಳಿಸಿದ್ರಿ ನೀವು? ಎಲೆ ಹಚ್ಚಿ ಜೀವನ ಮಾಡ್ತಿಲ್ವೆ ಅವಳು? ಶ್ಯಾನುಭೋಗಿಕೆ ಲೆಕ್ಕ ಅವ್ಳು ಬರಿಯೂಹೊತ್ತಿಗೆ ನಡೀತಂತೆ. ನಮ್ಮ ಹುಡುಗಿಗೆ ಅದೆಲ್ಲ ಬರುಲ್ಲ. ನಿಮಗೆ ಊರಲ್ಲಿ ಹೊಲ ಎಲ್ಲಿದೆ? ಮನೆಯೂ ಮೊದಲನೆ ಹೆಂಡ್ತಿ ಕಟ್ಸಿರೂದಂತೆ. ಅವಳ ಹೆಸರಲ್ಲಿರೂ ಮನೆ ಅವಳ ಮಗುಂಗೆ ಹೋಗುತ್ತೆ. ನಿಮಗಿರೋನು ಒಬ್ಬನೇ ಮಗ ಅಂತ ಹೇಳಿದ್ರಲಾ, ಹೋದ ವರ್ಷ ಮುಂಜಿಯಾದ ಮಗ ಮದುವೆಯಾದ ಮಗಳು ಸತ್ತಿದ್ದು ಸುಳ್ಳೆ?'

'ಯ್ಯಾ ಯ್ಯಾ ಯ್ಯಾರೇಳಿದ್ರಮ್ಮ ನಿಮಗೆ ಇ ಇದೆಲ್ಲಾ?'

'ಯಾರು ಹೇಳಿದ್ರು? ನಿಮ್ಮೂರೋರೇ ಒಬ್ರು ಜಂಗಮಯ್ನೋರು ಮುದುಕ್ರು ಹೇಳಿದ್ರು. ನಮ್ಮನೆಗೇ ಬಂದಿದ್ರು. ಅದೆಲ್ಲ ಸುಳ್ಳೋ ನಿಜವೋ ಹೇಳಿ. ನಿಮ್ಮ ವಯಸ್ಸು ಮೂವತ್ತೆರಡೇ? ನಿಜ ಹೇಳಿ.

'ಎಲಾ, ಅವನವ್ವನ'–ಎನ್ನುವಾಗ ಶ್ಯಾನುಭೋಗರಿಗೆ ತಕ್ಷಣ ಮಾದೇವಯ್ಯನವರ ನೆನಪಾಗಿ ಪ್ರಚಂಡ ಕೋಪ

ಬಂತು.
'ನಿಮ್ಮ ಬಾಯ್ಲಿ ಹೊರಡೂ ಮಾತು ನೋಡಿ. ಮೊದಲ ಹೆಂಡ್ತಿ ಹತ್ರ ನೀವು ಹೀಗೇ ಮಾತಾಡ್ತಾ ಇದ್ರಂತೆ. ನಿಮ್ಮಂಥೋರಿಗೆ ಒಂದು ಲೋಟ ಗಂಗೋದಕನೂ ಕೊಡಬಾರ್ದು. ಎದ್ಹೋಗಿ ಇಲ್ಲಿಂದ.'
ಚೆನ್ನಿಗರಾಯರು ಎದ್ದು ಹೊರಗೆ ಬಂದರು. ಆ ಊರಿನಲ್ಲಿ ಇನ್ನೆಲ್ಲಿಯೂ ಕುಳಿತುಕೊಳ್ಳಲು ಭಯವಾಗಿ ಸೀದಾ ತಿಪಟೂರಿಗೆ ಬಂದರು. 'ಈ ಮಾದೇವಯ್ಯ, ಅವನವ್ವನ ಅವನಿಗೇನು ಬಂದಿತ್ತು ಹೀಗೆ ಈ ಊರಿಗೆ ಬಂದು ಚಾಡಿ ಹೇಳುಕ್ಕೆ? ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ ಮಾಡ್ಬೇಕು. ಈ ಮುದುಕ, ಆಗೂ ಮದಿವ್ಗೆ ವಿಗ್ನ ಮಾಡಿದ್ನಲ, ಇವನ ವಂಶ ಹಾಳಾಗ' ಎಂದು ಬೈದುಕೊಳ್ಳುತ್ತಾ ಹೋಟೆಲಿಗೆ ಹೋಗಿ ಊಟಕ್ಕೆ ಕೂತರು. ತಕ್ಷಣ ಊರಿಗೆ ಹೋಗಬೇಕೆನಿಸಲಿಲ್ಲ. ಹಸು ಮಾರಿ ಮದುವೆಗೆಂದು ಇಟ್ಟುಕೊಂಡಿದ್ದ ದುಡ್ಡಿನಲ್ಲಿ ತೊಂಬತ್ತು ರೂಪಾಯಿ ಉಳಿದಿತ್ತು. ಸುಖವಾಗಿ ಇಪ್ಪತ್ತು ದಿನಗಳು ತಿಪಟೂರಿನಲ್ಲಿಯೇ ಇದ್ದರು. ದಿವಾನ್ ಛತ್ರದ ಜಗುಲಿಯಿತ್ತು. ಊರು ತುಂಬ ಹೋಟೆಲುಗಳಿದ್ದವು.
ಕೈಲಿ ಕಾಸು ಮುಗಿದಮೇಲೆ ಊರಿಗೆ ಹೋಗುತ್ತಾರೆ: ಅಷ್ಟರಲ್ಲಿ ಮುಂಗಾರು ಮಳೆ ಬಿದ್ದಿದೆ. ಜನಗಳೆಲ್ಲ ಶೆಡ್ಡು ಬಿಟ್ಟು ಊರಿಗೆ ಹೋಗಿದ್ದಾರೆ. ತಾವು ಯಾವ ಮನೆಗೆ ಹೋಗಬೇಕೆಂಬುದು ಗೊತ್ತಿಲ್ಲ ನೇರವಾಗಿ ಅಮ್ಮನ ಮನೆಯಾದ ಹನುಮಂತರಾಯನ ಗುಡಿಗೆ ಹೋದರು. ಗಂಗಮ್ಮ ಎಂದಳು: 'ನಿನ್ನ ಶ್ಯಾನುಬಾಕಿ ಹೋಯ್ತಲ್ಲೋ ಮುಠಾಳ ಸೂಳೇಮಗನೆ?'
'ಎಲ್ಲಿಗೆ ಹೋಯ್ತಮ್ಮ?'
'ನಿನ್ನ ಹೆಂಡ್ತಿ ಸತ್ತಾಗ್ನಿಂದ ಲೆಕ್ಕ ಬರ್ದಿರ್ಲಿಲ್ಲ. ಈಗ ಎರಡು ಕಂತಾದ್ರೂ ಪಟೇಲನಿಗೆ ವಸೂಲಿಪಟ್ಟಿ ಕೊಟ್ಟಿಲ್ಲ. ಹಾಗಂತ ಶೇಕ್‌ದಾರ್ರು ಬಂದ್ರೆ ನೀನು ಊರಲ್ಲೇ ಇಲ್ಲ. ಪಟೇಲ ಶಿವೇಗೌಡ, ಶಿವಲಿಂಗ, ಇಬ್ರೂ ಹೋಗಿ ಅಮಲ್‌ದಾರ್ ಧಣಿಗಳನ್ನ ಕಂಡ್ರಂತೆ. ಶೇಕ್‌ದಾರ್ರು ಪೀಲೀಸ್ನೋರುನ್ನ ಕರ್ಕಂಡ್ ಬಂದು ಗುಂಡೆಗೌಡನ ಮನೆ ಬಾಗಿಲು ಬೀಗ ಒಡೆಸಿ ಪುಸ್ತಕ ಎಲ್ಲ ಶಿವಲಿಂಗುಂಗೆ ಕೊಡಿಸಿದ್ರು. ಈಗ ಅವ್ನೇ ಶ್ಯಾನ್‌ಬಾಗ.'
ಚೆನ್ನಿಗರಾಯರು ಸತ್ತ ಹೆಣದಂತೆ ಕಣ್ಣು ಅಗಲಿಸಿ ಕೂತುಬಿಟ್ಟರು.
'ನಾನೀಗ ಬಂದಿದೀನಿ. ನನ್ನ ಶ್ಯಾನುಬಾಕಿ ನಂಗೆ ಕೊಡ್ಸಿ ಮಾಸ್ವಾಮಿ ಅಂತ ಕೇಳ್ಕ ಹೋಗೋ.'
ಯಾರನ್ನ ಕೇಳುವುದು? ಎಷ್ಟು ದಿನ ಎಲ್ಲಿಗೆ ಹೋಗಿದ್ದೆ ಅಂದ್ರೇನು ಹೇಳೂದು? ಅಲ್ಲದೆ ಲೆಕ್ಕ ಬರೆಯೂರು ಯಾರು? ಈ ದಿನಸಿ ಲೆಕ್ಕ, ಇದರವ್ವನಾ, ಬಲು ತರಲೆ. ಅವರಿಗೆ ಒಂದು ಉಪಾಯ ಹೊಳೆಯಿತು. ಅವರೇ ಎದ್ದು ಶಿವಲಿಂಗನ ಮನೆಗೆ ಹೋದರು. ಶ್ಯಾನುಭೋಗ ಶಿವಲಿಂಗ ಹಳೇ ಲೆಕ್ಕ ಬಲ್ಲ. ಹೊಸ ದಿನಸಿ ಲೆಕ್ಕ ಅವನಿಗೂ ಕಷ್ಟವೇ. ಕಂಬನಕೆರೆಯ ಶ್ಯಾನುಭೋಗರಿಂದ ಹೇಳಿಸಿಕೊಂಡು ಬಂದು ಅದರಂತೆ ಬರೆಯುತ್ತಾ ಕುಳಿತಿದ್ದ.
'ಏನಯ್ಯಾ ಬಂದೆ?'–ಶ್ಯಾನುಭೋಗಿಕೆಯ ಗತ್ತಿನಲ್ಲಿ ಅವನು ಕೇಳಿದ.
'ಸಿವಲಿಂಗೇಗೌಡ್ರೇ, ನನ್ನ ಶ್ಯಾನುಭೋಗಿಕೆ ಮೊದ್ಲು ನೀವು ನೋಡ್ತಿದ್ರಿ. ಈಗಲೂ ನೋಡ್ಕಳಿ. ವರ್ಷಕ್ಕೊಂದು ಸಲ ಪೋಟಿಗೇಲಿ ಏನು ಕೊಡ್ತೀರಿ ಅಂತ ಒಂದು ಮಾತು ಗಟ್ಟಿಮಾಡಿ.'
'ಶ್ಯಾನುಬಾಕಿ ನೀನೇನು ನಂಗೆ ಕೊಟ್ಟಿಲ್ಲ ಹ್ವಾಗಯ್ಯಾ. ಸರ್ಕಾರಿ ತರಫ್ ಬಂದೈತೆ.'
'ಹಾಗಾದ್ರೆ ಏನೂ ಕೊಡುಲ್ವೆ?'
'ಒಂದು ಕೂದ್ಲೂ ಕೊಡಾಕುಲ್ಲ. ಎದ್ಹೋಯ್ತೀಯೋ ಕುಳವಾಡಿ ಕರಸಿ ನಿನ್ನ ಕುತ್ತಿಗೆ ಹಿಡಿದು ಆಚೆಗ್ ನೂಕುಸ್ಲೋ?'
ಅವರಿಗೆ ಅಪಮಾನವೆನಿಸಿತು. 'ನಿನ್ನವ್ವನ'–ಎನ್ನಬೇಕೆಂದು ಬಾಯಿಗೆ ಬಂತು. ಆದರೆ ಸಿವಲಿಂಗ ಕುಳುವಾಡಿ ಕರೆಸಿ ಏನಾದರೂ ಮಾಡಿಸಿಯಾನೆಂಬ ಹೆದರಿಕೆಯಾಗಿ ಸುಮ್ಮನೆ ಬಂದುಬಿಟ್ಟರು. ಸಿಟ್ಟಿನಿಂದ ಮೈ ಎಲ್ಲ ಉರಿಯುತ್ತಿತ್ತು.
ದಾರಿಯಲ್ಲೇ ಮಾದೇವಯ್ಯನವರ ಗುಡಿ. ಅಯ್ಯನವರು ಜಗುಲಿಯ ಮೇಲೆ ಕೂತು ಹೊಗೆಸೊಪ್ಪು ತಿಕ್ಕುತ್ತಿದ್ದರು. ಅವರನ್ನು ಕಂಡ ತಕ್ಷಣ ಚೆನ್ನಿಗರಾಯರ ಸಿಟ್ಟೆಲ್ಲ ಎದ್ದು ನಿಂತಿತು. ತಾವೂ ಜಗುಲಿಯ ಮೇಲೆ ಬಂದು ಕೂರು ಕೇಳಿದರು: 'ಅಯ್ನೋರೇ. ನೀವು ನ್ಯಾಯಸ್ಥರು ಅಂತ ಮಾಡಿದ್ದೆ. ಹಿಂದುಗಡೇಲೇ ಚಾಡಿ ಹೇಳೂದು ಎಷ್ಟು ದಿನದಿಂದ ಕಲ್ತ್‌ಕಂಡ್ರಿ?'
'ನಿಮ್ಮ ಮದುವೆಗೆ ಏಟು ಬಿತ್ತು ಅಂತ ಹೀಗಂತೀರಾ?'
ಅವರು ಸ್ವಲ್ಪವೂ ತಾಳ್ಮೆಗೆಡದೆ ಶಾಂತವಾಗಿ ಕೇಳಿದ ರೀತಿಗೆ ಇನ್ನಷ್ಟು ಸಿಟ್ಟು ಬಂತು. 'ಹೂಂ'– ಎಂದರು. ಸ್ವಂತ ಲೆಕ್ಕ ಬರ್ದು ಶ್ಯಾನುಬಾಕಿ ಮಾಡ್ತೀರಾ? ಜಮೀನಿನಲ್ಲಿ ಬತ್ತೈತಿ ಅನ್ನಾಕೆ ಸ್ವಲ ಪಲ ಐತಾ? ಮನೆ ನಂಜವ್ವನ ಹೆಸರಲ್ಲೈತಿ. ಅದು ಏನಿದ್ರೂ ವಿಶ್ವಣ್ಣಂಗೆ ಸೇರ್ತೈತೆ. ನಿಮಗಾಗಿರೋ ವಯಸ್ಸೇಟು? ಆ ಚಿಕ್ಕ ಹುಡುಗೀನ ಹ್ಯಂಗೆ ಬಾಳುಸ್ತಿದ್ರಿ?'

‘ನಾಕು ಮನ್ಲಿ ತಿರಕಂಡು ತಂದು ಸಾಕ್ತಿದ್ದೆ ಕಣ್ರೀ.’
‘ನಂಜವ್ವ ಇದ್ದಾಗ ಸಾಕಿದ್ದು ನಾವೆಲ್ಲ ನೋಡ್ಲಿಲ್ವಾ? ಯಲಾರು ನಂಜವ್ವನ ಹಂಗೇ ಇರಾಕಿಲ್ಲ. ನಿಮ್ಮ ಹೊಸ ಹೆಂಡ್ತಿ ಊರಾಚೆ ಅಂಗ್ಡಿ ನರಸವ್ವನ ಹಂಗೆ ಆದ್ರೆ ಏನು ಮಾಡ್ತೀರಾ?’
ಚೆನ್ನಿಗರಾಯರಿಗೆ ಉತ್ತರ ತಿಳಿಯಲಿಲ್ಲ. ಆದರೆ ಸಿಟ್ಟು ಮಾತ್ರ ಸ್ವಲ್ಪವೂ ಇಳಿದಿರಲಿಲ್ಲ. ಅಯ್ಯನವರೇ ಎಂದರು: ‘ನಿಮ್ಮ ಸ್ವಭಾವ ನೀವು ತಿಳ್ಕಳಿ. ನಿಮ್ಮ ಕೈಲಾಗುದ್ದು ಯಾಕೆ ಬೇಕು? ಸುಮ್ಕೆ ಸನ್ಯಾಸಿ ಹಂಗೆ ಇದ್ಬುಡಿ. ಇನ್ನೇನಾರಾ ಮಾಡಬೇಕಾಗಿದ್ರೆ ವಿಶ್ವಣ್ಣಂಗೆ ಮಾಡಿ. ಈಗ ಎಲ್ಲಿ, ಸಿವೇಗೌಡ್ರ ಮನೆಗೆ ಹ್ವಾಗಿದ್ರಾ? ಏನಂದ್ರು ಅವ್ರು?’
‘ಅವನವ್ವನಾ, ಪೋಟಿಕೆ ದುಡ್ಡು ಏನೂ ಕೊಡುಲ್ಲ ಅಂದ.’
ಅಯ್ಯನವರು ಮತ್ತೆ ಏನೂ ಕೇಳಲಿಲ್ಲ. ಪಟೇಲ ಶಿವೇಗೌಡನಿಗೆ ಈಗ ಹೆಚ್ಚು ಕಮ್ಮಿ ತಮ್ಮಷ್ಟೇ ವಯಸ್ಸು. ಸಿವಲಿಂಗೇಗೌಡ ಅವನಿಗಿಂತ ಹತ್ತು ವರ್ಷಕ್ಕೆ ಚಿಕ್ಕವನಿರಬಹುದು. ಅವರಿಬ್ಬರಿಗೂ ಆಯಸ್ಸು ಕಡಿಮೆಯಾಗುವುದೇ ಇಲ್ಲ. ಪ್ರಪಂಚ ಹೀಗೆಯೇ ಇರ್ತೈತೇನೋ–ಎಂದು ಅವರು ಯೋಚಿಸತೊಡಗಿದರು. ಚೆನ್ನಿಗರಾಯರು ಅಯ್ಯನವರ ಚೀಲದಿಂದ ತೆಗೆದುಕೊಂಡು ಎಲೆ ಅಡಿಕೆ ಹೊಗೆಸೊಪ್ಪು ಅಗಿದು ತಾಯಿಯ ಮನೆಗೆ ಹೋದರು.
ಚೆನ್ನಿಗರಾಯರು ಮತ್ತೆ ಎಂಟು ದಿನ ಊರಿನಲ್ಲಿದ್ದರು. ಅಷ್ಟರಲ್ಲಿ ಉಳಿದಿದ್ದ ಒನ್ನೊಂದು ಹಸು, ಮನೆಯಲಿ ಲ್ಲದ್ದ ಪಾತ್ರೆ ಪಡಗಗಳನ್ನೆಲ್ಲ ಮಾರಿಹಾಕಿದರು. ನಂಜಮ್ಮನ ಓಲೆ ಮೂಗುಬಟ್ಟುಗಳನ್ನು ಕಾಶಿಂಬಡ್ಡಿಗೆ ಸೀಯ್ದರು. ಆಮೇಲೆ ಎರಡು ತಿಂಗಳು ಊರಿನಲ್ಲೇ ಇರಲಿಲ್ಲ.
ಜೀವನದಲ್ಲಿ ಏನುಂಟು? ಮಾದೇವಯ್ಯನವರಂತೆ ತಾವೂ ಸನ್ಯಾಸಿಯಾಗಿ ಇರಬೇಕೆಂದು ನಿಶ್ಚಯಿಸಿದ ಅವರು ಊರೂರು ಸುತ್ತಿಕೊಂಡು ಮಾಲೆಕಲ್ಲು ತಿರುಪತಿಗೆ ಹೋದರು. ಅರಸೀಕೆರೆಯಿಂದ ಕೊಂಡು ತಂದಿದ್ದ ಕಾವಿಬಣ್ಣದ ಪಂಚೆ ಶರಟುಗಳನ್ನು ಹಾಕಿಕೊಂಡು ತಿಮ್ಮಪ್ಪನ ಮುಂದೆ ಅಡ್ಡಬಿದ್ದು, ಮನಸ್ಸಿನಲ್ಲೆ ಸನ್ಯಾಸ ಸ್ವೀಕಾರ ಮಾಡಿದರು. ಸಂಜೆಯ ವೇಳೆಗೆ ಹಸಿವಾಯಿತು. ಬೆಟ್ಟದಮೇಲೆ ಸನ್ಯಾಸಿಗೆ ಭಿಕ್ಷೆ ನೀಡುವ ಸಂಸಾರಿಗಳಿಲ್ಲ. ಬೆಟ್ಟವನ್ನಿಳಿದು ಹತ್ತಿರದ ಒಂದು ಹಳ್ಳಿಗೆ ಹೋಗಿ ಭಿಕ್ಷೆಮಾಡಿ ಅನ್ನ ಎಸರು ಮುದ್ದೆಗಳನ್ನು ಉಂಡರು. ಮಲಗಲು ಇವರು ಜಗುಲಿಯ ಮೇಲೆ ಜಾಗ ಕೇಳಿದ ಮನೆಯ ಗೌಡ ವೀಳ್ಯದೆಲೆ, ಅಡಿಕೆ, ಹೊಗೆಸೊಪ್ಪು ಕೊಟ್ಟ. ಸನ್ಯಾಸ ಕೆಟ್ಟದ್ದೇನೂ ಅಲ್ಲವೆನಿಸಿತು.
ಆದರೆ ಎರಡು ತಿಂಗಳಿನಲ್ಲಿ ಆ ಜೀವನ ಬೇಸರ ಬಂದುಬಿಟ್ಟಿತು. ಮೇಟಿಕುರಿಕೆ, ಕಣಕಟ್ಟೆ, ಹುಳಿಯಾರು, ಬೂದಾಳು ಸುತ್ತುಗಳಲ್ಲಿ ಎರಡು ತಿಂಗಳು ಸಂಚರಿಸಿ ಊರೂರಿನಲ್ಲಿ ಮಾಡಿದ ಅಡಿಗೆಯ ಭಿಕ್ಷೆ ಎತ್ತಿ ಉಣ್ಣುವುದರಲ್ಲಿ ಅವರಿಗೆ ಸಾಕಾಗಿಹೋಯಿತು. ದಿನಾ ಒಂದೊಂದು ಊರು ಸುತ್ತಬೇಕು. ಸನ್ಯಾಸಸ್ವೀಕಾರ ಮಾಡಿದಮೇಲೆ ಅವರು, ತಾವು ಬ್ರಾಹ್ಮಣರೆಂಬ ಮಡಿಯನ್ನು ಬಿಟ್ಟು ಎಲ್ಲ ಜಾತಿಯ ಮನೆಗಳಲ್ಲೂ ಉಣ್ಣುತ್ತಿದ್ದರು. ಕೆಲವು ಮನೆಗಳವರು–‘ಗೇಯ್ಕಂಡ್ ತಿನ್ನಕ್ ಆಗಾಕುಲ್ವೇನಯ್ಯ?’ ಎಂದು ಮುಖಕ್ಕೆ ಹೊಡೆದಂತೆ ಎಂದುಬಿಡುತ್ತಿದ್ದರು.
ಬೇಸತ್ತ ಅವರು ಒಂದು ದಿನ ಊರಿಗೆ ಹೋಗಬೇಕೆಂದು ನಿಶ್ಚಯಿಸಿದರು. ಆದರೆ ಊರಿನಲ್ಲಾದರೂ ಯಾರುಂಟು? ಏನುಂಟು? ಹೆಂಡತಿ ಎನ್ನಿಸಿಕೊಂಡಿದ್ದ ‘ಆ ಮುಂಡೆ’ ಬದುಕಿದ್ದರೆ ಚನ್ನಾಗಿತ್ತು. ಯಾರಿಲ್ಲದಿ ದ್ರೂ ಬ್ಯಾಡ, ನಮ್ಮಮ್ಮ ನನ್ನ ಕೈಬಿಡುಲ್ಲ ಎಂದು ಯೋಚಿಸಿದ ಅವರು, ದಾರಿ ಕೇಳಿಕೊಂಡು ಹಾಲುಕುರಿಕೆಯ ಮಾರ್ಗವಾಗಿ ತಿಪಟೂರಿಗೆ ಬಂದು ಅಲ್ಲಿಂದ ಊರು ಮುಟ್ಟಿದರು.
ಗಂಗಮ್ಮ ಹನುಮಂತರಾಯನ ಗುಡಿಯಲ್ಲೆ ಇದ್ದಳು. ಈಗ ಅವಳೂ ಒಬ್ಬಳೇ ಹಳ್ಳಿಗಳಿಗೆ ಹೋಗಬೇಕು. ಅವಳು ತಿರಿಯಬಲ್ಲಳೇ ಹೊರತು ತಿರಿದುದನ್ನು ಹೊರಲಾರಳು. ತಾನು ಮೆಚ್ಚಿದ ಕಂದ ಅಪ್ಪಣ್ಣಯ್ಯ ಇನ್ನು ಹತ್ತಿರ ಬರುವಂತೆ ಕಾಣಿಸುವುದಿಲ್ಲ. ನನ್ನ ಅದೃಷ್ಟ ಕೆಟ್ಟದ್ದು, ಶನಿಮಾರಾಯ ಹೆಗಲೇರಿದಾನೆ–ಎಂದು ಕೊರಗುತ್ತಿದ್ದ ಅವಳ ಗುಡಿಯ ಮುಂದೆ ಒಂದು ದಿನ ಹಿರಿಯ ಮಗ ಶ್ಯಾಭೊಗ ಚೆನ್ನಿಗರಾಯ ಸನ್ಯಾಸಿ ವೇಷದಲ್ಲಿ ಬಂದುನಿಂತ. ಕೊಳೆಯಾದ ಕಾವಿ ಪಂಚೆ, ಇನ್ನೂ ಕೊಳೆಟ್ಟಿದ ಅಂಗಿ, ಮಾದೇವಯ್ಯನವರಂಥದೇ ವೇಷ. ಮಾದೇವಯ್ಯನವರು ತಲೆ ಗಡ್ಡಗಳನ್ನು ಶುಭ್ರವಾಗಿ ಬೋಳಿಸಿಕೊಳ್ಳುತ್ತಿದ್ದರು. ಆದರೆ ಅವಳ ಈ ಮಗನ ತಲೆ ಬೆಳೆದು ಇಳಿದಿದೆ. ಗಡ್ಡ ಬಿಳಿಕಪ್ಪುಗಳ ನೊದೆಯಾಗಿದೆ. ಒಂದು ನಿಮಿಷ ಅವಳಿಗೆ ಗುರುತು ಸಿಕ್ಕಲಿಲ್ಲ. ಆಮೇಲೆ ಅವಳೇ–‘ಇದೇನೋ ಸೂಳೇಮಗನೆ ಹೀಗಾಗಿದೀಯಾ?’ ಎಂದು ಅಂತಃಕರಣ ತುಂಬಿಬಂದು ಕಣ್ಣೀರುಹಾಕಿದಳು.
ಇನ್ನೇನಿದೆಯಮ್ಮ ಜೀವನದಾಗೆ? ಯಾರಿದಾರೆ ನಂಗೆ? ಅದ್ಕೇ ಯಾವ್ದೂ ಬ್ಯಾಡ ಅಂತ ಸನ್ಯಾಸಿಯಾಗ್ಬಿಟ್ಟೆ.’
‘ಥೂಮುಂಡೇಮಗನೆ, ಬಿಡ್ತು ಅನ್ನೋ. ನಾನೇನ್ ಸತ್ಹೋಗಿದೀನೇನೋ? ಯಾರಾದ್ರೂ ನೋಡಿಯಾರು. ಒಳಕ್ಕೆ ಬಾ. ಆ ಕಾವಿಶಾಟ ಕಿತ್‌ಹಾಕಿ ಬ್ಯಾರೆಪಂಚೆ ಸುತ್ಕ. ನಾಳೆ ದಿನ ರುದ್ರಣ್ಣನ ಕರೆಸಿ ಚೌರ ಮಾಡಿಸ್ಕಳೂವಂತೆ.’

ಚೆನ್ನಿಗರಾಯರು ಸನ್ಯಾಸವನ್ನು ತ್ಯಜಿಸಿದರು.

ತಾಯಿ ಮಗ ಒಂದಾದರು. ಇವರಿಗೆ ಅಪ್ಪಣ್ಣಯ್ಯನಂತೆ ದೊಡ್ಡ ಹೊರೆ ಹೊರುವ ಅಭ್ಯಾಸವಿಲ್ಲ. ಆದರೂ ತಾಯಿಗೆ ಒಂದು ಆಸರೆ ಸಿಕ್ಕಿತು. ಅವಳು ಹಳ್ಳಿಗಳಿಗೆ ಮನೆಮನೆಗೆ ಹೋಗಿ ದೇಶಾವರಿ ಮಾಡುವಾಗ ಇವರು ಯಾರ ಮನೆಯ ಜಗುಲಿಯ ಮೇಲಾದರೂ ವೀಳ್ಯದೆಲೆ ಹೊಗೆಸೊಪ್ಪು ಹಾಕಿ ಬಾಯಿತುಂಬ ತಂಬುಲದ ರಸವನ್ನು ಆನಂದಿಸುತ್ತಿದ್ದರು.

ಹೇಗೂ ನಂಜಮ್ಮ ಕಟ್ಟಿದ್ದ ಮನೆಯಿತ್ತು. ಗುಡಿಯಲ್ಲಿದ್ದರೆ ದಿನಾ ಪೂಜೆ ಮಾಡಬೇಕು. ಪೌಳಿಯನ್ನೂ ಸೇರಿಸಿ ಗುಡಿಸಿ ತೊಳೆದು ಶುಭ್ರವಾಗಿಡಬೇಕು. ಆದುದರಿಂದ ತಾಯಿ ಮಗ ಇಬ್ಬರೂ ಸೇರಿ ಹೊಸ ಮನೆಗೆ ಕೆಮ್ಮಣ್ಣು ಗಾಜು ಮಾಡಿಸಿ ಬಾಗಿಲಿಗೆ ಕದ, ಚಿಲಕ, ಹಾಕಿಸಿದರು. ಒಂದು ದಿನ ಗಂಗಮ್ಮನೇ ಹೊಸಮನೆಯ ಒಳಗಡೆ ಹಾಲು ಉಕ್ಕಿಸಿದಳು. ಜೋಯಿಸಪ್ಪಯರನ್ನು ಕರೆಸಿ. 'ಸ್ವಸೆ ಸತ್ತು ವರ್ಷ ತುಂಬಿಲ್ಲ. ಹ್ವಸಮನೆಗೆ ಹೋಗೂ ಸಾಸ್ತ್ರ ಮಾಡೂಹಾಗಿಲ್ಲ. ಇದ ಒಪ್ಕಾಬೇಕು. ನಾನು ಬಡಮುಂಡೆ'–ಎಂದು ಪಾಯಸದ ಅಡಿಗೆ ಮಾಡಿ ಹಾಕಿ, ತಲಾ ಎರಡೆರಡು ರೂಪಾಯಿ ದಕ್ಷಿಣೆ ಕೊಟ್ಟು ಅಡ್ಡಬಿದ್ದಳು.

ಇದುವರೆಗೂ ನಂಜಮ್ಮ ವಾಸವಾಗಿದ್ದ ಗುಂಡೇಗೌಡರ ಮನೆಯಲ್ಲಿ ಯಾರೂ ಇಲ್ಲ. ರಾಮಸಂದ್ರದ ಕುರುಬರಹಟ್ಟಿ ಮುದ್ದಯ್ಯ ಗುಂಡೇಗೌಡರ ನೆಂಟ. ತಾನು ಉಪಯೋಗಿಸುವುದಾಗಿ ಗುಂಡೇಗೌಡರ ಮಗನಿಗೆ ಹೇಳಿ ಮನೆಯ ಬೀಗದ ಕೈ ತಂದ. ಆದರೆ ಸಾಲಾಗಿ ಮೂರು ಜನರನ್ನು ಮಾರಿ ಆಹುತಿ ತೆಗೆದುಕೊಂಡ ಆ ಮನೆಗೆ ಬರಲು ಶಂಕೆಯಾಗಿ, ಸರಿಯಾದ ಜೋಯಿಸರಿಂದ ಕಾವು ಕಟ್ಟಳೆ ಮಾಡಿಸುವ ತನಕ ತನ್ನ ಹಳೇ ಮುರುಕಲು ಮನೆಯಲ್ಲೇ ಇರಲು ನಿಶ್ಚಯಿಸಿ, ಆ ಮನೆಗೆ ಬೀಗ ಹಾಕಿಕೊಂಡ.

ಅಧ್ಯಾಯ 16

– 1 –

ಮಾದೇವಯ್ಯನವರು ಈ ಊರಿಗೆ ಬಂದು ನಲವತ್ತೈದು ವರ್ಷದಮೇಲೆ ಆಗಿದೆ. ಯಾರ ಪರಿಚಯವೂ ಬೇಡ., ಯಾರ ಸ್ನೇಹವೂ ಬೇಡ ಎಂಬ ರೀತಿಯಲ್ಲಿ ಅವರು ಇಲ್ಲಿ ತಮ್ಮ ಜೀವನವನ್ನು ಪ್ರಾರಂಭಿಸಿದ್ದರು. ಆದರೆ ದಿನ ಕಳೆದಂತೆ ಹತ್ತು ಜನರ ಪರಿಚಯವಾಯಿತು; ಸುತ್ತ ಎಷ್ಟೋ ಹಳ್ಳಿಗಳ ಹುರುತಾಯಿತು. ಯಾರ ತಂಟೆಗೂ ಹೋಗದೆ, ಯಾರೊಡನೆಯೂ ಅಂಟದೆ ಇರುತ್ತಿದ್ದ ಅವರಿಗೆ ಇಲ್ಲಿ ಬೇಸರವಾಗುವ ಕಾರಣವಿರಲಿಲ್ಲ. ಯಾವ ಊರಿನಲ್ಲಿದ್ದರೂ ಕಹಿ ಅನುಭವವಾಗುವ ಪ್ರಸಂಗ ಹುಟ್ಟಬೇಲಿರಲಿಲ್ಲ. ಅಂದರೂ ಒಂದು ಸಲ ಬೇಸರವಾಗಿ ಈ ಊರು ಬಿಟ್ಟು ಕಾಶಿಗೆ ಹೊರಟುಹೋಗಿದ್ದರು. ಎಷ್ಟೇ ಪುಣ್ಯನಗರಿಯಾದರೂ ಅದು ಹೊಂದದೆ ಮತ್ತೆ ಈ ಊರಿಗೆ ಬಂದರು. ಮತ್ತೆ ಯಾಕೆ ಹಿಂತಿರುಗಿದೆ, ಅಲ್ಲಿ ಇಲ್ಲದ್ದು ಈ ಊರಿನಲ್ಲಿ ಏನಿತ್ತು ಎಂದು ಅವರು ಎಷ್ಟೋ ಸಲ ತಮ್ಮಲ್ಲಿಯೇ ಯೋಚಿಸಿದ್ದುಂಟು. ಹವ ಹಿಡಿಯಲಿಲ್ಲವೆಂಬುದು ನಿಜವಾದರೂ ಅದೊಂದೇ ಕಾರಣದಿಂದ ಅವರು ಕಾಶಿಯನ್ನು ಬಿಡಲಿಲ್ಲ. ಅಲ್ಲಿಯ ಭಾಷೆ ಹಿಂದಿ ಅವರಿಗೆ ಗೊತ್ತಿದ್ದುದೇ. ಜಂಗಮವಾಡಿ ಮಠದಲ್ಲಿ ಊಟ ವಸತಿ ಎಲ್ಲದಕ್ಕೂ ಅನುಕೂಲವಾಗಿತ್ತು. ಇಪ್ಪತ್ತನಾಲ್ಕು ಗಂಟೆ ಬೇಕಾದರೂ ಭಜನೆ ಮಾಡಲು, ಭಜನೆ ಕೇಳಲು ಕಾಶಿಗಿಂತ ಅನುಕೂಲವಾದ ಬೇರೆ ಯಾವ ಊರೂ ಇಲ್ಲ. ಆದರೂ ಮತ್ತೆ ರಾಮಸಂದ್ರಕ್ಕೆ ಹೋಗಬೇಕೆಂಬ ಆಶೆ ಹುಟ್ಟಿತು. ಹಲವು ವರ್ಷಗಳಿಂದ ಕಳೆದ ಆ ಊರಿನ ಗುಡಿ, ಬೀದಿ, ಕೆರೆ, ಏರಿ, ಸುತ್ತಣ ಹಳ್ಳಿಗಳು ಅವರ ಚಿತ್ತವನ್ನು ಎಳೆದುವೋ, ಅಥವಾ ಆ ಊರಿನ ಜನರು ಅವರ ನೆನಪನ್ನು ಆಕ್ರಮಿಸಿದರೋ ಅವರಿಗೇ ತಿಳಿಯಲಿಲ್ಲ. ಅಂತೂ ಹಿಂತಿರುಗಿ ಬಂದರು.

ಬಂದಮೇಲೆ ಇಲ್ಲಿಗೇ ಒಗ್ಗಿಹೋಗಿದ್ದರು. ಸುತ್ತ ಊರಿನಲ್ಲಿ ಭಿಕ್ಷೆ ಮಾಡುವುದು, ಹಲ ಕೆಲವರಿಗೆ ತಮ್ಮ ಕೈಲಾದ ಸಹಾಯ ಮಾಡುವುದು, ಭಜನೆ ಇಷ್ಟರಲ್ಲಿ ಕಾಲ ಕಳೆಯುತ್ತಿದ್ದರು. ಆದರೆ ಇತ್ತೀಚೆಗೆ ಹೊತ್ತು ಹೋಗುವುದೇ ಕಷ್ಟವಾಗಿದೆ. ಇಲ್ಲಿ ತನಗೆ ಯಾರೂ ಇಲ್ಲವೆಂಬ ಭಾವನೆ ಆಕ್ರಮಿಸಿಬಿಟ್ಟಿದೆ. ಹೇಳಿ ಕೇಳಿ ನಾನೊಬ್ಬ ಸನ್ಯಾಸಿ. ಮೊದಲುತಾನೆ ಯಾರಿದ್ದರು? ಈಗ ಯಾರು ಇರಬೇಕು?–ಎಂದು ತಮ್ಮನ್ನು ತಾವೇ ಕೇಳಿಕೊಂಡರೂ ಮನಸ್ಸಿನ ಒಂಟಿತನ ಮಾತ್ರ ಹೋಗಲಿಲ್ಲ. ಯಾವ ಅಂಟೂ ಇಲ್ಲದ ಮೆಲೆ ಈ ಊರಿನಾಗೇ ಇರಬೇಕು ಅಂತ ಏನು?–ಎಂಬ ಯೋಚನೆ ಬಂತು. ಕೆಲವು ದಿನದಿಂದ ಅದೇ ಬಲವಾಗಿಬಿಟ್ಟಿದೆ. ಈ ಊರು ಬ್ಯಾಡ, ತಿಪಟೂರಿಗೋ, ತುಮಕೂರಿಗೋ ಮತ್ತೆ ಎಲ್ಲಿಗೋ ಹ್ವಾಗಿಬಿಡಾದು–ಎಂಬ ತೀರ್ಮಾನ ಹೆಚ್ಚು ಕಡಿಮೆ ಮನಸ್ಸಿನಲ್ಲಿ ನಿಂತಿದೆ.

ಹೀಗೆ ಯೋಚಿಸುತ್ತಿರುವಾಗ ಒಂದು ದಿನ ಅಪ್ಪಣ್ಣಯ್ಯ ಬಂದ. ಅವನಿಗೂ ಈ ಊರಿನಲ್ಲಿ ಯಾರೂ ಇರಲಿಲ್ಲ. ಅತ್ತಿಗೆ ಸತ್ತಮೇಲೆ ಈ

ಊರೇ ಬಿಕೋ ಎನಿಸುತ್ತಿತ್ತು. ಆದುದರಿಂದ ಇಷ್ಟು ದಿನ ಒಬ್ಬನೇ ನಾಲೆಬಯಲಿನಲ್ಲಿ ಯಾಚನೆ ಮಾಡುತ್ತಿದ್ದ. ಈಗ ಬರುವಾಗ ಒಂದೂವರೆ ಪಲ್ಲ ಅಕ್ಕಿ, ಇಪ್ಪತ್ತು ಸೇರು ತೊಗರೀಬೇಳೆ, ಒಂದುಧಡಿಯದಷ್ಟು ಮೆಣಸಿನಕಾಯಿ, ಮಸಾಲೆಪುಡಿಗಳನ್ನು ತಂದಿದ್ದಾನೆ. ಎಲ್ಲವನ್ನೂ ಬೀರೇಗೌಡನ ದೊಡ್ಡಿಯ ಜಗುಲಿಯ ಕೋಣೆಯಲ್ಲಿ ಇಟ್ಟುಕೊಂಡು ದಿನಾ ತಾನೊಬ್ಬನೇ ಅಡಿಗೆ ಮಾಡಿಕೊಳ್ಳುತ್ತಾನೆ. ಊರಿನಲ್ಲಿ ಅವನಿಗೆ ಅಯ್ಯನವರನ್ನು ಬಿಟ್ಟರೆ ಮತ್ತೆ ಯಾರೂ ಆಪ್ತರಿಲ್ಲ. ಅಟ್ಟು ಉಂಡಮೇಲೆ

ಹೊತ್ತುಕಳೆಯಲು ಅವರ ಗುಡುಗೆ ಬಂದು ಕೂರುತ್ತಾನೆ. ಯಾವುದಾದರೂ ಮಾತು ಶುರುಮಾಡಿದರೆ ಅದು ಅತ್ತಿಗೆಯ ವಿಷಯಕ್ಕೆ ತಿರುಗುತ್ತದೆ. 'ಈ ನನ್‌ಮಗ ಅವ್ರುನ್ನ ಗೋಳುಹುಯ್ಕಂಡು ತಿಂದ್‌ಬಿಟ್ಟ ಕಣ್ರಿ'–ಎಂಬ ಮಾತನ್ನೇ ಅವನು ಮತ್ತೆ ಮತ್ತೆ ಆಡುತ್ತಾನೆ.

ಒಂದು ದಿನ ಅಯ್ಯನವರು ಎಂದರು: 'ಹಿಂದೆ ಆದದ್ದು ಆಯ್ತು. ಈಗ್ಲೂ ನೀವು ಅಣ್ಣ ತಮ್ಮ ತಾಯಿ ಒಟ್ಟಿಗಿರ್ರಪ್ಪ.'

'ಥೂ ಅವ್ನ ಮನೆತನ ಹಾಳಾಗ. ಆ ಮುಂಡೆ ಜೊತೆ ಇರ್ತೀನೇನ್ರೀ ನಾನು? ನಾನು ಗಂಡಸು ಕಣ್ರೀ. ನಾಲೇಬಯಲಾಗೆ ಒಂದೂವರೆ ಪಲ್ಲ ಬಿಳಿ ಅಕ್ಕಿ ಸಂಪಾದನೆ ಮಾಡ್ಕಂಡ್ ಬಂದಿದೀನಿ. ನೋಡ್ ಬನ್ರಿ ಬೇಕಾದ್ರೆ.'

ಅಯ್ಯನವರು ಸುಮ್ಮನಾದರು. ಅಪ್ಪಣ್ಣಯ್ಯ ಒಟ್ಟು ಇಪ್ಪತ್ತು ದಿನ ಊರಿನಲ್ಲಿದ್ದ. ಒಂದು ದಿನವೂ ಅವ್ವ ಅಣ್ಣನ ಹತ್ತಿರ ಹೋಗಲಿಲ್ಲ. ಅವರ ಮಾತೆತ್ತಿದರೆ ಕಿಡಿಕಿಡಿಯಾಗುತ್ತಿದ್ದ. ಅವನಿಗೆ ಈ ಊರೇ ಬೇಸರವಾಗುತ್ತಿತ್ತು. ಸುಮ್ಮನೆ ಕೂತು ಏನು ಮಾಡುವುದು? ಸುತ್ತಣ ಹಳ್ಳಿಗಳಲ್ಲೆಲ್ಲ ಅವ್ವ ಅಣ್ಣ ಯಾಚನೆ ಮಾಡಿರುತ್ತಾರೆ. ಮತ್ತೆ ತಾನೂ ಹೋದರೆ ಜನರು ಎರಡೆರಡು ಸಲ ಕೊಡುವುದಿಲ್ಲ. ಒಂದು ದಿನ ಬೀರೇಗೌಡನ ಜಚುಲಿಯ ತನ್ನ ಕೋಣೆಗೆ ಬೀಗ ಹಾಕಿ ನಾಲೆಬತಲಿನ ಕಡೆಗೆ ಮತ್ತೆ ಹೋದ.

ಅಪ್ಪಣ್ಣಯ್ಯ ಹೋದ ರಾತ್ರಿ ಅಯ್ಯನವರಿಗೆ ನಂಜಮ್ಮನ ಸಂಸಾರದ ನೆನಪೇ ಆಗುತ್ತಿತ್ತು. ಚಿಕ್ಕ ವಯಸ್ಸಿನ ಅವಳು ಸೊಸೆಯಾಗಿ ಇ ಊರಿಗೆ ಬಂದದ್ದು, ಅತ್ತೆ ಮನೆಯ ಗೋಳು, ಅವಳ ಮಕ್ಕಳು, ಬೇರೆ ಸಂಸಾರ ಹೂಡಿದ್ದು, ಮಕ್ಕಳನ್ನು ಸಾಕಿ ಬೆಳೆಸಿ, ಮಗನಿಗೆ ಮುಂಜಿ ಮಗಳಿಗೆ ಮದುವೆ ಮಾಡಿದ್ದು, ಮಕ್ಕಳಿಬ್ಬರ ಸಾವು, ಕೊನೆಗೆ ನಂಜಮ್ಮನ ಸಾವು, ಇವೆಲ್ಲ ಒಂದೇ ಬಾರಿಗೆ ನಾಟಕದಲ್ಲಿ ನಡೆದಂತೆ ನೆನಪಿನಲ್ಲಿ ಬಂದುಹೋದುವು. ತಾವು ಆ ಸಂಸಾರದೊಡನೆ ಎಷ್ಟು ಮಟ್ಟಿಗೆ ಅಂಟಿಕೊಂಡಿದ್ದರೆಂಬ ಅರಿವು ಈಗ ಅವರಿಗೆ ಉಂಟಾಯಿತು. ಆ ಯಮ್ಮನ ಸಂಸಾರ ಹೀಗಾಯ್ತು!– ಎಂದು ನಿಟ್ಟುಸಿರಿಡುತ್ತಿರುವಾಗ ಮನಸ್ಸು, ಆ ಸಂಸಾರದ ಒಂದು ಬಳ್ಳಿಯಾಗಿ ಉಳಿದಿರುವ ವಿಶ್ವನನ್ನು ನೆನಸಿಕೊಂಡಿತು. ಅವನು ಅವರ ತೊಡೆಯಮೇಲೆ ಕೂತು ಅವರ ಕಂತೆಭಿಕ್ಷೆಯ ಮುದ್ದೆ ತಿಂದು ಅವರಿಗೆ ಅಂಟಿಕೊಂಡಿದ್ದ. ಬಲೇ ಚುರುಕು ಹುಡುಗ. ಹುಲಿ ಯಂಥಾ ಗುಂಡಿಗೆ, ಮುಂದೆ ಓದಿದರೆ ಜಾಣನಾಗುತ್ತಾನೆ. ಅವನನ್ನು ಓದಿಸಬೇಕು ಅಂತ ನಂಜವ್ವ ಹಲುಬುತ್ತಿತ್ತು. ಮಾವನ ಮನೆಯಾಗೆ ಹೆಂಗೆ ಓದ್‌ತೈತೋ ಏನೋ! ತುಂಟತನ ಕಮ್ಮಿಯಾಗಿರ್‌ಬೈದು. ಅತ್ತೆ ಮಾವುಂಗೆ ಮಕ್ಕಿಲ್ಲ. ಆದ್ರೂ ಅವ್ರು ಹ್ಯಂಗೆ ನೋಡ್ಕತ್ತವ್ರೋ?

ತಾವು ಈ ಊರು ಬಿಡುವ ಮೊದಲು ಒಂದು ಸಲ ನಾಗಲಾಪುರಕ್ಕೆ ಹೋಗಿ ಹುಡುಗನನ್ನು ನೋಡಿಕೊಂಡು ಬರಬೇಕೆಂದು ಅವರು ನಿಶ್ಚಯಿಸಿದರು.

– 2–

ಅದಾದ ಎರಡನೆಯ ದಿನ ಮಧ್ಯಾಹ್ನ ಉಂಡಮೇಲೆ ಅವರು ಗುಡಿಯ ಜಗುಲಿಯ ಮೇಲೆ ಕೂತು ಹೊಗೆಸೊಪ್ಪು ತೀಡುತ್ತಿದ್ದರು. ನರಸಿ ಅವರನ್ನೇ ಹುಡುಕಿಕೊಂಡಂತೆ ಬಂದು ಜಗಿಲಿಯಮೇಲೆ ಕೂತಳು. ಅವಳ ಮುಖದಲ್ಲಿ ವ್ಯಸನ ಕಾಣುತ್ತಿತ್ತು.

'ಏನವ್ವಾ, ಏಳೆಂಟು ದಿನದಿಂದ ಊರಾಗಿರ್ನಿಲ್ಲ. ಎಲ್ಲಿಗ್ಹೋಗಿದ್ದೆ?'

'ನಮ್ಮ ನಂಟ್ರ ಮನ್ಗೆ ಸಾಂತಿಗ್ರಾಮಕ್ಕೆ ಹ್ವಾಗಿದ್ದೆ ಕಣ್ರಯ್ಯಾ.'

'ಇದ್ಯಾಕ್ ಮಂಕಾಗಿದೀಯಾ?'

'ಏನ್ ಏಳಾನ್ರೀ. ನ್ಯೆನ್ನೆ ಗಾಡೀಲಿ ನಾಗಲಾಪುರದ ಕೆರೆ ಏರಿ ಮ್ಯಾಲೆ ಬತ್ತಿದ್ದೆ. ವಿಸ್ವಪ್ಪ ಸಿಕ್ತು. ಅದ ಕಂಡು ಅಳಾ ಬಂದ್‌ಬುಡ್ತು.'

ಅಯ್ಯನವರಿಗೂ ತಕ್ಷಣ ಆ ಸ್ಥೆ ಹುಟ್ಟಿತು: 'ಹೆಂಗೈತಿ ಮಗಾ?'

'ಹೆಂಗೈತಾ? ಬಾಲೆಕಂಬದ ಹಂಗಿದ್ದ ಉಡ್ಗ ಈಗ ಒಣಕಲ ಹರಳಕಡ್ಡಿಯಾಗೈತೆ ಕಣ್ರೀ. ಕ್ರೇಲಿ ನೀರು ಕುಂಡೊಯ್ಯಕ್ಕೆ ಅಂತ ಒಂದು ಬಿಂದ್ಗೆ ತಗಂಡು ಬಂದಿತ್ತು. ಗಾಡೀಮ್ಯಾಲೆ ನನ್ನ ನೋಡಿ ಅದೇ ಗುರುತು ಇಡೀತು. ನಂಗೆ ಅದರ ಗುರ್ತೇ ಸಿಕ್‌ನಿಲ್ಲ, ಹಂಗಾಗೈತೆ. ನಾನು ಗಾಡಿ ನಿಲ್ಸಿ ಕ್ಯಳಿಕ್ಕೆ ಇಳ್ದೆ. ಹ್ಯಂಗಿದೀಯಾ ಮಗಾ ಅಂದೆ. ಸುಮ್ನೆ ಅಳಾಕೆ ಶುರುಮಾಡಿಬಿಡ್ತು. ಏನ್ಮಾಡಿದ್ರೂ ಸುಮ್ಮಾಕ್ಲಿಲ್ಲ. ನನ್ನೂ ಊರಿಗೆ ಕರ್ಕಂಡ್ ಹೋಯ್ತೀಯಾ?– ಅಂತ ಕೇಳ್ತು. ನಾನು ಹ್ಯಂಗೆ ಕರ್ಕಂಡ್ ಬರ್ಲಿ ನೀವೇ ಏಳ್ರಿ. ಇನ್ನೂ ತುಂಬ ಏಳ್ತು. ತಡವಾಗಿ ಓದ್ರೆ ಮನ್ಲಿ ಅತ್ತೆ ಹ್ವಡೀತಾಳೆ ಅಂತ ನೀರು ತುಂಬ್ಕಂಡಿ ಹ್ವಂಟೋಯ್ತು. ಓಟು ಚಿಕ್ಕ ಉಡುಗನ ಕುಟ್ಟಿ ಬಿಂದಿಗೇ ಕೊಟ್ಟು ಕಳಿದ್ಲಲಾ ಆ ಕಟುಕಮುಂಡೆ, ಏನಂತೀರ್ರೀ?'

'ನೀನು ಊರೊಳಿಕ್ ಹ್ವಾಗಿ ಕಲ್ಲೇಶದೋಸ್ರುನ್ನ ಕೇಳ್ನಿಲ್ವಾ? ನಿಂಗ್ ಅವ್ರ ಗುರುತಿಲ್ವಾ?'

''ಉಡುಗ ಹ್ವಂಟೋಯ್ತು. ನಾನು ಗಾಡಿ ಅಲ್ಲೇ ಕೊಳ್ಳು ಇಳಿಕ್ಸು ಅಂತ ಏಳಿದೆ. ಅಲ್ಲೇ ಒಬ್ಬ ಎಂಗ್ಸು ಶಾಲೆ ವಗೀತಿದ್ರು. ಅವ್ರ್ ತಾವುಕ್ ಹ್ವಾಗಿ–'ಅವ್ವಾ, ನಂದು ರಾಮಸಂದ್ರ. ಈ ಉಡ್ಗ ನಮ್ಮೂರಿಂದು. ಇದುನ್ನ

ಕಲ್ಲೇಸಪ್ಪಾರು ಹ್ಯಂಗೆ ಮಡೀಕಂಡವ್ರೇ?’ ಅಂತ ಕೇಳ್ದೆ. ಆ ಯಮ್ಮ ಯಲ್ಲಾನೂ ಏಳ್ತು. ಕಲ್ಲೇಸಪ್ಪಾರು ಮನೇ ತಾವ್ಯೇಯಂತೆ ಆ ಯಮ್ಮನ ಮನೆಯೂ. ಮನೆ ಚಾಕರಿ ಎಲ್ಲ ಆ ಉಡುಗುಂದೇಯಂತೆ. ಅವ್ಳು ಅಕ್ಕಿರೊಟ್ಟಿ ತಿಂತಾಳಂತೆ. ಉಡುಗುಂಗೆ ರಾಗಿರೊಟ್ಟಿಯಂತೆ. ಅದ್ನೂ ಕ್ವಟ್ರೆ ಕ್ವಟ್ಳು, ಇಲ್ದೆ ಇದ್ರೆ ಬಿಟ್ಳು. ಅವಳ ಶಾಲೇನೂ ಅದೇ ವಗೀಬೇಕಂತೆ. ಸೌಟು ತಗಂಡಿ ನೆತ್ತಿಮ್ಯಾಲೆ ಹ್ವಡೀತಾಳಂತೆ.”

‘ಕಲ್ಲೆಶದೋಸ್ರು ಸುಮ್ನೆ ಇರ್ತಾರಂತಾ?’

‘ಆ ವಯ್ಯ ತಿಕ್‌ಲಪ್ಪ ಕಣ್ರೀ. ಕುಶಿ ಅತ್ತಿದ್ರೆ ಉಡುಗನ್ನ ಸಂತಿಗೆ ಕರ್ಕಂಡ್ ಹ್ವಾಗಿ ಮಿಟಾಯಿ ಗಿಟಾಯಿ ಕೊಡುಸ್ತಾರಂತೆ. ಸಿಟ್ಟು ಬಂದ್ರೆ ಹ್ವಳಕೆ ತಗಂಡ್ ಬಡೀತಾರಂತೆ. ವಳಗಡೆ ಅವ್ಳು ಎಂಗ್ಸು ಏನೇನು ಮಾಡ್ತಾಳೆ ಅಂತ ಗಂಡ್ಸಿಗೆ ಯಲ್ಲಾ ಹ್ಯಂಗೆ ಗೊತ್ತಾಗ್ಬೇಕು?’

ಅಯ್ಯನವರು ಮತ್ತೆ ಏನೂ ಕೇಳಲಿಲ್ಲ. ತಾಯಿ ಸತ್ತ ತಬ್ಬಲಿ ಹುಡುಗ ವಿಶ್ವ ಪೂರ್ತಿ ಸುಖವಾಗಿದೆ ಎಂದು ಅವರೇನೂ ಭ್ರಮಿಸಿರಲಿಲ್ಲ. ಆದರೆ ಅದು ಈ ಮಟ್ಟಿಗೆ ಗೋಳುಗುಟ್ತುತಿದೆ ಎಂಬ ಕಲ್ಪನೆಯೂ ಅವರಿಗೆ ಇರಲಿಲ್ಲ. ಕಲ್ಲೇಶಜೋಯಿಸರ ಹೆಂಡತಿ ಕೆಟ್ಟ ಹೆಂಗಸೆಂಬುದನ್ನು ಅವರು ಸಾಕಷ್ಟು ಕೇಳಿದ್ದರು. ಆದರೆ ತಂಗಿಯ ಮಗನ ವಿಷಯದಲ್ಲಿ ಸೋದರಮಾವನಾದವನು ಹೆಚ್ಚು ನಿಗಾ ತೆಗೆದುಕೊಳ್ಳಬೇಕಾಗಿತ್ತು. ಬುದ್ಧಿ ಸಮವಾಗಿದ್ದರೆ ತಾನೇ ನಿಗಾ ಸಮವಾಗಿರ್ತೈತಿ?–ಎಂದು ಯೋಚಿಸುತ್ತಿದ್ದರು. ನರಸಿಯೂ ಏನೋ ತನ್ನಲ್ಲಿಯೇ ಯೋಚಿಸುತ್ತಿದ್ದು ಕೇಳಿದಳು: ‘ಅಯ್ನೋರೇ, ನಾನೊಂದ್ ಮಾತು ಏಳ್ತೀನಿ ಕೇಳ್ತೀರಾ?’

‘ಏನ್ ಏಳು.’

“ದೇವ್ರು ನನ್ನ ಹ್ವಟ್ಟೇಲಿ ಮಕ್ಳು ಕೊಡ್ನಿಲ್ಲ. ಆ ಉಡುಗುನ್ನ ಕರ್ಕಂಡ್ ಬಂದು ನಂಗ್ ಕೊಟ್‌ಬುಡಿ. ಮಗ ಅಂತ ತಿಳ್ಕಂಡ್ ಸಾಕ್ಯತ್ತೀನಿ. ನನ್ನ ಅಂಗ್ಡಿ, ನನ್ನ ದುಡ್ದು, ಯಲ್ಲ ಅದುಕ್ಕೇ ಆಯ್ತದೆ. ಜೀವ ಹ್ವಾಗ್ತಾ ಇದ್ದ ಉಡ್‌ಗ. ನನ್ನ ತ್ವಡೆ ಮ್ಯಾಲೆ ನನಿಕ್ಕಂಡು ಬದುಕಂಡ್ತು. ಅದರ ಅವ್ವನೇ, ‘ನರಸಮ್ಮ, ಇದು ನನ್ನ ಮಗುವಲ್ಲ, ನಿಂದು. ನೀನೇ ಸಾಕ್ಕ’ ಅಂತ ಏಳಿದ್ರು. ನೀವು ನಾಗಲಾಪುರಕ್ಕೆ ಓಗಿ ಕರ್ಕಂಡ್ ಬಲ್ಲಿ. ಅದ್ರ ಒಂದು ಕೂದ್ಲು ನಲುಗದ್ಹಂಗೆ ಸಾಕ್ತೀನಿ.”

ಇದೇ ಮಾತನ್ನು ಮತ್ತೆ ಹೇಳಿ–‘ಯೇಚ್ನೆ ಮಾಡಿ’ ಎಂದು ಪುನಃ ಜ್ಞಾಪಿಸಿ ನರಸಿ ಎದ್ದುಹೋದಳು. ಅಯ್ಯನವರ ಮನಸ್ಸು ಯೋಚಿಸಲು ಪ್ರಾರಂಭಿಸಿತು. ಆ ರಾತ್ರಿ ಎಲ್ಲ ಅವರಿಗೆ ನಿದ್ರೆ ಬರಲಿಲ್ಲ. ನಂಜಮ್ಮನದೇ ನೆನಪು. ಅವಳಿಗೆ ಗೆಡ್ಡೆ ಕಾಣಿಸಿಕೊಂಡ ನಡುರಾತ್ರಿ, ಇವರು ಬೇಡವೆಂದರೂ, ಮನಸ್ಸಿನಲ್ಲಿ ಇದ್ದುದನ್ನೆಲ್ಲ ಮಾತನಾಡಿದ್ದಳು: ‘ಪಾರ್ವತಿ ರಾಮಣ್ಣ ಸತ್ತಾಗ ಗೋಪಿಯ ಕಥೆ ನೀವು ಹೇಳಿದಿರಿ. ಮಗು ಸತ್ತಾಗ ಜೀವಕೊಡುಕ್ಕೆ ಹೆದರಿ ಗೋಪಿ ದಡದಲ್ಲೇ ನಿಂತಳು. ಅದೇ ರಾತ್ರಿ ನಾನು ಸ್ಮಶಾನದ ಭಾವಿ ಬೀಳೂಕೆ ಹೋಗಿದ್ದೆ. ಧೈರ್ಯವಾಗಿ ನೀರಿಗೆ ಧುಮುಕ್ತಿದ್ದೆ. ವಿಶ್ವನ ಗತಿ ಏನು ಅಂತ ಯೋಚನೆ ಮಾಡಿ ವಾಪಸ್ ಬಂದೆ. ಈಗ ನಾನೇ ಸಾಯ್ತೀನಿ. ವಿಶ್ವನಿಗೆ ಯಾರು ಗತಿ? ಅಕ್ಕಮ್ಮ ಒಂದಿಷ್ಟು ಹಿಟ್ಟು ಬೇಯ್ಸಿ ಹಾಕ್ತಾಳೆ. ನಮ್ಮಣ್ಣಯ್ಯನ ಮೇಲೆ ನನಗೆ ನಂಬಿಕೆ ಇಲ್ಲ. ಹುಡುಗನ ಹಿಟ್ಟು ಮುಖ್ಯವಲ್ಲ. ಅವ್ನು ಬುದ್ಧಿವಂತನಾಗಬ್ಯಾಡ್ವೆ?’

ಅವಳ ಎಲ್ಲ ಮಾತುಗಳೂ ಅವರ ನೆನಪಿಗೆ ಬಂದುವು. ಅಕ್ಕಮ್ಮ ಬದುಕಿದ್ದರೆ ಹುಡುಗನ ಹಿಟ್ಟಿಗೆ ಕಷ್ಟವಾಗುತ್ತಿರಲಿಲ್ಲ. ಮನೆಯಲ್ಲಿ ಅತ್ತೆ, ಹಾಗೆ ಗೋಳುಹುಯ್ದುಕೊಳ್ಳುತ್ತಲೂ ಇರಲಿಲ್ಲ. ಆದರೆ ಮೊಮ್ಮಗಳ ಜೊತೆಗೆ ಅದೇ ತೀರಿಕೊಂಡಿತು. ‘ಹುಡುಗನ್ನ ಮಾವನ ಕೂಡ ಕಳ್ಸೂವಾಗ ನಂಗೆ ಇದರ ಯೇಚ್ನೆಯೇ ಬರ್ಲಿಲ್ವಲ? ನನ್ನ ತಲೇಲಿ ಬಿದ್ಧಿಯೇ ಇಲ್ಲ’–ಎಂದು ಅವರು ತಮ್ಮನ್ನು ತಾವೇ ಹಳಿದುಕೊಂಡರು. ಈಗ ಮಾಡುವುದೇನು? ನರಸಿ ಕೇಳಿದ ಹಾಗೆ ಅವನನ್ನು ಇಲ್ಲಿಗೆ ಕರೆದುಕೊಂಡು ಬಂದು ಅವಳಿಗೆ ಕೊಟ್ಟು ಬಿಡೂದೆ? ನರಸಿಯ ಹತ್ತಿರ ಹತ್ತು ಹದಿನೈದು ಸಾವಿರ ರೂಪಾಯಿ ಅವೆಯಂತೆ. ಅಂಗ್ಡಿ ನಡೀತೈತಿ. ಪ್ರೀತಿಯಾಗಿ ಸಾಕ್ಕಂಡೂ ಸಾಕ್ಯತ್ತಾಳೆ. ಆ ಸೋದರಮಾವನ ಮನೆಗಿಂತ ಇದೇ ಚಂದ–ಎಂದು ಅವರ ಮನಸ್ಸು ಹೇಳಿತು.

ಆದರೆ ನಂಜವ್ವ ಬದಿಕಿದ್ರೆ ಹುಡುಗನ್ನ ನರಸೀತಾವ ಬಿಡ್ತಿದ್ಲೆ? ಅವ್ಳು ರಾತ್ರಿಗೊಬ್ಬುನ್ನ ಕರ್ಕತ್ತಾಳೆ. ‘ಹುಡುಗನ ಹಿಟ್ಟು ಮುಖ್ಯವಲ್ಲ, ಅವ್ನು ಬುದ್ಧಿವಂತನಾಗಬೇಡವೆ?’–ಎಂಬ ನಂಜವ್ವನ ಮಾತು ಅವರಿಗೆ ನೆನಪಾಯಿತು. ಅವನನ್ನು ಬುದ್ಧಿವಂತನನ್ನಾಗಿ ಮಾಡೂರು ಯಾರು? ಹೆತ್ತ ಅಪ್ಪನ ಯೋಗ್ತಿ ಗೊತ್ತೈತೆ? ಚಿಕ್ಕಪ್ಪನಿಗೆ ಬುದ್ಧಿ ಎಲ್ಲೈತೆ? ಅಜ್ಜಿ ಗಂಗವ್ವ. ಅವ್ಳು ವಿವೇಕಸ್ತೆಯಾಗಿದ್ರೆ ಮನೆ ಹಿಂಗ್ಯಾಕೆ ಆಗೂದು? ಇನ್ನು ಆ ಉಡುಗನ ಗತಿ ಏನು?

ಏಳೆಂಟು ದಿನ ಅವರನ್ನು ಇದೇ ಯೋಚನೆ ಕಾಡುತ್ತಿತ್ತು. ಒಂದು ರಾತ್ರಿ ಮಲಗಿದ್ದಾಗ ಇದ್ದಕ್ಕಿದ್ದಹಾಗೆಯೇ ಒಂದು ಉಪಾಯ ಹೊಳೆದುಬಿಟ್ಟಿತು. ನಾನು ಹ್ಯಂಗೋ ಊರು ಬಿಡ್ತೀನಿ. ವಿಶ್ವಣ್ಣನ್ನ ನನ್ನ ಜೋಡಿ ಕರ್ಕಂಡ್ ಓಗಾದು. ನಾನು ತಂದ ಕಂತೆಭಿಕ್ಷದಾಗೆ ಎಲ್ಡು ಒತ್ತು ಮುದ್ದೆ ತಿನ್ಲಿ. ನಾನೇ ಇಸ್ಕೂಲಿಗೆ ಕಳುಸ್ತೀನಿ. ಉಡುಗ ಜಾಣಮರಿ. ಇಂಗ್ಲೀಷ್ ಇಸ್ಕೂಲೇ ಓದ್ಲಿ. ಯೋಗ ಇದ್ರೆ ಇನ್ನೂ ಮೇಲಕ್ಕೆ ಓದ್ಕಳಿ.

ಅದೇ ವೈನ–ಎಂದು ತೀರ್ಮಾನಿಸಿದಾಗ ಅವರಿಗೇ ತಿಳಿಯದಷ್ಟು ಸಂತೋಷದಿಂದ ಮೈ ಜುಂ ಎಂದಿತು. ಆದರೆ ಇನ್ನೂ ಒಂದು ಯೋಚನೆ ಮನಸ್ಸಿಗೆ ಬಂತು. ನಂಗಾಗಲೇ ಇಷ್ಟು ಮುಪ್ಪಾಗೈತಿ. ಕರ್ಕಂಡ್‌ಹ್ವಾಗಿ, ಮಧ್ಯೆ ನಾನೇ ಸತ್ ಗಿತ್ ಹ್ವಾದ್ರೆ ಅವ್ನ ಗತಿ ಏನು? ಒಂದೆರಡು ಗಂಟೆ ಈ ಯೋಚನೆ ಮನಸ್ಸನ್ನು ಕಾಡಿತು. ಆದರೆ ಅದಕ್ಕೆ ಸಮಾಧಾನ ಸಿಕ್ಕುವುದು ಕಷ್ಟವಾಗಲಿಲ್ಲ. ಗಂಡು ಉಡ್ಗ ಸುಟಿಯಾಗೈತೆ. ನಾನು ಒಂದ್ ಸಮಯ ಸತ್ತೆ. ಎಲ್ಲಾರಾ ಕೂಲಿ ಮಾಡ್ಕಂಡ್ ತಿನ್ಲಿ.ಆ ಅತ್ತೆ ಮಾವನ ಮನ್ಲಿ ಹ್ಯದರಿ ನಡುಕ್ಕಂಡ್ ಇರಾದು ಬ್ಯಾಡ. ನಾನೀಗ್ಲೇ ಸಾಯ್ತೀನಿ ಅಂತ ಏನು ಗೊತ್ತು? ನಂಜವ್ವನಂಥಾ ಮೊಮ್ಮಗಳ ವಯಸ್ನೋರೆಲ್ಲ ಸತ್ರೂ ನಾನು ಲಿಂಗದ ಗುಂಡು ಇದ್ದಂಗೆ ಇದೀನಿ. ವಿಶ್ವಣ್ಣ ದೊಡ್ಡೋನಾಗಾತಂಕ ನಾನು ಸಾಯಾದಿಲ್ಲ. ಕಲ್ಲೇಶದೋಸರು ಉಡುಗುನ್ನ ಕಳಿಸಾದಿಲ್ಲ ಅಂದ್ರೆ ಏನು ಮಾಡಾದು?–ಎಂಬ ಯೋಚನೆಯೂ ಬಂತು. ಹ್ಯಂಗೂ ನನ್ನ ಮುಖ ಕಂಡ್‌ರೆ ಉಡುಗ ಅಂಟಿಕತ್ತಾನೆ. ಕದ್ದು ಕರ್ಕಂಡ್ ಬತ್ತೀನಿ. ನನ್ ತಾವ ಏನು ಕಿತ್ಕತ್ತಾರೆ?–ಎಂಬ ನಿಶ್ಚಯದಿಂದ ಅವರು ಒಂದು ದಿನ ನಾಗಲಾಪುರಕ್ಕೆ ಹೊರಟರು.

– 3 –

ದಾರಿಯ ಕಟಿಗೆಹಳ್ಳಿಯಲ್ಲಿ ರಾತ್ರಿ ತಂಗಿ ಮರುದಿನ ಅವರು ನಾಗಲಾಪುರ ಸೇರುವ ಹೊತ್ತಿಗೆ ಬೆಳಗಿನ ಹತ್ತುಗಂಟೆಯಾಗಿತ್ತು. ದಾರಿಯ ಕೆರೆಯಲ್ಲಿ ಸ್ನಾನಮಾಡಿ, ಅದೇ ಕಾವಿಯ ಪಂಚೆ ಉಟ್ಟು ಅಂಗಿ ಧರಿಸಿ ತಲೆಗೆ ಕೆಂಪು ಲಪ್ಪಟಿ ಸುತ್ತಿ ಹಣೆಗೆ ವಿಭೂತಿ ಇಕ್ಕಿಕೊಂಡು ಶಿವಧ್ಯಾನ ಮಾಡುತ್ತಾ ನೇರವಾಗಿ ಸ್ಕೂಲಿಗೆ ಹೋದರು. ಆಗ ಸ್ಕೂಲು ಬಿಡುವ ಸಮಯ. ಗಂಟೆ ಹೊಡೆದ ತಕ್ಷಣ ವಿಶ್ವ ಹೊರಗೆ ಬಂದ. ಗುರುತು ಹಿಡಿದ ಅವನೇ–'ಅಯ್ನೋರೇ' ಎಂದು ಹತ್ತಿರ ಬಂದು, ನಿಂತಿದ್ದ ಇವರ ತೊಡೆಗಳನ್ನು ತಬ್ಬಿಕೊಂಡ.

'ಇಲ್ಲಿ ಬಾ ಮರಿ'–ಎಂದು ಕೈ ಹಿಡಿದು ಸ್ಕೂಲಿನ ಹಿಂದಿನ ಆಲದಮರದ ಹತ್ತಿರಕ್ಕೆ ಕರೆದುಕೊಂಡುಹೋಗಿ ಕೂರಿಸಿಕೊಂಡರು. ನರಸಿ ಹೇಳಿದಂತೆ ಅವನು ಒಣಗಿದ ಹರಳ ಕಡ್ಡಿಯೇ ಆಗಿದ್ದ. ಅವರು ಕೇಳಿದರು: 'ನನ್ನ ಜೊತೆ ಬತ್ತೀಯಾ?'

'ನಮ್ಮೂರುಗಾ?'

'ನಮ್ಮೂರ್ಗೋ, ಯಾವೂರ್ಗಾದ್ರೂ ಸರಿ. ನನ್ನ ಜೊತೆ ಬಾ. ಅಲ್ಲೆ ಯಾವ್ದಾದ್ರೂ ದೊಡ್ಡ ಊರಿಗೆ ಹ್ವಾಗಾನ. ನಾನು ಕಂತೆಭಿಕ್ಷೆ ತಂದು ಇಕ್ತೀನಿ. ನೀನು ಸ್ಕೂಲಿಗೆ ಹ್ವಾಗಿ ಚಂದಾಗಿ ಓದೂವಂತೆ. ಬತ್ತೀಯಾ?'

'ಹೋಗ್ರೀ ಅಯ್ನೋರೇ, ನೀವು ಸುಳ್‌ಸುಳ್ಳೇ ಅಂತೀರಾ?'

'ಇಲ್ಲ ಮರಿ, ನಿಜವಾಗಿಯೂ.'

'ಹಾಗಾದ್ರೆ ಆಣೆ ಇಟ್ಟು ಹೇಳಿ ನೋಡಾಣ.'

'ನಿನ್ನಾಣೆಗೂ ಮರಿ'–ಎಂದು ಅವನ ತಲೆಯ ಮೇಲೆ ಕೈ ಇಟ್ಟು ಎಂದರು.

'ಹಾಗಾದ್ರೆ ಹೀಗೇ ವಾಟಪ್ಪಡಿಯಾಣಾ ನಡೀರಿ.'

'ಬ್ಯಾಡ. ಮನೆಗೆ ಹೋಗಿ ನಿಮ್ಮ ಮಾವನ್ನ ಕೇಳಾನ.'

'ಅವನಿಗೆ ಈ ಮಾತು ಕೇಳಿದ ತಕ್ಷಣ ಅಳು ಬಂದುಬಿಟ್ಟಿತು: 'ಅವ್ರು ಕಳ್ಸಲ್ಲ ಕಣ್ರೀ.'

'ಮದ್ಲು ಕೇಳಾಣ. ಅವ್ರು ಕಳ್ಸಲ್ಲ ಅಂದ್ರೆ ನಾಳೆ ನಾನು ಇಲ್ಲಿಗೆ ಬತ್ತೀನಿ. ಹಿಂಗಿಂದ ಹಿಂಗೇ ನಿನ್ನ ಕರ್ಕಂಡುಹೋಯ್ತೀನಿ'–ಎಂದು ಹೇಳಿ ಅವನನ್ನು ಒಪ್ಪಿಸಬೇಕಾದರೆ ಅವರು ಮೂರು ಸಲ ತಮ್ಮ ಕರಡಿಗೆಯನ್ನು ಕೈಲಿ ಹಿಡಿದು ಆಣೆ ಮಾಡಬೇಕಾಯಿತು.

ಅವನನ್ನು ಮೊದಲು ಕಳಿಸಿ, ಹತ್ತು ನಿಮಿಷದಮೇಲೆ ಮನೆ ಕೇಳಿಕೊಂಡು ಇವರು ಹೋಗುವ ಹೊತ್ತಿಗೆ– 'ತಡವಾಗಿ ಯಾಕೆ ಬಂದೆಯೋ ಭಡವಾ?' ಎಂದು ಕಲ್ಲೇಶಜೋಯಿಸರು ಅಳಿಯನನ್ನು ಬೈಯುತ್ತಿದ್ದರು. ಇವರನ್ನು ಕಂಡ ತಕ್ಷಣ ಸುಮ್ಮನಾದರು.

ಅವರು ಲೋಕಾರೂಢಿಯ ಮಾತುಗಳನ್ನಾಡುತ್ತಿರುವಷ್ಟರಲ್ಲಿ ಮನೆಯ ಮುಂದೆ ಒಂದು ದೊಡ್ಡ ಕೆಂಪು ಕುದುರೆ ಬಂದು ನಿಂತಿತು. ಅದರಿಂದ ಇಳಿದವರು ಕಂಠೀಜೋಯಿಸರು. ತಾಯಿಯ ತಿಥಿ ಮಾಡಿಕೊಂಡು ಹೋದ ಅವರು ಇಲ್ಲಿಗೆ ಬರುತ್ತಿರುವುದು ಇದೇ ಮೊದಲು. ವಿಶ್ವನನ್ನು ಕರೆತಂದು ಕಲ್ಲೇಶ ಇಟ್ಟುಕೊಳ್ಳುತ್ತಾನೆಂಬುದು ಅವರು ಹೋಗುವ ಮೊದಲೇ ಗೊತ್ತಿತ್ತು. ಕಲ್ಲೇಶನೇ ಹಾಗೆ ಹೇಳಿದ್ದ. ಈಗ ಏನೋ ಮನಸ್ಸಿನ ಲಹರಿ ತಿರುಗಿದಂತೆ ಊರಿಗೆ ಬಂದಿದ್ದಾರೆ. ಮೊಮ್ಮಗನನ್ನು ನೋಡುವ ಒಂದು ಆಶೆಯೂ ಆ ಲಹರಿಯಲ್ಲಿತ್ತು. ಒಳಗೆ ಬಂದ ಅವರು ಅವನನ್ನು ಕರೆದು ಮೈಸೂರು ಪಾಕು ಒಡೆಗಳನ್ನು ಪೊಟ್ಟಣ ಕೊಟ್ಟರು. ರಾಮಸಂದ್ರದ ವಿಷಯ ಮತ್ತು ಮಗಳು ಕಟ್ಟಿದ ಮನೆಯ ಬಗೆಗೆ ಅಯ್ಯನವರನ್ನು ಕೇಳಿದರು. ಸ್ವಲ್ಪ ಹೊತ್ತಾದಮೇಲೆ ಕಲ್ಲೇಶ ಅಯ್ಯನವರನ್ನು ಕೇಳಿದ: 'ಊಟ ಮಾಡ್ತೀರೋ,ಅಡಿಗೆ ಮಾಡ್ಕತ್ತೀರೋ? ಇಲ್ಲ, ನಿಮ್ಮ ಜನದ ಯಾರ ಮನೇಲಾದ್ರೂ ಹೇಳಾಣೋ?'

'ನಮ್ಮ ಜನದೋರ ಮನ್ಲೇ ಹೇಳಿ.'

ಕಲ್ಲೇಶ ವಿಶ್ವನ ಕೈಲಿ ಆ ಊರಿನ ಮಲ್ಲಶೆಟ್ಟಿಯ ಮನೆಗೆ ಹೇಳಿಕಳಿಸಿದ. ಮಲ್ಲಶೆಟ್ಟಿ ಮನೆಗೆ ಬಂದು ಈ

ಜಂಗಮರನ್ನು ಬಿನ್ನಕ್ಕೆ ಕರೆದುಕೊಂಡು ಹೋದ. ಅವನ ಹೆಂಡತಿ ಅಡುಗೆ ಮಾಡುತ್ತಿರುವಾಗ, ಅಯ್ಯನವರು ಮಲ್ಲಶೆಟ್ಟಿಯಿಂದ ಕಲ್ಲೇಶಜೋಯಿಸರ ಮನೆಯಲ್ಲಿ ವಿಶ್ವ ಇರುವ ಸ್ಥಿತಿಯನ್ನು ವಿಚಾರಿಸಿದರು. 'ಇಂಥಾ ಮಕ್ಳು ಇರ್‌ಬ್ಯಾಡ್ದು, ಸತ್‌ರೆ ವೈನ ಶಿವನೇ'–ಮಲ್ಲಶೆಟ್ಟಿ ಹೇಳಿದ. ಅವನ ಹೆಂಡತಿಯೂ ಅದೇ ಮಾತನ್ನಾಡಿದಳು.

'ಶೆಟ್ರೇ, ಹ್ವಾಗಿ ವಸೀ ಕಂಟೀದೋಸ್ರುನ ಕರ್ಕಂಡ್‌ಬತ್ತೀರಾ?'

ಮಲ್ಲಶೆಟ್ಟಿ ಹೋದ ಹತ್ತುನಿಮಿಷದಲ್ಲಿ ಅವನೊಡನೆ ಕಂಠೀಜೋಯಿಸರೊಬ್ಬರೇ ಬಂದರು. ಅಯ್ಯನವರು ಕೂತಿದ್ದ ಎದುರು ಗೋಡೆ ಒರಗಿ, ಮಲ್ಲಶೆಟ್ಟಿ ಹಾಕಿಕೊಟ್ಟ ಮಣೆಯಮೇಲೆ ಕುಳಿತರು. ತಾವು ಇಲ್ಲಿಗೆ ಬಂದ ಕಾರಣವನ್ನು ವಿವರಿಸಿದ ಅಯ್ಯನವರು ಎಂದರು: 'ಬೇಕಾದ್ರೆ ಈ ಶೆಟ್ರುನ್ನೂ ಒಳಗಿರೂ ಅಕ್ಕನನ್ನೂ ಕೇಳಿ. ಈ ಊರಲ್ಲಿ ಯಾರುನ್ನಾದ್ರೂ ಇಚಾರಿಸಿ. ಆ ಉಡುಗ ಹ್ಯಂಗೆ ಆಗೈತಿ ಕಣ್ಣಿಂದ ನೋಡಿ. ನಿಮ್ಮ ಸ್ವಸೆ ಗುಣ ಚಂದವಲ್ಲ. ಉಡುಗನ್ನ ನನ್ನ ಕುಟ್ಟೆ ಕಳಿಸ್ಬಿಡಿ. ನಾನು ಸಾಕಿ ನ್ಯಟ್ಟಗೆ ಮಾಡ್ತೀನಿ.'

ಜೋಯಿಸರಿಗೆ ಸೊಂಟದ ಮೂಳೆ ಮುರಿಯಬೇಕೆನಿಸುವಷ್ಟು ಸಿಟ್ಟು ಬಂತು. ಆದರೆ ಅಯ್ಯನವರೇ ಎಂದರು: 'ಹೀನಸುಳಿ ಬೋಳಿಸಿದ್ರೆ ಓಗಾಕಿಲ್ಲ. ಆ ಯಮ್ಮನ ಸರಿ ಮಾಡಾಕೆ ಗಂಡಂಗೂ ಆಗ್ನಿಲ್ಲ. ಕಲ್ಲೇಶದೋಸರಿಗೂ ಮಕ್ಳುನ್ನ ಹ್ಯಂಗೆ ಸಾಕಬೇಕು ಅಂತ ಗೊತ್ತಿಲ್ಲ. ಸುಮ್ನೆ ನನ್ನ ಜೋಡಿ ಕಳುಸ್ಬುಡಿ.'

ಜೋಯಿಸರು ಸ್ವಲ್ಪ ಹೊತ್ತು ತಮ್ಮಲ್ಲಿಯೇ ಯೋಚಿಸಿದರು. ನಂತರ, 'ನೀವು ಕರ್ಕಂದ್ ಹೋಗಿ ಏನು ಮಾಡ್ತೀರಾ?' ಎಂದು ಕೇಳಿದರು.

'ಏನು ಮಾಡ್ತೀನೋ ಎಲ್ಲಿರ್ತೀನೋ ಕಾಣೆ. ನನ್ನಮ್ಯಾಲೆ ನಂಬಿಕೆ ಇದ್ರೆ ಸುಮ್ನೆ ಕಲಿಸ್ಕೊಡಿ.'

ಅವರು ತಕ್ಷಣ ಉತ್ತರ ಹೇಳಲಿಲ್ಲ. ಮನಸ್ಸಿನಲ್ಲಿ ಸಿಟ್ಟು ಕವರುತ್ತಿತ್ತು. ಹುಡುಗನ ಅಜ್ಜ ನಾನು ಬದುಕಿದೀನಿ. ಸೋದರಮಾವ ಕಲ್ಲೇಶ ಇದಾನೆ. ನಾವು ಸರಿಯಾಗಿ ಸಾಕೂದಿಲ್ಲ ಅಂತ ಇವನನ್ನ ಕಳ್ಸಿ ಅಂತ ಕೇಳುಕ್ಕೆ ಈ ಜಂಗಮಯ್ಯ ಬಂದಿದಾನಲ್ಲ. ಇವನಿಗೆಷ್ಟು ಹಿಮ್ಮತ್ತು? ಅಯ್ಯನವರನ್ನು ಬೈಯ್ಯಲು ಬಾಯಿ ತೆರೆದಿದ್ದ ಅವರು ಬೇರೊಂದು ಯೋಚನೆ ಬಂದು, ತಕ್ಷಣ ನಾಲಿಗೆಯನ್ನು ಹಾಗೆಯೇ ತಡೆದುಕೊಂಡರು. ಹತ್ತು ನಿಮಿಷ ಮೂಕರಂತೆ ಕುಳಿತಿದ್ದ ಅವರ ಮನಸ್ಸು ಕಲ್ಲೇಶನ ಸಂಸಾರವನ್ನು ಕುರಿತು ಯೋಚಿಸುತ್ತಿತ್ತು. ಆ ಮುಂಡೆ ಒಳ್ಳೆಯೋಳಲ್ಲ. ಹೊಟ್ಟೆಗೆ ಹಾಕದೆ ಹುಡುಗನನ್ನ ಸಾಯಲು ಮಾಡಿದಾಳೆ. ಕಲ್ಲೇಶನೂ ಹೊಡೀತಾನಂತೆ. ನಾನೇ ಕರ್ಕಂಡ್ ಇಟ್‌ಕೊಂಡ್ರೆ ಹ್ಯಾಗೆ?–ಎಂಬ ಯೋಚನೆ ಬಂತು. ತಾವು ಹರೆದೊಯ್ದು ಏನು ಮಾಡುವುದು? ಹೋಟೆಲಿನಲ್ಲಿ ಬೇಷಕ್ ಊಟ, ಕುದುರೆ ಸವಾರಿ, ಮಾಟ ಮದ್ದು.....ಥೆ ಇದೆಲ್ಲ ಬ್ಯಾಡ–ಎಂದು ಅವರ ಮನಸ್ಸೇ ಹೇಳಿತು. ಈ ಪರಿಸ್ಥಿತಿಯಲ್ಲಿ ಅವನನ್ನು ಸಾಕುವಂಥೋರು ಯಾರೂ ಇಲ್ಲ. ಈ ಅಯ್‌ನೋರೇ ನಂಬಿಕಸ್ಥರು. ಈತ ದೆವರಸಮ ಮನುಷ್ಯ ಅಂತ ನಂಜುವೇ ಹೇಳ್ತಿದ್ದಳಲ್ಲ–ಎಂದು ಯೋಚಿಸಿದ ಅವರು ಬಾಯಿಬಿಟ್ಟು ಕೇಳಿದರು: 'ನೋಡಿ, ನಾನು ಇವತ್ತು ಇಲ್ಲಿಗೆ ಬಂದದ್ದು ಯೋಗಾಯೋಗ. ನಾನಿಲ್ಲದೆ ಇದ್ದಿದ್ರೆ ನೀವು ಕಲ್ಲೇಶುನ್ನೇ ಕೇಳಬೇಕಾಗಿತ್ತು. ಅವನು ಕಳುಸ್ತಿರ್‌ಲಿಲ್ಲ. ಆಗ ಏನು ಮಾಡ್ತಿದ್ರಿ?'

'ಈಗ ನೀವೇ ಬಂದಿದೀರಲಾ. ಆ ಮಾತ್ಯಾಕೆ?'

'ಮಸಲಾ ಮಾತು. ಬರದೇ ಇದ್ದಿದ್ರೆ ಏನು ಮಾಡ್ತಿದ್ರಿ, ನಿಜ ಹೇಳಿ.'

'ನಿಜ ಹೇಳಲೇನು? ನಾಳೆ ದಿನ ನಮ್ಮ ಉಡುಗ ಇಸ್ಕೂಲಿಗೆ ಓಗಿದ್ದಾಗ ಅಲ್ಲಿಂದ್ಲೇ ಅವನ ಕೈ ಇಡಕಂಡು ಕರ್ಕಂಡ್‌ಹೋಯ್ತಿದ್ದೆ. ನನ್ನ ಯಾವಾನಾದ್ರೂ ತಡಿಯುಕ್ ಬಂದಿದ್ರೆ ಜವಾಬ್ ಏಳಿತಿದ್ದೆ.'

ಜೋಯಿಸರು ಅರ್ಧ ನಿಮಿಷ ಅವರನ್ನೇ ಎವೆ ಇಕ್ಕದೆ ನೋಡುತ್ತಿದ್ದು, ನಂತರ ತಾವು ಕುಳಿತಲ್ಲಿಂದ ಎದ್ದು ಹೋಗಿ ಅವರ ಭುಜ ತಟ್ಟಿ–'ವಾರೆ ವಾ. ಅಯ್ನೋರೇ, ನೀವು ಗಂಡು. ಶಾಬಾಸ್, ಕರ್ಕಂಡು ಹೋಗಿ. ಕಲ್ಲೇಶುಂಗೆ ನಾನ್ ಹೇಳ್ತೀನಿ'–ಎಂದವರೇ ಎದ್ದು ಮನೆಗೆ ಹೋದರು.

ಅಯ್ಯನವರು ಬಿನ್ನ ತೀರಿಸಿ ಸಣ್ಣದಾಗಿ ಒಂದು ನಿದ್ದೆ ಮುಗಿಸಿ ಬೇಕೆಂದೇ ಸ್ವಲ್ಪ ತಡಮಾಡಿ ಮನೆಗೆ ಬರುವುದರೊಳಗೆ ಕಂಠೀಜೋಯಿಸರು ಮಗನನ್ನು ಒಪ್ಪಿಸಿದ್ದರು. ಅದೆ ದಿನ ತಾವೇ ಸ್ಕೂಲಿಗೆ ಹೋಗಿ ಹುಡುಗನ ಸರ್ಟಿಫಿಕೇಟ್ ತೆಗೆಸಿಕೊಟ್ಟರು. ಮರುದಿನ ಬೆಳಿಗ್ಗೆ ಅವನ ಬಟ್ಟೆಬರೆಗಳನ್ನೆಲ್ಲ ಕಟ್ಟಿ ಅಯ್ಯನವರು ಹೆಗಲಿಗೆ ಹಾಕಿಕೊಂಡರು. 'ಮಗಾ, ಅಜ್ಜಯ್ಯ, ಮಾವ, ಅತ್ತೆಮ್ಮ, ಎಲ್ರಿಗೂ ಕಾಲು ಮುಟ್ಟಿ ಶರಣು ಮಾಡ್ಕಳಪ್ಪಾ'– ಎಂದು ಹೇಳಿದರು. ನಮಸ್ಕಾರ ಮಾಡಿಸಿಕೊಳ್ಳುವಾಗ ಕಮಲು ಕಲ್ಲಿನಂತೆ ನಿಂತಿದ್ದಳು. ಕಲ್ಲೇಶ ಮಾವನ ಕಣ್ಣು ಹನಿಗೂಡುತ್ತಿತ್ತು.

ನೆನ್ನೆ ಸಂಜೆಯಿಂದ ಕಂಠೀಜೋಯಿಸರು ತುಂಬ ಮಂಕಾಗಿದ್ದರು. ರಾತ್ರಿ ಊಟವನ್ನೂ ಮಾಡಲಿಲ್ಲ. ರಾತ್ರಿ ಇಬ್ಬರೂ ಜೊತೆಯಲ್ಲಿ ಜಗುಲಿಯಮೇಲೆ ಮಲಗಿದ್ದರೂ ಅವರು ಅಯ್ಯನವರ ಕೈಲಿ ಸಹ ಮಾತನಾಡಿರಲಿಲ್ಲ. ಕಲ್ಲೇಶನೊಡನೆ ಅವರೂ, ಇವರಿಬ್ಬರನ್ನು ಕಲಿಸಲು ಜೀನು ಹಾಕಿದ ಕುದುರೆಯ ಕಡಿವಾಣವನ್ನು ಹಿಡಿದು, ಅದನ್ನೂ ನಡೆಸಿಕೊಂಡು ಕೆರೆಯ ಈಚೆ ಕೋದಿಯತನಕ ಬಂದರು. ಕೋಡಿ ದಾಟಿದಮೇಲೆ

ಅವರೇ ಮಗನಿಗೆ ಹೇಳಿದರು: 'ಕಲ್ಲೇಶ ನೀನು ವಾಪಸ್ ನಡಿ. ನಾನು ಒಂದರ್ಧ ಮೈಲೀತಂಕ ಇವರ ಜೊತೆ ಹೋಗಿಬತ್ತೀನಿ.'
ಹಿಂದಕ್ಕೆ ಹೊರಡುವ ಮುನ್ನ ಕಲ್ಲೇಶ ಅಯ್ಯನವರಿಗೆ ಹೇಳಿದ: 'ನಾನೇನೋ ಸ್ವಲ್ಪ ಶಿಕ್ಷೇಲೇ ಇಟ್ಟಿದ್ದೆ. ಇವನ ತುಂಟತನ ಜಾಸ್ತಿ. ಹತೋಟೀಲಿ ಇಡು ಅಂತ ನಂಜುವೇ ಹೇಳಿದ್ಲು. ಇಲ್ದೆ ಇದ್ರೆ ಇವನು ಕೆಟ್ಟುಹೋಗ್ತಾನೆ. ಅಲ್ಲಿ ನೀವು ಭಯ ಇಟ್ಟಿರಿ.'
'ನ್ಯಾಯ, ನ್ಯಾಯ. ಸಾವಿರ ಉಳಿ ಪೆಟ್ಟು ಬಿದ್ರೆತಾನೆ ಕಲ್ಲು ಸಿವಲಿಂಗವಾಗೂದು? ಆದ್ರೆ ಜಾಗ ನೋದಿ ಹದ ಇಡಿದು ಹ್ವಡೀಬೇಕು. ನೀವು ಮಾಡಿದ್ದು ವಳ್ಳೇದುಕ್ಕೆ ಆಯ್ತು ಬುಡಿ'–ಅಯ್ಯನವರು ಉತ್ತರ ಹೇಳಿದಾಗ ಕಲ್ಲೇಶನ ಮುಖ ಕೆಳಗೆ ಬಾಗಿತು. ಮತ್ತೆ ಮಾತನಾಡದೆ ಅವನು ಹೊರಟುಹೋದ.
ಕುದುರೆ ಮತ್ತು ಮೂವರೂ ನೂರು ಹೆಜ್ಜೆಗೂ ಮೀರಿ ನಡೆದಮೇಲೆ ಅಯ್ಯನವರೇ ಕಂಠೀಜೋಯಿಸರಿಗೆ – 'ನೀವು ನಡೀರಿ. ನಾವು ಬ್ಯಾಗ ಬ್ಯಾಗ ಕಾಲು ಹಾಕ್ತೀವಿ' ಎಂದರು.
ಜೋಯಿಸರು ಅದೇನೋ ಮಾತನಾಡಲು ಪ್ರಯತ್ನಿಸುತ್ತಿದ್ದರಾದರೂ ಮಾತು ಬಾಯಿಂದ ಹೊರಡುತ್ತಿರಲಿಲ್ಲ. ಅವರು ಕುದುರೆಯೊಡನೆ ನಿಂತುಕೊಂಡರು. ಹತ್ತಿರವೇ ಅಯ್ಯನವರೂ ನಿಂತರು. ನಡುವೆ, ಅವರಿಬ್ಬರ ಸೊಂಟದ ತನಕ ಬೆಳೆದ ವಿಶ್ವ. ಐದು ನಿಮಿಷ ಯಾರೂ ಮಾತನಾಡಲಿಲ್ಲ. ಅಯ್ಯನವರೇ–'ನಾವು ಹೊರಡಾಣವೇ?' ಎಂದಾಗ ಅವರೆಂದರು: 'ಇಲ್ಲಿ ಕೇಳಿ. ಅಯ್ನೋರೇ ನೀವು ಗಂಡು.'
ಅಯ್ಯನವರಿಗೆ ಏನೂ ತಿಳಿಯಲಿಲ್ಲ: 'ಇದೇನು ನೀವನ್ನೂದು?'
'ಏನೂ ಇಲ್ಲ. ಇದ ತಗಾಳಿ'–ಎಂದು ತಮ್ಮ ಒಳ ಅಂಗಿಯ ಜೇಬಿಗೆ ಕೈಹಾಕಿ ಒಂದು ನೋಟಿನ ಪುಡುಕೆಯನ್ನು ತೆಗೆದು ಅವರ ಕಾವಿ ಅಂಗಿಯ ಜೇಬಿಗೆ ಹಾಕಿ. ''ನೂರೈವತ್ತು ರೂಪಾಯಿ ಇದೆ. ನೀವು ಯಾವ ಊರಿಗಾದ್ರೂ ಇವನನ್ನ ಕರ್ಕಂಡ್‌ಹೋಗಿ. ಆಮ್ಯಾಲೆ ನಂಗೆ ಒಂದು ಕಾಗದ ಹಾಕಿ.
'ಚೆನ್ನರಾಯಪಟ್ಣ, ಮಸೀತಿ ಹಿಂದಿನ ದೆವ್ವದ ಮನೆ ವಾಸ, ನಾಗಲಾಪುರದ ಕಂಠೀಜೋಯಿಸರು' ಅಂತ ಬರುದ್ರೆ ಸಾಕು'' ಎಂದು ಹೇಳಿ, ತಮ್ಮ ದೊಡ್ಡ ಶರೀರವನ್ನು ಬಾಗಿಸಿ ಮೊಮ್ಮಗನ ಎರಡು ಕೆನ್ನೆಗಳಿಗೂ ಮುತ್ತಿಟ್ಟು, ಅವನ ಮೈ, ಮುಖ, ಬೆನ್ನುಗಳನ್ನು ತಮ್ಮ ದಪ್ಪನಾದ ಅಂಗೈಯಿಂದ ತಡವಿ ಹಿಂತಿರುಗಿ ಕುದುರೆಯನ್ನೇರಿದರು. ಅವರ ಕಣ್ಣಂಚಿನಲ್ಲಿ ನೀರು ಕೂಡಿದ್ದುದು ಅಯ್ಯನವರಿಗೆ ಕಾಣಿಸಿತು. ಕುದುರೆಯ ಕೆಲಹೊಟ್ಟೆಗೆ ಕಾಲಿನಿಂದ ಸನ್ನೆಮಾಡಿ, ಮತ್ತೆ ಇವರ ಕಡೆ ನೋಡದದೆ ಬೇಗ ಬೇಗ ಊರಿನ ಕಡೆಗೆ ಓಡಿಸಿಕೊಂಡುಹೋದರು. ವಿಶ್ವ ಹಿಂತಿರುಗಿ ಅವರ ವೇಗವನ್ನೇ ನೋಡುತ್ತಾ ನಿಂತುಬಿಟ್ಟ. ಸ್ವಲ್ಪ ಹೊತ್ತಾದಮೆಲೆ ಅವನ ಕೈ ಹಿಡಿದು ಅಯ್ಯನವರು ಮುಂದೆ ಮುಂದೆ ನಡೆದರು.
ಅವರು ಅರ್ಧ ಮೈಲಿ ನಡೆದಿದ್ದರು. ವಿಶ್ವ ಏನೋ ಯೋಚಿಸುತ್ತಿದ್ದ. ಅವನಿಗೇ ಅರಿವಿಲ್ಲದಂತೆ ಅವನ ತುಟಿಗಳು ಅದೇನೋ ಮಾತನಾಡುತ್ತಿದ್ದವು. 'ಅದೇನು ಯೇಚ್ನೆ ಮಾಡ್ತಿದೀ ಮರಿ?'–ಅಯ್ಯನವರು ಕೇಳಿದರು.
'ಅಜ್ಜಯ್ಯನ ಹತ್ರ ಇದೆಯಲ, ಅಂಥದು ನಂಗೂ ಒಂದು ಕುದುರೆ ತಂದ್ ಕೊಡ್ತೀರಾ?'
'ಅದ್ಯಾಕಪ್ಪ ನಮಗೆ?'
'ನಂಗೆ ಅಂಥ ಕುದ್ರೆ ನೋಡಿದ್ರೆ, ಹತ್ತಿ ಈಗ ಅಜ್ಜಯ್ಯ ಹೋದ್ನಲಾ, ಅದುಕ್ಕಿಂತ ಜೋರಾಗಿ ಗಡಗಡಗಡ ಅನ್ನೂ ಹಾಗೆ ಓಡುಸ್ಬೇಕು ಅಂತ ಆಸೆಯಾಗುತ್ತೆ.'
'ಇನ್ನೇನ್ ಆಶೆಯಾಗ್ತೈತಿ?'
'ತುಂಬ ದೂರ ಈಜಬೇಕು ಅನ್ಸುತ್ತೆ.'
'ಓದಬೇಕು ಅನ್ನಾಕಿಲ್ವಾ?'
'ಅನ್ಸುತ್ತೆ ಕಣ್ರೀ. ನಮ್ಮ ಕ್ಲಾಸಿನಲ್ಲಿ ಲೆಕ್ಕದಲ್ಲಿ ನಾನೆ ಫಸ್ಟು.'
'ಇನ್ಯಾತ್‌ರಲ್ಲಿ ಪಸ್ಟು?'
'ಮಾವನ ಮನ್ಲಿ ಓದಿಕಳುಕ್ಕೇ ಆಗ್ತಿರ್ಲಿಲ್ವಲ. ಇಲ್ದೆ ಇದ್ರೆ ಯಲ್ಲಾತ್ರಲ್ಲೂ ಪಸ್ಟು ಬತ್ತಿದ್ದೆ ಅಂತ ನಮ್ಮ ಮೇಷ್ಟ್ರೇ ಹೇಳಿದ್ರು.'
'ಇನ್ನುಮ್ಯಾಲೆ ನೀನು ಬೇಕಾದೋಟು ಓದಿಕಣೂವಂತೆ. ಚೀಲದ ಬರ್ತಿ ಸಿಲೇಟು ಬುಕ್ಕು ತಂದುಕೊಡ್ತೀನಿ. ನಡೀ ಮಗಾ.'
'ನಾವು ನಮ್ಮೂರಿಂದ ಯಾವೂರಿಗೆ ಹೋಗಾಣಾ?'
'ನಾನಿನ್ನೂ ಯೇಚ್ನೆ ಮಾಡಿಲ್ಲ. ಗುಬ್ಬಿಗೋ ತುಮಕೂರಿಗೋ ಓಗಾನ.'
'ಅಯ್ನೋರೇ, ಯಾವೂರಿಗೆ ಹೋದ್ರೂ ನಂಗೆ ಈಜಾಡುಕ್ಕೆ ಒಂದು ಕೆರೆ ಇರ್‌ಬೇಕು. ಒಂದೊಂದು ದಿನ ಯಾರುದ್ದಾದ್ರೂ ಕುದ್ರೆ ಕೊಡುಸ್ರಿ. ಕೂತ್ಕಬೇಕು ಅನ್ಸುತ್ತೆ.'
'ಆಗ್ಲಿ ನೋಡಾಣ, ಬಾ ಮರಿ'–ಎಂದು ಅವರು ಕತ್ತು ತಿರುಗಿಸಿ ಅವನ ಮುಖ ನೋಡಿದರು. ತಕ್ಷಣ

ಕಂಠೀಜೋಯಿಸರ ನೆನಪಾಯಿತು.

– 4 –

ಅವರು ಅದೇ ದಿನ ರಾಮಸಂದ್ರ ಮುಟ್ಟಿದರು. ಗಂಗಮ್ಮ ಊರಿನಲ್ಲಿರಲಿಲ್ಲ. ಸಂಜೆಗೇ ನಮ್ಮ ಹತ್ತಿರ ಇದ್ದ ರಾಗಿ, ಕಾಳು, ಮೆಣಸಿನಕಾಯಿಗಳನ್ನು ಅಯ್ಯನವರು ಮಾರಿಬಿಟ್ಟರು. ನೂರ ಇಪ್ಪತ್ತು ರೂಪಾಯಿ ಬಂತು. ಅದಲ್ಲದೆ ಅವರ ಹತ್ತಿರ ಒಟ್ಟು ನಲವತ್ತು ಬೆಳ್ಳಿಯ ರೂಪಾಯಿ ಇತ್ತು. ಕಂಠೀಜೋಯಿಸರು ಕೊಟ್ಟಿದ್ದ ನೂರ ಐವತ್ತು ಒಳ ಅಂಗಿಯಲ್ಲಿತ್ತು. ಹಣವನ್ನು ಅವರು ಸೊಂಟಕ್ಕೆ ಕಟ್ಟಿಕೊಂಡರು. ಅಲ್ಯೂಮಿನಿಯಂ ಪಾತ್ರೆಗಳು ಮತ್ತು ಕಂಬಳಿ ಬಟ್ಟೆಗಳನ್ನು ಹೊರಲು ಒಬ್ಬ ಆಳನ್ನು ಗೊತ್ತುಮಾಡಿಕೊಂಡರು. ಬೆಳಿಗ್ಗೆ ಹೊರಡುವ ಮುನ್ನ ವಿಶ್ವ ಕೇಳಿದ: 'ಅಯ್ನೋರೇ, ನಮ್ಮಮ್ಮ ಖಂಡಿತ ಸತ್ತೋಗಿದಾಳಾ?

'ಹೌದು ಮರಿ.'

'ನಾನು ನಮ್ಮನೆ ಒಳಗೆ ನೋಡಬೇಕು.'

'ಅಲ್ಲೇನೈತಿ ಅಂತ ನೋಡ್ತೀಯಾ?'

'ಊಂ, ನಾನು ನೋಡ್‌ಬೇಕು'–ಎಂದು ಅವನು ಹಟ ಮಾಡಿದ.

ಆ ಮನೆ ಖಾಲಿಯಾದಮೇಲೆ ಅದರ ಬೀಗದ ಕೈ ಗುಂಡೇಗೌಡರ ಸಂಬಂಧಿಯಾದ ಕುರುಬರಹಟ್ಟಿಯ ಮುದ್ದಯ್ಯನ ಹತ್ತಿರ ಇರುವುದು ಅಯ್ಯನವರಿಗೆ ಗೊತ್ತಿತ್ತು. ಮುದ್ದಯ್ಯನನ್ನು ಕರೆಸಿ ಬಾಗಿಲು ತೆಗೆಸಿದರು. ಜನವಸತಿ ಇಲ್ಲದೆ ಒಳಗೆಲ್ಲ ಧೂಳು ಮತ್ತು ಮಲೆತ ಗಾಳಿಯ ವಾಸನೆ ಬರುತ್ತಿತ್ತು. ಒಳಗೆ ಬಂದ ವಿಶ್ವ ಅಡಿಗೆಮನೆಗೆ ಹೋದ. ಅಲ್ಲಿಂದ ವಾಡೆಯ ಕೋಣೆಗೆ ಹೋಗಿ ಕತ್ತಲೆಯಲ್ಲೇ ತಡಕಾಡಿದ. ಕಂಬದ ಮೇಲಿಂದ ಅಟ್ಟ ಹತ್ತಿ ನೋದಿದ. ಕೊನೆಗೆ ಗಟ್ಟಿಯಾಗಿ– 'ಅಮ್ಮ ಲೇ, ನೀನ್ ಇಲ್ವೇನೇ/' ಎಂದು ಕೂಗಿದ. ಉತ್ತರ ಬರಲಿಲ್ಲ. ಕೆಳಗೆ ಇಳಿದು ಬಂದು–ಅಯ್ನೋರೇ, ಹಾಗಾದ್ರೆ ಅಮ್ಮ ನಿಜವಾಗ್ಲೂ ಸತ್ತೋದ್ಲಾ?' ಎಂದು ಕೇಳಿದ.

ಬಾಗಿಲು ತೆಗೆಯಲು ಬಂದಿದ್ದ ಮುದ್ದಯ್ಯ ಕಲ್ಲಿನಂತೆ ನಿಂತಿದ್ದ. 'ಹೌದು ಮರಿ, ಅಮ್ಮ ಖಂಡಿತ ಸತ್ತೋಗೈತೆ'–ಅಯ್ಯನವರೆಂದರು.

ವಿಶ್ವ ಗಟ್ಟಿಯಾಗಿ ಅಳಲು ಶುರುಮಾಡಿದ. ಅವನನ್ನು ತಬ್ಬಿ ಸಮಾಧಾನ ಮಾದಿದ ಮೇಲೆ ಹೇಳಿದರು: 'ನಡಿ ಹ್ವಾಗಾನ.'

ಅವನು ಸುಮ್ಮನೆ ಅವರ ಹಿಂದೆ ಬಂದ. ಆಳು ಅವರ ಪಾತ್ರೆಗಳ, ಕಂಬಳಿ ಬಟ್ಟೆಗಳ ಚೀಲವನ್ನು ತಲೆಯಮೇಲೆ ಹೊತ್ತು ಮುಂದೆ ನಡೆದ. ತಮ್ಮ ಏಕತಾರಿ ಚಿಟಿಕೆಗಳನ್ನು ಹಿಡಿದು ಅಯ್ಯನವರು ನಡೆದರು. ತುಂಬ ಬಡವಾಗಿದ್ದುದರಿಂದ ಅವರ ಹಿಂದೆ ಹೋಗುತ್ತಿದ್ದ ವಿಶ್ವನ ಗುರುತು ಊರಿನಲ್ಲಿ ಯಾರಿಗೂ ಸಿಕ್ಕಲಿಲ್ಲ. ತಾವು ಈ ಊರು ಬಿಟ್ಟು ಹೋಗುತ್ತಿರುವುದನ್ನು ಅಯ್ಯನವರು ಯಾರಿಗೂ ಹೇಳಲಿಲ್ಲ. ಯಾಕೆ, ಏನು, ಎಂದು ಎಲ್ಲರೂ ಕೇಳುತ್ತಾರೆ. ಅವರಿಗೆ ಎಲ್ಲವನ್ನೂ ಹೇಗೆ ಬಿಡಿಸಿ ಹೇಳುವುದು?

ಕಂಬನಕೆರೆಯ ಕಡೆ ದಾರಿಯಲ್ಲಿ ನಡೆದು ಮೋಟಾರು ರಸ್ತೆ ತಲುಪಬೇಕು. ಆಳು ಸಾಮಾನು ಹೊತ್ತು ತುಂಬ ಮುಂದೆ ಹೋಗುತ್ತಿದ್ದ. ಅವನ ವೇಗದಲ್ಲಿ ನಡೆಯಲಾರದೆ ಅಯ್ಯನವರು ಹಿಂದೆ ಉಳಿದರು. ಅವರು ಕೈ ಹಿಡಿದುಕೊಂಡಿದ್ದರೂ ವಿಶ್ವ ಅಯ್ಯನವರಿಗಿಂತ ಹೆಚ್ಚು ಅಂತರ್ಮುಖಿಯಾಗಿ ಕತ್ತು ತಗ್ಗಿಸಿಕೊಂಡು ಹೆಜ್ಜೆ ಹಾಕುತ್ತಿದ್ದ. ಇವರು ಊರು ಬಿಟ್ಟು ಒಂದು ಮೈಲಿ ಬಂದಿದ್ದರು. ದಾರಿಯ ಒಂದು ಮರದ ಕೆಳಗೆ ಒಂದು ಸಣ್ಣ ರಾಗಿಯ ಗಂಟಿಗೆ ತಲೆ ಇಟ್ಟುಕೊಂಡು ಚೆನ್ನಿಗರಾಯರು ಮಲಗಿದ್ದರು. ಬಾಯಿ ತುಂಬ ಹೊಗೆಸೊಪ್ಪಿನ ರಸ ತುಂಬಿದ್ದ ಅವರು ಅಂಗಾತ ಮಲಗಿಯೇ, ಅದು ಕೆಳಗೆ ಸೋರದಂತೆ ತುಟಿಗಳನ್ನು ಸವಣಿಸಿಕೊಳ್ಳುತ್ತಿದ್ದರು. ಅವರನ್ನು ಅಯ್ಯನವರೂ ನೋದಿದರು. ಈ ಇಬ್ಬರ ಹೆಜ್ಜೆ ಸಪ್ಪಳದಿಂದ ತಿರುಗಿ ನೋದಿದ ಅವರು ಎದ್ದು ಕುಳಿತರು. ಅಯ್ಯನವರು ತಾವಾಗಿಯೇ ಅವರನ್ನು ಮಾತನಾಡಿಸಲಿಲ್ಲ. ಹತ್ತಿರವೇ ಇದ್ದ ಕಟ್ಟೆಯ ಹಿಂಭಾಗದಲ್ಲಿ ಗಂಗಮ್ಮ ನೀರಕಡೆಗೆ ಹೋಗಿರಬಹುದು. ಇನ್ನು ಅವಳು ಕಂಡರೆ–'ನನ್ನ ಮಮ್ಮಗುನ್ನ ಎಲ್ಲಿಗೆ ಕರ್ಕಂಡ್‌ಹೋಗ್ತೀರಾ?' ಅಂತ ಕೇಳಬಹುದು, ಎಂದು ಯೋಚಿಸಿದ ಅಯ್ಯನವರು ಬೇಗ ಬೇಗ ಹೆಜ್ಜೆ ಹಾಕಿದರು. ತಾವೇ ಮಾತನಾದಲು ಚೆನ್ನಿಗರಾಯರು ಬಾಯಿ ತುಂಬ ತಂಬುಲ ತುಂಬಿಕೊಂಡಿತ್ತು.

'ನಮ್ಮಣ್ಣಲ್ವೇ?'– ವಿಶ್ವ ತಕ್ಷಣ ಕೇಳಿಬಿಟ್ಟ. ಚೆನ್ನಿಗರಾಯರಿಗೆ ಗುರುತು ಸಿಕ್ಕಿತು. ಏನೋ ಮಾತನಾದಬೇಕೆಂದು ಅವರ ಬಾಯಿ ಹವಣಿಸಿತು. ಆದರೆ, ಈಗ ತಾನೇ ರಸವನ್ನು ಒಸರಿಸುತ್ತಿದ್ದ ಹೊಗೆಸೊಪ್ಪನ್ನು ಉಗುಳಿಬಿಟ್ಟರೆ ಹತ್ತಿರ ಬೇರೆ ಒಂದು ಚೂರೂ ಇರಲಿಲ್ಲ. ಏನು ಮಾಡಬೇಕೆಂದು ಅವರು ನಿಶ್ಚಯಿಸುವಷ್ಟರಲ್ಲೇ ಅವರಿಬ್ಬರೂ ಮೂವತ್ತು ನಲವತ್ತು ಹೆಜ್ಜೆ ಮುಂದೆ ಹೋಗಿದ್ದರು. ವಿಶ್ವ ಹಿಂದೆ ಹಿಂದೆ ತಿರುಗಿ ನೋಡುತ್ತಿದ್ದ.

'ಆ ಕಡೆ ನೋಡ್‌ಬ್ಯಾಡ, ಸುಮ್ನೆ ನಡಿ ಮರಿ'– ಅಯ್ಯನವರೆಂದರು.

ಬಾಯ ತಂಬುಲದ ರಸವನ್ನು ಉಗುಳುವುದು ಚೆನ್ನಿಗರಾಯರಿಗೆ ಆಗಲೇ ಇಲ್ಲ. ಆದುದರಿಂದ ಮಾತನಾಡುವುದು ಸಾಧ್ಯವಾಗಲಿಲ್ಲ. ಈ ಜಂಗಮಯ್ಯ ನನ್ನ ಕಂಡ್ರೂ ಮಾತಾಡುಸ್ದೆ ಹೋದ್ನಲಾ, ಅವ್ನ ಇನ್ನೊಂದ್ ಸಲಿ ಸಿಕ್ಲಿ, ಸರಿಯಾಗಿ ಕೇಳ್ತೀನಿ– ಎಂದು ಅವರ ಮನಸ್ಸು ಯೋಚಿಸುತ್ತಿತ್ತು. ಮುಂದೆ ಸಿಕ್ಕಿದ ದಿಬ್ಬವನ್ನು ಇಳಿದು ನದೆದಿದ್ದುದರಿಂದ ಅವರಿಬ್ಬರೂ ಅಷ್ಟರಲ್ಲಿ ಕಣ್ಮರೆಯಾಗಿ ಹೋಗಿದ್ದರು.